Karnataka State Archives,
(Departmental Library) (B)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 4860
ದಿನಾಂಕ Date..............................

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೨ನೇ ಶನಿವಾರ, ಫೆಬ್ರುವರಿ ೧೯೬೯ [ಫಾಲ್ಗುಣ ೩, ೧೮೯೦ (ಶಕ)]

SATURDAY, 22ND FEBRUARY 1969 [PHALGUNA 3, 1890 (SAKA)]

ಸಂಪುಟ ೧೬—ಕ್ರಮಾಂಕ ೨

Vol. XVI—No. 2

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No.... 4860
ದಿನಾಂಕ Date..............................

ಬೆಲೆ ; ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೪ನೇ ಸೋಮವಾರ, ಫೆಬ್ರುವರಿ ೧೯೬೯ [ಫಾಲ್ಗುಣ ೫, ೧೮೯೦ (ಶಕ)]

MONDAY, 24th FEBRUARY, 1969 [PHALGUNA 5, 1890 (SAKA)]

ಸಂಪುಟ ೧೬ — ಕ್ರಮಾಂಕ ೩

Vol. XVI—No. 3

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೫ನೇ ಮಂಗಳವಾರ, ಫೆಬ್ರುವರಿ ೧೯೬೯ [ಫಾಲ್ಗುಣ ೬, ೧೮೯೦ (ಶಕ)]

TUESDAY, 25th FEBRUARY 1969 [PHALGUNA 6, 1890 (SAKA)]

ಸಂಪುಟ ೧೬—ಕ್ರಮಾಂಕ ೪

Vol. XVI—No. 4

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Price: 25 Paise

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೨೬ನೇ ಬುಧವಾರ, ಫೆಬ್ರುವರಿ ೧೯೬೯ [ಫಾಲ್ಗುಣ ೭, ೧೮೯೦ (ಶಕ)]

WEDNESDAY 26th FEBRUARY 1969 [PHALGUNA 7, 1890 (SAKA)]

ಸಂಪುಟ ೧೬—ಕ್ರಮಾಂಕ ೫

Vol. XVI—No. 5

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೪ನೇ ಮಂಗಳವಾರ, ಮಾರ್ಚಿ ೧೯೬೯ [ಫಾಲ್ಗುಣ ೧೩, ೧೮೯೦ (ಶಕ)]

TUESDAY, 4TH MARCH 1969 [PHALGUNA 13, 1890 (SAKA)]

ಸಂಪುಟ ೧೬—ಕ್ರಮಾಂಕ ೮

Vol. XVI—No. 8

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

CONTENTS

		Pages
1	Obituary Reference *re*: Demise of Sri T. N. Mudlagiri Gowda, Ex M.L.A. ...	7
2	(i) Starred Questions and Answers ...	7—35
	(ii) Questions for Answers on the day (but not taken up)	35—38
3	Message from the Governor—(Announced) ...	38
4	Notice of adjournment motion *re*: Mahajan Commission Report—(Consent withheld) ...	39
5	Papers laid on the Table—	
	(i) Notification No. HD 76 TMT 67 dated 8th January 1969 issued under the Mysore Motor Vehicles Taxation Act, 1957 ... (ii) Order No. RD 3 EST 69 dated 18th February 1969 issued under the Mysore Stamp Act, 1957 ..	39—40
6	Motion to consider *re*: the Report of the Mysore Pay Commission 1966-68—(Debate concluded) ...	40—94

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಸ್ವೀಕೃತಿ ಕ್ರಮಾಂಕ Accession No. 4860
ದಿನಾಂಕ Date.

CONTENTS

		Pages
1	(i) Starred Questions and Answers ...	95—112
	(ii) Questions for Answers on the day (but not taken up) ...	112—119
	(i) Point of Order *re* : Taking questions successively in the list of questions ...	119
	(ii) Policy matters of Government discussed during Session period elsewhere ...	120
	(iii) Requests to indicate Dates on the Questions lists ...	120—121
3	Budget Estimates for 1969-70—(Presentation) ...	122—186
4	Business of the House ...	187

CONTENTS

		Pages
1	Discussion on a matter of urgent Public Importance *re*: Violent activities of Shiv Sena in Maharashtra ...	189 –242
2	Rules and Practice for taking up General Discussion on the Annual Budgets ...	242—243
3	Budget Estimates for 1969-70—(General Discussion —Debate not concluded) ...	244—276

CONTENTS

		Pages
1	(i) Starred Questions and Answers ...	277—294
	(ii) Questions for Answers on the day (but not taken up) ...	294—303
2	Lease of land for Congress Exhibition at the Subhas Nagar Tank, Bangalore ...	303—336
3	Leave of Absence to Sri G. N. Desai—Grant of ...	312—313
4	Point of Order *re*: Discrimination by the Chair—(Ruling Reserved) ...	313—335
5	Ruling on a Point *re*: Not recording of the proceedings of the House under orders of the Chair ...	336—341

CONTENTS

		PAGES
1	(i) Starred Questions and Answers ...	507—529
	(ii) Questions for Answers on the day (but not taken up) ...	530—537
	(iii) Incorrect Replies to Questions ...	537
	(iv) Allowing members to put more Supplementaries during Question Hour ...	538
2	(*a*) Question of Privilege against Sri S. K. Patil Ruling Reserved ...	538
	(*b*) Notice of Adjournment Motion *re*: Lease of Land to the Congress Party for the Exhibition —Consent withheld ...	539—544
	(*c*) Collection of Land Revenue from Raiyats in famine affected areas of Tumkur ...	544
	(*d*) Grant of Compensation to Victims of Siva Sena excesses in Bombay ...	545—546
3	Calling Attention to matters of Urgent Public Importance *re*:	
	(i) Removal of the foundation stone at Alamatti (Upper Krishna Project) ...	546
	(ii) Spread of Monkey Disease in Some Taluks of Shimoga District ...	547—549
4	Budget Estimates for 1969-70—General Discussion —Debate not concluded) ...	549—622

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 22nd February 1969

The House met in the Assembly Chamber, Vidhana Soudha, Bangalore, at Twelve of the Clock.

Mr. SPEAKER [SRI S. D. KOTHAVALE] in the Chair.

Condolence Reference.

Re : Demise of Sri T. N. Mudalagiri Gowda, Ex-M.L.A.

MR. SPEAKER.—Before taking up the Questions and Answers I wish to make a condolence reference.

I regret to announce the sad demise of Sri T. N. Mudalagiri Gowda a former Member of the Assembly on 5th February 1969. He was a member of the Second Legislative Assembly during the period 1957-62.

I shall convey on behalf of the House our sympathies to the relatives of the deceased.

I request the members to stand in silence for a minute as a mark of respect to the deceased.

(The House Stood in silence for a minnte)

MR. SPEAKER.—Now, Questions and Answers.

STARRED QUESTIONS

(to which oral answers were given)

Manufacture of Water Lifting Motors

27. SRI T. K. GANGI REDDY (Chintamani).—

Will the Minister for Industries, Information and Publicity be pleased to state :—

(*a*) the number of water lifting motors, manufactured in the N.G.E.F. during the year 1967-68 ;

(SRI T. K. GANGI REDDY)

(*b*) the number of motors of different horse powers manufactured.

(*c*) whether the abovesaid motors are approved by the Technical experts ?

SRI M. RAJASEKHARA MURTHY (Minister for Industries, Information and Publicity).—

(*a*) Total number of Water lifting Motors, manufactured in N.G.E.F. during the year 1967-68 is 7,036.

(*b*)	2	H. P.	1500 R.P.M.	570
	3	,,	,,	2,638
	5	,,	,,	1,917
	7.5	,,	,,	929
	10	,,	,,	982
			Total ...	7,036

(*c*) Yes.

ಶ್ರೀ ಟಿ. ಕೆ. ಗಂಗಿರೆಡ್ಡಿ.—(ಇ) ಪ್ರಶ್ನೆಗೆ ಉತ್ತರವಾಗಿ ನಿಪುಣರಿಂದ ಒಪ್ಪಿಗೆ ಪಡೆದಿದೆ ಎಂದು ಹೇಳಿದ್ದೀರಿ. ಈಗ ಸಪ್ಲೈ ಮಾಡುತ್ತಾ ಇರುವ ಪಂಪ್ ಸೆಟ್ಟುಗಳು ಕೆಡುತ್ತಾ ಇವೆ, ಸುಡುತ್ತಾ ಇವೆ ಎಂದು ಹೇಳಿ ಅನೇಕ ರೈತರಿಂದ ದೂರು ಬರುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಏನಾದರೂ ಬಂದಿದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಇಲ್ಲಿಂದ ಸಪ್ಲೈ ಆಗುತ್ತಾ ಇರುವ ಮೋಟಾರ್ಸ್ ಬಹಳ ಚೆನ್ನಾಗಿವೆ ಎಂದು ಪಬ್ಲಿಕ್ ಒಪೀನಿಯನ್ ಇದೆ.

SRI SIDDIAH KASHIMATH.—Is there any agency appointed to sell these motors ?

SRI M. RAJASHEKARA MURTHY.—Sir, we have got our own dealers and we have established some sales offices at various places.

SRI C. K. RAJIAH SHETTY.—Has it come to the notice of the Government that the motors manufactured in the N G.E.F. fit for use only in cold climate and not in tropical climatic conditions of our country ?

SRI M. RAJASHEKARA MURTHY.—No, Sir. This is quite fit even to suit any climatic conditions and what the hon. Member says is not correct.

Sale of Darkhast Lands Given to Harijans

33. SRI A. RAMACHANDRA (Sullia).—

Will the Minister for Revenue be pleased to state : —

(*a*) whether it has come to their notice that certain Harijans in Mangalore and other parts have sold the lands given to them under darkhast rules to caste Hindus;

(*b*) the action they have taken in that behalf ;

(*c*) whether they are aware that the officers have taken no action even though they were aware of this fact ;

(*d*) whether suitable arrangement would be made in this behalf at least in future ?

Sri H. V. KOUJALGI (Minister for Revenue).—

(*a*) Yes.

(*b*) Action is being taken to resume the lands wherever the conditions of grant are infringed.

(*c*) Does not arise in view of the reply to clause (*b*) of the question.

(*d*) Does not arise in view of the reply to clause (*b*) of the question.

ಶ್ರೀ ಎ. ರಾಮಚಂದ್ರ.—ತಾವು ಈ ಪ್ರಶ್ನೆಯಲ್ಲಿ "ಇ" ಮತ್ತು "ಈ" ಇದೆಲ್ಲಾ 'ಆ' ಗೆ ಕೊಟ್ಟಿರುವ ಉತ್ತರದಿಂದ ಇತ್ಯರ್ಥವಾಗುತ್ತದೆ ಎಂದು ಹೇಳಿದ್ದೀರಿ. ಸಾಧಾರಣ ಎರಡು ವರ್ಷದಿಂದ ಈ ವಿಷಯವನ್ನು ಡೆಪ್ಯೂಟಿ ಕಮಿಷನರು ಮತ್ತು ಸಂಬಂಧಪಟ್ಟ ತಹಸೀಲ್ದಾರರಿಗೆ ತಿಳಿಸಿದರೂ ಕೂಡ ಇದುವರೆಗೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಅಂದಮೇಲೆ ಯಾವಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ, ಯಾವ ತರಹ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ.

Smt. WINNIFRED F. FERNANDES.—In answer to (b) it is stated that action is being taken to resume the lands wherever conditions of grant are infringed. Does it mean to say that lands sold by the Harijans to caste Hindus will be taken over by the Government or whether these lands would be given back to those Harijans ?

Sri H. V. KOUJALGI.—As per the terms of the contract it will have to be taken over by the Government.

Mr. SPEAKER.—Question Nos. 34 and 200 may be taken up together, as they deal with the same subject. Hon. Member Sri A. Ramachandra may put both the questions.

Reservation of Land for Harijans

34. Sri A. RAMACHANDRA (Sullia).—

Will the Minister for Revenue be pleased to state :—

(*a*) the extent of land that was reserved for Harijans in South Kanara District ;

(*b*) out of that, the extent of land granted to Harijans ;

(*c*) out of that, the extent of land granted to caste Hindus ;

(SRI A. RAMACHANDRA)

(*d*) when it has come to their notice that many Harijans are even now landless ;

(*e*) if so, the action they have taken ;

(*f*) whether they are aware of the fact that the officers are cheating the Harijans to a great extent, if so, whether any suitable action has been taken against such officers ?

Sri H. V. KOUJALGI (Minister for Revenue).—

(*a*) 19,597-68 acres.

(*b*) 8,795-81 acres.

(*c*) 44-04 acres.

(*d*) Yes.

(*e*) While granting lands, the Officers concerned have been required to ensure that lands are granted in accordance with the reservation envisaged to Scheduled Castes and Scheduled Tribes in the Land Grant Rules.

(*f*) No.

Grant of Lands to Harijans

200. Sri A. RAMACHANDRA (Sullia).—

Will the Minister for Revenue be pleased to state :—

(*a*) the total number of Harijans in South Kanara District :

(*b*) out of them the number of Harijans to whom lands have been granted and the number of landless Harijans ;

(*c*) the time required to grant lands to the remaining persons ?

Sri H. V. KOUJALGI (Minister for Revenue).—

(*a*) 67,263.

(*b*) So far lands have been granted to 15,973 Harijans. The number of landless Harijans is 15,956.

(*c*) It is not possible to tell definitely. Priority will be given to landless Harijans as per the rules relating to the granting of Government lands.

ಶ್ರೀ ಎ. ರಾಮಚಂದ್ರ.—ಇಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಹರಿಜನರ ಸಂಖ್ಯೆ 15,956 ಎಂದೂ ಆ ಪೈಕಿ ಈಗಾಗಲೇ 15,973 ಮಂದಿಗೆ ಜಮೀನನ್ನು ಕೊಡಲಾಗಿದೆ ಎಂದು ಹೇಳಿರತಕ್ಕದ್ದು ಸರಿಯಾಗಿಲ್ಲ ಎಂದು ಹೇಳಿದರೆ ತಾವು ಅದನ್ನು ಒಪ್ಪುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಆ ವಿಚಾರ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಎ. ರಾಮಚಂದ್ರ.—ಇನ್ನೂ ಹೆಚ್ಚು ಹರಿಜನರಿಗೆ ಯಾವಾಗ ಭೂಮಿಯನ್ನು ಪೂರೈಕೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಆದಷ್ಟು ಜಾಗ್ರತೆಯಾಗಿ ಅವರು ಕೇಳಿದಕೂಡಲೆ ಪ್ರೊವೈಡ್ ಮಾಡಲಾಗುತ್ತದೆ.

ಶ್ರೀ ಎ. ರಾಮಚಂದ್ರ.—ಹಾಗಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಾವಿರಾರು ಹರಿಜನರ ಅರ್ಜಿಗಳು ಏಕೆ ಪೆಂಡಿಂಗ್ ನಿಂತಿವೆ ?

ಶ್ರೀ ಎಚ್. ವಿ. ಕೌಜಲಗಿ.—ಅವು ಪ್ರೊಸೆಸಿಂಗ್‌ನಲ್ಲಿ ಇರುತ್ತವೆ.

ಶ್ರೀ ಎ. ರಾಮಚಂದ್ರ.—ಹಾಗಾದರೆ ಎಷ್ಟು ದಿವಸಗಳಲ್ಲಿ ಕೊಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಆದಷ್ಟೂ ತೀವ್ರದಲ್ಲೇ ಕೊಡುತ್ತೇವೆ.

ಶ್ರೀ ಎಚ್. ಪುಟ್ಟದಾಸ್.—ಒಬ್ಬ ಹರಿಜನರಿಗೆ ಎಷ್ಟು ಎಕರೆ ಪ್ರಕಾರ ಭೂಮಿಯನ್ನು ಕೊಡಲಾಗಿದೆ ?

ಶ್ರೀ ಎಚ್. ವಿ. ಕೌಜಲಗಿ.—ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡಲಾಗುತ್ತದೆ.

ಶ್ರೀ ಎಸ್. ಜಿ. ಹಾಲಪ್ಪ.—ಈ ಏಲಿನೇಟ್ ಮಾಡತಕ್ಕದ್ದನ್ನು ತಪ್ಪಿಸಲು ಎಷ್ಟು ದಿನಗಳು ಬೇಕು ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದನ್ನು ಹೇಳುವುದಕ್ಕಾಗುವುದಿಲ್ಲ.

Sri D. B. KALMANKAR.—In answer to (*b*) of question No. 34 it is stated that 8,795·81 acres of land have been granted to Harijans. May I know at what rate the lands have been distributed ?

Mr. SPEAKER.—That question has already been answered. Details are not available with the Hon. Minister.

ಶ್ರೀ ಬಿ. ಎಂ. ಇದಿನಬ್ಬ.—ಹರಿಜನರಿಗೆ ಕೊಟ್ಟಿರತಕ್ಕ ಜಮೀನುಗಳು ಅನೇಕ ಕಡೆ ಸಾಗುವಳಿ ಆಗದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಹೌದು, ಕೆಲವು ಕಡೆ ಸಾಗುವಳಿ ಮಾಡಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಹರಿಜನರಿಗೆ ಎಲ್ಲಿ ಕೆಲಸಗಳು ಸಿಕ್ಕುವುದಿಲ್ಲವೋ ಅಲ್ಲಿ ಅವರಿಗೆ ಭೂಮಿ ಕೊಡುವುದಕ್ಕೆ ಏರ್ಪಾಡನ್ನು ಮಾಡುತ್ತೀರಾ ?

ಅಧ್ಯಕ್ಷರು.—ಅಲ್ಲಿ ಜಮೀನಿದ್ದರಲ್ಲವೇ ಕೊಡುವುದು.

ಶ್ರೀ ಎಚ್. ವಿ. ಕೌಜಲಗಿ.—ಅವರು ಎಲ್ಲಿ ಬೇಡಿದರೆ ಅಲ್ಲೇ ಅವರಿಗೆ ಕೊಟ್ಟಿದ್ದೇವೆ.

Diesel Oil I.P. Sets

57. Sri K. SANGAN GOWDA (Lingsugur).—

Will the Minister for Agriculture be pleased to state :—

(*a*) the number of Diesel Oil Engine (I.P. Sets) of 5 H.P., 6 H.P. and 10 H.P. supplied to the Farmers in Raichur District on subsidy basis ;

(*b*) the number of farmers who have been-given the benefit of the subsidy in Raichur District ;

(*c*) whether the Government is aware that in Raichur District full amount is being recovered from those farmers who have taken 5 H.P., 6 H.P. and 10 H.P. diesel Oil Engine I.P. Sets on subsidy **basis** ?

Sri D. B. PAWAR (Deputy Minister for Agriculture).—

(a)	(i) 3½ H.P.	—	1
	(ii) 5 H.P.	—	273
	(iii) 10 H.P.	—	2
	(iv) 11 H.P.	—	12
	(v) 14 H.P.	—	8

(b) 296.

(c) The above Diesel Pumpsets have been issued to farmers of Raichur District on H.P.S. and the farmers are entitled for subsidy sanctioned by Government. The question of making available of funds for meeting the expenditure for payment of subsidy to the farmers who are entitled for the same is under consideration of Government. Until the above question is settled, instalments towards the cost of pumpsets issued to the farmers, have to be recovered regularly as and when they fall due as per rules of Hire Purchase Scheme of Irrigation pumpsets.

ಶ್ರೀ ಕೆ. ಸಂಗನಗೌಡ.—(ಇ)ಗೆ ಉತ್ತರವಾಗಿ ಸರ್ಕಾರದವರ ಪರಿಶೀಲನೆಯಲ್ಲಿದೆ ಎಂದು ಹೇಳಲಾಗಿದೆ. ಹಾಗೆ ಎಷ್ಟು ದಿವಸಗಳಿಂದ ಇದು ಅವರ ಪರಿಶೀಲನೆಯಲ್ಲಿದೆ?

†Sri D. B. PAWAR.—It will take some time. It is under consideration.

ಶ್ರೀ ಕೆ. ಸಂಗನಗೌಡ.—ಹೈರ್ ಪರ್ಛೇಸ್ ಕರಾರಿನಲ್ಲಿ ಅರ್ಧ ಬೆಲೆಯನ್ನು ವಸೂಲ್ಮಾಡಿಕೊಳ್ಳಬೇಕು ಎಂದು ಹೇಳಿದೆ. ಆದರೆ ಈಗ ಸರ್ಕಾರದವರು ಪೂರ್ತಿಯಾಗಿ ವಸೂಲ್ಮಾಡುತ್ತಿದ್ದಾರೆ. ಆರೀತಿ ಮಾಡುವುದು ಒಪ್ಪಂದಕ್ಕೆ ವಿರುದ್ಧವಾಗುವುದಿಲ್ಲವೇ?

Sri D. B. PAWAR.—50 per cent of the subsidy is to be given on the hire purchase system. At present, the instalment will be recovered to the tune of 50 per cent. If any excess recovery is made that will be returned.

ಶ್ರೀ ಎಂ. ನಾಗಪ್ಪ.—ಸ್ವಾಮಿ, ತಾವು ಈ ಪ್ರಶ್ನೆಗೆ ಉತ್ತರವಾಗಿ 296 ಪಂಪುಸೆಟ್ಟುಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ, ಅದನ್ನು ಕೊಟ್ಟು ಎಷ್ಟು ವರ್ಷಗಳಾದುವು? ಅದನ್ನು ಕೊಟ್ಟ ನಂತರ ಪಂಪುಸೆಟ್ಟುಗಳ ವೆಚ್ಚದ ಬಗ್ಗೆ ಸರ್ಕಾರಕ್ಕೆ ಬರತಕ್ಕ ಷೇರ್ ಅಮೌಂಟನ್ನು ಎಂದರೆ ಕಂತು ಹಣವನ್ನು ರೈತರಿಂದ ಅಧಿಕಾರಿಗಳು ಜಬರ್‌ದಸ್ತಿನಿಂದ ವಸೂಲು ಮಾಡುತ್ತಿದ್ದಾರೆ, ಅದರ ಸಂಬಂಧದಲ್ಲಿ ಕೆಲವು ಜಪ್ತಿಗಳೂ ಕೂಡ ಆಗುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ಮತ್ತು ಅದನ್ನು ನಿಲ್ಲಿಸುವುದಕ್ಕೆ ತಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ?

Sri D. B. PAWAR.—During the scarcity period four years back, engines were distributed. The point is, certain amount of subsidy is given by the Central Government and certain amount has to be borne by the State Government. The matter is under consideration. We will take a decision soon, Sir.

---

† Indicates that the speeches or remarks have not been revised by the member concerned.

ಶ್ರೀ ಕೆ. ಸಂಗನಗೌಡ.—ಇಲ್ಲಿಯುವರೆಗೂ ತಾವು ರೈತರಿಗೆ ಆ ಬಗ್ಗೆ ಎಷ್ಟು ಹಣವನ್ನು ಕೊಡಬೇಕೆಂದು ನೋಟೀಸ್ ಕೊಟ್ಟಿದ್ದೀರೋ ಅದರಲ್ಲಿ ಅರ್ಧ ಹಣವನ್ನು ಮಾತ್ರ ಅವರ ಕಡೆಯಿಂದ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri D. B. PAWAR.—It is a suggestion which can be considered, Sir.

Primary and Middle Schools in Pandavapura

59. Sri N. A. CHANNE GOWDA (Pandavapura).—

Will the Minister for Education be pleased to state :—

(*a*) the number of Urdu, Tamil and Kannada Primary and Middle Schools in Pandavapura Town;

(*b*) the number of classes in each of the above schools together with the number of boys and girls in each class during the current year ;

(*c*) the number of class rooms in each of the above schools together with their areas ;

(*d*) the steps taken by them to provide sufficient accommodation, equipment and other facilities to the above schools ;

(*e*) the number of male and female teachers in each of the above schools ?

Sri N. M. KOTRABASAIAH SOGI (Deputy Minister for Education).—

(*a*) Eight Schools.

Senior Primary Schools 4 (Kannada-3, Urdu-1). Junior Primary Schools—4 (Kannada-2, Urdu-1, Tamil-1).

(*b*) and (*c*) *Vide* Lists I and II appended.

(*d*) Adequate teaching aids have been provided to all the schools except the Urdu Girls Primary School. Orders have been given to District Educational Officer, Mandya to supply the necessary teaching aid to Urdu school.

(*e*) *Vide* list III appended.

(SRI N. M. KOTRABASAIAH SOGI)

LIST

Particulars of Schools of Pandavapura Town

Sl. No.	Kind of School	Particulars	I B	I G	II B	II G
1	2	3				
	Middle Schools :					
1	Government Kannada Middle School for Boys, Pandavapura.	Strength	...	...	...	...
		Attendance	...	...	...	...
2	Government Kannada N.T.M.S., (Girls), Pandavapura	Strength	...	84	...	47
		Attendance	...	31	...	21
3	Nirmala Convent Kannada Upper P.B.S., Pandavapura (Private unaided)	Strength	44	28	31	19
		Attendance	35	20	27	18
4	Government Urdu N.T.M.S., (Boys), Pandavapura	Strength	24	...	21	...
		Attendance	18	...	19	...
	Primary Schools :					
1	Government Kannada P. B. S., Pandavapura	Strength	82	...	92	...
		Attendance	61	...	64	...
2	Government Kannada P. B. S., Harohally	Strength	40	55	38	11
		Attendance	27	19	21	9
3	Government Tamil P. B. S., Pandavapura	Strength	15	15	13	14
		Attendance	7	5	6	5
4	Government Urdu P. C. S., Pandavapura	Strength	...	36	...	34
		Attendance	...	24	..	28

I

as on 22nd November 1968

III		IV		V		VI		VII		Total		Total
B	G	B	G	B	G	B	G	B	G	B	G	
				4						5		6
...	...	...	...	78	...	66	...	102	...	246	...	246
...	...	...	...	72	...	60	...	93	...	225	...	225
...	62	...	65	...	58	...	30	...	37	...	383	383
...	42	...	41	...	38	...	22	...	32	...	227	227
21	10	18	8	21	10	11	11	...	...	146	86	232
17	8	14	7	17	8	10	11	...	...	120	72	192
30	15	29	14	11	15	5	14	7	12	127	70	197
19	13	22	13	11	15	5	14	7	12	101	67	168
70	...	46	...	...	...	...	...	...	...	290	...	290
46	...	37	...	...	...	...	...	...	...	208	...	208
26	20	23	9	...	...	...	...	...	...	127	95	222
18	8	18	6	...	...	...	...	...	...	84	42	126
11	7	8	5	...	...	...	...	...	...	47	41	88
2	3	2	4	...	...	...	...	...	...	17	17	34
...	...	...	...	...	...	...	...	...	...	36	34	70
...	...	...	...	...	...	...	...	...	...	24	28	52

(SRI N. M. KOTRABASAIAH SOGI)

LIST

Particulars of Schools of Pandavapura Town

Sl. No.	School Buildings			Adaquacy or otherwise of	
	Government Rented or Rent-free	No. of Rooms	Total	Accommoda-tion	Teaching aids
1	2	3	4	5	6
1	Government Building.	12	6,450 sq. ft.	Adequate	Adequate
2	Government Building.	6	4×20′×15′ =1,200 sq. ft. 2×15′×12′ =360 sq. ft.	Inadequate. Foundation for 3 additional rooms has been put up.	Adequate
3	Management Building.	7	1,520 sq. ft.	Adequate	Adequate
4	Government Building.	5 1 Shed	1,190 sq. ft. 240 sq. ft. 1,430 sq. ft.	Inadequate	Adequate
5	By shift in the Middle School Building.	6 (used)	2,450 sq. ft.	Adequate	Adequate
6	Government Building with Municipal share of contribution.	6	1,300 sq. ft.	Adequate	Adequate
7	Rent-free Building.	1	240 sq. ft.	Inadequate	Adequate
8	Building belonging to Mosque Rent-free.	1	386 sq. ft.	Inadequate	Inadequate

II

as on 22nd November 1968

Teachers			Action taken by Government, to improve these schools
Trained	Untrained	Total	
7	8	9	10
10	1	11	Working from 11-40 A.M. to 5-20 P.M. since the building is used for the Primary School in the morning from 7-30 A.M. to 11-20 A.M.
Craft Teachers (Drawing and Tailoring) Full time		2	
		13	
3	6	9	Foundation for 3 additional rooms was put up about 5 years back construction to be taken up.
Music (Full time)		1	
...	..	10	
5	1	6	It is a private unaided school.
5	1	6	Two additional rooms are proposed to be constructed.
Kannada	Part-time	1	
		7	
4	1	5	Out of 5 teachers 4 are permanent and one is deputed. No building of its own for the Primary School. It is working by shift in the morning from 7-30 A.M. to 11-30 A.M. It works for full day on Saturday and Sunday. Holiday on Thursday.
2	3	5	Out of 5 teachers 3 are permanent and 2 are deputed.
...	1	1	The School was opened on 3rd November 1959.
2	...	2	

(SRI N. M. KOTRABASAIAH SOGI)

LIST-III

Regarding Number of Men and Women Teachers in Pandavapura Schools

	Trained		Un-trained		Craft	
	Men	Women	Men	Women	Men	Women
1. Government Kannada Middle School, Pandavapura	10	...	...	1	2	...
2. Government Kannada New Type Middle School (Girls), Pandavapura	1	3	2	3	1 Music	...
3. Nirmala Convent Kannada Up-graded Primary Boys School, Pandavapura	...	2	...	4	...	...
4. Government Urdu New Type Middle School, Boys, Pandavapura	3	2	1	One Kannada Part-time		
5. Primary Schools, Government Kannada Primary Boys School, Pandavapura	2	...	3	One is deputed from other schools		
6. Government Kannada Primary Boys School, Harohally	2	...	3	Two are deputed		
7. Government Tamil Primary Boys School, Pandavapura	...	...	...	1	...	...
8. Government Urdu Primary Girls School, Pandavapura	...	1	...	1	...	...
Total ...	18	8	9	10	3	...

Men Teachers ... 30

Women Teachers ... 18

ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಪರಿಶಿಷ್ಟದಲ್ಲಿ ಕೊಟ್ಟಿದ್ದೀರಿ ತಮಿಳು ಸ್ಕೂಲಿನಲ್ಲಿ 112 ಜನ ವಿದ್ಯಾರ್ಥಿಗಳು ಇದ್ದಾರೆ, ಆ ಸ್ಕೂಲಿನ ವಿಸ್ತೀರ್ಣ 240 ಚದುರ ಅಡಿ ಇದೆ ಎಂದು ಹೇಳಿದ್ದೀರಿ, ಅದು ಬ್ಲಾಕ್ ಹೋಲ್ ಆಫ್ ಕಲ್ಕತ್ತಾಕ್ಕಿಂತ ಉತ್ತಮವಾಗಿದೆಯೇ ಒಂದು ರೂಮಿನಲ್ಲಿ ನಾಲ್ಕು ತರಗತಿಗಳನ್ನು ನಡೆಸುತ್ತಿದ್ದಾರೆ, ಆ ರೀತಿ ಒಂದು ರೂಮಿನಲ್ಲಿ ನಾಲ್ಕು ತರಗತಿಗಳನ್ನು ನಡೆಸುವುದಕ್ಕೆ ಸಾಧ್ಯವಿದೆಯೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ಅಲ್ಲಿಯ ಮುನಿಸಿಪಾಲಿಟಿಯುವರಿಂದ ಅಕಾಮಡೇಷನ್ ಒದಗಿಸಿಕೊಡುವುದಕ್ಕೆ ಪ್ರಯತ್ನ ನಡೆಯುತ್ತಿದೆ.

ಶ್ರೀ ಎನ್. ಎ. ಚನ್ನೇಗೌಡ.—ಆ ಮುನಿಸಿಪಾಲಿಟಿಯಲ್ಲಿ ಬಹಳವಾದ ಹಣದ ಕೊರತೆ ಇರುವುದರಿಂದ ಸರ್ಕಾರದವರು ಹೌಸಿಂಗ್ ಬೋರ್ಡ್ ಮುಖಾಂತರ ಅದಕ್ಕೆ ಕಟ್ಟಡವನ್ನು ಕಟ್ಟಿಸಿಕೊಟ್ಟು ಆ ಹಣವನ್ನು ಮುನಿಸಿಪಾಲಿಟಿಯಿಂದ ಕಂತುಗಳ ಮೂಲಕ ವಸೂಲು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಗಣಿಸಲಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅನೇಕ ಕಡೆಗಳಲ್ಲಿ ತಮಿಳು ಉಪಾಧ್ಯಾಯರು ಇಲ್ಲದೆ, ಎಷ್ಟು ಕೇಳಿದರೂ ತಮಿಳು ಉಪಾಧ್ಯಾಯರನ್ನು ಕೊಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಿರ್ದಿಷ್ಟವಾದ ಉದಾಹರಣೆಗಳನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಷಣ ಶಿಕ್ಷರನ್ನು ನೇಮಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎನ್. ಎ. ಚನ್ನೇಗೌಡ.—ಆ ಸ್ಕೂಲುಗಳಲ್ಲಿ 38 ಜನ ಗಂಡಸರು ಉಪಾಧ್ಯಾಯರು ಇದ್ದಾರೆ, 18 ಜನ ಹೆಂಗಸರು ಉಪಾಧ್ಯಾಯರು ಇದ್ದಾರೆ ಎಂದು ಹೇಳಿದ್ದೀರಿ, ಪ್ರೈಮರಿ ಸ್ಕೂಲುಗಳಿಗೆ ಆದಷ್ಟು ಮಟ್ಟಿಗೆ ಸ್ತ್ರೀಯರನ್ನೇ ನೇಮಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರ ಸಲಹೆ ಯೋಗ್ಯ ಸಲಹೆ ಇದೆ. ಆದರೆ ಎಲ್ಲಾ ಮಹಿಳಾ ಶಿಕ್ಷಕರನ್ನೇ ನೇಮಿಸುವುದಾದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. ಇದರಲ್ಲಿ ಮೊದಲನೆಯದಾಗಿ ಮಹಿಳಾ ಶಿಕ್ಷಕರು ಸಾಕಷ್ಟು ಸಂಖ್ಯೆಯಲ್ಲಿ ಸಿಕ್ಕುತ್ತಾ ಇಲ್ಲ. ಅವರು ಸಿಕ್ಕಿದಂತೆಲ್ಲಾ ಹೆಚ್ಚಿಗೆ ಮಹಿಳಾ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಸಾಧ್ಯವಿದೆ.

Coconut Trees in Kodur Village

64. Sri I. SOMASEKHARAPPA (Hosanagar).—

Will the Minister for Agriculture be pleased to state :—

(*a*) whether it has come to the notice of the Government that innumerable coconut trees are dying in the Hosanagar Taluk and particularly in Kodur village ;

(*b*) if so, the reason for the same ;

(*c*) whether the department has taken any steps to prevent the same ?

Sri B. RACHAIAH (Minister for Agriculture).—

(*a*) Yes.

(*b*) Due to Bud-Rot disease.

(*c*) Yes. The technical staff of the Horticulture Department have approached the Coconut cultivators and advised them to take up plant protection measures against the Bud-Rot disease.

ಶ್ರೀ ಐ. ಸೋಮಶೇಖರಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಕುಡಿ ಕೊಳೆಯುವ ರೋಗದ ಕಾರಣದಿಂದಾಗಿ ತೆಂಗಿನ ಮರಗಳು ಒಣಗಿ ಹೋಗುತ್ತಿವೆ ಎಂದು ಹೇಳಿದ್ದೀರಿ, ಹಾಗಾದರೆ ಆ ತೆಂಗಿನ ಮರಗಳನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಆ ರೋಗವನ್ನು ತಡೆಗಟ್ಟಲು ಯಾವ ಯಾವ ಔಷಧಿಯನ್ನು ಉಪಯೋಗಿಸಬೇಕು ಎಂಬುದನ್ನು ಹೇಳುತ್ತೀರಾ ?

† ಶ್ರೀ ಬಿ. ರಾಚಯ್ಯ.—ಈಗ ಯಾವ ಗಿಡಗಳಿಗೆ ರೋಗ ತಗುಲಿದೆಯೋ ಆ ಗಿಡವನ್ನು ಬೇರು ಸಹಿತ ಕಿತ್ತುಹಾಕಿ ಅದನ್ನು ಸುಟ್ಟು ಹಾಕಿದರೆ, ಮಿಕ್ಕ ಗಿಡಗಳಿಗೆ ಆ ರೋಗ ಹಬ್ಬುವುದಿಲ್ಲ ಎಂದು ತಜ್ಞರು ಸಲಹೆ ಮಾಡಿದ್ದಾರೆ. ಅದು ಸಣ್ಣ ಪ್ರಮಾಣದಲ್ಲಿ ಬಂದಾಗ ಅರ್ಲಿಯರ್ ಸ್ಟೇಜಿನಲ್ಲೇ ಅದಕ್ಕೆ copper sulphate ಮಿಕ್ಸ್‌ಚರ್ ಹಾಕಿದರೆ ಆ ರೋಗ ಹೋಗುತ್ತದೆ ಎಂದು ತಿಳಿದುಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ತಜ್ಞರು ಬೇರು ಸಹಿತ ಎಲ್ಲಾ ಗಿಡಗಳನ್ನು ಕಿತ್ತು ಹಾಕಬೇಕೆಂದು ಸಲಹೆ ಮಾಡಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ತೋಟದಲ್ಲಿ ಕೆಲವು ಗಿಡಗಳಿಗೆ ರೋಗ ಬಂದರೆ, ತಕ್ಷಣ ಅವುಗಳನ್ನು ತೆಗೆದುಹಾಕಬೇಕು, ಇಲ್ಲದಿದ್ದರೆ, ಇನ್ನೂ ಅವು ಹರಡುವುದಕ್ಕೆ ಅವಕಾಶವಾಗುತ್ತದೆ ಎಂದು ಸಲಹೆ ಮಾಡಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಈ ರೀತಿ ತೆಂಗಿನ ಮರಗಳಿಗೆ ಬರತಕ್ಕ ರೋಗಗಳಿಗೆ ಅವು ಬರದಂತೆ ಮುನ್ನೆಚ್ಚರಿಕೆಯ ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಜ್ಞರು ಸಲಹೆ ಮಾಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ತೆಂಗಿನ ಗಿಡಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟಲು ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಜ್ಞರು ಆಯಾಯ ಭಾಗಗಳಿಗೆ ಹೋಗಿ ರೈತರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದಾರೆ. ಇವರು ಕೇಳಿರತಕ್ಕ ಭಾಗದಲ್ಲಿ ತಿಳುವಳಿಕೆ ಕೊಟ್ಟಿದ್ದಾರೆ. ಅದರ ಮೇರೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಎನ್. ರಾಮಣ್ಣ.—ಈ ತೆಂಗಿನ ಗಿಡಗಳಿಗೆ ಹಾನಿಯಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ ತೋಟಗಾರಿಕೆಯ ಇಲಾಖೆಯವರು ಸರ್ವೆ ನಡೆಸಿ, ಎಷ್ಟು ಎಕರೆಗಳಲ್ಲಿ ಬಂದಿದೆ ಎಂದು ನೋಡಿ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಆ ಭಾಗದಲ್ಲಿ ಸುಮಾರು 75 ಎಕರೆಗಳಲ್ಲಿ ಸುಮಾರು 1,445 ಗಿಡಗಳಿಗೆ ಮಾತ್ರ ರೋಗ ತಗಲಿದೆ. ಅದರ ಪ್ರಕಾರ ಇವರು ಕಾರ್ಯಕ್ರಮ ತೆಗೆದುಕೊಂಡು ರೋಗ ಹರಡದಂತೆ ನೋಡಿಕೊಂಡಿದ್ದಾರೆ.

ಶ್ರೀ ಎಂ. ಎನ್. ರಾಮಣ್ಣ.—ತೆಂಗು ಬೆಳೆಯುವ ಎಲ್ಲಾ ಪ್ರದೇಶಗಳಲ್ಲೂ ರೋಗ ಇದೆ. ಇದರಿಂದ ತಿಪಟೂರಿನಲ್ಲಿ ಗಂಗಾಪಾನಿ ಎಳನೀರು ಎಂಬ ಪ್ರಸಿದ್ಧ ಜಾತಿಯ ಒಂದು ಗಿಡವೂ ಉಳಿಯುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದಕ್ಕೆ ನಿಮ್ಮ ಇಲಾಖೆಯವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಅದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ತೆಗೆದುಕೊಂಡಿಲ್ಲದಿದ್ದರೆ, ಮತ್ತೆ ಅಲ್ಲಿಗೆ ಹೋಗಿ ನೋಡಲು ಸಂಬಂಧಪಟ್ಟವರಿಗೆ ಆದೇಶ ಕೊಡುತ್ತೇವೆ.

Mr. SPEAKER.—Question No. 105 and 112 may be taken up together.

Allotment of Mechanised Boats

105. Sri RATNAKUMAR KATTEMAR (Mudabidri).—

Will the Minister of State for Fisheries and Ports be pleased to state:—

(a) whether a representation by Member, Legislative Assembly has been addressed to the Director of Fisheries with regard to the allotment of mechanised boats to the applicants mentioned therein ;

(*b*) whether there was any reply from the South Kanara Fish Marketing Federation to the effect that four Members of the group of Sri Leeladhar Kanchar are not willing to undergo training in the Federation Yard;

(*c*) if so, whether the Federation has obtained their report in writing;

(*d*) whether it is permissible to allot mechanised boats by the Federation under the Agricultural Refinance Corporation Scheme even to members who are in groups, students or in some other services and not at all going for fishing or have not undergone any training;

(*e*) if not, the action the Government proposed to take in this matter?

Sri H. C. LINGA REDDY (Minister of State for Fisheries and Ports).—

(*a*) Yes.

(*b*) Yes.

(*c*) No.

(*d*) Under the Agriculture Refinance Corporation Scheme the Federation will allot boats to groups of members, fishermen who are going for fishing and who have undergone training and not to students or others who do not go for fishing.

(*e*) Government are not aware of any cause for action at present.

Allotment of Mechanised Boats

112. Sri RATNAKUMAR KATTEMAR (Mudabidri).—

Will the Minister of State for Fisheries and Ports be pleased to state:—

the number of mechanised boats that have been distributed during the years 1966-1968?

Sri H. C. LINGA REDDY (Minister of State for Fisheries and Ports).—

133.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಫಿಶ್ ಮಾರ್ಕೆಟಿಂಗ್ ಫೆಡರೇಶನ್ ಆಗುವ ಮುಂಚೆ ಡೈರೆಕ್ಟರ್ ಆಫ್ ಫಿಶರೀಸಿಗೆ ಕಳಿಸಿಕೊಟ್ಟಂತಹ ಅರ್ಜಿಗಳನ್ನು ಫಿಶ್ ಮಾರ್ಕೆಟಿಂಗ್ ಫೆಡರೇಶನಿಗೆ ಫಾರ್ವರ್ಡ್ ಮಾಡಿದ್ದಾರೆಯೇ ?

†ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಟ್ಟಿಗೆ ಡೈರೆಕ್ಟರ್ ಆಫ್ ಫಿಶರೀಸ್‌ಗೆ ಹಾಕಿದ್ದ ಅರ್ಜಿಗಳನ್ನು ಫಿಶ್ ಮಾರ್ಕೆಟಿಂಗ್ ಫೆಡರೇಶನಿಗೆ ಕಳಿಸಿದರೂ ಮತ್ತು ಮುಂದೆ ಅರ್ಜಿಗಳನ್ನು ಅಲ್ಲಿ ಹಾಕಿಕೊಳ್ಳಿ ಎಂದು ಹೇಳಿದ್ದಾರೆ.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಕಳೆದ ಬಾರಿ ಶ್ರೀಮಾನ್ ಐತಾಳರು ಕೇಳಿದ ಪ್ರಶ್ನೆಗೆ ಡೈರೆಕ್ಟರ್ ಆಫ್ ಫಿಶರೀಸ್ ಅಂಥ ಅರ್ಜಿಗಳನ್ನು ಕಳಿಸಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಇದನ್ನು ಸರಿಯಾಗಿ ತಿಳಿಸಬೇಕು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅರ್ಜಿಗಳನ್ನು ಅಲ್ಲಿ ಹಾಕಲಿಕ್ಕೆ ಬಂದಾಗ ಓರಲ್ಲಾಗಿ ತಿಳಿಸಿದ್ದೇವೆ. ಆರೀತಿ ಫೆಡರೇಶನಿಗೆ ಅರ್ಜಿ ಹಾಕಿ ಎಂದು.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಈ ಫೆಡರೇಶನ್ ಡೈರೆಕ್ಟರ್ ಆಫ್ ಫಿಶರೀಸ್‌ಗೆ ಡೈರೆಕ್ಷನ್ಸ್ ಕೊಡುತ್ತಿದೆಯೇ, ಅಥವಾ ಫೆಡರೇಶನ್‌ಗೆ ಡೈರೆಕ್ಟರ್ ಡೈರೆಕ್ಷನ್ಸ್ ಕೊಡುತ್ತಾರೆಯೇ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಫೆಡರೇಶನ್ನಿನವರು ಟ್ರೈನಿಂಗ್ ಆಗಿರುವ ಫಿಶರ್‌ಮೆನ್ ಯಾರ್ಯಾರು ಅರ್ಹರು ಇರುತ್ತಾರೆ, ಅವರಿಗೆ ಕೊಡುತ್ತಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಲ್ಲಿ 133 ಯಾಂತ್ರಿಕ ದೋಣಿಗಳನ್ನು 1966 ರಿಂದ 1968ರ ವರೆಗೆ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಈ 133 ರಲ್ಲಿ ಎಷ್ಟು ಫೆಡರೇಶನಿನವರು ಕೊಟ್ಟಿದ್ದಾರೆ, ಎಷ್ಟು ಇಲಾಖೆಯವರು ಕೊಟ್ಟಿದ್ದಾರೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೋಅಪರೇಟಿವ್ ಫೆಡರೇಶನ್‌ನವರು 1966-67ರಲ್ಲಿ 15 ಕೊಟ್ಟಿದ್ದಾರೆ. 1967-68ರಲ್ಲಿ 59 ಕೊಟ್ಟಿದ್ದಾರೆ. ಒಟ್ಟಿನಲ್ಲಿ 74 ಫೆಡರೇಶನಿನವರು ಕೊಟ್ಟಿದ್ದಾರೆ, ಇಲಾಖೆಯವರು 59 ಕೊಟ್ಟಿದ್ದಾರೆ.

ಶ್ರೀ ಬಿ. ಎಂ. ಇಡಿನಬ್ಬ.—ಮೀನು ಹಿಡಿಯುವ ತರಪೇತಿ ಹೊಂದಿದವರು ಯಾಂತ್ರಿಕ ದೋಣಿಗಳಿಗಾಗಿ ಅರ್ಜಿಗಳನ್ನು ಹಾಕಿಕೊಂಡರೂ ಅಂತಹವರಿಗೆ ಆ ದೋಣಿಗಳು ಸಿಗಲಿಲ್ಲವೆಂಬ ದೂರು ತಮ್ಮ ಬಳಿಗೆ ಬಂದಿದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಸೌತ್ ಕೆನರಾ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಅದರಲ್ಲಿ ತರಪೇತಿ ಹೊಂದಿದವರಿಗೆ ಆ ದೋಣಿಗಳು ಸಿಗುತ್ತಾ ಇವೆ. ಯಾರಿಗೆ ಇನ್ನೂ ಸಿಗಲಿಲ್ಲವೋ ಅಂತಹವರಿಗೆ ಅವು ಸಿಗಬೇಕಾದರೆ ಇನ್ನೂ ಸ್ವಲ್ಪಕಾಲ ಆಗುತ್ತದೆ.

ಶ್ರೀ ಎಂ. ಎಂ. ಜಾಲಿಸಟ್ಟಿ.—ಅಂತಹ ದೋಣಿಗಳನ್ನು ನಮ್ಮ ಏರಿಯಾಕ್ಕೆ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದು ಈ ವರ್ಷದ ಬಡ್ಜೆಟನ್ನು ಅವಲಂಬಿಸುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಂತ್ರಿಗಳು ಮೊದಲೇ ಉತ್ತರ ಹೇಳಿದ ಹಾಗೆ ಇದನ್ನು ಎರಡು ಏಜೆನ್ಸಿಗಳಿಗೂ ಕೊಡತಕ್ಕದ್ದನ್ನು ರದ್ದುಮಾಡಿ ಯಾವುದಾದರೂ ಒಂದು ಏಜೆನ್ಸಿಗೆ ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗ ನಾರ್ತ್ ಕೆನರಾ ಕೊ-ಅಪರೇಟಿವ್ ಯೂನಿಯನ್, ಮಾರ್ಕೆಟಿಂಗ್ ಕೊ-ಆಪರೇಟಿವ್ ಫೆಡರೇಷನ್—ಈ ಎರಡು ಸಂಸ್ಥೆಗಳೂ ಆ ಕೆಲಸವನ್ನು ಮಾಡುತ್ತಾ ಇವೆ. ಫೆಡರೇಷನ್ ಯೂನಿಯನ್ ಬಂದಮೇಲೆ ಅದಕ್ಕೆ ಈ ಕೆಲಸವನ್ನು ವಹಿಸಿದ್ದೇವೆ. ಮೊದಲು ಡೈರೆಕ್ಟ್ಆಗಿ ಕೊಡುತ್ತಿದ್ದೆವು. ಸಹಕಾರಿ ಸಂಸ್ಥೆಗಳಿಗೆ ಈ ದೋಣಿಗಳನ್ನು ಹಂಚುವ ಜವಾಬ್ದಾರಿಯನ್ನು ವಹಿಸಿದ್ದೇವೆ.

Smt. WINNIFRED F. FERNANDES.—If there are any cases where these mechanised boats are allotted to the students or to those who are not fishermen, will the Government take action to take away the boats from them ?

Sri H. C. LINGA REDDY.—Such instances of having distributed boats either to students or to those who are not fishermen, have not come to the notice of the Government. The boats will be distributed to those who are actually trained.

ಶ್ರೀ ಬಿ. ಭಾಸ್ಕರಶೆಟ್ಟಿ.—ಪಡುಕರಾವಳಿಯಲ್ಲಿ ಮೀನು ವ್ಯವಸಾಯಮಾಡುವವರು ರಂಪೋಣಿ ಬಲೆಗಳನ್ನು ಉಪಯೋಗಿಸುತ್ತಿದ್ದಾರೆ. ಈಗ ಏನು ಮೆಕನೈಜ್ಡ್ ಬೋಟ್ಸ್ ಬಂದಮೇಲೆ ಅವನ್ನು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ರಂಪೋಣಿ ಬಲೆಯನ್ನು ಉಪಯೋಗಿಸುವವರಲ್ಲಿ

ಪ್ರಾಯ ಮಿತಿಮೀರಿದವರು ಇದ್ದಾರೆ. ಅವರಿಗೆ ವಿದ್ಯೆ ಇರುವುದಿಲ್ಲ. ಆದ್ದರಿಂದ ಅವರಿಗೆ ಹೆಚ್ಚು ಹೆಚ್ಚು ಮೆಕನೈಜ್ಡ್ ಬೋಟ್‌ಗಳನ್ನು ಸರ್ಕಾರದ ಮೂಲಕ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೆಕನೈಜ್ಡ್ ಬೋಟ್‌ಗಳು ಬೇಕೆಂದು ರಂಪೋಣಿ ಬರೆ ಉಪಯೋಗಿಸುವವರು ಅರ್ಜಿಯನ್ನು ಹಾಕಿಕೊಂಡರೆ, ಅದರಲ್ಲಿ ಟ್ರೈನಿಂಗ್ ಅದವರಿಗೆ ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Grant of Lands in Amrutha Mahal Kaval

113 Sri M. H. JAYAPRAKASH NARAYAN (Sirsi).—

Will the Minister for Revenue be pleased to state.—

(*a*) whether the State Government has decided to grant lands in Amrutha Mahal Kaval to educated unemployees;

(*b*) whether Land Grant Rules will be followed while granting the lands?

Sri H. V. KOUJALGI (Minister for Revenue).—

(*a*) No.

(*b*) The question of granting land is still under consideration.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ವಿಶೇಷ ರೀತಿಯಲ್ಲಿ ಆಹಾರ ಬೆಳೆಯ ಬೇಕೆಂದು ರಾಜ್ಯ ಸರ್ಕಾರ ಈಗ್ಗೆ ಒಂದು ವರ್ಷದ ಹಿಂದೆ ಸುಮಾರು 27 ಸಾವಿರ ಅಥವಾ 57 ಸಾವಿರ ಎಕರೆಯನ್ನು ಈ ಅಮೃತ ಮಹಲ್ ಕಾವಲಿನಲ್ಲಿ ಬಿಡುಗಡೆ ಮಾಡುವುದಕ್ಕೆ ಸರ್ಕಾರೀ ಹುಕುಂ ಆಗಿತ್ತು. ಅದರ ಪ್ರಕಾರ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಬಿಡುಗಡೆಯಾಗಿದೆ? ಇದನ್ನೇನಾದರೂ ರೆವಿನ್ಯೂ ಇಲಾಖೆಗೆ ವಹಿಸಿದ್ದೀರಾ? ಯಾವ ತತ್ವದಮೇಲೆ ಇದನ್ನು ಹಂಚುತ್ತೀರಿ?

(*No answer*)

Sri M. H. JAYAPRAKASH NARAYAN.—I have put a relevant question whether the Government has taken any decision to release the Amrit Mahal Kaval lands.

Mr. SPEAKER.—The hon'ble Minister says that no decision is taken.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್.—ಅಮೃತಮಹಲ್ ಕಾವಲ್‌ನಿಂದ ಜಮೀನನ್ನು ಸರ್ಕಾರದವರು ಬಿಡುಗಡೆಮಾಡಬೇಕೆಂದು ಸರ್ಕಾರೀ ಹುಕುಂ ಆಗಿದೆ ಎಂಬುದು ನಿಜವೇ ಅಥವಾ ಇಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಹಿಂದೆ ಬಿಡುಗಡೆಯಾದುದು ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ. ಅದನ್ನು ಅಲ್ಲಿ ಬಿಡುಗಡೆ ಮಾಡಬಾರದೆಂದು ಹೇಳಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—(ಬಿ)ಗೆ ಉತ್ತರವಾಗಿ ವಿಲೇವಾರಿ ಮಾಡುವ ವಿಷಯ ಇನ್ನೂ ಪರಿಶೀಲನೆಯಲ್ಲಿದೆಯೆಂದು ಹೇಳಿದೆ. ಅದನ್ನು ಎಷ್ಟು ದಿವಸಗಳಲ್ಲಿ ವಿಲೇವಾರಿ ಮಾಡುತ್ತೀರಿ? ಪರಿಶೀಲನೆಯನ್ನು ಪೂರ್ಣ ಮಾಡುವುದು ಯಾವಾಗ? ವಿದ್ಯಾವಂತ ನಿರುದ್ಯೋಗಿಗಳಿಗೆ ಜಮೀನನ್ನು ಕೊಡುವ ತತ್ವವನ್ನೇನಾದರೂ ದೃಷ್ಟಿಯಲ್ಲಿಟ್ಟುಕೊಂಡಿದ್ದೀರಾ?

ಶ್ರೀ ಎಚ್. ವಿ. ಕೌಜಲಗಿ.—ಈ ಬಗ್ಗೆ ಒಂದು ಕಮಿಟಿಯನ್ನು ನೇಮಿಸಿ ಅದರ ಮುಂದೆ ಎಲ್ಲ ವಿಷಯಗಳನ್ನು ಇಟ್ಟಿದೆ. ಅವರು ಏನು ನಿರ್ಣಯ ತೆಗೆದುಕೊಳ್ಳುತ್ತಾರೆ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

Sri H. SIDDAVEERAPPA.—May I know from the Hon'ble Minister whether any Amrit Mahal Kaval lands have been released for cultivation in the State ? If the answer is no, when was that order revised ?

Sri H. V. KOUJALGI.—So far as I remember, after the new Ministry came into office, no land from that area has been released.

ಶ್ರೀ ಕೆ. ಎಂ. ತಮ್ಮಯ್ಯ.—ಹಿಂದಿನ ಸರ್ಕಾರದ ಆಜ್ಞೆ ಪ್ರಕಾರ ಅಮೃತ ಮಹಲ್ ಕಾವಲಿನ ಸುಮಾರು 22 ಸಾವಿರ ಎಕರೆ ಪ್ರದೇಶವನ್ನು ರಿಲೀಸ್ ಮಾಡಲಾಗಿದೆ. ಅದಕ್ಕಿಂತ ಮುಂಚೆಯೇ ಅನೇಕ ಜನ ಆ ಜಮೀನು ಮೇಲೆ ಇದ್ದಾರೆ. ಅವರ ಬಗ್ಗೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ?

Sri H. V. KOUJALGI.—If they are unauthorised cultivators they will have to be evicted.

ಶ್ರೀ ಎಸ್. ಬಂಗಾರಪ್ಪ.—ಅಮೃತ ಮಹಲ್ ಕಾವಲ್ ಜಮೀನು ವಿಲೇವಾರಿ ಮಾಡುವ ಬಗ್ಗೆ ಒಂದು ಕಮಿಟಿಯನ್ನು ನೇಮಿಸಲಾಗಿದೆ ಎಂದು ಮಾನ್ಯ ಮಂತ್ರಿಗಳು ಈಗತಾನೆ ಹೇಳಿದರು. ಆ ಸಮಿತಿಗೆ ರೆಫರ್ ಮಾಡಿರುವ ವಿಚಾರಗಳೇನು ? ವಿದ್ಯಾವಂತ ನಿರುದ್ಯೋಗಿಗಳಾದವರಿಗೆ ಅದನ್ನು ಹಂಚಬೇಕು ಎಂದೋ ಅಥವಾ ಜಮೀನಿಲ್ಲದೆ ಇರತಕ್ಕ ಯಾರಿಗಾದರೂ ಹಂಚಿಕೆ ಮಾಡುವುದಕ್ಕೂ ಅವಕಾಶವಿರಬೇಕು ಎನ್ನುವ ಯೋಜನೆ ಇದೆಯೋ ?

ಶ್ರೀ ಎಚ್. ವಿ. ಕೌಜಲಗಿ.—ಆ ಕಮಿಟಿ ಮುಂದೆ ಬಡವರಿಗೆ ಕೊಡಬೇಕು ಮತ್ತು ವಿದ್ಯಾವಂತ ನಿರುದ್ಯೋಗಿಗಳಿಗೂ ಕೊಡಬೇಕು ಎನ್ನುವ ವಿಚಾರವಿದೆ.

ಶ್ರೀ ಬಿ. ಪರಮೇಶ್ವರಪ್ಪ.—ಈಗಾಗಲೇ ಸುಮಾರು 22 ಸಾವಿರ ಎಕರೆ ಜಮೀನು ವಿಲೇವಾರಿ ಮಾಡುವ ಅಭಿಪ್ರಾಯದಿಂದ ಬಿಡುಗಡೆ ಮಾಡಿದ್ದಾರೆ. ಅದನ್ನು ಕಂದಾಯ ಇಲಾಖೆಗೆ ವರ್ಗ ಮಾಡಿರತಕ್ಕದ್ದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೋ ಸ್ವಾಮಿ ?

ಶ್ರೀ ಎಚ್. ವಿ. ಕೌಜಲಗಿ.—ಆ ಪ್ರಕಾರ ಕೊಡಬೇಕೆಂದು ಹೊರಟಿದ್ದ ಸರ್ಕಾರಿ ಆಜ್ಞೆಯನ್ನು ತಡೆ ಹಿಡಿಯಲಾಗಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರದ ಜಮೀನನ್ನು ಯಾರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆಯೋ ಅವರಿಗೇ ಖಾಯಂ ಮಾಡಲಾಗುವುದೆಂದು ಹೇಳಿದ್ದರು. ಈಗ ಅಂಥವರನ್ನು ಎವಿಕ್ಟ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇವೆರಡರಲ್ಲಿ ಯಾವುದು ಸರಿ ಸ್ವಾಮಿ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳುವಂತೆ ಸರ್ಕಾರ ಯಾವಾಗಲೂ ಆ ರೀತಿ ಹೇಳಿಲ್ಲ. ಈಗ ಇದ್ದ ಕಾಯಿದೆಯ 94ನೆ ಕಲಂ ಪ್ರಕಾರ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದನ್ನು ಹೊರಗೆ ಹಾಕಲೇ ಬೇಕಾಗುತ್ತದೆ. ಆದರೆ ಈಗಿರುವ ಕಾಯಿದೆಯನ್ನು ದುರಸ್ತಿ ಮಾಡಿದ ನಂತರ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆಂದು ಮಾತ್ರ ಹೇಳಿದ್ದೇನೆ.

Sri H. SIDDAVEERAPPA.—The Hon. Minister was pleased to state that after the new Ministry came into office the revised order was passed not to release the lands, will a copy of the Government Order issued in this connection be placed on the Table ?

Sri H. V. KOUJALGI.—We have instructed revenue officers to withold granting of lands till next August. These are all administrative orders.

ಶ್ರೀ ಎಂ. ಎಸ್. ಕೃಷ್ಣನ್.—ಈಗಿನ ಮಂತ್ರಿ ಮಂಡಲ ಭೂಮಿಯನ್ನು ವಿಲೇವಾರಿ ಮಾಡಕೂಡದೆಂದು ತೀರ್ಮಾನ ಮಾಡಿರುವುದಾಗಿ ಹೇಳಿದರು. ಹಿಂದಿನ ಮಂತ್ರಿ ಮಂಡಲ ಎಷ್ಟು ಭೂಮಿಯನ್ನು ವಿಲೇವಾರಿ ಮಾಡಿದೆ ಎನ್ನುವುದನ್ನು ಹೇಳಲಿಕ್ಕೆ ಆಗುತ್ತದೆಯೋ ?

Sri H. V. KOUJALGI.—I want notice.

Radio and Electrical Manufacturing Co.

183. Sri M. S. KRISHNAN (Malleswaram).—

Will the Minister for Industries, Information and Publicity be pleased to stata;—

(a) whether the Government is proposing to see the REMCO where the Government holds majority shares, is sold over to some private Industries ;

(b) if not, in view of the position of the company, whether Government has any proposal for handing it (REMCO) over to a similar public sector industry ?

Sri M. RAJASEKHRA MURTHY (Minister for Industries, Information and Publicity).—

(a) No.

(b) No.

2-30 P.M.

There is one small amendment to the printed answer Sir.—

A representation was made by the Labour Uuion of the REMCO on 8th February and on 12th February we have made a proposal to the Government of India, Defence Department, stating that we are prepared to transfer the financial interest of the REMCO provided the Government of India are going to take over and run it in collaboration with the BEL, which is a public sector undertaking.

ಶ್ರೀ ಎಂ. ಎಸ್. ಕೃಷ್ಣನ್.—ಮರ್ಫಿ ಕಂಪೆನಿಯವರು ನೋಡಿಕೊಂಡು ಹೋದರು, ನಂತರ ತಿರುವಾಂಕೂರು ಎಳೆಯರಾಜರು ನೋಡಿಕೊಂಡುಹೋದರು. ಈಗ ಅವರಿಬ್ಬರನ್ನೂ ಬಿಟ್ಟು ಬಿರ್ಲಾರವರು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆಂಬುದು ಗೊತ್ತಿದೆಯೇ ?

Sri M. RAJASEKHARA MURTHY.—There is no such proposal before the Government.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಪಕ್ಷ ಬಿ. ಇ. ಎಲ್. ನವರು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲದಿದ್ದರೆ REMCOದಲ್ಲಿ ತಯಾರುಮಾಡುವ ಸಾಮಾನುಗಳನ್ನು ಬೇರೆ ಕಡೆ ತಯಾರು ಮಾಡುವುದಕ್ಕೆ ಒತ್ತಾಯಮಾಡುತ್ತೀರಾ ?

Sri M. RAJASEKHARA MURTHY.—The Company is negotiating with B.E.L with a request to give over all their work to REMCO so that REMCO may get some work from the existing industry in the public sector.

Sri C. K. RAJIAH SHETTY.—Is it not a fact that the REMCO has got an agreement with so many ancillary industries fixing a time limit and if this comes about, it is going aginst the agreement Sir ?

Sri M. RAJASEKHARA MURTHY.—REMCO has not been able to sell all the goods that are produced. It is not working to the full capacity. The Planning Commission has fixed a target of two Million meters but the off-take in the country is only 50 per cent. Therefore the Company has not been able to sell all the goods. Naturally some of the contracts will have to be cancelled.

ಶ್ರೀ ಎಂ. ಎಸ್. ಕೃಷ್ಣನ್.—REMCO ತಯಾರಿಸುವ ಮೀಟರಿನ ಬೆಲೆ ಬಿರ್ಲಾರವರು ತಯಾರಿಸುವ ಮೀಟರಿಗಿಂತ ಜಾಸ್ತಿ ಇರುವುದರಿಂದ ನಷ್ಟವಾಗದಂತೆ ಅಖಿಲಭಾರತ ಮಟ್ಟದಲ್ಲಿ ಮೀಟರುಗಳನ್ನು ತಯಾರಿಸಿ ಏಕರೂಪವಾದ ಬೆಲೆಗೆ ಮಾರಾಟಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಮಾಡಲು ಸಾಧ್ಯವೇ ?

Sri M. RAJASEHARA MURTHY.—The suggestion of the hon. Member is not practicable Sir, the Government of India has licenced more units for the production of energy meters. Practically six units have been closed in India and Remco and two other units, namely the Andhra Electrical Equipment Corporation and the Universal Electrical Company are continuing. The cost of production is 38, market rate is 31. The company has not been able to meet the competition in the market. So it is running under loss.

Sri H. SIDDAVEERAPPA.—Is it not a fact that the Birlas are the greatest competitors to REMCO and it is due to their competition, that REMCO is suffering loss ?

Sri M. RAJASEKHARA MURTHY.—I have already named two companies which belong to Birlas.

Submerged Areas of the "Sharavathi Project"

222. Sri N. G. HALAPPA (Channagiri).—

Will the Minister for Revenue be pleased to state :—

(a) the extent of the land together with its location reserved for the ryots of submerged area of the 'Shravathi Project' in Bhadravathi taluk ;

(b) the extent of the land that has already been granted to the said ryots ;

(c) whether the grant of land is a conditional one ; if so, the conditions attached to the grant ;

(d) whether these lands have been alienated violating the conditions ; and if so, the action Goverment proposed to take in the matter ?

Sri H. V. KOUJALGI (Minister for Revenue).—

(a) 5,656-36 acres.

(*Vide* Statement appended).

(b) 2,679-35 acres.

(c) Yes. The following conditions were attached to the grant;

(i) Non-alienation for a period of fifteen years;

(ii) The land granted shall be brought under cultivation within two years from the date of the grantee taking possession of the land;

(iii) The Grant is liable to be terminated and the land resumed if the land is appropriated for a purpose other than that for which the land is granted, or if any of the aforesaid conditions is not fulfilled.

(iv) The grantee shall cultivate the land personally.

(d) So far, no cases of violation have been reported.

STATEMENT

Showing the lands reserved for the Expropriated ryots of SVHEP under BRRB Channel Area.

Sl. No.	Villge	S. No.	Extent
1	2	3	4
1	Hallikere	32	150-00
2	Bommenahalli	23	276-32
3	Komaranahalli	3	101-21
4	Hadlekatte	1	40-00
5	Mavinakere	13	80-00
		27	182-30
6	Ukunda	10	59-16
7	Kenchanahalli	3	30-00
8	Goni Narsipur	16	17-32
		20	42-20
9	Antaragange	19	281-06
		29	160-00
10	Yerehalli	9	38-10
		14	174-12
11	Kachagondanahalli	15	200-00
12	Masarahalli	0	171-11
13	Bisalamane	1	65-29
14	Kenchammanahalli	3	35-10

(SRI H. V. KOUJALGI)

1	2	3	4
15	Yadehalli	50	169-00
		54	358-37
		66	20-00
16	Mallingenahalli	26	118-25
		31	30-00
17	Mallapure	87	38-00
18	Kenganalu	1	225-35
19	Kanasinakatte	39	133-33
20	Hanumanthapura	73	163-00
		129	78-00
21	Devarahalli	21	52-36
		37	30-40
		54	140-00
22	Kablikatte	18	123-00
23	Kumaranahalli	63	30-00
		36	77-00
24	Guddaneralikere	35	62-23
25	Basanikatte	24	171-20
26	Aralihalli	48	190-00
27	Basavapura 1, 2 and 3		175-25
28	Bhadrapura	78	275-00
29	Devara Narasipura	143	187-11
30	Rangapura	12	225-00
		Total ...	5,656-36

ಶ್ರೀ ಎನ್. ಜಿ. ಹಾಲಪ್ಪ.—ಈಗಾಗಲೆ ಸರ್ವೇ ಮಾಡಿರುವ 2 ಸಾವಿರ ಚಿಲ್ಲರೆ ಎಕರೆ ಜಮೀನನು ಶಿವಮೊಗ್ಗ ಮತ್ತು ಭದ್ರಾವತಿಯ ಕೆಲವು ಶ್ರೀಮಂತರು ತೆಗೆದುಕೊಂಡು ತಮ್ಮ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡಿರುವುದಕ್ಕೆ ದಾಖಲೆ ಇದೆ. ಅದನ್ನು ರುಜುವಾತುಮಾಡಿಕೊಟ್ಟರೆ ಅದರ ಬಗ್ಗೆ ತೆಗೆದುಕೊಳ್ಳುವ ಕ್ರಮವೇನು ?

SRI H. V. KOUJALGI.—I have not said that no violation has taken place. I have only stated that such violations have not been brought to the notice of the Government. If such violations are brought to notice, action will be taken.

SRI N. G. HALAPPA.—There are rigistered documents through which lands have been purchased. I do not understand how the Government can say that it has not come to their notice.

SRI H. V. KOUJALGI.—Somebody must bring it to the notice of the Government. Government cannot go about making enquires.

Sri S. BANGARAPPA.—The Hon. Minister is stating that for fifteen years, there should be no alienation and that is one of the conditions imposed while giving saguvali chits in respect of lands granted under this scheme. Has it not come to the notice of the Government that the imposition of this condition on a sale is ultra vires of section 54 of the Transfer of Property Act and it has not been reversed by the Supreme Court when the Government had gone in appeal ?

Sri H. V. KOUJALGI —It does not arise. It is a question of law.

Sri ABDUL KHUDUS ANWAR.—Last time it was brought to the notice of the Government that out of this reserve, some lands were granted to some congress leaders. Are you going to cancel these awards also Sir ?

Sri H. V. KOUJALGI.—Because it is granted to a congressman, how can it be cancelled ?

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಕಾಂಗ್ರೆಸ್ ಸದಸ್ಯರು ವಿಧಾನಪರಿಷತ್ತಿನ ಸದಸ್ಯರು ಮತ್ತು ವಿಧಾನ ಸಭೆಯ ಸದಸ್ಯರು ಯಾರಿಗೂ ಕೊಡಬಾರದು ಅಂತ ಆ ಪ್ರಕಾರ ಕಾಯಿದೆ ಏನಾದರೂ ಇದೆಯೇ ?

Sri H. V. KOUJALGI.—There ir no such rule

Sri C. K. RAJAIAH SHETTY.—Since there is wholesale violation of these land grants, is it not a fact that there is a serious feeling in this House that Government should set up a body to examine this matter and see that the lands which have been transferred illegally are taken back ?

Sri H. V. KOUJALGI.—I have already said that unless they are brought to the notice of the Government specifically, it will be very difficult to go on enquiring into this matter.

ಶ್ರೀ ಹಂಜಿಶಿವಣ್ಣ.—ಜಮೀನುಗಳನ್ನು ಕೊಟ್ಟವರು ಈ ರೀತಿಯಾಗಿ ಇಲ್ಲೀಗಲ್ ಆಗಿ ಮಾರಿ ಕೊಂಡಿರತಕ್ಕ ನಿದರ್ಶನವನ್ನು ಸರ್ಕಾರದವರ ಗಮನಕ್ಕೆ ನೂರಾರು ಸಂದರ್ಭಗಳನ್ನು ತಂದರೂ ಏನೂ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದು ನಿಜವೇ ?

ಶ್ರೀ ಎಚ್. ವಿ. ಕೌಜಲಗಿ.—ಅಂಥಾದ್ದು ಯಾವುದೂ ನಮ್ಮ ಗಮನಕ್ಕೆ ತಂದು ಕೊಟ್ಟಿಲ್ಲ.

ಶ್ರೀ ಬಿ. ಪರಮೇಶ್ವರಪ್ಪ.—ಶಾಸಕರು ಇಂತಹ ಲೋಪದೋಷಗಳನ್ನು ಎತ್ತಿ ಸರ್ಕಾರದ ಮುಂದೆ ಇಟ್ಟರೆ ಆಗಲೂ ಏನೂ ಮಾಡುವುದಿಲ್ಲ. ಹೇಳದೇ ಹೋದರೂ ತಾವಾಗಿಯೇ ಏನೂ ಮಾಡುವುದಿಲ್ಲ. ಈ ರೀತಿ ನೀವಾಗಲೀ ನಿಮ್ಮ ಅಧಿಕಾರಿಗಳಾಗಲಿ ಏನೂ ಕಾರ್ಯಕ್ರಮ ತೆಗೆದು ಕೊಳ್ಳದಿದ್ದರೆ ನೀವು ಮಾಡತಕ್ಕ ನಿಮ್ಮ ಉದ್ಯೋಗವಾದರೂ ಏನು ?

ಶ್ರೀ ಎಚ್. ವಿ. ಕೌಜಲಗಿ.—ಆ ರೀತಿ ಹೇಳುವುದು ಸರಿಯಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮುಳುಗಡೆಯಾದ ಜಮೀನು ರೈತರಿಗೆ [illegible],656 ಎಕರೆ ರಿಸರ್ವ್ ಮಾಡಿ ಈಗಾಗಲೇ 2,60[illegible] ಎಕರೆ ರಿಲೀಸ್ ಮಾಡಿದ್ದೀರಿ. ಉಳಿದ ಜಮೀನನ್ನು ಬಂಡವಾಳಸ್ಥರು ಅಕ್ರಮವಾಗಿ ಉತ್ತಿರುವುದರಿಂದ ಅದನ್ನು ತಡೆಗಟ್ಟಿ ಭೂ ಹೀನರು ಮತ್ತು ರೈತಕಾರ್ಮಿಕರು ಹಾಗೂ ಪರಿಶಿಷ್ಟವರ್ಗದವರಿಗೆ ಕೂಡಲೇ ವಿಲೇವಾರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ರಿಸರ್ವೇಷನ್ ಆರ್ಡರ್ 31—12—1968ರಲ್ಲೇ ರದ್ದಾಗಿದೆ. ರದ್ದಾಗಿರುವ ಕಾರಣ ಉಳಿದಿರುವ ಜಮೀನನ್ನು ತಕ್ಷಣ ಗ್ರ್ಯಾಂಟ್ ರೂಲ್ಸ್ ಪ್ರಕಾರ ಬಡವರಿಗೆ ಹಂಚುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದು ಕ್ರಮವಾಗಿ ಸಾಗುವಳಿಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೂ ರಿಸರ್ವ್ ಮಾಡಿರುವ ಜಮೀನನ್ನು ಹಂಚಲು ಈಗಿರುವ ಪಿರೀಡನ್ನು ಹೆಚ್ಚು ಮಾಡಬಹುದು. ಆದರೆ ಬೇರೆಯವರಿಗೆ ಕೊಡಬೇಕೆಂಬ ವಿಚಾರ ಇಲ್ಲ.

ಶ್ರೀ ಎಂ. ನಾಗಪ್ಪ.—ಜಮೀನನ್ನು ಒಬ್ಬರು ಮತ್ತೊಬ್ಬರಿಗೆ ಮಾರಿ ರಿಜಿಸ್ಟರ್ ಆದರೆ ಅದು ಸರ್ಕಾರದ ಗಮನಕ್ಕೆ ಬರುವುದಿಲ್ಲವೆಂದು ಹೇಳುತ್ತೀರಿ. ಈ ಬಗ್ಗೆ ಸೆಕ್ರೆಟರಿಯವರಿಗೆ ಅರ್ಜಿ ಕೊಟ್ಟರೆ ಅವರೂ ಸಹ ಕ್ರಮ ತೆಗೆದುಕೊಳ್ಳುವುದಿಲ್ಲ. ಸಬ್—ರಿಜಿಸ್ಟ್ರಾರ್ ಅವರು ಮತ್ತು ಜಿಲ್ಲಾಧಿಕಾರಿಗಳು ಇಂತಹ ವಿಷಯಗಳನ್ನು ಏನಾದರೂ ಮುಚ್ಚಿಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಮತ್ತು ನಾವು ಈ ಬಗ್ಗೆ ಇನ್‌ಫರ್‌ಮೇಷನ್ ಕೊಟ್ಟರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಇನ್‌ಫರ್‌ಮೇಷನ್ ಕೊಟ್ಟರೆ ವಿಚಾರ ಮಾಡುತ್ತೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಮಾನ್ಯಮಂತ್ರಿಗಳು ಇದುವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದರು. ಸರ್ಕಾರದ ಗಮನಕ್ಕೆ ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಈಗ ಮಾನ್ಯ ಮಿತ್ರರುಗಳು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ಆದರೂ ಸಹ ಕ್ರಮ ತೆಗೆದುಕೊಳ್ಳುತ್ತೀರಾ !

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರುಗಳು ಇಂತಹ ಸರ್ವೆ ನಂಬರ್ ಜಮೀನು ಪರಭಾರೆಯಾಗಿದೆ ಎಂದು ಹೇಳಲಿಲ್ಲ. ಸರಿಯಾಗಿ ತಿಳಿಸಿದರೆ ವಿಚಾರ ಮಾಡಬಹುದು. ಎಲ್ಲಾ ಜನರಲ್ ಅಲಿಗೇಷನ್‌ಗಳು.

ಶ್ರೀ ಹಂಪಿ ಶಿವಣ್ಣ.—ಈ ವಿಚಾರದಲ್ಲಿ ಒಂದು ಅರ್ಜಿಯನ್ನು ತಮಗೆ ಕಳಿಸುತ್ತೇನೆ. ತಾವು ಮಾನ್ಯ ಮಂತ್ರಿಗಳಿಗೆ ವಿಚಾರ ಮಾಡಲು ಕಳಿಸಿಕೊಡಬೇಕು.

ಅಧ್ಯಕ್ಷರು.—ಆ ಅರ್ಜಿಯನ್ನು ಮಾನ್ಯ ಸದಸ್ಯರು ನನ್ನ ಕಡೆಗೆ ಕಳಿಸಿಕೊಡಿ.

Employment to Diploma Holders

230. Sri H. SIDDAVEERAPPA (Harihar).—

Will the Minister for Education be pleased to state:—

(*a*) the number of Polytechnics functioning in the State together with the places where they are located ;

(*b*) the number of Diploma Holders coming out every year from the above Institutions, since 1962 (yearwise figures may be provided);

(*c*) the number of Diploma Holders in Civil Engineering who have been appointed in Government Service since 1968 ?

Sri N. M. KOTRABASAIAH SOGI (Deputy Minister for Education).—

(*a*) 31 at the following places :

Bangalore	6	K. R. Pet	1
Channapatna	1	Kushalnagar	1
Tumkur	1	Bijapur	1
Belgaum	1	Bagalkot	1
Karwar	1	Mangalore	1
Gulbarga	1	Hassan	1
Raichur	1	Chintamani	1
Bidar	1	Mysore	2
Bellary	1	Chickmagalur	1
Bhadravathi	1	Dharwar	1
Hubli	2	Davangere	2
Kolar Gold Fields	1		

V-31 No 03
1969-16.2-8
(B) 4860

(b)	1962	...	1,864
	1963	...	2,368
	1964	...	2,530
	1965	...	2,486
	1966	...	2,707
	1967	...	2,930
	1968	...	2,673

(c) About 1,500. Exact figures are not readily available.

Sri H. SIDDAVEERAPPA.—Supplementary to (b): The figures given in answer to (b) clearly show that the unemployment problem stares us in the face and that Government is manufacturing annually 2,000 and odd diploma holders. Have the Government thought of the ways and means of giving useful employment to these people either in Government service or elsewhere ?

† Sri N. M. KOTRABASAIAH SOGI.—The unemployment problem is not confined to the Education Department alone; it is general and exists not only in the Mysore State but throughout India. Anyway, the Central Government and our Government are making all possible efforts to lessen it. We are having consultations with the all-India Council of Technical Education. Our Chief Minister had also called a meeting to evolve methods to solve this problem.

ಶ್ರೀ ಎಸ್. ಎಂ. ಗುರೆಡ್ಡಿ.—ತಾವು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ 17,558 ಜನ ಡಿಪ್ಲೊಮಾದಾರರು ಉತ್ತೀರ್ಣರಾಗಿ ಹೊರಗೆ ಬಂದಿದ್ದಾರೆ. ಇವರಲ್ಲಿ ಎಷ್ಟು ಜನ ನೌಕರಿಯ ಮೇಲೆ ಹೋಗಿದ್ದಾರೆ. ಎಷ್ಟು ಜನ ನೌಕರಿ ಬೇಕೆಂದು ಅರ್ಜಿ ಸಲ್ಲಿಸಿದ್ದಾರೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—(ಇ) ಪ್ರಶ್ನೆಗೆ ಉತ್ತರವಾಗಿ ಸುಮಾರು 1,500 ಮಂದಿ ಡಿಪ್ಲೊಮಾದಾರರುಗಳು. ಆದರೆ ನಿಖರವಾದ ಸಂಖ್ಯೆಗಳು ಸಿದ್ಧವಾಗಿ ದೊರೆಯು ವಂತಿಲ್ಲ ಎಂದು ಹೇಳಿದೆ. ವಿದ್ಯಾವಂತರಾದವರಿಗೆಲ್ಲಾ ನೌಕರಿ ಒದಗಿಸುವುದಕ್ಕೆ ಯಾವ ಸರ್ಕಾರಕ್ಕೂ ಸಹ ಸಾಧ್ಯವಾಗುವುದಿಲ್ಲ. ಈಗ ಎಲ್ಲೆಲ್ಲಿ ಇಂಡಸ್ಟ್ರಿಯಲ್ ಕನ್‌ಸರ್ನ್‌ಗಳಲ್ಲಿ ಟ್ರೈನಿಂಗ್‌ಗಾಗಿ ಕೆಲಸವಿಲ್ಲದ ಡಿಪ್ಲೊಮಾದಾರರುಗಳನ್ನು ಮತ್ತು ಎಂಜಿನಿಯರಿಂಗ್ ಡಿಪ್ಲೊಮಾ ದಾರರುಗಳನ್ನು ತೆಗೆದುಕೊಳ್ಳುತ್ತಾರೋ ಅಂತಹವರಿಗೆ ಕ್ರಮವಾಗಿ 150 ರೂಪಾಯಿಗಳು ಮತ್ತು 250 ರೂಪಾಯಿಗಳನ್ನು ಕೊಡಬೇಕೆಂದು ಕೇಂದ್ರ ಸರಕಾರದವರು ಯೋಚನೆಮಾಡಿದ್ದಾರೆ.

Sri H. SIDDAVEERAPPA.—Until such time as this problem finds a solution, have the Government thought of limiting the admissions to these institutions or closing them for some time or converting them into some other institutions ?

Sri N. M. KOTRBASAIAH SOGI.—Government have proposed to restrict the intake capacity of the different polytechnics.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಬ್ಬ ಡಿಪ್ಲೊಮಾ ಹೋಲ್ಡರನ್ನು ತಯಾರು ಮಾಡು ವುದಕ್ಕೆ ಸರಕಾರಕ್ಕೆ ಎಷ್ಟು ಖರ್ಚು ಬರುತ್ತದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನನಗೆ ನೋಟೀಸು ಬೇಕು.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸುಮಾರು ಆರು ವರ್ಷಗಳ ಅವಧಿಯಲ್ಲಿ ಸುಮಾರು 16 ಸಾವಿರ ಡಿಪ್ಲೊಮಾ ಹೋಲ್ಡರುಗಳಿಗೆ ಕೆಲಸಗಳೇ ಇಲ್ಲದೇ ಇರುವ ಕಾಲದಲ್ಲಿ ಪಾಲಿಟೆಕ್ನೀಕ್ ಗಳಿಂದ ಬರತಕ್ಕಂತಹ ವಿದ್ಯಾರ್ಥಿಗಳಲ್ಲಿ ಯಾರು ಯಾರು ಸರಕಾರಿ ನೌಕರಿಗಳಲ್ಲಿ ಇರಬೇಕೆಂದು ಆಸೆ ಪಡುತ್ತಾರೋ ಅವರ ಪಟ್ಟಿಯನ್ನು ಮಾಡಿ ಸೀನಿಯರ್ ನಂಬರುಗಳ ಮೇಲೆ ಅವರಿಗೆ ಕೆಲಸ ಗಳನ್ನು ಒದಗಿಸಿ ಕೊಡುವುದು ಸಾಧುವಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮೂರನೆ ಯೋಜನೆಯೊಳಗೆ ಎಷ್ಟು ಇಂಡಸ್ಟ್ರಿಗಳನ್ನು ಮಾಡಬೇಕೆಂದು ಇತ್ತೋ ಇದನ್ನು ಪೂರ್ಣವಾಗಿ ಮಾಡಲು ಆಗ ಎಕಾನಮಿ ಮೆಷರ್ಸ್ ಎಂದು ಅಡ್ಡಿ ಬಂದುದರಿಂದ ಹೆಚ್ಚು ಇಂಡಸ್ಟ್ರಿಗಳು ಬರಲು ಆಗದೇ ಅನೇಕ ಜನರಿಗೆ ನೌಕರಿಯನ್ನು ಕೊಡುವುದು ಅಸಾಧ್ಯವಾಯಿತು. ಮತ್ತು ಆಗ ಹೆಚ್ಚು ಇಂಡಸ್ಟ್ರಿ ಮಾಡಬೇಕು ಎಂದು ಇದ್ದುದನ್ನು ಕಟ್ ಮಾಡಬೇಕಾಗಿ ಬಂತು. ಇದರ ಜೊತೆಗೆ ಡಿಪ್ಲೋಮಾ ಹೋಲ್ಡರುಗಳ ಸಂಖ್ಯೆಯೂ ಹೆಚ್ಚಾಗುತ್ತಾ ಬಂತು ; ಇದಕ್ಕಾಗಿ ಸಾಧ್ಯವಾದಷ್ಟು ಜನರನ್ನು ಸರಕಾರಿ ಇಂಡಸ್ಟ್ರಿಗಳಲ್ಲಿ ಹಾಗೂ ಖಾಸಗಿ ಇಂಡಸ್ಟ್ರೀಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತಾ ಬರುತ್ತಿದ್ದೇವೆ ಮತ್ತು ಆಲ್ ಇಂಡಿಯಾ ಕೌನ್ಸಿಲ್ ಅಫ್ ಟೆಕ್ನಿಕಲ್ ಎಜ್ಯುಕೇಷನ್ ಮೂಲಕವೂ ಹೆಚ್ಚು ಜನರಿಗೆ ಕೆಲಸಗಳನ್ನು ಕೊಡಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ ಮತ್ತು ನಾನು ಆಗಲೇ ಹೇಳಿದ ಹಾಗೆ ಈಗಿರುವ ಕಾಲೇಜುಗಳಲ್ಲಿ ಇನ್‌ಟೇಕ್‌ನ್ನು ಆದಷ್ಟು ಕಡಿಮೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇದರಿಂದ ಸಾಧ್ಯವಾದಷ್ಟು ಅನ್ ಎಂಪ್ಲಾಯ್‌ಮೆಂಟನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ಎನ್. ವೀರಪ್ಪ ಗೌಡ.—ಸರಕಾರದವರು ಟೆಕ್ನಿಕಲ್ ಕಾಲೇಜುಗಳಲ್ಲಿ ವಿದ್ಯೆ ಪಡೆದು ಹೊರಬಂದವರು ಅವರ ಸ್ವಂತ ಕಾಲಿನ ಮೇಲೆ ಅವರೇ ನಿಲ್ಲುವಂತೆ ಮಾಡುವ ವಿದ್ಯಾಭ್ಯಾಸ ಕೊಡುತ್ತೀರೋ ಇಲ್ಲವೇ ಎಲ್ಲರಿಗೂ ಕೆಲಸ ಕೊಡಬೇಕೆಂದು ವಿದ್ಯಾಭ್ಯಾಸ ಕೊಡುತ್ತೀರೋ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವಿದ್ಯಾಭ್ಯಾಸ ಕೊಡುವುದು ಅವರು ಅವರ ಸ್ವಂತ ಕಾಲಿನ ಮೇಲೆ ನಿಲ್ಲುವಂತೆ ಕೆಲಸ ಮಾಡಬೇಕು ಎಂದು ಮತ್ತು ಎಲ್ಲರಿಗೂ ಸರಕಾರಿ ಕೆಲಸ ಕೊಡಬೇಕು ಎಂದರೆ ಅದು ಸಾಧ್ಯವೂ ಇಲ್ಲ. ಯಾವ ಸರಕಾರವೇ ಆಗಲಿ ಎಲ್ಲರಿಗೂ ಕೆಲಸ ಕೊಡಿಸುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಮೈಸೂರು ದೇಶದಲ್ಲಿ ನಾನಾ ರೀತಿಯಾದ ಇಂಡಸ್ಟ್ರಿಗಳು ಇರುವುದರಿಂದ ಇದರಲ್ಲಿ ಸರಕಾರದ ಇಂಡಸ್ಟ್ರಿಗಳು ಇರುವ ಕಡೆಗಳಲ್ಲಿ ಎಲ್ಲೆಲ್ಲಿ ಮೊದಲು ಜನರನ್ನು ತುಂಬಲು ಸಾಧ್ಯವಿದೆ ಅಲ್ಲಿ ಮೊದಲು ತುಂಬಿ ಆ ನಂತರ ಹೊರ ದೇಶಗಳವರಿಗೆ ಅವಕಾಶ ಕೊಡುವಂತೆ ಮಾಡುವುದು ಸಾಧುವಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರಕಾರದ ಕೈಗಾರಿಕಾ ಕ್ಷೇತ್ರದಲ್ಲಿ ಮೊದಲಿಗೆ ಇರುವ ಮೂಲಭೂತವಾದ ಧೋರಣೆ ಕನ್ನಡಿಗರಿಗೆ ಅದರಲ್ಲೂ ಮೈಸೂರಿನಲ್ಲಿರುವವರಿಗೆ ಮೊದಲು ಪ್ರಾಶಸ್ತ್ಯ ಕೊಡಬೇಕೆಂದು ಸಂಬಂಧಪಟ್ಟ ಕೈಗಾರಿಕೆಗಳವರಿಗೆ ಹಾಗೂ ಸಂಸ್ಥೆಗಳವರಿಗೆ ತಿಳಿಸಲಾಗಿದೆ. ಅದರ ಪ್ರಕಾರ ನೌಕರಿಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಕೆಲ ಜನರಿಗೆ ನೌಕರಿಗಳು ಸಿಕ್ಕುತ್ತಿವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ರಾಜ್ಯದಲ್ಲಿ 31 ಪಾಲಿಟೆಕ್ನಿಕ್‌ಗಳು ಇವೆ. ಇದರಲ್ಲಿ ಸಾಕಾದಷ್ಟು ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸ ಮಾಡುತ್ತಿದ್ದಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಕಾದಷ್ಟು ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮುಂದೆ ಅಪ್ಲಿಕೇಷನ್ ತೆಗೆದುಕೊಳ್ಳುವುದನ್ನು ಕಡಿಮೆ ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ 1962 ರಿಂದ 1968 ರವರೆಗೆ ಸುಮಾರು 1500 ಮಂದಿ ಡಿಪ್ಲೊಮಾ ಹೋಲ್ಡರ್ಸ್ ವಿದ್ಯಾರ್ಥಿಗಳು ಕೆಲಸದಲ್ಲಿ ಇದ್ದಾರೆ. ಅವರು ಯಾವ ಯಾವ ವರ್ಷದಲ್ಲಿ ಸೇರಿದವರು? ಮತ್ತು ನಿರುದ್ಯೋಗಿಗಳಾಗಿರುವ ಡಿಪ್ಲೊಮಾ ಹೋಲ್ಡರ್ಸ್‌ಗಳ ಸಂಖ್ಯೆಯನ್ನು ವರ್ಷಂಪ್ರತಿ ಸರ್ವೆ ಮಾಡಿದ್ದೀರಾ ? ಅಥವಾ ಅವರಿಗೆ ಯಾವರೀತಿಯಿಂದಲಾದರೂ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾರ್ವತ್ರಿಕವಾಗಿ ನಿರುದ್ಯೋಗದ ಒಂದು ಸರ್ವೆ ಮಾಡುವುದು ಬಹಳ ಕಷ್ಟವಾಗುತ್ತದೆ. ಆದರೆ ನಿರುದ್ಯೋಗಿಗಳು ಯಾರು ಯಾರು ಇದ್ದಾರೆ ಅವರುಗಳು ವರ್ಷವರ್ಷವೂ ಸಾಧ್ಯವಾದಷ್ಟು ಮಟ್ಟಿಗೆ ಪ್ರೈವೇಟ್ ಕನ್‌ಸರ್ನ್‌ಗಳಲ್ಲಿಯಾಗಲಿ ಅಥವ ಇನ್ನಿತರ ಇಂಡಸ್ಟ್ರಿಯಲ್ ಸಂಸ್ಥೆಯಾಗಲ್ಲಾಗಲಿ ಸೇರಿಕೊಂಡು ತಮ್ಮ ಜೀವನವನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ನಿರ್ದಿಷ್ಟವಾದ ಅಂಕಿ ಸಂಖ್ಯೆಗಳನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರದ ಒಂದು ಸಂಸ್ಥೆಯಲ್ಲಿ ನೌಕರಿಗೆ ತೆಗೆದುಕೊಳ್ಳಬೇಕಾದರೆ ಅವರನ್ನು ಇಂಟರ್‌ವ್ಯೂ ಮಾಡಿ ಅವರ ಯೋಗ್ಯತೆ ಮೇಲೆ ಅವರನ್ನು ಆರಿಸುತ್ತಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, 1962 ರಿಂದ 1968ರ ವರೆಗೆ 1,500 ಮಂದಿ ಡಿಪ್ಲೊಮಾ ಹೋಲ್ಡರುಗಳಿಗೆ ಉದ್ಯೋಗವನ್ನು ಒದಗಿಸಿದ್ದೇವೆ ಎಂದು ಹೇಳಿದ್ದೀರಿ. ಅವರನ್ನು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡುವಾಗ ರೆಕ್ರೂಟ್‌ಮೆಂಟ್ ರೂಲ್ಸನ್ನು ಅನುಸರಿಸಿ ಮಾಡದೇ ಇರುವುದರಿಂದ ಪರಿಶಿಷ್ಟ ಜಾತಿಯವರಿಗೆ ಏನು ಒಂದು ರಿಸರ್ವೇಷನ್ 18 ಪರ್ಸೆಂಟು ಎಂದು ಇದೆಯೋ ಅದು ದೊರಕಿಲ್ಲದೆ ಇರುವುದರಿಂದ ಅನ್ಯಾಯವಾಗಿದೆ, ಅದನ್ನು ಸರಿಪಡಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಲ್ಲಿಯವರೆಗೆ ಮಾಡತಕ್ಕಂಥ ನೇಮಕ ಗಳನ್ನು ರೂಲ್ಸ್ ಪ್ರಕಾರ ಮಾಡಲಾಗಿದೆ. ಮಾನ್ಯ ಸದಸ್ಯರು ಒಂದು ನಿರ್ದಿಷ್ಟವಾದ ಉದಾ ಹರಣೆಯನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎ. ಆರ್. ಬದ್ರಿನಾರಾಯಣ್.—ಅಂಕಿಸಂಖ್ಯೆಗಳನ್ನು ಕೊಟ್ಟಿರುವ ಪ್ರಕಾರ ಬಹಳ ಜನಕ್ಕೆ ಕೆಲಸ ಇಲ್ಲದೇ ಇರುವುದರಿಂದ ಎಲ್ಲರಿಗೂ ಉದ್ಯೋಗವನ್ನು ಸರ್ಕಾರ ಒದಗಿಸಲಿಕ್ಕೆ ಆಗುವುದಿಲ್ಲ. ಅವರುಗಳು ಏನು ಮಾಡಬೇಕು ? ಅವರ ಗತಿ ಏನು ಅದಕ್ಕೆ ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳುತ್ತೀರಾ ? ಅಥವಾ ಪ್ರೈವೇಟ್ ಇಂಡಸ್ಟ್ರೀಸ್‌ನನ್ನಾದರೂ ಸ್ಥಾಪನೆ ಮಾಡಿ ಅಲ್ಲಾದರೂ ಅವರಿಗೆ ಉದ್ಯೋಗವನ್ನು ಕಲ್ಪಿಸಿಕೊಡುತ್ತೀರಾ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ಎಲ್ಲೆಲ್ಲಿ ಸಾಧ್ಯ ಇದೆಯೋ ಅಲ್ಲಲ್ಲಿ ಅವರಿಗೆ ಉದ್ಯೋಗಗಳನ್ನು ಒದಗಿಸಲಾಗಿದೆ. ಮತ್ತು ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ಅವರುಗಳಿಗೆ ಟ್ರೈನಿಂಗ್ ಪೀರಿಯಡ್‌ನಲ್ಲಿ ಕೇಂದ್ರ ಸರ್ಕಾರದವರು ಡಿಪ್ಲೊಮಾ ಹೋಲ್ಡರುಗಳಿಗೆ 150 ಮತ್ತು ಗ್ರಾಜುಯೇಟ್ಸ್‌ಗೆ 250 ರೂಪಾಯಿ ಸ್ಟೈಪೆಂಡ್ ಕೊಟ್ಟಿದ್ದಾರೆ. ಮೇಲಾಗಿ ಅವರನ್ನು ಗೌರ್ನಮೆಂಟ್ ಕನ್‌ಸರ್ನ್‌ನಲ್ಲಿ ಅಬ್‌ಸಾರ್ಬ್ ಮಾಡಿ ಕೊಳ್ಳುತ್ತಾರೆ. ವಿದ್ಯಾವಂತರಾದವರೆಲ್ಲರಿಗೂ ನೌಕರಿ ಕೊಡಲಿಕ್ಕೆ ಸಾಧ್ಯವಿಲ್ಲ. ನಾಲ್ಕನೇ ಪಂಚ ವಾರ್ಷಿಕ ಯೋಜನೆಯಲ್ಲಿ ಹೆಚ್ಚು ಕೈಗಾರಿಕೆ ಗಳನ್ನು ಸ್ಥಾಪನೆ ಮಾಡಿ ನಿರುದ್ಯೋಗಿಗಳ ಸಮಸ್ಯೆ ಯನ್ನು ಆದಷ್ಟುಮಟ್ಟಿಗೆ ಕಡಿಮೆ ಮಾಡಬೇಕು ಎನ್ನುವ ಯೋಚನೆ ಸರ್ಕಾರದ ಗಮನದಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಈಗಾಗಲೇ ಸರ್ಕಾರದವರು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಿದಿರಿ. ಆದರೆ ಕೇಂದ್ರ ಸರ್ಕಾರ ನಡೆಸತಕ್ಕ ಕೈಗಾರಿಕೆಗಳಲ್ಲಿ ಆನ್ಸಿಲರಿ ಯೂನಿಟ್ಸ್‌ನಲ್ಲಿ ಅವರಿಗೆ ಇಷ್ಟ ಬಂದವರಿಗೆ ಕೆಲಸ ಕೊಟ್ಟಿದ್ದಾರೆ. ಆದುದರಿಂದ ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ಮೈಸೂರು ರಾಜದ್ಯಲ್ಲಿರ ತಕ್ಕಂಥ ನಿರುದ್ಯೋಗಿಗಳಿಗೆ ಕೆಲಸ ಕೊಡಬೇಕು ಎನ್ನುವ ಆದೇಶವನ್ನು ಕೊಡುವುದಕ್ಕೆ ಸಾಧ್ಯ ವಾಗುತ್ತದೆಯೇ ? ಅದೇ ರೀತಿ ಮೈಸೂರು ರಾಜ್ಯದಲ್ಲಿ ಅನೇಕ ಕೈಗಾರಿಕೆಗಳು ಇವೆ. ಅಲ್ಲೂ ಕೂಡ ನಿಯಮಗಳಿಗನುಸಾರವಾಗಿ ಅವರುಗಳನ್ನು ಕೆಲಸಕ್ಕೆ ತೆಗೆದುಕೊಂಡರೆ ಅನ್‌ಎಂಪ್ಲಾಯ್ ಮೆಂಟ್ ಪ್ರಾಬ್ಲಮ್ ಕಡಿಮೆಯಾಗುವುದಿಲ್ಲವೇ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ.—ಕೇಂದ್ರ ಸರ್ಕಾರದ ಕೈಗಾರಿಕಾ ಸಂಸ್ಥೆ ಗಳಿಗೆ ಹೀಗೆ ಮಾಡಬೇಕು ಎನ್ನುವ ಆದೇಶ ಕೊಡವುದು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗದ ಮಾತು. ಆದರೆ ರಾಜ್ಯಸರ್ಕಾರ ಅವರಿಗೆ ಒಂದು ಪತ್ರವನ್ನು ಬರೆದು ಕೇಂದ್ರದ ಕೈಗಾರಿಕಾ ಸಂಸ್ಥೆ ಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಮೈಸೂರಿನವರಿಗೆ ಅಂದರೆ ಕನ್ನಡಿಗರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ತಿಳಿಸಲಾಗಿದೆ.

ಶ್ರೀ ಎಂ. ನಾಗಪ್ಪ—ಒಂದೇ ಸಬ್ಜೆಕ್ಟ್ ಇರತಕ್ಕಂಥ ಕಾಲೇಜುಗಳನ್ನೂ ಮತ್ತು ಪಾಲಿ ಟೆಕ್ನಿಕ್ ಶಾಲೆಗಳನ್ನು ಅಳತೆಯಿಲ್ಲದೆ ಸರ್ಕಾರದವರು ತೆರೆದಿದ್ದು ಹೀಗೆ ಅಧಿಕ ಸಂಖ್ಯೆಯಲ್ಲಿ ಸಿವಿಲ್ ಇಂಜಿನಿಯರಿಂಗ್ ವಿದ್ಯಾವಂತರು ನಿರುದ್ಯೋಗಿಗಳಾಗಲು ಕಾರಣವಾಯಿತು ಎನ್ನುವುದು ಸರಿ ಯಲ್ಲವೇ ? ಮತ್ತು ಇನ್ನು ಮುಂದಕ್ಕೆ ಇಂಥಾ ವರ್ಷದಲ್ಲಿ ತೇರ್ಗಡೆಯಾದ ವಿದ್ಯಾವಂತರಿಗೆ ಇಂಥಾ ವರ್ಷ ನೌಕರಿಯನ್ನು ಕೊಡುವುದಕ್ಕೇನಾದರೂ ಒಂದು ವ್ಯವಸ್ಥೆಮಾಡಲು ಸಾಧ್ಯವೇ ? ಮತ್ತು ಹಾಲಿ ಸರ್ಕಾರದವರು ಸಿವಿಲ್ ಇಂಜಿನಿಯರಿಂಗ್ ಗ್ರಾಜುಯೇಟುಗಳಿಗೆ ಕಾಂಟ್ರಾಕ್ಟ್‌ಗಳನ್ನು ಕೊಡುವುದಕ್ಕೆ ಒಂದು ಏನು ಸರ್ಕ್ಯುಲರನ್ನು ಹೊರಡಿಸಿದ್ದಾರೆ ಅದೇ ಮಾದರಿಯಲ್ಲಿ ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಇಂಜಿನಿಯರುಗಳಿಗೂ ಒಂದು ಪ್ರಾವಿಜನ್ ಮಾಡುವುದಕ್ಕೆ ಸಾಧ್ಯವಿಲ್ಲವೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರದವರು ಯಾವ ಒಂದು ಪಾಲಿಟೆಕ್ನಿಕ್ ಅಥವಾ ಬೇರೆ ಒಂದು ಶಾಲೆಯನ್ನು ತೆರೆದಿರತಕ್ಕದ್ದು ಮತ್ತು ಅಲ್ಲಿ ಸಬ್ಜೆಕ್ಟ್‌ಗಳನ್ನು ಬೋಧಿಸುತ್ತಿರುವುದು ಅಲ್ಲಿ ವ್ಯಾಸಂಗ ಮಾಡತಕ್ಕ ಜನರಿಗೆ ನೌಕರಿಗಳನ್ನು ಒದಗಿಸಬೇಕೆಂಬ ಉದ್ದೇಶದಿಂದ ಅಲ್ಲ. ಜನರಿಗೆ ವಿದ್ಯೆಯನ್ನು ಕೊಡಬೇಕಾದುದು ವಿದ್ಯಾಸಂಸ್ಥೆಯ ಕರ್ತವ್ಯ. ಆದರೆ ಮಾನ್ಯ ಸದಸ್ಯರು ಸಲಹೆ ಮಾಡಿದ ಹಾಗೆ ಇಂಥಾ ವರ್ಷ ತೇರ್ಗಡೆಯಾದವರಿಗೆ ಇಂಥಾ ವರ್ಷವೇ ನೌಕರಿಗಳನ್ನು ಕೊಡಬೇಕೆಂಬುದು ಸಾಧ್ಯವಿಲ್ಲ. ಇನ್ನು ಆ ಶಾಲೆಗಳಲ್ಲಿ ಸಬ್ಜೆಕ್ಟ್‌ವೈಜ್ ಬಗ್ಗೆ ಒಂದು ಪ್ಯಾಟ್ರನ್ ಆಲ್ ಇಂಡಿಯಾ ಟೆಕ್ನಿಕಲ್ ಎಜುಕೇಷನ್ ಸಂಸ್ಥೆಯವರು ಶಿಫಾರ್ಸು ಮಾಡಿದ್ದಾರೆ. ಇನ್ನು ಅಭ್ಯರ್ಥಿಗಳನ್ನು ಭರ್ತಿಮಾಡತಕ್ಕ ವಿಚಾರದಲ್ಲಿ ಅವರ ಯೋಗ್ಯತೆ—ಅರ್ಹತೆ ಮತ್ತು ಶ್ರೇಣಿಗಳನ್ನು ನೋಡಿ ಅದನ್ನು ಮಾಡಲಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ಕಾರದವರು ಇನ್ನು ಮುಂದಕ್ಕೆ ಇಣ್ಟೇಕ್ ಕಡಮೆ ಮಾಡುತ್ತೇವೆಂದು ಹೇಳಿದರು. ಹಾಗೆ ಕಡಮೆ ಮಾಡುವುದಾದರೆ ಮುಂದೆ ಈ ಶಾಲೆಗಳಿಗಾಗಿ ಕೊಟ್ಟಿರತಕ್ಕ ಆ ದೊಡ್ಡ ದೊಡ್ಡ ಕಟ್ಟಡಗಳನ್ನು ಯಾವ ರೀತಿ ಉಪಯೋಗ ಮಾಡಬೇಕು ಎಂಬ ವಿಚಾರದಲ್ಲಿ ಸರ್ಕಾರದವರೇನಾದರೂ ಆಲೋಚನೆ ಮಾಡಿದ್ದಾರೆಯೇ?

ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಡೈವರ್ಸಿಫಿಕೇಷನ್ ಸಬ್ಜೆಕ್ಟ್ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆ. ಇನ್ನು ಏನೂ ತೀರ್ಮಾನ ತೆಗೆದುಕೊಂಡಿಲ್ಲ.

Cycle and Other Vehicle Tax

242. Sri T. R. SHAMANNA (Fort.)—

Will the Minister of State for Municipal Administration be pleased to state :—

(*a*) the revenue earned by the City Corporation out of the cycle and other vehicle tax for the past 3 years *i.e.*, 1965-66, 1966-67 and 1967-68 ;

(*b*) the expenditure for collection and enforcement of the above tax for the above three years *viz.*, for

(i) Establishment Charges.
(ii) Badges ;
(iii) Indirect Expenses like lorry, police accounts etc. for the collection and enforcement of above tax ?

Sri B. M. PATIL (Minister of State for Municipal Administration).—

	1965-66	*1966-67*	*1967-68*
(*a*) Cycle Tax	21,596	1,29,045	1,40,710
Tax on other Vehicles	31,887	29,855	30,059
(*b*) Establishment	52,754	57,716	66,500
Badges	9,887	5,504	7,315
Lorry	2,500 p.a.	Approximately.	

Police :—No separate account for Police staff is maintained as their services are requisitioned for various enforcement works including seizing of cycles, etc.

Sri T. R. SHAMANNA.—Sir, since the cycle tax has been abolished after I sent this question, I have no supplementaries. I thank the Government for having abolished this uneconomical and irritating tax.

Strike by the Students of Lingaraj and R.L. Science Colleges

596. Sri B. B. SAYANAK (Belgaum).—

Will the Minister for Education be pleased to state :—

(a) whether it is a fact that the students of Lingaraj College and R.L. Science College of Belgaum went on strike on 7th January 1969 ;

(b) whether it is a fact that the authorities of colleges are collecting Rs. 10 from each student for Golden Jubilee of the Colleges ;

(c) if so, the number of days the students went on strike ?

Sri N. M. KOTRABASAIAH SOGI (Deputy Minister for Education).–

(a) No.

(b) Yes. On voluntary basis.

(c) Does not arise.

Sri B. B. SAYANAK.—Has it not come to the notice of the Government that the grievances of the students of both these colleges had appeared in the local Papers in Belgaum ?

†Sri N. M. KOTRABASIAH SOGI.—It has not come to the notice of the Government. Even if it had appeared in the Papers, simply because it has appeared in the Papers, it cannot be taken as correct.

Mr. SPEAKER.—Now Question Hour is over.

QUESTIONS FOR ANSWERS ON THE DAY

(but not taken up)

Appointment of S.C. and S.T. Candidates in M.S.R.T.C.

32. Sri S. S. ARAKERI (Balloli).—

Will the Minister for Transport be pleased to state :—

(a) whether 18 per cent of the posts in Bijapur Division of M.S.R.T.C. have been filled in by appointing the persons belonging to Scheduled Caste and Scheduled Tribes ; if not, the reasons therefor ;

(b) the action Government propose to take for maintaining the 18 per cent of reservation ?

SrI MOHAMED ALI (Minister for Transport).—

(*a*) No. Due to non-availability of suitable candidates from Scheduled Caste/Scheduled Tribes, the prescribed percentage could not be achieved in the post.

(*b*) Prescribed percentage will be maintained if adequate number of qualified Scheduled Caste and Scheduled Tribe candidates apply in response to the advertisements of M.S.R.T C.

Irrigation Pumpsets

82. SrI M. K. BOMME GOWDA (K.R. Pet).—

Will the Minister for Agriculture be pleased to state :—

(*a*) the number of Irrigation pumpsets installed on Hemavathi River bank in K.R. Pet Taluk ;

(*b*) whether these pumpsets have been installed with the permission of Government ?

SrI B. RACHAIAH (Minister for Agriculture).—

(*a*) 22.

(*b*) Yes.

Revenue from Private Operators

87. SrI S. JAYAPRAKASHA SETTY (Brahmavar).—

Will the Minister for Transport be pleased to state :—

(*a*) the number of buses operated by the private operators in different parts of Mysore State ;

(*b*) the revenue realised by Government from these private buses under different heads ;

(*c*) the Capital invested by Government in M.S.R.T.C. ;

(*d*) the profits made by the M.S.R.T.C. annually (accounts to be furnished from the date of formation of the Corporation) ?

SrI MOHAMED ALI (Minister for Transport).—

(*a*) 2,005.

(*b*) Rs. 1,58,99,856-00.

(*c*) Rs. 11,53,28,126 (as on 31-3-1968).—

(d) Year		Net Profits (Rs. lakhs)
1961–62*	...	6.45
1962–63	...	30.70
1963–64	...	8.09
1964–65	...	18.77
1965–66	...	13.05
1966–67	...	15.19
1967–68**	...	40.50

*The Corporation was formed from 1–8–61 and the profit shown for 1961–62 is for the eight months of the financial year 1961–62.

**Audit Certificate for 1967–68 is awaited.

Note:—No Income-tax was paid during the year 1961–62 and 1962–63 as the liability was not indicated by the Income tax Department and the assessment for these years was provided from the accounts for the year 1963–64.

Roads Taken Over by P.W.D.

126. Sri H. B. JWALANAIAH (Hassan).—

Will the Minister for Public Works be pleased to state :—

the total length of road taken over by the Public Works Department in Hassan Taluk, during the year 1967–68 and the proposed roads yet to be taken over during the current year ?

Sri K. LAKKAPPA (Minister for Public Works).—

15 miles 4 furlongs. At present there is no proposal for taking over the roads to the Public Works Department.

Industrial Estates at Yadgiri

227. Sri K. R. NADGOUDA (Yadgiri).—

Will the Minister for Industries, Information and Publicity be pleased to state :—

(*a*) the number of new Industrial Estates planned to be started during 1966–67 and 1967-68 and how many of them have been started ;

(*b*) whether Government have any plan to start an Industrial Estate at Yadgiri, if so, at what stage is the proposal ?

Sri A. P. APPANNA (Deputy Minister for Industries).—

(*a*) The Industrial Estates at Bidar and Kadur were started in 1966-67 and at Sira in 1967-68.

(*b*) No. Does not arise.

1-00 P.M.

Message from the Governor

Announcement.

Mr. SPEAKER.—I have received a message from the Governor, which is as follows :—

> "I have received with great satisfaction the expression of your thanks for the speech with which I opened the First Session, 1969, of both the Houses of the Legislature."

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಇವತ್ತೇ ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

Mr. SPEAKER.—That matter will be taken up on Monday. One such motion is admitted and it will be debated on Monday.

Report of the Naronha Commission—Request for Distribution of Copies

Sri B. P. GANGADHAR (Tumkur).—Sir, regarding the Madhugiri incident, we are given to understand that a Report ....

Mr. SPEAKER.—According to my information, I think, the Government themselves are going to circulate the Report. Hon' Member may therefore wait for some time.

Sri B. P. GANGADHAR.—I request the Government through you, Sir, to see that the report is printed and copies circulated.

Mr. SPEAKER.—Government is thinking of circulating the report.

Sri B. RACHAIAH (Minister for Agriculture).—With regard to Naronha Commission Report, I wish to submit that the Chief Minister is otherwise engaged; he will come here and place the report on the Table of the House.

Sri B. P. GANGADHAR.—As regards the Narnoha Enquiry Report Sir, it was just now submitted that a copy of the report will be placed on the Table of the House. We are 200 and odd in number, and I am given to understand that Report runs to thousands of pages. So, it may not be possible for any one of us to go through it in detail. I request the Government, through you Sir, to arrange to print sufficient number of copies and every one of us, is given a copy to enable us to understand the truth. We have spent lakhs of rupees over the Commission.

Mr. SPEAKER.—Let us wait till the Hon. Chief Minister comes.

Notice of adjournment motion—Mahajan Commission Report.

Sri M. NAGAPPA (Raichur).—Sir, I have sent a notice under Rule 312..........

Mr. SPEAKER.—I have already informed the hon. Member when he was pleased to see me in my Chamber that I have disallowed it, and I request him to respect the decision of the Chair.

Sri M. NAGAPPA.—Sir, let me know the reasons as to why my notice has been disallowed.

Mr. SPEAKER.—I have already indicated the reasons to the hon. Member and I am not going to allow him to raise that point again here. The hon. Member should not create any embarrassment to the Chair.

Sri D. B. KALMANKAR (Aland).—I had given an adjournment motion regarding the statement made by the Prime Minister in Lok Sabha on 20th Febury 1969 with regard to the Mahajan Commission Report that it will be decided by discussion and that the report cannot solve the problem and that it will have to be done by taking all political parties into confidence. Thereby, the Prime Minister has come to an understanding that the Mahajan Commission Report will not be considered. My adjournment motion is..........

Mr. SPEAKER.—No such motion can be read without consent being given. Hon. Member has been informed that consent will not be given to raise the matter.

Sri D. B. KALMANKAR.—Sir, in your reply no rule has been quoted as to why it has been disallowed.

Mr. SPEAKER.—I request the hon. Member to come to my Chamber and I shall explain it to him.

Papers laid on the Table

Sri MOHAMED ALI (Minister for Transport and Tourism).—Sir, I beg to lay on the Table of the House :

"Notification No. HD 76 TMT 67 dated 8th January 1969 ;
Reduction of Tax payable under the Act in respect of stage carriages plying on the road specified in Column (1) of the notification. Under Sub-section (2) of Section 16 of the Mysore Motor Vehicles Taxation Act, 1957."

Sri B. RACHAIAH (Minister for Agriculture).—Sir, on behalf of the Minister for Revenue, I beg to lay on the Table of the House.

"Order No. RD 3 EST 69 dated 18th February 1969.

regarding remission of Stamp duties chargeable under the Act, in respect of Assets of Kolar Gold Mining Undertakings ;

issued under sub-section (2) of Section 9 of the Mysore Stamp Act, 1957."

Mr. SPEAKER.—Both the Notification and the order are laid on the Table.

MOTION TO CONSIDER—THE MYSORE PAY COMMISSION REPORT 1966-68—(*Debate contd.*)

Mr. SPEAKER.—I call upon hon. Member Sri Gopala Gowda to speak, and he may do so sitting because he is not keeping good health.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ತುಕೋಳ್ ಆಯೋಗದ ವರದಿಯನ್ನು ಕುರಿತು ಈ ಸಭೆ ಚರ್ಚೆ ಮಾಡಿದೆ ಮತ್ತು ಕೆಲವು ಮುಖ್ಯವಾದಂತಹ ಸಲಹೆಗಳನ್ನು ಕೂಡ ಮಾನ್ಯ ಸದಸ್ಯನೇಕರು ಮಾಡಿದ್ದಾರೆ. ಆ ಸಲಹೆಗಳನ್ನು ಕ್ರೋಡೀಕರಿಸಿ, ಕಾರ್ಯಗತ ಮಾಡುವ ಜವಾಬ್ದಾರಿ ಸರ್ಕಾರದ್ದಾಗಿದೆ. ಎರಡನೇ ಪ್ರಪಂಚದ ಮಹಾಯುದ್ಧದ ನಂತರ ವಸ್ತುಗಳ ಬೆಲೆ ಒಂದೇ ಸಮನೆ ಏರುತ್ತಾ ನಡೆದುದರಿಂದ, ಈ ತುಟ್ಟಿಭತ್ಯವನ್ನು ನೌಕರರಿಗೆ ಕೊಡುವಂತಹ ಪದ್ಧತಿ ನಮ್ಮ ದೇಶದಲ್ಲೂ ಕೂಡ ಬರಬೇಕಾಯಿತು. ಮುಖ್ಯವಾಗಿ ನಮ್ಮ ಸಿಬ್ಬಂದಿಯ ಆಡಳಿತ ವರ್ಗದ ರಚನೆ ನಮ್ಮ ದೇಶದ ಸ್ಥಿತಿಗತಿಗಳಿಗೆ ಅನುಕೂಲವಾಗಿದೆಯೋ ಇಲ್ಲವೇ ಎಂಬ ಒಂದು ಮೂಲಭೂತವಾದ ಪ್ರಶ್ನೆ ನಮ್ಮನ್ನು ಬಹಳ ದಿವಸದಿಂದ ಕಾಡುತ್ತಾ ಇದೆ. ಒಂದು ಸಲ ನಮ್ಮ ರಾಷ್ಟ್ರದ ಆಡಳಿತ ವರ್ಗವನ್ನು ಕುರಿತು ಡಾಕ್ಟರ್ ಹಾರ್ಡಿನ್ ಒಂದು ಮಾತನ್ನು ಹೇಳಿದರು—''ಬ್ರಿಟಿಷರು ಬಿಟ್ಟು ಹೋದಂತಹ ಆಡಳಿತದ ಗೋರಿಯ ಮೇಲೆ ಕುಳಿತು ನಾವು ಆಡಳಿತ ನಡೆಸುತ್ತಿದ್ದೇವೆ'' ಎಂದು. ನನಗೂ ಅದು ಬಹಳ ಸಲ ಸರಿಯೆಂದು ಕಾಣುತ್ತದೆ. ನಮ್ಮ ದೇಶದ ಜನ, ನಮ್ಮ ಬಡತನ, ನಮ್ಮ ಸಮಸ್ಯೆಗಳು, ನಮ್ಮ ಭಾಷೆಗಳು, ವಿಧಾನಗಳು ಇವೆಲ್ಲವೂ ಬ್ರಿಟನ್ನಿನ ರೀತಿ ನೀತಿಗಳಿಗಿಂತ ಬಹಳ ವ್ಯತ್ಯಾಸವಾಗಿದೆ. ತಮ್ಮ ಮುಂದೆ ಹೇಳುವುದಾದರೆ, ಮೆಕಾಲೆಯವರು ರಚನೆ ಮಾಡಿದಂತಹ ಒಂದು ವಿದ್ಯಾಭ್ಯಾಸದ ಪದ್ಧತಿ ಈ ದೇಶದ ಮೂಲ ನರನಾಡಿಗಳನ್ನು ಕತ್ತರಿಸಿ, 200 ವರ್ಷಗಳಿಂದ ನಮ್ಮ ಹೊಕ್ಕುಳ ಬಳ್ಳಿಯನ್ನು ಕತ್ತರಿಸಿ ಬಿಸುಟಿದೆ. ನಮ್ಮ ಬೃಹತ್ ರಾಷ್ಟ್ರದ ಇತಿಹಾಸದಲ್ಲಾಗಲಿ, ದೇಶದ ಹುಟ್ಟು ಬೆಳವಣಿಗೆಯಲ್ಲಾಗಲಿ, ಅದರ ಗಂಧಗಾಳಿಯು ಇಲ್ಲದಿರತಕ್ಕಂತಹ ಒಂದು ನವೀನ ಪದ್ಧತಿಯಾಗಿದೆ.

ಭಾರತದಲ್ಲೆಲ್ಲಾ ವ್ಯಾಪಾರ ಮಾಡುವಂತಹ ಮತ್ತು ಕಾರಕೂನರನ್ನು ಸೃಷ್ಟಿ ಮಾಡತಕ್ಕಂಥ ಮೆಕಾಲೆಯವರ ಪದ್ಧತಿಯನ್ನು, ಅಂಥಾ ಒಂದು ವಿದ್ಯಾಭ್ಯಾಸವನ್ನು ನಾವು ಅಂಗೀಕಾರ ಮಾಡಿದ್ದೇವೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಕಾಲೇಜು ಉಚ್ಚ ಶಿಕ್ಷಣದವರೆಗೂ ಭಾರತೀಯತೆ, ರಾಷ್ಟ್ರೀಯತೆ ಇಲ್ಲದೆ ಇರತಕ್ಕಂಥ ಒಂದು ರೀತಿಯ ವಿದ್ಯಾಭ್ಯಾಸ ಪದ್ಧತಿಯನ್ನು ನಾವು ಕಳೆದ 200 ವರ್ಷಗಳಿಂದ ನಡೆಸಿಕೊಂಡು ಬಂದಿರುವುದರಿಂದ ಈಪೊತ್ತು ನಮ್ಮ ಆಡಳಿತ ವ್ಯವಸ್ಥೆ ಕೂಡ ನಮ್ಮ ಅಗತ್ಯತೆಗಳನ್ನು ಪೂರೈಸಲಾರದೆ ಹೋಗಿದೆಯೋ ಏನೋ ಎಂದು ಅನಿಸುತ್ತದೆ. ನಮ್ಮ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದೆಯೋ ಏನೋ, ಆಡಳಿತ ವ್ಯವಸ್ಥೆ ಇಲ್ಲವೋ ಏನೋ ಎನ್ನುವ ಭಾವನೆ ಗ್ರಾಮದ ಮಟ್ಟದಲ್ಲಿ ಬರುತ್ತಿದೆ, ಜಿಲ್ಲಾ ಮಟ್ಟದಲ್ಲಿ ಬರುತ್ತಿದೆ, ಆಡಳಿತ ಕಛೇರಿಯ ಮಟ್ಟದಲ್ಲಿ ಬರುತ್ತಿದೆ, ದೆಹಲಿಯ ಮಟ್ಟದಲ್ಲಿ ಬರುತ್ತಿದೆ. ಅದಕ್ಕೆ ಸಕಾಲಿಕವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ತಮಗೆಲ್ಲಾ ಗೊತ್ತಿರಬಹುದು, ಹಿಂದೆ ಬ್ರಿಟೀಷರು ನಮ್ಮನ್ನು ತುಳಿದು ಆಳುವಂತಹ ಐ. ಸಿ. ಎಸ್. ಆಫೀಸರುಗಳಾದ ಅಸಿಸ್ಟೆಂಟ್ ಕಮೀಷನರು, ಡೆಪ್ಯುಟಿ ಕಮೀಷನರುಗಳನ್ನು ನೇಮಕಮಾಡಿದ್ದಾರೆ. ಅವರಿಗೆ ಒಂದು ಗೊತ್ತಾದ ಭೋಗದ ಕೆಲವು ಸವಲತ್ತುಗಳನ್ನು ಕೊಟ್ಟು, ಕೆಲವು ಅಧಿಕಾರಗಳನ್ನು ಕೊಟ್ಟು ಅವರ ಕೈಕಳಗೆ ಕೆಲಸ ಮಾಡಲು ಕಾರಕೂನರನ್ನು ಕೊಡಲ್ಪಟ್ಟಿತ್ತು. ಬ್ರಿಟೀಷರು ನಮ್ಮ ದೇಶದಿಂದ ನಿರ್ಗಮಿಸಿದ ನಂತರ ನಮ್ಮ ರಾಷ್ಟ್ರದ ಜೀವನಾಡಿಯ ಸ್ವರೂಪಕ್ಕೆ ಹೊಂದಿಕೊಳ್ಳುವಂತಹ ಒಂದು ಆಡಳಿತ ವ್ಯವಸ್ಥೆಯನ್ನು ಮಾಡುವುದರಲ್ಲಿ ನಮ್ಮ ಆಡಳಿತಗಾರರು ವಿಫಲರಾಗಿದ್ದಾರೆ. ಐ.ಸಿ.ಎಸ್. ಪರೀಕ್ಷೆಯನ್ನು ತಗೆದು ಐ. ಎ. ಎಸ್. ಎಂದು ಮಾಡಿದರು, ಎಂ. ಎ. ಎಸ್. ಎಂದು ಮಾಡಿದರು. ಅದರ ಜೊತೆಗೆ ಬೇರೆ ಬೇರೆ ಹುದ್ದೆಗಳನ್ನು ರಚನೆ ಮಾಡಿದರು. ಈಗ ಇರತಕ್ಕ ಆಡಳಿತ ವ್ಯವಸ್ಥೆ, ಇದರ ಫಾರಂ, ಇದರ ಚೌಕಟ್ಟು, ಇದರ ತಿರುಳು, ಇದರ ಕಂಟೆಂಟ್ಸ್ ಏನಿದೆ ಇದರಿಂದ ಸ್ವಾತಂತ್ರ್ಯ ಭಾರತದ ಜನತೆಯ ಅಗತ್ಯತೆಗಳನ್ನು ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಆ ಅಗತ್ಯತೆಗಳನ್ನು ಪೂರೈಸುವುದಕ್ಕೆ

ಸಾಧ್ಯವಾಗುವಂತಹ, ಯೋಗ್ಯ ರೀತಿಯ ಬದಲಾವಣೆಗಳು ಆಗಿಲ್ಲ; ಈ ಒಂದು ಕಾರಣದಿಂದ ಇವೊತ್ತು ರಾಷ್ಟ್ರದಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದು ಕಷ್ಟವಾಗಿದೆ. ನೌಕರರ ತುಟ್ಟಿಭತ್ಯ, ಹೆಚ್ಚು ಸಂಬಳ ಇತ್ಯಾದಿ ಬೇಡಿಕೆಗಳು ಸರ್ಕಾರದ ಮುಂದೆ ಇವೆ. ಬ್ರಿಟೀಷರು ಬಿಟ್ಟು ಹೋದಂತಹ ಆಡಳಿತ ಗೋರಿಯ ಮೇಲೆ ಕುಳಿತು ನಾವು ರಾಜ್ಯಭಾರವನ್ನು ನಡೆಸುತ್ತಿದ್ದೇವೆ ಎಂದು ಶ್ರೀ ಹಾರ್ಡಿನ್ ಅವರು ಹೇಳಿದ್ದಾರೆ. ಈ ಮಾತು ಸತ್ಯ ಎಂದು ನನಗೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ನಾನು ಒಂದು ಮಾತು ಹೇಳುತ್ತೇನೆ. ಅಪ್ರಕೃತವಾದರೂ ನಾನು ಈ ಮಾತನ್ನು ಹೇಳುತ್ತೇನೆ. ಕಳೆದ ನವಂಬರ್ ತಿಂಗಳನಲ್ಲಿ ಕೇಂದ್ರ ಸರ್ಕಾರದ ನೌಕರರು ಒಂದು ಚಳುವಳಿಯನ್ನು ಮಾಡಿದರು. ಒಂದು ದಿವಸ ಸಾಂಕೇತಿಕ ಮುಷ್ಕರವನ್ನು ಮಾಡಿದರು. ಅದನ್ನು ದಮನ ಮಾಡಬೇಕೆಂದು ಸರ್ಕಾರ ತನ್ನ ಸರ್ವ ಶಕ್ತಿಯನ್ನೂ ಬಳಸಿತು. ಶ್ರೀ ನಂಬೂದ್ರಿಪಾದ್ ಅವರು ಕೇಂದ್ರ ಸರ್ಕಾರದ ಆದೇಶವನ್ನು ಪರಿಪಾಲನೆ ಮಾಡುತ್ತಿಲ್ಲ ಎಂದು ಶ್ರೀ ಗೋವಿಂದ ಮೆನನ್ ಅವರು ನಂಬೂದ್ರಿಪಾದ್ ಅವರ ಸರ್ಕಾರವನ್ನು ಕಿತ್ತು ಹಾಕುವಷ್ಟು ದೂರ ಹೋದರು. ಆದರೆ ಅದು ಸಾಧ್ಯವಾಗಲಿಲ್ಲ. ಅದು ಅಲ್ಲಿಗೇ ನಿಂತು ಹೋಯಿತು. ಕೇಂದ್ರದ ನೌಕರರ ಸಂಘದ ಮುಖಂಡರುಗಳೆಲ್ಲಾ ನೂರಾರು ಸಂಖ್ಯೆಯಲ್ಲಿ ಹೋಗಿ ಗೃಹ ಸಚಿವರನ್ನು ಕಂಡು ಮನವಿ ಮಾಡಿಕೊಂಡ ಮೇಲೆ ಆ ಸಾಂಕೇತಿಕ ಮುಷ್ಕರದಲ್ಲಿ ಭಾಗವಹಿಸಿದಂತಹ ಯಾವ ನೌಕರರನ್ನೂ ನಾವು ವಿಕ್ಟಿಮೈಸ್ ಮಾಡುವುದಿಲ್ಲ, ಅವರಿಗೆ ತೊಂದರೆಯನ್ನು ಕೊಡುವುದಿಲ್ಲ, ಅವರ ಮೇಲೆ ಹಾಕಿರತಕ್ಕ ಕೇಸುಗಳನ್ನು, ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಇತ್ಯಾದಿ ಭರವಸೆಗಳನ್ನು ಅವರು ಕೊಟ್ಟರು. ಜೊತೆಗೆ ಗುಪ್ತವಾಗಿ ಒಂದು ಪರಿಪತ್ರವನ್ನು ಹೊರಡಿಸಿದ್ದಾರೆ, ಅಧಿಕಾರಿಗಳನ್ನು ವಾಪಸ್ ತೆಗೆದುಕೊಳ್ಳಬೇಕಾದ್ದು ಇಲ್ಲ ಎಂಬುದಾಗಿ. ಇದನ್ನು ನಾನು ಮೋಸ ಎಂದು ಕರೆಯುತ್ತೇನೆ. ಒಂದು ಮನೆ ಚೆನ್ನಾಗಿ ನಡೆದುಕೊಂಡು ಹೋಗಬೇಕಾದರೆ ಯಜಮಾನನಿಗೂ ಕೆಲಸ ಮಾಡುವಂತಹ ಆಳಿಗೂ ಆತ್ಮೀಯವಾದಂಥ ಮಧುರವಾದಂಥ ಬಾಂಧವ್ಯ ಇರಬೇಕು. ಇದು ಜಗತ್ತೇ ಒಪ್ಪುವಂಥ ಒಂದು ನಿಯಮವಾಗಿದೆ. ಭಾರತದಂಥ ಬೃಹತ್ ರಾಷ್ಟ್ರದಲ್ಲಿ ಕೋಟ್ಯಾಂತರ ಜನರನ್ನು ಕೆಲಸಕ್ಕೆ ಇಟ್ಟುಕೊಂಡಿರುವ ಸರ್ಕಾರ ತನ್ನ ಆಡಳಿತ ಸುಗಮವಾಗಿ ನಡೆದುಕೊಂಡು ಹೋಗಬೇಕಾಗಿದ್ದರೆ ಅವರ ನ್ಯಾಯವಾದ ಬೇಡಿಕೆಗಳನ್ನು ಸಕಾಲದಲ್ಲಿ ಈಡೇರಿಸಬೇಕು. ಅವರನ್ನು ತೃಪ್ತರನ್ನಾಗಿ ಇಟ್ಟುಕೊಳ್ಳಬೇಕು. ಅವರನ್ನು ನಂಬಿಕಸ್ಥರನ್ನಾಗಿ, ಒಳ್ಳೆಯ ನಡೆ ಮತ್ತು ನುಡಿ ಉಳ್ಳವರಾಗಿರುವಂತೆ ನೋಡಿಕೊಳ್ಳಬೇಕು. ಇಡೀ ರಾಷ್ಟ್ರದ ಭಾರವನ್ನು ಹೊರುವ ಶಕ್ತಿ ಅವರಲ್ಲಿ ಬರಬೇಕು. ಈ ಭಾವನೆಗಳನ್ನು ಸರ್ಕಾರದವರು ತನ್ನ ನೌಕರರಲ್ಲಿ ಇಟ್ಟುಕೊಳ್ಳದೆ ಕೇವಲ ರಾಜಕೀಯ ಕಾರಣವನ್ನು ಇಟ್ಟುಕೊಂಡು ಶ್ರೀ ಜ್ಯೋತಿಷಿಯವರು ನೌಕರರ ಮುಖಂಡತ್ವ ವಹಿಸುತ್ತಾರೆ, ಅವರನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುತ್ತಾರೆಂಬ ಒಂದೇ ಕಾರಣಕ್ಕಾಗಿ ತನ್ನ ನೌಕರರನ್ನು ಸದೆಬಡಿಯುವುದಾದರೆ, ಅವರನ್ನು ಅತೃಪ್ತರನ್ನಾಗಿ ಇಡುವುದಾದರೆ ಅದು ರಾಷ್ಟ್ರದ ಅವನತಿಗೆ ಮತ್ತೊಂದು ಕಾರಣವಾಗುತ್ತದೆ. ನಾನು ರಾಜ್ಯ ಸರ್ಕಾರದವರಲ್ಲಿ ಕೇಳಿಕೊಳ್ಳುವುದು ಇಷ್ಟೆ, ನಾನು ಒಮ್ಮೆ ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ನೌಕರರ ಪರವಾಗಿ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಕಾಗದ ಬರೆಯುವುದಕ್ಕೆ ಆಗದೆ ಒಂದು ತಂತಿಯನ್ನು ಕಳಿಸಿದ್ದೆ. ಅವಕ್ಕೆ ಉತ್ತರವಾಗಿ ನನಗೆ ಗೃಹಖಾತೆಯಿಂದ ಒಂದು ಪತ್ರ ಬಂತು. ಅವರಲ್ಲಿ ನನ್ನ ಪತ್ರಕ್ಕೆ ಮಾನ್ಯತೆ ಕೊಡುವುದಕ್ಕಾಗುವುದಿಲ್ಲ, ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಇದನ್ನು ಕೇಂದ್ರ ಸರ್ಕಾರದವರು ತೀರ್ಮಾನ ಮಾಡಬೇಕೆಂದು ಹೇಳಿತ್ತು. ಅದಕ್ಕೆ ನಾನು ಸುಮ್ಮನಾದೆ. ಮುಂದೆ ಕೇಂದ್ರ ಸರ್ಕಾರದವರು ತನ್ನ ಸಹಸ್ರಾರು ನೌಕರರಿಗೆ ಅನುಕೂಲ ಕಲ್ಪಿಸಿಕೊಡುತ್ತೇವೆ, ಅವರ ಸರ್ವಿಸಸ್ ಮುಂದುವರಿಯುವುದಕ್ಕೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆ, ಅವರ ಮೇಲೇರುವ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಇತ್ಯಾದಿ ಇತ್ಯಾದಿ ಭರವಸೆಗಳನ್ನು ಕೊಟ್ಟರು. ಇದು ಆಕಾಶವಾಣಿಯಲ್ಲಿ ಪ್ರಸಾರವಾಯಿತು, ಪತ್ರಿಕೆಗಳಲ್ಲಿ ಪ್ರಕಟವಾಯಿತು. ಈ ರೀತಿ ತೀರ್ಮಾನ ತೆಗೆದುಕೊಂಡು ಅದೇ ಉಸಿರಿನಲ್ಲಿ ರಾಜ್ಯ ಸರ್ಕಾರಗಳಿಗೆ ನೌಕರರ ಮೇಲಿರುವ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಬೇಡಿ ಎಂದು ತಿಳಿಸಿದ್ದಾರೆ. ಇದು ಮೋಸ, ವಂಚನೆಯಾಗುತ್ತದೆ. ಈ ರೀತಿ ಕೇಂದ್ರ ಸರ್ಕಾರದವರು ಆಗಲಿ ರಾಜ್ಯ ಸರ್ಕಾರದವರು ಆಗಲಿ ಮಾಡಬಾರದು. ಈ ವಿಚಾರವನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಆಯೋಗದ ವರದಿಯ ಬಗ್ಗೆ ಅನೇಕ ಮಾನ್ಯ ಸ್ನೇಹಿತರುಗಳು ಮಾತನಾಡಿದ್ದಾರೆ. ಕಳೆದ 20 ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೇಲಿಂದ ಮೇಲೆ ಆಯೋಗಗಳನ್ನು ರಚನೆ ಮಾಡುತ್ತಿದ್ದಾರೆ. ಆ ಆಯೋಗಗಳ ವರದಿಗಳು ಸರ್ಕಾರಕ್ಕೆ ಅನುಕೂಲವಾಗಿಲ್ಲದ ಪಕ್ಷದಲ್ಲಿ ಆ ವರದಿಗಳನ್ನು ಶೀತಾಗಾರದಲ್ಲಿ ಕೊಳೆಯುವುದಕ್ಕೆ ಹಾಕುತ್ತಾರೆ. ಅನುಕೂಲವಾಗುವ

(ಶ್ರೀ ಎಸ್. ಗೋಪಾಲಗೌಡ)

ವರದಿಗಳನ್ನು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಸರ್ಕಾರಗಳು ಮುಂದೆ ಬರುತ್ತವೆ. ಈ ಆಯೋಗ ರಚನೆಯಾಗುವುದಕ್ಕೆ ಮೊದಲು ಅನೇಕ ಆಯೋಗಗಳು ಆಗಿಹೋಗಿವೆ. ಮ್ಯಾಸ್ಕರ್‌ನ್ಹಾಸ್ ಆಯೋಗ ರಚನೆಯಾಗಿತ್ತು. ಬರೀ ಅಧಿಕಾರಿಗಳಿಂದ ಕೂಡಿದ ಆಯೋಗ ರಚನೆಯಾಗಿತ್ತು. ಇದೇ ರೀತಿ ಕೇಂದ್ರ ಸರ್ಕಾರದವರು ಸಹ ಆಯೋಗಗಳನ್ನು ರಚನೆ ಮಾಡಿದ್ದಾರೆ. ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶರಾದಂಥ ಶ್ರೀ ಗಜೇಂದ್ರಗಡ್ಕರ್ ಆಯೋಗವನ್ನು ಕೇಂದ್ರ ಸರ್ಕಾರದವರು ನೇಮಕ ಮಾಡಿದ್ದರು. ಆ ಆಯೋಗದವರು ತಮ್ಮ ವರದಿಯನ್ನು ಸಹ ಕೊಟ್ಟರು. ಆ ವರದಿಯ ಪ್ರಕಾರ ಕೇಂದ್ರ ಸರ್ಕಾರದವರು ತನ್ನ ನೌಕರರ ವೇತನಗಳನ್ನು, ತುಟ್ಟಿಭತ್ಯಗಳನ್ನು ಕಾಲ ಕಾಲಕ್ಕೆ ಪರಿಷ್ಕರಣ ಮಾಡುತ್ತಾ ಬಂದಿದ್ದಾರೆ. ಈ ವಿಚಾರವನ್ನು ನಮ್ಮ ವಿತ್ತಮಂತ್ರಿಗಳು ಅನೇಕ ಸಲ ಇಲ್ಲಿ ಹೇಳಿದ್ದಾರೆ ಮತ್ತು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರನ್ನು ಕೇಳದೆ ತುಟ್ಟಿಭತ್ಯವನ್ನು ಅಥವಾ ವೇತನಗಳನ್ನು ನೀವೆ ನೀವು ಪರಿಷ್ಕರಣ ಮಾಡಿಕೊಂಡರೆ ರಾಜ್ಯಸರ್ಕಾರ ಗೊಂದಲಕ್ಕೆ, ತೊಂದರೆಗೆ ಕಷ್ಟಕ್ಕೆ ಗುರಿಯಾಗುತ್ತದೆಂದು, ಆ ರೀತಿ ಮಾಡಬಾರದೆಂದು ಅನೇಕ ಸಲ ಮನವಿ ಮಾಡಿಕೊಂಡಿದ್ದಾರೆ. ಅದು ನಮಗೆ ಗೊತ್ತಿದೆ. ನಾನು ಹೇಳುವುದು ಇಷ್ಟು. ಕೇಂದ್ರ ಸರಕಾರದವರು ಒತ್ತಡಗಳಿಗೆ ಮಣಿದು ಅವರು ತಮ್ಮ ನೌಕರರುಗಳಿಗೆ ವಿಶೇಷವಾದ ಸೌಲಭ ಗಳನ್ನು ಸಂಬಳ ಸಾರಿಗೆಗಳನ್ನು ತುಟ್ಟಿ ಭತ್ಯಗಳನ್ನು ಹೆಚ್ಚಿಸುವುದರಲ್ಲಿ ಔಚಿತ್ಯವಿದ್ದರೂ ಕೂಡ ರಾಷ್ಟ್ರ ವ್ಯಾಪಿಯಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಈ ಗೊಂದಲ ಹಾಗೂ ಈ ಹೋರಾಟ ತಪ್ಪುವುದಿಲ್ಲ. ಕೇಂದ್ರ ಸರಕಾರದವರು ಸಂಬಳಗಳನ್ನು ಹೆಚ್ಚಿಸಿದಾಗ ರಾಜ್ಯ ಬಹಳ ಕಡಿಮೆ ಸಂಬಳ ಪಡೆಯುತಕ್ಕ ನಾಲ್ಕು ಹಾಗೂ ಮೂರನೇ ದರ್ಜೆಯ ನೌಕರರುಗಳ ಹೊಟ್ಟೆಯಲ್ಲಿ ಬೆಂಕಿ ಎದ್ದು ಅತೃಪ್ತಿಯುಂಟಾಗುವುದು ಸಹಜ. ಇದನ್ನು ಇಂದು ದೇಶದ ಎಲ್ಲಾ ಕಡೆಗಳಲ್ಲೂ ನಾವು ನೋಡಬಹುದು ಎಂದು ಇಂದು ನಮ್ಮ ತುಕೋಳ್ ಕಮಿಷನ್‌ನವರೂ ಹೇಳುತ್ತಾ, ಅವರು ಒಂದು ಕಡೆಯಲ್ಲಿ ಪಟೇಲರಿಗೆ ಅವರ ಸಹಾಯಕ್ಕಾಗಿ ಒಬ್ಬ ಅಧಿಕಾರಿ ಕೊಟ್ಟು ಅವರಿಗೆ 12 ರೂಪಾಯಿಗಳಷ್ಟು ಸಂಬಳ ಕೊಟ್ಟರೆ ಸಾಕು ಎಂದೂ ಹೇಳಿದ್ದಾರೆ. ಇದು ಹೇಗಿದೆ ಎಂದರೆ ಕೊಡುವುದು ಒಂದು ಕಾಸು ಅದನ್ನು ಮನೆ ತುಂಬಾ ಹಾಸು ಎನ್ನುವಂತಾಗಿದೆ. ಈ ಹವ್ಯಾಸಕ್ಕೆ ಸರಕಾರ ಬಲಿ ಬೀಳಬಾರದು. ಖಾಸಗಿ ಮಾಲೀಕರಿಗೆ ಹೋಲಿಸಿದರೆ ಸರಕಾರ ಒಂದು ದೊಡ್ಡ ಮಾಲೀಕ ಮಾದರಿ ಮಾಲೀಕನೂ ಹೌದು. ಮಾಲೀಕನಾಗಿ ಸರಕಾರದ ಜವಾಬುದಾರಿಗಳೂ ಇರುವುದರಿಂದ ತನ್ನ ಸಿಬ್ಬಂದಿಯನ್ನು ಬಹಳ ಚೆನ್ನಾಗಿ ಇಟ್ಟುಕೊಳ್ಳುವುದೂ ಅವಶ್ಯಕ. ಆದರೂ ಎಷ್ಟೋ ಜನ ನೌಕರರುಗಳಲ್ಲಿ ಅತೃಪ್ತಿ ಅಸಮಾಧಾನ ಉಂಟಾಗಿ ಎಷ್ಟು ಜನ ವಿಷ ತೆಗೆದುಕೊಂಡು ಪ್ರಾಣ ಬಿಟ್ಟಿದ್ದಾರೆ. ಎಷ್ಟು ಜನ ನೇಣು ಹಾಕಿಕೊಂಡು ಪ್ರಾಣ ಕಳೆದುಕೊಂಡಿದ್ದಾರೆ ಮತ್ತು, ತಮ್ಮ ಹಕ್ಕುಗಳನ್ನು ಸ್ಥಿರಪಡಿಸಿಕೊಳ್ಳಲು ಸಹಸ್ರಾರು ಸಂಖ್ಯೆಯಲ್ಲಿ ಸುಪ್ರೀಂ ಕೋರ್ಟುವರೆಗೆ ರಿಟ್‌ಗಳನ್ನು ಹಾಕಿಕೊಂಡು ಕಾದು ಕುಳಿತಿದ್ದಾರೆ ಎನ್ನುವುದನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ರಾಜ್ಯ ಪುನರ್ವಿಂಗಡಣೆಯಾಗಿ ಇಂದು ಕರ್ಣಾಟಕವಾಯಿತು, ಇಲ್ಲಿಗೆ ಮುಂಬಯಿ ಹಾಗೂ ಹೈದರಾಬಾದು ಕಡೆಯಿಂದ ಬಂದ ನೌಕರರುಗಳಿಗೆ ಸ್ವಲ್ಪಮಟ್ಟಿನ ಸಂಬಳಗಳು ಹೆಚ್ಚಾಗಿದ್ದವು. ಹೀಗೆ ಹೆಚ್ಚಾಗಿರುವ ಸಂಬಳಗಳನ್ನು ಸಮನ್ವಯಗೊಳಿಸುವುದಕ್ಕಾಗಿ ಆಡಳಿತದಲ್ಲಿ ಏಕರೂಪತೆಯನ್ನು ತರಲು ಸರಕಾರಕ್ಕೆ 1956 ನೇ ಇಸವಿಯಿಂದಲೂ ಇಲ್ಲಿಯವರೆಗೆ ಸಾಧ್ಯವಾಗಲಿಲ್ಲ ಎಂದರೆ ಇದೆಂತಹ ಪರಿಹಾಸ್ಯದ ಕಾರ್ಯ ಎಂದು ಹೇಳಬೇಕಾಗಿದೆ. ಈ ಕಾರ್ಯವನ್ನು ನಿಧಾನ ಮಾಡುತ್ತಾ ಹೋದರೆ ಪ್ರತಿಯೊಬ್ಬ ನೌಕರರಲ್ಲಿಯೂ ಒಂದು ರೀತಿಯಾದ ಅತೃಪ್ತಿಗೆ ಕಾರಣ ವಾಗುತ್ತದೆ. ಅಧಿಕಾರದಲ್ಲಿರುವವರು ಎಷ್ಟು ಕಾಲಹರಣ ಮಾಡುತ್ತಿದ್ದಾರೆ ಎನ್ನುವುದು ಇದರಿಂದ ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಇದಲ್ಲದೆ ಎಷ್ಟೋ ನೌಕರರು ಇಂದು ಪೆನ್‌ಷನರುಗ ಳಾಗಿದ್ದಾರೆ, ಎಷ್ಟೋ ಜನ ಮೃತರಾಗಿರುತ್ತಾರೆ. ಇವರ ಸಂಸಾರಗಳಿಗೆ ಇದರಿಂದ ತೊಂದರೆ ಯಾಗುತ್ತಿದೆ. ಸರಕಾರ ಅನುಸರಿಸತಕ್ಕ ಇಂತಹ ದಿನ ನಿತ್ಯದ ಕೆಲಸಗಳಲ್ಲಿ ನಿಧಾನವಾದರೆ ಇದರಿಂದ ಸರಕಾರಕ್ಕೆ ಗೌರವ ಬರುತ್ತದೆಯೇ ? ನನಗೂ ಗೊತ್ತಿದೆ. ನಿಮಗೆ ಹಣಕಾಸಿನ ತೊಂದರೆಗಳಿವೆ. ಇದಕ್ಕಾಗಿ ಹೆಚ್ಚು ಸಂಬಳ ಕೊಡುವುದಕ್ಕೆ ಆಗುವುದಿಲ್ಲ. ಇನ್ನು ಹೆಚ್ಚಿನ ತೆರಿಗೆಗಳನ್ನು ಹೊರುವ ಶಕ್ತಿ ನಮ್ಮ ಜನ ಸಾಮಾನ್ಯರಲ್ಲಿ ಇಲ್ಲ. ಕೈಗಾರಿಕಾ ಕ್ಷೇತ್ರಗಳಲ್ಲಿ ಸುಮಾರು ಇಪ್ಪತ್ತು ವರ್ಷಗಳಾದರೂ ನಾವು ನಿರೀಕ್ಷಿಸಿದಷ್ಟು ಫಲ ಬರುತ್ತಿಲ್ಲ. ಇದರಿಂದಾಗಿ ನಮ್ಮ ರಾಜ್ಯದ ಬೊಕ್ಕಸ ತುಂಬದೇ ಇರುವುದರಿಂದ ಇದೊಂದು ನಿರಂತರವಾದ ಸಮಸ್ಯೆಯಾಗಿದೆ. ರಾಜ್ಯದಲ್ಲಿ ಸಂಪತ್ತನ್ನು ಹೆಚ್ಚಿಸುವುದು ಬಹಳ ಕಷ್ಟವಾಗಿದೆ. ಜನರ ಜೀವನವೇ ಇಂದು ಬಹಳ ಕಷ್ಟವಾಗಿದೆ. ಜನ ಸಾಮಾನ್ಯರಿಗೆ ಅವರ ಸಂಸಾರ ನಿರ್ವಹಿಸುವುದೇ ಕಷ್ಟವಾಗಿರುವುದರಿಂದ ಇದಕ್ಕಾಗಿ ಒಂದು ಹೋರಾಟ ಮಾಡುತ್ತಾ ಹೋಗುತ್ತಿದ್ದಾರೆ.

60 ಕೋಟಿ ರೂಪಾಯಿ ವರಮಾನದಲ್ಲಿ 50 ಕೋಟಿ ರೂಪಾಯಿಯನ್ನು ಸಂಬಳಕ್ಕೆ ತೆಗೆದರೆ ಉಳಿದುದನ್ನು ಬಾವಿ ತೆಗೆಸುವುದಕ್ಕಾಗಲಿ ಬೇರೆ ನೀರಾವರಿ ಕೆಲಸಕ್ಕಾಗಲೀ ಎಲ್ಲಿ ಹಣ ಇರುತ್ತದೆ ? ಇದಕ್ಕೆ ಒಂದು ಗಾದೆ ಇದೆ, ಅದು ಏನೆಂದರೆ ಅಜ್ಜ ದುಡಿದುದು ಮಗನ ಉಡಿದಾರಕ್ಕೆ ಆಯಿತು ಎಂದು ಹೇಳಬೇಕಾಗುತ್ತದೆ. 3 ಆಣೆ ದುಡಿಮೆ ಮಾಡಿ ಜೀವನ ಮಾಡುವವರಿಗೆ 350 ರೂಪಾಯಿ ಕೊಟ್ಟರೂ ಸಂಬಳ ಪುನಃ ಕೇಳುತ್ತಾರೆ ಎಂದರೆ ಅವನಿಗೆ ಸಿಟ್ಟು ಬರುವುದು ಸಹಜ. ಇದಕ್ಕೆ ನಮ್ಮ ಕಾಂಗ್ರೆಸ್ಸಿನವರ ಬೆಂಬಲ ಇದೆ, ಅವರು ಎತ್ತಿ ಕಟ್ಟುತ್ತಾರೆ. ಹಳ್ಳಿಯಲ್ಲಿ ಹೋಗಿ ಹಳ್ಳಿಯವರನ್ನು ಎತ್ತಿ ಕಟ್ಟುತ್ತಾರೆ, ಪೇಟೆಯಲ್ಲಿ ಹೋಗಿ ನೌಕರರನ್ನು ಎತ್ತಿ ಕಟ್ಟುತ್ತಾರೆ ಎಂದು ಹೇಳುತ್ತಾರೆ. ಹಳ್ಳಿಗಳಿಗೆ ಹೋಗಿ ಲೆವಿ ಕೊಡಬೇಡಿ ಎಂದರೆ, ಪಟ್ಟಣಗಳಿಗೆ ಹೋಗಿ ಸರಿಯಾದ ಪಡಿತರ ವ್ಯವಸ್ಥೆ ಮಾಡಿ ಎಂದು ಹೇಳಿದರೆ, ಒಂದಕ್ಕೊಂದಕ್ಕೆ ಸಂಬಂಧ ಇದೆ ಎನ್ನುವುದನ್ನು ಮರೆಯಬಾರದು. ಲೆವಿ ಯಾರಿಂದ ವಸೂಲ್ಮಾಡಬೇಕು, ಯಾವ ರೀತಿ ಪಡಿತರ ವ್ಯವಸ್ಥೆ ಮಾಡಬೇಕು ಎನ್ನುವುದನ್ನು ಈವೊತ್ತು ನಾನು ಸರ್ಕಾರದವರನ್ನು ಕೇಳುತ್ತೇನೆ. ಬೆಂಗಳೂರಿನಲ್ಲಿ ಪಡಿತರ ವ್ಯವಸ್ಥೆ ಎಷ್ಟುಮಟ್ಟಿಗೆ ಚೆನ್ನಾಗಿದೆ ಎಂದು ಎಲ್ಲರಿಗೂ ಗೊತ್ತು. ಈವೊತ್ತು ಅಂಗಡಿಗೆ ಹೋದರೆ ಒಂದು ಕೆ.ಜಿ. ಅಕ್ಕಿ 2-20 ಪೈಸೇಗೆ ಸಿಕ್ಕುತ್ತದೆ. ತಾವು ಕೊಡುವ ಅಕ್ಕಿ ದನ ತಿನ್ನದೇ ಇರುವ ಅಕ್ಕಿ 90 ಪೈಸೇ. ಅದೂ ವಾರಕ್ಕೆ 7 ದಿವಸ ಕೂಡ ಇರುವುದಿಲ್ಲ. ಇಂತಹ ಪಡಿತರ ವ್ಯವಸ್ಥೆ ಮಾಡಿ ವಿಧಾನಸೌಧದಲ್ಲಿ ಒಂದು ಕೆ. ಜಿ. ಅಕ್ಕಿಯನ್ನು ಕೊಟ್ಟುಬಿಟ್ಟರೆ ಸಾಕೇ ? ಎಲ್ಲೆಲ್ಲಿ ಪಡಿತರ ವ್ಯವಸ್ಥೆ ಇದೆ ? ರೈತನ ಮನೆಗೆ ನುಗ್ಗಿ ಪೋಲೀಸರ ಬೆಂಬಲ ಪಡೆದು ಅವನು ಬೆಳೆವ ಕಾಳು ಕಡ್ಡಿಗಳನ್ನು ವಸೂಲ್ಮಾಡುವುದಕ್ಕೆ ಸರ್ಕಾರಕ್ಕೆ ಪರಿವೆ ಬೇಡವೇ ? ಅದನ್ನು ಯಾರಿಗೆ ಹಂಚಬೇಕು ಎನ್ನುವ ಪರಿವೆ ಬೇಡವೆ ? ಅವನು ರಾಗಿ ಮುಂತಾದ ಬೆಳೆಗಳನ್ನು ಬೆಳೆದುದನ್ನು ಕಿತ್ತುಕೊಂಡು ಹೋಗುತ್ತಿದ್ದೀರಿ. ರೈತನು ಬೆಳೆ ಬೆಳೆಯುವುದು ತಪ್ಪೆ ? ಇದನ್ನೆಲ್ಲಾ ಸರ್ಕಾರ ವಿಮರ್ಶೆ ಮಾಡುವುದಿಲ್ಲ. ಶ್ರೀಮಾನ್ ವಿಟ್ಠಲದಾಸ ಶೆಟ್ಟರ ಭಾಷಣ ನೋಡಿದರೆ, ಅಲ್ಲೊಂದು ಹೇಳುವುದು, ಇಲ್ಲೊಂದು ಹೇಳುವುದು. ಈ ರೀತಿ ಮಾಡುತ್ತಾರೆ. ಅವರು ನಾಲಿಗೆಯನ್ನು ಮನಸ್ಸಿಗೆ ಬಂದಂತೆ ತಿರುಗಿಸುತ್ತಾರೆ. ಆ ನಾಲಿಗೆ ಎಲುಬು ಇಲ್ಲದೆ ಇರುವುದರಿಂದ ಹೇಗೆ ಬೇಕಾದರೂ ತಿರುಗಿಸಬಹುದು. ಯಾವುದಾದರೂ ನಿರ್ಣಯವನ್ನು ಸರ್ಕಾರ ಮಾಡಿದರೆ, ಅದನ್ನು ಕಾರ್ಯಗತ ಮಾಡಬೇಕು. ಸರ್ಕಾರ ಹೇಳಿದಂತೆ ನಡೆದುಕೊಳ್ಳಬೇಕು.

ಇನ್ನು ರಾಜ್ಯ ಪುನರ್ಘಟನೆ ಆದಮೇಲೆ ಕೇಡರ್‌ಗಳನ್ನೆಲ್ಲಾ ಸಮನ್ವಯ ಮಾಡದೇ ಇರುವುದು, ಆಡಳಿತದಲ್ಲಿ ದಕ್ಷತೆ ಇಲ್ಲದೇ ಇರುವುದು, ನೌಕರರಲ್ಲಿ ಅಸಮಾಧಾನ, ಅತೃಪ್ತಿ ಉಂಟಾಗಿರುವುದು ಮತ್ತು ಇದರ ಬಗ್ಗೆ ಸಹಸ್ರಾರು ರಿಟ್ ಹೋಗುವುದಕ್ಕೆ ಅವಕಾಶ ಕೊಟ್ಟಿದೆ. ಈ ಸಭೆಯ ಮುಂದೆ ಶ್ರೀಮಾನ್ ನಿಜಲಿಂಗಪ್ಪನವರು ಆದಿಯಾಗಿ ಆಶ್ವಾಸನೆ ಮೇಲೆ ಆಶ್ವಾಸನೆ ಕೊಟ್ಟು ಪೊಳ್ಳು ಭರವಸೆಯನ್ನು ಕೊಡುತ್ತಾ ಬಂದಿದ್ದಾರೆ. ಬಹಳ ಜನ ನೌಕರರು ನಿವೃತ್ತರಾಗುತ್ತಿದ್ದಾರೆ, ನಿವೃತ್ತರಾಗಿ ಹೋಗುತ್ತಿದ್ದಾರೆ, ಪೆನ್‌ಷನ್ ಆಗಿ ಹೋಗುತ್ತಿದ್ದಾರೆ. ಅವರ ಸ್ಥಾನಮಾನಗಳನ್ನು ನಿರ್ದಿಷ್ಟಗೊಳಿಸುವುದಕ್ಕೆ ಈ ಸರ್ಕಾರಕ್ಕೆ ಯೋಗ್ಯತೆಯೇ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ. ಅದೇ ಅಸಮಾಧಾನದ ಮೂಲ ಕಿಡಿ ಈ ರಾಜ್ಯದಲ್ಲಿ. ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಕೊಡಗು, ಮದ್ರಾಸಿನ ಆಡಳಿತ ವ್ಯವಸ್ಥೆ, ಹಳೇ ಮೈಸೂರಿನ ಆಡಳಿತ ವ್ಯವಸ್ಥೆ, ಇವೆಲ್ಲ ಸೇರಿ ಆಗಿರತಕ್ಕ ಈ ರಾಜ್ಯದಲ್ಲಿ ಅಸಮಾನವಾದ ಸಂಬಳ ಶ್ರೇಣಿಗಳು, ಸೌಲಭ್ಯಗಳಿವೆ. ಇವುಗಳನ್ನು ಪರಿಷ್ಕರಣ ಮಾಡುವ ಒಂದು ಮುಖ್ಯ ಕೆಲಸದ ಕಡೆ ಈ ಸರ್ಕಾರದ ಗಮನ ಕೊಟ್ಟಿಲ್ಲ, ಅದನ್ನು ಪರಿಹಾರ ಮಾಡಿಲ್ಲ. ಇದು ಬಹಳ ವ್ಯಥೆಪಡತಕ್ಕ ವಿಷಯ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

1-30 P.M.

ರಾಜ್ಯಗಳ ಪುನರ್ಘಟನೆಯಾದ ನಂತರ ಕರ್ಣಾಟಕ ರಾಜ್ಯದಲ್ಲಿ ಬಹಳ ಸಂಘಟಿತವಾದಂಥ ಅಹಿಂಸಾತ್ಮಕವಾದಂಥ, ರಾಜ್ಯಾಂಗಬದ್ಧವಾದಂಥ ಹೋರಾಟವನ್ನು ನಮ್ಮ ರಾಜ್ಯದ ನಾನ್ ಗೆಜೆಟೆಡ್ ನೌಕರರುಗಳು ಮಾಡಿ ಕೀರ್ತಿಯನ್ನು ಪಡೆದಿದ್ದಾರೆ, ಹೋರಾಟ ಮಾಡಿದ್ದಾರೆ, ತ್ಯಾಗ ಮಾಡಿದ್ದಾರೆ. ಆದರಲ್ಲಿಯೂ ಆ ಅಮ್ಮನ ಹೆಸರು ಹೇಳಬೇಕು. ಶ್ರೀಮತಿ ಮೇರಿ ದೇವಾಸಿಯಾ ಅವರು ಈವೊತ್ತಿನ ದಿವಸ ಕೆಲಸದಲ್ಲಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ನೀವು ಕಮ್ಯೂನಿಸ್ಟರು ಎಂದು ತಿಳಿದಿರೋ ಏನೆಂದು ತಿಳಿದಿರಿ ಎಂದು ಗೊತ್ತಿಲ್ಲ. ಆ ಅಮ್ಮನನ್ನು ನಾನು ನೋಡಿದ್ದೇನೆ ಒಬ್ಬಳು ಸ್ತ್ರೀ, ಮಹಿಳೆ, ಇಡೀ ಸರ್ಕಾರವನ್ನು ನಡುಗಿಸತಕ್ಕ ಚಳುವಳಿಯನ್ನು ಮಾಡಿ, ಲಕ್ಷ ಲಕ್ಷ ಜನ ಈ ರಾಜ್ಯದ ನಾಲ್ಕು ಮತ್ತು ಮೂರನೇ ದರ್ಜೆ ನೌಕರರುಗಳ ಕಷ್ಟಗಳನ್ನು ಪರಿಹಾರ ಮಾಡು

(ಶ್ರೀ ಎಸ್. ಗೋಪಾಲಗೌಡ)

ವುದಕ್ಕಾಗಿ ಹೋರಾಟ ಮಾಡಿ ಬಹಳ ತ್ಯಾಗ ಮಾಡಿದ್ದಾರೆ, ಕಷ್ಟಪಟ್ಟಿದ್ದಾರೆ, ನಷ್ಟಪಟ್ಟಿದ್ದಾರೆ. ಅಂಥ ಸಹಸ್ರಾರು ಜನ ನೌಕರರು ಈ ರಾಜ್ಯದಲ್ಲಿದ್ದಾರೆ. ಅಂಥವರಿಗೆ ಇಂಥ ಒಂದು ಚಾರಿತ್ರಿಕ ವಾದ ಹೋರಾಟದ ಪರಿಣಾಮವಾಗಿ ಐದ್ಯೆದು ರೂಪಾಯಿಗಳನ್ನು ವರ್ಷದ ಉಗಾದಿಯ ಕೊಡುಗೆ ಯಾಗಿ ಕೊಡುತ್ತಿದ್ದಂಥ ಸರ್ಕಾರ ಬಡ ನೌಕರರ ಒತ್ತಡಕ್ಕೆ ಮಣಿದು ಹೈಕೋರ್ಟ್ ನ್ಯಾಯಾಧೀಶ ರಾದ ಶ್ರೀಮಾನ್ ತುಕೋಳ್ ಅವರ ಏಕಸದಸ್ಯ ಆಯೋಗವನ್ನು ರಚನೆ ಮಾಡುವಷ್ಟರ ಮಟ್ಟಿಗೆ ಹೋದದ್ದು ಬಹಳ ಸಂತೋಷದ ವಿಷಯ.

1956-57 ರಲ್ಲಿ ನಮ್ಮ ರಾಜ್ಯ ಪುನರ್ಘಟನೆಯಾಯಿತು. 1955 ರಲ್ಲಿ ಮ್ಯಾಸ್ಕರೆನ್‌ಹಾಸ್ ಆಯೋಗ ರಚನೆಯಾಯಿತು. ಅವರು ಅವರು ಕೆಲವು ಸಲಹೆಗಳನ್ನು ಕೊಟ್ಟರು. 1956 ರಲ್ಲಿ ಸರ್ಕಾರದ ಅಧಿಕಾರಗಳದೇ ಒಂದು ಸಮಿತಿಯನ್ನು ರಚನೆ ಮಾಡಿತು. ಅವರು ಕೊಟ್ಟ ಕೆಲವು ಸಲಹೆಗಳನ್ನು ಜಾರಿಗೆ ಕೊಟ್ಟಿದ್ದಾರೆ. ಆಗಲೂ ಅಸಮಾಧಾನ, ಅತೃಪ್ತಿ ಏರುತ್ತಿರುವಾಗ, ಬೆಲೆಗಳು ವಿಷದಂತೆ ಏರುತ್ತ ಬಂದುದದರಿಂದ ಕೇಂದ್ರ ಸರ್ಕಾರದವರು 'ಹೋಲ್ಡ್ ದಿ ಪ್ರೈಸ್ ಲೈನ್' ಎಂದು ಮೇಲಿನ ಇದಕ್ಕೆ ನೇಣು ಹಾಕಿಕೊಂಡು ಪ್ರೈಸ್ ಲೈನ್ ಮೇಲೆ ಹೋದಂತೆ ಅದನ್ನು ಹಿಡಿದುಕೊಂಡು ಇಂಡಿಯಾ ದೇಶದ 'ಹೋಲ್ ದಿ ಪ್ರೈಸ್ ಲೈನ್' ಮಂತ್ರಿಗಳೂ ಮೇಲಕ್ಕೆ ಹೋಗುವುದಕ್ಕೆ ಷುರುವಾಗಿ ಅಂತರಿಕ್ಷಕ್ಕೆ ಅವರ ಜೊತೆಯಲ್ಲಿ ಕರ್ನಾಟಕದ ಮತ್ತು ಇತರ ರಾಜ್ಯ ಗಳ ಮಂತ್ರಿಗಳೂ ಮೇಲೆ ಹೋಗುವುದಕ್ಕೆ ಷುರುವಾಯಿತು. ಪ್ರೈಸ್ ಲೈನ್ ಹೋಲ್ಡ್ ಮಾಡು ವುದಕ್ಕಾಗಲಿಲ್ಲ, ಯಾವ ಅವಶ್ಯಕ ವಸ್ತುವನ್ನೂ ನ್ಯಾಯ ಬೆಲೆಗೆ ಈ ರಾಷ್ಟ್ರದಲ್ಲಿ ಒದಗಿಸುವುದಕ್ಕೆ ಆಗಿಲ್ಲ. ಇವೊತ್ತು ವಿಮಾನದಲ್ಲಿ ಹೋಗುವವರ ಸಂಖ್ಯೆ ಕಡಮೆ ಇಲ್ಲ. ಮೂರು ನಾಲ್ಕು ಸಾವಿರ ಕೋಟಿ ರೂಪಾಯಿಗಳ ಕಳ್ಳ ನೋಟು ಹಣವಿದೆ, ಅನೇಕ ಕೋಟಿ ರೂಪಾಯಿಗಳ ಇನ್‌ಕಂ ಟ್ಯಾಕ್ಸ್ ಬರುವುದಿದೆ, ಕಳ್ಳ ವ್ಯಾಪಾರ, ಸಟ್ಟಾ, ಜೂಜು, ಷೇರು ಮಾರ್ಕೆಟ್, ಕುದುರೆ ಜೂಜು, ಇವು ನಿರಾಂತಕವಾಗಿ ನಡೆಯುತ್ತಿವೆ. ಎಲ್ಲ ರಾಜ್ಯಗಳೂ ಲಾಟರಿ ಷುರು ಮಾಡಿವೆ, ನಮ್ಮ ರಾಜ್ಯವೂ ಲಾಟರಿ ಷುರು ಮಾಡಿದೆ. ಲಾಟರಿಯಿಂದ ದುಡ್ಡು ಬರುತ್ತದೆ.........

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಮೂರು ನಾಲ್ಕು ಕೋಟಿ ರೂಪಾಯಿಗಳ ಕಳ್ಳ ನೋಟುಗಳಿರುವಾಗ ಮೂರು ನಾಲ್ಕು ಸಾವಿರ ಎಂದು ಮಾನ್ಯ ಸದಸ್ಯರು ಹೇಳಿದರು...

ಶ್ರೀ ಎಸ್. ಗೋಪಾಲ ಗೌಡ.—ಇಲ್ಲ ಮೂರು ಸಾವಿರ ಕೋಟಿ ರೂಪಾಯಿ, ನಾಲು ಸಾವಿರ ಕೋಟಿ ರೂಪಾಯಿ ಕಳ್ಳ ನೋಟುಗಳಿವೆ ಈ ರಾಷ್ಟ್ರದಲ್ಲಿ ಎಂದು ನಾನು ಹೇಳಿದೆ. ಅದನ್ನು ಶ್ರೀ ಮೊರಾರ್ಜಿ ಅವರೂ ಒಪ್ಪಿಕೊಂಡಿದ್ದಾರೆ. ಈಗ ಮನೆ ಬಾಡಿಗೆ ಏರುತ್ತಿದೆ, ಸ್ಕೂಟು ಬೆಲೆ ಏರುತ್ತಿದೆ, ಎಲ್ಲವೂ ತಲೆಕೆಳಗಾಗುತ್ತಿದೆ, ಎಲ್ಲ ವಸ್ತುಗಳ ಬೆಲೆಯೂ ತಲೆಕೆಳಗಾಗುತ್ತಿದೆ. ಬಡ್ಡಿಯ ಹಣ, ಸ್ಪೆಕ್ಯುಲೇಷನ್‌ನಲ್ಲಿ ಬಂದ ಹಣ, ಷೇರು ಮಾರ್ಕೆಟ್‌ನಿಂದ ಬಂದ ಹಣ ಮುಂತಾದವು ಗಳಿಂದ ಇಡೀ ರಾಷ್ಟ್ರದ ಹಣಕಾಸಿನ ಪರಿಸ್ಥಿತಿ ಕುಸಿದು ಬಿದ್ದಿದೆ. ಇಂದು ಇಂಥ ಒಂದು ಕೆಟ್ಟ ಹಣಕಾಸಿನ ಪರಿಸ್ಥಿತಿಗೆ ಸರಕಾರದವರು ಪ್ರೋತ್ಸಾಹ ಕೊಟ್ಟುಕೊಂಡು ಬರುತ್ತಿದ್ದಾರೆ. ಈಗಿನ ಕಷ್ಟಪರಿಸ್ಥಿತಿಯನ್ನು ಗಮನಿಸಿ ಈ ಸಂದರ್ಭದಲ್ಲಿ ಒಂದು ಆಯೋಗ ನೇಮಕವಾಯಿತು. ಅದು ಒಂದು ವರದಿಯನ್ನು ಕೊಟ್ಟಿದೆ, ಬಹಳ ದೊಡ್ಡ ವರದಿ, ಅದನ್ನು ನಾನು ಪೂರ್ಣವಾಗಿ ಓದಿಲ್ಲ ನಾನು ಆಸ್ಪತ್ರೆಯಲ್ಲಿದ್ದಾಗ ಲೆಜಿಸ್ಲೇಚರಿಗೆ ಸಂಬಂಧಪಟ್ಟ ಕೆಲವು ಭಾಗಗಳನ್ನು ಓದಿದೆ. ಶ್ರೀ ಹನುಮಂತಪ್ಪನವರು ಒಳ್ಳೆಯ ಅನುಭವಸ್ಥರು, ಅವರನ್ನು ಮುಂದುವರೆಸಿಕೊಂಡು ಹೋಗ ಬೇಕು, ಅವರಿಗೆ ಒಳ್ಳೆಯ ವೇತನ ಕೊಡಬೇಕು ಎಂದು ಹೇಳಿದ್ದಾರೆ. ಅದನ್ನು ಒಪ್ಪುತ್ತೇನೆ. ಕೆಲವೊಂದು ಅಧಿಕಾರಿಗಳು ನಿಜವಾಗಿಯೂ ಒಳ್ಳೆಯ ಸೇವೆ ಸಲ್ಲಿಸುತ್ತಲಿದ್ದಾರೆ. ಅವರಿಗೆ ಅನುಕೂಲ ಮಾಡಿಕೊಡುವ ವಿಚಾರದಲ್ಲಿ ಚಿಂತೆಯಿಲ್ಲ. ಆದರೆ ಈ ಸಂದರ್ಭದಲ್ಲಿ ಬೇರೆ ಅಧಿಕಾರಿಗಳು ಕೂಡ ತಮ್ಮ ಬುಡವನ್ನು ಭದ್ರ ಮಾಡಿಕೊಂಡಿದ್ದಾರೆ. ಇದೊಂದು ಈ ವರದಿಯಲ್ಲಿನ ಲೋಪ. ಹೋರಾಟ ಮಾಡಿದವರು ನಾನ್ ಗೆಜೆಟೆಡ್ ನೌಕರರು, 12-13-15 ರೂಪಾಯಿ ಸಂಬಳವಿರುವವರು. ಅವರು ತಮ್ಮ ನಾನಾ ತಾಪತ್ರಯಗಳಿಗಾಗಿ ಅಲ್ಲಲ್ಲಿ ಸಾಲ ಮಾಡಿ ಅದನ್ನು ತೀರಿಸಲಾರದೆ ಸಂಬಳ ಜಾಸ್ತಿ ಮಾಡಬೇಕೆಂದು ಕೇಳಿದರೆ ಆ ಸಂದರ್ಭವನ್ನು ಇನ್ನು ಕೆಲವರು ಉಪಯೋಗ ಮಾಡಿಕೊಂಡು ತಮ್ಮ ಸಂಬಳಗಳೂ ಜಾಸ್ತಿಯಾಗುವಂತೆ ಮಾಡಿಕೊಂಡಿದ್ದಾರೆ. ಮೂರು ತಿಂಗಳಾದರೂ ಡಿವಿಜನ್ ಕಮಿಷನ್‌ನಲ್ಲಿ ಒಂದು ಕಾಗದ ಇತ್ಯರ್ಥವಾಗುವುದಿಲ್ಲ. ಆದರೆ ಅವರಿಗೆ ಹೆಚ್ಚು ಅನುಕೂಲವಾಗ ಬೇಕು. ಅದಕ್ಕಾಗಿ ಅವರು ಹೋರಾಟ ಮಾಡಿಲ್ಲ. ಇಂಥವರಿಗೆ, ದೊಡ್ಡ ವ್ಯಕ್ತಿಗಳಿಗೆ, ದೊಡ್ಡ

ನೌಕರರಿಗೆ ದೊಡ್ಡ ಸಂಬಳ, ತುಟ್ಟಿಭತ್ಯ ಮೊದಲಾದುವನ್ನು ಕೊಡಲು ಆಯೋಗ ಶಿಫಾರಸು ಮಾಡಿದೆ. ಈಗ ಸರಕಾರದವರು 500 ರೂಪಾಯಿಗಳೊಳಗೆ ಸಂಬಳ ಇರುವವರಿಗೆ ಬಾಂಡು ಕೊಡಬಹುದು—ಅದನ್ನು ಜೇನುತುಪ್ಪ ಹಾಕಿ ನೆಕ್ಕಬಹುದು—ಬಾಂಡಿನ ಹಣ 1990 ಕ್ಕೆ ಕೊಡುವುದಾಗಿ ಹೇಳಬಹುದು. ಆದರೆ ನೌಕರರು ಏನಾದರೂ ಹಣ ದೊರೆಯಬಹುದೆಂದು ನಿರೀಕ್ಷಿಸಿ ಸಾಲ ಮಾಡಿಕೊಂಡಿದ್ದಾರೆ, ಅವರೇನು ಮಾಡಬೇಕು ? ಬಾಂಡು ಕೊಟ್ಟರೆ ಅದನ್ನು ಮಾರವಾಡಿಗಳಿಗೆ ಕೊಡಬೇಕಾಗುತ್ತದೆ. ನೂರು ರೂಪಾಯಿಗಳಾದರೂ ದೊರೆಯುತ್ತದೆಂದು ನಿರೀಕ್ಷಿಸಿ ಆದರಿಂದ ಸಾಲವನ್ನು ತೀರಿಸಿ ತಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಬೇಕೆಂದಿದ್ದವರಿಗೆ ಈಗ ದೊರೆತಿರುವ ಕೊಡಿಗೆಯಾದರೂ ಏನು ? ಆಯೋಗ ಕೊಟ್ಟಿರುವ ಕೊಡಿಗೆ ಸಣ್ಣ ನೌಕರರಿಗೆ ಹುಣ್ಣಿನಮೇಲೆ ಬರೆ ಎಳೆದಂತಿದೆ ಎಂದು ಹೇಳದೆ ವಿಧಿಯಿಲ್ಲ. ಇದನ್ನು ನಾನು ಹೇಳಬೇಕು, ಸರ್ಕಾರದವರು ಇದನ್ನು ಪರಿಷ್ಕರಣ ಮಾಡಿ ಮತ್ತೆ ಪುನರ್ವಿಮರ್ಶಿಸಬೇಕು. ಇನ್ನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರಲ್ಲಿ ಕೆಲವು ವಿಷಯಗಳು ಇವೆ. ಸ್ಥಳೀಯ ಸಂಸ್ಥೆಗಳು ಎಂದರೆ ಲೋಕಲ್ ಬಾಡೀಸ್, ಸಹಾಯ ಪೋಷಿತ ಸಂಸ್ಥೆಗಳು ಗ್ರ್ಯಾಂಟ್ ಇನ್‌ಏಡ್ ಅಂತ ಹೇಳಿ ಹಣವನ್ನು ಪಡೆಯುತ್ತಾ ಇದ್ದಾರೆ. ಬಹಳ ಸ್ಪೂರಿಯಸ್ ಆಗಿ ವ್ಯಾಪಾರದಂತೆ ಶಾಲೆ ನಡೆಸುವುದು, ವ್ಯಾಪಾರದಂತೆ ಸರ್ಟಿಫಿಕೇಟ್ ಕೊಡುವುದು, ಒಬ್ಬ ಸ್ನೇಹಿತ ಸರ್ಟಿಫಿಕೇಟ್ ಕೊಟ್ಟನಲ್ಲ ಮಹರಾಸ್ ಟೀಚರ್ ಟ್ರೈನಿಂಗ್ ಕಾಲೇಜ್ ಅಂತ, ಅವನೊಬ್ಬ ಕಳ್ಳ, ಅಂಥವರಿಗೆ ಬಹಳ ಸೌಲಭ್ಯ ಈ ವಿದ್ಯಾ ಇಲಾಖೆಯಲ್ಲಿ. ಗ್ರ್ಯಾಂಟ್, ಗ್ರ್ಯಾಂಟ್, ಅಂತ ಹೇಳಿ ಅದರಲ್ಲಿ ಸಮಪಾಲು. ಒಬ್ಬಳು ಅಮ್ಮ ಡಿ.ಇ.ಒ., ಅವಳ ಹೆಸರಿನಲ್ಲೇ ಮನೆಯಲ್ಲೇ ಆ ಕಾಲೇಜು ನಡೆಯುವುದು. ಇಂತಹ ಹುತ್ತದಲ್ಲೇ ಹುತ್ತ ಬಹಳ ಇವೆ. ಹಾವನ್ನು ಕೊಲ್ಲದೇ ಹುತ್ತವನ್ನು ಬಡಿವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನೀವು ಬಡಿದರೂ ಅಷ್ಟೇ, ನಾವು ಬಡಿದರೂ ಅಷ್ಟೇ. ಹುತ್ತವನ್ನು ಹೊಡೆದರೆ ಹಾವು ಸಾಯುವುದಿಲ್ಲ, ಆ ಮಾತನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಇವತ್ತು ವಿದ್ಯಾ ಇಲಾಖೆಯನ್ನು ಶ್ರೀಮಾನ್ ಶಂಕರಗೌಡರು ಸ್ವಲ್ಪ ಕಣ್ಣು ತೆರೆದು ನೋಡಬೇಕು, ಇದರಲ್ಲಿ ಶಾಲೆ ನಡೆಸಿ ಹಣ ತೆಗೆದುಕೊಳ್ಳುವವರು ಎಷ್ಟು, ಬರೀ ಬೋರ್ಡ್ ಇಟ್ಟುಕೊಂಡು ಹಣ ತೆಗೆದುಕೊಳ್ಳುವವರು ಎಷ್ಟು ! ಬಡ ಬೋರೇಗೌಡನ ಬೊಕ್ಕಸವನ್ನು ಈ ರೀತಿ ಲೂಟಿ ಹೊಡೆಯುವುದಕ್ಕೆ ನೂರಾರು ಬಾಗಿಲುಗಳನ್ನು ತೆರೆದು ಇಟ್ಟಿರುವುದು ಅಂತಹ ಕಚೇರಿಯ ಸ್ಥಿತಿಯಾದರೆ ಈ ದೇಶದ ಗತಿ ಏನಾಗುತ್ತದೆ ? ಒಂದು ಪೀಳಿಗೆ ನಿರರ್ಥಕವಾಗಿದೆ. ಒಂದು ಪೀಳಿಗೆ ಎಂದರೆ 30 ವರ್ಷ. ನಮ್ಮ ಪೀಳಿಗೆಯಂತೂ ಮಣ್ಣು ತಿಂದು ಹೋಯಿತು ನಮಗೆ ಇನ್ನು ಉಮೇದು ಇಲ್ಲ. ಈ ರಾಷ್ಟ್ರ ಪುನರ್ಘಟಿಸುತ್ತೇವೆ, ತಲೆ ಎತ್ತಿ ಓಡಾಡುವಂತೆ ಮಾಡುತ್ತೇವೆ, ಬಡಬಗ್ಗರ ತುತ್ತಿನ ಚೀಲವನ್ನು ತುಂಬುತ್ತೇವೆ ಎಂಬ ಉಮೇದು ನನಗಂತೂ ಇವತ್ತು ಕಡಿಮೆಯಾಗಿದೆ. ಒಂದು ಪೀಳಿಗೆ ನಷ್ಟವಾಯಿತು ಅನ್ನುವ ಮಾತನ್ನು ಇವತ್ತು ಒಪ್ಪಿಕೊಳ್ಳಬೇಕು. ತಾವು ಹೇಳಬಹುದು, ಇಂದಿರಾಗಾಂಧಿಯವರು ಹೇಳಬಹುದು ಬಹಳ ಮಾಡಿದ್ದೇವೆ, ಬಹಳ ಮಾಡುವುದು ಇದೆ ಎಂದು, ಬಹಳ ದೊಡ್ಡ ಮಾತು ಅದನ್ನು ಒಪ್ಪುತ್ತೇನೆ. ಸತ್ತವರ ಲೆಕ್ಕ, ನಿಟ್ಟುಸಿರಿನ ಲೆಕ್ಕ ಅಂತ ಹೇಳಿ ಈ ಲೆಕ್ಕದಿಂದ ಇವತ್ತು ನಮಗೆ ಗೊತ್ತಾಗುತ್ತದೆ ಈ ರಾಷ್ಟ್ರದಲ್ಲಿ ಈ 20 ವರ್ಷದಲ್ಲಿ ಎಷ್ಟು ಕಣ್ಣೀರಿನ ಕೋಡಿ ಹರಿದಿರಬಹುದು, ಎಷ್ಟು ಜನ ನಿಟ್ಟುಸಿರು ಬಿಟ್ಟು ಸತ್ತಿರಬಹುದು ಎಂದು. ಈ ಲೆಕ್ಕವನ್ನು ಪರಿಶೀಲಿಸಬೇಕು. ನಿಮ್ಮ ಪಂಚವಾರ್ಷಿಕ ಯೋಜನೆಯ ಫಲಾಫಲಗಳು ನಮಗೆ ಚೆನ್ನಾಗಿ ತಿಳಿಯುತ್ತದೆ, ಸ್ಮಶಾನಗಳು ನಮಗೆ ಕಾಣುತ್ತವೆ, ನೀವು ಎಷ್ಟು ಜನ ಮಕ್ಕಳನ್ನು ಈ 20 ವರ್ಷದಲ್ಲಿ ಜೀವಂತ ಹೂಳಿದ್ದೀರಿ ಅನ್ನುವುದು ತಿಳಿಯುತ್ತದೆ. ಇದಕ್ಕಿಂತ ಕಟುವಾಗಿ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಈ ತುಕೋಳ್ ಕಮಿಷನ್ ಆಯೋಗದಲ್ಲಿ ವಿಶ್ರಾಂತಿ ವೇತನ ಪಡೆಯುತಕ್ಕವರಿಗೂ ಕೂಡ ತುಟ್ಟಿ ಭತ್ಯ, ಮೆಡಿಕಲ್ ಏಡ್ ಮುಂತಾದುವುಗಳನ್ನು ಕೊಡುವುದರ ಬಗ್ಗೆ ಶಿಫಾರಸು ಮಾಡಿದ್ದಾರೆ. ಅದು ಸ್ವಾಗತಾರ್ಹವಾದದ್ದು. ಇನ್ನು ಡೆಪ್ಯೂಟೇಷನ್ ಭತ್ಯ, ಪೊಲಿಟಿಕಲ್ ಪೆನ್‌ಷನ್ ಇತ್ಯಾದಿ ಭತ್ಯಗಳನ್ನು ಹೇಳಿದ್ದಾರೆ. ಈ ಕಮಿಷನ್‌ಗೆ ನೀವು ಕೊಟ್ಟ ಕೆಲಸ ದಕ್ಷತೆ ಹೆಚ್ಚಬೇಕು, ಕೆಲಸ ಮಾಡುವವರಿಗೆ ಸೂಕ್ತ ಸೌಕರ್ಯ ದೊರೆಯಬೇಕು ಈ ಬಗ್ಗೆ ಶಿಫಾರಸು ಕೊಡಬೇಕಾಗಿತ್ತು. ದಕ್ಷತೆ ಮಾಯವಾಗಿ ತುಂಬಿ ತಂದು ಹಾಕಿರತಕ್ಕ ಅದಕ್ಷತೆ ಇದು ಆಗಿದೆ. ನಾವು ಕೂಲಿಗಾರರು, ಕೂಲಿಗಾರರಾಗಿ ಇವತ್ತು ದುಡಿಯುತ್ತಾ ಇದ್ದೇವೆ. ಸ್ವತಂತ್ರ ರಾಜ್ಯದ, ರಾಷ್ಟ್ರದ ಪ್ರಜೆಗಳಲ್ಲ, ನಮ್ಮ ಅಧಿಕಾರಿಗಳ ಮಕ್ಕಳನ್ನು ಅಲ್ಲಾಡುವುದೇ ಇಲ್ಲ, ಹೆಚ್ಚು ಸಂಬಳ, ಹೆಚ್ಚು ಸಂಬಳ, ಕಡಿಮೆ ಕೆಲಸ. ಕಡಿಮೆ ಸಂಬಳ, ಕಡಿಮೆ ಸಂಬಳ ಹೆಚ್ಚು ಕೆಲಸ, ಕಷ್ಟದ ಕೆಲಸ, ಕಾಲದ ಮಿತಿ ಇಲ್ಲ, ಕೆಲಸದ ಮಿತಿ ಇಲ್ಲ, ಅವನು ಕಂಬ ಸುತ್ತುತ್ತಲೇ ಇರಬೇಕು, ಸಾಹೇಬರು ಬರಬಹುದು, ಬರದೇ ಇರಬಹುದು. 'ನಿಮ್ಮ ಸಾಹೇಬರು ಯಾವಾಗ ಬರುತ್ತಾರಪ್ಪಾ' 'ಹೇಳುವುದಕ್ಕಾಗುವುದಿಲ್ಲ ಸಾರ್'. ಸಾಹೇಬರು ಯಾವಾಗ ಬರುತ್ತಾರೆ ಅವನು ಕೇಳುವುದಕ್ಕಾಗುವುದಿಲ್ಲ. ಏಕೆಂದರೆ ಹಿರಿಯಕ್ಕನ ಚಾಳಿ ಮನೆಮಂದಿ

(ಶ್ರೀ ಎಸ್. ಗೋಪಾಲಗೌಡ)

ಗೆಲ್ಲಾ. ಇಷ್ಟೊಂದು ಜನ ಮಂತ್ರಿಗಳು ಇದ್ದೀರಿ, ನಿಮ್ಮ ಮನೆಯವರಿಗೆ ಹೇಳಿ, ನಿಮ್ಮ ಪತ್ನಿಯವರು ಇದ್ದರೆ ಅವರಿಗೆ ಹೇಳಿ, ನಾನು ಹೀಗೆ ಇಂತಹ ಕಡೆಗೆ ಹೋಗಿರುತ್ತೇನೆ, ಇಷ್ಟು ಹೊತ್ತಿಗೆ ಊಟಕ್ಕೆ ಬರುತ್ತೇನೆ, ಅಥವಾ ಊಟಕ್ಕೆ ಬರುವುದಿಲ್ಲ ಎಂದು. ನಿಮಗೆ ಪಿ.ಎ. ಅಂತ ಇದ್ದಾರೆ ಅವನ ಹತ್ತಿರ ಬರೆಸಿ, ನಿಮ್ಮ ದಿನಚರಿ ಕೊಡಿ, ಇಷ್ಟು ಹೊತ್ತಿಗೆ ಬರುತ್ತೇನೆ, ಒಂದು ಗಂಟೆಗೆ ಯಾರಾದರೂ ಬಂದರೆ ಕಾದು ಕುಳಿತುಕೊಳ್ಳಿ ಅಂತ ಹೇಳಿ. ಇಂತಹ ಪದ್ಧತಿ ಸೆಕ್ರೆಟೇರಿಯಟ್‌ನಲ್ಲೂ ಇಲ್ಲ, ಮನೆಯಲ್ಲೂ ಇಲ್ಲ. ಇನ್ನು ನಿಮ್ಮ ಟೂರ್. ಇದೂ ಕೂಡ ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ. ಯಾವಾಗ ಯಜಮಾನ ನಿಂತು ಉಚ್ಚೆ ಹೊಯ್ಯುತ್ತಾನೆ, ಜವಾನ ಓಡಾಡುತ್ತಾ ಉಚ್ಚೆ ಹುಯ್ಯುತ್ತಾನೆ, ನೀವು ಮೊದಲು ಮರ್ಯಾದೆ ಮಿತಿಯನ್ನು ನಿರ್ಣಯ ಮಾಡಿಕೊಳ್ಳಿ, ನಿಮ್ಮ ಮೇಲೆ ಗುರುತರವಾದ ಹೊಣೆ ಇದೆ, ನೀವು ಕೇವಲ ಮಂತ್ರಿಗಳು ಅಲ್ಲ, ರಾಜ್ಯದ ಮಂತ್ರಿಗಳು. ನಮ್ಮಂಥವರು ನಿಮ್ಮ ಹತ್ತಿರ ಬರಬೇಕಾಗುತ್ತದೆ, ಸಾರ್ವಜನಿಕ ವಿಷಯಗಳನ್ನು ಮನವಿ ಮಾಡಿಕೊಳ್ಳಬೇಕಾಗುತ್ತದೆ, ನಿಮ್ಮ ತಲೆಗಳು ನೆಟ್ಟಗೆ ಇರಲಿ, ಪ್ರಜ್ಞೆಯ ನೆಲೆಯಂತಿರಲಿ. ಇದು ಇಂದು ಬಂದು ನಾಳೆ ಎದ್ದು ಹೋಗುವ ಮಂತ್ರಿಮಂಡಲ, ಇದು ಶಾಶ್ವತ ಎಂದು ತಿಳಿಯಬೇಡಿ, ನಾಡಿದ್ದು ನಿಮ್ಮ ಜವಾನನೇ ನಿಮಗೆ ನಮಸ್ಕಾರ ಮಾಡುವುದಿಲ್ಲ. ಬೆಳ್ಳಿಕೋಲು, ಡವಾಲಿ ಹಿಡಿಸಿಕೊಂಡು ನಡೆದು ಹೋದವರು ಇವತ್ತು ಸೈಕಲ್ ನೂಕಿಕೊಂಡು ಓಡಾಡುವುದನ್ನು ನೋಡುತ್ತೇವೆ. ಈ ಭ್ರಮೆ ಬೇಡ. ಆದ್ದರಿಂದ ನಾನು ಹೇಳುವುದು ಇಷ್ಟೆ, ನೀವು ಮಾರ್ಗದರ್ಶನ ಮಾಡಿ, ನೀವು ಚೆನ್ನಾಗಿ ನಡೆದುಕೊಳ್ಳಿ. ದೊಡ್ಡಮೇಟಿಯಂಥವರು, ಆರೋಗ್ಯ ಇಲ್ಲದವರು ಆಸ್ಪತ್ರೆಯಲ್ಲಿರಲಿ. (ನಗು !) ಅವರ ಬಗ್ಗೆ ನನ್ನದೇನೂ ದೂರು ಇಲ್ಲ. ಅವರ ಖಾತೆ ಅದಕ್ಷತೆಯಿಂದಲೇ ಕೆಲಸ ಮಾಡಲಿ. ಇವತ್ತು ನನ್ನ ಹತ್ತಿರ ಎಷ್ಟೋ ಜನ ಪೊಲಿಟಿಕಲ್ ಪೆನ್ಷನ್ ಅಂತ ಮಾಡಿದ್ದೀರಲ್ಲಾ ಅದರ ಸಲುವಾಗಿ ನನ್ನ ಹತ್ತಿರ ಬರುತ್ತಾರೆ, ಅದನ್ನು ನೀವು ಇನ್ನೂ ಪೂರ್ತಿಯಾಗಿ ಮಾಡಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ (ಸಣ್ಣನೀರಾವರಿ ಶಾಖೆಯ ರಾಜ್ಯಮಂತ್ರಿಗಳು).—ನನ್ನ ಹತ್ತಿರ ಕಳುಹಿಸಿ.

ಶ್ರೀ ಎಸ್. ಗೋಪಾಲಗೌಡ.—ನಾನು ಕಳುಹಿಸಬೇಕಾಗಿಲ್ಲ. ನನಗೆ ಜವಾನರು ಯಾರೂ ಇಲ್ಲ, ನನಗೆ ನಾನೇ ಜವಾನ, ನನಗೆ ನಾನೇ ಮಂತ್ರಿ. ಆದ್ದರಿಂದ ಇಡೀ ರಾಷ್ಟ್ರದ ಈ ಕಷ್ಟವನ್ನು ಹೊತ್ತು ಓಡಾಡುವುದಕ್ಕೆ ನನಗೆ ಸಾಧ್ಯವಿದೆ ಎಂದು ನಾನು ಹೇಳುವುದಿಲ್ಲ, ನನ್ನ ಹತ್ತಿರ ಒಂದು ಟೆಲಿಫೋನ್ ಇಲ್ಲ, ನನಗೆ ಒಬ್ಬ ಸ್ಟೆನೋಟೈಪಿಸ್ಟ್ ಇಲ್ಲ, ಪತ್ರ ಬರೆಯುವುದಕ್ಕೆ ಕಷ್ಟವಾಗುತ್ತದೆ. ಸದಸ್ಯರುಗಳಿಗೆ ಅಂತಹ ಒಂದು ಸೌಕರ್ಯವನ್ನೇನೂ ನೀವು ಕೊಟ್ಟಿಲ್ಲ. ತುಕೊಳ್ ಕಮಿಷನ್‌ನವರೂ ಕೂಡ ಅಂತಹ ಶಿಫಾರಸನ್ನೇನೂ ಮಾಡಿಲ್ಲ. ಪ್ರತಿಯೊಬ್ಬ ಎಂ. ಎಲ್. ಎ.ಗೂ ಅವನ ಕ್ಷೇತ್ರದಲ್ಲಿ ಒಂದು ಆಫೀಸು ಇರಬೇಕು. ತಾಲ್ಲೂಕು ಆಫೀಸಿನಲ್ಲಿ ಒಂದು ರೂಮು ಇರಬೇಕು. ಇಲ್ಲಿ ಒಬ್ಬ ಕಾರಕೂನ ಇರಬೇಕು, ಅವನಿಗೆ ಸ್ವಲ್ಪ ಅಲ್ಲಿ ಮರ್ಯಾದೆ ಇರಬೇಕು. ಅವನು ಒಬ್ಬ ನೌಕರನನ್ನು ಕಳುಹಿಸಿದರೆ ಯಾವುದಾದರೂ ಕೆಲಸ ಏಕೆ ಮಾಡಿಲ್ಲ, ದರಖಾಸ್ತು ಏಕೆ ವಿಲೇವಾರಿ ಮಾಡಿಲ್ಲ ಎಂದು ಕೇಳುವುದಕ್ಕೆ ಒಂದು ಜಾಗ ಇರಬೇಕು. ಈಗ ಅವನಿಗೆ ಜಾಗ ಎಲ್ಲಿದೆ ? ರುಜು ಹಾಕು ಸಂಬಳ ತೊಗೋ—ನಾನು ಡಿ. ಡಿ. ಪಿ. ಐ. ಆಫೀಸಿಗೆ ಹೋಗುವುದಿಲ್ಲ ನನ್ನ ಕ್ರಮವೇ ಬೇರೆ, 5 ವರ್ಷಗಳ ಕಾಲ ಒಂದು ಲಕ್ಷ ಜನಸಂಖ್ಯೆಯನ್ನು ಪ್ರತಿನಿಧಿಸತಕ್ಕ ಒಬ್ಬ ಎಂ. ಎಲ್. ಎ. ಅಥವಾ ಎಂ. ಎಲ್. ಸಿಗೆ. ಬಂದ ಕಾಗದಗಳನ್ನು ಒಂದು ಕಡೆ ಇಟ್ಟು ಸರಿಯಾದ ಒಂದು ಉತ್ತರ ಕೊಡುವುದಕ್ಕೆ ಬೇಕಾದ ಒಬ್ಬ ಕಾರಕೂನನ ವ್ಯವಸ್ಥೆ ಇಲ್ಲದೇ ಇದ್ದರೆ ಅವನು ಏನು ದೇಶ ಸೇವೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ನಾವೇನು ಶ್ರೀಮಂತರೇ ! ನಮಗೆ ಏನು ಅಧಿಕಾರಿಗಳು ಇರುತ್ತಾರೆಯೇ ? ನಮ್ಮ ಹೆಸರಿನಲ್ಲಿ ನಾವೇ ನಮಗೆ ಬೇಕಾದ ಸಮಾಚಾರವನ್ನು ಪ್ರೆಸ್‌ನವರಿಗೆ ಕೊಡಬೇಕು. ಸರ್ಕಾರದಂತಹ ದೈತ್ಯಯಂತ್ರವನ್ನು ನಮ್ಮಂಥ ಬಡಪಾಯಿಗಳು ಎದುರಿಸಬೇಕೆಂದರೆ ಸುಲಭಸಾಧ್ಯವಾದಂತಹ ಕೆಲಸವಲ್ಲ. ಅದಕ್ಕೇ ಶ್ರೀ ದೊಡ್ಡಮೇಟಿಯವರಿಗೆ ವಿನಂತಿಸಿಕೊಳ್ಳುವುದೇನೆಂದರೆ, ನಿಮ್ಮ ನಡೆ ನುಡಿ ಏನಿದೆ, ನೀವು ನುಡಿದಂತೆ ನಡೆಯಿರಿ, ನಡೆದಂತೆ ನುಡಿಯಿರಿ. ಗಾಂಧಿ ಶತಾಬ್ದಿಯ ವರ್ಷ ಇದು, ಸತ್ಯ ಹೇಳುವುದನ್ನು, ಸತ್ಯ ಆಚರಿಸುವುದನ್ನು ಕಷ್ಟವಾದರೂ ಪರಿಪಾಲನ ಮಾಡಬೇಕು. ಕಾನೂನು ಇರಬಹುದು, ನ್ಯಾಯ ಇರಬಹುದು. ಮನಸ್ಸು ಇದ್ದಲ್ಲಿ ಮಾರ್ಗ ಇದೆ. ನಿಜವಾಗಿಯೂ ನಿಮಗೆ ಹರಿಜನರಿಗೆ ಸಹಾಯ ಮಾಡಬೇಕು, ಅಸ್ಪೃಶ್ಯತೆಯನ್ನು ತೊಲಗಿಸಬೇಕು, ಬಡತನವನ್ನು ನಿವಾರಣೆ ಮಾಡಬೇಕು, ನೀರಾವರಿ ಸೌಕರ್ಯವನ್ನು ಕಲ್ಪಿಸಿಕೊಡಬೇಕು, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬೇಕು ಎಂಬ ಈ ಮನಸ್ಸು ಇದ್ದರೆ, ಹೃದಯ ಇದ್ದರೆ ಸಾವಿರಾರು ಮಾರ್ಗಗಳು ಇವೆ. ಮಾರ್ಗ ಇಲ್ಲ ಎಂದು ಹೇಳಬೇಡಿ. ಮುಂಬೈ ಕಲ್ಕತ್ತ ಸುತ್ತುವುದಕ್ಕೆ ಹೋಗಬೇಡಿ. ಆ ಮದ್ರಾಸ ಕಡೆ

ಜನರು ಕೆಲವರು ತಮ್ಮ ಹೊಟ್ಟೆಯನ್ನೇ ಬಡಿದುಕೊಂಡು ಜೀವನ ಮಾಡುತ್ತಿದ್ದಾರೆ; ಅಂದರೆ ಅವರು ತಮ್ಮ ಹೊಟ್ಟೆಯನ್ನೆ ತಬಲ ಮಾಡಿಕೊಂಡು ಅದನ್ನು ಬಡಿದುಕೊಳ್ಳುತ್ತಾ ಜೀವನ ಮಾಡುತ್ತಿದ್ದಾರೆ. ಹೀಗೆ ಹೊಟ್ಟೆ ಬಡಿದುಕೊಂಡು ಜೀವನ ಮಾಡುವುದನ್ನೆ ಒಂದು ರಾಷ್ಟ್ರವ್ಯಾಪ್ತಿಯನ್ನಾಗಿ—ಜಗದ್ವ್ಯಾಪಿಯನ್ನಾಗಿ ಮಾಡಬೇಡಿರಿ. ಸರ್ಕಾರಗಳೇ ಹೀಗೆ ಹೊಟ್ಟೆಯನ್ನು ಬಡಿದುಕೊಳ್ಳುತ್ತ ಜೀವನ ಮಾಡುವುದಕ್ಕೆ ಹೊರಟರೆ ಆಗ ಆ ದೇಶದಲ್ಲಿರತಕ್ಕ ಜನರು ಬದುಕಿದ್ದರೂ ಸತ್ತಂತೆಯೇ. ನಾವು ಎಷ್ಟೇ ಬಡವರಾಗಿರಲಿ, ದರಿದ್ರರಾಗಿರಲಿ, ಎಷ್ಟೇ ಉಪವಾಸ ಮಾಡಲಿ ಮರ್ಯಾದೆಯುಳ್ಳ ಜನರು, ಮಾನಕ್ಕೆ ಹೆದರತಕ್ಕ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಉಪವಾಸವಿರುವುದನ್ನು ಪಕ್ಕದ ಮನೆಯವರಿಗೆ ಹೇಳಬೇಡಿ ಎಂದು ಮಕ್ಕಳಿಗೆ ಹೇಳುತ್ತಾರೆ. ಇದು ಅನೇಕರಿಗೆ ಗೊತ್ತಿರುವ ವಿಚಾರ; ಹಾಗೂ ಬಹಳ ಮುಖ್ಯವಾದ ವಿಚಾರ. ಈ ವಿಚಾರದಲ್ಲಿ ತುಕ್ಕೋಳ್ ವರದಿಯಲ್ಲಿ ಏನನ್ನೂ ಹೇಳದೆ ಇದ್ದಾಗ್ಯೂ ದೇಶದಲ್ಲಿರತಕ್ಕ ಸಾಮಾನ್ಯ ಜನತೆಯ ಕೆಲಸ ಕಾರ್ಯಗಳು ಆಗಬೇಕಾಗಿದ್ದರೆ, ಅವು ಸರಾಗವಾಗಿ ನಡೆಯಬೇಕಾಗಿದ್ದರೆ ಶ್ರೀಮತಿ ಚಂಪಾಬಾಯಿ ಅವರಿಗೂ ಒಂದು ಆಫೀಸು ಬೇಕು; ಸೌಲಭ್ಯಗಳು ಬೇಕು ನಿಸ್ಪೃಹತೆಯಿಂದ ಕೆಲಸಮಾಡತಕ್ಕ ಜನರು ಬೇಕು ದಕ್ಷತೆಯಿಂದ ಕೆಲಸ ಮಾಡತಕ್ಕ, ಜನರು ಬೇಕು, ಜನರಲ್ಲಿ ದಕ್ಷತೆ ಇನ್ನೂ ಹೆಚ್ಚಬೇಕು. ಹಿಂದೆ ಒಂದಾವರ್ತಿ ಶ್ರೀ ಕೃಪಲಾನಿಯವರು ಹೇಳುತ್ತಿದ್ದರು—ಆರು ಜನರು ಕೆಲಸ ಮಾಡುವ ಕಡೆ ಮೂರು ಜನರಿದ್ದರೂ ಆ ಕೆಲಸ ಕೆಡುತ್ತದೆ; ಮೂರು ಜನರು ಕೆಲಸ ಮಾಡುವ ಕಡೆ ಆರು ಜನರಿದ್ದರೆ ಆಗಲೂ ಆ ಕೆಲಸ ಕೆಡುತ್ತದೆ ಎಂದು. ಅದೇ ಲೋಹಿಯಾ ಅವರು ಹೇಳುತ್ತಿದ್ದರು ನಮ್ಮ ಸರ್ಕಾರಗಳಲ್ಲಿ ಕೆಲಸಕಾರ್ಯಗಳು ಹೇಗೆ ನಡೆಯುತ್ತಿವೆ ಎಂಬುದನ್ನು ಪ್ರಸ್ತಾಪ ಮಾಡುತ್ತಾ ಹೂವನ್ನು ಕಟ್ಟ ತಕ್ಕವನು ಒಬ್ಬನಾದರೆ ಅದರ ಉಸ್ತುವಾರಿಯನ್ನು ನೋಡತಕ್ಕವರು ಏಳು ಜನರು. ಹೀಗೆ ಈ ದಿವಸ ನಮ್ಮಲ್ಲಿ ಈ ಮೇಸ್ತ್ರಿಗಳ ಆಡಳಿತ ಜಾಸ್ತಿಯಾಗಿದೆ; ಇನ್ನೂ ಹೆಚ್ಚಾಗುತ್ತಿದೆ. ಅಡಿಗೆ ಮಾಡತಕ್ಕವಳು ಒಬ್ಬಳಾದರೆ ಹದ ಹೇಳತಕ್ಕವರು ಆರು ಜನರು. ಆದಾಗ್ಯೂ ಆ ಅಡಿಗೆಯನ್ನು ಊಟ ಮಾಡುವುದಕ್ಕಾಗುವುದಿಲ್ಲ. ನಾವು ಆ ಅಮೇರಿಕಾ ಹಾಗೂ ಆ ರಷ್ಯಾ ದೇಶದಲ್ಲಿ ಆಡಳಿತ ಹೇಗೆ ನಡೆಯುತ್ತಿದೆ ಎಂಬುದನ್ನು ಕಲಿಯೋಣ. ಆದರೆ ನಮಗೆ ಇಂದು ಉತ್ತಮವಾದ ದಕ್ಷತೆಯುಳ್ಳ ಆಡಳಿತ ಬೇಕು. ಈ ದಿವಸ ನಾವು ಯಾವ ಒಂದು ತಾಲ್ಲೂಕ್ ಕಛೇರಿಗೇ ಹೋಗಲಿ—ಅಲ್ಲಿರತಕ್ಕ ಒಬ್ಬ ಆ ತಾಶೀಲ್ದಾರ ಅಲ್ಲಿಗೆ ಬರತಕ್ಕ ಒಬ್ಬ ಬೋರೇಗೌಡನಿಗೆ ತಾನೆದ್ದು ನಮಸ್ಕಾರ ಮಾಡಿ ಬನ್ನಿ ಗೌಡರೇ; ತಾವೇಕೆ ಬಂದಿದ್ದೀರಿ, ತಮಗೇನು ಕೆಲಸವಾಗಬೇಕು ಎಂದು ಯಾವ ತಾಲ್ಲೂಕ್ ಕಛೇರಿಯಲ್ಲಾದರೂ ಹೀಗೆ ಮಾಡಿದ್ದು ಉಂಟೆಂಬುದನ್ನು ತಾವುಗಳು ಎಲ್ಲಾದರೂ ಕೇಳಿದ್ದೀರಾ? ಹಾಗೆ ಕೇಳಿದ್ದರೆ ನನಗೆ ಆ ನಿದರ್ಶನ ತೋರಿಸಿ? ಆ ಬಡಬೋರೇಗೌಡ ಸಾವಿರ ರೂಪಾಯಿ ಕಂದಾಯ ಕೊಡುತ್ತಿದ್ದರೂ ಆತನಿಗೆ ಮರ್ಯಾದೆಯಿಲ್ಲ; ಆತನನ್ನು ಒಂಟಿಕಾಲಲ್ಲಿ ನಿಲ್ಲಿಸಿ, ಜವಾನನಿಂದ ಹೊರಗಡೆ ದಬ್ಬಿಸಿ, ಆಡಳಿತ ನಡೆಸುತ್ತಿರುವುದನ್ನು ನೋಡಿದರೆ ಅದಕ್ಕೆ ಏನು ಹೇಳಬೇಕು? ಅದೇನು ದಬ್ಬಾಳಿಕೆಯೋ? ದೌರ್ಜನ್ಯವೋ? ಇಷ್ಟು ಜನ ಮಂತ್ರಿಗಳು ದೇಶವನ್ನು ಎಡಬಿಡದಂತೆ ಸುತ್ತುತ್ತಿದ್ದಾರೆ. ಇವರಲ್ಲಿ ಯಾರಾದರೂ ಆ ತಾಲ್ಲೂಕ್ ಕಛೇರಿಗೆ ಹೋಗಿ ಅಲ್ಲಿ ಯಾವ ರೀತಿ ಕೆಲಸಗಳು ನಡೆಯುತ್ತಿವೆಯೆಂಬುದನ್ನು ಯಾರಾದರೂ ನೋಡಿದ್ದಾರೆಯೇ? ಇವರು ಅಲ್ಲಿಗೆ ಹೋದಾಗ ಟಿ.ಬಿ.ಯಲ್ಲಿ ಇವರು ತಂಗಿ ಅಲ್ಲಿ ತಮ್ಮ ವ್ಯವಹಾರಗಳನ್ನು ನಡೆಸುತ್ತಾರೆ. ಅಲ್ಲಿ ಇವರು ಆ ತಾಶೀಲ್ದಾರ, ಇಂಜಿನಿಯರ್ ಮತ್ತು ಕಂಟ್ರಾಕ್ಟರುಗಳ ವೆಚ್ಚದಲ್ಲಿ ಬೀರ್, ಬ್ರಾಂಡಿ, ಕುಡಿಯುತ್ತಾರೆ, ಕೋಳಿ ಬಾತ್ ತಿನ್ನುತ್ತಾರೆ, ಚಿಕನ್ ಬಾತ್ ತಿನ್ನುತ್ತಾರೆ; ಇವರು ಏನು ಬೇಕಾದರೂ ತಿನ್ನಲಿ ಯಾವ ಭೋಗ ವಿಲಾಸಗಳನ್ನು ಬೇಕಾದರೂ ಪ್ರೋತ್ಸಾಹಿಸಿಕೊಳ್ಳಲಿ. ಆದರೆ ಹಾಗೆ ಇವರು ಆ ಕಂಟ್ರಾಕ್ಟರ್, ಇಂಜಿನಿಯರ್ ಮತ್ತು ತಾಶೀಲ್ದಾರರ ವೆಚ್ಚದಲ್ಲಿ ಇವರು ತಮ್ಮ ಭೋಗವಿಲಾಸಗಳನ್ನು ಆಗಮಾಡಿಕೊಂಡು ಮತ್ತೆ ತಮ್ಮ ಮಾಮೂಲು ಭತ್ಯೆಯನ್ನು ಇವರು ಪಡೆಯುತ್ತಿದ್ದರೆ ದೇಶ ಮುಂದಕ್ಕೆ ಬರುವುದು ಯಾವಾಗ? ಈ ದಿವಸ ನಮ್ಮ ಕಣ್ಣಲ್ಲಿ ಕಣ್ಣೀರಿಡುವುದಕ್ಕೂ ಕೂಡ ಒಂದು ಹನಿ ನೀರಿಲ್ಲ. ನಾವು ಈ ಅಹವಾಲನ್ನೆಲ್ಲಾ ಯಾರಲ್ಲಿ ಹೇಳಿಕೊಳ್ಳಲಿ? ನಾವು ನಮ್ಮ ಅಹವಾಲನ್ನು ಗೋಡೆಗೆ ಹೇಳಿಕೊಳ್ಳಬೇಕೇ? ಕಲ್ಲಿಗೆ ಹೇಳಿಕೊಳ್ಳಬೇಕೇ? ಯಾರಿಗೆ ಹೇಳಿಕೊಳ್ಳಬೇಕು? ನಮ್ಮದು ಬಡತನದ ದೇಶ; ಇದರ ಪುನರುತ್ಥಾನವಾಗಬೇಕು. ಜನರು ಹೊಟ್ಟೆ ಬಟ್ಟೆಗಿಲ್ಲದೆ ನರಳುತ್ತಿರುವ ಕಾಲದಲ್ಲಿ ದೊಡ್ಡಮೇಟಿಯವರೂ—ನಾನೂ ಹೀಗೆ ಲೋಲೋಪ್ತಿಯಲ್ಲಿ ಮೆರೆಯುತ್ತಿದ್ದರೆ ದೇಶದ ನಿರ್ಗತಿಕ ಜನರನ್ನು ದೇವರೇ ಕಾಪಾಡಬೇಕು. ನಾನು ಏತಕ್ಕೆ ಶ್ರೀಮಾನ್ ದೊಡ್ಡಮೇಟಿ ಅವರ ಹೆಸರನ್ನು ಹೇಳುತ್ತಿದ್ದೇನೆಂದರೆ ಅವರು ನನಗೆ ದೊಡ್ಡ ಆಪ್ತ ಸ್ನೇಹಿತರು. ಆದರೆ ನಾನು ಯಾರನ್ನೂ ಮೂದಲಿಸುವುದಕ್ಕಾಗಿ ಇದನ್ನು ಹೇಳುತ್ತಿಲ್ಲ. ಆದರೆ ದೊಡ್ಡಮೇಟಿಯವರು ನಾನು ಹೇಳತಕ್ಕದ್ದನ್ನು ತಪ್ಪಾಗಿ ತಿಳಿದುಕೊಳ್ಳುವುದಿಲ್ಲ ಎಂದು ನಾನು ಅವರನ್ನು ಉದ್ದೇಶಿಸಿ ಹೇಳುತ್ತಿದ್ದೇನೆ. ಅವರಲ್ಲಿ ಅಂಥ ಒಂದು ಔಚಿತ್ಯವಿದೆ.

(ಶ್ರೀ ಎಸ್. ಗೋಪಾಲಗೌಡ)

ಇನ್ನು ಹೈಕೋರ್ಟು ಮತ್ತು ಪಿ. ಎಸ್. ಸಿ. ಇವುಗಳ ವಿಚಾರವನ್ನೂ ಈ ಆಯೋಗದವರು ಹೇಳಿದ್ದಾರೆ. ಅವರು ಹೇಳಿರತಕ್ಕ ವಿಚಾರ ಬಹಳ ಮುಂದುವರಿದುದಾಗಿದೆ. ಆ ಗಜೇಂದ್ರಗಡ್ಕರ್ ಆಯೋಗದವರು ನೌಕರರಿಗೆ ಕೊಡುತ್ತಿರುವ ಆ ತುಟ್ಟಿಭತ್ಯ ಎನಿಸಿದ ಅದನ್ನು ಅವರ ಸಂಬಳದಲ್ಲಿ ಅಥವಾ ಅವರ ವೇತನದಲ್ಲಿ ವಿನಿಮಯಗೊಳಿಸಬೇಕೆಂದು ಹೇಳಿರತಕ್ಕ ವಿಚಾರವೇನಿದೆ ಅದು ಈ ದಿನ ಸರ್ಕಾರದವರನ್ನು ಘಾಬರಿಗೊಳಿಸತಕ್ಕ ವಿಚಾರವಾಗಿದೆ. ಇಲ್ಲಿ ನಮ್ಮ ನೌಕರರಿಗೆ ಕೊಡುತ್ತಿರುವ ಸಂಬಳವನ್ನು ಆ ಅಮೇರಿಕಾಕ್ಕೆ ಹೋಲಿಸಿದರೆ ಇದು ಬಹಳ ಕಡಮೆ ಎಂತಲೇ ಹೇಳಬೇಕು. ಅಲ್ಲಿ ಒಬ್ಬ ಚಪ್ರಾಸಿಗೆ ಕೊಡತಕ್ಕ ಸಂಬಳವನ್ನು ನಾವಿಲ್ಲಿ ಒಬ್ಬ ಡೆಪ್ಯುಟಿ ಕಮಿಷನರಿಗೆ ಕೊಡುತ್ತಿದ್ದೇವೆ. ಇಲ್ಲಿ ನಮ್ಮ ರಾಷ್ಟ್ರದ ಜೀವನದ ಮಟ್ಟ ಮೂರಾಣೆಯದು. ತುಕ್ಕೊಳ್ ಆಯೋಗದವರು ಇದ್ದ 108 ಸಂಬಳದ ಶ್ರೇಣಿಗಳನ್ನು 27ಕ್ಕೆ ಇಳಿಸಿದ್ದಾರೆ ಇದು ಬಹಳ ಸ್ವಾಗತಾರ್ಹವಾದ ವಿಚಾರ. ಇದು ಆ ಗಜೇಂದ್ರಗಡ್ಕರ್ ಆಯೋಗಕ್ಕಿಂತಲೂ ಒಂದು ಹೆಜ್ಜೆ ಹೆಚ್ಚು ಪ್ರಗತಿದಾಯಕವಾದುದಾಗಿದೆ ಆದರೆ ನಾನು ಇದನ್ನು ಇನ್ನೂ 10ಕ್ಕೆ ಇಳಿಸಬೇಕೆಂದು ಹೇಳತಕ್ಕವನು. ಒಂದಕ್ಕೆ ಹತ್ತರ ದಾಮಾಷದಲ್ಲಿ ದೇಶದ ಜನರ ಆದಾಯವಿರಬೇಕು. ಕನಿಷ್ಠ ಆದಾಯ ನೂರು ರೂಪಾಯಿಗಳಿದ್ದರೆ ಗರಿಷ್ಠ ಆದಾಯ ಒಂದು ಸಾವಿರ ರೂಪಾಯಿಗಳು ಇರಬೇಕು. ಅಲ್ಲದೆ ಒಂದು ತಿಂಗಳ ವೆಚ್ಚ 1,500 ರೂಪಾಯಿಗಳಿಗಿಂತ ಜಾಸ್ತಿಯಾಗಿರಬಾರದು. ಇದು ಬಡತನದ ದೇಶ, ಬಡವರು ಇರತಕ್ಕ ದೇಶ; ಮೂರಾಣೆ ಸಂಪಾದನೆಯ ಜನರಿರತಕ್ಕ ದೇಶ; ಆದ್ದರಿಂದ ಇಲ್ಲಿ ನಾವು ಅಷ್ಟು ಜಾಸ್ತಿ ಖರ್ಚುಮಾಡುವುದು ಸರಿಯಾದ್ದಲ್ಲ; ಉಚಿತವಾದುದಲ್ಲ. ಇದೇ ವಿಚಾರವನ್ನು ಒಂದಾವರ್ತಿ ಮೊರಾರ್ಜಿಯವರೊಡನೆ ಮಾತನಾಡಿದ್ದ ಲೋಹಿಯ ಅವರು ಮಧ್ಯೆ ಅಕಾಲ ಮರಣಕ್ಕೆ ಅವರು ತುತ್ತಾದರು. ಈ ಹಿಂದೆ ಇಲ್ಲೇ ಒಂದು ಎಕಾನಮಿ ಮೆಜರ್ಸ್ ಕಮಿಟಿ ಎಂದು ಎ. ಜಿ. ರಾಮಚಂದ್ರರಾಯರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಲಾಗಿತ್ತು. ಅವರು ಖರ್ಚಿನ ಬಗ್ಗೆ ಒಂದು ಸಮಿತಿಯನ್ನು ಹಾಕಬೇಕೆಂದು ಶಿಫಾರಸು ಮಾಡಿದ್ದರು. ಆದರೆ ಇಲ್ಲಿ ನಮ್ಮ ಸರ್ಕಾರದವರು ಹೇಗೋ ತೆರಿಗೆಯನ್ನು ಹಾಕಿದರೆ ವೆಚ್ಚಕ್ಕೆ ಹಣ ಬರುತ್ತದೆ ಎಂದು ಉಬ್ಬು ತೆರಿಗೆಯನ್ನು ಹಾಕಬಹುದು, ಹಣ ಬರುತ್ತದೆ. ಅದರಿಂದ ಅವರು ತಮ್ಮ ಸ್ನೋ—ಇತ್ಯಾದಿ ಭೋಗವಸ್ತುಗಳನ್ನು ಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಇನ್ನೂ ಅನೇಕ ವಿಧವಾದ ಭೋಗವಿಲಾಸ ವೈಭವದ ಜೀವನ ಇವರು ನಡೆಸಬಹುದು. ಆದರೆ ಇಷ್ಟೆಲ್ಲಾ ವೆಚ್ಚಗಳಿಗೂ ಆ 1,500 ರೂಪಾಯಿಗಳು ಸಾಲುತ್ತದೆ. ಆದ್ದರಿಂದ ನಮ್ಮಲ್ಲಿರತಕ್ಕ ಆ ಅಧಿಕಾರಿಗಳಿಗೆ ಆಗಲೀ ಅಥವಾ ಆ ತಾತಾ—ಬಿರ್ಲಾಗಳಿಗೇ ಆಗಲೀ ತಿಂಗಳಿಗೆ ಏನೇ ಖರ್ಚುಮಾಡಿದರೂ ಅವರಿಗೆ 1,500 ರೂಪಾಯಿಗಳು ಸಾಕು. ಸ್ವಂತವಾಗಿ ವಿಮಾನದಲ್ಲಿ ಓಡಾಡುವುದು, ಸ್ವಂತವಾಗಿ ಸೆಲೂನ್‌ಗಳಿಗೆ ಹೋಗುವುದು, ಒಂದೇ ದಿವಸಕ್ಕೆ ಸಾವಿರ ರೂಪಾಯಿಗಳನ್ನು ಖರ್ಚುಮಾಡುವುದು —ಇಂತಹ ಆಡಂಬರವಾದ ಜೀವನವನ್ನು ನಾವು ಜಾಗ್ರತೆಯಾಗಿ ಕೈಬಿಡಬೇಕು. ಇಲ್ಲದಿದ್ದರೆ ನಿರುದ್ಯೋಗದಲ್ಲಿರತಕ್ಕ ಕೋಟ್ಯಾಂತರ ಜನಗಳನ್ನು ಮೇಲೆ ಎತ್ತುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಚತುರ್ಥ ಯೋಜನೆಯಲ್ಲಿ ಅವರ ಜೀವನವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನೀರಾವರಿ ಸೌಕರ್ಯಗಳನ್ನೂ ಸಹ ಕೊಡುವುದಕ್ಕಾಗುವುದಿಲ್ಲ. ಕಾವೇರಿ ಮತ್ತು ಗೋದಾವರಿ ಅಣೆಕಟ್ಟುಗಳನ್ನು ಕೊಡುವುದಕ್ಕಾಗುವುದಿಲ್ಲ. ಸರ್ಕಾರದ ನೌಕರರಿಗೆ ಸಂಬಳಸಾರಿಗೆಗಳನ್ನು ತೃಪ್ತಿಕರವಾಗಿ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ವೆಚ್ಚದ ಮೇಲೆ ಮಿತಿಯನ್ನು ಹಾಕುವಂಥ ಕೆಲಸದ ಬಗ್ಗೆ ರಾಜ್ಯ ಮತ್ತು ರಾಷ್ಟ್ರ ಸರ್ಕಾರಗಳು ಕೂತು ಸೇರಿ ಚರ್ಚೆಮಾಡಿ ಒಂದು ಒಳ್ಳೆಯ ವಿಧಾನವನ್ನು ಕಂಡುಹಿಡಿಯಬೇಕು. ಹೆಚ್ಚು ಭಾಗವನ್ನು ಹೊರಗಿನಿಂದ ತಂದು ನಮ್ಮ ಸರ್ಕಾರದ ಆದಾಯವನ್ನು ಹೆಚ್ಚಿಸಬೇಕು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

2-00 P.M.

ಜೀವನವೆಚ್ಚ ಇತ್ತೀಚೆಗೆ ಏರುತ್ತಿದೆ. ತುಟ್ಟಿಭತ್ಯವನ್ನು ಸಂಬಳದಲ್ಲಿ ಜಾಗ್ರತೆಯಾಗಿ ವಿಲೀನಗೊಳಿಸಬೇಕು. ಇಲ್ಲದಿದ್ದರೆ ಅದರಿಂದ ತುಂಬಾ ಅಪಾಯವಾಗುತ್ತದೆ. ಹಿಂದೆ ಬ್ರಿಟಿಷರ ಕಾಲದಲ್ಲಿ 19 ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ಸೈನಿಕನಿದ್ದ. ಇವತ್ತು ಅದು 180 ರೂಪಾಯಿಗಳಾಗುತ್ತದೆ. ನಾಯಿ ಬಾಲ ಅಲ್ಲಾಡಿಸುವ ವಿಧಾನವಲ್ಲ, ಬಾಲ ನಾಯಿಯನ್ನು ಅಲ್ಲಾಡಿಸುವ ವಿಧಾನ ನಿಮ್ಮಲ್ಲಿದೆ ಹೇಗೆಂದರೆ, ವೇತನ 15 ರೂಪಾಯಿಗಳಿದ್ದರೆ, ತುಟ್ಟಿಭತ್ಯ

75 ರೂಪಾಯಿಗಳು. ಆದ್ದರಿಂದ 100 ರೂಪಾಯಿಗಳು ಕನಿಷ್ಠ ವೇತನ ಚಪ್ರಾಸಿಯವರಿಗಾಗಲೀ ಅಥವಾ ಕಾರ್ಪೆಂಟರ್ ಅವರಿಗಾಗಲೀ ಇರಬೇಕು. ಅಷ್ಟು ಕನಿಷ್ಠ ಸಂಬಳವನ್ನಾದರೂ ಕೊಡುವ ಯೋಗ್ಯತೆಯನ್ನು ಬೊಕ್ಕಸ ಪಡೆಯಬೇಕು. ಝುಣ್‌ಝುಣ್ ಎಂದು ಎಲ್ಲಾ ಹಣ ಬಂದು ಟ್ರೆಜರಿಗೆ ಬೀಳಬೇಕು. ಹಣವಿಲ್ಲವೆಂಬ ನೆಪವನ್ನು ಶ್ರೀಮತಿ ಇಂದಿರಾಗಾಂಧಿಯವರು ಈ ರಾಷ್ಟ್ರದ ಮುಂದೆ ಇಡಬಾರದು. ಮಾನ್ಯ ಶ್ರೀ ವೀರೇಂದ್ರಪಾಟೀಲರಾಗಲೀ, ಅಥವಾ ಮಾನ್ಯ ಶ್ರೀ ರಾಮಕೃಷ್ಣಹೆಗಡೆಯವರಾಗಲೀ, ತಾವೇ ಆಗಲೀ ದಯವಿಟ್ಟು ಹಣದ ಕೊರತೆಯನ್ನು ಸಮಸ್ಯೆಗಳ ಪರಿಹಾರದ ಮುಂದೆ ಯಾವತ್ತೂ ಇಡಬ ರದು. ಹಣವಿಲ್ಲದೆ ಎಂದು ಯಾವತ್ತೂ ಹೇಳಬಾರದು. ಹಣ ಇದ್ದೇ ಇದೆ. ಹಿಂದೆ 7 ತರಗತಿಗಳಿಗೆ ಒಬ್ಬ ಉಪಾಧ್ಯಾಯ, 18 ರೂಪಾಯಿಯ ಒಬ್ಬ ಸೈನಿಕ, ಒಬ್ಬ ಪೋಲೀಸ್—ಇಂಥಾ ನೌಕರರು ಇದ್ದರು. ಇದೇ ಸರ್ಕಾರಕ್ಕೆ 200 ಕೋಟಿ ರೂಪಾಯಿಗಳನ್ನು ತಂದುಕೊಡುತ್ತೇವೆ. ಅದಕ್ಕೆ ಬೇಕಾದಷ್ಟು ಮಾರ್ಗಗಳಿವೆ, ನಿಮಗೆ ಮನಸ್ಸು ಇಲ್ಲ. ಅಕ್ಕಿಯಮೇಲೆ ಆಸೆ, ನೆಂಟರಮೇಲೆ ಪ್ರೀತಿ. ಚುನಾವಣೆಯನ್ನು ಗೆಲ್ಲಬೇಕು, ಜನರ ಮೂಗಿಗೆ ತುಪ್ಪಾ ಹಚ್ಚುತ್ತಾ ಇರಬೇಕು, ಅವರು ನಾಲಗೆಯಿಂದ ತುಪ್ಪವನ್ನು ನೆಕ್ಕಬೇಕು. ನಿಮ್ಮ ನೀತಿ ಮಧ್ಯಕಾಲೀನ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಮಣ್ಣನ್ನು ತಿಂದಿತು. ಬಿಹಾರದಲ್ಲಿ ಮಣ್ಣು ಮುಕ್ಕಿತು. ಪಂಜಾಬಿನಲ್ಲಿ ಹೋಯಿತು. ಹಿಂದೆ ಚರ್ಚಿಲ್ ಒಂದು ಮಾತನ್ನು ಹೇಳುತ್ತಿದ್ದರು. ನನ್ನ ಸಾಮ್ರಾಜ್ಯದಲ್ಲಿ ಸೂರ್ಯ ಅಸ್ತಂಗತನಾಗುವುದಿಲ್ಲವೆಂದು. ಅವರ ರಾಜ್ಯ ಕ್ರಮೇಣ ಹೇಗೆ ಮುಳುಗಿಹೋಯಿತೋ ಹಾಗೆ ನಿಮ್ಮ ರಾಜ್ಯವೂ ಕೂಡ ಅನತಿದೂರದಲ್ಲಿಯೇ ಈ ರಾಷ್ಟ್ರದಲ್ಲಿ ಮುಳುಗಿಹೋಗುತ್ತದೆ. ಆ ಮಾತಿನಲ್ಲಿ ಏನೂ ಸಂದೇಹವಿಲ್ಲ. ಈ ರಾಜ್ಯವೂ ಸಹ ಮುಳುಗಿಹೋಗುತ್ತದೆ. ಅದಕ್ಕೆ ಸಂದೇಹ ಬೇಡ. ಅದಕ್ಕೆ ಕೆಲವು ಮಂಡಲಗಳು ಬೇಕು. ಮಂಡಲ ಅಂದರೆ 40 ದಿವಸಗಳು ಮಾತ್ರ ಅಷ್ಟೇ. ಮೂಡಿದ್ದು ಮುಳುಗುತ್ತದೆ. ಯಾವುದೂ ಶಾಶ್ವತವಲ್ಲ. ಎಲ್ಲವೂ ನಶ್ವರವೇ. ನಾವೂ ಶಾಶ್ವತವಲ್ಲ, ನೀವೂ ಶಾಶ್ವತವಲ್ಲ ಅಹಂಭಾವ ನಮಗೆ ಬೇಡ. ನಮ್ಮ ಕುರ್ಚಿ ಭದ್ರವೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು ಅದು ಊಟ ಹಾಕುವುದಿಲ್ಲ. ನಿಮ್ಮ ನಿಯ್ಯತ್ತು, ನಿಮ್ಮ ದುಡಿಮೆ, ನಿಮ್ಮ ಕಾರ್ಯಪಟುತ್ವ ನಿಮಗೂ ನಮಗೂ ಅನ್ನ ಹಾಕುತ್ತದೆ. ಜೀವನವೆಚ್ಚ ಏರುತ್ತಿದೆ. ತುಟ್ಟೀ ಭತ್ಯವನ್ನು ಅದಕ್ಕನುಗುಣವಾಗಿರುವಂತೆ ಸರ್ಕಾರದ ನೌಕರರಿಗೆ ಕೊಡಬೇಕು. ಬಡ ನೌಕರರಿಗೆ ತಡೆಹಿಡಿದಿರುವ ತುಟ್ಟಿಭತ್ಯವನ್ನು ಬಾಂಡು ರೂಪದಲ್ಲಿ ಕೊಡಬೇಡಿ. ಅದನ್ನು ಆದಷ್ಟು ಜಾಗ್ರತೆಯಾಗಿ ನಗದಾಗಿ ಕೊಡಿ. ಇನ್ನು ತುಕೋಳ್ ಆಯೋಗದವರ ವರದಿಯಲ್ಲಿ ಎಲ್ಲವನ್ನೂ ಒಪ್ಪಿಕೊಳ್ಳಬೇಕೆಂದಲ್ಲ. ಅದರಲ್ಲಿ ಕೆಲವನ್ನು ಕೂಡಲೇ ಒಪ್ಪಿ ಜಾರಿಗೆ ತರಬೇಕು. ಅದರಲ್ಲಿ ಡಿವಿಷನಲ್ ಕಮಿಷನ್‌ರವರ ಹುದ್ದೆಯನ್ನು ರದ್ದುಮಾಡಿ ಎಂದು ಹೇಳಿದ್ದಾರೆ. ಅದನ್ನು ಈಗಿಂದೀಗಲೇ ರದ್ದುಮಾಡಿ 8 ಜನರು ಸೂಪರಾನ್ಯುಯೇಷನ್ ಆಗಿದ್ದಾರೆಂದು ಹೇಳಿದ್ದಾರೆ. ಅವರನ್ನು ಪೂರ್ತಿ ಸಂಬಳ ಕೊಟ್ಟು ಕೂಡಲೇ ಮನೆಗೆ ಕಳುಹಿಸಿ. ಮತ್ತೆ ಪೊಲಿಟಿಕಲ್ ಸೆಲೆಕ್ಷನ್ಸ್ ಮಾಡಬೇಡಿ. ಇನ್‌ಸ್ಪೆಕ್ಟರ್‌ಗಿಂತಲೂ ಹೆಚ್ಚು ಸರ್ವಿಸ್ ಆದವರು ಅವನ ಕೈಕೆಳಗೆ ಕೆಲಸಮಾಡುವುದು ಸರಿಯಲ್ಲ. ಯಾವನೋ ಚಿಕ್ಕವಯಸ್ಸಿನವನು ಐ. ಪಿ. ಸ್ ಮಾಡಿದ್ದಾನೆಂದು ಅವನನ್ನು ಎಸ್. ಪಿ. ಮಾಡುವುದಕ್ಕೆ ಬಿಡಬೇಡಿ. ಸೆಲಕ್ಷನ್ಸ್ ಪೋಸ್ಟ್ ಮಾಡುವುದು ಬೇಡ. ಅವರಿಗೇನೂ ತಿಳಿಯದೇ ಇದ್ದರೂ ಯಾವುದೋ ಒಂದು ಚಮತ್ಕಾರದಿಂದ ಐ.ಎ.ಎಸ್. ಅಥವಾ ಐ.ಎಫ್.ಎಸ್. ಅಥವಾ ಐ.ಪಿ.ಎಸ್. ಮಾಡಿಬಂದು ಫಾರಿನ್ ಸರ್ವಿಸ್ ಮಾಡಿಬಂದಿದ್ದೇನೆಂದು 25 ವರ್ಷಗಳಿಂದ ದುಡಿದಿರುವ ಮನುಷ್ಯನ ಮೇಲೆ ಅವನನ್ನು ಕುಳ್ಳಿರಿಸಿದರೆ ಆಡಳಿತದಲ್ಲಿ ಹುಡುಗಾಟಿಕೆ ಮಾಡುವ ಸನ್ನಿವೇಶ ಇವರು ಹಾಕಿಕೊಂಡಿದ್ದಾರೆ. ಇದರಿಂದ ನೀವೂ ಪಶ್ಚಾತ್ತಾಪ ಪಡುತ್ತೀರಿ, ದೇಶವೂ ಪಶ್ಚಾತ್ತಾಪ ಪಡುತ್ತದೆ. ಎಫ್. ಐ. ಆರ್. ಓದುವುದಕ್ಕೂ ಬರುವುದಿಲ್ಲ, ಅತನು ಬರೆದೂ ಇಲ್ಲ. ಅಂತಹವನು ತಕ್ಷಣ ಬಂದು ಅಡ್ಮಿನಿಸ್ಟ್ರೇಷನ್ ನಡೆಸುವುದು ಅವರ ಹಣೆಯಲ್ಲಿಯೇ ಬರೆದಿರುವುದಿಲ್ಲ. ಸಂಬಳ ಅವರ ಬುದ್ಧಿವಂತಿಕೆಗೋಸ್ಕರ ಜಾಸ್ತಿ ಕೊಡಿ. 50 ವರ್ಷ ಆದವನ ತಲೆಯಮೇಲೆ ಕೇವಲ 24 ವರ್ಷಗಳು ಆದವನನ್ನು ಕುಳ್ಳಿರಿಸಬೇಡಿ. ಒಟ್ಟಿನಲ್ಲಿ ಸೆಲೆಕ್ಷನ್ ಪೋಸ್ಟ್ ಬೇಡ. ಚೆನ್ನಾಗಿ ದುಡಿಯುವವರಿಗೆ ಹೆಚ್ಚಿನ ಉತ್ತೇಜನ ಕೊಡೋಣ. ಕೆಲವರು ಮೂರ್ಖರು ಇದ್ದಾರೆ. ಜಾತೀಯವಾದವನ್ನು ತರುವವರೂ ಇದ್ದಾರೆ. ಕೆಲವು ಕಡೆಗಳಲ್ಲಿ ದುಡ್ಡು, ಕಬ್ಬಿಣ, ಸಿಮೆಂಟ್, ತಿನ್ನುವವರೂ ಇದ್ದಾರೆ. ಧೈರ್ಯವಿದ್ದರೆ ಅಂತಹವರನ್ನು ಗಲ್ಲಿಗೆ ಹಾಕಿ ಅಥವಾ ಮನೆಗೆ ಕಳುಹಿಸಿ ಅಥವಾ ನಿವೃತ್ತಿಮಾಡಿ. ಒಟ್ಟಿನಲ್ಲಿ ರಾಜ್ಯಕ್ಕೆ ಅಥವಾ ರಾಷ್ಟ್ರಕ್ಕೆ ನಷ್ಟವಾಗಬಾರದು. ಕೆಲಸ ಮಾತ್ರ ಎಷ್ಟೇ ಇರಲಿ, ಸಾರ್ವಜನಿಕರಿಂದ ಒಂದು ಬಿಲ್ಲೇ ಅಥವಾ ಒಂದು ಪೈ ಲಂಚ ತೆಗೆದುಕೊಳ್ಳಬಾರದು. ಅಂತಹವರೇನಾದರೂ ಇದ್ದರೆ, ಅವರು ತಲೆಕೆಳಕಾಗಿ ನಿಂತರೂ ಅವರನ್ನು ಬಿಡಬೇಡಿ. ಅಂತಹವರನ್ನು ಬೇಕಾದರೆ ಮೆರವಣಿಗೆ ಮಾಡಿ. ಇಲ್ಲದಿದ್ದರೆ

(ಶ್ರೀ ಎಸ್. ಗೋಪಾಲಗೌಡ)

ರಾಷ್ಟ್ರವನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಹೆಚ್ಚು ಹೆಚ್ಚು ಸಂಬಳ ಕೊಡುವುದು, ಕಡಿಮೆ ಕೆಲಸ. ಆಫೀಸಿಗೆ ಹೋಗಿ ಸಾಹೇಬರು ಎಲ್ಲಿ ಹೋಗಿದ್ದಾರೆಂದರೆ, ಅವರು ಎಲ್ಲಿ ಹೋಗಿದ್ದಾರೋ ಯಾವಾಗ ಬರುತ್ತಾರೋ, ಎಲ್ಲಿ ಊಟಮಾಡುತ್ತಾರೋ ಒಂದೂ ಗೊತ್ತಿಲ್ಲವೆಂದು ಹೇಳುತ್ತಾರೆ. ಯಾವಾಗ ನೋಡಿದರೂ ಸಾಹೇಬರು, ವಿಮಾನದಲ್ಲಿ ಹೋಗುವುದು, ಯಾವಾಗ ನೋಡಿದರೂ ದೆಹಲಿಯಾತ್ರೆ ಮಾಡುವುದು, ಯಾವಾಗ ನೋಡಿದರೂ ಸೆಮಿನಾರ್, ಯಾವಾಗ ನೋಡಿದರೂ ನೃತ್ಯ, ವಿಲಾಸ, ವೈಭವ. ಯಾರ ಅಪ್ಪನ ಮನೆಯ ದುಡ್ಡು ? ಯಾರ ಆಸ್ತಿಯು ಪಾಲಿದು ! ಯಾವ ಕೆಲಸಕ್ಕೆ ಹೆಚ್ಚಿನ ವೇತನ ? ಏತಕ್ಕಾಗಿ ನಿಮಗೆ ರಾಜ್ಯಾಂಗ ರಕ್ಷಣೆ ಕೊಟ್ಟಿದೆ ? ಆ ರಾಜ್ಯಾಂಗವನ್ನು ನಾಳೆ ತುಳಿಯುತ್ತೇವೆ, ಆ ರಕ್ಷಣೆಯನ್ನು ಕಿತ್ತು ಹಾಕುತ್ತೇವೆ. ಕೆಲಸಕ್ಕೆ ತಕ್ಕ ಕೂಲಿ. ಮುಖ ನೋಡಿ ಮಣೆ ಹಾಕುವ ವಿಧಾನವಲ್ಲ. ಮಂತ್ರಿ ಮಗ ಆದ ತಕ್ಷಣ ಅವನಿಗೆ ಸಾವಿರ ರೂಪಾಯಿ ಸಂಬಳ, ಚಪ್ರಾಸಿಯ ಮಗ ಅದ ಮಾತ್ರಕ್ಕೆ ಅವನಿಗೆ 15 ರೂಪಾಯಿ ಸಂಬಳ. ಇದು ಹೇಗೆ ! ಅಂಥ ಪಬ್ಲಿಕ್ ಸರ್ವಿಸ್ ಕಮಿಷನ್ ರದ್ದುಪಡಿಸಬೇಕು. ಮುಖ ನೋಡಿ ಮಣೆ ಹಾಕುವ ಪಬ್ಲಿಕ್ ಸರ್ವಿಸ್ ಕಮಿಷನ್ ರದ್ದಾಗುತ್ತದೆ. ಅನಿವಾರ್ಯವಾಗಿ ರಕ್ತಪಾತಕ್ಕೆ ಎಡೆ ಕೊಡಬೇಡಿ. ವಸ್ತುಸ್ಥಿತಿಯನ್ನು ಆಮೂಲಾಗ್ರವಾಗಿ ವಿಚಾರ ಮಾಡೋಣ. ತಜ್ಞರು ಕೊಟ್ಟಿರುವಂತಹ ಸಲಹೆ, ಶಿಫಾರಸುಗಳನ್ನು ವಿಚಾರ ಮಾಡೋಣ. ಮನಬಂದಂತೆ ಓಡಾಡುವುದನ್ನು ನಿಲ್ಲಿಸೋಣ, ರಾಷ್ಟ್ರ ದೊಡ್ಡದು, ಸಮಾಜ ದೊಡ್ಡದು, ಜನತೆಯು ನಮ್ಮ ಯಜಮಾನರು, ಜನತೆಗಾಗಿ ನಾವಿದ್ದೇವೆ, ಜನತೆಗೆ ನಾವು ಸೇವೆಯನ್ನು ಸಲ್ಲಿಸಬೇಕು, ಇದನ್ನು ನಾವು ಯಾವಾಗಲೂ ಗಮನದಲ್ಲಿಟ್ಟುಕೊಳ್ಳೋಣ. ಸರ್ಕಾರದ ಕೆಲಸ ದೇವರ ಕೆಲಸ. ಯಾವ ದೇವರು ಸ್ವಾಮಿ ? ಪೂಜಾರಿಯು ದೇವರ ಮೈ ತೊಳೆದರೂ ತೊಳೆದ, ಕುಂಕುಮ ಇಟ್ಟರೂ ಇಟ್ಟ, ಮಂಗಳಾರತಿ ಮಾಡಿದರೂ ಮಾಡಿದ, ಸ್ನಾನವನ್ನು ಮಾಡದೆ ಹೋದರೂ ಹೋದ. ದೇವರ ತಲೆಯ ಮೇಲೆ ನೀರೂ ಇಲ್ಲ, ಬಿಲ್‌ಪತ್ರೇನೂ ಇಲ್ಲ. ಈ ದೇವರ ಕೆಲಸ ಮಾಡುವುದಕ್ಕೆ ಬಡ ಬೋರೇಗೌಡನ ಚರ್ಮವನ್ನು ಸುಲಿದು ಬಿಡುತ್ತಿದ್ದಾರೆ. ಈಗ ಮಾನ್ಯ ಹಣಕಾಸಿನ ಮಂತ್ರಿಯವರು ಬಂದರು. ನಾನು ಅನೇಕ ವಿಷಯಗಳನ್ನು ಹೇಳಿದ್ದೇನೆ. ತಾವು ಆ ಭಾಷಣವನ್ನು ಓದಬೇಕು. ಮಾತನಾಡಿ ಕಾಲ ಮೀರಿದೆ. ಕಾಂಗ್ರೆಸ್ಸಿಗೆ ಕೊಟ್ಟ ಕಾಲ ಪೂರ್ತಿ ಮೀರಿದೆ. ಹೇಗೆ 100 ತಪ್ಪುಗಳ ನಂತರ ಶಿಶುಪಾಲನ ವಧೆಯಾಯಿತೋ, ಹಾಗೆ ನಿಮ್ಮದು 99 ಆಗಿದೆ. ಇನ್ನು ಒಂದು ಇದೆ. ನೀವು ಮಾಡುತ್ತೀರಿ, ನಾವು ಮಾಡುತ್ತೇವೆ, ಅಥವಾ ಮತ್ತೊಬ್ಬ ಮಾಡಬಹುದು. ಅದು ದುಃಖದ ವಿಷಯ. 1969ರಂದು ಗಾಂಧಿ ಶತಾಬ್ದಿ. ಕಾಂಗ್ರೆಸ್ಸನ್ನು ದೊಡ್ಡವರೇಟಿಯವರು ವಿಸರ್ಜನೆ ಮಾಡಲಿ. ಮಹಾತ್ಮ ಗಾಂಧೀಜಿಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಿ, ಹರಿಜನರ ಸೇವೆ ಮಾಡಲಿ, ಬಡವರ ಸೇವೆಯನ್ನು ಮಾಡಲಿ ಮತ್ತು ಈ ರೀತಿ ತಮ್ಮ ಜೀವನವನ್ನು ಸಾರ್ಥಕಗೊಳಿಸಲಿ. ಇದು ನಿಮ್ಮ ನಮ್ಮ ಹಾರೈಕೆ. ಇನ್ನು ಇಲ್ಲಿ ವಿಶ್ರಾಂತಿ ವೇತನವನ್ನು ಹೆಚ್ಚು ಮಾಡಿದ್ದಾರೆ. ಆದರೆ ಇನ್ನೂ ಕೆಲವರು ಪತ್ರ ಬರೆಯುತ್ತಿದ್ದಾರೆ. ಕೆಲವರಿಗೆ ಕೊಟ್ಟಿದ್ದಾರೆ ಕೆಲವರಿಗೆ ಕೊಟ್ಟಿಲ್ಲ. ಕೆಲವರಿಗೆ ಕೋಲು, ಕೆಲವರಿಗೆ ಗರಟೆ ಆಗಬಾರದು. ವೈದ್ಯಕೀಯ ಇಲಾಖೆಯಲ್ಲಿ ಕೆಲವರಿಗೆ ಕೊಟ್ಟಿದ್ದಾರೆ, ಕೆಲವರಿಗೆ ಕೊಟ್ಟಿಲ್ಲ. ನಾನು ಅನೇಕ ವಿಷಯಗಳನ್ನು ಆಸ್ಪತ್ರೆಯಲ್ಲಿ ಇದ್ದಾಗ ಗಮನಕ್ಕೆ ತೆಗೆದುಕೊಂಡಿದ್ದೇನೆ. ಅಲ್ಲಿ ಇನಾಕ್ಯುಲೇಶನ್ ಮಾಡುವವರಿಗೆ ಏನೂ ಕೊಟ್ಟಿಲ್ಲ. ಕೆಲಸ ಜಾಸ್ತಿ ಮಾಡಿ. ಕೆಲಸ ಮಾಡದಿದ್ದರೆ, ಸಂಬಳ ಇಲ್ಲವೆಂದು ಹೇಳಬೇಕು. ಕೆಲಸ ಮಾಡಿದವರಿಗೆ ಮಾತ್ರ ಸಂಬಳ, ಕೆಲಸ ಮಾಡದವರಿಗೆ ಉಪವಾಸ ಇದನ್ನು ದೇವರ ಕೆಲಸ ಎನ್ನುವ ಜಾಗದಲ್ಲಿ ಬರೆಯಿರಿ. ಸಂಬಳಕ್ಕೆ ತಕ್ಕ ಕೆಲಸ, ಕೆಲಸಕ್ಕೆ ತಕ್ಕ ಸಂಬಳ. ರಾಜ್ಯಾಂಗ ತಿದ್ದುಪಡಿ ಮಾಡಬೇಕೆಂದು ಬೇಕಾದರೆ ಹೇಳಿ. ಇಲ್ಲದಿದ್ದರೆ, 5-10 ವರ್ಷ ಕಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕಮಾಡಿಕೊಳ್ಳಿ. ಹೆಚ್ಚು ಕೆಲಸ ಮಾಡಿದವರಿಗೆ ಹೆಚ್ಚು ಸಂಬಳ, ಕೆಲಸ ಮಾಡದವನಿಗೆ ಸೊನ್ನೆ ಸಂಬಳ. ತುಕೋಳ್ ಕಮಿಷನಿನವರಿಗೆ ರಾಜಕೀಯ ವಿಷಯಗಳನ್ನು ಮತ್ತು ರಾಜ್ಯದ ಆದಾಯವನ್ನು ಹೆಚ್ಚಿಸುವ ವಿಚಾರಗಳನ್ನು ಪರಿಶೀಲಿಸಲು ಅವರಿಗೆ ನಾವು ಕೊಟ್ಟಿರಲಿಲ್ಲ. ಅವರು ಡಿವಿಜನಲ್ ಕಮಿಷನರುಗಳನ್ನು ರದ್ದು ಮಾಡಬೇಕು ಮತ್ತು ಗ್ರಾಮ ಮಟ್ಟದಿಂದ ಹಿಡಿದು, ಆಠಾರಾ ಕಚೇರಿಯವರೆಗೂ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಕೆಲವು ಸಲಹೆಗಳು ಸ್ವಾಗತಾರ್ಹವಾಗಿದೆ, ಆದರೆ ಕೆಲವು ಸಲಹೆಗಳನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಈಗ ನಾನು ಒಂದು ಸಲಹೆ ಮಾಡುತ್ತೇನೆ. ಇದಕ್ಕೆ ಒಂದು ಸಮಿತಿಯನ್ನು ಮಾಡಿ, ಅದರಲ್ಲಿ ಹಳೆಯ ನಿವೃತ್ತ ಅಧಿಕಾರಿಗಳು ಇರಬಹುದು, ಮಾನ್ಯ ತುಕೋಳ್‌ರವರು ಇರಬಹುದು, ನಾನು ಅವರಿಗೆ ಈ ವಿಚಾರದಲ್ಲಿ ಕೂಲಂಕಷವಾದ ಟಿಪ್ಪಣಿಯನ್ನು ಕೊಡಲಿಲ್ಲ ಮತ್ತು ಅವರ ಮುಂದೆ ಹಾಜರಾಗಿ ನಾನು ಯಾವ ಸಾಕ್ಷಿಯನ್ನೂ ಕೊಟ್ಟಿಲ್ಲ. ಅದಕ್ಕೆ

(ಇಲ ಬಿ ಗ್ರಂಥಾಲಯ
ಪ್ರಾಪ್ತಿ ಕ್ರಮಾಂಕ Accession No... 4860
ದಿನಾಂಕ Date...

ಅವರು ನನ್ನನ್ನು ಕ್ಷಮಿಸುತ್ತಾರೆಂದು ತಿಳಿದುಕೊಂಡಿದ್ದೇನೆ. ಇದು ಇವತ್ತು ಒಂದು ದೊಡ್ಡ ವಿಷಯ. ಈ ಒಂದು ಯಂತ್ರ ಏನಿದೆ ಇದನ್ನು ಸಮರ್ಪಕವಾದಂತಹ, ದಕ್ಷವಾದಂತಹ ರಾಷ್ಟ್ರದ ಪ್ರಜಾ ಪ್ರಭುತ್ವದಲ್ಲಿ ಕೆಲಸ ಮಾಡತಕ್ಕಂತಹ ಶ್ರೀ ಸಾಮಾನ್ಯನನ್ನು ಗೌರವಿಸತಕ್ಕಂತಹ ಅಧಿಕಾರಿಯನ್ನು ಮಾಡಿ ಆಡಳಿತದ ಜವಾಬ್ದಾರಿಯನ್ನು ಕೊಡಬೇಕು. ಆದ್ದರಿಂದ ಈ ಒಂದು ವರದಿಯ ಸಲಹೆ ಗಳನ್ನು ಪರಿಶೀಲನೆ ಮಾಡುತ್ತೇವೆ, ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ, ಮೂರನೆ ಮತ್ತು ನಾಲ್ಕನೆಯ ದರ್ಜೆಯ ನೌಕರರ ಸಮಸ್ಯೆಗಳನ್ನು ಪರಿಶೀಲನೆ ಮಾಡುತ್ತೇವೆಂದು ಹೇಳದೆ, ಪೂರ್ತಿಯಾಗಿ ಜಾರಿಗೆ ತರಬೇಕು. ಇದರಲ್ಲಿ 8 ಕೋಟಿ ಖರ್ಚು ಬರುವುದಾದರೆ, ಹಳೆಯ ಸಂಪ್ರ ದಾಯದ ಪ್ರಕಾರ, ಯುಗಾದಿಯ ಕೊಡುಗೆಯಂತೆ, 5-5 ರೂಪಾಯಿ ಕೊಟ್ಟು, ಇದರಲ್ಲಿ ಮತ್ತೆ ಅತೃಪ್ತಿಯ ಬೆಂಕಿಯನ್ನು ಉರಿಸಲು ಹೋಗಬೇಡಿ ಎಂದು ಹೇಳುತ್ತೇನೆ. 8—10 ಕೋಟಿ ರೂಪಾ ಯಿಯಾದರೂ, ಪೂರ್ತಿಯಾಗಿ ಕೊಡಿ. ಸೇವೆ ಮಾಡುವವರು ಅವರೇ ತಾನೆ. ಆದ್ದರಿಂದ ಹಣದ ಕೊರತೆಯ ನೆಪವನ್ನು ಮುಂದೆ ಮಾಡಿ, ನ್ಯಾಯವಾದ ಬೇಡಿಕೆಯನ್ನು ಈಡೇರಿಸುವುದರಲ್ಲಿ ಸರ್ಕಾ ರದವರು ವಿಫಲವಾದರೆ, ನಿಮ್ಮ ಸರ್ಕಾರ, ಮರ್ಯಾದೆಯಿಂದ ಗೌರವದಿಂದ, ರಾಜಿನಾಮೆ ಕೊಟ್ಟು ಹೊಣೆಯನ್ನು ಹೋಗಲಾಡಿಸಿಕೊಳ್ಳತಕ್ಕದ್ದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸ ಬೇಕಾಗಿದೆ. ಮತ್ತು ತುಕೋಳ್ ಆಯೋಗದವರಿಗೆ ವಿರೋಧಪಕ್ಷದ ಪರವಾಗಿ, ಅವರು ಪಟ್ಟಿರ ತಕ್ಕಂತಹ ಕಷ್ಟ, ನೀಡಿರತಕ್ಕ ಸಲಹೆಗಳಿಗಾಗಿ, ಅವರನ್ನು ಅಭಿನಂದಿಸಬೇಕಾಗಿದೆ. ಅದೇ ರೀತಿ ಅಧ್ಯಕ್ಷರು ನನಗೆ ಕಾಳಿಜಿವಹಿಸಿಕೊಂಡು ಮಾತನಾಡುವುದಕ್ಕೆ, ಅದರಲ್ಲೂ ಸ್ವಲ್ಪ ದೀರ್ಘಕಾಲ ಮಾತ ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

SRI H. SIDDAVEERAPPA (Harihara).—Before the next hon. Member speaks, I would like to know from the mover of the motion whether the Government will reply to the debate? In my opinion it may be very advisable for the Government to reply because they have heard the discussions so far.

SRI RAMAKRISHNA HEGDE (Minister for Finance, Excise and Youth Welfare).—At the end of the discussion, I am going to reply.

† ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಸ್ವಾಮಿ, ಈಗ ಈ ಸಭೆಯ ಮುಂದೆ ಇಟ್ಟಿರ ತಕ್ಕಂಥ ಶ್ರೀಮಾನ್ ತುಕೋಳ್ ಅವರ ಆಯೋಗದ ವರದಿಯನ್ನು ನಮ್ಮಲ್ಲಿ ಅನೇಕರು ಬಹಳ ವಿವರವಾಗಿ ವ್ಯಾಸಂಗಮಾಡಿದ್ದಾರೆ. ತುಕೋಳ್ ವರದಿ ಬರಬೇಕಾದರೆ ಏನೇನು ಕಾರಣಗಳು ಎನ್ನತಕ್ಕಂಥಾದ್ದನ್ನು ನಾವೆಲ್ಲರೂ ಅರಿತುಕೊಂಡಿದ್ದೇವೆ. ತುಕೋಳ್ ವರದಿಯ ವಿಷಯವನ್ನು ಹಲವಾರು ಸ್ನೇಹಿತರು ಚರ್ಚೆಮಾಡಿದ್ದಾರೆ. ಅವರು ಮಾಡಿರತಕ್ಕ ಪ್ರಸ್ತಾಪಗಳಲ್ಲಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಈ ರಾಜ್ಯದಲ್ಲಿ ಅನೇಕ ಬಗೆಬಗೆಯಾದ ಸರ್ಕಾರಿ ನೌಕರರು, ಸರ್ಕಾರಿ ಅಧಿಕಾರಿಗಳು ಇದ್ದುಕೊಂಡು ಸರ್ಕಾರವನ್ನು ನಡೆಸುತ್ತಿದ್ದಾರೆ. ಅವರಿಗೆ ಎಷ್ಟೋ ಕಾಲದಿಂದ ಈಗ ಬರತಕ್ಕ ಸಂಬಳ ಬರುತ್ತಾ ಇರಲಿಲ್ಲ. ಸುಮಾರು ಎಸ್. ಎಸ್. ಎಲ್. ಸಿ. ಪಾಸುಮಾಡಿರತಕ್ಕ ಒಬ್ಬ ನೌಕರರಿಗೆ 20—30 ವರ್ಷಗಳ ಹಿಂದೆ 11 ರೂಪಾಯಿ ಸಂಬಳ, 15 ರೂಪಾಯಿಗಳ ಸಂಬಳ, 18 ರೂಪಾಯಿಗಳ ಸಂಬಳಕ್ಕಿಂತ ಹೆಚ್ಚಿಗೆ ಬರುತ್ತಾ ಇರಲಿಲ್ಲ. ಕ್ರಮೇಣ ಕೆಲವು ಕಾಲದ ನಂತರ 20 ರೂಪಾಯಿ ಇದ್ದದ್ದು 25 ರೂಪಾಯಿಗಳು ಆಯಿತು. ಆಮೇಲೆ 30 ರೂಪಾಯಿಗಳು ನಂತರ 40 ರೂಪಾಯಿಗಳು ಆಯಿತು. ಕಾಲಕ್ರಮದಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಏರುತ್ತಾ ಏರುತ್ತಾ ಬಂದ ಹಾಗೆ ಮನುಷ್ಯನ ಅವಶ್ಯಕತೆಯ ಲೆಕ್ಕಗಳನ್ನು ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸನ್ನು ತೆಗೆದುಕೊಂಡು ಅದರ ಆಧಾರದ ಮೇಲೆ ಸಂಬಳವನ್ನು ಹೆಚ್ಚಿ ಸುತ್ತಾ ಬಂದರು. ಈ ದಿವಸ ಎಸ್. ಎಸ್. ಎಲ್. ಸಿ. ಪಾಸುಮಾಡಿರತಕ್ಕ ಒಬ್ಬ ನೌಕರನಿಗೆ 120 ರೂಪಾಯಿಗಳ ಸಂಬಳದಿಂದ ಪ್ರಾರಂಭವಾಗುತ್ತದೆ. ಹಾಗೆಯೇ ಪದವೀಧರರಾಗಿರತಕ್ಕ ನೌಕರರಿಗೆ ಹಿಂದೆ 30 ರೂಪಾಯಿ ಸಂಬಳದಿಂದ ಪ್ರಾರಂಭವಾಗುತ್ತಿತ್ತು. ಅದು ಅವರಿಗೆ ಇವೊತ್ತಿನ ದಿವಸ 200 ರೂಪಾಯಿಗಳ ಸಂಬಳದಿಂದ ಪ್ರಾರಂಭವಾಗತಕ್ಕಂಥ ಸ್ಥಿತಿ ಇದೆ. ಹೀಗೆ ಜೀವನದ ವೆಚ್ಚದ ಬೆಲೆಯನ್ನು ಲೆಕ್ಕ ಹಾಕುತ್ತಾ ಹೋಗಿ ಕಡಿಮೆ ಸಂಬಳದಲ್ಲಿದ್ದವರು ಇವೊತ್ತು ಹೆಚ್ಚು ಹೆಚ್ಚಿನ ಸಂಬಳದವರೆಗೂ ಏರುತ್ತಾ ಬಂದಿದ್ದಾರೆ. ಇದು ಒಳ್ಳೆಯದು. ನಾವು ಕಡಿಮೆ ಸಂಬಳವನ್ನು ಕೊಟ್ಟು ನಮ್ಮ ಸರ್ಕಾರಿ ನೌಕರರನ್ನು, ಸರ್ಕಾರಿ ಅಧಿಕಾರಿಗಳನ್ನು ತೃಪ್ತಿಕರವಾಗಿ

(ಶ್ರೀ ಆರ್. ಮುನಿಸ್ವಾಮಯ್ಯ)

ಕೆಲಸ ಮಾಡಿ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ ಅವರು ತಮ್ಮ ಅವಶ್ಯಕತೆಗಳನ್ನು, ತಮ್ಮ ಸಂಸಾರದ ಅವಶ್ಯಕತೆಗಳನ್ನು ಪೂರ್ತಿಯಾಗಿ ನೆರವೇರಿಸಬೇಕಾಗುತ್ತದೆ. ಒಂದು ವೇಳೆ ಅವರ ಅವಶ್ಯಕತೆಗಳನ್ನು ಪೂರ್ತಿಯಾಗಿ ನೆರವೇರಿಸುವುದಕ್ಕೆ ಸಾಧ್ಯ ಮಾಡದಿದ್ದರೂ ಬಹಳ ಮಟ್ಟಿಗೆ ಅತಿ ಅವಶ್ಯಕವಾದ ಅವಶ್ಯಕತೆಗಳನ್ನು ಪೂರೈಸಿ ಅವರು ಅವರ ಸಂಸಾರವನ್ನು ಸುಖವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಅವರ ಮನಸ್ಸು ಕದಡಿ ಸರ್ಕಾರದ ಕೆಲಸ ಸರಿಯಾಗಿ ನಡೆಯುವುದಿಲ್ಲ. ಸರ್ಕಾರಿ ನೌಕರರ ಹಾಗೂ ಅಧಿಕಾರಿಗಳ ಸಂಬಳಗಳು ಹೆಚ್ಚುತ್ತಾ ಬಂದು ಕಾಲ ಕಾಲಕ್ಕೆ ಸರಿಯಾಗಿ ಅವರಿಗೆ ಸರ್ಕಾರ ಸಂಬಳವನ್ನು ಕೊಡುವುದಕ್ಕೆ ಹಣ ಇದೆಯೋ ಇಲ್ಲವೋ ಎನ್ನುವ ಪರಿಸ್ಥಿತಿ ಹಿಂದೆ ಬಂದಿತ್ತು. ಈಗ್ಯೆ ಕೆಲವು ವರ್ಷಗಳ ಹಿಂದೆ ಅನೇಕ ಸರ್ಕಾರಿ ನೌಕರರನ್ನು ರಿಟ್ರೆಂಚ್‌ಮಾಡಿದ್ದನ್ನು ನಾನು ಕೇಳಿದ್ದೇನೆ. ಆಗಿನ ಕಾಲದಲ್ಲಿ ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡುವುದಕ್ಕೆ ಹಣ ಇರಲಿಲ್ಲ. ನಮ್ಮ ರಾಜ್ಯದಲ್ಲಿ ಎಷ್ಟೋ ಸಲ, ಮತ್ತು ಇಂಡಿಯಾ ದೇಶದಲ್ಲಿ ಹಾಗೂ ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಹಣಕಾಸಿನ ವ್ಯವಸ್ಥೆ ಅಸ್ತವ್ಯಸ್ತವಾಗಿದ್ದಾಗ ಸರ್ಕಾರಿ ನೌಕರರನ್ನು ರಿಟ್ರೆಂಚ್‌ಮಾಡಿದ್ದಾರೆ. ಅದು ಹಾಗಿರಲಿ. ಈಗ ತುಕೋಳ್ ವರದಿಯನ್ನು ಪರಿಶೀಲನೆ ಮಾಡಿದರೆ ಅದರಲ್ಲಿ ಸರ್ಕಾರಿ ನೌಕರರಿಗೆ ಈಗ ಕೊಡುತ್ತಾ ಇರುವ ಸಂಬಳಕ್ಕಿಂತ ಹೆಚ್ಚು ಮಾಡಬೇಕು ಅನೇಕ ಇಲಾಖೆಗಳನ್ನು ಕಡಿಮೆಮಾಡಿ ಮಿತವ್ಯಯವನ್ನು ಸಾಧನೆ ಮಾಡಬೇಕು ಎನ್ನತಕ್ಕಂಥ ವಿಷಯದ ಬಗ್ಗೆ ಬಹಳ ಮಟ್ಟಿಗೆ ಪ್ರಸ್ತಾಪಮಾಡಿದ್ದಾರೆ. ಅವರು ಈ ಎಲ್ಲಾ ವಿಚಾರಗಳನ್ನೂ ಒಳಗೊಂಡಂತಹ ಒಂದು ದೊಡ್ಡ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಅವರು ಶ್ರಮಪಟ್ಟು ಅನೇಕ ಸಲಹೆಗಳನ್ನು ಇಲಾಖೆಗಳಿಂದ, ಅಧಿಕಾರಿಗಳಿಂದ ಹಾಗೂ ಸಾರ್ವಜನಿಕರಿಂದ ಪಡೆದಿದ್ದಾರೆ. ಇದು ಸ್ವಾಗತಾರ್ಹವಾಗಿದೆ. ಕೆಲವು ಇಲಾಖೆಯವರು ತುಕೋಳ್ ವರದಿಯು ಬಹಳ ಸಂತೋಷಕರವಾಗಿದೆ, ಸಾಧ್ಯವಾದಷ್ಟು ಜಾಗ್ರತೆಯಾಗಿ ಅದನ್ನು ಜಾರಿಗೆ ತರುವುದಕ್ಕೆ ಸರ್ಕಾರದವರನ್ನು ಒತ್ತಾಯಮಾಡಿ ಎಂದು ಹೇಳುತ್ತಿದ್ದಾರೆ. ಆದರೆ ಎಲ್ಲಾ ಇಲಾಖೆಗಳಲ್ಲೂ ಈ ತರಹ ತೃಪ್ತಿ ಇದೆಯೆಂದು ಕಾಣುವುದಿಲ್ಲ. ಆಯುರ್ವೇದ ಇಲಾಖೆಯಲ್ಲಿ ಎಷ್ಟೋ ಸ್ಥಾನಗಳಿಗೆ ಇರತಕ್ಕಂಥ ಸಂಬಳಗಳನ್ನು ಪ್ರಸ್ತಾಪಮಾಡಿಲ್ಲ. ಹಾಗೆಯೇ ಪಶುವೈದ್ಯ ಇಲಾಖೆಯಲ್ಲಿ ವೈದ್ಯರಿಗೆ ಕೊಡತಕ್ಕ ಸಂಬಳ ಸಾರಿಗೆಗಳಿಗೂ, ಮನುಷ್ಯ ಆಸ್ಪತ್ರೆಗಳಲ್ಲಿರತಕ್ಕ ಡಾಕ್ಟರುಗಳಿಗೆ ಕೊಡತಕ್ಕಂಥ ಸಂಬಳ ಸಾರಿಗೆಗಳಿಗೂ ವ್ಯತ್ಯಾಸ ಇದೆ. ಎಂದರೆ ಪಶುವೈದ್ಯ ಇಲಾಖೆಯಲ್ಲಿರತಕ್ಕ ಡಾಕ್ಟರುಗಳಿಗೆ ಕಡಿಮೆ ಸಂಬಳ ಇದೆ. ಅದನ್ನು ಸರಿಪಡಿಸಬೇಕು. ಹಾಗೆಯೇ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಪಾಠ ಹೇಳತಕ್ಕಂಥ ಉಪಾಧ್ಯಾಯರುಗಳು, ಪಂಡಿತರುಗಳು ನಮಗೆ ಕೊಡತಕ್ಕಂಥ ಸಂಬಳದ ಬಗ್ಗೆ ಪ್ರಸ್ತಾಪಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಹೀಗೆ ಕೆಲವು ಇಲಾಖೆಗಳಲ್ಲಿರತಕ್ಕ ನೌಕರವರ್ಗದವರು ಪಡತಕ್ಕಂಥ ಕಷ್ಟವನ್ನೂ, ಮಾಡತಕ್ಕಂಥ ಕೆಲಸದ ತೂಕವನ್ನೂ ಅಳತೆಮಾಡಿ ಅವರಿಗೆ ಸಂಬಳವನ್ನು ಗೊತ್ತುಮಾಡಿಲ್ಲ ಎಂದು ಅವರು ಅಸಮಾಧಾನವನ್ನು ಪಟ್ಟುಕೊಂಡಿದ್ದಾರೆ. ಅವುಗಳನ್ನು ನಾವು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗಿದೆ. ಅನೇಕ ಕಲಾವಿದರು, ಕಲಾಶಾಲೆಗಳಲ್ಲಿ, ಚಿತ್ರಶಾಲೆಗಳಲ್ಲಿ ಇರತಕ್ಕ ಉಪಾಧ್ಯಾಯರು ತಮಗೆ ತುಕೋಳ್ ಆಯೋಗದವರು ನಮಗೆ ಸೂಚಿಸಿರತಕ್ಕ ಸಂಬಳ ಬಹಳ ಕಡಿಮೆ ಇದೆ ಅವುಗಳನ್ನು ಪರಿಶೀಲನೆ ಮಾಡಿ ಎಂದು ಶಾಸಕರಿಗೆ ಹೇಳುತ್ತಿದ್ದಾರೆ. ಇಂಜಿನಿಯರಿಂಗ್ ಇಲಾಖೆ, ಹೀಗೆ ಇನ್ನೂ ಹತ್ತಾರು ಇಲಾಖೆಯವರು ನಮಗೆ ಇನ್ನೂ ಸಂಬಳವನ್ನು ಹೆಚ್ಚಿಸಿದ್ದರೆ ಚೆನ್ನಾಗಿತ್ತು ಎಂದು ನಿರೀಕ್ಷಣೆ ಮಾಡುತ್ತಿದ್ದಾರೆ. ಅದನ್ನೆಲ್ಲಾ ಸರ್ಕಾರದವರು ಸರಿಪಡಿಸುವುದು ಒಳ್ಳೆಯದು. ನಮ್ಮ ನೌಕರರು ಬೇರೆ ಅಲ್ಲ, ನಾವು ಬೇರೆ ಅಲ್ಲ. ಶಾಸಕರಾಗಲೀ, ಮಂತ್ರಿಗಳಾಗಲೀ, ಅಧಿಕಾರಿಗಳಾಗಲೀ, ನೌಕರರಾಗಲೀ ಬೇರೆ ಅಲ್ಲ. ಆದರೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾತ್ರ ನಾನು ಹೇಳಬೇಕಾಗಿದೆ. ಹಳ್ಳಿಗಳಲ್ಲಿ ಕೆಲಸ ಮಾಡುತ್ತಾ ಇರತಕ್ಕ ಜನ, ಕೂಲಿಮಾಡತಕ್ಕ ಜನ ಏನಿದ್ದಾರೆ ಅವರಿಗೆ ಸರಿಯಾಗಿ ಅನ್ನ ಬಟ್ಟೆಗಳಿಲ್ಲದೆ ಅವರು ಕಷ್ಟಪಡುತ್ತಿದ್ದಾರೆ. 2—3 ದಿನಗಳು ಆಹಾರ ಇಲ್ಲದೆ ಇರತಕ್ಕ ಜನಗಳು ಇದ್ದಾರೆ. ಅಕಸ್ಮಾತಾಗಿ ಸಿಕ್ಕಂಥ ಒಂದೆರಡು ತುತ್ತನ್ನ ತಿಂದು ಜೀವನ ಮಾಡುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅವರು ತಮಗೆ ಇಲ್ಲದಿದ್ದರೂ ತಮ್ಮ ಮಕ್ಕಳು ಮರಿಗಳಿಗೆ ಸ್ವಲ್ಪ ಆಹಾರವನ್ನು ಕೊಟ್ಟು ಸಂಸಾರವನ್ನು ನಡೆಸತಕ್ಕವರನ್ನು ನಾವು ಕಣ್ಣಿನಲ್ಲಿ ಕಾಣುತ್ತಿದ್ದೇವೆ. ಅದನ್ನು ನೋಡಿದಾಗ ನೌಕರರಿಗೆ ಇಷ್ಟು ಸಂಬಳ ಏತಕ್ಕೆ ಎನ್ನುವ ಒಂದು ಮನೋಭಾವನೆ ಬರುತ್ತದೆ. ಆದರೆ ಈ ನೌಕರರ ಸಂಬಳ ಸಾರಿಗೆಯನ್ನು ಹೆಚ್ಚುಮಾಡುವ ವಿಷಯವನ್ನೂ ಸಹ ಕೈ ಬಿಡುವ ವಿಷಯವಲ್ಲ. ಸರ್ಕಾರವನ್ನು ನಡೆಸತಕ್ಕಂಥ ನಾವು ಜನಸಾಮಾನ್ಯರನ್ನು ಸರ್ಕಾರಿ ಅಧಿಕಾರಿಗಳನ್ನೂ ಸರ್ಕಾರಿ ನೌಕರರನ್ನೂ ರೈತರನ್ನೂ, ಕೂಲಿಗಾರರನ್ನೂ ಉಳಿದವರು ಎಲ್ಲರನ್ನೂ ನಾವು ಬಹಳ ಎಚ್ಚರಿಕೆ

ಯಿಂದ ಸಮತೋಲನ ಮಾಡಿ ಅವರೆಲ್ಲರೂ ಸುಖವಾಗಿರುವುದಕ್ಕೆ ಉತ್ತಮ ಮಟ್ಟದಲ್ಲಿ ಜೀವನವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕು ಎನ್ನತಕ್ಕಂಥದ್ದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಆಹಾರ ಪದಾರ್ಥಗಳ ಬೆಲೆಗಳು ಮಾತ್ರ ಏರುತ್ತಿವೆ ಈ ಬೆಲೆಗಳ ಏರಿಕೆಯನ್ನು ತಡೆಯುವುದಕ್ಕೆ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಿಲ್ಲ. ಈ ಬೆಲೆಗಳ ಏರಿಕೆಯನ್ನ ತಡೆಯಬೇಕಾದರೆ ಉತ್ಪಾದನೆಯನ್ನು ಹೆಚ್ಚು ಮಾಡುವ ಕಡೆ ಸರ್ಕಾರದವರು ಹೆಚ್ಚು ಗಮನ, ಹೆಚ್ಚು ಲಕ್ಷ್ಯವನ್ನು ಕೊಡಬೇಕು. ಅದೇ ಕಾಲಕ್ಕೆ ನಾವು ಹೆಚ್ಚು ಬೆಲೆಗಳು ಹೆಚ್ಚು ಇಳಿಯದಂತೆ ರೈತರು ಬೆಳೆದಂತಹ ಬೆಳೆಗೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕು. ಬೆಲೆಗಳು ಬಿದ್ದು ಹೋಗದಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇಂಥಾ ಒಂದು ಇಕ್ಕಟ್ಟಿನ ಪರಿಸ್ಥಿತಿಯೂ ಇದೆ. ಅಧಿಕಾರಿಗಳು ಹೆಚ್ಚಿನ ಸಂಬಳ ತೆಗೆದುಕೊಂಡು, 3 ಮತ್ತು 4ನೇ ವರ್ಗದ ನೌಕರರು ಕಡಿಮೆ ಸಂಬಳವನ್ನು ತೆಗೆದುಕೊಂಡರೆ ಅವರು ಜೀವನವನ್ನು ನಡೆಸುವುದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಅಧಿಕಾರಿಗಳು ಮತ್ತು ಮೂರು ಮತ್ತು ನಾಲ್ಕನೆಯ ದರ್ಜೆಯ ನೌಕರರ ಜೀವನವನ್ನು ಸಮತೋಲನಗೊಳಿಸಬೇಕು ಎಂಬುದು ಕಾಣುತ್ತದೆ. ಮನುಷ್ಯನಿಗೆ ಇರತಕ್ಕ ಅವಶ್ಯಕತೆ ಎಲ್ಲಾ ವರ್ಗದ ನೌಕರರಿಗೂ ಇರುತ್ತದೆ. ಒಂದು ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳತಕ್ಕವರೂ ಅವರ ಮಕ್ಕಳು ಮರಿಗಳಿಗೆ ವಿದ್ಯಾಭ್ಯಾಸ ಮಾಡಿಸಬೇಕು, ವಸತಿ ಸೌಕರ್ಯಗಳನ್ನು ಒದಗಿಸಿಕೊಳ್ಳಬೇಕು. ಸಂಸಾರವನ್ನು ನಡೆಸಬೇಕು. ಅದೇ ರೀತಿಯಲ್ಲಿ ಕಡಿಮೆ ಸಂಬಳ ತೆಗೆದು ಕೊಳ್ಳುವವರು ಅವರ ಮಕ್ಕಳು ಮರಿಗಳಿಗೆ ವಿದ್ಯಾಭ್ಯಾಸ ಕೊಡುವುದು ಬೇಡವೇ, ಅವರಿಗೆ ವಸತಿ ಸೌಕರ್ಯ ಬೇಡವೇ, ಅವರ ಮಕ್ಕಳಿಗೆ ಮದುವೆ ಮುಂಜಿ ಮಾಡುವುದು ಬೇಡವೇ ? ಇದನ್ನೆಲ್ಲಾ ಗಮನಿಸಿ ಸರ್ಕಾರದವರು ಅವರಿಗೆ ಹೆಚ್ಚಿನ ಸಂಬಳವನ್ನು ಕೊಡಬೇಕು. ಕಡಿಮೆ ಸಂಬಳ ಬಂತಕ್ಕವರಿಗೆ ಹೆಚ್ಚಿನ ಸಂಬಳ ಕೊಡಬೇಕು. ಹೆಚ್ಚು ಸಂಬಳ ಬರತಕ್ಕವರಿಗೆ ಕಡಿಮೆ ಸಂಬಳ ಕೊಡುವುದಕ್ಕೆ ಲೆಕ್ಕ ಹಾಕಬೇಕು ಎಂದು ನಾನು ಸಲಹೆ ಮಾಡುತ್ತೇನೆ.

2–30 P. M.

ಕೇಂದ್ರ ಸರ್ಕಾರದ ನೌಕರರಿಗೂ ರಾಜ್ಯಸರ್ಕಾರದ ನೌಕರರಿಗೂ ಇರುವ ಸಂಬಳದ ವ್ಯತ್ಯಾಸದ ಬಗ್ಗೆ ಹೆಚ್ಚು ಯೋಚನೆ ಮಾಡಬೇಕಾಗಿದೆ. ಕೇಂದ್ರಸರ್ಕಾರದ ನೌಕರರು ಮತ್ತು ರಾಜ್ಯಸರ್ಕಾರದ ನೌಕರರು ಮಾಡುವ ಕೆಲಸ, ಕೆಲಸದ ಸಮಯ ಒಂದೇ ಆಗಿದೆ. ಕೆಲಸದ ತೂಕದಲ್ಲಿ ಹೆಚ್ಚು ಕಡಿಮೆ ಏನೂ ಇಲ್ಲ. ಕೇಂದ್ರಸರ್ಕಾರದ ನೌಕರರಿಗಿಂತಲೂ ರಾಜ್ಯಸರ್ಕಾರದ ನೌಕರರೇ ಹೆಚ್ಚು ಕೆಲಸ ಮಾಡುತ್ತಿದ್ದಾರೆಂದು ಹೇಳಬಹುದು. ಹೆಚ್ಚು ಸಮಯ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅವರಿಗೆ ಕೊಡುತ್ತಿರುವ ಸಂಬಳವನ್ನು ಇವರಿಗೂ ಕೊಡಬೇಕು. ನಮ್ಮ ರಾಜ್ಯದ ಬೊಕ್ಕಸದಲ್ಲಿ ಹಣವಿಲ್ಲವೆಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ನಮ್ಮ ರಾಜ್ಯದ ಅನೇಕ ಬಾಬುಗಳಿಂದ ಕೇಂದ್ರಸರ್ಕಾರಕ್ಕೆ ಹಣ ಹೋಗುತ್ತಿದೆ. ಆ ಹಣದಲ್ಲಿ ನಮ್ಮ ರಾಜ್ಯದ ಭಾಗವನ್ನು ಪಡೆದುಕೊಳ್ಳಬೇಕು. ಆ ರೀತಿ ಪಡೆದುಕೊಂಡು ನಮ್ಮ ರಾಜ್ಯದ ನೌಕರರಿಗೆ ಕೇಂದ್ರಸರ್ಕಾರದ ನೌಕರರಿಗೆ ಕೊಡುವಷ್ಟೇ ಸಂಬಳವನ್ನು ಕೊಟ್ಟು ನಮ್ಮ ನೌಕರರು ಸುಖವಾಗಿ ಜೀವನ ನಡೆಸುವುದಕ್ಕೆ ಏರ್ಪಾಡು ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಆ ರೀತಿ ಮಾಡದೇ ಹೋದರೆ ನಮ್ಮ ನೌಕರರಿಗೆ ಕೇಂದ್ರಸರ್ಕಾರದ ನೌಕರರಷ್ಟೇ ಕೆಲಸ ಮಾಡಿ ಎಂದು ಹೇಳುವ ಅಧಿಕಾರ ನಮಗೆ ಬರುವುದಿಲ್ಲವೆಂದು ಹೇಳಬಯಸುತ್ತೇನೆ. ತುಕೋಳ್ ಅವರು ಒಪ್ಪಿಸಿರುವ ದೊಡ್ಡ ವರದಿಯನ್ನು ಶ್ರೀಮಾನ್ ಗೋಪಾಲಗೌಡರು ಹೇಳಿದಂತೆ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ರಚನೆ ಮಾಡಬೇಕು. ಆ ಸಮಿತಿಯವರು ಕೂಲಂಕಷವಾಗಿ ಈ ವರದಿಯನ್ನು ಪರಿಶೀಲಿಸಿ, ಜಾಗ್ರತೆ ಜಾರಿಗೆ ತರುವುದಕ್ಕೆ ಏರ್ಪಾಡು ಮಾಡಬೇಕು. ಈ ವರದಿಯನ್ನು ಜಾರಿಗೆ ತರುವುದರ ಮೂಲಕ ನಮ್ಮ ರಾಜ್ಯದ ನೌಕರರಿಗೆ ಮತ್ತು ಅಧಿಕಾರಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon next hon. Member to speak I want to know from the Hon. Minister what time he will require for reply ?

Sri RAMAKRISHNA HEGDE.—I might take about 35 to 40 minutes.

Mr. SPEAKER.—Then in that case we will close the discussion at 5-20 P.M. There are a number of amendments given notice of by members on the opposition side which will have to be disposed of. The debate will close at 5-20 P.M. and then the Minister will reply. The hon. Member Sri C. K. Rajaiah Setty may begin his speech.

†ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಸಭಾಪತಿಗಳೇ, ಸ್ವಾತಂತ್ರ್ಯ ಬಂದನಂತರ ಜೀವನ ವೆಚ್ಚವು ದಿನೇ ದಿನೇ ಜಾಸ್ತಿಯಾಗಿ ಜೀವನ ವೆಚ್ಚವು 100 ಆಯಿತು, 150 ಆಯಿತು, 200 ಆಯಿತು. ಅಂದಿನಿಂದ ಇಂದಿನವರೆಗೆ ಈ ಬಡನೌಕರರು ಜೀವನವೆಚ್ಚಕ್ಕೆ ಅನುಗುಣವಾಗಿ ತಮ್ಮ ಸಂಬಳಸಾರಿಗೆಯನ್ನು ಹೆಚ್ಚು ಮಾಡಬೇಕೆಂದು ಹೋರಾಟ ನಡೆಸುತ್ತಾ ಬಂದಿದ್ದಾರೆ. ಅದರಂತೆ ಸರ್ಕಾರದವರು ಸಹ ಆಗಾಗ್ಗೆ ಕೊಂಚಮಟ್ಟಿಗೆ ಏನೋ ಒಂದು ಪರಿಹಾರ ಕೊಟ್ಟಿದ್ದಾರೆ. ಈ ಒಂದು ಪ್ರಶ್ನೆ ಮತ್ತೆ ಬೃಹದಾಕಾರವಾಗಿ ಹರಡಿಕೊಂಡು ಬಡನೌಕರರು ಕಷ್ಟದ ಪರಿಸ್ಥಿತಿಯಲ್ಲಿ ಇದ್ದುದ್ದರಿಂದ, ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಯಾವುದಾದರೂ ಒಂದು ತೀರ್ಮಾನ ತೆಗೆದುಕೊಳ್ಳಲು ಈ ತುಕೋಳ್ ಆಯೋಗವನ್ನು ಸರ್ಕಾರದವರು ರಚನೆ ಮಾಡಿದರು. ಈ ಆಯೋಗದ ನೇಮಕದ ಬಗ್ಗೆ ಹೊರಗಿನ ಜನತೆ ಮತ್ತು ಈ ಅಸೆಂಬ್ಲಿಯ ಸದಸ್ಯರುಗಳು ಬಯಸಿದ್ದು ಒಂದು ಆದರೆ, ಆಯೋಗದವರು ತಮ್ಮ ವರದಿಯಲ್ಲಿ ಹೇಳಿರುವುದು ಬೇರೆಯಾಗಿದೆ. ಇದನ್ನು ದುಃಖದಿಂದ ಹೇಳಬೇಕಾಗಿದೆ. ಕೆಳದರ್ಜೆಯ ನೌಕರರ ವೇತನದ ಬಗ್ಗೆ ಆಯೋಗವನ್ನು ರಚನೆ ಮಾಡಿದರೆ, ಆಯೋಗದವರು ಮೇಲ್ದರ್ಜೆಯ ನೌಕರರ ಹಿತವನ್ನು ಸಾಧಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈ ಆಯೋಗದ ವರದಿಯನ್ನು ಪೂರ್ಣವಾಗಿ ಜಾರಿಗೆ ಕೊಟ್ಟರೆ, ಸರ್ಕಾರಕ್ಕೆ ನುಂಗಲಾರದ ತುತ್ತು ಆದರೆ, ಜನರಿಗೆ ಹೊರಲಾರದ ಹೊರೆಯಾಗುತ್ತದೆ. ಇದು ಸರ್ಕಾರದ ಅಥವಾ ಜನರ ದೃಷ್ಟಿಯಾಗಿದೆ. ನಮ್ಮ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರಲು ಹಣದ ಕೊರತೆ ಬೀಳುವುದರಿಂದ ಹೆಚ್ಚು ತೆರಿಗೆ ಹಾಕುವುದು, ಸಂಪನ್ಮೂಲಗಳನ್ನು ಹೆಚ್ಚು ಮಾಡುವುದು ಒಂದು ದೃಷ್ಟಿಯಾದರೆ, ಈ ವರದಿಯನ್ನು ಜಾರಿಗೆ ತಂದರೆ 12 ರಿಂದ 14 ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಅದನ್ನು ಯಾವ ಬಾಬಿನಿಂದ ಸರಿದೂಗಿಸಲು ಸಾಧ್ಯ ಎನ್ನುವುದು ಇನ್ನೊಂದು ದೃಷ್ಟಿಯಾಗಿದೆ. ಒಂದು ವಿಚಾರವನ್ನು ಹೇಳಬೇಕೆಂದರೆ, ಹಿಂದೆ ಇದೇ ರೀತಿ ವ್ಯಾಸ್ಕರೆನ್ಹಾಸ್ ಆಯೋಗವನ್ನು ಸರ್ಕಾರದವರು ರಚನೆ ಮಾಡಿ ಅದರ ವರದಿ ಸಹ ಈ ಸಭೆಯ ಮುಂದೆ ಚರ್ಚೆಯಾಯಿತು. ಆ ಒಂದು ವರದಿಯನ್ನು ಸಹ ಜಾರಿಗೆ ತರುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಈಗ ಮತ್ತೆ ಈ ಒಂದು ಹೊಸ ಆಯೋಗವನ್ನು ನೇಮಕ ಮಾಡಿ, ಅದಕ್ಕಾಗಿ 4-6 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ, ಈ ಸಭೆಯ ವಿಮರ್ಶೆಗಾಗಿ ಇಟ್ಟು ಮತ್ತೆ ಹಣವನ್ನು ಖರ್ಚು ಮಾಡುತ್ತಿರುವುದನ್ನು ನೋಡಿದರೆ ಇದು ಅನಾವಶ್ಯಕ ಎಂದು ನನಗೆ ಗೊತ್ತಾಗುತ್ತಿದೆ. ಸರ್ಕಾರದವರು ಯಾವುದಾದರು ಒಂದು ಧೃಡ ಅಭಿಪ್ರಾಯವನ್ನು ಇಟ್ಟುಕೊಂಡು ಅದಕ್ಕನುಗುಣವಾಗಿ ತುಟ್ಟಿಭತ್ಯವನ್ನು ಜಾಸ್ತಿ ಮಾಡಿದ್ದರೆ ಸಾಕಾಗುತ್ತಿತ್ತು ಎಂದು ಕಾಣುತ್ತದೆ. ಈ ಸರ್ಕಾರಿ ಅಧಿಕಾರಿಗಳೇ ಒಂದು ಪಂಗಡವಾದರೆ, ಈ ಸಮಾಜದಲ್ಲಿ ಕಡಿಮೆ ಆದಾಯವಿರುವ ಕೋಟ್ಯಾಂತರ ಜನರು ಇದ್ದಾರೆ. ಈ ಬಡಜನರು ಇಂದಿನ ದಿವಸ ಪಡುತ್ತಿರುವ ಕಷ್ಟವನ್ನು ನೋಡುವುದಾದರೆ. ಇವರುಗಳು ಜೀವನ ಸಾಗಿಸುವುದೇ ಕಷ್ಟವಾಗಿದೆ. ಯಾವುದೋ ಒಂದು ದರ್ಜೆಯ, ಒಂದು ಪಂಗಡದ ಜನರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಈ ಒಂದು ಆಯೋಗವನ್ನು ನೇಮಕ ಮಾಡಿದರು. ಈ ದೇಶದಲ್ಲಿ ದಿನೇ ದಿನೇ ಜೀವನ ವೆಚ್ಚ ಮಿತಿ ಇಲ್ಲದೆ ಹೆಚ್ಚುತ್ತಾ ಹೋದಂತೆ ಸರ್ಕಾರದವರು ಇಂತಹ ಆಯೋಗಗಳನ್ನು ರಚನೆ ಮಾಡುತ್ತಾ ಬಂದಿದ್ದಾರೆ. ಕಳೆದ 20 ವರ್ಷಗಳಿಂದ ಈ ಸರ್ಕಾರದವರು ಸಾಮಾನ್ಯ ಜನರನ್ನು ಲಕ್ಷಿಸದೆ ಪ್ಲಾನ್‌ಗಳು ಎಂಬ ಹೆಸರಿನಿಂದ ಸಡಿಲವಾದ ಆಡಳಿತವನ್ನು ನಡೆಸಿಕೊಂಡು ಬಂದದ್ದರಿಂದ ಜೀವನ ವೆಚ್ಚ ಹೆಚ್ಚುತ್ತಾ ಬಂದು ಕೆಳದರ್ಜೆಯ ಜನರು ಜೀವನ ನಡೆಸುವುದು ಕಷ್ಟವಾಗುತ್ತಿದೆ. ಒಂದು ವಿಚಾರವನ್ನು ಹೇಳಬೇಕೆಂದರೆ ಸರ್ಕಾರದವರು ಮೊದಲಿನಿಂದಲೂ ಅಗತ್ಯ ವಸ್ತುಗಳ ಬೆಲೆಗಳನ್ನು ಒಂದೇ ಮಟ್ಟದಲ್ಲಿ ಇಟ್ಟುಕೊಂಡು ಬಂದಿದ್ದರೆ ಇಂತಹ ಪ್ರಶ್ನೆಯೇ ಬರುತ್ತಿರಲಿಲ್ಲ. ಇವತ್ತಿನ ದಿವಸ ಸರ್ಕಾರದವರು ಪ್ಲಾನ್‌ಗಳ ಹೆಸರಿನಲ್ಲಿ ಸಹಸ್ರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈಗ ಶ್ರೀಮಾನ್ ಗೋಪಾಲಗೌಡರು ಹೇಳಿದಂತೆ ಮೂರು ನಾಲ್ಕು ಸಾವಿರ ಕೋಟಿ ರೂಪಾಯಿಗಳು ಖೋಟಾ ನೋಟುಗಳು ಚಲಾವಣೆಗೆ ಬಂದು ರಿಜರ್ವ್ ಬ್ಯಾಂಕಿನಲ್ಲಿ ಲೆಕ್ಕ ಸಿಕ್ಕದಂತಾಗಿದೆ. ಜೀವನ ವೆಚ್ಚ ಹೆಚ್ಚಾಗುವುದಕ್ಕೆ ಇದೂ ಒಂದು ಕಾರಣ. ಸರಿಯಾಗಿ ಯೋಚನೆ ಮಾಡದೆ ಪ್ಲಾನ್‌ಗಳನ್ನು ಸಹಸ್ರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮಾಡುತ್ತಿರುವುದು ಒಂದು ಕಾರಣವಾಗಿದೆ. ಮತ್ತು

ಸಹಸ್ರಾರು ಕೋಟಿ ರೂಪಾಯಿಗಳು ಕೆಲವೇ ಜನರ ಕೈಯಲ್ಲಿ ಸೇರಿ ಹೋಗಿ ಎರ್ರಾ ವಸ್ತುಗಳ ಧಾರಣೆ ಜಾಸ್ತಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಜಿಯುರಾಜಿಕಲ್ ಡಿಪಾರ್ಟ್‌ಮೆಂಟಿನ ಒಬ್ಬರು ಮೈಸೂರು ಬ್ಯಾಂಕ್‌ಗೆ ಹಣವನ್ನು ಜಮಾ ಮಾಡುವುದಕ್ಕೆ ಹೋದಾಗ ಆ ಹಣದಲ್ಲಿ 100ಕ್ಕೆ 41 ರಷ್ಟು ಖೋಟಾ ನೋಟು ಇತ್ತು ಎಂದು ತಿಳಿದುಬಂದಿದೆ. ಈ ರೀತಿಯಾದರೆ ದೇಶದ ಆಡಳಿತದಲ್ಲಿ ನಿಜಕ್ಕೂ ಕೂಡ ಆರ್ಥಿಕ ಭದ್ರತೆ ಇದೆಯೇ ಎಂದು ಸಂಶಯಪಡಬೇಕಾಗುತ್ತದೆ. ಒಬ್ಬ ಲಾಯರ್‌ಗೆ ಅವರ ಕಕ್ಷಿಗಾರ 200 ರೂಪಾಯಿಗಳನ್ನು 2 ರೂಪಾಯಿಗಳ ನೋಟನ್ನು ಕೊಟ್ಟಾಗ ಅದರಲ್ಲಿ 37 ಕೋಟಾ ನೋಟುಗಳು ಇದ್ದವೆಂದು ತಿಳಿದುಬಂದಿದೆ. ಈ ಒಂದು ಹಣದ ಹೋರಾಟ ಈ ರೀತಿ ಹೆಚ್ಚುತ್ತಾ ಹೋದರೆ ಕಮ್ಮಿ ಆದಾಯ ಬರುವವರಿಗೆ ಯಾವ ರೀತಿಯಾದ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದಕ್ಕಾಗಿ ಸರಕಾರದವರು ಈವೊತ್ತು ತೀವ್ರವಾಗಿ ಒಂದು ಯೋಜನೆ ಮಾಡಬೇಕು. ಅಗತ್ಯವಸ್ತುಗಳ ಬೆಲೆ ಹೆಚ್ಚುತ್ತಿರುವುದನ್ನು ತಡೆಗಟ್ಟಬೇಕು. ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗುತ್ತಾ ಹೋದರೆ ಇನ್ನು ಮುಂದೆ ಇಂತಹ ಹತ್ತು ಅಯೋಗಗಳನ್ನು ಮಾಡಬೇಕಾಗಿ ಬರಬಹುದು. ಆದುದರಿಂದ ದಿನ ನಿತ್ಯ ಬಳಕೆಗೆ ಬೇಕಾಗುವ ಅಗತ್ಯ ವಸ್ತುಗಳ ಬೆಲೆಗಳನ್ನು ಕಡಿಮೆ ಮಾಡಲಿಕ್ಕೆ ಈ ಸರಕಾರ ಹಾಗೂ ಕೇಂದ್ರ ಸರಕಾರ ದೀರ್ಘವಾಗಿ ಪರಿಶೀಲನೆ ಮಾಡಬೇಕಾದುದು ಅಗತ್ಯ. ಅಗತ್ಯ ವಸ್ತುಗಳ ಬೆಲೆಯನ್ನು ಯಾವ ರೀತಿಯಾಗಿ ಕಡಿಮೆ ಮಾಡಬಹುದು ಜನಸಾಮಾನ್ಯನಿಗೆ ಯಾವ ರೀತಿ ಸಹಾಯ ಮಾಡಬಹುದು ಎನ್ನುವುದರ ಕಡೆಗೆ ಒಂದು ಉಗ್ರವಾದ ಕಾರ್ಯಕ್ರಮ ತೆಗೆದುಕೊಂಡರೆ ಅದರಿಂದ ಜನಕ್ಕೆ ಅನುಕೂಲವಾಗುತ್ತದೆ. ಅದು ನಿಜವಾಗಿಯೂ ಸೋಷಿಯಲಿಸ್ಟ್ ಪ್ಯಾಟರ್ನ್‌ಗೆ ಸಹಾಯಕವಾಗುತ್ತದೆ. ಸ್ವರಾಜ್ಯ ಬಂದ ಮೇಲೆ 1956ನೇ ಇಸವಿಯಿಂದೀಚೆಗೆ ನಮ್ಮ ರಾಜ್ಯ ಪುನರ್ವಿಂಗಡಣೆಯಾಯಿತು. ಇದಾಗಿ ಸುಮಾರು ಹತ್ತು ಹನ್ನೆರಡು ವರ್ಷಗಳಾದರೂ ರಾಜ್ಯದ ನೌಕರರುಗಳ ಒಂದು ಸೀನಿಯಾರಿಟಿ ಪಟ್ಟಿ ಇನ್ನೂ ಪೂರ್ತಿಯಾಗದೇ ಇರುವುದು ಬಹು ವಿಷಾದದ ಸಂಗತಿ. ಇದನ್ನು ಎರಡು ಮೂರು ವರ್ಷಗಳಲ್ಲೇ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಹನ್ನೆರಡು ವರ್ಷಗಳಾದರೂ ಇನ್ನೂ ಪೂರ್ತಿಯಾಗಿಲ್ಲ. ಈಗ ಸರಕಾರ ತುಕೋಳ್ ಆಯೋಗವನ್ನು ಹೇಗೂ ರಚಿಸಿದ್ದಾರೆ. ಇವರಿಗೇನೇ ಒಬ್ಬರು ಲಾ ಸೆಕ್ರೆಟರಿಗಳು ಹಾಗೂ ಅವರ ಸಹಾಯಕ್ಕೆ ಕೆಲವು ಅಧಿಕಾರಿಗಳನ್ನು ಕೊಟ್ಟಿದ್ದರೆ ಇವರೇ ಇದರ ಕೆಲಸಗಳನ್ನೆಲ್ಲಾ ಬಹಳ ಜಾಗ್ರತೆಯಾಗಿ ಮುಗಿಸಿಕೊಡುತ್ತಿದ್ದರು. ಹೀಗೆ ಮಾಡದೇ ಇರುವುದರಿಂದ ಇಂದು ನೌಕರರುಗಳಲ್ಲಿ ಬಹಳ ತಾರತಮ್ಯಗಳಾಗಿ ಒಂದು ರೀತಿಯಾದ ಅತೃಪ್ತಿಗೆ ಕಾರಣವಾಗಿದೆ. ಕೆಲವು ಕಡೆ ನೋಡಿದ ಹಾಗೆ, ಒಬ್ಬರು 50-60ನೇ ಸಂಖ್ಯೆಗಿಂತ ಪಟ್ಟಿಯಲ್ಲಿ ಕೆಳಗಿದ್ದರೂ, ಅವರನ್ನು ಮೇಲಕ್ಕೆ ತಂದು ಬಡ್ತಿಕೊಡುತ್ತಾ ಇರುವುದರಿಂದ ಇಂದು ಹೈಕೋರ್ಟಿನಲ್ಲಿ ಇಷ್ಟೊಂದು ರಿಟ್‌ಗಳು ಬರಲು ಕಾರಣವಾಗಿದೆ, ಇವನ್ನೆಲ್ಲಾ ಬೇಗನೇ ಪರಿಶೀಲನೆ ಮಾಡಿ ನಿರ್ಧಾರ ಮಾಡಿದ್ದರೆ ಇಷ್ಟೊಂದು ಸಂಖ್ಯೆಯಲ್ಲಿ ರಿಟ್ ಪಿಟಿಷನ್‌ಗಳೇ ಬರುತ್ತಿರಲಿಲ್ಲ. ಮತ್ತು ಇದರಿಂದಾಗಿ ನೌಕರರುಗಳಲ್ಲಿ ಒಂದು ರೀತಿಯಾದ ಅತೃಪ್ತಿ, ಅಸಮಾಧಾನಗಳಿಗೆ ಕಾರಣವಾಗಿ ಅನೇಕ ಇಲಾಖೆಗಳಲ್ಲಿ ನೌಕರರುಗಳಿಗೆ ಸರಿಯಾದ ಬಡತಿಗಳೇ ದೊರೆಯದೇ ಕಷ್ಟಪಡುತ್ತಿದ್ದಾರೆ. ಇದಕ್ಕೆ ಕಾರಣ ಸರಕಾರ ಇನ್ನೂ ಸೀನಿಯಾರಿಟಿ ಲಿಸ್ಟ್‌ಗಳನ್ನು ಫೈನಲ್ ಆಗಿ ಮಾಡದೇ ಇರುವುದೇ ಆಗಿದೆ, ಸರಕಾರಕ್ಕೆ ಈ ಕೆಲಸ ಮಾಡುವುದು ಕಷ್ಟವಾಗಿದ್ದರೆ ತುಕೋಳ್ ಕಮಿಷನ್ನಿನವರಿಗೇನೆ ಇದರ ಕೆಲಸಗಳನ್ನು ವಹಿಸಿದ್ದರೆ ಅವರೇ ಇಷ್ಟು ಹೊತ್ತಿಗೆ ಒಂದು ಉತ್ತಮವಾದ ವರದಿ ಕೊಡುತ್ತಿದ್ದರು. ಸರಕಾರಕ್ಕೆ ಖಂಡಿತ ಇದರ ಬಗ್ಗೆ ಆಸಕ್ತಿ ಇಲ್ಲ ಎಂದು ಹೇಳಬೇಕಾಗಿದೆ. ಇನ್ನು ಇದೇ ತುಕೋಳ್ ಕಮಿಷನ್ನಿನವರು ಕೊನೆಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಇದನ್ನು ನಮ್ಮ ಹಣಕಾಸಿನ ಸಚಿವರು ಪರಿಶೀಲಿಸುವುದು ಉತ್ತಮ. ಅವರು ಇಲ್ಲಿ ಒಂದು ಕಡೆ ಹೀಗೆ ಹೇಳಿದ್ದಾರೆ :

> "The problems have been approached as dispassionately as possible, bearing in mind the economic conditions of the State and the needs of an efficient, clean and honest administration. It is hoped that the recommendations of the Commission will be helpful in the solution of many of the vexed questions that have arisen as a result of individual and public aspirations to evolve a socialistic pattern of society."

ಇದು ಸೋಷಿಯಲಿಸ್ಟಿಕ್ ಪ್ಯಾಟರನ್ ಆಗುತ್ತದೆಯೇ ? ಇವರೇ ಮಾಡಿರುವ ರಿಪೋರ್ಟಿನಲ್ಲಿ ಸೋಷಿಯಲಿಸ್ಟ್ ಪ್ಯಾಟರ್ನ್ ಎನ್ನುವುದರ ಗಂಧವಾದರೂ ಇದೆಯೇ ? ಇದನ್ನು ವಿಚಾರ ಮಾಡಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ನೋಡಿದರೆ ಖಂಡಿತವಾಗಿಯೂ This Report is worthy to be scrapped, ಎಂದು ಹೇಳಬೇಕಾಗುತ್ತದೆ. ಏಕೆಂದರೆ ಒಬ್ಬ ನೌಕರನಿಗೆ ಕನಿಷ್ಠ ವೇತನ 50 ಎಂದು ಇರಬೇಕು ಮತ್ತು ವರ್ಷಕ್ಕೆ ಕೇವಲ ಒಂದು ರೂಪಾಯಿನಂತೆ ಬಡತಿ ಇರಬೇಕೆಂದು ಮಾಡಿದರೆ ಇವರು ಪರಮಾವಧಿ ಸಂಬಳ 80 ರೂಪಾಯಿಗಳನ್ನು ಮುಟ್ಟುವುದಕ್ಕೇ ಸಾಧ್ಯವಿಲ್ಲ. ಇನ್ನೊಂದು ಕಡೆಯಲ್ಲಿ ಇವರೇ 1300ರಿಂದ 1500ರವರೆಗೆ ಇರಬೇಕು ಮತ್ತು ಪ್ರಮೋಷನ್ ಗ್ರೇಡು ಮಾಡಿ 2 ಸಾವಿರದವರೆಗೆ ಇರಬೇಕು ಎಂದು ಹೇಳಿದ್ದಾರೆ. ಇದನ್ನು ಯಾವ ರೀತಿ ಮಾಡಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ನಿಜವಾಗಿಯೂ ತುಕೋಳ ಆಯೋಗ ಕಮ್ಮಿ ದರ್ಜೆಯ ನೌಕರರುಗಳಿಗೆ ಉತ್ತಮ ರೀತಿಯಲ್ಲಿ ಸಹಾಯ ಮಾಡಬೇಕೆಂದು ಅವರು ವಿಮರ್ಶೆ ಮಾಡಿದ್ದರೆ ಆಗ ಇದನ್ನು ಸೋಷಿಯಲಿಸ್ಟ್ ಪ್ಯಾಟರ್ನ್ ಎಂದು ಕರೆಯಬಹುದಾಗಿತ್ತು. ಒಂದಕ್ಕೆ ನೂರರಷ್ಟು ಜಾಸ್ತಿ ಮಾಡಬೇಕೆಂದು ಮಾಡಿದರೆ ಇದನ್ನು ಸರಕಾರ ಯಾವ ರೀತಿ ಸೋಷಿಯಲಿಸ್ಟ್ ಪ್ಯಾಟರ್ನ್ ಎಂದು ಕರೆಯಲು ಸಾಧ್ಯ ಎನ್ನುವುದು ಪರಮಾತ್ಮನಿಗೇ ಗೊತ್ತು. ಇದಕ್ಕೋಸ್ಕರ ಈ ವಿಚಾರದಲ್ಲಿ ಖಂಡಿತ ಪುನರ್ವಿಮರ್ಶೆ ಮಾಡಬೇಕು.

The Commission also trusts that both the Government and the Heads of Departments will take suitable steps to implement early such of the recommendations as Government might accept keeping in mind the urgent need to improve the administration and to bring about economy in expenditure. ಇದು ಬಹಳ ಸ್ವಾಗತಾರ್ಹವಾದುದು. ಇದನ್ನು ಹೇಳುವಾಗ ಹತ್ತಾರು ಇಲಾಖೆಗಳ ಬಗ್ಗೆ ಹೇಳಿ ಇಲ್ಲಿ ಜಾಸ್ತಿ ಜನ ಇರುತ್ತಾರೆ ಇದನ್ನು ಕಡಿಮೆ ಮಾಡಲಿಕ್ಕೆ ಅವಕಾಶವಿದೆ ಎಂದೂ ಹೇಳಿದ್ದಾರೆ. ಇನ್ನು ನಮ್ಮ ರಾಜ್ಯದಲ್ಲಿ ಮೂರು ಟ್ರಿಬ್ಯುನಲ್‌ಗಳಿವೆ. ಒಂದು ಸೇಲ್ಸ್ ಟ್ಯಾಕ್ಸ್ ಟ್ರಿಬ್ಯುನಲ್, ಒಂದು ಕೋಆಪರೇಷನ್ ಟ್ರಿಬ್ಯುನಲ್ ಮತ್ತು ಒಂದು ರೆವೆನ್ಯೂ ಟ್ರಿಬ್ಯುನಲ್ ಎಂದು ಬೇರೆ ಬೇರೆಯಾಗಿವೆ. ಇದರಲ್ಲಿ ಎಂಟು ಜನರಿದ್ದಾರೆ. ಕೆಲವು ಟ್ರಿಬ್ಯುನಲ್ಸ್‌ಗಳಲ್ಲಿ ಸಾಕಷ್ಟು ಕೆಲಸಗಳೇ ಇಲ್ಲ. ನಿಜವಾಗಿಯೂ ಇಂತಹ ಟ್ರಿಬ್ಯುನಲ್‌ಗಳಿರುವುದು ಅನಾವಶ್ಯಕ. ಇದಕ್ಕೆ ಬದಲಾಗಿ ಒಂದೇ ಟ್ರಿಬ್ಯುನಲ್ ಎಂದು ಮಾಡಿ ಇದಕ್ಕೆ ಬೇಕಾದರೆ ಇನ್ನೂ ಇಬ್ಬರೂ ಅಥವಾ ಮೂವರು ಸದಸ್ಯರನ್ನು ಹೆಚ್ಚು ಮಾಡಬಹುದು ಇದರಲ್ಲಿ ಕೋಆಪರೇಷನಲ್ ಪರಿಣಿತರಾದವರು ಒಬ್ಬರು, ಸೇಲ್ಸ್ ಟ್ಯಾಕ್ಸ್‌ನಲ್ಲಿ ಪರಿಣಿತರಾದವರು ಒಬ್ಬರು ಎಂದು ನೇಮಿಸಿ ಒಂದೇ ಟ್ರಿಬ್ಯುನಲ್ ಎಂದು ಮಾಡಿದರೆ ಸರಕಾರಕ್ಕೆ ಹತ್ತಾರು ಸಾವಿರ ರೂಪಾಯಿಗಳಷ್ಟು ಉಳಿತಾಯವಾಗುತ್ತದೆ. ಇದೇ ರೀತಿ ಕೋಆಪರೇಷನ್ ಇಲಾಖೆಯಲ್ಲಿ ಹೆಚ್ಚಿಗೆ ಸಿಬ್ಬಂದಿ ಇರುವುದನ್ನು ಕಡಿಮೆ ಮಾಡಿ ಬೇರೆ ಕಡೆಗೆ ನೇಮಿಸಿದರೆ ಇದರಿಂದ ಸರಕಾರಕ್ಕೆ ಲಕ್ಷಾಂತರ ರೂಪಾಯಿಗಳಷ್ಟು ಉಳಿತಾಯವಾಗುತ್ತದೆ. ಇದರ ಬಗ್ಗೆ ತುಕೋಳ್ ಆಯೋಗದವರು ಅನೇಕ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಡಿವಿಜನಲ್ ಕಮಿಷನರ ಹುದ್ದೆಗಳನ್ನು ವಜಾ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಪ್ರತಿ ಸಾರಿಯ ಅಧಿವೇಶನದಲ್ಲೂ ಹೇಳುತ್ತಲೇ ಇದ್ದೇವೆ. ಸರಕಾರದವರೂ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಲೇ ಬರುತ್ತಿದ್ದಾರೆ. ಇವೊತ್ತಿನ ದಿವಸ ಡಿವಿಜನಲ್ ಕಮಿಷನರುಗಳ ಹುದ್ದೆಗಳನ್ನು ವಜಾ ಮಾಡಿದರೆ ಸರಕಾರಕ್ಕೆ ಸುಮಾರು ಎರಡು ಕೋಟಿಯಷ್ಟು ಹಣ ಉಳಿತಾಯವಾಗುತ್ತದೆ ಮತ್ತು ಈ ಹಣವನ್ನು ಬೇರೆ ಕಡೆ ಜನತೆಗೆ ಉಪಯೋಗ ಮಾಡಿದರೆ ಅವರಿಗೆ ಉಪಕಾರವಾಗುತ್ತಿತ್ತು. ತುಕೋಳ್ ರಿಪೋರ್ಟಿನಲ್ಲಿ ಹೇಳಿರುವಂತೆ ನೋಡಿದರೆ ಇದರಿಂದ ಸರಕಾರಕ್ಕೆ ಸುಮಾರು ಎಂಟು ಕೋಟಿಯಷ್ಟು ಹೆಚ್ಚು ಖರ್ಚು ಬರಬಹುದು ಎಂದು ಹೇಳುತ್ತಾರೆ. ಆದರೆ ನಮ್ಮ ಮಾನ್ಯ ಹಣಕಾಸಿನ ಸಚಿವರು ಇಲ್ಲ 14-16 ಕೋಟಿಯಷ್ಟು ಹಣ ಬೇಕಾಗಬಹುದು ಎಂದು ಹೇಳುತ್ತಾರೆ. ಯಾವುದಾದರೂ ಅಂಕೆ ಸಂಖ್ಯೆಗಳನ್ನು ಕೊಡುವಾಗ ಸರಕಾರ ಖಚಿತವಾಗಿ ಇಂತಿಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನು ನಮ್ಮ ಮುಂಚೆ ಮೊದಲೇ ತಿಳಿಸಿದ್ದರೆ ನಾವು ಅದರ ಬಗ್ಗೆ ವಿಚಾರ ಮಾಡಿ ಸೂಕ್ತ ಸಲಹೆಗಳನ್ನು ಕೊಡಬಹುದಾಗಿತ್ತು. ಆದರೆ ಇಂದು ಸರಕಾರ ಅಂತಹ ಯಾವ ಖಚಿತವಾದ ಅಂಕೆ ಅಂಶಗಳನ್ನೂ ನಮ್ಮ ಮುಂದೆ ಇಲ್ಲ ಇಟ್ಟಿಲ್ಲ. ಇದರಿಂದ ನಾವು ಇದರ ಬಗ್ಗೆ ಹೇಳುವುದು ಕಷ್ಟವಾಗುತ್ತದೆ. ತುಕೋಳ್ ಆಯೋಗದಂತೆ ಇದನ್ನು ಪೂರ್ಣವಾಗಿ ಜಾರಿಗೆ ಕೊಡಲು ಸಾಧ್ಯವೇ ಇಲ್ಲ. ಏಕೆಂದರೆ ಜನತೆಯ ಮೇಲೆ ಇದರಿಂದ ಹೆಚ್ಚು ಹೊರೆ ಹೊರಿಸಬೇಕಾಗಿ ಬರುತ್ತದೆ. ಅದಕ್ಕಾಗಿ ಸರಕಾರ ಒಂದು ನಿಯಮಿತವಾದ ಒಂದು ನಿಷ್ಠೆಯಾದ ಒಂದು ಯೋಜನೆಯನ್ನು ಹಾಕಿಕೊಂಡು ನಾನ್‌ಗೆಜೆಟೆಡ್ ನೌಕರರುಗಳು ಪುನಃ ಚಳವಳಿ ಮಾಡದಂತೆ ಶೀಘ್ರವಾಗಿ ಕೆಳದರ್ಜೆ ನೌಕರರುಗಳಿಗೆ ಸಹಾಯ ಮಾಡುವಂತಹ ಒಂದು ರಿಪೋ

ರ್ಟನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಮೂರನೇ ದರ್ಜೆಯ ಹಾಗೂ ನಾಲ್ಕನೆಯ ದರ್ಜೆಯ ನೌಕರರುಗಳಿಗೆ ಸ್ವಲ್ಪ ಹೆಚ್ಚಿನ ಸಂಬಳ ಮಾಡಿ ಮೇಲಿನ ದರ್ಜೆಯವರಿಗೆ ಕಮ್ಮಿ ಮಾಡಿ ಅಂತಹ ಒಂದು ಸಲಹೆ ಮಾಡಿದ್ದರೆ, ಇದರಿಂದ ಸಾಮಾನ್ಯ ಮನುಷ್ಯನಿಗೆ ಅನುಕೂಲವಾಗುತ್ತಿತ್ತು ಎಂದು ಇಲ್ಲಿ ಹೇಳಬಹುದಾಗಿದೆ. ಹಾಗೆ ಮಾಡದೆ ಈ ತುಕೋಳ್ ಕಮೀಷನ್ ರಿಪೋರ್ಟನ್ನು ಬಿಸಾಕಿದರೆ ಬಹಳ ವ್ಯಥೆಯಾಗುತ್ತದೆ. ಅವರು ಕಷ್ಟಪಟ್ಟು ಬರೆದದ್ದೂ ಕೂಡ ಬಹಳ ವ್ಯರ್ಥವಾಗುತ್ತದೆ ಎಂದು ಹೇಳಬೇಕಾಗುತ್ತದೆ. ಒಂದು ವಿಚಾರದಲ್ಲಿ ಶ್ರೀ ಸುಭಾಷ್‌ಚಂದ್ರಬೋಸರು ಒಂದು ಮಾತು ಹೇಳಿದರು. ಅದು ಈ ರೀತಿ ಇದೆ:

> "If you want to enjoy the solace of freedom and the joy of liberty, you should pay the price for it. The price is sacrifice and suffering."

ಈವೊತ್ತಿನ ದಿವಸ ನಮ್ಮ ದೇಶದಲ್ಲಿ ಯಾವ ಜೀವನದ ರಂಗದಲ್ಲಿ ನೋಡಿದರೂ ಜೀವನದ ಮಟ್ಟವೇ ಕಡಿಮೆಯಾಗಿದೆ. ಪ್ರತಿಯೊಬ್ಬರೂ ತಮಗಿಂತ ಮೇಲೊಬ್ಬರನ್ನು ನೋಡುವುದು, ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರನ್ನು ನೋಡುವುದು ಅದೇ ರೀತಿ ಕೇಂದ್ರ ಸರ್ಕಾರದವರು ಪರದೇಶದವರ ಸೌಲಭ್ಯಗಳು ಎಷ್ಟಿವೆ ಎಂದು ನೋಡುವುದು ಈ ರೀತಿ ಆಗಿದೆ. ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರ ಕಡೆ ಕೈ ತೋರಿಸುತ್ತಾರೆ. ಆದರೆ ನಾನು ಹೇಳುವುದು ಈವೊತ್ತಿನ ದಿವಸ ನೊಂದ ನೌಕರರಿಗೆ ಸರ್ಕಾರದ ಒಂದೇ ಆದಾಯವನ್ನು ನಂಬಿಕೊಂಡಿರುವವರಿಗೆ, ಕಷ್ಟ ಪರಿಸ್ಥಿತಿಯಲ್ಲಿರುವವರಿಗೆ ಜಾಸ್ತಿ ಸಂಬಳ ಕೊಡಬೇಕಾದ್ದು ಸಹಜ. ಆದರೆ ಈ ದಿವಸ ಸರ್ಕಾರದ ನೌಕರನು ಬೇಕಾದಷ್ಟು ವ್ಯವಹಾರಗಳನ್ನು ಮಾಡುತ್ತಾನೆ. ಮನಿ ಲೆಂಡರ್ ಬಿಸಿನೆಸ್ ಮಾಡುತ್ತಾನೆ, ಕಂಟ್ರಾಕ್ಟ್ ಮಾಡುತ್ತಾನೆ, ಲ್ಯಾಂಡ್ ಹೋಲ್ಡರ್ ಆಗಿರುತ್ತಾನೆ ಇನ್ನು ಏನೇನೋ ವ್ಯವಹಾರಗಳನ್ನು ಇಟ್ಟುಕೊಂಡಿರುತ್ತಾನೆ. ಆದುದರಿಂದ ನಾನು ಹೇಳುವುದು ಇಷ್ಟೆ. ಇದನ್ನು ನಾವು ಈಗ ಜಾರಿಗೆ ಕೊಡಬೇಕಾದರೆ, ಕೊನೆಯ ಮೂರು ಹಂತದ ನೌಕರರು ಏನು ಇದ್ದಾರೋ ಅವರ ಸಂಬಳ ಸಾರಿಗೆ ಜಾರಿಗೆ ಕೊಡುವುದು ಸರ್ವಸಮ್ಮತವಾಗಿದೆ, ನ್ಯಾಯಸಮ್ಮತವಾಗಿದೆ. ಇದನ್ನು ಪರಶೀಲನೆ ಮಾಡಿ ಎಂದು ಹೇಳಬಯಸುತ್ತೇನೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. CHAIRMAN (SRI B. P. KADAM) in the Chair]

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಸದನದ ಮುಂದೆ ಮಂಡಿಸಿರತಕ್ಕಂಥ ತುಕೋಳ್ ಆಯೋಗದ ವರದಿ ಬಗ್ಗೆ ನಾನು ಪ್ರಾಮುಖ್ಯವಾದ ಎರಡು ವಿಷಯಗಳನ್ನು ಪ್ರಸ್ತಾಪನೆ ಮಾಡಲೇ ಬೇಕಾಗಿದೆ.

ಮೊಟ್ಟಮೊದಲನೆಯದಾಗಿ ಈ ಮಾನ್ಯಸಭೆಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ವೇತನ ಪುನರ್ವಿಮರ್ಶೆ ಬಗ್ಗೆ ಆಯೋಗ ರಚನೆ ಆಗಬೇಕು ಎಂದು ಹೇಳಿ ಮೈಸೂರು ರಾಜ್ಯದಲ್ಲಿ ಹೋರಾಟ ಮಾಡಿದವರು ಎನ್.ಜಿ.ಒ. ಗಳೇ ವಿನಃ ಬೇರೆ ಯಾರೂ ಅಲ್ಲ. ಇದರ ಅರ್ಥ ಇದನ್ನು ಬರೀ ಎನ್.ಜಿ.ಒ. ಗಳು ಮಾತ್ರ ಕೇಳುತ್ತಾ ಇರುವುದರಿಂದ ಈ ಆಯೋಗದ ರಚನೆ ಅವರ ಬಗ್ಗೆ ಆಗಬೇಕು ಎನ್ನುವುದೂ ಅಲ್ಲ. ಆದರೂ ಕೂಡ ದೇಶದ ಹಣಕಾಸಿನ ಪರಿಸ್ಥಿತಿಯ ಆಧಾರದ ಮೇಲೆ ಮತ್ತು ಗೆಜಟೆಡ್ ಆಫೀಸರ್ಸ್‌ಗೆ ಸಂಬಂಧಪಟ್ಟ ಸಂಬಳದ ಆಧಾರದ ಮೇಲೆ ಈ ಆಯೋಗ ವರದಿ ಸಲ್ಲಿಸಬೇಕಾಗಿದೆ. ಆ ರೀತಿ ವರದಿ ಸಲ್ಲಿಸಬೇಕಾದರೆ ಕೆಲವು ಸೂಚ್ಯಗಳನ್ನು ಎನ್.ಜಿ.ಒ. ಆಫೀಸರ್ಸ್‌ಗೆ ಸಂಬಂಧಪಟ್ಟಂತೆ ಮಾತ್ರ ಸೂಚನೆ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ. ಈ ಆಯೋಗಕ್ಕೆ ರಾಜ್ಯ ಸರ್ಕಾರದವರು ಮೈಸೂರು ರಾಜ್ಯದಲ್ಲಿರತಕ್ಕಂಥ ಎಲ್ಲಾ ವರ್ಗದ ನೌಕರರ ಬಗ್ಗೆ ಅಂದರೆ ಕ್ಲಾಸ್ 1 ರಿಂದ ಹಿಡಿದು 4ನೇ ವರ್ಗದವರಿಗೂ ಕೂಡ ವರದಿಯನ್ನು ಸಲ್ಲಿಸುವ ಅವಕಾಶವನ್ನು ಕೊಟ್ಟರು. ಉದಾಹರಣೆಗೆ ಹೇಳುವುದಾದರೆ ಹೈ ಕೋರ್ಟಿನಲ್ಲಿರತಕ್ಕಂಥ ರಿಜಿಸ್ಟ್ರಾರ್ ಏನು ಇದ್ದಾರೆ ಅವರ ಸಂಬಳಸಾರಿಗೆ ಜಾಸ್ತಿ ಮಾಡುವುದಕ್ಕೆ, ಸೆಕ್ರಟೇರಿಯೆಟ್ಟಿನಲ್ಲಿರುವ ಅನೇಕ ಕಾರ್ಯದರ್ಶಿಗಳ ಸಂಬಳ ಸಾರಿಗೆ ಜಾಸ್ತಿ ಮಾಡುವುದಕ್ಕೆ ಹಾಗೂ ಇಲಾಖೆಯ ಮುಖ್ಯಾಧಿಕಾರಿಗಳು ಏನು ಇದ್ದಾರೆ ಅವರೆಲ್ಲರ ಇಂಕ್ರಿಮೆಂಟ್ ಬಗ್ಗೆ, ತುಟ್ಟಿಭತ್ಯದ ಬಗ್ಗೆ ಹೀಗೆ ಹಲವಾರು ಸೌಲಭ್ಯಗಳ ಬಗ್ಗೆ ವರದಿ ಸಲ್ಲಿಸುವುದಕ್ಕೆ ಈ ಆಯೋಗಕ್ಕೆ ಅವಕಾಶ ಉಂಟಾಯಿತು. ಈ ವರದಿಯಂತೆ ಒಪ್ಪಿಕೊಂಡರೆ ರಾಜ್ಯ ಸರ್ಕಾರ ವರ್ಷಕ್ಕೆ ಸುಮಾರು 10–14 ಕೋಟಿ

(ಶ್ರೀ ಎಸ್. ಬಂಗಾರಪ್ಪ)

ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಆದರೆ ಆ ರೀತಿ ಮಾಡುವುದಕ್ಕೆ ನಮಗೆ ಸಲ್ಲದು. ದೇಶದಲ್ಲಿ ಸಂಪನ್ಮೂಲಗಳನ್ನು ಹೆಚ್ಚು ಮಾಡಬೇಕಾಗಿದೆ, ಆದ್ದರಿಂದ ಹೆಚ್ಚು ಹಣವನ್ನು ಎನ್.ಜಿ.ಒ.ಗಳಿಗೆ ಜಿ. ಒ. ಗಳಿಗೆ ಸಂಬಳಸಾರಿಗೆ ವಿಷಯಲ್ಲಿ ಜಾಸ್ತಿ ಮಾಡಿ ಕೊಡುವುದಕ್ಕೆ ಸಾಧ್ಯವಿಲ್ಲ ಈ ದೃಷ್ಟಿಯಿಂದ ನಾನು ಹೇಳುವುದು ಈ ಆಯೋಗಕ್ಕೆ ಸತ್ಯಾಂಶಗಳನ್ನು ರಾಜ್ಯ ಸರ್ಕಾರ ಕೊಡಬೇಕಾಗಿತ್ತು ಎನ್.ಜಿ.ಒ. ಮಟ್ಟಿಗೆ ಮಾತ್ರ ಮಾಡಿ ಈ ವರದಿಯನ್ನು ಪಡೆದಿದ್ದರೆ ಇಷ್ಟೊಂದು ಖರ್ಚು ಬೀಳುತ್ತಾ ಇರಲಿಲ್ಲ, ಸುಮಾರು ಅರ್ಧದಷ್ಟು ಹಣ ಖರ್ಚು ಮಾಡುವುದಕ್ಕೆ ಸಾಧ್ಯ ಇತು. ಗೆಜೆಟೆಡ್ ಆಫೀಸರ್ಸ್ ವಿಷಯ ಪುನಃ ಯೋಚನೆ ಮಾಡಬಹುದಾಗಿತ್ತು. ನಮ್ಮ ರಾಜ್ಯದಲ್ಲಿ ಹೆಚ್ಚು ಉತ್ಪನ್ನವಾದರೆ ಗೆಜೆಟೆಡ್ ಆಫೀಸರ್ಸ್‌ಗಳಿಗೆ ಸಂಬಳ ಜಾಸ್ತಿ ಮಾಡಬಹುದಾಗಿತ್ತು. ಮುಖ್ಯವಾಗಿ ರಾಜ್ಯ ಸರ್ಕಾರದವರು ಆಯೋಗಕ್ಕೆ ಕೊಟ್ಟಿರತಕ್ಕಂತಹ ಸೂಚನೆ ಅಷ್ಟೊಂದು ಸರಿಯಾಗಿ ಇರಲಿಲ್ಲ ಎಂದು ನನ್ನ ಭಾವನೆ. ರಾಜ್ಯ ಸರಕಾರದವರು ಮೈಸೂರು ರಾಜ್ಯದಲ್ಲಿರತಕ್ಕಂಥ ಎಲ್ಲಾ ವರ್ಗಗಳ ಬಗ್ಗೆ ಅವರ ಸಂಬಳಸಾರಿಗೆಯನ್ನು ಪುನರ್ವಿಮರ್ಶೆ ಮಾಡಿ ವರದಿಯನ್ನು ಸಲ್ಲಿಸಿ ಎಂದು ಕೇಳಿದ್ದಾರೆಯೇ ಎನ್ನುವ ಬಗ್ಗೆ ಅನೇಕ ಸದಸ್ಯರು ತಮ್ಮ ಅನುಮಾನವನ್ನು, ಶಂಕೆಯನ್ನು ವ್ಯಕ್ತಮಾಡಿದ್ದಾರೆ ಏಕೆಂದರೆ ಈ ಆಯೋಗಕ್ಕೆ ಸಂಬಳಸಾರಿಗೆಯ ಬಗ್ಗೆ ಸರ್ಕಾರದವರು ಏನು ಕೇಳಿದ್ದಾರೋ ಅದರ ಬಗ್ಗೆ ಅವರು ಕೊಟ್ಟಿರತಕ್ಕಂಥ ಸಲಹೆಗಳು ಕೆಲವೊಮ್ಮೆ ಈ ಆಯೋಗ ಮೀರಿ ಹೋಗಿರುವುದು ಈ ವರದಿಯಲ್ಲಿ ಇದೆ. ಮತ್ತು ಈ ಆಯೋಗ ಪ್ರಜಾಸತ್ತೆಗೆ ವಿರೋಧವಾದಂಥ ವರದಿಯನ್ನು ಮಾಡಿದೆ.

3-00 P.M.

ಈ ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡರೆ ಪ್ರಜಾಸತ್ತೆಗೆ ಕೆಲವು ದೃಷ್ಟಿಯಲ್ಲಿ ನಾವು ತಪ್ಪನ್ನು ಬಗೆಯುತ್ತೇವೆ ಎನ್ನುವ ಯೋಚನೆ ಬರುತ್ತದೆ. ಹೇಗೆ ಎಂದರೆ, ಬ್ರಿಟಿಷರ ಕಾಲದಲ್ಲಿ ಕಲೆಕ್ಟರ್ ಅಥವಾ ಡೆಪ್ಯುಟಿ ಕಮಿಷನರ್ ಎಂದು ನಾವು ಏನು ಕರೆಯುತ್ತಿದ್ದೆವು ಅವರು ಸರ್ಕಾರದ ಕಣ್ಣು ಮತ್ತು ಕಿವಿ ಆಗಿದ್ದರು, ಅವರಿಗೆ ಈಗ ಕೊಟ್ಟಿರತಕ್ಕ ಅಧಿಕಾರಗಳು ಮತ್ತು ಸ್ಥಾನಮಾನ ಇವೆಲ್ಲ ಕಡಿಮೆಯಾಗಿವೆ. ಈ ದೃಷ್ಟಿಯಿಂದ ಅವರ ಗ್ರೇಡನ್ನು ಏರಿಸಬೇಕು. ಅದರ ಅರ್ಥ ಬ್ರಿಟಿಷರ ಕಾಲದಲ್ಲಿ ಇದ್ದಂಥ ಅಧಿಕಾರಿ ಸರ್ಕಾರದ ಕಣ್ಣು ಕಿವಿ ಆಗಿ ಹೇಗೆ ಇದ್ದ ಆ ಅಧಿಕಾರವನ್ನು ಅವರಿಗೆ ಪುನಃ ದೊರಕಿಸಿಕೊಡಬೇಕು ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನಾವು ಪ್ರಜಾಸತ್ತೆಯಲ್ಲಿ ಅಧಿಕಾರವನ್ನು ಯಾವತ್ತೂ ವಿಕೇಂದ್ರೀಕರಣಕ್ಕೆ ಒಳಪಡಿಸಬೇಕು, ಅಧಿಕಾರ ಕೇಂದ್ರೀಕರಣವಾಗಿ ಇರಬಾರದು ಎನ್ನುವ ವಾದವನ್ನು ಪ್ರಬಲವಾಗಿ ಮಾಡುತ್ತಿದ್ದೇವೆ. ಪ್ರಜಾಸತ್ತೆಯಲ್ಲಿ ನಂಬಿಕೆ ಉಳ್ಳಂಥ ಜನ ಆ ರೀತಿ ವಾದ ಮಾಡುತ್ತಲೇ ಇದ್ದಾರೆ. ಹೀಗಿರುವಾಗ ನಾವು ಪುನಃ ಕಲೆಕ್ಟರ್ ಅಥವಾ ಡೆಪ್ಯುಟಿ ಕಮಿಷನರ್‌ಗಳಿಗೆ ಆ ರೀತಿ ಅಧಿಕಾರವನ್ನು ಕೊಟ್ಟು ಅವರನ್ನು ಆ ಗ್ರೇಡಿಗೆ ಒಯ್ಯುವುದಾದರೆ ಪುನಃ ಅವರು ತಮ್ಮ ಅಧಿಕಾರದಿಂದ ಬ್ರಿಟಿಷರ ಕಾಲದಲ್ಲಿ ಇದ್ದಂಥ ಅಧಿಕಾರ ದರ್ಪವೇನಿತ್ತು ಅದನ್ನು ಚಲಾವಣೆ ಮಾಡುವುದಕ್ಕೆ ಸಾಧ್ಯ ಎನ್ನುವ ಯೋಚನೆ ಅಥವಾ ನೆನಪು ನಮಗೆ ಬರುತ್ತದೆ. ಹೀಗೆ ಯೋಚನೆ ಮಾಡುತ್ತಾ ಇರಬೇಕಾದರೆ ನಾವು ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಅಧಿಕಾರವನ್ನು ಕೇಂದ್ರೀಕರಣ ಮಾಡುವಂಥ ಆಯೋಗದ ಸಲಹೆ ಸರ್ವಥಾ ಒಪ್ಪತಕ್ಕ ಸಲಹೆಯಲ್ಲ, ಅದನ್ನು ತಿರಸ್ಕಾರ ಮಾಡಬೇಕು, ಒಪ್ಪುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಾತನ್ನು ನಾವು ರಾಜ್ಯ ಸರ್ಕಾರದ ನೆನಪಿಗೆ ಈ ಸಂದರ್ಭದಲ್ಲಿ ತಂದು ಕೊಡಬೇಕಾಗುತ್ತದೆ, ಈ ವಿಷಯವನ್ನು ಹೇಳುತ್ತ ಕೆಲವಾರು ಇಲಾಖೆಗಳಲ್ಲಿರುವ ಅಧಿಕಾರಿಗಳ ಸ್ಥಾನಮಾನವನ್ನು ಏರಿಸತಕ್ಕ ಸಲಹೆಯನ್ನು ಆಯೋಗದ ವರದಿಯಲ್ಲಿ ಕೊಟ್ಟಿರುವುದರಲ್ಲಿ ಕೆಲವು ಅಧಿಕಾರಿಗಳ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅಂಥ ಸಲಹೆಯನ್ನು ಕೂಡ ಇಟ್ಟಿದ್ದಾರೆ.

ಅರಣ್ಯ ಇಲಾಖೆಯಲ್ಲಿ ರೇಂಜ್ ಫಾರೆಸ್ಟ್ ಆಫೀಸರ್ಸ್ ಹುದ್ದೆಯನ್ನು ಗೆಜೆಟೆಡ್ ಕೇಡರ್‌ಗೆ ಏರಿಸಬೇಕು ಎನ್ನುವ ಮಾತನ್ನು ಬರೆದಿದ್ದಾರೆ. ಇದನ್ನು ನಾನು ಪ್ರಬಲವಾಗಿ ವಿರೋಧ ಮಾಡುತ್ತೇನೆ. ಅವರ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡುವುದಕ್ಕೆ ವಿರೋಧ ಮಾಡುತ್ತೇನೆ. ಕಾರಣವೇನೆಂದರೆ ನಮ್ಮ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿ ಲಂಚ ತಿನ್ನುವುದಕ್ಕೆ ವಾತಾವರಣವಿಲ್ಲ ಎಂದು ಏನಾದರೂ ಮಾಡಿದರೆ ಅವರನ್ನು ಗೆಜೆಟೆಡ್ ರ್‍ಯಾಂಕಿಗೆ ಒಯ್ಯಬಹುದು, ಸಂಬಳ ಸಾರಿಗೆ ಜಾಸ್ತಿ ಮಾಡಬಹುದು. ರೇಂಜ್ ಫಾರೆಸ್ಟ್ ಅಧಿಕಾರಿಗಳು ತಮ್ಮ ವ್ಯಾಪ್ತಿಯೊಳಗೆ ಇರುವ ಅರಣ್ಯ ಸಂಪತ್ತು ಏನಿದೆ ಅದನ್ನು ಲೂಟಿ ಹೊಡೆದುಕೊಳ್ಳುತ್ತಿದ್ದಾರೆ. ಶಿವಮೊಗ್ಗದಲ್ಲಿ ರೇಂಜ್ ಫಾರೆಸ್ಟ್ ಅಧಿಕಾರಿಗಳು ಲಕ್ಷಾಂತರ

ರೂಪಾಯಿ ಬೆಲೆ ಬಾಳತಕ್ಕ ನಾಲ್ಕೈದು ಭಾರಿ ಭಾರಿ ಕಟ್ಟಡಗಳನ್ನು, ಸೌಧಗಳನ್ನು ಕಟ್ಟಿ ಭಾರಿ ಶ್ರೀಮಂತರಾಗಿದ್ದಾರೆ. ಅಂಥವರನ್ನು ಗೆಜೆಟೆಡ್ ರ್‍ಯಾಂಕಿಗೆ ಏರಿಸಬೇಕೇ, ಇವರ ಸಂಬಳಸಾರಿಗೆಗಳನ್ನು ಜಾಸ್ತಿ ಮಾಡಬೇಕೇ ? ಒಬ್ಬ ರೇಂಜ್ ಫಾರೆಸ್ಟ್ ಅಧಿಕಾರಿಯನ್ನು ಶಿವಮೊಗ್ಗ ಡಿವಿಜನ್ನಿಗೆ ವರ್ಗ ಮಾಡುವುದಕ್ಕೆ ಐದು ಸಾವಿರ ರೂಪಾಯಿ ಫೀಸು ಗೊತ್ತು ಮಾಡಿದ್ದಾರೆ. ಒಬ್ಬ ರೇಂಜ್ ಫಾರೆಸ್ಟ್ ಅಧಿಕಾರಿಯನ್ನು ವರ್ಗ ಮಾಡುವುದಕ್ಕೆ ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಐದು ಸಾವಿರ ರೂಪಾಯಿಗಳನ್ನು ಗೊತ್ತು ಮಾಡಿದ್ದಾರೆ. ಈ ಐದು ಸಾವಿರ ರೂಪಾಯಿಗಳನ್ನು ರೇಂಜ್ ಫಾರೆಸ್ಟ್ ಅಧಿಕಾರಿ ಕೊಟ್ಟು ವರ್ಗಾವಣೆ ಮಾಡಿಸಿಕೊಳ್ಳುತ್ತಾನೆ. ಅವನು ಐದು ಸಾವಿರ ರೂಪಾಯಿ ಖರ್ಚು ಮಾಡಿದ್ದರೆ ಒಂದು ತಿಂಗಳಿನಲ್ಲಿ ಹತ್ತು ಸಾವಿರ ರೂಪಾಯಿ ದುಡಿಯುವುದಕ್ಕೆ ಗೊತ್ತಿದೆ. ರಾಜ್ಯ ಸರ್ಕಾರಕ್ಕೆ ಸೇರಿರತಕ್ಕ ಅರಣ್ಯ ಸಂಪತ್ತನ್ನು ಕೊಳ್ಳೆ ಹೊಡೆದು, ಕಂಟ್ರಾಕ್ಟರುಗಳು, ಕಳ್ಳತನದಲ್ಲಿ ನಾಟಾ ಸಾಗಿಸುವ ಕೆಲಸದಲ್ಲಿ ನಿರತರಾಗಿರುವವರು ಎಲ್ಲರನ್ನೂ ಸೇರಿಕೊಂಡು ಒಂದು ತಿಂಗಳಿಗೆ 10-15 ಸಾವಿರ ರೂಪಾಯಿ ದುಡಿಯುವುದಕ್ಕೆ ಸಾಧ್ಯವಿದೆ ಎನ್ನುವುದು ಅವರಿಗೆ ಗೊತ್ತು. ಹೀಗಿರುವಾಗ ಐದು ಸಾವಿರ ರೂಪಾಯಿಗಳನ್ನು ಏಕೆ ಖರ್ಚು ಮಾಡಿ ವರ್ಗ ಮಾಡಿಸಿಕೊಳ್ಳಬಾರದು ಎನ್ನುವುದು ನನ್ನ ಪ್ರಶ್ನೆ. ಇಂಥ ಅಧಿಕಾರಿಗಳ ಬಗ್ಗೆ ಪೇ ಕಮಿಷನ್‌ನವರು ಏನು ವರದಿಯನ್ನು ಸಲ್ಲಿಸಿದ್ದಾರೆ, ಅವರಿಗೆ ಸಂಬಳ ಸಾರಿಗೆ ಜಾಸ್ತಿ ಮಾಡುವ ಸಲಹೆ ಏನು ಮಾಡಿದ್ದಾರೆ ಅದನ್ನು ಒಪ್ಪಬಾರದು. ಲಂಚ ತಿನ್ನತಕ್ಕ ವಾತಾವರಣ ಸರಿಯಾಗಿ ಇದ್ದಾಗ ಅಂಥ ಅಧಿಕಾರಿಗಳ ಸಂಬಳದ ಏರಿಕೆಯ ವಿಷಯ ಯೋಚನೆ ಮಾಡಬೇಡಿ ಎಂದು ಹೇಳಿದ್ದರೆ ಅವರು ಬಿಡುತ್ತಿದ್ದರು ಎಂದು ಕಾಣುತ್ತದೆ. ಅದನ್ನೆಲ್ಲ ಹೇಳದೆ ಇದ್ದುದರಿಂದ ಅವರು ಏನೂ ಆ ಬಗ್ಗೆ ಯೋಚನೆ ಮಾಡಲು ಸಾಧ್ಯವಾಗಲಿಲ್ಲ ಎಂದು ಕಾಣುತ್ತದೆ. ಅವರೂ ಎಲ್ಲರಂತೆ ಒಬ್ಬ ಅಧಿಕಾರಿ ಎಂದು ಯೋಚನೆ ಮಾಡಿದ್ದಾರೆ. ಆದ್ದರಿಂದ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡುವಾಗ ಲಂಚ ತಿನ್ನತಕ್ಕ ಅಧಿಕಾರಿಯ ಬಗ್ಗೆ ಏಕೆ ಜಾಸ್ತಿ ಮಾಡಬೇಕು ಎಂದು ನಾವು ಮತ್ತು ಸರ್ಕಾರ ಯೋಚನೆ ಮಾಡಬೇಕಾಗಿದೆ.

ಪೋಲೀಸ್ ಇಲಾಖೆಯನ್ನು ತೆಗೆದುಕೊಂಡರೆ ಸರ್ಕಲ್ ಇನ್‌ಸ್ಪೆಕ್ಟರುಗಳನ್ನು ಗೆಜೆಟೆಡ್ ಕೇಡರ್‌ಗೆ ಏರಿಸಿ ಅವರ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಪೋಲೀಸ್ ಇಲಾಖೆಯ ಬಗ್ಗೆ ಈ ಸದನದ ಮಾನ್ಯ ಸದಸ್ಯರು ಅನೇಕ ಶಂಕೆಗಳನ್ನು ವ್ಯಕ್ತ ಮಾಡಿದ್ದಾರೆ. ಪೋಲೀಸ್ ಇಲಾಖೆ ಕರಪ್ಟ್ ಇಲಾಖೆ ಎನ್ನುವ ಹೆಸರುಗಳಿಸಿದೆ. ಅಡಿಯಿಂದ ಮುಡಿಯವರೆಗೂ ಇರತಕ್ಕ ಅಧಿಕಾರಿಗಳು ನಾನಾ ಹಂತದಲ್ಲಿ, ನಾನಾ ರೂಪದಲ್ಲಿ ಲಂಚ ತಿನ್ನತಕ್ಕ ಸಂದರ್ಭವಿದ್ದು ಜನತೆಯನ್ನು ಲೂಟಿ ಹೊಡೆಯುತ್ತಿದ್ದಾರೆ ಎನ್ನುವ ಮಾತನ್ನು ಅನೇಕ ಜನ ಸದಸ್ಯರು ಬಹಳ ಜವಾಬ್ದಾರಿಯಿಂದ ಈ ಸಭೆಯಲ್ಲಿ ಆಪಾದನೆ ಮಾಡಿದ್ದಾರೆ. ಪೋಲೀಸ್ ಇಲಾಖೆಯ ಬೇಡಿಕೆಗಳು ಬಂದಾಗ ಬಹಳ ಕೂಲಂಕಷವಾಗಿ ಚರ್ಚೆ ಮಾಡಿದ್ದೇವೆ. ಪೋಲೀಸ್ ಇಲಾಖೆಯ ಅಧಿಕಾರಿಗಳಿಗೂ ಸಂಬಳ ಜಾಸ್ತಿ ಮಾಡಿ ಸರ್ಕಲ್ ಇನ್‌ಸ್ಪೆಕ್ಟರ್‌ಮೇಲೆ ಮತ್ತ ಇರುವವರನ್ನೆಲ್ಲ ಗೆಜೆಟೆಡ್ ಹುದ್ದೆಗೆ ಏರಿಸುವುದು ಸರಿಯಲ್ಲ. ನಾನ್ ಗೆಜೆಟೆಡ್ ಅಧಿಕಾರಿಗಳು ಜೈಲಿಗೆ ಹೋಗಿ, ಕೇಸು ಹಾಕಿಸಿಕೊಂಡು ಕಷ್ಟ ಪಟ್ಟಿರುವಾಗ ಆರಾಮವಾಗಿ ಕುಳಿತುಕೊಂಡು ಅದರ ಲಾಭವನ್ನು ಪಡೆಯತಕ್ಕ ಒಂದು ವರ್ಗ, ಕೆಟ್ಟ ವರ್ಗ ಆಗುತ್ತಿದೆ ; ನನ್ನ ಅಭಿಪ್ರಾಯದ ಪ್ರಕಾರ. ರಾಷ್ಟ್ರದಲ್ಲಿ ಟಾಟಾ, ಬಿರ್ಲಾಗಳು ಇದ್ದ ಹಾಗೆ ಅಧಿಕಾರಿಗಳಲ್ಲಿ ಒಂದು ವರ್ಗ ಆಗುತ್ತಿದೆ. ನಾನ್ ಗೆಜೆಟೆಡ್ ಅಧಿಕಾರಿಗಳಿಗೂ ಮತ್ತು ಗೆಜೆಟೆಡ್ ಅಧಿಕಾರಿಗಳಿಗೂ ಇರುವ ಇನ್‌ಕ್ರಿಮೆಂಟ್ ದರಗಳನ್ನು ನೋಡಿದರೆ ಇದು ಚೆನ್ನಾಗಿ ತಿಳಿಯುತ್ತದೆ. ಗೆಜೆಟೆಡ್ ಅಧಿಕಾರಿಗಳಿಗೆ 60 ರೂಪಾಯಿಗಳಿಂದ ಹಿಡಿದು 100 ರೂಪಾಯಿಗಳವರೆಗೂ ಇನ್‌ಕ್ರಿಮೆಂಟ್ ರೇಟ್ ಇದೆ. ಅದೇ ಮೂರು ಮತ್ತು ನಾಲ್ಕನೇ ದರ್ಜೆಯವರು ಎರಡನೇ ದರ್ಜೆಯವರನ್ನೂ ಸೇರಿಸಬಹುದು, ಅವರಿಗೆ ಒಂದು ರೂಪಾಯಿ, ಎರಡು ರೂಪಾಯಿ, ನಾಲ್ಕು ರೂಪಾಯಿ ಈ ರೀತಿಯಾಗಿದೆ. ಕಷ್ಟಪಟ್ಟು ದುಡಿಮೆ ಮಾಡಿದರೆ ಎರಡು ರೂಪಾಯಿ, ನಾಲ್ಕು ರೂಪಾಯಿ ಇನ್‌ಕ್ರಿಮೆಂಟ್ ಕೇಳತಕ್ಕ ಬಡ ನಾನ್ ಗೆಜೆಟೆಡ್ ಅಧಿಕಾರಿಗಳು ಹೋರಾಟ ಮಾಡಿ ಕಷ್ಟ ಪಡುತ್ತಿರುವಾಗ ಆರಾಮವಾಗಿ ಕುಳಿತುಕೊಂಡು ಅದರ ಪ್ರತಿಫಲ ಪಡೆಯುವವರು 60ರಿಂದ ನೂರು ರೂಪಾಯಿ ಇನ್‌ಕ್ರಿಮೆಂಟ್ ಪಡೆಯತಕ್ಕ ಎರಡು ಸಾವಿರ ರೂಪಾಯಿ ಸಂಬಳ ಪಡೆಯತಕ್ಕ ಗೆಜೆಟೆಡ್ ಅಧಿಕಾರಿಗಳು. ಆದ್ದರಿಂದ ಹೋರಾಟ ನಡೆಸಿದವರು ನಾನ್ ಗೆಜೆಟೆಡ್ ನೌಕರರು ಅದರ ಲಾಭ ಪಡೆಯುತ್ತಿರುವವರು ಗೆಜೆಟೆಡ್ ಅಧಿಕಾರಿಗಳು. ಇದು ಆಯೋಗದ ಒಂದು ಮುಖ್ಯ ತಪ್ಪು ನನ್ನ ಪ್ರಕಾರ. ಗೆಜೆಟೆಡ್ ಅಧಿಕಾರಿಗಳ ಬಗ್ಗೆ ಆಯೋಗದ ವರದಿಯನ್ನು ಒಪ್ಪಿಕೊಳ್ಳುವುದಾದರೆ 12 ಕೋಟಿ ರೂಪಾಯಿ ಮಾತ್ರವಲ್ಲ, ನನ್ನ ಪ್ರಕಾರ ಎಷ್ಟು ಕೋಟಿ ರೂಪಾಯಿ ಆದರೂ ಜಾಸ್ತಿ ಆಗಬಹುದು. ಅದಕ್ಕೆ ಬೇಕಾದ ಹಣವನ್ನು ಒದಗಿಸುವುದಕ್ಕೆ ಕಷ್ಟವೂ ಆಗಬಹುದು. ಆದ್ದರಿಂದ ಗೆಜೆಟೆಡ್ ಅಧಿಕಾರಿಗಳ ಬಗ್ಗೆ ಆಯೋಗದ ವರದಿ ಏನಿದೆ ಅದಕ್ಕೆ ಕತ್ತರಿ ಪ್ರಯೋಗ ಮಾಡಬೇಕು. ನನಗೆ ತಿಳಿದ ಮಟ್ಟಿಗೆ ಗೆಜೆಟೆಡ್ ಅಧಿಕಾರಿಗಳಿಗೆ ಸದ್ಯಕ್ಕೆ ಏನು ತೊಂದರೆ ಆಗಿಲ್ಲ. ನಾನ್ ಗೆಜೆ

(ಶ್ರೀ ಎಸ್. ಬಂಗಾರಪ್ಪ)

ಟೆಡ್ ಅಧಿಕಾರಿಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರಕ್ಕೆ ಏನೇ ತೊಂದರೆ ಆದರೂ ಕೂಡ ಆಯೋಗದ ಸಲಹೆ ಬಹಳ ಸ್ವಾಗತಾರ್ಹ, ಅದನ್ನು ಕೂಡಲೇ ಜಾರಿಗೆ ಕೊಡಬೇಕು. ಬೇಸಿಕ್ ಪೇ ಮೂರನೇ ದರ್ಜೆ ನೌಕರರಿಗೆ 110 ರೂಪಾಯಿ ಎಂದು ಮಾಡಿದ್ದಾರೆ. ಹೆಚ್ಚು ಎಂದರೆ 160, 170, 200 ರೂಪಾಯಿಗಳವರೆಗೂ ಹೋಗುತ್ತದೆ. ಪಟ್ಟಣಗಳಲ್ಲಿ ವಾಸ ಮಾಡತಕ್ಕ ನೌಕರದಾರರು ಮನೆ ಬಾಡಿಗೆ ಕೊಟ್ಟು ಜೀವನ ನಿರ್ವಹಣೆ ಮಾಡಬೇಕು. ಮನೆ ಬಾಡಿಗೆ ವಿಷಯವನ್ನು ಹೇಳುವುದಾದರೆ 1958–59ರಲ್ಲಿ ನಡೆದ ಸರ್ವೆ ಆಧಾರದ ಮೇಲೆ ಒಂದು ಮನೆಗೆ 15–50 ರೂಪಾಯಿ ಬಾಡಿಗೆ ಎಂದು ಗೊತ್ತು ಮಾಡಿದ್ದಾರೆ. ಇದನ್ನು ಪೇ ಕಮಿಷನ್‌ನವರು ಆಧಾರವಾಗಿ ಇಟ್ಟುಕೊಂಡಿದ್ದಾರೆ. ಮೂರು ಮತ್ತು ನಾಲ್ಕನೆ ದರ್ಜೆ ನೌಕರರಿಗೆ 15–50 ರೂಪಾಯಿಗಳಿಗೆ ಎಂಥ ಮನೆ ಸಿಕ್ಕುತ್ತದೆ, ಇದು ಎಲ್ಲಿಯಾದರೂ ಸಾಧ್ಯವೇ, ಇದನ್ನು ನಾವು ಒಪ್ಪಿಕೊಳ್ಳಬಹುದೇ ಎನ್ನುವ ಸಂಗತಿ ಕೂಡ ಬರುತ್ತದೆ. ಈ ದೃಷ್ಟಿಯಿಂದ ಆಯೋಗದವರು ನಾನ್ ಗೆಜೆಟೆಡ್ ನೌಕರರ ಬಗ್ಗೆ ಮಾಡಿರುವ ಸಿಫಾರಸುಗಳನ್ನು ಜಾರಿಗೆ ತರುವ ವಿಷಯವನ್ನು ಯೋಚನೆ ಮಾಡಬೇಕೆಂದೂ, ನಮ್ಮ ಆರ್ಥಿಕ ಪರಿಸ್ಥಿತಿ ಸರಿಯಾಗುವುದಾದರೆ ಗೆಜೆಟೆಡ್ ನೌಕರರ ಬಗ್ಗೆಯೂ ಯೋಚನೆ ಮಾಡಬಹುದು ಎನ್ನುವ ಮಾತನ್ನು ತಿಳಿಸಬಯಸುತ್ತೇನೆ.

ನಾನು ಇನ್ನು ಹೆಚ್ಚು ಕಾಲ ತೆಗೆದುಕೊಳ್ಳದೆ ಒಂದು ಸಲಹೆಯನ್ನು ಮಾತ್ರ ಕೊಡುವುದಕ್ಕೆ ಇಷ್ಟಪಡುತ್ತೇನೆ. ಸಂಪನ್ಮೂಲಗಳನ್ನು ಹುಡುಕತಕ್ಕ ಕೆಲಸದಲ್ಲಿ ಪೇ ಕಮೀಷನ್ ರಿಪೋರ್ಟ್ ಕೊಟ್ಟಿರುವ ವರದಿ ಆಡಳಿತ ಸುಧಾರಣಾ ಸಮಿತಿಯ ವರದಿಯಂತೆ ಕಾಣುತ್ತದೆ. ಡಿವಿಜನಲ್ ಕಮಿಷನರ ಹುದ್ದೆಗಳನ್ನು ರದ್ದು ಮಾಡುವ ಸಲಹೆ ಸ್ವಾಗತಾರ್ಹವೆಂದು ಹೇಳುತ್ತೇನೆ. ಆದರೆ ಅದೇ ಧಾಟಿಯಲ್ಲಿ ಬೇರೆ ಸಲಹೆಗಳನ್ನೂ ಒಪ್ಪಿಕೊಳ್ಳುವುದಾದರೆ ಆಡಳಿತ ಸುಧಾರಣಾ ವರದಿಯಾದೀತು. ಅದರ ನಮೂನೆಯೇ ಬೇರೆ. ಹಣ ಹುಡುಕುವ ಗೋಜಿನಲ್ಲಿ ಆಡಳಿತ ಸುಧಾರಣಾ ವರದಿಯಂತಿರುವ ಈ ವರದಿಯನ್ನು ನಾವು ಪೂರ್ಣವಾಗಿ ಒಪ್ಪುವುದಾದರೆ ನಾವು ಮೋಸ ಬೀಳಬಹುದು ಎಂದು ನನ್ನ ಅಭಿಪ್ರಾಯ. ಇಷ್ಟು ಹೇಳಿ ಈಗ ಉದಾಹರಣೆಗೆ ಉಪಾಧ್ಯಾಯರಿದ್ದಾರೆ, ಪ್ರೈಮರಿ ಶಾಲೆಗಳಲ್ಲಿರುವ ಉಪಾಧ್ಯಾಯರಿಗೆ 110 ರೂಪಾಯಿಗಳ ಬೇಸಿಕ್ ಪೇ ತುಕೋಳ್ ಕಮಿಷನ್‌ನವರು ಗೊತ್ತು ಮಾಡಿದ್ದಾರೆ. ಕಾನ್‌ಸ್ಟೇಬಲ್ಲುಗಳಿಗೆ 85–90 ರೂಪಾಯಿ ಬೇಸಿಕ್ ಪೇ ಇದೆ. ಆದರಿಂದ ಅವರು ಏನು ತಾನೆ ಮಾಡಲು ಸಾಧ್ಯ ? ಬೆಂಗಳೂರು ಸಿಟಿಯಲ್ಲಿ ಖರ್ಚು ಹೆಚ್ಚು, ಕಾನ್‌ಸ್ಟೇಬಲ್ಲುಗಳು ರಸ್ತೆಗಳಲ್ಲಿ ಗಂಟೆಗಟ್ಟಲೆ ನಿಲ್ಲಬೇಕು, ಹಿಡಿಯಲು ಒಂದು ಗೂಟ ಕೂಡ ಇರುವುದಿಲ್ಲ, ಚಾಮರಾಜಪೇಟೆ ಮತ್ತು ಕೆಂಪೇಗೌಡ ರಸ್ತೆಗಳಲ್ಲಿ ಗಲಾಟೆ ಜಾಸ್ತಿ, ಕಾನ್‌ಸ್ಟೇಬಲ್ಲುಗಳಿಗೆ ಎಲ್ಲಿ ವಾಹನಗಳು ತಮಗೆ ತಗಲಿ ಯಾವಾಗ ತಮಗೇನು ತೊಂದರೆಯಾಗುವುದೋ ಎಂಬ ಭೀತಿ ಇರುತ್ತದೆ. ಅಂಥವರಿಗೆ ಬಹಳ ಕಡಮೆ ಸಂಬಳ ಕೊಟ್ಟರೆ ಹೇಗೆ ಅನುಕೂಲವಾದೀತು ? ಗೆಜೆಟೆಡ್ ಆಫೀಸರುಗಳಿಗಾದರೆ ಏರ್ ಕಂಡೀಷನ್ ರೂಂ ಸಿಕ್ಕಬಹುದು, ಕಾರು, ಬಂಗಲೆ ಮುಂತಾದ ಸೌಕರ್ಯಗಳೆಲ್ಲಾ ಇರುತ್ತವೆ, ನೆರಳಲ್ಲಿ ಕುಳಿತು ಕೆಲಸ ಮಾಡುವರು. ಆದರೆ ಕಷ್ಟ ಪಡುವ ಕಾನ್‌ಸ್ಟೇಬಲ್ಲುಗಳಿಗೆ 60 ರಿಂದ 100 ರೂಪಾಯಿಗಳವರೆಗೆ ಕೂಡ ಸಂಬಳ ಇಲ್ಲ. ಗೆಜೆಟೆಡ್ ಆಫೀಸರುಗಳಿಗೆ ನೂರು ರೂಪಾಯಿ ಬಡ್ತಿ ಸಹ ದೊರೆಯುವುದು. ಮುಖ್ಯವಾಗಿ ತೊಂದರೆಯಲ್ಲಿರುವ ನಾನ್ ಗೆಜೆಟೆಡ್ ಆಫೀಸರುಗಳಿಗೆ ಏನು ಸಂಬಳ ಕೊಡಬೇಕೆಂದು ಕಮಿಷನ್‌ನವರು ವರದಿ ಮಾಡಿರುವರೋ ಅದನ್ನು ಜಾರಿಗೆ ಕೊಡಬೇಕು, ಉಳಿದವರಿಗೆ ಪರಿಸ್ಥಿತಿ ಉತ್ತಮವಾದಾಗ ಕೊಡಬಹುದು. ಬಹಳ ಕ್ಲಿಷ್ಟ ಪರಿಸ್ಥಿತಿಯಿದೆ ಎಂದು ರಾಜ್ಯ ಸರಕಾರದವರು ಆಗಾಗ್ಗೆ ಹೇಳುವುದುಂಟು. 20 ವರ್ಷಗಳ ಆಡಳಿತದಲ್ಲಿ ಇದನ್ನೇ ಕೇಳುತ್ತಿದ್ದೇವೆ. ಅದಿರಲಿ, ಈಗ ಎನ್. ಜಿ. ಓ. ಗಳಿಗೆ ಕಮಿಷನ್ ಶಿಫಾರಸು ಮಾಡಿರುವ ವೇತನವನ್ನು ಜಾರಿಗೆ ಕೊಡಬೇಕು, ಜಿ ಓ ಗಳ ವಿಚಾರ ಅನುಕೂಲ ಪರಿಸ್ಥಿತಿ ಬರುವವರೆಗೆ ಬಿಡಬಹುದು ಎಂದು ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಯವರೇ, ಮಾನ್ಯ ತುಕೋಳ್‌ರವರು ಕೊಟ್ಟ ವರದಿಯನ್ನು ಸರಕಾರದವರು ಸಭೆಯ ಮುಂದಿಟ್ಟಿದ್ದಾರೆ. ತುಕೋಳ್‌ರವರು ಸುಮಾರು ಎರಡು ವರ್ಷ ಕಾಲ ತೆಗೆದುಕೊಂಡು ಎಲ್ಲ ವಿಚಾರಗಳನ್ನು ವಿಮರ್ಶೆ ಮಾಡಿ ಬೇಕಾದಷ್ಟು ರಿಕಾರ್ಡು ನೋಡಿ, ಸಂಬಂಧಪಟ್ಟವರೊಡನೆ ಚರ್ಚೆ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಒಂದು ವಿಷಯ, ಸಭೆಯಲ್ಲಿ ಮಂತ್ರಿಗಳು ಯಾರೂ ಇಲ್ಲ, ಒಬ್ಬರು ಉಪಮಂತ್ರಿಗಳು ಮಾತ್ರ ಇದ್ದಾರೆ, ಇದು ಬಹಳ ಬೇಜವಾಬ್ದಾರಿಯನ್ನು ತೋರಿಸುವುದು. ಹೀಗಿರುವುದಾದರೆ ನಾವೇಕೆ ಇಲ್ಲಿ ಭಾಷಣ ಮಾಡಬೇಕು ? ಇಲ್ಲಿಗೇಕೆ ಬರಬೇಕು?

Mr. CHAIRMAN.—These queries have often been raised and replied. The Hon. Deputy Minister is there to represent the Government.

ಶ್ರೀ ಬೋಳ ರಘುರಾಮ ಶೆಟ್ಟಿ.—ಈ ವರದಿಯನ್ನು ಜಾರಿಗೆ ತಂದರೆ ಸುಮಾರು 17 ಕೋಟಿ ರೂಪಾಯಿಗಳು ಖರ್ಚಾಗುವುದು, ಮುಂದೆ ಅದು 22 ಕೋಟಿಗೆ ಏರುವುದು ಎಂದು ಸರಕಾರದವರು ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ. ಸರಕಾರದ ಯಂತ್ರ ಸರಿಯಾಗಿ ಕೆಲಸ ಮಾಡಬೇಕು ಎಂಬ ಮನಸಿದ್ದರೆ, ಈ ವರದಿಯ ವಿಚಾರದಲ್ಲಿ ಸರಕಾರ ತನ್ನ ನಿರ್ದಿಷ್ಟವಾದ ಧೋರಣೆಯನ್ನು ತಿಳಿಸಿದ್ದರೆ ಈ ಸಭೆ ನಿಜವಾಗಿಯೂ ಕೂಡ ಅಮೂಲ್ಯವಾದ ಸಲಹೆಯನ್ನು ಕೊಡಬಹುದಾಗಿತ್ತು. ಆದರೆ ಸರಕಾರದವರು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಂಡಿದ್ದಾರೆ. ಇಂದು ಇಲ್ಲಿ ಮಂತ್ರಿಗಳಿಲ್ಲದಿರುವುದು ಈ ಸಮಸ್ಯೆಯ ಕಡೆ ಅವರೆಷ್ಟು ಗಮನ ಕೊಡುತ್ತಾರೆ ಎಷ್ಟು ಪ್ರಾಮುಖ್ಯತೆ ಕೊಡುತ್ತಾರೆ ಎಂಬುದನ್ನು ಸೂಚಿಸುವುದು. ವಿಶಾಲ ಮೈಸೂರಾದಾಗ ಮದ್ರಾಸು ಕರ್ಣಾಟಕ, ಹೈದರಾಬಾದು ಕರ್ಣಾಟಕ, ಮುಂಬಯಿ ಕರ್ಣಾಟಕ, ಕೊಡಗು ಮತ್ತು ಹಳೆಯ ಮೈಸೂರು ಭಾಗಗಳು ಸೇರಿ ಒಂದು ದೇಶವಾಯಿತು. ಆ ಸಂದರ್ಭದಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಬಂದ ಅಧಿಕಾರಿಗಳಿದ್ದರು, ಅವರ ಸಂಬಳಸಾರಿಗೆ ಬೇರೆಬೇರೆ ರೀತಿಯಲ್ಲಿತ್ತು. ನಿಜವಾಗಿಯೂ ಸರಕಾರಕ್ಕೆ ಒಳ್ಳೆಯ ಆಡಳಿತ ಇರಬೇಕೆಂಬ ಅಪೇಕ್ಷೆಯಿದ್ದರೆ ಆ ಸಮಯಲ್ಲಿ ಈ ರೀತಿಯ ಒಂದು ಕಮಿಷನ್ ಮಾಡಿ ಬೇರೆಬೇರೆ ಸ್ಥಳಗಳಿಂದ ಬಂದ ಅಧಿಕಾರಿಗಳ ಸ್ಥಾನ, ಅವರ ಸಂಬಳ ಮುಂತಾದುವುಗಳ ಪರಿಷ್ಕರಣ ಮಾಡಬೇಕಾಗಿತ್ತು. ಆದರೆ ಈ ಸಮಸ್ಯೆಯನ್ನು ಪರಿಹಾರಮಾಡದೆ ಅದಕ್ಕೆ ಬಹಳ ಸಮಯ ತೆಗೆದುಕೊಂಡು 1967 ನೆಯ ಇಸವಿಯ ಚುನಾವಣೆಯ ಸಮಯದಲ್ಲಿ ಸರಕಾರಿ ನೌಕರರನ್ನು ಸಂತೋಷಪಡಿಸಲು ಆ ಉದ್ದೇಶದಿಂದ ತುಕೋಳ್ ಕಮಿಷನ್ ನೇಮಕಮಾಡಿರುವಹಾಗಿದೆ. ಈ ಕಮಿಷನ್ ಆದರೂ ಕೂಡ ಒಂದು ಸುದೀರ್ಘವಾದ ವರದಿಯನ್ನು ಕೊಟ್ಟಿದೆ. ಅದನ್ನು ನಾವು ವಿಮರ್ಶೆಮಾಡುವಾಗ ಸರಕಾರಿ ನೌಕರರ ಮಾನಸ್ಸಿನ ಸ್ಥಿತಿಯನ್ನು ಅರಿಯುವುದು ಅಗತ್ಯ. ಇಂದು ನೌಕರರಿಗೆ ಸಿಕ್ಕುವ ಸಂಬಳದಲ್ಲಿ ಸೇಕಡ 60 ರಷ್ಟು ಕೇವಲ ಜೀವನಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ವಸ್ತುಗಳಿಗಾಗಿ ಖರ್ಚಾಗುತ್ತದೆ. ಹೀಗಾಗಿ ನೌಕರರಿಗೆ ತಮ್ಮ ಉದ್ಯೋಗದಲ್ಲಿ ಒಂದು ನಿರುತ್ಸಾಹ ಮೂಡಿದೆ. ಇಷ್ಟೇ ಅಲ್ಲದೆ ನೌಕರರಲ್ಲಿ ಜಿಗುಪ್ಸೆ ಕೂಡ ಮೂಡಿದೆ. ಏಕೆಂದರೆ ಪ್ರಮೋಷನ್‌ನಲ್ಲಾಗಲಿ ಅಥವಾ ಸಂಬಳದಲ್ಲಾಗಲಿ ಏಕರೂಪತೆ ಇಲ್ಲದೆ ಹೋಗಿದೆ. ಇದಕ್ಕಾಗಿ ಸರಕಾರವನ್ನು ಬಹಳವಾಗಿ ದೂರಬೇಕಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ನೌಕರರು ಅತೃಪ್ತಿಯಿಂದ ಹೈಕೋರ್ಟಿನಲ್ಲಿ ರಿಟ್ ಹಾಕುವುದು ಜಾಸ್ತಿಯಾಗಿದೆ, ಇದು ಅವರ ಅಸಮಧಾನವನ್ನು ತೋರಿಸುತ್ತದೆ. ನೌಕರರಲ್ಲಿ ಶಿಸ್ತಿಲ್ಲ, ಕೆಲಸವನ್ನು ಕೂಡ ಸಮಾಧಾನದಿಂದ ಮಾಡುವುದಿಲ್ಲ. ಯಾವ ಆಫೀಸಿಗೆ ಹೋದರೂ ಕೆಲಸವಾಗಬೇಕಾದರೆ ಲಂಚ ಕೊಡಬೇಕು, ಕೊಡದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಹೀಗಾದರೆ ಇದು ಪ್ರಜಾಪ್ರಭುತ್ವ, ಜನತಾ ಸರಕಾರ ಎಂದು ಹೇಳುವುದಕ್ಕಾಗುವುದಿಲ್ಲ. ಸರಕಾರದಲ್ಲಿರುವ ಬ್ಯೂರೋಕ್ರೆಸಿ, ಮತ್ತು ಲಂಚ ಪಡೆಯುವ ವೆಸ್ಟೆಡ್ ಇಂಟರೆಸ್ಟ್ ನಿರ್ಮೂಲ ಮಾಡಬೇಕಾದರೆ ಈ ತುಕೋಳ್ ವರದಿಯಲ್ಲಿರುವ ಕೆಲವು ಸಣ್ಣ ಸೂಚನೆಗಳನ್ನಾದರೂ ಶೀಘ್ರದಲ್ಲಿ ಜಾರಿಗೆ ತರಬೇಕಾಗುತ್ತದೆ. ಮುಖ್ಯವಾಗಿ ಪ್ರತಿಯೊಬ್ಬ ಅಧಿಕಾರಿಯೂ ಕೂಡ ನಿರ್ದಿಷ್ಟವಾದ ಕಾಲದಲ್ಲಿ ನಿರ್ದಿಷ್ಟವಾದ ಕೆಲಸವನ್ನು ಮಾಡಬೇಕು, ಹುಕುಂ ಕೊಡುವ ಸ್ಥಾನದಲ್ಲಿರುವವರು ಸರಿಯಾಗಿ ಸಕಾಲದಲ್ಲಿ ಹುಕುಂ ಕೊಡಬೇಕು ಮತ್ತು ಅದನ್ನು ಜಾರಿ ಮಾಡುವವರು ಸರಿಯಾಗಿ ಕಾರ್ಯರೂಪಕ್ಕೆ ತರಬೇಕು. ಹಾಗೆ ಮಾಡದೆ ತಪ್ಪು ಯಾರಾದರೂ ಮಾಡಿದರೆ ಸರಕಾರದವರು ಅವರಮೇಲೆ ಉಗ್ರವಾದ ಕಾರ್ಯಕ್ರಮ ತೆಗೆದುಕೊಂಡು ಸರಕಾರಿ ಯಂತ್ರವನ್ನು ಶುದ್ಧೀಕರಣ ಮಾಡಬೇಕು. ಇಂದು ಆ ರೀತಿ ಮಾಡುತ್ತಿಲ್ಲ. ಯಾರು ಹುಕುಂ ಕೊಡಬೇಕೋ ಅವರು ಕೊಡುತ್ತಿಲ್ಲ ಮತ್ತು ಹುಕುಂ ಜಾರಿ ಮಾಡುವವರೂ ತಮ್ಮ ಕೆಲಸ ಮಾಡುತ್ತಿಲ್ಲ. ಸಂಬಂಧಪಟ್ಟ ರಿಕಾರ್ಡು ಮೇಲೆ ಕೆಳಗೆ ಹೋಗುವುದರಲ್ಲೇ ಬಹಳ ಕಾಲ ಕಳೆದುಹೋಗುತ್ತದೆ, ಯಾವ ಹಂತದಲ್ಲೂ ಕೂಡ ಆಡಳಿತ ಯಂತ್ರ ಸರಿಯಾಗಿ ಕೆಲಸಮಾಡುವುದಿಲ್ಲ. ಇಂದು ಕಮಿಷನ್‌ನವರು ಬೇಸಿಕ್ ಪೇ 60 ರೂಪಾಯಿಗಳಾದರೂ ಇರಬೇಕು ಎಂದು ತಿಳಿಸಿದ್ದಾರೆ. ಇದು ಎಲ್ಲರೂ ಒಪ್ಪತಕ್ಕ ವಿಚಾರವೇ ಆಗಿದೆ. ಈಗ ಜೀವನ ವೆಚ್ಚ ಅಧಿಕವಾಗಿದೆ.

ಶ್ರೀ ಎಸ್. ಬಂಗಾರಪ್ಪ.—ವಿಧಾನ ಸಭೆಯ ಸದಸ್ಯರು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಾ ಇದ್ದರೂ ಸಹ ಯಾವ ಮಂತ್ರಿಗಳೂ ಕೂಡ ಕೇಳುತ್ತಾ ಇಲ್ಲ, ಇಲ್ಲಿರತಕ್ಕ ಮಾನ್ಯ ಉಪಮಂತ್ರಿಗಳು ತಮ್ಮ ಫೈಲ್‌ಗಳನ್ನು ನೋಡಿ ಅದಕ್ಕೆ ರುಜು ಹಾಕುತ್ತಾ ಇದ್ದಾರೆ. ಇದನ್ನು

(ಶ್ರೀ ಎಸ್. ಬಂಗಾರಪ್ಪ)

ನೋಡಿದರೆ ಸರ್ಕಾರ ಇದೆಯೋ ಇಲ್ಲವೇ, ಈ ಚರ್ಚೆಯಲ್ಲಿ ಅವರು ಭಾಗವಹಿಸುತ್ತಾ ಇದ್ದಾರೆಯೇ ಇಲ್ಲವೇ ಎಂಬ ಈ ವಿಷಯದಲ್ಲಿ ತಾವು ದಯವಿಟ್ಟು ರೂಲಿಂಗ್ ಕೊಡಬೇಕು. ಅದಷ್ಟು ಜಾಗ್ರತೆ ಮಿನಿಸ್ಟರುಗಳನ್ನು ಕರೆಸಬೇಕು ಎಂದು ಕೇಳಿಕೊಳ್ಳುತ್ತೇನೆ.

Mr. CHAIRMAN.—The Hon. Finance Minister Sri Ramakrishna Hegde was here all the while. I learn that he has been called by the Speaker for some important discussion for a short while and he is expected to be back within a couple of minutes. The Government is represented here by one Minister of State and a Deputy Minister.

Sri S. BANGARAPPA.—The Deputy Minister is not taking any notes of this discussion. Nobody is here to listned to the speeches made in this Hon. House.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಏನು ಸ್ವಾಮಿ ಇಲ್ಲಿ ಒಬ್ಬರಾದರೂ ಮಿನಿಸ್ಟರು ಇಲ್ಲ, ಎಲ್ಲಿಗೆ ಹೋಗಿದ್ದಾರೆ ?

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಬಹಳ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಾ ಇದೆ. ಸರ್ಕಾರದ ಈ ನಿಲುವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಇದರಿಂದ ಮಾನ್ಯ ಸದಸ್ಯರಿಗೆ ಸಮಾಧಾನವಾಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನೌಕರರ ಬಗ್ಗೆ ಬಹಳ ಪ್ರಾಮುಖ್ಯವಾದ ಚರ್ಚೆ ನಡೆಯುತ್ತಾ ಇರುವಾಗ ಒಬ್ಬರಾದರೂ ಮಿನಿಸ್ಟರು ಇಲ್ಲ, ಎಲ್ಲಿಗೆ ಹೋಗಿದ್ದಾರೆ, ಸ್ವಾಮಿ? ಎಂ. ಪಿ. ಸಿ. ಸಿ. ನಡೆಯುತ್ತಾ ಇವೆ. ಅಲ್ಲಿಗೆ ಹೋಗಿದ್ದರೆ, ಇದೇನೇ ಅವರು ಈ ಸಭೆಗೆ ಗೌರವ ಕೊಡುವುದು ?

Sri B. B. SAYANAK (Belgaum),—Sri Boriah is not a Cabinet Minister.

Mr. CHAIRMAN.—These things have been replied. Government is represented by one Minister of State and he is listening seriously to everything that is being said. He is taking down notes.

ಶ್ರೀ ಎಸ್ ಬಂಗಾರಪ್ಪ.—ಸರ್ಕಾರದವರು ಈ ರೀತಿ ಬೇಜವಾಬ್ದಾರಿಯಿಂದ ವರ್ತಿಸುತ್ತಾ ಇರುವುದಕ್ಕಾಗಿ ಇದನ್ನು ಪ್ರತಿಭಟಿಸಲು ನಾವು ಸಭಾ ತ್ಯಾಗ ಮಾಡುತ್ತೇವೆ.

(Sri Vatal Nagaraj, Sri B. B. Sayanak, Sri K. P. Nadagowdu and Sri Bangarappa, withdrew)

ಶ್ರೀ ಬೋಳ ರಘುರಾಮ ಶೆಟ್ಟಿ.—ಮಾನ್ಯ ಸಭಾಪತಿಗಳೇ, ಪ್ರತಿಯೊಬ್ಬ ಸರ್ಕಾರಿ ನೌಕರನೂ ಕೂಡ ತನ್ನ ಜವಾಬ್ದಾರಿಯನ್ನು ತಿಳಿದುಕೊಂಡು ಸೇವಾ ಬುದ್ಧಿಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡಬೇಕಾದರೆ ಮೇಲಿನ ಹಂತದಲ್ಲಿರುವಂತಹ ಮಂತ್ರಿಗಳೂ ಕೂಡ ತಮ್ಮ ಕರ್ತವ್ಯದಲ್ಲಿ ಒಂದು ಮಾರ್ಗದರ್ಶನ ಮಾಡಬೇಕು, ಮಂತ್ರಿಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರೆ, ಸಮಾಜಕ್ಕೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ, ಸೇವಾ ಬುದ್ಧಿಯಿಂದ ಕೆಲಸ ಮಾಡಿದರೆ ಅವರ ಕೈ ಕೆಳಗೆ ಇರುವಂತಹ ಲಕ್ಷಗಟ್ಟಲೆ ಅಧಿಕಾರಿಗಳೂ ಕೂಡ ಅದೇ ಪ್ರಕಾರವಾಗಿ ಕೆಲಸ ಮಾಡಲೇ ಬೇಕಾಗುತ್ತದೆ. ಮಂತ್ರಿಗಳು ಯಾವಾಗಲೂ ಸಂಚಾರದಲ್ಲಿ ಇದ್ದರೆ ಅಥವಾ ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳದೆ ಯಾವುದೋ ಒಂದು ಕ್ರಮಬದ್ಧವಾಗಿ ತಮ್ಮ ಕೆಲಸವನ್ನು ಮಾಡುವುದು ಎಂದು ತಿಳಿದುಕೊಂಡಿದ್ದರೆ ನಿಜವಾಗಿಯೂ ಅವರ ಕೈಕೆಳಗೆ ಇರುವಂತಹ ಇಲಾಖೆಯ ನೌಕರರು ಯಾವ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಲಿಕ್ಕೆ ಸಾಧ್ಯವುಂಟೆಂಬುದನ್ನು ನಾನು ಅವರ ಮುಂದೆ ಕೇಳಬೇಕಾಗಿದೆ. ಇವತ್ತು ತುಕೋಳ್ ಕಮಿಷನ್‌ನವರು ಕೊಟ್ಟಂಥ ವರದಿಯಲ್ಲಿ ಅನೇಕ ಹುದ್ದೆಗಳನ್ನು ವಜಾಮಾಡಬೇಕೆಂದು ಅವರು ಸಲಹೆ ಕೊಟ್ಟಿದ್ದಾರೆ.

ಅದಕ್ಕೆ ಮುಖ್ಯ ಕಾರಣ ಅಂಥಾ ಹುದ್ದೆಗಳಿಂದ ಸರ್ಕಾರದ ಯಂತ್ರ ಕ್ರಮಬದ್ಧವಾಗಿ, ಶೀಘ್ರವಾಗಿ ನಡೆಯುವುದಕ್ಕೆ ಬದಲಾಗಿ ಅದು ಒಂದು ಆತಂಕಕಾರಿಯಾಗಿರುತ್ತದೆ ಎಂಬುದೇ ಆಗಿದೆ. ಮುಖ್ಯವಾಗಿ ರೆವಿನ್ಯೂ ಡಿಪಾರ್ಟಮೆಂಟು ಮತ್ತು ಅಗ್ರಿಕಲ್ಚರಲ್ ಡಿಪಾರ್ಟಮೆಂಟಿನಲ್ಲಿ, ಹಾಗೂ ಡಿವಿಜನಲ್ ಕಮೀಷನರ ಹುದ್ದೆಯನ್ನು ಅವರು ಹೇಳಿದ್ದಾರೆ. ಡಿವಿಜನಲ್ ಕಮೀಷನರ ಹುದ್ದೆ ನಿಜವಾಗಿಯೂ ಕೆಲಸಕ್ಕೆ ಬಾರದ ಹುದ್ದೆಯಾಗಿದೆ. ಅದು ಕೆಲಸಕ್ಕೆ ಆತಂಕವನ್ನುಂಟು ಮಾಡುವಂತಹದಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ ಅಂತಹ ಹುದ್ದೆಗಳನ್ನು ರದ್ದು ಮಾಡಬೇಕು.

† Sri B. P. GANGADHAR (Tumkur).—Sir, this is an important report that is discussed here. We have spent lakhs of rupees over the preparation of this Report. The way Government has been treating this with scant courtesy which is touching upon lakhs of employees in the State — not even one single Cabinet Minister is here. Does it mean that the Government is not interested in this matter? May I request you, Sir, that you will exercise your powers and see that at least some Ministers are asked to be here to hear what we have been saying in the House so that it may be of some use to them in tackling this matter?

Mr. CHAIRMAN.—Sri B. P. Gangadhar was not here when the same point was raised. I said that the Hon. Finance Minister was called by the Hon. Speaker for some discussion and he is expected to be back in a couple of minutes. He was sitting here all along.

Sri B. P. GANGADHAR.—What has happened to the Chief Minister Sir? At least one of the Ministers could be here. They are in such a big crowd—nearly 30 in number and yet not a single Minister is present in the House. Does it show that they are not interested in their own employees?

Sri M. S. KRISHNAN (Malleswaram).—Sir, the argument on the other side is that even if we are not present, there are the records and they could read. I say that it is not only the record, it is necessary for the Ministers to be here and know what exactly the Members say. The Minister for Finance was very much concerned about the resources position. A short while ago when Sri Gopala Gowda was speaking, he said the same thing. Under the circumstances, if he is not present in the House when observations are made by hon. Members, I think it is better to adjourn the House till the Minister comes.

ಶ್ರೀ ಬೋಳ ರಘುರಾಮ ಶೆಟ್ಟಿ.—ಮಾನ್ಯಸಭಾಪತಿಗಳೇ, ಈ ಸಭೆಯು ಚರ್ಚೆಯನ್ನು ನಮ್ಮ ಇಡೀ ರಾಜ್ಯದ ಎರಡುವರೆ ಕೋಟಿ ಜನತೆ ಕಾದು ಬಯಸಿ ಇವತ್ತು ಕೇಳುತ್ತಾ ಇದೆ, ಏಕೆಂದರೆ ಈ ವರದಿಗಾಗಿ ಎರಡು ವರ್ಷದಿಂದ ಜನತೆ ಕಾದು ಕುಳಿತುಕೊಂಡಂಥ ವಿಷಯವಾಗಿದೆ, ಇದು ನಮ್ಮ ಇಡೀ ಸರ್ಕಾರದ ಯಂತ್ರಕ್ಕೆ ಸಂಬಂಧಪಟ್ಟ ಒಂದು ವರದಿಯಾಗಿದೆ. ಇದನ್ನು ಸರ್ಕಾರದವರು ಜಾರಿ ಮಾಡಿದರೆ ನಮ್ಮ ಸರ್ಕಾರ ಯಂತ್ರದಲ್ಲಿರುವಂತಹ ಲಕ್ಷಾಂತರ ನೌಕರರ ಭವಿಷ್ಯತ್ತನ್ನು ನಿರೂಪಿಸಿದಂತಾಗುತ್ತದೆ, ಇದನ್ನು ಸರ್ಕಾರದವರು ಯಾವ ರೀತಿಯಲ್ಲಿ ಅಲಕ್ಷದಿಂದ ನೋಡುತ್ತಾ ಇದ್ದಾರೆ ಎಂಬುದು ಇವತ್ತು ಸಭೆಯಲ್ಲಿ ಅವರು ತೋರಿಸುತ್ತಾ ಇರುವಂತಹ ಅವರ ಕರ್ತವ್ಯ ಭ್ರಷ್ಟತೆಯಿಂದ ಮನದಟ್ಟಾಗುತ್ತಾ ಇದೆ. ಇವತ್ತು ಈ ವರದಿಯನ್ನು ಜಾರಿ ಮಾಡಬೇಕಾದರೆ ಸರ್ಕಾರದವರಿಗೆ 17 ಕೋಟಿ ರೂಪಾಯಿಗಳಿಂದ 22 ಕೋಟಿ ರೂಪಾಯಿಗಳವರೆಗೂ ರಾಜ್ಯದ ಬಂಡವಾಳದಲ್ಲಿ ಖರ್ಚಾಗುತ್ತದೆ ಎಂದು ಅವರು ಹೇಳುತ್ತಾ ಇದ್ದಾರೆ.

(ಶ್ರೀ ಬೋಳ ರಘುರಾಮ ಶೆಟ್ಟಿ)

3-30 P.M.

ಇದರಲ್ಲಿ ಮುಖ್ಯವಾದ ಅನೇಕ ಎಕಾನಮಿ ಮೆಜರ್ಸುಗಳಿವೆ. ಅವನ್ನು ಸರ್ಕಾರದವರು ಜಾರಿಗೆ ತಂದರೆ ಬಹಳ ಹಣವನ್ನು ಉಳಿಸಿಕೊಳ್ಳಬಹುದು. ಅನೇಕ ವಿಷಯಗಳಲ್ಲಿ ಸರ್ಕಾರದವರು ಈ ದಿವಸ ಮಾಡುತ್ತಿರುವ ದುಂದು ವೆಚ್ಚಗಳನ್ನು ಕಡಮೆ ಮಾಡಿದರೆ ಅದರಿಂದ ಹೆಚ್ಚು ಹಣವನ್ನು ಉಳಿತಾಯ ಮಾಡಬಹುದು. ಸರ್ಕಾರದವರು ನಮ್ಮಲ್ಲಿ ಏತಕ್ಕೆ ಹೆಚ್ಚು ಸಂಬಳಸಾರಿಗೆಗಳನ್ನು ಕೇಳುತ್ತಿದ್ದಾರೆಂದರೆ ಇಲ್ಲಿ ಇನ್‌ಫ್ಲೇಷನ್ ಜಾಸ್ತಿಯಾಗಿದೆ, ಅದರಿಂದ ಸಾಮಾನುಗಳ ಬೆಲೆ ಏರಿದೆ. ಜಾಸ್ತಿ ಸಂಬಳ ಕೇಳುತ್ತಿದ್ದಾರೆ. ಇದಕ್ಕೆ ಇನ್ನೂ ಒಂದು ಕಾರಣ ಎಂದರೆ ಕೇಂದ್ರ ಸರ್ಕಾರದವರ ಟ್ಯಾಕ್ಸೇಷನ್ ಪಾಲಸಿ ಮತ್ತು ನೋಟುಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಿಂಟ್ ಮಾಡಿಸುತ್ತಿರುವುದೂ ಕೂಡ ಒಂದು ಕಾರಣ ಆಗಿದೆ ಎನ್ನಬಹುದು. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಇದರಲ್ಲಿ ಕೇಂದ್ರದವರ ಜವಾಬ್ದಾರಿಯೂ ಕೂಡ ಬಹಳವಾಗಿದೆ. ಆದರಿಂದ ಅವರನ್ನು ಒತ್ತಾಯ ಮಾಡಿ ಅವರಿಂದ ಹಣವನ್ನು ಪಡೆದು ಇಲ್ಲಿ ಸಂಬಳಗಳನ್ನು ಜಾಸ್ತಿ ಮಾಡಬೇಕು. ಈಗಾಗಲೇ ಇಲ್ಲಿ ಅನೇಕ ಮಹನೀಯರು ಹೇಳಿರುವಂತೆ ಪ್ರಥಮತಃ ಸಂಬಳಗಳನ್ನು ಜಾಸ್ತಿ ಮಾಡಬೇಕು ಎಂಬ ಚಳವಳಿಯನ್ನು ಹೂಡಿದವರು ಎನ್. ಜಿ. ಓ. ಗಳು. ಅನೇಕ ಕಷ್ಟ ನಷ್ಟಗಳಿಗೆ ಗುರಿಯಾದವರೂ ಆ ಎನ್. ಜಿ. ಓ. ಗಳೇ. ಆದ್ದರಿಂದ ಈ ಸಂಬಳದ ಶ್ರೇಣಿಯನ್ನು ಜಾಸ್ತಿ ಮಾಡತಕ್ಕ ವಿಚಾರದಲ್ಲಿ ಮೊದಲು ಕೆಳದರ್ಜೆಯಿಂದ ಇದನ್ನು ಪ್ರಾರಂಭ ಮಾಡಬೇಕು. ಕೆಳಮಟ್ಟದವರಿಗೆ ಮೊದಲು ಇವರ ಅನುಕೂಲ ಸಿಕ್ಕಬೇಕು. ಇದರಿಂದ ಜನರ ಮೇಲೆ-ರೈತರ ಮೇಲೆ ಹೆಚ್ಚು ತೆರಿಗೆ ಬೀಳದ ಹಾಗೆ ಕಡಮೆ ಸಂಬಳದ ನೌಕರರಿಗೆ ಆ ತುಕ್ಕೋಳ್ ಸಮಿತಿಯವರು ಅಮೂಲ್ಯವಾದ ಶಿಫಾರ್ಸುಗಳನ್ನು ಜಾರಿಗೆ ತರಬೇಕೆಂದೂ, ಎಷ್ಟು ಬೇಗ ಇದನ್ನು ಜಾರಿಗೆ ತಂದರೆ ಸರ್ಕಾರಕ್ಕೆ ಇದರಿಂದ ಒಳ್ಳೆಯದಾಗುತ್ತದೆಂದೂ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri B. P. GANGADHAR.—Mr. Speaker, at the outset I would like to submit that by the appointment of such tribunals or commissions, it is proved beyond all reasonable doubt that the Government has miserably failed in building up a State with economic reconstruction. If we recall to our memory the days when princes were ruling our State, we can know how people were living. If you go to mofussil places or contact officials, they all say that they were happy during those days. Even the ryots say so. The merchants say so. Now there is grouse of the merchants so far as this Government is concerned; there is grouse of the officials so far as this Government is concerned; there is grouse of the students so far as this Government is concerned. There is grouse everywhere but I may submit that there is no grouse in one section of the society and that one section is the Congress section. There was economic imbalance in the State and so the Government thought it fit to appoint a Pay Commission. The Government also realised that it was incapable of bridging the gulf between the rich and the poor. The Government conceded that it was incompetent to peg down the prices. The Government indirectly submitted before the country that it was incapable of raising the State's resources and properly utilise the finances of the State for the benefit of the common people. We have to see the background for the appointment of this Pay Commission. It is crystal clear that it is due to the agitation by the N. G. Os. that prompted or pursuaded the Government to appoint this Commission. No doubt the Commission was appointed and lakhs of rupees were spent and a report was submitted and it has been placed before the Assembly.

In this State we are proclaiming that our financial policies are governed by socialistic principles. Even though we have been proclaiming from house tops that the goal is socialistic goal, we see there is no socialistie goal at all. Even the Commission's report is tending towards capitalistic outlook. It is accepted by every section of the House and also the people at large that socialist economy will not tolorate discrimination between the lowest paid and the highest paid. It can be 1 : 10 times or 1 : 15 times at the most. But, what we see here is the persons who have been paid lowest are not benefited to a greater extent and persons who have been getting Rs. 1000 or more, will benefit to the extent of Rs.500 or 600. I want to pose a question and ask whether this is what you call socialistic approach. If this is the socialistic approach, woe be to that socialism. At the outset I want to request the Government to reject such of the proposals made by the Commission wherein they have recommended increase to persons getting Rs. 1000 or more. If the basic salary is 1 0 the maximum should not exceed Rs. 1000, and any recommendation for enhancement of salary over 1000 must be summarily rejected. If on the other hand the basic salary is Rs. 150 for a lowest paid employee, the maximum under no circumstance should exceed 1500. The parity must be 1 : 10 or 1 : 15 at the most. Anything above that must be rejected by the Government and there will not be any appreciation by this House so far as enhancement of salary is concerned to the highly paid employees.

Even in respect of recommendations made by the Commission, many sections of the employees have not been satisfied. For instance the teachers. This is very important because they are teaching education and of course it is needless for me to state that education moulds the future generation of the State. Here, discrimination is made between graduate teachers and others. A teacher who will be teaching English will be discriminated against a teacher who is teaching Telugu, Kannada or any other subject. So, this sort of discrimination between language teachers which has not been done so far in the State as it is now existing, should not be there and it should be rejected and uniform scales must be maintained. Similarly, the steno-typists, surveyors and technical persons have also got a severe grouse and so far as this report is concerned, they have been comparing themselves with their own friends outside in various other Departments doing similar work. They say they have not been satisfied. So, Sir, the plight of these persons, namely, typists, surveyors and teachers has to be seriously considered before implementing the Commissions report.

Similarly, there are thousands and thousands of persons in this State who have been unemployed. There are also thousands and thousands of persons who have been working as local candidates and their number is quite huge. They have been appointed at the time when the Government felt their services are necessary to discharge certain Government work. Now there is no solution suggested in respect of these persons. What is to happen to these thousands of persons

(SRI B. P. GANGADHAR)

who have been in service for the last 7 to 8 years? At the time when they joined service, they were bachelors but many of them are now married and have got a number of children. The Commission is silent so far as this aspect of the matter is concerned. This is the occasion when I want to make a request to the Government that they should see that these persons are continued permanently in the places where they have been working.

Then the question of finance will come up. The Hon'ble Minister for Finance was asking Sri Gopala Gowda that the Government requires larg sums of money to give effect to the recommendations of the Commission and where could they find so much money for that? My submission is, it is the duty of the Government and the party which has taken the responsibility of ruling the State to find out what exactly are the resources they should tap. But still, I have a few suggestions to make. Regarding Sales Tax Department, we have been seeing officials working throughout the night and day while officials in other Departments wanting to go home as soon as 5-30 was over. I do not know what those officials in Sales Tax Department will be doing. Perhaps the Minister is well aware what they are doing at dead of night. That is why malpractice is going on and lakhs of rupees have been lost to the State. If you tone up the Sales Tax Department, we will be able to collect the arrears that is now due and I think it will solve the problem to a great extent. Similarly if we whip up other departments where there are huge balances are left over and block the leakages, I think we will be able to get sufficient amount for the implementation of the Commission's report. Similarly, we can just close down the co-operative societies. It is consuming nearly Rs. 100 crores and that is the Department where dishonest people are manufactured and where State's funds have been devoured without any consideration at all. I submit, Sir, that perhaps there may not be even 5 per cent of the societies which have been working well in the State. What has happened is, the Auditor who is employed to scrutinise the accounts of the societies is no other than the departmental man. He will be an Assistant Registrar of Cooperative Societies and he will be the person who will be auditor tomorrow. Why not entrust it to State Accounts Department? Then all the frauds can be found out and crores of rupees which have been lost can be retained to the State.

(MR. SPEAKER in the Chair)

I have another suggestion to make for the abolition of SDOs and Deputy BDOs. If such intermediary jobs are abolished, it will save a lot of money to the State.

One more point. The Government is well aware regarding pensioners. Formerly pensioners were paid an average of 36 months'

salary and after agitation, the Government thought it fit to see that average of 12 months' salary is taken into consideration while fixing the pension. The Government also got the MCSR rules amended to that effect. So far as old Mysore State officials are concerned it is all-right. But officials coming from erstwhile Hyderabad, Madras and Bombay have been guided by their own rules and similar provision has not been made in respect of them. Therefore, Sir, while persons who were governed by MCSR have been conferred with these benefits, persons coming from various other States have been denied these benefits being not conferred on them. So, Sir, a uniform rule should be made so that all the pensioners will be paid uniformly and similar benefits are conferred on every one of the Governmet servants who retired, whether he belonged to old Mysore or Hyderabad or Madras area.

Now coming to officials who have been getting above Rs.1200 up to Rs. 1,800, if the policy of the Government is to fix the basic salary of lowest paid Government servant at Rs. 150 it should not exceed Rs. 1500 in the case of highest paid Government servants. If they are going to agree under the circumstances of our financial strain that Rs. 100 would be sufficient for the lowest Government servant, then the topmost man should not be paid more than Rs. 1,000. Any recommendation made to pay more than 1 : 10 is not in the interest of the State. If they were to pay Rs. 1,800 and Rs 2,000, then the State Exchequer will get empty. Thank you.

Report of the Naronha Commission

re: Disturbances in Madhugiri Taluk

Presentation.

SRI VEERENDRA PATIL (Chief Minister).—I beg leave to lay on the Table of the House a copy of the Report of the Naronha Commission appointed by the Government in Notification dated 22nd January 1968 to enquire into and report on the alleged disturbances in certain villages of Madhugiri Taluk in December 1967.*

MR. SPEAKER.—The report is laid on the Table.

SRI B. P. GANGADHAR.—I want to make a simple request.

MR. SPEAKER.—The hon. Member's difficulty is that if he wants to go through it in detail, it may not be possible to do so if it is placed on the Table of the House. Is it possible for the Government to print the Report and circulate it among the Members?

SRI VEERENDRA PATIL.—The Report is a voluminous one. I think it runs into more than thousand pages. So it will take lot of time to get it printed. Also the cost involved in it is very heavy. So it is very difficult to get it printed. If the hon. Members feel the necessity for one or two more copies, I am prepared to place them on the Table of the House. I shall try my best to place as many copies as possible.

* Copy placed in the Mysore Legislature Library *vide* No.......

Sri B. P. GANGADHAR.—Sir, you are aware that very huge expenditure is incurred so far as this matter is concerned. For payment of counsels, etc., lakhs of rupees are spent. When we have spent so much money over the matter and when all of us are interested on this particular matter, why should it not be printed? As I have already submitted to you, it is running to thousand pages or so. If it is placed on the Table of the House, it may be realised how long it will take for all the Members to go through it. As long as the House is in session, we have to participate in it. We can devote at the most half-an-hour or one hour for going through the Ruport. At this rate, it would take months to go through the entire Report. If we take the strength of the other House into consideration, nearly 300 Members would have to go through the Report. When lakhs of Rupees have been spent on the Commission, another couple of hundreds of rupees for getting the Report printed should not be considered a big burden or very costly. I want the Government to see that copies are printed and supplied to every one of us. If for any reasons it is found not possible to comply with my request, at least one copy may be given to me as I am particularly interested in it.

Sri M. S. KRISHNAN.—I must add a word to what Sri Gangadhar has said. If the intention is to simply place the Report on the Table and leave it at that, it is all right. If the intention is to have a discussion about it, naturally we must have a copy each. We learn a number of interesting things have been discussed in the Report and a number of interesting observations have been made. So we would like to know what the findings are and how they are based. The arguments are necessary if we have to speak. Without a copy of the report with us, how can we speak on it? Cost of printing should not be the consideration for the Government not to get it printed. When you can get printed Tukol Commission Report running into volumes and more than thousand pages, this Report of the Noronha Commission can also be printed and circulated.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ವಿಧಾನ ಸಭೆ ನಡೆಯುತ್ತಿರುವುದರಿಂದ ಮೆಂಬರ್ಸ್ ಬಹಳ ಬಿಜಿ ಆಗಿರುತ್ತಾರೆ. ಆದ್ದರಿಂದ ಅದನ್ನು ರೂಮಿಗೆ ತೆಗೆದುಕೊಂಡು ಹೋಗಿ ಓದ ಬೇಕಾಗುತ್ತದೆ.

Mr. SPEAKER.—In order to accommodate the Members, I request the Hon. Chief Minister to make available as many copies of the Report as possible so that I shall keep about half a dozen copies in the Legislature Library to enable the members to go through them.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ ಪ್ರಿಂಟ್ ಮಾಡಿ ಎಲ್ಲರಿಗೂ ಒಂದು ಕಾಪಿ ಕೊಟ್ಟರೆ, ವಿಷಯ ತಿಳಿದುಕೊಳ್ಳುವುದಕ್ಕೆ ಅನುಕೂಲ ಆಗುತ್ತದೆ.

Mr. SPEAKER.—Since it will take a number of days to get it printed, I have requested the Government to place half-a-dozen copies at my disposal. I shall keep them in the Library.

Sri C. K. RAJAIAH SHETTY.—When we have spent more than two to three lakhs of rupees on the Commission, the printing charges will be a pittance. The hon. Chief Minister can get it printed.

Mr. SPEAKER.—It is for the Government to take action.

Sri M. S. KRISHNAN.—It is not enough if it is kept in the Legislature Library because we will have hardly any time here to go through it. We will have business in the House from 1 P. M. to 6 P. M. From what the Chief Minister said, it appears that he wants to shut out criticism on it.

Mr. SPEAKER.—The hon. Member is anticipating things which are not there.

Sri M. S. KRISHNAN.—The straightforward way would have been to print it and hand over copies to us.

Sri H. SIDDAVEERAPPA.—I would like the Government to recall the background under which the Commission was appointed and the amount of publicity that issue raised. Now if cost is the only consideration for not getting the Report printed, I would say, it won't be right not to supply copies to the Members if they desire them. The consensus of opinion on this side is that Members do require copies so that they may read them and understand what the findings are. It is another question whether any discussion would be allowed or not. That is a different matter and we need not consider it now. But if these copies are kept on the Table, we cannot carry them home. We have to sit here and read only when the Library is open; that may be rather difficult I believe that the Judge has prepared his report in parts ; he has given his report in so many chapters. So it may be published in chapters or it may be given in different booklets instead of publishing it in one booklet. Government may publish it in different volumes. Cost should not be the determining factor for not getting the copies printed and supplied to the Members.

Sri VEERENDRA PATIL.—The Report is in ten volumes or separate chapters. The findings are found in part IX. So, if the hon. Members agree, I shall see that this Part IX which contains the findings of the Enquiry Commission will be got printed and distributed. And those who are interested in knowing the details, can refer to the detailed report. I will get this one Part printed and circulated to the Members.

Mr. SPEAKER.—That should satisfy the Members.

ಶ್ರೀ ಬಿ. ಪಿ. ಗಂಗಾಧರ.—ಬರೀ ಕೊನೆಯ ಒಂದು ಭಾಗ ಕೊಟ್ಟರೆ ಏನು ಪ್ರಯೋಜನವಾಗುತ್ತದೆ? ಬರೀ ಫೈಂಡಿಂಗ್ಸ್ ಕೊಟ್ಟರೆ ಏನಾಗುತ್ತದೆ? In that case, we will not be able to see the entire thing. What does the last part contain? It contains the operative part, "I convict you for so many years and send you to the gallows." The finding will be that "I feel that you are liable for punishment or that I exonerate or acquit you" I think the Chief Minister can make up his mind and get all the parts printed because all of us-not only on this side but also on his side, are interested in this matter. Many of my friends on that side also told me that the Report may be printed and copies supplied to the Members.

4.00 P.M.

Motion to consider the Report of the Mysore Pay Commission, 1966-68

(Debate contd.)

†ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅಧ್ಯಕ್ಷರೇ, ಶ್ರೀಮಾನ್ ತುಕೋಳ್ ಅವರ ವರದಿಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಈಗಾಗಲೇ ಮಾತನಾಡಿದ್ದಾರೆ. ಬಹುಶಃ ನನಗಾದರೂ ಅನಿಸುತ್ತದೆ, ಈ ವರದಿಯಿಂದ ಯಾವ ವರ್ಗದ ನೌಕರರಿಗೆ ಅನುಕೂಲ ವಾಗುತ್ತದೆ ಎಂದು ಮನಸ್ಸಿನಲ್ಲಿ ತಿಳಿದುಕೊಂಡಿದ್ದೆವೋ ಅವರಿಗೆ ಹೆಚ್ಚಿನ ಅನುಕೂಲವಾಗಿಲ್ಲ. ಆದರೆ ಮೊದಲನೆಯ ಮತ್ತು ಎರಡನೆಯ ದರ್ಜೆಯ ನೌಕರರಿಗೆ ಇದರಲ್ಲಿ ಬಹಳ ಹೆಚ್ಚಿನ ರೀತಿಯಲ್ಲಿ ಅನುಕೂಲಗಳು, ಸೌಲಭ್ಯಗಳು ದೊರೆಯುತ್ತವೆ ಎಂದು ನನಗೆ ಅನಿಸುತ್ತದೆ. ನಾಲ್ಕನೆಯ ದರ್ಜೆಯ ನೌಕರರಿಗೆ ಕನಿಷ್ಠ ವೇತನ 70 ರೂಪಾಯಿಗಳಾದರೂ ಇದ್ದರೆ ಅನುಕೂಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಇವೊತ್ತಿನ ದಿವಸ ಜೀವದ ವೆಚ್ಚ ದಿನೇ ದಿನೇ ಏರುತ್ತಿದೆ. ಇದಕ್ಕೆ ಸರ್ಕಾರ ದವರು ಯಾವ ರೀತಿಯಲ್ಲಿ ಸಹಕಾರವನ್ನು ಕೊಡುತ್ತಿದ್ದಾರೆ ಎನ್ನುವ ದೃಷ್ಟಿಯಲ್ಲಿ ನಾನು ಹೇಳು ತ್ತೇನೆ. ಶ್ರೀಮಾನ್ ತುಕೋಳ್ ಅವರ ವರದಿಯಲ್ಲಿ ಅನೇಕ ವಿಧವಾದ ಎಡರುತೊಡರುಗಳು ಇವೆ. ಈ ವರದಿಯಲ್ಲಿ ಡಾಕ್ಟರುಗಳ ಮತ್ತು ಇಂಜಿನಿಯರುಗಳ ಕನಿಷ್ಠ ವೇತನದಲ್ಲಿ ಬಹಳ ವ್ಯತ್ಯಾಸ ಇದೆ. ಇದೇ ರೀತಿ ವೆಟರ್‌ನರಿ ಮತ್ತು ಮೆಡಿಕಲ್ ಡಾಕ್ಟರುಗಳಿಗೂ ಬಹಳ ವ್ಯತ್ಯಾಸಗಳು ಇವೆ. ವೆಟರ್‌ನರಿ ಡಾಕ್ಟರುಗಳು ದನಗಳಿಗೆ ಔಷಧಿಯನ್ನು ಕೊಡುತ್ತಾರೆ, ಮೆಡಿಕಲ್ ಡಾಕ್ಟರುಗಳು ಮನುಷ್ಯರಿಗೆ ಔಷಧಿಯನ್ನು ಕೊಡುತ್ತಾರೆ. ಇದರಲ್ಲಿ ಇಷ್ಟೇ ವ್ಯತ್ಯಾಸ. ಎಲ್ಲಾ ರೀತಿಯಲ್ಲಿಯೂ ಇಬ್ಬರಿಗೂ ಒಂದೇ ರೀತಿಯ ವರ್ಗ ಸೃಷ್ಟಿಯಾಗುತ್ತದೆ. ಆದರೆ ತಾರತಮ್ಯವನ್ನು ನೋಡಿದರೆ ವೆಟರ್‌ನರಿ ಡಾಕ್ಟರಗಳಿಗೂ, ಮನುಷ್ಯ ಡಾಕ್ಟರುಗಳಿಗೂ ವ್ಯತ್ಯಾಸ ಮಾಡಿದ್ದಾರೆ. ಇದೇ ರೀತಿ ಯಲ್ಲಿ, ಡಾಕ್ಟರುಗಳಿಗೂ ಇಂಜಿನಿಯರುಗಳಿಗೂ ತಾರತಮ್ಯವನ್ನು ಮಾಡಿದ್ದಾರೆ. ಈ ರೀತಿಯಾಗಿ ಅನೇಕ ವಿಧವಾದ ತಾರತಮ್ಯಗಳು ಇದರಲ್ಲಿ ಕಾಣುತ್ತಿವೆ. ಈ ತುಕೋಳ್ ಕಮಿಷನ್ನಿನವರ ವೇತನ ವರದಿಯನ್ನು ಸರ್ಕಾರದವರು ಒಪ್ಪುವುದಕ್ಕಿಂತ ಮುಂಚೆ ಈಗ ನಾನ್ ಗೆಜೆಟೆಡ್ ನೌಕರರ ಸಂಘ ದಿಂದ ಬಂದಿರತಕ್ಕ ಸಲಹೆಗಳನ್ನು ತಾವು ಪರಿಶೀಲನೆ ಮಾಡಿ ಈ ಬಗ್ಗೆ ಒಂದು ನಿರ್ಣಯಕ್ಕೆ, ಒಂದು ತೀರ್ಮಾನಕ್ಕೆ ತಾವು ಬರತಕ್ಕದ್ದು ಒಳ್ಳೆಯದು ಎನ್ನುವ ಮಾತನ್ನು ನಾನು ತಮಗೆ ತಿಳಿಸುತ್ತೇನೆ. ಲೆಕ್ಕಪತ್ರ ಇಲಾಖೆಯಲ್ಲಿ ಕೆಲಸ ಮಾಡುವಂತಹ ಶೀಘ್ರಲಿಪಿಗಾರರಿಗೂ, ಟೈಪಿಸ್ಟುಗಳಿಗೂ ಮತ್ತು ಗುಮಾಸ್ತರುಗಳಿಗೂ ಸುಧಾರಿತ ವೇತನಗಳನ್ನು ಕೊಡುವ ಮೂಲಕ ಅವರಿಗೆ ಸಹಕಾರವನ್ನು ನೀಡಬೇಕು ಎನ್ನುವ ಮಾತನ್ನು ನಾನು ಒತ್ತಾಯ ಮಾಡುತ್ತೇನೆ.

ಶಿಕ್ಷಕರ ಬಗ್ಗೆ ಮಾತನಾಡುವಾಗ ಶಿಕ್ಷಕರಿಗೆ ಬಹಳ ಅನ್ಯಾಯವಾಗಿದೆ ಎಂದು ನಾನು ಹೇಳು ತ್ತೇನೆ. ಈ ವರದಿಗಿಂತ ಹೆಚ್ಚಿಗೆ ಹಿಂದೆ ಕೊಠಾರಿ ಆಯೋಗದ ಶಿಫಾರಸ್ಸು ಇದೆ. ಆ ಶಿಫಾರಸ್ಸನ್ನು ತಾವು ಜಾರಿಗೆ ತರುವುದಾದರೆ ನಿಜವಾಗಿಯೂ ಶಿಕ್ಷಕರಿಗೆ ಒಳ್ಳೆಯ ರೀತಿಯ ಅನುಕೂಲವಾಗುತ್ತದೆ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ.

ಇನ್ನೊಂದು ಬಹಳ ಕಟುವಾದ ವಿಚಾರವೇನೆಂದರೆ ಈಗ ಸರ್ಕಾರದಲ್ಲಿ ಕೆಲಸ ಮಾಡುತ್ತಾ ಇರತಕ್ಕ ಲೋಕಲ್ ಕ್ಯಾಂಡಿಡೇಟ್ಸ್ ಏನಿದ್ದಾರೆ ಅವರಿಗೆ ರಕ್ಷಣೆ ಕೊಡತಕ್ಕವರು ಯಾರು ಎನ್ನುವ ಪ್ರಶ್ನೆ ಬಂದಿದೆ. ಇವೊತ್ತು ಅನೇಕ ಜನ ಸ್ಥಳೀಯ ಅಭ್ಯರ್ಥಿಗಳು, ನೌಕರರು ಸುಮಾರು ನಾಲ್ಕು ವರ್ಷಗಳಿಂದ ಸರ್ಕಾರದ ಸೇವೆಯನ್ನು ಮಾಡಿದ್ದಾರೆ. ಒಂದು ವೇಳೆ ಸರ್ಕಾರದವರಿಗೆ ಅವರ ಸೇವೆಯನ್ನು ಮೊಟಕು ಮಾಡಬೇಕು ಎನ್ನುವ ಉದ್ದೇಶ ಇರುವುದಾದರೆ ಆದರಿಂದ ಸುಮಾರು ಏಳು ಸಾವಿರ ಜನ ಸ್ಥಳೀಯ ಅಭ್ಯರ್ಥಿಗಳಿಗೆ ಸಂಪೂರ್ಣವಾಗಿ ತೊಂದರೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಪುನರ್ ಪರಿಶೀಲನೆ ಮಾಡಿ ಅವರು ಯಾವ ಯಾವ ಇಲಾಖೆಯಲ್ಲಿ ಇದ್ದಾರೆಯೋ ಅಲ್ಲಿಯೇ ಅವರನ್ನು ಖಾಯಂ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈಗ ನಮ್ಮಲ್ಲಿ ಅನೇಕ ವಿಧವಾದ ತಾರತಮ್ಯಗಳು ಇವೆ. ಸೆಕ್ರೆಟೇರಿಯಟ್‌ನಲ್ಲಿ ಕೆಲಸ ಮಾಡತಕ್ಕ ನೌಕರರಿಗೂ ಮತ್ತು ಅದರ ಪಕ್ಕದಲ್ಲಿರತಕ್ಕ ಸರ್ಕಾರದ ಕಚೇರಿಯಲ್ಲಿ ಕೆಲಸ ಮಾಡತಕ್ಕ ನೌಕರರಿಗೂ ವೇತನ ಬಹಳ ರೀತಿಯಲ್ಲಿ ವ್ಯತ್ಯಾಸ ಇದೆ. ಈ ರೀತಿ ತಾರತಮ್ಯವನ್ನು ತೋರಬಾರದು ಎಂದು ನಾನು ಒತ್ತಾಯ ಮಾಡುತ್ತೇನೆ.

ಇವೊತ್ತು ರಾಜ್ಯ ಸರ್ಕಾರದ ನೌಕರರಿಗೂ, ಕೇಂದ್ರ ಸರ್ಕಾರದ ನೌಕರರಿಗೂ ಅನೇಕ ವಿಧವಾದ ಅಂತರ ವೇತನದಲ್ಲಿ ಇದೆ. ಇದು ಒಳ್ಳೆಯದಲ್ಲ. ದೇಶದಲ್ಲಿ ಭಾವೈಕ್ಯತೆಯನ್ನು ಸಾಧಿಸ ಬೇಕು ಎಂದು ಹೇಳುವಾಗ ಸಂಬಳ ಸಾರಿಗೆಯಲ್ಲಿ ರಾಜ್ಯ ಸರ್ಕಾರದ ನೌಕರರಿಗೂ, ಕೇಂದ್ರ ಸರ್ಕಾರದ ನೌಕರರಿಗೂ ವ್ಯತ್ಯಾಸ ಇರುವುದು ಸರಿಯಲ್ಲ. ಆದ್ದರಿಂದ ಈ ರೀತಿ ಬೇಧಭಾವ ಇರುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಬಗ್ಗೆ ಒಂದು 5 ವರ್ಷಗಳ ಯೋಜನೆ ಯನ್ನು ಹಾಕಿಕೊಂಡು ಕೇಂದ್ರ ಮತ್ತು ರಾಜ್ಯ ನೌಕರರ ಮಧ್ಯೆ ಇರತಕ್ಕಂಥ ಒಂದು ಅಂತರವನ್ನು ಸರಿಪಡಿಸಿ ಇಬ್ಬರ ವೇತನ ಮತ್ತು ತುಟ್ಟಿಭತ್ಯವನ್ನು ಒಂದೇ ರೀತಿ ಇರುವಂತೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ವರದಿಯಲ್ಲಿ ಅನೇಕ ವಿಧವಾದ ವ್ಯತ್ಯಾಸಗಳು ಇವೆ. ಇದನ್ನೆಲ್ಲಾ ಸರ್ಕಾರದವರು ಮತ್ತೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಯಾವುದೇ ರೀತಿಯಲ್ಲಿ ನೌಕರರಿಗೆ ತೊಂದರೆಯಾಗುವಂತಾದ್ದು ಇದೆ ಅದನ್ನೆಲ್ಲಾ ಸರಿಪಡಿಸುವಂತಹ ಒಂದು ಕಾರ್ಯ ಕ್ರಮವನ್ನು ಸರ್ಕಾರದವರು ಕೈಗೊಳ್ಳಬೇಕು ಎಂದು ನಾನು ಈ ಮೂಲಕ ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ. ಕೇಂದ್ರ ಸರ್ಕಾರದ ತುಟ್ಟಿ ಭತ್ಯವನ್ನು ನಮ್ಮ ನೌಕರರಿಗೆ ಕೊಡದೆ ತಡೆಹಿಡಿದಿದ್ದೀರಿ. ಈ ಅದನ್ನು ಹಣವನ್ನು ನಗದು ರೂಪದಲ್ಲಿ ಕೊಡಬೇಕೆಂದು ಅವರು ಕೇಳುತ್ತಿದ್ದಾರೆ. ಬಾಂಡ್ ರೂಪದಲ್ಲ ಕಳೆದ 10 ತಿಂಗಳುಗಳಿಂದ ಈ ಹೆಚ್ಚಿನ ತುಟ್ಟಿ-ಭತ್ಯ ಉಳಿದಿದೆ. ನಗದು ರೂಪದಲ್ಲಿ ಕೊಡಬೇಕೆಂದು ನೌಕರರ ಸಂಘದವರು ಸಹ ಒಂದು ಮನವಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಈ ಹಣವನ್ನು ಜಾಗ್ರತೆ ನಗದು ರೂಪದಲ್ಲಿ ಕೊಟ್ಟರೆ ಅವರು ಸಂತೋಷಪಡುತ್ತಾರೆ ಮತ್ತು ಅವರಿಗೆ ಗುಟುಕು ನೀರು ಕೊಟ್ಟಂತೆ ಆಗುತ್ತದೆ. ಬಾಂಡ್ ರೂಪದಲ್ಲಿ ಈ ಹಣವನ್ನು ಕೊಡುವುದ ರಿಂದ ಯಾವುದೇ ದೃಷ್ಟಿಯಲ್ಲಿ ನೌಕರರಿಗೆ ಅನುಕೂಲ ವಾಗುವುದಿಲ್ಲವಾದ್ದರಿಂದ ನಗದು ರೂಪದಲ್ಲಿಯೇ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಈ ಆಯೋಗ ರಚನೆಯಾದರೂ ಕೂಡ ನಮ್ಮ ಹಳೆಯ ಮೈಸೂರು ನೌಕರರಲ್ಲಿ ಒಂದು ಕೂಗು ಇದೆ. ಏನೆಂದರೆ ಬಡ್ತಿ ಮತ್ತು ವೇತನದಲ್ಲಿ ಹಳೆಯ ಮೈಸೂರು ನೌಕರರಿಗೂ ಹೊಸ ಮೈಸೂರು ನೌಕರರಲ್ಲಿಯೂ ವ್ಯತ್ಯಾಸವಿದೆಯೆಂಬ ಕೂಗು ಕೇಳಿಬರುತ್ತಿದೆ. ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕ ನಮ್ಮ ರಾಜ್ಯದೊಂದಿಗೆ ವಿಲೀನವಾದಾಗ ಅಲ್ಲಿಯ ನೌಕರರು ಇಲ್ಲಿಗೆ ಬರು ವಾಗ ತಮ್ಮ ಸಂಬಳವನ್ನು ಹೆಚ್ಚಿಸಿಕೊಂಡು ಬಂದರು. ಆದರೆ ಹಳೆಯ ಮೈಸೂರು ನೌಕರರ ಸಂಬಳ ಮಾತ್ರ ಬದಲಾವಣೆಯಾಗಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಹಳೆಯ ಮೈಸೂರು ನೌಕರರಿಗೆ ಆಗಿರುವ ಅನಾನುಕೂಲಗಳನ್ನು ಹೋಗಲಾಡಿಸಿ ಅನುಕೂಲಗಳನ್ನು ಮಾಡಿಕೊಡ ಬೇಕೆಂದು ಒತ್ತಾಯ ಮಾಡುತ್ತೇನೆ. ಹಳೆಯ ಮೈಸೂರಿನ ನೌಕರರ ಸೇವೆ ತಮಗೆ ಬೇಕೆಂದು ಇದ್ದರೆ ಅವರಿಗೆ ಆಗಿರುವ ಅನಾನುಕೂಲಗಳನ್ನು ಸರಿಪಡಿಸಿಕೊಡಬೇಕು. ಮತ್ತು ಈ ನೌಕರರ ಸಂಘದವರು ಅನೇಕ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಆ ಬೇಡಿಕೆಗಳನ್ನು ಸರ್ಕಾರದವರು ಇದುವರೆಗೆ ಮಾನ್ಯತೆ ಮಾಡಿಲ್ಲ. ಅವರ ಬೇಡಿಕೆಗಳನ್ನು ಪರಿಶೀಲಿಸಿ, ಅವರಿಗೆ ಯಾವ ರೀತಿಯಿಂದ ತೊಂದರೆಯಾಗಿದೆ ಎಂಬುದನ್ನು ತಿಳಿದುಕೊಂಡು, ಅವುಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು, ಸತ್ಯವಾಗಿ ಅವರ ಬೇಡಿಕೆಗಳನ್ನು ನಡೆಸಿಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ ವರದಿಯಲ್ಲಿ ಅನೇಕ ವಿಧವಾದಂಥ ತಾರತಮ್ಯಗಳು ಇವೆ. ಮೊದಲನೆಯ ಮತ್ತು ಎರಡನೆಯ ದರ್ಜೆಯ ನೌಕರರನ್ನು ಬಿಟ್ಟರೆ, ಮೂರನೆಯ ಮತ್ತು ನಾಲ್ಕನೆಯ ದರ್ಜೆಯ ನೌಕರರಿಗೆ ಯಾವ ವಿಧವಾದಂಥ ಅನುಕೂಲಗಳನ್ನು ತೋರಿಸಿಲ್ಲ. ಕೆಲವರಿಗೆ ಅನುಕೂಲಮಾಡಿ, ಮತ್ತೆ ಕೆಲವರ ಮುಖಕ್ಕೆ ಮಸಿ ಬಳಿಯುವ ರೀತಿಯಲ್ಲಿ ಇದೆ. ಈ ರೀತಿ ಅನ್ಯಾಯ ಮಾಡುವುದು ಸರಿಯಲ್ಲ. ಮೂರನೆಯ ಮತ್ತು ನಾಲ್ಕನೆಯ ದರ್ಜೆಯ ನೌಕರರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI N. B. SIRDESAI (Khanapur).—Mr. Speaker, Sir, I rise to support the Pay Commission s Report with certain observations. At the out-et I must thank Mr. Justice Tukol and the staff of the Commission for writing a voluminous Report regarding the pay structure and service conditions of the Government servants. While saying so, it may not be mistaken that I fully agree with his Report. We must thank the Commission for their valuable suggestions and point out the omissions and make certain additions to the Report. It is a well-known

(SRI N. B. SIRDESAI)

fact that the Government servants are living on the bare pittance since the beginning and they have to depend on the next month's salary because they cannot make both ends meet and as the prices of essential commodities are rising up, it is very hard for the them to pull on. The appointment of the present Commission is the outcome of the Pay Committee and the hard struggle on the part of the Government servants. Before the reorganistation of States, the then Mysore State had constituted a Pay Committee for reviewing the pay structure and service conditions under the chairmanship of Sri V. M. Mascernhas and that Commission had submitted certain recommendations with wage benefits, and after the Reorganisation of States, this State had constituted, in December 1956, an official Pay Committee and that Committee had also made certain recommendations regarding the pay structure and service conditions. Thereafter, the Government of India had also constituted an Enquiry Committee to review the position of pay structure and the service conditions, and after that, in 1960 I presume, this Government had also constituted a Committee to review the pay structure and that Committee had submitted its report in 1961. Taking into consideration the representations made by the Government servants and the rising prices of the essential commodities, this Commission had been appointed. Fortunately, this Commission had been given terms of reference, because for want of terms of reference other Commissions had committed blunders. Under the terms of reference, this Commission was required to review not only the existing pay structure and the service conditions, but also to study the Government Orders relating to the Special pay, deputation allowance, project allowance and other allowances. The Commission had to suggest the pay structure taking into consideration the qualifications and the arduous nature of duties. Now that the suggestions are made, we have to see whether those suggestions are feasible and what difficulties are being encountered by the State and what is the financial position of the State. Let us first see what suggestions have been made by the Commission. They have suggested 27 pay structures instead of 108 and it has made valuable suggestions, such as abolition of certain Departments, transfer of staff to another department, transfer of administrative control to another department, they have classified the department of Secretariat as heavy, and minimum pay scale for the lowest grade employee has been suggested as Rs. 60 per month. The Pay Commission has suggested the continuance of the Dearness Allowance. It has also suggested that Government should provide housing-accommodation, free medical aid to the Government employees, payment of marriage advance, and fifty per cent of the existing temporary staff to be confirmed.

Now Sir, let us see the financial position of our State. From Rs. 498·06 crores in 1956–57 the rural income has increased to Rs. 748.63 crores in 1962-63. Thus within a period of about six years the income has increased by 50 per cent. But unfortuntely the per capita income

of the State is below the national level and it is far below when compared with the per capita income in States like Maharashtra, Gujarat and Andhra Pradesh. Though Mysore State is mainly dependent on agriculture the area under irrigation is hardly 10 per cent. Though there has been considerable increase in population, the economic development of the State is very slow, agricultural income has become tardy and semi-stagnant. The industrial expansion also is insecure and thereby unemployment problem is increasing. To overcome all these difficulties the Commission has suggested certain methods to augment the resources and it is impossible to do justice to the Government servants, unless the Government increases its resources. But one thing Government should bear in mind that there must be some inducement to keep up efficiency in the work and for that, suitable increase in the pay and allowances of the Government servants should be made. I suggest that Government should give vehicle allowance to all Government servants and promotions at a regular interval of six years should be given to the employees. Then Sir, the provident fund is purely meant for the welfare of the Government servants and it must be utilised for that purpose alone. At present the provident fund contribution is being utilised for some Government activities. I suggest that it should be utilised for the welfare of the Government servants and out of this provident fund contribution, housing accommodation should be provided to the Government servants The income limits of Rs. 2,400 and 5,000 for grant of educational aid to children of Government servants should be relaxed suitably.

In regard to Labour Department, I would like to say that the pay scales of the Labour Inspectors which is proposed to be equalised with that of the pay scales of I Division clerks is a great injustice done to the Labour Inspectors who are entrusted with the work of four or five divisions. I suggest that the posts of Labour Inspectors should be made gazetted and their scales should be increased to Rs. 200–450 as is given in other States. Twenty per cent of the existing posts should be upgraded to Senior Inspectors grade posts with a pay scale of Rs. 250–500 and conveyance allowance to the extent of a motor cycle allowance should be paid to them. The ratio of promotion should be 3 : 1 and more promotions should be given by upgrading the posts.

In the Public Works Department, the Junior Engineers and other staff are being allowed to suffer for the last ten or fifteen years without any promotions. They should be promoted to the Gazetted Officers posts and provision should also be made to give promotions at regular interval of six years.

The Veterinary Doctors have to put in 5½ years for completion of their course and their workload is the same as that of the workload of Assistant Medical Surgeon, and therefore, I suggest that their pay scales should be equalised with that of the Assistant Medical Surgeons. Also the Basic Health Workers pay should be increased.

(SHRI N. B. SIRDESAI)

Then with regard to the low-paid Government servants such as Village Patels, Shanbhogues and Village Panchayat Secretaries, my submission is that the Village Patels, Shanbhogues and Village Panchayat Secretaries should be given the pay scales of Second Division Clerks, as they are full time workers. Then Sir, the pay scales of at least class IV servants should be given to all other inferior Government servants.

Of course while making these suggestions, I would also like that the Government should inflict severe punishments upon those officers who are found to be corrupt and they should not be let loose to follow corrupt practices. Of course everyone is reluctant to suggest higher salaries to the police officials because they are committing atrocities and all that. But Sir, I think every human being do commit mistakes. To give incentive to these police officials and also to do away with corruption, I would like to suggest that their pay scales also should be increased sufficiently.

In regard to Tahsildars of Revenue Department, the pay scales proposed by the Commission is only Rs. 275-525 without taking into consideration their workload. I suggest that their pay scales should be equalised with that of the pay scales of Assistant Registrar of Co-operative Societies. The Chief Officers of the Revenue Department should be upgraded to the Deputy Tahsildar's grade.

With these words, I thank the Chair and conclude.

4-30 P.M.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಈ ವೇತನ ಆಯೋಗದ ವರದಿಯ ಮೇಲೆ ಈಗಾಗಲೇ ಸಾಕಷ್ಟು ಅಭಿಪ್ರಾಯಗಳನ್ನು ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದ್ದಾರೆ. ಕೆಲವು ವಿಷಯಗಳ ಬಗ್ಗೆ ನನ್ನ ವೈಯುಕ್ತಿಕವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸ ಬಯಸುತ್ತೇನೆ. ಮುಖ್ಯವಾಗಿ ಕೆಲವು ಅಂಶಗಳು ಆಯೋಗದ ವರದಿಯಲ್ಲಿ ಕಂಡಂಥಾದ್ದು ಸ್ವಾಗತಾರ್ಹವಾಗಿದ್ದರೂ ಕೂಡ ಕೆಲವು ಮಾತ್ರ ಯಾವರೀತಿಯಲ್ಲಿ ಕೊಡಬೇಕಾಗಿತ್ತೋ ಆ ರೀತಿಯಲ್ಲಿಲ್ಲ ಎನ್ನುವ ಅಭಿಪ್ರಾಯ ವ್ಯಕ್ಕಪಡಿಸುತ್ತೇನೆ.

ಮೊದಲನೆಯದಾಗಿ ಈ ಕಮೀಷನ್ ಮೂಲವೇತನ ನಿರ್ಣಯ ಮಾಡುವಲ್ಲಿ ಕೆಲವು ಅಂಶಗಳನ್ನು ಬಿಟ್ಟಿದ್ದಾರೆ ಮತ್ತು ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ದೃಷ್ಟಿಯಿಂದ ಒಪ್ಪಿಕೊಂಡಂಥ ತತ್ವಗಳನ್ನು ಸಹ ಬಿಟ್ಟು 60 ರೂಪಾಯಿ ಮೂಲವೇತನ ಎಂದು ನಿರ್ಣಯ ಮಾಡಿದ್ದಾರೆ. ಆದರೆ ವಾಸ್ತವಿಕವಾಗಿ ಇಂಟರ್ ನ್ಯಾಷನಲ್ ಸ್ಟ್ಯಾಂಡರ್ಡ್‌ನ 70 ರೂಪಾಯಿ ಮೂಲವೇತನ ಇರಬೇಕೆಂದು ಒಪ್ಪಿಕೊಳ್ಳಲಾಗಿದೆ. ಆದೂ ಅಲ್ಲದೆ ಕೆಲವೇ ದಿವಸದ ಹಿಂದೆ ಕೇರಳದಲ್ಲಿ ಒಂದು ಆಯೋಗ ನೇಮಕವಾಗಿತ್ತು. ಆ ಆಯೋಗ ಸಹ ಕನಿಷ್ಠ ವೇತನ 70 ರೂಪಾಯಿ ಇರಬೇಕೆಂದು ನಿರ್ಧಿಷ್ಟಪಡಿಸಿದೆ. ಈ ಎರಡೂ ದೃಷ್ಟಿಯಿಂದ ನಾವು ನೋಡಿದರೆ ಕೆಲವು ಊಟದ ವಸ್ತುಗಳ ಬಗ್ಗೆ ಕೆಲವು ಅಂಶಗಳನ್ನು ಬಿಟ್ಟುಬಿಟ್ಟಿದ್ದಾರೆ. ಈವೊತ್ತಿನ ಪರಿಸ್ಥಿತಿಯಲ್ಲಿ 60 ರೂಪಾಯಿ ಮೂಲವೇತನ ಇರತಕ್ಕಂಥಾದ್ದು ಸರಿಯಾದುದಲ್ಲ. ಈ ಆಯೋಗ ಕೊಟ್ಟಂಥ ಶಿಫಾರಸ್ಸಿನ ಮೇಲಾಗಲಿ, ಅಥವಾ ಹಿಂದಿನ ಆಯೋಗದ ಮೇಲಿನ ಶಿಫಾರಸ್ಸಿನ ಮೇಲಾಗಲಿ ಕನಿಷ್ಠಪಕ್ಷ ಇವರ ಮೂಲ ವೇತನ 70 ರೂಪಾಯಿ ಮಾಡಬೇಕು ಎಂದು ಈ ಸಭೆಯಲ್ಲಿ ಹೇಳಬಯಸುತ್ತೇನೆ.

ಎರಡನೆಯದಾಗಿ ಈ ರಿಪೋರ್ಟನ್ನು ಕೂಲಂಕಷವಾಗಿ ನೋಡಿದರೆ ಕೆಲವು ತತ್ವಗಳನ್ನು ಉಲ್ಲಂಘಿಸಿ ರಿಪೋರ್ಟನ್ನು ಮಾಡಿದ್ದಾರೆ ಎನ್ನುವ ವಿಷಯವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮುಖ್ಯವಾಗಿ ಅವರು ತಮ್ಮ ರಿಪೋರ್ಟನಲ್ಲಿ ಹೇಳಿದ್ದಾರೆ. ಈ ತಾಂತ್ರಿಕ ವಿದ್ಯಾ

ಪದವೀಧರ ನೌಕರರ ವೇತನವನ್ನು ನಿಗದಿ ಮಾಡುವಾಗ, ಆ ವಿದ್ಯೆಗೆ ವೆಚ್ಚ ಮಾಡುವಂಥ ಹಣ ಎಷ್ಟು ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಅವರು ಶಿಫಾರಸ್ಸು ಮಾಡುವಾಗ ಇದನ್ನು ಕೈಬಿಟ್ಟಿದ್ದಾರೆ. ಡಾಕ್ಟರ್ಸ್ ಮತ್ತು ಇಂಜನಿಯರ್ಸ್ ಇವರ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ಅವರು ಕಾಲೇಜಿನಲ್ಲಿ ಓದತಕ್ಕಂಥ ಅವಧಿ ಮತ್ತು ಅವರು ಖರ್ಚುಮಾಡತಕ್ಕಂಥ ಹಣ ಅವೆಲ್ಲಾ ಒಂದೇ ಆದರೂ ಕೂಡ ಈ ಆಯೋಗದವರು ಶಿಫಾರಸ್ಸು ಮಾಡಿರತಕ್ಕಂಥಾದ್ದು ಡಾಕ್ಟರ್‌ಗೆ 400–900 ಮತ್ತು ಇಂಜನಿಯರ್ಸ್ 275 ರಿಂದ 525. ಈ ಅಸಮಾನತೆ ಏತಕ್ಕೆ ಮಾಡಿದ್ದಾರೆ ಎನ್ನುವುದು ಗೊತ್ತಾಗಲಿಲ್ಲ. ಇನ್ನೊಂದು ವಿಷಯ ಈ ಸಭೆಯ ಗಮನಕ್ಕೆ ತರುವುದು ಏನೆಂದರೆ ಡಾಕ್ಟರ್ಸ್‌ಗೆ ಶಿಫಾರಸ್ಸು ಮಾಡುವ ಸಮಯದಲ್ಲಿ 400–900 ರವರೆಗೆ ಕೊಟ್ಟಿದ್ದರೂ ಅವರಿಗೆ ಪ್ರೈವೇಟ್ ಪ್ರಾಕ್ಟೀಸ್‌ಗೆ ಅವಕಾಶ ಇದೆ. ಆದರೆ ಇಂಜಿನೀಯರ್ಸ್‌ಗಳಿಗೆ ಇಲ್ಲ. ಆಂಧ್ರಪ್ರದೇಶದ ಸರ್ಕಾರದವರು ಡಾಕ್ಟರ್ಸ್‌ಗೆ ಪ್ರೈವೇಟ್ ಪ್ರಾಕ್ಟೀಸನ್ನು ನಿಷೇಧಿಸಿದ್ದಾರೆ. ಇಲ್ಲಿ ಅವರಿಗೆ ಒಂದು ಹೆಚ್ಚಿನ ಶಿಫಾರಸ್ಸು ಮಾಡಿದ್ದಾರೆ ಅದು ಸರಿಯಾದುದಲ್ಲ. ಡಾಕ್ಟರ್ಸ್‌ಗೆ ಹೆಚ್ಚು ಸಂಪಾದನೆ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಅದೇ ಒಬ್ಬ ಇಂಜಿನಿಯರ್‌ನ್ನು ತೆಗೆದುಕೊಂಡರೆ ಎಷ್ಟೇ ತಾಂತ್ರಿಕ ವಿದ್ಯೆಯನ್ನು ಕಲಿತಿದ್ದರೂ ಕೂಡ ಹೆಚ್ಚು ಸಂಪಾದನೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇಂಜಿನೀಯರ್ಸ್‌ಗೆ ಕೊಟ್ಟಿರತಕ್ಕಂಥ ವೇತನ ಕಡಿಮೆ. ಈ ರೀತಿ ವ್ಯತ್ಯಾಸ ಇರುವುದು ಸರಿಯಾದುದಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ.

ಮೂರನೆಯದಾಗಿ ಯಾವನಿಗೆ ಹುದ್ದೆಯಲ್ಲಿ ಮೇಲಕ್ಕೆ ಹೋಗಲಿಕ್ಕೆ ಆಸ್ಪದ ಇಲ್ಲವೋ ಅಂಥವನಿಗೆ ಸರಿಯಾದ ವೇತನ ಕೊಡಬೇಕು ಎನ್ನುವ ಅಭಿಪ್ರಾಯ ಆಯೋಗ ಒಪ್ಪಿದೆ. ಆದರೆ ಶಿಫಾರಸ್ಸು ಮಾಡುವಾಗ ಆ ಒಂದು ಉದ್ದೇಶ ಕೈಬಿಟ್ಟಿದೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳಬೇಕಾದರೆ ಬಿ.ಡಿ.ಓ.ಗಳ ಹುದ್ದೆಗಳಿಗೆ 275–525 ರೂಪಾಯಿ ಗ್ರೇಡ್ ಇಟ್ಟಿದ್ದಾರೆ. ಅವರಿಗೆ ಪ್ರಮೋಷನ್ ಆಗಲಿ ಬೇರೆ ಹೈಯರ್ ಗ್ರೇಡ್ ಆಗಲಿ ಯಾವುದೂ ಇಲ್ಲ. ಈವೊತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್ ಆಗಲಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡರೆ ಅದೇ ಬಿ.ಡಿ.ಓ.ಗಳು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ 10 ವರ್ಷದಿಂದ ಕೆಲಸ ಮಾಡುತ್ತಾ ಇದ್ದಾರೆ ಹೆಚ್ಚಿನ ಗ್ರೇಡ್‌ಗೆ ಪ್ರಮೋಷನ್ ಆಗಿ ಡೆಪ್ಯೂಟಿ ಕಮಿಷನರ್ ಆಗುತ್ತಿದ್ದರು. ಅದೇ ರೀತಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿದ್ದಿದ್ದರೆ ಜಾಯಿಂಟ್ ಡೈರಕ್ಟರ್, ಡೆಪ್ಯೂಟಿ ಡೈರೆಕ್ಟರ್ ಆಗುತ್ತಿದ್ದರು. ಹೀಗೆ ಕೆಲವರಿಗೆ ಮುಂದಿನ ಬಡ್ತಿ ಇಲ್ಲದೆಇದ್ದರೂ ಅಂತಹವರಿಗೆ ಶಿಫಾರಸ್ಸು ಮಾಡಿರತಕ್ಕಂಥ ಸಂಬಳ ಬಹಳ ಕಡಿಮೆ. ಈ ಆಯೋಗದವರು ಯಾವ ದೃಷ್ಟಿಯಿಂದ ಹೀಗೆ ಮಾಡಿದರೋ ಗೊತ್ತಿಲ್ಲ. ಅದನ್ನು ಸರಿಪಡಿಸಬೇಕು.

ಇನ್ನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದೆರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ನೋಡಿದರೆ ಅವರೇ ಒಂದು ಸ್ವಂತ ಅಭಿಪ್ರಾಯಪಟ್ಟಿದ್ದಾರೆ. ಈ ಡಿಪಾರ್ಟ್‌ಮೆಂಟ್‌ನಲ್ಲಿ ಜಾಯಿಂಟ್ ಡೈರಕ್ಟರ್‌ಗೆ ಸರಿಯಾದ ಒಂದು ಅನುಭವ ಇರದೇ ಇದ್ದರೂ ಕೂಡ ಆಯೋಗದವರು ಸಂಬಳ 900–1,300 ಇದ್ದುದನ್ನು 1,100–1,600 ರವರೆಗೆ ಶಿಫಾರಸ್ಸು ಮಾಡಿದ್ದಾರೆ. ಮತ್ತು ಎಜುಕೇಷನ್ ಜಾಯಿಂಟ್ ಡೈರಕ್ಟರ್ 900–1,300 ಇದ್ದುದನ್ನು 1,000–1,500 ಮಾಡಿದ್ದಾರೆ. ಈ ರೀತಿ ಜಾಯಿಂಟ್ ಡೈರಕ್ಟರ್ ಮತ್ತು ಡೆಪ್ಯೂಟಿ ಡೈರೆಕ್ಟರ್‌ಗಳಿಗೆ ಹೆಚ್ಚು ಮಾಡುವುದರ ಔಚಿತ್ಯ ಏನು ಎನ್ನುವುದು ತಿಳಿಸಲಿಲ್ಲ. ಈ ರೀತಿ ಒಂದೊಂದು ಡಿಪಾರ್ಟ್‌ಮೆಂಟ್ ಬಗ್ಗೆ ಸರಿಯಾದ ಅಭಿಪ್ರಾಯವನ್ನು ತೆಗೆದುಕೊಂಡು ನೋಡಿದರೆ ವ್ಯತ್ಯಾಸ ಕಾಣಿಸುತ್ತದೆ. ಏಕೆಂದರೆ ಈ ಆಯೋಗ ಏನು ಒಂದು ತತ್ವವನ್ನು ನಿರೂಪಿಸಿಕೊಂಡಿತ್ತು ಅದರ ತದ್ವಿರುದ್ಧವಾಗಿ ಎಷ್ಟೋ ಶಿಫಾರಸ್ಸುಗಳನ್ನು ಮಾಡಿದ್ದಾರೆ.

ಇನ್ನೂ ಕೆಲವು ವಿಷಯಗಳನ್ನು ಹೇಳಬೇಕಾದರೆ ಸೆಕ್ರೆಟೇರಿಯೆಟ್ ಬಗ್ಗೆ ತಮಗೆ ಗೊತ್ತಾಗುತ್ತದೆ. ಚಾಪ್ಟರ್ ಸೀರಿಯಲ್ ನಂಬರ್ 4, ಸೆಕ್ರೆಟರಿ ಟು ಗವರ್ನಮೆಂಟ್, ಲಾ ಅಂಡ್ ಪಾರ್ಲಿಮೆಂಟರಿ ಆಫೇರ್ಸ್ ಎಂದು ಇದೆ. ಅವರ ಸ್ಕೇಲ್ ಈಗ 1,100–1,800 ಮತ್ತು ಸ್ಪೆಷಲ್ ಪೇ 150 ರೂಪಾಯಿ ಇದೆ. ಇದನ್ನು ಹೆಚ್ಚುಮಾಡಲಿಕ್ಕೆ ಶಿಫಾರಸ್ಸು ಮಾಡಿರುವಂಥದ್ದು 1,300–1,800 ಮತ್ತು ಸ್ಪೆಷಲ್ ಪೇ 150 ರೂಪಾಯಿ. ಬಜೆಟ್ ಆಫೀಸರ್ ಮತ್ತು ಡೆಪ್ಯುಟಿ ಸೆಕ್ರೆಟರ ಅವರಿಗೆ 800–1,200, ಸ್ಪೆಷಲ್ ಪೇ 100 ರೂಪಾಯಿ ಇದ್ದುದನ್ನು 1,100 ರಿಂದ 1,800 ರೂಪಾಯಿಗಳಿಗೆ ಶಿಫಾರಸು ಮಾಡಿ, ಈ ಸ್ಕೇಲು ಈಗ ಕೆಲಸ ಮಾಡುತ್ತಿರುವವರಿಗೆ ಮಾತ್ರ ಅನ್ವಯವಾಗತಕ್ಕದು ಎಂದು ಹೇಳಿದ್ದಾರೆ. ಇದರಲ್ಲಿ ಏನು ಔಚಿತ್ಯವೋ ನನಗಂತೂ ತಿಳಿಯಲಿಲ್ಲ. ಅದೂ ಅಲ್ಲದೆ ಸಾಲಿಸಿಟರ್‌ಟು ಗವರ್ನಮೆಂಟ್ ಮತ್ತು ಡೆಪ್ಯುಟಿ ಸೆಕ್ರೆಟರಿ ಇವರಿಗೆ 600–1,000, ಸ್ಪೆಷಲ್ ಪೇ 100 ರೂಪಾಯಿ ಇದ್ದುದನ್ನು 900–1,300 ಮತ್ತು ಸ್ಪೆಷಲ್ ಪೇ 100 ರೂಪಾಯಿ ಮಾಡಿದ್ದಾರೆ. ಸರ್ಕಾರದ ಡೆಪ್ಯುಟಿ ಸೆಕ್ರೆಟರಿಗಳನ್ನು ತೆಗೆದುಕೊಂಡರೆ 600–1,000 ಮತ್ತು ಸ್ಪೆಷಲ್ ಪೇ 100 ರೂಪಾಯಿ ಇದ್ದುದನ್ನು 900–1,300, ಸ್ಪೆಷಲ್ ಪೇ ಇಲ್ಲ ಎಂದು ಹಾಕಿದ್ದಾರೆ, ಗವರ್ನಮೆಂಟ್ ಸಾಲಿಸಿಟರ್ ಮತ್ತು ಡೆಪ್ಯುಟಿ ಸೆಕ್ರೆಟರಿಯಾಗಿರುವವರಿಗೆ 100 ರೂಪಾಯಿ ಸ್ಪೆಷಲ್ ಪೇ ಕೊಟ್ಟಿದ್ದಾರೆ.

(ಶ್ರೀ ಎಂ. ನಾಗಪ್ಪ)

ಸರ್ಕಾರದ ಡೆಪ್ಯುಟಿ ಕಾರ್ಯದರ್ಶಿಯವರಲ್ಲಿ ಎರಡು ಗ್ರೇಡ್ ಇದ್ದು ಅವರಲ್ಲ 900–1,300 ಸ್ಪೆಷಲ್ ಪೇ ಇಲ್ಲ ಮತ್ತು 1,100 ರಿಂದ 1,600 ಸ್ಪೆಷಲ್ ಪೇ 100 ರೂಪಾಯಿ ಎಂದು ಶಿಫಾರಸ್ಸು ಮಾಡಿದ್ದಾರೆ. ಮೂಲ ವೇತನದಲ್ಲಿ 200 ರೂಪಾಯಿ ಹೆಚ್ಚು ಮತ್ತು ಸ್ಪೆಷಲ್ ಪೇ ಇದೆ ಎನ್ನುವುದನ್ನು ವರದಿಯಲ್ಲಿ ತೋರಿಸಿದ್ದಾರೆ.

ಇದರಂತೆಯೇ ಅಸಿಸ್ಟೆಂಟ್ ಡ್ರಾಫ್ಟ್ಸ್‌ಮನ್ ಮತ್ತು ಅಂಡರ್ ಸೆಕ್ರೆಟರಿಗಳ ಬಗ್ಗೆ ವಿಚಾರ ಮಾಡಿದರೆ 350–800 ಮತ್ತು ಸ್ಪೆಷಲ್ ಪೇ 75 ರೂಪಾಯಿ ಇದ್ದುದನ್ನು 450–99 ರೂಪಾಯಿ ಮಾಡಲು ಸಿಫಾರಸ್ಸು ಮಾಡಿ ಅಂಡರ್ ಸೆಕ್ರೆಟರಿಗಳಿಗೆ 75 ರೂಪಾಯಿ ಸ್ಪೆಷಲ್ ಪೇ ಸೇರಿಸಿ ಅಸಿಸ್ಟೆಂಟ್ ಡ್ರಾಫ್ಟ್ಸ್‌ಮನ್ ಅವರಿಗೆ ಸ್ಪೆಷಲ್ ಪೇ ತೋರಿಸಿಲ್ಲ. ಇವರು ಮಾಡತಕ್ಕ ಕಾರ್ಯ ಒಂದೇ ಇರುತ್ತದೆ. ಆದರೆ ಇವರಲ್ಲಿ ಈ ವ್ಯತ್ಯಾಸವಿದೆ. ಇದರ ಔಚಿತ್ಯವಾದರೂ ಏನು ಎನ್ನುವುದು ತಿಳಿಯಲಾರದ ವಿಷಯ. ಇದೇ ರೀತಿಯಲ್ಲಿ 928ನೇ ಪುಟದಲ್ಲಿ ಕೆಲವು ಹುದ್ದೆಗಳಿವೆ, ಎರಡನೇ ವರ್ಗದ ಅಡಿಗೆಯವರು, ಫಿಟ್ಟರ್, ಕಾರ್ಪೆಂಟರ್, ಧೋಬಿ ಇವರಿಗೆಲ್ಲ 65–90 ಇದ್ದ ಸ್ಕೇಲನ್ನು 60–90 ಎಂದು ಮಾಡಿದ್ದಾರೆ. ಮೂಲವೇತನದಲ್ಲಿ ಇವರಿಗೆಲ್ಲ 5 ರೂಪಾಯಿ ಕಡಮೆ ಮಾಡಿದ್ದಾರೆ. ಇದೇ ರೀತಿ ಇನ್ನೂ ಕೆಲವು ಹುದ್ದೆಗಳ ಸಂಬಂಧದಲ್ಲಿ ಮೂಲವೇತನವನ್ನು ಕಡಮೆ ಮಾಡಿದ್ದಾರೆ. ಈ ಹುದ್ದೆಗಳಲ್ಲಿ ಇರುವವರಿಗೆ ಬಡ್ತಿ ಕೊಡುವುದರ ಬದಲು ಐದು ರೂಪಾಯಿ ಮೂಲ ವೇತನದಲ್ಲಿ ಕಡಮೆ ಮಾಡಿದ್ದಾರೆ.

ಇದರಲ್ಲಿ ಇನ್ನೊಂದು ವಿಶೇಷವಾದ ವಿಷಯವೇನೆಂದರೆ ಪ್ರತಿಯೊಬ್ಬ ನೌಕರನೂ ತನ್ನ ಹೆಚ್ಚಿನ ವೇತನವನ್ನು ಸಾಮಾನ್ಯವಾಗಿ 12 ವರ್ಷಗಳಲ್ಲಿ ಮುಟ್ಟುತ್ತಾನೆ, ಕೆಲವು ಇಲಾಖೆಗಳಲ್ಲಿ 18 ವರ್ಷಗಳಲ್ಲಿ ಮುಟ್ಟುತ್ತಾನೆ. ಆಯೋಗದ ಸಿಫಾರಸಿನಂತೆ ಯಾರೂ 18 ವರ್ಷಕ್ಕೆ ಮೊದಲು ಹೆಚ್ಚಿನ ವೇತನವನ್ನು ಎಂದರೆ ಮ್ಯಾಕ್ಸಿಮಂ ಮುಟ್ಟಲಿಕ್ಕೆ ಸಾಧ್ಯವಿಲ್ಲ. ಈ ಅವಧಿಯನ್ನು 24 ವರ್ಷಗಳವರೆಗೂ ಹೆಚ್ಚು ಮಾಡಿದ್ದಾರೆ. ಈ ರೀತಿ ಹೆಚ್ಚಾದ ಅವಧಿ ಏನು ತೋರಿಸಿಕೊಟ್ಟಿದ್ದಾರೆ ಅದು ಸರಿಯಾದುದಲ್ಲ ಎನ್ನುವ ಅಭಿಪ್ರಾಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.

ಪೆನ್‌ಷನರುಗಳ ಬಗ್ಗೆ ನೋಡಿದರೆ 12 ತಿಂಗಳ ಸಂಬಳವನ್ನು ಗಣನೆಗೆ ತೆಗೆದುಕೊಂಡು ಅದರ ಲೆಕ್ಕಾಚಾರದ ಪ್ರಕಾರ ಪೆನ್‌ಷನ್ ಕೊಡಬೇಕು ಎಂದು ಹೇಳಿದಾಗ ಅದು ಮೈಸೂರು ಸಿವಿಲ್ ಸರ್ವಿಸ್ ಪ್ರಕಾರವಾಗಿ ಇರುವವರಿಗೆ ಕೊಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಭಾಗಗಳಿಂದ ಬಂದಂಥ ಎಷ್ಟೋ ಪೆನ್‌ಷನ್‌ದಾರರಿದ್ದಾರೆ. ಮೈಸೂರು ಸಿವಿಲ್ ಸರ್ವಿಸ್ ರೂಲ್ಸ್‌ಗೆ ಒಳಪಡದೆ ಇರುವ ಹೈದರಾಬಾದು ಭಾಗದ ನೌಕರರಿಗೆ ಮತ್ತು ಇತರರಿಗೆ ಇದರ ಲಾಭ ದೊರೆಯುವುದಿಲ್ಲ. ಅದಕ್ಕಾಗಿ ಪೆನ್‌ಷನರುಗಳ ಬಗ್ಗೆ ಮಾಡಿರುವ ಸಿಫಾರಸನ್ನು ಎಲ್ಲ ಭಾಗಗಳಿಂದ ಬಂದವರಿಗೂ ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕು ಎನ್ನುವ ವಿಷಯವನ್ನು ನಾನು ಈ ಸಭೆಯಲ್ಲಿ ಒತ್ತಿ ಹೇಳುತ್ತೇನೆ.

ಆಯೋಗದವರು ಮಾಡಿರುವ ಸಿಫಾರಸುಗಳನ್ನು ನೋಡಿದರೆ ಕೆಳಮಟ್ಟದ ನೌಕರರಿಗೆ 10 ರೂಪಾಯಿ ಮೂಲ ವೇತನ ಜಾಸ್ತಿ ಮಾಡಿದ್ದಾರೆ. ಕೆಲವು ವರ್ಗಗಳವರನ್ನು ನೋಡಿದರೆ 350 ರೂಪಾಯಿ ಸಂಬಳ ಇದ್ದವರಿಗೆ 1,100 ರೂಪಾಯಿ ಕೊಟ್ಟಿರುವ ನಿದರ್ಶನಗಳಿವೆ. ಡೆಪ್ಯುಟಿ ಡೈರೆಕ್ಟರ್ ಮತ್ತು ಡಿ.ಇ.ಓ. ಇವರುಗಳ ಸಂಬಳ ಶ್ರೇಣಿಗಳನ್ನು ತೆಗೆದುಕೊಂಡರೆ ಈ ವ್ಯತ್ಯಾಸ ಗೊತ್ತಾಗುತ್ತದೆ. ಡೆಪ್ಯುಟಿ ಡೈರೆಕ್ಟರ ಸಂಬಳ ಶ್ರೇಣಿ 600–1,000 ಇದ್ದುದನ್ನು 700–1,200 ಮಾಡಿ ಡಿ.ಇ.ಓ. ಅವರ ಸ್ಕೇಲು 350–800 ಇರುವುದನ್ನು 700–1,200 ಮಾಡಬೇಕೆಂದು ಸಿಫಾರಸು ಮಾಡಿದ್ದಾರೆ. ಇವರಿಗೆ 350 ಪ್ರಾರಂಭಿಕ ಅನುಕೂಲ ದೊರೆಯುತ್ತದೆ. ಅದರಂತೆಯೇ ಇನ್‌ಸ್ಪೆಕ್ಟರ್ ಆಫ್ ಫ್ಯಾಕ್ಟರೀಸ್ ಅವರಿಗೂ ಕೊಟ್ಟಿದ್ದಾರೆ. ಇಂಥ ಅನೇಕ ನಿದರ್ಶನಗಳಿವೆ. ಆಯೋಗದವರು ಈಗ ಸಿಫಾರಸು ಮಾಡಿರುವ ಪ್ರಕಾರ ಹೆಚ್ಚಾಗಿ ಮೇಲ್ದರ್ಜೆ ನೌಕರರಿಗೆ ಮುಟ್ಟುತ್ತದೆ, ಕೆಳದರ್ಜೆ ನೌಕರರಿಗೆ ಹೆಚ್ಚಾಗಿ ಮುಟ್ಟಲಾರದು ಎಂದು ನಾನು ಭಾವಿಸುತ್ತೇನೆ.

ಸರ್ಕಾರ ಕೊಟ್ಟ ಕೆಲವು ಲೆಕ್ಕಪತ್ರಗಳನ್ನು ನಾವು ನೋಡಿದರೆ ರಾಜ್ಯದಲ್ಲಿ ಮೂರನೆ ಮತ್ತು ನಾಲ್ಕನೇ ದರ್ಜೆ ನೌಕರರು, 2,28,700 ಎರಡು ಮತ್ತು ಒಂದನೇ ದರ್ಜೆಯವರು 11,300 ಜನರಿದ್ದಾರೆ. ಮೂರು ಮತ್ತು ನಾಲ್ಕನೇ ವರ್ಗದ ನೌಕರರಿಗೆ ಪ್ರಾರಂಭದಲ್ಲಿ 743 ಲಕ್ಷ ರೂಪಾಯಿ ಹೆಚ್ಚು ವೆಚ್ಚ ಬರುತ್ತದೆ, ಕಡೆಯಲ್ಲಿ 913 ಲಕ್ಷ ರೂಪಾಯಿ ಬರುತ್ತದೆ. ಅದರಂತೆಯೇ ಎರಡು ಮತ್ತು ಮೊದಲನೇ ವರ್ಗದವರಿಗೆ 57 ಲಕ್ಷ ಮತ್ತು 203 ಲಕ್ಷ ಆಗುತ್ತದೆ. ಇದನ್ನು ನಾವು ಅವಲೋಕಿಸಿದರೆ ಇರತಕ್ಕ ಸಂಖ್ಯೆ ಏನು, ಖರ್ಚಾಗುವ ಹಣವೇನು ಇದನ್ನೆಲ್ಲ ಲೆಕ್ಕ ಹಾಕಿ ನೋಡಿದರೆ ಎಷ್ಟರಮಟ್ಟಿಗೆ ಹೆಚ್ಚಿನ ಹಣ ಮೇಲ್ದರ್ಜೆ ನೌಕರರಿಗೆ ಕೊಡುತ್ತೇವೆಂದು ಅವರು

ಕೊಟ್ಟಿರುವ ಲೆಕ್ಕ ಪತ್ರಗಳಿಂದಲೇ ಗೊತ್ತಾಗುತ್ತದೆ. ಅದಕ್ಕಾಗಿ ನಾನು ಈಗಾಗಲೇ ಸಬ್‌ಸ್ಟಿಟ್ಯೂಟ್ ಮೋಷನ್ ಮೂಲಕ ಈ ಸಭೆಯಲ್ಲಿ ಸೂಚಿಸಿರುವಂತೆ 350 ರೂಪಾಯಿಗೆ ಹೆಚ್ಚು ಇರತಕ್ಕ ಜನರ ಸಂಬಳ ಏನು ಹೆಚ್ಚು ಮಾಡಬೇಕೆಂದು ಸಿಫಾರಸು ಮಾಡಿದ್ದಾರೆ ಅದನ್ನು ಕೊಡಬಾರದು, ಹೀಗೆ ಮಾಡಿದರೆ ತನ್ನಷ್ಟಕ್ಕೆ ತಾನೇ ಸರ್ಕಾರಕ್ಕೆ ಉಳಿತಾಯವಾಗುತ್ತದೆ. ಈಗಿರತಕ್ಕ ಅಧಿಕಾರಿಗಳಲ್ಲಿ ಅನೇಕ ಜನ 1972ರಲ್ಲಿ ನಿವೃತ್ತರಾಗುತ್ತಾರೆ. ಆಗ ಆ ಸ್ಥಾನಗಳಿಗೆ ಬರತಕ್ಕವರಿಗೆಲ್ಲ ಮೂಲ ವೇತನದಲ್ಲಿ ಸುಮಾರು 200 ರೂಪಾಯಿಗಳಂತೆ ಪ್ರತಿಯೊಬ್ಬ ಅಧಿಕಾರಿಗೂ ಹೆಚ್ಚಾಗಿ ಕೊಡಬೇಕಾಗುತ್ತದೆ. ಇದರಿಂದ ಮೂರು ನಾಲ್ಕು ವರ್ಷಗಳಲ್ಲಿ ಸರ್ಕಾರದ ಬೊಕ್ಕಸದ ಮೇಲೆ ಸಾಕಷ್ಟು ಪರಿಣಾಮವಾಗುತ್ತದೆ. ಆದ್ದರಿಂದ ಕೆಳದರ್ಜೆ ನೌಕರರಿಗೆ ಮಾತ್ರ ಅನುಕೂಲವಾಗುವಂತೆ ವೇತನ ಶ್ರೇಣಿಗಳನ್ನು ಅಂಗೀಕಾರ ಮಾಡಬೇಕು ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನನ್ನ ತಿದ್ದುಪಡಿಯ ಪ್ರಕಾರ ನಾನು ಸೂಚಿಸಿರುವ ಮೊಬಲಗಿಗಿಂತ ಕಡಮೆ ಬರುವವರಿಗೆ ಮೂಲ ವೇತನ ಎಷ್ಟು ಜಾಸ್ತಿ ಮಾಡಿದರೂ ಕೂಡ ತೊಂದರೆಯಾಗುವುದಿಲ್ಲ, 350 ರೂಪಾಯಿಗಳಿಗಿಂತ ಕಡಮೆ ವೇತನ ಬರುವವರಿಗೆ ಬಹಳ ತೊಂದರೆಯಾಗಿ ಜೀವನಮಾಡುವುದೇ ಕಷ್ಟವಾಗಿರುವಾಗ ಮೂಲವೇತನವನ್ನು 70 ರೂಪಾಯಿಗಳಾದರೂ ಮಾಡಿ, ಅಷ್ಟು ಅವಶ್ಯಕ. ಇಷ್ಟು ಹೇಳಿ ಈ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಭಾಸ್ಕರಶೆಟ್ಟಿ.—ಅಧ್ಯಕ್ಷರೇ, ಮಾನ್ಯ ತುಕೋಳ್‌ರವರು ಬಹಳ ಶ್ರಮಪಟ್ಟು ಬಹಳ ಕಡೆ ವಿಚಾರಿಸಿ ವಿಷಯಗಳನ್ನು ಸಂಗ್ರಹಿಸಿ ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ವಿಷಾದದ ವಿಷಯವೇನೆಂದರೆ ಕೆಲವು ಸಂದರ್ಭಗಳಲ್ಲಿ, ಅದರಲ್ಲೂ ಕೆಳ ತರಗತಿಯ ನೌಕರರ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಅವರು ಧೃತರಾಷ್ಟ್ರ ದೃಷ್ಟಿಯನ್ನು ಬೀರಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಕೆಳದರ್ಜೆ ನೌಕರರಿಗೂ ಮತ್ತು ಮೇಲ್ದರ್ಜೆ ನೌಕರರಿಗೂ ಶಿಫಾರಸು ಮಾಡಿರುವ ವೇತನಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಅದೂ ಅಲ್ಲದೆ ಯಾವ ಸಮಾಜವಾದಿ ರಾಷ್ಟ್ರದಲ್ಲೂ ಕೂಡ ಈ ರೀತಿಯ ವ್ಯತ್ಯಾಸವಿಲ್ಲ. ಇದನ್ನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಸಮಾಜವಾದದ ತತ್ತ್ವದಮೇಲೆ ನಡೆಯುವ ರಾಷ್ಟ್ರಗಳಲ್ಲಿ ಕೆಳದರ್ಜೆ ಮತ್ತು ಮೇಲ್ದರ್ಜೆ ನೌಕರರ ವೇತನಗಳಲ್ಲಿ 1 : 10 ಪ್ರಮಾಣಕ್ಕಿಂತ ಹೆಚ್ಚು ವ್ಯತ್ಯಾಸವಿರುವುದಿಲ್ಲ, ಕೆಳದರ್ಜೆಯವರಿಗಿರುವ ವೇತನದ ಹತ್ತರಷ್ಟಕ್ಕಿಂತ ಹೆಚ್ಚು ಮೇಲ್ದರ್ಜೆಯವರಿಗಿರುವುದಿಲ್ಲ. ಸಮಾಜವಾದದ ಹೆಸರನ್ನು ಹೇಳುವಾಗ, ಆ ಹೆಸರಿನಲ್ಲಿ ರಾಜ್ಯಭಾರ ಮಾಡುವಾಗ ಕೆಳದರ್ಜೆ ನೌಕರರಿಗೆ ಇಷ್ಟು ಕನಿಷ್ಠ ವೇತನವನ್ನು ಕೊಡುವುದು ಸರಿಯಲ್ಲ. ಮಾತ್ರವಲ್ಲದೆ ಇದನ್ನು ತಿದ್ದಿ ಕೆಳದರ್ಜೆ ನೌಕರರಿಗೆ ಅದರಲ್ಲೂ 4 ನೇ ದರ್ಜೆ ನೌಕರರಿಗೆ 60 ರೂಪಾಯಿ ಮೂಲ ವೇತನವಿರಬೇಕೆಂದು ವರದಿಯಲ್ಲಿರುವುದನ್ನು ಕನಿಷ್ಠಪಕ್ಷ 80-85 ಕ್ಕಾದರೂ ಏರಿಸಬೇಕು.

ಕಳೆದ ಸಲದ ಅಧಿವೇಶನದಲ್ಲಿ ಅರ್ಥ ಮಂತ್ರಿಗಳು ಈ ವರದಿಯನ್ನು ಒಪ್ಪಿದರೆ, ಇದರಲ್ಲಿರುವ ವೇತನದ ಸ್ಕೇಲುಗಳನ್ನು ಜಾರಿಗೆ ತಂದರೆ ಸಾಧಾರಣವಾಗಿ 22 ಕೋಟಿ ರೂಪಾಯಿ ಹೆಚ್ಚು ಪರಿಣಾಮ ಬೇಕಾಗುತ್ತದೆ ಎಂದು ಹೇಳಿದ್ದರು. ಇಷ್ಟು ಹಣ ಶೇಕಡ 35 ಗೆಜೆಟೆಡ್ ಆಫೀಸರುಗಳಿಗೂ ಮತ್ತಿತರ ನೌಕರರಿಗೂ ಬೇಕಾಗುತ್ತದೆ, 22 ಕೋಟಿಯ ಖರ್ಚಿನಲ್ಲಿ ಗೆಜೆಟೆಡ್ ನೌಕರರೂ ಇದ್ದಾರೆ. ಈ ವರದಿಯನ್ನು ಜಾರಿಗೆ ತಂದರೆ ಯಾರಿಗೆ ಹೆಚ್ಚು ಹಣ ಖರ್ಚಾಗುವುದೆಂದು ಯೋಚನೆ ಮಾಡಿದರೆ ಶೇಕಡ 60 ರಷ್ಟು ಹಣ ಶೇಕಡ 35 ಮಂದಿ ಇರುವ ಗೆಜೆಟೆಡ್ ನೌಕರರಿಗೆ ಖರ್ಚಾಗುವುದು, ಉಳಿದ ಹಣ ಶೇಕಡ 65 ಮಂದಿ ಇರುವ ಕೆಳತರಗತಿಯ ನೌಕರರಿಗೆ ಹೋಗುವುದು. ಆದುದರಿಂದ ಗೆಜೆಟೆಡ್ ವರ್ಗವನ್ನು ಕೈಬಿಡಬಹುದು, ಅದರಿಂದ ಹೆಚ್ಚು ಉಳಿತಾಯ ಕೂಡ ಆಗುತ್ತದೆ. ಮಾತ್ರವಲ್ಲದೆ ನೀವು ಸಮಾಜವಾದ ತತ್ತ್ವಕ್ಕೆ ಒಂದು ಬೆಲೆ ಕೂಡ ಕೊಟ್ಟಂತಾಗುತ್ತದೆ. ಈ ಸಮಾಜವಾದಿ ರಾಷ್ಟ್ರದಲ್ಲಿ ಜನರು ಸುಗಮವಾಗಿ ಜೀವನವನ್ನು ಸಾಗಿಸುವುದಕ್ಕೆ ಕನಿಷ್ಠವಾಗಿ ಎಷ್ಟು ಬೇಕೋ ಅಷ್ಟನ್ನು ಕೊಡಬೇಕು. ಹೊಟ್ಟೆ, ಬಟ್ಟೆ ಮತ್ತು ವಸತಿಗಳಿಗಾಗಿ ಕನಿಷ್ಠವಾಗಿ ಬೇಕಾಗುವಷ್ಟು ವೇತನವನ್ನಾದರೂ ಕೊಡಲೇಬೇಕು. ಅಷ್ಟನ್ನು ಕೊಡುವವರೆಗೂ ಕೂಡ ನೌಕರರು ಪ್ರಾಮಾಣಿಕತೆಯಿಂದ ಕೆಲಸಮಾಡುವುದಕ್ಕಾಗುವುದಿಲ್ಲ. ಈಗ ಬೆಲೆಗಳು ದಿನದಿನಕ್ಕೆ ಗಗನಕ್ಕೇರುತ್ತಿವೆ, ಜೀವನಕ್ಕೆ ಅವಶ್ಯಕವಾದ ವಸ್ತುಗಳ ಬೆಲೆ ಪ್ರತಿದಿನವೂ ಏರುತ್ತಾ ಇದೆ. ಹೀಗಿರುವಾಗ ಎಷ್ಟು ಆಯೋಗಗಳನ್ನು ರಚಿಸಿದರೂ ಕೂಡ ನೌಕರರ ಕೋರಿಕೆಯನ್ನು ಈಡೇರಿಸುವುದಕ್ಕಾಗುವುದಿಲ್ಲ. ಕೇಂದ್ರದೊಡನೆ ವಿಚಾರವಿನಿಮಯ ಮಾಡಿ ಅರ್ಥ ಮಂತ್ರಿಗಳು ಜೀವನಕ್ಕೆ ಅತ್ಯಾವಶ್ಯಕವಾದ ವಸ್ತುಗಳ ಬೆಲೆಯನ್ನು ನಿಯಂತ್ರಿಸದಿದ್ದರೆ ಎಷ್ಟು ವೇತನ ಹೆಚ್ಚಿಸಿದರೂ ಅದರಿಂದ ಅನುಕೂಲವಾಗಿ ಸಮಸ್ಯೆ ಬಗೆಹರಿಯುವುದಿಲ್ಲ. ವೇತನಗಳನ್ನು ನಿಗದಿಮಾಡುವಾಗ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಅಂತರವಿರಬಾರದು, ಒಂದೇ ರಾಷ್ಟ್ರದಲ್ಲಿ ಕೇಂದ್ರ ಸರಕಾರದ ನೌಕರರಿಗೊಂದು ವೇತನ, ರಾಜ್ಯ ಸರಕಾರದವರಿಗೊಂದು ವೇತನ, ಆಂಧ್ರದಲ್ಲೊಂದು ಬಗೆ ವೇತನ, ಮದ್ರಾಸಿನಲ್ಲೊಂದು ರೀತಿಯ ವೇತನ ಇರಬಾರದು. ಈ ರೀತಿ ವ್ಯತ್ಯಾಸ ಮಾಡಿದರೆ ನೌಕರರಲ್ಲಿ ಅಸಮಾಧಾನ ಮೂಡಿ ಕೆಲಸ ಸರಿಯಾಗಿ ನಡೆಯುವುದಿಲ್ಲ. ಆದುದರಿಂದ ವೇತನ ನಿಗದಿ ಮಾಡುವಾಗ ರಾಷ್ಟ್ರದಲ್ಲಿ ಎಲ್ಲ ಕಡೆಯೂ ಒಂದೇ ವೇತನ ಇರುವಂತೆ ಮಾಡಲು ಮನಸ್ಸು ಮಾಡಬೇಕು.

ಇನ್ನೊಂದು ವಿಷಯ. ತುಕೋಳ್ ವರದಿಯಲ್ಲಿ ಕೆಲವು ಲೋಪದೋಷಗಳಿವೆ. ಮೀನುಗಾರಿಕೆ ಇಲಾಖೆಯನ್ನು ಒಂದು ಮೈನರ್ ಡಿಪಾರ್ಟ್‌ಮೆಂಟ್ ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ವಿದೇಶಿ ವಿನಿಮಯ ಗಳಿಸುವ ಇಲಾಖೆಗಳಲ್ಲಿ ಮೀನುಗಾರಿಕೆ ಇಲಾಖೆಯೂ ಒಂದು. ವರ್ಷಕ್ಕೆ ಸಾಧಾರಣವಾಗಿ ಒಂದು ಸಾವಿರ ರೂಪಾಯಿಗಳಿಗಿಂತ ಜಾಸ್ತಿ ವಿದೇಶಿ ವಿನಿಮಯ ಗಳಿಸುವುದು. ಪ್ರಾಂತಗಳ ಪುನರ್ವಿಂಗಡಣೆಯಾದಮೇಲೆ ಬಜೆಟ್ ನೋಡಿದರೆ ಮೀನುಗಾರಿಕೆ ಇಲಾಖೆಗೆ ತೋಟಗಾರಿಕೆ ಇಲಾಖೆಗಿಂತ ಪ್ರತಿ ವರ್ಷ ಹೆಚ್ಚು ಹಣ ಒದಗಿಸಲಾಗಿದೆ, ಅದು ಹೆಚ್ಚು ಕೆಲಸವನ್ನೂ ಮಾಡುತ್ತಿವೆ. ಹೀಗಿದ್ದರೂ ಕೂಡ ತೋಟಗಾರಿಕೆ ಇಲಾಖೆಯನ್ನು ಮೇಜರ್ ಡಿಪಾರ್ಟ್‌ಮೆಂಟ್ ಎಂದು ಕರೆದು ಮೀನುಗಾರಿಕೆ ಇಲಾಖೆಯನ್ನು ಮೈನರ್ ಡಿಪಾರ್ಟ್‌ಮೆಂಡ್ ಎಂದು ಪರಿಗಣಿಸಿದ್ದಾರೆ. ಇದು ತಪ್ಪು. ಈ ವಿಚಾರವನ್ನು ಗಮನಿಸಿ ಪರಿಶೀಲನೆ ಸರಿಯಾಗಿ ಮಾಡಿ ಮೀನುಗಾರಿಕೆ ಇಲಾಖೆಯನ್ನು ಮೇಜರ್ ಇಲಾಖೆಯೆಂದು ಮಾಡಬೇಕು. ಏಕೆಂದರೆ ಈ ಇಲಾಖೆಯಲ್ಲಿ ಈಗಾಗಲೆ ಇಂಡೋ—ನಾರ್ವೇಜಿಯನ್ ಮತ್ತು ಇಂಡೋ—ಜಪಾನ್ ಎರಡು ಪ್ರಾಜೆಕ್ಟುಗಳು ಕೆಲಸ ಮಾಡುತ್ತಿವೆ. ಮೊನ್ನೆ ಇಂಡೋ—ಯುಗೋಸ್ಲಾವೇಕಿಯ ಪ್ರಾಜೆಕ್ಟ್ ತಯಾರಾಗಿದೆ. ಹೀಗಿರುವಾಗ ಮೀನುಗಾರಿಕೆ ಇಲಾಖೆಯನ್ನು ಮೇಜರ್ ಇಲಾಖೆ ಎಂದು ಪರಿಗಣಿಸಿ, ಆ ಇಲಾಖೆಯ ಅಧಿಕಾರಿಗಳಿಗೆ ಒಳ್ಳೆಯ ಸಂಬಳವನ್ನು ತೋಟಗಾರಿಕೆ ಇಲಾಖೆ ಮತ್ತು ವ್ಯವಸಾಯ ಇಲಾಖೆಗಳಲ್ಲಿ ಕೊಡುವಂತೆ ಕೊಡಬೇಕು ಎಂದು ಒತ್ತಾಯಮಾಡುತ್ತೇನೆ.

ಪೋಲೀಸು ಇಲಾಖೆಯನ್ನು ಸಾಮಾನ್ಯವಾಗಿ ಎಲ್ಲರೂ ಬೈಯ್ಯುವುದುಂಟು, ಆ ಇಲಾಖೆಯವರು ಅನ್ಯಾಯ ಮಾಡುತ್ತಾರೆ ಎಂದು ಹೇಳುತ್ತಾರೆ. ಕಾನ್‌ಸ್ಟೇಬಲ್ಲುಗಳಿಗೆ ಕೊಡುವ ಸಂಬಳ ನೋಡಿದರೆ, ಅವರ ಮೂಲ ವೇತನ ನೋಡಿದರೆ ಅವರಿಂದ ಸರಿಯಾದ ಕೆಲಸ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಅವರಿಗೆ ಕೊಡುವ ವೇತನ ಎರಡನೆ ದರ್ಜೆ ಗುಮಾಸ್ತರಿಗೆ ಕೊಡುವ ವೇತನಕ್ಕಿಂತ ಕಡಿಮೆ. ಅವರನ್ನು ಮೂರನೆಯ ವರ್ಗವೆಂದು ಮಾಡಿದ್ದಾರೆ. ಅವರಿಗೆ 85 ರೂಪಾಯಿ ಮೂಲವೇತನ ಕೊಟ್ಟು ಅದನ್ನು 140 ರೂಪಾಯಿಗಳವರೆಗೆ ಏರಲು ಅವಕಾಶ ಮಾಡಿದೆ.

ಹೀಗಿರುವಾಗ ಒಬ್ಬ ಕೆಳ ತರಗತಿಯ ಪೋಲೀಸ್ ಕಾನ್‌ಸ್ಟೇಬಲ್‌ನಿಂದ ಪ್ರಾಮಾಣಿಕತೆಯನ್ನು ಬಯಸುವುದಕ್ಕೆ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ. ಪೋಲೀಸ್ ನೌಕರನೂ ಕೂಡ ಒಬ್ಬ ಮನುಷ್ಯ. ಅವನು ಒಳ್ಳೆಯ ರೀತಿಯಿಂದ ಕೆಲಸ ಮಾಡಬೇಕು. ಬಾಕಿಯವರಂತೆ ಅವನಿಗೂ ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಖರ್ಚು ಆಗುವ ರಿಸ್ಥಿತಿ ಇದೆ. ಹೇಗೆಂದರೆ ಅವರು ದಿನನಿತ್ಯ ಶೇವ್ ಮಾಡಿಕೊಳ್ಳಬೇಕು, ತಿಂಗಳಿಗೆ ಎರಡು ಸಲ ಹೇರ್ ಕಟಿಂಗ್ ಮಾಡಿಸಬೇಕು, ಮಾತ್ರವಲ್ಲದೆ ಅವರ ಡ್ರೆಸ್‌ನ್ನು ಎರಡು ದಿವಸಕ್ಕೆ ಒಂದು ಸಲವಾದರೂ ಇಸ್ತ್ರಿ ಮಾಡಿಸಬೇಕು. ಹೀಗಿರುವಾಗ ಅವನಿಗೆ ಕೊಡುವ ಮೂಲವೇತನ ಅವರ ದಾಡಿ ತೆಗೆಸುವುದಕ್ಕೆ, ತಲೆ ಕೂದಲು ಕತ್ತರಿಸುವುದಕ್ಕೆ ಹಜಾಮತಿಗೆ ಹೋಗುತ್ತದೆ. ಅವನ ಹೆಂಡತಿ ಮಕ್ಕಳ ಹೊಟ್ಟೆ ಹೊರೆಯುವುದಕ್ಕೆ ಅದರಿಂದ ಸಾಧ್ಯವಿಲ್ಲ. ಇದರಿಂದಾಗಿ ಅವರು ಲಂಚ ತೆಗೆದುಕೊಳ್ಳುತ್ತಾರೆ ಎಂದು ಅನ್ನುತ್ತಾರೆ. ಅವರಿಗೂ ಒಂದು ಕಾಲದಲ್ಲಿ ಸುಖವಾದ ಕಾಲ ಇತ್ತು, ಈಗ ಪಾನನಿರೋಧವನ್ನು ಸ್ಕ್ರ್ಯಾಪ್ ಮಾಡಿದ್ದೀರಿ. ಇದರಿಂದಾಗಿ ಅವರ ಗತಿ ನಿರ್ಗತಿಕರಾದಂತಾಗಿದೆ. ಲಾರಿ, ಕಾರುಗಳನ್ನು ಹಿಡಿದು ಹಣ ಗಳಿಸಿಕೊಳ್ಳಬೇಕಾಗಿದೆ. ಆದ್ದರಿಂದ ಅವರ ಜೀವನ ಒಳ್ಳೆಯ ರೀತಿಯಲ್ಲಿ ಆಗುವಂತೆ ಮಾಡಲು ಪೋಲೀಸ್ ಕಾನ್‌ಸ್ಟೇಬಲ್‌ಗಳವರಿಗೆ ಮೂಲವೇತನವನ್ನು ಹೆಚ್ಚುಮಾಡಬೇಕು. ಅವರಿಗೆ ಕನಿಷ್ಠ ಪಕ್ಷ ಎರಡನೆ ದರ್ಜೆ ನೌಕರರ ಸಂಬಳವನ್ನಾದರೂ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

5–00 P.M.

ಈ ವರದಿಯನ್ನು ಸಲ್ಲಿಸುವಾಗ ಎಕಾನಮಿ ಯಾವ ರೀತಿ ಮಾಡಬೇಕು, ರಿಸೋರ್ಸಸ್ ಯಾವ ರೀತಿಯಿಂದ ಬರುತ್ತದೆ ಎಂಬ ವಿಚಾರವನ್ನು ಹೇಳಿದ್ದಾರೆ. ಧೈರ್ಯಮಾಡಿ ಎಕಾನಮಿ

ಮಾಡಬೇಕೆಂದು ಹೇಳುತ್ತಾ, ಡಿವಿಜನಲ್ ಕಮಿಷನರ ಹುದ್ದೆ ಹೋಗಬೇಕು, ಸಮಾಜ ವಿಸ್ತರಣಾ ಯೋಜನೆಯನ್ನು ಕೈ ಬಿಡಬೇಕೆಂದು ಸಲಹೆ ಮಾಡಿದ್ದಾರೆ. ಡಿವಿಜನಲ್ ಕಮಿಷನರ ಹುದ್ದೆ ಕೇವಲ ಪೋಸ್ಟ್ ಆಫೀಸಿನಂತೆ ಇದೆ, ಏನೂ ಕೆಲಸ ನಡೆಯುವುದಿಲ್ಲ ಮಾತ್ರವಲ್ಲದೆ ಕಾಗದ ಪತ್ರಗಳು ಜಿಲ್ಲಾ ಕೇಂದ್ರದಿಂದ ರಾಜ್ಯ ಕೇಂದ್ರವನ್ನು ಮುಟ್ಟಬೇಕಾದರೆ ಡಿವಿಜನ್‌ಗೆ ಹೋಗಿ ಬೆಂಗಳೂರಿಗೆ ಬರಬೇಕು. ಇಷ್ಟೇ ಕೆಲಸ ಅವರು ಮಾಡುವುದು, ಬೇರೆ ಯಾವ ರೀತಿಯಲ್ಲೂ ಕೆಲಸವಾಗುವುದಿಲ್ಲ. ಇದರಿಂದ ಕಾಗದಪತ್ರಗಳು ಜಾಗ್ರತೆ ವಿಲೇವಾರಿಯಾಗುವುದಕ್ಕೆ ತೊಂದರೆಯಾಗುತ್ತಾ ಇದೆ. ಆದ್ದರಿಂದ ಇದನ್ನು ಕೈ ಬಿಡಬೇಕು, ಮತ್ತು ಸಮಾಜ ವಿಸ್ತರಣಾ ಯೋಜನೆಯನ್ನು ಕೈಬಿಟ್ಟು ತಮ್ಮ ರೆಸೋರ್ಸಸ್‌ನ್ನು ಹೆಚ್ಚು ಮಾಡಿಕೊಳ್ಳಬೇಕು. 22 ಕೋಟಿ ರೂಪಾಯಿಗಳಿಗೆ ಭಯಪಡಬೇಕಾಗಿಲ್ಲ. ಏಕೆಂದರೆ ನನ್ನ ಅನುಭವವನ್ನು ಹೇಳುವುದಾದರೆ ಎಕ್ಸೈಜ್ ಇಲಾಖೆ, ಪಬ್ಲಿಕ್ ವರ್ಕ್ಸ್ ಇಲಾಖೆ ಮುಂತಾದ ಇಲಾಖೆಗಳಲ್ಲಿ ತಮ್ಮ ಆಡಳಿತವನ್ನು ಬಿಗಿಪಡಿಸಿದರೆ ಹೆಚ್ಚಿನ ಹಣವನ್ನು ದೊರಕಿಸಿಕೊಳ್ಳಬಹುದು. ಮಾನ್ಯ ಮಂತ್ರಿಗಳು ಹೋದ ಸಲ ಎಕ್ಸೈಜ್ ಬಾಬಿನಲ್ಲಿ 16 ಕೋಟಿ ರೂಪಾಯಿಗಳಷ್ಟು ಬರುತ್ತದೆ ಎಂದು ಹೇಳಿದ್ದಾರೆ. ಅದನ್ನು ಇನ್ನೂ ಬಿಗಿಪಡಿಸಿದರೆ 16 ಕೋಟಿ ರೂಪಾಯಿ ಮಾತ್ರವಲ್ಲ ಇನ್ನೂ 10 ಕೋಟಿ ರೂಪಾಯಿಗಳನ್ನು ಬರಮಾಡಿಕೊಳ್ಳಬಹುದು. ಪ್ರೊಹಿಬಿಷನ್ ಇದ್ದಾಗ ಕಳ್ಳಭಟ್ಟಿ ಶರಾಬು ಆಗುತ್ತಾ ಇತ್ತು. ಎಕ್ಸೈಜ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಮತ್ತು ಕಂಟ್ರಾಕ್ಟರುಗಳು ಒಟ್ಟಾಗಿ ಸೇರಿ ಲಂಚ ಹೊಡೆದು ಸರ್ಕಾರಕ್ಕೆ ಸಿಕ್ಕತಕ್ಕ ಹಣ ಬಹಳ ಕಮ್ಮಿ ಬರುತ್ತದೆ. ಆದ್ದರಿಂದ ಆಡಳಿತವನ್ನು ಬಿಗಿಪಡಿಸಿದರೆ ಇನ್ನಷ್ಟು ಹಣ ಬರುತ್ತದೆ. ಇದೇ ರೀತಿ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್, ಆರ್.ಟಿ.ಓ. ಆಫೀಸು ಮುಂತಾದುವುಗಳಲ್ಲಿ ಈ ಲಂಚದ ಒಂದು ಹಾವಳಿಯಿಂದ ವರಮಾನ ಬಹಳ ಕಮ್ಮಿಯಾಗುತ್ತಾ ಇದೆ. ಇದನ್ನು ಬಿಗಿಪಡಿಸಿದರೆ ಬೇಕಾದಷ್ಟು ಹಣ ತನ್ನಷ್ಟಕ್ಕೆ ತಾನೇ ಬರುತ್ತದೆ. ಆ ರೀತಿ ಮಾಡಿ ಆದಷ್ಟು ಬೇಗ ಈ ವರದಿಯನ್ನು ಜಾರಿಗೆ ತರಬೇಕು. ವೇತನ ಆಯೋಗ ಆಗಿದೆ, ಸರ್ಕಾರಿ ನೌಕರರಿಗೆ ಈ ಪ್ರಕಾರ ವೇತನ ಸಿಕ್ಕುತ್ತದೆ ಎಂದು ಆಶೆಯಿಂದ ಕುಳಿತುಕೊಳ್ಳುವ ರೀತಿಯಲ್ಲಿ ಮಾಡಬಾರದು. ಕೆಳತರಗತಿಯ ಮಟ್ಟಕ್ಕೆ ಆದರೂ ಈ ವರದಿಯ ಪ್ರಕಾರ ಸಂಬಳ ಸಿಕ್ಕುವಂತೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ಮಾತನಾಡಲು ಸಮಯ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಸಭಾಪತಿಯವರೇ, ಸರ್ಕಾರಿ ನೌಕರರ ಸಂಬಳವನ್ನು ಹೆಚ್ಚು ಮಾಡಬೇಕೆಂಬ ಬಗ್ಗೆ ಅನೇಕ ಸಲ ನಾನಾ ರೂಪದಲ್ಲಿ ಸರ್ಕಾರದ ಮುಂದೆ ಬೇಡಿಕೆಗಳು ಬಂದಿವೆ. ಆದರೂ ಕೂಡ ಸಾಕಾದಷ್ಟು ಇಲ್ಲಿಯವರೆಗೂ ಮಾಡಿರತಕ್ಕ ಶ್ರಮ ಸಫಲವಾಗಿಲ್ಲ ಎಂಬ ಕೂಗು ಇದೆ. ನಿಜ, ಸ್ವರಾಜ್ಯ ಬಂದಮೇಲೆ ದೇಶದ ಅನೇಕ ಪ್ರಜೆಗಳು ತಮ್ಮ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳಬೇಕು ಎಂಬ ನಿರೀಕ್ಷಣೆಯನ್ನು ಏನೋ ಇಟ್ಟುಕೊಂಡಿದ್ದಾರೆ. ನಾವು ಸ್ವತಂತ್ರವಾಗಿದ್ದೇವೆ, ಇದು ಒಂದು ಪ್ರಜಾ ಸರ್ಕಾರ. ನಮಗೆ ಖಚಿತವಾದ ಉಪಕಾರ ಮಾಡಿದೆ ಎಂಬ ವರ್ಗ ಯಾವುದಾದರೂ ಇದೆಯೇ ಎಂದರೆ ಅಹುದು ಎಂದು ಹೇಳತಕ್ಕ ಕಾಲ ಇನ್ನೂ ಬಂದಿಲ್ಲ. ಈ ನೌಕರ ವರ್ಗ ಎನ್ನತಕ್ಕ ವರ್ಗ ಏನಿದೆ ಅವರು ಸಂಬಳ ಸಾರಿಗೆಯ ಬಗ್ಗೆ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡತಕ್ಕ ಅವಕಾಶವನ್ನು ಅವರಿಗೆ ನೀಡಿದ್ದರಿಂದ ಅವರ ಕೂಗು ಸರ್ಕಾರಕ್ಕೆ ನೇರವಾಗಿ ಕೇಳಿಸುವ ಹಾಗೆ ಮಾಡುವುದು ಸುಲಭ ಅನ್ನುವುದನ್ನು ಇತ್ತೀಚೆಗೆ ನಾನಾ ರೂಪದಲ್ಲಿ ಅವರು ತೋರಿಸಿದ್ದಾರೆ. ಈ ಸೌಲಭ್ಯ ಸಂಸ್ಥಾನದ ಎಲ್ಲಾ ಭಾಗದ ಪ್ರಜಾ ಕೋಟಿಗೂ ಇಲ್ಲ. ಆ ಬಗ್ಗೆ ಉದಾಹರಣೆಗೆ ಹೇಳುವುದಾದರೆ ರೈತರ ಬಾಳು ಅನ್ನುವುದು ನಮ್ಮ ದೇಶದಲ್ಲಿ ಒಂದು ಇದೆ. ಈ ಚರ್ಚೆಯನ್ನು ಕುರಿತು ಮಾತನಾಡುವಾಗ ನಿರ್ವೀರ್ಯವಾದಂತಹ ಆ ಬಡ ಜನರು ಇರತಕ್ಕದ್ದು ಗ್ರಾಮಗಳಲ್ಲಿ ಅನ್ನತಕ್ಕ ಮಾತನ್ನು ಹೇಳುತ್ತೇನೆ. ಎಷ್ಟುಮಟ್ಟಿಗೆ ಗ್ರಾಮ ಜೀವನ ಈ 20 ವರ್ಷಗಳಲ್ಲಿ ಚೆನ್ನಾಗಿ ರೂಪುಗೊಂಡಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದಾದರೆ ಒಂದು ರೀತಿಯಲ್ಲಿ ಶೋಚನೀಯವಾದ ದೃಶ್ಯ ಕಂಡುಬರುತ್ತಿದೆ. ಇವತ್ತಿನ ದಿವಸ ಒಬ್ಬ ಬಡ ನೌಕರನ ವಿಷಯದಲ್ಲಿ ಕರುಣೆ ಅನೇಕರಿಗೆ ಇದೆ, ಇರಬೇಕಾದ್ದು ಸರಿಯೇ. ಆದರೆ ಬಡ ನೌಕರ ಯಾರು ಎಂಬ ಪ್ರಶ್ನೆಯನ್ನು ತೆಗೆದುಕೊಳ್ಳುವಾಗ ಅವನು ಪೋಲೀಸ್ ಕಾನ್‌ಸ್ಟೇಬಲ್ಲೇ ಅಥವಾ ಉಪಾಧ್ಯಾಯರೇ ಎಂದು ಹೇಳಿ ಆ ವ್ಯಕ್ತಿಗಳನ್ನು ಕುರಿತು ಮಾತನಾಡುವುದು ಉಂಟು. ಹಾಗೆಯೇ ಕೆಳದರ್ಜೆ ನೌಕರರು ಎಂದರೆ ಜವಾನ ಕೆಲಸ ಮಾಡತಕ್ಕವರು ಇದ್ದಾರೆಯಲ್ಲಾ ಅವರು ಕೇವಲ ಕೆಳ ದರ್ಜೆ ನೌಕರರು ಎಂದು ಕರೆಯಲ್ಪಡುತ್ತಾರೆ. ಕ್ಲಾಸ್ 4 ಮತ್ತು ಕ್ಲಾಸ್ 3 ಅಂತ ಹೇಳಿ ನಾವು ಏನು ಇಟ್ಟುಕೊಂಡಿದ್ದೇವೆ ಅವರ ವಿಷಯದಲ್ಲಿ ಒಂದು ಹೆಚ್ಚಿನ ಕರುಣೆ ಇಡಬೇಕಾದ್ದು ಸರಿ, ಮತ್ತು ಸರ್ಕಾರ ಖಚಿತವಾಗಿ ಅವರ ಬಗ್ಗೆ ಏನಾದರೂ ಆಲೋಚನೆಯನ್ನು ಉಪೇಕ್ಷೆ ಮಾಡದೆ ಮಾಡಬೇಕಾದ್ದು ಸರಿ. ತುಕೋಲ್

(ಶ್ರೀ ಕೆ. ಪ್ರಭಾಕರ್)

ಕಮಿಷನ್ ವರದಿಯಲ್ಲಿ ಹೇಳಿರತಕ್ಕ ವಿಷಯಗಳನ್ನು ಪರಿಶ್ರಮ ಮಾಡಿ ಓದಿ ಅರ್ಥಮಾಡಿಕೊಂಡು ಖಚಿತವಾದ ತೀರ್ಮಾನಕ್ಕೆ ಬರಲು ಸ್ವಲ್ಪ ಹೆಚ್ಚು ಕಾಲ ಹಿಡಿಯುತ್ತದೆ, ಮತ್ತು ಮೂರು ದಿವಸ ಚರ್ಚೆ ಮಾಡಬೇಕೆಂದು ಇದ್ದ ವಿಷಯವನ್ನು ಇದ್ದಕ್ಕಿದ್ದ ಹಾಗೆ ಒಂದು ದಿವಸಕ್ಕೆ ಇಳಿಸಿ ಮಾತನಾಡಿ ಎಂದು ಹೇಳಿರುವುದು ನಿಜವಾಗಿಯೂ ಕಷ್ಟತರವಾದ ವಿಷಯ ಎಂದು ಭಾವಿಸಬೇಕಾಗಿದೆ. ಈ ಸರ್ಕಾರ ಎಷ್ಟೇ ಗಟ್ಟಿಯಾದ ಸರ್ಕಾರವೇ ಆದರೂ ಕೂಡ ತುಕೋಳ್ ಕಮಿಷನ್ ಅವರು ಮಾಡಿರತಕ್ಕ ಶಿಫಾರಸುಗಳನ್ನು ಕಾರ್ಯಗತ ಮಾಡುವುದಕ್ಕೆ ಅವರಿಗೆ ಧೈರ್ಯ ಸಾಕಾಗಲಾರದು ಎಂದು ನನಗೆ ಅನಿಸುತ್ತದೆ. ನಮ್ಮ ದೇಶದ ವರಮಾನ ರೆವಿನ್ಯೂ ಬಾಬಿನಲ್ಲಿ 200 ಕೋಟಿ ರೂಪಾಯಿ ಇದೆ. ತುಕೋಳ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳುವುದಾದರೆ ಮೊದಲನೆಯ ಭಾಗದಲ್ಲಿ ಸುಮಾರು 10–17 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ. 5 ವರ್ಷದಲ್ಲಿ 210 ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ.

ಈಗಾಗಲೇ ಸರ್ಕಾರಿ ನೌಕರರು ಕಾನೂನು ಪ್ರಕಾರ ಕೆಲಸಗಳನ್ನು ಹಂಚಿಕೊಂಡು ಅದಕ್ಕೆ ತಕ್ಕ ಸಂಬಳಗಳನ್ನು ಅವರು ಪಡೆಯುತ್ತಿದ್ದಾರೆಂದೂ, ಅವರಿಂದ ದೇಶದಲ್ಲಿ ದೇಶಾಭ್ಯುದಯ ಕಾರ್ಯಗಳಿಗೆ ಹೆಚ್ಚಿನ ಹಣವಿಲ್ಲವೆಂಬ ಕೂಗು ದೇಶದಲ್ಲಿ ಎದ್ದಿದೆ. ಆದರೆ ಹೀಗೆ ಈ ಸಂಬಳ ಸಾರಿಗೆಗಳನ್ನು ಹೆಚ್ಚಿಸುತ್ತಿರುವುದರಲ್ಲಿ ಇದೇನೂ ಕೊನೆಯಿಲ್ಲ. ನಾವು ಈ ದಿವಸ ಎಷ್ಟು ಹಣವನ್ನು ಸಂಬಳ ರೂಪದಲ್ಲಿ ಖರ್ಚು ಮಾಡುತ್ತಿದ್ದೇವೆ, ಎಂಬುದನ್ನು ಪರಿಶೀಲಿಸುವುದಾದರೆ ಮುಂದೆ ದೇಶದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣವೇ ಉಳಿಯಲಾರದು ಎಂಬುದನ್ನು ನಾವು ಪದೇ ಪದೇ ಕೇಳುತ್ತಿದ್ದೇವೆ. ಹಾಗಿರುವಾಗ ನಾವು ಈ ತುಕೋಳ್ ಕಮಿಟಿಯನ್ನು ಒಪ್ಪಿಕೊಂಡರೆ ಮುಂದೆ ಇದರಿಂದ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುತ್ತದೆ. ಮುಂದೆ ನಮ್ಮ ರಾಜ್ಯದ ಉತ್ಪನ್ನ ಎಷ್ಟೋ ಹೆಚ್ಚಾಗುತ್ತದೆ ಎಂಬ ಆಶಾಭಾವನೆಯನ್ನು ಇಟ್ಟುಕೊಂಡು ನಮ್ಮ ಸಂಪನ್ಮೂಲಗಳನ್ನು ನಾವು ಪರಿಶೀಲನೆ ಮಾಡಿ, ಪರಿಶೋಧನೆ ಮಾಡಿ ನೋಡಿದ್ದಾಗ್ಯೂ ನಮಗೇನು ಕಂಡಬರುತ್ತಿದ ಎಂದರೆ ನಮ್ಮ ಸರ್ಕಾರದವರು ಏನಾದರೂ ಈ ವರದಿಯನ್ನು ಒಪ್ಪಿಕೊಂಡರೆ ಮುಂದೆ ಬಹಳ ಕಷ್ಟಕ್ಕೀಡಾಗಬೇಕಾಗುತ್ತದೆ. ಹಾಗಾದರೆ ಇನ್ನು ಈ ವರದಿಯು ಸರ್ಕಾರದವರ ಮುಂದೆ ಬರತಕ್ಕ ಅಗತ್ಯವಿಲ್ಲವೇ ಎಂತ ಕೇಳಬಹುದು ? ಆದರೆ ಈ ವರದಿಯೇನೋ ಹೇಳುವುದಕ್ಕೂ ಕೇಳುವುದಕ್ಕೂ ಬಹಳ ಚೆನ್ನಾಗಿದೆ. ಆದರೆ ಸರ್ಕಾರದಲ್ಲಿ ಈ ದಿವಸ ನಡೆಯುತ್ತಿರುವ ಆಡಳಿತ ಯಾವ ರೀತಿ ಇದೆ ಎಂಬುದನ್ನು ಪರಿಶೀಲನೆಮಾಡಿ ಇದರಲ್ಲಿ ಇರತಕ್ಕ ಏರುಪೇರನ್ನು ಸರಿಪಡಿಸಿದರೆ ಕಡಮೆ ಸಂಬಳ ಬರತಕ್ಕವರಿಗೆ ಅವರ ಸಂಬಳಗಳನ್ನು ಸ್ವಲ್ಪಮಟ್ಟಿಗಾದರೂ ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲವೇ ಅನ್ನುವುದನ್ನು ನಾವೀಗ ಪರಿಶೀಲನೆ ಮಾಡಬೇಕಾದ್ದು ಬಹಳ ಮುಖ್ಯವಾದದ್ದು. ಆದರೆ ಸರ್ಕಾರದವರು ಈ ವಿಷಯ ಇಷ್ಟಕ್ಕೇ ಮುಗಿಯಿತು ಎಂದು ಭಾವಿಸಬಾರದು. ನಮ್ಮದು ಎಷ್ಟೇ ಪ್ರಗತಿದಾಯಕವಾದ ಬಡ್ಜೆಟ್ಟಾಗಿದ್ದರೂ ಈ ದಿವಸ ಈ ವರದಿಯನ್ನು ಒಪ್ಪಿಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆ. ಈ ವರದಿಯಲ್ಲಿ ಅವರು ಅನೇಕ ಸಲಹೆಗಳನ್ನು ವರಮಾನದ ಬಗ್ಗೆ ಸೂಚನೆ ಮಾಡಿದ್ದಾರೆ. ಆದರೆ ಇಷ್ಟಕ್ಕೆಲ್ಲಾ ಬೇಕಾಗುವಷ್ಟು ದುಡ್ಡನ್ನು ಸರ್ಕಾರದವರು ಎಲ್ಲಿಂದ ತರಬೇಕು ? ಅಂದರೆ ಈ ವರದಿಯಲ್ಲಿ ಸೂಚನೆ ಮಾಡಿರತಕ್ಕ ಸಲಹೆಗಳೇನಿವೆ ಅವು ಸೈಂಟಿಫಿಕ್ಕಾಗಿ ರಿಸರ್ಚ್ ಮಾಡಿದವುಗಳಲ್ಲ, ಎಕನಾಮಿಕ್ ಎಕ್ಸ್‌ಪರ್ಟ್‌ಗಳಿಂದ ಅಧ್ಯಯನ ಮಾಡಿದ್ದಲ್ಲ. ಆದುದರಿಂದ ಈ ವರದಿಯಲ್ಲಿರತಕ್ಕ ಈ ಸಲಹೆಗಳು ಉತ್ತಮವಾದವುಗಳಲ್ಲ. ಈ ವರದಿಯಲ್ಲೇನೋ ಬಡವರ ಬಗ್ಗೆ ಒಂದು ಕನಿಕರದಿಂದ ಅವರ ಅಹವಾಲನ್ನು ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಬಡನೌಕರರು ಎಂದರೆ ಯಾರು ಎಂಬುದನ್ನು ನಿರ್ಧಾರಮಾಡಬೇಕು. ಆ ಬಡವರ ವಿಚಾರದಲ್ಲಿ ಸರ್ಕಾರ ಉದಾತ್ತ ರೀತಿಯಿಂದ ವರ್ತಿಸಬೇಕು ಎನ್ನುವುದು ಶ್ಲಾಘನೀಯವಾದ ವಿಚಾರವೇ. ಆದರೆ ಎಲ್ಲಾ ರಾಜ್ಯಗಳಲ್ಲೂ ಆರ್ಥಿಕ ಮಂತ್ರಿಗಳಿರುತ್ತಾರೋ ಅವರಲ್ಲಿ ತಾಳ್ಮೆ, ಶಾಂತಿ, ಸ್ಥೈರ್ಯಗಳೂ ಮತ್ತು ರಿಸೋರ್ಸ್‌ಫುಲ್‌ಮೈಂಡ್ ಇರಬೇಕು. ಹಾಗೂ ಕರುಣೆ ಇರಬೇಕು. ಆದರೆ ನಮ್ಮ ಆರ್ಥಿಕ ಮಂತ್ರಿಗಳಲ್ಲಿ ಏನೋ ಕರುಣೆ ಇದೆ. ಅವರು ಆ ಕರುಣೆಯಿಂದ ಏನಾದರೂ ಇದರ ಕಮಿಟ್‌ಮೆಂಟ್ ಮಾಡಿಕೊಂಡರೆ ಮುಂದೆ ಬಹಳ ಕಷ್ಟಕ್ಕೆ ಗುರಿಯಾಗಬೇಕಾಗುತ್ತದೆಂದು ನನಗೆ ಅನಿಸುತ್ತಿದೆ. ಕೆಲವು ದರ್ಜೆಗಳವರ ಮಟ್ಟಿಗಾದರೂ ಈ ವರದಿಯನ್ನು ಜಾರಿಗೆ ಕೊಡುವುದಕ್ಕೆ ಸಾಧ್ಯವಿದೆಯೇ ಅನ್ನುವುದಾದರೆ ನನಗೆ ತೋಚಿದಹಾಗೆ ಕೆಲವು ಇಲಾಖೆಗಳು ಬೇಡವಾದವುಗಳಿವೆ, ಕೆಲವು ಆಡಳಿತ ಬಾಬಿನಲ್ಲಿ ಅಷ್ಟು ಜನರು ಇರುವುದು ಬೇಡ ಎಂದು ಅನಿಸುತ್ತಿದೆ. ಹೀಗೆ ಇರತಕ್ಕ ಸಿಬ್ಬಂದಿಯನ್ನು ತಗ್ಗಿಸುವುದಕ್ಕೆ 3 4 ಮಾರ್ಗಗಳಿವೆ. ಅದರಿಂದ ಸ್ವಲ್ಪ ಹಣ ಉಳಿತಾಯವಾಗಬಹುದು.

ಕೆಲವು ದರ್ಜೆಯ ನೌಕರಿಗಳು ಕೇವಲ ತಿಂಗಳೊಂದಕ್ಕೆ 65—60 ರೂಪಾಯಿಗಳ ಸಂಬಳ ದಿಂದ ಪ್ರಾರಂಭವಾಗುತ್ತವೆ. ಹಿಂದಿನಿಂದಲೂ ನಾವು ಯಾವ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ಗೂ ಕೂಡ ಮಾಹೇಯಾನ 100 ರೂಪಾಯಿಗಳಿಗಿಂತ ಕಡಮೆ ಸಂಬಳ ಇರಬಾರದೆಂದು ಹೇಳುತ್ತಿದ್ದೆವು. ಆದರೆ ಈ ದಿವಸ ಈ ಕಡಮೆ ಸಂಬಳದ ನೌಕರರು ಬಹಳವಾಗಿದ್ದಾರೆ. ಅವರ ಜೀವನ ಬಹಳ ದುರ್ಭರವಾಗಿದೆ. ಈ ದಿವಸ ಟ್ರಸ್ಟ್ ಬೋರ್ಡಿನವರು ಈ ಸಣ್ಣಪುಟ್ಟ ದರ್ಜೆಯ ನೌಕರರಿಗೆ ನಿವೇಶನವನ್ನು ಕೊಡುತ್ತೇವೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನೀವು ನಿವೇಶನಕ್ಕೆ ಆಗತಕ್ಕ 2—3 ಸಾವಿರ ರೂಪಾಯಿಗಳನ್ನು ಒಂದೇ ಗಂಟಿನಲ್ಲಿ ಕಟ್ಟಿ ಎಂದರೆ ಯಾರಲ್ಲಿ ಅಷ್ಟು ಹಣವಿರುತ್ತದೆ ? ಹಾಗಾದರೆ ಈ ಕ್ಲಾಸ್ ಮೂರು ಮತ್ತು ನಾಲ್ಕನೇ ದರ್ಜೆಯ ನೌಕರರುಗಳಿಗೆ ವಾಸಕ್ಕೆ ಮನೆ ಬೇಡವೇ ! ಬೇಕು. ಅದಕ್ಕೆ ತಕ್ಕ ಸೋಷಿಯಲ್ ಜಸ್ಟಿಫಿಕೇಷನ್ ದೊರೆಯುವಂಥ ಸನ್ನಿವೇಶ ವನ್ನುಂಟುಮಾಡಬೇಕು. ಆದರೆ ಈ ವರದಿಯಲ್ಲಿ ಬಡವರ ವಿಚಾರದಲ್ಲಿ ಅಷ್ಟು ಸಹಾನುಭೂತಿಯಿಂದ ವರ್ತಿಸಿದಂತೆ ಕಾಣುತ್ತಿಲ್ಲ, ಗೆಜೆಟೆಡ್ ದರ್ಜೆಯಲ್ಲಿರತಕ್ಕವರಿಗೆ ತೋರಿಸಿರತಕ್ಕ ಉದಾರಭಾವನೆ ಯನ್ನು ಸಣ್ಣ ಪುಟ್ಟ ನೌಕರಬಗ್ಗೆ ತೋರಿಸಿಲ್ಲ. ಹಣವನ್ನು ಉಳಿತಾಯ ಮಾಡತಕ್ಕ ಮಾರ್ಗವನ್ನು ಸಲಹೆಮಾಡುತ್ತಾ ಸಮಾಜ ಕಲ್ಯಾಣ ಇಲಾಖೆಯನ್ನು ಏಕೆ ರದ್ದು ಮಾಡಬಾರದೆಂದು ಈ ವರದಿಯಲ್ಲಿ ಒಂದು ಸೂಚನೆಯನ್ನೂ ಕೂಡ ಮಾಡಲಾಗಿದೆ. ಆದರೆ ಈ ಸಮಾಜ ಕಲ್ಯಾಣ ಇಲಾಖೆ ದೀನದಲಿತರ ಏಳಿಗೆಗಾಗಿ ಕೆಲಸಮಾಡುತ್ತಿತ್ತು. ಅದನ್ನು ರದ್ದು ಮಾಡಲು ಸಲಹೆಮಾಡಬಾರದಾಗಿತ್ತು. ಅದನ್ನು ಒಂದು ಅಲ್‌ಪವರ್‌ಫುಲ್ ಇಲಾಖೆಯನ್ನಾಗಿ ಮಾಡಬೇಕಾಗಿತ್ತು. ಅದನ್ನು ತಪ್ಪಿಸಿ ಅದನ್ನು ಮಿಸ್‌ಲೇನಿಯಸ್ ಇಲಾಖೆಗಳಲ್ಲಿ ಸೇರಿಸಿದ್ದಾರೆ. ಸರ್ಕಾರದವರು ಇದನ್ನು ಅಷ್ಟು ಹಗುರವಾಗಿ ಕಾಣಬಾರದು.

ಇನ್ನು ಇಲ್ಲಿ ನಮೂದು ಮಾಡಿರತಕ್ಕ ಸ್ಕೇಲುಗಳಲ್ಲಿ ಅರ್ಧಕ್ಕೆ ಮೇಲ್ಪಟ್ಟು ಕಡಮೆ ಇನ್‌ಕ್ರಿ ಮೆಂಟುಗಳನ್ನು ಪಡೆದಿರತಕ್ಕ ಸ್ಕೇಲುಗಳಾಗಿವೆ. ವರ್ಷಕ್ಕೆ ಒಂದು ರೂಪಾಯಿ-ಎರಡು ರೂಪಾಯಿ ಇಂಕ್ರಿಮೆಂಟುಗಳು ಇರತಕ್ಕ ಸ್ಕೇಲುಗಳೇ ಜಾಸ್ತಿ. ಆದರೆ ಹತ್ತು ಜನರ ಸುಖಕ್ಕಾಗಿ ಒಬ್ಬ ಬಡವನನ್ನು ಬಲಿಕೊಟ್ಟರೇನು ತಪ್ಪು ಎಂಬ ತತ್ವಕ್ಕೆ ಯಾರೂ ಮನಸ್ಸುಮಾಡಬಾರದು. ಮೇಲ್ಮಟ್ಟದಲ್ಲಿ ನಡೆಯುವಷ್ಟು ರಿಡ್‌ಚ್ಮೆಂಟ್ ಕೆಳಮಟ್ಟದಲ್ಲಿ ನಡೆಯುವುದಿಲ್ಲ. ಆದಾಗ್ಯೂ ಮೇಲ್ಮಟ್ಟದಲ್ಲಿರತಕ್ಕವರಿಗೆ ದೊರೆಯುವ ಸಂಬಳ ಬಹಳ ದೊಡ್ಡದಾಗೇ ಇರುತ್ತದೆ. ಅದನ್ನು ಜಾಸ್ತಿ ಮಾಡತಕ್ಕ ಟ್ರೆಂಡ್ ಇಲ್ಲಿ ಹೆಚ್ಚಿಗೆ ಕಾಣುತ್ತಿದೆಯೇ ವಿನಾ ಕೆಳಮಟ್ಟದವರ ಸಂಬಳಸಾರಿಗೆ ಗಳನ್ನು ಅಷ್ಟು ಉತ್ತಮಪಡಿಸುವುದಕ್ಕೆ ಪ್ರಯತ್ನಗಳು ನಡೆದಿಲ್ಲ. ಶನಿಮಹಾರಾಯನಿಗೆ ಕೃಷ್ಣಪರಮಾತ್ಮನು ನೀನು ನಾಳೆ ಬರಬಹುದು ಎಂದು ಹೇಳಿದಾಗ, ಆ ನಾಳೆ ಎಂಬ ದಿನಕ್ಕೆ ತಾರೀಖನ್ನು ಹಾಕದೆ ಇದ್ದುದರಿಂದ ಕೃಷ್ಣಪರಮಾತ್ಮನನ್ನು ಶನಿಮಹಾರಾಯನು ಕಾಣುವುದಕ್ಕೆ ಸಾಧ್ಯವಾಗಲೇ ಇಲ್ಲವಂತೆ ಹಾಗೆ ಮೇಲ್ಮಟ್ಟದಲ್ಲಿರತಕ್ಕವರ ಅಭಿಮಾನವನ್ನು ಬದಿಗಿಟ್ಟು ಕೆಳಮಟ್ಟ ದವರ ಯೋಗಕ್ಷೇಮಕ್ಕೆ ಹೆಚ್ಚಿನ ಅವಕಾಶ ನೀಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ; ಜೈ ಹಿಂದ್.

†SRI D. B. KALMANKAR (Aland).—Sir, since the time at my disposal is very short, I do not want to deal with all the aspects. I would only concentrate on some anomalies that are found in the Tukol Commission Report.

At the outset, I would submit that the terms of reference to the Tukol Commission should have been confined only to the non-gazetted cadres because it is they who were clamouring and putting forth their grievances; it was mainly their problems which should have been dealt with generously by the Commission. But to my wonder, I find that the Class IV officials have been neglected. Basic pay of only Rs. 60 is recommended to them whereas the Central Pay Commission has given Rs. 70. The grant of basic pay of Rs. 70 for Class IV officials may be taken into consideration by the Government. Regarding Class III officials, the scales of those who live in Bangalore and other cities are very meagre and they cannot make both ends meet with their present salaries. I would submit that as far as the Gazetted officers are

(SRI D. B. KALMANKAR)

concerned, there was no such need to make any recommendations. In order to show how there have been some anomalies, I would like to quote some figures. In the Industries and Commerce Department for Food Preservation Experts and Metallurgists the pay scale of 1961 was Rs. 300 to 700, but now the recommended scale is Rs. 700 to 1,200, which means that there is an increase at the initial stage by Rs. 400 and in the maximum Rs. 500. Similarly, for Deputy Secretaries, the 1961 scale is Rs. 600 to 1,000, whereas the recommended scale is Rs. 900 to 1,300, *i.e.*, at the initial stage there will be an increase of Rs. 300 and at the maximum also there in an increase of Rs. 300. The Deputy Drugs Controller scale is Rs 600 to 1,000, but now the recommended scale is Rs. 800 to 1,200, which means an increase at both the initial and maximum level of Rs. 200. Similarly, with regard to the Principal of the College of Pharmacy ; the scale is Rs. 600 to 1,000, but now the recommended scale is Rs. 1,800 to 1,200. In High Court, for Registrar, it is Rs. 1,100 to 1,800 but according to the recommendation it is Rs. 1800 to 2000 and Special Pay of Rs. 150. Here at the initial stage there is an increase of Rs. 700 and at the maximum there is an increase of Rs. 200. Similar is the case with regard to Deputy Registrars of High Court. It is very strange that the Inspector-General of Prisons, who is having a scale of Rs. 800 to 1,100 is now recommended a scale of Rs. 1,300 to 1800, *i.e.*, at the initial stage there is an increase of Rs. 500 and at the maximum there is an increase of Rs. 700. Like that, there are anomalies in the recommendations made in respect of gazetted officers.

The Chemist in the Health Department who is in the scale of Rs. 350 to 800 as per 1961 scales has been brought down to Rs. 250 to 500. In this case, there is a decrease at the minimum level and also at the maximum level. Similarly, in the Animal Husbandry Department and other Departments, the Development officers in the scale of Rs. 350 to 800 have been brought down to Rs. 300 to 700 as per the recommendation ; in the Dairy Department, Supervisors in grade Rs. 150 to 270 have been brought down to the scale of Rs. 140 to 260. In the case of Welders and Winders the scale has been brought down from Rs. 110 to 220 to Rs. 80 to 140 as per the recommendation. The same is the case with regard to Sanitary Inspectors also.

I would submit, Sir, that the recommendations are made without any reason or rationality. We claim that we are going towards socialism. The higher services had never asked for any increase. It was a problem of only Clerks, Class IV servants, etc. and these people were urging that their pay scales must be increased. But, the Tukol Commission has not been generous as far as Class III and Class IV Government servants are concerned, but has been very generous with regard to people who do not deserve.

With these observations, I conclude and thank the Chair.

ಶ್ರೀಮತಿ ಕೆ. ಲೀಲಾವತಿ ರೈ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದೆ ತುಕೋಳ್ ಕಮಿಷನ್ ವರದಿ ಏನು ಕೊಟ್ಟಿದ್ದಾರೆ ಅದರ ವಿಷಯವಾಗಿ ಕೆಲವೊಂದು ಏರುತಗ್ಗುಗಳನ್ನು ಈ ಮಾನ್ಯ ಸಭೆಯ ಮುಂದೆ ಮಂಡಿಸಲು ಇಚ್ಛಿಸುತ್ತೇನೆ. ತುಕೋಳ್ ಅವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೋ, ಅದನ್ನೆಲ್ಲಾ ನೋಡಿದರೆ, ಸಂಬಳದಲ್ಲಿ ಏರು ತಗ್ಗು, ಹೆಚ್ಚುಕಡಿಮೆ ತುಂಬಾ ಇದೆ. ಅದನ್ನೆಲ್ಲಾ ಹೇಳುತ್ತಾ ಹೋದರೆ ಇನ್ನು 10 ದಿವಸಗಳಾದರೂ ಬೇಕು. ಈಗ ಒಂದೇ ದಿವಸದಲ್ಲಿ ಇದನ್ನು ಮುಗಿಸಬೇಕಾಗಿರುವುದರಿಂದ ನಾನು ಒಂದು ವಿಷಯವನ್ನು ಪ್ರಸ್ತಾಪಮಾಡುತ್ತೇನೆ. ಅದು ಕನ್‌ಸಿಡರೇಷನ್ ಆಫ್ ಸರ್ವಿಸ್ ವಿಷಯ. ಅದರ ಬಗ್ಗೆ ಹೇಳುವುದಾದರೆ, ಸರ್ವಿಸ್ ಆದವರಿಗೆ ಪ್ರೊಮೋಷನ್ ಸರಿಯಾದ ರೀತಿಯಲ್ಲಿ ಸಿಗಬೇಕು. ಸರ್ವಿಸ್ಸಿನ ನೀತಿನಿಯಮಗಳನ್ನು ಸರಿಪಡಿಸಬೇಕು. ಏಕೆಂದರೆ ಇತ್ತೀಚೆಗೆ ತುಂಬಾ ಇದರ ಬಗ್ಗೆ ರಿಟ್ ಅರ್ಜಿಗಳು ಕೋರ್ಟಿಗೆ ಹೋಗುತ್ತಿವೆ. ಸರ್ವಿಸ್‌ನಲ್ಲಿರುವವರಿಗೆ ಪ್ರೊಮೋಷನ್ ಬಗ್ಗೆ ಸರಿಯಾದ ರೀತಿಯಲ್ಲಿ ಆಗುತ್ತಾ ಇಲ್ಲ. ಇದರ ಬಗ್ಗೆ ಸರ್ಕಾರದವರು ತಕ್ಕ ಕ್ರಮ ತೆಗೆದುಕೊಂಡರೆ, ಕೆಲವು ಅಧಿಕಾರಿಗಳಿಗೆ ಕೆಲವು ಹಂತಗಳಲ್ಲಿ ಏನು ಬೇಸರ ಬಂದಿದೆಯೋ ಅದನ್ನು ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆ ಆದ್ದರಿಂದ ಈ ವಿಚಾರವನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆಮಾಡಬೇಕು.

ಮತ್ತೆ ಟೆಕ್ನಿಕಲ್ ಗ್ರ್ಯಾಜುಯೇಟ್ಸ್, ಡಾಕ್ಟರ್ಸ್, ಇಂಜನಿಯರ್ಸ್ ಇವರುಗಳು ಐದೈದು ವರ್ಷಗಳ ಕೋರ್ಸ್ ಮಾಡಿಕೊಂಡು ಆದಮೇಲೆ ಅವರವರ ಕೆಲಸಕಾರ್ಯಗಳು ಸಾಮಾನ್ಯವಾಗಿ ಒಂದೇ ಸಮನೆ ಇರುತ್ತವೆ. 1961 ನೇ ಇಸವಿಯಲ್ಲಿ ಡಾಕ್ಟರುಗಳಿಗೆ ಸಂಬಳ ಕಡಿಮೆ ಇತ್ತು. ಇಂಜನಿಯರುಗಳಿಗೆ ಜಾಸ್ತಿ ಇತ್ತು. ಈಗ ಈ ವರದಿಯ ಪ್ರಕಾರ ಡಾಕ್ಟರುಗಳಿಗೆ ಈಗ ಹೆಚ್ಚು ಸಂಬಳ ಮಾಡಿದ್ದಾರೆ, ಇಂಜನಿಯರುಗಳಿಗೆ ಕಡಿಮೆಮಾಡಿದ್ದಾರೆ. ಇಂಥಾದ್ದನ್ನು ಮಾಡುವುದು ಖಂಡಿತವಾಗಿ ಸರಿಯಾದುದಲ್ಲ. ಅವರೆಲ್ಲರನ್ನೂ ಒಂದೇ ವಿಧವಾಗಿ ಪರಿಗಣಿಸಬೇಕು. ಅಂತಹವರ ಬಗ್ಗೆ ಸಂಬಳದಲ್ಲಿ ಒಂದು ಸಮಾನತೆಯನ್ನುಂಟುಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಕರ್ತವ್ಯದೃಷ್ಟಿಯಲ್ಲಿ ಅವರವರು ಮಾಡುವ ಕೆಲಸಕಾರ್ಯಗಳಲ್ಲಿ ಡಿಸ್ಕ್ರಿಮಿನೇಷನ್ ಆಗುತ್ತದೆ. ನಾನು ಐದು ವರ್ಷಗಳ ಕಾಲ ಇತರರಂತೆ ಖರ್ಚುಮಾಡಿ ಕೋರ್ಸನ್ನು ಮುಗಿಸಿದ್ದೇನೆ. ಒಬ್ಬರಿಗೊಬ್ಬರು ನನಗೆ ಬೇರೆಯವರಿಗಿಂತ ಸಂಬಳ ಕಡಿಮೆ ಎಂದು ತಿಳಿಯಬಾರದು. ಆ ರೀತಿ ಭಾವನೆಯುಂಟಾಗಲಕ್ಕೆ ಸರ್ಕಾರದವರು ಅವಕಾಶ ಕೊಡಬಾರದು.

ಇನ್ನು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ಸ್ ಎಂದೇನು ಕರೆಯುತ್ತೀರಿ ಅದೇ ರೀತಿ ರೆವಿನ್ಯೂ ಇಲಾಖೆಯಲ್ಲಿಯೂ ಅಂತಹ ಅಧಿಕಾರಿಗಳು ಇದ್ದಾರೆ. ಬ್ಲಾಕ್ ಡೆವಲಪ್‌ಮೆಂಟಿಗೂ ಮತ್ತು ರೆವಿನ್ಯೂಗೂ ಕನೆಕ್ಷನ್ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಅವರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರುಗಳಾಗಿ ಸಾಯುವುದು ಆಗಿದೆ. ಅವರಿಗೆ ಬೇರೆ ಮಾರ್ಗವೇ ಇಲ್ಲ. ರೆವಿನ್ಯೂ ಮತ್ತು ಬ್ಲಾಕ್‌ಡೆವಲಫ್‌ಮೆಂಟ್ ಆಫೀಸುಗಳಲ್ಲಿ ಏನು ಬಿ. ಡಿ. ಒ. ಗಳು ಇದ್ದಾರೋ ಅವರಿಗೆ ಸಂಬಳದಲ್ಲಿ ಒಂದು ಸಮಾನತೆ ಇರಬೇಕು. ರೆವಿನ್ಯೂ ಡಿಪಾರ್ಟಮೆಂಟಿಗೂ ಬಿ. ಡಿ. ಒ. ಆಫೀಸಿನಿಂದ ಅಧಿಕಾರಿಗಳನ್ನು ವರ್ಗಮಾಡಬಹುದು. ಈ ಜನತಾ ರಾಜ್ಯದಲ್ಲಿ ಅವರಿಗೆ ಕೊಟ್ಟಹಾಗೆ ಇವರಿಗೂ ಟ್ರೈನಿಂಗ್ ಕೊಡಬಹುದು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಅವರಿಗೆ ರೆವಿನ್ಯೂ ಪರೀಕ್ಷೆ ಪಾಸಾಗಿರಬೇಕು. ಅಂತಹವರಿಗೆ ತಕ್ಕ ಅನುಕೂಲತೆಗಳನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊದಲು ಬ್ಲಾಕುಗಳಲ್ಲಿ ಪಂಚಾಯಿತಿ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಎಂದು ಇದ್ದರು. ಈಗ ಅವರ ಕೈಕೆಳಗೆ ಇರತಕ್ಕ ಗ್ರಾಮಸೇವಕರುಗಳನ್ನು ಮತ್ತು ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ಸನ್ನು ತೆಗೆದುಕೊಂಡು ಅವರಿಗೆ ಇವರ ಸಂಬಳವನ್ನು ಕೊಡುತ್ತಿದ್ದಾರೆ. ಅವರನ್ನು ಡಿಗ್ರೇಡ್‌ಮಾಡುವ ಪರಿಸ್ಥಿತಿಯಲ್ಲಿದ್ದಾರೆ. ಅದು ಆಗಬಾರದು. ಪಂಚಾಯಿತಿ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಆಗಿ ಕೆಲಸಮಾಡಿ ಅವರಿಗೆ ಪ್ರತಿಯೊಂದು ಕಾರ್ಯದಲ್ಲಿಯೂ ಅನುಕೂಲತೆಕೊಟ್ಟು ಮೊದಲಿದ್ದ ಸ್ಥಾನಕ್ಕಿಂತಲೂ ಹೆಚ್ಚಿನ ಹುದ್ದೆಯನ್ನು ಕೊಡಬೇಕಾಗಿತ್ತು. ಅಧರನ್ನು ಈಗ ಎರಡನೇ ದರ್ಜೆಯ ಗುಮಾಸ್ತನ ಪೊಜಿಷನ್ನಿಗೆ ತರುವ ನಿಲುವಳಿ ಈ ತುಕೋಳ್ ಕಮಿಷನ್ ವರದಿಯಲ್ಲಿ ಕಾಣುತ್ತಿದೆ. ಅದು ಸರಿಯಲ್ಲ. ಇದ್ದದ್ದನ್ನು ಇದ್ದ ಹಾಗೆ ಆದರೂ ಮಾಡಬೇಕು. ಏನಾದರೂ ಹೆಚ್ಚುಕಡಿಮೆ ಇದ್ದರೆ, ಇದರಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

5–30 P. M.

ಇನ್ನು ಹೆಣ್ಣುಮಕ್ಕಳು ಯಾರ್‍ಯಾರು ಟೀಚರ್ಸ್ ಸರ್ವಿಸ್‌ನಲ್ಲಿದ್ದಾರೆ, ಅವರಿಗೆ ಬೇಕಾದಂತಹ ಮನೆಗಳನ್ನು ಕಟ್ಟಿಸಿಕೊಡುವ ಮತ್ತು ಅವರು ಹೆತ್ತಾಗ ಕೊಡಬೇಕಾದ ಸಂಬಳ ಸಾರಿಗೆ ಮತ್ತು ಇತರ ಸೌಲಭ್ಯಗಳನ್ನು ಇನ್ನಷ್ಟು ಜಾಸ್ತಿ ಕೊಟ್ಟು ಪ್ರೋತ್ಸಾಹ ಮಾಡಬೇಕೆಂದು ಹೆಣ್ಣುಮಕ್ಕಳ ಪರವಾಗಿ ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಕೆ. ಲೀಲಾವತಿ ರೈ)

ಇನ್ನು ವಿದ್ಯಾಭ್ಯಾಸ ಇಲಾಖೆಯಲ್ಲಿ, ಹೇಳುವುದಾದರೆ, ನಮ್ಮ ವಿದ್ಯಾಭ್ಯಾಸದ ಗ್ರೇಡ್ ಇನ್ನೂ ಕಡಿಮೆ ತರಗತಿಗೆ ಬಂದಿದೆ. ಹೆಣ್ಣುಮಕ್ಕಳನ್ನು ಆದಷ್ಟು ಜಾಸ್ತಿ ಟೀಚರ್ಸ್ ಆಗಿ ತೆಗೆದುಕೊಂಡರೆ, ಮಕ್ಕಳಿಗೆ ವಿದ್ಯಾಭ್ಯಾಸವನ್ನು ಹೇಳಿಕೊಡುವುದಕ್ಕೆ ಅನುಕೂಲ ಮತ್ತು ಅವರು ಸರಿಯಾದ ರೀತಿಯಲ್ಲಿ ಮಕ್ಕಳನ್ನು ಬೆಳೆಸಿ, ನಮ್ಮ ದೇಶದಲ್ಲೇ ಎಲ್ಲಾ ಒಂದು ಒಳ್ಳೆಯ ಜನತೆಯನ್ನು ಉಂಟುಮಾಡುವುದಕ್ಕೆ ಪ್ರಯೋಜನವಾಗುತ್ತದೆ. ಆದ್ದರಿಂದ ಹೆಚ್ಚು ಹೆಣ್ಣುಮಕ್ಕಳನ್ನು ಉಪಾಧ್ಯಾಯಿನಿಯರನ್ನಾಗಿ ನೇಮಕ ಮಾಡಬೇಕು. ಅದೇ ರೀತಿ ಆಫೀಸುಗಳಲ್ಲಿ ಎಲ್ಲಾ ಕೆಲಸ ಕಾರ್ಯ ಮಾಡುತ್ತಿರುವಾಗ, ಅವರ ಗಂಡಸರು ಎಲ್ಲೆಲ್ಲಿ ಸೇವೆಯಲ್ಲಿರುತ್ತಾರೋ, ಅಲ್ಲೇ ಅವರ ಹೆಂಸರಿಗೂ ಜಾಗ ಒದಗಿಸಿಕೊಡಬೇಕೆಂದು ಕೇಳಿಕೊಂಡು, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಅಧ್ಯಕ್ಷರೇ, ಈ ತುಕೋಳ್ ವರದಿ ಪ್ರಪ್ರಥಮವಾಗಿ ಒಂದು ವೈಜ್ಞಾನಿಕ ರೀತಿಯಿಂದ ಈ ರಾಜ್ಯನೌಕರರ ಸಂಬಳ ಸಾರಿಗೆಗಳನ್ನು ನಿಗದಿ ಮಾಡಲು ಪ್ರಯತ್ನ ಪಟ್ಟಿದ್ದಾರೆ. ಅಲ್ಲದೆ ಈ ಸಮಸ್ಯೆಗಳಿಗೆ ಒಂದು ದೊಡ್ಡ ಅಘಾದವಾದ ವರದಿಯನ್ನೆ ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಎಷ್ಟು ತರಹ ಕೇಡರ್ಸ್ ಇವೆ, ಸಂಬಳ ಸಾರಿಗೆಗಳು ಎಷ್ಟು ಇವೆ ಎಂದು ನಮಗೆ ಗೊತ್ತಿರಲಿಲ್ಲ. ಮೊಟ್ಟಮೊದಲಿಗೆ ನಮ್ಮ ರಾಜ್ಯ ಸರ್ಕಾರಿ ನೌಕರರ ವಾಸ್ತವ ಪರಿಸ್ಥಿತಿಯನ್ನು ಜನತೆಯ ಮತ್ತು ಈ ಸಭೆಯ ಮುಂದಿಟ್ಟಿದ್ದಾರೆ. ಈ ತುಕೋಳ್ ಕಮಿಷನ್ ವರದಿಯಲ್ಲಿ ಮುಖ್ಯವಾಗಿ ಮೂರನೆ ಮತ್ತು ನಾಲ್ಕನೆಯ ತರಗತಿಯ ಉದ್ಯೋಗಿಗಳಿಗೆ ಸ್ವಲ್ಪ ಅನ್ಯಾಯವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಮೊದಲಿಂದಲೂ ಕೂಡ ಇಡೀ ರಾಷ್ಟ್ರದಲ್ಲೇ ಇವರ ಬೇಡಿಕೆಗಳೇನೆಂದರೆ, ಇವರಿಗೆ ಜೀವನಕ್ಕೆ ಸಾಕಾಗುವಷ್ಟು ಸಂಬಳ ಕೊಡಬೇಕು, ಮೇಲ್ಮಟ್ಟದವರಿಗೂ ಮತ್ತು ಕೆಳಮಟ್ಟದವರಿಗೂ ಸಂಬಳದಲ್ಲಿ ಹೆಚ್ಚಿನ ತಾರತಮ್ಯ ಇರಬಾರದು ಎಂದು ಹೇಳಿಕೊಂಡು ಬರುತ್ತಿದ್ದಾರೆ. ಅದಲ್ಲದೆ, ಈಗಿರತಕ್ಕ ಜೀವನ ವಸ್ತುಗಳ ಬೆಲೆಯಲ್ಲಿ ಜೀವನ ಮಾಡುವುದು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಅವರಿಗೆ, ತುಕೋಳ್ ಕಮಿಶನವರು ಇನ್ನೂ ಹೆಚ್ಚಿನ ರಿಯಾಯಿತಿ ತೋರಿಸಬೇಕಾಗಿತ್ತು ಎಂದು ನನಗನಿಸುತ್ತದೆ. ಆದರೆ, ನನ್ನ ಸ್ನೇಹಿತರೆಲ್ಲಾ ಹೇಳಿದ ಹಾಗೆ, ಈ ಗಜೆಟೆಡ್ ಆಫೀಸರ್ಸಿಗೆ 500-1,000 ರೂಪಾಯಿ ಇರುವವರಿಗೆ ತುಟ್ಟಿಭತ್ಯ ಕೇಳದಿದ್ದರೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ಶಿಫಾರಸು ಮಾಡಿರುವುದು ಖಂಡಿತವಾಗಿಯೂ ಸರಿಯಿಲ್ಲವೆಂದು ನನ್ನ ಭಾವನೆ. ಆದ್ದರಿಂದ ಹೆಚ್ಚು ಸಂಬಳ ಬರತಕ್ಕ ದೊಡ್ಡ ದೊಡ್ಡ ಅಧಿಕಾರಿಗಳಿಗೆ ತುಟ್ಟಿಭತ್ಯ ಪ್ರಮಾಣವನ್ನು ಆದಷ್ಟು ಕಡಿಮೆ ಮಾಡಿ, ಮೂರನೆ ಮತ್ತು ನಾಲ್ಕನೇ ದರ್ಜೆಯ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯ, ಸಂಬಳ ದೊರಕುವ ರೀತಿಯಲ್ಲಿ, ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಹೇಳಬಹುದು ಏನೆಂದರೆ ಇದರಿಂದ 16 ಕೋಟಿ ರೂಪಾಯಿ ಖರ್ಚಾಗುತ್ತದೆ, ಇಷ್ಟು ದೊಡ್ಡ ಭಾರವನ್ನು ಸರ್ಕಾರ ಹೊರುವುದಕ್ಕೆ ಕಷ್ಟ, ಸಾಧ್ಯವಿಲ್ಲವೆಂದು. ಆದರೆ, ಇದಕ್ಕೆ ಅನೇಕ ಸದಸ್ಯರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಸರ್ಕಾರದವರು ಮನಸ್ಸು ಮಾಡಿದರೆ, ಈ ಹಣಕಾಸನ್ನು ಪಡೆಯುವುದಕ್ಕೆ ಕಷ್ಟವಾಗಲಾರದು. ಏಕೆಂದರೆ, ನಮಗೆಲ್ಲಾ ಗೊತ್ತಿರುವ ಹಾಗೆ ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ಸೇಲ್ಸ್ ಟ್ಯಾಕ್ಸ್ ವಸೂಲು ಆದರೆ, ಇನ್ನೂ ಮೂರು ನಾಲ್ಕು ಕೋಟಿ ರೂಪಾಯಿ ಹೆಚ್ಚು ಹಣ ಪಡೆಯುವುದಕ್ಕೆ ಸಾಧ್ಯವಿದೆ. ಇವತ್ತು ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿರತಕ್ಕಂತಹ ಅಧಿಕಾರಿಗಳು, ಅವರು ಮೊಗಲ್ ಸಾಮ್ರಾಟರಾಗಿದ್ದಾರೆ. ಅವರು ಯಾರಿಗೆ ಬೇಕಾದರೂ, ಮಾಫಿ ಮಾಡಬಹುದು. ಹಿಂದೆ ಒಂದು ಸೇಲ್ಸ್ ಟ್ಯಾಕ್ಸ್ ಕಮಿಶನರ್ ಇದ್ದರು. ಅವರು ಎಲ್ಲರಿಗೂ ಗೊತ್ತಿರುವ ಹಾಗೆ, ಬಹಳ ಜನರಿಗೆ ಲಕ್ಷಾಂತರ ರೂಪಾಯಿ ಬಿಟ್ಟಿದ್ದಾರೆ. ಈ ರೀತಿ ಒಂದು ಲಕ್ಷ ಎರಡು ಲಕ್ಷ ರೂಪಾಯಿಯನ್ನು ಮಾಫಿ ಮಾಡಿದರೆ ಯಾರು ತಾನೆ ಅವರನ್ನು ಒಳ್ಳೆಯವರು ಎಂದು ಹೇಳಲಿಕ್ಕಿಲ್ಲ. ಸೇಲ್ಸ್ ಟ್ಯಾಕ್ಸ್‌ನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡಿದರೆ, ಇನ್ನೂ ಮೂರು ಕೋಟಿ ರೂಪಾಯಿ ಖಂಡಿತವಾಗಿಯೂ ಬರುತ್ತದೆ. ಇವತ್ತು ಎಂ. ಎಸ್. ಆರ್. ಟಿ. ಸಿ. ಗೆ 26 ಕೋಟಿ ರೂಪಾಯಿ ಹಣ ಹಾಕಿದ್ದಾರೆ. ಅದರಲ್ಲಿ ಸರಿಯಾದ ಲಾಭ ಇವತ್ತು ಬರುತ್ತಾ ಇಲ್ಲ. ನಮ್ಮ ಊರಿನಲ್ಲಿ ಎರಡು ಮೂರು ಬಸ್ ಇಟ್ಟಿರತಕ್ಕಂತಹ ಮಾಲಿಕರು, ಅವರ ಖರ್ಚೆಲ್ಲಾ ಹೋಗಿ, ಒಳ್ಳೇ ಲಾಭವನ್ನು ಸಂಪಾದನೆ ಮಾಡಿ, ಕಾರಿನಲ್ಲಿ ಎಲ್ಲಾ ಓಡಾಡುತ್ತಿದ್ದಾರೆ. ನಾವು ಕೋಟಿಗಟ್ಟಲೆ ಹಣ ಹಾಕಿ ನಡೆಸತಕ್ಕ ಉದ್ಯಮಗಳಲ್ಲಿ ಈ ರೀತಿ ನಡೆದು, ಸರಿಯಾಗಿ ಲಾಭದಾಯಕವಾಗಲಿಲ್ಲದಿದ್ದರೆ, ಅದನ್ನು ನೋಡುವುದಕ್ಕೆ ಸಂಕಟವಾಗುತ್ತದೆ. ಆದ್ದರಿಂದ ಸರ್ಕಾರದವರು ನಡೆಸತಕ್ಕ ಕೈಗಾರಿಕೆಗಳಲ್ಲಿ ಬಸ್ ಕಂಪೆನಿಗಳಲ್ಲಿ ಇನ್ನೂ ಹೆಚ್ಚಿನ ಸಂಪಾದನೆ

ಮಾಡಬೇಕು. ಅದಲ್ಲದೆ ಈ ಅಗ್ರಿಕಲ್ಚರಲ್ ಇನಕಂ ಟ್ಯಾಕ್ಸನ್ನು ಸರಿಯಾಗಿ ವಸೂಲು ಮಾಡಬೇಕು. ಇವತ್ತು 200—300 ಎಕರೆಯಲ್ಲಿ ಬೆಳೆಸತಕ್ಕವರು, ಸಂಬಂಧಪಟ್ಟವರನ್ನು ಎಲ್ಲಾ ಬುಟ್ಟಿಯೊಳಗೆ ಹಾಕಿಕೊಂಡು ಏನೂ ಕೊಡುತ್ತಾ ಇಲ್ಲ. ಆದರೆ ಒಬ್ಬ ಸಣ್ಣ ನೌಕರನು ಏನಾದರೂ ಅವನು ಕೊಡುವ ಟ್ಯಾಕ್ಸ್ ಕೊಡದಿದ್ದರೆ, ಅದನ್ನು ಕೂಡಲೇ ವಸೂಲು ಮಾಡುತ್ತಿದ್ದಾರೆ. ಆದ್ದರಿಂದ ಇಂಥ ಜಮೀನುದಾರರಿಂದೆಲ್ಲಾ ಒಂದು ರೂಪಾಯಿ ಕೂಡ ಬಿಡದೆ ವಸೂಲು ಮಾಡಬೇಕು. ಆದರೆ ಇಲ್ಲಿ ಕೆಲವು ಸದಸ್ಯರು ಜಮೀನುದಾರರ ಪರವಾಗಿ, ಅವರಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ಇವರು 100 ಕ್ಕೆ 95 ಪರ್‌ಸೆಂಟ್ ಇಂಥವರು ದೊಡ್ಡ ದೊಡ್ಡ ಜಮೀನುದಾರರು ಇವರಿಗೆ ತೆರಿಗೆ ಹಾಕಿದರೆ, ಎಷ್ಟೋ ಜನ ತಪ್ಪಿಸಿಕೊಳ್ಳುತ್ತಿದ್ದಾರೆ. ಬೇಕಾದರೆ, 20-30 ಎಕರೆಗಿಂತ ಕಡಿಮೆ ಇರುವವರಿಗೆ ಟ್ಯಾಕ್ಸ್ ಹಾಕಬೇಡಿ. ದೊಡ್ಡ ಶ್ರೀಮಂತರಿಂದ ಜಮೀನುದಾರರಿಂದ ಟ್ಯಾಕ್ಸ್ ವಸೂಲು ಮಾಡಿದರೆ, ಇನ್ನೂ ಎರಡು ಕೋಟಿ ರೂಪಾಯಿ ತೆಗೆಯುವುದಕ್ಕೆ ಸಾಧ್ಯವಿದೆ. ಅಷ್ಟೇ ಅಲ್ಲದೆ ರಾಮಚಂದ್ರರಾಯರ ಸಮಿತಿಯು ವರದಿಯಲ್ಲಿ ಮಿತವ್ಯಯಗಳಿಗೆ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಸರ್ಕಾರದವರು ಈ ರೀತಿ ಏಕೆ ಸಮಿತಿ ಮಾಡಿ, ಅದನ್ನು ಜಾರಿಗೊಳಿಸುವುದಿಲ್ಲ ? ಇವರು ಸುಮ್ಮನೆ ಕಮಿಟಿ ವರದಿ ತರಿಸಿಕೊಳ್ಳುವುದು, ಮತ್ತು ಅದರ ವರದಿಯನ್ನು ಹಾಗೆ ಇಟ್ಟುಬಿಡುವುದು. ಅವರು ವರದಿಯಲ್ಲಿ ಅಸಿಸ್ಟೆಂಟ್ ಕಮಿಷನರನ್ನು ಅಬಾಲಿಶ್ ಮಾಡಬೇಕೆಂದು ಹೇಳಿದ್ದರು. ಈಗ ತುಕೋಳ್ ಕಮಿಶನಿನಲ್ಲಿ ಹೇಳಿದ್ದಾರೆ.—ಡಿವಿಜನಲ್ ಕಮಿಷನರ್ಸ್ ಎಲ್ಲಾ ತೆಗೆದುಹಾಕಬೇಕೆಂದು. ಆದರೆ ಇವರು ಅದನ್ನು ಅಲ್ಲಲ್ಲಿ ಕೈಬಿಡುತ್ತಾರೆ. ಇವತ್ತು ಯಾವುದನ್ನು ತೆಗೆದುಹಾಕಿದರೆ, ಅದರಿಂದ ಇವರ ಸಂಬಂಧಿಕನಿಗೆ, ಅಳಿಯನಿಗೆ, ಅಥವಾ ಇನ್ನೊಬ್ಬ ಬೇಕಾದವನಿಗೆ ತೊಂದರೆಯಾಗುತ್ತದೆ ಎಂದು ಅವನ್ನು ಜಾರಿಗೆ ತರುತ್ತಿಲ್ಲ. ಇದರಿಂದ ಸರ್ಕಾರ ಸುಮ್ಮನೆ ಸಮಿತಿಗಳನ್ನು ಮಾಡಬಾರದು. ತುಕೋಳ್ ಸಮಿತಿಯ ವರದಿಯನ್ನು ಜಾರಿಗೆ ತರದಿದ್ದರೆ, ಅದರಿಂದ ನಮ್ಮ ರಾಜ್ಯ ಸರ್ಕಾರಿ ನೌಕರರಿಗೆ ಇನ್ನಷ್ಟು ಹೆಚ್ಚು ಅತೃಪ್ತಿಯುಂಟಾಗಿ, ಅವರಿಂದ ನಮ್ಮ ರಾಜ್ಯಕ್ಕೆ ಖಂಡಿತವಾಗಿಯೂ ಇನ್ನೂ ಹೆಚ್ಚಿನ ತೊಂದರೆಯುಂಟಾಗುತ್ತದೆ. ಅದಲ್ಲದೆ ಕೇಂದ್ರ ಸರ್ಕಾರದವರು ನೇಮಿಸಿದಂತಹ ಗಜೇಂದ್ರಗಡ್ಕರ್ ಕಮಿಶನ್ ಮಾಡಿದ ವರದಿಯನ್ನು ಓದಿ ನೋಡಿದರೆ ತುಕೋಳ್ ಕಮಿಶನ್ ವರದಿಯಲ್ಲಿ ತೋರಿಸಿದಂತಹ ಸಂಬಳ ಸಾರಿಗೆಗಳು ಖಂಡಿತವಾಗಿಯೂ ಹೆಚ್ಚೇನಲ್ಲ.

ಖಂಡಿತವಾಗಿಯೂ ಅವರು ಏನು ಶಿಫಾರಸ್ಸು ಮಾಡಿದ್ದಾರೆಯೋ ಅದು ಯಾವ ರೀತಿಯಲ್ಲೂ ಹೆಚ್ಚು ಅಲ್ಲ. ಅವರ ಶಿಫಾರಸ್ಸಿನಂತೆ ನೌಕರರಿಗೆ ಸಂಬಳ ಸಾರಿಗೆಯನ್ನು ಕೊಡದೇ ಹೋದರೆ ಈ ರಾಜ್ಯಕ್ಕೆ, ಎಲ್ಲಾ ರೀತಿಯಲ್ಲಿಯೂ ಸರ್ಕಾರಕ್ಕೆ ಗಂಡಾಂತರ ಇದೆ. ಆದ್ದರಿಂದ ಖಂಡಿತವಾಗಿ ಶ್ರೀಮಾನ್ ತುಕೋಳ್ ಕಮಿಷನಿನವರು ಸಲಹೆ ಮಾಡಿರತಕ್ಕ ಹೆಚ್ಚಿನ ಸಂಬಳ ಮತ್ತು ತುಟ್ಟಿಭತ್ಯವನ್ನು ಸರ್ಕಾರದವರು ನೌಕರರಿಗೆ ಕೊಡಬೇಕು. ಮತ್ತು ವೆಟರ್ನರಿ ಹಾಗೂ ಇನ್ನೂ ಕೆಲವು ಇಲಾಖೆಗಳಲ್ಲಿ, ನೌಕರರಿಗೆ ಆಗಿರತಕ್ಕಂಥ ವ್ಯತ್ಯಾಸ ಏನಿದೆ ಅದನ್ನು ಸರಿಪಡಿಸಬೇಕು. ಮೆಡಿಕಲ್ ಗ್ರ್ಯಾಜುಯೇಟುಗಳಿಗೆ ಸಂಬಂಧಪಟ್ಟ ಹಾಗೆ ವೆಟರ್ನರಿ ಆಸ್ಪತ್ರೆಗಳಲ್ಲಿರತಕ್ಕ ಡಾಕ್ಟರುಗಳಿಗೂ ಮತ್ತು ಮನುಷ್ಯರ ಆಸ್ಪತ್ರೆಗಳಲ್ಲಿರತಕ್ಕ ಸಂಬಳ ಸಾರಿಗೆಯಲ್ಲಿ ವ್ಯತ್ಯಾಸ ಇದೆ. ಅಲ್ಲದೆ ವೆಟರ್ನರಿ ಡಿಪಾರ್ಟ್‌ಮೆಂಟಿನಲ್ಲಿ ಕಡಿಮೆ ಸ್ಕೇಲನ್ನು ಇಟ್ಟಿದ್ದಾರೆ. ಈ ನ್ಯೂನತೆಗಳನ್ನು ಏನು ಮಾಡಿದ್ದಾರೆ ಅವುಗಳನ್ನು ಸರ್ಕಾರದವರು ಸರಿಪಡಿಸಬೇಕು. ಈ ವರದಿಯನ್ನು ಪರಿಣತರು ನೋಡಿ ಇದರಲ್ಲಿ ಏನೇನು ನ್ಯೂನತೆಗಳು ಇವೆ, ಏನೇನು ವ್ಯತ್ಯಾಸಗಳು ಇವೆ ಎಂಬುದನ್ನೆಲ್ಲಾ ನೋಡಿ ಸರಿಪಡಿಸಬೇಕು. ಸರ್ಕಾರದ 3 ಮತ್ತು 4ನೇ ವರ್ಗದ ನೌಕರರಿಗೆ ತುಕೋಳ್ ಕಮಿಷನ್ನಿನವರು ಏನು ಶಿಫಾರಸು ಮಾಡಿದ್ದಾರೆಯೋ ಅದಕ್ಕಿಂತಲೂ ಮುಂದೆ ಹೋಗಿ ಅವರಿಗೆ ಇನ್ನೂ ಹೆಚ್ಚಿನ ಸಂಬಳ ಮತ್ತು ತುಟ್ಟಿಭತ್ಯವನ್ನು ಸರ್ಕಾರದವರು ಕೊಡಬೇಕು. ದೊಡ್ಡ ದೊಡ್ಡ ಡಿವಿಜನಲ್ ಕಮೀಷನರ್‌ಗಳು ಇತ್ಯಾದಿ ಅಧಿಕಾರಿಗಳು ಯಾರು ಯಾರು ಇದ್ದಾರೆಯೋ ಅಂಥಾ ಹುದ್ದೆಗಳನ್ನು ರದ್ದು ಮಾಡಬೇಕು. ಅನಾವಶ್ಯಕವಾಗಿರತಕ್ಕ ಹುದ್ದೆಗಳನ್ನು ಖಂಡಿತವಾಗಿಯೂ ರದ್ದುಮಾಡಬೇಕು. ಸರ್ಕಾರದ ಬೊಕ್ಕಸಕ್ಕೆ ಅನಾವಶ್ಯಕವಾಗಿ ಆಗತಕ್ಕಂಥ ಖರ್ಚನ್ನು ಉಳಿಸಬೇಕು ಎಂದು ನಾನು ಸಲಹೆ ಮಾಡಿ ನನಗೆ ಮಾತನಾಡುವುದಕ್ಕೆ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—The Finance Minister will now reply. If necessary the time will be extended by 20 minutes so as to allow the Hon'ble Minister 40 minutes for his reply.

†ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ತುಕೋಳ್ ಆಯೋಗದ ವರದಿಯ ಮೇಲೆ ನಡೆದಂತಹ ಚರ್ಚೆಗೆ ಉತ್ತರ ಕೊಡುವುದಕ್ಕಿಂತ ಮೊದಲು ನಾನು ನನ್ನ ಪರವಾಗಿ

(ಶ್ರೀ ರಾಮಕೃಷ್ಣ ಹೆಗಡೆ)

ಮತ್ತು ಸರ್ಕಾರದ ಪರವಾಗಿ ಶ್ರೀಮಾನ್ ತುಕೋಳ್ ಅವರಿಗೂ ಮತ್ತು ಆ ಆಯೋಗದಲ್ಲಿ ಕೆಲಸ ಮಾಡಿದಂತ ಇತರ ಅಧಿಕಾರಿಗಳಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುವುದಕ್ಕೆ ನಾನು ಬಯಸುತ್ತೇನೆ. ಶ್ರೀಮಾನ್ ತುಕೋಳ್ ಅವರು ಬಹಳ ಹೆಚ್ಚಿನ ಮುತವರ್ಜಿ ವಹಿಸಿ ಬಹಳ ಶ್ರಮಪಟ್ಟು ಅಂಕಿ ಸಂಖ್ಯೆಗಳು ಮತ್ತು ಈ ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಅಭ್ಯಾಸಮಾಡಿ ಈ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಈ ಆಯೋಗವನ್ನು ನೇಮಿಸುವುದಕ್ಕೆ ಕಾರಣವನ್ನು ಇಲ್ಲಿ ಎಲ್ಲಾ ವಿವರವಾಗಿ ಪ್ರಸ್ತಾಪಿಸಬೇಕಾಗಿಲ್ಲ. ಕರ್ನಾಟಕ ಪ್ರಾಂತ್ಯ ರಚನೆಯಾದ ಮೇಲೆ ಇಂಥಾ ಒಂದು ಆಯೋಗ ರಚನೆ ಆಗಿರಲಿಲ್ಲ. 1955ನೇ ಇಸವಿಯಲ್ಲಿ ಶ್ರೀ ಮ್ಯಾಕ್‌ಕರನೀಸ್ ಅವರ ಹಿರಿತನದಲ್ಲಿ, ನೇತೃತ್ವದಲ್ಲಿ ಒಂದು ಆಯೋಗವನ್ನು ನೇಮಿಸಿತ್ತು. ಅವರು ವರದಿಯನ್ನು ಕೊಟ್ಟ ಮೇಲೆ ಕಳೆದ 10-12 ವರ್ಷಗಳ ಅವಧಿಯಲ್ಲಿ ಸರ್ಕಾರದ ಕರ್ಮಚಾರಿಗಳು ಪುನಃ ಪುನಃ ತಮ್ಮ ಸಮಸ್ಯೆಗಳನ್ನು ಸರ್ಕಾರದ ಮುಂದಿಟ್ಟು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತಿದ್ದರು. ಮತ್ತು ಅದೇ ರೀತಿಯಲ್ಲಿ ಈ ಸಭೆಯಲ್ಲಿ ಮತ್ತು ಹೊರಗಡೆ ಕೂಡ ಜನತೆಯ ಪ್ರತಿನಿಧಿಗಳು ಆಗಾಗ ಆಗ್ರಹದಿಂದ ಪ್ರಸ್ತಾಪ ಮಾಡುತ್ತಿದ್ದರು. ಶ್ರೀಮಾನ್ ಸಿದ್ಧವೀರಪ್ಪನವರು ಮಾತನಾಡುತ್ತಾ 1966ನೇ ಇಸವಿ ನವೆಂಬರ್ ತಿಂಗಳಿನಲ್ಲಿ ಈ ವೇತನ ಆಯೋಗವನ್ನು ನೇಮಿಸಿದ್ದಕ್ಕೆ ಒಂದು ಅರ್ಥವನ್ನು ಕಲ್ಪಿಸಿದ್ದಾರೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಅವರು ಕಲ್ಪಿಸಿದಂಥಾ ಅರ್ಥ ಏನೂ ಇಲ್ಲ. ಏನೋ ಆಕಸ್ಮಿಕವಾಗಿ ಚುನಾವಣೆಗೆ 2-3 ತಿಂಗಳು ಮೊದಲು ಈ ಆಯೋಗ ನೇಮಕವಾಗಿದೆ. ಆದ್ದರಿಂದ ಚುನಾವಣೆಗೂ ಇದಕ್ಕೂ ಯಾವ ತಾಳೆಯೂ ಇಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಈ ಆಯೋಗದ ವರದಿಯ ಮೇಲೆ 4 ಮಾತುಗಳನ್ನು ಹೇಳುವುದಕ್ಕಿಂತ ಮೊದಲು ಮಾನ್ಯ ಸದಸ್ಯರ ಅವಗಾಹನೆಗೆ ಕೆಲವು ವಿಚಾರಗಳನ್ನು ತರುವುದಕ್ಕೆ ಬಯಸುತ್ತೇನೆ. ಇದಕ್ಕೂ ಮೊದಲು ಸರ್ಕಾರ ತನ್ನ ಕರ್ಮಚಾರಿಗಳ ವೇತನ ಮತ್ತು ತುಟ್ಟಿಭತ್ಯ ಈ ವಿಚಾರಗಳಲ್ಲಿ ಎಷ್ಟು ಸಲ ಮತ್ತು ಎಷ್ಟರಮಟ್ಟಿಗೆ ಸಹಾಯ ಮಾಡಿದೆ ಎಂಬುದನ್ನು ನಾನು ಪ್ರಸ್ತಾಪಿಸುವುದಕ್ಕೆ ಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ತುಟ್ಟಿಭತ್ಯದ ಹೆಚ್ಚಳವನ್ನು 1961ನೇ ಇಸವಿಯಲ್ಲಿ ಸರ್ಕಾರ ಕೊಟ್ಟಿದೆ. ಅದರಿಂದ 4½ ಕೋಟಿ ರೂಪಾಯಿಗಳ ಹೆಚ್ಚಿನ ಖರ್ಚು ಸರ್ಕಾರಕ್ಕೆ ಆಯಿತು. ಆ ಮೇಲೆ ಎರಡನೆಯ ಸಲ 1963ನೇ ಇಸವಿಯಲ್ಲಿ ಸರ್ಕಾರ ತನ್ನ ನೌಕರರಿಗೆ ತುಟ್ಟಿಭತ್ಯವನ್ನು ಕೊಟ್ಟಿದೆ. ಅದರ ಪರಿಣಾಮವಾಗಿ ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿಗಳು ಹೆಚ್ಚು ಖರ್ಚು ಸರ್ಕಾರಕ್ಕೆ ಬಂತು. ಮೂರನೆಯ ಹೆಚ್ಚಳ 1964ನೇ ಇಸವಿಯಲ್ಲಿ ಆಯಿತು. ಅದರ ಪರಿಣಾಮವಾಗಿ ವರ್ಷಕ್ಕೆ 11 ಕೋಟಿ ರೂಪಾಯಿಗಳ ಹೆಚ್ಚು ಖರ್ಚು ಸರ್ಕಾರಕ್ಕೆ ಬಂತು. ನಾಲ್ಕನೆಯ ಸಲ 1965ನೇ ಇಸವಿಯಲ್ಲಿ ಸರ್ಕಾರ ತನ್ನ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯವನ್ನು ಕೊಟ್ಟಿದೆ. ಅದರ ಪರಿಣಾಮವಾಗಿ ವರ್ಷಕ್ಕೆ 1½ ಕೋಟಿ ರೂಪಾಯಿಗಳ ಹೆಚ್ಚು ಖರ್ಚು ಸರ್ಕಾರಕ್ಕೆ ಬಂತು. ನಾಲ್ಕನೆ ಸಲ 1965ನೇ ಇಸವಿಯಲ್ಲಿ ಸರ್ಕಾರ ತನ್ನ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯವನ್ನು ಕೊಟ್ಟಿದೆ. ಅದರ ಪರಿಣಾಮವಾಗಿ ವರ್ಷಕ್ಕೆ 2 ಕೋಟಿ ರೂಪಾಯಿಗಳ ಹೆಚ್ಚು ಖರ್ಚು ಸರ್ಕಾರಕ್ಕೆ ಬಂತು. 5ನೆಯದಾಗಿ 1965ನೇ ಇಸವಿಯಲ್ಲಿ ಎರಡು ಸಾರಿ ನೌಕರರಿಗೆ ತುಟ್ಟಿಭತ್ಯವನ್ನು ಕೊಟ್ಟಿದೆ. ಇದರ ಪರಿಣಾಮವಾಗಿ ಪ್ರತಿವರ್ಷ 6 ಕೋಟಿ ರೂಪಾಯಿಗಳ ಹೆಚ್ಚಿನ ಖರ್ಚನ್ನು ಸರ್ಕಾರ ಮಾಡಬೇಕಾದಂತಹ ಪ್ರಸಂಗ ಬಂತು. 6ನೆಯದಾಗಿ 1965ನೇ ಇಸವಿಯಲ್ಲಿ 3ನೆಯ ಸಲ ಸರ್ಕಾರಿ ನೌಕರರಿಗೆ ತುಟ್ಟಿಭತ್ಯವನ್ನು ಕೊಟ್ಟಿದೆ. ಇದರಿಂದ ಪ್ರತಿ ವರ್ಷ ಸರ್ಕಾರಕ್ಕೆ 2 ಕೋಟಿ ರೂಪಾಯಿಗಳ ಹೆಚ್ಚಿನ ಖರ್ಚು ಸರ್ಕಾರಕ್ಕೆ ಬಂತು. 7ನೆಯದು 1966ನೇ ಇಸವಿಯಲ್ಲಿ ಸರ್ಕಾರ ತನ್ನ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯವನ್ನು ಕೊಟ್ಟಿದೆ. ಇದರಿಂದ ವರ್ಷಕ್ಕೆ 1½ ಕೋಟಿ ರೂಪಾಯಿಗಳ ಹೆಚ್ಚಿನ ಖರ್ಚು ಸರ್ಕಾರಕ್ಕೆ ಬಂತು. 8ನೆಯದು 1967ನೇ ಇಸವಿಯಲ್ಲಿ ಹೆಚ್ಚು ತುಟ್ಟಿಭತ್ಯವನ್ನು ಕೊಟ್ಟಿದ್ದಕ್ಕಾಗಿ 3½ ಕೋಟಿ ರೂಪಾಯಿಗಳ ವಾರ್ಷಿಕ ವೆಚ್ಚ ಹೆಚ್ಚಾಯಿತು. ಆ ಮೇಲೆ ಕೊನೆಯದಾಗಿ ಕಳೆದ ವರ್ಷ ಬಡ್ಜೆಟ್ಟಿನಲ್ಲಿ ನೌಕರರಿಗೆ ಹೆಚ್ಚು ತುಟ್ಟಿಭತ್ಯವನ್ನು ಕೊಟ್ಟಿದ್ದಕ್ಕಾಗಿ 8 ಕೋಟಿ ರೂಪಾಯಿಗಳು ಪ್ರತಿ ವರ್ಷ ಸರ್ಕಾರ ಖರ್ಚು ಮಾಡತಕ್ಕ ಪ್ರಸಂಗ ಬಂತು. ಈ ತರಹ ಮೂರನೆಯ ಪಂಚವಾರ್ಷಿಕ ಯೋಜನೆಯ 5 ವರ್ಷಗಳ ಅವಧಿಯಲ್ಲಿ ಸರ್ಕಾರ ತನ್ನ ನೌಕರರಿಗೆ ಕೊಟ್ಟಂತಹ ತುಟ್ಟಿಭತ್ಯದ ಹೆಚ್ಚಳದ ಮೇಲೆ 30-32 ಕೋಟಿ ರೂಪಾಯಿಗಳ ಹೆಚ್ಚಿನ ಖರ್ಚನ್ನು ಮಾಡಬೇಕಾದ ಪ್ರಸಂಗ ಬಂತು. ಮೂರನೆಯ ಪಂಚವಾರ್ಷಿಕ ಯೋಜನೆಗೆ ಯೋಜನಾ ಆಯೋಗದವರು ಹೇಳಿದಂತೆ 42 ಕೋಟಿ ರೂಪಾಯಿಗಳ ಹೆಚ್ಚಿನ ವರಮಾನವನ್ನು ನಾವು ಸಾಧಿಸಬೇಕಾ

ಗಿತ್ತು. ಈ 42 ಕೋಟಿ ರೂಪಾಯಿಗಳ ಹೆಚ್ಚಿನ ರಿಸೋರ್ಸಸ್ಸನ್ನು ನಾವು ಮಾಡುವುದರಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಇದರ ಬಗ್ಗೆ 38 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ರಿಸೋರ್ಸಸ್ಸನ್ನು ನಾವು ಸಾಧಿಸಿದ್ದೇವೆ. ಈ 38 ಕೋಟಿ ರೂಪಾಯಿಗಳ ಪೈಕಿ 30-32 ಕೋಟಿ ರೂಪಾಯಿಗಳು ಸರ್ಕಾರಿ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯವನ್ನು ಕೊಡುವುದಕ್ಕೆ ಖರ್ಚಾಗಿದೆ. ಈ ವಿಚಾರವನ್ನು ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ನೌಕರರಿಗೆ ಸಂಬಳ ಸಾರಿಗೆಗಳನ್ನು ಮತ್ತು ಬೇರೆ ಬೇರೆ ರೀತಿಯ ಅನುಕೂಲತೆಗಳನ್ನು ಮಾಡಿಕೊಡಕೂಡದು ಎನ್ನುವ ಉದ್ದೇಶ ನಮಗೆ ಇಲ್ಲ. ಆದರೆ ಸರ್ಕಾರದ ಶಕ್ತಿ ಎಷ್ಟರಮಟ್ಟಿಗಿ ಇದೆ ಮತ್ತು ಸರ್ಕಾರದ ಸಂಪನ್ಮೂಲಗಳನ್ನು ಯಾವ ಯಾವ ಉದ್ದೇಶಕ್ಕೆ ಎಷ್ಟೆಷ್ಟು ಉಪಯೋಗಿಸಬೇಕು, ಎಷ್ಟೆಷ್ಟು ಖರ್ಚು ಮಾಡಬೇಕು ಎಂಬುದನ್ನು ಮಾತ್ರ ನಾನು ಹೇಳುತ್ತೇನೆ. ನಮ್ಮ ದೇಶದಲ್ಲಿ ಜೀವನದ ಮುಖ್ಯ ವಸ್ತುಗಳ ಧಾರಣೆಗಳು ಸ್ವಲ್ಪ ಹೆಚ್ಚುತ್ತಿವೆ. ಆದರೆ ಉತ್ಪತ್ತಿ ಸಾಕಷ್ಟು ಆಗುತ್ತಿಲ್ಲ. ನಮ್ಮ ದೇಶದಲ್ಲಿ ಜೀವನದ ಮುಖ್ಯ ವಸ್ತುಗಳ ಬೆಲೆ ಏರಿಕೆ ಹೆಚ್ಚುತ್ತಿರುವುದರಿಂದ ಈ ರೀತಿಯ ಸಮಸ್ಯೆ ಉದ್ಭವವಾಗುತ್ತಿದೆ. ಈ ಸಮಸ್ಯೆ ಈ ರಾಜ್ಯಕ್ಕೇ ಸಂಬಂಧಪಟ್ಟ ಸಮಸ್ಯೆಯಲ್ಲ; ನಮ್ಮ ದೇಶದಲ್ಲಿ ಎಲ್ಲಾ ರಾಜ್ಯಗಳಿಗೂ ಮತ್ತು ಕೇಂದ್ರ ಸರ್ಕಾರಕ್ಕೂ ಸಂಬಂಧಪಟ್ಟ ಸಮಸ್ಯೆ. ಕೇಂದ್ರ ಸರ್ಕಾರಕ್ಕೆ ದೊಡ್ಡ ಬಲ ಇದೆ. ಅವರಿಗೆ ಇರತಕ್ಕಂಥ ಸಂಪನ್ಮೂಲಗಳು ಅಪಾರವಾಗಿದೆ. ಅದ್ದರಿಂದ ಕೇಂದ್ರ ಸರ್ಕಾರದವರು ಆಗಿಂದಾಗ್ಯೆ ಏಕಪಕ್ಷೀಯವಾಗಿ ತಮ್ಮ ನೌಕರರಿಗೆ ಹೆಚ್ಚಿನ ಸಂಬಳ ಮತ್ತು ಹೆಚ್ಚಿನ ತುಟ್ಟಿಭತ್ಯವನ್ನು ಕೊಡುತ್ತಾಬಂದಿದ್ದಾರೆ. ಇದರ ಬಗ್ಗೆ ಕೇವಲ ಮೈಸೂರು ಸರ್ಕಾರವೇ ಅಲ್ಲ. ಎಲ್ಲಾ ರಾಜ್ಯ ಸರ್ಕಾರಗಳೂ ಬಹಳ ಬಲಯುತವಾಗಿ ಪ್ರತಿಭಟಿಸಿವೆ. ಮತ್ತು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗಿನಲ್ಲೂ ಹಾಗೂ ಯೋಜನಾ ಆಯೋಗದ ಮೀಟಿಂಗ್‌ನಲ್ಲೂ, ಇನ್ನೂ ಅವಕಾಶ ಸಿಕ್ಕಿದಾಗಲೆಲ್ಲಾ ಎಲ್ಲಾ ರಾಜ್ಯ ಸರ್ಕಾರದವರೂ, ಪ್ರತಿನಿಧಿಗಳು ಒಗ್ಗೂರಲಿನಿಂದ ಇದರ ಬಗ್ಗೆ ಪ್ರತಿಭಟನೆ ಮಾಡಿದ್ದಾರೆ.

ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ನೆನಪು ಇರಬಹುದು, ನಾಲ್ಕನೇ ಫೈನಾನ್ಸ್ ಕಮೀಷನ್ ಅವರು ಸಹ ತಮ್ಮ ರಿಪೋರ್ಟ್‌ನಲ್ಲಿ ಇದನ್ನೇ ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತು ಗಜೇಂದ್ರಗಡ್ಕರ್ ಆಯೋಗದವರು ಸಹ ತಮ್ಮ ವರದಿಯಲ್ಲಿ ಇದನ್ನೇ ಸ್ಪಷ್ಟವಾಗಿ ಬರೆದಿದ್ದಾರೆ. ಏನೆಂದರೆ ಕೇಂದ್ರ ಸರ್ಕಾರದವರು ತಮ್ಮ ನೌಕರರ ತುಟ್ಟಿಭತ್ಯವನ್ನು ಹೆಚ್ಚು ಮಾಡಿದರ ರಾಜ್ಯ ಸರ್ಕಾರದವರು ವಿರೋಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ರಾಜ್ಯ ಸರ್ಕಾರಗಳಿಗೆ ಸಂಪನ್ಮೂಲಗಳು ಬಹಳ ಕಡಿಮೆ ಇರುವುದರಿಂದ ತುಟ್ಟಿಭತ್ಯವನ್ನು ಹೆಚ್ಚು ಮಾಡುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಕೇಂದ್ರ ಸರ್ಕಾರದವರು ಗಮನಿಸಬೇಕು ಎಂದು ನಾವೂ ಸಹ ಇದನ್ನು ಕೇಂದ್ರ ಸರ್ಕಾರಕ್ಕೆ ಹೇಳುತ್ತಲೇ ಇದ್ದೇವೆ. ದುರ್ದೈವದಿಂದ ಇದುವರೆಗೆ ಕೇಂದ್ರ ಸರ್ಕಾರದ ಮನಸ್ಸಿನ ಮೇಲೆ ಯಾವ ಒಂದು ಪರಿಣಾಮವನ್ನೂ ಉಂಟುಮಾಡಿಲ್ಲ. ಇನ್ನು ಮುಂದೆಯಾದರೂ ಸಹ ಆಗುತ್ತದ ಎಂದು ಆಶಿಸುತ್ತೇನೆ. ಈ ಒಂದು ಸಮಸ್ಯೆ ನಾನು ಮೊದಲೇ ಹೇಳಿದಂತೆ ನಮ್ಮ ದೇಶದಲ್ಲಿ ಪ್ರೈಸ್ ಲೈನ್ ಒಂದೇ ಮಟ್ಟದಲ್ಲಿ ಇಲ್ಲದಿರುವುದರಿಂದ ಉದ್ಭವವಾಗಿದೆ. ಪ್ರೈಸ್ ಲೈನನ್ನು ಒಂದೇ ಮಟ್ಟದಲ್ಲಿ ಇಡುವುದಾದರ ಈ ಪ್ರಶ್ನೆ ಉದ್ಭವವಾಗುತ್ತಲೇ ಇರಲಿಲ್ಲವೆಂದೇ ಹೇಳುತ್ತೇನೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಪ್ರೈಸ್ ಲೈನನ್ನು ಒಂದೇ ತರಹದಲ್ಲಿ ಇಡುವುದು ಸಾಧ್ಯವಿಲ್ಲ. ಯಾವುದಾದರೂ ದೇಶದಲ್ಲಿ ಒಂದೇ ತರಹ ಇದ್ದರೆ ಆ ದೇಶ ಅಭಿವೃದ್ಧಿಯಾಗುತ್ತಿಲ್ಲ ಎಂದು ಹೇಳಬಹುದು. ಕೆಲವೊಂದು ಪದಾರ್ಥಗಳ ಬೆಲೆಗಳು ತೀವ್ರವಾಗಿ ಏರಿಕೆಯಾಗಿವೆ. ಇದು ಅತ್ಯಂತ ವಿವಂಚನೆಗೀಡು ಮಾಡಿರುವ ವಿಚಾರವಾಗಿದೆ. ಈ ಆಯೋಗದವರು ಈ ಎಲ್ಲಾ ವಿಚಾರಗಳನ್ನೂ ಗಮನದಲ್ಲಿ ಇಟ್ಟುಕೊಂಡು ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಆಯೋಗಕ್ಕೆ ಸರ್ಕಾರದವರು ಕೊಟ್ಟ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಸರ್ಕಾರೀ ನೌಕರರ ಸಂಬಳಸಾರಿಗೆ ಮತ್ತು ತುಟ್ಟಿಭತ್ಯದ ವಿಚಾರ ಮಾತ್ರ ಇರಲಿಲ್ಲ. ಇದರ ಜೊತೆಗೆ ಆಡಳಿತ ಯಂತ್ರದಲ್ಲಿ ಆಡಳಿತದ ಖರ್ಚನ್ನು ಎಷ್ಟರಮಟ್ಟಿಗೆ ಮತ್ತು ಯಾವ ರೀತಿಯಲ್ಲಿ ತಗ್ಗಿಸಬೇಕು, ಮತ್ತು ಹೆಚ್ಚಿನ ಖರ್ಚು ಬರುವುದಾದರೆ ಅದನ್ನು ಯಾವ ರೀತಿಯಿಂದ, ಯಾವ ಉಪಾಯದಿಂದ ನಾವು ನಮ್ಮ ಆದಾಯವನ್ನು ಹೆಚ್ಚು ಮಾಡಿಕೊಳ್ಳಬೇಕು ಎಂಬುದೂ ಸಹ ಸೇರಿದ್ದವು. ಆದ್ದರಿಂದ ಈ ವರದಿಯನ್ನು ಮುಖ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸುತ್ತೇನೆ. ಮೊದಲನೆಯದು ನೌಕರರಿಗೆ ಸಂಬಂಧಪಟ್ಟ ಸಂಬಳಸಾರಿಗೆ ಮತ್ತು ತುಟ್ಟಿಭತ್ಯಕ್ಕೆ ಸಂಬಂಧಪಟ್ಟಿದ್ದು, ಇದು ಸಂಪೂರ್ಣವಾಗಿ ಆರ್ಥಿಕಕ್ಕೆ ಸಂಬಂಧಪಟ್ಟ ವಿಚಾರ. ಎರಡನೆಯದು ಆಡಳಿತಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಇಕಾನಮಿ ಮತ್ತು ಎಫಿಷಿಯೆನ್ಸಿಗೆ ಸಂಬಂಧಪಟ್ಟಿದ್ದು. ಇವುಗಳನ್ನು ಕಾರ್ಯಗತ ಮಾಡುವ ಬಗ್ಗೆ ಆಯೋಗದವರು ಕೆಲವೊಂದು ಸೂಚನೆಗಳನ್ನು ಮಾಡಿದ್ದಾರೆ. ಮೂರನೆಯದು ಆದಾಯವನ್ನು ಹೆಚ್ಚು ಮಾಡುವುದಕ್ಕೆ ಸಂಬಂಧಪಟ್ಟಿದ್ದು. ಈ ಬಗ್ಗೆ ಆದಾಯವನ್ನು ಹೆಚ್ಚು ಮಾಡಲಿಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು

(ಶ್ರೀ ರಾಮಕೃಷ್ಣ ಹೆಗ್ಡೆ)

ಎಂಬ ಬಗ್ಗೆ ಸೂಚನೆ ಮಾಡಿದ್ದಾರೆ. ಮೂರನೆಯ ಸೂಚನೆಯ ಬಗ್ಗೆ ಸರ್ಕಾರದವರು ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಸೇಲ್ಸ್ ಟ್ಯಾಕ್ಸ್, ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್ ವಗೈರೆ ವಿಚಾರದಲ್ಲಿ ರ್‍ಯಾಷನಲೈಜ್ ಮಾಡಬೇಕೆಂದು ಹೇಳಿದ್ದಾರೆ. ಕೆಲವು ಭಾಗಗಳಲ್ಲಿ ಆದಾಯವನ್ನು ಯಾವ ರೀತಿ ಹೆಚ್ಚಿಸಬೇಕೆಂಬುದನ್ನು. ಹೇಳಿದ್ದಾರೆ ಈ ಬಗ್ಗೆ ಮಾನ್ಯ ಸದಸ್ಯರುಗಳಿಗೆ ತಿಳಿಸಿದಂತೆ ಒಂದು ಉನ್ನತ ಮಟ್ಟದ ಕಮಿಟಿಯನ್ನು ನೇಮಕ ಮಾಡಿದ್ದೇವೆ. ಶ್ರೀಮಾನ್ ಭೂತಲಿಂಗಮ್ ಅವರು ಈ ಕಮಿಟಿಗೆ ಅಧ್ಯಕ್ಷರಾಗಿದ್ದಾರೆ. ಈ ಕಮಿಟಿಯಲ್ಲಿ ಈ ಸಭೆಯ ಇಬ್ಬರು ಸದಸ್ಯರುಗಳು ಸಹ ಇದ್ದಾರೆ. ಈ ಕಮಿಟಿಯವರು ತಮ್ಮ ವರದಿಯನ್ನು ಆದಷ್ಟು ಜಾಗ್ರತೆ ಕೊಡುತ್ತಾರೆಂದು ನಿರೀಕ್ಷೆ ಮಾಡಿದ್ದೇನೆ. ಆಡಳಿತಕ್ಕೆ ಸಂಬಂಧಪಟ್ಟಂತೆ ತುಕೋಳ್ ಆಯೋಗದವರು ಏನು ಸೂಚನೆ ಮಾಡಿದ್ದಾರೆ, ಅದರ ಬಗ್ಗೆ ಭಿನ್ನಾಭಿಪ್ರಾಯ ಇರುವುದಕ್ಕೆ ಸಾಧ್ಯವಿದೆ. ಈ ವಿಚಾರದ ಬಗ್ಗೆ ಈ ಮನೆಯ ಸದಸ್ಯರುಗಳು ಭಾಷಣ ಮಾಡುವಾಗ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ ನಾನು ಒಂದೆರಡು ದೃಷ್ಟಾಂತಗಳನ್ನು ಮಾತ್ರ ಕೊಡುತ್ತೇನೆ. ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಡಿವಿಜನಲ್ ಕಮೀಷನರ್ ಹುದ್ದೆಯನ್ನು ರದ್ದು ಮಾಡಬೇಕೆಂದು ಈ ವರದಿಯಲ್ಲಿ ಹೇಳಿದ್ದಾರೆ. ಈ ಹುದ್ದೆಯನ್ನು ಅನೇಕ ರಾಜ್ಯಗಳಲ್ಲಿ ರದ್ದು ಮಾಡಿ, ಪುನಃ ಸ್ಥಾಪನೆ ಮಾಡಿರುವ ಪ್ರಯೋಗಗಳು ನಡೆದಿವೆ. ಇಂತಹ ಒಂದು ಸೂಚನೆ ಬಂದಾಗ ಅದನ್ನು ಸಾಕಷ್ಟು ಸರಸರಾ ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಯಾವ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವ ಉದ್ದೇಶವೆಂದರೆ ಜನತೆಗೆ ಆದಷ್ಟು ಬೇಗ ಅವರ ಕೆಲಸವಾಗಬೇಕು ಎಂದು. ಈ ಪ್ರಜಾಪ್ರಭುತ್ವದಲ್ಲಿ ಅಧಿಕಾರ ಎಷ್ಟರಮಟ್ಟಿಗೆ ಜನತೆಯ ಹತ್ತಿರ ಹೋಗುತ್ತದೋ ಅಷ್ಟು ಸುಲಭವಾಗಿ ಜನತೆಯ ಕೆಲಸವಾಗುತ್ತದೆಂಬ ಅಭಿಪ್ರಾಯವಿದೆ. ಈಗ ಡಿವಿಜನಲ್ ಕಮೀಷನರ್ ಹುದ್ದೆಯಿಂದ ನಾವು ನಿರೀಕ್ಷಣೆ ಮಾಡಿದಂತಹ ಒಂದು ಕಾರ್ಯ ಸಾಧನೆ ಆಗದಿದ್ದರೆ ಅದಕ್ಕೆ ಬಹುಶಃ ಎಷ್ಟು ಪ್ರಮಾಣದಲ್ಲಿ ಅಧಿಕಾರ ವಿಕೇಂದ್ರೀಕರಣವಾಬೇಕಾಗಿತ್ತೋ ಅಷ್ಟು ಆಗದಿರುವುದು, ಅಥವಾ ಅಧಿಕಾರ ವಿಕೇಂದ್ರೀಕರಣವಾಗಿದ್ದರೆ ಅದನ್ನು ಅವರು ಸರಿಯಾದ ರೀತಿಯಲ್ಲಿ ಉಪಯೋಗಿಸದಿರುವುದೂ ಒಂದು ಕಾರಣವಿರಬಹುದು. ತಾತ್ಪರ್ಯವೇನೆಂದರೆ ಇಂತಹ ಒಂದು ಸೂಚನೆ ಬಂದಾಗ ಆ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ಕೂಲಂಕಷವಾಗಿ ವಿಚಾರ ಮಾಡಿ ಸಾಧಕಬಾಧಕಗಳನ್ನು ವಿಚಾರ ಮಾಡಿ ನಿರ್ಣಯಕ್ಕೆ ಬರುವುದು ಒಳ್ಳೆಯದೆಂದು ಗೊತ್ತಾಗಿದೆ. ಆದ್ದರಿಂದ ಈ ಬಗ್ಗೆ ಸಮಯ ತೆಗೆದುಕೊಂಡರೆ ಏನೂ ತಪ್ಪಾಗುವುದಿಲ್ಲ. ಈ ವರದಿಯನ್ನು ಈ ಸಭೆಯ ಮುಂದೆ ಚರ್ಚೆಗೆ ಇಟ್ಟದ್ದು ನಮ್ಮ ಜವಾಬ್ದಾರಿಯನ್ನು ತೆಗೆದು ವಿಧಾನಮಂಡಲದ ಮೇಲೆ ಹಾಕಬೇಕು ಎಂದು ಅಲ್ಲ. ಈ ವರದಿಯಲ್ಲಿ ಅತ್ಯಂತ ವ್ಯಾಪಕವಾದಂತಹ ಸೂಚನೆಗಳು ಇರುವುದರಿಂದ, ಅವುಗಳ ಬಗ್ಗೆ ಮಾನ್ಯ ಸದಸ್ಯರುಗಳು ತಮ್ಮ ಒಂದು ಅಭಿಪ್ರಾಯವನ್ನು ಸೂಚಿಸಿದರೆ, ತಮ್ಮಗಳ ಒಂದು ದೃಷ್ಟಿಕೋನವನ್ನು ಗಣನೆಗೆ ತೆಗೆದುಕೊಳ್ಳುವುದು ಒಳ್ಳೆಯದೆಂದು ತಿಳಿದುಕೊಂಡು ಈ ಸಭೆಯ ಮುಂದೆ ವರದಿಯನ್ನು ಚರ್ಚೆಗೆ ಇಟ್ಟಿದ್ದೇವೆ. ಈ ವರದಿಯಲ್ಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನೊಂದಿಗೆ ಸೇರಿಸಬೇಕೆಂದು ಇದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಪ್ರತ್ಯೇಕವಾಗಿ ಇರುವುದು ಬೇಡ ಎಂದು ಹೇಳಿದ್ದಾರೆ. ಇವೆರಡು ಇಲಾಖೆಗಳು ಒಂದೇ ವ್ಯಕ್ತಿಯ ಕೈಕೆಳಗೆ ಇದ್ದರೆ, ಪ್ಲಾನನ್ನು ನಮ್ಮ ಹಣದ ಅನುಕೂಲವನ್ನು ನೋಡಿಕೊಂಡು ತಯಾರು ಮಾಡಬಹುದು. ಆ ರೀತಿ ಮಾಡುವುದು ಸರಿಯಲ್ಲ. ಪ್ಲಾನಿಂಗ್ ಇಲಾಖೆ ಪ್ರತ್ಯೇಕವಾಗಿ ಇದ್ದರೆ, ಕೇವಲ ಆದಾಯಕ್ಕೆ ತಕ್ಕಂತೆ ಪ್ಲಾನನ್ನು ತಯಾರು ಮಾಡದೆ. ಜನತೆಯ ಸಮಸ್ಯೆಗಳು ಏನು, ನಮ್ಮ ಉತ್ಪಾದನೆ ಎಷ್ಟು ಎಷ್ಟು ಹೆಚ್ಚಬೇಕು. ಇನ್‌ಕಮ್ ಎಷ್ಟು ಹೆಚ್ಚಬೇಕು, ಯಾವ ಯಾವ ಕ್ಷೇತ್ರದಲ್ಲಿ ಕೆಲಸಗಳು ಆಗದೆ ಬಾಕಿ ಉಳಿದಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಪ್ಲಾನನ್ನು 5 ವರ್ಷ, 10 ವರ್ಷ, 15 ವರ್ಷಕ್ಕೆ ಅನುಕೂಲವಾಗುವಂತೆ ತಯಾರು ಮಾಡುತ್ತಾರೆ. ಆ ರೀತಿ ತಯಾರು ಮಾಡಿದ ಮೇಲೆ ಆರ್ಥಿಕ ಇಲಾಖೆಯವರು ಎಷ್ಟು ಖರ್ಚು ಬರುತ್ತದೆ ಎಂಬುದನ್ನು ನೋಡಿಕೊಂಡು ಅದನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದು ನಿಜಕ್ಕೂ ಒಂದು ಒಳ್ಳೆಯ ಪದ್ಧತಿ ಎಂದು ನನ್ನ ಅಭಿಪ್ರಾಯವೇ ಹೊರತು ಈ ಬಗ್ಗೆ ಒಂದು ತೀರ್ಮಾನಕ್ಕೆ ಬಂದಿದ್ದೇವೆಂದು ಹೇಳುವುದಿಲ್ಲ. ಆಡಳಿತಕ್ಕೆ ಸಂಬಂಧಪಟ್ಟ ಸೂಚನೆಗಳು ಏನಿವೆ, ಅವುಗಳನ್ನು ನಾವು ಸೂಕ್ಷ್ಮ ರೀತಿಯಿಂದ ವಿಚಾರಿಸಿ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಎಂದು ಭಾವಿಸಿದ್ದೇನೆ.

ಇನ್ನು ಮೂರನೆಯ ಸೂಚನೆ ಎಂದರೆ, ಸರ್ಕಾರದ ಕರ್ಮಚಾರಿಗಳು ಅಂದರೆ ನೌಕರರುಗಳ ಸಂಬಳಸಾರಿಗೆಗೆ ಸಂಬಂಧಪಟ್ಟ ವಿಷಯ. ಕಳೆದ 10 ವರ್ಷಗಳಲ್ಲಿ ಎಷ್ಟರಮಟ್ಟಿಗೆ ಈ ವಿಚಾರದಲ್ಲಿ

ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಈಗಾಗಲೇ ಹೇಳಿದ್ದೇನೆ. ಇದೇ ಸಂದರ್ಭದಲ್ಲಿ ಬೇರೆ ರಾಜ್ಯಗಳಲ್ಲಿ ಯಾವ ಸ್ಕೇಲ್‌ಗಳು ಇವೆ ಎಂಬುದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ತಪ್ಪಾಗಲಾರದೆಂದು ತಿಳಿದಿದ್ದೇನೆ.

6-00 P. M.

ಇನ್ನು ಮಾನ್ಯ ಸದಸ್ಯರ ಅವಗಾಹನೆಗಾಗಿ ಎಲ್ಲ ವರ್ಗದ ಸಂಬಳ ಸಾರಿಗೆಗಳನ್ನು ನಾನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಕೆಲವು ವರ್ಗಗಳವರ ಸಂಬಳ ಸಾರಿಗೆಗಳನ್ನು ತುಲನೆಗಾಗಿ ಇಲ್ಲಿ ಓದುತ್ತೇನೆ. ತುಲನೆ ಮಾಡುವುದಕ್ಕಾಗಿ ದಕ್ಷಿಣದ ನಾಲ್ಕು ರಾಜ್ಯಗಳ ಕೆಳದರ್ಜೆ ನೌಕರರುಗಳ ಸಂಬಳ ಸಾರಿಗೆಗಳನ್ನು ಮಾತ್ರ ಇಲ್ಲಿ ತೆಗೆದುಕೊಂಡು ಹೇಳುತ್ತಿದ್ದೇನೆ. ಮೈಸೂರು ಅತಿ ಕಡಿಮೆ ವೇತನ ವರ್ಗದವರಿಗೆ ಕೊಡುತ್ತಿರುವ ಸಂಬಳ 50 ರಿಂದ 60 ಇದೆ, ಕೇರಳದಲ್ಲಿ 60-75 ಮದ್ರಾಸಿನಲ್ಲಿ 50-60 ಮತ್ತು ಆಂಧ್ರದಲ್ಲಿ 50-65 ಇದೆ. ಇದಕ್ಕೆ ಮೇಲಿನ ದರ್ಜೆ ನೌಕರರುಗಳಿಗೆ ಸಂಬಳ ಹೇಗಿದೆ ಎಂದರೆ :

ಮೈಸೂರಿನಲ್ಲಿ	...	55-75
ಕೇರಳದಲ್ಲಿ	...	65-80
ಮದ್ರಾಸಿನಲ್ಲಿ	...	50-60
ಆಂಧ್ರದಲ್ಲಿ	...	55-70

ಇದಕ್ಕೆ ಮೇಲಿನ ದರ್ಜೆಯ ನೌಕರರುಗಳಿಗೆ

ಮೈಸೂರಿನಲ್ಲಿ	...	55-75
ಕೇರಳದಲ್ಲಿ	...	65-80
ಮದ್ರಾಸಿನಲ್ಲಿ	...	ವಿವರಗಳು ಗೊತ್ತಿಲ್ಲ
ಆಂಧ್ರದಲ್ಲಿ	...	55-70

ಆಮೇಲೆ ಪೋಲೀಸು ಕಾನ್‌ಸ್ಟೇಬರ್‌ಗಳಿಗೆ

ಮೈಸೂರಿನಲ್ಲಿ	...	65-90
ಕೇರಳದಲ್ಲಿ	...	75-95
ಮದ್ರಾಸಿನಲ್ಲಿ	...	65-90
ಆಂಧ್ರದಲ್ಲಿ	...	60-90

ಆಮೇಲೆ ಸೆಂಕೆಡ್ ಡಿವಿಜನ್ ಕ್ಲಾರ್ಕುಗಳಿಗೆ

ಮೈಸೂರಿನಲ್ಲಿ	...	80-150
ಕೇರಳದಲ್ಲಿ	...	80-150
ಮದ್ರಾಸಿನಲ್ಲಿ	...	90-140
ಕೇರಳದಲ್ಲಿ	...	80-150

ಇದನ್ನು ಉದಾಹರಣೆಗಾಗಿ ಯಾವ ರೀತಿಯಾಗಿ ಕಾಣುತ್ತದೆ ಎನ್ನುವುದನ್ನು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.--ಸೆಂಟ್ರಲ್ ಗವರ್ನಮೆಂಟಿನ ಸ್ಕೇಲುಗಳನ್ನೂ ಹೇಳಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ನಮ್ಮ ದಕ್ಷಿಣದಲ್ಲಿರುವ ನಾಲ್ಕು ರಾಜ್ಯಗಳ ನೌಕರರುಗಳಲ್ಲಿ ಯಾವ ರೀತಿ ಇದೆ ಎನ್ನುವುದನ್ನು ತುಲನಾತ್ಮಕವಾಗಿ ವಿಚಾರ ಮಾಡಲು ಇಲ್ಲಿ ಹೇಳುತ್ತಿದ್ದೇನೆ. ನಾನು ಸೆಂಟ್ರಲ್ ಗವರ್ನಮೆಂಟಿನ ನೌಕರರುಗಳ ಬಗ್ಗೆ ಈ ಮೊದಲೇ ಹೇಳಿದ್ದೇನೆ. ಇದರಿಂದ ಏನು ವ್ಯಕ್ತವಾಗುತ್ತದೆ ಎಂದರೆ ನಮ್ಮ ರಾಜ್ಯದಲ್ಲಿ ಹಾಗೂ ಮದ್ರಾಸು ಮತ್ತು ಆಂಧ್ರದಲ್ಲಿರತಕ್ಕ ಸ್ಕೇಲುಗಳಿಗಿಂತ ಯಾವ ರೀತಿಯಿಂದಲೂ ಕಡಿಮೆ ಇಲ್ಲ. ಇದರ ಅರ್ಥ ಈಗ ಕೊಡುತ್ತಿರುವುದೇ ಸರಿ ಪರಿಹಾರ ಸಾಕಷ್ಟು ಇದೆ ಎಂದು ನಾನು ಹೇಳುವುದಿಲ್ಲ. ಮಾನ್ಯ ಸದಸ್ಯರು ನಾಲ್ಕನೇ ವರ್ಗದ ನೌಕರರುಗಳಿಗೆ ಹಾಗೂ ಮೂರನೆ ವರ್ಗದ ನೌಕರರುಗಳಿಗೆ ಸರಿಯಾದ ನ್ಯಾಯ ದೊರಕಿಲ್ಲ ಎಂದು ಹೇಳಿದರು. ಇದು ಅವರ ಅಭಿಪ್ರಾಯದ ಮಾತು. ನಾಲ್ಕನೇ ವರ್ಗದ ನೌಕರರು ಎಂದು ಪ್ರಪಂಚದಲ್ಲಿರುವ ಇತರ ದೇಶಗಳಲ್ಲಿಲ್ಲ. ಕೇವಲ ನಮ್ಮ ದೇಶದಲ್ಲಿ ಮಾತ್ರ ಇದೆ. ವೈಯ್ಯಕ್ತಿಕವಾಗಿ ಕೇಳಿದರೆ ನಾಲ್ಕನೇ ವರ್ಗದ ನೌಕರರು ಎನ್ನುವುದು ಇನ್ನು ಮುಂದಿನ ಪೀಳಿಗೆಯಲ್ಲಿ ಬರಕೂಡದು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಕಡಿಮೆ ದರ್ಜೆಯ ನೌಕರರಲ್ಲಿ ಪಿಯೋನ್, ದಫೇದಾರ ಎಂದು ಹೇಳುವಂತೆ ಇತರ ಯಾವ ದೇಶಗಳಲ್ಲೂ ಇಲ್ಲ. ಇಂತಹ ನೌಕರರುಗಳಿಗೆ ನಮ್ಮ ಸಂಸ್ಥಾನದಲ್ಲಿ ಕೆಲಸಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾದಂತಹ ಸಂಬಳ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇಂದು ನಮ್ಮ ರಾಜ್ಯದಲ್ಲಿ ಸುಮಾರು 2. 60 ಲಕ್ಷ ಜನರು ಇದ್ದಾರೆ. ಈ 2. 60 ಲಕ್ಷ ಜನರಿಗೂ ಯಾವ ಒಂದು ನಿಶ್ಚಿತವಾದ ಸಂಬಳವಿದೆಯೋ ಅದು ಸಾಕಾಗುತ್ತದೆ ಮತ್ತು ಅವರೆಲ್ಲರೂ ಸುಖವಾಗಿದ್ದಾರೆ ಎಂದು ನಾನು ಇಲ್ಲಿ ಹೇಳುತ್ತಿಲ್ಲ. ಎರಡು ಕೋಟಿ ಅರವತ್ತು ಲಕ್ಷ ಜನರಿಗೆ ಸಾಕಾಗುವಷ್ಟು ಸಂಬಳ ಬರುತ್ತಿಲ್ಲ ಎಂದು ಅವರಿಗೆ ನಾವು ಒಂದು ಸಹಾನುಭೂತಿ ತೋರಬೇಕು ಎಂದು ಹೇಳುವಾಗ ಇದನ್ನು ನಾವು ತೂಗಿ ನೋಡಬೇಕು ಮತ್ತು ನಿಜವಾಗಿ ವಿಮರ್ಶೆ ಮಾಡಿ ನೋಡಬೇಕು.

ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಬಹಳ ತೀಕ್ಷಣವಾಗಿ ಹೇಳಿದರು. ಅವರಲ್ಲಿ ತೀಕ್ಷಣವಾಗಿ ಮಾತನಾಡುವ ಶಕ್ತಿ ಇದೆ. ಅವರು ಬಹಳ ಉದ್ವೇಗದಿಂದ ಹೇಳಿದರು. ಇಪ್ಪತ್ತು ವರ್ಷಗಳಾಯಿತು. ಇನ್ನೆಷ್ಟು ವರ್ಷಗಳು ನೀವಿರುತ್ತೀರಿ ಎಂದು. ಶಿಶುಪಾಲನು ನೂರು ತಪ್ಪುಗಳನ್ನು ಮಾಡುವವರೆಗೆ ಶ್ರೀ ಕೃಷ್ಣ ಸುಮ್ಮನಿದ್ದನು. ಅದರಂತೆ ನಾವೂ ಇನ್ನೂ ಒಂದು ವರ್ಷ ಕಾದು ನೋಡುತ್ತೇವೆ ಎಂದು ಹೇಳಿದರು. ನಾವು ಎಂದೂ ಹಾಗೆ ಹೇಳಿಲ್ಲ. ಮುಂಬರುವ ಎಲ್ಲಾ ವರ್ಷಗಳಲ್ಲಿಯೂ ಕಾಂಗ್ರೆಸ್ಸು ಸಂಸ್ಥೆಯೇ ರಾಜ್ಯಭಾರ ಮಾಡಬೇಕು ಎಂದೂ ತಿಳಿದುಕೊಂಡಿಲ್ಲ. ಪ್ರಜಾಪ್ರಭುತ್ವದಲ್ಲಿ ಜನರಿಂದ ಆರಿಸಿದ ಪ್ರತಿನಿಧಿಗಳು ಬರುವಾಗ ಯಾರ ಬೇಕಾದರೂ ಬರಬಹುದು. ನಾವು ಕೂಡ ಇಂದು ಪ್ರಪಂಚದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನೂ ನೋಡುತ್ತಿದ್ದೇವೆ. ಆದರೆ ಹಿಂದೆ ಯಾವ ರೀತಿಯಾಗಿ ಇಲ್ಲಿ ಟೀಕೆ ಮಾಡುತ್ತಿದ್ದರೋ ಅದೇ ರೀತಿ ಇಂದೂ ಕೂಡ ಟೀಕೆ ಮಾಡುತ್ತಾ ಹೋದರೆ ಅದು ನಿಮಗೇ ವಾಪಸು ಬಂದು ಹೊಡೆಯುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯು. ಪಿ. ಯಲ್ಲಿ ಏನಾಯಿತು ? ಸರಕಾರಿ ನೌಕರರ ಪರವಾಗಿ ಪ್ರತಿಪಾದನೆ ಮಾಡಿ ಮಾಡಿ ಕೊನೆಗೆ ಏನಾಯಿತು ಎಂದರೆ ಅಲ್ಲಿನ ಸರಕಾರಿ ನೌಕರರೇ ಅವರಿಗೆ ಒಂದು ಮಾರಕವಾದರು. ಇದನ್ನೆಲ್ಲಾ ವಿಚಾರ ಮಾಡುವಾಗ ಒಂದು ಸಮಗ್ರ ದೃಷ್ಟಿಯನ್ನು ಇಟ್ಟುಕೊಂಡು ವಿಚಾರ ಮಾಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ದೊಡ್ಡ ದೊಡ್ಡ ಸಮಸ್ಯೆಗಳನ್ನು ವಿಚಾರ ಮಾಡಲು ಸದಸ್ಯರಿಗೆ ಫೋನು ಹಾಗೂ ಸ್ಟೆನೋಗ್ರಾಫರುಗಳ ಸೌಕರ್ಯವಿಲ್ಲ ಎಂದು ಹೇಳಿದರು. ಅಮೆರಿಕಾ ದೇಶದಲ್ಲಿರುವ ಹಾಗೆ ನಮ್ಮ ಸದಸ್ಯರುಗಳಿಗೂ ಫೋನು ಇರಬೇಕು, ಸ್ಟೆನೋಗ್ರಾಫರುಗಳ ಸಹಾಯವಿರಬೇಕು ಮತ್ತು ಸಾಧ್ಯವಾದಷ್ಟು ಸೌಕರ್ಯಗಳನ್ನು ಕೊಡಬೇಕು, ಇವರಿಗೆ ಕಾರುಗಳನ್ನು ಕೊಡಬೇಕು ಮತ್ತು ಬಡವರಾಗಿರುವರಿಗೆ ಅವರು ಅಚ್ಚುಕಟ್ಟಾಗಿ ವಾಸಿಸಲು ಅನುಕೂಲವಾದ ಮನೆ ಇರಬೇಕು ಆ ಮನೆಯೊಳಗೆ ಒಂದು ರೇಡಿಯೋ ಇರಬೇಕು. ನಿಜ ಇವನ್ನೆಲ್ಲಾ ಕೊಟ್ಟರೆ ಚೆನ್ನಾಗಿರುತ್ತದೆ. ಇದನ್ನು ಸಾಧಿಸಲಿಕ್ಕೆ ಇನ್ನೂ ಕಾಲ ಬೇಕು, ಅಂತಹ ಶಕ್ತಿ ನಮ್ಮಲ್ಲಿ ಇನ್ನೂ ಬಂದಿಲ್ಲ. ಇದರ ಒಂದು ಚಿತ್ರ ಮಾತ್ರ ನಮ್ಮ ಮುಂದೆ ಇದೆ. ಇಂತಹ ಒಂದು ಚಿತ್ರವನ್ನು ಇಟ್ಟುಕೊಂಡು ಇನ್ನೂ ಸಾಧಿಸಲಿಕ್ಕೆ ಆಗಲಿಲ್ಲ. ಇದರ ಬಗ್ಗೆ ಇನ್ನೂ ವಿಚಾರ ಮಾಡಬೇಕಾಗಿದೆ.

ಇನ್ನು ಆಯೋಗದ ವರದಿಯ ಮೂರನೇ ಭಾಗದಲ್ಲಿ ಅತಿ ಮುಖ್ಯವಾದ ಮೂರು ವಿಚಾರಗಳ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಒಂದು ಸೆಂಟ್ರಲ್ ಸ್ಕೇಲುಗಳನ್ನು ಕೊಡುವಾಗ ಯಾವ ರೀತಿ ತುಟ್ಟಿಭತ್ಯ ಕೊಡುತ್ತಿದ್ದಾರೋ ಅದೇ ರೀತಿ ಇಲ್ಲೂ ಕೊಡಬೇಕೆಂದು ಹೇಳುವುದು. ಎರಡನೇಯದು ಈಗ ಏನು 108 ಸ್ಕೇಲುಗಳು ಇವೆ ಅವನ್ನು 27 ಸ್ಕೇಲುಗಳಿಗೆ ಇಳಿಸುವುದು ಎನ್ನುವ ಮಾತನ್ನು ಇದರಲ್ಲಿ ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ನೆನಪು ಇರಬಹುದು 1956ನೇ ಇಸವಿಗೆ ಮೊದಲು ಈ ಸರಕಾರದಲ್ಲಿ ಸುಮಾರು 500 ಕ್ಕಿಂತಲೂ ಹೆಚ್ಚು ಸ್ಕೇಲುಗಳು ಇದ್ದವು.

ಇವನ್ನು ಈಗ 107–108 ಸ್ಕೇಲುಗಳಿಗೆ ಇಳಿಸಲಾಗಿದೆ. ಇದನ್ನು ಇನ್ನೂ ಕಡಿಮೆ ಮಾಡಬೇಕು ನಿಜ. ಅನೇಕ ಸದಸ್ಯರುಗಳು ಹೇಳಿದ ಹಾಗೆ ನಮ್ಮ ಸಮಾಜದಲ್ಲಿ ಬಡವ ಹಾಗೂ ಬಲ್ಲಿದನಿಗೆ ಇರುವ ಮಧ್ಯದ ಅಂತರ ಬಹಳವಾಗಿರಕೂಡದು. ಹಾಗಿದ್ದರೆ ಇದು ಒಂದು ಕ್ರಾಂತಿಗೆ ಆಸ್ಪದ ವಾಗುತ್ತದೆ. ಇದಕ್ಕೆ ಆಸ್ಪದ ಕೊಡಕೂಡದು. ಆದರೆ ವ್ಯವಹಾರದ ದೃಷ್ಟಿಯಿಂದ ನೋಡಿದರೆ ಇದನ್ನು ಒಮ್ಮೆಲೆ ತೆಗೆದುಹಾಕುವುದು ಸಾಧ್ಯವೇ ಎನ್ನುವುದನ್ನು ವಿಚಾರ ಮಾಡಬೇಕು. ನಾಲ್ಕನೇ ಮಾತು ಇದರಲ್ಲಿ ಸ್ಕೇಲುಗಳನ್ನು ರಿವಿಷನ್ ಮಾಡುವಾಗ ಇದರಿಂದ ನಮಗೆ ಮೊದಲು ವರ್ಷದಲ್ಲಿ ಸುಮಾರು ಎಂಟು ಕೋಟಿ ಖರ್ಚು ಬರಬಹುದು ಮತ್ತು ಐದಾರು ವರ್ಷಗಳಲ್ಲಿ ಲೆಕ್ಕ ಹಾಕಿ ನೋಡು ವಾಗ ಸುಮಾರು 12 ಅಥವಾ ಹನ್ನೆರಡೂವರೆ ಕೋಟಿ ಬರಬಹುದು. ಇದರ ಜೊತೆಗೆ ತುಟ್ಟಿಭತ್ಯ ಕೇಂದ್ರ ಸರಕಾರದವರು ಹೆಚ್ಚಿಸಿರುವಂತೆ ಕೊಡಲು ಹೋದರೆ ಅದಕ್ಕೆ ಸುಮಾರು ಎರಡು ಮೂರು ಕೋಟಿ ಯಷ್ಟು ಬೇಕಾಗುತ್ತದೆ ಮತ್ತು ಹೀಗೆ ಬೇರೆ ಬೇರೆ ಇತರ ಸೌಲಭ್ಯಗಳಿಗೆ ಅವಕಾಶ ಕೊಡಬೇಕೆಂದು ಇದರಲ್ಲಿ ಇನ್ನೂ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ತೂಕ ಮಾಡಿ ನೋಡಿದಾಗ ಇದರ ಖರ್ಚು ಎಷ್ಟು ಬರುತ್ತದೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ಮುಂದೆ ಇಂತಹ ಬೃಹತ್ ಸಮಸ್ಯೆ ಇರುವಾಗ ಇದರ ಬಗ್ಗೆ ಯಾವ ರೀತಿಯಾದ ನಿರ್ಣಯ ತೆಗೆದುಕೊಳ್ಳಬೇಕಾದರೂ ಈವೊತ್ತು ನಮಗೆ ಬರುತ್ತಿರುವ ಆದಾಯ ಸುಮಾರು 172 ಕೋಟಿವರೆಗೆ ಇದೆ. ಇದರಲ್ಲಿ ವೆಚ್ಚ ಸುಮಾರು 155 ಕೋಟಿಯಷ್ಟು ಬರುತ್ತದೆ. ಇದರಲ್ಲಿ ಸಿಬ್ಬಂದಿಗಾಗಿ ಎಷ್ಟು ಖರ್ಚು ಬರುತ್ತದೆ ಎಂದರೆ ಸುಮಾರು ನೂರಕ್ಕೆ 42 ರಷ್ಟು ಬರುತ್ತದೆ. ಇದನ್ನು ಎಲ್ಲ ರಾಜ್ಯಗಳೊಡನೆಯೂ ತುಲನೆ ಮಾಡಿ ನೋಡುವಾಗ ಇದು ಬಹಳ ಕಡಿಮೆಯೆಂದೇ ಹೇಳಬೇಕಾಗುತ್ತದೆ.

ಬೇರೆ ರಾಜ್ಯದೊಂದಿಗೆ ಹೋಲಿಸಿ ನೋಡಿದರೆ ಮುಖ್ಯವಾಗಿ ಮಹಾರಾಷ್ಟ್ರಕ್ಕೆ ಹೋಲಿಸಿ ನೋಡಿದರೆ ಅಲ್ಲಿ ಸಿಬ್ಬಂದಿ ವೆಚ್ಚ ಎಷ್ಟು, ಇಲ್ಲಿ ಸಿಬ್ಬಂದಿ ವೆಚ್ಚ ಎಷ್ಟು ಇದನ್ನು ತುಲನೆ ಮಾಡಿನೋಡಿದರೆ ನಮ್ಮದು ಕಡಿಮೆ ಇದೆ ಎಂದು ನಾನು ಒಪ್ಪಿಕೊಳ್ಳು ತ್ತೇನೆ. ಆದರೆ ಒಟ್ಟು ಆದಾಯದಲ್ಲಿ ಸಿಬ್ಬಂದಿ ಬಗ್ಗೆ ಎಷ್ಟು ಖರ್ಚು ಮಾಡಬೇಕು ಅದಕ್ಕೆ ಒಂದು ನಿರ್ದಿಷ್ಟವಾದ ಪಾಲಿಸಿ ಬೇಕು. ಈಗ ಹೆಚ್ಚು ಖರ್ಚು ಮಾಡಿದ್ದೇವೆ. ಇದರಿಂದ ಜನರಿಗೆ ಹೆಚ್ಚಿನ ಪ್ರಯೋಜನ ಆಗುವುದಾದರೆ ನನ್ನ ಅಭ್ಯಂತರವಿಲ್ಲ. ಇಂದು ನಮ್ಮ ಸ್ಥಿತಿ ಹೇಗೆ ಇದೆ ಎನ್ನುವುದನ್ನು ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ಪ್ರಸ್ತಾಪ ಮಾಡಿದರು. ನಮಗೆ ಇರತಕ್ಕಂಥ ಆಡಳಿತ ಯಂತ್ರ ಯಾವುದು ಅದನ್ನು ನೋಡಿದರೆ ಅದು ನಾವು ನೇಮಿಸಿದ್ದೋ, ಭಾರತಕ್ಕೆ ಸ್ವಾತಂತ್ರ್ಯ ಆದಮೇಲೆ ಬಂದದ್ದೋ, ಅಲ್ಲ. ಯಾವ ದೇಶದಲ್ಲಿ ಸ್ವಾತಂತ್ರ್ಯ ಕ್ರಾಂತಿಯ ಗರ್ಭದಿಂದ ಹೊರಗೆ ಬರುತ್ತದೋ ಆ ದೇಶದಲ್ಲಿ ಹೊಸ ಆಡಳಿತ ಯಂತ್ರ ಬರುತ್ತವೆ. ಯಾವ ದೇಶದಲ್ಲಿ ಸ್ವಾತಂತ್ರ್ಯ ಬೈ ಡೆವಲ್ಯೂಷನ್ ಆಫ್ ಪವರ್ ಬರುತ್ತದೋ ಆ ದೇಶದಲ್ಲಿ ಆಡಳಿತ ಯಂತ್ರವನ್ನು ಆಮೂಲಾಗ್ರವಾಗಿ ತೆಗೆದು ಹಾಕುವುದು ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಕ್ರಾಂತಿಯಾಗಿ ಬರಲಿಲ್ಲ. ಹಳೇ ಆಡಳಿತ ಯಂತ್ರವೇ ಅವ್ಯಾಹತವಾಗಿ ನಡೆದುಕೊಂಡ ಬಂದಿದೆ. ದುರ್ದೈವದಿಂದ ಬ್ರಿಟಿಷರು 10 ಸಾವಿರ ಮೈಲಿ ಆಚೆ ಇದ್ದು ಇಷ್ಟು ದೊಡ್ಡ ದೇಶವನ್ನು ಹಾಗೂ ಈ ದೇಶದ ಜನರನ್ನು ಆಳುತಿದ್ದರು. ಆಗಿನ ಕಾಲದ ಪದ್ಧತಿಯಂತೆ 4 ನೌಕರರ ಮೇಲೆ ಒಬ್ಬ, ಅವನ ಮೇಲೆ ಮತ್ತೊಬ್ಬ ಅವನ ಮೇಲೆ ಇನ್ನೊಬ್ಬನನ್ನು ಉಸ್ತುವಾರಿ ಮಾಡಲು ಹಾಕಿ ಈ ರೀತಿ ಆಡಳಿತ ಯಂತ್ರವನ್ನು ಬೆಳೆಸಿದ್ದಾರೆ. ಯಾವುದೋ ಸಣ್ಣ ಕೆಲಸಕ್ಕೂ ಇಷ್ಟೊಂದು ದೊಡ್ಡ ಸಿಬ್ಬಂದಿ ಮಾಡಿದ್ದಾರೆ. ಈ ಆಡಳಿತ ಯಂತ್ರದಿಂದ ನಮ್ಮ ದೇಶದಲ್ಲಿ ಏನು ಅನ್ಯಾಯವಾಗುತ್ತದೋ ಅದು ಬೇರೆ ಯಾವ ದೇಶದಲ್ಲೂ ಆಗುತ್ತಿಲ್ಲ. ಒಂದು ಪಿರಮಿಡ್ ದೃಷ್ಟಿ ಯಿಂದ ಈರೀತಿ ಆಡಳಿತ ಯಂತ್ರವನ್ನು ಬೆಳೆಸುತ್ತಾ ಬಂದಿದ್ದಾರೆಯೇ ಹೊರತು, ಅದರಿಂದ ಎಫಿಷಿಯೆಂಟ್ ಆಗಿ, ಎಕಾನಮಿಕ್ಕಾಗಿ ಕೆಲಸ ಸಾಧನೆಮಾಡಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದವರು ನೇಮಕ ಮಾಡಿರತಕ್ಕಂಥ ಆಡಳಿತ ಸುಧಾರಣಾ ಆಯೋಗ ದವರು ಏನೊಂದು ಬದಲಾವಣೆ ಮಾಡಿ ಸೂಚನೆ ಮಾಡಿ ಹೇಳುತ್ತಾರೋ ನನಗೆ ಅದು ಗೊತ್ತಿಲ್ಲ. ಇದು ಸುಧಾರಣೆಯಾದರೆ ಬಹಳ ಉತ್ತಮ. ಮತ್ತು ಆ ದಿವಸದಿಂದ ನಮ್ಮ ದೇಶದ ಇತಿಹಾಸವೇ ಬದಲಾವಣೆಯಾಗುತ್ತದೆ ಎಂದು ನನಗೆ ಅನಿಸುತ್ತದೆ. ಈ ವಿಚಾರದಲ್ಲಿ ಕರ್ಮಚಾರಿಗಳು ಕೆಲಸ ಮಾಡುವ ಬಗ್ಗೆ ಒಂದು ಸಮನ್ವಯ ಸರ್ವೆ ನಡೆದಿದೆ. ಆ ವರದಿಯಲ್ಲಿ ಪ್ರತಿಯೊಬ್ಬ ಸರಕಾರಿ ನೌಕರನೂ ಸರಾಸರಿ 3 ತಾಸಿಗಿಂತ ಹೆಚ್ಚು ಕೆಲಸಮಾಡುತ್ತಾ ಇಲ್ಲ ಎಂದು ಹೇಳಿ ದ್ದಾರೆ. ಅಂದಮೇಲೆ ನಮ್ಮ ಯೋಜನೆಗಳು ಎಷ್ಟುಮಟ್ಟಿಗೆ ಯಶಸ್ವಿಯಾಗುತ್ತವೆ ಎನ್ನುವುದನ್ನು ನೋಡಿದರೆ ಸಮಯ ಮತ್ತು ದುಡ್ಡು ಎರಡೂ ವೇಸ್ಟ್ ಆಗುತ್ತಿವೆ. ಇದನ್ನು ಲೆಕ್ಕ ಹಾಕಿ ಕೊಂಡು ನೋಡಿಕೊಳ್ಳಬಹುದು. ಅದನ್ನು ಬದಲಾಯಿಸಬೇಕಾದರೆ ನಮ್ಮ ಆಡಳಿತ ಯಂತ್ರ ಬದಲಾವಣೆ ಆಗಬೇಕು. ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ಹೇಳಿದರು ಯಾವ ತಾಲ್ಲೂಕು

(ಶ್ರೀ ರಾಮಕೃಷ್ಣ ಹೆಗಡೆ)

ಕಛೇರಿಗೆ ಹೋದರು ಯಾರು ಕೇಳುತ್ತಾರೆ ಅವರನ್ನು ನಿಜ, ಯಾರೂ ಕೇಳುವುದಿಲ್ಲ. ಹಾಗಿದ್ದರೆ ಯಾವರೀತಿ ಮಾಡಬೇಕು? ರೈತ ಬಂದರೆ ಏನು ಮಾಡಬೇಕು, ಅವನನ್ನು ಯಾರು ಯಾವರೀತಿ ಕೇಳುವ ಹಾಗೆ ಮಾಡಬೇಕು. ಈಗ ಪ್ರಜಾಪ್ರಭುತ್ವದಲ್ಲಿರತಕ್ಕ ಸರ್ಕಾರಿ ನೌಕರರು ಇಂಗ್ಲೆಂಡಿನಿಂದಾಗಲಿ, ಅಮೇರಿಕಾದಿಂದಾಗಲೀ ಬಂದವರಲ್ಲ. ಅವರು ನಮ್ಮ ಸಮಾಜಕ್ಕೆ ಸೇರಿದವರೇ, ಅವರು ನಮ್ಮ ಅಣ್ಣತಮ್ಮಂದಿರು, ನಮ್ಮ ಸಂಬಂಧಿಕರು. ಈಗ ಇರತಕ್ಕಂಥ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಬೇರೆ ತರದ ಫ್ಯಾಕ್ಟರುಗಳು ಇನ್‌ಫ್ಲೂಯನ್ಸ್ ಆಗುತ್ತವೆ. ಅಮೇರಿಕಾದಲ್ಲಿ ಹೊಸ ಅಧ್ಯಕ್ಷ ಬಂದರೆ 1-1½ ಸಾವಿರ ಜನ ಅಧಿಕಾರಿಗಳನ್ನು ತೆಗೆದು ಕಾಂಟ್ರಾಕ್ಟ್ ಪದ್ಧತಿಯ ಮೇಲೆ 3 ವರ್ಷದವರೆಗೆ ಅಪಾಯಿಂಟ್ ಮಾಡಲಿಕ್ಕೆ ಸಾಧ್ಯ ಇದೆ. ಮತ್ತು ಅಲ್ಲಿ ಮುಖ್ಯ ಮುಖ್ಯವಾದ ಬದಲಾವಣೆ ಆಗುವುದಕ್ಕೆ ಸಾಧ್ಯ ಇದೆ. ಆದರೆ ಇಲ್ಲಿ ಹೊಸದಾಗಿ ಒಬ್ಬ ಚೀಫ್‌ಮಿನಿಸ್ಟರ್ ಬಂದರೆ ಆರೀತಿ 4 ವರ್ಷ ಕಾಂಟ್ರಾಕ್ಟ್ ಪದ್ಧತಿಯ ಮೇಲೆ ತೆಗೆದುಕೊಂಡು ಅಧಿಕಾರಿಗಳ ಹುದ್ದೆಗಳನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯ ಇದೆಯೇ? ಅದನ್ನು ನಾವು ಯೋಚನೆ ಮಾಡಬೇಕು. ಈರೀತಿ ಎಫಿಷಿಯಂಟ್ ಆಗಿ ಇಂಪ್ರೂ ಮಾಡುವುದಕ್ಕೆ ಸಾಧ್ಯಇದೆಯೋ ? ಇದಕ್ಕೆ ಮಾನ್ಯ ಸದಸ್ಯರ ಒಪ್ಪಿಗೆ ಇದೆಯೇ ? ಇದು ಅಷ್ಟು ಸುಲಭವಾದ ವಿಚಾರವಲ್ಲ.

ಅದಕ್ಕಾಗಿ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಒಂದು ವರದಿ ಏನು ಇದೆ ಅದು ಅತ್ಯಂತ ಮಹತ್ವವಾದ ವರದಿ. It is not only important but it has also very far reaching implications. ಆದುದರಿಂದ ಅದರಮೇಲೆ ದಯವಿಟ್ಟು ಈಗಲೇ ನಿರ್ಣಯ ತೆಗೆದುಕೊಳ್ಳಿ ಎಂದು ಒತ್ತಾಯ ಹಾಕಕೂಡದು ಎಂದು ನಾನು ಕೇಳಿಕೊಳ್ಳುತ್ತೇನೆ. ಒಂದೊಂದು ಡಿಪಾರ್ಟ್‌ಮೆಂಟಿನಲ್ಲೂ ಏನೇನು ಪರಿಣಾಮವಾಗುತ್ತದೆ ಎನ್ನುವದನ್ನು ವಿಚಾರ ಮಾಡುವುದು ಅಗತ್ಯ. ಅದನ್ನು ಯೋಚನೆ ಮಾಡಿ ಸರ್ಕಾರದವರು ಒಂದು ನಿರ್ಣಯ ತೆಗೆದುಕೊಳ್ಳುತ್ತಾರೆ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಇನ್ನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದೇ ಒಂದು ಮಾತು ಮಾತ್ರ ಹೇಳುತ್ತೇನೆ. ನಮ್ಮ ಕಾಂಗ್ರೆಸ್ ಸರ್ಕಾರವೇ ಇರಲಿ ಅಥವಾ ಬೇರೆ ಯಾವುದೇ ರಾಜಕೀಯ ಪಕ್ಷವೇ ಇರಲಿ ಕೊನೆಗೆ ಅವರು ಮಾಡಿದಂಥ ಕೆಲಸಕ್ಕೆ ಸರ್ಕಾರಿ ನೌಕರರುಗಳೇ ಅಳತೆಗೋಲು ಎಂದು ಹೇಳಬೇಕಾಗಿದೆ. ನಾವು ಬೇಕಾದರೆ ಸಾವಿರಾರು ಮೈಲಿ ರಸ್ತೆ ಮಾಡಿಸಬಹುದು, ನೂರಾರು ಪ್ರಾಜೆಕ್ಟ್‌ಗಳನ್ನು ಕಟ್ಟಿಸಬಹುದು, ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿಸಬಹುದು. ಆದರೆ ಕೊನೆಗೆ ಈ ಅಧಿಕಾರಿಗಳು ಸರಿಯಾಗಿ ವರ್ತಿಸದೇ ಹೋದರೆ, ಸಹಾನುಭೂತಿಯಿಂದ ವರ್ತಿಸದೇ ಹೋದರೆ, ದಕ್ಷತೆಯಿಂದ ಕೆಲಸ ಮಾಡದೇ ಹೋದರೆ, ನಾವು ಇಷ್ಟೆಲ್ಲಾ ಮಾಡಿದ್ದು ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಆದುದರಿಂದ ಅವರುಗಳ ಬಗ್ಗೆ ಎಲ್ಲ ರೀತಿಯ ಸಹಾನುಭೂತಿ ಇದೆ. ಅವರು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ, ಕಳಕಳಿಯಿಂದ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಎಲ್ಲದರಲ್ಲೂ ಅವರಿಗೆ ಪ್ರಯೋಜನ ಮಾಡಲಿಕ್ಕೆ ಮತ್ತು ಕಷ್ಟ ಪರಿಸ್ಥಿತಿಯಲ್ಲಿರುವವರಿಗೆ ಸಹಾನುಭೂತಿ ಕಡಮೆಯಾಗಿ ಏನೂ ತೋರಿಸಿಲ್ಲ. ಇಷ್ಟು ಹೇಳಿ ಮಾನ್ಯ ಸದಸ್ಯರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರ ಸರ್ಕಾರ ಮತ್ತು ಮೈಸೂರು ಸರ್ಕಾರದ ವೇತನ, ತುಟ್ಟಿ ಭತ್ಯಗಳು ಏನು ಇವೆಯೋ ಇದು ಒಂದೇ ರೀತಿಯಾದಂಥ ಕೆಲಸ ಮಾಡತಕ್ಕಂಥವರಿಗೆ ಈ ಸ್ಕೇಲುಗಳು ಇರಬೇಕೆಂದು ಹೇಳುತ್ತಿದ್ದೇವೆ, ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಹೇಳಿದ್ದೇನೆ. ಒಂದೇ ಊರಿನಲ್ಲಿ ಹುಟ್ಟಿದವರು ಇರಬಹುದು. ಅಕ್ಕ ಪಕ್ಕದಲ್ಲಿ ವಾಸಮಾಡಿದವರು ಇರಬಹುದು. ಇವರಲ್ಲಿ ಒಬ್ಬ ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡಬಹುದು, ಇನ್ನೊಬ್ಬ ವಿಧಾನಸೌಧದಲ್ಲಿ ಧಫೇದಾರ್‌ನಾಗಿ ಕೆಲಸ ಮಾಡಬಹುದು. ಅವರುಗಳು ಅಣ್ಣತಮ್ಮಂದಿರಾಗಿ ಇರಬಹುದು. ಒಬ್ಬನಿಗೆ 120 ರೂಪಾಯಿ ಇನ್ನೊಬ್ಬನಿಗೆ 80 ರೂಪಾಯಿ ಸಿಕ್ಕುತ್ತದೆ. ಇದು ಯಾವ ತರ್ಕಕ್ಕೂ ನಿಲುಕದಂಥ ವಿಚಾರವಾಗಿದೆ. ಇದೇ ವಿಚಾರವನ್ನು ಹೇಳಿದ್ದೇನೆ. ಈ ತರಹ ಆದರೆ ಸುಪೀರಿಯಾರಿಟಿ ಕಾಂಪ್ಲೆಕ್ಸಿಟಿ ಬರುತ್ತದೆ. ಅಲ್ಲಿ ಕೆಲಸ ಮಾಡತಕ್ಕಂಥವರು ನಮ್ಮ ಜನರೇ, ಇಲ್ಲಿ ಕೆಲಸ ಮಾಡತಕ್ಕಂಥವರು ನಮ್ಮ ಜನರೇ. ಒಂದೇ ಸಮಸ್ಯೆಯನ್ನು ಎದುರಿಸಬೇಕು. ಒಂದೇ ಪರಿಸ್ಥಿತಿಯಲ್ಲಿರುವವರಿಗೆ ಒಬ್ಬನಿಗೆ 50 ರೂಪಾಯಿ ಮತ್ತೊಬ್ಬನಿಗೆ 100 ರೂಪಾಯಿ ಕೊಟ್ಟರೆ ಯಾವ ನ್ಯಾಯ, ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇದನ್ನು ಪುನಃ ಪುನಃ ಹೇಳಲಿಕ್ಕೆ ತಯಾರಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಇಷ್ಟೆಲ್ಲಾ ಮಾತನಾಡಿದಿರಿ. ಕಡೆಯೊಳಗೆ ಈ ವೇತನಗಳ ಬಗ್ಗೆ ಏನಾದರೂ ಒಂದು ಸ್ಪಷ್ಟವಾದ ನಿಲುವನ್ನು ಹೇಳುತ್ತಾರೆ ಎಂದು ತಿಳಿದುಕೊಂಡಿದ್ದೆ. ಬೇರೆ ಬೇರೆ ವಿಷಯಗಳ ಬಗ್ಗೆ ಹೇಳಿದಿರಿ. ಆದರೆ 3—4 ನೇ ದರ್ಜೆಯ ನೌಕರರ ಕನಿಷ್ಟ ವೇತನ ಬಗ್ಗೆ ಏನು ಇದೆಯೋ ಅದನ್ನು ಕಾರ್ಯಗತ ಮಾಡುವ ಯೋಚನೆ ಇದೆಯೇ ಎನ್ನುವುದನ್ನು ತಾವು ಸ್ಪಷ್ಟವಾಗಿ ಹೇಳಲಿಲ್ಲ. ಅದನ್ನು ತೇಲಿಸಿ, ತೇಲಿಸಿ ಹೇಳಿಬಿಟ್ಟಿರಿ. ಅದನ್ನು ಹೇಗೆ ಮಾಡುತ್ತೀರಿ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಅದನ್ನು ಬಜೆಟ್‌ಮೇಲೆ ಮಾತನಾಡುತ್ತಾ ಹೇಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಆಯೋಗದ ವರದಿಯನ್ನು ನಾಲ್ಕಾರು ದಿನ ಚರ್ಚೆ ಮಾಡಿದ್ದೇವೆ. ಸದಸ್ಯರ ಅಭಿಪ್ರಾಯವನ್ನೂ ಮಾನ್ಯ ಮಂತ್ರಿಗಳು ಮನಗಂಡಿದ್ದಾರೆ. ಇದರ ಬಗ್ಗೆ ಎಷ್ಟು ಅವಧಿಯಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ಒಂದು ವಿಚಾರದಲ್ಲಿ ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ, ಅದು ಆದಾಯ ಹೆಚ್ಚು ಮಾಡುವ ವಿಷಯದಲ್ಲಿ. (ನಗು). ಇನ್ನು ಯಾವ ಯಾವ ವಿಷಯಗಳಿವೆಯೋ ಅವುಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಎಷ್ಟು ಕಾಲ ಹಿಡಿಯುತ್ತದೆ ಎನ್ನುವುದನ್ನು ಈಗ ಹೇಳಲು ಸಾಧ್ಯವಾಗುವುದಿಲ್ಲ. ಫೈನಾನ್ಸ್ ಕಮಿಷನ್ ಮುಂದೆ ಈ ವಿಚಾರವನ್ನು ಇಟ್ಟಿದ್ದೇವೆ. ಅದರ ವರದಿ ಯಾವಾಗ ಬರುತ್ತದೆಯೋ ಗೊತ್ತಿಲ್ಲ, ಅವರ ಪ್ರತಿಕ್ರಿಯೆಯನ್ನು ಸೂಚ್ಯವಾಗಿ ಕೂಡ ಏನೂ ಹೇಳಲಿಲ್ಲ. ಇದೆಲ್ಲ ವಿಚಾರವಿರುವಾಗ ನಾನು ಈಗಲೇ ಇಂತಿಷ್ಟು ದಿವಸಗಳಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ವರದಿಯ ಬಗ್ಗೆ ಮಂತ್ರಿಮಂಡಲದಲ್ಲಿ ಏನಾದರೂ ಚರ್ಚೆಯಾಗಿದೆಯೇ ? ಇದರ ಬಗ್ಗೆ ಬೇರೆ ಮಂತ್ರಿಗಳು ಅಭಿಪ್ರಾಯವೇನು ಸ್ವಾಮಿ ?

(ಉತ್ತರವಿಲ್ಲ).

Mr. SPEAKER.—Before putting the substitute motion to the House, I want to know from the hon'ble Member Sri Nagappa whether he wants to withrdraw it.

Sri M. NAGAPPA (Raichur).—If the Hon'ble Minister gives at least a tentative period of 2 or 3 or 4 months, then I shall consider the matter.

Sri RAMAKRISHNA HEGDE.—I can definitely say one thing, namely, that appropriate action will be taken as early as practicable.

Sri M. NAGAPPA.—Since the Minister is not prepared to commit himself to a definite period, I am not withdrawing it.

Mr. SPEAKER.—Then I will put first the substitute motion to the vote of the House. The question is :

"That this Assembly accepts the recommendations of the Pay Mysore Commission of 1966–68 regarding—

(*a*) the pay scale fixed for the Non-Gazetted employees ;

(*b*) the Gazetted officers whose basic Salary is Rs. 350 per month only ;

(*c*) the abolition of various categories of posts except the IV grade employees ;

(*d*) Re-organisation of the Secretariat and rejects the recommendations regarding the enhancement of taxes, *i.e.*,

(MR. SPEAKER)

(a) land revenue ;

(b) surcharge ;

(c) sales tax ;

(d) imposition of agricultural Income-tax on the foodgrain producers, etc., and

(e) recommendation regarding the enhancement of salary of Gazetted Officers whose basic salary is more than Rs. 350 per month."

The motion was negatived.

MR. SPEAKER.—Now the consideration of the motion on the Mysore Pay Commission 1966-68 is concluded. The House will now adjourn to meet again at One of the Clock on Monday the 24th instant.

The House adjourned past Twenty-five Minutes past Six of the Clock to meet again at One of the Clock on Monday, the 24th February 1969.

Karnataka S
4860
Date..

WD 12316—GPB—600 23-5-1969

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Monday, 24th February 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Investment of M.G.I.D. amount

65. SRI I. SOMASHEKARAPPA (Hosanagar).—

Will the Minister for Finance, Planning and Youth Welfare be pleased to state :—

(*a*) the items in respect of which the amount of M.G.I.D. has been invested since three years together with the amount so invested ;

(*b*) the profit, dividend, commission, etc., obtained by such investment since three years ?

SRI RAMAKRISHNA HEGDE (Minister for Finance, Planning and Youth Welfare).—

(*a*) The amount of M.G.I.D. has been deposited completely in Mysore Government, out of the amount so deposited some amount has been paid to Government servants as loan on the policies held by them. The amount so deposited during the last three years is as follows :—

Life Insurance

	State Government Branch	Hyderabad Branch
	Rs.	Rs.
1965-66	53,81,398 00	1,35,387 30
1966-67	72,60,000 00	1,18,177 70
1967-68	74,05,017 92	1,37,131 72

(SRI RAMAKRISHNA HEGDE)

(b) The amount of interest that will be received from out of the loans given to Government servants and the amount of interest that has been received from out of the insurance amount that has been deposited in Government during the last three years is as follows :

Life Insurance Branch

	State Government Branch		*Hyderabad Branch*		*Vehicles Branch*	
	Rs.		Rs.		Rs.	
1965-66	29,29,872	00	37,535	60	2,22,399	90
1966-67	34,75,024	00	40,734	00	2,75,782	18
1967-68	38,21,423	00	40,364	80	3,33,263	30

ಶ್ರೀ ಐ. ಸೋಮಶೇಖರಪ್ಪ.—(ಅ) ಗೆ ಉತ್ತರವಾಗಿ ಮೈಸೂರು ಸರ್ಕಾರ ವಿಮಾ ಇಲಾಖೆಯ ಹಣವನ್ನು ಮೈಸೂರು ಸರ್ಕಾರದಲ್ಲಿ ಸಂಪೂರ್ಣವಾಗಿ ಠೇವಣಿ ಮಾಡಲಾಗಿದೆ ಎಂಬು ದಾಗಿ ಹೇಳಿದ್ದೀರಿ. ಸರ್ಕಾರದ ಠೇವಣಿ ಹಣಕ್ಕೆ ಎಷ್ಟು ಪರ್ಸೆಂಟ್ ಬಡ್ಡಿ ಕೊಡುತ್ತಾರೆ?

ಶ್ರೀ ಕೆ. ಪುಟ್ಟಸ್ವಾಮಿ.—ಶೇಕಡ 4.8 ರಷ್ಟು.

ಶ್ರೀ ಐ. ಸೋಮಶೇಖರಪ್ಪ.—ಸರ್ಕಾರದ ನೌಕರರಿಗೆ ಏನು ಸಾಲ ಕೊಡುತ್ತೀರೊ ಅದಕ್ಕೆ ಎಷ್ಟು ಪರ್ಸೆಂಟ್ ಬಡ್ಡಿಯನ್ನು ಚಾರ್ಜು ಮಾಡುತ್ತೀರಿ ?

SRI K. PUTTASWAMY.—I have no information on that point.

ಶ್ರೀ ಎಂ. ಎಸ್. ಕೃಷ್ಣನ್.—ಎಷ್ಟು ಜನ ಸರ್ಕಾರದ ನೌಕರರಿಗೆ ಈ ಸಾಲವನ್ನು ಕೊಟ್ಟಿದ್ದೀರಿ ?

SRI K. PUTTASWAMY.—As against their policies, whoever asks for loan, it will be given.

SRI N. A. CHANNE GOWDA.—After integration of the State, the MGID has paid some amounts to some people who retired. Has the MGID received assets that were due to it from other areas ?

SRI K. PUTTASWAMY.—Naturally under the States Reorganisation, whatever assets are due to us, would have been received.

ಶ್ರೀ ಸಿದ್ಧಯ್ಯ ಕಾಶೀಮಠ್.—ಸರ್ಕಾರದ ನೌಕರರಲ್ಲಿ ಶೇಕಡ ಎಷ್ಟು ಜನ ಈ ವಿಮೆಗೊಳಪಟ್ಟಿದ್ದಾರೆ ?

SRI K. PUTTASWAMY.—Under the scheme, every Government servant is expected to insure himself.

Buildings for Marathi Primary Schools

153. SRI B. B. SAYANAK (Belgaum):—

Will the Minister for Education be pleased to state.—

(a) whether there is a newly constructed school building for Kannada boys and girls at Khasabag in Belgaum City Municipality;

(b) whether there are three buildings lying vacant in Khasabag which were used for Kannada Primary Boys and Girls Schools ;

(c) whether these three buildings which are lying vacant are asked for by the Marathi Primary Schools of Khasbag and Navigalli ;

(d) if so, the result of the request made ?

Sri N. M. KOTRABASAIAH SOGI (Deputy Minister for Education).—

(a) Yes.
(b) Yes.
(c) Yes.
(d) Instructions have been issued to the Municipal School Board.

Sri B. B. SAYANAK.—May I know what is the rent of the vacant buildings ?

Sri N. M. KOTRABASAIAH SOGI.—They are not rented buildings.

Sri B. B. SAYANAK.—My question is, whether there are three buildings lying vacant in Khasabag which were used by the Kannada Primary Boys and Girls School ; may I ask you whether these schools are rented by the Municipal School Board ?

Sri N. M. KOTRABASAIAH SOGI.—They are constructed by the Municipal School Board.

Sri B. B. SAYANAK.—May I know what are the instructions issued to the Municipal School Board ?

Sri N. M. KOTRABASAIAH SOGI.—It is a matter concerning the Municipal School Board, and the Municipality. They have to consider the matter and come to a final decision in the matter.

Mr. SPEAKER.—Question No. 159. Since the Chief Minister is not present, I hold over the Question.

Sri S. SIVAPPA.—Sir, the question has been called and it has been put, that means the Chair has allowed the question. Unless the Chief Minister has written to you earlier, there must be some other Minister in charge of it.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹಿಂದೆ ಮಾನ್ಯ ಸದಸ್ಯರು ಹಾಜರಿಲ್ಲದ ಸಮಯದಲ್ಲಿ ಅವರು ನಂತರ ಕೇಳಲು ಹಕ್ಕಿಲ್ಲವೆಂದು ಹೇಳಿದ್ದೀರಿ. ಈಗ ಇದು ಹೇಗೆ ಆಗುತ್ತದೆ ?

Mr. SPEAKER.—I do not want to waste the valuable time of the House during question hour. There are so many questions to be covered. In the mean time I shall find out the reasons for the delay in coming to the House.

Sri H. N. NANJE GOWDA.—I would like to bring to the notice of the Chair what happened previously. The Chair was pleased to say that the same question was to be taken up later. Since the Chair could not find time, the question lapsed. I do not want to lose my right of putting the question. I have put the question as per the Chair's direction. The House cannot wait for the Hon. Chief Minister. He hould have been here in time.

Mr. SPEAKER.—The Hon. member need not fear that it will lapse. I shall hold it over and take it up later.

Sri D. B. KALMANKAR.—The Chief Minister should be pulled up, Sir.

Mr. SPEAKER.—There are about 30 questions. Let us not lose time. I assure the House that I shall find out the reasons for the delay when the Chief Minister comes. In the mean while we shall proceed further.

Sri N. B. SIRDESAI.—There are 5 to 6 questions in today's list pertaining to the Chief Minister, Sir.

Sri S. SIVAPPA.—Nobody from the Treasury Bench has requested you to defer the question. It is a joint responsibility.

Sri K. PUTTASWAMY.—You were pleased to say that the Question will be held over. Therefore there was no question of representation from this side.

Mr. SPEAKER.—The Hon. Minister for Parliamentary Affairs may kindly ascertain the difficulty for the Chief Minister to come here in time.

Sri H. N. NANJE GOWDA.—May I know that my question will be taken up later, Sir?

Mr. SPEAKER.—Immediately the hon. Chief Minister comes, it will be taken up.

Appointment of Village Accountants

229. Sri K. R. NADGOUDA (Yadgir).—

Will the Minister for Revenue be pleased to state :—

(*a*) (i) the number of Village Panchayats in Yadgir Taluk having Village Accountants and

(ii) how many are yet to have them ;

(*b*) the difficulty being experienced by Government to appoint Village Accountants ;

(*c*) the steps taken to appoint Village Accountants immediately ?

Sri H. V. KOUJALGI (Minister for Revenue).—

(*a*) (i) 69.

(ii) None.

(*b*) No difficulty.

(c) Government have decided to separate the cadre of Village Accountants from the cadre of Panchayat Secretaries. The Deputy Commissioners have been requested to report the number of Village Accountants required on the basis of revenue work only but ensuring that each charge includes complete Village Panchayats.

Sri K. R. NADGOUDA.—Most of the villages in Yadgir taluk do not have village accountants and panchayet secretaries.

Sri H. V. KOUJALGI.—So far as panchayats are concerned, we are not concerned whether the Panchayats have paid secretaries or not. So far as village accountants are concerned, according to the new formula, for a demand of Rs. 15,000 of land revenue, a village accountant will have to be appointed. That is the principle. So, if there are any villages where there are no village accountants, they will be appointed shortly.

Sri J. P. SARWESH.—May I know how long it will take to appoint these Village Accountants ? Will the Hon. Minister assure that they will be appointed this year before 31st December 1969 ?

Sri H. V. KOUJALGI.—They will be appointed as early as possible.

ಶ್ರೀ ಸದಾಶಿವಪ್ಪ ಪಾಟೀಲ್.—ಗ್ರಾಮ ಲೆಕ್ಕಿಗರನ್ನು ನೇಮಿಸಲು ಸರ್ಕಾರದವರಿಗಿರುವ ತೊಂದರೆಗಳೇನು ಎಂದು ಕೇಳಿದ್ದಕ್ಕೆ ಯಾವ ತೊಂದರೆಯೂ ಇಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಈ ಬಗ್ಗೆ ಸರ್ಕಾರದವರು ಯಾವ ನಿರ್ಧಾರವನ್ನು ಕೈಗೊಂಡಿದ್ದೀರಿ ?

Sri H. V. KOUJALGI.—At first the policy was that the Village Accountant should be appointed as Village Panchayat Secretary as well as Village Accountant. Now the Government have changed that view. They want him to be only as Village Accountant and not aa Village Accountant and Panchayat Secretary.

Sri D. B. KALMANKAR.—May I know when it was decided and how much time it will take to settle this matter once and for all and appoint Village Accountants ?

Sri H. V. KOUJALGI.—They will be appointed very shortly.

Sri H. N. NANJE GOWDA.—The hon. Minister was pleased to state that Government had nothing to do with the appointment of Village Panchayat Secretaries. I want to know whether it is not a fact that under the Act the Deputy Commissioner has to appoint Panchayat Secretaries and so is it not the responsibility of the Government ?

Sri. H. V. KOUJALGI.—Though the Deputy Commissioner appoints them, he does so as a subordinate of the Development Department and not as an officer of the Revenue Department.

Sri H. N. NANJE GOWDA.—Now the Hon. Chief Minister has come, I request my question No. 159 may be permitted to be put.

Mr. SPEAKER.—Yes.

Assets and Liabilities of Ex-Ministers and others

159. Sri H. N. NANJE GOWDA (Arkalgud).—

Will the Chief Minister be pleased to refer to the statement laid on the Table by him on 19th September 1968 about the assets and liabilities of Ex-Ministers and others and state :—

(*a*) when the Chief Minister did actually write to Sri K. Hanumanthaiya and Sri H. M. Channabasappa to furnish the said statement ;

(*b*) whether the said letter of the Chief Minister had any legal sanction behind it, and whether the Chief Minister can now compel them to furnish the said statement ?

Sri VEERENDRA PATIL (Chief Minister).—

(*a*) The previous Chief Minister addressed a letter to them on 8th April 1968.

(*b*) The discretion to send the statement or otherwise is left to the Members.

Sri H. N. NANJE GOWDA.—Before putting supplementary, I want to know whether there are any corrections to the answer given here. I wanted to know whether the said letter had any legal sanction and for that no answer is given.

†Sri VEERENDRA PATIL.—The fact that discretion to send the statement is left to the member means that there is no legal sanction behind it.

ಶ್ರೀ ಎಚ್. ಎನ್. ನಂಜೇಗೌಡ.—ಹಿಂದಿನ ಮುಖ್ಯ ಮಂತ್ರಿಗಳು ಬರೆದ ಕಾಗದದ ಬಗ್ಗೆ ಶ್ರೀಮಾನ್ ಹನುಮಂತಯ್ಯನವರು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾ ಒಂದು ಹೇಳಿಕೆಯನ್ನು ಕೊಟ್ಟು ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದ ಮೇಲೆ 22 ಜನ ಶಾಸಕರು ಮಾಡಿದಂತಹ ಅಪಾದನೆ ಬಗ್ಗೆ ....

Mr. SPEAKER.—The hon. member should not try to give information to the Minister. The hon. member can seek information and ask whether the Government has any reaction and if so, what it is.

Sri H. B. JWALANIAH.—Sir, I want to know whether a member cannot put a question. The Chair has given an opportunity to the hon. Member to put the question and he is putting it ಈ ತರಹ ತಾವು ಹೇಳಿದರೆ ಹೇಗೆ ? ಇದಕ್ಕೆ ಒಂದು ರೂಲ್ ಫ್ರೇಮ್ ಮಾಡಬೇಕಾಗುತ್ತದೆ. ತಾವು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ ?

Mr. SPEAKER.—I do not require any education on it.

Sri H. N. NANJE GOWDA.—I want to know whether it is true that Sri Hanumanthaiya made allegation against the former Chief Minister and I want to know whether it is true or not.

---

†Indicates that the remarks or speeches have not been revised by the member conerned.

Mr. SPEAKER.—That question is irrelevant. The allegations against Sri Nijalingappa or his Cabinet are irrelevant. The hon. Member cannot make reference to those allegations. This is a different question.

Sri S. SIVAPPA.—The question relates to the submission of statement of assets and liabilities by Ministers and ex-Ministers. I want to seek information from the Government, in response to the letter addressed by the Chief Minister asking for sending statement of assets and liabilities of Ministers and ex-Ministers, how many of them have given information? If anybody has done it, will the Government place the statement on the floor of the House, so that the House can take such action as is necessary?

Mr. SPEAKER.—That information is already given. The statement is placed on the Table of the House on 19th September 1968. Therefore that question does not arise.

Sri S. SIVAPPA.—Was it not a fact that the House required the Chief Minister to place the statement before the House? Will the Government think of the feasibility of placing on the Table of the House the statements made by some of the Ministers and ex-Ministers regarding their assets and liabilities?

Sri VEERENDRA PATIL.—I do not propose to do so.

Sri H. N. NANJE GOWDA.—I want to know whether Sri Hanumanthaiya threw a challenge to the Government whether the former Chief Minister and the present Chief Minister were prepared to face a Commission of Enquiry.

Mr. SPEAKER.—The question is irrelevant.

ಶ್ರೀ ಎಸ್. ಚನ್ನಯ್ಯ.—ತಾವು ತಮ್ಮ ಚೇಂಬರ್‌ನಲ್ಲಿ ಯಾವ ರೀತಿ ಮಾತನಾಡುತ್ತೀರೋ ಆ ರೀತಿಯಲ್ಲಿ ಇಲ್ಲಿ ನಡೆದುಕೊಳ್ಳುವುದಿಲ್ಲ !

Mr. SPEAKER.—A complaint is made by the hon. Member Sri S. Channiah that I should permit supplementaries which do not relate to the main question. The question relates to the letter written and the authority behind it. It does not relate to the allegations made by any other member. Therefore, I request the hon. Members to avoid such supplementaries. If they want to put them, they can table a separate question.

Sri H. SIDDAVEERAPPA.—The hon. Chief Minister was pleased to state that he is not prepared to place the statement on the Table. In that case may I bring to his notice that the previous Chief Minister had stated that after collecting all the materials, he would use the entire force of the machinery to see that if there are any allegations, enquiries will be made? Is the hon. Chief Minister aware that the whole purpose of collecting information was to have it as a nucleus for further probe into the matter?

Sri VEERENDRA PATIL.—I am not aware whether my predecessor has held out any assurance to this House. I am not aware what statement he has made because I do not have copy of that statement

(SRI VEERENDRA PATIL)

before me. It is very difficult for me to say whether he had made such a statement. The hon. Member stated that the very purpose of calling the information would be defeated. I may submit humbly that that purpose has not been fulfilled because some of the members who are the Members of this House also have questioned the propriety, legal sanction, constitutionality and all those things of the Chief Minister for having asked for the statement. So I have decided to drop the whole issue. I do not wish to pursue this matter further.

Sri H. SIDDAVEERAPPA.—If that is the stand the Hon. Chief Minister has taken, may I request him to return all the replies given by the Ex-Ministers because no purpose will be served in keeping them in his Office. I request him to see that whatever replies are given, are returned.

Mr. SPEAKER.—The hon. Member is making a suggestion.

Sri H. SIDDAVEERAPPA.—It is not a suggestion. Because there was vital interest, I disclosed my assets and liabilities. If it has no purpose, I want him to return what I have given.

Sri VEERENDRA PATIL.—Then in that case, the hon. Member who was also a Minister at one time and who, in response to our request filed two statements of assets and liabilities in his capacity not only as a Member but also in his capacity as Ex. Minister and responded to our request, has got every right if he feels that at least his statement should be placed on the Table of the House. Then the question arises for those who have already furnished this information. Then I have to seek their permission and after getting their permission, I have to place them on the Table of the House. If the hon. Member now feels that so far as he is concerned, he has absolutely no objection to my placing his statement on the Table of the House, in deference to the wishes of the hon. Member I am prepared to place his statement on the Table of the House.

ಶ್ರೀ ಎಸ್. ಶಿವಪ್ಪ.—ಮುಖ್ಯ ಮಂತ್ರಿಗಳು ಯಾವ ಉದ್ದೇಶದಿಂದ ಈ ಸಭೆಯ ಸದಸ್ಯರುಗಳ ಹಾಗೂ ಮಂತ್ರಿಗಳ ಆಸ್ತಿಪಾಸ್ತಿಗಳನ್ನು ಕೇಳಿದರೋ ಆ ಉದ್ದೇಶ ಸಾರ್ಥಕವಾಗಲಿಲ್ಲ ಅಲ್ಲದೆ ನಾವು ಯಾರನ್ನೂ ಬಲಾತ್ಕಾರ ಮಾಡುವ ಹಾಗಿಲ್ಲ ಎಂದು ಅವರ ಒಂದು ನಿಸ್ಸಹಾಯಕತೆಯನ್ನು ಇಲ್ಲಿ ತೋರ್ಪಡಿಸಿದರು. ಇದಕ್ಕೋಸ್ಕರ ಈ ಉದ್ದೇಶ ಸಾಧನೆ ಮಾಡುವುದಕ್ಕೋಸ್ಕರ ಈ ಸಭೆಯಿಂದ ಅವರಿಗೆ ಯಾವ ರೀತಿಯಾದ ಕಾನೂನು ರಕ್ಷಣೆ ಬೇಕೋ ಅದನ್ನು ಕೊಡುವುದಕ್ಕೆ ಈ ಸಭೆ ಸಿದ್ಧವಾಗಿದೆ. ಇದರ ಪ್ರಕಾರ ಎನ್‌ಕ್ವೈರಿ ಕಮಿಷನ್ ಮಾಡಬೇಕೋ ಅಥವಾ ಇನ್ನಾವ ರೀತಿಯು ಮಾಡಬೇಕೋ ಅದನ್ನು ಈ ಸಭೆಯ ಮೂಲಕ ಮಾಡುವ ಕೆಲಸವನ್ನು ಸರಕಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮೊಟ್ಟಮೊದಲಿಗೆ ಇದರಲ್ಲಿ ಎನ್‌ಕ್ವೈರಿ ಕಮಿಷನ್ ಮಾಡುವುದು ಬರುವುದಿಲ್ಲ. ನಮಗೆ ಯಾವ ಯಾವ ರೀತಿಯಾದ ಪತ್ರಗಳು ಬರುತ್ತವೆ ಯಾವ ರೀತಿಯಾದ ಸ್ಟೇಟ್‌ಮೆಂಟುಗಳು ಬರುತ್ತವೆ ಅವೆಲ್ಲವನ್ನೂ ಪ್ರತ್ಯೇಕವಾಗಿ ವಿಚಾರ ಮಾಡಿ ಇದರಲ್ಲಿರುವ ಸಾಧಕ ಬಾಧಕಗಳನ್ನು ನೋಡಬೇಕಾಗುತ್ತದೆ. ಇದರಲ್ಲಿ 1947ಕ್ಕೆ ಮುಂಚೆ ಇದ್ದ ಆಸ್ತಿಗಳೇನು ಮತ್ತು ಅದರಿಂದೀಚೆಗೆ ಇರುವ ಆಸ್ತಿಪಾಸ್ತಿಗಳೇನು ಎನ್ನುವುದರ ವಿವರಗಳನ್ನು ನಾವು ಡಿಸ್‌ಪ್ಯಾಷನೇಟ್ ಆಗಿ ವಿಚಾರ ಮಾಡಿ ಅದರ ಪ್ರಕಾರ ಏನಾದರೂ ಕ್ರಮ ತೆಗೆದುಕೊಳ್ಳಬೇಕು ಎಂದು

ಸರಕಾರಕ್ಕೆ ಮನವರಿಕೆಯಾಗುವಂತಿದ್ದರೆ ಮಾತ್ರ ಈ ಕಮಿಷನ್ ಪ್ರಶ್ನೆ ಬರುತ್ತದೆ. ಅಂತಹ ಪರಿಸ್ಥಿತಿಯೇ ಈಗ ಬಂದಿಲ್ಲ. ಏಕೆಂದರೆ ಕೆಲವರು ನಮಗೆ ಕಾಗದ ಬರೆದು ನಿಮಗೆ ಅಧಿಕಾರವಿಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಹಿಂದೆ ಈ ಸಭೆಯಲ್ಲಿನ ಸದಸ್ಯರುಗಳು ಅನೇಕರು ಅಪೇಕ್ಷೆಪಟ್ಟ ಹಾಗೆ ಮುಖ್ಯ ಮಂತ್ರಿಗಳು ಕಾಗದವನ್ನು ಬರೆದರು. ಅದಕ್ಕೆ ಕೆಲವರು ಮನ್ನಣೆ ಕೊಟ್ಟು ವಿವರಗಳನ್ನು ಕಳುಹಿಸಿದರು. ಕೆಲವರು ಕಾನ್‌ಸ್ಟಿಟ್ಯೂಷನ್ ಪ್ರಕಾರ ನಿಮಗೇನು ಅಧಿಕಾರವಿದೆ ಎಂದೂ ಕೇಳಿದರು, ಹೀಗೆಲ್ಲಾ ಕೇಳುತ್ತಿರುವುದರಿಂದ ಇದರ ಬಗ್ಗೆ ತಕ್ಕ ಕ್ರಮ ತೆಗದುಕೊಳ್ಳಬೇಕು ಎಂದರೆ ಕಷ್ಟವಾಗುತ್ತದೆ. ಇಂತಹ ಕಷ್ಟ ಬಂದಿರುವುದರಿಂದ ಇದರ ಬಗ್ಗೆ ಸ್ಪಷ್ಟವಾಗಿ ಇಷ್ಟು ಹೇಳಬೇಕಾಗಿದೆ.

ಶ್ರೀ ಎಸ್. ಶಿವಪ್ಪ.—ನಿಮ್ಮ ನಿಸಹಾಯಕತೆಯನ್ನೂ ಅಶಕ್ತತೆಯನ್ನೂ ತೋರಿಸಿದ್ದೀರಿ. ಅದಕ್ಕೋಸ್ಕರ ಅದನ್ನು ಸಾಧನೆ ಮಾಡುವುದಕ್ಕೋಸ್ಕರ ಕಾನೂನಿನ ಬೆಂಬಲ ಬೇಕಾದರೆ ರಕ್ಷಣೆ ಪಡೆಯಲಿಕ್ಕೆ ಈ ಸಭೆ ಕೊಡುವುದು. May I know whether the Government is serious about it or they want to stage-manage the whole affair ? Why did they enact this drama ? How do they implement their intention ?

Mr. SPAEKER.—The hon. Member can raise this question in the General Debate. I cannot compel a Minister to give a particular answer. That is the constitutional position. Therefore the hon. Member can raise the point in the course of the debate on the Budget.

Sri D. B. KALMANKAR.—In view of the fact that serious allegations are being made by the Members of the Opposition in this House will the Government consider the feasibility of bringing a Bill and seeing that once for all the problem is solved ?

Mr. SPEAKER.—A reply is already given to Sri Sivappa's question.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಸಾರ್ವಜನಿಕ ಹಿತದೃಷ್ಟಿಯಿಂದ ಇದೇ ಪ್ರಶ್ನೆಯನ್ನು ನಾನು ಸರ್ಕಾರವನ್ನು ಕೇಳಿದಾಗ ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ಮುಖ್ಯಮಂತ್ರಿಗಳು ಪತ್ರವನ್ನು ಬರೆದಿದ್ದಾರೆ. 1947ರಿಂದ ಇಲ್ಲಿಯವರೆಗೂ ಯಾರು ಯಾರು ಮಂತ್ರಿಗಳಾಗಿದ್ದಾರೆ, ಯಾರು ಯಾರು ಉಪಮಂತ್ರಿಗಳಾಗಿದ್ದಾರೆ, ಯಾರು ಯಾರು ಮಾಜಿ ಮಂತ್ರಿಗಳು ಇದ್ದಾರೆ, ಅವರುಗಳು ಆಸ್ತಿಪಾಸ್ತಿಗಳ ಮೊದಲಿನಿಂದಲೂ ಏನು ಇದೆ, ಈಗ ಏನು ಇದೆ ಅದರ ಬಗ್ಗೆ ತನಿಖೆ ಮಾಡಲು ಒಂದು ಶಾಸನವನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಬಾರಿ ಪ್ರಯತ್ನ ಮಾಡಿದ್ದೇನೆ. ಅದರಲ್ಲಿ ಕಾನ್‌ಸ್ಟಿಟ್ಯೂಷನ್ ಡಿಫಿಕಲ್ಟೀಸ್ ಇರುವುದರಿಂದ ಎಲ್ಲಿಂದ ಸಹಕಾರ ದೊರೆಯುತ್ತಾ ಇಲ್ಲ. ಅದುದರಿಂದ ಅದು ತಯಾರಾಗಲಿಲ್ಲ. ಅದಕ್ಕೋಸ್ಕರ ಆ ಪ್ರಯತ್ನವನ್ನು ಕೈಬಿಟ್ಟಿದೆ.

Sri K. H. RANGANATH.—May I know whether Sri K. Hanumanthaiya has replied to the letter written to him on the 8th April 1968 ? If so, the contents of that may be made known.

Sri VEERENDRA PATIL.—I do not have the copy of the letter. But I can tell the hon. Member the gist of it. Both Sri K. Hanumanthaiya and Sri H. M. Channabasappa, in their reply, have raised questions regarding the constitutional or legal authority under which information was being called for.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಉತ್ತರ ಕೊಡುವಾಗ ಕೆಲವು ಜನ ಮಾತ್ರ ಕೊಟ್ಟಿದ್ದಾರೆ, ಕೆಲವು ಜನ ಆಕ್ಷೇಪಣೆ ಎತ್ತಿರುವುದರಿಂದ ಅಲ್ಲಿಗೆ ನಿಲ್ಲಿಸಿದ್ದೇವೆ ಎಂದು ಹೇಳಿದಿರಿ. ನಾನು ತಮ್ಮನ್ನು ಕೇಳುವುದು ಏನೆಂದರೆ ಅವರ ಮೇಲೆ ಯಾರು ಕೊಟ್ಟಿಲ್ಲವೋ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಕಾನೂನು ಬಲ ತೆಗೆದುಕೊಂಡು, ಅವರನ್ನು ಕೊಡುವಂತೆ ಒತ್ತಾಯ ಮಾಡಲಿಕ್ಕೆ ಸಾಧ್ಯವಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ.

ಶ್ರೀ ಎಂ. ನಾಗಪ್ಪ.—ತಾವು ಈಗಾಗಲೇ ಉತ್ತರ ಕೊಟ್ಟಿದ್ದೇನೆ ಎಂದು ಹೇಳಿದಿರಿ. ನಾನು ಸ್ಪಷ್ಟವಾಗಿ ತಮ್ಮನ್ನು ಕೇಳುತ್ತೇನೆ. ಹಿಂದಿರತಕ್ಕಂಥ ಮಾಜಿ ಮಂತ್ರಿಗಳ ಆಸ್ತಿಪಾಸ್ತಿಗಳ ಬಗ್ಗೆ ವಿವರಗಳನ್ನು ಕೊಡುವಂತೆ ಒತ್ತಾಯ ಮಾಡಲಿಕ್ಕೆ ಒಂದು ಕಾಯಿದೆಯನ್ನು ಈ ಸಭೆಯಲ್ಲಿ ತರಲಿಕ್ಕೆ ಸಾಧ್ಯ ಇದೆಯೇ, ಇದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ ಎನ್ನುವುದಕ್ಕೆ ಉತ್ತರ ಕೊಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಈಗ ನಮ್ಮ ಮುಂದಿರುವ ಪ್ರಶ್ನೆಗೂ ಮಾನ್ಯ ಸದಸ್ಯರು ಕೇಳುವಂಥಾ ಪ್ರಶ್ನೆಗೂ ಸಂಬಂಧವಿಲ್ಲ. ಮಾಜಿ ಮಂತ್ರಿಗಳ ಬಗ್ಗೆ ಏನಾದರೂ ಒಂದು ಕಾನೂನು ತರಬೇಕೆಂದು ಕೇಳಿದ್ದಾರೆ. ಮಂತ್ರಿಗಳಿಗೇ ಆಗಲಿ, ಅಸೆಂಬ್ಲಿ ಸದಸ್ಯರುಗಳಿಗೇ ಆಗಲಿ ಕಾನೂನು ತರಬೇಕಾದರೆ ಅದು ಪ್ರತ್ಯೇಕ ಪ್ರಶ್ನೆ ಆಯಿತು.

1–30 P.M.

Sri A. R. BADRINARAYAN.—Will the Government explore the ways and means of securing this information effectively in a legal manner ?

Mr. SPEAKER.—This question was answered though not to the satisfaction of the hon. Member who put it.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಹಿಂದೆ ಇದ್ದ ಮುಖ್ಯ ಮಂತ್ರಿಗಳು ಈ ವಿಷಯ ಪ್ರಸ್ತಾಪ ಮಾಡಿದಾಗ ಸಭೆಯಲ್ಲಿ ಏನು ಭರವಸೆಯನ್ನು ಕೊಟ್ಟಿದ್ದರು ಎನ್ನುವುದನ್ನು ನಾನು ನೋಡಿಲ್ಲ ಎಂದು ಮುಖ್ಯ ಮಂತ್ರಿಯವರು ಹೇಳಿದರು. ಅವರು ಕೊಟ್ಟಿದ್ದಂಥ ಭರವಸೆಯನ್ನು ನೋಡಿ ಅವರು ಏನಾದರೂ ಹೇಳಿದ್ದಕ್ಕೆ ಮಾನ್ಯತೆ ಕೊಡಬೇಕು. ಅದನ್ನು ನಡೆಸತಕ್ಕ ಜವಾಬ್ದಾರಿ ಸರ್ಕಾರದ್ದು ಎಂದು ಅವರು ಭಾವಿಸುವುದಾದರೆ, ಈ ಪ್ರಶ್ನೆಯ ಬಗ್ಗೆ ಏನು ಮಾಡಬೇಕು ಎನ್ನುವುದನ್ನೆಲ್ಲ ಆಲೋಚನೆ ಮಾಡುವುದಕ್ಕೋಸ್ಕರ ಈ ಸಭೆಯ ಟೇಬಲ್ ಮೇಲೆ ಏನೇನು ಮಾಹಿತಿಯನ್ನು ಒದಗಿಸಿದ್ದಾರೋ ಅದನ್ನೆಲ್ಲ ಇಟ್ಟು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೋ ಇಲ್ಲವೋ ?

ಶ್ರೀ ವೀರೇಂದ್ರ ಪಾಟೀಲ್.—ನನಗಿಂತಲೂ ಪೂರ್ವದಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಈ ಸಭೆಗೆ ಭರವಸೆಯನ್ನು ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅವರು ಏನು ಭರವಸೆ ಯನ್ನು ಕೊಟ್ಟಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಒಂದು ವೇಳೆ ಮಾನ್ಯ ಸದಸ್ಯರ ಹತ್ತಿರ ಪ್ರೊಸೀಡಿಂಗ್ಸ್ ಕಾಪಿ ಇದ್ದರೆ, ಅದನ್ನು ಓದಿದ್ದರೆ ಅವರು ಏನು ಭರವಸೆ ಕೊಟ್ಟಿದ್ದಾರೆನ್ನುವುದು ಗೊತ್ತಾಗುತ್ತಿತ್ತು. ಮಾನ್ಯ ಸದಸ್ಯರು ಎರಡು ಮೂರು ಸಲ ಭರವಸೆ ಕೊಟ್ಟಿದ್ದರು ಎಂದು ಹೇಳುತ್ತ ಇರುವುದರಿಂದ ಅವರು ಏನು ಭರವಸೆ ಕೊಟ್ಟಿದ್ದಾರೆ ಎನ್ನುವುದನ್ನು ಪ್ರೊಸೀಡಿಂಗ್ಸ್ ತೆಗೆಸಿ ನೋಡಿ ಏನು ಕ್ರಮ ತೆಗೆದುಕೊಳ್ಳಬಹುದು ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಎನ್. ನಂಜೇ ಗೌಡ.—ಶ್ರೀ ಕೆ. ಹನುಮಂತಯ್ಯ ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರು ಕಾನೂನುಬದ್ಧವಾಗಿ ಒಂದು ವಿಚಾರಣಾ ಆಯೋಗವನ್ನು ನೇಮಿಸಿದರೆ ಅವರಿಗೆ ಆಸ್ತಿಪಾಸ್ತಿಗಳ ವಿವರಗಳನ್ನು ಒದಗಿಸುವುದಾಗಿ ಹೇಳಿಲ್ಲವೇ ? ಆ ದೃಷ್ಟಿಯಿಂದ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಶ್ರೀ ಹನುಮಂತಯ್ಯನವರಾಗಲೀ, ಶ್ರೀ ಚನ್ನಬಸಪ್ಪನವರಾಗಲೀ ಅಥವಾ ಯಾರೇ ಆಗಲೀ ಹೇಳಿದರು ಎಂದು ವಿಚಾರಣಾ ಆಯೋಗವನ್ನು ನೇಮಕ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಯಾರಾದರೂ ಸದಸ್ಯರು ಹೇಳುತ್ತಾರೆಂದು ಅದನ್ನು ತಕ್ಷಣವೇ ಮಾಡಬೇಕೆಂದಿಲ್ಲ. ಎಲ್ಲ ವಿಷಯಗಳನ್ನೂ ಸರ್ಕಾರ ಪರಿಶೀಲನೆ ಮಾಡಿ ಯಾವುದು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಬೇಕಾಗುತ್ತದೆ.

Electrification of Villages

231. Sri H. SIDDAVEERAPPA (Harihar).—

Will the Chief Minister be pleased to state :—

(a) the number of villages electrified in the State;

(*b*) whether there is any phased programme for rural electrification ;

(*c*) whether the Government is aware that a number of villages where rural electrification is provided, are cut off from power for non-payment of arrears to the Electrical Department ; if so, the number of villages thus cut off may be furnished ;

(*d*) whether Government has thought of remedying this defect by collecting the dues from the Village Panchayat and guarantee repayment to the Electricity Board ?

Sri D. PARAMESWARAPPA (Deputy Minister for Major Irrigation and Electricity).—

(*a*) 7,593 up to end of December 1968.

(*b*) Yes.

(*c*) (i) Yes.

(ii) About 935 villages to the end of December 1968.

(*d*) The matter is under examination.

Sri H. SIDDAVEERAPPA.—Supplementary to (*d*) : Since how long this matter is under the examination of the Government ?

† **Sri D. PARAMESWARAPPA.**—It is under the consideration of the Government since about 3 or 4 months.

Sri H. SIDDAVEERAPPA.—When are the Government likely to take a decision in the matter ?

Sri D. PARAMESWARAPPA.—As early as possible.

ಶ್ರೀ ಸದಾಶಿವಪ್ಪ ಪಾಟೀಲ್.—ಬಾಕಿ ಕೊಡಲಾರದ ಗ್ರಾಮಗಳಿಗೆ ವಿದ್ಯುತ್ತನ್ನು ಇಲಾಖೆಯವರು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಹೆಚ್ಚಾಗಿ ಚಿಂಚೋಳಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕಟ್ ಆಫ್ ಆಗಿದೆ ಎಂದು ತಿಳಿದು ಬಂದಿದೆ. ಡಿಸ್‌ಕನೆಕ್ಷನ್ ಮಾಡಿದ ಮೇಲೆ ಯಾರ ಸಿಫಾರ್ಸಿನ ಮೇಲೆ ಅಲ್ಲಿ ಎಲೆಕ್ಟ್ರಿಫಿಕೇಷನ್ ಮಾಡಿದರು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಇನ್‌ಸಿನ್ಯುಯೇಷನ್ ಮಾಡಿದ್ದಾರೆ ಅದು ದುರ್ದೈವದ ಸಂಗತಿ. ಅವರು ಹೇಳುವುದೇನೆಂದರೆ ಚಿಂಚೋಳಿ ಮುಖ್ಯ ಮಂತ್ರಿಗಳ ಚುನಾವಣಾ ಕ್ಷೇತ್ರ, ಅಲ್ಲಿ ಕೂಡ ಡಿಸ್‌ಕನೆಕ್ಷನ್ ಆಗಿದೆ ಎಂದು. ಮುಖ್ಯ ಮಂತ್ರಿಯವರ ಕ್ಷೇತ್ರವಿರಲಿ, ಬೇಕಾದವರದ್ದು ಇರಲಿ ಕಾನೂನು ಎಲ್ಲರಿಗೂ ಒಂದೇ. ಅದರ ಪ್ರಕಾರ ದುಡ್ಡು ಕೊಡದೆ ಇದ್ದರೆ ಎಲೆಕ್ಟ್ರಿಸಿಟಿ ಬೋರ್ಡಿನವರು ಕಟ್ ಆಫ್ ಮಾಡುತ್ತಾರೆ. ಚಿಂಚೋಳಿ ಕ್ಷೇತ್ರ ಮಾನ್ಯ ಸದಸ್ಯರಿಗೆ ಗೊತ್ತೇ ಇಲ್ಲ. ಅಲ್ಲಿ ಕಟ್ ಆಫ್ ಆಗಿದೆ ಎಂದು ಊಹೆ ಮಾಡಿರಬಹುದು. ಆ ರೀತಿ ಊಹೆ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಾಜ್ಯದಲ್ಲಿ ಎಷ್ಟು ಹಳ್ಳಿಗಳಿವೆ? ಅವುಗಳಲ್ಲಿ ಎಷ್ಟಕ್ಕೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ?

ಶ್ರೀ ಡಿ. ಪರಮೇಶ್ವರಪ್ಪ.—ಸುಮಾರು 27 ಸಾವಿರ ಹಳ್ಳಿಗಳಿವೆ. ಅದರ ಪೈಕಿ 7,593 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ.

ಶ್ರೀ ಎಸ್. ಶಿವಪ್ಪ.—ವಿದ್ಯುಚ್ಛಕ್ತಿ ಸರಬರಾಯಿ ನಿಲ್ಲದಂತೆ ಮಾಡಲು ಸರಕಾರದವರೇ ಹಳ್ಳಿಗಳ ಪರವಾಗಿ ಬಾಕಿ ಕೊಡುವಂತೆ ಏರ್ಪಾಡೇಕೆ ಮಾಡಬಾರದು ? ವಸೂಲಾದಮೇಲೆ ಏಕೆ ಬುಕ್ ಅಡ್‌ಜಸ್ಟ್‌ಮೆಂಟ್ ಮಾಡಿಕೊಳ್ಳಬಾರದು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಈ ವಿಚಾರವನ್ನು ಈಗಾಗಲೇ ಪರಿಶೀಲನೆ ಮಾಡಲಾಗಿದೆ. ಈಗ ವಿಲೇಜ್ ಅಕೌಂಟೆಂಟನ್ನು ಎಲ್ಲ ಕಡೆಯೂ ನೇಮಕ ಮಾಡಲಾಗುತ್ತದೆ. ಅವರು ಪಂಚಾಯಿತಿ ಬಾಕಿ ವಸೂಲುಮಾಡಬೇಕೆಂದು ನಿರ್ಣಯವಾಗಿದೆ. ಅದಕ್ಕೆ ಸಂಬಂಧಪಟ್ಟ ಮಸೂದೆ ಮಾನ್ಯ ಸಭೆಯ ಮುಂದೆ ಬರುತ್ತದೆ. ಅದರಲ್ಲಿ ವಿದ್ಯುಚ್ಛಕ್ತಿ ಬಾಕಿ ಹಣ ಕೊಡಲು ಅವಕಾಶವಾಗುವಂತೆ ಮಾಡಿದೆ. ಆ ಬಿಲ್ಲು ಜಾರಿಗೆ ಬಂದಮೇಲೆ ಈಗಿರುವ ತೊಂದರೆ ಮುಂದೆ ಬರಲಾರದು.

ಶ್ರೀ ಎಂ. ನಾಗಪ್ಪ.—ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸಲಾಗಿದೆ? ಆ ವಿವರ ಜಾಸ್ತಿಯಾದರೆ ಅದನ್ನು ಟೇಬಲ್ ಮೇಲಿಡಲು ಸಾಧ್ಯವೇ?

Sri VEERENDRA PATIL.—The break-up of 935 villages is not before us at the moment; but it is very difficult to collect the information and place it on the Table of the House. Within a day or two this information will be made available to the members.

Electrification of Villages

414. Sri L. S. NAYAK (Gokak).—

Will the Chief Minister be pleased to state :—

(a) the number of villages in Belgaum District that have been electrified and the number of villages that will be electrified in future ;

(b) the number of electric pump sets supplied to the said district and whether the said pump sets will be distributed on talukwise basis or depending upon the irrigation facilities ?

Sri D. PARAMESWARAPPA (Deputy Minister for Major Irrigation and Electricity).—

(a) 119 villages up to December, 1968.
34 villages will be electrified during 1968-69.

(b) 1,645 pump sets will be supplied during 1968-69.
They will be distributed depending upon the irrigation facilities.

ಶ್ರೀ ಎಲ್. ಎಸ್. ನಾಯಕ್.—ಬೆಳಗಾಂ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲೂ ಎಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಸಲಾಗಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿದೆಯೇ?

ಶ್ರೀ ಡಿ. ಪರಮೇಶ್ವರಪ್ಪ.—ಸಾಧ್ಯವಿದೆ.

ಶ್ರೀ ಎಲ್. ಎಸ್. ನಾಯಕ್.—ಹಾಗಾದರೆ ಅದನ್ನು ಹೇಳುತ್ತೀರಾ?

Sri D. PARAMESWARAPPA.—The breakup is as follows :—

Athani	...	4
Belgaum	...	15
Chikkodi	...	28
Gokak	...	12
Soundatti	...	3
Khanapur	...	12
Ramdurg	...	16
Sampgaon	...	13

ಶ್ರೀ ಎಲ್. ಎಸ್. ನಾಯಕ್.—ಹೋದ ಬಡ್ಜೆಟ್‌ನಲ್ಲಿ ಈ ಮೂರು ಗ್ರಾಮಗಳು ಸೇರಿಸಿದ್ದರೂ ಪೂರ್ತಿಯಾಗಿಲ್ಲ, ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ಪರಮೇಶ್ವರಪ್ಪ.—ಆದಷ್ಟು ಜಾಗ್ರತೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀಮತಿ ಚಂಪಾಬಾಯಿ ಭೋಗಳೆ.—ಅಥಣಿ ತಾಲ್ಲೂಕಿನಲ್ಲಿ ಯಾವ ಯಾವ ಊರಿಗೆ ಕೊಟ್ಟಿದ್ದೀರಿ ?

ಶ್ರೀ ಡಿ. ಪರಮೇಶ್ವರಪ್ಪ.—ಆ ಸಮಾಚಾರ ನನ್ನ ಹತ್ತಿರ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

Fixing of Sugar Price

243. Sri T. R. SHAMANNA (Fort).—

Will the Minister of State for Food and Civil Supplies be pleased to state :—

(*a*) the policy regarding fixing up sugar rate to Ration Card holders;

(*b*) the reason for raising the rate to Rs. 1.90 per kg. and the basis on which it was lowered to Rs. 1.75 per kg. ?

Sri B. VITHALDAS SHETTY (Minister of State for Food and Civil Supplies).—

(*a*) The local issue price of levy sugar depends on the ex-factory prices of levy sugar fixed by the Government of India, payment of transportation charges, octroi charges, and wholesale and retailers' margin, administrative charges, etc., on a no-profit no-loss basis as far the State Government is concerned.

(*b*) Due to an increase in the ex-factory price and the general increase in the incidental expenditure. The price has since been reduced consequent on the reduction of ex-factory prices by the Government of India.

Sri T. R. SHAMANNA.—May I know from the Hon. Minister what is the price of local sugar at ex-factory rate and what is the margin of profit that the Government is making ?

Mr. SPEAKER.—The answer is very clear; it is 'no profit–no loss, so far as Government is concerned ?

Sri B. VITHALDAS SHETTY.—No profit is made.

Sri T. R. SHAMANNA.—Is it not a fact that the wholesale dealer has to credit to the Government Rs. 9.32 per quintal of sugar ?

Sri B. VITHALDAS SHETTY.—Yes, Sir it is a fact.

Sri T. R. SHAMANNA.—Is it not profit ?

Sri B. VITHALDAS SHETTY.—It is not profit; it is for incidental and other charges.

Sri K. H. RANGANATH.—What is the incidental charge that the Government is incurring per quintal of sugar ?

Sri B. VITHALDAS SHETTY.—For standard sugar, ex-factory price is Rs. 161, additional price differential is 30 paise, ex-factory prics for 30 grade sugar is Rs. 161.30, Octroi Rs. 1-61, handling chargee 21 paise, wholesale margin is Re. 1, total cost is Rs.164-11 and the difference between wholesale issue price exclusive of transport charges is Rs. 8.89.

ಶ್ರೀ ಸದಾಶಿವಪ್ಪ ಪಾಟೀಲ್.—ಒಂದು ಕ್ವಿಂಟಾಲ್‌ಗೆ ಪಿ. ಡಿ. ಅಕೌಂಟಿಗೆ ಎಷ್ಟು ರೊಕ್ಕ ಜಮಾ ಮಾಡುತ್ತೀರಿ ದಯವಿಟ್ಟು ತಿಳಿಸಬೇಕು, ಮತ್ತು ಮೇಲಾಗಿ ಮೊನ್ನೆಯೇ ಸಕ್ಕರೆಗೆ ಅಕ್ಟ್ರಾಯಿ ಹಾಕಬಾರದು ಎಂದು ಸರ್ಕ್ಯುಲರ್ ಜಾರಿ ಮಾಡಿದ್ದೀರಿ.

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಎರಡು ಜೋನ್ ಇದೆ. ಎಕ್ಸ್ ಫ್ಯಾಕ್ಟರಿ ಪ್ರೈಸ್ ಫಸ್ಟ್ ಜೋನ್‌ನಲ್ಲಿ ಒಂದು ಕ್ವಿಂಟಾಲಿಗೆ 145 ರೂಪಾಯಿ ಇದೆ. ಸೆಕೆಂಡ್ ಜೋನ್‌ನಲ್ಲಿ 161 ರೂಪಾಯಿ ಇದೆ. ಸೆಕೆಂಡ್ ಜೋನ್ ಅವರು ಹೈಕೋರ್ಟಿಗೆ ಹೋದಾಗ ಫಸ್ಟ್ ಮತ್ತು ಸೆಕೆಂಡ 'ಜೋನ್'ನಲ್ಲಿ ಒಂದೇ ಪ್ರೈಸ್ ಇರಬೇಕೆಂದು ಒಂದು ಇಂಟರಿಂ ಆರ್ಡರ್ ಮಾಡಿದರು.

ಶ್ರೀ ಎನ್. ಎ. ಚನ್ನೇಗೌಡ.—190 ಪ್ರೈಸ್ ಇಷ್ಯೂ ಪ್ರೈಸ್ ಆಗುವುದಕ್ಕಿಂತ ಮುಂದೆ ರಾಜ್ಯದ ಒಂದು ಸಹಕಾರ ಸಂಸ್ಥೆಯು ಕಾರ್ಖಾನೆಯಲ್ಲಿ ಉತ್ಪನ್ನವಾದ ಸಕ್ಕರೆಯನ್ನು ಕ್ವಿಂಟಾಲ್ ಒಂದಕ್ಕೆ 400 ರೂಪಾಯಿನಂತೆ ಕೊಂಡುಕೊಂಡದ್ದರಿಂದ ಆ ನಷ್ಟವನ್ನು ತುಂಬಿಸುವುದಕ್ಕೆ ಬೆಲೆಯನ್ನು ಹೆಚ್ಚಿಸಲಿಲ್ಲವೆ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಇಲ್ಲ. 190 ಪ್ರೈಸ್ ಮಾಡುವುದಕ್ಕೆ ಮೊದಲು ಫಸ್ಟ್‌ಜೋನ್ ಷುಗರ್ 145 ರೂಪಾಯಿ ಇತ್ತು. ಸೆಕೆಂಡ್ ಜೋನ್ ಷುಗರ್ 165 ರೂಪಾಯಿ ಇತ್ತು. ಸೆಕೆಂಡ್ ಜೋನ್‌ನವರು ಹೈಕೋರ್ಟಿಗೆ ಹೋದರು. ಹೈಕೋರ್ಟಿನವರು ಯೂನಿಫಾರಂ ರೇಟ್ ಇರಬೇಕೆಂದು ಇಂಟರಿಂ ಆರ್ಡರ್ ಮಾಡಿದರು. ಆ ಪ್ರಕಾರ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿರತಕ್ಕ ಪ್ರಕಾರ ಮಾಡಿದ್ದರಿಂದಾಗಿ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಮತ್ತು ಬೇರೆ ಚಾರ್ಜಸ್ ತೆಗೆದುಕೊಂಡರೆ ಒಂದಕ್ಕೊಂದು ತಾರತಮ್ಯ ಜಾಸ್ತಿಯಾಗಿ ಎಲ್ಲಿ ಕಡಿಮೆಯಾಗಬೇಕೋ ಅಲ್ಲಿ ಕಡಿಮೆಯಾಗುವುದಕ್ಕೆ ಬದಲಾಗಿ ಜಾಸ್ತಿಯಾಗುತ್ತಾ ಇದೆ ಎಂಬುದು ತಮಗೆ ಗೊತ್ತೇ ಹೇಗೆ? ಮೈಸೂರು ರಾಜ್ಯದಲ್ಲಿ ಮಂಡ್ಯ ಮತ್ತು ಬೇರೆಕಡೆಗಳಲ್ಲಿ ಕಡಿಮೆ ಮಾಡಿ ಕಡಿಮೆ ಬೆಲೆಗೆ ಕೊಡುವುದಕ್ಕೆ ಸಾಧ್ಯವಿಲ್ಲವೇ ? ಅದರ ಬಗ್ಗೆ ಸರ್ಕಾರದ ಧೋರಣೆ ಏನು ? ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ತಿಳಿಸಿದ್ದೀರಾ ?

Sri B. VITHALDAS SHETTY.—It is a good suggestion and Government will consider it.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಲೆವಿ ಮೂಲಕ ಒಂದು ಕ್ವಿಂಟಾಲ್ ಸಕ್ಕರೆಯನ್ನು ಯಾವ ಬೆಲೆಯಲ್ಲಿ ಪಡೆದುಕೊಂಡಿದ್ದೀರಿ ? ಆ ರೀತಿ ಪಡೆದುಕೊಂಡರೂ ಇದನ್ನು ಯಾವ ಬೆಲೆಯಲ್ಲಿ ಮಾರಾಟಮಾಡುತ್ತೀರಿ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಪರ್ಟಿಕ್ಯುಲರ್ಸ್ ಬೇಕಾದರೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಎನ್. ಶ್ರೀಕಂಠಯ್ಯ.— ಬೆಲ್ಲದ ಧಾರಣೆಯನ್ನು 200ರೂಪಾಯಿಗಳಿಂದ 50ರೂಪಾಯಿಗಳಿಗೆ ಇಳಿಸಿರುವಾಗ, ಸಕ್ಕರೆಯ ಬೆಲೆಯನ್ನು 4ರೂಪಾಯಿ ಚಿಲ್ಲರೆಯಷ್ಟೇ ಇಟ್ಟುಕೊಂಡಿದ್ದೀರಿ. ಆದ್ದರಿಂದ ಸಕ್ಕರೆಯ ಬೆಲೆಯನ್ನೂ ಸಹ ಇಳಿಸುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಸಕ್ಕರೆ ಧಾರಣೆಯನ್ನು ಇಳಿಸುವುದು, ಏರಿಸುವುದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟದ್ದಲ್ಲ. ಅದು ಇಡೀ ದೇಶಕ್ಕೇ ಸಂಬಂಧಪಟ್ಟದ್ದು. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು. ಆದರೂ ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರದವರು ಪರಿಶೀಲಿಸುತ್ತಾರೆ.

Mr. SPEAKER.–There are 15 more questions to be put. I am trying to get answers to as many of them as possible. Sugar may be sweet, but talk about sugar may not be sweet !

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಮಂತ್ರಿಗಳು ಉತ್ತರ ಹೇಳಿರುವ ಪ್ರಕಾರ ಒಂದು ಕ್ವಿಂಟಾಲ್ ಸಕ್ಕರೆಗೆ 8ರೂ 89ಪೈಸೆಯಷ್ಟು ಸರ್ಕಾರದವರು ಲಾಭ ಪಡೆಯುತ್ತಿದ್ದಾರೆ. ವ್ಯಾಪಾರಸ್ಥರು ಕೇವಲ 2–3ರೂಪಾಯಿಗಳ ಲಾಭ ಇಟ್ಟುಕೊಂಡು ಮಾರುತ್ತಾರೆ. ಇದರಿಂದ ಸರ್ಕಾರದವರು ಬ್ಲಾಕ್‌ಮಾರ್ಕೆಟ್ ಮಾಡುತ್ತಿದ್ದಾರೆಂದು ಗೊತ್ತಾಗುವುದಿಲ್ಲವೇ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಸರ್ಕಾರದವರು ಲಾಭ ಪಡೆಯುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ. ಸರ್ಕಾರದವರು ಯಾವ ಲಾಭವನ್ನೂ ಪಡೆಯುವುದಿಲ್ಲ. ನಷ್ಟವನ್ನೂ ಪಡೆಯುವುದಿಲ್ಲ. ಮಾನ್ಯ ಸದಸ್ಯರು ಸರ್ಕಾರದವರು ಬ್ಲಾಕ್ ಮಾರ್ಕೆಟ್ ಮಾಡುತ್ತಿದ್ದಾರೆಂದು ಹೇಳುವುದು ಅದು ಬೇರೆ ಪ್ರಶ್ನೆ. ಈ ಪ್ರಶ್ನೆಯಲ್ಲಿ ಅದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ.

Reports on Administrative Reforms

249. Sri H. PUTTADASA (Sathnoor).—

Will the Minister for Finance, Planning and Youth Welfare be pleased to state :—

(*a*) the dates on which the following reports were presented to Government : —

(i) Sri A. G. Ramachandra Rao's Committee Report.
(ii) Sri A. D. Gorwala Report.

(*b*) the total amount spent in respect of them ;

(*c*) the extent to which the proposals made by them have been put into action ?

Sri K. PUTTASWAMY (Minister for Law, Labour and Parliamentary Affairs) [On behalf of SRI RAMAKRISHNA HEGDE (Minister for Finance, Planning and Youth Welfare)].—

(*a*) (i) Sri A. G. Ramachandra Rao's Committee Report was presented to Government on 14th March 1962.

(ii) Sri A. D. Gorwala's Report was presented to Government on 11th May 1958.

(*b*) This information had been furnished to the Legislature during its session in previous years. This is, however, not readily available.

Except under T. A. no expenditure was incurred in the case of Sri Gorwala's report.

(*c*) The recommendations of Gorwala Committee were general in character and they have been accepted in principle wherever feasible.

As regards Sri A. G. Ramachandra Rao's Committee, 412 recommendations were made and most of them have been accepted to the extent feasible. Two booklets of detailed action taken were also placed before the Legislature. A few of the recommendations, numbering

(SRI K. PUTTASWAMY)

34, which were either not considered or rejected have been considered by Justice Tukol Pay Commission in report given by the Commission recently.

ಶ್ರೀ ಎಚ್. ಪುಟ್ಟದಾಸ.—ಶ್ರೀ ಎ. ಜಿ. ರಾಮಚಂದ್ರರಾವ್ ಅವರ ಸಮಿತಿಯ ವರದಿ ಮತ್ತು ಶ್ರೀ ಎ. ಡಿ. ಗೋರ್‍ವಾಲಾ ಅವರ ವರದಿಗಳ ಬಗ್ಗೆ ವೆಚ್ಚಮಾಡುವಾಗ ಶ್ರೀ ಗೋರ್‍ವಾಲಾ ವರದಿಯ ಸಂಬಂಧದಲ್ಲಿ ಪ್ರವಾಸ ಭತ್ಯದ ಹೊರತು ಬೇರೆ ಯಾವ ವೆಚ್ಚವನ್ನು ವಹಿಸಿರುವುದಿಲ್ಲವೆಂದು (ಆ) ಪ್ರಶ್ನೆಗೆ ಉತ್ತರವಾಗಿ ತಿಳಿಸಿದೆ. ಆದ್ದರಿಂದ ವೆಚ್ಚ ಎಷ್ಟು ಎಂಬುದಾಗಿ ತಿಳಿಸುತ್ತೀರಾ ?

Sri K. PUTTASWAMY.—Hon'ble Member seems to be mistaking the answer given in respect of Gorwala's Report for A. G. Ramachandra Rao's Report. In reply to (b), it is clearly stated that except under T. A. no expenditure was incurred in the case of Sri Gorwala's report. As far as expenditure incurred on Sri A. G. Ramachandra Rao's report is concerned, that information seems to have been supplied once before in the Assembly. Though I searched for it, I was not able to get that information because it relates to a matter which is sufficiently old and so we are not able to collect the information.

Mr. SPEAKER.—The hon. Member wants the total amount of T. A. paid to Gorwala.

Sri K. PUTTASWAMY.—That information I was not able to get.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಎ. ಜಿ. ಆರ್ ವರದಿಯ ಬಗ್ಗೆ ಇಷ್ಟು ಹಣ ಖರ್ಚಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲವೇ ?

(ಉತ್ತರವಿಲ್ಲ)

ಶ್ರೀ ಎಚ್. ಪುಟ್ಟದಾಸ.—ಈ ಎರಡು ಸಮಿತಿಗಳಲ್ಲದೆ ಆಡಳಿತ ಸುಧಾರಣೆಯ ಬಗ್ಗೆ ಸಲಹೆಗಳನ್ನು ಕೊಡಲು ಬೇರೆ ಯಾವುದಾದರೂ ಸಮಿತಿಯನ್ನು ನೇಮಿಸಿದ್ದೀರಾ ? ಅಥವಾ ಯಾರಾದರೂ ಅಧಿಕಾರಿಗಳಿಗೆ ಇದರ ಬಗ್ಗೆ ಆದೇಶವನ್ನು ಕೊಟ್ಟಿದ್ದೀರಾ ? ಇದುವರೆಗೂ ಕೊಟ್ಟಿರತಕ್ಕಂಥ ಸಲಹೆಗಿಂತ ಉತ್ತಮ ಸಲಹೆ ಬೇರೆ ಆಫೀಸರಿಂದ ಬರುತ್ತದೆಂದು ತಿಳಿದಿದ್ದೀರಾ ?

Sri K. PUTTASWAMY.—Only yesterday the Finance Minister was telling the House that the Government have gone on appointing Committee, and getting Reports. But if the Hon. Member tells me about the period, then I think, if it is possible, I will give it.

Sri S. SIVAPPA.—The total amount spent on these Committees is the specific question. The answer is that this information had been furnished to the Legislature during its session in previous years and this is however not readily available. Are you satisfied with this answer ?

Sri K. PUTTASWAMY.—I again submit to this House that information is not available and so we have given that answer.

Sri S. SIVAPPA.—Are we to be satisfied with this kind of answer that information has been furnished to the Legislature. What does it mean ?

(No answer)

Sri AZIZ SAIT.—A. D. Gorwala report was presented to the Government on 11th May 1958. The Government is in a position to say that so far as that report was concerned, no expenses other than T. A. has been incurred. A. G. Ramachandra Rao's Report was presented in 1962, *i. e.,* 4 years later but the Government are pleased to say that the information is not readily available. I want to ask whether that is the kind of administration of the Government? What does the Minister say?

Sri K. PUTTASWAMY.—I have already submitted to the House that I have tried to make a search of even the answers that have been furnished to this House. I was not able to get them. Therefore whatever information was available with the Government, the Government have been able to supply to this Hon'ble House. If we get any further information, I feel it my obligation to place it before the House.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ಎ. ಜಿ. ಆರ್. ಶಿಫಾರಸುಗಳಾದ 412ರಲ್ಲಿ ಹಿಂದಿನ ಸರ್ಕಾರ ಎಷ್ಟು ಕಾರ್ಯಗತ ಮಾಡಿದೆ, ನಿವ್ವು ಈಗಿನ ಸರ್ಕಾರ ಎಷ್ಟು ಮಾಡಿದೆ?

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ಕರಾರುವಕ್ಕಾಗಿ ಎಷ್ಟು ಕಾರ್ಯಗತ ಮಾಡಿದೆ, ಮಾಡಿಲ್ಲ ವೆಂಬುದು ಹೇಳುವುದಕ್ಕಾಗುವುದಿಲ್ಲ. ಅವರು ಮಾಡಿದ ಅನೇಕ ಶಿಫಾರಸುಗಳನ್ನು ಸರ್ಕಾರದ ವರು ಒಪ್ಪಿಕೊಂಡಿದ್ದಾರೆ. ಒಪ್ಪಿಕೊಳ್ಳುವ ಸಮಯದಲ್ಲಿ ಎಷ್ಟು ಮಟ್ಟಿಗೆ ಒಪ್ಪಿಕೊಳ್ಳಲು ಸಾಧ್ಯ ವಾಗಿದೆ, ಅಷ್ಟು ಮಟ್ಟಿಗೆ ಒಪ್ಪಿಕೊಳ್ಳಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಸಂಬಂಧಪಟ್ಟ ಅಂಕಿಅಂಶಗಳನ್ನು ಸಂಬಂಧಪಟ್ಟ ಮಂತ್ರಿಗಳಿಲ್ಲದಿರುವುದರಿಂದ, ಇವರಿಗೆ ಕೊಡಲು ಸಾಧ್ಯವಾಗದೆ ಇರಬಹುದು. ಆದ್ದರಿಂದ ಇದನ್ನು ಮತ್ತೊಮ್ಮೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

Mr. SPEAKER.—The Hon. Minister will try to find out the information and place it on the Table of the House, the moment he gets it.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಸೆಶನಿನಲ್ಲಿ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಹೇಳಬೇಕು, ಸ್ವಾಮಿ.

Sri K. PUTTASWAMY.—I have already submitted to this House that we have tried our best to give this information and it was not possible. I tried even to know when exactly the question was answered by the Government on the floor of this House. Even that information I was not able to get. I shall try my level best and find out whether we can get information and supply it to this Hon. House.

Sri D. B. KALMANKAR.—What were those 34 recommendations which were either rejected or not conceded?

Sri K. PUTTASWAMY.—In answer to (c), the hon. Member will kindly see that two booklets of detailed action taken were also placed before this House.

Sri M. RAMAPPA.—Can the Minister tell this House two or three important recommendations regarding efficiency of administration which were accepted by the Government and whether they have fixed up the workload regarding the various categories of officers as a result of accepting those recommendations?

Sri K. PUTTASWAMY.—What I think important or what the Government feels important, the hon. Member may not feel that it is as important as we feel. But the Government have fixed a workload for several officers and that is being carried out.

Sri M. RAMAPPA.—What is the workload fixed by the Government as a result of this report?

Sri K. PUTTASWAMY.—The question is so ambiguous that answer cannot be supplied.

ಶ್ರೀ ಅಜೀಜ್ ಸೇಟ್.—ಕಾರ್ಪೋರೇಷನ್‌ನಲ್ಲಾಗಲೀ, ತಾಲ್ಲೂಕು ಬೋರ್ಡ್‌ನಲ್ಲಾಗಲೀ, ಪಂಚಾಯತಿಯಲ್ಲಾಗಲೀ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟ ಹಾಗೆ ಉತ್ತರ ಕೊಟ್ಟರೆ ಅದನ್ನು ಸೂಪರ್ ಸೀಡ್ ಮಾಡಬೇಕೆಂದು ನೋಟೀಸ್ ಕೊಡುತ್ತೇವೆ. ಅದೇ ರೀತಿ ಮಂತ್ರಿಗಳನ್ನು ಯಾತಕ್ಕೆ ತೆಗೆದು ಹಾಕಬಾರಧು ? (ನಗು)

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Shortage of Electrical Materials

89. **Sri S. JAYAPRKASH SHETTY** (Brahmavar)—

Will the Chief Minister be pleased to state :—

(*a*) whether it is a fact that there is shortage of materials required for the supply of electricity which is in abundance in Mysore State;

(*b*) the cost of electrical materials supplied to the various districts of the State;

(*c*) whether it has come to their notice that there may be benefit, only if I. P. sets are supplied to tanks and wells in large number in South Kanara District as there is no facility to undertake major and medium irrigation projects there;

(*d*) in view of this whether it is possible to supply electrical materials to South Kanara District in large quantity?

Sri VEERENDRA PATIL (Chief Minister).—

(*a*) No.

(*b*) Mysore State Electricity Board has sanctioned Rs. 1,119 lakhs for purchase of materials for its capital works' programme of 1968-69; Districtwise figures are not worked out.

(*c*) No.

(*d*) Subject to availability of funds, this will be considered.

Lorry hire Charges

266. Sri B. P. GANGADHAR (Tumkur).—

Will the Minister for Public Works be pleased to state :—

(*a*) whether the lorry hire charges in Public Works Department has been raised with effect from 1st April 1968 ;

(*b*) whether the hire charges are ordered to be recovered with effect from 1st April 1968 while the Government Order is communicated during May or June, 1968 to the Departmental authorities ;

(*c*) whether the hire charges have been recovered fully from the contractors or any balance is left over in Tumkur District ;

(*d*) whether it is not for the Superintending Engineers to revise the current schedule rates as soon as the hire charges are increased ; if so, the action taken by the Superintending Engineers in this regard ?

Sri K. LAKKAPPA (Minister for Public Works).—

(*a*) Yes.
(*b*) Yes.
(*c*) Not fully recovered.
(*d*) Need not necessarily be revised.

Kabini Project

278. Sri D. M. SIDDAIAH (Biligere).—

Will the Chief Minister be pleased to state :—

(*a*) whether the Chief Minister visited the Kabini Project recently to inspect the progress of work done so far ;

(*b*) the progress of work done so far, the amount spent up to 31st December 1968, the total estimated cost of the project ;

(*c*) when the work of this project was started and the allotment every year towards the construction of the project up till now ;

(*d*) whether the Chief Minister while briefing the Press after the inspection of the project said that the work will go on as per schedule ; that is work worth of Rs. 60 lakhs per year as is being done during the year ;

(*e*) if so, the number of years it will take to complete the project ;

(*f*) whether according to the agreement of 1924 between the Governments of Mysore and Madras is it not necessary that the work should be completed by about 1974, if not, whether re-allocation of water as per the revised agreement would affect the interests of the State of Mysore ;

(SRI D. M. SIDDAIAH)

(*g*) whether Government, in view of the seriousness of the situation have thought of directing its authorities to pull up resources by adopting methods like stopping of the construction of bridges and buildings and taking up the new roads and such other methods to meet the demand for the irrigation projects ?

Sri VEERENDRA PATIL (Chief Minister).—

(*a*) Yes. On 3rd December 1968.

(*b*) (i) The excavation for foundation and concreting for masonry dam is almost completed. The construction of masonry is in progress. About 40 per cent of the earthen embankment has been laid and other works are in progress.

(ii) Rs. 383·32 lakhs up to end of December 1968.

(iii) The total estimated cost is Rs. 2,480 lakhs.

(*c*) (i) During December 1959.

(ii)

Year.		Rs. in lakhs.
1958-59	...	5.25
1959-60	...	25.50
1960-61	...	25.79
1961-62	...	24.00
1962-63	...	33.00
1963-64	...	37.72
1964-65	...	39.29
1965-66	...	56.50
1966-67	...	47.00
1967-68	...	66.27
1968-69	...	60.00

(*d*) Work will go on as scheduled and more funds may be provided, if available.

(*e*) Time of completion depends on the availability of funds.

(*f*) No.

(*g*) A Committee of the Members of the Legislature is being constituted to study this aspect.

Withdrawal of Levy Cases

291. Sri P. B. NANDIHALI (Uchgaon).—

Will the Minister of State for Food and Civil Supplies be pleased to state :—

(*a*) whether any levy cases have been filed against the farmers in Belgaum taluk ; if so, the number of farmers involved ;

(b) whether any promise was made by the Hon'ble Minister to withdraw the levy cases ;

(c) if so, the steps Government propose to take to withdraw the levy cases ?

SRI B. VITHALDAS SHETTY (Minister of State for Food and Civil Supplies).—

(a) Yes ; 29 cases.

(b) No.

(c) Government have decided to withdraw the levy cases launched against the growers, who subsequent to the filing of prosecutions have paid full quantum of levy due from them, depending on the merits of each case.

Construction of Bridge at Panjattur

302. SRI B. BHASKARA SHETTY (Kaup).—

Will the Minister for Public Works be pleased to state :—

(a) when the construction work of the bridge at Panjattur in Udipi taluk, South Kanara District was started ;

(b) when the said construction work of the bridge was cancelled and the reason for the same ;

(c) whether it has come to their notice that the villagers and the representative of the said constituency are urging for the construction of the said bridge since 1962 ;

(d) whether they have prepared the estimated cost in respect of the construction of the said bridge ;

(e) if so, when the construction of the said bridge will be started ?

SRI K. LAKKAPPA (Minister for Public Works).—

(a) Not yet started.

(b) In August 1967.
Cancelled due to shortage of funds.

(c) Yes.

(d) Yes.

(e) Depends upon the Financial position.

Supply of Electricity to Irrigation Wells

304. Sri G. T. GOVINDA REDDY (Madhugiri).—

Will the Chief Minister be pleased to state :—

(*a*) whether it has come to their notice that the Electricity Board has stopped the supply of electricity to irrigation wells in Madhugiri taluk ;

(*b*) whether it has come to their notice that by so doing the agricultural programme of Government would come to a standstill ;

(*c*) the procedure followed to supply electricity to irrigation wells ?

Sri VEERENDRA PATIL (Chief Minister).—

(*a*) Yes.

(*b*) Yes.

(*c*) *Vide* circular placed on the Table of the House.*

Construction of School Building

314. Sri M. MALLAPPA (Birur).—

Will the Minister for Education be pleased to state :—

(*a*) whether the public of Birur are urging for the construction of a school building for the railway colony area and Kurubara Street in Birur Town ;

(*b*) whether any estimates and plans are prepared for the construction of the school building in the said area ;

(*c*) whether the Town Municipal Council, Birur has granted free sites for the construction of the said school building ;

(*d*) the action Government intend to take to expedite the construction of the said building in the said area in Birur Town ?

Sri K. V. SHANKARA GOWDA (Minister for Education).—

(*a*) Yes

(*b*) No.

(*c*) No.

(*d*) After receipt of the proposal the matter would be examined by the Government.

---

* Copy placed in the Mysore Legislature Library *Vide* No.

Fisheries Corporation

337. SRI B. M. IDINABBA (Mangalore).—

Will the Minister of State for Fisheries and Ports be pleased to state :—

(a) when the Fisheries Corporation will be started ;

(b) the number of official and non-official members in the said Corporation ;

(c) the total amount that will be invested in the said Corporation together with its programme ?

SRI H. C. LINGA REDDY (Minister of State for Fisheries and Ports).—

(a) This is under the consideration of the Government.

(b) Does not arise in view of the reply to clause (a).

(c) Does not arise.

Increase in Price of Rice

339. SMT. WINNIFRED F. FERNANDES (Coondapur).—

Will the Minister of State for Food and Civil Supplies be pleased to state :—

(a) whether it is a fact that the price of rice rose to Rs. 70–00 per Mura in South Kanara in general, and Coondapur Town in particular during September 1968 ;

(b) whether they are aware that this rise in price could have been avoided if the Government had opened Fair Price Shops to supply rice at controlled rates at least to the poorer and vulnerable sections of the society as was done during 1965 and 1966 ;

(c) whether they are aware of a suggestion made to the Hon'ble Minister of State for Food by the member of this House from Coondapur in a Memorandum presented to him at Coondapur in June 1968 ;

(d) if so, why no action was taken in the matter ?

SRI B. VITHALDAS SHETTY (Minister of State for Food and Civil Supplies).—

(a) Yes, in certain taluks like Sullia and Puttur, but not in Coondapur Town, where it was Rs. 63 to Rs. 65 per Mura.

(Sri B. Vithaldas Shetty)

(*b*) The opening of more Fair Price Shops would not have helped, as the issues of rice are limited by availabilities of stocks with Government, and in any case, this increase relates to the price of open market rice.

(*c*) Yes.

(*d*) Within the overall limitations of availability of rice, releases to Fair Price Shops were increased.

Taluk Board High Schools

343. Sri PRABHURAO JAGADALE (Hulsoor).—

Will the Minister for Education be pleased to state :—

(*a*) the steps taken to appoint qualified Science Teachers, and to provide equipments and playgrounds for Taluk Board High Schools in Bidar District ;

(*b*) the steps taken for the appointment of trained Head Masters in the Taluk Board High Schools in Bidar District ?

Sri K. V. SHANKARA GOWDA (Minister for Education).—

(*a*) and (*b*) It is the responsibility of the managements *i.e.*, Taluk Development Board to appoint qualified teachers and Head Masters and provide facilities such as playgrounds. Schools which do not satisfy the departmental rules will be closed.

Lift Irrigation in Buntwal Taluk

356. Smt. K. LEELAVATHI RAI (Buntawal).—

Will the Minister for Public Works be pleased to state :—

(*a*) whether the work of Lift Irrigation sanctioned in Buntawal Taluk since many years has been completed ;

(*b*) if not, the reasons therefor ?

Sri A. J. DODDAMETI (Minister of State for Minor Irrigation).—

(*a*) Yes.

(*b*) Does not arise in view of reply to clause (*a*).

Sugar Factory in Raichur District

365. Sri M. NAGAPPA (Raichur).—

Will the Minister for Industries, Information and Publicity be pleased to state :—

(a) whether there is any proposal before Government to start sugar factory in Raichur District, either in Public or private sector ;

(b) if so the state at which the scheme stands ?

Sri M. RAJASEKHARA MURTHY (Minister for Industries, Information and Publicity).—

(a) M/s. Shree Krishna Gyanoday Sugar Ltd., Calcutta have applied to the Government of India on 11-1-1969 for a licence to set up a sugar factory at Gangavati in Raichur District.

(b) It is being considered.

Point of Order.

re : Taking questions successively in the list of Questions

Sri M. NAGAPPA (Raichur).—I rise to a point of order. Under Rule 311, the Hon. Speaker has arbitrarily taken Question No. 159 of Sri H. N. Nanje Gowda which has been held over and according to the procedure, this should have been taken after all the questions are exhausted. But as per Rule 42, the questions should be taken up successively. Now these questions have been lost because the above-mentioned question was taken up earlier and because the Chair has not adopted the procedure laid down in rule 42.

The Speaker has no right to take up this question of Sri H. N. Nanje Gowda. As a result many questions which have been printed in the list have lapsed. The procedure adopted by the Hon. Speaker is wrong and against the rules of procedure of the House and therefore I submit that time may be extended and all the other questions be taken up as per rules.

2-00 P. M.

Mr. SPEAKER.—I have heard the hon. Member Sri Nagappa. I am sorry that I cannot accept the point of order raised by him. When Question No. 159 came up the hon. Chief Minister was not present and therefore I stated that question No. 159 would be taken up the moment the hon. Chief Minister comes to the House and in furtherance of that promise I took up that question. No objection was raised at that time by any hon. Member including the hon. Member Sri Nagappa. In view of this fact, I do not see any force in the point raised by the hon. Member Sri Nagappa.

Policy matters of Governmet discussed during Session period olsewhere

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ನಿನ್ನೆ ಮತ್ತು ಮೊನ್ನೆ ಬೆಂಗಳೂರಿನಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಈ ದೇಶದ ಮುಖ್ಯಮಂತ್ರಿಗಳು ಮತ್ತು ಇನ್ನೂ ಅನೇಕ ಮಂತ್ರಿಗಳೆಲ್ಲಾ ಸೇರಿ ಈ ಶಾಸನ ಸಭೆ 21ನೇ ತಾರೀಖಿನಿಂದ ಇಲ್ಲಿ ನಡೆಯುತ್ತಾ ಇರತಕ್ಕ ಕಾಲದಲ್ಲಿ ಅವರು ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಕುಳಿತುಕೊಂಡು ಈ ದೇಶದ ನೀರಾವರಿ ಮತ್ತು ವ್ಯವಸಾಯದ ಬಗ್ಗೆ ಸರ್ಕಾರದ ನೀತಿಯನ್ನು ಕುರಿತು ಮುಂದೆ ಏನೇನು ಮಾಡುತ್ತಾರೆ ಎನ್ನತಕ್ಕ ಎಲ್ಲಾ ವಿಚಾರಗಳನ್ನೂ ಕೂಡ ಪ್ರಸ್ತಾಪ ಮಾಡಿ ಚರ್ಚೆ ಮಾಡಿದ್ದಾರೆ. ಶಾಸನ ಸಭೆಗೆ ಕೊಡತಕ್ಕಂಥ ವಿಷಯಗಳನ್ನೆಲ್ಲಾ ಬದಿಗೊತ್ತಿ ಮುಂದೆ ಇವರು ಏನು ಮಾಡುತ್ತಾರೆ ಎನ್ನುವ ವಿಚಾರವನ್ನು ಶಾಸನ ಸಭೆಗೆ ಹೇಳತಕ್ಕಂಥ ವಿಚಾರವನ್ನು ಕಾಂಗ್ರೆಸ್ ಕಚೇರಿಯಲ್ಲಿ ಹೇಳಿದ್ದಾರೆ. ಶಾಸನ ಸಭೆಯ ಚರ್ಚೆಯನ್ನು ಹಿಂದಕ್ಕೆ ಹಾಕತಕ್ಕಂಥ ಒಂದು ಕೆಲಸವನ್ನು ಮಾಡಿದ್ದಾರೆ. ಇದು ಶಾಸನ ಸಭೆಗೆ ಅವಹೇಳನ ಮಾಡಿದಂತಾಗಿದೆ. ಇವರು ನಮಗೆ ಕೊಡತಕ್ಕ ವಿಚಾರವನ್ನು ಕಾಂಗ್ರೆಸ್ ಕಚೇರಿಯಲ್ಲಿ ಚರ್ಚೆ ಮಾಡಿರುವುದು ಇವೊತ್ತು ಪತ್ರಿಕೆಗಳಲ್ಲಿ ದೊಡ್ಡದಾಗಿ ಹಾಕಿದ್ದಾರೆ. ಈಗ ಶಾಸನ ಸಭೆಯಲ್ಲಿ ಇದೇ ವಿಚಾರವನ್ನು ಚರ್ಚೆ ಮಾಡಬೇಕಾಗಿದೆ. ವ್ಯವಸಾಯದ ವಿಚಾರವಾಗಲೀ, ನೀರಾವರಿಯ ವಿಷಯವಾಗಲೀ, ಇವರು ಮುಂದೆ ಏನು ಮಾಡುತ್ತಾರೆ ಎಂಬುದನ್ನು ಕಾಂಗ್ರೆಸ್ ಕಚೇರಿಯಲ್ಲಿ ಈಗಾಗಲೇ ಹೇಳಿದ್ದಾರೆ. ಇವರು ಶಾಸನ ಸಭೆಗೆ ಅವಹೇಳನ ಮಾಡಿದಂತಾಗಿದೆ. ಈ ಸಭೆಯ ಹಕ್ಕು ಬಾಧ್ಯತೆಗೆ ಲೋಪ ಮಾಡತಕ್ಕ ವಿಚಾರವನ್ನು ಇವರು ಮಾಡಿದ್ದಾರೆ. ಇವರು ಕಾಂಗ್ರೆಸ್ ಕಚೇರಿಯಲ್ಲಿ ಚರ್ಚೆ ಮಾಡಿರತಕ್ಕ ವಿಷಯವನ್ನು ಇಲ್ಲಿ ಚರ್ಚೆ ಮಾಡಿದರೆ ಅದು ನಾಟಕೀಯವಾಗುತ್ತದೆ. ಆದ್ದರಿಂದ ಈ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಬೇಕು. ಇಲ್ಲವೇ ಮಂತ್ರಿಗಳು ಕ್ಷಮಾಪಣೆಯನ್ನು ಕೇಳಬೇಕು. ಈ ಸಭೆಯ ಘನತೆಯನ್ನು ಎತ್ತಿ ಹಿಡಿಯತಕ್ಕ ಕರ್ತವ್ಯವನ್ನು ಮಾಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—I have heard the hon'ble Leader of Opposition. Probably according to him it is breach of privilege. The Hon'ble Leader of Opposition may give it in writing and I shall consider the matter. It does not involve any point of order.

Now the presentation of budget.

Requests to indicate dates on the question lists, etc.

Sri D. B. KALMANKAR (Aland).—Sir, previously the dates of questions and the dates of replies were used to be furnished in the list of questions and answers. But that practice has now been discontinued. From the very first day of the current sittings, I am seeing that no dates have been furnished in the questions and answers list. It is prejudicial to the interest of the hon'ble Members. The mention of dates would have facilitated the hon'ble Members to know whether their questions have been taken up for answers or not. Hence, I request the hon'ble Chair to continue the practice which was followed during the previous session.

Mr. SPEAKER.—I shall look into the matter. I shall also see whether this practice was followed previously and if so, why it has been discontinued.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸ್ವಾಮಿ, ನಾನು ಪ್ರಶ್ನೋತ್ತರ ಕಾಲದಲ್ಲಿ ಒಂದು ಉಪಪ್ರಶ್ನೆಯನ್ನು ಕೇಳುವ ಕಾಲಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ,

ನಾನು ಬಹಳ ಕೋಪದಲ್ಲಿ ಇದ್ದೇನೆ, ಚಿಂಚೋಳಿ ಕ್ಷೇತ್ರವನ್ನೇ ನೋಡಿಲ್ಲ, ಯಾವುದೇ ವಿಷಯ ತಿಳಿಯದೆ ಮಾತನಾಡಬಾರದು ಎಂದು ಉತ್ತರ ಕೊಟ್ಟರು. ಯಾವುದೇ ಒಂದು ವಿಷಯವನ್ನಾಗಲೀ ತಿಳಿದುಕೊಳ್ಳಬೇಕಾದರೆ ಸಂಬಂಧಪಟ್ಟ ಊರಿಗೇ ಹೋಗಿ ತಿಳಿದುಕೊಂಡು ಬರಬೇಕಾಗಿಲ್ಲ. ನಾನು ವಿಷಯವನ್ನು ಸರಿಯಾಗಿ ತಿಳಿದುಕೊಂಡೇ ಪ್ರಶ್ನೆಯನ್ನು ಕೇಳಿದ್ದು. ನಾನು ಹೇಳಿದ್ದು ತಪ್ಪು ಇದ್ದರೆ ನಾನು ರಾಜೀನಾಮೆ ಕೊಡುತ್ತೇನೆ, ಇಲ್ಲದಿದ್ದರೆ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಲಿ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ನಾನು ಹೋದ ಸಲ ಕೆಲವು ಪ್ರಶ್ನೆಗಳನ್ನು ಕಳಿಸಿದ್ದೆ. ಅವುಗಳಿಗೆ ಉತ್ತರ ಇನ್ನೂ ಬಂದಿಲ್ಲ. ಆ ಪ್ರಶ್ನೆಗಳನ್ನು ಈ ಸಭೆಯಲ್ಲಿ ತೆಗೆದು ಕೊಳ್ಳುತ್ತಿರಾ ಎಂಬುದನ್ನು ತಿಳಿಸಬೇಕು.

MR. SPEAKER.—The lapsed questions will not be taken up again.

SRI M. H. JAYAPRAKASH NARAYAN (Sirsi) —This is an adjourned session. How can those questions lapse ?

MR. SPEAKER.—Those questions will not come up before the House for oral answers. They will be treated as unstarred.

ಶ್ರೀ ಸದಾಶಿವಪ್ಪ ಪಾಟೀಲ್.—ನನ್ನ ಪ್ರಶ್ನೆಗೆ ತಾವು ಉತ್ತರ ಕೊಡಲಿಲ್ಲ.

MR. SPEAKER.—If the hon'ble Member has got any information which he believes to be correct, he could put a question on the basis of that information and the hon'ble Chief Minister will reply to it.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ನೆನ್ನೆ ಈ ಸಭೆಯ ಮುಂದೆ ನರೋನಾ ಆಯೋಗದ ವರದಿಯನ್ನು ಸರ್ಕಾರದವರು ಇಟ್ಟಿದ್ದಾರೆ. ಈ ಸಭೆಯಲ್ಲಿ ಇಡುವುದಕ್ಕೆ ಮೊದಲೇ ಈ ವರದಿ ಪೋಲೀಸರ ಕೈಗೆ ಸಿಕ್ಕಿದೆ ಎಂದು ತಿಳಿದಿದೆ. ಈ ವಿಚಾರದಲ್ಲಿ ರಣಭೇರಿ ಎಂಬ ಪತ್ರಿಕೆಯಲ್ಲಿ ಬಹಳವಾಗಿ ಬರೆದಿದ್ದಾರೆ. ಆ ಪತ್ರಿಕೆಯಲ್ಲಿರುವ ವಿಷಯ ಸತ್ಯವಾಗಿದೆಯೋ ಅಥವಾ ಸತ್ಯಕ್ಕೆ ದೂರವಾಗಿದೆಯೋ ಎಂಬುದು ನನಗೆ ಗೊತ್ತಿಲ್ಲ. ಈ ವಿಚಾರವನ್ನು ಈ ಪತ್ರಿಕೆಯವರು ಪ್ರಕಟ ಮಾಡಿದ್ದಕ್ಕೆ ಪೋಲೀಸರು ಹೋಗಿ ಏತಕ್ಕೆ ಇದನ್ನೆಲ್ಲಾ ಬರೆಯುತ್ತೀರಿ ಎಂದು ಕೇಳಿ ಹೆದರಿಸುತ್ತಿದ್ದಾರೆಂದು ತಿಳಿಯಿತು. ನನ್ನ ಭಾಷಣವನ್ನು ಸಹ ಈ ಪತ್ರಿಕೆಯವರು ಪ್ರಕಟ ಮಾಡಿದ್ದಾರೆ. ನರೋನಾ ಆಯೋಗದ ವರದಿಯನ್ನು ಪೋಲೀಸರು ಮೊದಲೇ ತಿಳಿದುಕೊಂಡು ಈ ಮನೆಗೆ ಅವಹೇಳನ ಮಾಡಿದ್ದಾರೆಂದು ಕಾಣಿಸುತ್ತದೆ. ಈ ಬಗ್ಗೆ ಒಂದು ನೋಟೀಸನ್ನು ತಮಗೆ ಕೊಡಬೇಕೆಂದಿದ್ದೇದೆ.

MR. SPEAKER.—The hon'ble Member is welcome to give notice of that matter and I shall look into it.

ಶ್ರೀ ಕೆ. ಎಚ್. ರಂಗನಾಥ್ (ಮೂಡಬಿದರೆ),—ಸ್ವಾಮಿ, ಸಿ. ಐ. ಡಿ. ಇಲಾಖೆಯ ನರಸಿಂಹಮೂರ್ತಿ ಎಂಬುವವರು ಪ್ರತಿನಿತ್ಯ ತಮ್ಮ ನೋಟೀಸ್ ಆಫೀಸ್‌ನಲ್ಲಿ ಕೆಲವು ಮಾಹಿತಿಗಳನ್ನು ಆಗಾಗ್ಗೆ ಪಡೆಯುತ್ತಿರುತ್ತಾರೆ. ತಮ್ಮ ರೀಡಿಂಗ್ ರೂಮಿನಲ್ಲಿಯೂ ಸಹ ಇರುತ್ತಾರೆ. ಇವರು ತಮ್ಮ ಆಫೀಸ್‌ಗೆ ಬರಲು ತಾವು ಅನುಮತಿ ಕೊಟ್ಟಿದ್ದೀರಾ ? ಅಥವಾ ಅವರನ್ನು ಅವರ ಇಲಾಖೆಯವರೇ ಕಳಿಸುತ್ತಾರೆಯೇ ಎಂಬುದನ್ನು ತಾವು ವಿಚಾರ ಮಾಡಿ ತಿಳಿಸಬೇಕು. ಶ್ರೀಮಾನ್ ಗೋಪಾಲಗೌಡರು ಈಗ ಹೇಳಿದಂತೆ ಈ ಸಭೆಗೆ ಮತ್ತು ಈ ಸಭೆಯ ಸದಸ್ಯರುಗಳಿಗೆ ಒಂದು ರೀತಿಯಲ್ಲಿ ಅವಹೇಳನವಾದಂತೆ ಆಗುತ್ತಿದೆ. ಮತ್ತು ನಾವುಗಳು ಈ ಸಭೆಗೆ ಬರುವುದೇ ಕಷ್ಟವಾಗುತ್ತಿದೆ.

MR. SPEAKER.—I shall find out the position.

Budget Estimate for 1969-70

Presentation

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).— ಮಾನ್ಯ ಹಣಕಾಸಿನ ಮಂತ್ರಿಗಳು ದಯವಿಟ್ಟು ಕನ್ನಡದಲ್ಲಿ ಅವರ ಭಾಷಣವನ್ನು ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಅವರು ಕನ್ನಡದಲ್ಲಿ ಭಾಷಣ ಮಾಡದಿದ್ದರೆ ನಾವು ಪ್ರತಿಭಟನೆಯನ್ನು ನಡೆಸಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ, ಸಾಧ್ಯವಾದರೆ ಮುಂದಿನ ಸಲ ಇಂಗ್ಲೀಷನಲ್ಲಿ ಬರೆದ ಬಡ್ಜೆಟ್ಟನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಓದುವುದಕ್ಕೆ ಪ್ರಯತ್ನ ಮಾಡುತ್ತೇನೆ ಈಗ ಓದುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಟೆಕ್ನಿಕಲ್ ಪದಗಳಿಗೆ ಕನ್ನಡದಲ್ಲಿ ಭಾಷಾಂತರ ಮಾಡುವುದಕ್ಕೆ ಬೇಕಾದಷ್ಟು ಪದಗಳು ಸಿಕ್ಕುತ್ತವೆ. ಅದನ್ನು ಏನೂ ಕಲಿತುಕೊಂಡು ಬರಬೇಕಾಗಿಲ್ಲ. ಮತ್ತು ಅದರಲ್ಲಿ ಏನೂ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಅವರು ಕನ್ನಡವನ್ನು ಸುಂದರವಾಗಿ ಮಾತನಾಡಬಲ್ಲೆ ಎಂದು ತಿಳಿಸಿದ್ದಾರೆ. ಮತ್ತು ಅದರಲ್ಲಿ ತುಂಬ ಅಭಿಮಾನ ಇದೆ ಎಂತಲೂ ತಿಳಿಸಿದ್ದಾರೆ. ಹಾಗಾದರೆ ಕನ್ನಡದಲ್ಲಿ ಓದುವುದಕ್ಕೆ ಏನೂ ಅಭ್ಯಂತರ ಇಲ್ಲ. ಅದುದರಿಂದ ಕನ್ನಡದಲ್ಲೇ ಭಾಷಣ ಓದಬೇಕು ಎಂದು ಕೇಳುತ್ತೇನೆ. ಅವರು ಇಂಗ್ಲೀಷ್‌ನಲ್ಲಿ ಮಾಡಿದರೆ ನಾನು ಪ್ರತಿಭಟನೆ ಮಾಡುತ್ತೇನೆ.

Sri S. BANGARAPPA (Sorab).—I want to say something about the language in which Budget should be presented.

Mr. SPEAKER.— I have already ruled that I have no power to compel the Hon. Minister to speak in a particular language.

Sri S. BANGARAPPA.—I want to raise a point of order under Rule 311.

Mr. SPEAKER.—The hon. Member should say first which rule or which provision of the Constitution is violated.

Sri S. BANGARAPPA.—Please bear with me for a minute.

Mr. SPEAKER.—No. The hon. Member must first state the Rule.

Sri S. BANGARAPPA.—This is a very sorry state of affairs. Will you kindly bear with me for a single minute ?

Mr. SPEAKER.--There is a procedure laid down for raising a point of order. In accordence with that, the hon. Member must first state which rule is violated or which provision of the Constitution is violated and then proceed to substantiate it.

Sri RAMAKRISHNA HEGDE (Minister for Finance).—Sir, I rise to present the Budget Estimates for the year 1969-70. Since the presentation of the last Budget.........

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಮಾನ್ಯ ಮಂತ್ರಿಗಳು ಅವರ ಭಾಷಣವನ್ನು ಕನ್ನಡದಲ್ಲೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I have no power to compel the Minister to read in a particular language. I am here only to implement the rules of procedure and provisions of the Constitution. I have no right to compel any Hon. Minister or any Hon. Member of this House to speak in a particular language either English or Kannada. The Hon. Minister may make his speech in Kannada or English. I have no objection under

the constitution it is open to Hon. Members to speak in any recognised official language.

I leave it to the Hon. Minister for Finance to speak in any language he chooses. I cannot compel him to speak in a particular language.

ಶ್ರೀ ರಾಮಕೃಷ್ಣ ಹೆಗಡೆ.—ಸನ್ಮಾನ್ಯ ಅಧ್ಯಕ್ಷರೇ, ಕನ್ನಡದಲ್ಲಿ ಭಾಷಣ ಮಾಡಲಿಲ್ಲ ಎಂದು ಅವರು ಇಲ್ಲಿ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ, ಆಡಳಿತ ಭಾಷೆ ಕನ್ನಡ ಎಂದು ಮಾಡಿ ಮಾನ್ಯ ಮಂತ್ರಿಗಳು ಇಂಗ್ಲಿಷ್‌ನಲ್ಲಿ ಅವರು ಭಾಷಣ ಮಾಡಿದರೆ ನಾವು ಅದಕ್ಕೆ ವಿರೋಧ ವ್ಯಕ್ತ ಮಾಡಬೇಕಾಗುತ್ತದೆ ಆದುದರಿಂದ ತಮ್ಮ ಮೂಲಕ ನಾನು ಅವರನ್ನು ಕೇಳುತ್ತಿರುವುದು ಇಲ್ಲಿ ಕನ್ನಡದಲ್ಲೇ ಅವರು ಭಾಷಣವನ್ನು ಮಾಡಲಿ ಎಂದು.

ಅಧ್ಯಕ್ಷರು.—ಇಂತಹ ಭಾಷೆಯಲ್ಲೇ ಅವರು ಭಾಷಣ ಮಾಡಬೇಕು ಎಂದು ಒತ್ತಾಯ ಮಾಡುವ ಅಧಿಕಾರ ನನಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಪ್ರತಿಯೊಂದು ಸಾರಿಯೂ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಕನ್ನಡದಲ್ಲೆ ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಕನ್ನಡದಲ್ಲೇ ಏಕೆ ಭಾಷಣ ಮಾಡಬಾರದು ?

ಶ್ರೀ ವಾಟಾಳ್ ನಾಗರಾಜ್.—ಸ್ವಾಮೀ, ನಮಗೆಲ್ಲ ಕನ್ನಡದಲ್ಲೇ ಸುಂದರವಾಗಿ ಮುದ್ರಿತವಾದ ಬಡ್ಜೆಟ್ಟು ಭಾಷಣ ಬಂದಿದೆ. ಮಾನ್ಯ ಮಂತ್ರಿಗಳು ಕನ್ನಡದಲ್ಲೇ ಅವರು ಓದಬಹುದು. ಇಂಗ್ಲಿಷಿನಲ್ಲಿರುವ ಸ್ಟೈಲು ಹೋಗುತ್ತೆ ಎಂದು ಇರಬಹುದು. ಕನ್ನಡವನ್ನು ರಾಜ್ಯ ಭಾಷೆ ಮಾಡಬೇಕು ಎಂದು ಇರುವಾಗ ಕನ್ನಡಕ್ಕೆ ಅದಷ್ಟು ಹೆಚ್ಚು ಗೌರವ ಕೊಟ್ಟ ಹಾಗೆ ಆಗುತ್ತದೆ ಹಾಗೂ ನಮ್ಮ ಮಂತ್ರಿಗಳು ಇಲ್ಲಿ ಕನ್ನಡದಲ್ಲೇ ಅವರ ಭಾಷಣ ಮಾಡಿದರೆ ಅದರಿಂದ ಈ ಸಭೆಯ ಘನತೆ ಹಾಗೂ ಗೌರವಗಳೂ ಹೆಚ್ಚುತ್ತವೆ. ಆದುದರಿಂದ ತಮ್ಮ ಮೂಲಕ ನಾನು ಅವರನ್ನು ಕೇಳಿಕೊಳ್ಳುವುದು ಇಂದು ಅವರು ಕನ್ನಡದಲ್ಲೇ ಭಾಷಣ ಮಾಡಲಿ ಹಾಗೆ ಇಂಗ್ಲಿಷನಲ್ಲೇ ಭಾಷಣಮಾಡಿದರೆ ಅದಕ್ಕೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ.

† ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಕನ್ನಡದಲ್ಲೇ ಮಾತನಾಡುವುದಕ್ಕೆ ನನಗೂ ಬಹಳ ಸಂತೋಷವಾಗುತ್ತದೆ. ಮಾನ್ಯ ಸದಸ್ಯರು ಈ ಭಾಷಣವನ್ನು ಕಳೆದ ವರ್ಷದಿಂದಲೂ ಮಾಡಬೇಕೆಂದು ಹೇಳುತ್ತಿದ್ದಾರೆ. ಅದರಂತೆ ನಾವು ಈಗಾಗಲೇ ಬಡ್ಜೆಟ್ ಪುಸ್ತಕಗಳನ್ನು ಇಂಗ್ಲಿಷ್‌ನಲ್ಲಿ ಮಾಡುವುದರ ಜೊತೆಗೆ ಕನ್ನಡದಲ್ಲಿಯೂ ಮುದ್ರಿಸಿ ಹಂಚುತ್ತಿದ್ದೇವೆ; ಇದರ ಅರ್ಥ ಏನೆಂದರೆ ಕನ್ನಡಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಮಾಡಲಾಗಿದೆ. ಕನ್ನಡದ ಬಗ್ಗೆ ಪ್ರೇಮ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರಿಗೆ ಎಷ್ಟು ಇದೆಯೋ ಬಹುಶಃ ಅಷ್ಟೇ ಪ್ರೇಮ ನನಗೂ ಇದೆ. ಆದರೆ ನನಗೆ ನಿರ್ಬಂಧ ಮಾಡಿ ಕನ್ನಡದಲ್ಲಿ ಹೇಳಬೇಕು ಎಂದು ಹೇಳುತ್ತಿದ್ದಾರೆ. ಈ ಬಡ್ಜೆಟ್ಟಿನಲ್ಲಿ ಸ್ವಲ್ಪ ಟೆಕ್ನಿಕಲ್ ಶಬ್ದಗಳು ಹಾಗೂ ಪಾರಿಭಾಷಿಕ ಶಬ್ದಗಳು ಬರುತ್ತವೆ. ಕನ್ನಡದಲ್ಲಿ ಹೇಳುವಾಗ ಒಂದೊಂದು ಸಲ ಇಂಗ್ಲಿಷ್‌ಗೆ ಮಾರುಹೋಗಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ತಮ್ಮ ಪಕ್ಷದ ಕಡೆಯ ಜನರು ಇಲ್ಲಿ ಇಂಗ್ಲಿಷ್‌ನಲ್ಲಿ ಮಾತನಾಡುವಾಗ ಅವರನ್ನು ಪ್ರತಿಭಟನೆ ಮಾಡಲಿಲ್ಲ. ಆದರೆ ನಮ್ಮ ಕಡೆ ಮಾತನಾಡುವಾಗ ಮಾತ್ರ ಕನ್ನಡದಲ್ಲಿ ಮಾತಾಡಬೇಕು ಎಂದು ಹೇಳುತ್ತಾರೆ. ಎಂದರೆ ನಮ್ಮ ಪಕ್ಷಕ್ಕೆ ಮಾತ್ರ ಇದು ಅನ್ವಯಿಸತಕ್ಕದ್ದು ಅವರ ಪಕ್ಷಕ್ಕೆ ಅನ್ವಯಿಸುತ್ತದೋ ಇಲ್ಲವೋ ಹೇಗೆ !

Sri S. BANGARAPPA.—I will read the rule 311 (2).

> "A point of order may be raised in relation to the business before the Assembly at the moment".

We are now to take up the presentation of budget. So one of the hon. members has raised a point that the language in which the budget has to be presented to this House should be in Kannada. The Chair has ruled that it is left to the concerned Minister to speak in any language he likes.

ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಸದಸ್ಯರು ಕನ್ನಡದಲ್ಲಿ ಮಂತ್ರಿಗಳು ಮಾತನಾಡಬೇಕು ಎಂದು ಹೇಳಿ ಅವರೇ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದಾರೆ.

(Interruption)

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಏಕ ವಚನದಲ್ಲಿ ಮಾತನಾಡುತ್ತಿದ್ದಾರೆ. ಅವರಿಗೆ ಸೌಜನ್ಯ ಗೊತ್ತಿಲ್ಲ.........

Mr. SPEAKER.—It is not disirable to have such exchanges. I want hon. Members to use a decent language. We are losing time. The hon. member Sri Bangarappa wants to raise a point of order. He may please be brief.

† ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನ್ನ ಕ್ರಿಯಾಲೋಪವಿಷಯ. ಮಾನ್ಯ ಸಚಿವರು ಕನ್ನಡದಲ್ಲಿ ಆಯವ್ಯಯ ಪತ್ರವನ್ನು ಮಂಡಿಸಬೇಕು. ಒಂದು ಸಕಾರಣ ನನ್ನ ಹತ್ತಿರವಿದೆ. ಸುಮಾರು ಒಂದು ವಾರದ ಕೆಳಗೆ ಪತ್ರಿಕೆಗಳಲ್ಲಿ ಒಂದು ಅಂಶ ಪ್ರಕಟವಾಯಿತು. ಅದು ಮಾನ್ಯ ಸಚಿವರು ಬೆಂಗಳೂರಿನಲ್ಲಿ ಮಾಡಿರತಕ್ಕ ಭಾಷಣವೆಂದು ತಿಳಿದುಕೊಂಡಿದ್ದೇನೆ. ಈ ವರ್ಷದ ಆಯವ್ಯಯ ಪಟ್ಟಿಯನ್ನು ನಾನು ಕನ್ನಡದಲ್ಲಿಯೇ ವಿಧಾನ ಸಭೆಯಲ್ಲಿ ಇಡುವುದಕ್ಕೆ ಯೋಚನೆ ಮಾಡಿದ್ದೇನೆ, ಇಡುತ್ತೇನೆ, ಎನ್ನುವಂಥ ಮಾತನ್ನು ಕೂಡ ಅವರು ಹೇಳಿದ್ದರು. ಈ ಮಾತನ್ನು ಮಾನ್ಯ ಸಚಿವರು ಉಳಿಸಿಕೊಳ್ಳಬೇಕು ಮತ್ತು ಕನ್ನಡದಲ್ಲಿಯೇ ಆಯವ್ಯಯ ಪಟ್ಟಿಯನ್ನು ಮಂಡಿಸಬೇಕು. ಕನ್ನಡ ಮಾನ್ಯ ಸಚಿವರಿಗೆ ಬರದೇ ಇದ್ದ ಭಾಷೆಯಾಗಿದ್ದರೆ ಅವರು ಯಾವ ಭಾಷೆಯಲ್ಲಿಯೇ ಮಂಡಿಸಲಿ ಅದಕ್ಕೆ ನಮ್ಮ ಅಭ್ಯಂತರವಿರುತ್ತಿರಲಿಲ್ಲ. ಕನ್ನಡ ದೇಶ, ಕನ್ನಡ ರಾಜ್ಯಭಾಷೆ. ಹೀಗೆ ಇರುವಾಗ ಕೆಲವು ಪಾರಿಭಾಷಿಕ ಶಬ್ದಗಳು ಸರಿಯಾಗಿ ಸಿಕ್ಕುವುದಿಲ್ಲ ಎನ್ನುವ ಕಾರಣದ ಮೇಲೆ ಆಯವ್ಯಯ ಪಟ್ಟಿಯನ್ನು ಕನ್ನಡದಲ್ಲಿ ಮಂಡನೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದು ಅಷ್ಟೊಂದು ಸರಿಯಲ್ಲ. ಪಾರಿಭಾಷಿಕ ಶಬ್ದಗಳು ಸರಿಯಾಗಿ ಕೆಲವೊಂದು ಸಿಕ್ಕದೇ ಇದ್ದರೆ ಇಂಗ್ಲಿಷ್ ಪದಗಳನ್ನೇ ಕನ್ನಡ ಭಾಷೆಯಲ್ಲಿ ಸೇರಿಸಿಕೊಂಡು ಹೇಳಬಹುದು ಎಂದು ಹಿರಿಯರಾದ ಕು.ವೆಂ.ಪು. ಅವರು ಹೇಳಿದ್ದಾರೆ. ಮಾನ್ಯ ಸಚಿವರು ಸಿರ್ಸಿ ಸಿದ್ದಾಪುರದ ಕಡೆಯವರು ನಮಗಿಂತಲೂ ಅಚ್ಚಕನ್ನಡವನ್ನು ಮಾತನಾಡತಕ್ಕ ಶಕ್ತಿ ಇರುವವರು. ಆದ್ದರಿಂದ ಅವರಲ್ಲಿ ನಾನು ಒಂದು ನಿವೇದನೆ ಮಾಡಿಕೊಳ್ಳುತ್ತೇನೆ, ಅವರು ಕೊಟ್ಟಿರತಕ್ಕ ಮಾತನ್ನು ಉಳಿಸಿಕೊಳ್ಳಲು ಅವರು ಕನ್ನಡದಲ್ಲಿಯೇ ಆಯವ್ಯಯ ಪಟ್ಟಿಯನ್ನು ಮಂಡನೆ ಮಾಡಿ ಕನ್ನಡ ಭಾಷೆಗೆ ಬೆಲೆ ಕೊಡಲಿ ಎನ್ನುವ ಮಾತನ್ನು ಮಾತ್ರ ಹೇಳುತ್ತೇನೆ.

Mr. SPEAKER.—I have already indicated that under the Constitution of India it is open to an hon. Minister and for that matter to any hon member of this House to speak in any language which is mentioned in the Constitution. I have no power to compel any hon. Member much less the hon. Minister to speak in a particular language. I requested the hon. Member Sri Bangarappa before he raised the point to cite which rule is violated. He has not done so. He has abused the provisions of rule 311. I request the hon. Member not to do so again.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಶ್ರೀ ವಾಟಾಳ್ ನಾಗರಾಜ್‌ರವರು ಪ್ರಾರಂಭದಲ್ಲೇ ಮಾನ್ಯ ಮಂತ್ರಿಗಳು ಕನ್ನಡದಲ್ಲೇ ಆಯವ್ಯಯ ಪಟ್ಟಿಯನ್ನು ಮಂಡಿಸಬೇಕೆಂದು ಪ್ರಾರ್ಥನೆಮಾಡಿಕೊಂಡರು. ಅದನ್ನು ಮಂತ್ರಿಗಳು ಕೇಳಿಸಿಕೊಂಡರೋ ಇಲ್ಲವೋ ಗೊತ್ತಿಲ್ಲ. ತಾವು ಒಂದು ಅಬ್‌ಜೆಕ್‌ಷನ್ ರೈಸ್ ಮಾಡಬಹುದು, ಒಂದು ಭಾಷೆಯಲ್ಲಿ ಭಾಷಣವನ್ನು ಆರಂಭಿಸಿದ ಮೇಲೆ ಮತ್ತೊಂದು ಭಾಷೆಗೆ ಅದನ್ನು ತಿರುಗಿಸಬಾರದು ಎಂದು ರೂಲ್ ಇದೆ ಎಂದು ತಾವು ಹೇಳಬಹುದ . ತಾವು ಅನುಮತಿ ಕೊಟ್ಟರೆ ಅಚ್ಚಾಗಿರುವ ಕನ್ನಡ ಭಾಷಣವಿದೆ, ಅಧಿಕಾರಿಗಳು ಪಾರಿಭಾಷಿಕ ಶಬ್ದಗಳಿಗೆ ತರ್ಜುಮೆ ಮಾಡಿರುವುದರಿಂದ ಅದನ್ನು ಕನ್ನಡದಲ್ಲಿ ಓದುವುದರಿಂದ ಏನೂ ತಪ್ಪಾಗುವುದಿಲ್ಲ, ಪತ್ರಿಕೆಯವರಿಗೆ ಬೇಕಾದರೆ ಇಂಗ್ಲೀಷ್ ಪ್ರತಿ ಕೊಡುವುದು. ಆದುದರಿಂದ ಮಾನ್ಯ ಮಂತ್ರಿಗಳು ಕನ್ನಡದಲ್ಲೇ ಈ ವರ್ಷ ಭಾಷಣವನ್ನು ಮಾಡಿ ಒಂದು ಸತ್ಸಂಪ್ರದಾಯವನ್ನು ಸ್ಥಾಪಿಸುವುದು ಒಳ್ಳೆಯದು ಎಂದು ಸೂಚಿಸಿ ನಾವು ಶ್ರೀ ವಾಟಾಳ್ ನಾಗರಾಜ್‌ರವರ ಪ್ರಾರ್ಥನೆಗೆ ಬೆಂಬಲ ಕೊಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಬಹಳ ಮುಖ್ಯವಾದ ವಿಷಯ, ನಾವೂ ಕೂಡ ಇದಕ್ಕೆ ಬೆಂಬಲ ಕೊಡುತ್ತೇವೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಬುದ್ಧಿವಂತರು, ಅವರಲ್ಲಿ ಕನ್ನಡದ ಪ್ರತಿ ಇದೆ, ಅದನ್ನು ಓದಿದರೆ ಎಲ್ಲವೂ ಸರಿಯಾಗಿರುತ್ತದೆ. ಆ ಬಗ್ಗೆ ಇತ್ತ ಕಡೆಯ ಅಭಿಪ್ರಾಯ ಬಹಳ ಸ್ಪಷ್ಟವಾಗಿದೆ. ಹಣಕಾಸಿನ ಸಚಿವರಿಗೆ ಕನ್ನಡ ಕೂಡ ಬರುತ್ತದೆ. ಆದರೆ ನಾವು ಕನ್ನಡದಲ್ಲೇ ಅವರು ಭಾಷಣ ಮಾಡಬೇಕೆಂದು ಒತ್ತಾಯ ಮಾಡುವುದಕ್ಕಾಗುವುದಿಲ್ಲ ಎಂದು ಅಧ್ಯಕ್ಷರೇ ಹೇಳಿದ್ದಾರೆ. ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಕನ್ನಡದಲ್ಲೇ ಭಾಷಣ ಮಾಡುವುದು ಒಳ್ಳೆಯದು ಎಂದು ನಾನೂ ಸೂಚಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಮೊದಲು ಇಂಗ್ಲೀಷಿನಲ್ಲಿ ಭಾಷಣವನ್ನು ತಯಾರಿಸಿದ್ದೆ ನಂತರ ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಲಾಗಿದೆ, ನಾನು ಕನ್ನಡದಲ್ಲೇ ಭಾಷಣವನ್ನು ತಯಾರಿಸಿದ್ದರೆ ನಾನೇ ಕನ್ನಡದಲ್ಲಿ ಯಾರಿಂದಲೂ ಹೇಳಿಸಿಕೊಳ್ಳದೆ ಓದುತ್ತಿದ್ದೆ. ನನಗೆ ಕೆಲವು ಇಂಗ್ಲೀಷ್ ಪದಗಳಿಗೆ ಸರಿಯಾದ ಪಾರಿಭಾಷಿಕ ಶಬ್ದಗಳ ಬಗ್ಗೆ ಸರಿಯಾದ ಜ್ಞಾನವಿಲ್ಲ ತರ್ಜುಮೆಯನ್ನೇನೋ ಮಾಡಿದ್ದಾರೆ, ಸಾಧ್ಯವಾದಮಟ್ಟಿಗೆ ಚೆನ್ನಾಗಿಯೇ ಮಾಡಲು ಪ್ರಯತ್ನ ಮಾಡಿದ್ದಾರೆ. ಉದಾಹರಣೆಗೆ 'ಡೆಟ್ ಸರ್ವಿಸ್" ಎಂದಿರುವುದಕ್ಕೆ 'ಋಣ ಸೇವೆ ವೆಚ್ಚ' ಎಂದು ತರ್ಜುಮೆ ಮಾಡಿದ್ದಾರೆ. ಅದು ನನಗೆ ತೃಪ್ತಿಕರವಾಗಿಲ್ಲ. ಮಾನ್ಯ ಗೋಪಾಲಗೌಡರು ಶ್ರೀ ವಾಟಾಳ್ ನಾಗರಾಜ್‌ರ ಪ್ರಾರ್ಥನೆಗೆ ಬೆಂಬಲ ಕೊಟ್ಟರು. ಆದರೆ ಅವರು ಶ್ರೀ ಬಂಗಾರಪ್ಪನವರು ಇಂಗ್ಲೀಷಿನಲ್ಲಿ ಮಾತನಾಡಿದಾಗ ಕನ್ನಡದಲ್ಲಿ ಹೇಳಲಿಲ್ಲ ಎಂದು ಅಬ್‌ಜೆಕ್ಷನ್ ರೈಸ್ ಮಾಡಲಿಲ್ಲ. ಆಗ ಏನೂ ಹೇಳಲಿಲ್ಲ. ಈಗ ಸ್ವಲ್ಪ ವ್ಯವಹಾರಿಕ ತೊಂದರೆಯಿದೆ. ಈಗ ಒಂದು ಭಾಷಣವನ್ನು ಇಂಗ್ಲೀಷಿನಲ್ಲಿ ಮಾಡಿದ ಮಾತ್ರಕ್ಕೆ ಕನ್ನಡ ಹಾಳಾಗುವುದಿಲ್ಲ, ಕಾಲಕ್ರಮೇಣ ಎಲ್ಲವೂ ಸರಿಹೋಗುತ್ತದೆ. 5 ವರ್ಷಗಳ ಹಿಂದೆ ಎಷ್ಟು ಮಂದಿ ಇಂಗ್ಲೀಷಿನಲ್ಲಿ ಭಾಷಣ ಮಾಡುತ್ತಿದ್ದರೋ ಅಷ್ಟು ಮಂದಿ ಈಗ ಇಂಗ್ಲೀಷಿನಲ್ಲಿ ಭಾಷಣ ಮಾಡುತ್ತಿಲ್ಲ, ಈಗ ಹೆಚ್ಚು ಕನ್ನಡದಲ್ಲೇ ಮಾತನಾಡುವವರಿದ್ದಾರೆ. ಮಂತ್ರಿಗಳು ಕೂಡ ಕನ್ನಡದಲ್ಲೇ ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ಕನ್ನಡದಲ್ಲಿ ಭಾಷಣ ಮಾಡುವುದು ಕಷ್ಟವಾದರೆ ಕೊಂಚ ಕನ್ನಡದಲ್ಲಿ ಓದಿ ನಂತರ ಬೇಕಾದರೆ ಇಂಗ್ಲೀಷಿನಲ್ಲಿ ಓದಲಿ.

ಶ್ರೀ ವಾಟಾಳ್ ನಾಗರಾಜ್.—ಕೊನೆಯ ಭಾಗವನ್ನು ಕನ್ನಡದಲ್ಲಿ ಓದುತ್ತೇನೆಂದು ಹೇಳಿದರೆ ಅದು ಸರಿಯಲ್ಲ. ಅದು ರಾಜ್ಯಭಾಷೆಗೆ ಗೌರವ ತರತಕ್ಕದ್ದಲ್ಲ. ಪಾರಿಭಾಷಿಕ ಭಾಷೆಗೆ ಸರಿಯಾದ ಕನ್ನಡಪದಗಳು ಇಲ್ಲವೆಂಬ ವಾದವನ್ನು ಮಂತ್ರಿಗಳು ಹೇಳಿದರು. ಕನ್ನಡದಲ್ಲಿದ್ದ ಹಾಗೆಯೇ ಓದಲಿ. ಅದರಿಂದೇನೂ ತೊಂದರೆಯಾಗುವುದಿಲ್ಲ.

Mr. SPEAKER.--I have received a communication dated 23rd February from His Excellency the Governor. Which is as follows :

> " In pursuance of Article 202 of the Constitution of India, I, G. S. Pathak, Governor of Mysore, do hereby direct that the Annual Financial Statement for the year 1969-70 appended hereto as also demands for grants for the year 1969-70, shall be laid before the Houses of the Legislature on 24th February 1969."

Sri RAMAKRISHNA HEGDE.—Sir, I rise to present the Budget Estimates for the year 1969-70.

2. Since the presentation of the last Budget several events have occurred.......

ಶ್ರೀ ಎಂ. ನಾಗಪ್ಪ.—ಒಂದನೇ ಕ್ರಿಯಾಲೋಪ. ರಾಜ್ಯಪಾಲರ ಕಮ್ಯೂನಿಕೇಷನ್ ಈಗ ಓದುತ್ತಿದ್ದಾರೆ. ಎರಡನೆಯ ಕ್ರಿಯಾಲೋಪ ಅಂದರೆ, ಈಗ ಆಯವ್ಯಯ ಪತ್ರವನ್ನು ಮಂಡಿಸುತ್ತಿದ್ದಾರೆ. ಅದರಲ್ಲಿ ಒಂದು ಭಾಗ ಖರ್ಚಾದುದನ್ನು ಹೇಳಿದ್ದಾರೆ. ಅದು ಒಂದೇ ಅಲ್ಲ. ಆರ್ಟಿಕಲ್ 202ನೇ ಪ್ರಕಾರ ನಮ್ಮ ಆದಾಯ ಎಷ್ಟೆಂಬುದನ್ನು ಅದರಲ್ಲಿ ತೋರಿಸಬೇಕಾಗುತ್ತದೆ.

(ಶ್ರೀ ಎಂ. ನಾಗಪ್ಪ)

ಆದಾಯ ಮತ್ತು ಖರ್ಚು ತೋರಿಸುವ ಕಾಲಕ್ಕೆ ಅವರು ಈಗ ಕೊಡುತ್ತಿರುವ ಭಾಷಣವಾಗಲೀ
ಅಥವಾ ಮುಂಗಡಪತ್ರವಾಗಲೀ ಅದರಲ್ಲಿ ಈಗ ಫೈನಾನ್ಸ್ ಕಮಿಷನ್ ಅಂದರೆ ಹಣಕಾಸಿನ
ಆಯೋಗವೇನಿದೆ ಆ ಆಯೋಗದವರು ನಮ್ಮ ಭಾಗ ಎಷ್ಟು ಎಂಬುದನ್ನು ಇನ್ನೂ ನಿರ್ಣಯ ಮಾಡಿಲ್ಲ.
ಅದು ಆದಾಯದ ಒಂದು ಭಾಗವಾಗುತ್ತದೆ. ಅಂತಹ ಒಂದು ಭಾಗವನ್ನು ಇದರಲ್ಲಿ ತೋರಿಸುವ
ಪರಿಸ್ಥಿತಿ ಬರಲಿಲ್ಲ. ಅದಕ್ಕಾಗಿ ಈ ಮುಂಗಡ ಪತ್ರದಲ್ಲಿ ಒಂದು ಸರಿಯಾದಂಥ ಕನಿಷ್ಠವಾದ ಆ
ಒಂದು ಆಯೋಗ ನಿರೂಪಣೆ ಮಾಡಿದಂಥ ಅಂಕಿ ಅಂಶ ಬಂದಿದ್ದು ಇಲ್ಲ. ಆದ್ದರಿಂದ ಆ ಕಮಿಷನ್ನಿನ
ವರು ತನ್ನ ವರದಿಯನ್ನು ಕೊಡುವವರೆಗೂ ಇಲ್ಲಿ ಇವರು ಮುಂಗಡ ಪತ್ರವನ್ನು ಇಡಬಾರದು.
ವೋಟ್ ಆನ್ ಅಕೌಂಟ್ ಬೇಕಾದರೆ 2 ಅಥವಾ 3 ತಿಂಗಳು ವರೆಗೆ ಮಾಡಿಕೊಳ್ಳಲಿ. ಇದು ನನ್ನ
ಮೊದಲನೆಯ ಆಬ್‌ಜೆಕ್ಷನ್. ಇದನ್ನು ಅವರು ಒಪ್ಪಬಹುದಾಗಿತ್ತು. ಆಯೋಗದ ವರದಿ ಬಾರದೇ
ಇದ್ದರೆ, ಈ ತಿಂಗಳು 28ನೇ ತಾರೀಖು ಅವರು ಕೊಡುವ ಹಣ ಇಷ್ಟು ಎಂದು ಹೇಳಿ ಬಡ್ಜೆಟ್ಟನ್ನು
ಆಗ ಮಂಡಿಸಬಹುದಾಗಿತ್ತು. ಇ ಒಂದು ಭಾಗವನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದರೆ ನಾನು ಒಪ್ಪು
ತ್ತಿದ್ದೆ. ಆಗಲೇ ಈ ಎರಡು ಅಂಶಗಳನ್ನು ಸೇರಿಸಿ ಬಡ್ಜೆಟ್ಟನ್ನು ಮಂಡಿಸಬಹುದಾಗಿತ್ತು.
ಆರ್ಟಿಕಲ್ 202, 272, 275, 281ಗಳನ್ನು ತಾವು ಓದಿದರೆ ಎಲ್ಲವೂ ಗೊತ್ತಾಗುತ್ತದೆ. ಇವರು
ಈಗ ಮಾಡುತ್ತಿರುವುದು ಅದಕ್ಕೆ ವೈಯರೇಷನ್ ಆಗತ್ತದೆ. ಅದಕ್ಕಾಗಿ ತಾವು ಮುಂಗಡಪತ್ರವನ್ನು
ಇಲ್ಲಿ ಈಗ ಮಂಡಿಸುವುದಕ್ಕೆ ಪರವಾನೆ ಕೊಡದೆ, ಅಷ್ಟು ಅವಶ್ಯಕತೆ ಕಂಡು ಬಂದರೆ, ವೋಟ್
ಆನ್ ಅಕೌಂಟ್‌ಗೆ ಅವಕಾಶಕೊಟ್ಟು ನಮಗೆ ಬರತಕ್ಕ ಗ್ರ್ಯಾಂಟ್ ಇನ್ ಏಡ್‌ನ್ನು ಸೇರಿಸಿ ಸರಿಯಾದಂಥ
ಮುಂಗಡಪತ್ರನ್ನು ಈ ಸಭೆಯಮುಂದೆ ಇಡಬಹುದು, ಈಗಾಗಲೇ ಕೆಲವು ರಾಜ್ಯಗಳವರು ಇದನ್ನು
ಅನುಸರಿಸಿದ್ದಾರೆ. ಆಂಧ್ರ ಪ್ರದೇಶದವರು ಆಗಸ್ಟನಲ್ಲಿ ತಮ್ಮ ಹಣಕಾಸಿನ ಮುಂಗಡಪತ್ರವನ್ನು
ಮಂಡಿಸುತ್ತಾರೆ. ಅದರ ಬಗ್ಗೆ ಇಲ್ಲಿ ಯಾವ ನಿರ್ಣಯ ಇನ್ನೂ ಆಗಿಲ್ಲ. ಅದಕ್ಕಾಗಿ ಇಲ್ಲಿ ವೋಟ್
ಆನ್ ಅಕೌಂಟ್ ತೆಗೆದುಕೊಂಡು ಆಯೋಗದ ವರದಿಯ ಬಗ್ಗೆ ಕೇಂದ್ರ ಸರ್ಕಾರದವರು ನಿರ್ದಿಷ್ಟ
ಗ್ರ್ಯಾಂಟ್-ಇನ್-ಏಡನ್ನು ನಿರ್ಣಯ ಮಾಡುತ್ತಾ ಇರುವಾಗ, ಈ ನಿರ್ಣಯವನ್ನು ಮುಂದಕ್ಕೆ ಹಾಕ
ಬೇಕೆಂದು ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ. ಅದನ್ನು ಸರ್ಕಾರದವರು ಒಪ್ಪ
ಬೇಕೆಂದು ನಾನು ಹೇಳುತ್ತೇನೆ.

Mr. SPEAKER.—The Hon. Member Sri Nagappa has raised an
objection that it is not possible for the Finance Minister to anticipate
what the recommendations of the Finance Commission would be and
what amounts would be made available to this Government from the
Central Budget which is to be presented to the Parliament on the 28th
of this month. I do not find any force in this argument. Article 202
says that a statement of the estimated receipts and expenditure of the
State shall be laid before the Houses of Legislature. Therefore, the
Budget is expected to contain the estimated receipts and expenditure of
the State. Hence it is within the powers of the Finance Minister to
estimate the receipts from all sources that are open to the Government
in this context as also the estimates of expenditure. Therefore, I do
not find any force in the argument advanced by the Hon. Member in
this connection. Sri Nagappa suggested that the Government may seek a
vote on account. But even for seeking a vote on account, under Article
206, Budget has to be presented with the estimates of receipts and
expenditure. There is nothing to prevent the Finance Minister from
presenting the Budget. I do not find any force in the point of order
raised by the Hon. Member Sri Nagappa. I therefore rule out the
point of order.

Sri M. S. KRISHNAN.—I have a point of order.

Mr. SPEAKER.—Please state the Rule that has been violated.

Sri M. S. KRISHNAN.—Rule 159. I have no other go but to read the Rule in English which says :

> "The Annual Financial Statement or the Statement of the estimated Receipts and Expenditure of the Government in respect of each financial year (hereinafter referred to as "the Budget") shall be presented to the Assembly on such days as the Governor may direct."

ಇದರಲ್ಲಿ ರಾಜ್ಯಪಾಲರು ಇಂಥ ದಿವಸ ಪ್ರೆಸೆಂಟ್ ಮಾಡಬೇಕೆಂದು ಇದೆ. ಈ ರೀತಿ ರೂಲ್ 160 ನ್ನು ಓದಿದರೆ ಅರ್ಥವಾಗುತ್ತದೆ. ಮಾನ್ಯ ಅರ್ಥಿಕ ಸಚಿವರು ಮಾತನಾಡುವ ಮುಂದೆ ರಾಜ್ಯಪಾಲರು ಇಂಥ ತಾರೀಕಿನ ದಿವಸ ಮಂಡಿಸಬೇಕೆಂದು ಹೇಳಬೇಕು. ಮೊದಲು ನೀವು ಅಪ್ಪಣೆ ಕೊಡಿಸಿದಿರಿ. ಮಾನ್ಯ ಅರ್ಥಿಕ ಮಂತ್ರಿಯವರು ಎರಡು ಮಾತು ಇಂಗ್ಲೀಷ್‌ನಲ್ಲಿ ಹೇಳುತ್ತಿದ್ದಾಗ, ಶ್ರೀಮಾನ್ ವಾಟಾಳ್ ನಾಗರಾಜರು ಅಕ್ಷೇಪ ಎತ್ತಿದರು. ನಂತರ ಮಧ್ಯೆ ತಾವು ಮಾತನಾಡಿದಿರಿ ಪ್ರೊಸೀಜರ್ ಪ್ರಕಾರ ಮೊದಲು ಇಂಥ ತಾರೀಕು ಫಿಕ್ಸ್ ಮಾಡಿಬಿಟ್ಟು ಮಾಡಬೇಕಾಗಿತ್ತು. ಇದು ನನ್ನ ಕ್ರಿಯಾಲೋಪ.

Mr. SPEAKER.—The Chair has to satisfy itself whether the Governor has fixed the date for the presentation of the Budget. It is incumbent upon the Chair to read the message of the the Governor for the convenience of the House and that has been done. The point of order raised by the hon. Member has no force in it.

Sri AZEEZ SAIT.—Sir, there is some uneasiness in the Press Gallery because the Press people are not supplied with copies of the Budget Speech.

Mr. SPEAKER.—I shall take note of it.

Sri RAMAKRISHNA HEGDE.—Our former leader of the House, Sri S. Nijalingappa, who ably stewarded and guided the State in various capacities, was called upon to take a new assignment of greater responsibility. He was succeeded by Sri Veerendra Patil as the head of the Government.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅಧ್ಯಕ್ಷರೇ ಮಾನ್ಯ ಮಂತ್ರಿಯವರು ಇಂಗ್ಲೀಷಿನಲ್ಲಿ ತಮ್ಮ ಬಡ್ಜೆಟ್ ಭಾಷಣವನ್ನು ಓದುವುದನ್ನು ವಿರೋಧಿಸಿ ಈ ಸಭೆಯಿಂದ ಹೊರಗೆ ಹೋಗುತ್ತೇನೆ.

(Sri Vatal Nagaraj withdrew)

Sri RAMAKRISHNA HEGDE.—We can be confident that with his dynamism, vigour and devotion to duty, the State will march ahead towards progress and prosperity.

Another important event was the mid-term elections held in four major States of the country. But unfortunately the people have not given clear mandate to any political party which might result again in policital instability. We can only hope that the political set up that emerges in these States will ensure stability which is so essential for economic progress. Because after all, all of us irrespective of political labels are basically interested in the well-being and prosperity of the people at large.

(SRI RAMAKRISHNA HEGDE)

4. The Honourable Members are aware that though several parts of the country had normal seasonal conditions, there were certain States which faced scarcity conditions and Mysore was one such State.

5. There was good crop in the year 1967-68 and 1968-69 in several parts of the country. The index of agricultural production which had touched lowest level in 1966-67 due to successive droughts shot up in 1967-68 and 1968-69. The rising income in the agricultural-income sector has no doubt helped in the increased demand and a substantial growth was recorded in the industrial production in these years. The recovery in the economy has thus been a sign of relief. The national income is expected to go up by 10 per cent in 1967-68 and 6 percent in 1968-69. The *per capita* real income of the country also showed substantial increase in 1967-68 and 1968-69. Unfortunately droughts and untimely rains clouded the agricultural prosperity in the State. Except the coastal region sowing operations had a great setback in the whole State. Government had to undertake relief works on an extensive scale and the expenditure during the current year on relief measures may exceed Rs. 10 crores. I am glad to inform the House that the Government of India have communicated assistance upto a limit of Rs. 10 Crores. A considerable portion of the expenditure has been invested in works of a productive or protective nature. Mention may be made of restoration and construction of tanks, soil conservation, irrigation wells. drinking water wells, roads, etc. The Ground Water Cell in the Department of Mines and Geology helped in sinking 127 bore wells in the year. The Department has also conducted regional surveys covering an extent of 3,243 square kilometres for ground water. The State was able to manage its food problem successfully despite the pitfalls and the uneasy position in the neighbouring traditionally surplus States. I have no doubt that with timely rains the coming year will witness again a high rate of agricultural production.

6. Normally Finance Commission is appointed once in five years. There were certain special circumstance this time. The Fourth-Five-Year Plan did not commence as was originally thought of and new economic developments had taken place. The Fifth Finance Commission was appointed about two years earlier in March 1968.

7. The State Government submitted their Memorandum in respect of terms covered by the interim Report and also major items of the terms of reference now under consideration of the Commission. The Commission visited the State during January 1969 and had discussions with the Officers and Ministers. The case for Mysore has been placed before them. A copy of the Memorandum presented to the Commission was laid on the Table of the House. We have made special reference to the peculiar position prevailing in Mysore regarding limitations in raising resources. The Commission has been requested to take into account

besides the revenue gap a portion of losses on account of abolition of Octroi, expenditure on account of the recommendation of the Pay Commission, cost of appointment of Village Accountants to replace the hereditary officers, increased expenditure on Education, subsidies in the rate of interest, losses in the Electricity Board, etc. We have made a special reference to the hard terms of the existing loans which have no relation to the return or the period required to make the investment yield returns. This is a general question which is being urged but no solution has been found. In fact a practical review would show that a portion of the loans outstanding pertains to un-productive outlay and may have to be written off. But we have not taken this extreme stand and have requested the Commission to re-schedule the loans and recommend reasonable terms with reference to the nature of investment. I must say that though the Commission has to take the overall view in all these matters, considering the very reasonable and sympathetic attitude shown by the Chairman and Members of the Commission during the discussions I have no doubt that the difficulties of Mysore State will he appreciated and justice would be done.

8. Hon'ble Members are aware of the various factors which necessitated Government of India to postpone the commencement of the Fourth Five-Year Plan from 1st April 1966 and have instead only Annual Plans for the three years 1966-67 to 1968-69. It is only in the year 1968 that the National Development Council decided the formulation of the new Fourth Five Year Plan to commence from 1969-70.

9. In view of the recommendations of the Planning Commission and also the Administrative Reforms Commission, the State Government constituted a State Planning Board in May 1968 to have a high level body to give effective direction to the Planning progress in the State. Working Groups were also constituted by Government to formulate programmes for the Fourth Five-Year Plan after a critical appraisal of the performance in the Third Plan and also Annual Plans, keeping in view the regional imbalances. The Planning Board considered these recommendations and draft Fourth Five-Year Plan for Rs. 440 crores was prepared. Detailed discussions on the Fourth Five-Year Plan of the State were held in Delhi in the Working Groups constituted by Government of India in November 1968. This official level discussion was followed in December 1968 by a meeting with the Planning Commission with the Chief Minister.

10. There is still uncertainty about the size of the Fourth Five-Year Plan. This is because the quantum of Central assistance has not been determined in realistic terms and the ability of States to raise resources remains unassessed. In our view, it is better to have one more annual Plan till the Fifth Finance Commission gives its award and these uncertainties are resolved.

11 The Planning Commission have emphasised the need for all States to make every effort in mobilising additional resources to have an

(SRI RAMAKRISHNA HEGDE)

adequate Plan to meet their needs. The Planning Commission envisages that a growth rate of 5 per cent to 6 per cent could be achived only with a minimum outlay in Public Sector of not less than Rs. 14,300 crores, of which the outlay in the State Sector would have to be of the order of Rs. 6,500 crores. This requires an additional resources mobilisation of Rs. 1,500 crores by the States. The Commission is also of the view that Mysore State can mobilise additional resources of the order of Rs. 115 crores. While it is a patent fact that we cannot have an adequate Plan without resources and the State has to do its best to raise maximum resources, I feel that the target of Rs 115 crores is rather over-optimistic. In these circumstances, it has not been possible to take a final decision regarding the size of the Fourth Five-Year Plan and its sectoral break-up. The State Government can take a final view only after decisions are taken on certain important questions like the size of the Central Plan, rescheduling of loans, our ability to hold the price line State's share of additional taxation by Government of India and other matters. Till the Fifth Finance Commission gives its award no State can forecast with reasonable accuracy the availability of resources. Besides taking steps to increase the tax revenue, our State has also increased its non-tax revenues under 'Forest', 'Sale of Power', 'Relaxation of Prohibition'; e.c. The scope for raising additional resources is limited.

12. A Committee of the National Development Council consisting of all Chief Ministers laid down certain criteria for allocation of Central assistance, 60 per cent on the basis of population and the balance with reference to the per capita income, per capita taxation, spill-over works, and other special problems.

13. The State's per capita income compared to per capita National Income and *per capita* Taxation compared to *per capita* income happens to be just above the average. If this is taken into account the State is bound to lose considerably and we have urged before the Planning Commission that this injustice should not happen.

14. There is a just and very strong feeling, on the part of the States that considering the heavy responsibility of implementing welfare measures the resources left with them are very meagre and inelastic. In our view the outlay in the Central Sector of the Plan should be reduced considerably and outlay in State Sector enhanced proportionately. This is very necessary because all developmental activities which ensure to the benefit of common man are in the State Sector and unless sufficient resources are made available the State Governments who are closer to the people cannot satisfy even bare minimum wants and any delayed correct decisions in this matter may lead to disastrous results.

15. The problem of raising additional resources is no doubt a difficult one. Taxation in the urban sector has reached almost the

saturation point. There is very little scope for getting substantial revenue from direct taxation. Large investments have been made in the rural sector by way of large, medium and minor irrigation projects, irrigation wells, soil conservation, facilities of modern agricultural practices like supply of good seeds, fertilisers, tractors, etc., rural electrification, supply of pumpsets and energising them have also contributed considerably to agricultural production. There is no doubt about the fact that all these measures have generated considerable wealth and a section of agriculturists who have benefited to the maximum have almost escaped the proper incidence of taxation and their contribution to domestic savings is negligible.

16. Since 1967 there has been an unhealthy tendency in several States to forego existing sources of revenue and take certain expensive measures to earn easy popularity. This, apart from worsening the financial position of those States, will create problems for other States. If our object is to improve the economic condition of the people through planned development, it is inevitable that we must raise maximum possible resources and also educate the people to pay for the services rendered.

17. The Planning Commission has advised all State Governments to mobilise savings in the rural sector. There have been representations from the Trade for rationalisations of tax structure. I have later made reference to the electricity tariff rates and contribution from public enterprises. We have done our best in the past to raise resources by taxation. Under non-tax resources also our revenues have benefited from relaxation of prohibition, sale of power, revenue from forest, etc. There is, however, no dispute about the fact that to have a reasonable Plan the State must make all efforts to raise resources. It is with a view to get the entire question examined, a Committee with Experts and experienced personnel has been constituted under the Chairmanship of Sri S. Bhoothalingam, Director General, National Council of Applied Economic Research. This Committee will examine not merely the scope for taxation but also the State's non-tax revenue and resources of Local Bodies.

18 As against a Central assistance of Rs. 36·90 crores for the Annual Plan 1968-69, the Planning Commission has communicated a Central assistance of Rs. 30.60 crores for the year 1969-70. The State Government decided to have a minimum Plan of Rs. 56 crores. But while actually allocating the outlay among the several schemes it was found that the outlay of Rs. 56 crores would leave provisions in certain sectors, which would be insufficient for the works in progress and also to meet certain inescapable commitments, like subsidy to Land Development Bank, provision for fast growing species in Forest Department, Water Supply, to Industries, Infra Structure Development of Tungabhadra Area Ayacut (Market Complex and Construction of Roads), provision for Upper Krishna Project, etc. The Budget, therefore,

(SRI RAMAKRISHNA HEGDE)

provides an outlay of Rs. 62·12 crores, with the following sectoral break-up :—

		(Rs. in crores)
Agricultutal Programme	...	15.56
Community Deveplopment and Co-operation	...	1·79
Irrigation and Power	...	27·70
Transport and Communication	...	3·45
Industries	...	3·44
Social Services and Miscellaneous Services	...	10·18
Total	...	62·12

It may be seen that in making the allocation emphasis has been laid for completion of the existing schemes and also giving priority for 'Agriculture', 'Irrigation' and 'Power'. In comparison with this, the expenditure during three Annual Plans is as under :

(Rs. in crores)

Year	*Budget Provision*	*Expenditure incurred or anticipated*
1966–67	50·82	54·68
1967–68	63·85	64·97
1968–69	60·98	62·44

19 Separate booklets containing detailed activities of Government and brief review of economic situation during the three Annual Plans have been circulated along with the other Budget documents. I do not wish to deal with these at length here. I will only make brief reference to very important aspects of the coming year.

20 In the coming year steps will be taken to bring more area under irrigation to the extent of one lakh acres by utilising the potential created in the major projects of Tungabhadra, Bhadra and Ghataprabha. Minor Irrigation will receive priority attention. The Public Works Budget provides for an outlay of Rs. 3·80 crores for construction and restoration of Reservoirs under Minor Irrigation. It is also proposed to construct 20,000 irrigation wells and distribute 8,000 electric and 5,000 diesel pumpsets on hire-purchase basis with the help of Land Development Bank and Mysore Agro-Industries Corporation. It is programmed to sink 700 bore-wells. Eighteen more seed farms are in the programme. About 38 lakhs of acres is proposed to be covered with improved seeds. High breed seed production is being increased to cater to a bigger area. The target supply of fertilisers is being increased to 3·85 lakhs tons of Ammonium Sulphate, 2·94 lakhs tons of Super Phosphate and 12,000 tons of Muriate Potash. Besides,

green manuring will tackle 11 lakhs acres, urban and rural compost will reach 5 lakhs tons and 50 lakhs tons respectively. The target for Plant Protection is about 42 lakhs acres. The programme to control rodents will continue. It is proposed to bring 53·48 lakhs acres under I.A.D.P. and I.A.A.P. The high yield variety programme will be extended over 12 lakhs acres.

21 All these will no doubt increase production considerably. But increased production beyond certain level will also create certain problems which if not tackled at the appropriate time will have adverse effects on the economy. During the current year there was steep fall in the prices of maize. Unless price support is given the agriculturists will lose confidence and it will be difficult to rejuvenate the enthusiasm when once it is lost. No doubt the State Government has taken certain steps. For large scale industrial use of maize it is proposed to start a Starch Factory. But price policy and other fiscal measures could be satisfactorily enforced at national level. Government of India must consider drastic reduction in imports of such foodgrains to maintain confidence of agriculturists. In our country we never had any rational price policy for agricultural commodities. Unless we hasten to evolve a practical price policy the agriculturists who have shown great interest in increasing production will lose confidence. Without the necessary enthusiasm, confidence and co-operation of agriculturists the campaign of Grow More Food will have no meaning and would attract no response.

22. Under 'Animal Husbandry' the intensive cattle development programme taken up in the Bangalore Milk Shed area is being continued with more inputs. It is proposed to start 40 artificial insemination centres every year. A new medium size intensive cattle development block with 50 artificial insemination units have been sanctioned for the Hubli-Dharwar Milk Supply Scheme. In order to develop the ayacut area of the Tungabhadra Project, a semen bank with artificial insemination units, fodder development and disease control are being taken up. Notable progress has been achieved in all phases of poultry and piggery production.

23. The Department of Horticulture also made much headway in the development of fruits, vegetables, plantations, etc. Technical guidance was extended to farmers on improved practices. In order to improve the Cubbon Park and Lalbagh which formed the lungspace and recreation spots for young and old, schemes to improve these gardens in a phased programme are under consideration and provision for the works to be undertaken in 1969-70 have been included in the Budget.

24. Under Fisheries Development it has been possible to accelerate the pace of mechanisation of fishing with the implementation of the Co-operative Fisheries Projects in South and North Kanara Districts. The total number of mechanised boats in the State is now about 510. Another 102 boats will be added during 1969-70. Four Ice Plants and two Freezing Plants and Cold Storages were commissioned during

(SRI RAMAKRISHNA HEGDE)

this year and four more plants will be commissioned shortly, thus adding considerably to the fish preservation and processing facilities in the State. The exports of fish have been stepped up to 602 tonnes valued at Rs. 107·00 lakhs

25. Greater attention has been paid to the development of fishing harbours in the State. The Government of India have sanctioned the construction of a fishing harbour at Karwar at a cost of Rs. 24·00 lakhs under Centrally-sponsored Schemes and the work is already in progress. A feasibility report on the development of six ports in the State for Fisheries and general cargo submitted to the Government by Messrs. Indopol Ltd., is under examination by Government. It is proposed to take up the construction of fishing harbours at Malpe and Honnavar in the first instance on the basis of the feasibility reports prepared by Messrs. Invest Import of Yugoslavia and Messrs. Indopol Limited, respectively.

26. A fish net making plant set up jointly by the Mysore and Andhra Pradesh Governments under the Tungabhadra Board at Tungabhadra at a cost of Rs. 27 lakhs has been completed and has gone into production. This is the first State to start a Fisheries College.

27. During 1969-70 five crores of fish seed will be stocked in inland waters. Applied Nutrition Programme will be extended to 20 more Community Development Blocks. Besides, development of reservoir fisheries and regional fish seed farm, fish nurseries will be provided at 10 centres.

28. Provision for protected water supply has engaged the constant attention of Government. At the end of current year 132 towns will have protected water supply and 9 towns with underground drainage facility. A provision of Rs. 65 lakhs has been made in the Budget to bring more towns under protected water supply. Besides, Life Insurance Corporation is also being approached for loan assistance. Seven water supply schemes costing Rs. 4·96 crores have been sanctioned under Life Insurance Corporation of India Loan Scheme and 3 more schemes costing Rs. 63 lakhs are expected to be sanctioned. The National Rural Water Supply Scheme has also made good progress. Besides 193 schemes completed to end of 1967-68, 60 more schemes will be nearing completion at the end of the current year. In order to take up more schemes including towns with a population up to 20,000 a provision of Rs. 50 lakhs has been made in the next year's Budget.

29. It may, therefore, be seen that Government is alive to the problem of drinking water in every part of the State and our successive plans will have no impact unless this primary necessity is satisfactorily tackled. A provision of Rs. 65 lakhs has accordingly been made in the Budget for Drinking Water Wells for villages and this will be

supplemented in the course of the year depending on the progress achieved, the idea being that no village should be left without a drinking water well.

30. The Budget also makes provision of Rs. 194 lakhs for implementing the first stage of Bangalore Water Supply and Sewerage Scheme, with an estimated cost of Rs. 22.32 crores.

31. The need for completion of the Irrigation Projects in progress and also to take up projects with a view to safeguard the interests of State has been discussed and there has been no difference of opinion on this subject. In the Budget, provision has been made for Irrigation to the extent of Rs. 12.83 crores of which Ghataprabha receives an allotment of Rs. 2.91 crores, Malaprabha Rs. 2.45 crores, Upper Krishna Rs. 2.00 crores, Hemavathi Rs. 50 lakhs, the balance being distributed among other projects.

32. The expenditure on Education which was Rs. 24.60 crores at the end of 1965-66 would reach a figure of Rs. 46.07 crores in 1969-70. In my last Budget Speech I had referred to the need for consolidation of the progress achieved. The education system in this country has undergone too many changes and sufficient attention has not been paid for improving the quality. This always happens when there is sudden expansion of mass education and too many advisers step into the field. It is, therefore; proposed to pay primary attention to improve the quality. Among the schemes meant for qualitative improvement may be mentioned the appointment of Graduate Head Masters for Higher Primary Schools. A beginning has been made during the current year by creation of 325 posts of Graduate Head Masters. The rules for administering Primary Education in the State will be made uniform. Government is considering establishment of a body at district level in all Districts in place of present School Boards functioning in a few areas. Necessary legislation for uniform administration of Primary Education is being introduced. Such uniformity will result in increased efficiency and also xpenditure. An additional sum of Rupees one crore has been included in the Budget on this account. In the field of Secondary Education a major change in the coming year will be the abolition of electives in the IX Standard and introduction of uniform Text Books throughout the State. In the field of Higher Education, U. G. C. scales of pay was sanctioned to the teaching staff in Government and Affiliated Colleges with effect from 1st April 1968. There are already Kannada medium sections in a few Colleges and during 1969-70 it is proposed to start Kannada medium section in the remaining Colleges. Government have also sanctioned the establishment of a Board for Development of Kannada as a medium of instruction at the University level. The number of Colleges in the State has increased. There are now 136 Colleges with a student strength of 1.20 lakhs. Under Technical Education efforts are being made to diversify the courses and make them more practical base.

(SRI RAMAKRISHNA HEGDE)

33. The Budget of the Education Department provides for enhanced grants to Aided Institutions both under Primary and Secondary. Grants to Private Colleges also show substantial increase. Provision has also been made for the committed expenditure on account of the three Annual Plans and University Grants Commission Schemes in respect of Universities, Collegiate, Technical and General Education.

34. Since Primary and Secondary Education have been made free the expenditure on Education is mounting up. The Finance Commission during discussion also advised to take steps to introduce uniform levy of Education Cess. Action is being taken accordingly. Government have taken the responsibility of disbursement of Pay of all Secondary Schools Teachers in Aided Schools and benefits of Pension, Gratuity, etc., have been extended. It is necessary to have uniformity in the rules regulating discipline and conduct as in the case of Government servants. The rules in this behalf will be formulated.

35. The welfare of youth is engaging greater attention of Government. A separate Department of Youth Welfare has come into being. So far, Government is spendnig about Rs. one crore on various youth welfare measures such as N.C.C., Sports, Grants to youth Organisations. This is considered to be insufficient. Addtional Provision of Rs. 22 lakhs under Non-Plan and Rs. 5 lakhs under Plan has been included for Youth Welfare. The grant to Sports Council has also been enhanced by Rs. 3 lakhs. In the course of the year a comprehensive programme to co-ordinate the different activities will be made.

36. The academy of Dance, Drama and Music and Sahitya and Lalithakala Academies are doing commendable work. To enable them to carry out their functions more extensively the grant has been enhanced by Rs. two lakhs.

37. The days when electricity was treated as the exclusive privilege of the urban people are gone. Mysore State has rich experience as to how quickly surplus power gets absorbed within a short period of time. With the extension of electricity to all the Taluks there is growing demand for use of electricity in rural parts particularly for agricultural operations. In a country which is mainly depending on agriculture, rural electrification plays a very important role. No doubt the State has now surplus power; this is only a temporary phase. It may be recalled that when Shivasamudram and Jog Projects were completed there were criticisms about the economics of the projects and the surplus power. But how soon the surplus power was exhausted and the State became power-starved are facts known to everybody. The State Government has to sell bulk power at economical rates to power based industries. A low return was also fixed for rural electrification. A time has come when there has to be a review with reference

to rates prevailing in neighbouring States since ultimately the Electricity Board should at least manage their affairs, within their income and be able to discharge all obligations. While it is important to have proper phasing of new Hydro-Electric Projects to avoid any shortfalls at a future date they must be made self-supporting in the interest of a sound economy. Government, therefore, propose to get the tarifl rates examined by a Tariff Committee and pending this it may be necessary to have temporary readjustments.

38. The document relating to Departmental activities will give the Hon'ble Members broad details about the working of the Government Industrial concerns. Industries in India, as also other countries faced recession in the past few years. According to the forecast of the National Council of Applied Economic Research, Industrial Production in next year is expected to increase by 7 to 8 per cent, though in regard to industries manufacturing capital goods the signs of recovery are not bright.

39. So far as our State is concerned, Government had to provide finance to some of the major industries like Mysore Iron and Steel Limited, REMCO, NGEF, M.S.K. . Mills, Mandya National Paper Mills, Mysore Acetate and others. These are industries which had to face most adverse effects of recession and devaluation, that are in difficulties.

40. In the context of the utilisation of bulk power available from Sharavathi Project a number of measures have been undertaken with a view to give greater fillip for a faster industrial development. The House is aware of the facilities offered for new industries like provision of land, water, power, price preference to small scale industries, etc. The High Power Committee constituted under the Chairmanship of the Chief Minister consists of eminent industrialists and is expected to give suitable guidance for an orderly rapid development of industries after a thorough review of the present set-up, availability of financial and other resources. I am confident that a useful and instructive blueprint for rapid industrialisation and steps to be taken to achieve the same would be forthcoming. The policy of exempting industries from the licensing provision of the (Industries Development and Regulation) Act, 1951 has been pursued by the Government of India during the current year also. Apart from the 10 industries de-licensed last year, Vanaspathi Industry subject to certian limits has also been de-licensed.

41. The policy of liberalisation has already attracted proposals to set up additional capacities in industries covered by Ceramics, Pulp, Power-alcohol and Portland Cement. As a result of steps taken by Government 13 licences—letter of intents—have been received during the last one year. These include licences for manufacture of silicon power diodes, induction disk type protective relays, X-ray tubes and accessories, T. B. picture tubes, cathode ray tubes, etc. Approval of

(SRI RAMAKRISHNA HEGDE)

Government of India has been obtained to set up a new industrial undertaking for tyres and tubes manufacturing machinery. In a few important cases manufacturing of data processing machinery, manufacture of dry cell, etc., the decision of Government of India is awaited. The climate for industrial Developmment is now far more favourable. The Mysore State Industrial Investment and Development Corporation has been surveying the industrial potential of the State with a view to initiating and sponsoring suitable projects. The Corporation has been assisting new and existing industries in several ways. The Mysore Industrial Area Development Board have initiated steps to acquire land near Bangalore, Mysore, Mangalore, Davanagere, Harihar, Sedam, Belgaum and Dharwar to form industrial development areas.

42. Mysore continues to be the major silk producing State in the country accounting for nearly 2 lakh kgs. of silk per annum valued at over Rs. 15 crores. The tariff protection granted to the industry will last till the end of the current year. In the present rate of progress Mysore State would have helped in creating surplus in silk production. Sericulture in Mysore State is providing large scale employment for the rural population. The role that Silk Filatures play in producing quality silk and stabilising the prices of cocoon and silk have been appreciated at the All India level by a sub-committee of the Central Silk Board. Since the heavy losses incurred by the Filatures cannot be borne continuously by the State Government, the Committee has suggested constitution of a Corporation and sharing of losses by the Centre. For the development of Silk Industry important schemes have been drawn up and will be implemented with reference to availability of funds. The foregin exchange earnings by way of exports by the Silk Industry has steadily increased and Mysore has contributed substantially.

43. The total value of minerals produced in the State during the year 1967 is about Rs. 8·40 crores. The revenue of the Department during the coming year is expected to be over Rupees one crore. The Department has also taken up intensive exploration and assessment of some of the important industrial minerals like bauxite in West Coast, limestone in Bijapur and Belgaum Districts. The Mysore Minerals Limited has a programme for an overall turnover of Rs. 2·50 crores during the year. The investigation of the magnetite ore in Kuduremukha taken up by the N.M.D.C. having been completed, tests on pilot plant scale are expected to be completed in about 18 months' time. The N.M.D.C. finalised the project report on the exploitation of iron ore deposits of Donimalai range and obtained a mining lease over this area. A quantity of about 4 million tons per year is expected to be produced. The Chitradurga Copper Co., Limited. has made steady progress in the exploratory work. Messrs. Associated Cement Co. have started their new Cement Plant at Wadi with a target capacity of one million tons per year.

44. The expansion scheme of Mild Steel of the Mysore Iron and Steel Limited has been completed. The schemes relating to production of Alloy and Special Steel and expansion of Electric Pig Iron Furnace are under progress. The value of gross sales next year would be about Rs. 19·42 crores, as against Rs. 13 crores of 1967-68.

45. The anticipated rate of growth of 7 per cent per annum under Exports from this country would be feasible only if the industries which are hit by recession and competition are given a fillip, particularly Metallurgical, Engineering, Chemical and Electrical Industries. The State Government had to come to the rescue of Mysore Iron and Steel Limited, by converting all the loans and other dues from the Company to share capital. The Budget for next year takes into account a provision of Rs. 250 lakhs for investment in this Company and this is covered by Central assistance.

46. An important factor that would arise for consideration is whether Government should go on supporting public sector undertakings indefinitely even at the cost of other sectors of the economy. It is seen that huge investments are locked up in the public sector undertakings in the country. Out of a total investment of about Rs. 2,841 crores at the end of 1966-67 nearly 40 per cent was attributed to Steel Industry. While a few have earned profits, others have accumulated heavy losses for various reasons. Apart from loans, small savings, and taxation, one of the major resources for financing development programme in the country is contribution from public enterprises by way of reserves, depreciation, profits, etc. The working of public sector undertakings have come in for severe criticisms both on public platforms and Houses of Legislature. While monopoly in private Sector has to be deprecated, it should be our policy, in the best interest of rapid economic growth, to allow both private and Public Sectors to function side by side.

47. In our own State the Government investment in industrial undertakings is very heavy as compared to other States. I feel that a time has come to review our policy in this regard and decide whether in view of the topmost priority given to irrigation and agricultural development the limited resources of the Government should not be exclusively earmarked in favour of irrigation projects and leave the industrial development to private enterprise as done in Madras and other States. The Government has to act as a catalytic agent of economic development. Since the last two years Government have taken series of steps to improve the working of public sector undertakings in the State. If it is found that any undertaking cannot be made to run on profit, Government will not hesitate to come to some arrangement with private entrepreneurs in the interest of industry and public finances. I am glad to note that the Legislature will have a separate committee on public undertakings, which I hope, will give timely advice for getting over lapses and make them function efficiently.

(SRI RAMAKRISHNA HEGDE)

ACCOUNTS 1967-68

48. The Revised Estimates for 1967-68 anticipated a revenue surplus of Rs. 10·86 crores. The actuals for the year turned out to be a surplus of Rs. 13·47 crores, an improvement of Rs. 2·61 crores. This was the result of decrease under revenue of Rs. 5·63 crores and a reduction in expenditure of Rs. 8·24 crores.

49. The Revised Estimates for the year anticipated a capital expenditure of Rs. 40·18 crores but the actuals, however, turned out to be Rs. 38·59 crores. Increases mainly appear under Irrigation and Industries heads. This was, however, set off by an incoming of Rs. 4·27 crores under Government Trading.

50. The year opened with a cash balance of *minus* Rs. 2·95 crores and a Ways and Means Advance of Rs. 0·40 crore. At the end of the year, the cash balance rose to Rs. 1·09 crores but the Ways and Means Advance and the overdraft increased to Rs. 14·50 crores as anticipated after taking into account the *Ad hoc* Loan of Rs. 17·40 crores granted by the Centre.

REVISED 1968-69

51. The Budget of 1968-69 provided for a revenue of Rs. 194·74 crores and a revenue expenditure of Rs. 182·76 crores, leaving a surplus of Rs. 11·98 crores. The revised estimates now indicate a total revenue of Rs. 215·36 crores and a revenue expenditure of Rs. 215·37 crores leaving a deficit of Rs. 0·01 crore.

52. The increase of Rs. 20·62 crores in revenue is the result of a large number of variations. The principal heads of revenues show an improvement of Rs. 1·93 crores mainly accounted for by an improvement of Rs. 2·44 crores under 'Taxes on Income' (due to adjustment of arrears under Income-Tax and increase under Agricultural Income-Tax), Rs. 0·87 crore under 'Sales Tax', Rs. 1·06 crores under 'State Excise Duties', Rs. 1·25 crores under 'Other Taxes and Duties', Rs. 0·30 crore under 'Taxes on Vehicles' set off by shortfall of Rs. 4·00 crores under 'Land Revenue', and Rs. 0·10 crore under 'Estate Duty', the thanges in other heads being minor. There is an improvement of Rs. 18·32 crores under 'Intere Rs. 0·11 crore under 'Administrative Services', Rs. 1·00 crore under 'Forest', Rs. 1·11 crores under 'Electricity Schemes' due to arrears and Rs 1·32 crores under 'State share of Excise Duties'. The improvement under 'Interest' is mainly due to adjustment of arrear interest on Hydro-Electric Construction Projects (contra entry) and also interest dues from the Mysore Iron and Steel Limited, Bhadravathi, adjusted towards Share Capital. The above improvements are set off by a fall of Rs. 1·16 crores in the receipt of

V-31 N69
N 69-16.2-8
(B) 4860

Grant-in-aid from the Centre, mostly on account of assistance anticipated for Centrally-sponsored Schemes not being received, of Rs. 0·46 crore under 'Animal Husbandry' due to fall under 'Milk Receipts', Rs. 1·31 crores under 'Irrigation, Navigation, Embankment and Drainage Works (Commercial)' for non-collection of water rate and betterment levy, Rs. 0.85 crore under 'Industries' due to lower receipts under 'Commercial Undertakings'. The other variations which are spread over a number of heads do not call for any special comment.

53. Expenditure met from revenue is now expected to be Rs. 32·61 crores more than what was provided in the Budget, the anticipated increases mainly appearing under the following.

54. 'State Excise Duties' Rs. 0·51 crore, 'Apporpriation for Reduction or Avoidance of Debt' Rs. 3·31 crores, 'General Administration' Rs. 0·38 crore 'Education' Rs. 1·80 crores, 'Agriculture' Rs. 1·14 crore Rural Development' Rs. 0.78 crore, 'Co-operation' Rs. 0·49 crore, 'Irrigation, Navigation, Embankment and Drainage Works (Commercial)' Rs. 0·56 crore, 'Electricity Schemes' Rs. 19·69 crores (due to adjustments of arrear interest on Capital and contribution towards depreciation), 'Famine Relief' Rs. 7·70 crores and 'Pension and Other Retirement Benefits' Rs. 0.22 crore.

There were, however, decreases as under :—

55. 'Land Revenue' Rs. 0·37 crore, 'Interest on Debt and Other Obligations' Rs. 1·12 crores, 'Police' Rs. 0.27 crore, 'Public Health' Rs. 0·38 crore, 'Animal Husbandry' Rs. 0·63 crore, 'Industries' Rs. 0·31 crore, 'Labour and Employment' Rs. 0·25 crore, 'Irrigation, Navigation, Embankment and Drainage Works (Non-Commercial)' Rs. 0 29 crore, 'Forest' Rs. 0·33 crore, and 'Miscellaneous' Rs. 0·38 crore, the variations under other heads are minor. The savings under non-development heads like 'Land Revenue,' 'Police' and 'Miscellaneous' were mainly due to economy measures.

56. The current year opened with a cash balance of Rs. 1·09 crores a Ways and Means Advance and Overdraft from the Reserve Bank of India of Rs. 14·50 crores. The transactions of the year are expected to result in an overall small surplus of Rs. 0·56 crore. There will be a total outgo of Rs. 114·16 crores made up of Capital Outlay of Rs. 53·00 crores, Rs. 53·48 crores on repayment of Debt including Rs. 14·00 crores being repayment of overdraft to the Reserve Bank of India during the current year with the anticipated *ad hoc* loan of this amount, Rs. 0·59 crore on repayment of Inter-State Debt, net outgo of Rs. 7·08 crores under 'Loans and Advances' and Revenue deficit of Rs. 0·01 crore. This will be partly covered by a total receipt of Rs. 11[illegible]·73 crores, made up of Rs. 0·38 crore of recoupment to Contingency Fund, Rs. 6·60 crores from Market Borrowings, Rs. 76·47 crores from Borrowings from the Centre (inclusive of an *ad hoc* loan of Rs. 14 crores anticipated for clearance of opening overdraft, a loan of

(SRI RAMAKRISHNA HEGDE)

Rs. 7 crores for Scarcity Relief and a net short-term loan of Rs. 10·41 crores on cover of fertilisers), Rs. 2·26 crores from 'Other Borrowings', Rs 1·77 crores from net receipts under 'Unfunded Debt', and Rs. 27·25 crores from 'Debt and Deposit' heads, resulting in an over-all surplus of Rs. 0·56 crore. This will slightly improve the opening cash balance of Rs. 1·09 crores, to balance of Rs. 1·65 crores at the end of the current year.

57. Even when the resources for the current year were assessed by the Planning Commission it was anticipated that there would be an overdraft of Rs. 15 crores for implementing a Plan Outlay of Rs. 60·25 crores. It was at that time suggested that the Plan should be drastically reduced. The State Government could not adopt a reduced Plan particularly in view of the large imbalance in the developmental programme in the previous years and any reduction would have had a serious setback in the State's economy. The Revenue Surplus anticipated in the Budget has worsened because of reduction under water rate, expenditure of Rs. 1 crore towards subsidy to Land Development Bank to cover the difference in rate of interest and other items. The economy measures no doubt resulted in savings but this has been offset by additional commitments and.impact of additional dearness allowance given from 1st March 1968 not provided for in the original estimates. The overdraft could not, therefore, be avoided.

58. Capital expenditure this year is expected to be Rs. 53·00 crores against the Budget Estimate of Rs. 38·61 crores. The increase of Rs. 14·39 crores is accounted for by an increase of Rs. 17.01 crores in Capital Outlay on Industrial Development due to adjustment of dues from Mysore Iron and Steel Ltd., as share capital and further investment coverd by Government of of India loan assistance and adjustment of investments in Mysore State Road Transport Corporation transferred to this head from 'Capital Outlay on Road Transport Schemes', Rs. 5.19 crores in 'Capital Outlay on Irrigation, Navigation, Embankment and Drianage Works (Commercial)' to readjustment of Plan Outlay after the Budget was presented, Rs. 0·20 crore under 'Irrigation, Navigation, Embankment and Drianage Works (Non-Commercial)', Rs. 0·61 crore under Goveroment Trading counter-balanced by shortfalls under 'Public Works' Rs. 1·34 crores, Electricity Schemes Rs. 2·01 crores, 'Ports' Rs. 0·05 crore and adjustment under 'Road Transport Schemes' Rs. 5·22 crores (contra entry).

59. The House is aware that Government in their Order dated 8th October 1968 indicated economy cut in expenditure to the extent of about Rs. 5·47 crores. Except in very special cases, Government did not give permision to fill up posts and number of posts had been kept in abeyance. Expediture on works and other items had also been curtailed to the extent possible.

BUDGET 1969-70

60 The members will be happy to note that the State Income has crossed the level of Rs. 200 crores. At the existing level of taxation, the revenue for the next year is expected to reach Rs. 213·26 crores and the expenditure on Revenue account Rs. 226·48 crores leaving a deficit of Rs. 13·22 crores.

61. The Revenue Estimates show improvements under several heads and include collection of arrears. Land Revenue, State Excise Duties, Sales Tax, Tax on Vehicles, Other Taxes and Duties, Stamps, Registration, Education, Medical, Public Health, Agriculture, Industries, Miscellaneous Social and Developmental Organisations (due to change in classification of 'Milk Receipts'), Irrigation (Commercial and Non-Commercial), State share of Union Excise Duties, Grants-in-aid from Central Government are all expected to bring in additional income in the coming year. The question of improving the yields under the existing heads of Revenue has engaged careful review. The Budget also takes credit for Rs. 7·60 crores being receipts by Sale of Power from Sharavathi and Bhadra to the State Electricity Board.

62. The Revenue expenditure in the coming year reflects an increase of Rs. 11·11 crores over the Revised Estimates of the current year. The Revenue Budget includes a State Plan Outlay of Rs. 8.88 crores (net), *i.e.*, Rs. 26·42 crores outlay on expenditure side including outlay on Centrally sponsored Schemes with a Central assistance of Rs. 17·54 crores for State Plan and Centrally sponsored Scheme on the receipt side. Provision has been included for grants to Universities, for interest charges on outstanding loans and the normal increases in administrative expenditure. The outlay on Centrally sponsored Schemes depend on the quantum of Central assistance and keeping in view of the past actuals, provision has been made only where Central assistance could be reasonably expected. A provision of Rs. 20·30 crores has been made under the head 'Appropriation for Reduction or Avoidance of Debt' out of which Rs. 8·80 crores will be towards repayment of *Ad hoc* Loan sanctioned during the last three years and the balance taken as resources for financing the Plan Outlay. A review of the expenditure under Revenue Account will show that out of Rs. 226·48 crores. Rs. 9·17 crores will be for tax collection, Rs. 40.58 crores for Debt Services, (which include a provision of Rs. 8·80 crores for repayment of *Ad hoc* loan from the Centre), Rs.17·80 crores for Administrative Services, Rs. 103·55 crores for Social and Developmental Services (Education alone accounts for Rs. 46.07 crores, Medical and Health Rs. 16·57 crores), Rs. 34.28 crores for Public Works, Electricity and Irrigation, Rs. 3·75 crores for Pension and other Retirement Benefits, Privy Purses and Territorial and Political Pensions and Rs. 6.86 crores for Forest. Out of the total Revenue Expenditure of Rs. 226·48 crores, a sum of Rs. 26·42 crores has been provided for Plan Outlay and Outlay on Centrally sponsored Schemes, leaving a balance of about Rs. 200

(SRI RAMAKRISHNA HEGDE)

crores as Non-plan. A sum of about Rs. 9 crores has been included as Committed Expenditure on account of three Annual Plans and becomes part of Non-plan. The Budget also reflects the increase in Dearness Allowance rates to Government servants given effect to from 1st March 1968 to the extent of about Rs. 7 to 7½ crores. A provision of Rs. 100 lakhs has been included for meeting extra cost on account of revised Grant-in-aid Code to Educational Institutions and additional provision has been included under 'Land Revenue' for compensation to Village Officers, appointment of Village Accountants and Police Patels.

63. For Capital Outlay, a provision of Rs. 42·99 crores has been included. Out of this, Rs. 22·20 crores are for Irrigation and Power, Rs. 8·63 crores for Roads and Buildings, Rs. 9·89 crores for Industries (including investment in the share capital of Aided Concerns and Co-operative Institutions), Rs. 1·25 crores for Improvement on Public Health. The balance of the provision is for items like Ports· Forests, Compensation and other miscellaneous items including Food Supply Operations. Out of the total Capital Outlay of Rs. 42·99 crores, outlay of Rs. 34·66 crores forms part of the Plan including Centrally sponsored Schemes, leaving a balance of Rs. 8·33 crores for outlay outside the Plan. This does not include Capital expenditure incurred by the Mysore State Electricity Board to the extent of Rs. 7·75 crores which also forms part of the Plan. For minor Irrigation works in the Public Works Department adequate provision has been made in the Budget to see that works already taken up are speedily completed. Under 'Communications' the allocated Plan provision of Rs. 150 lakhs was not sufficient even for works in progress and had to be increased to about Rs. 300 lakhs. Under 'Buildings', provision has been included for works relating to Plan Schemes of the Departments concerned such as Health Dispensaries; Veterinary Hospitals, Schools, Colleges. etc. Outside the Plan, provision has been included of Rs. 20 lakhs for residential quarters for Government servants, Rs. 10 lakhs for Rental Housing Rs. 1·00 lakh for Mysore House, Rs. 22·50 lakhs for Court Buildings, Rs. 15·00 lakhs for Commercial Taxes Buildings, Rs. 75 lakhs for Police Housing and other items.

64. Under Loans and advances, credit has been taken for larger recoveries, considering the outstanding balances. The House will appreciate that any slackness in collection would affect the State in raising resources and Government is prepared to take stringent action to collect all the arrears.

65. During the current year Government raised a public loan of Rs. Six crores and the same was over-subscribed. The 4 per cent Mysore State Development Loan 1968 of Rs. 4·11 crores was repaid. We had investments in State Government loans including Mysore Loans of the previous years. We released the scrips to the extent of about

Rs. 4 crores through Reserve Bank of India to enable stability in the price of Securities. Unlike previous years, the small savings collection drive had some special features. The Directorate of Small Savings organised Cultural programmes and also Cricket matches at Belgaum and Mangalore respectively. It is also proposed to organize Cricket matches in North Kanara District and Hubli. I am glad to inform the the House that we have been able to collect Rs. 3½ crores (net) in spite of difficulties and it may be possible to reach about Rs. 5 crores (net) at the end of the year. The next year's Budget also includes a bowrrowing programme by the State Government to the extent of Rs. 9 crores, because we will have to repay two loans *viz.*, (i) 4¼ per cent Mysore State Development Loan, 1969—Rs. 3·34 crores and (ii) 4 per cent Mysore State Development Loan, 1969—Rs. 4·38 crores, with usual conversion facilities. This is besides the borrowing programme of autonomous bodies, Land Development Bank and Housing Board. The Small Savings Organisation is expected to collect a net sum of Rs. 6 crores.

66. With the greater awarness among the agriculturists the demand for inputs is bound to go up. There will thus be a substantial credit gap in the agricultural sector. The green revolution could be carried through only by bridging this gap with the energetic and co-ordinated efforts of the Co-operatives and Banks. I may also mention that concerted action is also necessary against those who are responsible for heavy overdues in certain areas which has come in the way of further inflow of credit and has done a positive harm to the growth of economy. I need hardly stress the importance for the State to take full advantage of the facilities afforded by the various financing agencies for Development Schemes.

67. The provision for disbursement of Loans and Advances in the Budget is Rs. 26·21 crores. In addition to normal items like Takavi and Land Improvement Loans, the Budget includes a provision of Rs. 4·32 crores forming part of Plan, Rs. 1·56 crores for loans to Government servants, Rs. 5 lakhs for Loans to Universities for sanction of House Building and other advances to their staff, Rs. 95 lakhs for Housing Schemes financed by loans from the Life Insurance Corporation, Rs. 48 lakhs for National Loan Scholarships and Rs. 25 lakhs under State Aid to Industries Act. provision of Rs. 16 crores has been made for purchase of Fertilisers and seeds for Sale to Cultivators against which a recovery of Rs. 10 crores has been anticipated. Loans under the Plan include loans for Irrigation Wells and Purchase of Pumpsets, loans to the Bangalore Water Supply and Sewerage Board, loan for other Urban Water Supply Schemes, Soil Conservation, Community Development etc.

68. To summarise the transactions of the coming year according to the Budget placed before the House, the year open with a cash balance of Rs. 1·66 crores. The outgo during the year will be Rs 52·00 crores on account of Debt repayment (including repayment of Rs. 8·80

(SRI RAMAKRISHNA HEGDE)

crores towards *Ad hoc* loan sanctioned by Government of India and Rs. 15·67 crores short-term loan repayments, Rs. 42·99 crores on account of Capital Outlay, Rs. 11·40 crores on account of net outgo under Loans and Advances and revenue deficit of Rs. 13·22 crores making a total of Rs. 119·61 crores. This will be met by a Market loan of Rs 9 crores, borrowing of Rs. 51·25 crores from the Central Government and Rs. 2.80 crores from other sources, a net receipt of Rs. 1·85 crores under Unfunded Debt and Rs. 23·12 crores under Debt, Deposits heads making a total receipt of Rs. 88·02 crores, thus leaving a minus balance of Rs. 29·94 crores, in view of overall deficit of Rs. 31·59 crores. As indicated earlier Central assistance cannot be less than what we got this year. Every effort will be made to persuade Government of India to sanction another Rs. 7 to 8 crores. A good portion of Revenue Deficit is expected to be covered by the award of Finance Commission and the balance is expected to be made good by *ad hoc* loan since the State could initiate measures to raise fresh resources only on the recommendation of the Mysore Taxation Enquiry and Resources Committee.

69. With the abolition of the hereditary officers it has become necessary to appoint whole time Villags Accountants. The actual number to be employed is being examined with reference to the several items of work to be entrusted to these Government servants. The Finance Commission has also been apprised of the need to strengthen the Village administration in the future interest of the rural economy. The Budget includes a provision of Rs. 1 crore for Village Accountants and Rs. 60 lakhs for Police Patels. Government will take an early decision in this matter. The Act abolishing the hereditary officers provides for compensation to those who held the post of hereditary officers. It is estimated that a sum of Rs. 3 and odd crores would be necessary after taking into account the income from Land Revenue. The entire amount may have to be paid over a period of two years. A provision of Rs. 1·65 crores has been included on account of this compensation in the Budget.

70. Government have always given sympathetic consideration to the welfare of its employees consistent with its resources. Scales of pay have been revised and dearness and compensatory allowances increased from time to time at considerable cost to the State exchequer.

71. The Pay Commission appointed in November 1966 has made several recommendations and the Report has already been discussed in the Legislature. Besides the heavy extra cost on account of dearness allowance or other commitments on the basis of interim reports of the Commission, the recommendations now embodied in the final report would involve a commitment of about Rs. 22 crores. This is beyond

the capacity of State's resources. These recommendations have been placed before the Finance Commission. These main item involving heavy cost is revision of pay scales. The implementation of this recommendation as also merger of dearness allowance will have to be left for consideration only after Finance Commission gives its award.

72. In the meanwhile Government have decided to accept the recommendations regarding dearness allowance, City Compensatory allowance and House rent allowance. The rates of dearness allowance, City Compensatory allowance and the House rent allowance from 1st April 1969 will be revised as follows. These will be in lieu of the existing ones.

(i) Dearness allowance

Pay Range Rs.	Rs.
Up to 109	71
110—149	98
150—209	122
210—399	146
400—449	160
450—499	164
500—575 (with marginal adjustments)	120

(ii) City Compensatory allowance

I. Bangalore City

Sl. No.	Basic pay range	Rate of allowance
1.	Below Rs. 250 per month	5% of basic pay subject to a minimum of Rs. 5 and a miximum of Rs. 12 per month.
2.	Rs. 250 to Rs. 500 p. m.	4% of basic pay subject to a minimum of Rs. 12 and maximum of Rs. 20 per month.

(with marginal adjustments in the case of officers getting a pay between Rs. 500 and Rs. 520 per month.)

II. Mysore, Kolar Gold Fields, Mangalore, Belgaum and Hubli—Dharwar.

1.	Below Rs. 500 per month.	3% of basic pay subject to a minimum of Rs. 4 per month.

(with marginal adjustment in the case of officers getting a pay between Rs. 500 and Rs. 515 per month).

(SRI RAMAKRISHNA HEGDE)

(iii) House Rent allowance

I. Bangalore City

Sl. No.	Basic pay range	Rate of allowance
1.	Those drawing basice pay not exceeding Rs. 200 per month.	7½ per cent of pay subject to a minimum of Rs. 7·50 and a maximum of Rs. 12.50 p. m.
2.	Those drawing basic pay of... Rs. 201 or more but not exceeding Rs. 400 p. m.	6 per cent of pay subject to a minimum of Rs. 12.50 and a maxmum of Rs. 20 p.m.
3.	Those drawing basic pay of... Rs. 401 or more but not exceeding Rs. 500 p. m.	4½ per cent of pay subject to a minimum of Rs. 20 and a maximum of Rs. 22.50 p. m.
	II. Places with population of 1 lakh and above	
1.	Those drawing basic pay... not exceeding Rs. 200 p. m.	5 per cent of pay subject to a minimum of Rs. 5 and maximum of Rs. 7-50 p. m.
2.	Those drawing basic pay of... Rs. 201 or more but not exceeding Rs. 400 p. m.	4 per cent of pay subject to a minimum of Rs. 8 and a mximum of Rs. 12-50 p.m.
3.	Those drawing basic pay... of Rs. 401 or more but not exceeding Rs. 500 p. m.	3 per cent of pay subject to a minimum of Rs. 12-50 and a maximum of Rs. 15 p.m.
	III. Places with population of 25,000 and above	
1.	Those drawing basic pay... not exceeding Rs. 200 p. m.	2½ per cent of pay subject to a minimum of Rs. 3 and a maximum of Rs. 5 p.m.
2.	Those drwing basic pay of... Rs. 201 or more but not exceeding Rs. 500 p.m.	2 per cent of pay subject to a minimum of Rs. 5 and a maximum of Rs. 10. p.m.

(with marginal adjustments in the case of Officers getting a pay between Rs. 500 and Rs. 522-50 in Category I, between Rs. 500 and Rs. 515 in Category II and between Rs. 400 and Rs.410 in Category III).

73. These will be applicable to employees of local bodies, aided institutions and Government Industrial concerns. In respect of local bodies other than Taluk Boards and Village Panchayats the increase from 1st April 1969 will be entitled to assistance by the Government.

(ಗ್ರಂಥಾಲಯ) Accession No. 48650 Date..........

The Taluk Board and Village Panchayats which receive entire Land Revenue are not entitled to any assistance.

74. Government have also considered the recommendations relating to Cash allowance for minor ailments. The intention behind this recommendation is appreciated. But it is to be noted that Mysore Medical Concession Rules are already liberal. It will not be possible in the existing state of financial position for Government to accept this recommendation. The other recommendations relating to T.A., Scholarships and other amenities in particular departments would be considered after the Finance Commission's report is received.

75. The expenditure on account of the decisions to accept the recommendations relating to D.A., C.C.A., H.R.A. will be about Rs. 3·25 crores per annum and Rs. 16·25 crores for five years. This has not been included in the Budget and this commitment is anticipated to be covered by the award of the Finance Commission.

76. The total debt including amounts due to Government of India, Public Loans and others at end of 1969-70 stands at Rs. 397·52 crores. This is besides the outstanding balances under Unfunded Debt and deposits of Rs. 28·47 crores. The liability is covered by Assets valued at Rs. 484·65 crores. Besides this, Government own many Assets not taken to Capital Account. The Assets cannot be assessed in terms of their market value because these Assets are not created for being sold but to produce wealth and create a self generating economy in due course and endure to the prosperity and happiness of the people.

77. It is no doubt a fact that our Debt Servicing charges are reaching alarming proportion. The Budget provides for Rs. 20·27 crores by way of Interest, Rs. 52·00 crores by way of repayment of loan. It will not be possible to improve the standards of the people without investment, which in turn implies borrowing. It is well understood that our expenditure programme should be within our resources. But a stage has reached when it is important to examine the risks involved in reducing the Plan outlay. In my opinion considering the large scale unemployment, the interest generated in the rural parts to take up Agriculture as an Industry and the aspirations of the younger generation for a reasonable standard of life, I am afraid this State as others would not be able to avoid deficit financing altogether for productive schemes. Therefore, we must provide for a minimum programme of public spending for essential schemes not only to preserve what we have achieved but also to give a reasonable hope of a good future, I can assure the House and the Government of India that all steps will be taken to avoid extravagance. If you study the Budget proposals carefully, you will appreciate that in regard to Non-plan and un-productive outlay only minimum provision has been made.

78. ಆಯವ್ಯಯದ ಅಂದಾಜುಗಳನ್ನು ತಾವು ಪರಿಶೀಲಿಸಬೇಕೆಂದು ವಿನಂತಿಸಿಕೊಂಡು ತಮ್ಮ ಸಹಕಾರವನ್ನೂ ಅಮೂಲ್ಯ ಸೂಚನೆಗಳನ್ನೂ ಕೋರುತ್ತೇನೆ.

JAI HIND

(SRI RAMAKRISHNA HEGDE)

ANNEXURE A

The following table shows the progressive increase in State's Revenues commencing from 1963-64

(*Rs. in lakhs*)

A. DIRECT TAXES (1)	Accounts, 1963–64 (2)	Accounts, 1964–65 (3)	Accounts, 1965–66 (4)	Accounts, 1966–67 (5)	Accounts, 1967–68 (6)	Revised, 1968–69 (7)	Budget, 1969–70 (8)
I. *Share of Central Taxes* :							
1. Income Tax ...	619·40	634·02	631·80	706·27	900·07	1003·17	939·03
2. Estate Duty ...	22·88	37·39	37·78	26·28	72·75	35·86	45·41
3. Tax on Railway Fares ...	56·00	56·00	56·00	64·68	64·68	64·68	62·24
Total I ...	698·28	727·41	725·58	797·23	1037·50	1103·71	1046·68
II. *State Taxes* :							
1. Agricultural Income Tax	37·47	101·08	158·08	150·51	182·46	161·00	172·00
2. Land Revenue ...	823·50	710·52	556·74	386·94	740·82	504·68	577·29
3. Stamps ...	297·20	316·11	380·19	425·16	481·81	535·00	560·00
4. Registration ...	46·93	48·70	59·26	64·38	71·58	81·00	85·00
Total II ...	1205·10	1174·61	1154·27	1026·99	1476·67	1281·68	1394·29
Total A. DIRECT TAXES ...	1903·38	1903·82	1879·85	1824·22	2514·17	2385·39	2440·97

ANNEXURE A—(*Contd.*)

(*Rs. in lakhs*)

B. INDIRECT TAXES	Accounts, 1963–64	Accounts, 1964–65	Accounts, 1965–66	Accounts, 1966–67	Accounts, 1967–68	Revised, 1968–69	Budget, 1969–70
(1)	(2)	(3)	(4)	(5)	(6)	(7)	(8)
I. *Share of Central Taxes:*							
1. Union Excise Duties ...	537.48	501.16	652.06	1002.29	1103.24	1312.61	1341.79
2. Additional Excise Duties in lieu of Sales Tax ...	154.70	141.84	96.02	169.57	96.99	195.54	222.85
Total I ...	692.18	643.00	748.08	1171.86	1200.23	1508.15	1564.64
II. *State Taxes:*							
1. State Excise ...	352.06	372.87	404.04	440.57	711.19	1206.95	1390.71
2. Tax on Vehicles ...	720.10	542.87	569.56	610.06	688.75	750.00	770.00
3. Sales Tax on Motor Spirits. 4. Sales Tax (General)	1212.23	1473.62	1786.90	2457.42	2528.24	2830.00	3050.00
5. Inter-State Sales Tax ...	139.73	174.02	166.78	185.81	296.37	470.00	528.00
6. Electricity Duty ...	177.37	196.34	217.24	174.29	138.29	298.46	298.56
7. Entertainment Tax ...	146.19	130.51	151.80	187.84	210.40	247.12	255.40
8. Other taxes including Sugarcane Cess ...	16.04	188.95	194.06	217.60	256.36	284.25	291.88
9. Health Cess ...	57.29	51.06	51.90	61.61	90.20	85.00	85.00
Total II ...	2821.01	3130.24	3542.28	4335.20	4919.80	6171.78	6669.55
Total (B) INDIRECT TAXES I & II	3513.19	3773.24	4290.36	5507.06	6120.03	7679.93	8234.19
Total TAX REVENUE A & B ...	5416.57	5677.06	6170.21	7331.28	8634.20	10065.32	10675.16

(SRI RAMAKRISHNA HEGDE)

ANNEXURE A—(*Concld.*)

(*Rs. in lakhs*)

C. NON-TAX REVENUE	Accounts, 1963—64	Accounts, 1964—65	Accounts, 1965—66	Accounts, 1966—67	Accounts, 1967—68	Revised, 1968—69	Budget 1969—70
(1)	(2)	(3)	(4)	(5)	(6)	(7)	(8)
Net Revenue from Industrial Concerns ...	—64·95	—64·52	-122·91	—101·87	—149.64	—46·72	14·09
Net Revenue from Forest Department ...	492·51	517·84	497·24	587·52	535·63	586·20	479·97
Net Receipts from Irrigation (**excluding interest on Capital).	—36.23	—23·24	—48·17	—81·36	—99·54	—57·48	62·40
Total C	391·33	430·08	326·16	404·29	286·45	482·00	556·46
Total Tax and Non-tax Revenue (A+B+C) ...	5807·90	6107·14	6496·37	7735·57	8920·65	10547·32	11231·62
** Grants-in-aid from the Centre under provisions of the Constitution ...	679·28	675·00	687·88	2082·00	2082·00	2082·00	2082·00

Note.—*With the addition of interest on Capital the net receipt will show a very large deficit.

ANNEXURE B

Table showing expenditure on some of the Developmental Heads in Revenue Accounts.

(*Rs. in lakhs*)

Revenue Head	Accounts, 1963–64	Accounts, 1964–65	Accounts, 1965–66	Accounts, 1966–67	Accounts, 1967–68	Revised 1968–69	Budget 1969–70
Education ...	1826·39	2066·91	2460·27	2838·21	3153.04	3788.52	4607.46
Agriculture ...	297·10	300·72	572·58	469·80	556.57	779.53	1051.23
Animal Husbandry ...	121·65	133·77	211·72	250·48	334.63	478.15	195.19
Industries including Sericulture (Gross).	939·75	1080·33	1195·43	1291·14	1220.54	1207.32	1317.58
Rural Development ...	21·54	25·94	34·97	42·27	103.44	147.00	118.13
Co-operation ...	70·90	78·30	92·12	114·24	150.04	177.89	203.24
Public Works including Civil Works and Irrigation and Grants to Local Bodies (Gross).	1814·73	1870·40	1989·38	2240·58	2321.87	4588.32	3428.47
edical ...	330·77	375·34	412·08	485·38	578.28	640.34	737.94
ublic Health ...	301·79	296·53	301·22	371·87	447.21	565.86	919.36
abour and Employment ...	60·73	59·95	80·30	76·09	94.95	101.53	127.13
isc. Social and Developmental organisations.	157.68	167·69	221·01	236·07	261.53	336.18	722.54
Total ...	5952·13	6455·88	7571·08	[illegible]	9222.10	12810.64	13428.27

(SRI RAMAKRISHNA HEGDE)

ANNEXURE C

Table showing capital outlay on works outside the Revenue Account.

(*Rs. in lakhs*)

...	Accounts, 1963-64	Accounts, 1964-65	Accounts, 1965-66	Accounts, 1966-67	Accounts 1967-68	Revised, 1968-69	Budget, 1969-70
rrigation Works ...	1089·20	1042·39	1065·66	1149·40	1579·11	1845·86	1500·00
ublic Works ...	725·33	693·32	750·17	787·88	761·32	714·80	862·97
Iydro-Electric Works ...	1390·07	997·26	793·50	976·73	819·55	682·72	720·45
ndustrial and other works, including Iron and Steel Works and Road Transport Schemes.	197·43	151·61	752·20	911·48	699·26	2057·08	1215·72
Total ...	3402·03	2884·58	3361·53	3825·49	3859·24	5300·46	4299.14

ANNEXURE

Provision in respect of important Irrigation Works.

(*Rs. in lakhs*)

Name of the Project	Total Outlay till the end of 1967-68	Budget 1968-69	Revised 1968-69	Budget 1969-70	Variation between (4) and (3)	Variation between (5) and (4)
(1)	(2)	(3)	(4)	(5)	(6)	(7)
Bhadra Project ...	2849·25	60·00	106·27	40·00	+46·27	—66·27
Tunga ...	285·53	2·50	4·34	2·40	+1·84	—1·94
Nugu ...	308·92	2·00	2·00	0·60	...	—1·40
Ambligola ...	110·02	0·25	4·56	0·70	+4·31	—3·86
Contribution to T. B. Board ...	157·01	3·00	1·79	2.41	—1·21	+0·62
T. B. Project (Munirabad side) ...	3211·32	120·00	134·72	69·74	+14.72	—64·98
Kabini ...	334·95	60·00	112·40	50·00	+52.40	—62·40
Ghataprabha I and II Stages ...	1677·83	252·00	332·00	306·00	+80·00	—26·00
Harangi ...	7·18	15·00	5·65	3·00	—9·35	—2·65
Malaprabha ...	472·22	170·00	300·00	245·10	+130·00	—54·90
Upper Krishna ...	218·48	50·00	100·00	200·00	+50·00	+100·00
Hemavathi ...	29·89	40·00	101·05	50·00	+61·05	—51·05
Investigation of Major Projects ...	19·52	...	...	...	...	...
Hebbahalla Project ...	41·66	2·00	2·00	2·00	...	...
Chickhole Project ...	88·00	1·00	1·25	1·00	+0·25	—0·25
Lakshmanathirtha Project ...	10·64	...	...	..	...	...
Dharma Project ...	114·70	1·00	1·00	1·50	...	+0·50
Nagathana Tank ...	12·44	0·50	0·50	0·10	...	—0.40
C.O. ...		779·25	1209·53	974·55	+430·28	—234·98

(SRI RAMAKRISHNA HEGDE)

ANNEXURE D—(*Concld.*)

(*Rs. in lakhs*)

Name of the Project	Total Outlay till the end of 1967-68	Budget 1968-69	Revised 1968-69	Budget 1969-70	Variation between	
					(4) and (3)	(5) and (4)
(1)	(2)	(3)	(4)	(5)	(6)	(7)
B.F. ...	...	779·25	1209·53	974·55	+430·28	—234·98
Tungabhadra Project High Level Canal.	416·89	40·00	47·29	25·00	+7·29	—22·29
Tungabhadra Project Right Bank Distributaries ...	169·95	8·00	10·00	10·00	+2·00	...
Jambadahalla Project ...	81·23	20·00	16·16	6·00	—3·84	—10·16
Kanaknala ...	76·70	5·00	10·00	6·00	+5·00	—4·00
Kolchi Weir Project ...	38·03	2·10	2·10	1·00	...	—1·10
Hathikoni Project ...	60·44	5·00	7·00	5·00	+2·00	—2·00
Krishnarajasagar Works ...	146·12	5·00	11·48	...	+6·48	—11·48
Special Irrigation under T.B.P., Bellary	2·70	1·00	0·72	0·85	—0·28	+0·13
Rajolibunda Diversion Scheme ...	316·78	1·25	2·00	3·00	+0·75	+1·00
Ramanahalli Tank ...	39·23	0·20	...	...	—0·20	...
Areshankar Tank ...	20·91	0·20	...	...	—0·20	...
Kalaskop Tank ...	17·51	1·00	0·01	...	—0·99	—0·01
Hagaribommanahalli Project ...	125·26	30·00	43·89	20·00	+13·89	—23·89
Mangala Project ...	55·29	2·00	4·61	2·00	+2·61	—2·61
Harinala Project ...	6·71	1·00	...	...	—1·00	...
Bijur Project ...	2·47	1·00	0·98	0·80	—0·02	—0·18
Chandranapalli Project ...	21·13	15·00	37·00	40·00	+22·00	+3·00
Tungabhadra Project (High Level Canal Stage II)	5·61	15·00	15·00	44·50	...	+29·50
Other Projects	N.A.	162·00	194.90	126·30	+32·90	—68·60
Total ...		1094·00	1612·67	1265·00	+518.67	—347·67

ANNEXURE E

Major Items under 'Loans and Advances'.

(*Rs. in lakhs*)

Items	Accounts 1966-67	Accounts 1967-68	Budget 1968-69	Revised 1968-69	Budget 1969-70
1	2	3	4	5	6
Loans for slum clearance	0·75	3·05	2·25	2·25	4·00
Loans to Municipalities for Water Supply Schemes ...	82·62	67·33	36·00	36·00	35·00
Loans to Municipalities for Drainage Works ...	13·83	15·65	12·00	12·00	10·00
Loans to Municipalities for Other Development Schemes	1·02	0·60	2·15	1·00	2·15
Loans to Bangalore Water Supply and Sewerage Board ...	115·00	100·00	100·00	100·00	194·00
Loans to Village Panchayats and Local Boards for Water Supply and Drainage Schemes ...	11·25	9·20	6·00	6·00	5·00
Advances to Cultivators	740·10	1824·96	768·44	2390·46	1750·75
Advances under Special Laws—State Aid to Industries	36·97	169·41	25·00	10·00	...
Loans under Community Development Programme ...	31·79	20·47	16·00	18.00	6.50
Loans to Land Development Bank	...	...	...	...	...
Loans under Coir Industries Scheme	...	...	...	...	...
Loans under Handicraft Scheme	...	...	0·20	0·20	0·20
Loans for Cotton Handloom Industries ...	1·67	...	...	...	...
Loans for Woollen Handloom Industries ...	0·15	...	...	...	...
Loans for Silk Handloom Industries	...	...	...	...	...
Loans for Installation of Powerlooms ...	0·81	6·09	1·00	1·00	...
Loans for Development of Small Scale Industries ...	1·75	10·00	10·00	10·00	5·00
Loans to Hatti Gold Mines for Development of Mine ...	...	...	...	...	...
Loans for Subsidised Industrial Housing Scheme ...	8·50	11·00	11·00	10·50	10·50

(Sri Ramakrishna Hegde) ANNEXURE E—(Contd.) (Rs. in lakhs)

Items	Accounts 1966-67	Accounts 1967-68	Budget 1968-69	Revised 1968-69	Budget 1969-70
1	2	3	4	5	6
dvances for Trust Boards for layout of extension ...	...	3·00	6·00	6·00	6·00
oans for Low Income Group Housing Scheme ...	17·88	13·01	15·85	14·00	14·00
oans under Fisheries Schemes ...	8·25	0·70	3·85	3·85	2·00
oans for Housing Schemes (L.I.C. Funds) ...	81·70	77·99	90·00	86·00	95·00
dvances to Contractors	0.48	...	0·50	0.50	0·50
oans to Co-operative Societies including House Building Societies.	11·93	13·59	15·00	15·00	15·00
oans to Urban Societies for construction of buildings	...	...	1·00	1·00	1·00
oans for construction of houses for Backward Classes through the agency of building societies ...	3·21	3·44	4·00	4·00	4·00
oans to Non-Government Colleges for construction of Buildings	0·25	0·88	1·00	1·00	1·00
oans for Plantation Labour Housing Scheme ...	0·19	...	0·67	0·66	0·66
oans for Soil Conservation Scheme	20·62	5·97	32·00	45·00	60·46
oans to Primary Marketing Societies for construction of Godowns	3·06	2·06	2·63	2·62	1·62
oans to Electricity Board for Rural Electrification ...	...	...	...	...	...
oans to non-agriculturists on account of Land acquisition, etc.	0·10	0·46	1·00	1·00	1·00
oans to Educational Institutions for the construction of Hostel Buildings. ...	0·30	...	3·00	4·00	4·00

ANNEXURE E—(*Concld.*)

(*Rs. in lakhs.*)

Items	Accounts 1966-67	Accounts 1967-68	Budget 1968-69	Revised 1968-69	Budget 1969-70
1	2	3	4	5	6
Loans for Rural Housing	3·71	9·47	10·00	5·00	10·00
Loan for the Development of Dandeli Township ...	...	...	2·00	...	2·00
Loans to Government Servants and I.A.S. Officers towards House Building Advances and for purchase of Conveyances	83·09	132·00	127·81	150·10	155·61
Loans to Universities for sanction of House Building and other advances to their staff ...	2·50	1·00	5·00	5·00	5·00
Ayacut Development Programme under Major Irrigation	35·34	...	...	...	...
Loan to Fishermen for purchase of Boats ...	10·31	...	10·00	10·00	10·00
National Loan Scholarships Scheme ...	14·50	32·38	42·65	21·07	48·00
Advances to Trust Board Corporations & Municipalities for Land Acquisition & Development Schemes ...	3·00	4·00	10·00	4·00	10·00
Loan to Mysore State Electricity Board ...	400.00	...	...	...	...
Short term loan for Fruit Production ...	4·02	5·00	5.00	5·00	5·00
Agricultural Credit Stabilisation Fund ...	...	...	...	..	2·50
Project for Intensive Development ...	6·50	6·20	6·20	6·00	20·00

(SRI RAMAKRISHNA HEGDE)

ANNEXURE F

Statement of Balances under some important heads under the major Head 'Loans and Advances by State and Union Territory Governments'.

(*Rs. in lakhs*)

Heads	Accounts 1967-68		Balance as on 1st April 1968
	Credits	Debits	
1	2	3	4
Loans to Presidency Corporations, etc.	6·96	3·5	129·35
Loans to Municipalities:—			
Loans for Water Supply	21·49	67·33	632·62
Loans for Drainage and other purposes	9.78	15·65	217·26
Loans to Municipalities for repayment of charges on account of Works executed on behalf of P.W.D.	...	...	9·04
Loans to Municipalities	...	...	21·57
Loans to District and other Local Fund Committees:—			
Loans to District Boards	0·83	...	12·78
Loans for construction of Primary School Buildings ...	1·07	...	12·06
Loans to V.Ps. and Local Boards for conducting elections ...	0·18	8·04	9·90
Loans for Water Supply and Drainage Schemes and other Public Health purposes	0.12	9.20	49.11

ANNEXURE F—(*Contd.*)

(*Rs. in lakhs*)

Heads	Accounts 1967-68		Balance as on 1st April 1968
	Credits	Debits	
1	2	3	4
oans to Panchayats			
Advances to Village Panchayats	0·62	0.73	7.64
dvances to Cultivators :—			
Loans for Construction of Irrigation wells	26.51	11.02	737.08
Advances for purchase of Electrical Pumps	14.66	38.91	465.77
Loans to Agriculturists for purchase of Tractors	6·45	41.46	96.73
Loans for Horticulture Development	1.40	4.00	30.77
Takavi Loan (New Rules)	7.35	41.76	220.29
Land Improvement Loans (New Rules)	38.20	63.08	118.55
Loans under the Land Improvement Loans Act and Agriculturists Loans Act (Bellary).	...	...	30.26
Loans under the Land Improvement Loans Act and Agriculturists Act (Bombay).	...	...	232.39
Takavi Loans (Merged Area)	1·75	0.01	61·29
Loans under Mysore Agriculturist Loans Rules, 1966 ...	...	...	38·90
Short term loan for purchase and distribution of pesticides ...	0·90	32.97	32·07

(SRI RAMAKRISHNA HEGDE)

ANNEXURE F—(*Contd.*)

(*Rs. in lakhs*)

Heads	Accounts 1967-68		Balance as on 1st April 1968
	Credits	Debits	
1	2	3	4
Loans for the development of Major Irrigation Project ...	22·39	7·43	69·62
Loans to Co-operative Marketing Societies for purchase of Food grains on behalf of Govt.	...	...	100·00
Gouribidnur Sahakar Sakkare Karkhane	...	40·63	40·63
Loans under the Land Improvement Act (Madras) ...	...	...	5·07
Loans for maintenances and restoration of Tanks ...	0·08	0·27	28.50
Development Takavi for Development Area under T.B. Project ...	...	...	26·47
Loans for purchase of Seeds and Manures for sale to cultivators ...	902·46	1655·83	1088·89
Loans for completing incomplete wells and deepening of existing wells in scarcity affected areas.	1·88	...	29·41
Advances under Special Laws—State Aid to Industries ...	4·03	169·41	365·78
Loans under C.D.P. and N.E.S.	23·83	20·47	517·30
Loans under soil conservation	1·36	5·97	196·94
Miscellaneous Loans and Advances :—			
Miscellaneous Loans ...	1·04	...	81·64
Loan to Gold Mining Companies ...	0·09	...	378·89
Loans to Mysore State Scheduled Tribes and Scheduled Caste Co-operative Housing Corporation.	...	...	340·00

ANNEXURE F—(*Contd.*)

(*Rs. in lakhs*)

Heads	Accounts 1967-68		Balance as on 1st April 1968
	Credits	Debits	
1	2	3	4
Subsidised Housing Scheme	2.03	11.00	134.21
Low Income Groups (M H. Board)	...	...	100.00
Loans for implementation of National Scholarship ...	1·46	32.38	75·39
Loans for Development of Cotton Handloom Industries ...	0.95	0·67	16.90
Advances to Trust Boards for L. A. and Development Schemes ...	11.32	4·00	79·67
Woollen Handloom Industry	0.35	0·12	14·54
Silk Handloom Industry	2·31	...	12·28
Loans to Small Scale Industries	3·58	14·00	51·81
Loan for Installation of Power Looms	1·08	6·09	77·93
Advances to Regulated Markets	3·68	4·18	27·51
Advances to Trust Boards for Layout of Extensions ...	6·44	3.00	45·90
Loans for Low Income Group Housing Scheme	18·72	13·01	413·80
Middle Income Group Housing Scheme	12·00	...	133·54
Loans to Co-operative Societies including House Building Societies	7·17	13·59	
Aid against Flood and Rains	4·12	3·68	51·35
Loan to Electricity Board	233·60	150·00	3831·59
Loan to Electricity Board for extension of power lines ...	—)23-21	...	278·21
Loans to Co-operative Societies	1·87	...	16·82
Special Advances to Deputy Commissioners for implementation of Mysore Village Panchayats and Local Boards Act ...	0·85	...	11·16

(SRI RAMAKRISHNA HEGDE) ANNEXURE—F (*concld.*) (*Rs. in lakhs*)

Heads	Accounts 1967-68		Balance as on 1st April 1968
	Credits	Debits	
1	2	3	4
Village Housing	1·53	5·54	62·82
Loans to Government Servants	57·24	132·00	332·92
Loans to Electricity Board for Rural Electrification ...	(—)185·38	...	208·53
Loans for Housing Schemes (L. I. C. Funds) ...	2·57	77·99	275·52
Loans to Mysore Iron and Steel Works Ltd., Bhadravathi ...	...	...	621·79
Loans for Rural Godowns ...	4·08	14·49	78·07
Loans to Wholesale Consumers' Co-operative Stores for working capital ...	—0·23	...	24·00
Loans to individual and displaced goldsmiths for starting petty shops cottage industries ...	...	4·89	40·12
Loans to State industrial Bank for the scheme of rehabilitation of goldsmiths ...	5·00	..	20·00
Loans for construction of houses for backward classes through the Agency of Building Societies ...	1·03	3·44	36·24
Loans for Rural Housing, setting up Pilot Housing Projects ...	0·01	..	28·61
Advances to Electricity Board for purchase of Pumpsets ...	—25·01	...	115·00
Loans to Bangalore Water Supply and Sewerage Board ...	5·00	100·00	415·00
Loans for the construction of Godowns for stock of fertilisers under crash programme ...	0-16	27·84	33·68
Loans to Mysore State Co-operative Apex Bank towards strengthening of Agricultural Credit Stabilisation Fund. ..	...	...	90·00

1969ನೆಯ ಇಸವಿ ಫೆಬ್ರವರಿ 24ನೆಯ ದಿನಾಂಕದಂದು 1969–70ನೆಯ ವರ್ಷದ ಆಯವ್ಯಯ ಪತ್ರವನ್ನು ವಿಧಾನಸಭೆಯಲ್ಲಿ ಮಂಡಿಸುವ ಸಂದರ್ಭದಲ್ಲಿ ಮೈಸೂರು ರಾಜ್ಯದ ಅರ್ಥ, ಯೋಜನೆ ಮತ್ತು ಯುವಜನ ಕಲ್ಯಾಣ ಶಾಖೆಗಳ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ನೀಡಿದ ಭಾಷಣದ ಕನ್ನಡ ಭಾಷಾಂತರ.

ಮಹಾಶಯರೆ,

1969–70ನೆಯ ವರ್ಷದ ಆಯವ್ಯಯದ ಅಂದಾಜುಗಳನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

2. ಹಿಂದಿನ ಸಲ ಆಯವ್ಯಯ ಪತ್ರವನ್ನು ಮಂಡಿಸಿದ ತರುವಾಯ, ಹಲವಾರು ಘಟನೆಗಳು ಸಂಭವಿಸಿವೆ. ಸಮರ್ಥ ರೀತಿಯಲ್ಲಿ ಆಡಳಿತ ನಡೆಸಿ, ರಾಜ್ಯಕ್ಕೆ ಬಹುಮುಖ ಸೇವೆ ಸಲ್ಲಿಸಿದವರಾದ ನಮ್ಮ ಸದನದ ಹಿಂದಿನ ನಾಯಕ ಶ್ರೀ ಎಸ್. ನಿಜಲಿಂಗಪ್ಪನವರು ಗುರುತರವಾದ ಹೊಸದೊಂದು ಹೊಣೆ ವಹಿಸಿಕೊಳ್ಳಬೇಕಾಗಿ ಬಂತು. ಅವರ ತರುವಾಯ ಶ್ರೀ ವೀರೇಂದ್ರ ಪಾಟೀಲರವರು ಮುಖ್ಯಮಂತ್ರಿಗಳಾಗಿ ಬಂದರು. ಅವರ ಕರ್ತೃತ್ವ ಶಕ್ತಿಯಿಂದಲೂ ಉತ್ಸಾಹ ಶಕ್ತಿಯಿಂದಲೂ ಕರ್ತವ್ಯ ನಿಷ್ಠೆಯಿಂದಲೂ ನಮ್ಮ ರಾಜ್ಯವು ಪ್ರಗತಿ, ಶ್ರೇಯೋಭಿವೃದ್ಧಿಗಳ ಹಾದಿಯಲ್ಲಿ ಮುನ್ನಡೆಯುವುದೆಂದು ನಾವು ಭರವಸೆ ತಾಳಬಹುದು.

3. ನಮ್ಮ ದೇಶದ ನಾಲ್ಕು ದೊಡ್ಡ ರಾಜ್ಯಗಳಲ್ಲಿ ನಡೆದ ಮಧ್ಯಾಂತರ ಚುನಾವಣೆ ಇನ್ನೊಂದು ಮಹತ್ವದ ಘಟನೆ. ಆದರೆ, ದುರ್ದೈವದಿಂದ, ಯಾವ ರಾಜಕೀಯ ಪಕ್ಷಕ್ಕೂ ಜನತೆ ಖಚಿತವಾದ ಬೆಂಬಲ ನೀಡಿಲ್ಲ. ಇದು ರಾಜಕೀಯ ಕ್ಷೇತ್ರದಲ್ಲಿ ಅಸ್ಥಿರತೆಗೆ ಕಾರಣವಾಗುವ ಸಂಭವ ಇದೆ. ಈ ರಾಜ್ಯಗಳಲ್ಲಿ ಏರ್ಪಡಲಿರುವ ರಾಜಕೀಯ ವ್ಯವಸ್ಥೆಯು ಆರ್ಥಿಕ ಪ್ರಗತಿಗೆ ಅತ್ಯವಶ್ಯವಾಗಿ ಬೇಕಾಗುವ ಸ್ಥಿರತೆಯನ್ನು ಕುದುರಿಸಿಕೊಳ್ಳಲಿ, ಎಂದಿಷ್ಟೇ ನಮ್ಮ ಹಾರೈಕೆ. ನಾವು ಯಾವುದೇ ಪಕ್ಷಕ್ಕೆ ಸೇರಿದವರಾಗಿದ್ದರೂ ಸರಿಯೆ, ಜನತೆಯ ಹಿತಸಾಧನೆ, ಶ್ರೇಯೋಭಿವೃದ್ಧಿಗಳೇ ನಮ್ಮ ಮೂಲೋದ್ದೇಶವಷ್ಟೆ.

4. ಮಾನ್ಯ ಸದಸ್ಯರಿಗೆ ವಿದಿತವಾಗಿರುವಂತೆ, ದೇಶದ ಅನೇಕ ಭಾಗಗಳಲ್ಲಿ ಋತುಮಾನ ಪರಿಸ್ಥಿತಿ ಸಮಾಧಾನಕರವಾಗಿತ್ತು. ಕೆಲವು ರಾಜ್ಯಗಳಾದರೋ ಅಭಾವ ಪರಿಸ್ಥಿತಿಯನ್ನು ಇದಿರಿಸಬೇಕಾಯಿತು ; ಅಂತಹ ರಾಜ್ಯಗಳಲ್ಲಿ ಮೈಸೂರು ರಾಜ್ಯವೂ ಒಂದು.

5. ದೇಶದ ನಾನಾ ಭಾಗಗಳಲ್ಲಿ 1967–68ರಲ್ಲೂ 1968–69ರಲ್ಲೂ ಚೆನ್ನಾಗಿ ಬೆಳೆ ಬಂದಿತ್ತು. ವರ್ಷೇವರ್ಷೇ ಅನಾವೃಷ್ಟಿಯಾದ ಪ್ರಯುಕ್ತ, 1966–67ರಲ್ಲಿ ವ್ಯವಸಾಯೋತ್ಪಾದನೆಯ ಸೂಚ್ಯಂಕವು ತೀವ್ರ ಕೆಳಮಟ್ಟಕ್ಕೆ ಬಂದಿತ್ತು. 1967–68ರಲ್ಲೂ 1968–69ರಲ್ಲೂ ಸೂಚ್ಯಂಕ ಮೇಲಕ್ಕೇರಿತ್ತು. ಈ ವರ್ಷಗಳಲ್ಲಿ ವ್ಯವಸಾಯ ವರಮಾನ ಕ್ಷೇತ್ರದಲ್ಲಿ ವರಮಾನ ಹೆಚ್ಚುತ್ತ ಹೋದ ಕಾರಣ, ಬೇಡಿಕೆ ಹೆಚ್ಚಿತೆಂಬುದೂ ಔದ್ಯಮಿಕ ಉತ್ಪಾದನೆ ಗಮನಾರ್ಹವಾಗಿ ಹೆಚ್ಚಿತೆಂಬುದೂ ನಿರ್ವಿವಾದ. ಆರ್ಥಿಕ ಸ್ಥಿತಿಯ ಈ ಚೇತರಿಕೆಯು ಹೀಗೆ ಕೊಂಚ ಸಮಾಧಾನಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಆದಾಯವು 1967–68ರಲ್ಲಿ ಶೇಕಡಾ 10ರಷ್ಟು ಹೆಚ್ಚುವುದೆಂದೂ 1968–69ರಲ್ಲಿ ಶೇಕಡಾ 6ರಷ್ಟು ಹೆಚ್ಚುವುದೆಂದೂ ನಿರೀಕ್ಷೆಯಿದೆ. ದೇಶದ ನಿಜವಾದ ತಲಾ ಆದಾಯವು 1967–68ರಲ್ಲೂ 1968–69ರಲ್ಲೂ ಗಮನಾರ್ಹವಾಗಿ ಹೆಚ್ಚಿದ್ದಿತು. ಆದರೆ, ದುರ್ದೈವದಿಂದ, ಅನಾವೃಷ್ಟಿಗಳೂ ಅಕಾಲವೃಷ್ಟಿಗಳೂ ರಾಜ್ಯದ ವ್ಯವಸಾಯ ಸಮೃದ್ಧಿಗೆ ಭಂಗ ತಂದಿವೆ. ಕರಾವಳಿ ಪ್ರದೇಶದ ಹೊರತು, ರಾಜ್ಯದ ಬೇರೆಡೆಗಳಲ್ಲೆಲ್ಲ ಬಿತ್ತನೆ ಕೆಲಸಕ್ಕೆ ತೀವ್ರ ತೊಡಕು ಉಂಟಾಗಿತ್ತು. ಸರ್ಕಾರದವರು ವ್ಯಾಪಕವಾಗಿ ಪರಿಹಾರ ಕಾರ್ಯಗಳನ್ನು ಕೈಕೊಳ್ಳಬೇಕಾಗಿ ಬಂತು. ಪರಿಹಾರ ಕಾರ್ಯಗಳ ನಿಮಿತ್ತವಾಗಿ ಪ್ರಸಕ್ತ ವರ್ಷದ ವೆಚ್ಚ ಹತ್ತು ಕೋಟಿ ರೂಪಾಯಿಗೂ ಮೀರಬಹುದು. ಭಾರತ ಸರ್ಕಾರದವರು ಹತ್ತು ಕೋಟಿ ರೂಪಾಯಿ ವರೆಗೆ ನೆರವು ನೀಡುವುದಾಗಿ ಹೇಳಿದ್ದಾರೆಂಬ ವಿಚಾರವನ್ನು ಸಭೆಗೆ ತಿಳಿಸಲು ಸಂತೋಷಪಡುತ್ತೇನೆ. ವ್ಯಯದ ಬಹುಭಾಗವನ್ನು ಉತ್ಪಾದಿಕ ಇಲ್ಲವೆ ಸಂರಕ್ಷಕ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ. ಈ ಸಂದರ್ಭದಲ್ಲಿ ಕೆರೆಕಟ್ಟೆಗಳ ಜೀರ್ಣೋದ್ಧಾರ ಮತ್ತು ನಿರ್ಮಾಣ, ಭೂಸಾರರಕ್ಷಣೆ, ನೀರಾವರಿ ಬಾವಿಗಳು, ಕುಡಿಯುವ ನೀರಿನ ಬಾವಿಗಳು, ರಸ್ತೆಗಳು ಇತ್ಯಾದಿ ಕಾರ್ಯಗಳನ್ನು ಉಲ್ಲೇಖಿಸಬಹುದಾಗಿದೆ. ಗಣಿ ಮತ್ತು ಭೂ

(ಶ್ರೀ ರಾಮಕೃಷ್ಣ ಹೆಗಡೆ)

ವಿಜ್ಞಾನ ಇಲಾಖೆಯ 'ಭೂ ಜಲ' ವಿಭಾಗವು ಈ ವರ್ಷ 127 ಕೊರೆದ ಬಾವಿಗಳನ್ನು ಒದಗಿಸಿದೆ. ಇಲಾಖೆಯು ಭೂ ಜಲದ ಅನ್ವೇಷಣೆಗಾಗಿ 3,243 ಚದರ ಕಿಲೋ ಮೀಟರಿನಷ್ಟು ವಿಸ್ತೀರ್ಣದಲ್ಲಿ ಪ್ರಾದೇಶಿಕ ಪರಿಶೀಲನೆ ನಡೆಸಿದೆ. ಯಾವಾಗಲೂ ಆಹಾರದ ಹೆಚ್ಚಳವಿದ್ದ ಅಕ್ಕಪಕ್ಕದ ರಾಜ್ಯಗಳಲ್ಲಿ ಆಹಾರ ಪರಿಸ್ಥಿತಿಯು ಸಮಾಧಾನಕರವಾಗಿರದಿದ್ದರೂ, ನಮ್ಮ ರಾಜ್ಯವು ಆಹಾರ ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಲು ಶಕ್ತವಾಯಿತು. ಮುಂದಿನ ವರ್ಷ ಸಕಾಲದಲ್ಲಿ ಮಳೆಬಿದ್ದರೆ ವ್ಯವಸಾಯೋತ್ಪಾದನೆಯು ಸಮೃದ್ಧವಾಗುವುದೆಂಬ ವಿಚಾರದಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ.

6. ಸಾಮಾನ್ಯವಾಗಿ ಆರ್ಥಿಕ ಆಯೋಗವನ್ನು ಐದು ವರ್ಷಕ್ಕೊಮ್ಮೆ ನೇಮಿಸಲಾಗುವುದು. ಈ ಸಲ ಕೆಲವು ವಿಶಿಷ್ಟ ಸನ್ನಿವೇಶಗಳು ತಲೆದೋರಿದ್ದವು. ನಾಲ್ಕನೆಯ ಪಾಂಚವಾರ್ಷಿಕ ಯೋಜನೆ ಮೊದಲು ಭಾವಿಸಿದಂತೆ ಪ್ರಾರಂಭವಾಗಿರಲಿಲ್ಲ; ಹೊಸ ಹೊಸ ಆರ್ಥಿಕ ಘಟನೆಗಳು ಸಂಭವಿಸಿದವು. ಮಾರ್ಚ್ 1968ರಲ್ಲಿ–ಎರಡು ವರ್ಷ ಮುಂದಾಗಿಯೇ–ಐದನೆಯ ಆರ್ಥಿಕ ಆಯೋಗವು ರಚಿತವಾಯಿತು.

7. ತಾತ್ಕಾಲಿಕ ವರದಿಯಲ್ಲಿದ್ದ ಆಲೋಚ್ಯಾಂಶಗಳ ವಿಚಾರದಲ್ಲೂ ಈಗ ಆಯೋಗದ ಪರಿಶೀಲನೆಯಲ್ಲಿರುವ ಪ್ರಧಾನ ಆಲೋಚ್ಯಾಂಶಗಳ ವಿಚಾರದಲ್ಲೂ ರಾಜ್ಯ ಸರ್ಕಾರದವರು ಜ್ಞಾಪನ ಪತ್ರವನ್ನು ಸಲ್ಲಿಸಿದರು. ಆಯೋಗವು ಜನವರಿ 1969ರಲ್ಲಿ ನಮ್ಮ ರಾಜ್ಯಕ್ಕೆ ಬಂದು, ಮಂತ್ರಿಗಳೊಡನೆ ಹಾಗೂ ಅಧಿಕಾರಿಗಳೊಡನೆ ಚರ್ಚೆ ನಡೆಸಿತು. ಆಗ ಮೈಸೂರಿನ ವಾದವನ್ನು ಆಯೋಗದ ಮುಂದೆ ಮಂಡಿಸಲಾಯಿತು. ಆಯೋಗಕ್ಕೆ ಸಲ್ಲಿಸಿದ ಜ್ಞಾಪನ ಪತ್ರದ ಒಂದು ಪ್ರತಿಯನ್ನು ಈ ಸದನದ ಮುಂದೆ ಮಂಡಿಸಲಾಗಿತ್ತು. ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವ ವಿಚಾರದಲ್ಲಿ ಮೈಸೂರು ರಾಜ್ಯವು ಎದುರಿಸಬೇಕಾದ ತೊಂದರೆಗಳನ್ನು ನಾವು ವಿಶೇಷವಾಗಿ ಉಲ್ಲೇಖಿಸಿದ್ದೇವೆ. ಪರಮಾನದ ಅಂತರವನ್ನಲ್ಲದೆ ಆಕ್ಟ್ರಾಯಿ ತೆರಿಗೆ ರದ್ದಿಯಾತಿಯಿಂದ ಒದಗುವ ನಷ್ಟದ ಒಂದಂಶ, ವೇತನ ಆಯೋಗದ ಸಿಫಾರಸು ಫಲವಾಗಿ ವಹಿಸಬೇಕಾಗುವ ವೆಚ್ಚ, ಅನುವಂಶಿಕ ಅಧಿಕಾರಿಗಳ ಬದಲಾಗಿ ಗ್ರಾಮ ಶ್ಯಾನುಭೋಗರ ನೇಮಕದ ವೆಚ್ಚ, ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ವ್ಯಯ ಪ್ರಮಾಣ, ಬಡ್ಡಿಯ ದರದ ನಿಮಿತ್ತವಾದ ಸಹಾಯ ಧನ, ವಿದ್ಯುಚ್ಛಕ್ತಿ ಮಂಡಲಿಗೆ ಸಂಭವಿಸುವ ನಷ್ಟ, ಇತ್ಯಾದಿ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಆಯೋಗವನ್ನು ವಿನಂತಿಸಿಕೊಂಡಿದ್ದೇವೆ. ಈಗಿನ ಸಾಲಗಳ ಕಠಿಣ ಷರತ್ತುಗಳ ಬಗೆಗೆ ಆಯೋಗದ ವಿಶೇಷ ಗಮನ ಸೆಳೆದಿರುತ್ತೇವೆ. ಈ ಷರತ್ತುಗಳಿಗೂ ಧನವಿನಿಯೋಗದಿಂದ ಬರುವ ಹುಟ್ಟುವಳಿಗಳಿಗೂ, ಹುಟ್ಟುವಳಿ ಬರಲು ಬೇಕಾಗುವ ಕಾಲಾವಧಿಗೂ ಸಂಬಂಧವೇ ಇಲ್ಲ. ಇದೊಂದು ಸಾರ್ವತ್ರಿಕ ಪ್ರಶ್ನೆ, ಇದನ್ನು ಒತ್ತಿ ಒತ್ತಿ ಹೇಳುತ್ತಿದ್ದೇವೆ. ಆದರೂ ಇದಕ್ಕೆ ಪರಿಹಾರ ದೊರೆತಿಲ್ಲ. ಈ ವಿಚಾರ ವ್ಯಾವಹಾರಿಕ ದೃಷ್ಟಿಯಿಂದ ಪರಿಶೀಲನೆ ಮಾಡಿದರೆ, ಮರುಸಂದಾಯವಾಗಬೇಕಾದ ಸಾಲದ ಸ್ವಲ್ಪಾಂಶವು ಅನುತ್ಪಾದಕ ವ್ಯಯಕ್ಕೆ ಸಂಬಂಧಪಟ್ಟಿರುವುದಾಗಿದೆ. ಆದ್ದರಿಂದ ಅದನ್ನು ಲೆಕ್ಕದಿಂದ ವಜಾ ಮಾಡಬೇಕಾಗಬಹುದು. ಆದರೆ, ನಾವೇನೋ ಈ ಬಗೆಯ ಈ ತೀವ್ರ ರೀತಿಯ ನಿಲುವನ್ನು ತಳೆದಿಲ್ಲ. ಸಾಲಗಳ ಮರುಸಂದಾಯದ ಕಾಲಕ್ರಮವನ್ನು ಪುನಃ ಗೊತ್ತುಪಡಿಸುವಂತೆಯೂ, ವಿನಿಯೋಗದ ಸ್ವಭಾವಕ್ಕೆ ತಕ್ಕಂತೆ ಸಮಂಜಸವಾದ ಷರತ್ತುಗಳನ್ನು ಶಿಫಾರಸು ಮಾಡುವಂತೆಯೂ ಆಯೋಗವನ್ನು ವಿನಂತಿಸಿಕೊಂಡಿದ್ದೇವೆ. ಈ ಎಲ್ಲ ವಿಚಾರಗಳಲ್ಲಿ ಆಯೋಗವು ಒಟ್ಟು ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುವುದೆಂಬುದೇನೋ ನಿಜ. ಆದರೆ, ಚರ್ಚೆಯ ಕಾಲದಲ್ಲಿ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ತಳೆದ ನ್ಯಾಯವಾದ ಮತ್ತು ಸಹಾನುಭೂತಿಯ ನಿಲುವನ್ನು ಗಮನಿಸಿದರೆ, ಮೈಸೂರು ರಾಜ್ಯದ ತೊಂದರೆಗಳನ್ನು ಆಯೋಗವು ಅರಿತುಕೊಂಡು, ನಿಷ್ಪಕ್ಷಪಾತವಾದ ತೀರ್ಪು ನೀಡುವುದೆಂಬ ವಿಚಾರದಲ್ಲಿ ನನಗೆ ಸಂದೇಹವಿಲ್ಲ.

8. ಭಾರತ ಸರಕಾರದವರು ಚತುರ್ಥ ಪಾಂಚವಾರ್ಷಿಕ ಯೋಜನೆಯು ಪ್ರಾರಂಭವಾಗತಕ್ಕ ದಿನವನ್ನು 1–4–1966ರಿಂದ ಮುಂದಕ್ಕೆ ಹಾಕಿ, ಅದರ ಬದಲಾಗಿ 1966–67ರಿಂದ 1968–69ರ ವರೆಗಿನ 3 ವರ್ಷಗಳಿಗೆ ಕೇವಲ ವಾರ್ಷಿಕ ಯೋಜನೆಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ಕಾರಣವಾದ ನಾನಾ ಅಂಶಗಳು ಮಾನ್ಯ ಸದಸ್ಯರಿಗೆ ವಿದಿತವಾಗಿವೆಯಷ್ಟೆ. ಹೊಸ ಚತುರ್ಥ ಪಾಂಚವಾರ್ಷಿಕ ಯೋಜನೆಯು 1969–70ರಲ್ಲಿ ಪ್ರಾರಂಭವಾಗಬೇಕೆಂದು ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ತೀರ್ಮಾನಿಸಿದುದು 1968ರಲ್ಲಿ.

9. ಯೋಜನಾ ಆಯೋಗದ ಸಲಹೆಗಳನ್ನೂ ಆಡಳಿತ ಸುಧಾರಣಾ ಆಯೋಗದ ಸಲಹೆಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯದ ಯೋಜನಾ ಪ್ರಗತಿಗೆ ಪರಿಣಾಮಕಾರಿಯಾದ ನಿರ್ದೇಶನ ಕೊಡಲು ಉಚ್ಚ ಮಟ್ಟದ ನಿಕಾಯವಿರಬೇಕೆಂಬ ಉದ್ದೇಶದಿಂದ ರಾಜ್ಯ ಸರಕಾರದವರು ಮೇ 1968ರಲ್ಲಿ ರಾಜ್ಯ ಯೋಜನಾ ಮಂಡಲಿಯೊಂದನ್ನು ರಚಿಸಿದರು. 3ನೆಯ ಪಾಂಚವಾರ್ಷಿಕ ಯೋಜನೆಯ ಮತ್ತು ವಾರ್ಷಿಕ ಯೋಜನೆಗಳ ಕಾರ್ಯಸಾಧನೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದ ತರುವಾಯ ಪ್ರಾದೇಶಿಕ ಅಸಮತೆಗಳನ್ನು ಗಮನದಲ್ಲಿಟ್ಟುಕೊಂಡು ನಾಲ್ಕನೇ ಪಾಂಚವಾರ್ಷಿಕ ಯೋಜನೆಗೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಅಧ್ಯಯನ ತಂಡಗಳನ್ನು ಸಹ ಸರಕಾರದವರು ರಚಿಸಿದ್ದರು. ಯೋಜನಾ ಮಂಡಲಿಯು ಈ ಸಲಹೆಗಳನ್ನು ಪರಿಶೀಲಿಸಿ 440 ಕೋಟಿ ರೂಪಾಯಿ ವೆಚ್ಚದ ನಾಲ್ಕನೇ ಪಾಂಚವಾರ್ಷಿಕ ಯೋಜನೆಯ ಕರಡನ್ನು ತಯಾರಿಸಿದೆ. ಭಾರತ ಸರಕಾರದವರು ರಚಿಸಿದ ಅಧ್ಯಯನ ತಂಡಗಳಲ್ಲಿ, ನವೆಂಬರ್ 1968ರಲ್ಲಿ ರಾಜ್ಯದ ಚತುರ್ಥ ಪಾಂಚವಾರ್ಷಿಕ ಯೋಜನೆಯ ಮೇಲೆ ದಿಲ್ಲಿಯಲ್ಲಿ ಸವಿವರ ಚರ್ಚೆ ನಡೆಯಿತು. ಈ ಸರಕಾರಿ ಮಟ್ಟದ ಚರ್ಚೆಯ ತರುವಾಯ ಡಿಸೆಂಬರ್ 1968 ರಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಯೋಜನಾ ಆಯೋಗದೊಡನೆ ಚರ್ಚೆ ನಡೆಸಿದರು.

10. ಚತುರ್ಥ ಪಾಂಚವಾರ್ಷಿಕ ಯೋಜನೆಯ ಗಾತ್ರವು ಇನ್ನೂ ಅನಿಶ್ಚಿತವಾಗಿಯೇ ಉಳಿದಿದೆ. ಕೇಂದ್ರದಿಂದ ಬರತಕ್ಕ ಸಹಾಯದ ಪ್ರಮಾಣವು ಮತ್ತು ಸ್ಥಿತಿಯನ್ನು ಅನುಲಕ್ಷಿಸಿ ನಿರ್ಧಾರವಾಗಿಲ್ಲ. ಸಂಪನ್ಮೂಲಗಳನ್ನು ಒದಗಿಸಿಕೊಳ್ಳಲು ರಾಜ್ಯಗಳಿಗಿರುವ ಸಾಮರ್ಥ್ಯವನ್ನು ಇನ್ನೂ ಕಂಡುಹಿಡಿದಿಲ್ಲ. ಇದುವೇ ಈ ಅನಿಶ್ಚಿತತೆಗೆ ಕಾರಣ. ಐದನೆಯ ಆರ್ಥಿಕ ಆಯೋಗದವರು ತಮ್ಮ ಐತೀರ್ಪನ್ನು ಸಲ್ಲಿಸುವವರೆಗೆ ಮತ್ತು ಮೇಲೆ ಹೇಳಿದ ಸಂದಿಗ್ಧ ಸ್ಥಿತಿ ನಿವಾರಣೆಯಾಗುವವರೆಗೆ, ಇನ್ನೊಂದು ವಾರ್ಷಿಕ ಯೋಜನೆಯನ್ನು ಇಟ್ಟುಕೊಳ್ಳುವುದೇ ಲೇಸೆಂದು ನಮ್ಮ ಅಭಿಪ್ರಾಯ.

11. ಎಲ್ಲ ರಾಜ್ಯಗಳೂ ತಮ್ಮ ತಮ್ಮ ಅಗತ್ಯಗಳಿಗೆ ತಕ್ಕಂತೆ ಸಾಕಷ್ಟು ಪ್ರಮಾಣದ ಯೋಜನೆಯೊಂದನ್ನು ರೂಪಿಸಲು ಹೆಚ್ಚಿಗೆ ಸಂಪನ್ಮೂಲಗಳನ್ನು ಶೇಖರಿಸಿಕೊಳ್ಳಲು ಸರ್ವ ಪ್ರಯತ್ನ ಮಾಡಬೇಕೆಂದು ಯೋಜನಾ ಆಯೋಗದವರು ಒತ್ತಿ ಹೇಳಿದ್ದಾರೆ. ಸರ್ಕಾರಿ ವಲಯದಲ್ಲಿ ಕನಿಷ್ಠ ಪಕ್ಷ 14,800 ಕೋಟಿ ರೂಪಾಯಿಯಷ್ಟಾದರೂ ವ್ಯಯ ಪ್ರಮಾಣವಿದ್ದರೆ ಮಾತ್ರ ಸೇಕಡಾ 5ರಿಂದ 6ರ ವರೆಗಿನ ಅಭಿವೃದ್ಧಿ ಸಾಧಿಸಲು ಶಕ್ಯವಾದೀತೆಂದು ಯೋಜನಾ ಆಯೋಗದವರ ನಿರೀಕ್ಷೆ. ಈ ವ್ಯಯ ಪ್ರಮಾಣದಲ್ಲಿ ರಾಜ್ಯವಲಯದ ವ್ಯಯ ಪ್ರಮಾಣ ಸುಮಾರು 6,500 ಕೋಟಿ ರೂಪಾಯಿ. ಇದು ಸಾಧ್ಯವಾಗಬೇಕಾದರೆ, ರಾಜ್ಯಗಳು 1,500 ಕೋಟಿ ರೂಪಾಯಿ ಹೆಚ್ಚಿಗೆ ಹಣವನ್ನು ಶೇಖರಿಸಬೇಕಾಗುವುದು. ಮೈಸೂರು ರಾಜ್ಯಕ್ಕೆ ಸುಮಾರು 115 ಕೋಟಿ ರೂಪಾಯಿಯಷ್ಟು ಹೆಚ್ಚಿಗೆ ಸಂಪನ್ಮೂಲಗಳನ್ನು ಶೇಖರಿಸಲು ಸಾಧ್ಯವಾದೀತೆಂದು ಯೋಜನಾ ಆಯೋಗದ ಅಭಿಪ್ರಾಯ. ಯಥೋಚಿತ ಧನವಿಲ್ಲದೆ, ಸಾಕಷ್ಟು ಪ್ರಮಾಣದ ಯೋಜನೆಯನ್ನು ನಾವು ರೂಪಿಸಿಕೊಳ್ಳಲಾರೆವೆಂಬುದೂ ನಮ್ಮ ರಾಜ್ಯವು ಪರಮಾಧಿಕ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಲು ಸರ್ವ ಪ್ರಯತ್ನ ಮಾಡಬೇಕೆಂಬುದೂ ಸುಸ್ಪಷ್ಟ. ಆದರೆ, ನಾವು 115 ಕೋಟಿ ರೂಪಾಯಿ ಒದಗಿಸಕೊಳ್ಳಲು ಶಕ್ತರೆಂಬ ಊಹೆಯೂ ಸ್ವಲ್ಪ ಹೆಚ್ಚೇ ಸರಿ. ಪರಿಸ್ಥಿತಿ ಹೀಗಿರುತ್ತ, ನಾಲ್ಕನೆಯ ಪಂಚವಾರ್ಷಿಕ ಯೋಜನಾ ಗಾತ್ರದ ವಿಚಾರದಲ್ಲಿಯೂ ಅದರ ವಲಯಾನುಸಾರಿ ವಿಭಜನೆಯಲ್ಲಿಯೂ ಅಂತಿಮ ನಿರ್ಧಾರ ಕೈಕೊಳ್ಳಲು ಇದುವರೆಗೂ ಸಾಧ್ಯವಾಗಿಲ್ಲ. ಆದ್ದರಿಂದ, ಕೇಂದ್ರ ಯೋಜನಾ ಪ್ರಮಾಣ, ಸಾಲ ಮರುಸಂದಾಯ ಕ್ರಮದ ಪುನರ್ವ್ಯವಸ್ಥೆ, ಬೆಲೆಗಳನ್ನು ನಿಯಂತ್ರಿಸಲು ನಮಗಿರುವ ಸಾಮರ್ಥ್ಯ, ಭಾರತ ಸರ್ಕಾರದವರು ವಿಧಿಸುವ ಹೆಚ್ಚಿನ ತೆರಿಗೆಗಳಲ್ಲಿ ರಾಜ್ಯಕ್ಕೆ ಬರತಕ್ಕ ಪಾಲು ಮುಂತಾದ ಕೆಲವಾರು ಮಹತ್ವದ ವಿಚಾರಗಳ ಮೇಲೆ ತೀರ್ಮಾನ ಕೈಕೊಂಡ ಮೇಲೆಯೇ ರಾಜ್ಯ ಸರ್ಕಾರದವರು ತಮ್ಮ ನಿಲುವನ್ನು ಅಂತಿಮವಾಗಿ ನಿರ್ಧರಿಸಿಕೊಳ್ಳಲು ಸಾಧ್ಯ. ಐದನೆಯ ಆರ್ಥಿಕ ಆಯೋಗದವರು ಐತೀರ್ಪು ನೀಡುವವರೆಗೆ, ಯಾವ ರಾಜ್ಯವೇ ಆಗಲಿ, ಅದು ಒದಗಿಸಕೊಳ್ಳಬಲ್ಲ ಸಂಪನ್ಮೂಲಗಳ ಪ್ರಮಾಣವನ್ನು ಸಾಕಷ್ಟು ನಿಷ್ಕೃಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದಾಯ ತೆರಿಗೆಯ ವರಮಾನವನ್ನು ಹೆಚ್ಚಿಸಿಕೊಳ್ಳಲು ಸೂಕ್ತ ಏರ್ಪಾಡು ಮಾಡಿರುವುದಷ್ಟೇ ಅಲ್ಲದೆ, ಅರಣ್ಯ, ವಿದ್ಯುತ್ತಿನ ಮಾರಾಟ, ಪಾನನಿರೋಧದ ಸಡಿಲಿಕೆ, ಇತ್ಯಾದಿ ಶೀರ್ಷಿಕೆಗಳಲ್ಲಿ ತೆರಿಗೆ ರೂಪದ್ದಲ್ಲದ ವರಮಾನಗಳನ್ನು ಸಹ ನಮ್ಮ ರಾಜ್ಯವು ಹೆಚ್ಚಿಸಿಕೊಂಡಿದೆ. ಇನ್ನೂ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಲು ಅವಕಾಶ ಕಡಿಮೆ.

12. ಎಲ್ಲ ಮುಖ್ಯ ಮಂತ್ರಿಗಳಿಂದ ಕೂಡಿದ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಒಂದು ಸಮಿತಿಯು ಕೇಂದ್ರ ಸಹಾಯದ ಹಂಚಿಕೆಗೆ ಕೆಲವೊಂದು ಪ್ರಮಾಣಗಳನ್ನು ಗೊತ್ತುಪಡಿಸಿತು. ಜನ

(ಶ್ರೀ ರಾಮಕೃಷ್ಣ ಹೆಗಡೆ)

ಸಂಖ್ಯೆಯ ಆಧಾರದ ಮೇಲೆ ಸೇಕಡಾ 60 ರಷ್ಟು ನೆರವಿನ ಹಂಚಿಕೆಯಾಗಬೇಕೆಂದೂ ತಲಾ ಆದಾಯ, ತಲಾ ತೆರಿಗೆ, ಹಿಂದಿನ ವರ್ಷ ಪ್ರಾರಂಭವಾಗಿ ಈ ವರ್ಷವೂ ಮುಂದುವರಿಯುವ ಕಾಮಗಾರಿಗಳು, ಇತ್ಯಾದಿ ವಿಶಿಷ್ಟ ಸಮಸ್ಯೆಗಳನ್ನು ಗಮನಕ್ಕೆ ತಂದುಕೊಂಡು, ಉಳಿದ ನೆರವಿನ ಮೊತ್ತದ ಹಂಚಿಕೆಯಾಗಬೇಕೆಂದೂ ಈ ಸಮಿತಿ ನಿಶ್ಚಯಿಸಿತು.

13. ರಾಜ್ಯದ ತಲಾ ಆದಾಯವನ್ನು ರಾಷ್ಟ್ರೀಯ ತಲಾ ಆದಾಯದೊಡನೆ ಹೋಲಿಸಿ, ತಲಾ ತೆರಿಗೆಯನ್ನು ತಲಾ ಆದಾಯದೊಡನೆ ಹೋಲಿಸಿದರೆ, ಅದು ಸರಾಸರಿಗಿಂತ ಕೊಂಚ ಮಾತ್ರ ಮೀರುವುದಾಗಿ ಕಂಡುಬರುವುದು. ಇದನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ, ರಾಜ್ಯಕ್ಕೆ ಗಮನಾರ್ಹ ನಷ್ಟ ಸಂಭವಿಸುವುದೆಂಬ ವಿಚಾರವು ಸ್ಪಷ್ಟವಾಗುವುದು. ಈ ಅನ್ಯಾಯ ಆಗಬಾರದೆಂದು ನಾವು ಯೋಜನಾ ಆಯೋಗಕ್ಕೆ ಒತ್ತಿ ಹೇಳಿದ್ದೇವೆ.

14. ಕಲ್ಯಾಣ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಕೆಲಸ ಗುರುತರವಾದ ಹೊಣೆ. ಆದ್ದರಿಂದ, ಈ ಗುರುತರ ಹೊಣೆಯ ನಿರ್ವಹಣೆಗೆ ರಾಜ್ಯಗಳಲ್ಲಿ ಸಾಕಷ್ಟು ಸಂಪನ್ಮೂಲಗಳಿಲ್ಲವೆಂದೂ ಅವುಗಳನ್ನು ಹೆಚ್ಚಿಸಿಕೊಳ್ಳುವುದು ಸಾಧ್ಯವಿಲ್ಲವೆಂದೂ ರಾಜ್ಯಗಳು ನ್ಯಾಯವಾಗಿಯೇ ಅಸಮಾಧಾನ ಹೊಂದಿವೆ. ಯೋಜನೆಯ ಕೇಂದ್ರ ವಲಯದ ವ್ಯಯ ಪ್ರಮಾಣವನ್ನು ಗಮನಾರ್ಹವಾಗಿ ಕಡಿಮೆ ಮಾಡಿ, ರಾಜ್ಯ ವಲಯದ ವ್ಯಯ ಪ್ರಮಾಣವನ್ನು ಅದಕ್ಕೆ ತಕ್ಕಂತೆ ಹೆಚ್ಚಿಸಬೇಕೆಂದು ನಮ್ಮ ಅಭಿಪ್ರಾಯ. ಇದು ಅತ್ಯವಶ್ಯ. ಏಕೆಂದರೆ, ಶ್ರೀಸಾಮಾನ್ಯನ ಪ್ರಯೋಜನಾರ್ಥವಾಗಿರುವ ಎಲ್ಲ ಅಭಿವೃದ್ಧಿ ಕಾರ್ಯಗಳೂ ರಾಜ್ಯ ವಲಯದಲ್ಲಿರುವ ಕಾರಣ, ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸದೆ ಹೋದರೆ, ಜನತೆಗೆ ಹೆಚ್ಚು ನಿಕಟವರ್ತಿಯಾಗಿರುವ ರಾಜ್ಯಸರ್ಕಾರಗಳು ಜನತೆಯ ಅನಿವಾರ್ಯವಾದ ಅಗತ್ಯಗಳನ್ನಾದರೂ ಈಡೇರಿಸಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಸರಿಯಾದ ತೀರ್ಮಾನ ಕೈಕೊಳ್ಳಲು ವಿಳಂಬವಾದರೆ, ಅದರ ಪರಿಣಾಮ ಅನರ್ಥಕಾರಿಯಾಗುವುದು.

15. ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಕೊಳ್ಳುವ ಸಮಸ್ಯೆ ಕಷ್ಟಕರವೇ ಸರಿ. ನಗರ ಪ್ರದೇಶದಲ್ಲಿ ತೆರಿಗೆ ಪರಮಾವಧಿಗೆ ಬಂದಿದೆ. ಪ್ರತ್ಯಕ್ಷ ತೆರಿಗೆ ವಿಧಿಸಿ ಸಾಕಷ್ಟು ವರಮಾನ ಪಡೆಯಲು ಅವಕಾಶ ತೀರ ಕಡಿಮೆ. ದೊಡ್ಡ ಪ್ರಮಾಣದ, ಮಧ್ಯಮ ಪ್ರಮಾಣದ, ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳು, ನೀರಾವರಿ ಬಾವಿಗಳು, ಭೂಸಾರ ರಕ್ಷಣೆ, ಒಳ್ಳೆಯ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ, ಟ್ರಾಕ್ಟರುಗಳ ಸರಬರಾಜು, ಇತ್ಯಾದಿ ಆಧುನಿಕ ವ್ಯವಸಾಯ ಸೌಲಭ್ಯಗಳ ರೂಪದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಭಾರಿ ಹಣ ವಿನಿಯೋಗವಾಗಿದೆ.

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುದ್ದೀಪ ಪೂರೈಕೆ, ಪಂಪ್ ಸೆಟ್ಟುಗಳನ್ನು ಪೂರೈಸಿ ಅವುಗಳಿಗೆ ವಿದ್ಯುಚ್ಛಕ್ತಿ ಪೂರೈಕೆ, ಮುಂತಾದ ಕಾರ್ಯಕ್ರಮಗಳಿಂದಲೂ ವ್ಯವಸಾಯೋತ್ಪಾದನೆಗೆ ಬಹಳವಾಗಿ ನೆರವಾಗಿದೆ. ಇವೆಲ್ಲ ಕಾರ್ಯಕ್ರಮಗಳ ಫಲವಾಗಿ, ಸಂಪತ್ತು ಗಮನಾರ್ಹವಾಗಿ ಹೆಚ್ಚಿದೆ. ಇದರಿಂದ ಪರಮಾವಧಿ ಪ್ರಯೋಜನ ಪಡೆದ ಕೃಷಿಕವರ್ಗದ ಒಂದು ಪಂಗಡವು ಸೂಕ್ತ ತೆರಿಗೆಯಿಂದ ತಪ್ಪಿಸಿಕೊಳ್ಳುವಂತಾಗಿದೆಯಲ್ಲದೆ, ರಾಜ್ಯದ ಉಳಿತಾಯಕ್ಕೆ ಅವರಿಂದ ಬಂದ ಕೊಡುಗೆಯೂ ಅತ್ಯಲ್ಪ.

16. 1967ರಿಂದ ಕೆಲಕೆಲವು ರಾಜ್ಯಗಳು ತಮಗೆ ಉಪಲಬ್ಧವಿರುವ ಆದಾಯ ಜನಾನುರಾಗವನ್ನು ಗಳಿಸಿಕೊಳ್ಳುವ ಹಂಬಲದಿಂದ ಅತಿ ವೆಚ್ಚದ ಏರ್ಪಾಡುಗಳನ್ನು ಕೈಕೊಂಡಿವೆ. ಇದರಿಂದ, ಈ ರಾಜ್ಯಗಳ ಆರ್ಥಿಕ ಸ್ಥಿತಿಯು ಹದಗೆಡುವುದಷ್ಟೇ ಅಲ್ಲವೆ, ಬೇರೆ ರಾಜ್ಯಗಳಲ್ಲೂ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಸುಯೋಜಿತ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳಿಂದ ಜನತೆಯ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದೇ ನಮ್ಮ ಉದ್ದೇಶವಾದರೆ, ನಾವು ಪರಮಾವಧಿ ಸಂಪನ್ಮೂಲಗಳನ್ನು ಶೇಖರಿಸಿಕೊಳ್ಳಬೇಕಷ್ಟೇ ಅಲ್ಲದೆ, ಪಡೆದ ಸೌಕರ್ಯಗಳಿಗೆ ಪ್ರತಿಯಾಗಿ ಸೂಕ್ತ ಹಣ ಸಲ್ಲಿಸುವಂತೆ ಜನಕ್ಕೆ ಸಾಕಷ್ಟು ತಿಳಿವಳಿಕೆ ನೀಡುವುದೂ ಅನಿವಾರ್ಯ.

17. ಗ್ರಾಮವಲಯದಲ್ಲಿ ಉಳಿತಾಯಗಳನ್ನು ಶೇಖರಿಸಿಕೊಳ್ಳುವಂತೆ ಎಲ್ಲ ರಾಜ್ಯಸರ್ಕಾರಗಳಿಗೂ ಯೋಜನಾ ಆಯೋಗವು ಸಲಹೆ ನೀಡಿದೆ. ತೆರಿಗೆ ರಚನೆಯನ್ನು ಸುಗಮಗೊಳಿಸುವಂತೆ ವ್ಯಾಪಾರಿ ವರ್ಗದವರಿಂದ ಮನವಿಗಳು ಬಂದಿವೆ. ವಿದ್ಯುಚ್ಛಕ್ತಿ ದರಗಳ ಮತ್ತು ಸರ್ಕಾರಿ ಉದ್ದಿಮೆ ಸಂಸ್ಥೆಗಳಿಂದ ಬರಬಲ್ಲ ಕೊಡುಗೆಯ ವಿಚಾರವನು ನಾನು ಮುಂದೆ ಪ್ರಸ್ತಾವಿಸಲಿದ್ದೇನೆ.

ತೆರಿಗೆ ಮೂಲಕವಾಗಿ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಲು ನಾವು ಈ ಹಿಂದೆಯೇ ಸರ್ವ ಪ್ರಯತ್ನ ಮಾಡಿದ್ದೇವೆ. ಪಾನ ನಿರೋಧದ ಸಡಿಲಿಕೆ, ವಿದ್ಯುತ್ತಿನ ಮಾರಾಟ, ಅರಣ್ಯಗಳಿಂದ ಬರುವ ವರಮಾನ, ಇತ್ಯಾದಿ ತೆರಿಗೆ ರೂಪದ್ದಲ್ಲದ ಆದಾಯವನ್ನೂ ಪಡೆದುಕೊಂಡಿದ್ದೇವೆ. ಸಾಕಷ್ಟು ಪ್ರಮಾಣದ ಯೋಜನೆಯೊಂದನ್ನು ರೂಪಿಸಿಕೊಳ್ಳಬೇಕಾದರೆ, ರಾಜ್ಯವು ಸಂಪನ್ಮೂಲಗಳನ್ನು ಒದಗಿಸಿಕೊಳ್ಳಲು ಸರ್ವ ಪ್ರಯತ್ನ ಮಾಡಬೇಕೆಂಬುದೇನೋ ನಿರ್ವಿವಾದ. ಈ ವಿಚಾರದ ಕೂಲಂಕಷ ಪರಿಶೀಲನೆಗಾಗಿ ರಾಷ್ಟ್ರೀಯ ಪ್ರಾಯೋಗಿಕ ಆರ್ಥಿಕ ಸಂಶೋಧನ ಪರಿಷತ್ತಿನ ಡೈರೆಕ್ಟರ್ ಜನರಲ್‌ರವರಾದ ಶ್ರೀ ಎಸ್. ಭೂತಲಿಂಗಮ್ ಅವರ ಅಧ್ಯಕ್ಷತೆಯಲ್ಲಿ ತಜ್ಞರಿಂದಲೂ, ಅನುಭವಶಾಲಿ ಅಧಿಕಾರಿಗಳಿಂದಲೂ ಕೂಡಿದ ಒಂದು ಸಮಿತಿ ರಚಿತವಾಗಿದೆ. ತೆರಿಗೆ ವಿಧಿಸಲು ದೊರೆಯಬಹುದಾದ ಅವಕಾಶವನ್ನೂ ಮಾತ್ರವಲ್ಲದೆ, ರಾಜ್ಯದ ತೆರಿಗೆ ರೂಪದ್ದಲ್ಲದ ವರಮಾನವನ್ನೂ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳನ್ನೂ ಈ ಸಮಿತಿಯು ಪರಿಶೀಲಿಸುವುದು.

18. 1968-69 ನೇ ವರ್ಷದ ವಾರ್ಷಿಕ ಯೋಜನೆಗೆ ಕೇಂದ್ರದಿಂದ 36.90 ಕೋಟಿ ರೂಪಾಯಿ ನೆರವು ಬಂದಿದೆ. 1969-70 ಕ್ಕಾದರೂ 30.60 ಕೋಟಿ ರೂಪಾಯಿ ನೆರವು ನೀಡುವುದಾಗಿ ಯೋಜನಾ ಆಯೋಗದವರು ತಿಳಿಸಿದ್ದಾರೆ. ರಾಜ್ಯ ಸರ್ಕಾರದವರು 56 ಕೋಟಿ ರೂಪಾಯಿ ವೆಚ್ಚದ ಕನಿಷ್ಠ ಪ್ರಮಾಣದ ಯೋಜನೆಯೊಂದನ್ನು ರೂಪಿಸಿಕೊಳ್ಳಲು ನಿರ್ಧರಿಸಿದ್ದಾರೆ. ಯೋಜನೆಯ ಬೇರೆ ಬೇರೆ ಕಾರ್ಯಕ್ರಮಗಳಿಗೆ ಹಣವನ್ನು ಹಂಚಿಹಾಕುವ ಕಾಲಕ್ಕೆ, ಮುಂದುವರಿಯುತ್ತಿರುವ ಕಾಮಗಾರಿಗಳಿಗೂ, ಭೂ ಅಭಿವೃದ್ಧಿ ಬ್ಯಾಂಕಿಗೆ ಸಹಾಯ ಧನ, ಅರಣ್ಯ ಇಲಾಖೆಯಲ್ಲಿ ತೀವ್ರ ಬೆಳೆಯುವ ವೃಕ್ಷ ಜಾತಿಗಳನ್ನು ಬೆಳೆಸಲು ಹಣ ವ್ಯವಸ್ಥೆ, ಉದ್ದಿಮೆಗಳಿಗೆ ನೀರು ಪೂರೈಕೆ, ತುಂಗಭದ್ರಾ ಪ್ರದೇಶದ ಆಯಕಟ್ಟಿನ ಅಡಿಕಟ್ಟಡ (ವಾರುಕಟ್ಟೆ ರಚನೆ ಮತ್ತು ರಸ್ತೆ ನಿರ್ಮಾಣ), ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಣ ವ್ಯವಸ್ಥೆ, ಮುಂತಾದ ಅನಿವಾರ್ಯ ವೆಚ್ಚಕ್ಕೂ ಈ ಹಣ ಸಾಕಾಗುವಂತಿಲ್ಲವೆಂದು ಕಂಡುಬಂದಿದೆ. ಆದ್ದರಿಂದ ಈ ಆಯವ್ಯಯ ಪತ್ರದಲ್ಲಿ 62.12 ಕೋಟಿ ರೂಪಾಯಿ ವೆಚ್ಚಕ್ಕೆ ಏರ್ಪಾಡು ಮಾಡಿದೆ. ವಲಯಾನುಸಾರ ವಿಭಜನೆ ಈ ಮುಂದಿನಂತಿದೆ :—

ಕೋಟಿ ರೂಪಾಯಿ ಲೆಕ್ಕದಲ್ಲಿ

ವ್ಯವಸಾಯ ಕಾರ್ಯಕ್ರಮ	...	15.56
ಸಾಮುದಾಯಿಕ ಅಭಿವೃದ್ಧಿ ಮತ್ತು ಸಹಕಾರ	...	1.79
ನೀರಾವರಿ ಮತ್ತು ವಿದ್ಯುಚ್ಛಕ್ತಿ	...	27.70
ಸಾಗಣೆ ಮತ್ತು ಸಂಪರ್ಕ ಸಾಧನೆಗಳು	...	3.45
ಉದ್ದಿಮೆಗಳು	...	3.44
ಸಮಾಜ ಸೇವೆ ಮತ್ತು ವಿವಿಧ ಸೇವೆಗಳು	...	10.18
ಒಟ್ಟು		62.12

ಹಣ ಹಂಚಿಕೆ ಮಾಡುವ ಕಾಲಕ್ಕೆ ಈಗ ನಡೆಯುತ್ತಿರುವ ಕಾರ್ಯಗಳನ್ನು ಪೂರ್ತಿಗೊಳಿಸುವುದಕ್ಕೂ, 'ವ್ಯವಸಾಯ', ನೀರಾವರಿ' ಮತ್ತು 'ವಿದ್ಯುಚ್ಛಕ್ತಿ' ಗಳಿಗೆ ಆದ್ಯತೆ ನೀಡುವ ವಿಚಾರಕ್ಕೂ ಪ್ರಾಧಾನ್ಯ ಕೊಟ್ಟಿರುವುದು ಸ್ಪಷ್ಟವಾಗಿದೆ. ಮೂರು ವಾರ್ಷಿಕ ಯೋಜನೆಗಳಿಗೆ ವಹಿಸಿದ ವೆಚ್ಚ ಈ ರೀತಿಯಾಗಿದೆ :—

ಕೋಟಿ ರೂಪಾಯಿ ಲೆಕ್ಕದಲ್ಲಿ

ವರ್ಷ	ಒದಗಿಸಿದ ಹಣ	ವಹಿಸಿದ ಅಥವಾ ನಿರೀಕ್ಷಿಸಿದ ವೆಚ್ಚ
1966-67	50.82	54.68
1967-68	63.85	64.97
1968-69	60.98	62.44

19. ಈ ಮೂರು ವಾರ್ಷಿಕ ಯೋಜನಾವಧಿಗಳಲ್ಲಿ ಸರ್ಕಾರದ ಕಾರ್ಯಕಲಾಪಗಳ ವಿವರಗಳನ್ನೂ, ಆರ್ಥಿಕ ಸ್ಥಿತಿಯ ಪರಿಶೀಲನೆಯನ್ನೂ ಕೊಟ್ಟಿರುವ ಪ್ರತ್ಯೇಕ ಕಿರುಹೊತ್ತಿಗೆಗಳನ್ನು

(ಶ್ರೀ ರಾಮಕೃಷ್ಣ ಹೆಗಡೆ)

ಆಯವ್ಯಯ ಪತ್ರಗಳ ಜೊತೆಗೆ ಒದಗಿಸಿದೆ. ಇವುಗಳನ್ನು ನಾನಿಲ್ಲಿ ಕೂಲಂಕಷವಾಗಿ ಪರಿಶೀಲಿಸ ಬಯಸುವುದಿಲ್ಲ. ಮುಂದಿನ ವರ್ಷದ ಮಹತ್ವದ ಕಾರ್ಯಕಲಾಪಗಳನ್ನು ಮಾತ್ರ ನಾನಿಲ್ಲಿ ಸ್ಥೂಲವಾಗಿ ಉಲ್ಲೇಖಿಸಲಿದ್ದೇನೆ.

20. ಮುಂದಿನ ವರ್ಷ ಬೃಹತ್ತಾದ ತುಂಗಭದ್ರಾ ಮತ್ತು ಘಟಪ್ರಭಾ ಜಲಾಶಯ ಯೋಜನೆಗಳಿಂದ ದೊರೆಯುವ ಸೌಲಭ್ಯಗಳನ್ನು ಬಳಸಿಕೊಂಡು ಒಂದು ಲಕ್ಷ ಎಕರೆಯಷ್ಟು ಹೆಚ್ಚು ಭೂಮಿಗೆ ನೀರಾವರಿ ಒದಗಿಸಲು ಏರ್ಪಾಡು ಮಾಡಲಾಗುವುದು. ಅಲ್ಪ ಪ್ರಮಾಣದ ನೀರಾವರಿಗೆ ಆದ್ಯ ಗಮನ ಕೊಡಲಾಗುವುದು. ಲೋಕೋಪಯೋಗಿ ಇಲಾಖೆಯ ಆಯವ್ಯಯ ಪತ್ರದಲ್ಲಿ ಸಣ್ಣ ನೀರಾವರಿ ಯೋಜನೆಯಲ್ಲಿ ಜಲಾಶಯಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರ ಕಾರ್ಯಗಳಿಗೆ 3.80 ಕೋಟಿ ರೂಪಾಯಿ ವೆಚ್ಚಕ್ಕೆ ಏರ್ಪಾಡು ಮಾಡಲಾಗಿದೆ. ಭೂ ಅಭಿವೃದ್ಧಿ ಬ್ಯಾಂಕಿನ ಮತ್ತು 'ಮೈಸೂರು ಆ್ಯಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್' ಸಂಸ್ಥೆಯ ನೆರವು ಪಡೆದು 20 ಸಾವಿರ ನೀರಾವರಿ ಬಾವಿಗಳನ್ನು ತೋಡಿಸಿ, 8,000 ಇಲೆಕ್ಟ್ರಿಕ್ ಮತ್ತು 5,000 ಡಿಸೆಲ್ ಪಂಪ್‌ಸೆಟ್ಟುಗಳನ್ನು ಕಂತು ಕೊಳ್ಳಾಟದ ಏರ್ಪಾಡಿನಂತೆ ಹಂಚಬೇಕೆಂಬ ಉದ್ದೇಶವೂ ಇದೆ. ಇದರ ಜತೆಗೆ 700 ಕೊರೆದ ಬಾವಿಗಳನ್ನು ಒದಗಿಸುವ ಕಾರ್ಯಕ್ರಮವಿದೆ. ಇನ್ನೂ 18 ಬಿತ್ತನೆ ಬೀಜದ ಕೇಂದ್ರಗಳನ್ನು ಏರ್ಪಡಿಸುವ ಕಾರ್ಯಕ್ರಮವೂ ಇದೆ. ಸುಮಾರು 38 ಲಕ್ಷ ಎಕರೆ ಭೂಮಿಯಲ್ಲಿ ಸುಧಾರಿತ ಬೀಜ ಬಿತ್ತುವ ಉದ್ದೇಶವಿದೆ. ಹೆಚ್ಚು ಹೆಚ್ಚು ವಿಸ್ತೀರ್ಣಕ್ಕೆ ಬೀಜ ಒದಗಿಸುವ ನಿಮಿತ್ತ, ಉತ್ತಮ ತಳಿಯ ಬೀಜೋತ್ಪಾದನೆಯನ್ನು ವೃದ್ಧಿಪಡಿಸಲಾಗುತ್ತಿದೆ. 3.85 ಲಕ್ಷ ಟನ್ ಅಮೋನಿಯಂ ಸಲ್ಫೇಟ್, 2.94 ಲಕ್ಷ ಟನ್ ಸೂಪರ್ ಫಾಸ್‌ಫೇಟ್, ಮತ್ತು 12,000 ಟನ್ ಮ್ಯೂರಿಯೇಟ್ ಪೊಟ್ಯಾಶ್ ಒದಗಿಸಿ, ಆ ಮೂಲಕ ಕೃತಕ ಗೊಬ್ಬರಗಳ ಸರಬರಾಜಿನ ಪ್ರಮಾಣವನ್ನು ಹೆಚ್ಚಿಸಲಾಗುತ್ತಿದೆ. ಇದರ ಜೊತೆಗೆ 11 ಲಕ್ಷ ಎಕರೆ ಭೂಮಿಗೆ ಹಸಿರು ಗೊಬ್ಬರ ದೊರೆಯುವುದು ; ನಗರ ಪ್ರದೇಶದ ಕಂಪೋಸ್ಟ್ ಗೊಬ್ಬರ 5 ಲಕ್ಷ ಟನ್, ಗ್ರಾಮಾಂತರ ಪ್ರದೇಶದ ಗೊಬ್ಬರ 50 ಲಕ್ಷ ಟನ್ ದೊರೆಯುವುದು. ಸುಮಾರು 42 ಲಕ್ಷ ಎಕರೆ ಭೂಮಿಯಲ್ಲಿ ಸಸ್ಯಸಂರಕ್ಷಣ ಕಾರ್ಯ ನಡೆಯುವುದು. ಇಲ್ಲಿ, ಹೆಗ್ಗಣಗಳ ನಿಯಂತ್ರಣ ಕಾರ್ಯ ಮುಂದುವರಿಯುವುದು. 53.48 ಲಕ್ಷ ಎಕರೆ ಭೂಮಿಯಲ್ಲಿ ಐ.ಎ.ಡಿ.ಸಿ. ಯೋಜನೆಯನ್ನು (ಎಂದರೆ ತೀವ್ರ ವ್ಯವಸಾಯಾಭಿವೃದ್ಧಿ ಯೋಜನೆಯನ್ನು) ಮತ್ತು ಐ.ಎ.ಎ.ಪಿ. ಯೋಜನೆಯನ್ನು (ಎಂದರೆ ತೀವ್ರ ವ್ಯವಸಾಯ ವಿಸ್ತೀರ್ಣಾಭಿವೃದ್ಧಿ ಯೋಜನೆಯನ್ನು) ಕಾರ್ಯಗತ ಮಾಡುವ ಉದ್ದೇಶವಿದೆ. ಹೆಚ್ಚು ಇಳುವರಿ ಬೆಳೆಯ ಕಾರ್ಯಕ್ರಮವನ್ನು 12 ಲಕ್ಷ ಎಕರೆ ಭೂಮಿಗೆ ವಿಸ್ತರಿಸಲಾಗುವುದು.

21. ಇವೆಲ್ಲ ಏರ್ಪಾಡುಗಳ ಪರಿಣಾಮವಾಗಿ ಉತ್ಪಾದನೆಯು ಬಹಳವಾಗಿ ಹೆಚ್ಚುವುದೆಂಬುದೇನೋ ನಿರ್ವಿವಾದ. ಆದರೆ ನಿರ್ದಿಷ್ಟವಾದೊಂದು ಹಂತಕ್ಕೂ ಮೀರಿ ಉತ್ಪಾದನೆ ಹೆಚ್ಚುತ್ತ ಹೋದರೆ, ಅದರಿಂದಲೂ ಕೆಲವಾರು ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಸೂಕ್ತ ಕಾಲದಲ್ಲಿ ಅವುಗಳನ್ನು ಬಗೆಹರಿಸದೆ ಹೋದರೆ, ಆರ್ಥಿಕ ಸ್ಥಿತಿಯ ಮೇಲೆ ಕೆಟ್ಟ ಪರಿಣಾಮಗಳು ಉಂಟಾಗುತ್ತವೆ. ಪ್ರಸಕ್ತ ವರ್ಷದಲ್ಲಿ ಮೆಕ್ಕೆ ಜೋಳದ ಬೆಲೆ ತೀವ್ರವಾಗಿ ಕುಸಿದಿತ್ತು. ಕೃಷಿಕರಿಗೆ ಬೆಲೆ ಬೆಂಬಲ ಕೊಡದೆ ಹೋದರೆ ಅವರು ಉತ್ಸಾಹಗುಂದುತ್ತಾರೆ, ಆಮೇಲೆ ಅವರಲ್ಲಿ ಉತ್ಸಾಹವನ್ನು ತುಂಬುವುದು ಬಹಳ ಕಷ್ಟವಾಗುತ್ತದೆ. ಈ ವಿಚಾರದಲ್ಲಿ ಸರ್ಕಾರದವರು ಕೆಲ ಕೆಲವು ಕ್ರಮಗಳನ್ನು ಕೈಕೊಂಡಿರುವುದೇನೋ ನಿಜ. ಮೆಕ್ಕೆ ಜೋಳವನ್ನು ದೊಡ್ಡ ಪ್ರಮಾಣದಲ್ಲಿ ಔದ್ಯಮಿಕ ಉದ್ದೇಶಗಳಿಗೆ ಬಳಸುವ ನಿಮಿತ್ತವಾಗಿ ಒಂದು ಪಿಷ್ಟ ಕಾರ್ಖಾನೆಯನ್ನು ಪ್ರಾರಂಭಿಸುವ ಉದ್ದೇಶವಿದೆ. ಆದರೆ ಬೆಲೆಗೆ ಸಂಬಂಧಪಟ್ಟ ಕಾರ್ಯನೀತಿಯನ್ನೂ ಹಣ ಸಂಬಂಧವಾದ ಬೇರೆ ಏರ್ಪಾಡುಗಳನ್ನೂ ತೃಪ್ತಿಕರವಾಗಿ ರಾಷ್ಟ್ರೀಯ ಮಟ್ಟದಲ್ಲಿಯೇ ತರಲು ಸಾಧ್ಯ. ಕೃಷಿಕರ ಭರವಸೆಯನ್ನು ಉಳಿಸಿಕೊಳ್ಳುವಂತೆ ಅಂಥ ಆಹಾರ ಧಾನ್ಯಗಳ ಆಯಾತಗಳಲ್ಲಿ ಭಾರತ ಸರ್ಕಾರದವರು ತೀವ್ರ ಕಡಿತಗಳನ್ನು ತರುವ ವಿಚಾರವನ್ನು ಪರಿಶೀಲಿಸಬೇಕು. ನಮ್ಮ ದೇಶದಲ್ಲಿ ವ್ಯವಸಾಯ ಸರಕುಗಳಿಗೆ ಸಮಂಜಸವಾದ ರಾಷ್ಟ್ರೀಯ ಮೌಲ್ಯ ನೀತಿ ಎಂದೂ ಇರಲಿಲ್ಲ. ಆದ್ದರಿಂದ ಒಂದು ವ್ಯಾವಹಾರಿಕ ಮೌಲ್ಯ ನೀತಿಯನ್ನು ತೀವ್ರವಾಗಿ ನಾವು ಕುದುರಿಸಿಕೊಳ್ಳದೆಹೋದರೆ, ಉತ್ಪಾದನೆ ವೃದ್ಧಿಯಲ್ಲಿ ಇದುವರೆಗೂ ಅಪಾರ ಆಸಕ್ತಿ ವಹಿಸಿದ ಕೃಷಿಕರಿಗೆ ಭರವಸೆ ತಪ್ಪುವುದು. ಕೃಷಿಕರ ಉತ್ಸಾಹವೂ, ಭರವಸೆಯೂ, ಸಹಕಾರವೂ ದೊರೆಯದೆ ಹೋದರೆ ಅಧಿಕಾಹಾರ ಉತ್ಪಾದನೆಯ ಚಳುವಳಿ ಅರ್ಥಹೀನವಾಗಿ, ಅದಕ್ಕೆ ಸಾಕಷ್ಟು ಬೆಂಬಲ ಲಭಿಸಲಾರದು.

22. 'ಪಶುಸಂಗೋಪನ' ವಿಭಾಗದಲ್ಲಿ, ಬೆಂಗಳೂರು ಕ್ಷೀರಸಂಗ್ರಹ ಪ್ರದೇಶದಲ್ಲಿ ಹೆಚ್ಚು ಜಾನುವಾರುಗಳನ್ನು ಸೇರಿಸಿಕೊಂಡು ಜಾನುವಾರುಗಳ ತೀವ್ರಾಭಿವೃದ್ಧಿ ಕಾರ್ಯಕ್ರಮವನ್ನು ಮುಂದುವರಿಸಲಾಗುತ್ತಿದೆ. ಪ್ರತಿ ವರ್ಷ 40 ಕೃತಕಗರ್ಭಧಾರಣ ಕೇಂದ್ರಗಳನ್ನು ಪ್ರಾರಂಭಿಸುವ ಉದ್ದೇಶವಿದೆ. ಹುಬ್ಬಳ್ಳಿ–ಧಾರವಾಡ ಹಾಲು ಸರಬರಾಜು ಯೋಜನೆಗೆ ಜಾನುವಾರುಗಳ ತೀವ್ರಾಭಿವೃದ್ಧಿಯ ನಿಮಿತ್ತವಾಗಿ, ಮಧ್ಯಮ ಪ್ರಮಾಣದ ಹೊಸತೊಂದು ವಿಭಾಗಕ್ಕೆ ಮಂಜೂರಾತಿ ಕೊಟ್ಟಿದೆ; ಇದರಲ್ಲಿ 50 ಕೃತಕ ಗರ್ಭಧಾರಣ ಘಟಕಗಳಿವೆ. ತುಂಗಭದ್ರಾ ಯೋಜನೆಯ ಆಯಕಟ್ಟು ಪ್ರದೇಶವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ, ಕೃತಕ ಗರ್ಭಧಾರಣ ಘಟಕಗಳುಳ್ಳ ವೀರ್ಯ ನಿಧಿ (ಸೀಮೆನ್ ಬ್ಯಾಂಕ್) ವ್ಯವಸ್ಥೆಯನ್ನೂ ಮೇವಿನ ಅಭಿವೃದ್ಧಿಯನ್ನೂ ರೋಗ ನಿಯಂತ್ರಣ ಕಾರ್ಯವನ್ನೂ ಪ್ರಾರಂಭಿಸಲಾಗುತ್ತಿದೆ. ಕೋಳಿ ಮತ್ತು ಹಂದಿ ಉತ್ಪಾದನೆಯ ಎಲ್ಲ ಹಂತಗಳಲ್ಲೂ ಗಮನಾರ್ಹ ಪ್ರಗತಿ ಸಾಧಿಸಿದೆ.

23. ಹಣ್ಣು ಹಂಪಲು, ತರಕಾರಿ, ತೋಟಗಳು ಇತ್ಯಾದಿಯ ಅಭಿವೃದ್ಧಿ ವಿಚಾರದಲ್ಲಿ ತೋಟಗಾರಿಕೆ ಇಲಾಖೆಯೂ ಸಹ ಸಾಕಷ್ಟು ಪ್ರಗತಿ ಸಾಧಿಸಿದೆ. ಸುಧಾರಿತ ವಿಧಾನಗಳ ಬಗೆಗೆ ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಲಾಯಿತು. ಆಬಾಲ ವೃದ್ಧರ ವಾಯುಸೇವನಾ ಸ್ಥಳಗಳಾಗಿಯೂ, ವಿಹಾರ ಕೇಂದ್ರಗಳಾಗಿಯೂ ಇರುವ ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ಉದ್ಯಾನಗಳನ್ನು ಉತ್ತಮಪಡಿಸುವ ಯೋಜನೆಗಳನ್ನು ಹಂತ ಹಂತವಾಗಿ ಕೈಕೊಳ್ಳುವ ಕಾರ್ಯಕ್ರಮವು ಪರಿಶೀಲನೆಯಲ್ಲಿದೆ. 1969-70ನೇ ವರ್ಷದಲ್ಲಿ ಕೈಕೊಳ್ಳತಕ್ಕ ಕಾಮಗಾರಿಗಳಿಗೆ ಬೇಕಾಗುವ ಹಣವನ್ನು ಈ ಆಯವ್ಯಯ ಪತ್ರದಲ್ಲಿ ಒದಗಿಸಿದೆ.

24. ಮೀನುಗಾರಿಕೆ ಅಭಿವೃದ್ಧಿ ವಿಭಾಗದಲ್ಲಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಹಕಾರೀ ಮೀನುಗಾರಿಕೆ ಯೋಜನೆಗಳನ್ನು ಕಾರ್ಯಗತಮಾಡಿ, ಮತ್ಸ್ಯೋದ್ಯಮದ ಯಾಂತ್ರಿಕೀಕರಣದ ಪ್ರಗತಿಯನ್ನು ತ್ವರೆಗೊಳಿಸಲು ಸಾಧ್ಯವಾಗಿದೆ. ರಾಜ್ಯದಲ್ಲಿರುವ ಯಂತ್ರ ಚಾಲಿತ ದೋಣಿಗಳ ಒಟ್ಟು ಸಂಖ್ಯೆ ಈಗ ಸುಮಾರು 510. 1969–70ರಲ್ಲಿ ಇನ್ನೂ 102 ದೋಣಿಗಳನ್ನು ಸೇರಿಸಲಾಗುವುದು. ಈ ವರ್ಷ ನಾಲ್ಕು ಹಿಮ ಯಂತ್ರಗಳನ್ನು, ಎರಡು ಘನೀಕರಣ ಯಂತ್ರಗಳನ್ನು ಮತ್ತು ಶೀತಾಗಾರಗಳನ್ನು ಸಿದ್ಧಗೊಳಿಸಲಾಯಿತು. ಇನ್ನೂ 4 ಯಂತ್ರಗಳು ಇಷ್ಟರಲ್ಲಿಯೇ ಸಿದ್ಧವಾಗಲಿವೆ. ಇದರಿಂದ ರಾಜ್ಯದಲ್ಲಿ ಮೀನಿನ ಸಂರಕ್ಷಣ ಮತ್ತು ಸಂಸ್ಕರಣ ಸೌಲಭ್ಯಗಳು ಗಮನಾರ್ಹವಾಗಿ ಹೆಚ್ಚುವುವು. ಮೀನಿನ ನಿರ್ಯಾತವನ್ನು 602 ಟನ್ನಿನಷ್ಟಕ್ಕೆ ಹೆಚ್ಚಿಸಲಾಗಿದೆ. ಇದರ ಮೌಲ್ಯ 107.00 ಲಕ್ಷ ರೂಪಾಯಿ.

25. ರಾಜ್ಯದಲ್ಲಿ ಮೀನುಗಾರಿಕೆ ಬಂದರುಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಲಾಗಿದೆ. ಕೇಂದ್ರ ಪುರಸ್ಕೃತ ಯೋಜನೆಗಳ ಮೇರೆಗೆ ಕಾರವಾರದಲ್ಲಿ 24.00 ಲಕ್ಷ ರೂಪಾಯಿ ವೆಚ್ಚದ ಒಂದು ಮೀನುಗಾರಿಕೆ ಬಂದರಿನ ನಿರ್ಮಾಣಕ್ಕೆ ಭಾರತ ಸರ್ಕಾರದವರು ಮಂಜೂರಾತಿ ಕೊಟ್ಟಿದ್ದಾರೆ. ಈ ಕೆಲಸ ಈಗಾಗಲೇ ಮುಂದುವರಿಯುತ್ತಿದೆ. ಮೀನುಗಾರಿಕೆಗೂ ಸಾಮಾನ್ಯ ಸರಕು ಸಾಗಾಣಿಕೆಗೂ ಅನುಕೂಲವಾಗುವಂತೆ ರಾಜ್ಯದಲ್ಲಿ ಆರು ರೇವುಗಳ ಅಭಿವೃದ್ಧಿಯ ಸಂಬಂಧವಾಗಿ ಮೆಸರ್ಸ್, ಇಂಡೋಪೋರ್, ಲಿಮಿಟೆಡ್, ಸಂಸ್ಥೆಯವರು ಒಂದು ಸಾಧ್ಯತಾ ವರದಿಯನ್ನು ಸಲ್ಲಿಸಿದ್ದಾರೆ. ಈ ವರದಿ ಸರಕಾರದ ಪರಿಶೀಲನೆಯಲ್ಲಿದೆ. ಯುಗೋಸ್ಲಾವಿಯದ ಇನ್‌ವೆಸ್ಟ್ ಇಂಪೋರ್ಟ್ ಸಂಸ್ಥೆಯವರು ಮತ್ತು ಇಂಡೋಪೋರ್ ಸಂಸ್ಥೆಯವರು ಅನುಕ್ರಮವಾಗಿ ಮಲ್ಪೆ ಮತ್ತು ಹೊನ್ನಾವರ ಬಂದರುಗಳ ಸಂಬಂಧವಾಗಿ ತಯಾರಿಸಿದ ಸಾಧ್ಯತಾ ವರದಿಗಳ ಆಧಾರದ ಮೇಲೆ, ಮೊದಲು ಆ ಸ್ಥಳಗಳಲ್ಲಿ ಮೀನುಗಾರಿಕೆ ಬಂದರುಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಉದ್ದೇಶವಿದೆ.

26. ತುಂಗಭದ್ರೆಯಲ್ಲಿ ತುಂಗಭದ್ರಾ ಮಂಡಲಿಯ ಆಶ್ರಯದಲ್ಲಿ ಮೈಸೂರು ಮತ್ತು ಆಂಧ್ರ ಪ್ರದೇಶ ಸರ್ಕಾರಗಳು ಸಂಯುಕ್ತವಾಗಿ 27.00 ಲಕ್ಷ ರೂಪಾಯಿ ವೆಚ್ಚದಲ್ಲಿ ಸ್ಥಾಪಿಸಿದ ಮೀನುಬಲೆ ತಯಾರಿಕೆಯ ಕಾರ್ಖಾನೆಯು ಪೂರ್ತಿಯಾಗಿದೆ. ಅದು ಈಗ ಉತ್ಪಾದನೆಗೆ ತೊಡಗಿದೆ. ಮೀನುಗಾರಿಕೆಯ ಕಾಲೇಜನ್ನು ನಮ್ಮ ರಾಜ್ಯವೇ ಮೊದಲು ಸ್ಥಾಪಿಸಿರುವುದಾಗಿದೆ.

27. 1969–70ರಲ್ಲಿ ಒಳನಾಡಿನ ಜಲಾಶಯಗಳಲ್ಲಿ 5 ಕೋಟಿ ಮೀನು ಮರಿಗಳನ್ನು ಶೇಖರಿಸಲಾಗುವುದು. ಪ್ರಾಯೋಗಿಕ ಪೋಷಣ ಕಾರ್ಯಕ್ರಮವನ್ನು ಇನ್ನೂ 20 ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರಗಳಿಗೆ ವಿಸ್ತರಿಸಲಾಗುವುದು. ಇದಲ್ಲದೆ, ಜಲಾಶಯ ಮೀನುಗಾರಿಕೆಯ ಮತ್ತು ಪ್ರಾದೇಶಿಕ ಮೀನು ಸಾಕಣೆ ಕೇಂದ್ರದ ಅಭಿವೃದ್ಧಿಯ ಜೊತೆಗೆ, 10 ಕೇಂದ್ರಗಳಲ್ಲಿ ಮೀನು ಕೊಳಗಳ ಅಭಿವೃದ್ಧಿಗೂ ಏರ್ಪಾಡು ಮಾಡಲಾಗುವುದು.

(ಶ್ರೀ ರಾಮಕೃಷ್ಣ ಹೆಗಡೆ)

28. ಸುರಕ್ಷಿತ ನೀರು ಸರಬರಾಜಿಗೆ ಹಣ ಒದಗಿಸುವ ವಿಚಾರವನ್ನು ಸರ್ಕಾರದವರು ಸದಾ ಪರಿಶೀಲಿಸುತ್ತಿದ್ದಾರೆ. ಪ್ರಸಕ್ತ ವರ್ಷದ ಅಂತ್ಯದಲ್ಲಿ 132 ಪಟ್ಟಣಗಳಿಗೆ ಸುರಕ್ಷಿತ ನೀರು ಮತ್ತು 9 ಪಟ್ಟಣಗಳಿಗೆ ನೆಲದಡಿ ಚರಂಡಿ ವ್ಯವಸ್ಥೆಯು ದೊರೆಯುವುದು. ಇನ್ನೂ ಹೆಚ್ಚು ನಗರಗಳಿಗೆ ಸುರಕ್ಷಿತ ನೀರು ಸರಬರಾಜು ಮಾಡುವ ನಿಮಿತ್ತವಾಗಿ, ಈ ಆಯವ್ಯಯ ಪತ್ರದಲ್ಲಿ 65 ಲಕ್ಷ ರೂಪಾಯಿ ಒದಗಿಸಲಾಗಿದೆ. ಇದಲ್ಲದೆ, ಇದಕ್ಕೆ ಬೇಕಾಗುವ ಸಾಲದ ನೆರವಿಗಾಗಿ ಜೀವವಿಮಾ ನಿಗಮವನ್ನು ವಿನಂತಿಸಿಕೊಳ್ಳಲಾಗಿದೆ. ಭಾರತ ಜೀವವಿಮಾ ನಿಗಮದ ಸಾಲದ ಯೋಜನೆಯ ಮೇರೆಗೆ 4.96 ಕೋಟಿ ರೂ. ವೆಚ್ಚದ 7 ನೀರು ಸರಬರಾಜು ಯೋಜನೆಗಳಿಗೆ ಮಂಜೂರಾತಿ ಕೊಟ್ಟಿದೆ. 63 ಲಕ್ಷ ರೂಪಾಯಿ ವೆಚ್ಚ ತಗಲುವ ಇನ್ನೂ 3 ಯೋಜನೆಗಳಿಗೆ ಮಂಜೂರಾತಿ ಕೊಡುವ ನಿರೀಕ್ಷೆ ಇದೆ. ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯು ಸಹ ಸಾಕಷ್ಟು ಪ್ರಗತಿ ಸಾಧಿಸಿದೆ. 1967–68ನೆಯ ವರ್ಷದ ಕೊನೆಯವರೆಗೆ ಪೂರ್ತಿಯಾದ 198 ಯೋಜನೆಗಳ ಜೊತೆಗೆ, ಪ್ರಸಕ್ತ ವರ್ಷದ ಕೊನೆಗೆ ಇನ್ನೂ 60 ಯೋಜನೆಗಳು ಪೂರೈಸಲಿವೆ. 20 ಸಾವಿರ ಜನಸಂಖ್ಯೆಯುಳ್ಳ ನಗರಗಳಿಗೂ ಸಹ ಅನ್ವಯಿಸುವಂತೆ ಇನ್ನೂ ಹೆಚ್ಚು ಯೋಜನೆಗಳನ್ನು ಕೈಕೊಳ್ಳುವ ನಿಮಿತ್ತವಾಗಿ ಮುಂದಿನ ವರ್ಷದ ಆಯವ್ಯಯ ಪತ್ರದಲ್ಲಿ 50 ಲಕ್ಷ ರೂಪಾಯಿ ಹಣ ಒದಗಿಸಲಾಗಿದೆ.

29. ಆದ್ದರಿಂದ, ರಾಜ್ಯದ ಪ್ರತಿಯೊಂದು ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯ ವಿಚಾರದಲ್ಲಿ ಸರ್ಕಾರದವರು ಜಾಗ್ರತರಾಗಿದ್ದಾರೆಂಬುದು ಸ್ಪಷ್ಟವಾಗುವುದು. ಈ ಮೂಲಭೂತ ಅಗತ್ಯವನ್ನು ತೃಪ್ತಿಕರವಾಗಿ ಪರಿಹರಿಸದೆ ಹೋದರೆ, ನಮ್ಮ ಯೋಜನೆಗಳು ಸಫಲವಾಗುವಂತಿಲ್ಲ. ಆದ್ದರಿಂದ ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವ ಸಲುವಾಗಿ ಈ ಆಯವ್ಯಯ ಪತ್ರದಲ್ಲಿ 65 ಲಕ್ಷ ರೂಪಾಯಿ ಒದಗಿಸಿದೆ. ಈ ದಿಶೆಯಲ್ಲಿ ಸಾಧಿಸಿದ ಪ್ರಗತಿಯನ್ನು ಲಕ್ಷಿಸಿ, ಈ ವರ್ಷ ಇನ್ನಷ್ಟು ಹಣ ಒದಗಿಸಲಾಗುವುದು. ಯಾವ ಗ್ರಾಮದಲ್ಲೂ ಕುಡಿಯುವ ನೀರಿನ ಬಾವಿ ಇಲ್ಲವೆಂದು ಆಗಕೂಡದೆಂಬುದೇ ಈ ಏರ್ಪಾಡಿನ ಉದ್ದೇಶ.

30. ಬೆಂಗಳೂರು ನೀರು ಸರಬರಾಜು ಯೋಜನೆಯ ಮೊದಲ ಹಂತವನ್ನು ಕಾರ್ಯ ರೂಪಕ್ಕೆ ತರುವ ನಿಮಿತ್ತವಾಗಿ, ಆಯವ್ಯಯ ಪತ್ರದಲ್ಲಿ 194.00 ಲಕ್ಷ ರೂಪಾಯಿ ಹಣವನ್ನು ಒದಗಿಸಿದೆ. ಈ ಸಮಗ್ರ ಯೋಜನೆಗೆ 22.32 ಕೋಟಿ ರೂಪಾಯಿ ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ.

31. ಈಗ ಪ್ರಗತಿ ಹೊಂದುತ್ತಿರುವ ನೀರಾವರಿ ಯೋಜನೆಗಳನ್ನು ಪೂರೈಸುವ ಅಗತ್ಯವನ್ನೂ ರಾಜ್ಯದ ಹಿತರಕ್ಷಣೆಗಾಗಿ ಹೊಸ ಯೋಜನೆಗಳನ್ನು ಕೈಕೊಳ್ಳುವ ಅಗತ್ಯವನ್ನೂ ಈಗಾಗಲೇ ಚರ್ಚಿಸಲಾಗಿದೆ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆಯವ್ಯಯ ಪತ್ರದಲ್ಲಿ ನೀರಾವರಿಗೆಂದು 12.83 ಕೋಟಿ ರೂಪಾಯಿ ಹಣವನ್ನು ಒದಗಿಸಿದೆ. ಇದರಲ್ಲಿ ಘಟಪ್ರಭಾ ಯೋಜನೆಗೆ 2.91 ಕೋಟಿ ರೂಪಾಯಿ, ಮಲಪ್ರಭಾ ಯೋಜನೆಗೆ 2.45 ಕೋಟಿ ರೂಪಾಯಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ 2 ಕೋಟಿ ರೂಪಾಯಿ ಹೇಮಾವತಿ ಯೋಜನೆಗೆ.50 ಲಕ್ಷ ರೂಪಾಯಿ ದೊರೆಯುವುದು. ಉಳಿದ ಹಣವನ್ನು ಇತರ ಯೋಜನೆಗಳಿಗೆ ಹಂಚಿ ಹಾಕಲಾಗುವುದು.

32. 1965–66ನೇ ವರ್ಷದ ಕೊನೆಗೆ ವಿದ್ಯಾಭ್ಯಾಸ ನಿಮಿತ್ತವಾಗಿ ವಹಿಸಿದ ವೆಚ್ಚ 24.60 ಕೋಟಿ ರೂಪಾಯಿ. 1969–70ರಲ್ಲಿ ಈ ವೆಚ್ಚವು 46·07 ಕೋಟಿ ರೂಪಾಯಿಗೇರುವುದು. ಇದುವರೆಗೆ ಸಾಧಿಸಿದ ಪ್ರಗತಿಯನ್ನು ಸಂಘಟಿಸಿಕೊಳ್ಳುವ ಅಗತ್ಯವನ್ನು ಹಿಂದಿನ ಆಯವ್ಯಯ ಭಾಷಣದಲ್ಲಿ ಸೂಚಿಸಿದ್ದೆ. ನಮ್ಮ ದೇಶದ ವಿದ್ಯಾ ಪದ್ಧತಿಯಲ್ಲಿ ಹಲವಾರು ಬದಲಾವಣೆಗಳು ಉಂಟಾಗಿವೆ. ಇದರಿಂದಾಗಿ ಶಿಕ್ಷಣದ ಗುಣ ಪ್ರಮಾಣವನ್ನು ಉತ್ತಮಗೊಳಿಸುವ ವಿಚಾರಕ್ಕೆ ಸಾಕಷ್ಟು ಗಮನ ನೀಡುವುದು ಸಾಧ್ಯವಾಗಿಲ್ಲ. ಸಾರ್ವತ್ರಿಕ ವಿದ್ಯಾಭ್ಯಾಸವು ಹಠಾತ್ತಾಗಿ ವಿಸ್ತರಣ ಹೊಂದಿ ವಿದ್ಯಾರಂಗಕ್ಕೆ ಬಹಳ ಸಲಹೆಗಾರರು ಬಂದಾಗಲೆಲ್ಲಾ ಹೀಗಾಗುವುದು ಸಹಜ. ಆದುದರಿಂದ ಶಿಕ್ಷಣದ ಗುಣ ಪ್ರಮಾಣವನ್ನು ಉತ್ತಮಗೊಳಿಸುವ ವಿಚಾರಕ್ಕೆ ಆದ್ಯ ಗಮನ ಕೊಡಬೇಕೆಂದು ಉದ್ದೇಶಿಸಲಾಗಿದೆ. ಶಿಕ್ಷಣದ ಗುಣವನ್ನು ಹೆಚ್ಚಿಸಲು ಕೈಕೊಳ್ಳಲಿರುವ ಯೋಜನೆಗಳಲ್ಲಿ, ಹೈಯರ್ ಪ್ರೈಮರಿ ಸ್ಕೂಲ್‌ಗಳಿಗೆ ಪದವೀಧರ ಮುಖ್ಯೋಪಾಧ್ಯಾಯರ ನೇಮಕ ಮಾಡುವ ವಿಚಾರವನ್ನು ಉಲ್ಲೇಖಿಸಬಹುದಾಗಿದೆ. ಪ್ರಸಕ್ತ ವರ್ಷದಲ್ಲಿ ಪದವೀಧರ

ಮುಖೋಪಾಧ್ಯಾಯರ 325 ಹುದ್ದೆಗಳನ್ನು ಸೃಜಿಸಿ, ಈ ದಿಶೆಯಲ್ಲಿ ಮೊದಲ ಹೆಜ್ಜೆ ಇಡಲಾಗಿದೆ. ರಾಜ್ಯದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ನಿಯಮಾವಳಿಯನ್ನು ಏಕರೂಪಕ್ಕೆ ತರಲಾಗುವುದು. ಕೆಲವು ಕಡೆ ಇರುವ ಸ್ಕೂಲ್ ಬೋರ್ಡುಗಳ ಬದಲಾಗಿ, ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಮಟ್ಟದಲ್ಲಿ ಒಂದೊಂದು ಮಂಡಲಿ ಸ್ಥಾಪಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಏಕರೂಪದ ಆಡಳಿತಕ್ಕೆ ಒಳಪಡಿಸಲು ಅವಶ್ಯವಾದ ಶಾಸನವನ್ನು ಮಂಡಿಸಲಾಗುವುದು. ಇಂತಹ ಏಕರೂಪತೆಯಿಂದ ದಕ್ಷತೆ ಹೆಚ್ಚುವುದು ; ವೆಚ್ಚವೂ ಹೆಚ್ಚುವುದು, ಈ ನಿಮಿತ್ತವಾಗಿ ಈ ಆಯವ್ಯಯ ಪತ್ರದಲ್ಲಿ ಒಂದು ಕೋಟಿ ರೂಪಾಯಿಗಳ ಹೆಚ್ಚಿನ ಹಣ ಒದಗಿಸಿದೆ. IXನೆಯ ತರಗತಿಯಲ್ಲಿ ಐಚ್ಛಿಕ ವಿಷಯಗಳನ್ನು ತೆಗೆದು ಹಾಕುವುದು, ರಾಜ್ಯದಲ್ಲೆಲ್ಲಾ ಏಕರೀತಿಯ ಪಠ್ಯಪುಸ್ತಗಳನ್ನು ಗೊತ್ತುಪಡಿಸುವುದು—ಮುಂದಿನ ವರ್ಷ ಸೆಕೆಂಡರಿ ಶಿಕ್ಷಣ ಕ್ಷೇತ್ರದಲ್ಲಿ ಕೈಕೊಳ್ಳಲಿರುವ ದೊಡ್ಡ ಬದಲಾವಣೆ. ಉಚ್ಚ ಶಿಕ್ಷಣ ಕ್ಷೇತ್ರದಲ್ಲಿ ದಿನಾಂಕ 1-4-1968 ರಿಂದ ಸರ್ಕಾರಿ ಮತ್ತು ಸಂಯೋಜಿತ ಕಾಲೇಜುಗಳ ಅಧ್ಯಾಪಕ ವರ್ಗಕ್ಕೆ ಯು.ಜಿ.ಸಿ. ವೇತನ ಪ್ರಮಾಣಗಳನ್ನು ಕೊಡಲಾಗಿದೆ. ಕೆಲವು ಕಾಲೇಜುಗಳಲ್ಲಿ ಈಗಾಗಲೆ ಕನ್ನಡ ವಿಭಾಗಗಳಿವೆ. 1969-70ರಲ್ಲಿ ಉಳಿದ ಕಾಲೇಜುಗಳಲ್ಲೂ ಕನ್ನಡ ಮಾಧ್ಯಮದ ವಿಭಾಗಗಳನ್ನು ತೆರೆಯುವ ವಿಚಾರವಿದೆ. ಅಲ್ಲದೆ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಮಾಧ್ಯಮವಾಗಿ ಕನ್ನಡವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರದವರು ಒಂದು ಮಂಡಲಿಯ ಸ್ಥಾಪನೆಗೆ ಮಂಜೂರಾತಿ ಕೊಟ್ಟಿದ್ದಾರೆ. ರಾಜ್ಯದಲ್ಲಿ ಕಾಲೇಜುಗಳ ಸಂಖ್ಯೆ ಹೆಚ್ಚಿದೆ. ಈಗ ರಾಜ್ಯದಲ್ಲಿರುವ ಕಾಲೇಜುಗಳ ಸಂಖ್ಯೆ 136 ; ಅವುಗಳ ವಿದ್ಯಾರ್ಥಿಗಳ ಸಂಖ್ಯೆ 1·20 ಲಕ್ಷ ; ತಾಂತ್ರಿಕ ಶಿಕ್ಷಣ ರಂಗದಲ್ಲಿ ಶಿಕ್ಷಣ ವಿಷಯಗಳನ್ನು ವಿವಿಧೀಕರಿಸಿ ಅವುಗಳಿಗೆ ವ್ಯಾವಹಾರಿಕ ತಳಹದಿ ಕೊಡಲು ಯತ್ನ ನಡೆಯುತ್ತಿದೆ.

33. ವಿದ್ಯಾ ಇಲಾಖೆಯ ಆಯವ್ಯಯ ಪತ್ರದಲ್ಲಿ ಸಹಾಯ ಪ್ರೋಷಿತ ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾ ಸಂಸ್ಥೆಗಳಿಗೆ ಇನ್ನಷ್ಟು ಹೆಚ್ಚಿನ ಅನುದಾನ ಕೊಡಲು ಏರ್ಪಾಡು ಮಾಡಿದೆ. ಖಾಸಗಿ ಕಾಲೇಜುಗಳ ಅನುದಾನವನ್ನು ಸಹ ಗಮನಾರ್ಹವಾಗಿ ಹೆಚ್ಚಿಸಲಾಗಿದೆ. ಮೂರು ವಾರ್ಷಿಕ ಯೋಜನೆಗಳ ಮತ್ತು ವಿಶ್ವವಿದ್ಯಾನಿಲಯಗಳು, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ಸಾಮಾನ್ಯ ಶಿಕ್ಷಣ—ಇವುಗಳಿಗೆ ಸಂಬಂಧಿಸಿದ ಯು. ಜಿ. ಸಿ. ಯೋಜನೆಗಳ ನಿಮಿತ್ತವಾಗಿ ವಹಿಸಲು ಒಪ್ಪಿಕೊಂಡಿದ್ದ ವೆಚ್ಚಕ್ಕೂ ಏರ್ಪಾಡು ಮಾಡಿದೆ.

34. ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸವು ಈಗ ಉಚಿತವಾಗಿರುವುದರಿಂದ, ವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚ ಹೆಚ್ಚುತ್ತಲೇ ಇದೆ. ಆರ್ಥಿಕ ಆಯೋಗದವರೊಡನೆ ನಡೆದ ಚರ್ಚೆಯ ಕಾಲದಲ್ಲಿ, ಏಕರೂಪದ ಶಿಕ್ಷಣ ಕರವಿಧಿಸಲು ಏರ್ಪಾಡಾಗಬೇಕೆಂದು ಅವರು ಸೂಚಿಸಿದ್ದರು. ಅದರಂತೆ ಕ್ರಮ ಕೈಕೊಳ್ಳಲಾಗುತ್ತಿದೆ. ಸಹಾಯಪ್ರೋಷಿತ ಸೆಕೆಂಡರಿ ಶಾಲೆಗಳ ಎಲ್ಲ ಅಧ್ಯಾಪಕರ ವೇತನವನ್ನೂ ತಾವೇ ಸಲ್ಲಿಸುವ ಹೊಣೆಯನ್ನು ಸರ್ಕಾರದವರು ವಹಿಸಿಕೊಂಡಿದ್ದಾರೇ ಅವರಿಗೆ ವಿಶ್ರಾಂತಿ ವೇತನ, ಗ್ರಾಚ್ಯುಯಿಟಿ ಇತ್ಯಾದಿ ಸೌಲಭ್ಯಗಳನ್ನೂ ನೀಡಲಾಗಿದೆ. ಸರ್ಕಾರಿ. ನೌಕರರ ವಿಚಾರದಲ್ಲಿರುವಂತೆಯೇ ಶಿಸ್ತು ಮತ್ತು ವರ್ತನೆಯ ಸಂಬಂಧವಾದ ನಿಯಮಾವಳಿಯಲ್ಲಿ ಏಕರೂಪತೆ ಇರುವುದು ಅವಶ್ಯ. ಈ ಸಂಬಂಧವಾದ ನಿಯಮಾವಳಿ ಸಿದ್ಧವಾಗುತ್ತಿದೆ.

35. ಯುವಜನ ಕಲ್ಯಾಣವು ಸರ್ಕಾರದವರ ಹೆಚ್ಚಿನ ಗಮನಕ್ಕೆ ಪಾತ್ರವಾಗಿದೆ. ಪ್ರತ್ಯೇಕವಾದ ಒಂದು ಯುವಜನ ಕಲ್ಯಾಣ ಇಲಾಖೆ ರಚಿತವಾಗಿದೆ. ಇದುವರೆಗೆ ಎನ್.ಸಿ.ಸಿ. ಕ್ರೀಡೆಗಳು, ಯುವಜನ ಸಂಸ್ಥೆಗಳಿಗೆ ಅನುದಾನಗಳು, ಇತ್ಯಾದಿ ಯುವಜನ ಕಲ್ಯಾಣಾರ್ಥವಾದ ನಾನಾ ಏರ್ಪಾಡುಗಳಿಗೆ ಸರ್ಕಾರದವರು ಒಂದು ಕೋಟಿ ರೂಪಾಯಿ ವೆಚ್ಚ ಮಾಡಿದ್ದಾರೆ. ಇದು ಸಾಲದೆಂದು ಕಂಡುಬಂದಿದೆ. ಯೋಜನೇತರ ಕಾರ್ಯಗಳಿಗೆ ರೂ. 22 ಲಕ್ಷ ಮತ್ತು ಯೋಜನಾ ಕಾರ್ಯಗಳಿಗೆ ಸಂಬಂಧಪಟ್ಟಂತೆ ರೂ. 5 ಲಕ್ಷದಷ್ಟು ಹೆಚ್ಚಿಗೆ ಹಂಚಿಕೆಯನ್ನು ಯುವಜನ ಕಲ್ಯಾಣಾರ್ಥವಾಗಿ ಒದಗಿಸಲಾಗಿದೆ. ಕ್ರೀಡಾಪರಿಷತ್ತಿಗೆ ಕೊಡುವ ಅನುದಾನವನ್ನು ಕೂಡ ರೂ. 3 ಲಕ್ಷದಷ್ಟು ಹೆಚ್ಚಿಸಿದೆ. ಬೇರೆ ಬೇರೆ ಕಾರ್ಯಕಲಾಪಗಳನ್ನು ಸಮನ್ವಯಗೊಳಿಸುವ ಸಲುವಾಗಿ ಈ ವರ್ಷ ಒಂದು ವ್ಯಾಪಕ ಕಾರ್ಯಕ್ರಮವನ್ನು ಕೈಕೊಳ್ಳಲಾಗುವುದು.

36. ನೃತ್ಯ, ನಾಟಕ, ಸಂಗೀತ ಅಕಾಡೆಮಿಯು ನಿರ್ವಹಿಸುತ್ತಿರುವ ಕೆಲಸ ಸ್ತುತ್ಯವಾಗಿದೆ. ಈ ಸಂಸ್ಥೆಗಳು ತಮ್ಮ ಕಾರ್ಯಕಲಾಪಗಳನ್ನು ಇನ್ನಷ್ಟು ವಿಸ್ತಾರವಾಗಿ ನಿರ್ವಹಿಸುವಂತಾಗಲು ಅವುಗಳ ಅನುದಾನವನ್ನು ರೂ. 2 ಲಕ್ಷದಷ್ಟು ಹೆಚ್ಚಿಸಿದೆ.

(ಶ್ರೀ ರಾಮಕೃಷ್ಣ ಹೆಗಡೆ)

37. ವಿದ್ಯುಚ್ಛಕ್ತಿಯ ಬಳಕೆಯು ನಗರವಾಸಿಗಳಿಗೆ ಮಾತ್ರ ಮೀಸಲು ಎಂಬ ಕಲ್ಪನೆ ಇಂದಿಲ್ಲ. ಹೆಚ್ಚಾಗಿ ಉಳಿದ ವಿದ್ಯುಚ್ಛಕ್ತಿಯು ಹೇಗೆ ಬಹು ಬೇಗನೆ ಬಳಕೆಯಾಗುವುದೆಂಬ ವಿಚಾರದಲ್ಲಿ ಮೈಸೂರು ರಾಜ್ಯಕ್ಕೆ ವಿಪುಲವಾದ ಅನುಭವವಿದೆ. ವಿದ್ಯುಚ್ಛಕ್ತಿಯನ್ನು ಎಲ್ಲಾ ತಾಲ್ಲೂಕುಗಳಿಗೂ ಒದಗಿಸಿರುವುದರಿಂದ, ಗ್ರಾಮಾಂತರ ಭಾಗಗಳಲ್ಲಿ, ವಿಶೇಷವಾಗಿ ಕೃಷಿಕಾರ್ಯಕಲಾಪಗಳಿಗೆ ವಿದ್ಯುತ್ತಿನ ಬೇಡಿಕೆ ಹೆಚ್ಚುತ್ತಿದೆ. ಕೃಷಿಯನ್ನೇ ಅವಲಂಬಿಸಿರುವ ದೇಶದಲ್ಲಿ ಗ್ರಾಮಾಂತರ ವಿದ್ಯುತ್ ಪೂರೈಕೆಗೆ ಮಹತ್ವದ ಪಾತ್ರವಿದೆ. ಈಗ ರಾಜ್ಯದಲ್ಲಿ ವಿದ್ಯುತ್ತಿನ ಹೆಚ್ಚುವರಿ ಇರುವದೇನೋ ನಿಜ; ಆದರೆ ಇದು ಕೇವಲ ತಾತ್ಕಾಲಿಕ ಸ್ಥಿತಿ. ಹಿಂದೆ, ಶಿವಸಮುದ್ರಂ ಮತ್ತು ಜೋಗ್ ಯೋಜನೆಗಳು ಪೂರ್ಣಗೊಂಡಾಗ, ಈ ಯೋಜನೆಗಳ ಆರ್ಥಿಕ ಸ್ಥಿತಿಯು ಮತ್ತು ಹೆಚ್ಚುವರಿ ವಿದ್ಯುತ್ತಿನ ಬಳಕೆಯ ವಿಚಾರದಲ್ಲಿ ಟೀಕೆ ಟಿಪ್ಪಣಿಗಳು ಬಂದ ವಿಚಾರವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆದರೆ ಈ ಹೆಚ್ಚುವರಿ ವಿದ್ಯುತ್ತು ಬಹು ಬೇಗನೆ ಮುಗಿದು ಹೋಗಿ, ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಅಭಾವ ತಲೆದೋರಿದ ವಿಷಯ ಸರ್ವವಿದಿತವಷ್ಟೆ. ವಿದ್ಯುತ್ತನ್ನು ಆಧರಿಸಿದ ಉದ್ದಿಮೆಗಳಿಗೆ ಸರ್ಕಾರದವರು ವಿದ್ಯುತ್ತನ್ನು ರಾಶಿ ಪ್ರಮಾಣದಲ್ಲಿ ಕಡಿಮೆದರಕ್ಕೆ ಮಾರಾಟ ಮಾಡಬೇಕಾಗಿದೆ. ಗ್ರಾಮಾಂತರ ವಿದ್ಯುತ್ ಪೂರೈಕೆಯಿಂದ ಬರತಕ್ಕ ವರಮಾನದ ಮಿತಿಯನ್ನು ಸಹ ಕೆಳಮಟ್ಟದಲ್ಲಿಯೇ ಇರಿಸಲಾಗಿತ್ತು. ವಿದ್ಯುಚ್ಛಕ್ತಿ ಮಂಡಲಿಯು ಅಂತಿಮವಾಗಿ ತನ್ನ ವ್ಯವಹಾರಗಳನ್ನು ತನ್ನ ಆದಾಯದಿಂದಲೇ ನಿರ್ವಹಿಸಿಕೊಂಡು, ತನ್ನ ಹೊಣೆಗಳನ್ನೆಲ್ಲಾ ತಾನೇ ನಿರ್ವಹಿಸಲು ಶಕ್ತವಾಗುವಂತೆ, ನೆರೆಹೊರೆಯ ರಾಜ್ಯಗಳಲ್ಲಿ ಪ್ರಚಾರದಲ್ಲಿರುವ ದರಗಳನ್ನು ಗಣನೆಗೆ ತೆಗೆದುಕೊಂಡು ನಮ್ಮ ರಾಜ್ಯದಲ್ಲಿನ ದರಗಳ ಪರಿಸ್ಥಿತಿಯನ್ನು ಪರಿಶೀಲಿಸಬೇಕಾದ ಕಾಲ ಸನ್ನಿಹಿತವಾಗಿದೆ. ಮುಂದೆ ಎಂದಾದರೊಮ್ಮೆ ಕೊರತೆಗಳು ಬಾರದಂತೆ, ಹೊಸ ಜಲ ವಿದ್ಯುತ್ ಯೋಜನೆಗಳನ್ನು ಹಂತಹಂತವಾಗಿ ನಿರ್ವಹಿಸುವುದು ಅಗತ್ಯ; ಅದೇ ಕಾಲಕ್ಕೆ ಆರ್ಥಿಕ ಸ್ಥಿತಿ ಭದ್ರವಾಗಿರಬೇಕಾದರೆ, ಈ ಯೋಜನೆಗಳು ಸ್ವಾವಲಂಬಿಯಾಗುವಂತೆಯೂ ಅನುಗೊಳಿಸಬೇಕು. ಆದುದರಿಂದ, ಸರ್ಕಾರದವರು ಶುಲ್ಕದ ದರಗಳನ್ನು ಒಂದು ಶುಲ್ಕ ಸಮಿತಿಯ ಪರೀಕ್ಷೆಗೆ ಒಳಪಡಿಸುವವರಿದ್ದಾರೆ. ಈ ಕೆಲಸ ಪೂರ್ಣವಾಗುವವರೆಗೆ, ತಾತ್ಕಾಲಿಕವಾಗಿ ಮರುಹೊಂದಾಣಿಕೆ ಅವಶ್ಯವಾಗಬಹುದು.

38. ಉದ್ಯಮ ಇಲಾಖೆಯ ಕಾರ್ಯಕಲಾಪಗಳಿಗೆ ಸಂಬಂಧಪಡುವ ವಿವರ ಪತ್ರದಿಂದ ಸರ್ಕಾರಿ ಉದ್ಯಮ ಸಂಸ್ಥೆಗಳ ಕಾರ್ಯರೀತಿಯ ಸ್ಥೂಲವಿವರಗಳು ಮಾನ್ಯ ಸದಸ್ಯರಿಗೆ ವಿದಿತವಾಗುವುವು. ಬೇರೆ ದೇಶಗಳಂತೆ ಭಾರತದಲ್ಲೂ ಸಹ, ಈಚೆಗೆ ಕೆಲವು ವರ್ಷಗಳಿಂದ ಉದ್ಯಮ ಕ್ಷೇತ್ರವು ಹಿಂಜರಿತವನ್ನು ಎದುರಿಸಬೇಕಾಯಿತು. ರಾಷ್ಟ್ರೀಯ ಪ್ರಾಯೋಗಿಕ ಆರ್ಥಿಕ ಸಂಶೋಧನ ಪರಿಷತ್ತಿನವರು ನೀಡಿದ ಮುನ್ಸೂಚನೆಯ ಪ್ರಕಾರ, ಔದ್ಯಮಿಕ ಉತ್ಪತ್ತಿಯು ಮುಂದಿನ ವರ್ಷ ಸೇಕಡಾ 7 ರಿಂದ 8 ರಷ್ಟು ಹೆಚ್ಚುವದೆಂದು ನಿರೀಕ್ಷಿಸಲಾಗಿದೆ. ಆದರೆ ಮೂಲ ಯಂತ್ರಸಾಧನಗಳನ್ನು ತಯಾರಿಸುವ ಕೆಲವು ಉದ್ಯಮಗಳಲ್ಲಿ ಚೇತರಿಕೆಯ ಸೂಚನೆ ಗಮನಾರ್ಹವಾಗಿ ಕಂಡು ಬರಲಾರದು.

39. ಈ ರಾಜ್ಯದ ವಿಚಾರದಲ್ಲಿ ಹೇಳುವುದಾದರೆ, ಸರ್ಕಾರದವರು ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, 'ರೆಂಕೋ', 'ಎಸ್.ಜಿ.ಇ.ಎಫ್.', 'ಎಂ.ಎಸ್.ಕೆ. ಮಿಲ್ಸ್', 'ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್', 'ಮೈಸೂರು ಎಸಿಟೇಟ್', ಇತ್ಯಾದ ಕೆಲವು ದೊಡ್ಡ ದೊಡ್ಡ ಉದ್ಯಮ ಸಂಸ್ಥೆಗಳಿಗೆ ಧನಸಹಾಯ ಮಾಡಬೇಕಾಯಿತು. ಇವು ಇಂಜರಿತದ ಮತ್ತು ಅಪಮೌಲ್ಯದ ಪರಿಣಾಮಗಳನ್ನು ಎದುರಿಸಿ, ವಿಸ್ತರಣದ ಫಲವಾಗಿ ತೊಂದರೆಗೊಳಗಾದ ಸಂಸ್ಥೆಗಳು.

40. ಶರಾವತಿ ಯೋಜನೆಯಿಂದ ದೊರೆಯುವ ಬೃಹತ್ಪ್ರಮಾಣದ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳುವ ಉದ್ದೇಶದಿಂದ, ಉದ್ಯಮರಂಗದ ತೀವ್ರತರ ಅಭಿವೃದ್ಧಿಗೆ ಇನ್ನಷ್ಟು ಉತ್ತೇಜನ ಕೊಡುವ ನಿಮಿತ್ತವಾಗಿ ಹಲವಾರು ಏರ್ಪಾಡುಗಳನ್ನು ಕೈಕೊಳ್ಳಲಾಗಿದೆ. ಹೊಸ ಉದ್ಯಮಗಳಿಗೆ ಭೂಮಿ, ನೀರು, ವಿದ್ಯುಚ್ಛಕ್ತಿ, ಅಲ್ಪ ಪ್ರಮಾಣದ ಉದ್ಯಮಗಳ ಸರಕುಗಳಿಗೆ ಮೌಲ್ಯ ಪ್ರಾಶಸ್ತ್ಯ, ಇತ್ಯಾದಿ ಸೌಕರ್ಯಗಳನ್ನು ನೀಡಿರುವ ವಿಚಾರವು ಈ ಮಾನ್ಯ ಸಭೆಗೆ ಈಗಾಗಲೇ ವಿದಿತವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಉಚ್ಚಾಧಿಕಾರ ಸಮಿತಿಯಲ್ಲಿ ಸುಪ್ರಸಿದ್ಧ ಉದ್ಯಮಿಗಳಿದ್ದಾರೆ. ಈ ಸಮಿತಿಯು ಈಗಿನ ಸ್ಥಿತಿಯನ್ನೂ ದ್ರವ್ಯಾನುಕೂಲತೆ ಮತ್ತು ಇತರ ಸಾಧನ ಸಂಪತ್ತಿಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ, ಉದ್ದಿಮೆಗಳು ಸುವ್ಯವಸ್ಥಿತವಾಗಿ ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದಲು ಸೂಕ್ತ ಮಾರ್ಗದರ್ಶನ ನೀಡುವ ನಿರೀಕ್ಷೆ ಇದೆ. ತೀವ್ರ

ಔದ್ಯಮೀಕರಣಕ್ಕೆ ಉಪಯುಕ್ತವಾಗಬಲ್ಲ ಒಂದು ರೂಪರೇಖೆಯೂ ಅದಕ್ಕೆ ಸಾಧಕವಾಗುವ ಏರ್ಪಾಡುಗಳೂ ಸಿದ್ಧವಾಗುವವೆಂದು ಭರವಸೆಯುಳ್ಳವನಾಗಿದ್ದೇನೆ. 1951ನೇ ಇಸವಿಯ ಉದ್ಯಮಗಳ (ಅಭಿವೃದ್ಧಿ ಮತ್ತು ವಿನಿಯಮನ) ಸಂಬಂಧವಾದ ಅಧಿನಿಯಮದಲ್ಲಿರುವ ಲೈಸೆನ್ಸು ನೀಡಿಕೆಯ ನಿಯಮದಿಂದ ಉದ್ಯಮಗಳಿಗೆ ವಿನಾಯಿತಿ ಕೊಡುವ ನೀತಿಯನ್ನು ಭಾರತ ಸರ್ಕಾರದವರು ಪ್ರಸಕ್ತ ವರ್ಷದಲ್ಲೂ ಮುಂದುವರಿಸಿದ್ದಾರೆ. ಕಳೆದ ವರ್ಷ ಲೈಸೆನ್ಸು ಕೊಡುವ ಪದ್ಧತಿಯಿಂದ ಮುಕ್ತಗೊಳಿಸಿದ 10 ಉದ್ದಿಮೆಗಳಲ್ಲದೆ, ಕೆಲವೊಂದು ಪರಿಮಿತಿಗಳಿಗೆ ಒಳಪಟ್ಟು, ವನಸ್ಪತಿ ಉದ್ದಿಮೆಯನ್ನು ಸಹ, ಲೈಸೆನ್ಸಿಂಗ್ ಪದ್ಧತಿಯಿಂದ ಮುಕ್ತಗೊಳಿಸಲಾಗಿದೆ.

41. ಉದ್ದಿಮೆಗಳ ಬಗೆಗೆ ಅನುಸರಿಸಿದ ಉದಾರ ನೀತಿಯ ಪರಿಣಾಮವಾಗಿ "ಸಿರಾಮಿಕ್ ಪಲ್ಪ್" "ಪವರ್ ಆಲ್ಕೊಹಾಲ್" ಮತ್ತು "ಪೋರ್ಟ್‌ಲ್ಯಾಂಡ್ ಸಿಮೆಂಟ್" ಉದ್ದಿಮೆಗಳ ಉತ್ಪಾದನ ಸಾಮರ್ಥ್ಯಗಳನ್ನು ಹೆಚ್ಚಿಸಲು ಸಲಹೆಗಳು ಬಂದಿವೆ. ಸರಕಾರದವರು ಕೈಕೊಂಡ ಏರ್ಪಾಡುಗಳ ಪರಿಣಾಮವಾಗಿ, ಕಳೆದ ಒಂದು ವರ್ಷದಲ್ಲಿ 13 ಲೈಸೆನ್ಸುಗಳು—ಲೆಟರ್ ಆಫ್ ಇಂಟೆಂಟ'ಗಳು—ಬಂದಿವೆ. ಇವುಗಳಲ್ಲಿ 'ಸಿಲಿಕಾನ್' ಪವರ್ 'ಡಯೋಡುಗಳು' 'ಇಂಡಕ್ಷನ್ ಡಿಸ್ಕ್ ಟೈಪ್ ಪ್ರೊಟೆಕ್ಟಿವ್ ರಿಲೇಗಳು', 'ಎಕ್ಸರೇ ಟ್ಯೂಬುಗಳು' ಮತ್ತು ಸಲಕರಣೆಗಳು, 'ಟಿ.ಬಿ. ಪಿಕ್ಚರ್ ಟ್ಯೂಬುಗಳು', 'ಕ್ಯಾಥೋಡ'ರೇ ಟ್ಯೂಬುಗಳು' ಇತ್ಯಾದಿಗಳ ತಯಾರಿಕೆಗೆ ಕೊಡುವ ಲೈಸೆನ್ಸ್‌ಗಳು ಸೇರಿವೆ. ಟಾಯರುಗಳನ್ನು ಮತ್ತು ಟ್ಯೂಬುಗಳನ್ನು ತಯಾರಿಸುವ ಯಂತ್ರ ಸಾಮಗ್ರಿಗಾಗಿ ಹೊಸದೊಂದು ಉದ್ಯಮ ಸಂಸ್ಥೆಯ ಸ್ಥಾಪನೆಗೆ ಭಾರತ ಸರಕಾರದ ಅನುಮೋದನೆ ದೊರೆತಿದೆ. 'ಡೇಟಾಪ್ರೊಸೆಸಿಂಗ್' ಮಶಿನರಿ ತಯಾರಿಕೆ, 'ಡ್ರೈಸೆಲ್' ತಯಾರಿಕೆ, ಇತ್ಯಾದಿ ಮಹತ್ವದ ಕೆಲವು ಪ್ರಸಂಗಗಳಲ್ಲಿ, ಭಾರತ ಸರ್ಕಾರದವರ ತೀರ್ಮಾನವನ್ನು ನಿರೀಕ್ಷಿಸಲಾಗಿದೆ. ಉದ್ಯಮಾಭಿವೃದ್ಧಿಗೆ ಈಗ ವಾತಾವರಣವು ಇನ್ನಷ್ಟು ಅನುಕೂಲವಾಗಿದೆ. ಸೂಕ್ತ ಯೋಜನೆಗಳನ್ನು ಪ್ರಾರಂಭಿಸುವ ಮತ್ತು ಪುರಸ್ಕರಿಸುವ ನಿಮಿತ್ತವಾಗಿ ಮೈಸೂರು ರಾಜ್ಯದ ಔದ್ಯಮಿಕ ವಿನಿಯೋಗ ಮತ್ತು ಅಭಿವೃದ್ಧಿ ನಿಗಮವು (ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್) ರಾಜ್ಯದ ಉದ್ಯಮ ಸಾಮರ್ಥ್ಯವನ್ನು ಪರಿಶೀಲಿಸುತ್ತಿದೆ. ಹೊಸದಾಗಿ ಸ್ಥಾಪಿತವಾಗಿರುವ ಮತ್ತು ಈಗಾಗಲೇ ಇರುವ ಉದ್ಯಮಗಳಿಗೆ ಈ ನಿಗಮವು ನಾನಾ ರೀತಿಯಾಗಿ ಸಹಾಯ ನೀಡುತ್ತಿದೆ. ಮೈಸೂರು ಉದ್ಯಮ ಪ್ರದೇಶಾಭಿವೃದ್ಧಿ ಮಂಡಲಿಯವರು ಉದ್ಯಮಾಭಿವೃದ್ಧಿ ಪ್ರದೇಶಗಳ ರಚನೆಗೆ ಬೆಂಗಳೂರು, ಮೈಸೂರು, ಮಂಗಳೂರು, ದಾವಣಗೆರೆ, ಹರಿಹರ, ಸೇಡಂ, ಬೆಳಗಾವಿ, ಮತ್ತು ಧಾರವಾಡ—ಈ ಪಟ್ಟಣಗಳ ಸಮೀಪ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸೂಕ್ತ ಏರ್ಪಾಡುಗಳನ್ನು ಕೈಕೊಂಡಿದ್ದಾರೆ.

42. ಮೈಸೂರು ರಾಜ್ಯವು ನಮ್ಮ ದೇಶದಲ್ಲಿ ಪ್ರಧಾನ ರೇಷ್ಮೆ ಉತ್ಪಾದಕ ರಾಜ್ಯವಾಗಿ ಮುಂದುವರಿದಿದೆ. ಮೈಸೂರು ರಾಜ್ಯದಲ್ಲಿ ವರ್ಷಕ್ಕೆ 2 ಲಕ್ಷ ಕೆ.ಜಿ. ರೇಷ್ಮೆ ಉತ್ಪಾದನೆಯಾಗುತ್ತದೆ. ಇದರ ಮೌಲ್ಯ 15 ಕೋಟಿ ರೂಪಾಯಿಗಿಂತಲೂ ಹೆಚ್ಚು. ಉದ್ದಿಮೆಗೆ ಕೊಟ್ಟ ಶುಲ್ಕ ರಕ್ಷಣೆಯು ಪ್ರಸಕ್ತ ವರ್ಷದ ಕೊನೆವರೆಗೂ ಬರುವುದು. ಈಗಿನ ಪ್ರಗತಿಯನ್ನು ನೋಡಿದರೆ ಮೈಸೂರು ರಾಜ್ಯವು ಹೆಚ್ಚುವರಿ ರೇಷ್ಮೆ ಉತ್ಪಾದನೆಗೆ ನೆರವಾಗಬಹುದಾಗಿತ್ತು. ಮೈಸೂರು ರಾಜ್ಯದಲ್ಲಿ ರೇಷ್ಮೆ ವ್ಯವಸಾಯವು ಗ್ರಾಮ ಜನಕೆಗೆ ಭಾರಿ ಪ್ರಮಾಣದಲ್ಲಿ ಉದ್ಯೋಗ ನೀಡುತ್ತಿದೆ. ಉತ್ತಮ ಜಾತಿಯ ರೇಷ್ಮೆ ತಯಾರಿಕೆಯಲ್ಲಿಯೂ ರೇಷ್ಮೆ ಗೂಡುಗಳ ಮತ್ತು ರೇಷ್ಮೆಯ ಬೆಲೆಯ ಸ್ಥಿರೀಕರಣದಲ್ಲಿಯೂ, ರೇಷ್ಮೆ ಫಿಲೇಚರು ನಿರ್ವಹಿಸುವ ಪಾತ್ರವನ್ನು ಅಖಿಲ ಭಾರತ ಮಟ್ಟದಲ್ಲಿ ಕೇಂದ್ರ ರೇಷ್ಮೆ ಮಂಡಲಿಯ ಉಪ ಸಮಿತಿಯವರು ಶ್ಲಾಘಿಸಿದ್ದಾರೆ. ಫಿಲೇಚರುಗಳಿಗೆ ಸಂಬಂಧಿಸುವ ಭಾರಿ ನಷ್ಟಗಳನ್ನು ರಾಜ್ಯ ಸರ್ಕಾರದವರು ಎಡೆಬಿಡದೆ ವಹಿಸಿಕೊಳ್ಳಲು ಸಾಧ್ಯವಿಲ್ಲವಾದ ಕಾರಣ, ಕೇಂದ್ರ ಸರ್ಕಾರದವರು ಒಂದು ನಿಗಮವನ್ನು (ಕಾರ್ಪೊರೇಷನ್) ರಚಿಸಬೇಕೆಂದೂ, ಆ ನಷ್ಟಗಳನ್ನು ಹಂಚಿಕೊಳ್ಳಬೇಕೆಂದೂ ಈ ಸಮಿತಿಯು ಸೂಚಿಸಿದೆ. ರೇಷ್ಮೆ ಉದ್ಯಮದ ಅಭಿವೃದ್ಧಿಗೆ ಮಹತ್ವದ ಯೋಜನೆಗಳನ್ನು ರೂಪಿಸಲಾಗಿದೆ. ದೊರೆಯುವ ಧನ ಪ್ರಮಾಣಕ್ಕೆ ತಕ್ಕಂತೆ ಈ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುವುದು. ರೇಷ್ಮೆ ಉದ್ಯಮದವರು ಮಾಡಿದ ರಫ್ತುಗಳಿಂದ ಬರುವ ವಿದೇಶಿ ವಿನಿಮಯ ಗಳಿಕೆಗಳು ಕ್ರಮೇಣ ಹೆಚ್ಚುತ್ತಿವೆ. ಈ ದಿಶೆಯಲ್ಲಿ ಮೈಸೂರಿನ ಕೊಡುಗೆ ಗಮನಾರ್ಹವಾಗಿದೆ.

43. 1967ರಲ್ಲಿ ರಾಜ್ಯದಲ್ಲಿ ಉತ್ಪಾದನೆಯಾದ ಖನಿಜಗಳ ಒಟ್ಟು ಮೌಲ್ಯ ಸುಮಾರು 8.40 ಕೋಟಿ ರೂಪಾಯಿ. ಮುಂದಿನ ವರ್ಷ ಇಲಾಖೆಗೆ 1 ಕೋಟಿ ರೂಪಾಯಿಗೂ ಮೇಲ್ಪಟ್ಟು ವರಮಾನ ಬರುವುದೆಂದು ನಿರೀಕ್ಷಿಸಲಾಗಿದೆ. ಇದಲ್ಲದೆ, ಪಶ್ಚಿಮ ಕರಾವಳಿಯಲ್ಲಿ

(ಶ್ರೀ ರಾಮಕೃಷ್ಣ ಹೆಗಡೆ)

'ಬ್ಯಾಕ್ಸೈಟ್', ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸುಣ್ಣದಕಲ್ಲು ಇತ್ಯಾದಿ ಕೆಲವು ಮಹತ್ವದ ಉದ್ಯಮ ಖನಿಜಗಳ ತೀವ್ರ ಅನ್ವೇಷಣ ಕಾರ್ಯವನ್ನೂ, ದೊರೆಯಬಹುದಾದ ಖನಿಜಗಳ ಪ್ರಮಾಣ ನಿಷ್ಕರ್ಷೆಯನ್ನೂ ಇಲಾಖೆಯು ಕೈಗೊಂಡಿದೆ. ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯು ಪ್ರಸಕ್ತ ವರ್ಷ 2·50 ಕೋಟಿ ರೂಪಾಯಿ ಮೊತ್ತದ ಒಟ್ಟು ವಹಿವಾಟಿನ ಕಾರ್ಯಕ್ರಮ ಇಟ್ಟುಕೊಂಡಿದೆ. ಕುದುರೆಮುಖದಲ್ಲಿ ಎನ್. ಎಂ. ಡಿ. ಸಿ. ಸಂಸ್ಥೆಯು ಕೈಕೊಂಡ 'ಮ್ಯಾಗ್ನೆಟೈಟ್' ಅದುರಿನ ಅನ್ವೇಷಣ ಕಾರ್ಯವು ಪೂರ್ತಿಯಾಗಿದೆ. 'ಪೈಲಟ್ ಪ್ಲಾಂಟ್ ಸ್ಕೇಲ' ಸಂಬಂಧಪಾದ ಪ್ರಯೋಗಗಳು ಸುಮಾರು 18 ತಿಂಗಳಲ್ಲಿ ಪೂರ್ತಿಯಾಗುವ ಸಂಭವವಿದೆ. ದೋಣಿಮಲೆ ಪ್ರದೇಶದ ಕಬ್ಬಿಣದ ಅದಿರಿನ ನಿಕ್ಷೇಪಗಳನ್ನು ಉಪಯೋಗಕ್ಕೆ ತಂದುಕೊಳ್ಳುವ ವಿಚಾರದಲ್ಲಿ 'ಎನ್.ಎಮ್.ಡಿ.ಸಿ.' ಸಂಸ್ಥೆಯವರು ತಮ್ಮ ಪ್ರೊಜೆಕ್ಟ್ ವರದಿಯನ್ನು ಅಂತಿಮಗೊಳಿಸಿ, ಈ ಪ್ರದೇಶದಲ್ಲಿ ಗಣಿ ಗೇಣಿ ಪಡೆದುಕೊಂಡಿದ್ದಾರೆ. ವರ್ಷಕ್ಕೆ 4 ಮಿಲಿಯ ಟನ್ ಅದಿರು ಉತ್ಪಾದನೆಯಾಗುವ ನಿರೀಕ್ಷೆಯಿದೆ. 'ಚಿತ್ರದುರ್ಗ ಕಾಪರ್ ಕಂಪೆನಿ, ಲಿಮಿಟೆಡ್', ಸಂಸ್ಥೆಯು ಅನ್ವೇಷಣ ಕಾರ್ಯದಲ್ಲಿ ಸತತ ಪ್ರಗತಿ ಸಾಧಿಸಿದೆ. ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿಯವರು ವಾಡಿಯಲ್ಲಿ ತಮ್ಮ ಹೊಸದೊಂದು ಸಿಮೆಂಟ್ ಕಾರ್ಖಾನೆಯನ್ನು ಪ್ರಾರಂಭಿಸಿದ್ದಾರೆ. ಈ ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯವು ವರ್ಷಕ್ಕೆ 1 ಮಿಲಿಯನ್ ಟನ್.

44. ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಲಿಮಿಟೆಡ್ ಅವರ 'ಮೈಲ್ಡ್ ಸ್ಟೀಲ್' ವಿಸ್ತರಣಾ ಕಾರ್ಯವು ಪೂರ್ತಿಯಾಗಿದೆ. ಮಿಶ್ರಲೋಹ ಮತ್ತು ವಿಶಿಷ್ಟ ಉಕ್ಕಿನ ಉತ್ಪಾದನೆಗೂ, ''ಎಲೆಕ್ಟ್ರಿಕ್ ಪಿಗ್ ಐರನ್ ಫರ್ನೇಸ್'' ಎಂಬ ಕುಲುಮೆಯ ವಿಸ್ತರಣಕ್ಕೂ ಸಂಬಂಧಿಸಿದ ಯೋಜನೆಗಳು ಸಹ ಪ್ರಗತಿಪರವಾಗಿ ನಡೆಯುತ್ತಿವೆ. 1967-68 ರಲ್ಲಿ ಒಟ್ಟು ಮಾರಾಟದ ಮೌಲ್ಯ 13 ಕೋಟಿ ರೂಪಾಯಿ; ಮುಂದಿನ ವರ್ಷ ಇದು ಸುಮಾರು 19·42 ಕೋಟಿ ರೂಪಾಯಿ ಆಗುವ ನಿರೀಕ್ಷೆಯಿದೆ.

45. ಈ ದೇಶದ ರಫ್ತುಗಳು ವರ್ಷಕ್ಕೆ ಸೇಕಡಾ 7 ರಷ್ಟು ಹೆಚ್ಚುವುದೆಂಬ ನಿರೀಕ್ಷೆಯು ಕಾರ್ಯರೂಪಕ್ಕೆ ಬರಬೇಕಾದರೆ, ಹಿಂಜರಿತದಿಂದಲೂ, ಸ್ಪರ್ಧೆಯಿಂದಲೂ ತೊಂದರೆಗೊಳಗಾದ ಉದ್ಯಮಗಳಿಗೆ—ಮುಖ್ಯವಾಗಿ ಲೋಹ ವಿಜ್ಞಾನ, ಇಂಜಿನಿಯರಿಂಗ್, ರಾಸಾಯನಿಕ ಮತ್ತು ವಿದ್ಯುಚ್ಛಕ್ತಿ ಸಂಬಂಧಪಾದ ಉದ್ಯಮಗಳಿಗೆ ಉತ್ತೇಜನ ಕೊಟ್ಟರೆ ಮಾತ್ರ ಸಾಧ್ಯ. ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಲಿಮಿಟೆಡ್‌ನಿಂದ ಬರಬೇಕಾಗಿದ್ದ ಎಲ್ಲ ಸಾಲಗಳನ್ನೂ, ಇತರ ಬಾಕಿಗಳನ್ನೂ ಶೇರು ಬಂಡವಾಳವಾಗಿ ಪರಿವರ್ತಿಸಿ, ರಾಜ್ಯ ಸರ್ಕಾರದವರು ಅದರ ನೆರವಿಗೆ ಬರಬೇಕಾಯಿತು, ಮುಂದಿನ ವರ್ಷದ ಆಯವ್ಯಯ ಪತ್ರವು ಈ ಕಂಪೆನಿಯಲ್ಲಿ ವಿನಿಯೋಗಕ್ಕಾಗಿ ಒದಗಿಸಿದ 250 ಲಕ್ಷ ರೂಪಾಯಿಯನ್ನು ಲೆಕ್ಕಕ್ಕೆ ತೆಗೆದುಕೊಂಡಿದೆ. ಇದಕ್ಕೆ ಕೇಂದ್ರದ ನೆರವು ದೊರೆಯುವುದು.

46. ಸರ್ಕಾರದವರು ಇತರ ಆರ್ಥಿಕ ವಲಯಗಳನ್ನು ಬಿಟ್ಟು ಸರ್ಕಾರಿ ವಲಯದ ಉದ್ಯಮಗಳನ್ನೇ ಅನಿರ್ದಿಷ್ಟವಾಗಿ ಪೋಷಿಸುತ್ತಾ ಹೋಗಬೇಕೇ, ಎಂಬ ಮುಖ್ಯವಾದುದೊಂದು ಪ್ರಶ್ನೆಯನ್ನು ಪರಿಶೀಲಿಸಲಾಗುವುದು. ದೇಶದ ಸರಕಾರಿ ವಲಯದ ಉದ್ಯಮಗಳಲ್ಲಿ ಅಪಾರ ಧನವಿನಿಯೋಗವು ಸೇರಿಹೋಗಿದೆ. 1966-67ನೇ ವರ್ಷದ ಕೊನೆಗೆ ಒಟ್ಟು ಸುಮಾರು 2,841 ಕೋಟಿ ರೂಪಾಯಿ ಹಣ ವಿನಿಯೋಗವಾಗಿತ್ತು; ಇದರ ಪೈಕಿ ಸೇಕಡಾ 40 ರಷ್ಟು ಹಣವು ಉಕ್ಕಿನ ಉದ್ಯಮದಲ್ಲಿಯೇ ವಿನಿಯೋಗವಾಗಿತ್ತು. ಅವುಗಳಲ್ಲಿ ಕೆಲವು ಸಂಸ್ಥೆಗಳು ಲಾಭಗಳಿಸಿವೆ ಇನ್ನು ಕೆಲವು ಸಂಸ್ಥೆಗಳಿಗೆ ನಾನಾ ಕಾರಣಗಳಿಂದ ಭಾರಿ ನಷ್ಟವೇ ಪ್ರಾಪ್ತಿಯಾಗಿದೆ. ಸಾಲಗಳು ಸಣ್ಣ ಉಳಿತಾಯಗಳ ಮತ್ತು ತೆರಿಗೆಗಳ ಹೊರತಾಗಿ, ಮಿಗಸಲು, ಇಳಿವರಿ, ಲಾಭ ಇತ್ಯಾದಿಗಳ ರೂಪದಲ್ಲಿ ಸರ್ಕಾರಿ ಉದ್ಯಮಗಳಿಂದ ಬರುವ ಕೊಡುಗೆಯೇ ದೇಶದಲ್ಲಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಹಣವ್ಯವಸ್ಥೆ ಮಾಡಲು ದೊರೆಯುವ ದೊಡ್ಡ ಸಂಪನ್ಮೂಲಗಳಲ್ಲಿ ಒಂದಾಗಿದೆ.

47. ಸರ್ಕಾರಿ ವಲಯದ ಉದ್ಯಮ ಸಂಸ್ಥೆಗಳ ಕಾರ್ಯ ರೀತಿಗಳು ಸಾರ್ವಜನಿಕ ವೇದಿಕೆಗಳಲ್ಲೂ, ವಿಧಾನ ಮಂಡಲ ಸದನಗಳಲ್ಲೂ ತೀವ್ರ ಟೀಕೆಗೆ ಗುರಿಯಾಗಿವೆ. ಖಾಸಗಿ ವಲಯದಲ್ಲಿ ಏಕಸ್ವಾಮ್ಯವು ಬಂದಿಸೀಯುವಾದದ್ದೂ, ತೀವ್ರ ಆರ್ಥಿಕಾಭಿವೃದ್ಧಿಯ ಹಿತದೃಷ್ಟಿಯಿಂದ ಖಾಸಗಿ ಮತ್ತು ಸರ್ಕಾರಿ ವಲಯಗಳೆರಡೂ ಜತೆ ಜತೆಗೆ ಮುನ್ನಡೆಯುವಂತೆ ಅವಕಾಶ ಕೊಡುವುದೇ ನಮ್ಮ ಕಾರ್ಯನೀತಿಯಾಗಿರಬೇಕು. ನಮ್ಮ ರಾಜ್ಯದಲ್ಲಿ ಉದ್ಯಮ ಸಂಸ್ಥೆಗಳಲ್ಲಿ ಸರ್ಕಾರದವರು

ಮಾಡುವ ವಿನಿಯೋಗವು ಇತರ ರಾಜ್ಯಗಳಲ್ಲಿ ಆಯಾ ಸರ್ಕಾರದವರು ಮಾಡುವ ವಿನಿಯೋಗಕ್ಕಿಂತ ಹೆಚ್ಚಾಗಿದೆ. ಈ ವಿಚಾರದಲ್ಲಿ ನಮ್ಮ ಕಾರ್ಯನೀತಿಯನ್ನು ಪುನರ್ವಿಮರ್ಶಿಸಿ ನೀರಾವರಿ ಮತ್ತು ವ್ಯವಸಾಯಾಭಿವೃದ್ಧಿಗೆ ಆದ್ಯತೆ ಕೊಟ್ಟಿರುವುದರಿಂದ, ಸರ್ಕಾರದವರ ಪರಿಮಿತ ಸಂಪನ್ಮೂಲಗಳನ್ನು ನೀರಾವರಿ ಯೋಜನಾ ಕಾರ್ಯಗಳಿಗೇ ಮೀಸಲಾಗಿಟ್ಟು, ಮದ್ರಾಸು ಮತ್ತು ಇತರ ರಾಜ್ಯಗಳಲ್ಲಿ ಪ್ರಚಾರದಲ್ಲಿರುವಂತೆ ಖಾಸಗಿ, ಉದ್ಯಮಾಭಿವೃದ್ಧಿಯನ್ನು ಉದ್ಯಮ ವಲಯಕ್ಕೆ ಬಿಟ್ಟುಕೊಡಬೇಕೇ, ಎಂಬ ವಿಚಾರವನ್ನು ತೀರ್ಮಾನಿಸುವ ಕಾಲ ಈಗ ಸನ್ನಿಹಿತವಾಗಿದೆಯೆಂದು ನನ್ನ ಭಾವನೆ. ಸರ್ಕಾರದವರು ಆರ್ಥಿಕಾಭಿವೃದ್ಧಿಯ ಸಹಕಾರಿಯಾಗಿ ವರ್ತಿಸಬೇಕು. ರಾಜ್ಯದಲ್ಲಿ ಸರ್ಕಾರೀ ವಲಯದ ಉದ್ಯಮ ಸಂಸ್ಥೆಗಳ ಕಾರ್ಯರೀತಿಯನ್ನು ಉತ್ತಮಪಡಿಸಲು ಕಳೆದ ಎರಡು ವರ್ಷಗಳಿಂದ ಸರ್ಕಾರದವರು ಹಲವಾರು ಕ್ರಮಗಳನ್ನು ಕೈಕೊಂಡಿದ್ದಾರೆ. ಯಾವುದೇ ಉದ್ಯಮ ಸಂಸ್ಥೆಯು ಲಾಭದಾಯಕವಾಗಿ ನಡೆಯಲಾರದೆಂದು ಕಂಡುಬಂದಾಗ ಉದ್ಯಮ ಮತ್ತು ಸಾರ್ವಜನಿಕ ಹಣದ ಹಿತದೃಷ್ಟಿಯಿಂದ ಖಾಸಗಿ ಉದ್ಯಮ ಸಾಹಸಿಗಳೊಡನೆ ಏನಾದರೊಂದು ವ್ಯವಸ್ಥೆ ಮಾಡಿಕೊಳ್ಳಲು ಸರ್ಕಾರದವರು ಹಿಂಜರಿಯುವಂತಿಲ್ಲ. ಸರ್ಕಾರಿ ವಲಯದ ಉದ್ಯಮಗಳ ಬಗ್ಗೆ ವಿಧಾನ ಮಂಡಲವು ಪ್ರತ್ಯೇಕ ಸಮಿತಿಯೊಂದನ್ನು ರಚಿಸಿಕೊಳ್ಳುವುದೆಂದು ತಿಳಿಸಲು ಸಂತೋಷಪಡುತ್ತೇನೆ. ಈ ಸಮಿತಿಯು ಈ ಉದ್ಯಮಗಳ ಲೋಪದೋಷಗಳನ್ನು ಸರಿಪಡಿಸಿ, ಅವು ದಕ್ಷತೆಯಿಂದ ನಡೆಯುವಂತೆ ಸಕಾಲಿಕ ಸಲಹೆ ನೀಡುವುದೆಂದು ಹಾರೈಸುತ್ತೇನೆ.

ಲೆಕ್ಕಪತ್ರಗಳು : 1967-68

48. 1967-68ರ ಪರಿಷ್ಕೃತ ಅಂದಾಜುಗಳ ಪ್ರಕಾರ 10·86 ಕೋಟಿ ರೂಪಾಯಿ ವರಮಾನ ಹೆಚ್ಚಳ ಬರುವುದೆಂಬ ನಿರೀಕ್ಷೆಯಿತ್ತು. ವಾಸ್ತವ ಹೆಚ್ಚಳವಾದರೋ 13·47 ಕೋಟಿ ರೂಪಾಯಿ,—ಎಂದರೆ ನಿರೀಕ್ಷಿಸಿದುದಕ್ಕಿಂತ 2·61 ಕೋಟಿ ರೂಪಾಯಿ ಹೆಚ್ಚಳ ಬಂದಂತಾಯಿತು. ವರಮಾನದಲ್ಲಿ 5·63 ಕೋಟಿ ರೂಪಾಯಿ ಇಳಿತವಾಗಿ, ವೆಚ್ಚದಲ್ಲೂ 8·24 ಕೋಟಿ ರೂಪಾಯಿ ಕಡಿಮೆಯಾದುದೇ ಹೆಚ್ಚಳಕ್ಕೆ ಕಾರಣ.

49. ಪರಿಷ್ಕೃತ ಅಂದಾಜುಗಳ ಪ್ರಕಾರ, 40·18 ಕೋಟಿ ರೂಪಾಯಿಯಷ್ಟು ಬಂಡವಾಳ ವೆಚ್ಚವಾಗುವುದೆಂಬ ನಿರೀಕ್ಷೆಯಿತ್ತು. ಆದರೆ, ವಾಸ್ತವವಾಗಿ ವಹಿಸಿದ ಬಂಡವಾಳ ವೆಚ್ಚ 38·59 ಕೋಟಿ ರೂಪಾಯಿ. ಹೆಚ್ಚಳಗಳು ಮುಖ್ಯವಾಗಿ ನೀರಾವರಿ ಮತ್ತು ಉದ್ಯಮ ಶೀರ್ಷಿಕೆಗಳಲ್ಲಿ ಕಂಡುಬರುತ್ತವೆ. ಆದರೂ, ಸರ್ಕಾರಿ ವ್ಯಾಪಾರ ವ್ಯವಸ್ಥೆಯಿಂದ 4·27 ಕೋಟಿ ರೂಪಾಯಿ ಹಣದಿಂದ ಈ ಹೆಚ್ಚಳವನ್ನು ಸರಿದೂಗಿಸಲಾಯಿತು.

50. ವರ್ಷವು ವಜಾ 2·95 ಕೋಟಿ ರೂಪಾಯಿ, 0·40 ರೂಪಾಯಿ ಅರ್ಥೋಪಾಯ ಅಗ್ರಿಮ ಧನ ಇವುಗಳೊಡನೆ ಪ್ರಾರಂಭವಾಯಿತು. ವರ್ಷದ ಕೊನೆಗೆ ನಗದು ಶಿಲುಕು 1·09 ಕೋಟಿ ರೂಪಾಯಿಗೇರಿತು. ಆದರೆ ಕೇಂದ್ರ ಸರ್ಕಾರದಿಂದ ಬಂದ 17·40 ಕೋಟಿ ರೂಪಾಯಿ ತದರ್ಥ ಸಾಲವನ್ನು ಲೆಕ್ಕಕ್ಕೆ ತೆಗೆದುಕೊಂಡ ಮೇಲೆ ನಿರೀಕ್ಷಿಸಿದ ಪ್ರಕಾರ ಅರ್ಥೋಪಾಯ ಅಗ್ರಿಮಧನ ಮತ್ತು ಓವರ್ ಡ್ರಾಫ್ಟ್ ಹಣ 14·50 ಕೋಟಿ ರೂಪಾಯಿಗೇರಿತು.

ಪರಿಸ್ಕೃತ ಅಂದಾಜುಗಳು : 1968-69

51. 1968-69ರ ಆಯವ್ಯಯ ಪತ್ರದಲ್ಲಿ 194·74 ಕೋಟಿ ರೂಪಾಯಿ ವರಮಾನಕ್ಕೂ, 182·76 ಕೋಟಿ ರೂಪಾಯಿ ರೆವಿನ್ಯೂ ವೆಚ್ಚಕ್ಕೂ ಏರ್ಪಾಡಾಗಿತ್ತು. ಇದರಿಂದ 11·98 ಕೋಟಿ ರೂಪಾಯಿ ಉಳಿತಾಯ ಬರುವುದೆಂಬ ನಿರೀಕ್ಷೆಯಿತ್ತು. ಈ ಪರಿಷ್ಕೃತ ಅಂದಾಜುಗಳ ಪ್ರಕಾರ 215·36 ಕೋಟಿ ರೂಪಾಯಿ ಒಟ್ಟು ವರಮಾನವೂ, 215·37 ಕೋಟಿ ರೂಪಾಯಿ ರೆವಿನ್ಯೂ ವೆಚ್ಚವೂ ಫಲಿಸುತ್ತವೆಂದು ಸೂಚಿತವಾಗಿದೆ. ಇದರಿಂದ 0·01 ಕೋಟಿ ರೂಪಾಯಿ ಕೊರತೆ ಉಳಿಯುವಂತಾಯಿತು.

52. ವರಮಾನದಲ್ಲಿ ಕಂಡುಬರುವ 20·62 ಕೋಟಿ ರೂಪಾಯಿ ಹೆಚ್ಚಳಕ್ಕೆ ನಾನಾ ವ್ಯತ್ಯಾಸಗಳೇ ಕಾರಣ. ವರಮಾನದ ಮುಖ್ಯ ಶೀರ್ಷಿಕೆಗಳಲ್ಲಿ 1·93 ಕೋಟಿ ರೂಪಾಯಿ ಹೆಚ್ಚಳ ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣಗಳೇನೆಂದರೆ (ಆದಾಯ ತೆರಿಗೆ ಬಾಕಿಗಳ ಹೊಂದಾಣಿಕೆ

(ಶ್ರೀ ರಾಮಕೃಷ್ಣ ಹೆಗಡೆ)

ಯಿಂದಲೂ, ವ್ಯವಸಾಯಾದಾಯ ತೆರಿಗೆಯಲ್ಲಿ ಹೆಚ್ಚಳವುಂಟಾಗಿರುವುದರಿಂದಲೂ) ಆದಾಯದ
ಮೇಲಿನ ತೆರಿಗೆಯಲ್ಲಿ 2·44 ಕೋಟಿ ರೂಪಾಯಿ, 'ಮಾರಾಟ ತೆರಿಗೆ' 0·37 ಕೋಟಿ ರೂಪಾಯಿ,
'ರಾಜ್ಯದ ಉತ್ಪಾದನ ಶುಲ್ಕಗಳು', 1·06 ಕೋಟಿ ರೂಪಾಯಿ, 'ಇತರ ತೆರಿಗೆಗಳು ಮತ್ತು
ಶುಲ್ಕಗಳು' 1·25 ಕೋಟಿ ರೂಪಾಯಿ, 'ವಾಹನ ತೆರಿಗೆಗಳು' 0·30 ಕೋಟಿ ರೂಪಾಯಿ ಹೆಚ್ಚಳ
ತೋರಿಸಿದ್ದುವು. ಇದನ್ನು ಭೂಕಂದಾಯದ 4·00 ಕೋಟಿ ರೂಪಾಯಿಯ ಕೊರತೆಯಿಂದಲೂ
ಆಸ್ತಿಶುಲ್ಕದ 0·10 ಕೋಟಿ ರೂಪಾಯಿ ಕೊರತೆಯಿಂದಲೂ ಸರಿದೂಗಿಸಲಾಯಿತು. ಬೇರೆ
ಶೀರ್ಷಿಕೆಗಳಲ್ಲಿ ತಲೆದೋರಿದ ಬದಲಾವಣೆ ಅತ್ಯಲ್ಪ. 'ಬಡ್ಡಿ' ಶೀರ್ಷಿಕೆಯಲ್ಲಿ 18·32 ಕೋಟಿ
ರೂಪಾಯಿ ಹೆಚ್ಚಳ ಬಂದಿದೆ. ಹಾಗೆಯೇ 'ಆಡಳಿತ ಸೇವೆ' 0·11 ಕೋಟಿ ರೂಪಾಯಿ, 'ಅರಣ್ಯ'
ಶೀರ್ಷಿಕೆ 1·00 ಕೋಟಿ ರೂಪಾಯಿ 'ವಿದ್ಯುಚ್ಛಕ್ತಿ ಯೋಜನೆಗಳು' ಎಂಬ ಶೀರ್ಷಿಕೆಯಲ್ಲಿ ಬಾಕಿ
ವಸೂಲಿ 1·11 ಕೋಟಿ ರೂಪಾಯಿ ಮತ್ತು 'ಉತ್ಪಾದನ ಶುಲ್ಕಗಳಲ್ಲಿ' ರಾಜ್ಯದ ಪಾಲು 1·32
ಕೋಟಿ ರೂಪಾಯಿ ಹೆಚ್ಚಳವಾಗಿದೆ. 'ಬಡ್ಡಿ' ಶೀರ್ಷಿಕೆಯಲ್ಲಿ ಕಂಡುಬಂದ ಹೆಚ್ಚಳಕ್ಕೆ ಜಲವಿದ್ಯುತ್
ನಿರ್ಮಾಣ ಯೋಜನೆಗಳ ಮೇಲಣ ಬಡ್ಡಿ ಬಾಕಿಯ ಹೊಂದಾಣಿಕೆಯೂ, ಷೇರು ಬಂಡವಾಳದ
ನಿಮಿತ್ತವಾಗಿ ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಿಂದ ಬರತಕ್ಕ
ಬಡ್ಡಿಯ ಹೊಂದಾಣಿಕೆಯೂ ಕಾರಣವಾಗಿದೆ. ಈ ಹೆಚ್ಚಳಗಳು ಕೇಂದ್ರ ಪುರಸ್ಕೃತ ಯೋಜನೆಗಳ
ಬಗ್ಗೆ ಕೇಂದ್ರದಿಂದ ನಿರೀಕ್ಷಿಸಿದ ನೆರವು ಬಾರದ ಕಾರಣ, ಕೇಂದ್ರದ ಸಹಾಯಕ
ಅನುದಾನಗಳಲ್ಲಿ 1·16 ಕೋಟಿ ರೂಪಾಯಿ ಕಡಮೆಯಾದುದರಿಂದ, 'ಹಾಲಿನ ಜಮೆ'
ಗಳಲ್ಲಿ ಕೊರತೆ ಬಂದುದರಿಂದ, ಪಶು ಸಂಗೋಪನ ಶೀರ್ಷಿಕೆಯಲ್ಲಿ 0·46 ಕೋಟಿ
ರೂಪಾಯಿ, 'ನೀರಾವರಿ, ನೌಕಾ ಸಂಚಾರ, ಕಟ್ಟೆಕಾಮಗಾರಿ ಮತ್ತು ಚರಂಡಿ ಕಾಮಗಾರಿ
(ವಾಣಿಜ್ಯ)' ಶೀರ್ಷಿಕೆಯಲ್ಲಿ ನೀರು ದರ ಮತ್ತು ಅಭಿವೃದ್ಧಿ ತೆರಿಗೆ ವಸೂಲಾಗದ ನಿಮಿತ್ತ 1·31
ಕೋಟಿ ರೂಪಾಯಿ 'ವಾಣಿಜ್ಯೋದ್ಯಮ ಸಂಸ್ಥೆ'ಗಳಿಂದ ಬಂದ ಜಮೆ ಕಡಮೆಯಾದ ಪ್ರಯುಕ್ತ
'ಉದ್ಯಮಗಳು' ಎಂಬ ಶೀರ್ಷಿಕೆಯಲ್ಲಿ 0·85 ಕೋಟಿ ರೂಪಾಯಿ ಕೊರತೆಯುಂಟಾದುದರಿಂದ
ಸರಿದೂಗಿಸಲ್ಪಟ್ಟಿವೆ. ಬೇರೆ ವ್ಯತ್ಯಾಸಗಳು ಅನೇಕ ಶೀರ್ಷಿಕೆಗಳಿಗೆ ಸಂಬಂಧಪಡುತ್ತವಾದ ಕಾರಣ
ಅವುಗಳ ವಿಚಾರವಾಗಿ ಹೇಳಬೇಕಾದ ವಿಶೇಷಾಂಶವೇನೂ ಇಲ್ಲ.

53. ವರಮಾನದಿಂದ ವಹಿಸತಕ್ಕ ವೆಚ್ಚವು ಆಯವ್ಯಯ ಪತ್ರದಲ್ಲಿ ಒದಗಿಸಿದ ವೆಚ್ಚಕ್ಕಿಂತ
32·61 ಕೋಟಿ ರೂಪಾಯಿ ಹೆಚ್ಚುವುದೆಂಬ ನಿರೀಕ್ಷೆಯಿದೆ. ನಿರೀಕ್ಷಿತವಾದ ಹೆಚ್ಚಳಗಳು ಮುಖ್ಯವಾಗಿ
ಈ ಮುಂದಿನ ಶೀರ್ಷಿಕೆಗಳಲ್ಲಿ ಕಂಡುಬರುತ್ತವೆ.

54. 'ರಾಜ್ಯದ ಉತ್ಪಾದನ ಶುಲ್ಕಗಳು'.—ರೂ. 0·51 ಕೋಟಿ, 'ಸಾಲವನ್ನು ಕಡಿಮೆ
ಮಾಡುವ ಅಥವಾ ತಪ್ಪಿಸುವ ಬಗ್ಗೆ ವಿನಿಯೋಗ'—ರೂ. 3·31 ಕೋಟಿ, 'ಸಾಮಾನ್ಯಾಡಳಿತ'—
ರೂ. 0·38 ಕೋಟಿ, 'ವಿದ್ಯಾಭ್ಯಾಸ'—ರೂ. 1·80 ಕೋಟಿ, 'ವ್ಯವಸಾಯ' ರೂ. 1·14 ಕೋಟಿ,
'ಗ್ರಾಮಾಭಿವೃದ್ಧಿ'—ರೂ. 0·78 ಕೋಟಿ, 'ಸಹಕಾರ'—ರೂ. 0·49 ಕೋಟಿ, 'ನೀರಾವರಿ,
ನೌಕಾಸಂಚಾರ, ಅಣೆಕಟ್ಟು ಮತ್ತು ಚರಂಡಿ ಕಾಮಗಾರಿ (ವಾಣಿಜ್ಯ)'—ರೂ. 0·56 ಕೋಟಿ,
'ವಿದ್ಯುಚ್ಛಕ್ತಿ ಯೋಜನೆಗಳು (ಬಂಡವಾಳದ ಮೇಲಣ ಬಡ್ಡಿಯ ಹೊಂದಾಣಿಕೆ ಮತ್ತು ಇಳಿವರಿ
ನಿಮಿತ್ತ ಅಂಶದಾನದ ಫಲವಾಗಿ)'—ರೂ. 19·69 ಕೋಟಿ, 'ಕ್ಷಾಮ ಪರಿಹಾರ'—ರೂ. 7·70
ಕೋಟಿ, 'ನಿವೃತ್ತಿ ವೇತನ ಮತ್ತು ಇತರ ವಿಶ್ರಾಂತಿ ಸೌಲಭ್ಯಗಳು'—ರೂ. 0.22 ಕೋಟಿ. ಆದರೆ,
ಈ ಮುಂದೆ ಸೂಚಿಸುವಂತೆ ಇಳಿತಗಳಿದ್ದುವು :—

55. 'ಭೂಕಂದಾಯ'—ರೂ. 0·37 ಕೋಟಿ, 'ಸಾಲ ಮತ್ತು ಇತರ ಹೊಣೆಗಳ ಮೇಲಣ
ಬಡ್ಡಿ'—ರೂ. 1·12 ಕೋಟಿ, 'ಪೋಲೀಸ್'—ರೂ. 0.27 ಕೋಟಿ, 'ಜನಾರೋಗ್ಯ ರಕ್ಷಣೆ'—
ರೂ. 0.38 ಕೋಟಿ, 'ಪಶು ಸಂಗೋಪನ'—ರೂ. 0·63 ಕೋಟಿ, 'ಉದ್ಯಮಗಳು'—ರೂ. 0·31
ಕೋಟಿ, 'ಕಾರ್ಮಿಕ ಮತ್ತು ಉದ್ಯೋಗ'—ರೂ. 0·25 ಕೋಟಿ, 'ನೀರಾವರಿ, ನೌಕಾ ಸಂಚಾರ',
ಅಣೆಕಟ್ಟು ಮತ್ತು ಚರಂಡಿ ಕಾಮಗಾರಿ (ವಾಣಿಜ್ಯೇತರ)',—ರೂ. 0·29 ಕೋಟಿ, 'ಅರಣ್ಯ
ರೂ. 0.33 ಕೋಟಿ, 'ಸಂಕೀರ್ಣ'—ರೂ. 0·38 ಕೋಟಿ. ಬೇರೆ ಶೀರ್ಷಿಕೆಗಳಲ್ಲಿ ವ್ಯತ್ಯಾಸಗಳು
ಅತ್ಯಲ್ಪ. 'ಭೂಕಂದಾಯ', 'ಪೋಲೀಸ್' ಮತ್ತು 'ಸಂಕೀರ್ಣ' ಮುಂತಾದ ಅಭಿವೃದ್ಧಿ
ಕಾರ್ಯಗಳಿಗೆ ಸಂಬಂಧ ಪಡದ ಶೀರ್ಷಿಕೆಗಳಲ್ಲಿ ಕಾಣುವ ಉಳಿತಾಯಕ್ಕೆ ಮಿತವ್ಯಯ ವ್ಯವಸ್ಥೆಗಳೇ
ಮುಖ್ಯ ಕಾರಣ.

56. ಪ್ರಸಕ್ತ ವರ್ಷದ ಪ್ರಾರಂಭದಲ್ಲಿ 1·09 ಕೋಟಿ ರೂಪಾಯಿ ನಗದು ಶಿಲ್ಕು ಇತ್ತು. 14·50 ಕೋಟಿ ರೂಪಾಯಿ ಅರ್ಥೋಪಾಯ ಅಗ್ರಿಮಧನವೂ ರಿಜರ್ವ್ ಬ್ಯಾಂಕಿನಿಂದ ಪಡೆದ ಓವರ್‌ಡ್ರಾಫ್ಟ್ ಹಣವೂ ಇತ್ತು. ಈ ವರ್ಷದ ವಹಿವಾಟುಗಳಿಂದ ಒಟ್ಟಿನಮೇಲೆ 0.56 ಕೋಟಿ ರೂಪಾಯಿಯಷ್ಟು ಪುಟ್ಟ ಉಳಿತಾಯವಾಗುವ ನಿರೀಕ್ಷೆಯಿದೆ. ಒಟ್ಟು 114·16 ಕೋಟಿ ರೂಪಾಯಿ ವೆಚ್ಚವಾಗುವುದು. ಇದರಲ್ಲಿ, 33·00 ಕೋಟಿ ರೂಪಾಯಿಯ ಮೂಲಧನ ವ್ಯಯ, ನಿರೀಕ್ಷಿತವಾದ 14.00 ಕೋಟಿ ರೂಪಾಯಿ ತದರ್ಥ ಸಾಲದಿಂದ ರಿಜರ್ವ್ ಬ್ಯಾಂಕಿಗೆ ಈ ಹಣದ ಮರುಪಾವತಿಯೂ ಸೇರಿ ಸಾಲ ಮರುಪಾವತಿಗಾಗಿ 53·48 ಕೋಟಿ ರೂಪಾಯಿ, ಅಂತರರಾಜ್ಯ ಸಾಲದ ಮರು ಪಾವತಿಗಾಗಿ 0·59 ಕೋಟಿ ರೂಪಾಯಿ, 'ಸಾಲಗಳು ಮತ್ತು ಮುಂಗಡಗಳು.' ಎಂಬ ಶೀರ್ಷಿಕೆಯಲ್ಲಿ 7·08 ಕೋಟಿ ರೂಪಾಯಿಯಷ್ಟು ನಿವ್ವಳ ವ್ಯಯ ಮತ್ತು 0·01 ಕೋಟಿ ರೂಪಾಯಿ ವರಮಾನ ಕೊರತೆ—ಇವು ಸೇರಿವೆ. ಇದನ್ನು 114·73 ಕೋಟಿ ರೂಪಾಯಿಯಷ್ಟು ಒಟ್ಟು ಆದಾಯದಿಂದ ಸರಿತುಂಬಿಕೊಳ್ಳಲಾಗುವುದು. ಇದರಲ್ಲಿ ಸಾದಿಲ್ವಾರು ನಿಧಿಗೆ ಭರ್ತಿಮಾಡಿಕೊಳ್ಳುವ 0.38 ಕೋಟಿ ರೂಪಾಯಿ; ಸಾರ್ವಜನಿಕರಿಂದ ಸಾಲ ಎತ್ತುವ 6·60 ಕೋಟಿ ರೂಪಾಯಿ (ಪ್ರಾರಂಭದ ಓವರ್ ಡ್ರಾಫ್ಟನ್ನು ತೀರಿಸುವ ಸಲುವಾಗಿ ನಿರೀಕ್ಷಿಸುವ 14 ಕೋಟಿ ರೂಪಾಯಿ ತದರ್ಥ ಸಾಲ, ಅಭಾವ ಪರಿಹಾರಕ್ಕೆ 7 ಕೋಟಿ ರೂಪಾಯಿ ಸಾಲ, ಮತ್ತು ರಾಸಾಯನಿಕ ಗೊಬ್ಬರಗಳ ಆಧಾರದ ಮೇಲೆ 10·41 ಕೋಟಿ ರೂಪಾಯಿಯ ನಿವ್ವಳ ಅಲ್ಪಕಾಲಾವಧಿಯ ಸಾಲವೂ ಸೇರಿ) ಕೇಂದ್ರದಿಂದ ಪಡೆಯುವ 76·47 ಕೋಟಿ ರೂಪಾಯಿ, ಇತರ ಸಾಲಗಳಿಂದ 2·26 ಕೋಟಿ ರೂಪಾಯಿ, 'ಅಸಂಚಿತ ಋಣ' ಶೀರ್ಷಿಕೆಯಲ್ಲಿ ಬರುವ 1·77 ಕೋಟಿ ರೂಪಾಯಿ ನಿವ್ವಳ ಜಮೆ, ಮತ್ತು ಸಾಲ ಮತ್ತು ಠೇವಣಿ ಶೀರ್ಷಿಕೆಗಳಿಂದ 27·25 ಕೋಟಿ ರೂಪಾಯಿ,—ಇವುಗಳಿಂದ ಸ್ವಲ್ಪ ಮಟ್ಟಿಗೆ ತುಂಬಿಕೊಳ್ಳಲಾಗುವುದು. ಇದರ ಫಲವಾಗಿ ಒಟ್ಟಿನ ಮೇಲೆ 0·56 ಕೋಟಿ ರೂಪಾಯಿ ಉಳಿತಾಯ ಬರುವುದು. ಇದರಿಂದ ವರ್ಷ ಪ್ರಾರಂಭದ ನಗದು ಶಿಲ್ಕಿನ ಸ್ಥಿತಿ ಕೊಂಚ ಉತ್ತಮಗೊಂಡು, ಈ ಶಿಲ್ಕು 1·09 ಕೋಟಿಯಿಂದ ಪ್ರಸಕ್ತ ವರ್ಷದ ಕೊನೆಗೆ 1·65 ಕೋಟಿ ರೂಪಾಯಿಗೆ ಏರುವುದು.

57. ಯೋಜನಾ ಆಯೋಗವು ಪ್ರಸಕ್ತ ವರ್ಷದ ಸಂಪನ್ಮೂಲಗಳನ್ನು ನಿರ್ಧರಿಸಿದಾಗಲೂ ಸಹ, 60·25 ಕೋಟಿ ರೂಪಾಯಿಯ ಯೋಜನಾ ವ್ಯಯಕ್ಕೆ 15 ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಬೇಕಾಗುವುದೆಂಬ ನಿರೀಕ್ಷೆ ಇತ್ತು. ಆ ಕಾಲದಲ್ಲಿ ಯೋಜನಾ ಪ್ರಮಾಣದಲ್ಲಿ ತೀವ್ರ ಕಡಿತಗಳಾಗಬೇಕೆಂದು ಸೂಚಿಸಲಾಗಿತ್ತು. ಹಿಂದಿನ ವರ್ಷಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅಷ್ಟೊಂದು ಸಮತೂಕವಿರಲಿಲ್ಲ. ಯೋಜನಾ ಪ್ರಮಾಣದ ಕಡಿತದಿಂದ ರಾಜ್ಯದ ಆರ್ಥಿಕ ಸ್ಥಿತಿಗೆ ತೀವ್ರ ಭಂಗವುಂಟಾಗಬಹುದೆಂಬ ಭೀತಿಯಿತ್ತು. ಆದ್ದರಿಂದ ರಾಜ್ಯ ಸರ್ಕಾರದವರು ಯೋಜನೆಯ ಗಾತ್ರವನ್ನು ಕಡಿಮೆ ಮಾಡುವಂತಿರಲಿಲ್ಲ. ನೀರಿನ ದರವನ್ನು ಕಡಿಮೆ ಮಾಡಿದುದರ ಪರಿಣಾಮವಾಗಿಯೂ, ಜಮೀನು ಅಭಿವೃದ್ಧಿ ಬ್ಯಾಂಕಿಗೆ ಬಡ್ಡಿಯ ದರದ ವ್ಯತ್ಯಾಸವನ್ನು ಹಾಗೂ ಇತರ ಬಾಬುಗಳ ವೆಚ್ಚವನ್ನು ತುಂಬಿಕೊಳ್ಳುವುದಕ್ಕೆ ಸಹಾಯಧನ ರೂಪದಲ್ಲಿ ಒಂದು ಕೋಟಿ ರೂಪಾಯಿ ವೆಚ್ಚವಾದುದರ ಪರಿಣಾಮವಾಗಿಯೂ ಆಯವ್ಯಯ ಹದಗೆಟ್ಟಿತು. ಮಿತವ್ಯಯ ಕ್ರಮಗಳನ್ನು ಕೈಕೊಂಡುದರ ಪರಿಣಾಮವಾಗಿ ಉಳಿತಾಯವೇನೋ ಉಂಟಾಯಿತು. ಆದರೆ, ಮೂಲ ಅಂದಾಜುಗಳಲ್ಲಿ ಸೇರಿರದ ಹಾಗೂ ಮೊದಲೇ ಒಪ್ಪಿಕೊಂಡ ಕೆಲವೊಂದು ಹೆಚ್ಚಿನ ಖರ್ಚುಗಳು ಹಾಗೂ 1–3–1968 ರಿಂದ ಹೆಚ್ಚಿನ ತುಟ್ಟಿಭತ್ಯ ಕೊಟ್ಟ ಪರಿಣಾಮವಾಗಿ ಈ ಉಳಿತಾಯ ವ್ಯಯವಾಯಿತು. ಆದ್ದರಿಂದ 'ಓವರ್‌ಡ್ರಾಫ್ಟ್' ಅನಿವಾರ್ಯವಾಗಿತ್ತು.

58. ಆಯವ್ಯಯ ಪತ್ರದಲ್ಲಿ 38·61 ಕೋಟಿ ರೂಪಾಯಿ ಬಂಡವಾಳ ವೆಚ್ಚಕ್ಕೆ ಅವಕಾಶ ಮಾಡಲಾಗಿದೆ. ಆದರೆ, ಅದು ಈ ವರ್ಷ 53 ಕೋಟಿ ರೂಪಾಯಿಗೇರಬಹುದೆಂಬ ನಿರೀಕ್ಷೆ ಇದೆ. 14·39 ಕೋಟಿ ರೂಪಾಯಿ ಹೆಚ್ಚಳಕ್ಕೆ ಕಾರಣಗಳು ಈ ರೀತಿ ಇವೆ: ಷೇರು ಬಂಡವಾಳ ರೂಪದಲ್ಲಿ ಮೈಸೂರು ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಗೆ ಸಲ್ಲತಕ್ಕ ಹಣದ ಹೊಂದಾಣಿಕೆಯ ನಿಮಿತ್ತ ಉದ್ಯಮಾಭಿವೃದ್ಧಿ ಸಂಬಂಧವಾದ ಬಂಡವಾಳ ವೆಚ್ಚದಿಂದಲೂ, ಭಾರತ ಸರ್ಕಾರದ ಸಾಲದ ನೆರವಿನಿಂದ ಮಾಡಿದ ಇನ್ನಷ್ಟು ವಿನಿಯೋಗದಿಂದಲೂ, ಮತ್ತು "ರಸ್ತೆಸಾರಿಗೆ ಯೋಜನೆಗಳ ಬಂಡವಾಳ ವೆಚ್ಚ" ಎಂಬ ಶೀರ್ಷಿಕೆಯಿಂದ ಈ ಶೀರ್ಷಿಕೆಗೆ ವರ್ಗಾಯಿಸಿರುವ ಮೈಸೂರು ರಾಜ್ಯದ ರಸ್ತೆ ಸಾರಿಗೆಯ ಬಂಡವಾಳ ವೆಚ್ಚದ ಹೊಂದಾಣಿಕೆಯಿಂದಲೂ 17·01 ಕೋಟಿ ರೂಪಾಯಿಗಳ ಹೆಚ್ಚಳವಾಗಿದೆ. ಇದರಂತೆಯೇ, ನೀರಾವರಿ, ನೌಕಾಯಾನ, ಅಣೆಕಟ್ಟು ಹಾಗೂ ಚರಂಡಿ ಕಾಮಗಾರಿಗಳ (ವಾಣಿಜ್ಯ) ಬಗ್ಗೆ ಆಯವ್ಯಯ ಪತ್ರವನ್ನು ಮಂಡಿಸಿದ ತರುವಾಯ ಯೋಜನಾ ವ್ಯಯದಲ್ಲಿ ಮರುಹೊಂದಾಣಿಕೆ ಮಾಡಿದ ಪರಿಣಾಮವಾಗಿ ಬಂಡವಾಳ ವೆಚ್ಚದಲ್ಲಿ, 5·19 ಕೋಟಿ ರೂಪಾಯಿಯಷ್ಟು ಹೆಚ್ಚಿದೆ. ನೀರಾವರಿ, ನೌಕಾಯಾನ, ಅಣೆಕಟ್ಟು ಹಾಗೂ ಚರಂಡಿ ಕಾಮಗಾರಿಗಳು (ವಾಣಿಜ್ಯೇತರ)

(ಶ್ರೀ ರಾಮಕೃಷ್ಣ ಹೆಗಡೆ)

ಸಂಬಂಧದಲ್ಲಿ 0·20 ಕೋಟಿ ರೂಪಾಯಿ, ಸರಕಾರಿ ವ್ಯಾಪಾರದಲ್ಲಿ 0·61 ಕೋಟಿ ರೂಪಾಯಿ, ಲೋಕೋಪಯೋಗಿ ಕಾಮಗಾರಿಗಳು ಎಂಬ ಶೀರ್ಷಿಕೆಯಲ್ಲಿ ಉಂಟಾದ ಕೊರತೆಗಳಿಂದ ಸರಿದೂಗಿದ 1·34 ಕೋಟಿ ರೂಪಾಯಿ, ವಿದ್ಯುಚ್ಛಕ್ತಿ ಯೋಜನೆಗಳು 2·01 ಕೋಟಿ ರೂಪಾಯಿ, ಬಂದರುಗಳು 0.0[illegible] ಕೋಟಿ ರೂಪಾಯಿ ಹಾಗೂ ರಸ್ತೆ ಸಾರಿಗೆ ಯೋಜನೆಗಳು ಎಂಬ ಶೀರ್ಷಿಕೆಯಲ್ಲಿ ಹೊಂದಾಣಿಕೆ 5·22 ಕೋಟಿ ರೂಪಾಯಿ ಹೆಚ್ಚಳವಾಗಿದೆ. (ಜಮಾ ನಮೂದು)

59. ಸರ್ಕಾರದವರು 1968 ನೇ ಇಸವಿ ಅಕ್ಟೋಬರ್ 8 ನೇ ದಿನಾಂಕದ ಆದೇಶದಲ್ಲಿ ಮಿತವ್ಯಯದ ನಿಮಿತ್ತವಾಗಿ ಸುಮಾರು 5·47 ಕೋಟಿ ರೂಪಾಯಿ ವೆಚ್ಚದ ಕಡಿತವನ್ನು ತೋರಿಸಿರುವುದು ಮಾನ್ಯ ಸದಸ್ಯರಿಗೆ ಗೊತ್ತೇ ಇದೆ. ವಿಶಿಷ್ಟ ಪ್ರಸಂಗಗಳಲ್ಲಿ ಹೊರತು, ಹುದ್ದೆಗಳನ್ನು ತುಂಬಲು ಸರ್ಕಾರದವರು ಅನುಮತಿ ನೀಡಲೇ ಇಲ್ಲ; ಮತ್ತು ಅನೇಕ ಹುದ್ದೆಗಳನ್ನು ಭರ್ತಿ ಮಾಡದೆಯೇ ಖಾಲಿ ಇರಿಸಲಾಗಿತ್ತು. ಕಾಮಗಾರಿಗಳು ಹಾಗೂ ಇತರ ಬಾಬುಗಳಿಗೆ ತಗಲುವ ವೆಚ್ಚವನ್ನು ಸಾಧ್ಯವಿರುವಷ್ಟು ಕಡಿಮೆ ಮಾಡಲಾಯಿತು.

ಆಯವ್ಯಯ ಪತ್ರ 1969–70

60. ರಾಜ್ಯದ ವರಮಾನವು 200 ಕೋಟಿ ರೂಪಾಯಿಗೂ ಮೀರಿದೆ ಎಂದು ತಿಳಿಯಲು ಸದಸ್ಯರಿಗೆ ಸಂತೋಷವಾಗಬಹುದು. ಈಗಿನ ತೆರಿಗೆ ಮಟ್ಟದ ಪ್ರಕಾರ ಮುಂದಿನ ವರ್ಷದ ವರಮಾನವು 213·26 ಕೋಟಿ ರೂಪಾಯಿಯಷ್ಟಾಗಬಹುದೆಂಬ ನಿರೀಕ್ಷೆ ಇದೆ. ವರಮಾನ ಲೆಕ್ಕದಲ್ಲಿ 226·48 ಕೋಟಿ ರೂಪಾಯಿ ವೆಚ್ಚವಾಗಿ, 13·22 ಕೋಟಿ ರೂಪಾಯಿಯ ಕೊರತೆಯುಂಟಾಗುವ ಸಂಭವವಿದೆ.

61. ವರಮಾನದ ಅಂದಾಜುಗಳ ಅನೇಕ ಶೀರ್ಷಿಕೆಗಳಲ್ಲಿ ಉತ್ತಮ ಸ್ಥಿತಿ ಕಂಡುಬಂದಿದೆ. ಈ ಅಂದಾಜುಗಳಲ್ಲಿ ಬಾಕಿ ವಸೂಲಿಯೂ ಸೇರಿದೆ. ಭೂಕಂದಾಯ, ರಾಜ್ಯದ ಉತ್ಪಾದನ ಶುಲ್ಕಗಳು, ಮಾರಾಟ ತೆರಿಗೆ, ವಾಹನ ತೆರಿಗೆ, ಇತರ ತೆರಿಗೆಗಳು ಹಾಗೂ ಶುಲ್ಕಗಳು, ಸ್ಟ್ಯಾಂಪುಗಳು, ರಿಜಿಸ್ಟ್ರೇಷನ್, ಶಿಕ್ಷಣ, ವೈದ್ಯಕೀಯ, ಜನಾರೋಗ್ಯ ರಕ್ಷಣೆ, ವ್ಯವಸಾಯ, ಉದ್ದಿಮೆಗಳು, ಸಂಕೀರ್ಣ, ಸಾಮಾಜಿಕ ಹಾಗೂ ಅಭಿವೃದ್ಧಿ ಸಂಸ್ಥೆಗಳು (ಹಾಲಿನ ಜಮೆಗಳ ವರ್ಗೀಕರಣದಲ್ಲಿ ಮಾಡಿದ ಬದಲಾವಣೆಯ ಪರಿಣಾಮವಾಗಿ), ನೀರಾವರಿ (ವಾಣಿಜ್ಯ ಹಾಗೂ ವಾಣಿಜ್ಯೇತರ), ಒಕ್ಕೂಟದ ಉತ್ಪಾದನ ಶುಲ್ಕಗಳಲ್ಲಿ ರಾಜ್ಯದ ಪಾಲು, ಕೇಂದ್ರ ಸರ್ಕಾರದವರಿಂದ ಸಹಾಯಕ ಅನುದಾನ—ಇವೆಲ್ಲದರಿಂದ ಮುಂದಿನ ವರ್ಷ ಹೆಚ್ಚಿನ ವರಮಾನ ಬರುವ ನಿರೀಕ್ಷೆ ಇದೆ. ಈಗಿನ ವರಮಾನ ಶೀರ್ಷಿಕೆಗಳಲ್ಲಿ ಹುಟ್ಟುವಳಿಯನ್ನು ಸುಧಾರಿಸುವ ಪ್ರಶ್ನೆ ಸೂಕ್ಷ್ಮ ಪರಿಶೀಲನೆಯಲ್ಲಿದೆ; ಶರಾವತಿ ಹಾಗೂ ಭದ್ರಾ ಯೋಜನೆಗಳಿಂದ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಗೆ ವಿದ್ಯುಚ್ಛಕ್ತಿಯ ಮಾರಾಟದಿಂದ ಬಂದ 7.60 ಕೋಟಿ ರೂಪಾಯಿ ಹಣವನ್ನು ಆಯವ್ಯಯ ಪತ್ರದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

62. ಪ್ರಸಕ್ತ ವರ್ಷದ ಪರಿಷ್ಕೃತ ಅಂದಾಜುಗಳಿಗಿಂತಲೂ ಮುಂದಿನ ವರ್ಷ ರೆವಿನ್ಯೂ ವೆಚ್ಚದಲ್ಲಿ 11.11 ಕೋಟಿ ರೂಪಾಯಿಗಳ ಹೆಚ್ಚಳವಾಗುವ ಸಂಭವವಿದೆ. ರೆವಿನ್ಯೂ ಆಯವ್ಯಯ ಪತ್ರದಲ್ಲಿ 8.88 ಕೋಟಿ ರೂಪಾಯಿ (ನಿವ್ವಳ), ಎಂದರೆ, ವೆಚ್ಚದ ಬಾಬಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಮೇಲಿನ ವ್ಯಯವೂ ಸೇರಿ 26.42 ಕೋಟಿ ರೂಪಾಯಿ ವೆಚ್ಚವೂ ಜಮೆಯ ಬಾಬಿನಲ್ಲಿ ರಾಜ್ಯ ಯೋಜನೆಗೆ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರ ಸರ್ಕಾರದ ನೆರವಿನ 17.54 ಕೋಟಿ ರೂಪಾಯಿ ಸಮೇತವಾದ ರಾಜ್ಯದ ಯೋಜನಾ ವ್ಯಯವೂ ಸೇರಿದೆ. ವಿಶ್ವವಿದ್ಯಾನಿಲಯಗಳಿಗೆ ಅನುದಾನ ಕೊಡುವ ಸಲುವಾಗಿ, ಬಾಕಿ ನಿಂತ ಸಾಲಗಳ ಮೇಲಿನ ಬಡ್ಡಿಯ ಪಾವತಿಗೆ ಹಾಗೂ ಆಡಳಿತ ವೆಚ್ಚದಲ್ಲಿ ಆಗಬಹುದಾದ ಸಾಮಾನ್ಯ ಹೆಚ್ಚಳಗಳಿಗೆ ಅವಕಾಶವನ್ನು ಕಲ್ಪಿಸಿದೆ. ಕೇಂದ್ರ ಪುರಸ್ಕೃತ ಯೋಜನೆಗಳಿಗೆ ತಗಲುವ ವೆಚ್ಚವು ಕೇಂದ್ರ ಸರ್ಕಾರದವರ ಧನ ಸಹಾಯದ ಪ್ರಮಾಣವನ್ನೇ ಅವಲಂಬಿಸಿದೆ ; ಹಿಂದಿನ ಅಂಕಿ ಸಂಖ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರದ ನೆರವು ದೊರೆಯಬಹುದೆಂಬ ನಿರೀಕ್ಷೆ ಇರುವಲ್ಲಿ ಮಾತ್ರ ಹಣವ್ಯವಸ್ಥೆ ಮಾಡಲಾಗಿದೆ. ಸಾಲವನ್ನು ಕಡಿಮೆ ಮಾಡುವ ಅಥವಾ ತಪ್ಪಿಸುವ ಸಲುವಾಗಿ ವಿನಿಯೋಗ ' ಎಂಬ ಶೀರ್ಷಿಕೆಯಲ್ಲಿ

20.39 ಕೋಟಿ ರೂಪಾಯಿಯನ್ನು ಒದಗಿಸಿದೆ. ಇದರ ಪೈಕಿ 8.80 ಕೋಟಿ ರೂಪಾಯಿ ಹಣವನ್ನು ಕಳೆದ ಮೂರು ವರ್ಷದ ಅವಧಿಯಲ್ಲಿ ಮಂಜೂರು ಮಾಡಿದ ತದರ್ಥ ಸಾಲದ ಮರುಪಾವತಿಗೂ ಮತ್ತು ಉಳಿದುದನ್ನು ಯೋಜನಾ ವ್ಯಯಕ್ಕೂ ವಿನಿಯೋಗಿಸಲಾಗುವುದು. ವರಮಾನ ಲೆಕ್ಕದ ಮೇರೆಗಿನ ವೆಚ್ಚವನ್ನು ಅವಲೋಕಿಸಿದರೆ, 226.48 ಕೋಟಿ ರೂಪಾಯಿಯಲ್ಲಿ ತೆರಿಗೆ ವಸೂಲಿಗೆ 9.17 ಕೋಟಿ ರೂಪಾಯಿ, ಋಣ ಸೇವೆಗಳಿಗೆ 40.58 ಕೋಟಿ ರೂಪಾಯಿ (ಇದರಲ್ಲಿ ಕೇಂದ್ರ ಸರ್ಕಾರದ ತದರ್ಥ ಸಾಲದ ಮರುಪಾವತಿಗೆ ಒದಗಿಸಿರುವ 8.80 ಕೋಟಿ ರೂಪಾಯಿ ಸೇರಿದೆ), ಆಡಳಿತ ಸೇವೆಗಳಿಗೆ 17.80 ಕೋಟಿ ರೂಪಾಯಿ, ಸಾಮಾಜಿಕ ಹಾಗೂ ಅಭಿವೃದ್ಧಿ ಸೇವೆಗಳಿಗೆ 103.55 ಕೋಟಿ ರೂಪಾಯಿ (ಶಿಕ್ಷಣಕ್ಕೆ ಮಾತ್ರವೆ 46.07 ಕೋಟಿ ರೂಪಾಯಿ, ವೈದ್ಯಕೀಯ ಹಾಗೂ ಆರೋಗ್ಯಕ್ಕೆ 16.57 ಕೋಟಿ ರೂಪಾಯಿ), ಲೋಕೋಪಯೋಗಿ ಕಾಮಗಾರಿ, ವಿದ್ಯುಚ್ಛಕ್ತಿ ಹಾಗೂ ನೀರಾವರಿಗೆ 34.28 ಕೋಟಿ ರೂಪಾಯಿ, ನಿವೃತ್ತಿ ವೇತನ ಹಾಗೂ ಇತರ ವಿಶ್ರಾಂತಿ ಸೌಲಭ್ಯಗಳು, ರಾಜಧನ ಮತ್ತು ಪ್ರಾದೇಶಿಕ ಹಾಗೂ ರಾಜಕೀಯ ನಿವೃತ್ತಿ ವೇತನಗಳಿಗೆ 3·75 ಕೋಟಿ ರೂಪಾಯಿ ಮತ್ತು ಅರಣ್ಯಗಳಿಗೆ 6.86 ಕೋಟಿ ರೂಪಾಯಿ–ಹೀಗೆ ಹಣ ಒದಗಿಸಿರುವುದು ಕಂಡು ಬರುವುದು. 226.48 ಕೋಟಿ ರೂಪಾಯಿಯ ಒಟ್ಟು ವರಮಾನ ವೆಚ್ಚದಲ್ಲಿ ಯೋಜನಾ ವ್ಯಯಕ್ಕೆ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಿಗೆ 26.42 ಕೋಟಿ ರೂಪಾಯಿ ಒದಗಿಸಿದೆ. ಇದರಿಂದ ಯೋಜನೇತರ ಕಾರ್ಯಕ್ರಮಗಳಿಗೆ ಸುಮಾರು 200 ಕೋಟಿ ರೂಪಾಯಿ ಉಳಿಯುವುದು. ಸುಮಾರು 9 ಕೋಟಿ ರೂಪಾಯಿಯನ್ನು ಮೂರು ವಾರ್ಷಿಕ ಯೋಜನೆಗಳ ನಿಮಿತ್ತವಾಗಿ ವಹಿಸಬೇಕಾದ ವೆಚ್ಚವಾಗಿ ಸೇರಿಸಲಾಗಿದೆ. ಇದು ಯೋಜನೇತರ ಕಾರ್ಯಕ್ರಮಗಳಿಗೆ ತಗಲುವ ವೆಚ್ಚದ ಭಾಗವಾಗಿದೆ. 1 ನೆಯ ಮಾರ್ಚಿ 1968 ರಿಂದ ಜಾರಿಗೆ ಬರುವಂತೆ ಸರ್ಕಾರಿ ನೌಕರರಿಗೆ ಕೊಡಲಾದ ಸರಿಸುಮಾರು 7 ರಿಂದ 7½ ಕೋಟಿ ರೂಪಾಯಿಗಳಷ್ಟು ತುಟ್ಟಿ ಭತ್ಯದಲ್ಲಿನ ಹೆಚ್ಚಳವನ್ನು ಸಹ ಆಯವ್ಯಯ ಪತ್ರವು ತೋರಿಸುತ್ತದೆ. ಶಿಕ್ಷಣ ಸಂಸ್ಥೆಗಳ ಪರಿಷ್ಕೃತ ಸಹಾಯಕ ಅನುದಾನಗಳ ನಿಯಮಾವಳಿಗಳ ಮೇರೆಗೆ ಹೆಚ್ಚಿಗೆ ವೆಚ್ಚವನ್ನು ವಹಿಸಲು 100 ಲಕ್ಷ ರೂಪಾಯಿಯನ್ನು ಒದಗಿಸಲಾಗಿದೆ. ಗ್ರಾಮಾಧಿಕಾರಿಗಳಿಗೆ ಪರಿಹಾರ, ಶ್ಯಾನುಭೋಗರ ಮತ್ತು ಪೋಲೀಸು ಪಟೇಲರ ನೇಮಕ—ಇವುಗಳಿಗಾಗಿ 'ಭೂಕಂದಾಯ' ಶೀರ್ಷಿಕೆಯಲ್ಲಿ ಹೆಚ್ಚಿನ ಹಣವನ್ನೂ ಒದಗಿಸಿದೆ.

63. ಬಂಡವಾಳ ವೆಚ್ಚಕ್ಕಾಗಿ 42.99 ಕೋಟಿ ರೂಪಾಯಿ ಸೇರಿಸಿದೆ. ಈ ಹಣದ ಪೈಕಿ, 22.20 ಕೋಟಿ ರೂಪಾಯಿ ನೀರಾವರಿ ಮತ್ತು ವಿದ್ಯುಚ್ಛಕ್ತಿಗೂ 8.63 ಕೋಟಿ ರೂಪಾಯಿ ರಸ್ತೆ ಮತ್ತು ಕಟ್ಟಡಗಳಿಗೂ, ಸಹಾಯಪೋಷಿತ ಉದ್ಯಮಗಳ ಮತ್ತು ಸಹಕಾರ ಸಂಸ್ಥೆಗಳ ಷೇರು ಬಂಡವಾಳದಲ್ಲಿ ಹಣವಿನಿಯೋಗ ಮಾಡುವುದನ್ನು ಸೇರಿಸಿ 9.89 ಕೋಟಿ ರೂಪಾಯಿ ಉದ್ಯಮಗಳಿಗೂ, 1.25 ಕೋಟಿ ರೂಪಾಯಿ ಜನಾರೋಗ್ಯ ಅಭಿವೃದ್ಧಿಗೂ ಒದಗಿಸಲಾಗಿದೆ. ಉಳಿದ ಹಣವನ್ನು ರೇವು, ಅರಣ್ಯ, ಪರಿಹಾರ ಮತ್ತು ಆಹಾರ ಸರಬರಾಜು ಕಾರ್ಯಗಳನ್ನೊಳಗೊಂಡು ಇತರ ಸಂಕೀರ್ಣ ಕಾರ್ಯಗಳಿಗೆ ಒದಗಿಸಲಾಗಿದೆ. 42.99 ಕೋಟಿ ರೂಪಾಯಿಯ ಒಟ್ಟು ಬಂಡವಾಳ ವೆಚ್ಚದಲ್ಲಿ, 34.66 ಕೋಟಿ ರೂಪಾಯಿಯು ಕೇಂದ್ರ ಪುರಸ್ಕೃತ ಕಾರ್ಯಗಳೂ ಸೇರಿದ ಹಾಗೆ, ಯೋಜನಾವ್ಯಯದ ಭಾಗವಾಗಿದೆ. ಈ ಬಂಡವಾಳ ವೆಚ್ಚದಲ್ಲಿ ಉಳಿಯುವ 8.33 ಕೋಟಿ ರೂಪಾಯಿ ಯೋಜನೇತರ ಕಾರ್ಯಗಳ ವೆಚ್ಚವಾಗುವುದು. ಇದರಲ್ಲಿ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯವರು ವಹಿಸಿದ 7.75 ಕೋಟಿ ರೂಪಾಯಿಯು ಬಂಡವಾಳ ವ್ಯಯ ಸೇರಿಲ್ಲ; ಈ ವ್ಯಯವು ಯೋಜನಾ ವ್ಯಯದ ಭಾಗವಾಗಿದೆ. ಈಗಾಗಲೇ ಕೈಗೊಂಡಿರುವ ಕಾಮಗಾರಿಗಳು ತ್ವರಿತವಾಗಿ ಪೂರ್ಣಗೊಳ್ಳುವಂತೆ, ಲೋಕೋಪಯೋಗಿ ಇಲಾಖೆಯ ಸಣ್ಣಪುಟ್ಟ ನೀರಾವರಿ ಕಾಮಗಾರಿಗಳಿಗೆ ಸಾಕಷ್ಟು ಹಣ ಒದಗಿಸಲಾಗಿದೆ. 'ಸಂಪರ್ಕ ಸಾಧನಗಳು' ಎಂಬ ಬಾಬಿಗೆ ಒದಗಿಸಿದ ಯೋಜನಾರ್ಥವಾದ 150 ಲಕ್ಷ ರೂಪಾಯಿ, ಹಣವು ಮುಂದುವರಿಯುತ್ತಿರುವ ಕೆಲಸಗಳಿಗೂ ಸಹ ಸಾಕಾಗುವಂತಿರಲಿಲ್ಲವಾದ ಕಾರಣ, ಅದನ್ನು ಸುಮಾರು 300 ಲಕ್ಷ ರೂಪಾಯಿಗೆ ಹೆಚ್ಚಿಸಬೇಕಾಯಿತು. 'ಕಟ್ಟಡಗಳು' ಎಂಬ ಬಾಬಿನಲ್ಲಿ ಜನಾರೋಗ್ಯ ಇಲಾಖೆಯ ಔಷಧಾಲಯಗಳು, ಪಶುವೈದ್ಯ ಆಸ್ಪತ್ರೆಗಳು, ಶಾಲೆಗಳು, ಕಾಲೇಜುಗಳು, ಮುಂತಾಗಿ ಆಯಾ ಇಲಾಖೆಗಳ ಯೋಜನಾ ಕಾರ್ಯಗಳಿಗೆ ಹಣ ಒದಗಿಸಿದೆ. ಯೋಜನೇತರ ಕಾರ್ಯಗಳ ಬಗ್ಗೆ, ಸರ್ಕಾರಿ ನೌಕರರಿಗೆ ಮನೆ ಕಟ್ಟಿಸಲು 20 ಲಕ್ಷ ರೂಪಾಯಿ, ಬಾಡಿಗೆ ಮನೆ ಕಟ್ಟಿಸಲು 10 ಲಕ್ಷ ರೂಪಾಯಿ, 'ಮೈಸೂರು ಹೌಸ್' ಗೃಹಕ್ಕಾಗಿ 1.00 ಲಕ್ಷ ರೂಪಾಯಿ, ನ್ಯಾಯಾಲಯ ಕಟ್ಟಡಗಳಿಗೆ 22.50 ಲಕ್ಷ ರೂಪಾಯಿ, ವಾಣಿಜ್ಯ ತೆರಿಗೆ ಕಟ್ಟಡಗಳಿಗೆ 15.00 ಲಕ್ಷ ರೂಪಾಯಿ, ಪೋಲೀಸಿನವರ ಗೃಹ ನಿರ್ಮಾಣ, ಮತ್ತು ಇತರ ಬಾಬುಗಳಿಗೆ 75 ಲಕ್ಷ ರೂಪಾಯಿ—ಹೀಗೆ ಹಣ ವ್ಯವಸ್ಥೆಯಾಗಿದೆ.

(ಶ್ರೀ ರಾಮಕೃಷ್ಣ ಹೆಗಡೆ)

64. 'ಸಾಲಗಳು ಮತ್ತು ಮುಂಗಡಗಳು' ಎಂಬ ಶೀರ್ಷಿಕೆಯಲ್ಲಿ ಪಾವತಿಯಾಗದೆ ಉಳಿದ ಶಿಲ್ಕುಗಳನ್ನು ಗಮನಕ್ಕೆ ತಂದುಕೊಂಡು ಹೆಚ್ಚಿನ ವಸೂಲಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ವಸೂಲಿಯು ವಿಳಂಬವಾದರೆ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಲು ರಾಜ್ಯಕ್ಕೆ ಅಡಚಣೆಯುಂಟಾಗುವುದರಿಂದ ಎಲ್ಲ ಬಾಕಿಗಳ ವಸೂಲಿಗೆ ಸರ್ಕಾರದವರು ಕಟ್ಟುನಿಟ್ಟಾದ ಕ್ರಮ ಕೈಕೊಳ್ಳಲು ಸಿದ್ಧರಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಸಮಾಧಾನ ನೀಡಿಕೆ ಭಾವಿಸುತ್ತೇನೆ.

65. ಪ್ರಸಕ್ತ ವರ್ಷದಲ್ಲಿ ರಾಜ್ಯ ಸರ್ಕಾರದವರು ಆರು ಕೋಟಿ ರೂಪಾಯಿಯ ಸಾರ್ವಜನಿಕ ಸಾಲ ಎತ್ತಿದರು. ಈ ಸಾಲಕ್ಕೆ ಅವಶ್ಯವಿರುವದಕ್ಕಿಂತಲೂ ಹೆಚ್ಚು ವಂತಿಗೆ ಬಂತು. 4.11 ಕೋಟಿ ರೂಪಾಯಿಯ 1968ನೇ ಇಸವಿಯ ಮೈಸೂರು ರಾಜ್ಯದ 4% ಅಭಿವೃದ್ಧಿ ಸಾಲವನ್ನು ಮರುಸಂದಾಯ ಮಾಡಲಾಯಿತು. ಹಿಂದಿನ ವರ್ಷಗಳ ಮೈಸೂರು ಸರ್ಕಾರಿ ಸಾಲಗಳ ಸಮೇತ ರಾಜ್ಯ ಸರ್ಕಾರಿ ಸಾಲಗಳಲ್ಲಿ ನಾವು ಧನ ವಿನಿಯೋಗ ಮಾಡಿದ್ದೆವು. ಸಾಲ ಪತ್ರಗಳ ಬೆಲೆಯನ್ನು ಸ್ಥಿರಗೊಳಿಸುವ ಸಲುವಾಗಿ ಭಾರತದ ರಿಜರ್ವ್ ಬ್ಯಾಂಕಿನ ಮೂಲಕ 4 ಕೋಟಿ ರೂಪಾಯಿವರೆಗಿನ ಪಾವತಿ ಪತ್ರ (ಸ್ಕ್ರಿಪ್) ಗಳನ್ನು ಬಿಡುಗಡೆಮಾಡಿದೆವು. ಈ ವರ್ಷದ ಸಣ್ಣ ಉಳಿತಾಯ ಸಂಗ್ರಹ ಚಳುವಳಿಯಲ್ಲಿ ಹಿಂದಿನ ವರ್ಷಗಳಲ್ಲಿ ಇಲ್ಲದ ಕೆಲವು ವಿಶೇಷ ಲಕ್ಷಣಗಳು ಇದ್ದುವು. ಸಣ್ಣ ಉಳಿತಾಯಗಳ ಸಂಚಾಲನಾಲಯದವರು ಬೆಳಗಾಂವಿ ಮತ್ತು ಮಂಗಳೂರು ನಗರಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಕ್ರಿಕೆಟ್ ಪಂದ್ಯಗಳನ್ನೂ ಏರ್ಪಡಿಸಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಕೂಡ, ಕ್ರಿಕೆಟ್ ಪಂದ್ಯಗಳನ್ನು ನಡೆಸುವ ಉದ್ದೇಶವಿದೆ. ಎಷ್ಟೋ ಕಷ್ಟಗಳಿದ್ದರೂ (ನಿವ್ವಳ) ಮೂರುವರೆ ಕೋಟಿ ರೂಪಾಯಿ ಹಣವನ್ನು ಸಂಗ್ರಹಿಸಿದ್ದೇವೆಂದೂ, ವರ್ಷದ ಕೊನೆಗೆ ಸುಮಾರು (ನಿವ್ವಳ) ಐದು ಕೋಟಿ ರೂಪಾಯಿ ಹಣ ಸಂಗ್ರಹಿಸಲು ಸಾಧ್ಯವಾದೀತೆಂದೂ ಮಾನ್ಯ ಸದನಕ್ಕೆ ತಿಳಿಸಲು ಸಂತೋಷಪಡುತ್ತೇನೆ. ಸುಮಾರು 9 ಕೋಟಿ ರೂಪಾಯಿಯಷ್ಟು ಸಾಲ ಎತ್ತುವ ರಾಜ್ಯ ಸರ್ಕಾರದ ಕಾರ್ಯಕ್ರಮವೂ ಸಹ ಮುಂದಿನ ವರ್ಷದ ಆಯವ್ಯಯದಲ್ಲಿ ಸೇರಿದೆ. ಏಕೆಂದರೆ ನಾವು ಎರಡು ಸಾಲಗಳನ್ನು ಎಂದರೆ, (1) 1969ನೆಯ ಇಸವಿಯ $4\frac{1}{4}$% ಮೈಸೂರು ರಾಜ್ಯದ ಅಭಿವೃದ್ಧಿ ಸಾಲಕ್ಕೆ 3.34 ಕೋಟಿ ರೂಪಾಯಿ ಮತ್ತು (2) 1969ನೆಯ ಇಸವಿಯ 4% ಮೈಸೂರು ರಾಜ್ಯದ ಅಭಿವೃದ್ಧಿ ಸಾಲಕ್ಕೆ 4.38 ಕೋಟಿ ರೂಪಾಯಿ, ಮರುಸಂದಾಯಮಾಡಬೇಕಾಗಿದೆ; ಇವುಗಳಲ್ಲಿ ಮಾಡಿಕೆಯ ಪರಿವರ್ತನ ಸೌಲಭ್ಯಗಳೂ ಸೇರಿವೆ. ಇದರಲ್ಲಿ ಸ್ವಾಯತ್ತ ಸಂಸ್ಥೆಗಳು, ಭೂ ಅಭಿವೃದ್ಧಿ ಬ್ಯಾಂಕು ಮತ್ತು ಗೃಹನಿರ್ಮಾಣ ಮಂಡಲಿ ಕೈಕೊಳ್ಳುವ ಸಾಲ ಎತ್ತುವ ಕಾರ್ಯಕ್ರಮಗಳು ಸೇರಿಲ್ಲ. ಸಣ್ಣ ಉಳಿತಾಯ ಸಂಸ್ಥೆಯು 6 ಕೋಟಿ ರೂಪಾಯಿ ನಿವ್ವಳ ಹಣ ಸಂಗ್ರಹಿಸುವ ನಿರೀಕ್ಷೆ ಇದೆ.

66. ಕೃಷಿಕರು ಹೆಚ್ಚು ಹೆಚ್ಚಾಗಿ ಜಾಗೃತರಾದಂತೆಲ್ಲ, ನೆರವಿನ ಬಗೆಗೆ ಬೇಡಿಕೆ ಹೆಚ್ಚುತ್ತಲೇ ಹೋಗುವುದು. ಹೀಗಾಗಿ ಕೃಷಿವಲಯದಲ್ಲಿ ಸಾಲದ ಅಂತರವು ಗಣನಾರ್ಹವಾಗುವುದು. ಸಹಕಾರೀ ಸಂಘಗಳ ಮತ್ತು ಬ್ಯಾಂಕುಗಳ ಉತ್ಸಾಹಪೂರಿತ ಮತ್ತು ಸುಸಂಘಟಿತ ಪ್ರಯತ್ನ ಪರಂಪರೆಗಳಿಂದ ಈ ಅಂತರವನ್ನು ತುಂಬಿಕೊಂಡರೆ ತಾನೇ ಕೃಷಿ ರಂಗದ ಕ್ರಾಂತಿಯು ಕೈಗೂಡುವುದು. ಕೆಲಕೆಲವು ಕ್ಷೇತ್ರಗಳಿಂದ ಬರಬೇಕಾದ ಹಣ ವಸೂಲಾಗದೆ ಭಾರೀ ಹಣ ಬಾಕಿ ನಿಂತು ಹೋಗಿದೆ. ಇದರಿಂದ ಸಾಲ ಬರುವುದಕ್ಕೆ ತೊಂದರೆಯಾಗಿ ಆರ್ಥಿಕ ಅಭಿವೃದ್ಧಿಗೆ ನಿಜಕ್ಕೂ ಹಾನಿಯಾಗಿದೆ. ಹೀಗೆ ಹಣ ಬಾಕಿ ನಿಲ್ಲಲು ಕಾರಣರಾದವರ ಮೇಲೆ ಸಂಘಟಿತ ಕ್ರಮ ಕೈಕೊಳ್ಳುವುದು ಅವಶ್ಯವಾಗಿದೆ, ಎಂದು ನಾನಿಲ್ಲಿ ಸೂಚಿಸಬಯಸುತ್ತೇನೆ. ಅಭಿವೃದ್ಧಿ ಯೋಜನೆಗೆ ಹಣ ಸಹಾಯ ಮಾಡುವ ನಾನಾ ಸಂಸ್ಥೆಗಳು ಒದಗಿಸುವ ಸೌಲಭ್ಯಗಳ ಪೂರ್ಣ ಪ್ರಯೋಜನ ಪಡೆದುಕೊಳ್ಳುವುದರ ಮಹತ್ತ್ವವನ್ನು ನಾನು ಹೆಚ್ಚು ಒತ್ತಿ ಹೇಳಬೇಕಾಗಿಲ್ಲ.

67. ಸಾಲ ಮತ್ತು ಮುಂಗಡಗಳ ಬಟವಾಡೆಗೆ ಆಯವ್ಯಯ ಪತ್ರದಲ್ಲಿ ಒದಗಿಸಿರುವ ಹಣ 26·21 ಕೋಟಿ ರೂಪಾಯಿ. ತಕಾವಿ ಸಾಲಗಳು ಮತ್ತು ಜಮೀನು ಅಭಿವೃದ್ಧಿ ಸಾಲಗಳು, ಮುಂತಾದ ಸಾಮಾನ್ಯ ಬಾಬುಗಳಿಗೆ ಒದಗಿಸಿರುವ ಹಣದ ಜೊತೆಗೆ ಆಯವ್ಯಯ ಪತ್ರದಲ್ಲಿ ಯೋಜನಾ ವ್ಯಯದ ಭಾಗವಾದ 4·32 ಕೋಟಿ ರೂಪಾಯಿ, ಸರ್ಕಾರಿ ನೌಕರರ ಸಾಲಗಳಿಗಾಗಿ 1·56 ಕೋಟಿ ರೂಪಾಯಿ, ಗೃಹ ನಿರ್ಮಾಣ ಮತ್ತು ಇತರ ಮುಂಗಡಗಳನ್ನು ತಮ್ಮ ನೌಕರ ವರ್ಗಕ್ಕೆ ಮಂಜೂರ್ಮಾಡಲು ವಿಶ್ವವಿದ್ಯಾನಿಲಯಗಳಿಗೆ ಕೊಡುವ ಸಾಲಗಳ ಬಗ್ಗೆ 5 ಲಕ್ಷ ರೂಪಾಯಿ, ಜೀವವಿಮಾ ನಿಗಮದ ಸಾಲಗಳಿಂದ ನಡೆಯುವ ಗೃಹನಿರ್ಮಾಣ ಕಾರ್ಯಗಳಿಗೆ 95 ಲಕ್ಷ

ರೂಪಾಯಿ, ರಾಷ್ಟ್ರೀಯ ಸಾಲರೂಪದ ವಿದ್ಯಾರ್ಥಿವೇತನಗಳಿಗೆ 48 ಲಕ್ಷ ರೂಪಾಯಿ, ಮತ್ತು ಉದ್ಯಮಗಳಿಗೆ ಸರ್ಕಾರಿ ಸಹಾಯ ನೀಡಿಕೆ ಅಧಿನಿಯಮದ ಮೇರೆಗೆ ಕೊಡುವ 25 ಲಕ್ಷ ರೂಪಾಯಿ ಸೇರಿವೆ. ವ್ಯವಸಾಯಗಾರರಿಗೆ ಮಾರಾಟ ಮಾಡುವ ಉದ್ದೇಶಕ್ಕಾಗಿ ರಾಸಾಯನಿಕ ಗೊಬ್ಬರ ಮತ್ತು ಬಿತ್ತನೆ ಬೀಜಗಳ ಖರೀದಿಗೆ 16 ಕೋಟಿ ರೂಪಾಯಿ ಒದಗಿಸಲಾಗಿದೆ. ಇದರ ಪೈಕಿ 10 ಕೋಟಿ ರೂಪಾಯಿ ವಸೂಲಾಗುವ ನಿರೀಕ್ಷೆಯಿದೆ. ಯೋಜನೆಯ ಮೇರೆಗಿನ ಸಾಲಗಳಲ್ಲಿ ನೀರಾವರಿ ಬಾವಿಗಳಿಗೆ ಮತ್ತು ಪಂಪುಸೆಟ್ಟುಗಳ ಖರೀದಿಗೆ ಸಾಲಗಳು, ಬೆಂಗಳೂರು ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಯ ಮಂಡಲಿಗೆ ಸಾಲಗಳು, ಇತರ ನಗರ ಪ್ರದೇಶದ ನೀರು ಪೂರೈಕೆ ಯೋಜನೆಗಳು, ಭೂಸಾರ ರಕ್ಷಣೆ, ಸಾಮುದಾಯಿಕ ಅಭಿವೃದ್ಧಿ—ಇವುಗಳೇ ಮೊದಲಾದುವಕ್ಕೆ ನೀಡುವ ಸಾಲಗಳೂ ಸೇರಿವೆ.

68. ಸಭೆಯ ಮುಂದೆ ಮಂಡಿಸಲಾಗಿರುವ ಆಯುವ್ಯಯ ಅಂದಾಜುಗಳ ಮೇರೆಗೆ, ಮುಂಬರುವ ವರ್ಷದ ವ್ಯವಹಾರಗಳನ್ನು ಸಂಗ್ರಹವಾಗಿ ನಿರೂಪಿಸುವುದಾದರೆ, ಮುಂದಿನ ವರ್ಷವು 1.65 ಕೋಟಿ ರೂಪಾಯಿ ನಗದು ಶಿಲುಕಿನೊಂದಿಗೆ ಪ್ರಾರಂಭವಾಗುತ್ತದೆ. ಆ ವರ್ಷದ ಸಾಲ ತೀರಿಕೆಗೆ 52.00 ಕೋಟಿ ರೂಪಾಯಿ ವ್ಯಯವಾಗುವುದು. ಈ ಹಣದಲ್ಲಿ ಭಾರತ ಸರ್ಕಾರದಿಂದ ಮಂಜೂರಾದ ತದರ್ಥ ಸಾಲದ ಬಗ್ಗೆ 8·80 ಕೋಟಿ ರೂಪಾಯಿಯ ಮರುಪಾವತಿ ಮತ್ತು 15·67 ಕೋಟಿ ರೂಪಾಯಿ, ಅಲ್ಪಾವಧಿ ಸಾಲದ ಮರುಪಾವತಿ, ಬಂಡವಾಳ ವೆಚ್ಚಕ್ಕೆ 42.99 ಕೋಟಿ ರೂಪಾಯಿ, 'ಸಾಲಗಳು ಮತ್ತು ಮುಂಗಡಗಳು' ಎಂಬ ಬಾಬಿನಲ್ಲಿ ನಿವ್ವಳ ಪಾವತಿಯ ಬಗ್ಗೆ 11·40 ಕೋಟಿ ರೂಪಾಯಿ ಮತ್ತು 13·22 ಕೋಟಿ ರೂಪಾಯಿಯ ಹುಟ್ಟುವಳಿಯ ಕೊರತೆ, ಇವು ಸೇರಿವೆ. ಈ ಬಾಬುಗಳ ಒಟ್ಟು ಮೊತ್ತ 119·61 ಕೋಟಿ ರೂಪಾಯಿ. ಈ ವ್ಯಯವನ್ನು ಸಾರ್ವಜನಿಕರಿಂದ ಎತ್ತಿದ 9 ಕೋಟಿ ರೂಪಾಯಿ ಸಾಲ, ಕೇಂದ್ರ ಸರ್ಕಾರದಿಂದ ಪಡೆಯುವ 51.25 ಕೋಟಿ ರೂಪಾಯಿ ಸಾಲ ಮತ್ತು ಇತರ ಮೂಲಗಳಿಂದ 2·80 ಕೋಟಿ ರೂಪಾಯಿ, ಸಂಚಿತ ಋಣದಲ್ಲಿ 1·85 ಕೋಟಿ. ರೂಪಾಯಿ ನಿವ್ವಳ ಜಮೆ ಮತ್ತು ಸಾಲ—ಠೇವಣಿ ಬಾಬಿನಲ್ಲಿ 23·12 ಕೋಟಿ ರೂಪಾಯಿ—ಹೀಗೆ 88·02 ಕೋಟಿ ರೂಪಾಯಿ ಒಟ್ಟು ಜಮೆಯ ಹಣದಿಂದ ವಹಿಸಲಾಗುವುದು. ಇದರಿಂದ, 31·59 ಕೋಟಿ ರೂಪಾಯಿಯ ಒಟ್ಟು ಕೊರತೆ ಬರುವ ಕಾರಣ, 29·94 ಕೋಟಿ ಮಜಾ ಶಿಲ್ಕು ಉಳಿಯುತ್ತದೆ. ಹಿಂದೆಯೇ ತಿಳಿಸಿರುವಂತೆ, ಕೇಂದ್ರದಿಂದ ಬರುವ ನೆರವು ಈ ವರ್ಷ ಪಡೆದ ನೆರವಿಗಿಂತ ಕಡಿಮೆಯಾಗಲಾರದು. ಮತ್ತೆ 7–8 ಕೋಟಿ ರೂಪಾಯಿ ನೆರವು ನೀಡುವಂತೆ ಭಾರತ ಸರ್ಕಾರವನ್ನು ಒಪ್ಪಿಸಲು ಸರ್ವ ಪ್ರಯತ್ನ ಮಾಡಲಾಗುವುದು. ಆರ್ಥಿಕ ಆಯೋಗದವರ ಐತೀರ್ಪಿನಿಂದ ವರಮಾನ ಕೊರತೆ ಬಹುಮಟ್ಟಿಗೆ ನಿವಾರಣೆಯಾಗುವ ನಿರೀಕ್ಷೆಯಿದೆ. ಮೈಸೂರು ತೆರಿಗೆ ವಿಚಾರಣೆ ಮತ್ತು ಸಂಪನ್ಮೂಲಗಳ ಸಮಿತಿಯ ಶಿಫಾರಸಿನ ಮೇರೆ ಮಾತ್ರವೇ ಹೊಸ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಲು ರಾಜ್ಯವು ಕ್ರಮ ಕೈಕೊಳ್ಳಬಹುದಾಗಿದೆ. ಆದಕಾರಣ, ತದರ್ಥ ಸಾಲದಿಂದ ಉಳಿದ ಹಣವನ್ನು ತುಂಬಿಕೊಳ್ಳುವ ನಿರೀಕ್ಷೆಯಿದೆ.

69. ಅನುವಂಶಿಕ ನೌಕರರನ್ನು ತೆಗೆದುಹಾಕಿದ ಮೇಲೆ ಪೂರ್ಣಕಾಲಿಕ ಗ್ರಾಮ ಶ್ಯಾನುಭೋಗರನ್ನು ನೇಮಕ ಮಾಡುವುದು ಅಗತ್ಯವಾಗಿದೆ. ಈ ಸರ್ಕಾರಿ ನೌಕರರಿಗೆ ವಹಿಸಬೇಕಾದ ಕೆಲಸದ ನಾನಾ ಬಾಬುಗಳಿಗನುಸಾರವಾಗಿ, ವಾಸ್ತವಿಕವಾಗಿ ಎಷ್ಟು ನೌಕರರನ್ನು ನೇಮಿಸಿಕೊಳ್ಳಬೇಕಾಗುತ್ತದೆಂಬುದನ್ನು ಪರಿಶೀಲಿಸಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳ ಆರ್ಥಿಕ ಭವಿಷ್ಯದ ಹಿತದೃಷ್ಟಿಯಿಂದ ಗ್ರಾಮಾಡಳಿತವನ್ನು ಬಲಪಡಿಸಬೇಕಾದ ಅವಶ್ಯಕತೆಯನ್ನು ಸಹ ವಿತ್ತೀಯ ಆಯೋಗದ ಅವಗಾಹನೆಗೆ ತರಲಾಗಿದೆ. ಆಯವ್ಯಯ ಪತ್ರದಲ್ಲಿ ಗ್ರಾಮ ಶ್ಯಾನುಭೋಗರ ನಿಮಿತ್ತವಾಗಿ 1 ಕೋಟಿ ರೂಪಾಯಿ ಮತ್ತು ಪೋಲೀಸು ಪಟೇಲರ ನಿಮಿತ್ತವಾಗಿ 60 ಲಕ್ಷ ರೂಪಾಯಿ ಹಣವನ್ನು ಒದಗಿಸಿದೆ. ಈ ವಿಷಯದಲ್ಲಿ ಸರ್ಕಾರದವರು ಬೇಗ ತೀರ್ಮಾನಕ್ಕೆ ಬರಲಿದ್ದಾರೆ. ಅನುವಂಶಿಕ ನೌಕರರನ್ನು ತೆಗೆದುಹಾಕುವ ಅಧಿನಿಯಮದಲ್ಲಿ ಅನುವಂಶಿಕ ಅಧಿಕಾರಿಗಳಿಗೆ ಪರಿಹಾರಕೊಡುವ ಬಗ್ಗೆ ಉಪಬಂಧವೇರ್ಪಟ್ಟಿದೆ. ಭೂ ಕಂದಾಯದ ವರಮಾನವನ್ನು ಗಣನೆಗೆ ತೆಗೆದುಕೊಂಡು, ಸುಮಾರು 3 ಕೋಟಿ ರೂಪಾಯಿಗಿಂತಲೂ ಕೊಂಚ ಹೆಚ್ಚು ಹಣ ಬೇಕಾಗುವುದೆಂದು ಅಂದಾಜುಮಾಡಲಾಗಿದೆ. ಪೂರ್ತಿ ಹಣವನ್ನು ಎರಡು ವರ್ಷಗಳ ಅವಧಿಯಲ್ಲಿ ಸಲ್ಲಿಸಬೇಕಾಗುವುದು. ಈ ಪರಿಹಾರದ ಬಗ್ಗೆ ಆಯವ್ಯಯ ಪತ್ರದಲ್ಲಿ 1·65 ಕೋಟಿ ರೂಪಾಯಿ ಒದಗಿಸಲಾಗಿದೆ.

70. ಸರ್ಕಾರದವರು ತಮ್ಮ ಸಂಪನ್ಮೂಲಗಳಿಗೆ ತಕ್ಕಂತೆ ನೌಕರರ ಹಿತಕ್ಕೆ ಸಹಾನುಭೂತಿಪೂರ್ಣ ಗಮನವನ್ನು ಸದಾ ನೀಡಿದ್ದಾರೆ, ವೇತನ ಪ್ರಮಾಣಗಳನ್ನೂ ತುಟ್ಟಿಭತ್ಯ ಮತ್ತು ಪರಿಹಾರ ಭತ್ಯಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಿದ್ದಾರೆ. ಇದರಿಂದ ರಾಜ್ಯ ಬೊಕ್ಕಸಕ್ಕೆ ಬಹಳ ವೆಚ್ಚ ತಗಲಿದೆ.

(ಶ್ರೀ ರಾಮಕೃಷ್ಣ ಹೆಗಡೆ)

71. ನವೆಂಬರ್ 1966ರಲ್ಲಿ ರಚಿತವಾದ ವೇತನ ಆಯೋಗವು ಹಲವಾರು ಸಲಹೆಗಳನ್ನು ನೀಡಿದೆ. ಆಯೋಗದ ವರದಿ ಈಗಾಗಲೇ ವಿಧಾನಮಂಡಲದಲ್ಲಿ ಚರ್ಚಿತವಾಗುತ್ತಿದೆ. ಆಯೋಗದ ತಾತ್ಕಾಲಿಕ ವರದಿಗಳ ಆಧಾರದ ಮೇಲೆ ತುಟ್ಟಿಭತ್ಯ ಹಾಗೂ ಬೇರೆ ಸೌಲಭ್ಯಗಳ ನಿಮಿತ್ತವಾಗಿ ಭಾರಿ ವೆಚ್ಚವಾದುದಷ್ಟೇ ಅಲ್ಲದೆ, ಈಗ ಅಂತಿಮ ವರದಿಯಲ್ಲಿರುವ ಸಲಹೆಗಳನ್ನು ಕಾರ್ಯಗತ ಮಾಡಿದಲ್ಲಿ ಸುಮಾರು 22 ಕೋಟಿ ರೂಪಾಯಿ ವೆಚ್ಚವಾಗುವುದು. ಈ ವೆಚ್ಚವನ್ನು ರಾಜ್ಯದ ಸಂಪನ್ಮೂಲಗಳಿಂದ ಭರಿಸಿಕೊಳ್ಳುವುದು ದುಸ್ಸಾಧ್ಯ. ಈ ವರದಿಯ ಸಲಹೆಗಳನ್ನು ಆರ್ಥಿಕ ಆಯೋಗದ ಮುಂದೆ ಮಂಡಿಸಲಾಗಿದೆ. ಭಾರಿ ವೆಚ್ಚಕ್ಕೆ ಕಾರಣವಾಗುವ ಮುಖ್ಯಾಂಶವೆಂದರೆ, ವೇತನ ಪ್ರಮಾಣಗಳ ಪರಿಷ್ಕರಣ. ಈ ಸಲಹೆಗಳನ್ನು ಕಾರ್ಯರೂಪಕ್ಕೆ ತರುವ ವಿಚಾರವನ್ನೂ ತುಟ್ಟಿಭತ್ಯವನ್ನು ಸಂಬಳದಲ್ಲಿ ವಿಲೀನಗೊಳಿಸುವ ವಿಚಾರವನ್ನೂ ಆರ್ಥಿಕ ಆಯೋಗದ ತೀರ್ಪು ಬಂದ ಮೇಲೆಯೇ ಪರಿಶೀಲಿಸಬೇಕಷ್ಟೆ.

72. ಈ ಮಧ್ಯೆ, ಸರ್ಕಾರದವರು ತುಟ್ಟಿ ಭತ್ಯ, ನಗರ ಪರಿಹಾರ ಭತ್ಯ ಮತ್ತು ಮನೆ ಬಾಡಿಗೆ ಭತ್ಯಗಳ ವಿಚಾರವಾಗಿ ವರದಿಯ ಸಲಹೆಗಳನ್ನು ಕಾರ್ಯಗತ ಮಾಡುವ ನಿರ್ಧಾರ ಕೈಕೊಂಡಿದ್ದಾರೆ. ತುಟ್ಟಿಭತ್ಯ, ನಗರ ಪರಿಹಾರ ಭತ್ಯ ಮತ್ತು ಮನೆಬಾಡಿಗೆ ಭತ್ಯಗಳ ದರಗಳನ್ನು ದಿನಾಂಕ 1-4-1969 ರಿಂದ ಜಾರಿಗೆ ಬರುವಂತೆ, ಮುಂದೆ ಹೇಳುವ ರೀತಿಯಲ್ಲಿ ಪರಿಷ್ಕರಿಸಲಾಗುವುದು. ಈ ದರಗಳನ್ನು ಈಗಿನ ದರಗಳಿಗೆ ಬದಲಾಗಿ ನೀಡಲಾಗುವುದು.

(i) ತುಟ್ಟಿಭತ್ಯ

ವೇತನ ಶ್ರೇಣಿ		ರೂ.
ರೂ. 109 ರ ವರೆಗೆ	...	71
ರೂ. 110—149	...	98
ರೂ. 150—209	...	122
ರೂ. 210—399	...	146
ರೂ. 400—449	...	160
ರೂ. 450—490	...	164
ರೂ. 500—575	...	120

(ಮಾರ್ಜಿನಲ್' ಹೊಂದಾಣಿಕೆಗಳೊಡನೆ)

(ii) ನಗರ ಪರಿಹಾರ ಭತ್ಯ

I ಬೆಂಗಳೂರು ನಗರ

ಕ್ರಮಾಂಕ	ಮೂಲ ವೇತನ ಶ್ರೇಣಿ		ಭತ್ಯದ ದರ
1.	ತಿಂಗಳಿಗೆ ರೂ. 250 ಕ್ಕಿಂತ ಕಡಿಮೆ	...	ಮೂಲ ವೇತನದ 5%-ತಿಂಗಳಿಗೆ ರೂ. 5ರ ಕನಿಷ್ಠ ಮಿತಿಗೂ ರೂ. 12ರ ಗರಿಷ್ಠ ಮಿತಿಗೂ ಒಳಪಟ್ಟಿದೆ.
2	ತಿಂಗಳಿಗೆ ರೂ. 250 ರಿಂದ 500ವರೆಗೆ	...	ಮೂಲವೇತನದ 4%-ತಿಂಗಳಿಗೆ ರೂ. 12ರ ಕನಿಷ್ಠ ಮಿತಿಗೂ ರೂ. 20ರ ಗರಿಷ್ಠ ಮಿತಿಗೂ ಒಳಪಟ್ಟಿದೆ.

(ತಿಂಗಳಿಗೆ 500ರಿಂದ 520ರವರೆಗೆ ಸಂಬಳ ಪಡೆಯುವ ಅಧಿಕಾರಿಗಳಿಗೆ 'ಮಾರ್ಜಿನಲ್' ಹೊಂದಾಣಿಕೆಯಿದೆ)

II ಮೈಸೂರು, ಕೆ.ಜಿ.ಎಫ್. ಮಂಗಳೂರು, ಬೆಳಗಾಂವಿ ಮತ್ತು, ಹುಬ್ಬಳ್ಳಿ-ಧಾರವಾಡ

1	ತಿಂಗಳಿಗೆ ರೂ. 500ಕ್ಕಿಂತ ಕಡಿಮೆ ...	ಮೂಲ ವೇತನದ 3%-ತಿಂಗಳಿಗೆ ರೂ. 4ರ ಕನಿಷ್ಠ ಮಿತಿಗೆ ಒಳಪಟ್ಟು.

(ತಿಂಗಳಿಗೆ ರೂ. 500 ರಿಂದ 515ರ ವರೆಗೆ ಸಂಬಳ ಪಡೆಯುವ ಅಧಿಕಾರಿಗಳಿಗೆ) 'ಮಾರ್ಜಿನಲ್'' ಹೊಂದಾಣಿಕೆಯಿದೆ)

(iii) ಮನೆಬಾಡಿಗೆ ಭತ್ಯ

I ಬೆಂಗಳೂರು ನಗರ

ಕ್ರಮಾಂಕ	ಮೂಲ ವೇತನ ಶ್ರೇಣಿ	ಭತ್ಯದ ದರ
1.	ತಿಂಗಳಿಗೆ 200 ರೂಪಾಯಿ ಮೀರದ ಮೂಲ ವೇತನದವರು.	ಮೂಲ ವೇತನದ ಶೇಕಡ $7\frac{1}{2}$ ತಿಂಗಳಿಗೆ ರೂ. 7.50ರ ಕನಿಷ್ಠ ಮಿತಿಗೂ ರೂ. 12-50ರ ಗರಿಷ್ಠ ಮಿತಿಗೂ ಒಳಪಟ್ಟಿದೆ.
2.	ತಿಂಗಳಿಗೆ ರೂ. 201 ಅಥವಾ ಹೆಚ್ಚು ಆದರೆ ರೂ. 400ಕ್ಕೆ ಮೀರದ ವೇತನ ದವರು.	ಮೂಲ ವೇತನದ 6%ತಿಂಗಳಿಗೆ ರೂ. 12.50ರ ಕನಿಷ್ಠಮಿತಿಗೂ ರೂ. 20ರ ಗರಿಷ್ಠ ಮಿತಿಗೂ ಒಳಪಟ್ಟಿದೆ.
3.	ತಿಂಗಳಿಗೆ ರೂ. 401 ಅಥವಾ ಹೆಚ್ಚು, ಆದರೆ 500ಕ್ಕೆ ಮೀರದ ಮೂಲ ವೇತನ ದವರು	ಮೂಲ ವೇತನದ $4\frac{1}{2}$%-ತಿಂಗಳಿಗೆ ರೂ. 20ರ ಕನಿಷ್ಠ ಮಿತಿಗೂ ರೂ. 22-50ರ ಗರಿಷ್ಠ ಮಿತಿಗೂ ಒಳಪಟ್ಟಿದೆ
	II 1ಲಕ್ಷ ಮತ್ತು ಅದಕ್ಕೂ ಹೆಚ್ಚು	ಜನ ಸಂಖ್ಯೆಯ ಪಟ್ಟಣಗಳು
1.	ತಿಂಗಳಿಗೆ 200 ರೂಪಾಯಿಗೆ ಮೀರದ ಮೂಲ ವೇತನದವರು	ತಿಂಗಳಿಗೆ ಮೂಲ ವೇತನದ 5% ರೂ. 5ರ ಕನಿಷ್ಠ ಮಿತಿಗೂ ರೂ. 7-50ರ ಗರಿಷ್ಠ ಮಿತಿಗೂ ಒಳಪಟ್ಟಿದೆ.
2.	ತಿಂಗಳಿಗೆ 201 ರೂಪಾಯಿ ಅಥವಾ ಹೆಚ್ಚು, ಆದರೆ 400 ರೂಪಾಯಿಗೆ ಮೀರದ ಮೂಲ ವೇತನದವರು	ತಿಂಗಳಿಗೆ ಮೂಲ ವೇತನದ 4% ರೂ. 8ರ ಕನಿಷ್ಠ ಮಿತಿಗೂ ರೂ. 12-50ರ ಗರಿಷ್ಠ ಮಿತಿಗೂ ಒಳಪಟ್ಟಿದೆ.
3.	ತಿಂಗಳಿಗೆ 401 ರೂಪಾಯಿ ಅಥವಾ ಹೆಚ್ಚು ಆದರೆ 500 ರೂಪಾಯಿಗೆ ಮೀರದ ಮೂಲ ವೇತನದವರು	ತಿಂಗಳಿಗೆ ಮೂಲ ವೇತನದ 3%-ರೂ.12-50ರ ಕನಿಷ್ಠ ಮಿತಿಗೂ ರೂ.15ರ ಗರಿಷ್ಠ ಮಿತಿಗೂ ಒಳಪಟ್ಟಿದೆ.
III	25,000 ಮತ್ತು ಅದಕ್ಕೆ ಮೇಲ್ಪಟ್ಟ	ಜನಸಂಖ್ಯೆಯ ಪಟ್ಟಣಗಳು
1.	ತಿಂಗಳಿಗೆ ರೂ. 200ಕ್ಕೆ ಮೀರದ ಮೂಲ ವೇತನದವರು	ತಿಂಗಳಿಗೆ ಮೂಲವೇತನದ $2\frac{1}{2}$%-3 ರೂಪಾಯಿ ಯ ಕನಿಷ್ಠ ಮಿತಿಗೂ 5 ರೂಪಾಯಿಯ ಗರಿಷ್ಠ ಮಿತಿಗೂ ಒಳಪಟ್ಟಿದೆ.
2.	ತಿಂಗಳಿಗೆ 201 ರೂ. ಅಥವಾ ಹೆಚ್ಚು, ಆದರೆ 500 ರೂ.ಗೆ ಮೀರದ ಮೂಲ ವೇತನದವರು	ತಿಂಗಳಿಗೆ ಮೂಲ ವೇತನದ 2%-5 ರೂಪಾಯಿಯ ಕನಿಷ್ಠ ಮಿತಿಗೂ 10 ರೂಪಾಯಿ ಗರಿಷ್ಠ ಮಿತಿಗೂ ಒಳಪಟ್ಟಿದೆ.

(I ವರ್ಗದಲ್ಲಿ ರೂ. 500 ರಿಂದ 522.50 ವರೆಗೆ ವೇತನ ಪಡೆಯುವವರಿಗೂ II ವರ್ಗದಲ್ಲಿ ರೂ. 500 ರಿಂದ 515ರ ವರೆಗೆ ವೇತನ ಪಡೆಯುವವರಿಗೂ III ವರ್ಗದಲ್ಲಿ ರೂ. 400 ರಿಂದ 410ರ ವರೆಗೆ ವೇತನ ಪಡೆಯುವವರಿಗೂ 'ಮಾರ್ಜಿನಲ್' ಹೊಂದಾಣಿಕೆಯಿದೆ.)

(ಶ್ರೀ ರಾಮಕೃಷ್ಣ ಹೆಗಡೆ)

73. ಸ್ಥಳೀಯ ಸಂಸ್ಥೆಗಳ, ಸಹಾಯ ಪೋಷಿತ ಸಂಸ್ಥೆಗಳ ಮತ್ತು ಸರ್ಕಾರಿ ಉದ್ಯಮ ಸಂಸ್ಥೆಗಳ ನೌಕರರಿಗೆ ಈ ದರಗಳು ಅನ್ವಯಿಸುತ್ತವೆ. ತಾಲ್ಲೂಕು ಬೋರ್ಡುಗಳನ್ನು ಮತ್ತು ಗ್ರಾಮ ಪಂಚಾಯಿತಿಗಳನ್ನು ಬಿಟ್ಟು ಬೇರೆ ಸ್ಥಳೀಯ ಸಂಸ್ಥೆಗಳಿಗೆ ದಿನಾಂಕ 1-4-1969ರಿಂದ ಜಾರಿಗೆ ಬರುವ ಈ ಹೆಚ್ಚಳಗಳ ಸಂಬಂಧದಲ್ಲಿ ಸರ್ಕಾರದ ನೆರವು ದೊರೆಯುವುದು ಪೂರ್ತಿ ಭೂಕಂದಾಯ ಪಡೆಯುವ ತಾಲ್ಲೂಕು ಬೋರ್ಡುಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಈ ನೆರವು ದೊರೆಯುವುದಿಲ್ಲ.

74. ಚಿಕ್ಕ ಪುಟ್ಟ ಕಾಯಿಲೆಗಳ ಚಿಕಿತ್ಸೆಯ ಸಂಬಂಧವಾಗಿ ನಗದು ಭತ್ಯ ಕೊಡುವ ವಿಚಾರದಲ್ಲಿ ಬಂದಿರುವ ಸಲಹೆಗಳನ್ನು ಸರ್ಕಾರದವರು ಪರಿಶೀಲಿಸಿದ್ದಾರೆ. ಈ ಸಲಹೆಯ ಆಶಯ ಶ್ಲಾಘನೀಯವೇ ಸರಿ. ಆದರೆ ಮೈಸೂರಿನ ವೈದ್ಯಕೀಯ ಸೌಕರ್ಯ ನಿಯಮಾವಳಿಗಳು ಈಗಾಗಲೇ ಉದಾರವಾಗಿವೆ. ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಈ ಸಲಹೆಯನ್ನು ಒಪ್ಪಿಕೊಳ್ಳಲು ಸರ್ಕಾರದವರಿಗೆ ಸಾಧ್ಯವಾಗುವಂತಿಲ್ಲ. ನಿರ್ದಿಷ್ಟ ಇಲಾಖೆಗಳಿಗೆ ಸಂಬಂಧಪಟ್ಟಂತೆ ಪ್ರಯಾಣ ಭತ್ಯ, ವಿದ್ಯಾರ್ಥಿ ವೇತನ ಮತ್ತು ಇನ್ನಿತರ ಸೌಕರ್ಯಗಳಿಗೆ ಸಂಬಂಧಿಸಿದ ಬೇರೆ ಸಲಹೆಗಳನ್ನು ಆರ್ಥಿಕ ಆಯೋಗದ ವರದಿ ಬಂದ ಮೇಲೆ ಪರಿಶೀಲಿಸಲಾಗುವುದು.

75. ತುಟ್ಟಿ ಭತ್ಯ, ನಗರ ಪರಿಹಾರ ಭತ್ಯ ಮತ್ತು ಮನೆ ಬಾಡಿಗೆ ಭತ್ಯಗಳಿಗೆ ಸಂಬಂಧಿಸಿದ ಸಲಹೆಗಳನ್ನು ಅಂಗೀಕರಿಸಿರುವುದರಿಂದ ವಹಿಸಬೇಕಾಗುವ ವೆಚ್ಚ ವರ್ಷಕ್ಕೆ ಸುಮಾರು 3.25 ಕೋಟಿ ರೂಪಾಯಿ; ಐದು ವರ್ಷಗಳಿಗೆ ಈ ವೆಚ್ಚ 16.25 ಕೋಟಿ ರೂಪಾಯಿ. ಇದನ್ನು ಈ ಆಯವ್ಯಯ ಪತ್ರದಲ್ಲಿ ಸೇರಿಸಿಲ್ಲ. ಈ ವೆಚ್ಚವನ್ನು ಆರ್ಥಿಕ ಆಯೋಗದ ಐತೀರ್ಪಿನ ಬಲದಿಂದ ತುಂಬಿ ಕೊಳ್ಳಬಹುದೆಂಬ ನಿರೀಕ್ಷೆಯಿದೆ.

76. ಭಾರತ ಸರ್ಕಾರಕ್ಕೆ ಸಲ್ಲತಕ್ಕ ಹಣ, ಸಾರ್ವಜನಿಕ ಸಾಲ ಇತ್ಯಾದಿಗಳ ಸಹಿತವಾಗಿ 1969-70 ರ ಅಂತ್ಯಕ್ಕೆ ಒಟ್ಟು 397.52 ಕೋಟಿ ರೂಪಾಯಿ ಸಾಲ ನಿಲ್ಲುವುದು. ಇದರಲ್ಲಿ ಅಸಂಚಿತ ಋಣ ಮತ್ತು ಠೇವಣಿಗಳ ಸಂಬಂಧವಾಗಿ ಬಾಕಿ ನಿಂತ 28.47 ಕೋಟಿ ರೂಪಾಯಿ ಸೇರಿಲ್ಲ. ಈ ಹೊಣೆಗೆ 484.65 ಕೋಟಿ ರೂಪಾಯಿ ಮೌಲ್ಯದ ಸ್ವತ್ತುಗಳ ಆಧಾರವಿದೆ. ಇದಲ್ಲದೆ, ಸರ್ಕಾರದವರ ಬಳಿ ಬಂಡವಾಳ ಲೆಕ್ಕಕ್ಕೆ ತೆಗೆದುಕೊಳ್ಳದ ಅದೆಷ್ಟೋ ಸ್ವತ್ತುಗಳಿವೆ. ಈ ಸ್ವತ್ತುಗಳನ್ನು ಮಾರುಕಟ್ಟೆ ಮೌಲ್ಯದ ಲೆಕ್ಕದಲ್ಲಿ ನಿರ್ಧರಿಸಲಾಗುವುದಿಲ್ಲ. ಏಕೆಂದರೆ, ಈ ಸ್ವತ್ತುಗಳು ಸಂಪತ್ತನ್ನು ಉತ್ಪಾದಿಸಿ, ಕಾಲಕ್ರಮದಲ್ಲಿ ಸ್ವಯಂಜನಿತ ಆರ್ಥಿಕ ಸ್ಥಿತಿಗೆ ಕಾರಣವಾಗಿ ಜನತೆಗೆ ನೆಮ್ಮದಿಯೂ ಶ್ರೇಯೋಭಿವೃದ್ಧಿಯೂ ಕುದುರುವಂತಾಗಲೆಂದು ಸೃಜಿಸಿದವುಗಳೇ ಹೊರತು ಮಾರಾಟಕ್ಕೆಂದು ಸೃಜಿಸಿದವುಗಳಲ್ಲ.

77. ನಮ್ಮ ಋಣ ಸೇವೆಯ ವೆಚ್ಚ ಬೃಹದಾಕಾರವಾಗಿ ಬೆಳೆಯುತ್ತಿರುವುದೇನೋ ನಿಜ. ಆಯವ್ಯಯ ಪತ್ರವು ಬಡ್ಡಿಗೆ 20.27 ಕೋಟಿ ರೂಪಾಯಿಗೂ ಸಾಲದ ಮರುಸಂದಾಯಕ್ಕೆ 52 ಕೋಟಿ ರೂಪಾಯಿಗೂ ವ್ಯವಸ್ಥೆಮಾಡಿದೆ. ಧನ ವಿನಿಯೋಗ ಮಾಡದೆ ಜನತೆಯ ಜೀವನ ಮಟ್ಟ ಉತ್ತಮವಾಗುವಂತಿಲ್ಲ. ಇದಕ್ಕೆ ಸಾಲವೆತ್ತಬೇಕಾಗುವುದು. ನಮ್ಮ ವೆಚ್ಚ ನಮ್ಮ ಸಂಪನ್ಮೂಲಗಳ ಮಿತಿಯೊಳಗಿರಬೇಕೆಂಬುದೇನೋ ಸರಿ. ಆದರೆ, ಯೋಜನಾ ವ್ಯಯ ಪ್ರಮಾಣವನ್ನು ತಗ್ಗಿಸಿದರೆ ಸಂಭವಿಸುವ ಅಪಾಯಗಳನ್ನು ಪರಿಶೀಲಿಸುವ ಕಾಲವೂ ಇದೀಗ ಸನ್ನಿಹಿತವಾಗಿದೆ. ನಾಡಿನಲ್ಲಿ ನಿರುದ್ಯೋಗ ಸಮಸ್ಯೆ ಅಪಾರವಾಗಿ ಬೆಳೆದಿರುವುದರಿಂದಲೂ, ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಯನ್ನು ಉದ್ಯಮವಾಗಿ ಕೈಕೊಳ್ಳುವ ಅಪೇಕ್ಷೆ ಮೂಡಿರುವುದರಿಂದಲೂ, ಯುವಕ ಜನಾಂಗವು ಸೂಕ್ತ ಜೀವನ ಮಟ್ಟವನ್ನು ಬಯಸುತ್ತಿರುವುದರಿಂದಲೂ, ನಮ್ಮ ರಾಜ್ಯವೇ ಆಗಲಿ ಬೇರೆ ರಾಜ್ಯಗಳೇ ಆಗಲಿ, ಉತ್ಪಾದಕ ಯೋಜನೆಗೆ ಕೊರತೆ ಹಣ ವ್ಯವಸ್ಥೆಯನ್ನು ಕೈಬಿಡಲಾಗದೆಂದೇ ನನ್ನ ಭಾವನೆ. ಆದಕಾರಣ, ಇದುವರೆಗೆ ಕೈಗೂಡಿದ ಸಾಧನೆಗಳನ್ನು ಉಳಿಸಿಕೊಳ್ಳುವುದಷ್ಟೇ ಅಲ್ಲದೆ, ಒಳ್ಳೆಯ ಭವಿಷ್ಯ ಬರುವುದೆಂಬ ಆಸೆಯನ್ನು ಕುದುರಿಸುವುದಕ್ಕೂ ಸಹ ಅತ್ಯವಶ್ಯ ಯೋಜನೆಗಳಿಗೆ ಕನಿಷ್ಠ ಪ್ರಮಾಣದ ಸರ್ಕಾರಿ ವೆಚ್ಚಕ್ಕೆ ನಾವು ಅವಕಾಶ ಕಲ್ಪಿಸಲೇ ಬೇಕು. ದುಂದು ವೆಚ್ಚವನ್ನು ತಪ್ಪಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ಈ ಮಾನ್ಯ ಸದನಕ್ಕೂ ಭಾರತ ಸರ್ಕಾರದವರಿಗೂ ನಾನು ಭರವಸೆ ಕೊಡಬಲ್ಲೆ. ಆಯವ್ಯಯ ಪತ್ರದ ಸಲಹೆಗಳನ್ನು ತಾವು ಸಾವಧಾನವಾಗಿ ಪರಿಶೀಲಿಸಿದಲ್ಲಿ ಯೋಜನೇತರ ಮತ್ತು ಅನುತ್ಪಾದಕ ಕಾರ್ಯಗಳ ವೆಚ್ಚಕ್ಕೆ ಮಾಡಿರುವ ಹಣ ವ್ಯವಸ್ಥೆ ಕೇವಲ ಕನಿಷ್ಠ ಪ್ರಮಾಣದ್ದೆಂಬ ಅಂಶ ತಮಗೆ ಮನದಟ್ಟಾಗುವುದು.

78. ಆಯುವ್ಯಯದ ಅಂದಾಜುಗಳನ್ನು ತಾವು ಪರಿಶೀಲಿಸಬೇಕೆಂದು ವಿನಂತಿಸಿಕೊಂಡು, ತಮ್ಮ ಸಹಕಾರವನ್ನೂ ಅಮೂಲ್ಯ ಸೂಚನೆಗಳನ್ನೂ ಕೋರುತ್ತೇನೆ.

ಜೈ ಹಿಂದ್

Busines of the House

Mr. SPEAKER.—Now before adjourning the House I may bring to the notice of the hon'ble Members that there will be two sittings tomorrow, one in the morning from 9 a.m. to 1 p.m. to debate on the mather pertaining to Shiva Sena activities in Bombay and other places, and the second sitting will be from 3 p.m. to 7 p.m for general discussion on the Budget.

The House will now rise to meet again tomorrow at 9 a.m.

The House adjourned at Fifty Minutes past Three of the Clock to meet again at Nine of the Clock on Tuesday 25th February 1969.

WD 12380—GPB—600—13-6-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 25th February 1969

The House met in the Assembly Chamber, Vidhana Soudha, Bangalore, at Nine of the Clock.

MR. SPEAKER [SRI S. D. KOTHAVALE] in the Chair.

Discussion on a matter of Urgent-Public Importance *re* : Violent activities of Sivasena in Maharashtra.

MR. SPEAKER.—The hon. Members are aware that we are to discuss a matter of urgent public importance for short duration under rule 59. *Viz.*, "The violent activities of Shiva Sena in Maharashtra in general and Bombay in particular, with special reference to the destruction of life and property of Mysoreans".

Now for the information of the hon. Members I shall try to indicate the procedure to be followed here. Rule 61 says:

> "There shall be no formal motion before the Assembly nor voting. The member who has given notice may make a short statement and the Ministeer shall reply shortly. Any member who has previously intimated to the Speaker may be permitted to take part in the discussion."

Therefore, there shall be no formal motion nor there shall be voting. As many as 16 hon. Members have given notice of the motion and I have received previous intimation from two hon. Members, Sri B. B. Sayanak and Sri V. N. Patil. I shall permit all of them to speak. But it is a question of time. The time for the discussion is 2½ hours. Beyond that we cannot give so. It is a question of rationing of time. I therefore request hon. Members to keep discussion within the time limit indicated. I shall give ten minutes to the leaders of the various political parties and ten minutes to other hon. Members. All the hon. Members are requested to co-operate with the Chair in trying to stick to the time schedule.

(MR. SPEAKER)

One other point I wish to make is this, this discussion is likely to rouse some emotion and so I request the hon. Members to keep themseleves within the limits of decorum and dignity and try to say things in an effective manner. Now I shall call upon the Leader of the Opposition Sri Sivappa to begin his speech.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಭಾರತದೇಶದಲ್ಲಿ ಸ್ವಾತಂತ್ರ್ಯ ಬಂದ ನಂತರದಲ್ಲಿ ಆದಂತಹ ಮಹಾದುರ್ಘಟನೆಗಳಲ್ಲಿ ಒಂದಾದ ದುರ್ಘಟನೆ ಎಂದರೆ ಮೊನ್ನೆ ಬೊಂಬಾಯಿಯಲ್ಲಿ ನಡೆದಂತಹ ಅತ್ಯಾಚಾರ. ನಾವು ಈವೊತ್ತಿನ ದಿವಸ ಈ ವಿಷಾದಕರವಾದ ಘಟನೆಯನ್ನು ಇಲ್ಲಿ ಚರ್ಚೆಮಾಡಬೇಕಾಗಿದೆ. ಬೊಂಬಾಯಿಯಲ್ಲಿ ನಡೆದ ಈ ದುರ್ಘಟನೆ, ಈ ಅತ್ಯಾಚಾರ ಈ ರಾಕ್ಷಸೀ ಕೃತ್ಯ, ಮತ್ತು ಈ ದುರಂತ ನಾಟಕವನ್ನು ನಾವು ಇಂದು ಇಲ್ಲಿ ಶಾಸನ ಸಭೆಯಲ್ಲಿ ಚರ್ಚೆ ಮಾಡತಕ್ಕಂತದ್ದು ಬಹಳ ಪ್ರಾಮುಖ್ಯವಾದುದು. ಈ ಅತ್ಯಾಚಾರವು ಅಲ್ಲಿರತಕ್ಕ ಮೈಸೂರಿನ ಜನರ ಮೇಲೆ ಈ ಶಿವಸೇನೆಯು ಮಾಡಿದೆ. ಮೈಸೂರಿನ ಜನರು, ಬೊಂಬಾಯಿಯಲ್ಲಿ ತಮ್ಮ ವ್ಯವಹಾರವನ್ನು ಮಾಡುವುದಕ್ಕೋಸ್ಕರ ಅನೇಕ ದಶಕಗಳಿಂದ್ಲ ಅಲ್ಲಿ ಹೋಗಿ ನೆಲಸಿಕೊಂಡಿದ್ದಾರೆ. ಅಂಥ ನಿರಪರಾಧಿ ಜನರ ಮೇಲೆ, ಹಲ್ಲೆಯನ್ನು ಮಾಡಿ, ಅವರ ಆಸ್ತಿಪಾಸ್ತಿಗಳಿಗೆ ಕಷ್ಟನಷ್ಟಗಳನ್ನು ಮಾಡಿರತಕ್ಕ ವಿಷಯ ಇವತ್ತಿನ ದಿವಸ ನಮ್ಮೆಲ್ಲರನ್ನೂ ಕೆರಳಿಸತಕ್ಕ ವಿಷಯವಾಗಿದೆ.

ಈವೊತ್ತು ಎಲ್ಲಕ್ಕಿಂತ ಹೆಚ್ಚಾಗಿ ಭಾರತ ದೇಶದಲ್ಲಿ ಮಹಾತ್ಮ ಗಾಂಧೀಜಿಯವರ ಶತಮಾನೋತ್ಸವವನ್ನು ಆಚರಣೆ ಮಾಡತಕ್ಕಂಥ ವರ್ಷದಲ್ಲಿ ಇಂಥಾ ದುರ್ಘಟನೆ ನಡೆದಿದೆ. ಈ ದೇಶದಲ್ಲಿ ಅತ್ಯುನ್ನತ ನಾಯಕರಾದ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟವನ್ನು ಮಾಡಿದ ಶ್ರೀ ಗೋಖಲೆ ಮತ್ತು ಶ್ರೀಮಾನ್ ತಿಲಕ್ ಅವರನ್ನು ನೀಡಿದಂತಹ ರಾಜ್ಯದಲ್ಲಿ ಇಂಥಾ ದುರ್ಘಟವೆ ನಡೆದಿರುವುದರಿಂದ ಭಾರತಕ್ಕೆ ಕಳಂಕ ಬಂದಿದೆ. ಶಿವಸೇನೆಯವರು ತಿಳಿಗೇಡಿತನದ ನೀತಿಯಿಂದ ಸಂಕುಚಿತ ಮನೋಭಾವದಿಂದ ರಾಷ್ಟ್ರೀಯತೆಯನ್ನು ಹೋಗಲಾಡಿಸತಕ್ಕ ರೀತಿಯಲ್ಲಿ ಈ ದೇಶದಲ್ಲಿ ಅಂತರ್ಯುದ್ಧವನ್ನು ಪ್ರಾರಂಭ ಮಾಡತಕ್ಕ ನೀಚಬುದ್ಧಿಯನ್ನು ತೋರಿಸಿದ್ದಾರೆ. ಪ್ರತಿಯೊಬ್ಬ ಭಾರತೀಯನೂ ತಲೆತಗ್ಗಿಸತಕ್ಕ ನೀತಿಯನ್ನು ಅನುಸರಿಸಿ ಈ ಶಿವಸೇನೆಯು ನಮ್ಮ ಭಾರತ ದೇಶವನ್ನೇ ಕಳಂಕಮಯವನ್ನಾಗಿ ಮಾಡಿರತಕ್ಕದ್ದನ್ನು ನಾವು ಜ್ಞಾಪಕಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಿಂದ ಉತ್ಪತ್ತಿಯಾದ ಗಡಿವಿವಾದ ಈ ಚಳುವಳಿಯ ಹಿನ್ನಲೆಯಾಗಿದೆ ಎಂದು ನಾವು ಸ್ವಲ್ಪ ಜ್ಞಾಪಕಮಾಡಿಕೊಳ್ಳಬೇಕಾಗಿದೆ. ಕೇಂದ್ರ ಸರ್ಕಾರ ನೇಮಕ ಮಾಡಿದಂತಹ ಮಹಾಜನ್ ಕಮಿಷನ್ ಏನಿದೆ ಅದು ಮೈಸೂರು ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಇದ್ದಂತಹ ಗಡಿ ವಿವಾದಗಳ ಬಗ್ಗೆ ಒಂದು ತೀರ್ಪನ್ನು ಕೊಡುವುದಕ್ಕೋಸ್ಕರ ಅದು ನೇಮಕವಾಯಿತು. ಇದು ಮಹಾರಾಷ್ಟ್ರದ ನಾಯಕರ ಒತ್ತಾಯಕ್ಕೆ ಕೇಂದ್ರ ಸರ್ಕಾರದವರು ತಲೆಬಾಗಿ ಅವರನ್ನು ಮೆಚ್ಚಿಸುವುದಕ್ಕೋಸ್ಕರವಾಗಿ ಈ ಕಮೀಷನ್ ನೇಮಕಮಾಡಿದರು. ಈ ಕಮಿಷನ್ನಿನ ನೇಮಕವನ್ನು ಒಪ್ಪಿಕೊಳ್ಳಬೇಕಾದರೆ ಈ ಕಮಿಷನ್ನಿನವರು ಗಡಿವಿವಾದದ ಬಗ್ಗೆ ಏನು ತೀರ್ಪನ್ನು ಕೊಡುತ್ತಾರೆಯೋ ಅದನ್ನು ಅಂತಿಮವಾಗಿ ಉಭಯತ್ರರೂ ಒಪ್ಪಿಕೊಳ್ಳುವುದು ಎಂದು ಮಹಾರಾಷ್ಟ್ರ ರಾಜ್ಯದ ಮುಖ್ಯ ಮಂತ್ರಿಗಳೂ ಮತ್ತು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳೂ ಕೂಡ ಬಹಿರಂಗವಾಗಿ ಹೇಳಿದ್ದಾರೆ. ಈವೊತ್ತು ಮಹಾಜನ್ ಅವರ ಆಯೋಗದ ತೀರ್ಪು ಬಂದಮೇಲೆ ಮಹಾರಾಷ್ಟ್ರದವರು ದೊಂಬರಲಾಗವನ್ನು ಹಾಕುತ್ತಿದ್ದಾರೆ. ಈ ನೀತಿ ಖಂಡನೀಯವಾದುದು. ಯಾವ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ತಾವು ಕೊಟ್ಟಂತಹ ಮಾತನ್ನು ಹಿಂದಕ್ಕೆ ತೆಗೆದುಕೊಂಡು ವಚನ ಭ್ರಷ್ಟರು ಮತ್ತು ಮೋಸಗಾರರೂ ಆಗಿದ್ದಾರೆ. ಇವರಲ್ಲಿ ರಾಜಕೀಯ ನೀತಿಯೇ ಇಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಇವೊತ್ತು ಕೇಂದ್ರ ಸರ್ಕಾರ ಕೂಡ ಎಷ್ಟೊಂದು ಅವಹೇಳನಕರವಾದ ರೀತಿಯಲ್ಲಿ ನಡೆಯುತ್ತಿದೆ ಎಂದರೆ ಯಾವಾಗ ಕಮಿಷನ್ನಿನವರು ಒಂದು ತೀರ್ಪನ್ನು ಕೊಟ್ಟಿದ್ದಾರೆಯೋ ಅದನ್ನು ಕಾರ್ಯಗತ ಮಾಡದೆ, ಅಂಜುಬುರುಕುತನದಿಂದ ಕೇಂದ್ರ ಸರ್ಕಾರದವರು ಮಾಡತಕ್ಕದ್ದನ್ನು ನೋಡಿದರೆ ನಮ್ಮ ರಾಜ್ಯ ಎಲ್ಲಿಗೆ ಹೋಗುತ್ತದೆ

† Indicates that the speeches or remarks have not been revised by the member concerned

ಯಾವ ಮಟ್ಟಕ್ಕೆ ಹೋಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ರಾಷ್ಟ್ರದಲ್ಲಿ, ಈ ದೇಶದಲ್ಲಿ ಒಂದು ಧೀರನಾಯಕತ್ವ ಇದೆಯೇ ಎನ್ನುವುದನ್ನು ನಾನು ಚುಚ್ಚಿ ಚುಚ್ಚಿ ಕೇಳುತ್ತೇನೆ. ಈ ದೇಶದಲ್ಲಿ ಅಂಜುಬುರುಕುತನ ನೀತಿ ಇರುವತನಕ ಈ ಸಮಸ್ಯೆ ಅತಿ ಉಗ್ರ ಸ್ವರೂಪವನ್ನು ತಾಳಿ ಈ ದೇಶ ಛಿದ್ರ ಛಿದ್ರವಾಗುವಂತಹ ಸನ್ನಿವೇಶಕ್ಕೆ ಬರುತ್ತದೆ. ಅಂಥಾ ಒಂದು ಸನ್ನಿವೇಶಕ್ಕೆ ನಾವಿಂದು ಬಂದು ನಿಂತಿದ್ದೇವೆ. ಭಾರತದೇಶದಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಆದಮೇಲೆ ಭಾಷಾ ಉದ್ವೇಗದಿಂದ, ಭಾಷಾದ್ವೇಷ ಒಬ್ಬರಿಗೊಬ್ಬರಿಗೆ ದಿನೇ ದಿನೇ ಏರುತ್ತಿದೆ. ಖಂಡಿತವಾಗಿಯೂ ಇವೊತ್ತಿನ ದಿವಸ ಇದು ನಮ್ಮನ್ನ ಅವಮಾನ ಮಾಡತಕ್ಕಂಥ, ತಲೆ ತಗ್ಗಿಸುವ ವಿಚಾರ. ಪ್ರತಿಯೊಬ್ಬರಿಗೂ ಮಾತೃಭಾಷಾಪ್ರೇಮ ಬೇಕು. ಆದರೆ ಇವೊತ್ತಿನ ದಿವಸ ಭಾಷಾಪ್ರೇಮ ಬರುವುದರ ಜೊತೆಗೆ ಭಾಷಾದ್ವೇಷ ಎಷ್ಟುಮಟ್ಟಿಗೆ, ಎಷ್ಟುದೂರ ಹೋಗಿದೆ ಎಂಬುದನ್ನು ನೋಡಿದರೆ ಭಾಷಾರಾಜ್ಯವನ್ನು ರಚನೆ ಮಾಡಿದಂಥಾದ್ದೇ ತಪ್ಪಾಯಿತೋ ಏನೋ ಎನ್ನುವ ಮಟ್ಟಕ್ಕೆ ಭಾಷಾದ್ವೇಷ ಹೋಗುತ್ತಿದೆ. ಭಾಷಾರಾಜ್ಯವನ್ನು ರಚನೆ ಮಾಡುವುದರಲ್ಲಿ 100ಕ್ಕೆ 100ರಷ್ಟು ಒಂದೇ ಭಾಷೆಯನ್ನು ಮಾತನಾಡತಕ್ಕವರನ್ನು ಒಂದೇ ರಾಜ್ಯದಲ್ಲಿ ಇಡತಕ್ಕದ್ದು ಯಾರಿಂದಲೂ ಸಾಧ್ಯವಿಲ್ಲ. ಅಡ್ಮಿನಿಸ್ಟ್ರೇಟೀವ್ ಯೂನಿಟ್ ಮತ್ತು ಜಿಯಾಗ್ರಫಿಕಲ್ ಕಂಟಿನ್ಯುಟಿ ಇವೆಲ್ಲವನ್ನೂ ಆಧಾರವಾಗಿ ಇಟ್ಟುಕೊಂಡು ಭಾಷಾವಾರು ಪ್ರಾಂತ್ಯವನ್ನು ರಚನೆಮಾಡಿದರು. ಬೊಂಬಾಯಿನಲ್ಲಿರತಕ್ಕ ಬೇರೆ ಬೇರೆ ಭಾಷೆಯನ್ನು ಮಾತನಾಡತಕ್ಕ ಜನರೆಲ್ಲರೂ ಗಂಟು ಮೂಟೆ ಕಟ್ಟಿಕೊಂಡು ಹೋಗಿ ಎಂದು ಕಳುಹಿಸುತ್ತಾರೆಯೇ? ಬೆಂಗಳೂರಿನಲ್ಲಿರತಕ್ಕ ಬೇರೆ ಬೇರೆ ಭಾಷೆಯನ್ನು ಮಾತನಾಡತಕ್ಕ ಜನರನ್ನು ಗಂಟು ಮೂಟೆ ಕಟ್ಟಿಕೊಂಡು ಹೊರಗಡೆ ಹೋಗಿ ಎಂದು ಕಳುಹಿಸುವುದಕ್ಕಾಗುತ್ತದೆಯೇ? ಹೀಗೆಯೇ ಯೋಚನೆ ಮಾಡುತ್ತಾ ಹೋದರೆ ದೇಶದಲ್ಲಿ ಭಾಷಾರಾಜ್ಯದಿಂದ ಅತ್ಯಂತ ಅನಾಹುತವಾಗುತ್ತದೆ. ಇವೊತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಬಣ್ಣದ ದ್ವೇಷ, ವರ್ಣ ದ್ವೇಷ ಇದೆ. ಅಮೆರಿಕಾ ದೇಶದಲ್ಲಿ ಕಪ್ಪು ಜನ ಮತ್ತು ಬಿಳಿಯ ಜನ ಎನ್ನತಕ್ಕಂಥ ವರ್ಣ ದ್ವೇಷ ಬಹಳ ವುಗ್ರವಾಗಿ ಬೆಳೆಯುತ್ತಿದೆ. ನಮ್ಮ ದೇಶದಲ್ಲಿ ಭಾಷಾದ್ವೇಷ ಹೀಗೆ ಬೆಳೆದರೆ ರಾಜ್ಯಗಳನ್ನು ಅಗ್ನಿಕುಂಡಕ್ಕೆ ತಳ್ಳಿದಂತಾಗುತ್ತದೆ. ಆದ್ದರಿಂದ ಇದನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದೆ ನಮ್ಮ ರಾಜ್ಯದವರು ಮಹಾರಾಷ್ಟ್ರದಲ್ಲಿ ಎಷ್ಟು ಜನ ಇದ್ದರು ಭಾಷಾವಾರು ಪ್ರಾಂತ್ಯ ಆದನಂತರ ಎಷ್ಟು ಜನ ಇದ್ದಾರೆ ಎನ್ನುವುದನ್ನು ಲೆಕ್ಕ ಹಾಕಿ ನೋಡುವುದಾದರೆ ಬಹಳ ವಿರಳವಾಗಿ ಕಾಣುತ್ತಾರೆ. ಬೊಂಬಾಯಿ ಕಲ್ಯಾಣನಗರ. ಕೇವಲ ಮಹಾರಾಷ್ಟ್ರದವರಿಂದ ಕಟ್ಟಲ್ಪಟ್ಟ ನಗರವಲ್ಲ. ಬೊಂಬಾಯಿ ನಗರವನ್ನು ಇದೇ ಭಾರತ ದೇಶದ ಎಲ್ಲಾ ಜನರೂ ಕಟ್ಟಿದ್ದಾರೆ. ಎಲ್ಲರೂ ತಮ್ಮ ಹಣವನ್ನು ಸುರಿದಿದ್ದಾರೆ, ಶ್ರಮ ಪಟ್ಟು ಬೆವರನ್ನು ಸುರಿಸಿದ್ದಾರೆ. ಆದ್ದರಿಂದ ಬೊಂಬಾಯಿ ನಗರ ಇಡೀ ಭಾರತದ ಕಲ್ಯಾಣನಗರ. ಈ ಬೊಂಬಾಯಿಯನ್ನು ಕಟ್ಟಿದ ಜನತೆ ಅಲ್ಲಿ ಶಾಂತಿಯಿಂದ ಬಾಳಲು ಅವಕಾಶವಿಲ್ಲದಿದ್ದರೆ ಅದಕ್ಕೆ ಇರತಕ್ಕದ್ದು ಒಂದೇ ದಾರಿ. ಅದು ಏನೆಂದರೆ ಇಡಿ ಮುಂಬೈನಗರವನ್ನು ಕೇಂದ್ರಾಡಳಿತ ವ್ಯಾಪ್ತಿಗೆ ಒಳಪಡಿಸತಕ್ಕದ್ದು. ಮುಂಬೈನಗರದಲ್ಲಿರುವ ಬೇರೆ ಭಾಷೆಯ ಜನರನ್ನು ರಕ್ಷಿಸಲು ಮಹಾರಾಷ್ಟ್ರ ಸರ್ಕಾರ ನೂರಕ್ಕೆ ನೂರರಷ್ಟು ವಿಫಲವಾಗಿದೆ ಎರಡನೆಯದಾಗಿ, ಶಿವಸೇನೆಯ ಅತ್ಯಾಚಾರ ಎಷ್ಟರಮಟ್ಟಿಗೆ ನಡೆಯುತ್ತದೆ ಎಂದು ನಿರೀಕ್ಷಿಸಿದ್ದರೋ ಅದರಿಂದ ಬೇರೆ ಭಾಷೆಯ ಜನ ಅಲ್ಲಿ ಶಾಂತಿಯುತವಾಗಿ ಜೀವನ ಮಾಡುವುದಕ್ಕೆ ಶಾಂತ ವಾತಾವರಣವನ್ನು ಕಲ್ಪನೆ ಮಾಡತಕ್ಕದ್ದು ಕೇಂದ್ರ ಸರ್ಕಾರದವರ ಕರ್ತವ್ಯ ಎಂದು ನಾನು ಭಾವನೆ ಮಾಡುತ್ತೇನೆ. ಹಾಗೆಯೇ ಮಹಾರಾಷ್ಟ್ರ ಸರ್ಕಾರದವರು ಬೇರೆ ಭಾಷೆಯನ್ನು ಮಾತನಾಡತಕ್ಕ ಮುಂಬೈನಗರದ ಜನಗಳು ಶಾಂತಿಯಿಂದ ವಾಸ ಮಾಡುವುದಕ್ಕೆ ಶಾಂತ ವಾತಾವರಣವನ್ನು ಕಲ್ಪಿಸಿಲ್ಲ. ನಮ್ಮ ಮೈಸೂರಿನ ಜನ ದಕ್ಷಿಣ ಕನ್ನಡ ಜಿಲ್ಲೆಯಿಂದ ಮುಂಬೈ ನಗರಕ್ಕೆ ಹೋಗಿರತಕ್ಕ ಅನೇಕ ಜನ ಒಳ್ಳೆಯ ಉದ್ಯಮಗಳನ್ನಿಟ್ಟುಕೊಂಡು ಅವರು ಅಲ್ಲಿ ಜೀವನ ಮಾಡುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಹೋಟೆಲ್ ಮಾಲೀಕರು ಅನೇಕ ಜನ ಮುಂಬೈನಲ್ಲಿ ಹೋಟಲನ್ನು ನಡೆಸಿ 20-30 ವರ್ಷಗಳಿಂದ ಸಂಪಾದನೆ ಮಾಡಿದಂತಹ ಆಸ್ತಿಯನ್ನು ಶಿವಸೇನೆಯವರು ಒಂದೇ ದಿವಸದಲ್ಲಿ ಲೂಟಿ ಮಾಡಿ ಸುಟ್ಟು ಹಾಕಿದ್ದರಿಂದ ಅವರು ಅನೇಕ ಜನ ನಿರ್ಗತಿಕರಾಗಿ ಬೀದಿಯ ಪಾಲಾಗಿ ತಿರುಗಾಡುತ್ತಿದ್ದಾರೆ. ಇಂಥಾ ಕೆಲಸವನ್ನು ಶಿವಸೇನೆಯವರು ಮಾಡುವುದಕ್ಕೆ ಮಹಾರಾಷ್ಟ್ರ ಸರ್ಕಾರ ಅವಕಾಶವನ್ನ ಕೊಟ್ಟಿರುವುದನ್ನು ನೋಡಿದರೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಇದೇಯೇ ಎನ್ನತಕ್ಕಂಥ ವಿಚಾರವನ್ನು ನಾವು ಇಲ್ಲಿ ಆಳವಾಗಿ ಯೋಚನೆ ಮಾಡಬೇಕಾಗಿದೆ. ನೆನ್ನೆತಾನೆ ಶ್ರೀಮತಿ ಇಂದಿರಾಗಾಂಧಿಯವರು ಒಂದು ಹೇಳಿಕೆ ಕೊಟ್ಟಿದ್ದಾರೆ. ನಮ್ಮ ಮೈಸೂರಿನ ಪಾರ್ಲಿಮೆಂಟ್ ಸದಸ್ಯರೆಲ್ಲರೂ ಶ್ರೀಮತಿ ಇಂದಿರಾಗಾಂಧಿಯವರಲ್ಲಿ ಹೋಗಿ ಮಹಾಜನ್ ವರದಿಯನ್ನು ತಾವು ಶೀಘ್ರವಾಗಿ ಒಪ್ಪಬೇಕು, ಅದನ್ನು ಕಾರ್ಯಗತ ಮಾಡಬೇಕೆಂದು ಕೇಳಿಕೊಂಡಾಗ ಅವರು ಕಾರ್ಯಗತ ಮಾಡುವುದು ಅಷ್ಟೊಂದು ಸುಲಭವಲ್ಲ, ಅದು ಸೂಕ್ಷ್ಮವಾದ

(ಶ್ರೀ ಎಸ್. ಶಿವಪ್ಪ)

ವಿಚಾರ, ಸಂಬಂಧಪಟ್ಟ ಎಲ್ಲಾ ರಾಜ್ಯಗಳ ಎಲ್ಲಾ ರಾಜಕೀಯ ಮುಖಂಡರೊಡನೆ ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬರಬೇಕಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಈ ಒಂದು ವಿಚಾರದಲ್ಲಿ ರಾಜಕೀಯ ಪಕ್ಷಗಳ ಮುಖಂಡರುಗಳು ಯಾರೇ ಆಗಿರಲಿ, ಒಂದೊಂದು ರಾಜ್ಯದವರು ಒಂದೊಂದು ರೀತಿಯಲ್ಲಿ ವಾದ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಎಲ್ಲಾ ರಾಜ್ಯದ ಮುಖಂಡರುಗಳು ಸೇರಿ ಒಂದು ಒಮ್ಮತಕ್ಕೆ ಬರುತ್ತಾರೆಯೋ ಎನ್ನುವ ಅನುಮಾನವಿದೆ. ಒಮ್ಮತಕ್ಕೆ ಬರುತ್ತಾರೆ ಎಂಬುದನ್ನು ಅಷ್ಟೊಂದು ಸುಲಭವಾಗಿ ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ಈ ಸಮಸ್ಯೆಯನ್ನು ಸುಲಭವಾಗಿ ಪರಿಹಾರ ಮಾಡಬೇಕಾದರೆ ಮುಂಬೈಕಲ್ಯಾಣನಗರದ ದೃಷ್ಟಿಯಿಂದ, ರಾಷ್ಟ್ರದ ಹಿತದೃಷ್ಟಿಯಿಂದ ಮಹಾರಾಷ್ಟ್ರ ರಾಜ್ಯವನ್ನು ಕೇಂದ್ರದ ವಶಕ್ಕೆ ತಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಇವತ್ತಿನ ದಿವಸ ಮಹಾರಾಷ್ಟ್ರದವರಿಗೆ ಹೆದರಿ ಕೇಂದ್ರ ಸರ್ಕಾರದವರು ಈ ಸಮಸ್ಯೆಯನ್ನು ಬಗೆಹರಿಸದೆ ತಮ್ಮ ಅಂಜುಬುರುಕನೀತಿಯನ್ನು ತೋರಿಸುತ್ತಿದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ. ಇವತ್ತು ನಮ್ಮ ಸಹನೆಗೂ ಒಂದು ಮಿತಿ ಇದೆ. ಮಹಾರಾಷ್ಟ್ರದವರು ನಮ್ಮ ರಾಜ್ಯದಲ್ಲಿಯೂ ಇದ್ದಾರೆ. ಇವರ ಮೇಲೆ ನಾವು ಹಲ್ಲೆ ಮಾಡುವುದು ಕಷ್ಟವೇನಲ್ಲ. ಇದನ್ನು ಮಹಾರಾಷ್ಟ್ರದವರು ತಿಳಿದುಕೊಳ್ಳಬೇಕಾಗಿದೆ ಮತ್ತು ಅವರಿಗೆ ಎಚ್ಚರಿಕೆ ಕೊಡಬೇಕಾಗಿದೆ. ಈ ಶಿವಸೇನೆಯ ಹಿಂಸಾತ್ಮಕ ಕೃತ್ಯದಿಂದ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿಯೂ ರಕ್ತ ಮಿಡಿಯುತ್ತಿದೆ. ಇದನ್ನು ಮಹಾರಾಷ್ಟ್ರದವರು ಅರಿತುಕೊಳ್ಳಬೇಕು. ನಾನೇನು ಮಹಾರಾಷ್ಟ್ರದವರ ಮೇಲೆ ಹಲ್ಲೆ ನಡೆಸಬೇಕೆಂದು ಹೇಳುತ್ತಿಲ್ಲ. ಒಂದು ರಾಷ್ಟ್ರ ಮುಂದುವರಿಯಬೇಕಾದರೆ ಇಂತಹ ದ್ವೇಷ ಭಾವನೆಗಳು, ಜಾತೀವಾದಗಳು ಮೊದಲು ಮಾಯವಾಗಬೇಕು. ಗುಂಪುಗುಳಿತನ ಮಾಯವಾಗಬೇಕು. ಇದು ಆಗದಿದ್ದರೆ ರಾಷ್ಟ್ರದ ಏಳಿಗೆ ಸಾಧ್ಯವಿಲ್ಲವೆಂದು ಪ್ರತಿಯೊಬ್ಬರೂ ಳಿದುಕೊಳ್ಳಬೇಕಾಗಿದೆ. ಆದರೆ ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಮತ್ತು ಬೇರೆ ರಾಜ್ಯಗಳಲ್ಲಿ ಜಾತೀವಾದ ಎನ್ನುವುದು ಇತಿಮಿತಿ ಇಲ್ಲದೆ ಹೆಡಂಭೂತವಾಗಿ ಬೆಳೆದುಕೊಂಡು ಹೋಗುತ್ತಿದೆ. ಇದು ಇದೇ ರೀತಿ ಬೆಳೆದರೆ, ಯಾರು ಬೆಳೆಯುವುದಕ್ಕೆ ಕಾರಣರಾಗಿರುತ್ತಾರೋ ಅಂತಹವರಿಗೆ ಮುಂದೆ ತಿರುಗಿ ಬೀಳುತ್ತದೆ ಎಂಬುದನ್ನು ಅವರುಗಳು ತಿಳಿದುಕೊಳ್ಳುವುದು ಒಳ್ಳೆಯದು. ಇವತ್ತಿನದಿವಸ ನಮ್ಮವರು, ತಮ್ಮವರು ಎಂದು ಅವರು ಹೇಳಿದಂತೆ ಕೇಳಿಕೊಂಡು ಈ ಜಾತೀವಾದವನ್ನು ಮುಂದುವರಿಸಿದರೆ ಮುಂದೆ ತಮ್ಮನ್ನೇ ನುಂಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಭಾಷಾವಾದ, ಜಾತೀವಾದ ಎಂಬ ಹೆಸರಿನಿಂದ ಕೆಲವರು ಉಗ್ರವಾದ ತಪ್ಪುಗಳನ್ನು ಮಾಡುತ್ತಿದ್ದಾರೆ. ಇವನ್ನು ಇದೇ ರೀತಿ ಬೆಳೆಸುತ್ತಾ ಹೋದರೆ ಈ ದೇಶದಲ್ಲಿ ರಾಷ್ಟ್ರೀಯತೆ ಎನ್ನುವುದೇ ಹಾಳಾಗುತ್ತದೆ. ಈ ಶಿವಸೇನೆಯ ಹಿಂಸಾತ್ಮಕ ಚಟುವಟಿಕೆಗಳಿಂದ ಮೈಸೂರು ರಾಜ್ಯದ ಜನರಿಗೆ ಬಹಳ ನಷ್ಟವಾಗಿದೆ. ಇದನ್ನು ಖಂಡ ತುಂಡವಾಗಿ ಖಂಡಿಸಬೇಕಾಗಿದೆ. ಮೈಸೂರಿನವರಿಗೆ ಆಗಿರುವ ನಷ್ಟವನ್ನು ಮಹಾರಾಷ್ಟ್ರ ಸರ್ಕಾರದವರು ತುಂಬಿಕೊಡಬೇಕು. ಇದು ಆ ಸರ್ಕಾರದ ಕರ್ತವ್ಯವಾಗಿದೆ. ಇನ್ನು ಮುಂದೆ ನಮ್ಮ ರಾಜ್ಯದವರು ಆ ರಾಜ್ಯದಲ್ಲಿ ನಿತ್ಯಜೀವನದಲ್ಲಿ ಅಡ್ಡಿ ಆತಂಕಗಳು ಇಲ್ಲದೆ ಜೀವನವನ್ನು ಮುಂದುವರಿಸಿಕೊಂಡು ಹೋಗುವಂತೆ ಶಾಂತ ವಾತಾವರಣವನ್ನು ಕಲ್ಪಿಸಿಕೊಡುವುದು ಆ ಸರ್ಕಾರದ ಕರ್ತವ್ಯವಾಗಿದೆ. ಇದನ್ನು ಮಾಡಲು ಆ ಸರ್ಕಾರದವರು ವಿಫಲರಾದರೆ ಕೇಂದ್ರ ಸರ್ಕಾರದವರು ಮುಂದೆ ಬಂದು ಆ ಕೆಲಸವನ್ನು ಮಾಡಿಕೊಡಬೇಕು. ಕೇವಲ ನಾವು ಮಾತಿನಿಂದ ಹೇಳುತ್ತಿದ್ದೇವೆಂದು ಅವರು ತಿಳಿದುಕೊಳ್ಳಬಾರದು. ಈ ವಿಷಯದ ಬಗ್ಗೆ ಕಾಂಗ್ರೆಸ್ ಸಂಸ್ಥೆಯಲ್ಲಿಯೂ ಸಹ ಪ್ರತ್ಯೇಕವಾಗಿ ಚರ್ಚೆಯಾಗಿದೆ. ಈಗ ಆಗಿರುವ ನಷ್ಟವನ್ನು ಆ ಸರ್ಕಾರದವರು ತುಂಬಿಕೊಡದಿದ್ದರೆ ಮುಂದಿನ ಕಾರ್ಯವನ್ನು ಯೋಚನೆ ಮಾಡಬೇಕಾಗುತ್ತದೆ. ಇವತ್ತಿನದಿವಸ ಈ ಶಿವಸೇನೆಯ ಅತ್ಯಾಚಾರದ ಫಲವಾಗಿ ಬೇರೆ ಕಡೆಗಳಲ್ಲಿ ಗೋಪಾಲಸೇನೆ, ಲಚಿತ್‌ಸೇನೆ, ಭೀಮಸೇನೆಗಳು ರಚಿತವಾಗಿವೆ. ಈ ರೀತಿ ಸೇನೆಗಳು ಉದ್ಭವವಾಗುತ್ತಿರುವುದನ್ನು ನೋಡಿದರೆ ಈ ದೇಶಕ್ಕೆ ಮುಕ್ತಿ ಇಲ್ಲ ಎಂಬ ವಾದಕ್ಕೆ ಬಂದಿದ್ದೇವೆ. ಈ ಸೇನೆಗಳ ಕಾರಣದಿಂದ ಪ್ರಜಾಪ್ರಭುತ್ವಕ್ಕೆ ಮನ್ನಣೆ ಇಲ್ಲವಾಗಿದೆ. ಕೇಂದ್ರ ಸರ್ಕಾರಕ್ಕೆ ಕೇವಲ ಮಾತಿನಿಂದ ಯಾವ ವಿಷಯಗಳೂ ಅರಿವಾಗುತ್ತಿಲ್ಲ. ಇಂತಹ ಸೇನೆಗಳು ಗುಂಡಿನ ಸುರಿಮಳೆಯನ್ನು ಕರೆದು, ಅತ್ಯಾಚಾರ ನಡೆಸಿದ ಮೇಲೆ ಮಾತ್ರ ವಿಷಯದ ಅರಿವಾಗುತ್ತಿದೆ ಮಹಾಜನ್ ವರದಿಯನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಂಡು ಕಾರ್ಯಗತ ಮಾಡದಿದ್ದರೆ ಮುಂದೆ ನಾವು ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ವಿಚಾರದಲ್ಲಿ ಕೇಂದ್ರದಲ್ಲಿರುವ ನಮ್ಮ ರಾಜ್ಯದ ಮಂತ್ರಿಗಳು ಸಹ ಉಗ್ರವಾದ ಪ್ರತಿಭಟನೆಯನ್ನು ಸಲ್ಲಿಸಬೇಕು. ಮತ್ತು ಪಾರ್ಲಿಮೆಂಟ್‌ನಲ್ಲಿರುವ ನಮ್ಮ ರಾಜ್ಯದ ಸದಸ್ಯರುಗಳು ಸಹ ಉಗ್ರವಾದ ಪ್ರತಿಭಟನೆಯನ್ನು

ನಲ್ಲಿಸಬೇಕು. ಶೀಘ್ರವಾಗಿ ಈ ವರದಿಯನ್ನು ಕಾರ್ಯಗತ ಮಾಡದಿದ್ದರೆ ರಾಜೀನಾಮೆ ಕೊಡುವುದಕ್ಕೂ ತಯಾರಿರಬೇಕು. ಇವತ್ತಿನದಿವಸ ಶಿವಸೇನೆಯವರು ಬೇರೆ ರಾಜ್ಯದ ಜನರ ಮೇಲೆ ಅತ್ಯಾಚಾರ ಮತ್ತು ಹಿಂಸಾತ್ಮಕ ಕೃತ್ಯಗಳನ್ನು ನಡೆಸಿದ್ದಾರೆ. ರಾಕ್ಷಸೀಕೃತ್ಯವನ್ನು ಪಾಶವೀ ಕೃತ್ಯವನ್ನು ನಡೆಸಿದ್ದಾರೆ. ಈ ಬಗ್ಗೆ ಉಗ್ರವಾದ ಪ್ರತಿಭಟನೆಯನ್ನು ಈ ಸಭೆ ಮಾಡಬೇಕಾಗಿದೆ. ಈ ವಿಚಾರದಲ್ಲಿ ಕೇಂದ್ರದ ಮಂತ್ರಿಗಳ ಮೇಲೆ, ಪಾರ್ಲಿಮೆಂಟ್ ಸದಸ್ಯರುಗಳ ಮೇಲೆ ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ದೊಡ್ಡ ಜವಾಬ್ದಾರಿ ಇದೆ. ಹೋದ ತಿಂಗಳು ಈ ವಿಚಾರದಲ್ಲಿ ಚರ್ಚೆ ಮಾಡಲು ಮೈಸೂರಿನ ಮುಖ್ಯಮಂತ್ರಿಗಳಿಗೆ ಆಹ್ವಾನ ಕಳಿಸಿದ್ದೆ, ಅವರು ಬೇರೆ ಕಾರಣಗಳಿಂದ ಬರಲಿಲ್ಲ ಎನ್ನುವ ಮಾತನ್ನು ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದಾರೆ. ಈ ವಿಷಯವನ್ನು ಇವತ್ತಿನ ಪತ್ರಿಕೆಯಲ್ಲಿ ಓದಿದ್ದೇನೆ. ಮತ್ತೆ ಪ್ರಧಾನಮಂತ್ರಿಗಳು ಮುಖ್ಯಮಂತ್ರಿಗಳನ್ನು ಕರೆಸಿ ಮಾತನಾಡಬಹುದು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಸಹ ಕರೆಸಿ ಮಾತನಾಡಿ ಏನಾದರು ತೀರ್ಮಾನ ಮಾಡಬೇಕಾಗಿದೆಯೆಂದು ಸಹ ಹೇಳಿದ್ದಾರೆ. ಕೇವಲ ಸಂಬಂಧಪಟ್ಟವರನ್ನು ಕರೆಸಿ ಮಾತನಾಡುವುದರಿಂದ ಕಾರ್ಯಸಾಧನೆಯಾಗುತ್ತದೆ ಎಂಬ ನಂಬಿಕೆ ನನಗಿಲ್ಲ. ಇದುವರೆಗೆ ಮಾತನಾಡಿ, ಚರ್ಚೆ ಮಾಡಿ ಮುಗಿದುಹೋಗಿದೆ. ಈ ವಿಷಯವನ್ನು ಕಾರ್ಯಗತ ಮಾಡಬೇಕಾದರೆ ನಾನು ಮೊದಲೇ ಸಲಹೆ ಮಾಡಿದಂತೆ ನಮ್ಮ ರಾಜ್ಯದ ಪಾರ್ಲಿಮೆಂಟ್ ಸದಸ್ಯರುಗಳು, ಕೇಂದ್ರದಲ್ಲಿರುವ ನಮ್ಮ ರಾಜ್ಯದ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಖಂಡತುಂಡಾವಾಗಿ ಜಾಗ್ರತೆ ಕಾರ್ಯಗತ ಮಾಡದಿದ್ದರೆ ಮುಂದೆ ಏನು ಮಾಡುತ್ತೇವೆ ಎಂಬುದನ್ನು ತಿಳಿಸಬೇಕು. ಈ ವರ್ಷ ಗಾಂಧಿಜೀಯವರ ಶತಾಬ್ದಿ ನಡೆಯುತ್ತದೆ. ಈ ವರ್ಷದಲ್ಲಿ ಶಾಂತಿಯುತವಾಗಿ ಈ ವಿಷಯವನ್ನು ಪರಿಹರಿಸಿಕೊಳ್ಳುವುದು ಉತ್ತಮವಾದ ಮಾರ್ಗ ಎಂದು ನಂಬಿದ್ದೇನೆ. ಕೇವಲ ಹೇಡಿಯ ಅಸ್ತ್ರವಲ್ಲದೆ ಧೀರನ ಅಸ್ತ್ರವನ್ನು ಸಹ ಉಪಯೋಗ ಮಾಡುವ ಶಕ್ತಿ ಮೈಸೂರಿನ ಜನತೆಗೆ ಮತ್ತು ಈ ಶಾಸನಸಭೆಗೆ ಇದೆಯೆಂದು ಹೇಳಿ, ಈ ಶಿವಸೇನೆಯ ಕಾರ್ಯವನ್ನು ಖಂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

9-30 A.M.

ಶ್ರೀಮತಿ ಕೆ. ನಾಗರತ್ನಮ್ಮ ಹೀರೇಮಠ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ ಮೊನ್ನೆ ಮುಂಬಯಿಯಲ್ಲಿ ನಡೆದಂತಹ ಶಿವಸೇನೆ ಕೃತ್ಯವನ್ನು ಖಂಡಿಸಿ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ.

ಮನುಷ್ಯ ಪ್ರಖ್ಯಾತಿ ಪಡೆಯುವುದು ತುಂಬಾ ಕಷ್ಟ. ಕುಖ್ಯಾತಿ ಪಡೆಯುವುದು ಅತಿ ಸುಲಭ. ಪ್ರಖ್ಯಾತಿ ಪಡೆಯಲು ಪ್ರತಿಭೆಬೇಕು. ಕುಖ್ಯಾತಿಗೆ ಕ್ರೌರ್ಯತೆಬೇಕು. ಪ್ರಖ್ಯಾತಿಗೆ ಅವಕಾಶವಿಲ್ಲದಾಗ ರಾಕ್ಷಸೀ ಮಹತ್ವಾಕಾಂಕ್ಷಿಗಳು ಕುಖ್ಯಾತಿಯ ಮಾರ್ಗ ಹಿಡಿಯುತ್ತಾರೆ. 'ಯೇನಕೇನ ಪ್ರಕಾರೇಣ ಪ್ರಸಿಧ್ಧೋ ಪುರುಷೋ ಭವ' ಎಂತಾಗಲೀ, ಏನಾಗಲಿ, ಅನಿಷ್ಟವಾಗಲೀ ಅತಿರೇಕವಾಗಲೀ ಜನತೆಯ ದೃಷ್ಟಿಗೆ ಬರಲು ಪ್ರಯತ್ನಿಸುತ್ತಾರೆ. ಸ್ವಾತಂತ್ರ್ಯ ಬಂದನಂತರ ನಮ್ಮ ರಾಷ್ಟ್ರದಲ್ಲಿ ಇಂತಹ ವಿಚಿತ್ರ ಘಟನೆಗಳು ರಾಕ್ಷಸೀ ಕೃತ್ಯಗಳು ಅಗಿಂದಾಗ್ಗೆ ಸಂಭವಿಸುತ್ತವೆ. ಅಂತಹ ಭಯಂಕರ ಪೈಶಾಚಿಕ ಕೃತ್ಯ ಮೊನ್ನೆ ಬೊಂಬಾಯಿಯ ಮಹಾ ನಗರದಲ್ಲಿ ಶಿವಸೇನೆಯಿಂದ ನಡೆಯಿತು. ರಾಷ್ಟ್ರದ ಇತಿಹಾಸದಲ್ಲಿ ಇದು ರಕ್ತಾಕ್ಷರಗಳಿಂದ ಬರೆಯಬೇಕಾದ ವಿಚಾರ. ಭಾಷಾಂಧತೆ ಮತ್ತು ಪ್ರಾಂತ್ಯಾಂಧತೆಗಳ ಹುಚ್ಚು ಹಿಡಿದ ಈ ಶಿವಸೇನೆ ಬೇರೆ ಪ್ರಾಂತ್ಯಗಳಿಂದ ಬಂದು ನೆಲಸಿದ್ದ ಬೇರೆ ಭಾಷೆಗಳವರ ಆಸ್ತಿಪಾಸ್ತಿ ಪ್ರಾಣಹಾನಿಗಳನ್ನುಂಟುಮಾಡಿದ್ದು ಪೈಶಾಚಿಕ ಕೃತ್ಯ. ಅದರಲ್ಲಿಯೂ ಕನ್ನಡಿಗರ ಮೇಲೆ ಹುಚ್ಚು ಉನ್ಮಾದತೆಯಿಂದ ವರ್ತಿಸಿ ತುಂಬಲಾರದ, ಮರೆಯಲಾರದ ಕಷ್ಟ ನಷ್ಟಗಳನ್ನುಂಟುಮಾಡಿ ನಿರಪರಾಧಿಗಳನೇಕರು ಪ್ರಾಣ ಕಳೆದುಕೊಂಡರು. ಮಹಾತ್ಮಾ ಗಾಂಧಿಜಿಯವರನ್ನು ಜ್ಞಾಪಿಸಿ ಕೊಂಡಕೂಡಲೇ ಗೋಡ್ಸೆಯೂ ಜ್ಞಾಪಕಕ್ಕೆ ಬರುವಂತೆ ಮಹಾನಗರ ಬೊಂಬಾಯಿ ಜ್ಞಾಪಿಸಿಕೊಂಡ ಕೂಡಲೇ ಬಾಳಠಾಕ್ರೆ—ಹಾಗೂ ಶಿವಸೇನೆ ಕೂಡಲೇ ಜ್ಞಾಪಕಕ್ಕೆ ಬರುತ್ತದೆ. ಧರ್ಮ ಸ್ಥಾಪಕ, ದಯಾಪರ, ನೀತಿಮೂರ್ತಿ ಮಹಾಪುರುಷ ಶಿವಾಜಿಯ ಹೆಸರಿನ ಮೇಲೆ ಈ ಶಿವಸೇನೆ ಅಂಕಿತ ಇಟ್ಟುಕೊಂಡಿರುವುದು ತುಂಬಾ ನಾಚಿಕೆಗೇಡು. ಆ ಮಹಾ ಪುರುಷ ಶಿವಭಾನುವಿನ ಪವಿತ್ರ ನಾಮಕ್ಕೆ ಮಸಿ ಬಳಿಯುವ ಪ್ರಯತ್ನವಲ್ಲದೇ ಮತ್ತೇನು ಎಂದು ಇಲ್ಲಿ ಪ್ರಶ್ನಿಸಬೇಕಾಗಿದೆ.

ಭಾರತದ ಮಕುಟಪ್ರಾಯನಗರ ಬೊಂಬಾಯಿ ಇಂತಹ ಕ್ರೂರ ದಬ್ಬಾಳಿಕೆಗೆ ಒಳಗಾದಾಗ ಮಹಾರಾಷ್ಟ್ರ ಸರಕಾರ ಮುಂಜಾಗರೂಕತೆಯನ್ನು ವಹಿಸಲಿಲ್ಲ, ಮಹತ್ವ ರಕ್ಷಣೆಯ ಹೊರೆಯನ್ನು

(ಶ್ರೀಮತಿ ಕೆ. ನಾಗರತ್ನಮ್ಮ)

ಹೊರಲಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. ಈ ಹತ್ಯಾಕಾಂಡಕ್ಕೆ ಕಾರಣರಾದವರನ್ನು ನಿರ್ದಯತೆಯಿಂದ ಶಿಕ್ಷಿಸುವುದನ್ನು ಬಿಟ್ಟು ಆದ ಅನ್ಯಾಯಗಳಿಗೆ ಗೂಂಡಾಗಳನ್ನು ಗುರಿ ಮಾಡಿ ಶಿವಸೇನೆಗೆ ಪರೋಕ್ಷ ರಕ್ಷಣೆ ಒದಗಿಸಿದ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಕರ್ತವ್ಯದ ಬಗ್ಗೆ ದೇಶಾಭಿಮಾನಿಗಳಿಗೆಲ್ಲಾ ಸಂದೇಹ ಬಂದಿದೆ.

ಶಿವಸೇನೆ ನಡೆಸಿದ ಈ ಪೈಶಾಚಿಕ ಕೃತ್ಯ ಪೂರ್ವನಿಯೋಜಿತವಾದ್ದು ಎಂಬುದಕ್ಕೆ ಸಾಕಷ್ಟು ಆಧಾರ ಕೊಡಬಹುದು. ಮಹಾರಾಷ್ಟ್ರ ಮಹಾರಾಷ್ಟ್ರಿಯರಿಗೆ ಎಂಬ ಶಿವಸೇನೆಯ ಧೋರಣೆಯನ್ನು ಮಹಾರಾಷ್ಟ್ರದ ಕೆಲವು ರಾಜಕೀಯ ಪಕ್ಷಗಳೂ ಸರಕಾರವೂ ಪ್ರೋತ್ಸಾಹಿಸಿದರು. ಚುನಾವಣೆಗಳಲ್ಲಿ ಉಪಯೋಗ ಪಡೆದರು. ಶಿವಸೇನೆಯ ಮಾರ್ಮಿಕ ಪತ್ರಿಕೆಗೆ ಪ್ರೋತ್ಸಾಹಿಸುತ್ತಾ ಬಂದರು. ಹೀಗಾಗಿ ಶಿವಸೇನೆ ಬಲತು ಬೊಂಬಾಯಿಯನ್ನು ಮರಾಠಿಕರಣ ಮಾಡಲು ಮೊನ್ನೆಯ ಪೈಶಾಚಿಕ ಕೃತ್ಯಕ್ಕೆ ತೊಡಗಿತು. ಬೊಂಬಾಯಿ ಇವರ ಯಾರ ಜಹಗೀರೂ ಅಲ್ಲ. ಅದನ್ನು ಬೆಳೆಸಿ ಉಳಿಸಿಕೊಂಡು ಬಂದವರು ಪಾರ್ಸಿಗಳು, ಗುಜರಾತಿಗಳು, ಮಾರ್ವಾಡಿಗಳು, ಖೋಜಾ, ಮೆಮನ್ಸ್ ಮುಂತಾದವರು ನಾನಾ ಭಾಷೆಯ ನಾನಾ ಜನಾಂಗದವರು. ಹಾಗೆ ನೋಡಿದರೆ ಮರಾಠಿಗರು ಪ್ರತ್ಯೇಕ ಪ್ರಾಂತವಾಗುವವರೆಗೂ ಅಲ್ಪಸಂಖ್ಯಾತರೇ ಆಗಿದ್ದರು. 1947 ರಿಂದ ಬೊಂಬಾಯಿಯನ್ನು ಅವರಿಸುತ್ತಾ ಬಂದರು. ಗದ್ದಲ ಮಾಡಿ ಗುಜರಾತಿಗಳು ಬೇರೆ ರಾಜ್ಯ ಮಾಡಿಕೊಳ್ಳುವಂತೆ ಮಾಡಿದರು. ಮೊನ್ನೆ ನಡೆದ ದೊಂಬಿಯಲ್ಲಿ ಯಾರನ್ನೂ ಕೊಲ್ಲಬಾರದು, ಗುಂಡು ಹಾರಿಸಬಾರದು ಎಂದು ಪೋಲೀಸರಿಗೆ ಗೃಹ ಶಾಖೆ ಸೂಚಿಸಿದ್ದಾಗಿ ತಿಳಿದು ಬಂದಿದೆ. ಮಾಡುವುದೆಲ್ಲಾ ಮಾಡಲಿ ನಂತರ ನೋಡಿಕೊಳ್ಳೋಣ ಎಂಬ ಧೋರಣೆ ಮಹಾರಾಷ್ಟ್ರ ಸರಕಾರಕ್ಕೆ ಇದ್ದಂತೆ ಕಾಣುತ್ತದೆ. ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋದ ಕೂಡಲೇ ಸೈನ್ಯ ಕರೆಸಿ ಪುಂಡರ ಹುಟ್ಟಡಗಿಸಬಹುದಾಗಿತ್ತು. ಮಹಾರಾಷ್ಟ್ರಿಯರೇ ಆದ ಕೇಂದ್ರದ ಗೃಹ ಸಚಿವರೂ ಶಿವಸೇನೆಯ ಕೃತಿಗಳು ಫ್ಯಾಸಿಸ್ಟ್ ಎಂದು ಕರೆದ ಮಾತ್ರಕ್ಕೆ ಹೊಣೆಗಾರಿಕೆಯಿಂದ ಜಾರಿಕೊಳ್ಳುವುದಿಲ್ಲ. ಮುಂಬಯಿ ಮರಾಠರದ್ದು ಎನ್ನುವ ಪೈಶಾಚಿಕ ಘೋಷಣೆಯ ಮರೆಯಲ್ಲಿ ಅಖಂಡ ಭಾರತವನ್ನು ಭಕ್ಷಿಸಲು ಹೊರಟಿರುವ ಈ ಭಸ್ಮಾಸುರ ನಾಶವಾದ ಹೊರತು ಭಾರತದ ಭದ್ರತೆಗೆ ಅಪಾಯ ಕಟ್ಟಿಟ್ಟದ್ದು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಲ್ಲದೆ ಶಿವಸೇನೆಗೆ ಉರಿ ಹಸ್ತವನ್ನಿತ್ತ ಮರಾಠ ಮುಖಂಡರ ಗತಿಯೇನು ಎಂದು ಆಶ್ಚರ್ಯ ಪಡಬೇಕಾಗಿದೆ. ಬೆಳಗಾವಿನ ಬಗ್ಗೆ ಹುಚ್ಚು ವ್ಯಾಮೋಹವನ್ನು ಇಟ್ಟುಕೊಂಡಿರುವ ಮಹಾರಾಷ್ಟ್ರಿಯರಿಗೆ ಕನಸಿನಲ್ಲಿಯೂ ಬೆಳಗಾವಿಯನ್ನು ಕಾಣಲು ಬಿಡುವುದಿಲ್ಲ. ಹಿಟ್ಲರು 1941ರಲ್ಲಿ ಮಾಸ್ಕೋವನ್ನು ಸಮುದ್ರದಲ್ಲಿ ಮುಳುಗಿಸುತ್ತೇನೆ ಎಂದು ಹೇಳಿದಂತೆ ಕೇಂದ್ರ ಮಂತ್ರಿಗಳು ಮುಂಬಯಿಗೆ ಕಾಲಿಡದಂತೆ ಮಾಡುತ್ತೇನೆ ಎಂದು ಅಟ್ಟಹಾಸದಿಂದ ಹೇಳಿದ, ಶಿವಸೇನೆಯ ನಾಯಕ ಬಾಳಠಾಕ್ರೆಯೊಡನೆ ಹೊಣೆಗಾರರು ಒಪ್ಪಂದಕ್ಕೆ ಬಂದಿದ್ದರು ಎಂಬ ವಿಚಾರ ಕೇಳಿದರೆ ಮಹಾರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಇದೆಯೇ ಎಂದು ಪ್ರಶ್ನಿಸಬೇಕಾಗುತ್ತದೆ. ನಮ್ಮ ರಾಜ್ಯದ ಮರಾಠಿ ಪುಸ್ತಕ ಭಂಡಾರ ಒಂದಕ್ಕೆ ಮತೀಗೇಡಿಗಳು ನಷ್ಟವುಂಟು ಮಾಡಿದ್ದಕ್ಕಾಗಿ ನಮ್ಮ ಸರಕಾರ ಉದಾರತೆಯಿಂದ ಸಹಾಯ ನೀಡಿತು. ಈಗ ಮುಂಬಯಿಯಲ್ಲಿ ನಮ್ಮವರಿಗೆ ಆಗಿರುವ ಕೋಟ್ಯಾಂತರ ನಷ್ಟಕ್ಕೆ ಪರಿಹಾರ ದೊರಕಿಸಿಕೊಳ್ಳಲು ನಮ್ಮ ಸರಕಾರ ದಿಟ್ಟ ಮಾರ್ಗದಿಂದ ಪ್ರಯತ್ನಿಸಬೇಕು. ಈ ಬಗ್ಗೆ ನಿದಾರ್ಕ್ಷಿಣ್ಯ, ನಿಷ್ಠುರ ಕ್ರಮಗಳನ್ನು ಕೈಗೊಳ್ಳಬೇಕು. ಇದೆಲ್ಲಕ್ಕೂ ಮಿಗಿಲಾದ ಮಾರ್ಗವೆಂದರೆ ವಿವಿಧ ಭಾಷೆ ಸಂಸ್ಕೃತಿಗಳಿರುವ ಮಹಾನಗರ ಪ್ರಾಂತ್ಯಾಂಧರ ಭಾಷಾಂಧರ ಆಳ್ವಿಕೆಯಲ್ಲಿದ್ದರೆ ಎಂದಿದ್ದರೂ ಅಪಾಯಕ್ಕೆ ಕಾರಣ. ಈ ಮಹಾ ನಗರ ಕೇಂದ್ರದ ಆಡಳಿತಕ್ಕೆ ಒಳಪಡುವುದು ಭಾರತದ ಭದ್ರತೆಯ ದೃಷ್ಟಿಯಿಂದ ಶ್ರೇಷ್ಠ ಮಾರ್ಗ ಎಂದು ಹೇಳಬೇಕಾಗಿದೆ. ಕೇಂದ್ರ ಸರಕಾರ ದೇಶ ವಿಚ್ಛಿದ್ರಕಾರಕ ಶಿವಸೇನೆಗಳಂತಹ ಸೇನೆ ಮತ್ತು ಸಂಸ್ಥೆಗಳನ್ನು ಮಟ್ಟಹಾಕಲು ನಿದಾರ್ಕ್ಷಿಣ್ಯ ನಿಷ್ಠುರ ಕಾರ್ಯಕ್ರಮ ಕೈಗೊಳ್ಳಲೆಂದು ಹಾರೈಸುತ್ತೇನೆ. ಇಷ್ಟೆಲ್ಲಾ ಹತ್ಯಾಕಾಂಡ ನಡೆದಿದ್ದರೂ ಕಣ್ಣಿದ್ದರೂ ಕುರುಡರಂತೆ, ಕಿವಿಯಿದ್ದೂ ಕಿವುಡರಂತೆ ಕೇಂದ್ರ ಗೃಹ ಸಚಿವರು, ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಇನ್ನೂ ಅಧಿಕಾರದಲ್ಲಿ ಮುಂದುವರಿಯುತ್ತಿರುವುದನ್ನು ನೋಡಿದರೆ ಯಾವ ನಾಗರಿಕ ಸರಕಾರವಾದರೂ ನಾಚಿಕೆಯಿಂದ ತಲೆ ತಗ್ಗಿಸಬೇಕು. ಅರಿತರೆ ಆರು ಪಟ್ಟು ಮರೆತರೆ ಮೂರು ಪಟ್ಟು ಎನ್ನುವಂತೆ ಮಾಡದೆ ಇದರ ಬಗ್ಗೆ ನಮ್ಮ ಸರಕಾರದವರೂ ಸೂಕ್ತವಾದ ಕ್ರಮಗಳನ್ನು ದಿಟ್ಟತನದಿಂದ ಕೈಗೊಳ್ಳಬೇಕು. ಸದ್ಯಕ್ಕಾದರೂ ಕೇಂದ್ರದ ರಿಜರ್ವ್ ಪೋಲೀಸು ಪಡೆಯನ್ನು ದಕ್ಷಿಣ ಭಾರತೀಯರ ರಕ್ಷಣೆಗಾಗಿ ಇಡಬೇಕೆಂದು ಸಲಹೆ ಮಾಡುತ್ತೇನೆ.

(ಇಲಾಖಾ ಗ್ರಂಥಾಲಯ) (B)
ಪುಸ್ತಕ ಕ್ರಮಾಂಕ Accession No. 4.866
ದಿನಾಂಕ Date

ಇನ್ನು ಮೊನ್ನೆ ನಡೆದಂಥ ಗಲಭೆಯಲ್ಲಿ ಮಡಿದಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಹಾರೈಸಿ ಆ ಗಲಭೆಯಲ್ಲಿ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿರತಕ್ಕವರ ಬಗ್ಗೆ ಸಹಾನುಭೂತಿಯನ್ನು ತೋರಿಸಿ, ಇಂತಹ ಅತ್ಯಾಚಾರಗಳು, ಅಹಿಂಸಾ ಕೃತ್ಯಗಳು, ಪೈಶಾಚಿ ಕೃತ್ಯಗಳು ಇನ್ನು ಮೇಲೆ ಎಲ್ಲೆಲ್ಲೂ ನಡೆಯದಂತೆ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದವರೇ ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಹಾಗೆ ಕೈಗೊಳ್ಳದೇ ಇದ್ದರೆ ಅವರಾಗಿಯೆ ಈ ಜನರ ಕುಚೋದ್ಯಕ್ಕೆ ಕಾರಣರಾಗುತ್ತಾರೆ. ಆದುದರಿಂದ ನಿರ್ದಾಕ್ಷಿಣ್ಯವಾಗಿ. ದಯಾದಾಕ್ಷಿಣ್ಯ ಇಲ್ಲದೇ ನಿರ್ದಯವಾಗಿ ಕ್ರಮ ತೆಗೆದುಕೊಳ್ಳಿ ಎಂದು ಸೂಚಿಸುತ್ತೇನೆ. ಮತ್ತು ಈ ಶಿವಸೇನೆಯ ಕೃತ್ಯವನ್ನು ಖಂಡಿಸಿ ಬೊಂಬಾಯಿನಲ್ಲಿ ನೆಲೆಸಿರುವಂಥಾ ಅಲ್ಪಸಂಖ್ಯಾತರು ಕನ್ನಡಿಗರೇ ಆಗಲಿ, ಯಾರೇ ಆಗಿರಲಿ ಅವರ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಮತ್ತೊಮ್ಮೆ ಶಿವಸೇನೆಯ ಕೃತ್ಯವನ್ನು ಖಂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಮುಂಬಯಿಯಲ್ಲಿ ಸುಮಾರು 10 ಲಕ್ಷ ಜನ ಕನ್ನಡಿಗರಿಗೆ ಆದಂಥ ಸಾವುನೋವುಗಳ ಬಗ್ಗೆ ಈ ಸಭೆ ಉಗ್ರತನವನ್ನೂ ಖಂಡನೆಯನ್ನೂ ಪ್ರದರ್ಶಿಸಬೇಕಾಗಿದೆ. ಈ ಸಭೆಯಲ್ಲಿ ಶಿವಸೇನೆ ಯಾವಾಗ ಆರಂಭವಾಯಿತು ಅದರ ಹಿನ್ನಲೆ ಏನು, ಇವುಗಳನ್ನು ನಾವು ಸೂಕ್ಷ್ಮವಾಗಿ ತಿಳಿಯಬೇಕಾಗಿದೆ. ಶಿವಸೇನೆಗೆ ಹೆಸರು ಕೊಟ್ಟಿರತಕ್ಕಂಥ ಶಿವಾಜಿ ಮಹಾರಾಜರು ಇಡೀ ಭಾರತಕ್ಕೆ ಸ್ಫೂರ್ತಿದಾಯಕವಾಗಿದ್ದರು, ಈ ದುರ್ಮಾರ್ಗಿಗಳು ಅವರ ಹೆಸರು ಬಳಸುವುದನ್ನು ನೋಡಿದರೆ, ನಾವು ವಿಷಾದ ಪಡಬೇಕಾಗಿದೆ. ಈ ಶಿವಸೇನೆ ಕೇವಲ ಭಾರತದ ಮಹಾರಾಷ್ಟ್ರ ಮೈಸೂರು ಗಡಿ ಸಮಸ್ಯೆಗೋಸ್ಕರ ಪ್ರಾರಂಭವಾದುದಲ್ಲ. ಮಹಾರಾಷ್ಟ್ರದ ಎಲ್ಲಾ ರಾಜಕಾರಣಿಗಳ ಆಶೀರ್ವಾದವನ್ನು ಪಡೆದಂಥ ಶಿಶು ಮೊಟ್ಟಮೊದಲು ಪ್ರಾರಂಭವಾಯಿತು. ಇದು ವಿ. ಕೆ. ಮೆನನ್‌ರವರನ್ನು ಸೋಲಿಸುವುದಕ್ಕೋಸ್ಕರ ಪ್ರಾರಂಭವಾಯಿತು. ಇದಕ್ಕೆ ಅಲ್ಲಿದ್ದಂಥ ಎಲ್ಲಾ ಕಾಂಗ್ರೆಸ್ಸಿನ ಧುರೀಣರ ಆಶೀರ್ವಾದ ಮೊಟ್ಟಮೊದಲು ಆಯಿತು, ಶಿವಸೇನೆಯ ಗುರಿ ಮತ್ತು ಇದರ ಹಿನ್ನಲೆಯನ್ನೂ ಸಹ ಗುರುತಿಸಬೇಕಾಗಿದೆ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಸರ್ಕಾರ, ಮೈಸೂರಿನಲ್ಲಿ ಕಾಂಗ್ರೆಸ್ ಸರ್ಕಾರ, ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಸರ್ಕಾರ ಜೊತೆಗೆ ಅಖಿಲಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಶ್ರೀಮಾನ್ ನಿಜಲಿಂಗಪ್ಪನವರು ಇದ್ದರು ಕೂಡ ದೇಶದಲ್ಲಿ ಈ ದುರ್ಘಟನೆ ನಡೆಯುವುದಕ್ಕೆ ಎಲ್ಲರ ಆಶೀರ್ವಾದ ಇತ್ತು ಮತ್ತು ಬೆಂಬಲವೂ ಇತ್ತು ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ. ಯಾವ ಕಾಂಗ್ರೆಸ್ ಸರ್ಕಾರ ಪ್ರಜಾಪ್ರಭುತ್ವದ ಬಗ್ಗೆ ಹೆಚ್ಚಿಗೆ ಮಾತನಾಡುತ್ತಾ ಇದೆಯೋ ರಾಜ್ಯಾಂಗದ ಎಲ್ಲಾ ಹಕ್ಕುಗಳನ್ನೂ ಕಾಪಾಡುವ ಪಣ ತೊಟ್ಟಿದ್ದೇವೆ ಎಂದು ಹೇಳುತ್ತಾ ಇದೆಯೋ, ಅದರ ನೇತೃತ್ವದಲ್ಲಿಯೆ ರಾಜ್ಯಾಂಗದ ವ್ಯಭಿಚಾರ ನಡೆಯುತ್ತಾ ಇರುವುದನ್ನು ನೋಡಿದ್ದೇವೆ.

ಶಿವಸೇನೆ ಪ್ರಾರಂಭ ಮಾಡಿದ ಶ್ರೀ ಠಾಕ್ರೆಯವರು ಒಬ್ಬ ಸಾಧಾರಣ ವ್ಯಕ್ತಿ. ಅವರ ಹಿನ್ನಲೆ ಇರುವ ಬುದ್ಧಿಜೀವಿಗಳು ದೂರದೃಷ್ಟಿಯನ್ನಿಟ್ಟುಕೊಂಡು ಈ ಸಂಸ್ಥೆಯನ್ನು ಬೆಳೆಸುವುದಕ್ಕೆ ಬೇಕಾದಂಥ ಶಕ್ತಿಯನ್ನು ತುಂಬಿ ಕೊಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಮೂಲ ಉದ್ದೇಶ, ಮೈಸೂರಿನವರು ಇರಬಾರದು ಎಂದು. ಆದರೆ ನಾಳೆ ಇನ್ನು ಇತರೇ ರಾಜ್ಯದವರು ಇರಕೂಡದು ಎಂದು ತಮ್ಮ ಚಟುವಟಿಗಳೆಯನ್ನ ಮುಂದುವರಿಸಿಕೊಂಡು ಹೋಗುತ್ತಾರೆ. ಎನ್ನುವುದಕ್ಕೆ ಯಾವ ಸಂಶಯವು ಇಲ್ಲ. ಇಂತಹ ಸಂಸ್ಥೆಯನ್ನು ತಡೆಯುವ ಶಕ್ತಿ ಕೇಂದ್ರದ ಗೃಹಮಂತ್ರಿ ಶಾಖೆಗೆ ಇಲ್ಲವೇ ಎಂದು ಕೇಳುತ್ತೇನೆ. ಅವರು ತಡೆಯಬಹುದು. ಶ್ರೀ ಚವಾಹಣರವರು ನಾಗಾಲ್ಯಾಂಡ್‌ನಲ್ಲಿರುವ ಗಲಾಟೆಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುವವರು, ಪಾಕಿಸ್ತಾನ ಗಡಿಯಲ್ಲಿ ನಡೆಯುವ ಚಟುವಟಿಕೆಗಳನ್ನು ಎದುರಿಸಲು ಸಿದ್ಧರಾಗಿರುವವರು, ತಮ್ಮ ಮನೆಯ ಸುತ್ತ ಮುತ್ತ ಇರುವ ರಾಷ್ಟ್ರಘಾತುಕತನದ ಚಟುವಟಿಕೆಗಳನ್ನು ತಡೆಯುವುದಕ್ಕೆ ಶಕ್ತಿ ಇಲ್ಲವೇ ಎಂದು ಕೇಳುತ್ತೇನೆ. ಒಂದು ಸಭೆಗೆ ಹೋಗುವಾಗ ಅವರ ಕಾರನ್ನು ಈ ಸೇನೆಯವರು ತಡೆದು ಅವರು ಕಲ್ಲಿನೇಟಿನಿಂದ ತಪ್ಪಿಸಿಕೊಂಡು ಹೋದರು ಎನ್ನುವುದು ವಿಷಾದನೀಯವಾದುದು. ಇದನ್ನು ಖಂಡಿಸಬೇಕಾಗಿದೆ. 8—10 ಲಕ್ಷ ಜನರು ಬಹುಮಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯ ಜನರು ಬಹುಮಟ್ಟಿಗೆ ಮಹಾರಾಷ್ಟ್ರದಲ್ಲಿದ್ದಾರೆ. ಅಲ್ಲಿ ಅನೇಕ ಉದ್ಯಮಗಳಲ್ಲಿ ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲದಿಂದ ಅವರ ಸೇವೆಯನ್ನು ಸಲ್ಲಿಸಿದ್ದಾರೆ. ಅಂತಹವರ ಕಾರುಗಳನ್ನು ಪುಡಿಪುಡಿ ಮಾಡಿದ್ದಾರೆ. ಹೋಟೆಲ್‌ಗಳ ಮೇಲೆ ಧಾಳಿ ನಡೆಸಿದ್ದಾರೆ. ಫರ್ನಿಚರ್‌ಗಳನ್ನು ಹೊರಗೆ ಎಸೆದಿದ್ದಾರೆ, ಬೆಂಕಿ ಹಚ್ಚಿದ್ದಾರೆ. ಮೊನ್ನೆತಾನೇ ತಿಳಿದು ಬಂದಿದೆ ಅಲ್ಲಿ ಕನ್ನಡ ಸ್ತ್ರೀಯರ ಮಾನಭಂಗ ಕೂಡ ಮಾಡಿದ್ದಾರೆ ಎಂದು. ಲಕ್ಷಾಂತರ ರೂಪಾಯಿ ನಷ್ಟ ಮಾಡಿದ್ದಾರೆ. ಇಂತಹ ಅತ್ಯಚಾರ ನಡೆಯುವ ಸಂದರ್ಭದಲ್ಲಿ ರಕ್ಷಣಾ ಕಾರ್ಯವನ್ನು ಕೈಗೊಳ್ಳುವುದಕ್ಕೆ ಈ ಮಂತ್ರಿಗಳಿಗೆ ಸಾಧ್ಯವೇ ಎನ್ನುವುದು

(ಶ್ರೀ ಎಚ್. ಬಿ. ಜ್ವಾಲನಯ್ಯ)

ಅನುಮಾನಾಸ್ಪದವಾಗಿದೆ. ಆದುದರಿಂದ ಈ ಸಭೆಯ ಮುಖಾಂತರ ನಾನು ಅವರನ್ನು ಒತ್ತಾಯ ಪೂರ್ವಕವಾಗಿ ಕೇಳುತ್ತೇನೆ, ಗೃಹಮಂತ್ರಿ ಸ್ಥಾನವನ್ನು ಬಿಟ್ಟುಬಿಡಲಿ, ಈ ಸಮಸ್ಯೆ ತನ್ನಷ್ಟಕ್ಕೆ ತಾನ ಪರಿಹಾರವಾಗುತ್ತದೆ.

ಮಹಾಜನ ಸಮಿತಿ ಬೇಕು ಎಂದು ಮೈಸೂರಿನವರು ಏನೂ ಅಪೇಕ್ಷಿಸಲಿಲ್ಲ. ಮಹಾರಾಷ್ಟ್ರದವರ ಒತ್ತಾಯದ ಮೇಲೆ ಈ ಸಮಿತಿಯನ್ನು ಏರ್ಪಡಿಸಿದರು. ಅದರಂತೆ ಈ ಸಮಿತಿ ತನ್ನ ತೀರ್ಮಾನವನ್ನು ಕೊಟ್ಟಮೇಲೆ ಬಹಳ ಸೌಜನ್ಯತೆಯಿಂದ ಒಪ್ಪಬೇಕಾಗಿತ್ತು. ಅದು ಬಿಟ್ಟು ಆ ಸಮಿತಿ ಕೊಟ್ಟ ತೀರ್ಮಾನ, ತೀರ್ಮಾನವಲ್ಲ ಎಂದು ಧಾಷ್ಟಿಕತನಕ್ಕೆ ಹೋದಾಗ ಕೇಂದ್ರ ಸರ್ಕಾರದಲ್ಲಿರುವಂಥ ಎಂ. ಪಿ. ಗಳು ಮತ್ತು ಸಂಬಂಧಪಟ್ಟ ಮಂತ್ರಿಗಳೂ ಕೂಡ ಮೌನಧಾರಣೆ ಮಾಡಿರುವುದು ಪ್ರಧಾನ ಮಂತ್ರಿಗಳೂ ಕೂಡ ಮೌನ ಧಾರಣೆ ಮಾಡಿ ಇದಕ್ಕೆ ಬೆಂಬಲ ಕೊಡುವುದು ನಿಜವಾಗಿಯೂ ಆಶ್ಚರ್ಯಕರವಾದ ಸಂಗತಿ. ಈ ಪ್ರಜಾಪ್ರಭುತ್ವ ಉಳಿಯಬೇಕಾದರೆ ಭಾರತ ರಾಜ್ಯಾಂಗದ ಪ್ರಕಾರ ಒಂದು ವ್ಯಕ್ತಿಯು ತನ್ನ ವೃತ್ತಿಯನ್ನ ಮಾಡಿಕೊಕೊಂಡು ಹೋಗುವ ಹಕ್ಕನ್ನು ಪಡೆದಿರುವಾಗ ಕೇವಲ ಮಹಾರಾಷ್ಟ್ರ ಜನತೆಗೇ ಕೆಲಸ ಸಿಕ್ಕಬೇಕು ಎಂದರೆ ಆಗ ರಕ್ತಕ್ರಾಂತಿ ಆಗಬಹುದು. ಮಹಾರಾಷ್ಟ್ರ ಮೈಸೂರು ಗಡಿ ವಿವಾದದ ಬಗ್ಗೆ ಹುಟ್ಟಿದ ವಿಷಫಲ ಭಾರತದ ಐಕ್ಯತೆಗೆ ಭಂಗ ತಂದು ರಾಷ್ಟ್ರ ಛಿದ್ರವಾಗಬಹುದು ಎನ್ನುವ ಸೂಚಿ ಎಂದು ಹೇಳಿದರೆ ತಪ್ಪಾಗಲಾರದು. ಈ ಒಂದು ಶಿವಸೇನೆಸಂಸ್ಥೆ ಏನು ಇದೆ ಇದರ ಉದ್ದೇಶ ಏನು ? ಇದರ ಚಟುವಟಿಕೆಗಳು ಏನು ! ಈ ಸಂಸ್ಥೆಯನ್ನು ಇಲ್ಲಿಯವರೆಗೆ ಬೆಳೆದುಕೊಂಡು ಬರುವುದಕ್ಕೆ ಮಹಾರಾಷ್ಟ್ರ ಸರ್ಕಾರ ಏತಕ್ಕೆ ಬಿಟ್ಟಿತು ಎಂಬುದನ್ನು ಯೋಚಿಸಬೇಕಾಗಿದೆ. ಮಹಾರಾಷ್ಟ್ರ ಮತ್ತು ಮೈಸೂರಿನ ಗಡಿ ಸಮಸ್ಯೆ ಆಗಿದ್ದರೆ ಅವಕ್ಕಾಗಿ ಮಹಾರಾಷ್ಟ್ರ ಏಕೀಕರಣ ಸಮಿತಿ ಇದೆ. ಅವರು ಅದಕ್ಕಾಗಿ ಚಳುವಳಿ ಮಾಡುತ್ತಾ ಇದ್ದಾರೆ. ಹಾಗಿರುವಾಗ ಈ ತರಹ ಇನ್ನೊಂದು ಸಂಸ್ಥೆಯ ಅವಶ್ಯಕತೆ ಏನು ಇತ್ತು ? ಇದು ಬಹಳ ಬುದ್ಧಿವಂತರ ಒಳ್ಳೆಯ ಮೇಧಾವಿಗಳ ಹಿನ್ನಲೆಯಲ್ಲಿ ನಿಂತುಕೊಂಡು ಹುಂಬ ಜನರಿಂದ ದೊಂಬಿದರೊಡೆಯಲ್ಲ ಆಸಕ್ತರಾದ ಜನರಿಂದ ಪ್ರಚಾರ ಮಾಡತಕ್ಕದ್ದು ಭಾರತದಲ್ಲಿ ಪಾಕೀಸ್ತಾನ ರಾಷ್ಟ್ರವನ್ನು ಮಹಾರಾಷ್ಟ್ರದವರು ಮಾಡಬಹುದು ಎನ್ನುವ ಧೋರಣೆ ಇಟ್ಟುಕೊಂಡಿದ್ದಾರೆಯೇ ಎನ್ನುವ ಸಂಶಯ ಬರುತ್ತದೆ. ಮಾನ್ಯ ಮಿತ್ರರಾದ ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ಬೊಂಬಾಯಿ ನಗರವನ್ನು ಎಲ್ಲಾ ಕಡೆಯಿಂದಲೂ ಬಂದ ಜನರು ಕಟ್ಟಿದ್ದಾರೆ. ಕೇವಲ ಮರಾಠಿಯವರೇ ಕಟ್ಟಿದ ನಗರ ಅಲ್ಲ. ಇದು ಇತ್ತೀಚೆಗೆ ಬಂದ ಶಬ್ದ ಎಂದು ಇತಿಹಾಸಕಾರರು ಹೇಳಿದ್ದಾರೆ. ಹಿಂದೆ ಮಹಾರಾಷ್ಟ್ರ ಇದ್ದೇ ಇರಲಿಲ್ಲ, ಇತ್ತೀಚೆಗೆ ಇದಕ್ಕೆ ಒಂದು ಸ್ವರೂಪ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಹಾಗೆ ಕೊಟ್ಟಂಥ ಸಂದರ್ಭದಲ್ಲಿ ಭಾರತದ ಮಹಾನಾಯಕರಾದ ಶಿವಾಜಿ ಹೆಸರನ್ನು ದುರುಪಯೋಗಪಡಿಸಿಕೊಂಡು, ಶಿವಾಜಿ ಹೆಸರನ್ನಿಟ್ಟುಕೊಂಡು ಈ ಶಿವಸೇನೆ ಮಾಡುವ ದುಷ್ಕಾರ್ಯ ನೋಡಿದರೆ ನಿಜವಾಗಿಯೂ ವ್ಯಥೆಯಾಗುತ್ತದೆ. ಇದಕ್ಕೆ ಅಖಿಲ ಭಾರತ ಮಟ್ಟದಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು ಏತಕ್ಕೆ ಬೆಂಬಲ ಕೊಡುತಾರೋ ? ಜೊತೆಗೆ ಇದು ಮಾಡುತ್ತಾ ಇರುವ ಕಾರ್ಯಕ್ರಮಗಳನ್ನು ದುರ್ವರ್ತನೆಗಳನ್ನೂ ಖಂಡಿಸುವ ಸಾಹಸಕ್ಕೆ ಯಾತಕ್ಕೆ ಹೊಗುತ್ತಾ ಇಲ್ಲ ಎಂದು ದುಃಖದಿಂದ ಹೇಳಬೇಕಾಗಿದೆ.

ಆದರೆ ಮೈಸೂರು ರಾಜ್ಯದ ಕರ್ತವ್ಯವೇನು ? ಸುಮಾರು 8–10 ಲಕ್ಷ ಜನ ಕನ್ನಡಿಗರು ತಮ್ಮ ಆಸ್ತಿಪಾಸ್ತಿಗಳನ್ನು ನಷ್ಟ ಮಾಡಿಕೊಂಡಿದ್ದಾರೆ, ಎಷ್ಟೋ ಜನರ ಮಾನ ಹಾನಿಯಾಗಿದೆ. ಇಂಥ ಸಂದರ್ಭದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಒಂದು ಪತ್ರವನ್ನು ಕೇಂದ್ರದ ಮುಖ್ಯ ಮಂತ್ರಿಗಳಿಗೆ ಬರೆದ ಮಾತ್ರಕ್ಕೆ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಂಡಂತಾಗಲಿಲ್ಲ. 8-10 ಲಕ್ಷ ಜನ ಕನ್ನಡಿಗರು ಮಹಾರಾಷ್ಟ್ರದಲ್ಲಿ ಇರುವಾಗ ಮೈಸೂರು ರಾಜ್ಯದಲ್ಲಿಯೂ ಅಷ್ಟೇ ಸಂಖ್ಯೆಯಲ್ಲಿ ಅವರೂ ಇರಬಹುದು ಎನುವುದನ್ನು ಯಾರೂ ಮರೆಯುವುದಕ್ಕೆ ಸಾಧ್ಯವಿಲ್ಲ. ಮೈಸೂರಿನ ಜನ ಸೌಜನ್ಯಶೀಲರು. ಯಾರೇ ಆಗಲೀ ಬಂದು ಇಲ್ಲಿ ವೃತ್ತಿಯನ್ನು ಮಾಡಿಕೊಳ್ಳುವುದಕ್ಕೆ ಯಾವರೀತಿ ಒಪ್ಪಿಕೊಂಡಿದ್ದಾರೆ, ಅವರುಗಳು ನಮ್ಮ ಬಂಧುಗಳು, ಸಹೋದರರು ಎಂದು ಭಾವಿಸಿದ್ದಾರೆ. ಅದೇ ರೀತಿ ಮಹಾರಾಷ್ಟ್ರದ ಜನತೆಯೂ ಕೂಡ ಈ ವಿಷಯವನ್ನು ಪರಿಗಣಿಸುವ ಪ್ರಯತ್ನಗಳನ್ನು ಮಾಡುವುದು ಉಚಿತ. ಇಲ್ಲವೆ ಇದ್ದರೆ ಅನರ್ಥವಾಗುತ್ತದೆ, ದೇಶದಲ್ಲಿ ಕ್ರಾಂತಿಯಾಗುತ್ತದೆ. ಮೈಸೂರಿನ ಜನತೆಯ ತಾಳ್ಮೆಗೂ ಒಂದು ಮಿತಿ ಇದೆ ಎನ್ನುವುದನ್ನು ನಾವು ಈ ಸಭೆಯಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ.

ಇದರ ಜೊತೆಗೆ ಕೇಂದ್ರ ಸರ್ಕಾರ ಮಹಾಜನ ಸಮಿತಿಯ ವರದಿಯನ್ನು ಕೂಡಲೇ ಕಾರ್ಯರೂಪಕ್ಕೆ ಕೊಟ್ಟಿದ್ದೇ ಆದರೆ ಇಂಥ ಸಂದರ್ಭಗಳು ಬರುವುದಕ್ಕೆ ಅವಕಾಶವಾಗುತ್ತ ಇರಲಿಲ್ಲ. ರಾಜಕೀಯ ದುರುದ್ದೇಶಕ್ಕೋಸ್ಕರವಾಗಿ ಶಿವಸೇನೆ ಕ್ರಾಂತಿಕಾರಕ ರೀಆಕ್ಷನರಿ ಪಾರ್ಟಿಯಾಗಿದೆ. ಇದನ್ನು ತಕ್ಷಣ ಬ್ಯಾನ್ ಮಾಡತಕ್ಕ ಕ್ರಮವನ್ನು ಕೇಂದ್ರಸರ್ಕಾರ ತಕ್ಷಣ ತೆಗೆದುಕೊಳ್ಳಬೇಕೆಂದು ಮೈಸೂರು ಸರ್ಕಾರ ಒತ್ತಾಯ ಮಾಡಬೇಕು ಮತ್ತು ಇಲ್ಲಿಯವರೆಗೂ ನಡೆದಿರುವಂಥ ಕನ್ನಡಿಗರ ಹಾನಿ ಮತ್ತು ನಷ್ಟವನ್ನು ಮಹಾರಾಷ್ಟ್ರ ಸರ್ಕಾರ ತುಂಬಿ ಕೊಡಬೇಕು ಎನ್ನುವಂಥ ತೀವ್ರವಾದ ಕ್ರಮ ಕೈಕೊಳ್ಳಬೇಕೆಂದು ಮೈಸೂರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಬೊಂಬಾಯಿ ನಗರದಲ್ಲಿ ಇತ್ತೀಚೆಗೆ ನಡೆದಂಥ ಶಿವಸೇನೆಯ ಯುದ್ಧದ ದೆಸೆಯಿಂದ ನಮಗೆ ತಿಳಿದಿರುವಂತೆ ಅಧಿಕೃತವಾದ 52ಕ್ಕಿಂತ ಜಾಸ್ತಿ ಸಾವು ಮತ್ತು 20 ಕೋಟಿ ರೂಪಾಯಿಗಿಂತ ಜಾಸ್ತಿ ಹಾನಿಯಾಗಿದೆ. ಇನ್ನು ಅದರಿಂದ ಉಂಟಾಗಿರತಕ್ಕ ನೋವುಗಳು ಸಂಕಟವನ್ನು ಬಹುಶಃ ಯಾರೂ ಅಳೆಯುವಂತಿಲ್ಲ, ಅಳತೆ ಮಾಡುವುದಕ್ಕೂ ಸಾಧ್ಯವಿಲ್ಲ. ಇದು ಕೇವಲ ಮಹಾಜನವರದಿಯ ನೆವದಿಂದ ಪ್ರಾರಂಭವಾಗಿರಬಹುದು. ಮಹಾಜನ್ ವರದಿಯನ್ನು ಕಾರ್ಯಗತ ಮಾಡಬೇಕೇ, ಮಾಡಬಾರದೇ ಅಥವಾ ಮಹಾರಾಷ್ಟ್ರಕ್ಕೆ ಏನನ್ನು ನ್ಯಾಯವಾಗಿ ದೊರಕಿಸಿಕೊಡಬೇಕಾಗಿತ್ತು ಎನ್ನುವುದಕ್ಕೆ ಇಷ್ಟೆಲ್ಲ ವಿಶೇಷವಾಗಿ, ಸೀಮಿತವಾಗಿ, ಶಿವಸೇನೆ ಚಳುವಳಿಯನ್ನು ನಡೆಸುತ್ತಿದೆ ಎಂದು ನಾನು ನಂಬಲಿಕ್ಕೆ ಸಾಧ್ಯವಿಲ್ಲ. ಈವೊತ್ತು ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು ಇದನ್ನು ಫ್ಯಾಸಿಸ್ಟ್ ಸಂಸ್ಥೆ ಎಂದು ಹೇಳಿದ್ದಾರೆ. ಇದರ ಉದ್ದೇಶ ಕೇವಲ ಇಷ್ಟು ಸಣ್ಣದಲ್ಲ. ಅದು ತೀರ ಅಂಧತೆಯ ಹುಚ್ಚು ಕಲ್ಪನೆಯಿಂದ ಕೇವಲ ಕನ್ನಡಿಗರಿಗಷ್ಟೇ ಅನ್ಯಾಯ ಮಾಡುತ್ತಿರತಕ್ಕದ್ದಲ್ಲ, ಕೇವಲ ಭಾರತದ ರಾಷ್ಟ್ರೀಯತೆಗೆ ಅನ್ಯಾಯ ಮಾಡುತ್ತಿರತಕ್ಕದ್ದಲ್ಲ, ಅದು ನಡೆಸಿರತಕ್ಕ ಆಂದೋಳನ ಮಾನವೀಯತೆಯ ವಿರುದ್ಧವಾಗಿ, ಮನುಷ್ಯತ್ವದ ವಿರುದ್ಧವಾಗಿ ಮಾಡಿರತಕ್ಕ ಘೋರವಾದ ಅಪರಾಧ ಎಂದು ಪರಿಗಣಿಸಬೇಕಾಗಿದೆ. ಈವೊತ್ತು ನಮ್ಮ ದೇಶದಲ್ಲಿ ಅನೇಕ ಚಳುವಳಿಗಳು ನಡೆಯುತ್ತಿವೆ. ಅವುಗಳಿಗೆ ಆಯಾ ಸಂದರ್ಭಕ್ಕನುಗುಣವಾಗಿ ನಮ್ಮ ಪೂರ್ತಿ ಸಹಾನುಭೂತಿ, ಅರ್ಧ ಸಹಾನುಭೂತಿ, ಸಹಾನುಭೂತಿ ಹೌದೋ ಅಲ್ಲವೋ, ಈ ರೀತಿಯಾಗಿ ತೋರಿಸುತ್ತಾ ಬಂದಿರಬಹುದು. ಆ ಎಲ್ಲ ಚಳುವಳಿಗಳ ಸ್ವರೂಪಕ್ಕೂ ಈ ಶಿವಸೇನೆ ಮಾನವೀಯತೆಗೆ ವಿರುದ್ಧವಾಗಿ ನಡೆಸುತ್ತಿರತಕ್ಕ ಅತ್ಯಂತ ಘೋರ ಅಪರಾಧಕ್ಕೂ ಬಹಳ ವ್ಯತ್ಯಾಸವಿದೆ ಎನ್ನುವುದನ್ನು ನಾವು ಪರಿಗಣಿಸದೆ ಹೋದರೆ ನಮ್ಮ ಭಾರತ ದೇಶದ ಇತಿಹಾಸದಲ್ಲಿ ದೊಡ್ಡ ಅಪರಾಧವನ್ನು, ಅಪಚಾರವನ್ನು ಎಸಗಿದಂತಾಗುತ್ತದೆ. ಎಲ್ಲ ರಾಜ್ಯಗಳಲ್ಲಿಯೂ ಕೂಡ ಈ ಒಂದು ತರಹ ಒಲವು ಕಂಡುಬರುತ್ತದೆ. ರಾಜ್ಯದ ಕೆಲವೊಂದು ಜನರ ಹಿತಗಳನ್ನು ಎತ್ತಿ ಕಟ್ಟಿ ಅದರ ಬುನಾದಿಯ ಮೇಲೆ 'ಫ್ಯಾಸಿಸ್ಟ್ ಪರೋಕಿಯಲ್.' ಅಂಥ ಸಂಸ್ಥೆಗಳನ್ನು ಬಲಪಡಿಸತಕ್ಕ ಪ್ರವೃತ್ತಿ, ಎಲ್ಲ ರಾಜ್ಯಗಳಲ್ಲಿಯೂ, ಕೆಲವು ರಾಜ್ಯಗಳಲ್ಲಿ ಜಾಸ್ತಿ, ಕೆಲವು ರಾಜ್ಯಗಳಲ್ಲಿ ಅಷ್ಟು ಪ್ರಬಲವಾಗಿ ಇಲ್ಲದೆ ಇರಬಹುದು, ಆ ಪ್ರವೃತ್ತಿ ಕಂಡು ಬರುತ್ತಿದೆ. ಇದನ್ನು ಹತ್ತಿಕ್ಕುವ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ವಿಶೇಷವಾದ ಜವಾಬ್ದಾರಿ ಇದೆ. ಬೊಂಬಾಯಿ ನಗರದಂಥ ದೊಡ್ಡ ನಗರಗಳಲ್ಲಿ ಗಲಭೆಗಳಾದರೆ ಅದನ್ನು 'ಹತೋಟಿಗೆ ತರುವುದು ಸ್ವಲ್ಪ ಕಷ್ಟ ಎನ್ನತಕ್ಕ ಹಾರಿಕೆಯ ಸಮಾಧಾನ ಕೊಡತಕ್ಕ ಉತ್ತರವನ್ನು ಹೇಳುವ ಕಾಲ ಈಗ ಇಲ್ಲ. ದೇಶದಲ್ಲಿ ಯಾವುದೇ ಊರಿನಲ್ಲಿ, ಯಾವುದೇ ರಾಜ್ಯದಲ್ಲಿ ಯಾರೇ ಇದ್ದರೂ ಕೂಡ ಅವರ ರಕ್ಷಣೆಯ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲೆ ಇದೆ. ಆ ಕಾರ್ಯವನ್ನು ಅವರು ಯಶಸ್ವಿಯಾಗಿ ನೆರವೇರಿಸಬೇಕು ಮತ್ತು ಅದಕ್ಕೆ ಆಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಆಯಾ ರಾಜ್ಯ ಸರ್ಕಾರಗಳು ಅಲ್ಲಿ ಕಾನೂನು ಮತ್ತು ಶಾಂತಿಯ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುತ್ತವೆ ಎನ್ನತಕ್ಕ ನಂಬಿಕೆಯನ್ನು ಇಟ್ಟು ಕಣ್ಣು ಮುಚ್ಚಿಕುಳಿತುಕೊಳ್ಳತಕ್ಕ ಪರಿಸ್ಥಿತಿ ಈವೊತ್ತು ಬದಲಾವಣೆಯಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ ಈ ಸಂದರ್ಭದಲ್ಲಿ ತನ್ನ ಜವಾಬ್ದಾರಿಯನ್ನು ಅರಿತುಕೊಳ್ಳಬೇಕಾದ್ದು ಅದರ ಆದ್ಯ ಕರ್ತವ್ಯ ಎಂದು ನನಗನ್ನಿಸುತ್ತದೆ.

ಶಿವಸೇನೆಯ ಚಳುವಳಿ ಕೇವಲ ಮಹಾರಾಷ್ಟ್ರಕ್ಕೆ ಕೆಲವೊಂದು ಭಾಗಗಳನ್ನು ಸೇರಿಸುವುದು ಬಿಡುವುದು ಇಷ್ಟೇ ಪ್ರಶ್ನೆಗೆ ಸೀಮಿತವಾಗಿದ್ದಿದ್ದರೆ, ಅಲ್ಲಿರತಕ್ಕ ಎಲ್ಲ ಕನ್ನಡಿಗರ, ದಕ್ಷಿಣ ಭಾರತದ ಜನರ ಮೇಲೆ ಹಲ್ಲೆ ಮಾಡತಕ್ಕದಾಗಲಿ ಉಡಪಿ ಹೋಟಲುಗಳನ್ನು ಸತತವಾಗಿ ನಾಶಪಡಿಸತಕ್ಕುದಾಗಲೀ, ಅದಕ್ಕೆ ಅವಶ್ಯಕತೆ ಇರುತ್ತಿರಲಿಲ್ಲ. ಇದೆಲ್ಲವನ್ನೂ ನೋಡಿಕೊಂಡೂ ಕೂಡ ಈವೊತ್ತು ಬಹಳ ಸಂತೃಪ್ತಿಯ ಭಾವನೆಯಿಂದ ಅಲ್ಲಿನ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇತ್ತು ಎಂದರೆ ಅದಕ್ಕಿಂತಲೂ ಅತ್ಯಂತ ಮನ ನೋಯುವ ವಿಚಾರ ಇನ್ನೊಂದಿಲ್ಲ. ಈವೊತ್ತು

(ಶ್ರೀ ಕೆ. ಎಚ್. ಶ್ರೀನಿವಾಸ)

ಮಹಾರಾಷ್ಟ್ರ ಸರ್ಕಾರದವರು ಏನೂ ಬೆಂಬಲವನ್ನು ಕೊಟ್ಟಿಲ್ಲ, ಇದರ ಬಗ್ಗೆ ಯಾವುದೇ ಸಹಾನುಭೂತಿಯನ್ನು ಇಟ್ಟುಕೊಂಡಿಲ್ಲ, ತಕ್ಕುದಾದ ಎಲ್ಲ ಬಂದೋಬಸ್ತು ಮಾಡಿದರೂ ಬೊಂಬಾಯಿ ದೊಡ್ಡ ನಗರವಾದುದರಿಂದ ಅಲ್ಲಿ ಗಲಭೆಯಾದರೆ ಹತೋಟಿಗೆ ತರುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳುವುದೆಲ್ಲ ಸರ್ಕಾರಕ್ಕೆ ಭೂಷಣವಾಗತಕ್ಕ ಮಾತುಗಳಲ್ಲ. ಈ ರೀತಿಯ ಮಾತುಗಳನ್ನಾಡತಕ್ಕುದು ಸರ್ಕಾರಕ್ಕೇ ಆಗಲೀ, ಅದನ್ನು ನಡೆಸತಕ್ಕ ವ್ಯಕ್ತಿಗಳಿಗೇ ಆಗಲಿ ಯಾವ ಕಾಲಕ್ಕೂ ಭೂಷಣವಾಗತಕ್ಕುದಲ್ಲ. ಕರ್ಫ್ಯೂ ಜಾರಿಗೆ ಬಂದ ಮೇಲೆಯೂ ಬೊಂಬಾಯಿನಲ್ಲಿ ಇಷ್ಟೊಂದು ಹಾನಿ ಸಂಭವಿಸಿ, ಇಷ್ಟೊಂದು ಗಲಭೆ ನಡೆದಿರುವುದನ್ನು ನಾವು ವಿಶ್ಲೇಷಣೆ ಮಾಡಿದರೆ ಸರ್ಕಾರ ಏನು ಮಾಡುತ್ತಿತ್ತು ಎನ್ನುವ ಶಂಕೆ ಪಡುವುದಕ್ಕೆ ಅತ್ಯಂತ ಪ್ರಬಲವಾದ ಕಾರಣಗಳು ಅಲ್ಲಿ ಸಿಕ್ಕುತ್ತವೆ. ಈವೊತ್ತು ಕೇಂದ್ರ ಸರ್ಕಾರ ಇದರ ಬಗ್ಗೆ ಏನು ಉತ್ತರವನ್ನು ಕೊಡುತ್ತದೆ ಅದರಿಂದ ನಾವು ಬಹುಶಃ ಅತೃಪ್ತಿ ಪಟ್ಟುಕೊಳ್ಳುವುದು ಅಷ್ಟೇ ಅಲ್ಲ, ನಾವು ನಮ್ಮ ತೀವ್ರವಾದ ಆತಂಕವನ್ನು ವ್ಯಕ್ತಪಡಿಸಬೇಕಾಗಿದೆ ಮತ್ತು ನಮ್ಮ ಶಕ್ತಿಗೆ ಮೀರಿ ಈ ಬಗ್ಗೆ ನಾವು ಪ್ರತಿಭಟಿಸಬೇಕಾದಂಥ ಅಗತ್ಯ ಈವೊತ್ತು ಇದೆ.

ಈ ಸಂದರ್ಭದಲ್ಲಿ ನಾವು ಕೇವಲ ಎಚ್ಚರಿಕೆಯನ್ನು ಕೊಡುವುದನ್ನು ಬಿಟ್ಟರೆ, ಪ್ರತಿಭಟನೆಯನ್ನು ಸೂಚಿಸುವುದನ್ನು ಬಿಟ್ಟರೆ, ನಾವು ಇದನ್ನು ಸಹಿಸುವುದಿಲ್ಲ ಎನ್ನುವ ಮಾತನ್ನು ಹೇಳುವುದನ್ನು ಬಿಟ್ಟರೆ, ಮತ್ತೆ ಏನನ್ನು ಮಾಡಲಿಕ್ಕೆ ಸಾಧ್ಯವಿದ್ದೀತು ? ಈವೊತ್ತು ಮಹಾರಾಷ್ಟ್ರದಲ್ಲಿ ಸೈನ್ಯ ಕಟ್ಟಿರುವಂತೆ ಮೈಸೂರಿನಲ್ಲಿಯೂ ಒಂದು ಸೈನ್ಯ ಕಟ್ಟಿ, ಅದನ್ನು ತೆಗೆದುಕೊಂಡು ಹೋಗಿ ಯುದ್ಧ ಮಾಡುವಷ್ಟು ಮಟ್ಟಿಗೆ ಇನ್ನೂ ಮುಟ್ಟಿಲ್ಲ. ಬಹುಶಃ ಇದೇ ರೀತಿಯಲ್ಲಿ ಕೇಂದ್ರ ಸರ್ಕಾರದ ಜಡತೆ ಮುಂದುವರಿಯುತ್ತ ಹೋದರೆ ರಾಜ್ಯಗಳು ಶಿವಸೇನೆಯಂಥ ಸೈನ್ಯಗಳನ್ನು ಅಧಿಕೃತವಾಗಿ ಸೃಷ್ಟಿ ಮಾಡಿಕೊಂಡು ಒಬ್ಬರೊಂದಿಗೊಬ್ಬರು ಹೊಡೆದಾಡತಕ್ಕ ಪರಿಸ್ಥಿತಿ ಬರುತ್ತದೆ. ಇದು ಕೇವಲ ಕಲ್ಪನೆಯಲ್ಲ. ಕಣ್ಣಿಗೆ ಕಾಣುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದಕ್ಕೆ ಯಾರಾದರೂ ಜವಾಬ್ದಾರರಿದ್ದರೆ ಅದಕ್ಕೆ ಕೇಂದ್ರ ಸರ್ಕಾರವೇ ಜವಾಬ್ದಾರಿಯಾಗುತ್ತದೆ. ಯಾವ ರಾಜಕೀಯ ಪಕ್ಷಗಳಲ್ಲಿಯೂ ಒಮ್ಮತವಿಲ್ಲ. ಎಲ್ಲ ರಾಜಕೀಯ ಪಕ್ಷಗಳೂ ಕೂಡ ಅವರವರ ರಾಜ್ಯದ ಪ್ರಶ್ನೆ ಬಂದಾಗ ಅದರ ಬಗ್ಗೆ ಒಮ್ಮತವಾಗುತ್ತವೆ, ರಾಷ್ಟ್ರೀಯ ಮಟ್ಟದಲ್ಲಿ ವಿಚಾರ ಮಾಡಲಿಕ್ಕೆ ತಯಾರಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಆ ಮಾತನ್ನು ಹೇಳಿ ತಪ್ಪಿಸಿಕೊಳ್ಳಲಿಕ್ಕೆ ತಯಾರಾಗಬಾರದು. ಅಂಥ ಸಂದರ್ಭಗಳು ಬಂದರೆ, ಕೇಂದ್ರ ಸರ್ಕಾರ ಅದಕ್ಕಿಂತ ಮೇಲೆ ನಿಂತು ಯೋಚನೆ ಮಾಡತಕ್ಕ ಸ್ಥಿತಿಯಲ್ಲಿರಬೇಕು ಹಾಗೆ ಮಾಡುವುದಕ್ಕೆ, ಅದರ ಯೋಜನೆಗೆ ಅನುಗುಣವಾಗಿ ಕೆಲಸವನ್ನು ಮಾಡತಕ್ಕಂಥ ಶಕ್ತಿ ಅದಕ್ಕೆ ಇಲ್ಲದೆ ಹೋದರೆ ಅಂಥ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ, ಅದನ್ನು ಕೇಂದ್ರ ಸರ್ಕಾರ ಎಂದು ಹೇಳುವುದಕ್ಕೂ ಸಾಧ್ಯವಾಗುವುದಿಲ್ಲ, ಕರೆಯುವುದಕ್ಕೂ ಸಾಧ್ಯವಾಗುವುದಿಲ್ಲ. ಈ ಒಂದು ವಿಶೇಷ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯನ್ನು ಅರಿಯಬೇಕು ಮತ್ತು ಅದಕ್ಕೆ ತಕ್ಕಂತೆ ಸಜ್ಜುಗೊಳಿಸಬೇಕು. ಈಗ ಅದಕ್ಕೆ ಬೇಕಾದ ಸಿದ್ಧತೆ ಇಲ್ಲ. ಎಲ್ಲ ರಾಜ್ಯಗಳಲ್ಲಿ ಕೂಡ ರಾಜ್ಯದ ಕೈಯಲ್ಲಿ ಹೋಂ ಪೋರ್ಟ್‌ಫೋಲಿಯೋ ಇದೆ, ಲಾ ಅಂಡ್ ಆರ್ಡರ್ ಅದು ನೋಡುತ್ತದೆ ಎನ್ನುವ ಭರವಸೆಯ ಮೇಲೆ ಕೇಂದ್ರ ಸರ್ಕಾರವಿದೆ. ಆದರೆ ಒಂದು ರಾಜ್ಯದಲ್ಲಿರತಕ್ಕ ಇನ್ನೊಂದು ರಾಜ್ಯದ ಆಸ್ತಿಗೆ ಸಂಬಂಧಪಟ್ಟಿರತಕ್ಕ ಅಥವಾ ಜನಗಳ ಪ್ರಶ್ನೆ ಬಂದಾಗ ಅದರ ಮಟ್ಟಿಗೆ ಕೇಂದ್ರ ಸರ್ಕಾರಕ್ಕೆ ಜವಾಬ್ದಾರಿ ಬರುತ್ತದೆ. ಅದನ್ನು ಹೇಗೆ ನಿರ್ವಹಿಸಬೇಕು ಎನ್ನುವುದರ ಬಗ್ಗೆ ತೀವ್ರವಾಗಿ ಅದು ಯೋಚನೆ ಮಾಡಬೇಕು.

10–00 A.M.

ಈಗ ಶಿವಸೇನೆಯಿಂದ ಮೈಸೂರು ದೇಶದ ಜನರೇನು ಮುಂಬಾಯಿನಲ್ಲಿದ್ದಾರೆ ಅವರಿಗೆ ಆಗುತ್ತಿರುವ ತೊಂದರೆಗಳನ್ನು ಮಹಾರಾಷ್ಟ್ರ ಸರಕಾರ ಮತ್ತು ಕೇಂದ್ರ ಸರಕಾರ—ಇವುಗಳ ಗಮನಕ್ಕೆ ತರುತ್ತಿದ್ದೇವೆ, ಮತ್ತೆ ಮತ್ತೆ ಇದನ್ನು ಗಮನಕ್ಕೆ ತಂದು ಮುಂದೆ ಇಂಥಹ ದುಷ್ಕೃತ್ಯ ನಡೆಯಲು ಅವಕಾಶವಿಲ್ಲದಂತೆ ನೋಡಿಕೊಳ್ಳುವುದು ಅತ್ಯಾವಶ್ಯಕ. ಈ ಬಗ್ಗೆ ಕೇಂದ್ರ ಮತ್ತು ಮಹಾರಾಷ್ಟ್ರ ಸರಕಾರಗಳ ಮೇಲೆ ಒತ್ತಾಯ ಮಾಡಬೇಕು. ಕೇಂದ್ರದ ಗೃಹಮಂತ್ರಿಗಳು ಶಿವಸೇನೆ ಎಲ್ಲರನ್ನು ಮೋಸಗೊಳಿಸಿವೆ ಎಂದು ಹೇಳಿದ ಮಾತನ್ನು ಕೇಳಿದಾಗ ಕೌಟಿಲ್ಯನ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ ಯಾವ ರಾಜ ತಾನು ಇನ್ನೊಬ್ಬರಿಂದ ಮೋಸಹೋದೆ

ಎಂದು ಹೇಳುತ್ತಾನೋ, ಅವನು ಅಧಿಕಾರದಲ್ಲಿ ಇರಲಿಕ್ಕೆ ಯೋಗ್ಯನಲ್ಲ. ಈ ಶಿವಸೇನೆಯ ಉದ್ದೇಶ ಮತ್ತು ಕಾರ್ಯವ್ಯಾಪ್ತಿ ಎಂದು ಎಲ್ಲರಿಗೂ ಚೆನ್ನಾಗಿ ಅರಿವಾಗಿದೆ. ಮೊದಲು ಅದನ್ನು ಬಹಿಷ್ಕರಿಸಬೇಕು, ಮುಂದೆ ಇಂಥಹ ಸೇನೆಗಳು ತಲೆಯೆತ್ತದಂತೆ ನೋಡಿಕೊಳ್ಳಬೇಕು. ಇದಕ್ಕೆ ಅಗತ್ಯವಾದ ಕಾನೂನು ಮಾಡಬೇಕು, ಹಾಗೆ ಮಾಡಿ ಮುಂದೆ ಇಂಥ ಸೇನೆಗಳು ಬೆಳೆಯದಂತೆ ನೋಡಿಕೊಳ್ಳಬೇಕಾದ್ದು ಅತ್ಯಗತ್ಯ. ಈಗ ಈ ಶಿವಸೇನೆಯಿಂದ ನಡೆದಿರುವ ಕೊಲೆ, ಘೋರಕೃತ್ಯ ಮುಂತಾದ್ದು ಕೇವಲ ರಾಜಕೀಯ ಚಟುವಟಿಕೆಗಳಿಂದ ಆಗಿದೆ ಎಂದು ಪರಿಗಣಿಸದೆ ಇದನ್ನು ಕಡೆಗಾಣಿಸಬೇಕು, ತಪ್ಪಿತಸ್ತರಿಗೆ ಕಠಿಣ ಶಿಕ್ಷೆಯಾಗಬೇಕು, ಕೇವಲ ಒಂದೆರಡು ದಿವಸ ಅವರನ್ನು ಜೈಲಿನಲ್ಲಿಟ್ಟು ಬಿಟ್ಟರೆ ಸಾಲದು, ಇದಕ್ಕೆ ಮಹಾರಾಷ್ಟ್ರ ಸರಕಾರ ತಯಾರಾಗಬೇಕು. ಹಿಂದೆ ಮಹಾರಾಷ್ಟ್ರ ಸರಕಾರ ಈ ಸಂಬಂಧವಾದ ತಪ್ಪಿತಸ್ತರು ಕಂಡಲ್ಲೆಲ್ಲಾ ಅವರನ್ನು ಗುಂಡಿನಿಂದ ಹೊಡೆಯಬೇಕೆಂದು ಸೂಚಿಸಿದ್ದರು. ಹಾಗೇನಾದರೂ ಮಾಡಿದರೆ ಈ ವಿಧವಾದ ತೊಂದರೆ ಪರಿಹಾರವಾದೀತೋ ಏನೋ. ತಪ್ಪಿತಸ್ತರಿಗೆ ಒಂದು ವರ್ಷದನಂತರ ಶಿಕ್ಷೆ ವಿಧಿಸಿದರೆ ಸಾಲದು, ತಕ್ಷಣ ತಕ್ಕ ಶಿಕ್ಷೆಯಾಗಬೇಕು. ಇಷ್ಟೇ ಅಲ್ಲ, ಕನ್ನಡಿಗರಿಗೆ ಬಹಳ ತೊಂದರೆ ಈ ಸಂದರ್ಭದಲ್ಲಿ ಆಗಿದೆ, ನೊಂದವರಿಗೆ ನಷ್ಟಕ್ಕೆ ಒಳಗಾಗಿರುವವರಿಗೆ ತಕ್ಕ ಪರಿಹಾರ ಕೊಡಬೇಕಾದ್ದು ಮಹಾರಾಷ್ಟ್ರ ಸರಕಾರದ ಮುಖ್ಯ ಜವಬ್ದಾರಿ, ಅದು ಈ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕು. ಮೈಸೂರು ಸರಕಾರ ಹಿಂದೆ ಕೈಗಾ ಪಾಜೆಕ್ಟಿಗೆ ಸಂಬಂಧಪಟ್ಟಂತೆ ಜನರಿಗೆ ತೊಂದರೆಯಾದಾಗ ನೊಂದವರಿಗೆ ಪರಿಹಾರ ನೀಡಿದೆ, ಅದಕ್ಕಾಗಿ ಇನ್ನೂ ಹಣ ಸಂಗ್ರಹಮಾಡುತ್ತಿದೆ. ಆದುದರಿಂದ ಕೇವಲ ಮಹಾರಾಷ್ಟ್ರ ಸರಕಾರ ಮಾತ್ರ ಕನ್ನಡಿಗರು ಯಾರು ನೊಂದಿದ್ದಾರೋ ಅವರಿಗೆ ಪರಿಹಾರ ಕೊಡುವುದಲ್ಲದೆ, ಅವರು ಆ ಜವಾಬ್ದಾರಿ ಹೊರುವುದಲ್ಲದೆ ನಾವೂ ಕೂಡ ಈ ಬಗ್ಗೆ ನಮ್ಮ ಜವಾಬ್ದಾರಿಯನ್ನು ಸರಿಯಾಗಿ ಶಕ್ತಿಮೀರಿ ನಿರ್ವಹಿಸಬೇಕು. ಇದಕ್ಕೆ ತಯಾರಾಗಬೇಕು, ಇದಕ್ಕೆ ಅಗತ್ಯವಾದ ಮಾರ್ಗದರ್ಶಿತ್ವವನ್ನು ಮುಖ್ಯಮಂತ್ರಿಗಳು ಕೊಡಬೇಕು ಎಂದು ಪ್ರಾರ್ಥನೆಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಅಖಿಲಭಾರತ ರಾಷ್ಟ್ರೀಯಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಈ ಶಿವಸೇನೆ ನಡೆಸಿದಂಥ ದುಷ್ಕೃತ್ಯದ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಅನುಮೋದಿಸುತ್ತೇನೆ. ಖಂಡಿತ ಈ ವಿಚಾರದಲ್ಲಿ ನ್ಯಾಯಾಂಗ ವಿಚಾರಣೆ ಆಗಬೇಕು. ಆದರೆ ಒಂದು ದುರದೃಷ್ಟದ ವಿಚಾರವೇನೆಂದರೆ ಶ್ರೀ ನಿಜಲಿಂಗಪ್ಪನವರು ಊರು ಕೊಳ್ಳೆಹೋದಮೇಲೆ ಊರುಬಾಗಲು ಹಾಕುವಹಾಗೆ ತಮ್ಮ ಊರಿಗೆ ಬಂದು ತಮ್ಮ ಕಾಂಗ್ರೆಸ್ ಸಭೆಯ ಮುಂದೆ ಈ ರೀತಿ ಒಂದು ಭಾಷಣ ಮಾಡಿದರಲ್ಲಾ ಎಂಬುದು, ಇದು ಬಹಳ ವಿಷಾದಕರವಾದ ವಿಚಾರ. ಈ ವಿಚಾರವನ್ನು ಶ್ರೀ ಶ್ರೀನಿವಾಸ್‌ರವರು ಹೇಳಿದ್ದಾರೆ, ಕೇಂದ್ರದ ಜಡತ್ವ ಇತ್ಯಾದಿ ವಿಚಾರಗಳನ್ನು ಅವರು ಹೇಳಿ ಸಾಕಷ್ಟು ಕಟುವಾಗಿ ಟೀಕೆಮಾಡಿದ್ದಾರೆ. ಆದುದರಿಂದ ಅದನ್ನು ನಾನು ಪುನಃ ಪ್ರಸ್ತಾಪಮಾಡುವುದಿಲ್ಲ. ಈಚೆಗೆ ಮುಖ್ಯಮಂತ್ರಿಗಳು ಕನ್ನಡಿಗರಿಗೆ ಉದ್ಯೋಗ ಕಲ್ಪಿಸಬೇಕು ಎಂಬ ವಿಷಯದ ಬಗ್ಗೆ ಸಭೆ ಕರೆದಾಗ ಅವರು ಒಂದು ಟಿಪ್ಪಣಿ ಕೊಟ್ಟಿದ್ದಾರೆ, ಅದರಲ್ಲಿ ಶಿವಸೇನೆ, ಲಚಿತ್ ಸೇನೆ ಮುಂತಾದ ವಿಚ್ಛಿದ್ರಕಾರಕ ಸಂಸ್ಥೆಗಳು ಚಳುವಳಿ ನಡೆಸುವುದಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳೇ ಹೊಣೆ ಎಂದು ಹೇಳಿದ್ದಾರೆ. ಭಾರತ ಒಂದು ರಾಷ್ಟ್ರ, ನಾವೆಲ್ಲಾ ಆ ರಾಷ್ಟ್ರದ ನಾಗರೀಕರು. ಭಾರತ ಅಭಿವೃದ್ಧಿಯಾಗಬೇಕಾದರೆ ಒಂದು ಕಮಲದ ಹೂವಿನ ದಳಗಳೆಲ್ಲಾ ಹೇಗೆ ಒಂದೇ ಸಮನೆ ಬೆಳೆಯಬೇಕೋ ಹಾಗೆ ಬೆಳೆಯುವುದಕ್ಕೆ ಅವಕಾಶ ವಿರಬೇಕು. ಇದಕ್ಕೆ ಸರಕಾರ ತಕ್ಕ ಅವಕಾಶ ಕಲ್ಪಿಸಿಲ್ಲ. ಮೊದಲು ತಮಿಳುನಾಡಿನಲ್ಲಿ ಡಿ.ಎಂ.ಕೆ. ಮುಂತಾದ ಕೆಲವೊಂದು ಸಂಸ್ಥೆಗಳು ಹಿಂಸಾತ್ಮಕ ಚಟುವಟಿಕೆಗಳನ್ನು ನಡೆಸಿದವು. ಅಸ್ಸಾಂನಲ್ಲೂ ಇಂಥ ಚಟವಟಿಕೆಗಳು ನಡೆದುವು, ಮಹಾರಾಷ್ಟ್ರದಲ್ಲೂ ಇದೇ ರೀತಿ ನಡೆಯಿತು. ಮಹಾರಾಷ್ಟ್ರದ ಬಗ್ಗೆ ನಾನು ಹೇಳುವಾಗ ಎಂ.ಇ.ಎಸ್. ಪಕ್ಷದವರು ನನ್ನನ್ನು ಕ್ಷಮಿಸುತ್ತಾರೆಂದು ತಿಳಿದಿದ್ದೇನೆ. ಭಾರತ ಒಂದು ರಾಷ್ಟ್ರ, ಆದರೊಳಗೆ ಮಹಾರಾಷ್ಟ್ರ ಎಂಬುದೂ ಇದೆ. ಅಲ್ಲಿ ಶ್ರೀ ಪಿ. ಕೆ. ಅತ್ರೆಯವರ ಅಳಿಯಂದಿರಾಗಿರುವ ಶ್ರೀ ಬಾಳಠಕ್ರೆ ಎಂಬುವರು ಶಿವಸೇನೆಯನ್ನು ಕಟ್ಟಿ ಮಹಾರಾಷ್ಟ್ರೀಯರಲ್ಲದವರನ್ನು ಹಿಂಸೆಮಾಡಿ ಅವರ ಆಸ್ತಿಪಾಸ್ತಿಗಳನ್ನು ಹಾಳುಮಾಡಿರುವುದು ಎಷ್ಟು ಮಟ್ಟಿಗೆ ಸಮಂಜಸ ಎಂಬುದನ್ನು ವಿಚಾರಮಾಡಬೇಕು. ದಿವಂಗತ ವಲ್ಲಭಾಯಿ ಪಟೇಲ್‌ರವರು ಗುಜರಾತಿನ ಹಣದಿಂದ, ಮಹಾರಾಷ್ಟ್ರೀಯ ಕ್ರಾಂತಿಕಾರಕ ಶಕ್ತಿಯಿಂದ, ಕನ್ನಡಿಗರ ಕೌಶಲ್ಯದಿಂದ ಮುಂಬಯಿ ನಗರ ನಿರ್ಮಾಣವಾಗಿದೆ ಎಂದು ಒಂದು ಸಲ ಹೇಳಿದ್ದರು. ಮುಂಬಯಿ ನಗರವನ್ನು ಬೃಹತ್ ಮಹಾರಾಷ್ಟ್ರದಲ್ಲಿ ಸೇರಿಸುವುದು ಸರಿಯಲ್ಲ. ಅದನ್ನು ಹಾಗೆಯೇ ಇಡಬೇಕು ಎಂಬ ಪ್ರಶ್ನೆ

(ಶ್ರೀ ಎಸ್. ಗೋಪಾಲಗೌಡ)

ಇತ್ತು. ಆದರೆ ಆ ಕಾಲದಲ್ಲಿ ಮುಂಬಯಿ ಬಿಟ್ಟು ಮಹಾರಾಷ್ಟ್ರವನ್ನು ರಚಿಸುವುದಾದರೆ ಅದಕ್ಕೆ ಕಾರಣರಾದವರ ತಲೆ ತೆಗೆದುಹಾಕುವುದಾಗಿ ಹೇಳುತ್ತಿದ್ದರು. ಭಾಷೆಯ ಆಧಾರದ ಮೇಲೆ ಸರಿಯಾದ ರಚನೆಯಾಗಬೇಕು, ಪುನರ್ವಿಂಗಡನೆಯಾಗಬೇಕು ಎಂಬುದನ್ನು ಅನೇಕರು ಪ್ರತಿಪಾದನೆ ಮಾಡಿದ್ದರು. ಅದರಂತೆ ಕಾಲಕ್ರಮೇಣವಾಗಿ 16–18 ರಾಜ್ಯಗಳು ಭಾಷೆಯ ಆಧಾರದ ಮೇಲೆ ವಿಂಗಡಿಸಲ್ಪಟ್ಟವು. ಆಗ ಈಗಿನಂತೆ ಗಲಾಟೆಯಾಗುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಹೀಗೆ ವಿಂಗಡಿಸಲ್ಪಟ್ಟ ಸಣ್ಣ ಸಣ್ಣ ರಾಜ್ಯಗಳ ಅಭಿವೃದ್ಧಿಯಾದರೆ ಒಟ್ಟು ಭಾರತವೆಲ್ಲಾ ಅಭಿವೃದ್ಧಿಯಾಗುವುದು ಎಂದು ಭಾವಿಸಲಾಗಿತ್ತು.

ಇವತ್ತು ಶ್ರೀ ಚವಾನ್‌ರವರು ಕೇಂದ್ರದಲ್ಲಿ ಗೃಹಮಂತ್ರಿಯಾಗಿರುವುದೇ ಮಹಾಪರಾಧ. ಶಿವಸೇನೆ ಏನಿದೆ—ಶಿವ ಒಂದು ಅರ್ಥದಲ್ಲಿ ದೇವರ ಹೆಸರು ಆಗುತ್ತದೆ ಇನ್ನೊಂದು ಅರ್ಥದಲ್ಲಿ ಶಿವಾಜಿಯಾಗುತ್ತದೆ. ರಾಮದಾಸರು ಹೇಳಿರತಕ್ಕ ತತ್ವವನ್ನು ಶಿವಾಜಿ ಜಾರಿಗೆ ತಂದ. ಶಿವಾಜಿ ಮಾಡಿ ಮುಗಿಸದೇ ಹೋಗಿರತಕ್ಕ ಕೆಲಸಗಳನ್ನು ಅಭಿನವ ಶಿವಾಜಿ ಚವಾಣರು ಜಾರಿಗೆ ತರುತ್ತೇನೆ ಎನ್ನುವುದಾದರೆ ಈ ದೇಶವನ್ನು ದೇವರೇ ಕಾಪಾಡಬೇಕು. ಆ ಭಾವನೆ—ನಾನು ಅಭಿನವ ಬಸವಣ್ಣ ಅನ್ನುವ ಭಾವನೆ ಮಾನ್ಯ ಶ್ರೀ ನಿಜಲಿಂಗಪ್ಪನವರಲ್ಲೂ ಬರಬಾರದು. ಅದು ಗಂಡಾಂತರ ಕಾರಿ. ಯಾರೂ ಅಭಿನವ ಆಗುವುದೂ ಬೇಡ ಈ ಭಾವನೆಗಳು ಕಾಂಗ್ರೆಸ್ಸಿಗರಲ್ಲಿ ಹಂತ ಹಂತವಾಗಿ ಬೆಳೆದು ಬರುತ್ತಾ ಇದೆ. ಕೇಡುಗಾಲದ ಕಾಲದಲ್ಲಿ ಅವರ ತಲೆತಿರುಗಿ ರಾಷ್ಟ್ರ ಹಾಳಾದರೂ ಚಿಂತೆ ಇಲ್ಲ ನಾವು ಬದುಕಿದರೆ ಸಾಕು ಅನ್ನುವ ಮಟ್ಟಕ್ಕೆ ಬಂದಿದೆ ಎಂದು ಕಾಣುತ್ತದೆ ಅಲ್ಲವೇ ದೊಡ್ಡಮೇಟಿಯವರೇ ? (ನಗು) ; ಈ ರೀತಿ ಭಾವನೆ ಬಂದಂತೆ ಕಾಣುತ್ತದೆ. ಶ್ರೀ ವೀರೇಂದ್ರ ಪಾಟೀಲರವರು ಒಪ್ಪುತಾರೆಯೋ ಇಲ್ಲವೋ ಗೊತ್ತಿಲ್ಲ, ನನಗೆ ಹಾಗೆ ಕಾಣುತ್ತದೆ. ತಮ್ಮ ಅಭಿಪ್ರಾಯದ ಪ್ರಕಾರ ರಾಷ್ಟ್ರಕಿಂತ ನಾವೇ ದೊಡ್ಡವರು ನಮ್ಮ ಉಳಿವೇ ಈ ರಾಷ್ಟ್ರದ ಉಳಿವು ಎಂಬ ಭಾವನೆ ಏನಿದೆ ಇದು ಅಹಂಭಾವ. ಕೇಡುಗಾಲದ ಕಾಲಕ್ಕೆ ಬರತಕ್ಕ ಭಾವನೆ ಎಂದು ನಾನು ತಿಳಿಯುತ್ತೇನೆ, ಇದಕ್ಕಿಂತ ಹೆಚ್ಚಿಗೆ ಹೇಳುವುದಿಲ್ಲ. ಮೇನ್ ಸ್ಟ್ರೀಂ ಎಂಬ ಒಂದು ಪತ್ರಿಕೆ ಬರುತ್ತದೆ ದೆಹಲಿಯಿಂದ. ಅದು ಫೆಬ್ರವರಿ 15ನೇ ತಾರೀಖಿನದು, ಅದರಲ್ಲಿ ಕೆಲವು ಭಾಗಗಳನ್ನು ಉದಾಹರಣೆಗೆ ಹೇಳುತ್ತೇನೆ, ಏಕೆಂದರೆ ಅದು ನಾನು ಹೇಳಬೇಕಾದ್ದನ್ನು ಹೇಳಿದೆ. ಇಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮಹಾಜನ್ ಕಮಿಷನ್‌ನ್ನು ನಾವು ಈ ಭಾಗದವರು ಶಿವಪ್ಪನವರಾಗಲಿ, ನಾನಾಗಲಿ, ಕೇಂದ್ರದವರನ್ನಾಗಲಿ, ರಾಜ್ಯದವರನ್ನಾಗಲಿ ಕಾಡಿಬೇಡಿ ತೆಗೆದುಕೊಂಡಂಥಾದ್ದು ಅಲ್ಲ, ಹೆಚ್ಚಾಗಿ ಮಹಾರಾಷ್ಟ್ರಿಗರೇ ಒತ್ತಾಯಪಡಿಸಿದ್ದು. ನಮ್ಮವರೇ ಅದು ಸರಿಂತ ಅಂದದ್ದು. ಶ್ರೀಮಾನ್ ನಿಜಲಿಂಗಪ್ಪನವರು ಕೇವಲ ಮಹಾರಾಷ್ಟ್ರ ಮತ್ತು ಮೈಸೂರಿನ ಗಡಿ ವಿವಾದವನ್ನು ಸೂಚ್ಯಾಂಶದಲ್ಲಿ ಮಾತ್ರ ಒಪ್ಪಿಕೊಂಡಂತೆ ಕಾಸರಗೂಡನ್ನು ಸೇರಿಸಿದರು, ಮಡಕಸಿರಾ ಸೇರಿಸಲಿಲ್ಲ, ತಾಳವಾಡಿ ಫಿರ್ಕಾ ಸೇರಿಸಲಿಲ್ಲ, ಹೊಸೂರು ಸೇರಿಸಲಿಲ್ಲ, ಇತ್ಯಾದಿಗಳನ್ನು ಸೇರಿಸಲಿಲ್ಲ. ಇದರಲ್ಲಿ ರಾಜಕೀಯ ಮೇಲೆಯೇ ಕಾಣುತ್ತದೆ, ಶ್ರೀಮಾನ್ ಚವಾಣರವರು ಗೃಹ ಖಾತೆ ಮಂತ್ರಿಗಳು. ನ್ಯಾಯಮೂರ್ತಿ ಮಹಾಜನರವರು ದುರ್ದೈವವಶಾತ್ ಇವತ್ತು ಜೀವಂತವಾಗಿಲ್ಲ, ಅವರು ಒಂದು ವರದಿಯನ್ನು ಕೊಟ್ಟರು. ಅದನ್ನು ಓದಿದ ಮಹಾರಾಷ್ಟ್ರದವರಿಗೆ ಬಹಳ ನೋವಾಯಿತು. ನಿಪ್ಪಾಣಿಯಂತಹ ಭಾಗ ಸಿಕ್ಕಿತು ಅಂತ ಅವರಿಗೆ ಸಂತೋಷವಾಗಲಿಲ್ಲ. ಬೆಳಗಾಂನಂಥ ಭಾಗ ಬರಲಿಲ್ಲವಲ್ಲಾ ಅಂತ ಇನ್ನಷ್ಟು ಅವರಿಗೆ ರೋಷವುಂಟಾಯಿತು. ನಾನು ಹೇಳುವುದು ಇಷ್ಟೇ. ಯಾವ ಸರ್ಕಾರ ಈ ಮಹಾಜನ್ ಕಮಿಷನನ್ನು ನೇಮಕ ಮಾಡಿದೆ ಆ ಸರ್ಕಾರಕ್ಕೆ ಮಾನ, ಮರ್ಯಾದೆ, ಗೌರವ, ಘನತೆ ಏನಾದರೂ ಇದ್ದ ಪಕ್ಷದಲ್ಲಿ ಅದರಲ್ಲಿ ಅವಶ್ಯಕ ಎಂದು ಕಂಡುಬಂದರೆ ಅಲ್ಪಸ್ವಲ್ಪ ಬದಲಾವಣೆಗಳ ಜೊತೆಗೆ ಜಾರಿಗೆ ಕೊಡಬೇಕಾದ್ದು ಅವರ ಕರ್ತವ್ಯ, ಇಲ್ಲದೇ ಇದ್ದರೆ ತಾನು ಆ ಸ್ಥಳದಿಂದ ದೂರಸರಿಯಬೇಕು. ರಾಜೀನಾಮೆ ಕೊಡಬೇಕಾಗುತ್ತದೆ. ಚವಾಣರವರು ಮಹಜನ್ ಆಯೋಗದ ವರದಿಗೆ ನಾನು ವಿರುದ್ಧವಾಗಿದ್ದೇನೆ, ನನಗೆ ಬೆಳಗಾಂ ಬೇಕಾಗಿತ್ತು ಅದನ್ನು ಅವರು ಸೇರಿಸಿಲ್ಲ ಆದ್ದರಿಂದ ನಾನು ನನ್ನ ಗೃಹಖಾತೆಗೆ ರಾಜೀನಾಮೆ ಕೊಡುತ್ತೇನೆ ಎಂದು ಬಹಿರಂಗವಾಗಿ ಹೇಳಬೇಕಾಗಿತ್ತು. ಏನು, ಭಾರತವನ್ನು ಮಹಾರಾಷ್ಟ್ರ ಮಾಡಬೇಕು ಎನ್ನುವಂಥ ಆಶೆ ಚವಾಣ್ ರವರಿಗೆ ಇದೆಯೇ ಹೇಗೆ? ಯಾರು ಆಯೋಗವನ್ನು ನೇಮಕ ಮಾಡಿದರು. ಆ ಆಯೋಗ ಕೊಟ್ಟಂಥ ವರದಿಯನ್ನು ಕಾರ್ಯಗತ ಮಾಡುವಂತಹ ಹೊಣೆ ಜವಾಬ್ದಾರಿ ಅವರ ಮೇಲೆ ಇದೆ. ಅದು ಆ ಸರ್ಕಾರಕ್ಕೇ ಸೇರಿದ್ದು. ಮಹಾಜನ ಆಯೋಗದ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ.

ಕರ್ನಾಟಕ ರಾಜ್ಯದವರಾದ ಶ್ರೀ ವೀರೇಂದ್ರ ಪಾಟೀಲ್‌ರವರು ಮತ್ತು ಶ್ರೀಮಾನ್ ನಿಜಲಿಂಗಪ್ಪನವರು ಸ್ವಲ್ಪ ಅಲ್ಲ ಬಹಳ ದಾಕ್ಷಿಣ್ಯಕ್ಕೆ ಬಲಿ ಬಿದ್ದಿದ್ದಾರೆ. ಕೇಂದ್ರದವರಿಂದ ನಾವು ಬದುಕಿದ್ದೇವೆ ಎಂದು ತಿಳಿದುಕೊಂಡಿದ್ದಾರೆ, ಕೇಂದ್ರದವರಿಂದ ನಾನು ಕಾಂಗ್ರೆಸ್‌ನ ಅಧ್ಯಕ್ಷನಾದದ್ದು—ಆಶೀರ್ವಾದ ಅಂತ ಅಂದರಲ್ಲಾ ಶ್ರೀಮಾನ್ ಜ್ವಾಲನಯ್ಯನವರು—ಅದರಂತೆ ಶ್ರೀಮಾನ್ ನಿಜಲಿಂಗಪ್ಪನವರ ಆಶೀರ್ವಾದದಿಂದ ನಾನು ಕರ್ನಾಟಕದ ಮುಖ್ಯಮಂತ್ರಿಯಾದುದು, ಆದ್ದರಿಂದ ನೀರಿನ ವಿವಾದವಾಗಲಿ, ಮಹಾಜನ್ ಕಮಿಷನ್‌ನ ಆಯೋಗದ ವಿಷಯವಾಗಲಿ—ಈಚೆಗೆ ಏನೋ ಪತ್ರ ಬರೆಯುತ್ತಾ ಇದ್ದಾರೆ ಅಂತ—ಇವುಗಳ ಬಗ್ಗೆ ಅವರಿಗೆ ಏನೋ ಒಂದು ರೀತಿಯ ಮಿತಿಮೀರಿದ ಸೌಜನ್ಯ, ಮಿತಿಮೀರಿದ ಒಂದು ಔನ್ನತ್ಯ. ಕೇಂದ್ರ ಸರ್ಕಾರದವರು ನಮಗೆ ಮೇಲ್ಪಟ್ಟವರು ಅವರ ಮನಸ್ಸಿಗೆ ಅಥವಾ ಶ್ರೀಮಾನ್ ಚವಾಣರವರ ಮನಸ್ಸಿಗೆ ಖೇದವಾದರೆ, ಅವರಿಗೆ ಒಪ್ಪಿಗೆಯಾಗದೇ ಹೋದರೆ ನಮ್ಮನ್ನು ಡಿಸ್‌ಮಿಸ್ ಮಾಡುತ್ತಾರೆಯೋ ಏನೋ ಆಮೇಲೆ ನಾವು ಎಲ್ಲಿಗೆ ಹೋಗೋಣ ಎಂಬ ಭಯ ಈ ಸರ್ಕಾರದ ಹೊಟ್ಟೆಯಲ್ಲಿ ತುಂಬಿಕೊಂಡಂತೆ ಕಾಣುತ್ತದೆ. ನಾನು 20 ವರ್ಷದಿಂದ ನೋಡುತ್ತಾ ಇದ್ದೇನೆ ಈ ದುರವಸ್ಥೆಯನ್ನು. ಇದು ತಪ್ಪು. ಇದು ಈ ರಾಜ್ಯವನ್ನು ಪೂರ್ಣ ನಾಶ ಮಾಡುವುದಕ್ಕೆ ಕಾರಣವಾಗುತ್ತದೆ ಎಂದು ಮಾತ್ರ ವಿಷಾದದಿಂದ ಈ ಮಾತನ್ನು ಹೇಳುತ್ತೇನೆ. ತಾವು ಕಾರ್ಯಪಟುತ್ವ ತೋರಿಸಬೇಕು. ಈ ಒಂದು ರಾಜ್ಯದಲ್ಲಿ 2 ಕೋಟಿ 35 ಸಾವಿರ ಜನ ಬೇರೆಯವರ ಮುಲಾಜಿಗಾಗಿ ಹುಟ್ಟಿ ಬದುಕುತ್ತಾ ಇಲ್ಲ. ಅವರಿಗಾಗಿ ಅವರು ಹುಟ್ಟಿ, ಅವರಿಗಾಗಿ ಅವರ ನೆಲದಲ್ಲಿ ಅವರ ನೀರಿನಿಂದ ಬದುಕುತ್ತಾ ಇದ್ದಾರೆ ಎಂಬ ಮಾತನ್ನು ಯಾರೂ ಮರೆಯಬಾರದು.

ಇಷ್ಟು ಹೇಳಿದ ಮೇಲೆ ಮಹಾಜನ್ ವರದಿಯ ಮೇಲೆ ನಾನು ಇನ್ನೇನೂ ಹೇಳುವುದಕ್ಕೆ ಹೋಗುವುದಿಲ್ಲ, ಅದನ್ನು ಕಾರ್ಯಗತ ಮಾಡುವುದು ಅವರ ಜವಾಬ್ದಾರಿ. ಮರಾಠಿ ಸ್ನೇಹಿತರು ಮಾತ್ರ ಬೆಳಗಾಂನ್ನು ಕಬಳಿಸತಕ್ಕ ದುರಾಗ್ರಹವನ್ನು ಬಿಟ್ಟು ಕೊಡಬೇಕು ಇಲ್ಲವಾದರೆ ಅದು ಮತ್ತೊಂದು ರಕ್ತಪಾತಕ್ಕೆ ನಾಂದಿಯಾಗುತ್ತದೆ. ಸಾಕು, ಮಹಾರಾಷ್ಟ್ರ ದೊಡ್ಡ ರಾಷ್ಟ್ರವಾಗಿದೆ, ಆಳುವುದಕ್ಕೆ ಸಾಧ್ಯವಾಗದಷ್ಟು ದೊಡ್ಡ ರಾಜ್ಯವಾಗಿದೆ. ಅದನ್ನು ವಿದರ್ಭ ಮಾಡಬೇಕಾಗಿತ್ತು. ಮುಂಬೈಯನ್ನು ಕಾಸ್ಮಾಪಾಲಿಟನ್ ನಗರ ಅಂತ ಒಂದು ಸಿಟಿ ಸ್ಟೇಟ್ ಆಗಿ ಮಾಡಬೇಕಾಗಿತ್ತು, ಹಿರ್ ಸ್ಟೇಷನ್ ಮಾಡಬೇಕಾಗಿತ್ತು, ಇತ್ಯಾದಿ, ಇತ್ಯಾದಿ, ಮಾಡಬೇಕಾಗಿತ್ತು. ಮುಂಬೈಯನ್ನು ಹರಿದು ಹಂಚಬೇಕೆಂದು ನಾನು ಹೇಳುವುದಿಲ್ಲ, ಚವಾಣರವರು ಸರಿಯಾಗಿ ವರ್ತಿಸಬೇಕು. ವಿ ಪಿ ನಾಯಕ್‌ರವರ ಸರ್ಕಾರ ಗೌರವದಿಂದ ಈ ಪ್ರಕರಣದ ಸಂಬಂಧದಲ್ಲಿ ರಾಜೀನಾಮೆ ಕೊಡಬೇಕು. ನಾನು ಮರಾಠಿ ಮನುಷ್ಯನಲ್ಲ ನಾನು ಲಂಬಾಣಿ ಎಂದು ಅವರು ಹೇಳಬಹುದು. ಆದರೆ ಅವರು ಇವತ್ತು ಹೊಣೆ ಹೊತ್ತಂಥ ಮನುಷ್ಯ ಈ ದೃಶ್ಯಗಳನ್ನು ಕಣ್ಣಾರೆ ಕಂಡಂಥ ಮನುಷ್ಯ, ಇವತ್ತು ಕೇಂದ್ರದವರ ಮೇಲೆ ಮತ್ತು ಬೇರೆ ರಾಜ್ಯದವರ ಮೇಲೆ ಹೇಳುವುದಾದರೆ ಇದು ರಾಜ್ಯಾಡಳಿತ ಮಾಡತಕ್ಕ ಕ್ರಮವಲ್ಲ, ಪ್ರಜಾಪ್ರಭುತ್ವದ ಕ್ರಮವಂತೂ ಅಲ್ಲವೇ ಅಲ್ಲ. ಮತ್ತು ಇದು ನಾಗರೀಕತೆಯನ್ನು ಬೆಳೆಸತಕ್ಕ ಕ್ರಮವಲ್ಲ. ಸ್ವಾಮಿ ಈ ಶಿವಸೇನೆ ಬಗ್ಗೆ ಹೇಳುವುದು ಬಹಳವಾಗಿ ಇದೆ. ನಾನು ಟ್ರಿವ್ಯಾಂಡ್ರಂನಲ್ಲಿ ನಮ್ಮ ಅಧ್ಯಕ್ಷರು ಮರಾಠಿಯವರು—ಶ್ರೀಮಾನ್ ಎಸ್. ಎಂ. ಜೋಶಿಯವರ ಅಧ್ಯಕ್ಷತೆಯಲ್ಲಿ ಶಿವಸೇನೆಯ ದುಷ್ಕೃತ್ಯಗಳನ್ನು ಖಂಡಿಸುತ್ತೇವೆ ಅಂಥ ಒಂದು ನಿರ್ಣಯವನ್ನು ಕೊಟ್ಟು ಅಂಗೀಕಾರ ಮಾಡಿಸಿದ್ದೇನೆ. ಶ್ರೀಮಾನ್ ಎಸ್. ಕೆ. ಪಾಟೀಲರವರು ಮರಾಠಿಯವರು, ಅಲ್ಲಿ ಮೆನನ್‌ರವರು ಚುನಾವಣೆಗೆ ನಿಂತಾಗ, ಅವರು ಕೇರಳದವರು ಅನ್ನುವ ಕಾರಣದಿಂದ ಅವರನ್ನು ಸೋಲಿಸುವುದಕ್ಕೆ ಒಳಗೊಳಗೆ ಮರಾಠಿ ಜನರ ಸಂಘಟನೆ ನಡೆಯಿತು. ಹಣಕಾಸಿನ ಬೆಂಬಲ ದೊರೆಯಿತು, ವಿ. ಕೆ. ಕೃಷ್ಣ ಮೆನನ್‌ರವರನ್ನು ಸೋಲಿಸಿದ್ದು ಆಯಿತು, ಷೆಡ್ಡು ಹೊಡೆದದ್ದು ಆಯಿತು. ಇನ್ನೊಬ್ಬ ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವ, ಮಂಗಳೂರಿನವ, ನಮ್ಮ ಪಕ್ಷದವ ಜಾರ್ಜ್‌ಫರ್ನಾಂಡಿಸ್ ಎಸ್. ಕೆ. ಪಾಟೀಲ್‌ರವರ ವಿರುದ್ಧ ನಿಂತಾಗ ಈ ಸಂಚು ಮತ್ತಷ್ಟು ಬೆಳೆಯಿತು. ಅಪಾರವಾಗಿ ಹಣ ಬಾಲ್‌ಥ್ಯಾಕರ್ ಸಾಹೇಬರಿಗೆ ಸಿಕ್ಕಿತು. ಶಿವಸೇನೆ ವೃದ್ಧಿಗೊಂಡಿತು. ಶ್ರೀ ಎಸ್. ಕೆ. ಪಾಟೀಲರದು ಸೋಲಾಯಿತು. ನಿಮಗೇನು ಅನ್ನಿಸುತ್ತಿದೆಯೆಂದರೆ ವಿರೋಧಪಕ್ಷವನ್ನು ತುಳಿಯುವುದಕ್ಕೆ ಯಾವ ಕಾಲದಲ್ಲಿ ಯಾವುದನ್ನಾದರೂ ಬೆಳೆಸೋಣವೆನ್ನುವ ದುರಭಿಮಾನ ಕಾಂಗ್ರೆಸ್ ಸಂಸ್ಥೆಯವರಿಗೂ ಬಂದಂತೆ ಕಾಣುತ್ತದೆ. ಇದು ಅವರ ವಿನಾಶಕ್ಕೆಂದು ನಾನು ಮತ್ತೆ ಮತ್ತೆ ಒತ್ತಿ ಹೇಳುತ್ತೇನೆ. ಇದು ಪ್ರಜಾಪ್ರಭುತ್ವವನ್ನು ಕೊನೆಗಾಣಿಸುವ ಹಾಗೆ ಆಗುತ್ತದೆ. ಮಾನ್ಯ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಹೇಳಿದ್ದ ಒಂದು ಮಾತು ನಿಜವಾಗಿದೆ. ಅಮೇರಿಕಾದಲ್ಲಿ ಹಿಂದೆ ರಾಜ್ಯ ರಾಜ್ಯಗಳಿಗೆ ಯುದ್ಧ ನಡೆದು ರಕ್ತಪಾತ ನಡೆದು ಅದು ಅದೃಷ್ಟವಶಾತ್ ಒಂದು ದೇಶವಾಯಿತು. ಆದರೆ ಭಾರತ ದೇಶದಲ್ಲಿ ರಾಜ್ಯ ರಾಜ್ಯಗಳು ಛಿದ್ರ ವಿಚ್ಛಿದ್ರವಾಗಿ ಒಡೆದು, ಒಂದು ದೊಡ್ಡ ಯುದ್ಧವೇ ನಡೆದು ಹೆಣಗಳು ಬಿದ್ದು

(ಶ್ರೀ ಎಸ್. ಗೋಪಾಲಗೌಡ)

ರಕ್ತದ ಮಡುವು ಮತ್ತೆ ಉಂಟಾಗುವ ಸಂಭವ ಎದ್ದು ಕಾಣುತ್ತಿದೆ. ರಾಜಕೀಯ, ಸಾಮಾಜಿಕ, ಪ್ರಾದೇಶಿಕ, ಅಥವಾ ಮತೀಯ ಕಾರಣಕ್ಕೋ ಈ ಗೂಂಡಾಗಳು ಈ ರಾಜ್ಯವನ್ನು ನೆಲ ಸಮ ಮಾಡುವುದಕ್ಕೆ ಸಿದ್ಧರಾಗುತ್ತಾರೆ. ಅದಕ್ಕೆ ಅಮೇರಿಕಾದವರ ಬೆಂಬಲವೂ ಇದೆ. ಬೇರೆಯವರ ಬೆಂಬಲವೂ ಸಹ ಇದೆ. ಇಂತಹ ರಾಷ್ಟ್ರ ಹಾಳಾಗುವುದು ಅಂತರ ರಾಷ್ಟ್ರೀಯದಲ್ಲಿ ಬಹಳ ಜನರಿಗೆ ಬೇಕು. ಈಗ ಆ ಅರಿವು ನಮಗೆ ಇಲ್ಲವಲ್ಲಾವೆಂದು ನನಗೆ ವಿಷಾದವಾಗಿದೆ. ಅದು ಈಗ ನನಗೆ ಕಾಣುತ್ತಿದೆ. ಇನ್ನು ನಾಲ್ಕು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕೆಲವು ಕೊಟೇಷನ್ಸ್‌ಗಳನ್ನು ಇಂಗ್ಲೀಷ್‌ನಲ್ಲಿ ಓದುತ್ತೇನೆ. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಕ್ಷಮಿಸಬೇಕು. ಮುಂಬೈಯಲ್ಲಿ ಶಿವಸೇನೆಯ ಚಳುವಳಿಯಲ್ಲಿ 52 ಹೆಣಗಳು ಬಿದ್ದುವು ಎಂದು ಮಾನ್ಯ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಹೇಳಿದರು. ಒಂದು ಕೊಟೇಷನ್ ಈ ರೀತಿ ಇದೆ :—

> "Shiva Sena has throughout had well wishers and supporters in the police force and among the State's officialdom apart from friends and allies in the political field The traditional goonda elements of greater Bombay who have close ties with certain political leaders found a new and respectable medium for their activities. They would be unrealistic to lose sight of these factors in assessing the growth and strength of Shiva Sena."

ಅಲ್ಲಿ 5 ಕೋಟಿ ರೂಪಾಯಿಗಳು ಲುಕ್ಸಾನು ಆಗಿದೆಯೆಂದು ಕಂಡು ಬಂದಿದೆ. ಅಲ್ಲಿ ಕೇರಳದವರು ಬಹಳ ಮಂದಿ ಇದ್ದಾರೆ. ಅವರ ವೃತ್ತಿ ಮರಗಳನ್ನು ಕೊಯ್ಯುವುದು, ಸೀಮೆಯೆಣ್ಣೆ ವ್ಯಾಪಾರ ಮಾಡುವುದು ಆಗಿದೆ. ಹಡಗಿನಿಂದ ಬಂದಂಥ ಸಾಮಾನುಗಳನ್ನು ಅಲ್ಲಿ ಇಳಿಸಬೇಕಾದರೆ ಕೇರಳದವರು ಮತ್ತು ಮಂಗಳೂರಿನವರು ಬೇಕು. ತೀರಾ ಕೆಟ್ಟ ಮಾತು ಹೇಳಬೇಕೆಂದರೆ, ಒಳ್ಳೆಯ ಗಟ್ಟಿಮುಟ್ಟಾಗಿರುವ 9 ವರ್ಷಗಳಿಂದ ಅಲ್ಲಿದ್ದು ಅನುಭವ ಹೊಂದಿರತಕ್ಕ ವೇಶ್ಯೆಯರನ್ನು ಬಿಜಾಪುರದವರು ಅಲ್ಲಿಗೆ ಕರೆದುಕೊಂಡು ಬರುತ್ತಾರೆ. ಈ ರೀತಿಯಾಗಿ ಹೇಳಿದ್ದಕ್ಕೆ ಬಿಜಾಪುರದ ಸದಸ್ಯರು ನನ್ನನ್ನು ಕ್ಷಮಿಸಬೇಕು. ಅನೇಕ ಜನ ಮಂಗಳೂರಿನವರು ಅಲ್ಲಿ ವಿಕ್ಟೋರಿಯಾವನ್ನು ನಡೆಸುತ್ತಿದ್ದಾರೆ. ಅಲ್ಲಿ ಟ್ಯಾಕ್ಸಿ ಡ್ರೈವರ್ಸ್ ಎಷ್ಟು ಮಂದಿ ಎಂಬುದು ನನಗೆ ಗೊತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯವರು ಹೆಚ್ಚು ಕಡಿಮೆ 10 ಲಕ್ಷ ಬೊಂಬಾಯಿನಲ್ಲಿದ್ದಾರೆ. ಎಷ್ಟೋ ಜನ ಹೋಟಲು ನಡೆಸುತ್ತಿದ್ದಾರೆ ಸಣ್ಣ ಚಾಕರಿ ಮಾಡುತ್ತಿದ್ದಾರೆ. ಬೀದಿ ಗುಡಿಸುವ ಕೆಲಸ ಮಾಡುವವನಿಂದ ಹಿಡಿದು ಎಲ್ಲರೂ ಮುಂಬೈ ನಾವು ಕಟ್ಟಿದ್ದೇವೆ, ಅದನ್ನು ಹಾಗೆ ಇಟ್ಟಿದ್ದೇವೆ, ಹೀಗೆ ಇಟ್ಟಿದ್ದೇವೆ, ನಾವು ಅದನ್ನು ನಡೆಸುತ್ತಿದ್ದೇವೆಂದು ಹೇಳುತ್ತಾರೆ. ಜಾರ್ಜ್ ಫರ್ನಾಂಡೀಸ್ ಅವರು ಇವತ್ತು ಮುಂಬೈನಲ್ಲಿ ಎಲ್ಲಾ ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್ನಿನ ಪ್ರೆಸಿಡೆಂಟ್‌ರಾಗಿದ್ದಾರೆ. ಅಲ್ಲಿ ಲಕ್ಷಾಂತರ ಜನಗಳು ಕೂಲಿಗಾರರು ಇದ್ದಾರೆ. ಕೂಲಿಗಾರರ ಮತ್ತು ಕಾರ್ಮಿಕರ ಸಂಘಟನೆಯನ್ನು ಮುರಿಯಬೇಕೆಂಬುದು ಲಕ್ಷಾಧೀಶ್ವರರಾಗಿರತಕ್ಕ, ಮಿಲ್ ಮಾಲೀಕರಾಗಿರತಕ್ಕವರ ಸಂಚು. ಬಾಳ್ ಠ್ಯಾಕರೆಯವರ ಎಡಗೈಯಲ್ಲಿ ದುಡ್ಡು ಕೊಟ್ಟು ಅವರಿಗೆ ಬೆಂಬಲರಾಗಿ ಇರುತ್ತಾರೆ. ಎಡಪಕ್ಷದವರನ್ನು ಮುರಿಯಬೇಕೆಂದು ಬಂಡವಾಳಷಾಹಿ ರಾಜಕೀಯ ಪಕ್ಷಗಳ ಮತ್ತು ಕಾಂಗ್ರೆಸ್ಸಿನ ಸಂಚು. ಆದ್ದರಿಂದ ಈ ಶಿವಸೇನೆ ಇಷ್ಟು ಶೀಘ್ರವಾಗಿ, ಇಷ್ಟು ಕ್ರೂರವಾಗಿ ರಾಕ್ಷಸೀ ಹಲ್ಲುಗಳನ್ನು ತೋರಿಸುವುದಕ್ಕೆ ಕಾರಣವಾಗಿದೆ. ಇನ್ನೊಂದು ಕೊಟೇಷನ್ ಈ ರೀತಿ ಇದೆ :

> "No doubt the extent of damage done and the sense of insecurity created in Greater Bombay will induce the authorities to take measures to restore normal law and order. The belated arrest of chief trouble makers may be taken as an indication that the authorities have at least waken up to the dimensions to which they have encouraged and assisted hooliganism to grow resulting in major threat to democratic way of life in the nation's foremost and most cosmopolitan city."

ಮತ್ತೊಂದು ಕೊಟೇಷನ್ ಅದು ಹೀಗಿದೆ:

> "Reactionary and goonda elements are always available to be made use of for such purposes. By making use of them, the goondas, the Congress bosses like Sri S. K. Patil in many States have contributed to undermining the growth of democracy. They are as much responsible for the growth of communal and anti-national organisations and providing a sense of insecurity in many areas of the country as they are to the speedy rise of Shiva Sena into a major menace to orderly democratic life in Greater Bombay."

ಇನ್ನೊಂದು ಸಣ್ಣ ಕೊಟೇಷನ್. ಅದು ಈ ರೀತಿ ಇದೆ :

> "It is the responsibility of all political parties (including the S.S.P.) which believe in parliamentary democracy as also intellectuals and others to extricate such youth from the tentacles of organisations like the Shiva Sena."

ಶ್ರೀ ಪಿ. ಕೆ. ಅತ್ರೆಯವರ ಅಳಿಯಂದಿರಾದ ಶ್ರೀ ಬಾಲಥಾಕರ್ ಅವರು ಬೊಂಬಾಯಿ ಇಂಟೆಲೆಕ್ಚುಯಲ್ ಸಿಟಿ ಎಂದು ಹೇಳಿದ್ದಾರೆ. ನಮ್ಮ ಸ್ನೇಹಿತರು ಮೈಸೂರಿನಲ್ಲಿ ಮೊನ್ನೆ ಲೋಹಿಯಾ ಸೇನೆ ಮಾಡಿದ್ದಾರೆ. ನಾನು ಶ್ರೀ ವೀರೇಂದ್ರಪಾಟೀಲ್‌ರಿಗೆ ಕೊಟ್ಟಿರತಕ್ಕ ಮಾಹಿತಿಯಲ್ಲಿ ಎರಡು ಸೇನೆ ಹೇಳಿದ್ದೇನೆ. ಒಂದು ಅಕ್ಷರ ಸೇನೆ, ಇನ್ನೊಂದು ರಚನಾ ಸೇನೆ. ಒಳ್ಳೆಯ ಭೂಮಿಯನ್ನು ಹಸನ'ಗೊಳಿಸುವುದಕ್ಕೆ, ನೀರಾವರಿ ಉದ್ಯೋಗ ಕಲ್ಪಿಸುವುದಕ್ಕೆ, ಈ ಎಲ್ಲಾ ಕೆಲಸಗಳನ್ನು ಮಾಡುವುದಕ್ಕೆ ಒಂದು ರಚನಾ ಸೇನೆ ಬೇಕು. ಇವತ್ತು ಒಂದು ರೂಪಾಯಿ ಸಂಬಳ ಕೊಟ್ಟರೆ ಗಂಡಸು 10 ಆಣೆ ಕೊಟ್ಟರೆ ಹೆಂಗಸು ಕೆಲಸಕ್ಕೆ ಬರುತ್ತಾರೆ. ಕೆಲಸವಿಲ್ಲವೆ ಲಕ್ಷಾಂತರ ಜನರಿದ್ದಾರೆ. ಅಂತಹ ಸೇನೆ ರಚನೆ ಮಾಡಬೇಕಾಗಿದೆ. ನಾನು ಅದನ್ನು ಭೂಸೇನೆ ಎಂದು ಕರೆಯಲಿಲ್ಲ. ಅನ್ನ ಸೇನೆಯೆಂದು ಕರೆಯಲಿಲ್ಲ. ರಚನಾ ಸೇನೆಯೆಂದು ಕರೆದಿದ್ದೇನೆ. ಅದೇ ರೀತಿ ಅಕ್ಷರ ಸೇನೆಯೂ ಅಗತ್ಯ. ಇವತ್ತು ಶಾಲೆಯಲ್ಲಿರತಕ್ಕ ಉಪಾಧ್ಯಾಯರುಗಳಿಗೆ 5—10 ರೂಪಾಯಿ ಕೊಟ್ಟರೆ ಅವರು 5 ವರ್ಷಗಳಲ್ಲಿ ನಿರಕ್ಷರಕುಕ್ಷಿಗಳನ್ನು ಅಕ್ಷರಸ್ಥರನ್ನಾಗಿ ಮಾಡುತ್ತಾರೆ. ಚೈನಾದೇಶದವರು ಈಗಾಗಲೇ ಇದನ್ನೇ ಮಾಡುತ್ತಿದ್ದಾರೆ. ಇದರಿಂದ ಪ್ರಜಾಪ್ರಭುತ್ವ ಸ್ಫೂರ್ತಿಗೊಳ್ಳುತ್ತದೆ ; ಮತ್ತು ಜನರು ಇದರಿಂದ ಕಣ್ಣು ತೆರೆದು ಕಾಣುವಂತರಾಗುತ್ತಾರೆ. ಜನತೆಗೆ ಮೊದಲು ಕಣ್ಣು ಕೊಡಿಸಿ, ಹತ್ತು ಜನರ ಮೊದಲು ಕಣ್ಣು ಬಿಡಿಸಿ. ಅದಿಲ್ಲದೆ ನೀವು ರಾಜ್ಯಭಾರ ಮಾಡಬೇಡಿ ; ಹಾಗೆ ಮಾಡಿದರೆ, ಅದು ಅಂಧಕರ ರಾಜ್ಯವಾಗುತ್ತದೆ.

ಕೊನೆಯದು ಒಂದು ಕೊಟೇಶನ್ ಈ ರೀತಿ ಇದೆ :

10-30 A.M.

> "In the immediate future, the Centre has a big responsibility for ensuring that normal life in Bombay is not disrupted by organised goondaism. It must direct the State authorities to maintain law and order and if it is found that the State Government is unequal to it, there should be no hesitation to take over the administration of Greater Bombay so that the Union Government can assume direct responsibility for the lives of the millions living in the vast City. Sri Chavan cannot shirk his responsibility on this score."

ಕೊನೆಯದಾಗಿ, ಈ ಸದನದ ಮತ್ತು ನಮ್ಮ ವಿರೋಧ ಪಕ್ಷದ ಪರವಾಗಿ ನಮ್ಮ ರಾಜ್ಯದ ಜನರು ಅಲ್ಲಿ ಏನು ನಷ್ಟಗೊಂಡಿದ್ದಾರೆ, ಏನು ದಿಗ್‌ಭ್ರಾಂತರಾಗಿದ್ದಾರೆ, ಯಾರು ಮಕ್ಕಳು ಮರಿಗಳನ್ನು

(ಶ್ರೀ ಎಸ್. ಗೋಪಾಲಗೌಡ)

ಕಳೆದುಕೊಂಡಿದ್ದಾರೆ, ಹೊಟೇಲು, ಮನೆ ಮಠಗಳನ್ನು ಯಾರು ಕಳೆದುಕೊಂಡಿದ್ದಾರೆ, ಅವರಿಗೆ ನಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇನೆ. ಅದೇ ರೀತಿ ಮಾನ್ಯ ಶ್ರೀನಿವಾಸರವರು ಏನು ಇಲ್ಲಿ ವ್ಯಕ್ತಪಡಿಸಿದ್ದಾರೆ, ಹಾಗೆ ಅಲ್ಲಿಗೆ ಇಲ್ಲಿಂದ ಒಂದು ತಂಡವನ್ನು ಕಳಿಸಿ, ಅಲ್ಲಿ ಅವರಿಗೆ ಸಂಭವಿಸಿದ ಕಷ್ಟನಷ್ಟಗಳನ್ನು ಅಂದಾಜುಪಡಿಸಿ, ರಾಜ್ಯದ ಪರವಾಗಿ ಏನಾದರೂ ಅವರ ಒಂದು ಪುನರ್ ವ್ಯವಸ್ಥೆಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿ ನಾನು ತಮಿಳ್‌ನಾಡ್, ಕೇರಳ ಮತ್ತು ಆಂಧ್ರದ ಜನತೆಗೂ ಮತ್ತು ಮಹಾರಾಷ್ಟ್ರದ ಜನರಿಗೂ ಏನು ನಷ್ಟ ಉಂಟಾಗಿದೆ, ಅವರಿಗೂ, ದುಃಖವನ್ನು ವ್ಯಕ್ತಪಡಿಸುತ್ತೇನೆ. ಅದೇ ರೀತಿ ಬೊಂಬಾಯಿಯಲ್ಲಿರತಕ್ಕಂಥವರ ಒಂದು ಕೂದಲೂ ಕೂಡ ಕೊಂಕದಂತೆ ನಾನು ಆಡಳಿತ ವ್ಯವಸ್ಥೆಯನ್ನು ಪುನರ್ ವ್ಯವಸ್ಥೆ ಮಾಡುತ್ತೇನೆಂಬ ಭರವಸೆಯನ್ನು ಇವರು ಕೊಡಬೇಕಾಗಿದೆ. ಶ್ರೀಮಾನ್ ವಾಟಾಳ್ ನಾಗರಾಜರ ಪರವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ನಮಗೆ ಕನ್ನಡಿಗರಿಗೆ, ನರನಾಡಿಗಳಲ್ಲಿ ನೀರು ಹರಿಯುತ್ತದೆ ಎಂದು ಯಾರೂ ತಿಳಿದುಕೊಳ್ಳಬಾರದು. ನಮ್ಮ ಸೌಜನ್ಯತೆಯನ್ನು, ದೈನ್ಯತೆಯನ್ನು ನಮ್ಮ ಅಸಹಾಯಕತೆಯೆಂದು ತಿಳಿಯುತ್ತಾರೆ. ತ್ಯಾಕರೆಯವರ ಧಮನಿಗಳಲ್ಲಿ ರಕ್ತ ಹರಿದಂತೆ ನಮ್ಮ ಧಮನಿಗಳಲ್ಲಿಯೂ ರಕ್ತ ಹರಿಯುತ್ತದೆ. ನಮ್ಮ ಈ ಬೆಂಗಳೂರಿನಲ್ಲಿಯೂ ಬಹಳ ಜನ ಮರಾಠಿಯವರು ಇದ್ದಾರೆ. ಇಲ್ಲಿ 60–61 ಭಾಷೆಗಳನ್ನು ಮಾತನಾಡತಕ್ಕ ಜನರು ಬೆಂಗಳೂರಿನಲ್ಲಿದ್ದಾರೆ. ಲಕ್ಷಾಂತರ ಜನ ತಮಿಳರು ಇದ್ದಾರೆ, ಮಲಯಾಳಿ ಜನರೂ ಇದ್ದಾರೆ. ಇತ್ತೀಚೆಗೆ ಸಿರ್ಸಿಯಲ್ಲಿ ಮಲೆಯಾಳಿ ಜನರನ್ನು ಲೂಟಿ ಮಾಡಿದ್ದಾರೆ. ಅದೇ ರೀತಿ ಸಿದ್ದಾಪುರದಲ್ಲಿ ಮಲೆಯಾಳಿಯವರನ್ನು ಲೂಟಿ ಮಾಡಿದ್ದಾರೆ. ಇಂಥ ಗಂಭೀರ ಸ್ವರೂಪವನ್ನು ಅರ್ಥ ಮಾಡಿಕೊಳ್ಳದೆ ರಾಷ್ಟ್ರದ ಐಕ್ಯತೆ ಬಗ್ಗೆ ಮಾತನಾಡಿದರೆ ಏನು ಪ್ರಯೋಜನ? ಶ್ರೀಮತಿ ಗಾಂಧಿಯವರು, ನಮ್ಮ ಮೈಸೂರಿನ ಎಂ. ಪಿ. ಗಳು ನಿನ್ನೆ ಅವರನ್ನು ಭೇಟಿ ಮಾಡಿ, ಆ ರೀತಿ ನಮಗೆ ರಕ್ತಪಾತ ಮಾಡುವುದಕ್ಕೆ ಬರುವುದಿಲ್ಲವೇ, ಎಂದು ಕೇಳಿದಾಗ, ಮಾಡುವುದಕ್ಕೆ ಬರುತ್ತದೆ ಎಂದು ಹೇಳುವುದಾದರೆ, ನಾವು ಅದನ್ನು ವಿಚಾರ ಮಾಡಬೇಕಾಗುತ್ತದೆ. ರಕ್ತಪಾತ ಮಾಡಬೇಕಾದರೆ, ಮಾಡೋಣ. ''ರಕ್ತ ಹರಿದರೂ, ಹರಿಯದಿದ್ದರೂ, ಕ್ರಾಂತಿ ತರಬೇಕು, ಇಲ್ಲದಿದ್ದರೆ ನಾವು'' ಎಂದು ಜಿ. ಪಿ. ರಾಜರತ್ನಂ ಹೇಳಿದ್ದಾರೆ. ನಾವು ನೀವು ತೀರ್ಮಾನ ಮಾಡುವುದಾದರೆ, ಜನಸಂಘ, ನಾಕ್ಸಲೈಟ್ಸ್ ಎಲ್ಲಾ ತೀರ್ಮಾನ ಮಾಡುವುದಾದರೆ, ಒಂದು ದಿವಸ ಘೋಷಣೆ ಮಾಡೋಣ, ಮತ್ತೊಂದು ಮಹಾಭಾರತ ಯುದ್ಧವಾಗಲಿ ; ರಕ್ತದ ಕೋಡಿ ಹರಿಯಲಿ, ಹೊಸ ರಾಷ್ಟ್ರ ಸೃಷ್ಟಿಯಾಗಲಿ. ಮುಸಲ್ಮಾನರ ಕತ್ತು ಕೊಯ್ಯುವುದು ಘಟನಾತ್ಮಕವಾಗಿದ್ದರೆ, ಈ ರಾಷ್ಟ್ರದ ಭವಿಷ್ಯವನ್ನು ತೀರ್ಮಾನ ಮಾಡೋಣ. ಆದರೆ ಬೊಂಬಾಯಿಯ ಬೀದಿಯಲ್ಲಿ ಕರ್ಣಾಟಕದ ಜನರ ಹಣೆಬರಹವನ್ನು ತೀರ್ಮಾನ ಮಾಡುವುದು ಬೇಡ. ಅದನ್ನು ಜನಸಂಘವೂ ತೀರ್ಮಾನ ಮಾಡುವುದು ಬೇಡ, ನಾಕ್ಸಲೈಟ್ಸ್ ತೀರ್ಮಾನ ಮಾಡುವುದು ಬೇಡ. ಎಲ್ಲರೂ ಕುಳಿತು ಮಾತನಾಡೋಣ. ಈ ರೀತಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸತ್ತ ಹೆಣದಂತೆ ತೀರ್ಮಾನ ಮಾಡುವ ಗತಿ ಬಂದರೆ, ಆನೆ, ಕುದುರೆ, ರಥಗಳನ್ನು ಸಿದ್ಧ ಮಾಡೋಣ, ಮತ್ತು ಅದರ ಮೇಲೆ ಹೋರಾಟ ಮಾಡೋಣ. ಈ ಮಾತನ್ನು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ರಾಷ್ಟ್ರವನ್ನು ಅಂಥ ನರಕದ ರಕ್ತಪಾತಕ್ಕೆ ತಳ್ಳಬೇಡಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಂ ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಯವರೇ, ನಾನು ಕೆಲವು ದಿವಸಗಳ ಹಿಂದೆ ಬೊಂಬಾಯಿಯಲ್ಲಿ ಶಿವಸೇನೆಯವರು ಮಾಡಿದಂತಹ ಗಂಭೀರವಾದ ಗಂಡಾಂತರ ವಿನಾಶಕಾರಿ ಕೃತ್ಯವನ್ನು ಖಂಡಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಶಿವಸೇನೆಯವರು ನಿಜವಾಗಿಯೂ ಒಂದು ದೇಶದ ಉದ್ಧಾರಕ್ಕಾಗಿ ಹುಟ್ಟಿದಂತಹ ಸೇನೆಯಲ್ಲ. ಇದು ಕೇವಲ ಮಹಾರಾಷ್ಟ್ರದಲ್ಲಿ ಮರಾಠಿ ಜನರ ಹಿತಾಸಕ್ತಿಗಳನ್ನು, ಮರಾಠಿ ಜನರ ಉದ್ಯೋಗಗಳನ್ನು ಮತ್ತು ಈಗ ಮಹಾರಾಷ್ಟ್ರದಲ್ಲಿರತಕ್ಕಂತಹ ಕಾಂಗ್ರೆಸ್ ಸರ್ಕಾರಕ್ಕೆ ಪ್ರಸಂಗ ಬಂದರೆ, ಸಹಾಯ ನೆರವು ನೀಡುವಂತಹ ಒಂದು ಫ್ಯಾಸಿಸ್ಟ್ ಮನೋವೃತ್ತಿಯ ಸಂಸ್ಥೆ ಎಂದು ಹೇಳುತ್ತೇನೆ. ಶಿವಸೇನೆಯವರು ನಿಜವಾಗಿಯೂ ಬಹಳ ಗಂಡಾಂತರಕಾರಿ ಕೆಲಸಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ. ಮಹಾರಾಷ್ಟ್ರದಲ್ಲಿರತಕ್ಕಂತದ್ದು ಕಾಂಗ್ರೆಸ್ ಸರ್ಕಾರ. ಅಲ್ಲಿರುವ ಕಾಂಗ್ರೆಸ್ ಸರ್ಕಾರ ತಿಳಿದುಕೊಳ್ಳಬೇಕಾಗಿತ್ತು ಏನೆಂದರೆ, ಶಿವಸೇನೆಯಿಂದ ನಮಗೆ ಉಪಯೋಗವಿಲ್ಲ, ಇದು ಒಂದು ಅಪಾಯಕಾರಿ ಸೇನೆ, ಮತ್ತು ಕಾಲ ಹೋದ ಹಾಗೆ, ನಮ್ಮನ್ನು ಇದು ತಿಂದು ಹಾಕುತ್ತದೆ ಎಂದು. ದುರ್ದೈವದಿಂದ ಅವರು ತಿಳಿದುಕೊಳ್ಳಲಿಲ್ಲ. ಮಹಾರಾಷ್ಟ್ರದಲ್ಲಿ ಬೇರೆ ಪ್ರಾಂತದಿಂದ ಬಂದಂತಹ ಜನರು, ದಕ್ಷಿಣ ಕನ್ನಡದಿಂದ ಬಂದ ಜನರು ಎಲ್ಲಾ ಉದ್ಯೋಗಗಳಲ್ಲಿ ಹೆಚ್ಚಾಗಿ

ಇದ್ದಾರೆ. ಅಂಥ ಉದ್ಯೋಗಗಳಲ್ಲಿರುವ ಜನರನ್ನು ಅಲ್ಲಿಂದ ಹೊರಗೆ ಹಾಕದಿದ್ದರೆ, ಮಹಾರಾಷ್ಟ್ರಕ್ಕೆ ಪ್ರಗತಿ ಇಲ್ಲ ಉಳಿಗಾಲವಿಲ್ಲವೆಂದು ಶಿವಾಜಿ ಹೆಸರಿನಲ್ಲಿ ಈ ಸೇನೆ ತಯಾರಾಗಿದೆ. ನಿಜವಾಗಿಯೂ ಇಂಥ ಫ್ಯಾಸಿಸ್ಟ್ ವೃತ್ತಿಯ ಸೇನೆಯನ್ನು ಮಹಾರಾಷ್ಟ್ರ ಸರ್ಕಾರ ಪೋಷಿಸುತ್ತಾ ಬಂದಿದೆ ಎಂದು ತಿಳಿದುಕೊಂಡಲ್ಲಿ ನಮಗೆ ಅದರಲ್ಲಿ ಆಶ್ಚರ್ಯಕ್ಕೆ ಕಾರಣವಿಲ್ಲ. ಏಕೆಂದರೆ, ಇದಕ್ಕೆ ಮಹಾರಾಷ್ಟ್ರ ಸರ್ಕಾರದವರು ಏನೇನು ಬಂಡವಾಳ ಬೇಕು, ಅದನ್ನು ಕೊಟ್ಟು, ಇನ್ನೂ ಅನೇಕ ತರದ ಪ್ರೋತ್ಸಾಹ ಕೊಟ್ಟು ಕಾಪಾಡುತ್ತಿದ್ದಾರೆ ಎಂದು ಈ ಸಮಯದಲ್ಲಿ ಹೇಳಬೇಕಾಗಿದೆ. ಈ ಸೇನೆಯವರು ತಮಗೆ ಏನು ಬೇಕು ಅದನ್ನು ಮುಂದೆ ಹಾಕಿಕೊಂಡು ಕಾರ್ಯಪ್ರವೃತ್ತಿಯನ್ನು ಮಾಡಿಕೊಂಡು ಬಂದಿದ್ದಾರೆ. ಈ ಮಹಾಜನ್ ಕಮಿಶನ್ ವರದಿ ಹೊರಬಿದ್ದ ನಂತರವೂ ಮಹಾರಾಷ್ಟ್ರದ ಮುಖ್ಯಮಂತ್ರಿ ಮತ್ತು ಕೇಂದ್ರದ ಮಂತ್ರಿಯವರು ಅದು ಸರಿಯಲ್ಲವೆಂದು ಒಪ್ಪಿಕೊಂಡರು. ಅವರು ಮೌನವಾಗಿ ಕುಳಿತುಕೊಂಡರು. ಈ ವ್ಯಾಖ್ಯಕ್ಕೆ ಅದರ ಉಪಯೋಗವನ್ನು ಮಾಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಶಿವಸೇನೆಯನ್ನು ಮುಂದುಮಾಡಿದರು. ಗಡಿ ಚಳುವಳಿಯ ಸಲುವಾಗಿ ಸಂಪೂರ್ಣ ಮಹಾರಾಷ್ಟ್ರ ಏಕೀಕರಣ ಸಮಿತಿ ಹಾಗೂ ಲಡ್‌ಸಮಿತಿ ಎಂದು ಮಹಾರಾಷ್ಟ್ರದಲ್ಲಿ ಮಾಡಿ ಲಡ್ ಸಮಿತಿಯವರು ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ತಮ್ಮ ಕಾರ್ಯದಲ್ಲಿ ಯಶಸ್ವಿಯಾಗಲಿಲ್ಲ. ಆಗ ಶಿವಸೇನೆಯ ನಾಯಕ ಬಾಳಠಾಕರೆ ಅವರು ಮಹಾರಾಷ್ಟ್ರಕ್ಕೆ ಬೆಳಗಾಮನ್ನು ಕೊಡಿಸುತ್ತೇನೆ. ಕರ್ಣಾಟಕದಲ್ಲಿರುವಂತಹ ಇತರ ಮಹಾರಾಷ್ಟ್ರದ ಭಾಗಗಳನ್ನು ಮಹಾರಾಷ್ಟ್ರಕ್ಕೆ ಕೊಡಿಸುತ್ತೇನೆ ಕಾಳಜಿ ಮಾಡಬೇಡಿ ಎಂದು ಆಶ್ವಾಸನೆಯನ್ನು ಕೊಟ್ಟರು. ಆಮೇಲೆ ಅವರು ನಮ್ಮರಾಜ್ಯದ ಬೆಳಗಾವಿಗೆ ಬಂದು ಮಹಾರಾಷ್ಟ್ರ ಏಕೀಕರಣ ಸಮಿತಿಯ ಆಶ್ರಯದಲ್ಲಿ ನಡೆದಂತಹ ಒಂದು ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಾ ಮಹಾರಾಷ್ಟ್ರಕ್ಕೆ ಬೆಳಗಾಮನ್ನು ಕೊಡಿಸುವಂಥ ಜವಾಬ್ದಾರಿ ನನ್ನದು ಇದೆ. ಶಿವಸೇನೆಯ ಆಶ್ರಯದಿಂದ, ಶಿವಸೇನೆ ಕಡೆಯಿಂದ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಕೊಡಿಸುತ್ತೇನೆ ಎಂದು ಘಂಟಾಘೋಷವಾಗಿ ಹೇಳಿದರು. ಈ ಪ್ರಶ್ನೆಯನ್ನು ಈ ಸಮಸ್ಯೆಯನ್ನು ಶ್ರೀಮಾನ್ ಚವಾಣರು ಬಿಡಿಸಲಿಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ವಿ. ಪಿ. ನಾಯಕರು ಈ ಪ್ರಶ್ನೆಯನ್ನು ಬಿಡಿಸುವುದಕ್ಕೆ ಸಾಧ್ಯವಿಲ್ಲ. ಈ ಪ್ರಶ್ನೆಯನ್ನು ನಾನು ಬಿಡಿಸುತ್ತೇನೆ. ಈ ಪ್ರಶ್ನೆ ವಿಧಾನಸಭೆಯಲ್ಲಿ ಇತ್ಯರ್ಥವಾಗುವುದಿಲ್ಲ. ಪಾರ್ಲಿಮೆಂಟಿನಲ್ಲಿ ಇತ್ಯರ್ಥವಾಗುವುದಿಲ್ಲ. ಈ ಬೆಳಗಾವಿ ಪ್ರಶ್ನೆಯನ್ನು ಮುಂಬಯಿ ಬೀದಿಯಲ್ಲಿ ನಾನು ಇತ್ಯರ್ಥ ಮಾಡುತ್ತೇನೆ ಎಂದು ಬೆಳಗಾವಿಯಲ್ಲಿ ಹೇಳಿದ್ದಾರೆ. ಶ್ರೀಮಾನ್ ಬಾಳ ಠಾಕರೆಯವರು ಬೆಳಗಾವಿಗೆ ಬಂದು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಕೊಡಿಸುತ್ತೇನೆ ಎಂದು ಧೈರ್ಯವಾಗಿ ಹೇಳಬೇಕಾದರೆ ಅವರಿಗೆ ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಮತ್ತು ಮಹಾರಾಷ್ಟ್ರದ ಪುಡಾರಿಗಳು ಇದಕ್ಕೆ ಚಾಲನೆ ಕೊಡುತ್ತಿದ್ದಾರೆ, ಅವರು ಇವರಿಗೆ ಬೆಂಬಲ ಕೊಡುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಇಲ್ಲದೆ ಇದ್ದರೆ ಇಷ್ಟೊಂದು ಧೈರ್ಯವಾಗಿ ಹೇಳುವಂತಹ ಪ್ರವೃತ್ತಿ ಅವರಿಗೆ ಬರುತ್ತಾ ಇರಲಿಲ್ಲ. ಮುಂಬೈನಲ್ಲಿ ತಮ್ಮವರೇ ಆದ ಮುಖ್ಯ ಮಂತ್ರಿಗಳಿದ್ದಾರೆ, ಕೇಂದ್ರದಲ್ಲಿ ತಮ್ಮವರೇ ಆದ ಗೃಹ ಮಂತ್ರಿಗಳಿದ್ದಾರೆ, ಪ್ರಧಾನಿಗಳು ತಮ್ಮ ಸಹಾಯಕ್ಕೆ ಬರುತ್ತಾರೆ ಎಂದು ತಿಳಿದುಕೊಂಡು ಅವರು ಈ ಗಡಿ ಪ್ರಶ್ನೆ ಇತ್ಯರ್ಥವಾಗುವವರೆಗೂ ಯಾವ ಕೇಂದ್ರದ ಮಂತ್ರಿಗಳಾಗಲೀ, ಮೈಸೂರಿನ ಮುಖ್ಯ ಮಂತ್ರಿಗಳಾಗಲಿ, ಮೈಸೂರಿನ ಯಾವ ನಾಯಕರಾಗಲಿ ಅವರನ್ನ ಮುಂಬೈಗೆ ಬರುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾರೆ. ಮೊನ್ನೆ ಮೊರಾರ್ಜಿ ದೇಸಾಯಿ ಅವರು ಮುಂಬೈಗೆ ಬಂದಾಗ ಚಳುವಳಿಯನ್ನು ಶುರು ಮಾಡಿ, ಮಹಾರಾಷ್ಟ್ರದಲ್ಲಿ ಗಡಿ ಪ್ರಶ್ನೆಯ ಬಗ್ಗೆ ಚಳುವಳಿ ಇದೆಯೆಂಬುದನ್ನು ತೋರಿಸುವುದಕ್ಕೆ ಚಳುವಳಿ ನಡೆಸಿದೆ. ಮಹಾರಾಷ್ಟ್ರದ ಪೋಲೀಸರು ಮತ್ತು ಮಹಾರಾಷ್ಟ್ರ ಸರ್ಕಾರದವರು ಏನು ಗಂಭೀರ ಪರಿಸ್ಥಿತಿಯಲ್ಲಿದ್ದಾರೆ ಎಂದರೆ ಎಂತಹ ಚಳುವಳಿಯನ್ನೇ ಆಗಲೀ ಒಂದೇ ದಿವಸದಲ್ಲಿ ಒಂದೇ ತಾಸಿನಲ್ಲಿ ಹತ್ತಿಡುತಿದ್ದರು. ಆದರೆ ಎರಡು ದಿವಸಗಳಾದರೂ ಶಿವಸೇನೆಯನ್ನ ಹತ್ತಿಕ್ಕಲ್ಲ ಎಂದರೆ ಅವರ ಬೆಂಬಲ ಶಿವಸೇನೆಗೆ ಇದೆ ಎಂಬುದು ನಿಜವಾಗಿಯೂ ಗೊತ್ತಾಗುತ್ತಿದೆ. ಮಹಾರಾಷ್ಟ್ರ ಸರ್ಕಾರದವರು ಮತ್ತು ಮಹಾರಾಷ್ಟ್ರದ ಪೋಲಿಸಿನವರು ಮುಂಬೈನಲ್ಲಿ ಶಿವಸೇನೆಯವರು ಮೈಸೂರಿನವರ ಅಂಗಡಿ ಮನೆಗಳನ್ನು ಲೂಟಿ ಮಾಡುವಾಗ, ಬೆಂಕಿ ಇಡುವಾಗ ಇವರು ನಿಂತು ನೋಡುತ್ತಿದ್ದರು ಎಂದು ಗೊತ್ತಾಗಿದೆ. ಈ ಚಳುವಳಿ ನಡೆಯುತ್ತಿದ್ದಾಗ ಕನ್ನಡಿಗರಿಗೆ ಪೋಲೀಸಿನವರಾಗಲೀ, ಮಹಾರಾಷ್ಟ್ರದ ಮಂತ್ರಿಗಳಾಗಲೀ ಯಾವುದೇ ತರಹ ಆಶ್ರಯವನ್ನ ಕೊಟ್ಟಿಲ್ಲ. ಮುಂಬೈನಲ್ಲಿ ಮೈಸೂರಿನವರ ಮನೆಗಳನ್ನು, ಅಂಗಡಿಗಳನ್ನು ಲೂಟಿ ಮಾಡುವಾಗ, ಅವುಗಳಿಗೆ ಬೆಂಕಿ ಹಚ್ಚುವಾಗ ಅಲ್ಲಿ ಯಾರೋ ನೋಡುತ್ತಿದ್ದ ನಿರಪರಾಧಿಗಳನ್ನು ಪೋಲೀಸರು ಹಿಡಿದುಕೊಂಡು ಹೋಗಿದ್ದಾರೆ. ಈ ರೀತಿ ಚಳುವಳಿ ನಡೆಯುತ್ತಿದ್ದಾಗ ಶ್ರೀಮಾನ್ ಚವ್ಹಾಣರು ಕೇಂದ್ರದಿಂದ ಕೆಲವು ಪ್ರಬಲರಾದ

(ಶ್ರೀ ಟಿ. ಎಂ. ಸಾಣಿಕೊಪ್ಪ)

ಅಧಿಕಾರಿಗಳನ್ನು ಮುಂಬೈಗೆ ಕಳುಹಿಸಿದ್ದಾರೆ. ಅವರು ಬಂದು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಿಗೂ ಹೇಳಿ ಈ ಪರಿಸ್ಥಿತಿಯನ್ನು ಹೀಗೆ ಬಿಟ್ಟರೆ ಏನಾಗುತ್ತದೆ, ಮುಂಬೈನಗರ ಲೂಟಿಯಾಗುತ್ತದೆ ಜನರು ಓಡಿಹೋಗುತ್ತಾರೆ, ಇದರಲ್ಲಿ ನಿರಪರಾಧಿಗಳು ಸಾಯುತ್ತಾರೆ. ಹೋಟೆಲುಗಳಿಗೆ ಬೆಂಕಿ ಹಚ್ಚುತ್ತಿದ್ದಾರೆ, ಏನು ಮಾಡುತ್ತೀರಿ ಎಂದು ಹೇಳಿದಾಗ ಗುಜರಾತಿನಿಂದ ರಿಜರ್ವ್ ಪೋಲೀಸಿನವರನ್ನು ಕರೆಸಿದರು. ಅವರು ಒಂದು ನಿಮಿಷದಲ್ಲಿ ಶಿವಸೇನೆಯ ಅವತಾರವನ್ನು ಮುಗಿಸಿದರು. ಇದರಿಂದ ನಾವು ತಿಳಿದುಕೊಳ್ಳಬಹುದು ಶಿವಸೇನೆಯವರ ಅವತಾರವನ್ನು ಮುಗಿಸುವುದಕ್ಕೆ ಮುಂಬೈ ಪೋಲಿಸಿನವರಿಗೆ ಯೋಗ್ಯತೆ ಇರಲಿಲ್ಲವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಶಿವಸೇನೆಯ ಬಗ್ಗೆ ಮಹಾರಾಷ್ಟ್ರ ಸರ್ಕಾರದವರ ಒಂದು ಚಾಲನೆಯನ್ನು ಕೊಟ್ಟುಕೊಂಡು ಬಂದದ್ದರಿಂದ ಈ ತರಹ ಪರಿಸ್ಥಿತಿ ಉಂಟಾಗಿದೆ. ಇದರಿಂದ ಮಹಾರಾಷ್ಟ್ರ ಸರ್ಕಾರ ತನ್ನ ಕರ್ತವ್ಯ ಚ್ಯುತಿ ಮಾಡಿದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಕೇಂದ್ರ ಸರ್ಕಾರದ ಇತರ ಮಂತ್ರಿಗಳಾಗಲಿ, ಶ್ರೀವೈ.ಬಿ. ಚವಾಣರಾಗಲಿ ಈ ಶಿವಸೇನೆಯ ಕೃತ್ಯ ಏನಿದೆ ಇದು ಉಗ್ರತರವಾದದ್ದು ಎಂದು ತಿಳಿದುಕೊಂಡು ಅವರು ತಮ್ಮ ಕರ್ತವ್ಯವನ್ನು ಮಾಡಬೇಕಾಗಿತ್ತು. ಆದರೆ ಶ್ರೀಮಾನ್ ಚವಾಣರು ಈ ಶಿವಸೇನೆ ಫ್ಯಾಸಿಸ್ಟ್ ಸಂಸ್ಥೆ ಎಂದು ಹೇಳಿದ್ದಾರೆ. ಈ ರೀತಿ ಹೇಳುವುದಾದರೆ ಉಪಯೋಗವಿಲ್ಲ. ಇಂಥವರು ಗಡಿ ಸಮಸ್ಯೆಯನ್ನು ಬಿಡಿಸುವುದಕ್ಕೆ ಮುಂದೆ ಹೋದರೆ ಪ್ರಜಾಪ್ರಭುತ್ವ ಹೇಗೆ ಉಳಿಯುತ್ತದೆ ಎನ್ನುವ ಒಂದು ಮಾತು ಇದೆ. ಈ ಪ್ರಕಾರ ಶಿವಸೇನೆಯವರು ಮಾಡುವಂತಹ ಉಪಟಳದಿಂದ ಬೆಳಗಾವಿಯು ಕರ್ಣಾಟಕದಿಂದ ಮಹಾರಾಷ್ಟ್ರಕ್ಕೆ ದೊರೆಯುತ್ತದೆ ಎನ್ನುವ ಮಾತನ್ನು ಅವರು ತಿಳಿದುಕೊಂಡಿದ್ದರೆ ಅದು ತಪ್ಪು. ಕನ್ನಡಿಗರು ನಿರ್ವೀರ್ಯರಾಗಿಲ್ಲ. ಅವರು ಹಿಂದೆ ತಮ್ಮ ವೀರತ್ವವನ್ನು ತೋರಿಸಿದ್ದಾರೆ. ಬೆಳಗಾವಿಯು ಕರ್ನಾಟಕದ್ದು. ಬೆಳಗಾವಿಯು ಕರ್ನಾಟಕದ ಮುಖ್ಯ ಭಾಗ. ಈ ಭಾಗವನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವುದಕ್ಕೆ ಕನ್ನಡಿಗರು ತಯಾರಿಲ್ಲ. ಇದು ಮೈಸೂರು ಸರ್ಕಾರ ತಾಳಿದಂತಹ ನಿಲುವು. ಎಂತಹ ಪ್ರಸಂಗ ಬಂದರೂ, ಹೋರಾಟದ ಪ್ರಸಂಗ ಬಂದರೂ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಬಿಟ್ಟು ಕೊಡುವುದಕ್ಕೆ ಕನ್ನಡಿಗರು ಸಿದ್ಧರಾಗಿಲ್ಲ ಎಂಬುದನ್ನು ಅವರು ಲಕ್ಷ್ಯದಲ್ಲಿ ಇಡಬೇಕು. ಮುಂಬೈನಲ್ಲಿ ಶಿವಸೇನೆಯವರ ಗೂಂಡಾಗಿರಿಯಿಂದ ನೊಂದಿರತಕ್ಕ ಕನ್ನಡಿಗರಿಗೆ ಯೋಗ್ಯ ರಕ್ಷಣೆ ಸಿಕ್ಕುವಂತೆ ಮಹಾರಾಷ್ಟ್ರ ಮತ್ತು ಕೇಂದ್ರ ಸರ್ಕಾರದವರು ಮಾಡಬೇಕು. ನಮ್ಮ ಸರ್ಕಾರದವರು ಒಂದು ನಿಜವಾದ ಎಚ್ಚರಿಕೆಯನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕೊಡಬೇಕು. ಮುಂಬೈ ನಗರ ಎಲ್ಲರ ಸ್ವತ್ತಾಗಿದೆ. ಅದು ಬರೀ ಮಹಾರಾಷ್ಟ್ರದವರ ಸ್ವತ್ತೇ ಅಲ್ಲ. ಮುಂಬೈ ನಗರ ಕೇಂದ್ರ ಸರ್ಕಾರದವರ ಆಡಳಿತದಲ್ಲಿರುವಂತೆ ಒಂದು ಕಾಯಿದೆಯನ್ನು ಮಾಡಬೇಕು. ಅದಕ್ಕೆ ನಮ್ಮ ಸರ್ಕಾರದವರು ಶಿಫಾರಸ್ಸು ಮಾಡಬೇಕು ಎಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿರುವಂತಹ ಮರಾಠಿ ಬಂಧುಗಳಿಗೆ ನಾವು ಸರಿಯಾದ ರಕ್ಷಣೆಯನ್ನು ಕೊಟ್ಟಿಲ್ಲವೇ ? ಅವರಿಗೆ ಉದ್ಯೋಗಗಳನ್ನು ಒದಗಿಸುತ್ತಿಲ್ಲವೇ ! ಅವರ ಭಾಗದಲ್ಲಿ ರಸ್ತೆಗಳಾಗಿಲ್ಲವೇ ? ಮತ್ತೆ ಬೇರೆ ರೀತಿಯ ಅನುಕೂಲಗಳನ್ನು ಒದಗಿಸಿ ಕೊಟ್ಟಿಲ್ಲವೇ ? ಇವೊತ್ತು ಖಾನಾಪುರದಲ್ಲಿ 1-25ಕ್ಕೆ ಒಂದು ಕೆ.ಜಿ. ಅಕ್ಕಿ ಸಿಗುತ್ತದೆ. ಅದೇ ಮಹಾರಾಷ್ಟ್ರದಲ್ಲಿ ಒಂದು ಕೆ.ಜಿ. ಅಕ್ಕಿಗೆ 2-3 ರೂಪಾಯಿಗಳ ಬೆಲೆ ಇದೆ. ಅವರಿಗೆ ವಿದ್ಯುಚ್ಛಕ್ತಿ ಸಿಕ್ಕುತ್ತದೆ, ಅವರ ಭಾಗದಲ್ಲಿ ರಸ್ತೆಗಳಾಗಿದೆ. ನಮ್ಮ ರಾಜ್ಯದಲ್ಲಿರತಕ್ಕ ಮರಾಠಿ ಬಂಧುಗಳಿಗೆ ಎಲ್ಲಾ ರೀತಿಯ ಸವಲತ್ತನ್ನೂ ನಮ್ಮ ಸರ್ಕಾರದವರು ಒದಗಿಸಿ ಕೊಟ್ಟಿದ್ದಾರೆ. ನಾನು ಒಂದು ಮಾತು ಹೇಳುತ್ತೇನೆ. ಶಿವಸೇನೆಯಾಗಲಿ ಗೋಪಾಲ ಸೇನೆಯಾಗಲಿ, ಭೀಮಸೇನೆಯಾಗಲೀ ಯಾವುದೇ ಸೇನೆಯಾಗಲೀ ಅದನ್ನು ನಮ್ಮ ರಾಜ್ಯದಲ್ಲಿ ಪ್ರೊಹಿಬಿಟ್ ಮಾಡಬೇಕು, ಬಹಿಷ್ಕರಿಸಬೇಕು. ಅವುಗಳ ಚಟುವಟಿಕೆಗಳನ್ನು ಬಂದ್ ಮಾಡಬೇಕು ಎನ್ನುವ ಮಾತನ್ನು ಹೇಳಿ ಶಿವಸೇನೆಯ ಬಗ್ಗೆ ನನ್ನ ಈ ಕೆಲವು ಮಾತುಗಳನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ಇವತ್ತು ಮುಂಬೈನಲ್ಲಿ ನಡೆದಂತಹ ಘಟನೆಗಳ ಬಗ್ಗೆ ಈ ಸಭೆಯಲ್ಲಿ ಗಂಭೀರವಾದ ಚರ್ಚೆಗಳು ನಡೆಯುತ್ತಿವೆ. ತಾರೀಖು 8-2-69 ರಿಂದ 12-2-69ರವರೆಗೆ ಮುಂಬೈನಲ್ಲಿ ನಡೆದಂತಹ ಘಟನೆಗಳು ಮುಂಬೈನ ಇತಿಹಾಸದಲ್ಲಿಯೇ ನಡೆದಿರಲಿಲ್ಲ. ಮುಂಬೈನಲ್ಲಿ ನಮ್ಮ ದೇಶದ ಎಲ್ಲಾ ರಾಜ್ಯದ ಜನರು ಕಸುಬು ಮಾಡಿಕೊಂಡಿದ್ದಾರೆ ಎಲ್ಲರ ಪರಿಶ್ರಮದಿಂದ ಮುಂಬೈ ಈಗಿನ ಒಂದು ಸ್ಥಾನವನ್ನು ಪಡೆದಿದೆ. ಮುಂಬೈನಲ್ಲಿ ಮೊನ್ನೆ ನಡೆದಂತಹ ಘಟನೆಗಳಿಗೆ ಮುಖ್ಯ ಕಾರಣರು ಯಾರೆಂದರೆ ಶಿವಸೇನೆಗಳು. ಶಿವಸೇನೆಯವರು ಕೇವಲ ಭಾಷಾಂಧತೆಯ ದೃಷ್ಟಿಯನ್ನು ಇಟ್ಟುಕೊಂಡು ಮುಂಬೈನಲ್ಲಿ ಕೇವಲ ಮರಾಠಿ ಮಾತನಾ

ಡುವವರಿಗೆ ಮಾತ್ರ ಕಸುಬು ಮಾಡುವುದಕ್ಕೆ, ವ್ಯವಹಾರ ಮಾಡುವುದಕ್ಕೆ ಮತ್ತು ಸರ್ಕಾರದಲ್ಲಿ ನೌಕರರಾಗಿ ಸೇರುವುದಕ್ಕೆ ಹಕ್ಕು ಇದೆ, ಬೇರೇ ರಾಜ್ಯದವರಿಗೆ ಹಕ್ಕು ಇಲ್ಲ ಎಂದುಕೊಂಡು ಚಳುವಳಿ ಮಾಡುತ್ತಿದ್ದಾರೆ. ಮೊನ್ನೆ ಮಹಾಜನ್ ವರದಿಯನ್ನು ಆಧಾರವಾಗಿಟ್ಟುಕೊಂಡು ಬೆಳಗಾಂನ್ನು ಯಾವ ರೀತಿಯಲ್ಲಿಯಾದರೂ ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳಬೇಕೆಂಬ ಉದ್ದೇಶವಿಟ್ಟುಕೊಂಡು ಆ ಬಗ್ಗೆ ಕೇಂದ್ರಸರ್ಕಾರದ ಮೇಲೆ ಒತ್ತಡ ತರುವ ದೃಷ್ಟಿಯಿಂದ ಹೋರಾಟ ನಡೆಸಿದ್ದಾರೆ. ಕೇಂದ್ರಸರ್ಕಾರದ ಮಂತ್ರಿಗಳು ಮೈಸೂರು ರಾಜ್ಯದ ಮಂತ್ರಿಗಳು ಮತ್ತು ಅಖಿಲಭಾರತದ ಕಾಂಗ್ರೆಸ್ ಅಧ್ಯಕ್ಷರು ಮಹಾರಾಷ್ಟ್ರಕ್ಕೆ ಬರಲು ಬಿಡುವುದಿಲ್ಲವೆಂದು ಮೊದಲು ಶಿವಶೇನೆಯವರು ಘೋಷಣೆ ಮಾಡಿದರು. ಶ್ರೀ ಚವಾಣ್ ಅವರು ಮುಂಬೈಗೆ ಬಂದಾಗ ಗಲಾಟೆ ಮಾಡಿದರು. ಶ್ರೀ ಮೊರಾರ್ಜಿದೇಸಾಯಿ ಅವರು ೯ನೇ ತಾರೀಖು ಮುಂಬೈಗೆ ಬಂದಾಗ ಅವರ ಕಾರಿನ ಮೇಲೆ ಕಲ್ಲನ್ನು ತೂರಿದರು. ಈ ರೀತಿ ಆರಂಭವಾದ ಗಲಾಟೆ ನಾಲ್ಕುದಿನಗಳ ವರೆಗೆ ನಡೆದು ಸುಮಾರು 52 ಜನರು ಪ್ರಾಣ ಕಳೆದುಕೊಂಡರು, ನೂರಾರು ಜನರು ಗಾಯಗೊಂಡರು. ಎಷ್ಟೋ ಮನೆಗಳು, ಅಂಗಡಿಗಳು, ಹೋಟೆಲ್‌ಗಳು ಸುಟ್ಟುಹೋದವು. ಈ ಕಾರಣದಿಂದ ಲಕ್ಷಗಟ್ಟಲೆ ಜನರು ನಿರಾಶ್ರಿತರಾದರು. ಶಿವಸೇನೆಯವರು ಈ ರೀತಿ ಗಲಾಟೆ ಮಾಡಿ ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡುವುದನ್ನು ಅಲ್ಲಿಯ ಸರ್ಕಾರದವರು ಮೊದಲೇ ತಿಳಿದುಕೊಂಡು ನಿಲ್ಲಿಸಬಹುದಿತ್ತು. ಆದರೆ ಇವರ ಚಟುವಟಿಕೆಗಳಿಗೆ ಆ ರಾಜ್ಯದ ಕಾಂಗ್ರೆಸ್ ಸಂಸ್ಥೆಯ, ಅಲ್ಲಿಯ ಸರ್ಕಾರದ ಮತ್ತು ಶ್ರೀಮಾನ್ ಚವಾಣ್ ಅವರ ಸಹಾನುಭೂತಿ ಮತ್ತು ಸಹಾಯ ಹಿಂದಿನಿಂದ ಇದೆ. ಅವರ ಅಭಿಪ್ರಾಯಗಳು ಬೇರೆ ಇದ್ದರೂ ಸಹ ಸಹಾನುಭೂತಿ ಇದೆಯೆಂದು ಹೇಳಬಹುದು. ಈ ಗಲಾಟೆ ನಡೆಯದಂತೆ ಅಲ್ಲಿಯ ಪೋಲೀಸಿನವರು ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಆದರೆ ಶಿವಸೇನೆಯ ಬಗ್ಗೆ ಆ ರಾಜ್ಯದ ಮಂತ್ರಿಗಳಲ್ಲಿ ಸಹಾನುಭೂತಿ ಇದ್ದುದ್ದರಿಂದಲೇ ಅವರು ಈ ರೀತಿ ಚಳುವಳಿ, ಗಲಾಟೆ ಮತ್ತು ಕೊಲೆ ಮಾಡಿದ್ದು. ಗುಜರಾತಿನಿಂದ ಪೋಲೀಸರನ್ನು ಕರೆಸುವವರೆಗೆ, ಕರ್ಫ್ಯೂವನ್ನು ಜಾರಿ ಮಾಡುವವರೆಗೆ ಶಿವಸೇನೆಯ ಗಲಾಟೆ ಅವ್ಯಾಹತವಾಗಿ ನಡೆದಿತ್ತು. ಅಂಗಡಿಗಳು, ಹೋಟೆಲ್‌ಗಳ ಲೂಟಿ ನಡೆಯುವಾಗ ಗಂಟೆಗಟ್ಟಲೆಯವರೆಗೆ ಪೋಲೀಸರು ಆ ಜಾಗಗಳಿಗೆ ಬಂದು ಯಾವುದೇ ಬಂದೋಬಸ್ತು ಆಗಲೀ ಲಾ ಅಂಡ್ ಆರ್ಡರ್ ಪಾಲನೆ ಆಗಲೀ ಮಾಡಲಿಲ್ಲ. ಈ ಒಂದು ಗಲಾಟೆಯಲ್ಲಿ ಕೇಂದ್ರಸರ್ಕಾರದ ಸ್ವತ್ತು ಮಾತ್ರವಲ್ಲ, ಆ ಸರ್ಕಾರದ ಸ್ವತ್ತುಗಳು, ಅಲ್ಲಿಯ ಮುನಿಸಿಪಾಲಿಟಿಗಳ ಸ್ವತ್ತುಗಳು, ಸಾವಿರಗಟ್ಟಲೆ ಖಾಸಗೀ ಜನರ ಸ್ವತ್ತುಗಳು ಹಾಳಾದವು. ಅಂಗಡಿಗಳ ಮತ್ತು ಹೋಟೆಲೆಗಳ ಸ್ವತ್ತುಗಳನ್ನು ಅಪಹರಿಸಿದರು. ಅನೇಕ ಜನರಿಗೆ ಗಾಯಗಳಾದವು. ಕೆಲವು ಹೋಟೆಲ್‌ಗಳನ್ನು, ಅಂಗಡಿಗಳನ್ನು ಸುಟ್ಟುಹಾಕಿದರು. ಅದರಲ್ಲೂ ಮುಖ್ಯವಾಗಿ ನಮ್ಮ ರಾಜ್ಯದ ದಕ್ಷಿಣಕನ್ನಡಜಿಲ್ಲೆಯ ಹೋಟೆಲ್‌ಗಳನ್ನು ಸುಟ್ಟುಹಾಕಿದ್ದಾರೆ. ಈ ಕಾರಣದಿಂದ ಅನೇಕ ಜನರು ಬೀದಿ ಪಾಲಾಗಿದ್ದಾರೆ. ಇಂತಹ ಸಮಯದಲ್ಲಿ ಕೇಂದ್ರ ಸರ್ಕಾರದ ಮತ್ತು ನಮ್ಮ ಸರ್ಕಾರದ ಜವಾಬ್ದಾರಿ ಹೆಚ್ಚು ಇದೆ. ಇವತ್ತು ನಮ್ಮ ದೇಶದಲ್ಲಿ ಒಗ್ಗಟ್ಟು ಇರಬೇಕಾದರೆ, ಭದ್ರತೆ ಉಳಿಯಬೇಕಾದರೆ, ನಮ್ಮ ದೇಶ ಅಭಿವೃದ್ಧಿಯಾಗಬೇಕಾದರೆ ಇಂತಹ ಒಂದು ಕೃತ್ಯಗಳು ನಡೆಯದಂತೆ ನೋಡಿಕೊಳ್ಳಬೇಕು. ಇಂತಹ ಪರಿಸ್ಥಿತಿ ಇನ್ನು ಮುಂದೆ ಉದ್ಭವವಾಗದಂತೆ ನೋಡಿಕೊಳ್ಳಬೇಕು. ಈ ಒಂದು ಕರ್ತವ್ಯವನ್ನು ಕೇಂದ್ರಸರ್ಕಾರದವರು, ಮಹಾರಾಷ್ಟ್ರ ಸರ್ಕಾರದವರು ಮತ್ತು ನಮ್ಮ ಸರ್ಕಾರದವರು ಮಾಡಬೇಕು. ಮಹಾಜನ ಅವರು ತಮ್ಮ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಈ ಒಂದು ಆಯೋಗ ರಚನೆಯಾಗುವುದಕ್ಕೆ ಮಹಾರಾಷ್ಟ್ರ ಸರ್ಕಾರದವರೇ ಕಾರಣವೆಂದು ಹೇಳಬಹುದು. ನಮ್ಮ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳು ಆಗ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿದ್ದರು. ಈ ಕಮಿಟಿಯವರು ನಮ್ಮ ಹಿಂದಿನ ಮುಖ್ಯಮಂತ್ರಿಗಳನ್ನು ಒತ್ತಾಯಮಾಡಿ ಮಹಾರಾಷ್ಟ್ರದವರ ಇಷ್ಟದಂತೆ ಈ ಆಯೋಗವನ್ನು ನೇಮಕಮಾಡಿದರು. ಈ ಆಯೋಗದವರು ತಮ್ಮ ವರದಿ ಸಲ್ಲಿಸಿ ಬಹಳ ಸಮಯವಾದರೂ ಸಹ ಕೇಂದ್ರಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ನಮ್ಮ ರಾಜ್ಯದವರು ಸಹ ಸಾಕಷ್ಟು ಒತ್ತಡವನ್ನು ಕೇಂದ್ರದ ಮೇಲೆ ತರಲಿಲ್ಲ. ಇಂತಹ ಸಮಸ್ಯೆಗಳು ಎಷ್ಟು ಸಮಯದವರೆಗೆ ಮುಂದುವರೆಯುತ್ತವೋ ಅಲ್ಲಿಯವರೆಗೂ ಸಹ ಇಂತಹ ಗಲಾಟೆಗಳು ನಡೆಯುತ್ತಲೇ ಇರುತ್ತವೆ. ಶ್ರೇಷ್ಠ ನ್ಯಾಯಾಧೀಶರು ಕೊಟ್ಟ ತೀರ್ಪನ್ನು ಕಾರ್ಯಗತ ಮಾಡುವಂತೆ ಕೇಂದ್ರಸರ್ಕಾರದ ಮೇಲೆ ನಮ್ಮ ರಾಜ್ಯದ ಪಾರ್ಲಿಮೆಂಟ್ ಸದಸ್ಯರುಗಳು ಮತ್ತು ಕೇಂದ್ರದಲ್ಲಿರುವ ನಮ್ಮ ರಾಜ್ಯದ ಮಂತ್ರಿಗಳು ಒತ್ತಡವನ್ನು ತರಬೇಕು ಆ ರೀತಿ ಒತ್ತಡ ತರದಿದ್ದರೆ ಈಗಿನ ಪರಿಸ್ಥಿತಿಯೇ ಮುಂದುವರಿಯುತ್ತದೆ. ಮುಖ್ಯವಾಗಿ ನಮ್ಮ ರಾಜ್ಯದ ಜನರು ಮುಂಬೈನಲ್ಲಿ ವ್ಯಾಪಾರ ಮತ್ತು ವ್ಯವಹಾರ ಮಾಡುವುದಕ್ಕೆ ಮುಂದೆ ಬಹಳ ಕಷ್ಟವಾಗುತ್ತದೆ. ಅಲ್ಲಿಯ ಸರ್ಕಾರದವರು ನಮ್ಮವರಿಗೆ ನಿಷ್ಪಕ್ಷಪಾತವಾದ ಸಂರಕ್ಷಣೆಯನ್ನು ಕೊಡುವುದಿಲ್ಲ. ಅದಕ್ಕಾಗಿ ಈಗ ಆಗಿರುವ ನಷ್ಟಕ್ಕೆ ಸೂಕ್ತ ಪರಿಹಾರವನ್ನು ಕಂಡುಹಿಡಿಯಲಿಕ್ಕೆ,

(ಶ್ರೀ ಬೋಳಾ ರಘುರಾಮ ಶೆಟ್ಟಿ)

ಆಸ್ತಿಯನ್ನು ಕಳೆದುಕೊಂಡವರ ನಷ್ಟದ ಪರಿಶೋಧನೆ ಮಾಡಲಿಕ್ಕೆ ಕೇಂದ್ರಸರ್ಕಾರದವರು ಒಂದು ನ್ಯಾಯಾಂಗ ವಿಚಾರಣೆಯನ್ನು ನಡೆಸಬೇಕು. ನಮ್ಮ ಸರ್ಕಾರದವರು ಸಹ ನ್ಯಾಯಾಂಗ ವಿಚಾರಣೆ ನಡೆಸಲಿಕ್ಕೆ ಒತ್ತಾಯ ತರಬೇಕು. ಎಷ್ಟು ಜನರಿಗ ನಷ್ಟವಾಗಿದೆ, ಯಾವ ರೀತಿಯಲ್ಲಿ ನಷ್ಟವಾಗಿದೆ ಎಂಬುದರ ಬಗ್ಗೆ ಸಾರ್ವಜನಿಕರಿಗೆ ಒಂದು ಸರಿಯಾದ ತಿಳಿವಳಿಕೆ ಬರಬೇಕಾಗಿದೆ. ಬೇರೆ ರಾಜ್ಯಗಳ ಲಕ್ಷಾಂತರ ಜನರಿಗೆ ಮುಂಬೈನಲ್ಲಿ ಇವತ್ತಿನದಿವಸ ವ್ಯವಹಾರ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಜನರ ಮೇಲೆ ಪೋಲೀಸ್ ಅಧಿಕಾರಿಗಳಿಗೆ ವಿಶ್ವಾಸವಿಲ್ಲ. ಬೇರೆ ರಾಜ್ಯ ಜನರಿಗೂ ಅಲ್ಲಿಯ ಪೋಲೀಸ್ ಅಧಿಕಾರಿಗಳಲ್ಲಿಯೂ ಮೊದಲಿನಂತೆ ವಿಶ್ವಾಸ ಬರಬೇಕಾದರೆ, ಯಾರು ತಪ್ಪಿತಸ್ಥರಾಗಿದ್ದಾರೆ, ಯಾರು ಅಕೃತ್ಯಗಳನ್ನು ನಡೆಸಿದ್ದಾರೆ ಅಂತಹವರನ್ನು ಪತ್ತೆ ಮಾಡಿ ಅವರಿಗೆ ದಂಡನೆ ವಿಧಿಸಬೇಕು. ಕೇವಲ ಭಾಷಣ ಮಾಡುವುದರಿಂದ, ಠರಾವನ್ನು ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ತಪ್ಪಿತಸ್ಥರನ್ನು ಮಹಾರಾಷ್ಟ್ರದವರು ಹಿಡಿದು ಶಿಕ್ಷೆ ವಿಧಿಸುತ್ತಾರೆಂಬ ವಿಶ್ವಾಸ ನಮಗೆ ಇಲ್ಲ. ಅವರಿಗೆ ಸಾಮರ್ಥ್ಯವಿದ್ದರೆ ಇಷ್ಟರವರೆಗೆ ಮಾಡಬೇಕಾಗಿತ್ತು. ಆದರೆ ಮಾಡಿಲ್ಲ. ಅಲ್ಲಿ ಈಗ ಆಸ್ತಿಯನ್ನು ಕಳೆದುಕೊಂಡಿರುವವರಿಗೆ ನಮ್ಮ ಭಾಷಣದಿಂದ ಯಾವ ಪರಿಹಾರವೂ ಸಿಕ್ಕುವುದಿಲ್ಲ, ಸಂತೋಷವಾಗುವುದಿಲ್ಲ. ಅವರುಗಳ ಕಷ್ಟವನ್ನು ಪರಿಹಾರ ಮಾಡಬೇಕಾದರೆ ಹಣದ ಸಹಕಾರವನ್ನು ಕೊಡುವುದು ಅಗತ್ಯವಾಗಿದೆ. ಹಣದ ಸಹಕಾರವನ್ನು ಮಹಾರಾಷ್ಟ್ರದವರು ಮಾಡದಿದ್ದರೆ ಕೇಂದ್ರದವರು ಮಾಡಬೇಕೆಂದು ನಮ್ಮ ಸರ್ಕಾರದವರು, ನಮ್ಮ ಜನರು ಮತ್ತು ಈ ಶಾಸನಸಭೆಯ ಸದಸ್ಯರುಗಳು ಒತ್ತಾಯ ಮಾಡುವುದು ಅಗತ್ಯವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

11-00 A.M.

† ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಾವು ಯಾವುದರ ಸಲುವಾಗಿ ಇಲ್ಲಿ ವಿಚಾರ ಮಾಡುತ್ತಿದ್ದೇವೆ ಆ ವಿಚಾರದಲ್ಲಿ ಮಾತನಾಡುವಾಗ ಯಾವ ರಾಜಕೀಯ ಪಾರ್ಟಿಗೂ ಜವಾಬುದಾರರಾಗಿದ್ದಂತೆ ಇವೊತ್ತು ಇಲ್ಲಿ ಮಾತನಾಡುತ್ತಿಲ್ಲ ಮತ್ತು ಇದು ಯಾವ ಒಂದು ಪಾರ್ಟಿಗೂ ಸಂಬಂಧಪಟ್ಟದ್ದಲ್ಲ. ಇದು ಎಲ್ಲ ಜನತೆಗೆ ಸಂಬಂಧಪಟ್ಟ ಪ್ರಶ್ನೆ. ಲಾ ಅಂಡ್ ಆರ್ಡರು ಪ್ರಶ್ನೆ ಬಂದಾಗ, ಇದು ಕಾಂಗ್ರೆಸ್ಸು ಪಕ್ಷ ಪಿ.ಎಸ್.ಪಿ. ಪಕ್ಷ ಇಲ್ಲವೇ ಅಪೊಸಿಷನ್‌ನಿನ ಪ್ರಶ್ನೆ ಎಂದು ಇಲ್ಲಿ ವಿಚಾರ ಮಾಡಬಾರದು. ಹಾಗೆ ವಿಚಾರ ಮಾಡಿದರೆ ಅದು ತಪ್ಪು ಎಂದು ನಾನು ಹೇಳುತ್ತೇನೆ. ಯಾವುದಾದರೂ ತಪ್ಪು ಒಬ್ಬ ಮನುಷ್ಯನಿಂದಾಗಿದ್ದರೆ ಕೋರ್ಟಿನಲ್ಲಿ ಅದರ ಬಗ್ಗೆ ನಿರ್ಣಯ ಮಾಡುವಾಗ ತಪ್ಪು ಯಾರಿಂದ ಆಗಿದೆ ಎನ್ನುವುದರ ಪರೀಕ್ಷೆಯಾಗಿ ಅದರ ಬಗ್ಗೆ ವಿಚಾರವಾಗಬೇಕು. ಇವೊತ್ತು ದೇಶದಲ್ಲಿ ಭಾಷಾವಾರು ಪ್ರಾಂತಗಳು ನಿರ್ಮಾಣವಾದಾಗ ಯಾವ ತತ್ವ ಹಾಗೂ ಯಾವ ಪ್ರವೃತ್ತಿಯಿಂದ ಆಯಿತು ಎನ್ನುವುದನ್ನು ಯೋಚನೆ ಮಾಡಬೇಕು ಅಲ್ಲದೆ ಸಾಮಾಜಿಕ ದೃಷ್ಟಿಯನ್ನು ಮುಂದಿಟ್ಟುಕೊಂಡು ಮತ್ತು ನಮ್ಮ ಸುತ್ತಮುತ್ತ ಇರುವ ಜನತೆಯ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಯೋಚನೆ ಮಾಡಬೇಕು. ಈ ದೃಷ್ಟಿಯಲ್ಲಿ ನಾವು ಇಂದು ನಮ್ಮ ಮುಂದೆ ಇರುವ ಪ್ರಶ್ನೆಯನ್ನು ವಿಚಾರ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಬೊಂಬಾಯಿಯಲ್ಲಿ ಆಹುತಿಯಾಗಿರುವವರ ಬಗ್ಗೆ ವಿಚಾರ ಮಾಡುವಾಗ ಎಷ್ಟೋ ಮಾತುಗಳು ನಮ್ಮ ಮುಂದೆ ನೆನಪಿಗೆ ಬರುತ್ತವೆ. ದೇಶದಲ್ಲಿ ಎಷ್ಟೋ ಭಾಗಗಳಲ್ಲಿ ಎಷ್ಟೋ ಗಲಾಟೆಗಳು ಆಗುತ್ತವೆ ಆದರೂ ಬೊಂಬಾಯಿಯಲ್ಲಿ ಇಷ್ಟೊಂದು ಆಹುತಿಯಾಗಲು ಇದರ ಬ್ಯಾಕ್‌ಗ್ರೌಂಡು ಏನಿತ್ತು ಮತ್ತು ಅಲ್ಲಿನ ಜನರ ಭಾವನಾ ಶಕ್ತಿಗಳು ಯಾವ ರೀತಿ ಇದ್ದವು ಎನ್ನುವುದನ್ನು ನಾವೆಲ್ಲರೂ ವಿಚಾರ ಮಾಡಿದರೆ ಇದು ಗೊತ್ತಾಗುತ್ತದೆ. ನಮ್ಮ ಸರ್ಕಾರದವರು ಸುಮ್ಮನೆ ಕುಳಿತಿದ್ದಾರೆ. ಆದರೆ ನಮ್ಮ ಮಹಾರಾಷ್ಟ್ರ ಸರಕಾರದವರು ಹಿಂದೆ ರಾಜ್ಯವನ್ನು ಖಂಡ ತುಂಡ ಮಾಡಿದಾಗ ಮರಾಠಿ ಮಾತಾಡುವವರಿಗೆ ಪ್ರತ್ಯೇಕ ಪ್ರಾಂತವಾಗಬೇಕೆಂದು ಹೇಳಿ ಮಹಾರಾಷ್ಟ್ರದ ಪ್ರಾಂತ ಎಂದಾಯಿತು; ಇದೇಕೆ ಆಯಿತು ಎನ್ನುವುದು ಸ್ವಲ್ಪ ಗಂಭೀರವಾದ ವಿಚಾರ. ಇದನ್ನು ಇಲ್ಲಿ ವಿಚಾರ ಮಾಡಬೇಕಾಗಿದೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ನಮ್ಮ ಮುಂದೆ ಎರಡು ವಿಚಾರಗಳು ಬರುತ್ತವೆ, ಒಂದು ಕಡೆ ಮಹಾರಾಷ್ಟ್ರದ ಜನತೆ ಮಹಾರಾಷ್ಟ್ರ ಸರಕಾರ ಹಾಗೂ ಮಹಾರಾಷ್ಟ್ರದಲ್ಲಿರುವ ನೇತಾ ಜನರು, ಮತ್ತೊಂದು ಕಡೆ ಮೈಸೂರು ಸರಕಾರ, ಮೈಸೂರಿನ ಜನತೆ ಹಾಗೂ ಮೈಸೂರಿನಲ್ಲಿರುವ ನೇತಾ ನಾಯಕರುಗಳು. ನಿಜವಾಗಿಯೂ ಇವು ಮೂರು ವಿಚಾರಗಳ ಬಗ್ಗೆ ವಿಚಾರ ಮಾಡಿದರೆ ವಾಸ್ತವಿಕವಾದ ವಿಚಾರಗಳು ಗೊತ್ತಾಗುತ್ತವೆ. ಭಾಷಾವಾರು

ಪ್ರಾಂತಗಳು ಆಗಬೇಕು ಎಂದು ಹಿಂದೆ ವಿಚಾರ ಮಾಡಿ ಚರ್ಚೆ ಮಾಡಿ ಈ ಭಾಷಾವಾರು ಪ್ರಾಂತಗಳು ನಿರ್ಮಾಣವಾದವು. ಇದರ ಬಗ್ಗೆ ವಿಚಾರ ಮಾಡುವಾಗ ಹಿಂದೆ ನಮ್ಮ ಭಾರತ ದೇಶವನ್ನು ಖಂಡ ತುಂಡವಾಗಿ ಪಾಕಿಸ್ತಾನಕ್ಕೆ ಕೊಟ್ಟಾಗಲೂ ಕೂಡ ಇಷ್ಟೊಂದು ಉದ್ರೇಕ ಇಷ್ಟೊಂದು ಅನಾಹುತಗಳು ನಡೆದಿರಲಿಲ್ಲ ಮತ್ತು ಇದಕ್ಕೆಲ್ಲಾ ಅವಕಾಶ ಕೊಡುವುದು ಸೂಕ್ತವಲ್ಲ ಎಂದು ಎಲ್ಲರೂ ಶಾಂತಿಯಿಂದ ಇರಬೇಕೆಂದು ಹೇಳಿ ಭಾಷಾವಾರು ಪ್ರಾಂತಗಳು ರಚನೆಯಾದವು. ಹಾಗೆ ಬೊಂಬಾಯಿ ಪ್ರಾಂತವೂ ಆಯಿತು ಮತ್ತು ಎಲ್ಲ ಪ್ರಾಂತಗಳು ಬೇರೆ ಬೇರೆಯಾದರೂ ನಾವೆಲ್ಲ ಭಾರತ ದೇಶದವರು ಎಂದು ನೋಡದೆ ನಾವು ಪ್ರತ್ಯೇಕವಾಗಿ ನೋಡಲು ವಿಚಾರ ಮಾಡಿದರೆ ಅದು ಸಮಾಜದ್ರೋಹ ಮಾಡಿದಂತಾಗುತ್ತದೆ. ಇದರ ಬಗ್ಗೆ ವಿಚಾರ ಮಾಡುವಾಗ ಒಂದು ಪ್ರಾಂತದ ಜನತೆಯ ಮೇಲೆ ಇನ್ನೊಂದು ಪ್ರಾಂತದ ಜನತೆಯ ಬಗ್ಗೆ ತಪ್ಪು ಭಾವನೆ ಬರುವಂತೆ ಮಾಡಿದರೆ ಅದನ್ನು ನಿರ್ಮೂಲ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಇಲ್ಲದೆ ಇಂದು ನಡೆದಂತಹ ಭಯಂಕರ ಘಟನೆಗಳಿಗೆ ಅವಕಾಶ ಕೊಟ್ಟರೆ ಅದು ಸರಿಯಾದ ಮಾರ್ಗವಲ್ಲ. ಇಂದು ನಡೆದ ಆಹುತಿಗಳಿಗೆ ಕಾರಣ ನಮ್ಮ ಭಾರತ ದೇಶದ ಹಾಗೂ ಮಹಾರಾಷ್ಟ್ರ ಸರಕಾರದ ನೀತಿಗಳೇ ಆಗಿವೆ. ನಮ್ಮ ಸರಕಾರದವರು ಮತ್ತು ನಮ್ಮ ನಾಯಕರುಗಳು ಯಾವಾಗಲೂ ಶಾಂತಿ ಬೇಕು ಶಾಂತಿ ಬೇಕು ಎಂದು ಸುಮ್ಮನೆ ಕುಳಿತುಕೊಂಡು ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇಲ್ಲಿ ಜನತೆಗೆ ಬಹಳ ಅನ್ಯಾಯವಾಗಿದೆ. ಹೀಗೆ ಅನ್ಯಾಯಗಳಾಗುತ್ತಿರುವದನ್ನು ನೋಡಿಕೊಂಡರೂ ಸುಮ್ಮನಿದ್ದರೆ ಅದು ಭಾರತದ ದೇಶದ ಭದ್ರತೆಗೆ ಧಕ್ಕೆ ಬರುತ್ತದೆ. ಈ ದೃಷ್ಟಿಯಿಂದ ಮೈಸೂರು ಹಾಗೂ ಮಹಾರಾಷ್ಟ್ರ ಸರಕಾರಗಳವರು ಜನತೆಯ ಬಗ್ಗೆ ಸಕಾಲದಲ್ಲಿ ವಿಚಾರ ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಇಷ್ಟೊಂದು ಆಕಾಶಕ್ಕೂ ಭೂಮಿಗೂ ಇರುವಷ್ಟು ಅಂತರ ಇರುತ್ತಿರಲಿಲ್ಲ ಎಂದು ನನಗನಿಸುತ್ತದೆ. ಒಂದಂಶ ಇದರಲ್ಲಿ ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಅದು ಮರಾಠಿಯಾಡುವ ಜನರು ಇರುವ ಜಾಗವೆಲ್ಲಾ ಮಹಾರಾಷ್ಟ್ರೀಯರದು ಎಂದು ಅವರು ಹೇಳುವ ವಾದ ಆಕಾಶಕ್ಕೂ ಭೂಮಿಗೂ ಇರುವ ಅಂತರದಷ್ಟೇ ಇದೆ. ಒಂದಕ್ಕೊಂದು ಸಂಬಂಧ ಇರದೇ ಇದ್ದರೂ ಇದರ ಬಗ್ಗೆ ಇಷ್ಟೊಂದು ಗಲಾಟೆಗಳು ಆಗಲು ಅವಕಾಶವಾಗಿದೆ. ನಮ್ಮ ಮೈಸೂರು ಸರಕಾರ ಯಾವಾಗಲೂ ಶಾಂತಿಯಿಂದ ಹೋಗಬೇಕು ಎಂದು ಮಹಾಜನ್ ತೀರ್ಪು ಬಂದಾಗಿನಿಂದಲೂ ಬರೀ ಕಾಗದ ಬರಿಯುವುದರಿಂದ ಹಾಗೂ ರಿಮೈಂಡರುಗಳನ್ನು ಬರೆಯುವುದರಲ್ಲೇ ಆಗಿದೆ. ಈ ರೀತಿ ಎಷ್ಟು ಕಾಗದಗಳು ಬರೆದರೂ ಅವರಿಗೆ ಮನವರಿಕೆಯಾಗುವಂತೆ ಮಾಡಲಿಲ್ಲ. ಆದರೆ ನಮ್ಮ ಮಹಾರಾಷ್ಟ್ರದ ಜನತೆ ಇದೊಂದನ್ನೂ ವಿಚಾರ ಮಾಡದೆ ಬರೀ ಗೂಂಡಾಗಿರಿಯಿಂದ ಜಾತೀಯತೆಯಿಂದ ಇಲ್ಲ ಒಂದು ಭಾಷೆಯಿಂದ ಇನ್ನೊಂದು ಭಾಷಾ ಜನತೆಗೆ ತಿರಸ್ಕಾರ ಬರುವ ರೀತಿಯಲ್ಲಿ ಜನರನ್ನು ಉದ್ರೇಕಗೊಳಿಸಿ ಇಷ್ಟೊಂದು ಜನರ ಆಹುತಿಯಾಗಲಿಕ್ಕೆ ಕಾರಣರಾದರು ಮತ್ತು ಇಷ್ಟೊಂದು ಲೂಟಿಗಳನ್ನೂ ಅಮಾನುಷ ರೀತಿಯಲ್ಲಿ ಮಾಡುತ್ತಿದ್ದರೂ ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳದೇ ಇರುವುದು ತುಂಬಾ ವಿಷಾದಕರ ಎಂದು ನನಗನಿಸುತ್ತದೆ. ಇದೇ ಪ್ರಕಾರ ನಮ್ಮ ರಾಜ್ಯದ ಜನತೆಯೂ ಇನ್ನು ಮುಂದೆಯೂ ಶಾಂತಿ ಎಂದು ಕೂತರೆ ಕನ್ನಡಿಗರಿಗೆ ಯಾವ ವಿಧವಾದ ನ್ಯಾಯವೂ ದೊರಕುವುದಿಲ್ಲ. ನಮ್ಮ ನಾಯಕರೂ ಕೂಡ ಇದರ ಬಗ್ಗೆ ಸರಿಯಾದ ನಿರ್ದೇಶನ ಕೊಡುತ್ತಿಲ್ಲ. ಇದು ನಮ್ಮ ದೌರ್ಭಾಗ್ಯ ಎಂದು ನನಗೆ ಕಾಣುತ್ತದೆ. ನಮ್ಮಲ್ಲಿ ಜನ ನಾಯಕರೂ ಬಹಳ ಧೈರ್ಯವಂತರೂ ಪ್ರಮುಖರಾದವರೂ ಇದ್ದಾರೆ. ಹಾಗಿದ್ದರೂ ಇಂತಹ ಕೃತ್ಯಗಳಿಗೆ ಅವಕಾಶ ಕೊಟ್ಟಿದ್ದು ಸರಿಯಲ್ಲ. ಮುಳ್ಳು ಚುಚ್ಚಿದಾಗ ಮುಳ್ಳಿನಿಂದಲೇ ಅದನ್ನು ತೆಗೆಯಬೇಕು ಎಂದು ಹೇಳುವಂತೆ ಇಲ್ಲಿ ಭೀಕರ ಪ್ರವೃತ್ತಿಯನ್ನು ತೋರಿಸುತ್ತಿರುವಾಗ ಅದಕ್ಕೆ ತಕ್ಕ ಭೀಕರ ಪ್ರವೃತ್ತಿಯಿಂದಲೇ ಅದನ್ನು ಎದುರಿಸಬೇಕು ಎನ್ನುವ ಮಾತನ್ನು ಇಲ್ಲಿ ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಈವೊತ್ತು ಬೊಂಬಾಯಿಯಲ್ಲಿ ಆದಂತೆ ಭಾರತದ ಯಾವ ಭಾಗದಲ್ಲೂ ಜನತೆ ಮಾಡಲಿಲ್ಲ. ಇದಕ್ಕೆ ಸರಿಯಾದ ಕಾನೂನು ಇದ್ದರೂ ಅದನ್ನು ಸರಿಯಾಗಿ ಉಪಯೋಗ ಮಾಡಲಿಲ್ಲ. ಮರಾಠಿ ಮಾತನಾಡುವ ಜನರು ಅವರು ಎಲ್ಲೇ ಇರಲಿ, ಆ ಭಾಗವೆಲ್ಲಾ ನಮ್ಮ ಮಹಾರಾಷ್ಟ್ರಕ್ಕೆ ಸೇರಿದ್ದು ಎಂದು ಹೇಳುವ ಇವರ ವಾದದಿಂದಾಗಿ ಇಷ್ಟೊಂದು ಅನ್ಯಾಯಗಳು ಆಗುತ್ತಿರುವಾಗ ನಮ್ಮ ಮೈಸೂರು ಸರಕಾರದವರು ಇದನ್ನು ತುಲನಾತ್ಮಕ ದೃಷ್ಟಿಯಿಂದ ವಿಚಾರ ಮಾಡಿ ನಮ್ಮ ಕನ್ನಡಿಗರು ಇಂತಹ ಚಳುವಳಿಗಳಿಗೆ ಎಂದೂ ಹೆದರುವವರಲ್ಲ ಎನ್ನುವುದನ್ನು ಅವರಿಗೆ ಖಾತರಿ ಮಾಡಿ ತೋರಿಸುವುದು ಅಗತ್ಯ. ಸುಮ್ಮನೆ ಈ ಅಸೆಂಬ್ಲಿಯಲ್ಲಿ ಭಾಷಣ ಮಾಡುವುದರಿಂದ ಏನೂ ಪ್ರಯೋಜನ ಇರುವುದಿಲ್ಲ. ಮಹಾರಾಷ್ಟ್ರದ ಸ್ಟೇಟ್‌ನವರಿಗೆ ಗೊತ್ತಾಗುವ ಹಾಗೆ ಎಲ್ಲರೂ ಒಟ್ಟಿಗೆ ಸೇರಿ ನಮ್ಮ ದೇಶದ ಐಕ್ಯತೆಗೆ ಭಂಗ ಬರುವಂತಹ ಕ್ರಮಗಳನ್ನು ಮಾಡುವುದು ಸರಿಯಲ್ಲ ಎಂದು ಅವರಿಗೆ ಮನವರಿಕೆ

(ಶ್ರೀ ಎಸ್. ಭೀಮಣ್ಣ)

ಯಾಗುವಂತೆ ತಿಳಿಸಬೇಕಾದುದು ಅಗತ್ಯ. ಇದರ ಬಗ್ಗೆ ಒಂದು ಉದಾಹರಣೆ ಮಾತ್ರ ಇಲ್ಲಿ ಹೇಳಬೇಕಾಗಿದೆ. ನಮ್ಮ ಪಕ್ಕದ ಮದ್ರಾಸು ರಾಜ್ಯದವರು ಅವರ ದೇಶವನ್ನು ತಮಿಳುನಾಡು ಎಂದು ಕರೆಯಬೇಕು ಎಂದು ಅಲ್ಲಿನ ಜನತೆ ಹೇಳಿದಾಗ ಅಲ್ಲಿರುವ ಮುಖ್ಯಮಂತ್ರಿಗಳಾದಿಯಾಗಿ ಎಲ್ಲಾ ಪಕ್ಷದವರೂ ಒಕ್ಕೊರಲಿನಿಂದ ಮತ್ತು ಒಮ್ಮತದಿಂದ ತಮಿಳು ನಾಡು ಎಂದು ಕರೆಯುವಂತೆ ಕೆಲಸ ಮಾಡಿದರು, ಅದೇ ರೀತಿ ನಮ್ಮ ಮರಾಠಿ ಮಾತಾಡುವ ಜನರು ಮಹಾರಾಷ್ಟ್ರ ಎಂದು ಕರೆಯಬೇಕೆಂದು ಹೇಳಿದಾಗ ಬೊಂಬಾಯಿ ಎನ್ನುವ ಹೆಸರನ್ನು ಬದಲಾವಣೆ ಮಾಡಿ ಮಹಾರಾಷ್ಟ್ರ ಹೆಸರು ಇರುವಂತೆ ಮಾಡಿದರು. ಅಲ್ಲಿನ ಜನರ ಭಾವನೆಗೆ ಕೇಂದ್ರದವರು ಒಪ್ಪಿಕೊಂಡು ಆ ರೀತಿ ಮಾಡಿದರು. ಆದರೆ ನಮ್ಮ ರಾಜ್ಯದಲ್ಲಿ ಏನಾಗಿದೆ ಎನ್ನುವುದನ್ನು ವಿಚಾರ ಮಾಡಿ ನೋಡಿದರೆ ಕರ್ಣಾಟಕ ಎನ್ನುವ ಹೆಸರು ಮಾಡಬೇಕು ಎಂದು 12 ವರ್ಷದಿಂದಲೂ ನಾಲ್ಕುಸಾರಿ ನಿರ್ಣಯ ಬಂದಾಗಲೂ ಅದನ್ನು ಈ ಅಸೆಂಬ್ಲಿಯಲ್ಲಿ ಮುಂದೂಡುತ್ತಿರುವುದು ಒಂದು ದುರ್ದೈವದ ಸಂಗತಿ. ಈವೊತ್ತು ನಮ್ಮ ರಾಜ್ಯದಲ್ಲಿ ಒಂದು ಹೆಸರಿನಿಂದೇನಾಗುತ್ತದೆ ಎನ್ನುವ ಭಾವನೆ ಇಲ್ಲಿ ಬರುತ್ತಿದೆ. ಹೀಗೆ ಒಂದೊಂದು ಪ್ರಾಂತಗಳವರ ನೀತಿ ಒಂದೊಂದು ರೀತಿಯದಾಗುತ್ತಿದೆ. ನಮ್ಮ ಕರ್ಣಾಟಕದ ಮಿತ್ರರು ಯಾವ ರೀತಿ ಭಾವನೆ ಮಾಡುತ್ತಿದ್ದಾರೆ ಎನ್ನುವುದಕ್ಕಾಗಿ ಇದನ್ನು ಹೇಳುತ್ತಿದ್ದೇನೆ. ಈ ಪ್ರಕಾರ ಅನ್ಯಾಯವಾಗುತ್ತಿದೆ ಮಹಾರಾಷ್ಟ್ರ ಸರಕಾರ ಮಾಡುತ್ತಿರುವ ಅನ್ಯಾಯಗಳಿಂದ ಹೀಗಾಗುತ್ತಿದೆ ಎನ್ನುವ ಭಾವನೆ ಜನರಲ್ಲಿ ಬೆಳೆಯಲು ಇದು ಒಂದು ಕಾರಣ. ಇದನ್ನು ತಡೆಗಟ್ಟದಿದ್ದರೆ ದೇಶದ ಭದ್ರತೆಗೇ ಕಳಂಕ ಬರುತ್ತದೆ ಎನ್ನುವ ಮಾತನ್ನು ನಾವು ತಿಳಿದು ಕೊಳ್ಳಬೇಕು. ಈ ಮಾತೇನೋ ಬಹಳ ಸರಳವಾಗಿರಬಹುದು. ಇದರಲ್ಲಿ ಜನತೆಯಲ್ಲಿ ಸ್ಪ್ಲಿಟ್ ಬರುವಂತೆ ಬೇಧ ಭಾವನೆ ಬರಲಿಕ್ಕೆ ಅವಕಾಶವಿದೆ. ಇದಕ್ಕೆ ಅವಕಾಶ ಕೊಡದೆ ಇದನ್ನು ತಡೆಗಟ್ಟ ಬೇಕು ಎನ್ನುವ ಮಾತನ್ನು ಸ್ಪಷ್ಟವಾಗಿ ತಿಳಿಸಬೇಕು.

ಇನ್ನು ಬಾರ್ಡರ್ ವಿಷಯದಲ್ಲಿ ಹೇಳಬೇಕಾಗಿದೆ. ಈವೊತ್ತು ನಡೆದಂಥ ಪ್ರಸಂಗ ನೋಡಿ ದರೆ ಈ ಗಡಿ ಬಗ್ಗೆ ಒಂದು ಮರ್ಯಾದೆ ದಾಟಿ, ಅನ್ಯಾಯ, ಅತ್ಯಾಚಾರಗಳು ನಡೆಯುತ್ತಾ ಇದೆ. ಶಾಂತಿ ತಾಳ್ಮೆ ಮೀರಿ ನಡೆಯುತ್ತಾ ಇದೆ. ಕೇಂದ್ರದವರಿಗೆ ನಮ್ಮ ಭಾಷೆ ತಿಳಿಯುವುದಿಲ್ಲ. ಸ್ಟೀಲ್ ಪ್ಲಾಂಟ್, ವಾಟರ್ ಬೋರ್ಡ್, ಗಡಿ ವಿವಾದ ಇವುಗಳ ಬಗ್ಗೆ ನಾವು 12 ವರ್ಷ ಗಳಿಂದಲೂ ಎಷ್ಟು ಕಾಗದ ಬರೆದರೂ, ರೆಪ್ರೆಸೆಂಟೇಷನ್ ಕೊಟ್ಟರೂ, ಸತ್ಯಾಗ್ರಹ ಮಾಡಿದರೂ ಅವರ ಕಿವಿಗೆ ಮುಟ್ಟುತ್ತಾ ಇಲ್ಲ. ಕೇಂದ್ರದಲ್ಲಿ ಯಾರು ಇದ್ದಾರೆ ಅವರು ಬೇರೆ ಮಾತಿಗೆ ಮಾತ್ರ ಬೆಲೆ ಕೊಡುತ್ತಾರೆ ಎಂದು ಹೇಳುತ್ತೇನೆ. 1953 ರಲ್ಲಿ ಪೊಟ್ಟಿ ಶ್ರೀರಾಮುಲು ಸತ್ತ ನಂತರ ರೈಲು, ಬಸ್ಸುಗಳನ್ನು ಹಿಡಿದು ಗಲಾಟೆ ಮಾಡಿದ ನಂತರ ಭಾಷಾವಾರು ಪ್ರಾಂತ ರಚನೆ ಮಾಡ ಬೇಕು ಎಂದು ಬುದ್ಧಿ ಬಂತು. ಮಹಾರಾಷ್ಟ್ರ ಬೇಕು ಎಂದು ಬಾಂಬೆ ಸ್ಟ್ರೀಟ್‌ನಲ್ಲಿ ಗೋಲಿ ಬಾರ್ ನಡೆದ ನಂತರ ಅವರು ಒಪ್ಪಿದ್ದಾರೆ. ಗೋವಾ ಬಗ್ಗೆ 10 ವರ್ಷದ ನಂತರ ಒಪ್ಪಿಕೊಂಡರು. ಹಾಗೆಯೇ ಸ್ಟೀಲ್ ಪ್ಲಾಂಟ್ ಆಂಧ್ರದಲ್ಲಿ ಮಾಡಬೇಕೇ, ಮೈಸೂರಿನಲ್ಲಿ ಮಾಡಬೇಕೇ, ಮಹಾ ರಾಷ್ಟ್ರದಲ್ಲಿ ಮಾಡಬೇಕೇ ಎನ್ನುವ ವಿಚಾರ ಮಾಡಿದಾಗ ಆಂಧ್ರದಲ್ಲಿ ಮಾಡದೇ ಇದ್ದರೆ ಖಡಾ ಖಂಡಿತವಾಗಿ ರೈಲು ಗಾಡಿಗಳನ್ನು ಸುಟ್ಟು ಹಾಕುತ್ತೇವೆ, ಬಸ್ಸುಗಳನ್ನು ಸುಟ್ಟು ಹಾಕುತ್ತೇವೆ ಲೂಟಿ ಮಾಡುತ್ತೇವೆ ಎಂದು ಭಾಷಣ ಮಾಡಿದಾಗ ಕೇಂದ್ರಕ್ಕೆ ಗೊತ್ತಾಗಿ ಸ್ಟೀಲ್ ಪ್ಲಾಂಟ್ ಎಲ್ಲಿ ಹಾಕಬೇಕು ಎನ್ನುವುದನ್ನು ಇನ್ನೂ ವಿಚಾರಣೆ ಮಾಡುತ್ತಾ ಇದ್ದಾರೆ. ಇದೇ ಪ್ರವೃತ್ತಿಯನ್ನು ನಾವೂ ಕೂಡ ಮಾಡಿಕೊಂಡು ಬಂದರೆ ಗೂಂಡಾತನದಿಂದ ವರ್ತಿಸಿದರೆ ಕೇಂದ್ರಕ್ಕೆ ಮನವರಿಕೆಯಾಗುತ್ತದೆ. ವಾಸ್ತವಿಕವಾಗಿ ನಡೆದುಕೊಂಡು ಬಂದರೆ ಆಗುವುದಿಲ್ಲ. ನಮ್ಮ ಪ್ರವೃತ್ತಿಯನ್ನು ಬದಲಾಯಿಸಬೇಕು. ಆ ರೀತಿ ಮಾಡಿದರೆ ಮಹಾರಾಷ್ಟ್ರದಂತೆ ನಮ್ಮನ್ನೂ ಕಾಣುತ್ತಾರೆ. ಆ ರೀತಿ ಬೀದಿಯಲ್ಲಿ ನಾವು ಗೂಂಡಾತನ ಮಾಡುತ್ತಾ ಇಲ್ಲ. ಆದುದರಿಂದ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡುವುದು, ನಿಮ್ಮ ಪ್ರವೃತ್ತಿ ಯನ್ನು ಬದಲಾಯಿಸಿ ಇಲ್ಲವೇ ನಮ್ಮ ಪ್ರವೃತ್ತಿಯನ್ನು ಬದಲಾಯಿಸಿಕೊಳ್ಳುತ್ತೇವೆ ಎಂದು ಹೇಳ ಬೇಕಾಗಿದೆ. ನಮ್ಮ ನಾಯಕರಾದ ಶ್ರೀಮಾನ್ ವೀರೇಂದ್ರಪಾಟೀಲರು ಸಹ ಈ ಮಾತು ಹೇಳಿದ್ದಾರೆ. ಅದು ಬಹಳ ಸ್ವಾಗತಾರ್ಹ. ನಾವು ಮಾಡಿದ್ದಾದರೂ ಕೇಂದ್ರ ಸರ್ಕಾರಕ್ಕೆ ತಿಳಿಯುತ್ತದೆ. ಈಗ ನಾವು ಸೌಮ್ಯದಿಂದ ವರ್ತಿಸುತ್ತಾ ಇದ್ದೇವೆ. ಕೊನೆಗೆ ಇದು ಏನಾಗು ತ್ತದೆ ಎಂದರೆ ಬೆಂಕಿಯನ್ನು ನೀರಿನಿಂದ ಆರಿಸಬಹುದು ಆದರೆ ಜ್ವಾಲಾಮುಖಿಯನ್ನು ಬಾವಿಯ ನೀರಿನಿಂದ ಆರಿಸಲು ಸಾಧ್ಯವಿಲ್ಲ. ಕನ್ನಡಿಗರು ಸುಮ್ಮನೆ 12 ವರ್ಷದಿಂದಲೂ ಕೂಡ ಸತತವಾಗಿ ಸೌಮ್ಯವಾಗಿ ಇದ್ದಾರೆ. ಆದರೆ ಅವರ ಜ್ವಾಲಾಮುಖಿ ಎದ್ದನಂತರ ಬಾವಿಯ ನೀರಿನಿಂದ ಆರಿಸಲಿಕ್ಕೆ

ಹೋದರೂ ಸಾಧ್ಯವಿಲ್ಲ. ಆದುದರಿಂದ ಮೊದಲು ಈ ಸಭೆಯ ಅಪ್ಪಣೆಯನ್ನು ತೆಗೆದುಕೊಂಡು, ಪೂರ್ಣಶಕ್ತಿ ಇದೆ ಎಂದು ತಿಳಿದುಕೊಂಡು ನಮ್ಮ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ನಮ್ಮ ಭಾವನೆಗಳನ್ನು ವಿಶದವಾಗಿ ಕೇಂದ್ರಕ್ಕೆ ಮನವರಿಕೆ ಮಾಡಲಿ. ಇನ್ನು ಮುಂದೆ ನಮ್ಮ ಜನರಿಗೆ ಉದ್ರೇಕವನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂದು ಕೇಂದ್ರಕ್ಕೆ ಹೇಳಬೇಕಾಗಿದೆ. ಈ ಪ್ರಾಬ್ಲಮ್ಸ್ ಸಾರ್ಟ್ ಮಾಡದೇ ಹೋದರೆ ಕೊನೆಗೆ ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತಾಗುತ್ತದೆ. ಬಾರ್ಡರ್ ಕಮೀಷನ್ ಬಗ್ಗೆ ನಾಯಕರುಗಳನ್ನು ಕರೆಸಿ ಮಾತನಾಡೋಣ ಎಂದು ಹೇಳುತ್ತಾರೆ. ಆದುದರಿಂದ ಕೇಂದ್ರದಲ್ಲಿರುವ ನಮ್ಮ ನಾಯಕರಿಗೆ ಹೇಳುತ್ತೇನೆ, ಒಂದು ಕಡೆ ಸತ್ಯ, ನ್ಯಾಯ, ಧರ್ಮ ಇದ್ದರೆ ಮತ್ತೊಂದು ಕಡೆ ಅಸತ್ಯ, ಅಧರ್ಮ, ಅನೀತಿ ಪ್ರಸಂಗ ಬಂದಿದೆ. ಮೈಸೂರಿನ ಜನತೆಗೆ ಅಕ್ಷಮ್ಯ ಅಪರಾಧ ಅಸತ್ಯ, ಅನ್ಯಾಯ ಮಾಡುತ್ತಾ ಇದ್ದರೆ ಇನ್ನು ಮುಂದೆ ಸುಮ್ಮನೆ ಕೂರುವುದಕ್ಕೆ ಆಗುವುದಿಲ್ಲ, ಆದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತ್ತೇವೆ ಎಂದು ಅವರು ಕೇಂದ್ರಕ್ಕೆ ತಿಳಿಸಬೇಕು. ಮಹಾರಾಷ್ಟ್ರದವರು ಅನ್ಯಾಯ ಮಾಡುತ್ತಿದ್ದಾರೆ. ಶಿವಾಜಿ ಮಹಾರಾಜರ ಹೆಸರನ್ನು ಉಪಯೋಗಿಸಿಕೊಂಡು ತಮ್ಮ ಸಂಸ್ಥೆಯನ್ನು ಒಂದು ದುರ್ಮಾರ್ಗದ ಪ್ರವೃತ್ತಿಗೆ ಬಳಸುತ್ತಿದ್ದಾರೆ.

ಕೊನೆಯದಾಗಿ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ತಿಳಿಸಬೇಕಾಗಿದೆ. ಈ ಸಭೆ 3 ಕೋಟಿ ಜನರ ಪರವಾಗಿ ಧೈರ್ಯ ಕೊಡುತ್ತೇವೆ. ನಿಮಗೆ ಎಲ್ಲರ ನೈತಿಕ ಬೆಂಬಲ ಇದೆ. ಈ ಅನ್ಯಾಯ ಮಾಡುವ ಮಹಾರಾಷ್ಟ್ರದ ಜನರಿಗೆ ಯಾವ ಹಕ್ಕೂ ಇಲ್ಲ. ನಿಮಗೆ ಹಿನ್ನಲೆಯಾಗಿ ನಾವು ಇದ್ದೇವೆ ಎಂದು ಆಶ್ವಾಸನೆ ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri B. B. SAYANAK (Belgaum).—Mr. Speaker Sir, I pay homage to the martyrs of Bombay who have succumbed to the firing. At the outset I condemned what had happened in Bombay. But I strongly support Mr. Thackeray and his activities in Bombay.

SOME HON. MEMBERS.—Shame, shame.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಇದು ತೀರ ಸಣ್ಣತನ........

ಅಧ್ಯಕ್ಷರು.—ಮಾನ್ಯಸದ್ಯರ ಮಾತನ್ನು ಕೇಳೋಣ. ಅವರ ಭಾಷಣದ ಮೇಲೆ ಈಗ ಏನು ಪ್ರತೀಕಾರ ಮಾಡುವುದು ಬೇಡ ಅವರಿಗೆ ಮೊದಲು ಮಾತನಾಡಲಿಕ್ಕೆ ಅವಕಾಶ ಕೊಡೋಣ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಪಾಯಿಂಟ್ ಆಫ್ ಆರ್ಡರ್, ಸ್ವಾಮಿ. ನಾನು ಇದನ್ನು ರೂಲ್ 59 ಪ್ರಕಾರ ಎತ್ತುತ್ತಿದ್ದೇನೆ. ಈ ಮನೆಯ ಮುಂದೆ ಇದ್ದಂಥ ನಿರ್ಣಯ ಸಾಮಾನ್ಯವಾಗಿ ಮಹಾರಾಷ್ಟ್ರ ರಾಜ್ಯದಲ್ಲ ಅದರಲ್ಲೂ ವಿಶೇಷವಾಗಿ ಬೊಂಬಾಯಿಯಲ್ಲಿ ಶಿವ ಸೇನೆಯ ಹಿಂಸಾತ್ಮಕ ಚಟುವಟಿಕೆಗಳಿಂದ ಮೈಸೂರು ರಾಜ್ಯದವರಿಗೆ ಜೀವಹಾನಿ ಹಾಗೂ ಆಸ್ತಿ ಪಾಸ್ತಿಗಳಿಗೆ ಆಗಿರುವ ನಷ್ಟಕ್ಕೆ ಸಂಬಂಧಿಸಿದಂತೆ ಇದೆ. ಆದರ ಮೇಲೆ ಮಾತನಾಡಬಹುದು. ಅದರಿಂದ ಹೊರತುಪಡಿಸಿ ಬೇರೆ ವಿಷಯ ಈ ಮನೆ ಮುಂದೆ ಇಲ್ಲ. ಆದಕಾರಣ ಮಾನ್ಯ ಸದಸ್ಯರು ಈಗ ಶಿವಸೇನೆಯ ವಿಷಯವಾಗಿ ಅದು ಸರಿಯಾಗಿ ನಡೆದುಕೊಳ್ಳುತ್ತಿದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದರಿಂದ ಈ ಮನೆಯಲ್ಲಿ ಆ ರೀತಿ ಮಾತನಾಡಲು ಆಸ್ಪದವಿಲ್ಲ ಎಂದು ನನ್ನ ಭಾವನೆ.

Sri K. H. SRINIVAS.—The hon. Member Sri Sayanak who was just now attempting to make a speech clearly stated that his intention is to support the activities of Shiva Sena and Mr. Thackeray. I do not know how the hon. Member could support the activities of Shiva Sena when that particular question is not before this House.

Mr. SPEAKER.—The point before this hon. House for discussion is the violent activities of Shiva Sena in Maharashtra in general and Bombay in particular Many hon. Members said that they were very much dissatisfied about it. The views of hon. Member Sri Sayanak appears to be that the Shiva Sena did not act in a wrong way and its

(MR. SPEAKER)

activities could not be condemned. Anyway, it is open to Sri Sayanak to say whatever he wants. Let us hear him. I request hon. Member Sri Sayanak to be rather very moderate in his language. Let us hear the opposite point of view also.

Sri B. B. SAYANAK.—Sir, why this Shiva Sena has come into existence in Bombay? The simple object of the Shiva Sena is that Maharashtrians should get 80 per cent of jobs or employment opporunities in Bombay and in Maharashtra State 80 per cent of Maharashtrians should get accommodation in Government quarters. These are the simple objects of Shiva Sena. Are these objects of Shiva Sena harmful to the nation?

Mr. SPEAKER.—Please explain who is a Maharashtrian?

Sri B. B. SAYANAK.—Maharashtrian is a person who resides in Maharashtra and who has respect for Maharashtra whether he speaks Marathi or any other language. Every person who resides in Maharashtra should be treated as a Maharashtrian.

Mr. SPEAKER.—If that is so, when a Mysorean stays there and conducts his business in Bombay for several years, why his property should be damaged?

Sri B. B. SAYANAK.—I will come to your point Sir. Sir, these are the only two objects of Shiva Sena and all the States in India have accepted these objects of Shiva Sena and even in Mysore State the Hon. Chief Minister has already stated that local persons should be taken in Government services and industrial services in the State. Even Maharshtra Government has accepted this object.

In the last general elections, Mr. V. K. Menon wanted to contest the election from Bombay on the Congress ticket. Mr. S. K. Patil refused the Congress ticket to Mr. Menon as in the opinion of Mr. S. K. Patil Mr. Menon was out and out a communist. Then Mr. Menon contested the election as an independent candidate with the help of Communist Party and the Congress Party ticket was given to Mr S. S. Barve. During the elections, the Congress Party took the support of Sri Balasaheb Thakare and this Shiva Sena.

Mr. SPEAKER.—The hon. Member may please come to the point.

Sri B. B. SAYANAK.—Sir, after the election of Mr. S. S. Barve the Congress Party congratulated the Shiva Sena. Immediately after the election, Mr. Barve died and in his place Tarabai Sapre who is the sister of Bave was given Congress ticket to contest from Bombay and Mr. Menon was again the Congress opponent in the election. At that time also Shiva Sena fully supported the Congress candidate and the Congress candidate got elected in the bye-election. All the Congress people patted Mr. Thakare and the activities of Shiva Sena then, and now they are against Mr. Thakare and Shiva Sena. It is not a surprise to me that the Kannada people are condemning Shiva Sena now.

Sir, even when the Mahajan Commission was appointed to solve Maharashtra-Mysore border dispute, the people in Mysore State and the minorities in border area had given evidence against Mr. Thakare and his Shiva Sena. I want to ask the Kannada people was it right on their part at that time to do so? The objection taken by the Kannada people to Shiva Sena at that time was only because they wanted to hustle the question of Mysore-Maharashtra border dispute. Mr. Thakare came to Belgaum on 1st November 1968 to address a public meeting there and requested the Central Government to solve the Mysore-Maharashtra border dispute before 26th January 1969. The Congress High Command and the Central Government headed by Smt. Indira Gandhi have never come out with any definite solution to this problem up to 26th January 1969. Have they guts to solve this problem which is pending for more than 12 years?

Then Sir, the Leader of the P.S.P. condemned the Shiva Sena, but the P.S.P. which is an All India party, also entered into a pact or agreement with the Shiva Sena during the last Municipal Corporation elections in Bombay. With the help of Shiva Sena, the P.S.P. got success in Bombay. Not only that Sir, there was also a public meeting on 2nd February 1969 in the Shivaji Park in Bombay where Mr. Sadanand Varde said in the public meeting that the P.S.P. in Bombay would support the Shiva Sena in respect of the border dispute.

11-30 A.M.

I want to ask Sri Gopala Gowda. The Leader of his SS Party in Bombay Mr. Bapu Sahib Kalate has supported the border issue taken up by Shiva Sena in Bombay. Why does he condemn Shiva Sena in Mysore State? All the national parties are divided on this border issue. They have no guts to solve the border problem issue amicably. Maharashtrian of any party in Bombay feels that Belgaum should be merged in Maharashtra and Kannada people in Mysore of any party feel that Belgaum should be retained in Mysore. The Jan Sangh has not taken a bold stand to solve the border issue. The President of the Congress Party is feeling in Bangalore that he wants a judicial enquiry. When there was a meeting on 13–14th of this month in Delhi of the Working Committee Meeting, why did he not suggest it at that meeting? Why he is making that suggestion here only? I am charging Sri Nijalingappa that he is expressing it in Mysore State and he wants to kindle the fire in Mysore State in respect of border issue. That is the charge against Sri Nijalingappa I am making.

MR. SPEAKER.—Is he afraid of Bal Thakerey?

SRI B. B. SAYANAK —Yes. I have been repeatedly saying that it is the duty of the Central Government and the All India Congress Party to solve the Maharashtra-Mysore border issue once for all and take a firm decision. It is the Congress Party which is headed by Sri Nijalingappa and the Central Ministry which is headed by Indiraji

(SRI B. B. SAYANAK)

who have no guts to solve the border problem. That is why there is goondaism in Bombay. What had happened in Bombay is, the goondas have looted property and burnt the houses. It is the goondas who have looted properties and the looted properties are found in the huts which is a colony of southerners and not in the houses of Maharashtrians. That is my charge against the Southerners. Shiva Sena is not for looting. They have not done it. They only wanted to have this border problem solved amicably, as early as possible. Thank you, Sir.

You have given me full justice.

Mr. SPEAKER.—Normally the time for such a discussion under rule 59 is 2½ hours. It is over. If it is the pleasure of the House, I have no objection to extend the time up to One of the Clock.

HON'BLE MEMBERS.—Yes, Sir.

Mr. SPEAKER.—I will extend the time up to 1 P.M. we will sit up to One. The Chief Minister wants half an hour for reply. The discussion may proceed up to 12-30 P.M. There is hardly one hour. There is a big list of speakers given to me. It may not be possible to accommodate all. Therefore I am requesting all hon. Members to co-operate with the Chair by taking lesser time than ten minutes. It would be embarrassing for the Chair if they make requests for extra time.

ಶ್ರೀ ಎಸ್. ಎಂ. ಗುರಡ್ಡಿ.—ಅಧ್ಯಕ್ಷರೇ, ಮುಂಬಯಿಯಲ್ಲಿ ಶಿವಸೇನೆಯ ಹಿಂಸಾಕೃತ್ಯಗಳನ್ನು ಖಂಡಿಸಿ ಅದರ ಜೊತೆಗೆ ದಕ್ಷಿಣದವರಿಗೆ, ಅದರಲ್ಲೂ ಕರ್ನಾಟಕದವರಿಗೆ ಆದ ಅಪಾರ ನಷ್ಟಕ್ಕಾಗಿ ದುಃಖಪಡುತ್ತೇವೆ ಮತ್ತು ಈ ಮನೆಯ ಎಲ್ಲರ ಪರವಾಗಿ ಅವರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇನೆ. ಈ ಸಮಯದಲ್ಲಿ ಮಹಾರಾಷ್ಟ್ರದ ಏಕೀಕರಣ ಸಮಿತಿಯ ಸದಸ್ಯರೊಬ್ಬರು ಶಿವಸೇನೆಯ ನಡತೆಯ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿ ಅವರ ಬಗ್ಗೆ ಚೆನ್ನಾಗಿ ಮಾತನಾಡಿದ್ದನ್ನು ಕೇಳಿ ಬಹಳ ವಿಷಾದವಾಗುತ್ತದೆ. ಈ ಶಿವಸೇನೆಯು ಕೇವಲ ಗಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮಾತ್ರ ರಚಿತವಾಗಿರದೆ, ನನಗೆ ತಿಳಿದಮಟ್ಟಿಗೆ ಒಂದು ಜಾತಿಯ ಸ್ವರೂಪವನ್ನು ತಾಳಿದೆ ಎಂದು ತಿಳಿಯುತ್ತದೆ. ಈ ಸೇನೆಯ ನೆಪದಲ್ಲಿ ಮಹಾರಾಷ್ಟ್ರದವರು ತಮಗೆ ಬೇಕಾದ ಕೆಲಸಗಳನ್ನು ಮಾಡಿಕೊಳ್ಳಲು ಹವಣಿಸುತ್ತಿದ್ದಾರೆ. ಶಿವಸೇನೆಯು ಈಗ ಮುಂಬಯಿನಲ್ಲಿ ಗಡಿ ವಿವಾದದ ನೆಪದಲ್ಲಿ ದಕ್ಷಿಣದವರಿಗೆ, ಅದರಲ್ಲೂ ಕರ್ನಾಟಕದವರಿಗೆ ಹಾನಿ ಮಾಡುತ್ತಿರುವುದು ಶೋಚನೀಯವಾಗಿದೆ. ಮಹಾಜನ್ ಆಯೋಗವು ನೇಮಕವಾದಾಗ ಅದು ಮಹಾರಾಷ್ಟ್ರದವರಿಗೆ ಬೇಕಾದಂತೆ, ಅವರಿಗೆ ಅನುಕೂಲವಾಗುವಂತೆ ವರದಿಯನ್ನು ಸಲ್ಲಿಸಬಹುದೆಂದು ಅಪೇಕ್ಷಿಸಿದ ಮಹಾರಾಷ್ಟ್ರದವರು, ತಮಗೆ ಅನುಕೂಲವಾದ ವರದಿ ಬರಲಿಲ್ಲವೆಂದು ತಿಳಿದು ಈ ಚಳವಳಿ ಪ್ರಾರಂಭವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಮಹಾಜನ ಆಯೋಗ ನಿರ್ಮಾಣವಾದುದು ಮಹಾರಾಷ್ಟ್ರದವರ ಒತ್ತಾಯದಿಂದಲೇ. ಆದರೆ ಅವರಿಗೆ ಬೇಕಾದ ಭಾಗಗಳು ಮಹಾಜನ್ ವರದಿಯ ಪ್ರಕಾರ ದೊರೆಯದಿರುವುದರಿಂದ ಈಗ ಬಂದಿರುವ ವರದಿಯನ್ನು ಅನ್ವಯಿಸುವುದು ಬೇಡವೆಂದು ಹೇಳುತ್ತಿದ್ದಾರೆ. ಮತ್ತೆ ಮಹಾಜನ್ ವರದಿ ಮಹಾರಾಷ್ಟ್ರದವರಿಗೆ ಒಪ್ಪಿಗೆಯಾಗಿಲ್ಲವಾದ ಕಾರಣ ಬೇರೆ ರೀತಿಯಿಂದ ಗಡಿ ಪ್ರಶ್ನೆಯ ತೀರ್ಮಾನವನ್ನು ಅವರು ಅಪೇಕ್ಷಿಸುತ್ತಿದ್ದಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಕೂಡ ಮಾತನಾಡುತ್ತಿದ್ದಾರೆ. ಬೆಳಗಾಂಅನ್ನು ಮಹಾರಾಷ್ಟ್ರಕ್ಕೆ ತೆಗೆದುಕೊಂಡೇ ತೀರುತ್ತೇವೆಂದು, ಮಹಾಜನ್ ಆಯೋಗ ನೇಮಕವಾಗುವುದಕ್ಕೆ ಮುಂಚೆ ಮೈನರ್ ಅಡ್‌ಜಸ್ಟ್‌ಮೆಂಟ್ಸ್ ಬೇಕಾದರೆ ಮಾಡಿಕೊಂಡು ಗಡಿ ಸಮಸ್ಯೆಯನ್ನು ಪರಿಹಾರಮಾಡಿಕೊಳ್ಳುವುದು ಸೂಕ್ತ

ವೆಂದು ನಮ್ಮ ಸರಕಾರದವರು ಹೇಳಿದರೂ ಅದಕ್ಕೆ ಕಿವಿ ಕೊಡದೆ ಮಹಾರಾಷ್ಟ್ರದವರು ಮಹಾಜನ್ ಕಮಿಷನ್ ನೇಮಿಸಲು ಕಾರಣರಾದರು. ಆದರೆ ಆ ಕಮಿಷನ್‌ವರದಿ ಹೊರಬಿದ್ದಮೇಲೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಮಹಾರಾಷ್ಟ್ರದವರು ತಯಾರಿಲ್ಲ, ತಮಗೆ ಬೇಕಾದ ಬೆಳಗಾಂ ದೊರೆಯುವಂತಿಲ್ಲವಾದ್ದರಿಂದ ಅದನ್ನೇ ಮುಖ್ಯವಾದ ಕಾರಣವನ್ನಾಗಿಟ್ಟುಕೊಂಡು ಒಬ್ಬ ಸೂತ್ರಧಾರಿಯ ಮೂಲಕ ಗಾಳಿಪಟವನ್ನು ಆಡಿಸುವುದಕ್ಕೆ ಹೊರಟಿದ್ದಾರೆ. ಬೆಳಗಾವಿಯನ್ನು ಪಡೆಯುವ ಭಾವನೆ ಕಂಡುಬರುತ್ತಿದೆ. ಹಿಂದೆ ಕೇಂದ್ರ ಸರಕಾರದಲ್ಲಿ ಗೃಹಮಂತ್ರಿಗಳಾಗಿದ್ದ ನಂದಾರವರು ಯಾವ ಕಾರಣಕ್ಕಾಗಿ ಸಾಧುಗಳು ಪಾರ್ಲಿಮೆಂಟ್ ಮುಂದೆಬರುವಾಗ ನಡೆಸಿದ ಅತ್ಯಾಚಾರಕ್ಕೆ ತಮ್ಮ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತೋ ಅಂಥದ್ದೇ ಶಿವಸೇನೆಯು ಹೇಯವಾದ ಕೃತ್ಯಗಳ ಬಗ್ಗೆ ಈಗಿನ ಗೃಹಮಂತ್ರಿಗಳೂ ಸಹ ತಮ್ಮ ಸ್ಥಾನವನ್ನು ತ್ಯಜಿಸಲೇಬೇಕಾಗಿದೆ. ಈಗ ಶಿವಸೇನೆಯು ರಾಷ್ಟ್ರಘಾತಕವಾದ ಕಾರ್ಯದಲ್ಲಿ ತೊಡಗಿದೆ. ಮಹಾರಾಷ್ಟ್ರವು ತನ್ನ ದೇಶವನ್ನು ಬೆಳೆಸಿಕೊಳ್ಳುವುದರ ಜೊತಗೆ ದೇಶವನ್ನು ಹಾಳುಮಾಡುವ ಸಂಕುಚಿತ ಭಾವನೆಯಿಂದ ಕೆಲಸಮಾಡುತ್ತಿದೆ. ಇದನ್ನು ನಾವು ಬಹಳ ದುಃಖದಿಂದ ಹೇಳಬೇಕಾಗಿದೆ. ಇಂದು ನಮ್ಮ ದೇಶವನ್ನು ರಾಷ್ಟ್ರವನ್ನು ಬೆಳೆಸಬೇಕೆಂದು ಹೇಳುವಾಗ ಜಾತೀಯ ಭಾವನೆಗಳಿಂದ ಪ್ರಾಂತೀಯ ವ್ಯಾಮೋಹ ಮತ್ತು ಸಂಕುಚಿತ ಭಾವನೆಗಳಿಂದ ದೇಶ ಘಾತಕ ಕೃತ್ಯಗಳನ್ನೆಸಗುವುದು ಸರಿಯಲ್ಲ, ಹೀಗೆ ಮಾಡಿದರೆ ದೇಶ ಮುಂದುವರಿಯುವುದಿಲ್ಲ. ಮನಸ್ತಾಪಕ್ಕೆ ಎಡೆಮಾಡಿದಂಥ ಮಹಾರಾಷ್ಟ್ರ ಮತ್ತು ಮೈಸೂರಿನ ಗಡಿ ಸಮಸ್ಯೆ ತೀವ್ರವಾಗಿ ಬಗೆಹರಿಯಲೇಬೇಕು. ಇಂದು ಮಹಾಜನ್ ವರದಿ ಮೈಸೂರಿಗೆ ಅನುಕೂಲವಾಗಿದೆ, ಆದಕಾರಣ ಮೈಸೂರು ಅದನ್ನು ಕಾರ್ಯಗತಗೊಳಿಸಲು ಒತ್ತಾಯಮಾಡುತ್ತಿದೆ ಎಂಬ ಭಾವನೆ ಕೆಲವರಿಗೆ ಅಂದರೆ ಮಹರಾಷ್ಟ್ರದವರಿಗೆ ಇದೆ. ಇದು ಸರಿಯಲ್ಲ, ಮಹಾಜನ್ ವರದಿಯಿಂದ ಏನಾದರೂ ಅನ್ಯಾಯವಾಗಿದ್ದರೆ ಅದು ಮೈಸೂರಿಗೆ ಮಾತ್ರ ಆಗಿದೆ. ಕಮಿಷನ್ ವರದಿ ಕೊಟ್ಟಮೇಲೆ ನಾವು ಅದಕ್ಕೆ ಬದ್ಧರಾಗಿರಬೇಕು. ನಮಗೆ ಅದರಿಂದ ಲಾಭವಿಲ್ಲದಿದರೂ ನೈತಿಕ ಹೊಣೆಯನ್ನರಿತು ಒಪ್ಪಿಕೊಳ್ಳುವುದು ಧರ್ಮವಾಗಿದೆ. ಪದೇಪದೇ ಈ ಗಡಿ ಸಮಸ್ಯೆಯನ್ನು ಕೆದಕುವುದು ಸರಿಯಲ್ಲ. ನಮಗೆ ವರದಿಯಿಂದ ಯಾವ ವಿಧವಾದ ಲಾಭವಿಲ್ಲ, ನಮಗೆ ಅವಶ್ಯಕವಾಗಿ ಸೇರಬೇಕಾಗಿದ್ದ ನಿಪ್ಪಾಣಿಯು ನಮ್ಮ ಕೈಬಿಟ್ಟುಹೋಗುತ್ತಿದೆ. ಅದನ್ನು ಕಳೆದುಕೊಳ್ಳುತ್ತಿದ್ದೇವೆ. ಖಾನಾಪೂರ ಮತ್ತು ಅನೇಕ ಬೆಲೆಯುಳ್ಳ ಪ್ರದೇಶಗಳು ಮೈಸೂರಿನಿಂದ ಹೋಗುತ್ತಿವೆ.

ಇವತ್ತಿನ ದಿವಸ ಸೋಲಾಪುರದ ಕೆಲವೊಂದುಭಾಗ ಮೈಸೂರಿಗೆ ಸೇರಲು ಸೂಚಿಸಿದ್ದಾರೆ, ಅದು ಬರಗಾಲಕ್ಕೆ ತುತ್ತಾಗುವ ಪ್ರದೇಶ. ಮಹಾಜನ್ ಕಮಿಷನ್ ವರದಿಯಿಂದ ಯಾವ ರೀತಿಯಿಂದಲೂ ಮೈಸೂರಿಗೆ ನ್ಯಾಯ ದೊರೆತಿಲ್ಲ. ಆದರೂ ಕೂಡ ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಮಹಾತ್ಯಾಗಿಗಳು ಆಗಿದ್ದೇವೆ ಅಷ್ಟೇ ಅಲ್ಲ ಸಂಕುಚಿತ ಭಾವನೆಯನ್ನು ತಾಳಲಿಕ್ಕೆ ನಾವು ಮನಸ್ಸು ಮಾಡುವುದಿಲ್ಲವಾದ ಕಾರಣದಿಂದ ತ್ರಾಸು ಬರುತ್ತಾ ಇದೆ. ನಾವು ಇವತ್ತು ಕೇಂದ್ರಕ್ಕೆ ಕೇಳಿಕೊಳ್ಳುವುದು ಇಷ್ಟೇ, ಮೈಸೂರು ತನಗೆ ಸಂಬಂಧಿಸಿದ ಯಾವದೇ ಗಡಿ ಪ್ರಶ್ನೆಯನ್ನು ಇತ್ಯರ್ಥ ಮಾಡಿಕೊಳ್ಳಲಿಕ್ಕೆ ಶಾಂತಿಯುತ ಮಾರ್ಗದಿಂದ ಬಗೆಹರಿಸಿಕೊಳ್ಳಲಿಕ್ಕೆ ತಯಾರಿದೆ. ಆದರೆ ಕೇಂದ್ರದವರು ಕೇವಲ ಒಂದು ರಾಜ್ಯದವರ ಪ್ರಭಾವಕ್ಕೆ ಒಳಗಾಗಿ ಬಹುದಿನಗಳಿಂದ ಗಡಿಸಮಸ್ಯೆಗಳನ್ನು ಬಗೆಹರಿಸದೆನೆ ಬಿಟ್ಟರೆ, ಪರಿಸ್ಥಿತಿ ದಿನದಿನಕ್ಕೆ ಹದಗೆಡುತ್ತದೆ. ಯಾರದೂ ಒಡೆಗೆ ಒಳಗಾದರೆ ಯಾವುದೇ ಒಂದು ಸಮಸ್ಯೆಯನ್ನೂ ಕೂಡ ಪರಿಹಾರ ಮಾಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಕೇಂದ್ರಸರ್ಕಾರದವರು ತೀವ್ರ ಈ ಗಡಿ ಸಮಸ್ಯೆಯನ್ನು, ನಿಷ್ಪಕ್ಷಪಾತದಿಂದ ಬಗೆಹರಿಸಬೇಕೆಂದು ಈ ಸಂದರ್ಭದಲ್ಲಿ ಈ ಮನೆಯ ಮುಖಾಂತರ ಕೇಳಿಕೊಳ್ಳುತ್ತಾ ಇದ್ದೇನೆ. ಅಲ್ಲದೇ ಮುಂಬಯಲ್ಲಿ ಕನ್ನಡಿಗರು ಮತ್ತು ದಕ್ಷಿಣದವರು ಯಾರಿದ್ದಾರೆ ಅವರಿಗೆ ಮುಂಬೈನಲ್ಲಿ ಆದಂತಹ ಹಾನಿಯನ್ನು ಮಹಾರಾಷ್ಟ್ರ ಸರ್ಕಾರದವರು ತುಂಬಿಕೊಡುವುದರ ಜೊತೆಗೆ ಮಹಾರಾಷ್ಟ್ರ ಮುಖ್ಯಮಂತ್ರಿಗಳು ಮುಂಬಯಲ್ಲಿದ್ದಂಥ ದಕ್ಷಿಣದವರ ಮತ್ತು ಅದರಲ್ಲೂ ಮೈಸೂರಿನವರ ರಕ್ಷಣೆಯನ್ನು ಮಾಡಬೇಕು. ಅವರ ಆಸ್ತಿ ಪಾಸ್ತಿಗೆ ಧಕ್ಕೆಯಾಗದಂತೆ ಕ್ರಮಕೈಗೊಳ್ಳಬೇಕು. ಕರ್ನಾಟಕದಿಂದ ಹೋದಂತಹ ಎಷ್ಟೋ ಸಹೋದರರು ಮತ್ತು ಗೆಳೆಯರು ಮುಂಬೈನಲ್ಲಿ ಇದ್ದಾರೆ ಅವರು ಕಾಗದ ಬರೆಯುತ್ತಾ ಇದ್ದಾರೆ ನಾವು ಕನ್ನಡಿಗರು ಕರ್ನಾಟಕದವರು ಎಂದು ಹೇಳಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಕನ್ನಡವನ್ನು ಮನೆಯಲ್ಲೇ ಮಾತನಾಡಬೇಕೇ ವಿನಾ ರಸ್ತೆಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಮಾತಾಡಲಿಕ್ಕೆ ಬಾರದಂತಹ ಸ್ಥಿತಿಯಲ್ಲಿದ್ದೇವೆ ಎಂದು ತಿಳಿಸುತ್ತಿದ್ದಾರೆ. ಇದು ನಿಜವಾಗಿಯೂ ಕನ್ನಡ ಜನತೆಗೆ ಕಳಕಳಿಯನ್ನುಂಟುಮಾಡಿದೆ. ಆದಕಾರಣ ಮುಂಬೈನಲ್ಲಿದ್ದಂಥ ಕನ್ನಡಿಗರಿಗೆ ಈ ಒಂದು ಪರಿಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಸುರಕ್ಷತೆಯ ಬಗ್ಗೆ ಕೇಂದ್ರ ಸರ್ಕಾರದವರು ತೀವ್ರ ಕಾರ್ಯ

(ಶ್ರೀ ಎಸ್. ಎಂ. ಗುರೆಡ್ಡಿ)

ಕ್ರಮವನ್ನು ಕೈಕೊಂಡು ಅವರಲ್ಲಿಯ ದುಗುಡವನ್ನು ಅಧೈರ್ಯವನ್ನು ಹೋಗಲಾಡಿಸಬೇಕು ಮತ್ತು ಕೇಂದ್ರಸರ್ಕಾರದವರು ಕನ್ನಡಿಗರಿಗೆ ಮತ್ತು ದಕ್ಷಿಣದವರಿಗೆ ಒಂದು ದಿಟ್ಟವಾದ ಆಶ್ವಾಸನೆಯನ್ನು ಈ ಬಗ್ಗೆ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು, ಕನ್ನಡಿಗರಿಗೆ ಆದ ಹಾನಿಯನ್ನು ಅವರು ತುಂಬಿಕೊಡಬೇಕು ಮತ್ತು ನಮ್ಮ ಸರ್ಕಾರದವರೂ ಕೂಡ ಆದಷ್ಟು ತಮ್ಮ ಸಹಾಯವನ್ನು ಮಾಡಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನು ಮುಗಿಸುತ್ತೇನೆ.

† Sri V. N. PATIL (Humnabad).—Sir, nobody can afford to support the atrocities committed by the Siva Sena in Bombay unless there is crisis of confidence and concience. The reason for my saying so is because it is not only undermeoratic but also it is a fascist method adopted by the Siva Sena. While condemning Shiva Sena we have to look into the character of this Shiva Sena. It was born out of unholy alliance of professional politicians, particularly the party in power, in order to defeat the leftist and progressive elements in the country. That was the main motive. I must recall to the mind of the hon'ble Members in this connection that Sri S. K. Patil in order to defeat Sri V. K. Krishna Menon, a progressive minded man—somebody stated he is a Communist but he has neither joined Communist party nor do we consider him has a communist—in the last general election, supported this organization. Shiva Sena which is an illegitimate child born out of Congress and Swatantra. Of late I do not understand how the P. S. P. is joining hands with this Shiva Sena and trying to take advantage of Shiva Sena which is a big serpant and dragon. Sometime back we said about Chinese dragoon but this seems to be Maharashtra dragon. After all my education was in Marathi; in Bidar district whether we are Karnadigas or Maharashtrians, we are remaining like brothers and sisters and there is no hatred. But hatred alone is the foundation and corner stone of this Shiva Sena and Bal Thackerray was proud to proclaim in the streets of Bombay that for the protection of Maharashtra people a person like Hitler is required and he is such a Hitler. Such a dragoon is allowed to function in a democracy by those who profess to establish democracy in the country. There cannot be Hamlet without the Prince of the Denmark. The villain of the piece here is the Union Home Minister who believes in divide and rule policy, and playing an anti-social role, taking maximum advantage of creating and whipping up hatred in Maharashtra. This Shiva Sena has all his blessings and I charge the Home Minister is one of the fellow supporters of this Shiva Sena. Bal Thackerray had gone to Delhi and in consultation with the Home Minister did all this. I may say with full sense of responsibility that he is the person who has encouraged such demonish and devilish character of people as a result of which lives of innocent people were lost. They have lost very heavily. The Mysore people have succumbed to such pressures. Now the Congress Working Committee wants to discuss this issue. When the One Man Commission was appointed, Sri S. K. Patil rightly said that Sri Nijalingappa was sleeping over the matter. At the time the Commission

was appointed Sri Nijalingappa did not do what all he should have done. Therefore all these things are happening. The interest of the Congress party is uppermost, and it is most unfortunate that the people will have to make such agitation within the constitutional limits. When it was requested that this organisation be banned, Sri Chavan said that there is no specific thing like banning a party like Shiva Sena. This is the worst dragon which has come up with the influence of C. I. A., with the blessings of Congress bosses like Sri S. K. Patil. Practically during those days there was no Government in Bombay, when hotels were looted and people were killed, the I. G. P. wanted to make a compromise with Bal Thackerray whom the police knew was a gangster. According to me the Shiva Sena is only an association of gangsters and gangsters alone can do these things. Shiva, according to mythology is God and Sena means those who guard the borders. But, the motive and character of Shiva Sena is only to whip up communal movement in the State to see more and more harm is done. Such being the case I emphatically say that the Central Government and Maharashtra Government are responsible for this and I demand that the Union Government should dismiss the Maharashtra Government and remove Sri Chavan. He does not deserve to be our Minister at the Centre

Unless Shiva Sena organisation is banned, there is no possibility of restoring law and order. There are several such Fascist organisations in our country. In Mysore also, we are not lacking in such organisations. Such organisations are active in the name of narrow parochialism and language and several other things. There is an organisation similar to Shiva Sena in Assam. A fortnight back there was a big agitation in Andhra and there was a regular fight between the people of Andhra and Telangana, between two brothers, talking a single language. Here in Mysore, on the floor of this very House we have heard the slogan of two Mysores—South Mysore and North Mysore in order to split the present State into two States. So we will have to fight this fascist mentality on the basis of language and politics. Unless we give a political fight, there is no solution to this problem. That mentality should be curbed and we have to emerge ourselves as a socialist force. We must unite all the forces which believe in socialism. Shiv Sena was a tool to crush the Communist Party in Bombay and we defended our Party against its onslaughts. Our party Office was smashed. It was not the Congress Office that was smashed in Bombay. Mr. Chavan who was responsible for the birth of Shiv Sena, is now using the word Fascist while characterising the Shiv Sena organisation ; it was sheer hypocrisy. We refuse to believe him ; we refuse to swallow Chavan's words. Mr. Chavan has made such a statement at the eleventh hour in order to save his skin. We throw a challenge to the Central Government that we are not going to allow them to take away the interests of Mysoreans. We urge that the Mahajan Commission Award should be taken as a total award. If there is to be any change in it, we are not going to surrender to it. I ask the present Chief Minister to throw a challenge to the Central Government. I tell him : Please do not return

(SRI V. N. PATIL)

to Bangalore to sit as Chief Minister; give your resignation first from there itself and say that we, Mysoreans are not going to succumb to pressures. All that is happening at Delhi is only a conspiracy to help Maharashtra and Shiv Sena is the tool of the Maharashtrians. The Maharashtrians want to secure Belgaum anyhow for Maharashtra. Shiv Sena is their lever; it is a fresh method to take away the rights of Mysoreans.

As regards the atrocities committed by Shiv Sena, several of my friends have condemned them and I will not go into them for want of time. In order to curb tendencies of Shiv Sena lest it may affect Mysoreans, no such parochial organisations and cheap slogan-mongering should be allowed hereafter; they should be nipped in the bud. This House must give a clear guidance to tackle such tendencies and forces. Lately several organisations are sprining up on the basis of language and parochialism. All these as well as communal approaches should be curbed, When such pernicious forces are raising their head, Government must consider whether it deserves to be here. To be frank, we have lost faith in this Government. It is the spokesmen of this Government who have time and again surrendered to the whims and fancies of Maharashtra and the Union Government and betrayed the people of Mysore.

One word about compensation. We are receiving Tibetan refugees; we are receiving refugees from Ceylon and Burma and giving them all help. Then why not we show generous attitude to our own brothers? I appeal to the Government of Mysore to exhibit an open and generous mind towards our own unfortunate brethren of Mysore and get them maximum compensation. We must secure the maximum justice from the Maharashtra Government to the Kannadigas. I conclude by thanking the Chair.

Mr. SPEAKER—As the time available at my disposal is short, I shall be giving only five minutes to each Member hereafter. I can accommodate hon'ble Members only to that extent. Let each Member confine himself to that time limit so that I may accommodate all the members who have expressed their desire to participate in this debate.

† Sri S. R. BOMMAI (Kundagol)—Mr. Speaker Sir, I condemn the atrocities commited by Shiv Sena people at Bombay. It is unfortunate that we, Indians, have forgotten the lessons of history in a very short time, that is, within 20 years after Independence. We were slaves for thousands of years because of language differences, religion and caste, which contributed to the disunity of the nation. Because of these divisive forces, at the time of the reorganisation of States, number of leaders expressed their fear about the formation of States on linguistic basis and stated that formation of States based on language,

caste, etc., should not be encouraged. I think their fears have come true. Because of these narrow parochial tendencies throughout the country for the last 15 years, we are seeing riots, looting and dacoity and law and order has failed in many States, in a number of Cities. If we have the interest of the nation at heart, if we have to survive as a nation, if we have to preserve our freedom obtained after thousands of years of subjection under the great leadership of Mahatma Gandhi, it is for us to reconsider whether we will have to go back on our decision of multi-lingual States. It is time that we re-consider our decision.

The basic activity or the ideology of Shiv Sena is based on hatred and jealousy. Its activity has particularly got an economic background and it can be predominently seen in Bombay City. The outsiders who have gone to Bombay City have built the City and contributed to the wealth of the City. They are in a better economic position. The Maharashtrians who are not given a proper treatment in industry, trade or commerce are jealous of other people. That has led to the activities of Shiv Sena. That is the basis of the Shiv Sena ideal.

If we have to avoid all these tendencies, we will have to solve the economic problem of the whole country. It is our economic ills that are responsible for all these unhappy tendencies throughout the country. If everybody is given a proper job and provided with proper employment then there will be no question of any caste or creed or activity based on provincialism.

Therefore, it is high time that all Indian national parties come together over a round-table and take firm decisions. They have to advise their State Branches or State organisations to condemn such activities. Not only that. They should not associate themselves with such activities or associations indulging in parochialism. At the time of elections, alliances are made with such organisations having narrow objectives by political parties to get into power and after getting into power, those parochial organisations exercise their influence on the political party which sought their help. No political party should enlist the help of such groups to keep the balance of power nor associate with them. Once we recognise them or associate with them or take help from them, it will be difficult to condemn them. Therefore opportunistic alliances should not be made by any political party with communal or provincial organisations.

12-00 NOON.

It is high time that all the political parties met together and declared that they would not associate with such activities. So far as the loss that has been caused to Kannada people and other people in Bombay State is concerned, this Government and all the political parties should come forward to collect funds and compensate our brethren who have suffered there. With these few words, I thank you, Sir.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಅಧ್ಯಕ್ಷರೇ, ಈ ತಿಂಗಳ ತಾರೀಕು 8 ರಿಂದ 12 ರ ತನಕ ಅವಿರತವಾಗಿ, 5 ದಿವಸದವರೆಗೆ ಬೊಂಬಾಯಿಯಲ್ಲಿ ನಡೆಸಲ್ಪಟ್ಟ ಶಿವಸೇನೆ ಗೂಂಡಾಗಳ ಭೂತಚೇಷ್ಟೆಗಳು ಪ್ರಜಾಪ್ರಭುತ್ವವನ್ನು ಜೀವಂತ ಸುಟ್ಟು ಹಾಕತಕ್ಕಂತಹ ಪರಿಸ್ಥಿತಿಗೆ ತಂದಿದೆ. ಈ ಶಿವಸೇನೆಯ ಹಿನ್ನಲೆಯ ವಿಷಯ ಹಿಂದೆ ಮಾತನಾಡಿದಂತಹ ನಮ್ಮ ಅನೇಕ ಮಿತ್ರರು ಹೇಳಿದ್ದಾರೆ. ಈ ಶಿವಸೇನೆಯು ಪ್ರಥಮ ಬಾರಿಯಾಗಿ ಬೊಂಬಾಯಿಯಲ್ಲಿ ಇಂಥ ಒಂದು ಅಮಾನುಷ ಕೃತ್ಯವನ್ನು ಮಾಡಿಲ್ಲ. ಇದರ ಮುಂಚೆ ಮಾಡಿರುವ ಕೃತ್ಯಗಳನ್ನು ಸೇರಿಸಿ, ಇದು 5 ನೇ ಬಾರಿಯಾಗಿ ಅನ್ಯಾಯ ರೀತಿಯಲ್ಲಿ ಮಾಡಿರುವ ಕೃತ್ಯವಾಗಿದೆ. ಹಿಂದೆ ನಾಲ್ಕು ಬಾರಿ ಇಂಥದ್ದೇ ಆದ ಕೃತ್ಯಗಳು ಉಡುಪಿ ಹೋಟಲಿನವರ ಮೇಲೆ ನಡೆದಿವೆ. ಇದರ ಹಿನ್ನಲೆ ಹೇಳುವುದಾದರೆ, ಇದು ಹೇಗೆ ಹುಟ್ಟಿಕೊಂಡಿದೆ, ಎಂದರೆ, ಇದು ಭಾರತದ ಭಸ್ಮಾಸುರನೆಂದು ಕರೆದರೆ ಅತಿಶಯೋಕ್ತಿಯಾಗಲಾರದು. ಭಸ್ಮಾಸುರನು ಶಿವನ ಭಸ್ಮದಿಂದ ಹೇಗೆ ಹುಟ್ಟಿಕೊಂಡಿದ್ದಾನೋ ಅದೇ ರೀತಿ ಈ ಶಿವಸೇನೆಯೂ ಕೂಡ, ಶ್ರೀಮಾನ್ ವಿ. ಕೆ. ಕೃಷ್ಣಮೆನನ್‌ರವರ ಚುನಾವಣೆಯ ಸಂದರ್ಭದಲ್ಲಿ, ಎಸ್. ಕೆ. ಪಾಟೀಲರಿಂದ ಹುಟ್ಟಿಕೊಂಡ ಕೂಸು ಇದೆ. ಆಮೇಲೆ ಈಗಿನ ಗೃಹಮಂತ್ರಿ ವೈ. ಬಿ. ಚವಾನ್ ಮತ್ತು ಮುಂಬಾಯಿಯ ಮುಖ್ಯಮಂತ್ರಿಯಾದ ವಿ. ಪಿ. ನಾಯಕ್‌ರವರ ವರಪ್ರಸಾದ ಸಿಕ್ಕಿ, ಈ ಭಸ್ಮಾಸುರ ಬೃಹದಾಕಾರವಾಗಿ ಬೆಳೆಯುತ್ತಾ ಇದೆ. ಮಾತ್ರವಲ್ಲದೆ, ಈ ಭಸ್ಮಾಸುರನ ಉರಿಯ ಹಸ್ತವು ದಕ್ಷಿಣ ಭಾರತೀಯರ ಅದರಲ್ಲೂ ಉಡಿಪಿ ಹೋಟೇಲಿನವರ ತಲೆಯ ಮೇಲೆ ಬಿದ್ದಿದೆ. ಪ್ರಥಮ ಬಾರಿಯಾಗಿ ಶಿವಸೇನೆಯವರು 1966 ನೇ ಇಸವಿಯಲ್ಲಿ ಶಿವಾಜಿ ಪಾರ್ಕಿನಲ್ಲಿ ಅವರ ವಾರ್ಷಿಕ ಅಧಿವೇಶನವನ್ನು ಜರುಗಿಸಿದರು. ಈ ಅಧಿವೇಶನದ ವಿಶೇಷತೆ ಹೇಳುವುದಾದರೆ, ಈ ಅಧಿವೇಶನದಲ್ಲಿ ಮಾಡಿದ ಒಂದು ನಾಟಕ ಇದೆ, ಆ ನಾಟಕದಲ್ಲಿ ದಕ್ಷಿಣ ಭಾರತೀಯರನ್ನು ತೆಗಳುವ, ಅದರಲ್ಲೂ ಈ ಉಡುಪಿ ಹೋಟಲಿನವರನ್ನು ಖಂಡಿಸುವ ಒಂದು ನೀಚ ತರಗತಿಯ ನಾಟಕವನ್ನು ನಡೆಸಲ್ಪಟ್ಟಾಗ, ಅಲ್ಲಿ ಮಹಾರಾಷ್ಟ್ರ ಸರ್ಕಾರದ ಮುಖ್ಯಮಂತ್ರಿಯಾದ ಶ್ರೀ ವಿ. ಪಿ. ನಾಯಕರು ಹಾಜರಿದ್ದರು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಶಿವ ಸೇನೆಯೆಂಬ ಭೂತವು ಕಾಂಗ್ರೆಸ್ಸಿನಿಂದ ಪೋಷಿಸಲ್ಪಡುತ್ತದೆ ಎಂಬುದನ್ನು ತೋರಿಸುವುದಕ್ಕೆ. ಪ್ರಥಮ ಬಾರಿಗೆ ಶಿವಾಜಿ ಪಾರ್ಕಿನ ಹತ್ತಿರ ಇದ್ದ, ಉಡುಪಿ ಹೋಟೇಲಾದ ನಟರಾಜ ಎಂಬ ಹೋಟೆಲಿಗೆ ಕಲ್ಲುಗಳಿಂದ ಹೊಡೆದು, ಅಲ್ಲಿ ಫರ್ನಿಚರ್ ಮೊದಲಾದುವುಗಳನ್ನು ಹೊರಗೆ ಹಾಕಿ ಬೆಂಕಿ ಕೊಟ್ಟರು. ಇದು 1966 ನೇ ಇಸವಿಯಲ್ಲಿ ಮಾಡಿದ ಕೃತ್ಯ. ಆಗ ನಾನು ಹಾಗೂ ನನ್ನ ಮಿತ್ರರೆಲ್ಲರೂ ಸೇರಿ ಇದನ್ನು ಪ್ರತಿಭಟನೆ ಮಾಡಿ ಬೊಂಬಾಯಿಯಲ್ಲಿರುವ ದಕ್ಷಿಣ ಕನ್ನಡಿಗರಿಗೆ ಸಂರಕ್ಷಣೆ ಕೊಡಬೇಕೆಂದು ಹೇಳಿ, ಆಗಿನ ಮುಖ್ಯಮಂತ್ರಿಯಾದ ಶ್ರೀಮಾನ್ ನಿಜಲಿಂಗಪ್ಪನವರಿಗೆ, ಪ್ರಧಾನಮಂತ್ರಿ ಇಂದಿರಾಗಾಂಧಿಯವರಿಗೆ, ಚವಾನರಿಗೆ ಮನವಿಗಳನ್ನು ಅರ್ಪಿಸಿದ್ದೇವೆ. ಅದಕ್ಕೆ ಅವರು ನೋಡುತ್ತೇವೆ, ಈ ವಿಷಯವನ್ನು ವಿಚಾರಣೆಯಲ್ಲಿ ಇಡುತ್ತೇವೆಂದು ಹೇಳಿದ್ದಾರೆ. ಆಮೇಲೆ ಯಾವ ತರದ ಕಾರ್ಯಕ್ರಮವನ್ನೂ ತಗೆದುಕೊಳ್ಳಲಿಲ್ಲ. ಆಮೇಲೆ ಎರಡನೇ ಸಾರಿ, 1968 ನೇ ಇಸವಿಯಲ್ಲಿ ಕೂಡ ಶಿವಸೇನೆಯವರು ಗಲಾಟೆ ಮಾಡಿದರು. ಆಗ ಸಾಧಾರಣ 7 ಹೋಟೇಲುಗಳನ್ನು ಹುಡಿ ಮಾಡಿದ್ದಾರೆ. ಬಾಯ್ಕುಲಾ, ದಾದರ್ ಮತ್ತು ಶಿವಾಜಿ ಪಾರ್ಕಿನಲ್ಲಿ ಸಾಧಾರಣ 85 ಲಕ್ಷ ರೂಪಾಯಿಯ ನಷ್ಟವನ್ನು ಉಡುಪಿ ಹೋಟಲಿನವರಿಗೆ ಇವರು ಮಾಡಿದ್ದಾರೆ. ಮೊನ್ನೆ ಮಾಡಿದ ಕೃತ್ಯ 5 ನೇ ಕೃತ್ಯವಾಗಿದೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. 9 ನೇ ತಾರೀಕಿನ ದಿವಸ ಬೆಳಿಗ್ಗೆ 9 ಗಂಟೆಗೆ ಸಮಯಕ್ಕೆ ಶಿವಸೇನೆಯ 500 ಜನ ಗೂಂಡಾಗಳು ಶಿವಾಜಿ ಪಾರ್ಕ್, ಬಿ. ಬಿ. ದಾದರ್‌ನಲ್ಲಿರುವ ಶ್ರೀ ಭೋಜಶೆಟ್ಟರ ಹೋಟೇಲ್ "ವಿಸಾವ'ವನ್ನು ಸುತ್ತುಗಟ್ಟಿ ಸರ್ವನಾಶ ಮಾಡಿದ್ದಾರೆ. ಅಲ್ಲಿ ಪ್ರತಿನಿತ್ಯ ಸುತ್ತು ಮುತ್ತಲು ಕೆಲಸಕ್ಕೆ ಹಾಜರಿರುವ ಪೋಲೀಸರು ಹುಡುಕಿದರೆ ಒಬ್ಬರೂ ಇರಲಿಲ್ಲ. ದಿನನಿತ್ಯ ಶಿವಾಜಿ ಪಾರ್ಕಿನಲ್ಲಿ, ಬಿ. ಬಿ. ದಾದರ್ ರಸ್ತೆಗಳಲ್ಲಿ ಸಾಧಾರಣ 75 ರಿಂದಲೂ ಹೆಚ್ಚಾಗಿರುವ ಪೋಲೀಸರು, ಆ ದಿವಸ ನೋಡಿದರೆ ಒಬ್ಬನೂ ಅಲ್ಲಿರಲಿಲ್ಲ. 500 ಜನ ಟಿನ್ನಿನಲ್ಲಿ ಪೆಟ್ರೋಲನ್ನು ಹಿಡಿದುಕೊಂಡು ಬಂದು ಹೋಟಲಿಗೆ ಬೆಂಕಿಕೊಟ್ಟು ನಾಶ ಮಾಡಿದರು. ಇಷ್ಟು ಮಾಡಿದಾಗ ಅಲ್ಲಿರತಕ್ಕ ದಕ್ಷಿಣ ಕನ್ನಡಿಗರು ಫೋನ್ ಮಾಡಿ ಟ್ಯಾಕ್ಸಿಯಲ್ಲಿ ಸಚಿವಾಲಯಕ್ಕೆ ಹೋಗಿ ಅಲ್ಲಿರುವ ಮುಖ್ಯಮಂತ್ರಿಯವರಾದ ವಿ. ಪಿ. ನಾಯಕರಿಗೆ ದೂರಿತ್ತರೂ ಕೂಡ ಏನೂ ಕಾರ್ಯಕ್ರಮ ಕೂಡಲೇ ತಗೆದುಕೊಳ್ಳಲಿಲ್ಲ. ಆ ದಿವಸ ನಾಲ್ಕು ಗಂಟೆಯ ಹೊತ್ತಿಗೆ 76 ಹೋಟೇಲುಗಳಿಗೆ 104 ಬೀಡಿ ಅಂಗಡಿಗಳಿಗೆ ಬೆಂಕಿಹಚ್ಚಿ ಮತ್ತು ಹೋಟೇಲಿನ ಫರ್ನಿಚರ್‌ಗಳನ್ನು ಹೊರಕ್ಕೆ ತಗೆದು ಹಾಕಿ ಅದಕ್ಕೆ ಬೆಂಕಿಯನ್ನು ಕೊಟ್ಟರೂ ಸಹ ಅಷ್ಟರ ತನಕ ಯಾವ ಒಬ್ಬ ಪೋಲೀಸರೂ ಕೂಡ ಅಲ್ಲಿಗೆ ಬಂದು ಏನೊಂದು ಕಾರ್ಯಕ್ರಮವನ್ನೂ ಕೈಕೊಳ್ಳಲಿಲ್ಲವೆಂದು ಹೇಳಿದರೆ ಅಲ್ಲಿ ಸರ್ಕಾರ ಇದೆಯೋ ಅದು ಸತ್ತಿದೆಯೋ ಬದುಕಿದೆಯೋ ಎಂದು ಗೊತ್ತಾಗಲಿಲ್ಲ. ಮಾತ್ರವಲ್ಲದೆ ಇದು ಪೂರ್ವಯೋಚಿತವಾಗಿದೆ. ಹಿಂದಿನ ದಿವಸ

ಮುಖ್ಯಮಂತ್ರಿಯಾದ ವಿ. ಪಿ. ನಾಯಕರು ಮತ್ತು ಶಿವಸೇನೆಯ ಮುಖ್ಯಸ್ಥರಾದ ಬಾಳ್ ಠಾಕರೆಯವರು ಮಾತನಾಡಿಕೊಂಡು ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅಲ್ಲಿ 73 ಹೋಟಲುಗಳು ಸಂಪೂರ್ಣವಾಗಿ ಸುಟ್ಟು ಹೋಗಿವೆ. ಆಮೇಲೆ ನೂರಾರು ಅಂಗಡಿಗಳು ಮತ್ತು ಅವುಗಳನ್ನೊಳಗೊಂಡ ಫರ್ನಿಚರ್ ಎಲ್ಲಾ ಹೊರಗೆ ತೆಗೆದುಕೊಂಡು ಹೋಗಿ ಬೆಂಕಿ ಕೊಟ್ಟು ಸುಟ್ಟು ಹಾಕಿದ್ದಾರೆ. ಇಷ್ಟಲ್ಲದೆ ಈ ಶಿವಸೇನೆ ರಾಕ್ಷಸರು, ಎಲ್ಲೆಲ್ಲಿ ಉಡುಪಿ ಹೋಟೇಲಿನವರ ವಸತಿ ಗೃಹಗಳು ಇವೆ, ಅಲ್ಲಿ ಹೋಗಿ 4—5 ಮನೆಗಳ ಹೆಂಗಸರ ಒಡವೆ, ವಸ್ತುಗಳನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳುವಾಗ ಇದಕ್ಕಿಂತ ಹೆಚ್ಚಿನ ನಾಚಿಕಗೇಡಿತನದ ವಿಷಯ, ಇದಕ್ಕಿಂತ ಹೆಚ್ಚಿನ ಒಂದು ಅಮಾನುಷ ಕೃತ್ಯ ಈ ಯುಗದಲ್ಲಿ ಇನ್ನೊಂದು ನಡೆಯಲಿಕ್ಕಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ಬೊಂಬಾಯಿಯ ವಿಷಯ ಹೇಳುವುದಾದರೆ ಅಲ್ಲಿ 1961 ನೇ ಸೆನ್ಸಸ್ ಪ್ರಕಾರ ಒಟ್ಟು ಜನಸಂಖ್ಯೆ 41 ಲಕ್ಷ 52 ಸಾವಿರ. ಇದರಲ್ಲಿ ಮರಾಠಿಗರ ಸಂಖ್ಯೆ ಕೇವಲ 17 ಲಕ್ಷ 25 ಸಾವಿರ ಮಾತ್ರ ಇದ್ದಾರೆ. ಕನ್ನಡಿಗರು 3 ಲಕ್ಷ 86 ಸಾವಿರ, ಗುಜರಾಥಿಗಳು 7 ಲಕ್ಷ 93 ಸಾವಿರ ಇದ್ದಾರೆ. ಇನ್ನು ಇತರ 25 ಭಾರತೀಯ ಮತ್ತು ವಿದೇಶೀಯ ಭಾಷೆಗಳನ್ನಾಡುವ ಜನರು ಅಲ್ಲಿದ್ದಾರೆ. ಎಂದರೆ ಮುಂಬೈನಲ್ಲಿ ಮರಾಠಿಯವರ ಸಂಖ್ಯೆ ⅓ ಭಾಗ ಮಾತ್ರ. ಆದುದರಿಂದ ಸರ್ವ ಭಾಷೆಯವರನ್ನು ಸರ್ವ ಜಾತಿಗಳನ್ನು ಒಳಗೊಂಡಿರುವ ಮುಂಬೈ ನಗರವನ್ನು ಕೇಂದ್ರಾಡಳಿತಕ್ಕೆ ಒಳಪಡಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮುಂಬೈನಲ್ಲಿ ಶಿವಸೇನೆಯ ನಿರ್ಮಾಪಕರಾದ ಶ್ರೀ ವೈ. ಬಿ. ಚವ್ಹಾನ್ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ಈ ವಿಷಯದಲ್ಲಿ ಕೂಡಲೇ ರಾಜೀನಾಮೆಯನ್ನು ಕೊಡಬೇಕು. ಇಲ್ಲದೇ ಹೋದರೆ ಶ್ರೀಮಾನ್ ಚವಾನ್ ಅವರನ್ನು ಕೇಂದ್ರದ ಮಂತ್ರಿ ಮಂಡಲದಲ್ಲಿ ಇಟ್ಟುಕೊಳ್ಳಲೇಬೇಕೆಂಬ ಮನಸ್ಸಿದ್ದರೆ ಈಗ ಅವರಿಗಿರತಕ್ಕ ಗೃಹ ಖಾತೆಯನ್ನು ತೆಗೆದು ಬೇರೆ ಯಾವುದಾದರೂ ಪೋರ್ಟ್‌ಫೋಲಿಯೋವನ್ನು ಅವರಿಗೆ ಕೊಡಿ.

ಇನ್ನೊಂದು ವಿಷಯ. ನನ್ನ ಮಿತ್ರರು ಹೇಳಿದ್ದಾರೆ. ಶ್ರೀಮಾನ್ ಸೈನಕ್ ಅವರು ಮಾತನಾಡುತ್ತಾ ಮುಂಬೈ ಕಾರ್ಪೋರೇಷನ್ ಚುನಾವಣೆಯಲ್ಲಿ ಒಬ್ಬ ಪಿ. ಎಸ್. ಪಿ. ಕಾರ್ಪೋರೇಟರು ಶಿವಸೇನೆಗೆ ಬೆಂಬಲ ನೀಡಿ ಅವರು ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಹೇಳಿದ್ದಾರೆ ಎಂದು ಹೇಳಿದರು. ಈ ವಿಷಯ ನನಗೆ ಸರಿಯಾಗಿ ಗೊತ್ತಿಲ್ಲ. ಅಂಥಾದ್ದು ಏನಾದರೂ ಇದ್ದು ಮುಂಬೈನಲ್ಲಿರತಕ್ಕ ಪಿ. ಎಸ್. ಪಿ. ಯವರು ಶಿವಸೇನೆಗೆ ಬೆಂಬಲವನ್ನು ಕೊಡುವುದಾದರೆ, ಅವರು ಇನ್ನೂ ಬೆಂಬಲವನ್ನು ಮುಂದು ವರಿಸುವುದಾದರೆ, ಪಿ. ಎಸ್. ಪಿ. ಯವರು ಶಿವಸೇನೆಗೆ ಬೆಂಬಲವನ್ನು ಕೊಡುತ್ತೇವೆ ಎಂದು ಹೇಳಿದರೆ ನಾನು ಖಂಡಿತವಾಗಿಯೂ ಹೇಳುತ್ತೇನೆ. ಆ ವಿಷಯವನ್ನು ನಾನು ಸರಿಯಾಗಿ ತಿಳಿದುಕೊಂಡು ಅವರು ಆ ರೀತಿ ಹೇಳಿರುವುದು ಸ್ಪಷ್ಟವಾದರೆ, ಅವರನ್ನು ಪಾರ್ಟಿಯಿಂದ ತೆಗೆಯದಿದ್ದರೆ ನಾವು ದಕ್ಷಿಣ ಕನ್ನಡದ ನಾಲ್ಕು ಜನ ಪಿ. ಎಸ್. ಪಿ. ಸದಸ್ಯರೂ ಖಂಡಿತವಾಗಿಯೂ ಪಿ. ಎಸ್. ಪಿ. ಯಲ್ಲಿ ಇರುವುದಕ್ಕೆ ಬಯಸುವುದಿಲ್ಲ ಎಂದು ನಾನು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಜನಗಳು ಮುಂಬೈನಲ್ಲಿ ನಡೆದ ಶಿವಸೇನೆಯವರ ದುಷ್ಕೃತ್ಯದಿಂದ ಅಪಾರವಾಗಿ ನೊಂದಿದ್ದಾರೆ. ಕಷ್ಟಪಟ್ಟಿದ್ದಾರೆ. ಎಂ. ಪಿ. ಸಿ. ಸಿ. ಸಭೆಯಲ್ಲಿ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ವೀರವಾಣಿಯಿಂದ ಮಾತನಾಡಿ ಒಂದು ವಿಷಯವನ್ನು ಹೇಳಿದ್ದಾರೆ. ಅದು ಏನೆಂದರೆ ದಕ್ಷಿಣ ಭಾರತೀಯರು ಎಲ್ಲಿಯೇ ಇರಲಿ, ಅಗತ್ಯ ಬಿದ್ದಾಗ ಅವರಿಗೆ ರಕ್ಷಣೆ ಒದಗಿಸಲು ಏನೊಂದು ಕ್ರಮವನ್ನಾದರೂ ತೆಗೆದುಕೊಳ್ಳಲು ಮೈಸೂರು ಸರ್ಕಾರ ಹಿಂಜರಿಯುವುದಿಲ್ಲ ಎಂದು ಭರವಸೆಯನ್ನು ಕೊಟ್ಟಿದ್ದಾರೆ. ಅದು ಭಾಷಣದಲ್ಲಿಯೇ ಉಳಿಯಬಾರದು. ಅದು ಕಾರ್ಯರೂಪಕ್ಕೆ ಬರಬೇಕು ದಕ್ಷಿಣ ಕನ್ನಡ ಜಿಲ್ಲೆಯ ನತದೃಷ್ಟ ಜನಗಳು ಈ ದುಷ್ಕೃತ್ಯದಲ್ಲಿ ಬಹಳ ನೊಂದಿದ್ದಾರೆ. ಆದ್ದರಿಂದ ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರು ಒಂದು ಕಮಿಷನ್ ತಯಾರುಮಾಡಿ ಅದನ್ನು ಮುಂಬೈಗೆ ಕಳುಹಿಸಿಕೊಟ್ಟು ಮುಂಬೈನಲ್ಲಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡಿಗರಿಗೆ ಆ ದುಷ್ಕೃತ್ಯದಲ್ಲಿ ಏನು ನಷ್ಟವಾಗಿದೆ ಎನ್ನತಕ್ಕ ಲೆಕ್ಕಾಚಾರವನ್ನು ತೆಗೆದು ಕೂಡಲೇ ಅವರಿಗೆ ಪರಿಹಾರವನ್ನು ಒದಗಿಸಬೇಕು. ಈ ಕೆಲಸವನ್ನು ಒಂದು ತಿಂಗಳಲ್ಲಿಯೇ ಮಾಡಬೇಕು. ಇಲ್ಲದೆ ಹೋದರೆ ಖಂಡಿತವಾಗಿಯೂ ಶ್ರೀಮಾನ್ ವೀರೇಂದ್ರ ಪಾಟೀಲರಿಗೂ ಮತ್ತು ಸರ್ಕಾರಕ್ಕೂ ಎಚ್ಚರಿಕೆಯನ್ನು ಕೊಡುತ್ತೇನೆ. ನಮ್ಮ ಹೊಟ್ಟೆಯಮೇಲೆ ಕಾಲಿಟ್ಟಾಗ ನಮ್ಮ ತಾಳ್ಮೆ ಕೆಟ್ಟುಹೋಗಿದೆ. ದಕ್ಷಿಣ ಕನ್ನಡಜಿಲ್ಲೆಯವರಿಗೆ ಈ ಹಾನಿಯಿಂದ 100ಕ್ಕೆ 97 ಜನರಿಗೆ ಪೆಟ್ಟು ಬಿದ್ದಿದೆ. ಆದ್ದರಿಂದ ಒಂದು ತಿಂಗಳೊಳಗಾಗಿ ನೊಂದವರಿಗೆ ಪರಿಹಾರವನ್ನು ಕೊಡುವುದಕ್ಕೆ ತೀವ್ರವಾದ ಕ್ರಮವನ್ನು ಕೈಗೊಳ್ಳಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಜನಗಳು, ಬುದ್ಧಿಜೀವಿಗಳು ಮತ್ತು ಪರೋಪಕಾರಿಗಳು ಆಗಿರುತ್ತಾರೆ. ಮೊನ್ನೆ ಮಹಾರಾಷ್ಟ್ರದ ಕೊಯ್ನಾ

(ಶ್ರೀ ಬಿ. ಭಾಸ್ಕರಶೆಟ್ಟಿ)

ಭೂಕಂಪದಲ್ಲಿ ನೊಂದವರಿಗೆ ಕ್ರಿಕೆಟ್ ಮ್ಯಾಚ್‌ಆಡಿ ನಾವು ಹಣವನ್ನು ಶೇಖರಿಸಿ ಕೊಟ್ಟಿದ್ದೇವೆ. ಆ ರೀತಿ ನಮ್ಮ ಜನಗಳು ಉದಾರಮನಸ್ಸಿನಿಂದ ವರ್ತಿಸಿ ಹಣವನ್ನು ಕೂಡಿಸಿ ಮಹಾರಾಷ್ಟ್ರದವರಿಗೆ ಕೊಟ್ಟದ್ದು ತಪ್ಪು ಎಂದು ಕಾಣುತ್ತದೆ. ಆದ್ದರಿಂದ ಕೂಡಲೇ ನಮ್ಮ ಸರ್ಕಾರದವರು ಒಂದು ಕಮಿಷನ್‌ಅನ್ನು ಮುಂಬೈ ನಗರಕ್ಕೆ ಕಳುಹಿಸಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ಹಾನಿಯಲ್ಲಿ ನೊಂದಂಥ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡಿಗರಿಗೆ ಕೂಡಲೇ ಪರಿಹಾರವನ್ನು ಕೊಡಬೇಕು. ಅದನ್ನು ಕೊಡದೇ ಹೋದರೆ ಖಂಡಿತವಾಗಿಯೂ ಹೇಳುತ್ತೇನೆ, ದಕ್ಷಿಣ ಕನ್ನಡ ಜಿಲ್ಲೆಯ ಜನತೆ ವಿಕೋಪಕ್ಕೆ ಒಳಗಾಗಿ ಪರಿಸ್ಥಿತಿ ಬೇರೆ ಆಗುತ್ತದೆ. ನಾವು ಗಲಾಟೆಯನ್ನು ಮಾಡಿ ಪರಿಹಾರವನ್ನು ಪಡೆದುಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ ಎನ್ನುವ ಎಚ್ಚರಿಕೆಯನ್ನು ಕೊಟ್ಟು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I am receiving chits from hon. Members desirous of participating in the debate. Under Rule 61 of the Rules of Procedure, the members who have given notice may make a short statement and the Minister shall reply shortly, and any member who has previously intimated to the Speaker may be permitted to take part in the discussion, but not nothers. I am sorry, if I were to disappoint them. I request hon. Member Sri Vatal Nagaraj to speak and try to be very brief and sweet.

Sri SHARANAGOWDA INAMDAR (Jewargi),—May I know whether the hon. Members who have praticipated in this debate are out of those who had given previous intimation ?

Mr. SPEAKER.—Yes, they are out of those who had given me previous intimation.

Sri K. H. PATIL (Hubli).—Sir, hon. Members are expressing their views on an important matter. Why don't you extend the time ?

Sri SHARANAGOWDA INAMDAR,—Sir, when this House has been particularly convened in the morning to sit and discuss this motion, it was expected that most of the members may participate in the discussion. It was not known whether the members who had given intimation are only allowed. It is a very serious matter. Therefore, I request the Chair to kindly extend the time and give opportunity to others also, because we want to make it clear whether it is a communal organisation or communal forces are behind it. There are so many things to be expressed.

Mr. SPEAKER.—The rule is very clear that any member who has intimated the Speaker may take part in the Debate!

Sri B. BHASKARA SHETTY.—There are number of members who are anxious to participate. I request the Chair to extend the time. We can take up the budget discussion tomorrow.

Mr. SPEAKER.—Where is the time ?

Sri SHARANAGOWDA INAMDAR.—Please extend the time.

Mr. SPEAKER.—The hon. Member may discuss the matter with his Leader instead of raising it on the floor of the House Sri Vatal Nagaraj may please begin his speech.

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಕನ್ನಡ ಜನತೆಯ ಮೇಲೆ ಮಹಾರಾಷ್ಟ್ರದಲ್ಲಿ ನಡೆಸಿರತಕ್ಕಂಥ ಆಘಾತದ ಬಗ್ಗೆ ಅನೇಕ ಸನ್ಮಿತ್ರರು ಈಗಾಗಲೇ ಮಾತನಾಡಿದ್ದಾರೆ. ನನಗನ್ನಿಸುತ್ತದೆ, ಮಹಾರಾಷ್ಟ್ರದಲ್ಲಿ ಚಳುವಳಿ ಪ್ರಾರಂಭವಾಗಿದ್ದು ಮೈಸೂರಿನಲ್ಲಿ ಚಳುವಳಿ ಮಾಡುವವರು ಯಾರೂ ಇಲ್ಲವೋ ಏನೋ ಎಂಬ ಶಂಕೆಯಿಂದ ಎಂದು. ಈ ಸಭೆಯಲ್ಲಿ ನಾನು ಹೇಳುತ್ತೇನೆ, ಏನೆಂದರೆ ರಾಷ್ಟ್ರೀಯವಾದದ ಬಗ್ಗೆ ಕೆಲವರು ಬಹಳವಾಗಿ ಮಾತನಾಡುತ್ತಾರೆ. ಆದರೆ ಈವೊತ್ತು ಏನು ನಡೆಯುತ್ತಿದೆ ಎಂದರೆ, ಯಾರು ರಾಷ್ಟ್ರೀಯವಾದದ ಬಗ್ಗೆ ಮಾತನಾಡುತ್ತಿದ್ದಾರೋ ಅಂತಹವರೇ ಇಂತಹ ಕೃತ್ಯಗಳಿಗೆ ಸಹಕಾರ ಮತ್ತು ಸಹಾಯ ನೀಡುತ್ತಿದ್ದಾರೆ. ಈ ಮಹಾಜನ್ ವರದಿ ಕಾರ್ಯರೂಪದಲ್ಲಿ ಬರಲಿಲ್ಲ ಎನ್ನುವ ಕಾರಣದಿಂದ ಶಿವಸೇನೆಯವರು ಚಳುವಳಿ ಪ್ರಾರಂಭ ಮಾಡಿದರು. ಯಾವುದೇ ಒಂದು ಆಯೋಗ ರಚನೆಯಾಗಲಿ, ಬೆಳಗಾಂ ಮಹಾರಾಷ್ಟ್ರಕ್ಕೆ ಸೇರುವವರೆಗೂ ಚಳುವಳಿ ಮಾಡುವುದು ನಮ್ಮ ಅಜನ್ಮಸಿದ್ಧವಾದ ಹಕ್ಕು ಎಂದು ಚಳುವಳಿ ಮಾಡುತ್ತಿದ್ದಾರೆ. ಅದರೆ ಅವರು ಎಷ್ಟೇ ಚಳುವಳಿ ಮಾಡಲಿ, ಎಷ್ಟೇ ರಕ್ತಪಾತವಾದರೂ ಸರಿಯೇ, ಬೆಳಗಾಂನ ಒಂದು ಅಂಗುಲ ಭೂಮಿಯನ್ನು ಮಹಾರಾಷ್ಟ್ರದವರಿಗೆ ಬಿಟ್ಟುಕೊಡುವುದಿಲ್ಲ ಎಂದು ಘಂಟಾಘೋಷವಾಗಿ ಮತ್ತು ಕಳಕಳಿಯಿಂದ ಹೇಳುತ್ತಿದ್ದೇನೆ. ಶಿವಸೇನೆಯಿಂದ ಕನ್ನಡ ಜನತೆಗೆ ಮಾತ್ರವಲ್ಲದೆ ನೆರೆ ರಾಜ್ಯದ ಬೇರೆ ಜನರಿಗೂ ಸಹ ತೊಂದರೆಯಾಗುತ್ತಿದೆ. ಶಿವಸೇನೆಯು ಮಾಡುತ್ತಿರುವ ಚಳುವಳಿಗೆ ಕಾಂಗ್ರೆಸ್ ಸಂಸ್ಥೆಯೇ ಕಾರಣವೆಂದು ಹೇಳುತ್ತೇನೆ. ಕಾಂಗ್ರೆಸ್ ಸಂಸ್ಥೆ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿದೆ. ಈ ಸಂಸ್ಥೆಯ ನಾಯಕರುಗಳು ಮತ್ತು ಈ ಸಂಸ್ಥೆಗೆ ಅಧ್ಯಕ್ಷರಾಗಿರುವ ಶ್ರೀಮಾನ್ ನಿಜಲಿಂಗಪ್ಪನವರು ಸಹ ಕಾರಣರಾಗಿದ್ದಾರೆಂದು ಈ ಸಭೆಯಲ್ಲಿ ಹೇಳುತ್ತಿದ್ದೇನೆ. ಅವರು ಕನ್ನಡಿಗರು ಕರ್ನಾಟಕ ರಾಜ್ಯದವರು. ಅವರು ಮುಖ್ಯಮಂತ್ರಿಯಾಗಿದ್ದಾಗ ಈ ಮಹಾಜನ್ ಆಯೋಗ ನೇಮಕವಾಯಿತು. ಈ ಆಯೋಗದ ತೀರ್ಮಾನವೇ ಅಂತಿಮ, ಇದನ್ನು ಎರಡು ರಾಜ್ಯಗಳವರೂ ಸಹ ಒಪ್ಪಬೇಕೆಂದು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ವಿ. ಪಿ. ನಾಯಕ್ ಅವರು ಮತ್ತು ಶ್ರೀಮಾನ್ ನಿಜಲಿಂಗಪ್ಪನವರು ಒಂದು ತೀರ್ಮಾನಕ್ಕೆ ಬಂದಿದ್ದರು. ಆದರೆ ಈವೊತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಬೆಳಗಾಂ ತಮಗೆ ಸಿಗಲಿಲ್ಲ ಎಂಬ ದೃಷ್ಟಿಯಿಂದ, ಆ ಬಗ್ಗೆ ಚಳುವಳಿ ನಡೆಸುತ್ತಿರುವವರಿಗೆ ಅಲ್ಲಿಯ ನಾಯಕರು ಸಹಕಾರ ಮತ್ತು ಬೆಂಬಲ ಕೊಡುತ್ತಿದ್ದಾರೆ. ಇದಕ್ಕೆ ಮೈಸೂರು ಸರ್ಕಾರದವರ ಪ್ರತಿಭಟನೆ ಏನು ? ನಿಮ್ಮದು ತೋಳ ಕುರಿಮರಿಯ ಭಾವೈಕ್ಯತೆಯಾಗಿದೆ. ರಾಷ್ಟ್ರಕವಿಗಳಾದ ಕೆ. ವಿ. ಪುಟ್ಟಪ್ಪನವರು ಒಂದು ಕಥೆ ಹೇಳಿದ್ದಾರೆ. ಅದರಂತೆ ಮೈಸೂರಿನವರು ಕುರಿಮರಿಯಾಗಿದ್ದಾರೆ, ಮಹಾರಾಷ್ಟ್ರದವರು ತೋಳವಾಗಿದ್ದಾರೆ. ಈ ತೋಳ ಮತ್ತು ಕುರಿಮರಿ ಒಂದು ಕಡೆ ಸೇರಿ ನಾವುಗಳು ಭಾವೈಕ್ಯತೆಯಿಂದ ಇರೋಣ ಎಂದು ಮಾತನಾಡಿಕೊಂಡಾಗ, ಕುರಿಮರಿ ಯಾವ ರೀತಿ ಭಾವೈಕ್ಯತೆಯಿಂದ ಇರೋಣ ಎಂದು ಹೇಳಿದಾಗ, ತೋಳ ನಾನು ನಿನ್ನನ್ನು ತಿಂದು ನನ್ನ ಹೊಟ್ಟೆಯಲ್ಲಿ ಇಟ್ಟುಕೊಳ್ಳುತ್ತೇನೆ, ಆಗ ನಾವಿಬ್ಬರೂ ಭಾವೈಕ್ಯತೆಯಿಂದ ಇರಬಹುದು ಎಂದು ಹೇಳಿತಂತೆ. ಈ ಪ್ರಕಾರ ಮೈಸೂರಿನವರಿಗೂ ಮಹಾರಾಷ್ಟ್ರದವರಿಗೂ ಭಾವೈಕ್ಯತೆ ನಡೆದುಕೊಂಡು ಬಂದಿದೆ. ಇನ್ನು ಮುಂದೆ ನಾವು ಚಳುವಳಿ ಮಾಡದೆ ವಿಧಿಯಿಲ್ಲ. ಶ್ರೀಮಾನ್ ವೀರೇಂದ್ರಪಾಟೀಲರು ನಮ್ಮ ರಾಜ್ಯದಲ್ಲಿ ಚಳುವಳಿ ಮಾಡುವುದಕ್ಕೆ ಬಿಡುವುದಿಲ್ಲವೆಂದು ಹೇಳಿದ್ದಾರೆ ಚಳುವಳಿ ಮಾಡುವುದಕ್ಕೆ ಬಿಡದಿರುವುದು ಶ್ರೀಮಾನ್ ವೀರೇಂದ್ರಪಾಟೀಲರ ಕೈಯಲ್ಲಿ ಇಲ್ಲ. ಅವರು ಆ ರೀತಿ ಹೇಳುವ ಕಾಲ ಮುಗಿದುಹೋಗಿದೆ. ಶ್ರೀಮಾನ್ ವೀರೇಂದ್ರಪಾಟೀಲರ ಮತ್ತು ಶ್ರೀಮಾನ್ ನಿಜಲಿಂಗಪ್ಪನವರ ಹರಿಕಥೆಯನ್ನು ಕೇಳುವ ಕಾಲ ಮುಗಿದು ಹೋಗಿದೆ. ಈಗ ಕೈ ಮತ್ತು ಬಾಯಿಯಲ್ಲಿ ತೋರಿಸುವ ಕಾಲ ಸನ್ನಿಹಿತವಾಗಿದೆ. ಜವಾಬ್ದಾರಿಯನ್ನು ಹೊತ್ತ ಜನರು ಮಂತ್ರಿಮಂಡಲದಲ್ಲಿ ಇದ್ದಾರೆ. ಅವರಿಗೂ ಮತ್ತು ಶ್ರೀಮಾನ್ ವೀರೇಂದ್ರಪಾಟೀಲರಿಗೂ ನಮ್ಮ ರಾಜ್ಯದ ಬಗ್ಗೆ ಅಭಿಮಾನ ಇದೆಯೇ ಎಂದು ಕೇಳುತ್ತಿದ್ದೇನೆ. ನಾನು ಅಧಿಕಾರದಲ್ಲಿರುವವರೆಗೂ ಯಾವ ವಿವಾದದ ಬಗ್ಗೆಯೂ ಸಹ ಲೋಪವಾಗುವುದಕ್ಕೆ ಬಿಡುವುದಿಲ್ಲ ಎನ್ನುವ ಮಾತನ್ನು ಶ್ರೀಮಾನ್ ವೀರೇಂದ್ರಪಾಟೀಲರು ಹೇಳುತ್ತಿದ್ದಾರೆ. ಈ ಮಾತು ನಿಜವಾಗಬೇಕಾದರೆ, ಕೇಂದ್ರಸರ್ಕಾರದವರು ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಒಪ್ಪದಿದ್ದರೆ ಇಡೀ ಮಂತ್ರಿಮಂಡಲವೇ ರಾಜೀನಾಮೆ ಕೊಟ್ಟು ಚಳುವಳಿಯಲ್ಲಿ ಭಾಗವಹಿಸಬೇಕು. ಈ ಒಂದು ದಕ್ಷತೆ ಅಥವಾ ಶಕ್ತಿ ಶ್ರೀಮಾನ್ ವೀರೇಂದ್ರಪಾಟೀಲರಿಗೆ ಇದೆಯೇ ಎಂದು ಕೇಳುತ್ತಿದ್ದೇನೆ. ಇವರಿಗೆ ಇಲ್ಲ. ಇವರು ಕೇವಲ

(ಶ್ರೀ ವಾಟಾಳ್ ನಾಗರಾಜ್)

ಕೇಂದ್ರಸರ್ಕಾರಕ್ಕೆ ಕ್ಷೇಮಸಮಾಚಾರಕ್ಕೆ ಕಾಗದ ಬರೆದುಕೊಂಡು ಇದ್ದಾರೆ. ನಮ್ಮ ರಾಜ್ಯದಲ್ಲಿ ಎಲ್ಲರೂ ಕ್ಷೇಮವಾಗಿದ್ದಾರೆಂದು ಆಗಾಗ್ಗೆ ಕಾಗದವನ್ನು ಕೇಂದ್ರಕ್ಕೆ ಬರೆಯುತ್ತಿರುತ್ತಾರೆ ಅಷ್ಟೆ. ಈ ರೀತಿ ಇವರು ನಡೆದುಕೊಳ್ಳುತ್ತಿರುವುದು ಪಾಂಡವರು ವನವಾಸ ಮಾಡುವಾಗ ಅರ್ಜುನ ಬೃಹನ್ನಳೆಯ ವೇಷ ಹಾಕಿದಂತಾಗಿದೆ. ಅಷ್ಟೊಂದು ಶಾಂತರೀತಿಯಿಂದ ಶಾಂತಸ್ವಭಾವದಿಂದ ನಡೆದುಕೊಳ್ಳುವ ಕಾಲ ಮುಗಿದುಹೋಗಿದೆಯೆಂದು ನನಗನ್ನಿಸುತ್ತದೆ. ಈ ಮಂತ್ರಿಮಂಡಲದ ನೀತಿ ಯಾವ ರೀತಿ ಇದೆ ಎಂದರೆ. ಪಾಂಡವರು ಮತ್ತು ಕೌರವರು ಪಗಡೆಯಾಡಿ, ಪಾಂಡವರು ಎಲ್ಲವನ್ನು ಸೋತಮೇಲೆ, ಕೌರವರ ಆಸ್ಥಾನದಲ್ಲಿ ದುಶ್ಯಾಸನನು ದ್ರೌಪದಿಯ ಸೀರೆಯನ್ನು ಎಳೆಯುವಾಗ ಪಾಂಡವರು ತಲೆತಗ್ಗಿಸಿ ಕುಳಿತುಕೊಂಡಿರುವಂತೆ ಈ ಮಂತ್ರಿಮಂಡಲದವರು ತಲೆ ತಗ್ಗಿಸಿಕೊಂಡು ಕೂತಿದ್ದಾರೆ.

ಶ್ರೀ ಎಂ. ನಾಗಪ್ಪ.—ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಮಹಾಜನ್ ಆಯೋಗವನ್ನು ನೇಮಕ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಾಗ ಶ್ರೀಮಾನ್ ನಿಜಲಿಂಗಪ್ಪನವರು ತಲೆತಗ್ಗಿಸಿ ಕೊಂಡು ಕೂತಿದ್ದರು ಎಂಬ ಕಾರಣಕ್ಕಾಗಿ ಈ ಉದಾಹರಣೆಯನ್ನು ತಾವು ಹೇಳುತ್ತಿದ್ದೀರಾ ?

ಶ್ರೀ ವಾಟಾಳ್ ನಾಗರಾಜ್.—ಅದಕ್ಕೆ ಹೇಳುತ್ತಿದ್ದೇನೆ. ನಮ್ಮ ಕರ್ಣಾಟಕ ಮಾತೆಯಾದ ದ್ರೌಪದಿಯ ಸೀರೆಯನ್ನು ಮಹಾರಾಷ್ಟ್ರದವರು ಎಳೆಯುತ್ತಿರುವಾಗ ತಾವು ತಲೆತಗ್ಗಿಸಿಕೊಂಡು ಕುಳಿತಿರುವುದು ಸರಿಯಲ್ಲ. ಶ್ರೀಮಾನ್ ವೀರೇಂದ್ರಪಾಟೀಲರೇ, ತಮಗೆ ಕ್ಷಮಾಗಿದು ಹೇಳುತ್ತಿದ್ದೇನೆ, ತಾವು ಭೀಮ ಪ್ರತಿಜ್ಞೆ ಮಾಡಬೇಕು.

ಶ್ರೀ ಕೆ. ವಿ. ಶಂಕರಗೌಡ.—ಪಾಯಿಂಟ್ ಆಫ್ ಆರ್ಡರ್ ಸರ್, ಮಾನ್ಯ ಸದಸ್ಯರು ನೇರವಾಗಿ ಶ್ರೀಮಾನ್ ವೀರೇಂದ್ರ ಪಾಟೀಲರೇ ಎಂದು ಸಂಭೋಧನೆ ಮಾಡುತ್ತಿದ್ದಾರೆ, ಅದು ಸರಿಯೇ ?

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರ ಮೂಲಕ ಸಂಭೋಧನೆ ಮಾಡುತ್ತಿದ್ದೇನೆ, ದ್ರೌಪದಿಯ ಸೀರೆಯನ್ನು ದುಶ್ಯಾಸನನು ಎಳೆಯುವಾಗ ಭೀಮ ಪ್ರತಿಜ್ಞೆಯನ್ನು ಮಾಡಿದನಂತೆ, ಏನೆಂದರೆ ದುರ್ಯೋಧನನ ತೊಡೆಯನ್ನು ಸೀಳಿ ರಕ್ತವನ್ನು ನಿನ್ನ ತಲೆಯ ಮೇಲೆ ಎಣ್ಣೆಯ ರೂಪದಲ್ಲಿ ಹಾಕುತ್ತೇನೆ, ದುರ್ಯೋಧನನ ಹಲ್ಲನ್ನು ಕಿತ್ತು ಬಾಚಣಿಕೆ ಮಾಡಿ ನಿನ್ನ ತಲೆಯನ್ನು ಬಾಚುತ್ತೇನೆ ಎಂದು, ಈ ರೀತಿ ಪ್ರತಿಜ್ಞೆ ಮಾಡುವ ಶಕ್ತಿ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಇಲ್ಲ. ಕೇವಲ ಕೇಂದ್ರ ಸರ್ಕಾರಕ್ಕೆ ಕಾಗದ ಬರೆಯುವ ಶಕ್ತಿ ಮಾತ್ರ ಇದೆ. ನಮ್ಮ ರಾಜ್ಯಕ್ಕೆ ಇದುವರೆಗೆ ಏನೇನು ಅನುಕೂಲ ಮಾಡಿಕೊಟ್ಟಿದ್ದೀರಿ, ಹೊಸಪೇಟೆಯ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಏನು ಮಾಡಿದಿರಿ. ನದಿ ನೀರಿನ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ; ಎಂದು ಕೇಳುತ್ತೇನೆ. ಈಗ ನನ್ನ ಮಿತ್ರರು ಹೇಳಿದಂತೆ ನೀವು ಗಂಡಸರೂ ಅಲ್ಲ, ಹೆಂಗಸರೂ ಅಲ್ಲ. ಅವರು ಹೇಳಿದ್ದು ನಿಜ ವೆಂದು ಕಾಣಿಸುತ್ತದೆ. ನೀವು ಗಂಡಸರೂ ಅಲ್ಲ, ಹೆಂಗಸರೂ ಅಲ್ಲ, ಎರಡು ಅಲ್ಲದ ಒಂದು ತರಹ ಇದ್ದೀರಿ. ನೀವು ಗಂಡಸರೇ ಆಗಿದ್ದರೆ ನಮ್ಮ ರಾಜ್ಯದ ಕಲ್ಯಾಣದ ಬಗ್ಗೆ, ನಮ್ಮರಾಜ್ಯದ ಭವಿಷ್ಯದ ಬಗ್ಗೆ ನೀವು ಆಡಳಿತ ನಡೆಸಿ. ಶಿವಸೇನೆ ಯಾವ ತಪ್ಪನ್ನೂ ಮಾಡಿಲ್ಲವೆಂದು ಈಗ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಹೇಳಿದರು. ಆದರೆ ಶಿವಸೇನೆಯ ಚಟುವಟಿಕೆಯನ್ನು ಮಹಾ ರಾಷ್ಟ್ರದ ಪ್ರದೇಶ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಅಫೀಜ್‌ಖಾನ್ ಅವರು ಖಂಡನೆ ಮಾಡಿದ್ದಾರೆ. ಮಹಾಜನ್ ಆಯೋಗದ ವರದಿಯನ್ನು ಕೇಂದ್ರದವರು ಕಾರ್ಯಗತ ಮಾಡಿ, ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಸೇರಿಸುವವರಿಗೂ, ಕೇಂದ್ರದ ಸಚಿವರುಗಳನ್ನು ಮಹಾರಾಷ್ಟ್ರಕ್ಕೆ ಬರುವುದಕ್ಕೆ ಬಿಡುವುದಿಲ್ಲವೆಂದು ಶಿವಸೇನೆಯವರು ಮೊದಲು ಹೇಳಿದರು. ಅದರಂತೆ ಚಳುವಳಿ ಮಾಡಿ ಲೂಟಿ ಮಾಡಿದ್ದಾರೆಂದು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾದ ಶ್ರೀಮಾನ್ ನಯನಕ್ ಅವರಿಗೆ ತಿಳಿಸಬೇಕಾಗಿದೆ.

ಬಾಳ ಠಾಕ್ರೆ ಹೇಳಿದ್ದೇನು ಎನ್ನುವುದನ್ನು ಪತ್ರಿಕೆಯಲ್ಲಿ ಬಂದಿದೆ. ಅದು ಹೀಗಿದೆ. :

"ಗಡಿ ವಿವಾದಗಳನ್ನು ಹಾದಿ ಬೀದಿಗಳಲ್ಲಿ ಇತ್ಯರ್ಥ ಮಾಡಲಾಗುವುದೆಂದು ಹೇಳಿರುವ ಬಾಳ ಠಾಕರೆ ಶಿವಸೇನೆಯ ಚಳುವಳಿಯನ್ನು ದಮನ ಮಾಡುವ ಧೈರ್ಯಕ್ಕೆ ಸರಕಾರ ಕೈ ಹಾಕಿದರೆ ಪೋಲೀಸರ ಹತೋಟಿ ಮೀರಿ ಸೇನೆಯನ್ನು ಕರೆಸಬೇಕಾದೀತು ಎಂದು ಫೆಬ್ರವರಿ 2ರಂದು ಎಚ್ಚರಿಕೆಯನ್ನಿತ್ತಿದ್ದರು ಎಂದು ಹೇಳಿಕೆಯಲ್ಲಿ ತಿಳಿಸಿರುವ ಹಾಫೀಜ ಅವರು ಮುಂಬಯಿಯಲ್ಲಿ ನಡೆದಿರುವ ಘಟನೆಗಳ ಬಗ್ಗೆ ನನಗೆ ಅಚ್ಚರಿಯಿಲ್ಲ. ನನಗೆ ಉಂಟಾಗಿರುವ ಆಶ್ಚರ್ಯ ಮತ್ತು ದಿಗ್ಭ್ರಮೆಯೆಂದರೆ ಪ್ರಜಾಪ್ರಭುತ್ವದಲ್ಲಿ

ನಂಬುಗೆ ಉಳ್ಳವರು ಶಾಕ್ರಿಯವರ ಸಹಾಯಕ್ಕೆ ಬರುತ್ತಿರುವುದರ ಬಗೆಗೆ, ರಾಷ್ಟ್ರದಲ್ಲಿ ಈಗ ನಡೆಯುತ್ತಿರುವುದರ ಬಗ್ಗೆ ಪ್ರಜಾಪ್ರಭುತ್ವದ ವಿರುದ್ಧ ಬಲಗಳು ಕೆಲಸ ಮಾಡುತ್ತಿರುವ ಬಗ್ಗೆ ಎಚ್ಚರಿಕೆಯಿಂದ ಇರೋಣ''

ಎಂದಿದ್ದಾರೆ.

12-30 P. M.

ಇವೆಲ್ಲ ದುರಂತಕ್ಕೆ ಕಾರಣ ಕೇಂದ್ರದಲ್ಲಿರುವ ಗೃಹಮಂತ್ರಿಗಳಾದ ಶ್ರೀ ವೈ. ಬಿ. ಛವಾಣ್ ರವರೇ ಎಂದು ನಿಸ್ಸಂದೇಹವಾಗಿ ಹೇಳುತ್ತೇನೆ. ಇವರು ಒಂದು ಪಕ್ಷದ ಸದಸ್ಯರಾಗಿ ಇದ್ದರೂ ಮಹಾರಾಷ್ಟ್ರದವರ ಕಡೆಗೆ ಸೇರಿದ ಜನರು ಮತ್ತು ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಆಗಿರುವುದರಿಂದ ಈ ಮಹಾಜನ್ ವರದಿ ಖಂಡಿತ ಕಾರ್ಯಗತವಾಗಬಾರದೆಂದು ಹೇಳುತ್ತಿದ್ದಾರೆ. ಮಹಾರಾಷ್ಟ್ರವಾದಿಗಳಾಗಿ ಮಹಾರಾಷ್ಟ್ರದವರ ಕಡೆಗೇ ಇರುವುದರಿಂದ ಇವರಿಂದ ದೇಶ ರಕ್ಷಣೆ ಖಂಡಿತ ಆಗುವುದಿಲ್ಲ. ಎಲ್ಲಿಯವರೆಗೆ ವೈ. ಬಿ. ಚವಾಣ್‌ರವರು ಕೇಂದ್ರ ಗೃಹಮಂತ್ರಿಗಳಾಗಿರುತ್ತಾರೋ ಅಲ್ಲಿಯವರೆಗೆ ಮಹಾಜನ್‌ರವರ ತೀರ್ಪನ್ನು ಕಾರ್ಯಗತಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಖಂಡತುಂಡವಾಗಿ ಇಲ್ಲಿ ಹೇಳಲು ಇಚ್ಛಿಸುತ್ತೇನೆ. ಕೇವಲ ಇಲ್ಲಿ ಟೀಕೆಗಾಗಿ ಅವರು ವಿರೋಧ ಮಾಡುತ್ತಿರುವ ನಾಯಕರಾಗಿದ್ದಾರೆಯೇ ವಿನಾ ಅವರಿಂದ ಖಂಡಿತ ನಮ್ಮ ದೇಶಕ್ಕೆ ರಕ್ಷಣೆ ದೊರಕುವುದಿಲ್ಲ. ಎಲ್ಲಿಯವರೆಗೆ ವೈ ಬಿ. ಚವಾಣರವರು ಕೇಂದ್ರದಲ್ಲಿ ಗೃಹಸಚಿವರಾಗುತ್ತಾರೋ ಅಲ್ಲಿಯವರೆಗೆ ಮಹಾಜನ್‌ರ ತೀರ್ಪನ್ನು ಅವರು ಕಾರ್ಯಗತಮಾಡುವುದಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ ಮತ್ತು ಇಲ್ಲಿ ನಾವು ಎಷ್ಟೇ ಮಾತನಾಡಿದರೂ ಏನೂ ಉಪಯೋಗವಾಗುವುದಿಲ್ಲ. ಕಾಂಗ್ರೆಸ್ಸಿನಲ್ಲಿದ್ದ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರು ಇಲ್ಲಿ ಎ. ಐ. ಸಿ. ಸಿ. ಸಭೆ ಕರೆದು ಬೇಕಾದಹಾಗೆ ಮಹಾಜನ್ ತೀರ್ಪನ್ನು ಜಾರಿಗೆ ಕೊಡಬೇಕು ಶಿವಸೇನೆಯನ್ನು ದಮನ ಮಾಡಬೇಕು ಎಂದು ಮಹಾರಾಷ್ಟ್ರವಾದಿಗಳಿಗೆ ಎಚ್ಚರಿಕೆ ಕೊಡಬಹುದು. ಆದರೆ ಇದರಿಂದೇನೂ ಉಪಯೋಗವಾಗುವುದಿಲ್ಲ. ಇದಕ್ಕೆ ಬದಲಾಗಿ ಅವರು ಇಂದು ಅಖಿಲ ಭಾರತದ ಕಾಂಗ್ರೆಸ್ಸಿನಲ್ಲಿರುವುದರಿಂದ ಅಲ್ಲಿ ಸಭೆ ಸೇರಿ ಅಲ್ಲಿಗೆ ಗೃಹಮಂತ್ರಿಗಳಾದ ಶ್ರೀ ವೈ. ಬಿ. ಚವಾಣರವರನ್ನೂ ಹಾಗೂ ಪ್ರೈಮಿನಿಸ್ಟರಾದ ಶ್ರೀಮತಿ ಇಂದಿರಾ ಗಾಂಧಿಯವರನ್ನೂ ಕರೆಸಿ ಇಂತಹ ಆಂದೋಲನಗಳಿಗೆ ಅವಕಾಶ ಕೊಡಕೂಡದು ಮತ್ತು ಮಹಾಜನ್ ತೀರ್ಪನ್ನು ಒಪ್ಪಲೇಬೇಕು ಎಂದು ಅಲ್ಲಿ ಹೇಳಲಿ. ಅದನ್ನು ಮುಂದಿನ ತಿಂಗಳು 8-9 ರಲ್ಲಿ ಸೇರುವ ಕಾಂಗ್ರೆಸ್ಸು ಸಮಿತಿಯಲ್ಲಿ ದಿಟ್ಟವಾಗಿ ಹೇಳಿ. ಇಲ್ಲದಿದ್ದರೆ ಕನ್ನಡಿಗರು ಇಲ್ಲಿ ದೊಡ್ಡ ಚಳುವಳಿಯನ್ನು ರಾಜ್ಯದಾದ್ಯಂತ ಆರಂಭಿಸಲೇಬೇಕಾಗಿ ಬರುತ್ತದೆ. ಆಗ ಅಂತಹ ಚಳುವಳಿಯನ್ನು ತಡೆಯಲು ಆಗುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರವನ್ನು ಬೇಗನೆ ಮಹಾಜನ್ ವರದಿ ಒಪ್ಪುವಂತೆ ಮಾಡಬೇಕು ಇಲ್ಲದಿದ್ದರೆ ನಾವು ಖಂಡ ತುಂಡವಾಗಿ ಇದನ್ನು ವಿರೋಧಿಸಬೇಕಾಗಿ ಬರುತ್ತದೆ ಇದನ್ನು ಬಿಟ್ಟು ಸುಮ್ಮನೆ ಇಲ್ಲಿ ಪತ್ರ ವ್ಯವಹಾರ ಮಾಡುತ್ತೇವೆಂದು ಮಾಡಿದರೆ ಏನೂ ಉಪಯೋಗವಾಗುವುದಿಲ್ಲ. ರಾಜ್ಯದ ಮುಖ್ಯ ಮಂತ್ರಿಗಳಾಗಿರತಕ್ಕವರು ಹಾಗೂ ಇತರ ಎಲ್ಲ ಮಂತ್ರಿಗಳು ಇವೊತ್ತಿನ ದಿನ ಜನತೆಯ ಹಿತರಕ್ಷಣೆಗೆ ಬಾರದೇ ಇದ್ದರೆ ನಾನು ಇಲ್ಲಿ ಜನತೆಯ ಚಳುವಳಿ ಮಾಡಬೇಕಾಗಿ ಬರುತ್ತದೆ ಎನ್ನುವ ಎಚ್ಚರಿಕೆಯನ್ನು ಸರ್ಕಾರಕ್ಕೆ ಈ ಸಭೆಯಲ್ಲಿ ಎಚ್ಚರಿಕೆಯಾಗಿ ಹೇಳುತ್ತಿದ್ದೇನೆ. ಚಳುವಳಿ ನಡೆಸಿ ಕೊನೆಗೆ ಮಂತ್ರಿಮಂಡಲ ರಾಜೀನಾಮೆ ಕೊಡಬೇಕು ಎಂದು ಬೀದಿಬೀದಿಗಳಲ್ಲಿ ರಸ್ತೆರಸ್ತೆಗಳಲ್ಲಿ ಮಾಡಿ ಕೊನೆಗೆ ಜನತೆಯ ಸಮೂಹವನ್ನು ವಿಧಾನ ಸೌಧದೊಳಗೂ ನುಗ್ಗುವಂತೆ ಮಾಡಬೇಕಾಗಿ ಬಂದೀತು. ಇದನ್ನು ಎಲ್ಲರೂ ಗಮನದಲ್ಲಿಟ್ಟುಕೊಂಡು ಧೈರ್ಯವಾಗಿ ಇದರ ಬಗ್ಗೆ ಮುನ್ನುಗ್ಗಿ ನಡೆಯಬೇಕೆಂದು ರಾಜ್ಯದ ಜನತೆಯ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ ಇದನ್ನು ಶಕ್ತಿಯಿಂದ ಧೈರ್ಯದಿಂದ ಎದುರಿಸಲು ನಿಮಗೆ ಎಲ್ಲ ಜನರ ಬೆಂಬಲವೂ ಇದೆ. ಎಲ್ಲಿಯವರೆಗೆ ಇಂತಹ ಗಂಡಾಂತರಗಳನ್ನು ಹಾಗೂ ಅನ್ಯಾಯಗಳನ್ನು ತಪ್ಪಿಸಲು ಆಗುವುದಿಲ್ಲವೋ ಅಲ್ಲಿಯವರೆಗೆ ನೀವು ಕಾಂಗ್ರೆಸ್ಸಿಗರೇ ಆದರೂ ಸರ್ಕಾರದಲ್ಲಿರಲು ಯೋಗ್ಯರಾಗುವುದಿಲ್ಲ. ಸರ್ಕಾರದ ಮೇಲೆ ಈಗ ಗುರುತರವಾದ ಜವಾಬ್ದಾರಿ ಬಿದ್ದಿದೆ. ಆದುದರಿಂದ ನಾನು ನಿಮ್ಮ ನಾಯಕರಾದ ನಿಜಲಿಂಗಪ್ಪನವರು ಇಲ್ಲಿ ಬಂದು ಕಾಂಗ್ರೆಸ್ಸು ಆಫೀಸಿನಲ್ಲಿ 50 ಜನರನ್ನು ಕರಿಸಿ ಹೇಳುವುದಿಲ್ಲ. ಕೇಂದ್ರಕ್ಕೆ ಹೋದಾಗ ದೆಹಲಿಯಲ್ಲಿರುವ ನಾಯಕರಿಗೆ ಸರಿಯಾಗಿ ತಿಳಿಯುವಂತೆ ಒತ್ತಾಯ ಮಾಡಿ ಹೇಳುವಂತೆ ಮಾಡಬೇಕು. ಇದು ಅವರ ಕೈಯಲ್ಲಿ ಇದೆ. ಆಗ ಅಲ್ಲಿ ಅವರನ್ನು ಒಪ್ಪಿಸಿದರೆ ಆಗ ಮೈಸೂರು ಜನತೆಯೆಲ್ಲರೂ ಶಹಬಾಸುಗಿರಿ ಕೊಡಲು ಸಿದ್ಧವಾಗುತ್ತಾರೆ. ಇಲ್ಲದಿದ್ದರೆ ಜನತೆ ನಿಮ್ಮ ಪದವಿಗೆ ರಾಜೀನಾಮೆ ಕೊಡಿ ಎಂದು ಹೇಳಬೇಕಾಗಿ ಬರುತ್ತದೆ ಕನ್ನಡ ಜನತೆಯೂ ಒತ್ತಾಯವನ್ನು ಪೂರೈಸುವುದು ಸರ್ಕಾರದ ಜವಾಬುದಾರಿ ಅಲ್ಲದೆ ನಮ್ಮ

(ಶ್ರೀ ವಾಟಾಳ್ ನಾಗರಾಜ್)

ಭಾರತದಲ್ಲಿ ಎಲ್ಲೆಲ್ಲಿ ಕನ್ನಡಿಗರಿದ್ದಾರೋ ಅವರೆಲ್ಲರ ರಕ್ಷಣೆ ಮಾಡುವ ಜವಾಬುದಾರಿಯೂ ಇದೆ. ಆದಕ್ಕಾಗಿ ಅವರು ಸೂಕ್ತವಾದ ಅಂಕಿಅಂಶಗಳಗಳನ್ನು ತರಿಸಿ ಅವರ ಬಗ್ಗೆ ಸೂಕ್ತ ಪರಿಹಾರ ಕೊಡಲು ಕೇಂದ್ರ ಸರ್ಕಾರವನ್ನು ಹಾಗೂ ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

†Smt. WINNIFRED F. FERNANDES (Coondapur).—Hon. Deputy Speaker Sir, with great regret I wish to say a few words about Shiv Sena. What is Shiva Sena ? Is it named after Shiva or is it named after Shivaji ? But I can say it is not either of the two. It is a saithan Sena and this means a sena of devils. This sena should go and it should not remain in existence on earth. Frankly speaking, I can say that shocking atrocities which this Sena has committed on Kannadigas is very very regretful. I can say it is pre-planned and well organised and I can say somebody is playing behind the screen. I can hold the Home Minister Mr. Chavan and the Chief Minister of Maharastra Mr. Naik, responsible for all these activities. Most of the Hotels, Houses and shops of Kannadigas have been shattered to ruins. What harm these Mysoreans have done to these Maharastrians ? In a democratic country any man can live anywhere to eke out his livelihood,—let him be a Mysorean, Maharastrian, Keralite or anybody. He has got full freedom to live anywhere in this country. Nobody can say that only Maharastrians should live in Maharastra and not others. No human being can tolerate the atrocities committed by these people in Maharastra. I urge the Centre and also the Chief Minister of Mysore who is responsible to safeguard the interests of the Kannadigas wherever they are, to see that the loss incurred by the Kannadigas is made good and let the Chief Minister have a Committee set up, to investigate the actual damages done to Kannadigas, mostly the people from South Kanara who have done no harm to Maharastrians and let them give compensation to the victims of these atrocities and allow the Kannadigas to live peacefully.

I want to disclose in this connection that another Sena by name Bant Sena or Setty Sena is coming up in Coondapur. An incident took place on 10th of last month when the people of the minority Communities were attacked and wounded by this Sena. Of course the people who were wounded were admitted to the Hospital. The police authorities and also the Deputy Commissioner did not take any action. I am very sorry to say that even though I gave a list of those culprits they did not care to arrest them. Of course when we speak of Shiva Sena in Maharastra, I am very sorry to say, that even in our own State there is what is called the Bant Sena or the Shetty Sena which is springing up at Coondapur. I would like to ask the hon. Chief Minister to destroy this Sena first.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಸದಸ್ಯರು ಶೆಟ್ಟಿ ಸೇನೆ ಎಂದು ಹೇಳಿದ್ದಾರೆ. ಅದು ಸರಿಯಲ್ಲ. ಸುಮ್ಮನೆ ಅವರು ಬಣ್ಣ ಕಟ್ಟುತ್ತಾ ಹೋದರೆ ನಿಜವಾಗಿಯೂ ಯಾವುದೂ ಸರಿ ಹೋಗುವುದಿಲ್ಲ. ನಾವು ಶೆಟ್ಟಿಗಳು ಅದನ್ನು ಕ್ರಿಯೇಟ್ ಮಾಡಿದಂತಾಗುತ್ತದೆ.

Smt. WINNIFRED F. FERNANDES.—I do not blame all the Shetty people. But the Shetty people of Coondapur have taken law into their hands. The Students organisation in Bant hostel have taken the lead. I request the hon. Chief Minister that these activities taking place in Coondapur, should be nipped in the bud before they mature. With these words I conclude and thank the Chair.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಸನ್ಮಾನ್ಯ ಅಧ್ಯಕ್ಷರೇ, ಇಲ್ಲ ಚರ್ಚೆ ಮಾಡತಕ್ಕಂಥ ವಿಷಯ ಮುಂಬಯಿಯಲ್ಲಿ ನಡೆದಂಥ ಮರಾಠಿ ರುದ್ರಹೋಮ. ಅದರಲ್ಲಿ ನೊಂದವರಿಗೆ ನಮ್ಮ ಸಂತಾಪವನ್ನು ಸೂಚಿಸಿ, ಅದನ್ನು ನಿಲ್ಲಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಮುಂಬಯಿಯಲ್ಲಿ ನಡೆದಿರತಕ್ಕಂಥ ರುದ್ರಘಟನೆಗಳಲ್ಲಿ ಶೇಕಡ 97 ರಷ್ಟು ದಕ್ಷಿಣ ಕನ್ನಡ ಜಿಲ್ಲೆಯವರ ಹೋಟೇಲ್‌ಗಳನ್ನು ಲೂಟಿ ಮಾಡಿರುವುದು, ಅವರ ಮನೆಗಳ ಮೇಲೆ ಧಾಳಿ ಮಾಡಿರುವುದು, ಹೆಂಗಸರ ಮಾನಭಂಗ ಮಾಡಿರುವುದು, ಫರ್ನಿಚರ್‌ಗಳನ್ನು ಹೊರಗೆ ಹಾಕಿ ಸುಟ್ಟು ಹಾಕಿರುವುದು, ಅದನ್ನೆಲ್ಲಾ ಮಾನ್ಯ ಸದಸ್ಯರು ವಿವರವಾಗಿ ತಿಳಿಸಿದ್ದಾರೆ. ಆದರೆ ನಾನು ಹೇಳುವುದು ಇಷ್ಟೇ: ಈ ಪ್ರಜಾಪ್ರಭುತ್ವ ನಡೆದುಕೊಂಡು ಬರತಕ್ಕ ದೇಶದಲ್ಲಿ ಈ ರೀತಿ ಮಾಡಿದರೆ ಪ್ರಜಾಪ್ರಭುತ್ವ ಉಳಿಯಲಿಕ್ಕೆ ಸಾಧ್ಯವೇ ? ಶಿವಸೇನ ಹಿಟ್ಲರಿನಂತೆ ವರ್ತಿಸಿದರೆ, ಅದು ಕೊನೆಗೆ ನಾಶವಾಗುವುದು ಖಂಡಿತ. ಒಂದು ಕಾಲದಲ್ಲಿ ಹಿಟ್ಲರನು ಏಕೈಕ ವೀರ ಎಂದು ಇದ್ದರೂ, ಅವನು ಫ್ಯಾಸಿಸ್ಟ್ ರೀತಿ ವರ್ತಿಸಿದ್ದರಿಂದ, ಅವನಿಗೆ ಕೊನೆಗೆ ಏನಾಯಿತು ? ಕೇಂದ್ರ ಸರ್ಕಾರದವರು ಈ ಫ್ಯಾಸಿಸ್ಟ್ ರೀತಿ ವರ್ತಿಸುತ್ತಿರುವ ಸೇನೆಯ ಚಟುವಟಿಕೆಗಳನ್ನು ಪ್ರಾರಂಭದಲ್ಲೇ ಮೊಟಕು ಮಾಡಿದ್ದರೆ ಈ ಘಟನೆಗಳಿಗೆ ಅವಕಾಶವಿರುತ್ತಿರಲಿಲ್ಲ. ಆದರೆ ಕೊನೆಗೆ ಸತ್ಯಕ್ಕೆ ಜಯ ಬರುವುದು ಖಂಡಿತ. ನಾವು ರಾಮಾಯಣ, ಮಹಾಭಾರತ ನೋಡಿದರೆ ರಾವಣನ ನಾಶ, ಭಸ್ಮಾಸುರನವಧೆ, ಕೀಚಕಧ್ವಂಸ, ಭಸ್ಮಾಸುರ ತಾನೇ ತಾನಾಗಿ ನಾಶವಾದ ವಿಷಯ ಗೊತ್ತಾಗುತ್ತದೆ. ಅದೇ ರೀತಿ ಈವೊತ್ತು ಶಿವಸೇನೆ ಅಲ್ಲಿರತಕ್ಕಂಥ ಕನ್ನಡಿಗರ ಮೇಲೆ ಮಾಡಿರುವಂತ ಒಂದು ದೌರ್ಜನ್ಯದ ಚಿತ್ರವನ್ನು ಕೇಳಿದ್ದೇವೆ. ಇಂತಹ ಒಂದು ರೋಮಾಂಚನಕಾರಿಯಾದ ಕೃತ್ಯ ಮಾಡಿರುವಂಥಾದ್ದನ್ನು ಈವೊತ್ತು ಸುಮ್ಮನೆ ಕೇಳಿದರೆ ಹೇಗೆ ? ಅದೂ ದಕ್ಷಿಣ ಕನ್ನಡ ಜಿಲ್ಲೆಯವರ ಹೋಟೇಲುಗಳನ್ನು ಲೂಟಿ ಮಾಡಿರುವುದು, ಬೀಡಿ ಅಂಗಡಿಗಳಲ್ಲಿ ಫರ್ನೀಚರುಗಳನ್ನು ಸುಟ್ಟು ಹಾಕಿರುವುದು, ಉಡುಪಿಯವರ ವಸತಿಗೃಹಗಳಿಗೆ ನುಗ್ಗಿ ಮಹಿಳೆಯರ ಮಾನಭಂಗ ಮಾಡಿರುವುದು. ವಡವೆಗಳನ್ನೂ ಕಳೆದುಕೊಂಡು, ತಮ್ಮ ಗಂಡಂದಿರುಗಳನ್ನು ಕಳೆದುಕೊಂಡು ಮಕ್ಕಳುಗಳು ತಬ್ಬಲಿಯಾಗಿ ತಾಯಿ ಯಾರು, ತಂದೆ ಯಾರು, ಅಕ್ಕ ಯಾರು, ತಂಗಿ ಯಾರು ಎಂದು ಅವರಿಗೆ ರಕ್ಷಣೆ ಇಲ್ಲದೆ ಈ ರೀತಿ ನಾನಾ ರೂಪದಲ್ಲಿ ಆಗಿರುವುದನ್ನು ಕೇಳಿದರೆ ದುಃಖ ಪಡಬೇಕಾಗುತ್ತದೆ. ಮೈಸೂರಿನ ಬಗ್ಗೆ ಏನು ಒಂದು ಧೋರಣೆ ಇಟ್ಟುಕೊಂಡಿರುವಂತೆ ಕಾಣುತ್ತದೆ. ಕನ್ನಡಿಗರು ಅನೇಕ ವಿಷಯಗಳಲ್ಲಿ ಕುಸುಮ ಹೃದಯವುಳ್ಳಂಥವರು, ಕೋಮಲ ಉಳ್ಳಂಥ ಜನರು. ಆ ರೀತಿ ತಿಳಿದು ಕನ್ನಡಿಗರ ಮೇಲೆ ವರ್ತಿಸಿದ್ದಾರೆ. ಆದರೆ ಕನ್ನಡನಾಡು ಟಿಪ್ಪೂಸುಲ್ತಾನ್ ಇದ್ದ ದೇಶ. ಬ್ರಿಟಿಷರೊಂದಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂಥ ಏಕೈಕ ವೀರ ಟಿಪ್ಪೂಸುಲ್ತಾನ್. ಹಾಗೆ ಬಸವೇಶ್ವರರೂ, ಕಿತ್ತೂರು ಚೆನ್ನಮ್ಮ ಮುಂತಾದ ಸಮರವೀರರು ಕನ್ನಡ ನಾಡಿನಲ್ಲಿ ಹುಟ್ಟಿ ಕನ್ನಡ ದೇಶಕ್ಕೆ ಹೋರಾಟ ಮಾಡಿ ಕನ್ನಡ ನಾಡಿಗೆ ಶಕ್ತಿ ತುಂಬಿದ್ದಾರೆ. ಆದುದರಿಂದ ಈವೊತ್ತು ಕನ್ನಡಿಗರ ಬಗ್ಗೆ ಕನ್ನಡ ನಾಡಿನಲ್ಲಿ ಯಾರ ಮನಸ್ಸೂ ಅತ್ತ ಕಡೆ ಹರಿಯುವುದಿಲ್ಲ ಎಂದು ಮಹಾರಾಷ್ಟ್ರದವರು ಭಾವಿಸಿದ್ದರೆ ಅದು ತಪ್ಪು. ಆದುದರಿಂದ ಈ ವಿಚಾರದಲ್ಲಿ ನಮ್ಮ ಸದನದಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರಪಾಟೀಲರಿಗೆ ನಾವು ಸಂಪೂರ್ಣ ಜವಾಬ್ದಾರಿಯನ್ನು ಕೊಡಬೇಕು, ನೀವು ಏನು ಬೇಕಾದರೂ ತೀರ್ಮಾನ ಮಾಡಬಹುದು ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರದಲ್ಲಿ ಶ್ರೀ ಚವಾಣರವರು ಎಲ್ಲಿಯವರೆಗೆ ಗೃಹ ಮಂತ್ರಿಗಳಾಗಿರುತ್ತಾರೋ ಅಲ್ಲಿಯವರೆಗೂ ಈ ಮಹಾಜನ ಸಮಿತಿಯ ತೀರ್ಪನ್ನೂ, ಶಿವಸೇನೆಯು ಮಾಡಿರತಕ್ಕಂಥ ಪ್ರತಿಭಟನೆಯನ್ನೂ ಇತ್ಯರ್ಥಗೊಳಿಸಲು ಸಾಧ್ಯವಿಲ್ಲ. ಲಾಲ್‌ಬಹದ್ದೂರ್ ಶಾಸ್ತ್ರಿಗಳು, ನಂದಾರವರು, ಎಸ್. ಕೆ. ಪಾಟೀಲರವರು ಕೇಂದ್ರದ ಮಂತ್ರಿಗಳಾಗಿದ್ದಾಗ ಇಂತಹ ಯಾವುದಾದರೂ ಘಟನೆ ನಡೆದಾಗ, ನಮಗೆ ನ್ಯಾಯ ಸಿಕ್ಕುತ್ತದೆ ಎಂದು ಭರವಸೆ ಇತ್ತು.

(ಶ್ರೀ ಬಿ. ಎಂ. ಇದಿನಬ್ಬ)

ಆದುದರಿಂದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಮಾರ್ಚ್ 6–7ನೇ ತಾರೀಖು ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಡೆಯುವ ಸಭೆಯಲ್ಲಿ ಮಹಾಜನ್ ವರದಿ ವಿಚಾರದಲ್ಲೂ ಶಿವಸೇನೆಯ ಘಟನೆಗಳ ಬಗ್ಗೆ ಒಂದು ನಿರ್ಣಯ ಮಾಡುವುದು ಅಗತ್ಯ. ಅದು ಆಗಬೇಕು ಎಂದು ಹೇಳುತ್ತೇನೆ. ಈವೊತ್ತು ದಕ್ಷಿಣ ಕನ್ನಡ ಜಿಲ್ಲೆಯ 97 ರಷ್ಟು ಜನರಿಗೆ ತುಂಬಾ ಕಷ್ಟವಾಗಿರುವುದ ರಿಂದ, ಅನ್ಯಾಯವಾಗಿರುವುದರಿಂದ, ಈ ರೀತಿ ಅವರ ಮೇಲೆ ದಾಂಧಲೆ ಮಾಡಿರುವುದರಿಂದ ಅವರಿಗೆ ಏನಾದರೂ ಒಂದು ಆರ್ಥಿಕ ಪರಿಹಾರವನ್ನಾಗಲಿ, ಅಥವಾ ಇನ್ನು ಯಾವುದಾದರೂ ಪರಿಹಾರವನ್ನಾಗಲೀ ಕೊಡಬೇಕು. ಇನ್ನು ಮುಂದೆ ಭಾರತ ದೇಶದಲ್ಲಿ ಇಂತಹ ಘಟನೆಗಳು ಆಗದಂತೆ ನೋಡಿಕೊಳ್ಳಬೇಕು. ಅವನ್ನು ಸಂಪೂರ್ಣವಾಗಿ ಬಹಿಷ್ಕರಿಸುವಂತೆ ಮಾಡಬೇಕು. ಏಕೆಂದರೆ ಈ ದಿವಸ ಬೊಂಬಾಯಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು ಉತ್ತಮ ಸ್ಥಾನಗಳಲ್ಲಿದ್ದಾರೆ, ಒಳ್ಳೆಯ ಉದ್ಯೋಗಗಳಲ್ಲಿದ್ದಾರೆ, ಹೊಟೇಲು ಉದ್ಯಮ ಮುಂತಾದುವನ್ನು ನಡೆಸುತ್ತಿದ್ದಾರೆ, ಅಲ್ಲಿಯ ಜನಜೀವನದಲ್ಲಿ ಬೆರೆತು ಉತ್ತಮ ಸ್ಥಾನಗಳಲ್ಲಿದ್ದಾರೆ. ಅಲ್ಲಿಯ ನಗರಸಭೆಯಲ್ಲಿ ಅಥವಾ ಕಾರ್ಪೊರೇಷನ್ನಿನಲ್ಲಿ ಸದಸ್ಯರಾಗಿದ್ದಾರೆ. ಹೀಗೆ ಮಹಾರಾಷ್ಟ್ರದ ಜನಜೀವನದಲ್ಲಿ ಉತ್ತಮ ಸ್ಥಾನ ಪಡೆದಿರುವ ನಮ್ಮವರಿಗೆ ಅನ್ಯಾಯಮಾಡುತ್ತಿದ್ದಾರೆ. ಇದರಿಂದ ಶಿವಸೇನೆಯ ಹಾವಳಿಯಿಂದ ನಮ್ಮವರೇನು ಬೊಂಬಾಯಿನಲ್ಲಿದ್ದಾರೆ ಅವರು ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಈಗಾಗಲೇ ನಮ್ಮ ಮಿತ್ರರು ಹೇಳಿದಂತೆ ನಮ್ಮವರನೇಕರು ಚಿತ್ರಹಿಂಸೆಗೆ ಗುರಿಯಾಗಿ ಬಹಳ ನಷ್ಟಹೊಂದಿದ್ದಾರೆ. ತಂದೆಯಾದವನು ಮಕ್ಕಳಿಗೆ ನೀಡಬೇಕಾದ ರಕ್ಷಣೆ, ಪ್ರೀತಿ ನೀಡದಿದ್ದರೆ ಮಕ್ಕಳಗತಿಯೇನಾಗುವುದೋ ಅದೇರೀತಿ ನಮ್ಮವರ ಸ್ಥಿತಿ ಬೊಂಬಾಯಿನಲ್ಲಿ ಆಗಿದೆ. ಮಕ್ಕಳು ಸರಿಯಾಗಿ ವರ್ತಿಸದಿದ್ದರೆ ಅವರನ್ನು ಮನೆಬಿಟ್ಟು ಕಳಿಸುವಂತೆ ದುಷ್ಕೃತ್ಯವನ್ನು ಎಸಗುತ್ತಿರುವ ವರನ್ನು ಬಹಿಷ್ಕರಿಸಬೇಕು. ನಮ್ಮ ಅಖಿಲಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪ ನವರು ಶಿವಸೇನೆಯನ್ನು ಬಹಿಷ್ಕರಿಸಬೇಕು ಎಂದು ಹೇಳಿದ್ದಾರೆ. ಆದರೆ ಚವಾಣ್‌ರವರು ಬಹಿಷ್ಕರಿಸುವುದು ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಬೊಂಬಾಯಿನಲ್ಲಿ ಕ್ರೂರಕೃತ್ಯಗಳು ನಡೆದಾಗ ಶ್ರೀಮತಿ ಇಂದಿರಾ ಗಾಂಧಿಯವರು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಿಗೆ ಫೋನ್ ಮಾಡಿ ಈ ವಿಷಯವನ್ನು ವರ್ಕಿಂಗ್ ಕಮಿಟಿಯಲ್ಲಿ ಚರ್ಚೆಮಾಡಲಾಗುವುದೆಂದು ತಿಳಿಸಿದ್ದಾರೆ.

1–00 P.M.

ಕೇಂದ್ರ ಸರ್ಕಾರದವರು ಗಡಿ ಪ್ರಶ್ನೆಯು ಇತ್ಯರ್ಥವಾಗುವವರೆಗೆ ಈಗ ನಡೆಯುತ್ತಿರುವ ದುಷ್ಕೃತ್ಯಗಳು ನಿಲ್ಲುವುದಿಲ್ಲ ಎಂಬುದನ್ನು ತಿಳಿಯಬೇಕು. ಈಗ ಒಂದು ವಿಶಿಷ್ಟವಾದ ಭಯಾನಕ ಪರಿಸ್ಥಿತಿ ಉಂಟಾಗಿದೆ. ಈ ಕ್ರೂರತನದಿಂದ ಕೇಂದ್ರ ಸರಕಾರದ ಮನೋಭಾವ ಕೂಡ ಬದ ಲಾಗುವ ಪರಿಸ್ಥಿತಿ ಇದೆ. ಈಗಾಗಲೇ ಮಹಾಜನ್ ವರದಿಯನ್ನು ಪೂರ್ಣವಾಗಿ ಒಪ್ಪಬೇಕೆಂದು ನಾವು ಒತ್ತಾಯ ಮಾಡಿದ್ದೇವೆ, ಗಡಿಪ್ರಶ್ನೆ ಕೂಡಲೇ ಇತ್ಯರ್ಥವಾಗಬೇಕು. ಶಿವಸೇನೆ ನಿಷೇಧಿಸಿದೆ ಅದನ್ನು ಕೂಡಲೆ ಬಹಿಷ್ಕಾರಮಾಡಬೇಕು ಎಂಬುದು ನಮ್ಮ ಅಭಿಪ್ರಾಯ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಸರಕಾರದವರು ಇದನ್ನು ಒತ್ತಾಯಮಾಡಿ ಕನ್ನಡಿಗರಿಗೆ, ದಕ್ಷಿಣ ಕನ್ನಡದವರಿಗೆ ನಷ್ಟವಾಗಿರುವುದನ್ನು ಗಮನಿಸಿ ಮಹಾರಾಷ್ಟ್ರ ಸರಕಾರದಿಂದ ತಕ್ಕ ಪರಿಹಾರವನ್ನು ನೊಂದಿರು ವವರಿಗೆ ಕೊಡಿಸಬೇಕು, ಈ ಬಗ್ಗೆ ಒತ್ತಾಯಮಾಡಬೇಕು. ಒಂದುವೇಳೆ ಮಹಾರಾಷ್ಟ್ರ ಸರಕಾರ ಪರಿಹಾರ ಕೊಡದಿದ್ದರೆ ಕೇಂದ್ರ ಸರಕಾರದಿಂದಲಾದರೂ ಕೊಡಿಸಬೇಕು, ಈ ಬಗ್ಗೆ ಒತ್ತಾಯಮಾಡ ಬೇಕು ಎಂದು ಒತ್ತಿಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೇ, ಶಿವಸೇನೆ ಚವಾಣರ ಕೃಪಾಶ್ರಯದಲ್ಲಿ ಪ್ರಾರಂಭವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಚವಾಣರು ಎಲ್ಲಿಯವರೆಗೆ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿರುತ್ತಾರೋ ಅಲ್ಲಿಯವರೆಗೆ ಶಿವಸೇನೆಗೆ ಭಯ ವಿಲ್ಲ, ಬೊಂಬಾಯಿನಲ್ಲಿ ಈ ಶಿವಸೇನೆ ದುಷ್ಕೃತ್ಯಗಳನ್ನು ಮಾಡುತ್ತಲೇ ಇರುತ್ತದೆ. ಆದುದರಿಂದ ನಮ್ಮ ಸರಕಾರದವರು ಒತ್ತಾಯಮಾಡಿ ಕೇಂದ್ರ ಸರಕಾರದ ಮಂತ್ರಿ ಮಂಡಲದಿಂದ ಚವಾಣರನ್ನು ಕಿತ್ತುಹಾಕಿಸಬೇಕು. ಅವರು ಅಧಿಕಾರದಲ್ಲಿರುವವರೆಗೂ ಈಗ ನಡೆಯುತ್ತಿರುವ ದುಷ್ಕೃತ್ಯಗಳು ನಿಲ್ಲುವುದಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈಗ ನಮ್ಮ ದಕ್ಷಿಣಭಾರತದ ಜನರೇನು ಬೊಂಬಾಯಿನಲ್ಲಿ ವಾಸಮಾಡುತ್ತಿದ್ದಾರೆ ಅವರೆಲ್ಲರೂ ಕೂಡ ಭಯಭ್ರಾಂತರಾಗಿದ್ದಾರೆ. ಅವರಿಗೆ ಯಾವ ವಿಧವಾದ ರಕ್ಷಣೆಯೂ ಇಲ್ಲ. ಈಗಾಗಲೆ ಮುಂಬಯಿನಲ್ಲಿರುವ ಎಲ್ಲ ಕನ್ನಡಿಗರ

ಮನೆಗಳೂ ಲೂಟಿಯಾಗಿವೆ. ಕನ್ನಡಿಗರ ಮಾನಹಾನಿಯಾಗಿದೆ, ಕೋಟಿಗಟ್ಟಲೆ ಹಣವನ್ನು, ಆಸ್ತಿಪಾಸ್ತಿಗಳನ್ನು ಕನ್ನಡಿಗರು ಮುಂಬಯಿಯಲ್ಲಿ ಕಳೆದುಕೊಂಡಿದ್ದಾರೆ. ಹೀಗಾಗಿ ಅವರು ಮುಂದೇನು ಮಾಡಬೇಕೆಂಬುದು ತೋಚದೆ ದಿಗ್ಭ್ರಾಂತರಾಗಿದ್ದಾರೆ. ಇದಕ್ಕೆ ಕೂಡಲೆ ಸೆಂಟ್ರಲ್ ಆರ್ಮ್ಡ್ ರಿಸರ್ವ್ ಫೋರ್ಸ್ ತರಿಸಿದ್ದರೆ ದುಷ್ಕೃತ್ಯಗಳನ್ನು ತಡೆಗಟ್ಟಬಹುದಾಗಿತ್ತು. ಹಾಗೆ ಮಾಡದೆ ಹೋದುದರಿಂದ ನಮ್ಮ ದಕ್ಷಿಣಭಾರತದ ಕನ್ನಡಿಗರಿಗೆ ರಕ್ಷಣೆಯೇ ಇಲ್ಲದಂತಾಗಿದೆ ಎಂದು ಹೇಳಬಯಸುತ್ತೇನೆ.

[MR. SPEAKER in the Chair]

ಈಗ ಬೊಂಬಾಯಿನಲ್ಲಿರುವ ನಾಯಕ್ ಸರಕಾರ ಲಾ ಅಂಡ್ ಆರ್ಡರ್ ಮೆಂಟೇನ್ ಮಾಡುತ್ತಿಲ್ಲ ಯಾವ ಸರಕಾರ ಆ ಕೆಲಸವನ್ನು ಮಾಡುವುದಿಲ್ಲ, ಅದನ್ನು ತೆಗೆದುಹಾಕಬೇಕು, ಅದಿರಬಾರದು. ಹಾಗೆ ಮಾಡಿ ಹೊಸ ಚುನಾವಣೆ ನಡೆಸಬೇಕು ಎಂದು ಈ ಸಂದರ್ಭವಲ್ಲಿ ಹೇಳುತ್ತೇನೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಜಲಿಯನವಾಲಾಬಾಗ್‌ನಲ್ಲಿ ಶಾಂತಿಯುತವಾಗಿ ಸತ್ಯಾಗ್ರಹ ಮಾಡಿದ ನಿರಾಶ್ರಿತರಮೇಲೆ ಬ್ರಿಟೀಷರು ಗುಂಡು ಹಾರಿಸಿದರು, ಅನೇಕರ ಪ್ರಾಣಹಾನಿ ಮಾಡಿದರು. ಈಗ ಬೊಂಬಾಯಿನಲ್ಲಿ ನಡೆದಿರುವ ಕೃತ್ಯ ಅದಕ್ಕಿಂತ ಘೋರವಾದುದು. ನಾವು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕಾಲದಲ್ಲಿ ಬ್ರಿಟಿಷರು ಕೂಡ ಇಂಥ ಅಮಾನುಷ ಕೃತ್ಯವನ್ನು ಮಾಡಿರಲಿಲ್ಲ. ಅದಕ್ಕಿಂತ ಹೀನವಾದ ಕೃತ್ಯವನ್ನು ಬೊಂಬಾಯಿನಲ್ಲಿರುವ ಮಹಾರಾಷ್ಟ್ರ ಸರಕಾರ ಎಸಗಿದೆ. ಆದುದರಿಂದ ಈ ಸರಕಾರ ಒಂದು ಸೆಕೆಂಡೂ ಕೂಡ ಅಧಿಕಾರದಲ್ಲಿರುವುದಕ್ಕೆ ಯೋಗ್ಯತೆ ಪಡೆದಿಲ್ಲ. ಇದನ್ನು ಕೇಂದ್ರ ಸರಕಾರದವರು ಕಿತ್ತುಹಾಕಬೇಕು ಎಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಪೋರ್ಚುಗೀಸರು ಕೂಡ ತಾವು ನಮ್ಮ ದೇಶ ಬಿಟ್ಟು ಹೋಗುವಾಗ ಇಂಥ ಕೃತ್ಯವನ್ನು ಮಾಡಿರಲಿಲ್ಲ. ಅಂಥ ಕೃತ್ಯಗಳು ಬೊಂಬಾಯಲ್ಲಿ ನಡೆದಿವೆ. ಇದಕ್ಕೆ ಜವಾಬ್ದಾರರು ನಾಯಕ್ ಸರಕಾರದವರು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂಬಂಧದಲ್ಲಿ ನಮ್ಮ ಸರಕಾರದವರೇನು ಮಾಡಿದ್ದಾರೆ ಎಂದು ಪ್ರಶ್ನೆಮಾಡುತ್ತೇನೆ. ನಮ್ಮ ಮುಖ್ಯ ಮಂತ್ರಿಗಳು ಪತ್ರ ಬರೆದಿರುವುದಾಗಿ ಹೇಳಿದ್ದಾರೆ. ಅದಕ್ಕೆ ಬದಲಾಗಿ ಅವರು ಬೊಂಬಾಯಿಗೆ ಹೋಗಿ, ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ಕನ್ನಡಿಗರಿಗಾಗಿರುವ ತೊಂದರೆಯನ್ನು ವಿಚಾರಮಾಡಿದ್ದರೆ ನಿಜವಾಗಿಯೂ ಕೂಡ ನಮ್ಮ ಜನಾಗೆ ಸ್ವಲ್ಪ ಸಮಾಧಾನವಾಗುತ್ತಿತ್ತು. ನಮ್ಮ ಮೈಸೂರಿನ ಮುಖ್ಯ ಮಂತ್ರಿಗಳು ಬಂದು ವಿಚಾರಿಸಿದ್ದಾರೆ ಎಂದು ನೊಂದ ಜನರಿಗೆ ಸ್ವಲ್ಪ ಧೈರ್ಯ ಬರುತ್ತಿತ್ತು. ಈಗ ಅವರು ಭಯಗ್ರಸ್ತರಾಗಿದ್ದಾರೆ. ಅವರು ದಿಕ್ಕು ಕೆಟ್ಟಿದ್ದಾರೆ. ಆದುದರಿಂದ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಸ್ನೇಹಿತರಾದ ಗೋಪಾಲಗೌಡರೂ ಹೇಳಿದ್ದಾರೆ. ರಾಜ್ಯ ಸರಕಾರ ಬೊಂಬಾಯಿಗೆ ಒಂದು ತಂಡವನ್ನು ಕಳಿಸಿ ಅಲ್ಲೇನು ಕೃತ್ಯ ನಡೆದಿದೆ ಎಂಬುದನ್ನು ವಿಚಾರಿಸಬೇಕೆಂದು ಹೇಳಿದ್ದಾರೆ. ನಾನೂ ಅದನ್ನು ಹೇಳುತ್ತೇನೆ. ಈಗಲಾದರೂ ಕೂಡ ತಕ್ಷಣ ಈ ಸದನದ ಕಾರ್ಯಕಲಾಪಗಳನ್ನು ನಿಲ್ಲಿಸಿ ಬೊಂಬಾಯಲ್ಲೇನು ಕೃತ್ಯ ನಡೆದಿದೆ ಎಂಬುದನ್ನು ಈ ಸಭೆ ಸದಸ್ಯರು ಹೋಗಿ ಪರಿಶೀಲಿಸಿ ಅಲ್ಲಿರುವ ಕನ್ನಡಿಗರಿಗೆ ಧೈರ್ಯ ಕೊಡಬೇಕು. ಅಷ್ಟೇ ಅಲ್ಲದೆ ಈಗಲಾದರೂ ಕೇಂದ್ರ ಸರಕಾರದವರು ಆರ್ಮ್ಡ್ ರಿಸರ್ವ್ ಪೋಲೀಸ್ ಅಲ್ಲಿಗೆ ಕಳಿಸಿ ಜನರು ಹೆದರಿರುವುದನ್ನು ತಪ್ಪಿಸಿದರೆ ಒಳ್ಳೆಯದು. ನಮ್ಮ ಸಭೆಯ ಸದಸ್ಯರು ಅಲ್ಲಿಗೆ ಹೋದಾಗ ಕೂಡ ಮಹಾರಾಷ್ಟ್ರದ ಶಿವಸೇನೆ ಗಲಾಟೆ ಮಾಡಬಹುದು. ಕೇಂದ್ರ ಸರಕಾರದವರು ಈ ಬಗ್ಗೆ ಮುಂಜಾಗ್ರತೆ ಕ್ರಮ ತೆಗೆದುಕೊಂಡು ಸೆಂಟ್ರಲ್ ಆರ್ಮ್ಡ್ ರಿಸರ್ವ್ ಪೋಲೀಸ್ ಹಾಕಿದ್ದರೆ ಇಂಥ ಕೃತ್ಯಗಳು ನಡೆಯುತ್ತಿರಲಿಲ್ಲ; ಕೋಟಿಗಟ್ಟಲೆ ಆಸ್ತಿಪಾಸ್ತಿ ನಷ್ಟವಾಗಿ ಮಾನಹಾನಿಯಾಗುತ್ತಿರಲಿಲ್ಲ. ನಮ್ಮ ಕನ್ನಡಿಗರ ಆಸ್ತಿಪಾಸ್ತಿ ಹಾಳಾಗುತ್ತಿರಲಿಲ್ಲ. ಮುಂಚೆ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದುದೇ ಹಾನಿಗೆ ಕಾರಣವಾಗಿದೆ.

ಹಿಂದೂ ದೇಶದಲ್ಲಿ ಯಾವ ಸೇನೆಯೂ ಇರಬಾರದು. ಭಾರತೀಯರಾದ ನಾವೆಲ್ಲ ಒಂದೇ ಎನ್ನುವ ಭಾವನೆ ಇರಬೇಕು ರಾಷ್ಟ್ರದಲ್ಲಿರುವ 54 ಕೋಟಿ ಜನ ಒಂದೇ ಎನ್ನುವ ಭಾವನೆ ಬಂದರೆ ಮಾತ್ರ ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುತ್ತದೆ. ಆದ್ದರಿಂದ ಭಾವೈಕ್ಯತೆಯನ್ನು ಪ್ರತಿಯೊಬ್ಬರೂ ಪೋಷಿಸಿಕೊಂಡು ಪಕ್ಷ, ಜಾತಿ, ಪಂಗಡ, ಕೋಮು ಇವು ಯಾವುದನ್ನೂ ಭಾವಿಸದೆ ಭಾರತದೇಶದವರೆಲ್ಲ ಒಂದು ಎಂದು ಹೇಳತಕ್ಕ ಭಾವನೆಯಿಂದ ಕೆಲಸ ಮಾಡಬೇಕು. ಬೊಂಬಾಯಿಯಲ್ಲಿ ಈಗ ಆಗಿರುವ ನಷ್ಟ ಸುಮಾರು 15–16 ಕೋಟಿ ರೂಪಾಯಿ ಎಂದು ಹೇಳುತ್ತಾರೆ. ಇದೆಲ್ಲವನ್ನೂ ಮಹಾರಾಷ್ಟ್ರ ಸರ್ಕಾರದವರು ತುಂಬಿಕೊಡಬೇಕು ಎಂಬುದಾಗಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ರತ್ನಕುಮಾರ್ ಶೆಟ್ಟಿ (ಮೂಡಬಿದ್ರೆ).—ಸ್ವಾಮಿ, ಈಗಿನ ಪರಿಸ್ಥಿತಿಯನ್ನು ನೋಡುವಾಗ ಪ್ರಾಯಶಃ ನಮ್ಮ ದೇಶಕ್ಕೆ ಉಳಿಗಾಲವಿಲ್ಲ. ಬ್ರಿಟಿಷರು ನಮ್ಮ ದೇಶಕ್ಕೆ ಬರುವಂಥ ಸಮಯದಲ್ಲಿ ಯಾವ ರೀತಿ ರಾಜ ಮಹಾರಾಜರು ಅಧಿಕಾರದ ಆಸೆಯಿಂದ, ರಾಜ್ಯದ ಆಸೆಯಿಂದ ಹೊಯ್ದಾಡುತ್ತಿದ್ದರೋ ಪುನರಪಿ ಅದೇ ರೀತಿಯಲ್ಲಿ ನಡೆಯುತ್ತಿದೆ. ಈವೊತ್ತು ಶಿವಸೇನೆ ಸಮಾಚಾರವಿರಲಿ, ಶಿವಸೇನೆಯನ್ನು ಬಿಟ್ಟರೂ ನಮ್ಮ ದೇಶದ ಇತರ ಕಡೆಗಳಲ್ಲಿಯೂ ಯಾವ ರೀತಿಯಿಂದಲೂ ಸುಭಿಕ್ಷವಿಲ್ಲ. ನಮ್ಮ ರಾಜ್ಯದೊಳಗೇ ತೆಗೆದುಕೊಂಡರೂ ಹಳೇ ಮೈಸೂರಿನವರು, ಇತರ ಭಾಗಗಳವರು, ಲಿಂಗಾಯಿತರು, ಒಕ್ಕಲಿಗರು, ದಕ್ಷಿಣ ಕನ್ನಡದವರು, ಉತ್ತರ ಕನ್ನಡದವರು, ಕೊಡಗರು ಎನ್ನುವ ತಾರತಮ್ಯವಿದೆ. ಇದೇ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಹೋದರೆ ಬಂಟರು, ಬ್ರಾಹ್ಮಣರು, ಜೈನರು, ಈ ತರಹ ಜಾತಿ ಭೇದಗಳಿದ್ದು ಗಲಭೆಗಳಾಗುತ್ತಿವೆ. ಶ್ರೀಮತಿ ಫರ್ನಾಂಡಿಸ್ ಅವರು ಹೇಳಿದಂತೆ ಕುಂದಾಪುರದಲ್ಲಿ ಒಂದು ರೀತಿಯಾದ ಜಾತೀಯ ಗಲಭೆ ಎದ್ದಿದೆ. ಪ್ರಾಯಶಃ ಇದೂ ಅಧಿಕಾರ ಲಾಲಸೆಯಿಂದ ಆಗುತ್ತಿದೆಯೆಂದು ಕಾಣುತ್ತದೆ. ಕಾಂಗ್ರೆಸ್ ಪಕ್ಷದವರು ಟಿಕೆಟ್ ಕೊಡುವಾಗ ಸಹಿತ ಜಾತೀಯತೆಯ ಪ್ರಶ್ನೆ ತಂದಿದ್ದಾರೆ. ಕಳೆದ ಮಹಾ ಚುನಾವಣೆಯ ಕಾಲದಲ್ಲಿ ಶ್ರೀಮಾನ್ ಟಿ. ಎ. ಪೈ ಅವರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಲಿಲ್ಲ. ಆ ಪಕ್ಷದ ಅಭ್ಯರ್ಥಿ ಅಲ್ಲಿ ಸೋತು ಹೋದರು. ಆ ರೀತಿಯ ವೈಷಮ್ಯವನ್ನು, ಜಾತೀಯತೆಯನ್ನು ಇಟ್ಟುಕೊಳ್ಳುತ್ತಿದ್ದಾರೆ. ಬೊಂಬಾಯಿಯಲ್ಲಿ ನಡೆದಿರುವುದನ್ನು ನೋಡಿದರೆ ಶಿವಸೇನೆ ಎಂದು ಹೆಸರನ್ನಿಟ್ಟುಕೊಂಡು ಒಂದು ಗುಂಪಿನವರು ಕೆಲಸ ಮಾಡುತ್ತಿದ್ದಾರೆಂದು ಹೇಳಬಹುದು. ಶ್ರೀಮಾನ್ ಗೋಪಾಲ ಗೌಡರು ಹೇಳಿದ ಹಾಗೆ ಶ್ರೀ ಜಾರ್ಜ್ ಫರ್ನಾಂಡೀಸ್ ಅವರನ್ನು, ಶ್ರೀ ಕೃಷ್ಣಮೆನನ್ ಅವರನ್ನು ಸೋಲಿಸುವುದಕ್ಕೋಸ್ಕರ ಅಲ್ಲಿರುವ ಅಧಿಕಾರ ಪಕ್ಷದಲ್ಲಿರುವ ಕಾಂಗ್ರೆಸ್ಸಿಗರು ಶಿವಸೇನೆಗೆ ಸಹಾಯ ನೀಡಿದರು. ಅದೇ ರೀತಿಯಲ್ಲಿ ಶ್ರೀ ಚವಾಣ್ ಮತ್ತು ಮುಖ್ಯಮಂತ್ರಿ ವಿ. ಪಿ. ನಾಯಕ್ ಅವರು ಸಹಾಯ ಸಹಕಾರವನ್ನು ನೀಡುತ್ತಿದ್ದಾರೆ. ಇದರಿಂದ ಅಲ್ಲಿ ಗಂಡಾಂತರ ಉಂಟಾಗಿದೆ. ಇದನ್ನು ತಿದ್ದುಪಡಿ ಮಾಡಲಿಕ್ಕೆ ಸಾಧ್ಯವಿಲ್ಲವೇ? ನನ್ನ ಅಭಿಪ್ರಾಯದ ಮಟ್ಟಿಗೆ ಇಂಗ್ಲೆಂಡ್‌ನಲ್ಲಿ ಒಂದು ಹುಡುಗಿ ಕ್ರಿಸ್ಟೀನ್ ಕೀಲರ್ ಸಲುವಾಗಿ ಇಬ್ಬರು ರಾಜಿನಾಮೆ ಕೊಟ್ಟರು. ಶಿವಸೇನೆಯ ಪುಂಡಾಟಕ್ಕೆ ಅಂಥ ಪ್ರಮೇಯ ಬರಲಿಲ್ಲ. ನಾನು ಈ ಮನೆಯಲ್ಲಿ ಹೇಳುವುದೇನೆಂದರೆ ಈ ಮನೆಯಿಂದ ಒಂದು ಸರಿಯಾದ ಠರಾವು ಪಾಸ್ ಮಾಡಿ ಶ್ರೀ ಚವಾಣರು ಮತ್ತು ಅದೇ ರೀತಿ ಮಹಾರಾಷ್ಟ್ರದ ಮುಖ್ಯ ಮಂತ್ರಿ ಶ್ರೀ ನಾಯಕ್ ಇವರಿಬ್ಬರೂ ಶಿವಸೇನೆಯ ಗಲಭೆಯ ಕಾರಣದಿಂದ ರಾಜಿನಾಮೆ ಕೊಡುವ ರೀತಿಯಲ್ಲಿ ಕಾಂಗ್ರೆಸ್ ಪಕ್ಷದವರು ಒತ್ತಾಯ ಮಾಡಬೇಕು. ಹಾಗೆ ಮಾಡದೆ ಇದ್ದರೆ ಇದರಿಂದ ಇನ್ನೂ ಹೆಚ್ಚು ಗಂಡಾಂತರ ದೇಶಕ್ಕೆ ಆಗಬಹುದು. ಬೊಂಬಾಯಿನಲ್ಲಿ ಕನ್ನಡಿಗರಿಗೆ ಯಾವ ರೀತಿಯಿಂದ ಹಾನಿಯುಂಟಾಗಿದೆಯೋ ಅದಕ್ಕೆ ಸರಿಯಾದ ಪರಿಹಾರವನ್ನು ಮಹಾರಾಷ್ಟ್ರ ಸರ್ಕಾರ ಕೊಡಬೇಕು, ಇಲ್ಲದೆ ಇದ್ದರೆ ಕೇಂದ್ರ ಸರ್ಕಾರ ಕೊಡಬೇಕು. ಇವೆರಡೂ ಸರ್ಕಾರಗಳು ಕೊಡದೆ ಇದ್ದರೆ ನಮ್ಮ ಮೈಸೂರು ಸರ್ಕಾರದಿಂದ ಸರಿಯಾದ ಪರಿಹಾರವನ್ನು ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ.

ಪೋಲೀಸ್ ಖಾತೆಯನ್ನು ಆಯಾ ರಾಜ್ಯಗಳವರೇ ಇಟ್ಟುಕೊಳ್ಳುತ್ತಾರೆ. ನಮಗೆ ತಿಳಿದ ಮಟ್ಟಿಗೆ ಮಹಾರಾಷ್ಟ್ರದ ಪೋಲೀಸಿನವರು ಶಿವಸೇನೆಗೆ ಬೆಂಬಲ ಕೊಟ್ಟಿದ್ದಾರೆ; ಸರಿಯಾದ ನ್ಯಾಯ ದೊರಕಿಸಿಕೊಟ್ಟಿಲ್ಲ. ಮೈಸೂರು ರಾಜ್ಯದ ಒಂದು ಭಾಗ ಮಹಾರಾಷ್ಟ್ರಕ್ಕೆ ಹೋಗಬೇಕು ಎನ್ನುವುದು ಶಿವಸೇನೆಯ ಉದ್ದೇಶಗಳಲ್ಲಿ ಒಂದಾಗಿರಬಹುದು. ನಮ್ಮ ಜನತೆ, ಒಂದು ರಾಜ್ಯದ ಜನತೆ ಇನ್ನೊಂದು ರಾಜ್ಯದಲ್ಲಿ ಉಳಿಯಬಾರದು, ಯಾವ ರೀತಿಯ ವ್ಯವಹಾರವನ್ನೂ ನಡೆಸಬಾರದು ಎನ್ನುವ ರೀತಿಯಲ್ಲಿ ಶಿವಸೇನೆ ಪುಂಡಾಟ ಮಾಡಿದೆ. ದ್ರೋಹ ಮಾಡಿದೆ. ನಮ್ಮ ದೇಶದ ಹಿತದೃಷ್ಟಿಯಿಂದ ಭಾಷಾವಾರು ಪ್ರಾಂತ ರಚನೆ ಮಾಡಿದ್ದು ದೊಡ್ಡ ದೋಷವಾಗಿದೆ. ಭಾಷಾವಾರು ಪ್ರಾಂತ ರಚನೆಯಿಂದ ನಮ್ಮಲ್ಲಿ ಅಂತಃಕಲಹ ಹೆಚ್ಚಾಗಿದೆ. ಪೋಲೀಸ್ ಖಾತೆಯನ್ನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳಬೇಕು, ಅವರೇ ಇದನ್ನು ನಡೆಸಬೇಕು. ಪೋಲೀಸ್ ಇಲಾಖೆಯ ಅಧಿಕಾರಿಗಳನ್ನು, ನೌಕರರನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಟ್ರಾನ್ಸ್‌ಫರ್ ಮಾಡಬೇಕು. ಅದಿಲ್ಲದೆ ಈಗಿನ ಪರಿಸ್ಥಿತಿಯಲ್ಲಿ ನಮ್ಮ ಪ್ರಾಂತೀಯ ರಚನೆಯನ್ನು ಪುನರ್ಘಟನೆ ಮಾಡಬೇಕಾಗಿದೆ. ಭಾಷೆಯನ್ನು ಒತ್ತಟ್ಟಿಗೆ ಇಟ್ಟು ಜನರು ಆಡುವ ಭಾಷೆ ಹಿಂದಿ ಇರಲಿ, ಕನ್ನಡ ಇರಲಿ, ತಮಿಳು ಇರಲಿ, ಜನಸಂಖ್ಯೆಗೆ ಅನುಗುಣವಾಗಿ ಇಡೀ ದೇಶದಾದ್ಯಂತ ರಾಜ್ಯಗಳ ಪುನರ್ಘಟನೆಯಾಗಬೇಕು. ಅಲ್ಲದೆ ಪ್ರಾಂತ ಸರ್ಕಾರಗಳೇ ಬೇಡ. ಬರೀ ಒಂದು ಕೇಂದ್ರಸರ್ಕಾರವನ್ನು ಇಟ್ಟುಕೊಂಡು ಒಂದೊಂದು ರಾಜ್ಯಕ್ಕೆ ಒಬ್ಬೊಬ್ಬ ಗವರ್ನರ್ ಅವರನ್ನು ಇಟ್ಟುಕೊಂಡು ಪ್ರಾಂತಗಳ ಆಡಳಿತ ವ್ಯವಹಾರವನ್ನು ಕೇಂದ್ರಸರ್ಕಾರದ ಮೂಲಕ ಒಂದೇ

ಸರ್ಕಾರ ನಡೆಸಬೇಕು. ಅದರಿಂದ ಆರ್ಥಿಕ ಪರಿಸ್ಥಿತಿ ಒಳ್ಳೆಯದಾಗಬಹುದು, ದೇಶದ ಹಿತದೃಷ್ಟಿಯಿಂದ ಒಳ್ಳೆಯದಾಗಬಹುದು. ಆದುದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ ಅವರು ಇಲ್ಲಿ ಹೇಳಿಕೆಯನ್ನು ಕೊಡುವುದರ ಬದಲಿಗೆ ಡೆಲ್ಲಿಗೆ ಹೋಗಿ ಇದರ ಬಗ್ಗೆ ಬೇಕಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇದು ಸೀರಿಯಸ್ ಆದ ವಿಚಾರ. ಶಿವಸೇನೆಯನ್ನು ಮೊದಲು ಬ್ಯಾನ್ ಮಾಡಿಸಬೇಕು. ಇಲ್ಲದೆ ಇದ್ದರೆ ದೇಶಕ್ಕೇ ಗಂಡಾಂತರವಾಗುತ್ತದೆ ಎಂದು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು-1).—ಮಾನ್ಯ ಸಭಾಪತಿಗಳೇ, ದಕ್ಷಿಣ ಕನ್ನಡದ ಕನ್ನಡಿಗರಿಗೆ ಬೊಂಬಾಯಿನಲ್ಲಿ ಆದಂಥ ನಷ್ಟ ಮತ್ತು ಕಷ್ಟ ಇವುಗಳ ಬಗ್ಗೆ ದೇಶದ ಜನತೆಯ ಗಮನವನ್ನು ಸೆಳೆಯುವುದಕ್ಕೆ ಹಾಗೂ ಮಹಾರಾಷ್ಟ್ರ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಗಮನವನ್ನು ಸೆಳೆಯುವುದಕ್ಕೆ ಈವೊತ್ತಿನ ದಿವಸ ಈ ವಿಷಯ ಚರ್ಚೆಯಾಗುವುದು ಸೂಕ್ತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಜನ ಹಲವು ವರ್ಷಗಳಿಂದ ಬೊಂಬಾಯಿನಲ್ಲಿ ನೆಲೆಸಿದ್ದಾರೆ, ಬೊಂಬಾಯಿ ಜೀವನದಲ್ಲಿ ಹಾಸುಹೊಕ್ಕಾಗಿ ಉದ್ಯಮಗಳಲ್ಲಾಗಲಿ, ಡಾಕ್ಟರುಗಳಾಗಿಯಾಗಲೀ, ವಕೀಲರಾಗಿ ಆಗಲೀ, ಅಥವಾ ವ್ಯಾಪಾರಸ್ಥರಾಗಿ ಆಗಲೀ ಅಥವಾ ನಾಲ್ಕನೇ ದರ್ಜೆಯ ಸಿಬ್ಬಂದಿಯಾಗಿ ಆಗಲೀ ಹಲವು ವರ್ಷಗಳಿಂದ ತಮ್ಮ ಸೇವೆಯನ್ನು ಸಲ್ಲಿಸುತ್ತ ಬಂದು ಮಹಾರಾಷ್ಟ್ರದಲ್ಲಿ ಬೊಂಬಾಯಿಗೆ ತುಂಬ ರೀತಿಯ ಸಹಾಯವನ್ನು ಕೊಟ್ಟಿದ್ದಾರೆ. ಮಾನ್ಯ ಭಾಸ್ಕರ ಶೆಟ್ಟರು ಹೇಳಿದಂತೆ ದಕ್ಷಿಣ ಕನ್ನಡ ಜಿಲ್ಲೆಯ 3,60,000 ಜನ ಬೊಂಬಾಯಿನಲ್ಲಿ ನೆಲೆಸಿದ್ದಾರೆ. ನಾಲ್ಕನೇ ದರ್ಜೆ ಸೇವಕರಾಗಿ 16 ಸಾವಿರ ಮಂದಿ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರೂ ಸಹ 8 ಸಾವಿರ ಮಂದಿ ಬೊಂಬಾಯಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಹೋಟೆಲ್ ಮಾಲೀಕರಿದ್ದಾರೆ, ಉದ್ಯಮಗಾರರಿದ್ದಾರೆ. ಇಷ್ಟರ ತನಕ ಬೊಂಬಾಯಿ ಯಾವದೊಂದು ಜಾತ್ಯತೀತ ರಾಷ್ಟ್ರ ಎಂದು ಹೆಸರು ಪಡೆದಿತ್ತೋ ಅದು ಈವೊತ್ತು ಭಯಾನಕವಾದ ರೀತಿಯಿಂದ ಕಳೆದು ಹೋಗಿವೆ. ಜನತೆ ಈವೊತ್ತು ಶಿವಸೇನೆಯ ಮತ್ತು ಮಹಾರಾಷ್ಟ್ರ ಜನತೆಯ ಕ್ರೋಧಕ್ಕೆ ತುತ್ತಾಗಿದೆ. ಇದಕ್ಕೆ ಹಿನ್ನೆಲೆ ಉಂಟು. ಮಹಾರಾಷ್ಟ್ರ ಗೋವಾ ಪ್ರದೇಶವನ್ನು ತನ್ನಲ್ಲಿ ಸೇರಿಸಿಕೊಳ್ಳಬೇಕು ಎಂದು ಇತ್ತು. ಮೈಸೂರಿನವರಿಂದ ಅದು ಆಗಲಿಲ್ಲ ಎಂದು ತನ್ನ ಆಕ್ರೋಶವನ್ನು ತೋರಿಸುವುದರ ಪ್ರತೀಕವಾಗಿ ಕೂಡ ಈವೊತ್ತಿನ ದಿವಸ ಕಾರ್ಯಕ್ರಮಗಳು ನಡೆಯುತ್ತಿವೆ ಎಂದರೆ ತಪ್ಪಾಗಲಾರದು. ಮಹಾರಾಷ್ಟ್ರದವರು ಗೋವ ಪ್ರದೇಶವನ್ನು ಯಾವರೀತಿಯಿಂದ ಸೆಳೆದುಕೊಳ್ಳಬೇಕು, ಗೋವ ಯಾವ ಕಾಲಕ್ಕೂ ಕೂಡ ಮೈಸೂರಿನ ಭಾಗವಾಗಬಾರದು ಎಂಬ ಧ್ಯೇಯವನ್ನಿಟ್ಟುಕೊಂಡು ಇದರ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ನಡೆಸಿದರು. ಈವೊತ್ತು ಕೂಡ ಗಡಿ ವಿವಾದ ಎಂದು ಆ ಪ್ರಶ್ನೆಯನ್ನು ಕೂಡ ಒಂದು ರೀತಿಯಲ್ಲಿ ಎತ್ತಿಕೊಂಡು ದಕ್ಷಿಣ ಕನ್ನಡದವರನ್ನು ಬೊಂಬಾಯಿನಿಂದ ಹೊಡೆದೋಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ವ್ಯಕ್ತವಾಗುತ್ತದೆ.

ಈ ಕೃತ್ಯಗಳು ನಡೆಯುವುದಕ್ಕೆ, ಶಿವಸೇನೆ ದಿನೇ ದಿನೇ ಬೆಳೆಯುವುದಕ್ಕೆ ಕಾರಣವೇನೆಂದರೆ ಕೇಂದ್ರ ಸರ್ಕಾರದವರು ಒಮ್ಮತದಿಂದ ಮಹಾಜನ್ ಕಮಿಷನ್ ವರದಿಯ ಬಗ್ಗೆ ಆದ ತೀರ್ಮಾನವನ್ನು ಜಾರಿಗೆ ಕೊಡದೇ ಇರುವುದೇ ಆಗಿದೆ ಎಂದು ಹೇಳುತ್ತಾ ಇದ್ದೇನೆ. ಮಹಾಜನ್ ರಿಪೋರ್ಟ್ ಕೇಂದ್ರದಲ್ಲಿ ಕಾಣೆಯಾಗಿದೆ ಎಂಬ ಸುದ್ದಿ ಹುಟ್ಟಿದೆ. ಇದು ನಿಜವಾಗಿಯೂ ಕೂಡ ವ್ಯಸನಕರವಾದ ವಿಷಯ. ಏಕೆಂದರೆ ಚವಾನ್‌ರವರು ಡೆಲ್ಲಿಯಲ್ಲಿ ಕೇಂದ್ರದ ಮಂತ್ರಿಮಂಡಲದಲ್ಲಿರುವುದರಿಂದ ಮಹಾಜನ ವರದಿಯನ್ನು ಕಾಣೆ ಮಾಡಿದ್ದಾರೆ ಎಂಬ ಅಪವಾದ ಬಂದಿದೆ. ಆದ್ದರಿಂದ ಚವಾಣ್‌ರವರಿಗೆ ಎಚ್ಚರಿಕೆ ಕೊಡುತ್ತಾ ಇದ್ದೇನೆ. ಆ ಕೆಟ್ಟ ಹೆಸರನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಅವರು ತಮ್ಮ ಮಂತ್ರಿಸ್ಥಾನವನ್ನು ಬಿಟ್ಟು ಹೊರಗೆ ಬರಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಎಲ್ಲಾ ಸದಸ್ಯರು ಕೂಡ ಬೊಂಬಾಯಿನಲ್ಲಿ ನಡೆದಂತಹ ದುಷ್ಕೃತ್ಯದ ಬಗ್ಗೆ ಒಂದೇ ಉಸಿರಿನಿಂದ ಖಂಡಿಸಿದ್ದಾರೆ. ಸ್ವಾಮಿ ಈ ಶಿವಸೇನೆ ಎನ್ನುವುದು ಇದರ ಹುಟ್ಟಿಗೆ ಕಾರಣ ಕಾಂಗ್ರೆಸ್‌ಸಂಸ್ಥೆ, ಕಾಂಗ್ರೆಸ್ ಮುಖಂಡರೇ ಎಂದರೆ ತಪ್ಪಾಗಲಾರದು. 1966ನೇ ಇಸವಿ ನಂತರ 1967ನೇ ಸಾರ್ವತ್ರಿಕ ಚುನಾವಣೆಗೆ ಮುನ್ನ ಇದರ ಹುಟ್ಟು ಕಾಂಗ್ರೆಸ್‌ನಿಂದಲೇ ಆಯಿತು. ಕಾಂಗ್ರೆಸ್‌ನವರು ಇದನ್ನು ರಕ್ಷಿಸಿ, ಪೋಷಿಸಿಕೊಂಡು ಇಲ್ಲಿಯವರೆಗೂ ಬಂದರು. ಆಗ ಇದರ ಉದ್ದೇಶ ಅವರಿಗೆ ಬೇಡವಾದಂತಹ ಕೆಲವು ಜನರನ್ನು ಸೋಲಿಸುವುದು. ಕಾಂಗ್ರೆಸ್‌ನವರ ನಿಂದನೆ ಮಾಡತಕ್ಕ ಕೆಲವು

(ಶ್ರೀ ಕೆ. ಎಚ್. ರೆಂಗನಾಥ್)

ಹಿತಾಸಕ್ತಿಗಳನ್ನು ನಾಶಮಾಡುವುದಕ್ಕೂ ಕೂಡ ಇದನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಪಟ್ಟರು. ಅದರ ಪರಿಣಾಮವಾಗಿ ಇವತ್ತಿನ ದಿವಸ ನಾವು ಅವರಲ್ಲೂ ಹೆಚ್ಚಿನದಾಗಿ ಬಲಿಯಾದಂತಹ ಜನ ಎಂದರೆ ದಕ್ಷಿಣ ಹಿಂದೂಸ್ಥಾನದವರು ಬೊಂಬಾಯಿನಲ್ಲಿ ತಮ್ಮ ಒಂದು ಉಪಜೀವನವನ್ನು ಮಾಡಿಕೊಳ್ಳುವುದಕ್ಕೆ ಹೋಗಿ ಯಾರು ನೆಲೆಸಿದ್ದರೋ ಅವರು ಇದಕ್ಕೆ ಬಲಿಯಾಗಿದ್ದಾರೆ. ಚುನಾವಣೆಯ ಕಾಲದಲ್ಲಿ ಅವರು ಎಷ್ಟೋ ಮನೆಗಳನ್ನು ಸುಟ್ಟರು, ಚವಾಣ್‌ರವರಾಗಲಿ, ಕೇಂದ್ರ ಸರ್ಕಾರದವರಾಗಲಿ, ಕಾಂಗ್ರೆಸ್ ಸಂಸ್ಥೆಯವರಾಗಲಿ ಅವರಿಗೆ ನಿಜವಾಗಿಯೂ ಈ ದೇಶದ ಬಗ್ಗೆ ಕಳಕಳಿಯಿದ್ದರೆ ಆಗಲೇ ಈ ಸಂಸ್ಥೆಯನ್ನು ಬ್ಯಾನ್ ಮಾಡುತ್ತಾ ಇದ್ದರು. ಚವಾಣ್‌ರವರನ್ನು ಸಾರ್ವತ್ರಿಕ ಚುನಾವಣೆಯಾದ ಮೇಲೆ ಹೋಂ ಮಿನಿಸ್ಟರ್ ಆಗಿ ಇಂದಿರಾಗಾಂಧಿಯವರು ತೆಗೆದುಕೊಳ್ಳುತ್ತಾ ಇರಲಿಲ್ಲ. ದುರಾದೃಷ್ಟವಶಾತ್ ಆ ರೀತಿ ಮಾಡದೆ ಈ ಸಂಸ್ಥೆಯನ್ನು ರಕ್ಷಣೆ ಮಾಡಿಕೊಂಡು ಪೋಷಿಸಿಕೊಂಡು ಬಂದು ಅದರ ಒಂದು ಫಲವನ್ನು ಇವತ್ತಿನದಿವಸ ಅನುಭವಿಸಬೇಕಾಗಿದೆ.

ನಮ್ಮ ಕರ್ನಾಟಕ ರಾಜ್ಯದ ಅಣ್ಣತಮ್ಮಂದಿರು, ದಕ್ಷಿಣ ಕನ್ನಡ ಜಿಲ್ಲೆಯವರು ಬೊಂಬಾಯಿನಲ್ಲಿ ಯಾರು ನೆಲೆಸಿದ್ದಾರೋ ಅವರು ಇವತ್ತಿನ ದಿವಸ ಇದರ ಹಾವಳಿಗೆ ಬಲಿಯಾಗತಕ್ಕ ಪರಿಸ್ಥಿತಿ ಬಂದಿದೆ. ಸ್ವಾಮಿ, ರಾಜ್ಯಾಂಗದಲ್ಲಿ 19ನೇ ಆರ್ಟಿಕಲ್ (ಇ) ಪ್ರಕಾರ ಪ್ರತಿಯೊಬ್ಬ ಭಾರತೀಯನೂ ಕೂಡ ಭಾರತ ಭೂಮಿಯಲ್ಲಿ ಎಲ್ಲಿ ಬೇಕಾದರೂ ಕೂಡ ಹೋಗಿ ಸುಖವಾಗಿ ಜೀವನ ಮಾಡಲಿಕ್ಕೆ ಹಕ್ಕು ಇದೆ. ಆ ಹಕ್ಕಿಗೆ ಇವತ್ತಿನ ದಿವಸ ಚ್ಯುತಿ ಬಂದಿದೆ. ಅದಕ್ಕೆ ಹೊಣೆಗಾರರಾಗಿರತಕ್ಕ ಕೇಂದ್ರ ಸರ್ಕಾರವನ್ನು ನಾವು ತೆಗೆದು ಹಾಕಬೇಕು. ಹಾಗೆ ತೆಗೆದು ಹಾಕತಕ್ಕ ಪರಿಸ್ಥಿತಿ ಇವತ್ತು ಕಾಣುತ್ತಾ ಇಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ದೆಹಲಿಯಲ್ಲಿ ಒಂದು ಮಾತನಾಡಿ ಇಲ್ಲ ಬಂದು ಬೆಂಗಳೂರಿನಲ್ಲಿ ಅದನ್ನು ಬ್ಯಾನ್ ಮಾಡಬೇಕು ಎಂದು ಹೇಳುತ್ತಾ ಇದ್ದಾರೆ. ಇವತ್ತಿನ ದಿವಸ ಕಾಂಗ್ರೆಸ್ ಮಹಾಸಂಸ್ಥೆ, ಅಂತಹ ಒಂದು ರಾಷ್ಟ್ರದ ಸಂಸ್ಥೆಯ ಅಧ್ಯಕ್ಷರಾಗಿದ್ದು ಅವರಿಗೆ ಇಂದಿರಾ ಗಾಂಧಿಯವರು ಸರ್ಕಾರವನ್ನು ತೆಗೆದು ಹಾಕತಕ್ಕ ಶಕ್ತಿ ಇದೆ. ಮೈಸೂರು ರಾಜ್ಯದಿಂದ ಹೋಗಿರತಕ್ಕ ಎಂ ಪಿಗಳು ಅವರಿಗೆ ಬೆಂಬಲ ಕೊಡುತ್ತಾ ಇದ್ದಾರೆ ಆದ್ದರಿಂದ ಇಂದಿರಾ ಗಾಂಧಿಯವರು ಇವತ್ತಿನ ದಿವಸ ಕೇಂದ್ರದಲ್ಲಿ ರಾಜ್ಯಭಾರ ಮಾಡುತ್ತಾ ಇದ್ದಾರೆ. ಚವಾಣ್‌ರವರು ಹೋಂ ಮಿನಿಸ್ಟರು ಆಗಿದ್ದಾರೆ. ಸುಲಭವಾಗಿ ದಮನ ಮಾಡತಕ್ಕ ಶಕ್ತಿ ಇರುವಾಗಲೂ ಕೂಡ ಇವತ್ತಿನ ದಿವಸ ರಾಜ್ಯಾಂಗವನ್ನು ಕಡೆಗಣಿಸಿದ್ದಾರೆ, ಇಂತಹ ಪರಿಸ್ಥಿತಿ ಬಂದಿರುವಾಗ ನಾವು ಏಕೆ ಈ ರಾಜ್ಯಾಂಗವನ್ನು ಇಟ್ಟುಕೊಳ್ಳಬೇಕು ? ಇವತ್ತಿನ ದಿವಸ ಅದನ್ನು ಸುಟ್ಟುಹಾಕತಕ್ಕ ಪರಿಸ್ಥಿತಿ ಬಂದಿದೆ. ನಮ್ಮ ರಾಜ್ಯದ ಅಣ್ಣತಮ್ಮಂದಿರು ಬೊಂಬಾಯಿನಲ್ಲಿ ಇರಲಿಕ್ಕೆ ಸಾಧ್ಯವಿಲ್ಲ ಎಂದರೆ, ಸರ್ಕಾರ ರಕ್ಷಣೆ ಕೊಡುವುದಿಲ್ಲ ಎಂದರೆ ಅದನ್ನು ಸುಡಬೇಕು. ಈ ಪರಿಸ್ಥಿತಿಗೆ ಹೊಣೆಯಾರು ? ಕಾಂಗ್ರೆಸ್‌ನವರು ಕಾಂಗ್ರೆಸ್ ಸಂಸ್ಥೆಯವರು, ಕಾಂಗ್ರೆಸ್ ಸರ್ಕಾರ ಮತ್ತು ವೈ. ಬಿ. ಚವಾಣ್‌ರವರು. ಇಂತಹ ಒಂದು ಸಣ್ಣ ಸಂಸ್ಥೆಯಿಂದ ಈ ಅವ್ಯವಸ್ಥೆಗಳು ನಡೆದಾಗ ಇಂದಿರಾ ಗಾಂಧಿಯವರಿಗೆ ಕಾಂಗ್ರೆಸ್‌ನಲ್ಲಿರತಕ್ಕ ಸೋಷಿಯಲ್ ಎಲಿಮೆಂಟ್ಸ್‌ಗೆ ಪ್ರೋತ್ಸಾಹ ಕೊಡುತ್ತಾ ಇರತಕ್ಕ ಚವಾಣ್‌ರವರನ್ನು ತೆಗೆದು ಹಾಕುವುದಕ್ಕೆ ಶಕ್ತಿ ಇರಲಿಲ್ಲವೇ ಎಂದು ಕೇಳುತ್ತೇನೆ. ಈ ರೀತಿ ದ್ವಂದ್ವ ಅಭಿಪ್ರಾಯವನ್ನು ಇಟ್ಟುಕೊಂಡು ಮನಸ್ಸಿನಲ್ಲಿ ಇರುವುದು ಒಂದು, ಮೇಲೆ ಹೇಳುವುದು ಒಂದು ಈ ರೀತಿ ಹೇಳಿಕೆ ಕೊಟ್ಟಾಕ್ಷಣಕ್ಕೆ ಜನಕ್ಕೆ ಸುಖವಾಗುವುದಿಲ್ಲ. ಎಲ್ಲಿಯವರೆಗೆ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿ ಇರುತ್ತದೆ ಅಲ್ಲಿಯವರೆಗೂ ಕೂಡ ಶಿವಸೇನೆ ಇರುತ್ತದೆ. ಎಲ್ಲಿಯವರೆಗೆ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿ ಇರುತ್ತದೆಯೋ ಅಲ್ಲಿಯವರೆಗೂ ಚವಾಣ್‌ರವರು ಇದ್ದೇ ಇರುತ್ತಾರೆ ಮಹಾಜನ್ ವರದಿಯನ್ನು ಜಾರಿಗೆ ಕೊಡುವುದಿಲ್ಲ. ಚವಾಣ್‌ರವರು ಇರುವವರೆಗೂ ಶಿವಸೇನೆಯ ಚಟುವಟಿಕೆಗಳು ಕಡಿಮೆಯಾಗುವುದಿಲ್ಲ. ಆದ್ದರಿಂದ ಈ ಸಭೆಯ ಮುಖಾಂತರ ಕಾಂಗ್ರೆಸ್ ಮುಖಂಡರಿಗೆ ಕೇಳಿಕೊಳ್ಳುವುದು ಇಷ್ಟೇ. ಮೈಸೂರು ರಾಜ್ಯದಿಂದ ಹೋಗಿರತಕ್ಕ ಎಂ ಪಿಗಳು ಯಾರಿದ್ದಾರೆ ಅವರು ತಮ್ಮ ಒಂದು ಬೆಂಬಲವನ್ನು ಕೇಂದ್ರ ಸರ್ಕಾರದವರಿಗೆ ಕೊಡಬಾರದು. ಅವರು ನಿಜವಾಗಿಯೂ ಮೈಸೂರು ರಾಜ್ಯದ ಹಿತೈಷಿಗಳಾಗಿ, ಅವರ ಸಹೋದರರ ಬಗ್ಗೆ ಅವರಿಗೆ ಅನುಕಂಪ ಇರುವುದಾದರೆ ಈ ಕ್ಷಣ ಅವರ ಬೆಂಬಲವನ್ನು ವಾಪಸು ತೆಗೆದುಕೊಳ್ಳಬೇಕು, ಕೇಂದ್ರ ಸರ್ಕಾರವನ್ನು ಕೆಡವಬೇಕು. ಆ ಒಂದು ರೀತಿಯಿಂದ ಮಾಡಿದರೆ ಮಾತ್ರ ಚವಾಣ್‌ರವರ ಈ ದುಷ್ಕೃತ್ಯವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವೇ ಹೊರತು ಸುಮ್ಮನೆ ಕ್ರೊಕಡೈಲ್ ಟೀಯರ್ಸ್‌ನಿಂದ ಯಾವ ವಿಧವಾದ ಪ್ರಯೋಜನವೂ ಕೂಡ ನಮ್ಮ ರಾಜ್ಯದ ಜನಗಳಿಗೆ ತತ್ರಾಪಿ ದಕ್ಷಿಣ ಹಿಂದೂಸ್ಥಾನದ ಜನಗಳಿಗೆ ಆಗುವುದಿಲ್ಲ. ಮಾತ್ರವಲ್ಲ ಇಂತಹ ಅವ್ಯವಸ್ಥೆಗೆ ಕಾರಣರಾಗಿರತಕ್ಕ

ಜನಗಳನ್ನು ಬಲಿ ಹಾಕದೇ ಹೋದರೆ ಮೇಲಿಂದ ಮೇಲೆ ಇಂತಹ ಕಷ್ಟಗಳು ಬರಬಹುದು. ದಕ್ಷಿಣ ಹಿಂದೂಸ್ಥಾನ ಬೇರೆಯಾಗಬೇಕಾಗಿ ಬರಬಹುದೇನೋ ಎಂದು ಯೋಚನೆ ಮಾಡಬೇಕಾದ ಪರಿಸ್ಥಿತಿಯೂ ಕೂಡ ನಾಳೆ ಬರಬಹುದು ಒಂದುವೇಳೆ ಬಂದರೆ ಅದು ವಿಶೇಷವೇನೂ ಅಲ್ಲ. ಅಂತಹ ಒಂದು ಪರಿಸ್ಥಿತಿ ಬರಬಾರದು ಅದನ್ನು ವಿಚಾರ ಮಾಡತಕ್ಕ ಪ್ರಭೃತಿಗಳೂ ಕೂಡ ಈ ರಾಜ್ಯದಲ್ಲಿ, ಭಾರತ ಭೂಮಿಯಲ್ಲಿ, ಹುಟ್ಟಬಹುದು. ಅದಕ್ಕೆ ಅವಕಾಶವಾಗದ ರೀತಿಯಲ್ಲಿ ಸೂಕ್ತ ಕ್ರಮತೆಗೆದು ಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಬೇಕು. ಮುಖ್ಯಮಂತ್ರಿಗಳು ಕಾಗದ ಬರೆಯುವುದು, ಶ್ರೀಮಾನ್ ನಿಜಲಿಂಗಪ್ಪನವರು ಹೇಳಿಕೆ ಕೊಡುವುದು ಇದನ್ನು ಕೈ ಬಿಟ್ಟು ನಿಮಗೆ ನಿಜವಾಗಿಯೂ ಅನುಕಂಪ ಇದ್ದರೆ ಮುಖ್ಯಮಂತ್ರಿಗಳಿಗೆ ಮೊನ್ನೆ ಎರಡು ತಿಂಗಳ ಕೆಳಗೆ ಅಲ್ಲಿನ ಕನ್ನಡಿಗರು ಹಾರತು ರಾಯಿಗಳನ್ನು ಅರ್ಪಿಸಿ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಅವರ ಮೇಲೆ ನಿಮಗೆ ನಿಜವಾದ ಅನುಕಂಪ ಇದ್ದರೆ ಕರುಣೆ ಇದ್ದರೆ, ನಿಷ್ಟೆ. ಇದ್ದರೆ ಸೂಕ್ತ ಕ್ರಮತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಸಭಾಧ್ಯಕ್ಷರೇ, ಇದುವರೆಗೂ ಚರ್ಚೆಯಾಗಿರತಕ್ಕ ವಿಚಾರ ಅಂದರೆ, ಬೊಂಬಾಯಿಯಲ್ಲಿ ನಡೆದಂಥ ಒಂದು ದುಷ್ಕೃತ್ಯದ ಬಗ್ಗೆ ನಾವು ಇಲ್ಲಿ ಚರ್ಚೆಮಾಡುತ್ತಿದ್ದೇವೆ. ಶಿವಸೇನೆ ಹುಟ್ಟಿರತಕ್ಕ ರೀತಿನೀತಿ, ಅದರ ಕಾರ್ಯಚಟುವಟಿಕೆ, ಅದನ್ನು ಹೀಗೆಯೇ ಬೆಳೆಸಿಕೊಂಡು ಹೋದರೆ ಮುಂದೆ ಆಗತಕ್ಕ ಅನಾಹುತ—ಇದೆಲ್ಲವನ್ನೂ ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಇತ್ತೀಚೆಗೆ ನಡೆದಂಥ ದುರ್ಘಟನೆಗಳ ವಿಚಾರ ತಿಳಿಸಿದ್ದಾರೆ. ದಕ್ಷಿಣ ಇಂಡಿಯಾ ಭಾಗದಿಂದ ಹೋಗಿ ಅಲ್ಲಿ ವಾಸಮಾಡುವ, ಹಾಗೂ ಕೆಲಸಮಾಡುವ ಮತ್ತು ವ್ಯಾಪಾರ ವ್ಯವಹಾರದಲ್ಲಿ ತೊಡಗಿರುವ ಜನಗಳಿಗೆ ಈಗ ನಡೆದಂಥ ಘಟನೆಗಳಿಂದ ಹೆಚ್ಚು ನಷ್ಟ ಉಂಟಾಗಿದೆ ಎಂದು ನಮಗೆ ಸ್ಪಷ್ಟವಾಗಿ ಗೊತ್ತಾಗಿದೆ. ಅವರಲ್ಲಿ ಬಹುಭಾಗ ಕನ್ನಡಿಗರು ಇದ್ದಾರೆ. ಕೆಲವು ಭಾಗದವರು ತಮಿಳರು ಇದ್ದಾರೆ, ಕೇರಳದವರೂ ಇದ್ದಾರೆ. ದಕ್ಷಿಣ ಇಂಡಿಯಾ ಭಾಗದ ಜನಗಳು ಈ ನಷ್ಟಕ್ಕೆ, ಕಷ್ಟಕ್ಕೆ ಗುರಿಯಾಗಿರುವವರು. ಶಿವಸೇನೆಯೇ ಇದಕ್ಕೆ ಮುಖ್ಯ ಕಾರಣವಾಗಿದೆ. ಶಿವಸೇನೆಯನ್ನು ಬೆಳೆಸಿರುವವರು ಶ್ರೀಮಾನ್ ಚವಾಣರು, ಶ್ರೀ ಎಸ್. ಕೆ. ಪಾಟೀಲರು, ಮತ್ತು ಕಾಂಗ್ರೆಸ್ಸಿನವರು ಎಂದು ಹೀಗೆ ದೋಷಾರೋಪಣೆಗಳು ಬರುತ್ತಾ ಇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಅವರು ಏನು ಹೇಳುತ್ತಾರೆ ?

ಶ್ರೀ ಡಿ. ದೇವರಾಜ್ ಅರಸ್.—ಅವರು ಹೇಳುವುದು ತಪ್ಪೋ, ಸರಿಯೋ ಎಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ರಾಜಕೀಯದಲ್ಲಿರತಕ್ಕ ಜನಗಳು ಎಲ್ಲರೂ ತಂತಮ್ಮ ಅನುಕೂಲ ಕ್ಕೋಸ್ಕರ ಯಾವ್ಯಾವ ಕಾಲಕ್ಕೆ ಏನೇನು ಬೇಕಾಗಿರುತ್ತದೊ ಅದನ್ನು ಮಾಡುತ್ತಾ ಬಂದಿದ್ದಾರೆ. ಈಗಲೂ ಮಾಡುತ್ತಿದ್ದಾರೆ. ಮುಂದೆಯೂ ಮಾಡುತ್ತಾರೆ. ಅದು ದಾರಿತಪ್ಪಿ ನಡೆದಾಗ ನಾವು ಕೂಗಾಡುತ್ತೇವೆ, ಅವರೂ ಕೂಗಾಡುತ್ತಾರೆ. ಎಲ್ಲಿಯುವರೆಗೆ ಅವರ ಉದ್ದೇಶಕ್ಕೆ ಅನುಕೂಲ ವಾಗುತ್ತದೋ ಅಲ್ಲಿಯವರೆಗೆ ಕಾಂಗ್ರೆಸ್ಸಿನವರೂ ಮಾಡುತ್ತಾರೆ, ಕಾಂಗ್ರೆಸ್ಸೇತರರೂ ಮಾಡುತ್ತಾರೆ. ಅದು ದುರುಪಯೋಗವೋ ಅಥವಾ ಉಪಯೋಗವೋ ಗೊತ್ತಿಲ್ಲ. ಶಿವಸೇನೆಯ ಬಗ್ಗೆ ಪಾರ್ಲಿಮೆಂಟಿನಲ್ಲಿ ನಡೆದಂಥ ಚರ್ಚೆಗಳಿಂದ ಹಾಗೂ ಅಲ್ಲಿನ ಗೃಹಮಂತ್ರಿಗಳ ಉತ್ತರದಿಂದ ಅನೇಕ ವಿಚಾರಗಳು ಗೊತ್ತಾಗುತ್ತಿವೆ. ಕಾಂಗ್ರೆಸ್ಸಿನವರು ಮಾತ್ರ ಈ ಸನ್ನಿವೇಶವನ್ನು ಉಪಯೋಗಿಸಿದ್ದಾರೆ, ಬೇರೆಯವರು ಉಪಯೋಗಿಸಲಿಲ್ಲವೆಂಬ ಪ್ರಶ್ನೆಯಲ್ಲ. ಯಾವ ಪಾರ್ಟಿ ಪ್ರಶ್ನೆಯಲ್ಲ. ಶಿವಸೇನೆಯ ಚಟುವಟಿಕೆಗಳನ್ನು ನಾವು ಅವಲೋಕಿಸುವಾಗ ಬರೀ ಒಂದು ಪಾರ್ಟಿ ಅಥವಾ ವ್ಯಕ್ತಿಗಳ ಬಗ್ಗೆ ನಿಂದನೆ ಮಾಡುವುದು ಸರಿಯಲ್ಲ. ಇದರ ಹಿನ್ನಲೆ ಏನೆಂಬುದನ್ನು ನಾವು ಯೋಚನೆಮಾಡಬೇಕು. ನಮ್ಮ ದೇಶದ ಪರಿಸ್ಥಿತಿಯನ್ನು ತೆಗೆದುಕೊಂಡರೆ, ಮೊಟ್ಟಮೊದ ಲನೆಯದಾಗಿ ಸಿನಿಮಾ ಚಿತ್ರಗಳನ್ನು ತೆಗೆದುಕೊಳ್ಳೋಣ. ಕನ್ನಡದವರು · ತಮಿಳರ ಚಿತ್ರ ಇಲ್ಲಿ ಬರಬಾರದು, ಅದಕ್ಕೆ ಕಲ್ಲು ಹೊಡೆಯುತ್ತೇವೆಂದು ಹೇಳುತ್ತಾರೆ. ತಮಿಳು ದೇಶಕ್ಕೆ ಹೋದರೆ ಕನ್ನಡ ಚಿತ್ರಗಳನ್ನು ಬ್ಯಾನ್ ಮಾಡಬೇಕೆಂದು ಹೇಳುತ್ತಾರೆ. ಕನ್ನಡನಾಡಿನಿಂದ ಸಂಗಿತಗಾರರು ಹೋದರೆ ಅಲ್ಲಿ ಸೇರಿಸಬಾರದು ಎಂಬುದಾಗಿ ಚಳುವಳಿ ನಡೆಯಿತು. ಆಂಧ್ರದಲ್ಲಿ ಹೋದರೆ ತೆಲುಗು ಬಿಟ್ಟು ಇನ್ನಾವುದೂ ಬೇಡ, ಅದರ ಬಗ್ಗೆ ಚಳುವಳಿ ನಡೆಯುತ್ತದೆ. ಶಿವಸೇನೆಯವರು ಹೀಗೆ ಗಲಾಟೆ ಮಾಡಿದರು, ನಮಗೆ ಬಹಳ ನಷ್ಟವಾಯಿತು ಎಂದು ಅವರನ್ನು ಬೈದರೆ ಈ ಶಿವಸೇನೆ ಯನ್ನು ದಮನಮಾಡಿದ ಹಾಗೆ ಆಯಿತು ಎಂದಲ್ಲ. ಅದು ಇನ್ನೊಂದು ರೂಪದಲ್ಲಿ ಬೇರೆ ಹೆಸರಿನಿಂದ ಪ್ರಚೋದಕವಾಗಿ ನಡೆಯುತ್ತಿದೆ. ಕೇರಳಾದಲ್ಲಿ ಗೋಪಾಲಸೇನೆ ಎಂದು ತಯಾರಾಯಿತು. ಆಡಳಿತ ಕುಸಿದುಬೀಳುತ್ತಿದ್ದಾಗ ಲಾ ಅಂಡ್ ಆರ್ಡರ್ ಮೇಂಟನನ್ಸ್ ಅಲ್ಲಿ ಮಾಡಲಿಲ್ಲವೆಂದು

(ಶ್ರೀ ಡಿ. ದೇವರಾಜ ಅರಸ್)

ಕೇಂದ್ರ ಸರ್ಕಾರದ ಮಂತ್ರಿಗಳು ಹೇಳುತ್ತಿದ್ದರು. ಅದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಹಿಂದೆ ಬಂಗಾಳದಲ್ಲಿಯೂ ಗಲಾಟೆಯಾಯಿತು. ಆಗಲೂ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಅದನ್ನು ಕಂಡಮ್ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ 15 ಕೋಟಿ ರೂಪಾಯಿಗಳು ನಷ್ಟವಾಗುವ ರೀತಿಯಲ್ಲಿ ಶಿವಸೇನೆಯ ಕಾರ್ಯಚಟುವಟಿಕೆಗಳು ನಡೆದಿರುತ್ತೆ. ಅದರ ಬಗ್ಗೆ ಯಾರೂ ಬಿರುಸಾಗಿ ಲಾ ಅಂಡ್ ಆರ್ಡರ್ ಮೇಂಟನೆನ್ಸ್ ಅಲ್ಲ ಮಾಡಿಲ್ಲ ಎನ್ನುವ ವಿಚಾರ ಮಾತನಾಡುತ್ತಾ ಇಲ್ಲ. ಕೇರಳಾದಲ್ಲಿ ಗೋಪಾಲ ಸೇನೆ ಸರಿಯಲ್ಲ, ಬಂಗಾಳದಲ್ಲಿ ಕಾರ್ಮಿಕರ ಚಟುವಟಿಕೆಗಳು ಸರಿಯಿಲ್ಲ, ಮಹಾರಾಷ್ಟ್ರದಲ್ಲಿ ನಡೆದಂಥ ದುರ್ಘಟನೆಗಳು ಸರಿಯಿಲ್ಲವೆಂದು ಏಕೆ ಹೇಳುತ್ತಾ ಇಲ್ಲ? ಅದು ಆಲೋಚನೆಮಾಡುವ ವಿಚಾರ. ಮತ್ತೆ ಚವಾಣರು ಧೈರ್ಯದಿಂದ ಕೆಲಸಮಾಡಿಲ್ಲ ಆದುದರಿಂದ ಅವರು ರಾಜೀನಾಮೆ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ಮೈಸೂರಿನ ಮಂತ್ರಿಗಳು ರಾಜೀನಾಮೆ ಕೊಟ್ಟರೆ ಅಥವಾ ಚವಾಣರು ರಾಜೀನಾಮೆ ಕೊಟ್ಟರೆ ಇದು ಸರಿಹೋಗುವುದಿಲ್ಲ. ಚವಾಣರು ರಾಜೀನಾಮೆ ಕೊಟ್ಟರೆ ಇನ್ನೊಬ್ಬರು ಗೃಹ ಮಂತ್ರಿಗಳಾಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಚವಾಣರು ಮಹಾರಾಷ್ಟ್ರದವರು. ತಾಯಿಗೆ ಮಗನ ಮೇಲೆ ಪ್ರೀತಿ ಇರುವ ಹಾಗೆ ಅವರಿಗೆ ಆ ರಾಜ್ಯದ ಮೇಲೆ ಪ್ರೀತಿ ಇದೆ.

ಶ್ರೀ ಡಿ. ದೇವರಾಜ ಅರಸ್.—ಯಾರೋ ಒಬ್ಬರು ರಾಜೀನಾಮೆ ಕೊಡುವುದರಿಂದ ಇದು ಸರಿಹೋಗುವುದಿಲ್ಲ. ಚವಾಣರೊಬ್ಬರನ್ನು ಬೈಯ್ಯುವುದರಿಂದ ಈ ಸಮಸ್ಯೆಗಳು ಬಗೆಹರಿಯುವುದಿಲ್ಲ. ಬಹಳಮಟ್ಟಿಗೆ ರಾಜ್ಯಸರ್ಕಾರಗಳೇ ಆಗಲೀ, ಕೇಂದ್ರ ಸರ್ಕಾರವೇ ಆಗಲೀ ನಮ್ಮ ಜವಾಬ್ದಾರಿಯನ್ನು ತಪ್ಪಿಸುವುದಕ್ಕೋಸ್ಕರವಾಗಿ ಹೀಗೆ ಇನ್ನೊಬ್ಬರನ್ನು ದೂರಿ, ಯಾವ ಒಂದು ಸಮಸ್ಯೆ ಕಠಿಣವಾಗಿ ಕಾಣುತ್ತದೋ ಅದನ್ನು ಮುಂದೂಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಈ ಮೈಸೂರು ಮತ್ತು ಮಹಾರಾಷ್ಟ್ರ ಗಡಿ ವಿವಾದ 1956–57ನೇ ಇಸವಿಯಿಂದ ಹಾಗೆಯೇ ಇದೆ. ಮಹಾಜನ್ ಕಮಿಷನ್ನನ್ನು ನೇಮಕ ಮಾಡಿದರು ಆ ಸಮಯದಲ್ಲಿ ಮಹಾಜನ್ ಕಮಿಷನ್ ಕೊಡುವ ವರದಿಯೇ ಫೈನಲ್ ಎಂದು ಮಹಾರಾಷ್ಟ್ರದವರು ಮತ್ತು ನಾವು ಒಪ್ಪಿಕೊಂಡಿದ್ದೆವು. ಆದರೆ ಅವರಿಂದ ಬಂದಮೇಲೆ ಹಾರಾಷ್ಟ್ರದವರು ಅದು ಸರಿಯಾಗಿಲ್ಲವೆಂದು ಹೇಳುತ್ತಿದ್ದಾರೆ, ಮೈಸೂರಿನವರು ಇದು ತಮಗೆ ಅನುಕೂಲವಾಗಿದೆ ಎಂದು ಹೇಳುತ್ತಿದ್ದಾರೆ. ಕೇರಳದವರು ಕಾಸರಗೋಡು ತಮಗೆ ಸೇರಿದೆ ಯೆಂದು ಹೇಳುತ್ತಿದ್ದಾರೆ. ಈ ವರದಿ ಬಂದು ಈಗಾಗಲೇ ಒಂದು ವರ್ಷದ ಮೇಲೆಯೇ ಆಯಿತು. ಇದುವರೆಗೂ ಏನಾದರೂ ತೀರ್ಮಾನ ತೆಗೆದುಕೊಂಡಿದ್ದಾರೆಯೇ ಅಂದರೆ, ಅದರ ಬಗ್ಗೆ ಯಾವ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ನಿನ್ನೆತಾನೇ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಆ ವರದಿಯನ್ನು ನೇರವಾಗಿ ಒಪ್ಪುತ್ತೇವೆಂದು ಹೇಳಲಿಲ್ಲ. ಮೂರು ರಾಜ್ಯಗಳ ಸರ್ಕಾರದವರು ಸೇರಿ ಇದನ್ನು ಕೂಲಂಕಷವಾಗಿ ಚರ್ಚೆಮಾಡಿ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆಂದು ಹೇಳುತ್ತಿದ್ದಾರೆಯೇ ಹೊರತು ಕೇಂದ್ರ ಸರ್ಕಾರದಲ್ಲಿ ಇದರ ಬಗ್ಗೆ ಅಂತ್ಯವಾಗಿ ಏನಾದರೂ ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾ ಇಲ್ಲ. ಏಕೆಂದರೆ ರಾಜಕೀಯದಲ್ಲಿ ನಮ್ಮ ನಮ್ಮ ಸ್ಥಾನ ಉಳಿಯಬೇಕಾದರೆ ಏನು ಮಾಡಬೇಕೆಂಬುದು ನಮ್ಮ ತಲೆಯಲ್ಲಿದೆಯೇ ಹೊರತು ರಾಷ್ಟ್ರದ ಹಿತದೃಷ್ಟಿಯಿಂದ ಇದನ್ನು ಇತ್ಯರ್ಥಮಾಡಬೇಕಾದರೆ ಕೇಂದ್ರ ಸರ್ಕಾರದವರು ಈ ಜವಾಬ್ದಾರಿ ಹೊರುವುದಕ್ಕೆ ಸಿದ್ಧರಾಗಬೇಕು. ಅದನ್ನು ಬಿಟ್ಟು ಬೇರೆ ಪಕ್ಷದವರಿಗೆ ಇದನ್ನು ಇತ್ಯರ್ಥಮಾಡುವುದರಲ್ಲಿ ಸಹಕಾರ ಕೊಡಿ ಎಂದು ಕೇಳುವುದರಿಂದ ಈ ಸಮಸ್ಯೆಯನ್ನು ಬಗೆ ಹರಿಸುವುದಕ್ಕಾಗುವುದಿಲ್ಲ. ಆದರೆ ಬೇರೆ ಪಕ್ಷದವರಿಗೂ ಈ ಕಾಂಗ್ರೆಸ್ ಸರ್ಕಾರಕ್ಕೆ ಈ ಬಗ್ಗೆ ಸಹಕಾರ ಕೊಡಬೇಕೆಂಬ ಮನೋಭಾವನೆ ಏತಕ್ಕೆ ಬರಲಿಲ್ಲವೆಂದು ನಾನು ಕೇಳುತ್ತೇನೆ. ಈ ಸಭೆಯ ಮುಖಾಂತರ ಕೇಂದ್ರ ಸರ್ಕಾರದಲ್ಲಿ ನಾನು ಮನವಿ ಮಾಡುವುದು ಇಷ್ಟೇ. ಕೇಂದ್ರ ಸರ್ಕಾರದವರು ಇದರ ಬಗ್ಗೆ ಧೈರ್ಯಮಾಡಬೇಕು. ಶಿವಸೇನೆ ಎನ್ನುವುದು ಏನು, ಎಂಬುದನ್ನು ತಿಳಿಯಬೇಕು. ಏಕೆಂದರೆ, ಬೇರೆಬೇರೆ ರಾಜ್ಯಗಳಲ್ಲಿ ಬೇರೆಬೇರೆ ಹೆಸರಿನಿಂದ ಕೆಲವು ಆರ್ಗನೈಜೇಷನ್ಸ್ ಇವೆ. ಅವನ್ನು ಬ್ಯಾನ್ ಮಾಡಬೇಕು. ಕಮ್ಯೂನಲ್ ಆರ್ಗನೈಜೇಷನ್ಸನ್ನು ಬ್ಯಾನ್ ಮಾಡುವುದಕ್ಕೆ ಧೈರ್ಯಮಾಡಬೇಕು. ಕೇಂದ್ರ ಸರ್ಕಾರವೇ ಈ ತೀರ್ಮಾನ ತೆಗೆದುಕೊಳ್ಳಬೇಕು. ನಾವು ಬೇರೆಯವರನ್ನು ಕರೆದು, ನೀವು ಹೋಗಿ ಸಹಾಯಮಾಡಿ ಎಂಬುದಾಗಿ ಹೇಳಿದರೆ, ಆ ಸಹಾಯದಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರ ನೇರವಾಗಿ ಇಂತಹ ಸಣ್ಣ ಸಣ್ಣ ಸಂಸ್ಥೆಗಳನ್ನು ಒಂದುಕಡೆಯಿಂದ ಬ್ಯಾನ್ ಮಾಡಬೇಕು.

1–30 P. M.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಕೇಂದ್ರ ಸರ್ಕಾರದವರು ಅಸಮರ್ಥರಾಗಿದ್ದಾರೆ ಎಂದು ಸ್ಪಷ್ಟವಾಗಿ ಕಾಣುತ್ತದೆ. ಅದಕ್ಕೆ ಇಲ್ಲಿಂದ ಒಂದು ನಿರ್ಣಯ ಮಾಡಿ "ನೀವು ಅಸಮರ್ಥರಾಗಿದ್ದೀರಿ, ರಾಜಿನಾಮೆ ಕೊಡಿ" ಎಂದು ಸರ್ವಾನುಮತದಿಂದ ಕಳಿಸಿಕೊಡುವುದಕ್ಕೆ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಆಮೇಲೆ ಕಂಪೆನ್‌ಸೇಶನ್ ಕೊಡುವ ಮಾತೂ ಇದೆ. 15 ಕೋಟಿ ರೂಪಾಯಿವರೆಗೂ ನಷ್ಟವಾಗಿದೆ, ಅದರಲ್ಲೂ ಬಹುತೇಕ ಕನ್ನಡಿಗರಿಗೆ ನಷ್ಟ ಅಪಾರವಾಗಿದೆ ಎಂದು ಹೇಳುತ್ತಿದ್ದಾರೆ. ಅದು ಸ್ವಲ್ಪ ಜಾಸ್ತಿ ಇರಬಹುದು, ಅಥವಾ ಸ್ವಲ್ಪ ಕಡಿಮೆ ಇರಬಹುದು. ಆ ಹಣವನ್ನು ಕೊಡಬೇಕು. ಯಾರು ಕೊಡಬೇಕು, ಹೇಗೆ ಕೊಡಬೇಕೆಂದು ನಮ್ಮ ಸಭೆಯು ನೇರವಾಗಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ, ಈ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಯವರು ಹೆಚ್ಚು ಶ್ರದ್ಧೆ ವಹಿಸಬೇಕು. ನಾವು, ಶಾಸಕರು, ಈ ಠರಾವಿಗೆ ಬೆಂಬಲ ಕೊಡಬೇಕೇ ವಿನಹ ಬೇರೆ ಏನೂ ಮಾಡಲಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯ ಸಂಪೂರ್ಣ ಬೆಂಬಲ ಪಡೆದು, ಕೇಂದ್ರ ಸರ್ಕಾರದಲ್ಲಾಗಲಿ, ಅಥವಾ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಾಗಲಿ, ಶ್ರದ್ಧೆಯಿಂದ ಈ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ, ನಮ್ಮ ಮೈಸೂರು ಸಂಸ್ಥಾನದ, ನಮ್ಮ ಜನತೆಯ ಮನೋಭಾವ ಯಾವ ರೀತಿ ಇದೆ ಎಂಬುದನ್ನು ತಿಳಿಸಿ, ಇದಕ್ಕೆ ಒಂದು ಜುಡಿಶಿಯಲ್ ಇಂಪಾರ್ಶಿಯಲ್ ಎನ್‌ಕ್ವಾಯರಿ ನಡೆಸಿ, ಯಾರು ಯಾರಿಗೆ ಕಾಂಪೆನ್‌ಸೇಷನ್ ಕೊಡಬೇಕೆಂದು ಕಂಡು ಬರುತ್ತದೆ, ಅದನ್ನು ಮಹಾರಾಷ್ಟ್ರ ಸರ್ಕಾರವಾಗಲಿ, ಅಥವಾ ಕೇಂದ್ರ ಸರ್ಕಾರವೇ ಆಗಲಿ, ಕೊಡಿಸಬೇಕು. ಅಂತೂ ಯಾರು ಪರಿಹಾರಕ್ಕೆ ಯೋಗ್ಯರಾಗಿದ್ದಾರೆ, ಯಾರಿಗೆ ನಷ್ಟವಾಗಿದೆ, ಅವರಿಗೆ ಸಂಪೂರ್ಣ ಪರಿಹಾರ ದೊರೆಯುವ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಶ್ರಮ ವಹಿಸಿ, ಅದರ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ; ಮತ್ತು ಅದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ತಿಳಿಸಬಯಸುತ್ತೇನೆ.

ಕೊನೆಯದಾಗಿ, ಈ ಒಂದು ಶಿವಸೇನೆಯ ಒಂದು ಕಾರ್ಯ ಚಟುವಟಿಕೆಗಳು ಅದನ್ನು ಬ್ಯಾನ್ ಮಾಡಿದರೆ ಮುಗಿದುಹೋಗುತ್ತದೆ ಎಂದು ಹೇಳಿದರೆ, ಅದು ಮುಗಿಯುವುದಿಲ್ಲ. ನಮ್ಮ ದೇಶದಲ್ಲಿ ಹಿಂದಿನಿಂದಲೂ, ಈ ಪರಸ್ಪರ ವಿರೋಧ ಇರತಕ್ಕದ್ದು, ಪರಸ್ಪರ ಅಪನಂಬಿಕೆ ಇರತಕ್ಕಂತದ್ದು, ಅದು ಅನೂಚಾನವಾಗಿ ಬೆಳೆದು ಬಂದಿದೆ. ಒಂದೊಂದು ಜಾತಿಯಲ್ಲಿ ಸಾವಿರಾರು ವಿಂಗಡಣೆಗಳು, ಸಾವಿರಾರು ಭಾಷೆಗಳು, ಬೇರೆ ಬೇರೆ ಭಾಷೆಯ ಪ್ರಾಂತ್ಯಗಳು, ಹೀಗೆಲ್ಲಾ ಆಗಿ, ಇದಕ್ಕೆ ಬೆಂಬಲ ಕೊಡುವ ದೃಷ್ಟಿಯಲ್ಲಿ ಪ್ರತ್ಯಕ್ಷವಾಗಲಿ, ಪರೋಕ್ಷವಾಗಲಿ, ರಾಜ್ಯಗಳನ್ನು ಭಾಷೆಯ ಆಧಾರದ ಮೇಲೆ ವಿಂಗಡಣೆ ಮಾಡಿದ್ದಾರೆ. ಹಾಗೆ ಮಾಡುವಾಗ ಯಾವ ದೃಷ್ಟಿಯಿತ್ತು ? ಒಂದು ಭಾಷೆ ಮಾತನಾಡತಕ್ಕ ಜನರು ಒಂದು ರಾಜ್ಯದಲ್ಲಿ ಇದ್ದರೆ, ಬಹಳ ಕ್ಷೇಮಕರವಾಗುತ್ತದೆ ಎಂಬ ಭಾವನೆಯಿಂದ ಮಾಡಿದ್ದಾರೆ. ಅದು ಆಂತರಿಕವಾಗಿ ಇರಲಿಲ್ಲ. ಆಂತರಿಕವಾದ ಭಾವನೆ, ಮಹಾರಾಷ್ಟ್ರದವರಿಗೆ ಮಾತ್ರ ಒಂದೇ ರಾಜ್ಯ ಇದ್ದರೆ, ಬಹಳ ಚೆನ್ನಾಗಿ ಆಗುತ್ತದೆ ಎಂದು ತಿಳಿದುಕೊಂಡಿದ್ದಾರೆ. ಅವರಿಗೆ ಏನಾಗಿದೆ ಎಂದರೆ, ಅವರ ವ್ಯಾಪಾರದಲ್ಲಿ, ಉದ್ಯೋಗಗಳಲ್ಲಿ ಎಲ್ಲಾ ಬೇರೆ ಬೇರೆ ಜನರು ಬಂದು, ದೊಡ್ಡ ಮನುಷ್ಯರಾಗುತ್ತಿದ್ದಾರೆ, ಇದರಿಂದ ಅವರಿಗೆ ಯಾವ ಅವಕಾಶವೂ ಇಲ್ಲ, ಎಂಬ ಚಿಂತೆ ಬಂದು ಈ ರೀತಿ ಗಲಾಟೆ ಮಾಡುತ್ತಿದ್ದಾರೆ. ಅದೇ ರೀತಿ ಇಲ್ಲಿ ತಮಿಳರು, ಕೇರಳದವರು ಬಂದು ದೊಡ್ಡ ದೊಡ್ಡ ಚಿತ್ರಮಂದಿರಗಳನ್ನು, ವ್ಯಾಪಾರವನ್ನೂ ಮಾಡುತ್ತಿದ್ದಾರೆ. ನಮ್ಮ ಕನ್ನಡಿಗರಿಗೆ ಇವೆಲ್ಲಾ ಏಕೆ ಇಲ್ಲ, ನಮಗೆ ಏಕೆ ಅನುಕೂಲವಾಗಬಾರದು, ಎಂಬುದೆಲ್ಲಾ ಈ ಸಂಪಾದನೆ ಮಾಡತಕ್ಕ ಜನರಿಗೆ ಕಾಣುತ್ತಿದೆ. ಈ ಅನುಕೂಲ ಯಾವಾಗ ಆಗುವುದಿಲ್ಲವೋ, ಅದಕ್ಕೆಲ್ಲಾ ಇಂಥ ಶಕ್ತಿಗಳು ಪ್ರಚೋದನೆಯಾಗುತ್ತಿವೆ. ಇಡೀ ದೇಶದಲ್ಲಿ, ಕೂಲಿ ಮಾಡುವವನಿಗೂ, ಹೊಲದಲ್ಲಿ ಕೆಲಸ ಮಾಡುವವನಿಗೂ ಈ ಭಾಷಾವಾರು ಪ್ರಶ್ನೆಯಿಂದ ಯಾವ ಅನುಕೂಲವೂ ಇಲ್ಲ, ಅನಾನುಕೂಲವೂ ಇಲ್ಲ. ಇವತ್ತಿನ ದಿವಸ ಭಾರತ ದೇಶದಲ್ಲಿ ಈ ಸಮಸ್ಯೆಗಳಿಗೆ ಒಂದು ಉತ್ತರವನ್ನು ಕಂಡು ಹಿಡಿಯಬೇಕಾದರೆ, ನಮ್ಮಲ್ಲಿರತಕ್ಕಂತಹ ಈ ಪ್ರಾಂತೀಯತೆಯ ಮನೋಭಾವನೆ ಮಹಾರಾಷ್ಟ್ರದವರಿಗೆ ಇದೆ, ನಮ್ಮಲ್ಲಿ ಇಲ್ಲವೆಂದು ನಾವು ಮಾತನಾಡುತ್ತಾ ಹೋದರೆ, ಇನ್ನೊಂದು ರಾಜ್ಯದಲ್ಲಿ ನಮ್ಮ ಕನ್ನಡಿಗರನ್ನೂ ಅದೇ ರೀತಿ ಕರೆದು ನಾವು ಸಹ ಪೆರೋಕಿಯಲಿಸಂ ಮಾಡುತ್ತಿದ್ದೇವೆಂದು ಮಾತನಾಡಿಕೊಂಡರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲೂ ಕೂಡ ಒಂದು ಮನೋಭಾವ ಯಾವುದೇ ಭಾಷೆಯ ರೀತಿಯಲ್ಲಾಗಲಿ, ಬೇರೆ ರೂಪದಲ್ಲಾಗಲಿ, ಬೆಳೆಯದ ರೀತಿಯಲ್ಲಿ ನೋಡಿಕೊಂಡರೆ, ಆಗ ನಮ್ಮ ಸಮಸ್ಯೆಯು ಬಗೆಹರಿಯುವುದಕ್ಕೆ ಸಾಧ್ಯವಾಗುತ್ತದಲ್ಲದೆ, ತಾತ್ಕಾಲಿಕವಾಗಿ ಶಿವಸೇನೆಯನ್ನು ಬ್ಯಾನ್ ಮಾಡಿ ಖಂಡನೆ ಮಾಡಿದರೆ, ಇದರಿಂದ ಉಂಟಾಗತಕ್ಕ ಅನಾಹುತ ದೇಶದಲ್ಲಿ ನಿಲ್ಲುವುದಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—ಸನ್ಮಾನ್ಯ ಅಧ್ಯಕ್ಷರೇ, ಬೊಂಬಾಯಿ ಮಹಾ ನಗರದಲ್ಲಿ ಇದೇ ತಿಂಗಳ 7ನೇ ತಾರೀಕಿನಿಂದ ಸುಮಾರು 5-6 ದಿವಸಗಳವರೆಗೂ ಏನೊಂದು ಅನಾಹುತ ಉಂಟಾಗಿದೆ, ಅದರ ಬಗ್ಗೆ ಈ ಮನೆಯ ಸದಸ್ಯರು ತೀವ್ರವಾಗಿ ಪ್ರತಿಭಟಿಸಿದ್ದಾರೆ; ಮತ್ತು ವಿಶೇಷವಾದ ಕಳವಳವನ್ನು ವ್ಯಕ್ತ ಮಾಡಿದ್ದಾರೆ. ಅವರ ಧ್ವನಿಯಲ್ಲಿ ನಾನೂ ಧ್ವನಿ ಗೂಡಿಸಿ, ಬೊಂಬಾಯಿಯಲ್ಲಿ ಅದ ಅನಾಹುತ, ಇದು ಕೇವಲ ಮಹಾರಾಷ್ಟ್ರಕ್ಕೆ ಆದ ಅನಾಹುತ ವಲ್ಲ, ಇದು ಇಡೀ ನಮ್ಮ ರಾಷ್ಟ್ರಕ್ಕೆ ಒಂದು ದೊಡ್ಡ ಅನಾಹುತವಾಗಿದೆಯೆಂದು ನಾನು ತಿಳಿದು ಕೊಂಡಿದ್ದೇನೆ. ಈ ಒಂದು ಅನಾಹುತವು 4-5 ದಿವಸಗಳಲ್ಲಿ ಏನಾಯಿತು, ಇವರಿಂದ ನಮ್ಮ ರಾಷ್ಟ್ರದಲ್ಲಿರುವಂತಹ ಎಲ್ಲಾ ನಾಯಕರು, ಪಕ್ಷಗಳು, ಸಂಗಡಗಳು ಎಂಬುದನ್ನೆಲ್ಲಾ ಮರೆತು ನಮ್ಮ ರಾಷ್ಟ್ರದ ಐಕ್ಯತೆ ಕಾಪಾಡಿಕೊಂಡು ಹೋಗುವುದಕ್ಕೆ ಇನ್ನು ನಾವು ಹೇಗೆ ಹೆಜ್ಜೆ ಇಡಬೇಕು ಎನ್ನುವಂತಾದ್ದನ್ನು ವಿಚಾರ ಮಾಡಬೇಕಾದ ಪ್ರಸಂಗ ಬಂದಿದೆ ಎಂದು ನನಗನಿಸುತ್ತದೆ. ಈ ಅನಾಹುತ, ಅಥವಾ ಹತ್ಯಾಕಾಂಡ, ಇವುಗಳ ಬಗ್ಗೆ ಒಂದೊಂದು ಕ್ವಾರ್ಟರ್ಸಿಂದ ಒಂದೊಂದು ರೀತಿಯ ವರದಿ ಬರುತ್ತದೆ. ನಾನು ಈ ಹತ್ಯಾಕಾಂಡ ನಡೆದ ಸಂದರ್ಭದಲ್ಲಿ ಮಹಾರಾಷ್ಟ್ರದ ಮುಖ್ಯ ಮಂತ್ರಿಯವರಿಗೆ, ಅಲ್ಲಿ ಏನು ನಡೆಯುತ್ತಿದೆ, ಏನು ಆಗಿದೆ, ಎಂಬುದನ್ನೆಲ್ಲಾ ತಿಳಿಸಬೇಕೆಂದೂ, ಮತ್ತು ಕರ್ಣಾಟಕದ ಜನತೆಯ ಅಂತಃಕರಣವನ್ನು ಇದು ಕೆರಳಿಸಿದೆ, ಮತ್ತು ಬಹಳ ಅಸಮಾಧಾನ ಜನತೆಯಲ್ಲಿ ಉಂಟಾಗಿದೆ ಎಂದು ಅವರಿಗೆ ಬರೆದಿದ್ದೇನೆ. ಅದಾದ ನಂತರ ಪ್ರಧಾನ ಮಂತ್ರಿಯವರಿಗೂ ಒಂದು ಕಾಗದ ಬರೆದು ಇದರ ಬಗ್ಗೆ ತೀವ್ರವಾದ ಕ್ರಮವನ್ನು ತಾವು ತೆಗೆದುಕೊಳ್ಳಬೇಕು, ಮತ್ತು ಅವರು ಕರ್ಣಾಟಕ ಜನರಾಗಿರಲಿ ಕನ್ನಡಿಗರಾಗಿರಲಿ, ಅಥವಾ ಮರಾಠಿ ಭಾಷೆಯನ್ನಾಡುವವರಾಗಲಿ, ಅಥವಾ ಇತರ ಭಾಷೆಯನ್ನು ಮಾತನಾಡತಕ್ಕ ಯಾವ ಜನರು ಬೊಂಬಾಯಿಯಲ್ಲಿ ಇದ್ದಾರೆ ಅವರ ಆಸ್ತಿಪಾಸ್ತಿಗಳನ್ನು ಮತ್ತು ಜೀವನವನ್ನು ಪೂರ್ತಿಯಾಗಿ ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಸರ್ಕಾರದ್ದಾಗಿದೆ ಎಂದು ಬರೆದಿದ್ದೇನೆ.

ಅದರ ಬಗೆ ತಾವು ಯೋಗ್ಯವಾದ ಧೋರಣೆಯನ್ನು ತಾಳಿ ನಮ್ಮ ದೇಶಕ್ಕೆ ಈ ರೀತಿಯಿಂದ ಎಲ್ಲಾ ಜನತೆಯ ಆಸ್ತಿ ಪಾಸ್ತಿ ಮತ್ತು ಅವರ ಜೀವನವನ್ನು ಕಾಪಾಡಿಕೊಂಡು ಹೋಗುವುದಕ್ಕೆ ಎಲ್ಲಾ ತರಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು, ಆ ರೀತಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಕೊಡಬೇಕು ಎಂದು ನಾನು ಕೇಳಿದ್ದೇನೆ. ಈಗಾಗಲೇ ಈ ಒಂದು ಹತ್ಯಾಕಾಂಡದಲ್ಲಿ ಬಹಳ ಜನ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಯಾರು ಬೇಕಾದಷ್ಟು ಗಳಿಸಿದ್ದರೋ ಅವರು ಇವೊತ್ತು ಬೀದಿ ಭಿಕಾರಿಗಳಾಗಿ ತಿರುಗುತ್ತಿದ್ದಾರೆ. ಅವರಿಗೆ ಸಂಪೂರ್ಣವಾಗಿ ಕಾಂಪೆನ್‌ಸೇಟ್ ಮಾಡಬೇಕು. ಅವರಿಗೆ ಆದಂತಹ ಹಾನಿಯನ್ನು ತುಂಬಿಕೊಡುವಂತಹ ಜವಾಬ್ದಾರಿ ಸರ್ಕಾರದ್ದು ಆಗಿದೆ, ಈ ಜವಾಬ್ದಾರಿಯನ್ನು ನಿರ್ವಹಿಸುವಂತಹ ಯೋಗ್ಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಈಗಾಗಲೇ ನಾನು ಬರೆದಿದ್ದೇನೆ. ಎರಡು ಪತ್ರಗಳಲ್ಲಿ ಒಂದು ಪತ್ರಕ್ಕೆ ಮಾತ್ರ ಅಕ್ನಾಲೆಡ್ಜ್‌ಮೆಂಟ್ ಬಂದಿದೆ. ಅದು ನಿನ್ನೆ ಟಪಾಲ್‌ನಲ್ಲಿ ಮಹಾರಾಷ್ಟ್ರ ಮುಖ್ಯ ಮಂತ್ರಿಗಳಿಂದ ಬಂತು. ಇನ್ನೊಂದು ಪತ್ರಕ್ಕೆ ಜವಾಬು ಬಂದಿಲ್ಲ. ಇಷ್ಟರಲ್ಲೆ ಬರಬಹುದು. ನಾವೆಲ್ಲರೂ ಇವೊತ್ತು ಈ ಸಭೆಯಲ್ಲಿ ವಿಚಾರ ಮಾಡುವಾಗ ನಮ್ಮ ಮುಂದೆ ಅಧಿಕೃತವಾಗಿ ಯಾವ ತರಹ ವರದಿಯೂ ಇಲ್ಲ. 4—5 ದಿವಸಗಳಲ್ಲಿ ಮುಂಬೈನಲ್ಲಿ ಏನಾಯಿತು ಎಂಬುದನ್ನು ಪತ್ರಿಕೆಗಳ ಮುಖಾಂತರ ತಿಳಿದುಕೊಂಡಿದ್ದೇವೆ. ಅಧಿಕೃತವಾದ ವರದಿ ಇದುವರೆಗೂ ಬಂದಿಲ್ಲ. ಅಧಿಕೃತವಾದ ವರದಿ ಬರಲಾರದೆ ಪತ್ರಿಕೆಗಳ ಮುಖಾಂತರ ಎಷ್ಟರಮಟ್ಟಿಗೆ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿದೆಯೋ ಅಷ್ಟರಮಟ್ಟಿಗೆ ತಿಳಿದುಕೊಂಡು ಅದರ ಮೇಲೆ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಒಂದು ವಿಚಾರವನ್ನು ಈ ಸಂದರ್ಭದಲ್ಲಿ ನಾನು ಒತ್ತಿ ಹೇಳಬೇಕಾಗುತ್ತದೆ. ಶ್ರೀಮಾನ್ ಸ್ಟೈನಕ್ ಅವರು ಮಾತನಾಡುತ್ತಾ ಹೇಳುತ್ತಿದ್ದರು ಈ ಒಂದು ಅನಾಹುತಕ್ಕೆ ಶಿವಸೇನೆ ಕಾರಣರಲ್ಲ. ಈ ಅನಾಹುತಕ್ಕೆ ಅಲ್ಲಿರುವಂತಹ ಕನ್ನಡ ಜನರು ಮತ್ತು ಸಮಾಜ ದ್ರೋಹ ಶಕ್ತಿಗಳು ಕಾರಣರು ಎಂದು ಹೇಳಿದ್ದಾರೆ. ನಾನು ಅದನ್ನು ಒಪ್ಪುವುದಕ್ಕಾಗುವುದಿಲ. ಕೇಂದ್ರ ಸರ್ಕಾರದವರೂ ಅದನ್ನು ಒಪ್ಪಿಲ್ಲ. ಯಾರೂ ಒಪ್ಪುವುದಿಲ್ಲ. ನನಗೆ ಗೊತ್ತಿರುವ ಹಾಗೆ ಪತ್ರಿಕೆಗಳಲ್ಲಿ ಏನು ಬಂದಿದೆ ಅದರ ಪ್ರಕಾರ ಅದರ ಪೂರ್ತಿ ಜವಾಬ್ದಾರಿ ಶಿವಸೇನೆಯ ಮೇಲೆ ಇದೆ ಎನ್ನುವುದು ಸ್ಪಷ್ಟವಾಗಿದೆ. ಅದರ ಪೂರ್ತಿ ಜವಾಬ್ದಾರಿ ಶಿವಸೇನೆಯ ಮೇಲೆ ಇದೆ ಎಂಬುದು ಗೊತ್ತಾಗುತ್ತದೆ. ಅದರ ಜವಾಬ್ದಾರಿ ಶಿವಸೇನೆಯ ಮೇಲೆ ಇದೆ ಎಂಬುದನ್ನು ಕೇಂದ್ರ ಸರ್ಕಾರದವರು ಅರಿತು ಅದಕ್ಕಾಗಿ ಕೇಂದ್ರ ಸರ್ಕಾರದ ಗೃಹಮಂತ್ರಿಗಳು ಇದು ಫ್ಯಾಸಿಸ್ಟ್ ಆರ್ಗನೈಜೇಷನ್ ಇದೆ ಎನ್ನುವ ಮಾತನ್ನು ಅವರು ಸ್ಪಷ್ಟವಾಗಿ ಒಪ್ಪಿಕೊಂಡು ಅಲ್ಲಿ ಒಂದು ಸ್ಟೇಟ್‌ಮೆಂಟನ್ನು ಅವರು ಕೊಟ್ಟಿದ್ದಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಾನು ಕೆಲವು ಪತ್ರಿಕೆಗಳಲ್ಲಿ ನೋಡುತ್ತಿದ್ದೇನೆ, ಅದನ್ನು

ನೋಡಿದರೆ ನನಗೆ ಒಂದು ರೀತಿಯ ಆಶ್ಚರ್ಯವಾಗುತ್ತಿದೆ. ಫೆಬ್ರವರಿ 10ನೇ ತಾರೀಖು ಅನಾಹುತ ಅಥವಾ ಘಟನೆಗಳು ಪ್ರಾರಂಭವಾದುವು. 7ನೇ ತಾರೀಖಿನ ದಿವಸ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಬಂದಿದೆ. ಪೋಲೀಸ್ ಕಮಿಷನರು ಒಂದು ಸ್ಟೇಟ್‌ಮೆಂಟ್ ಹೇಳುತ್ತಾರೆ. ಅದು ಈ ರೀತಿ ಇದೆ :

"The Commissioner of Police, Mr. E. S. Modak, told newsmen in Bombay on Sunday that Mr. Bal Thackeray the Shiv Sena chief, had failed to keep his word that the Shiv Sena demonstration at the time of Mr. Morarji Desai's arrival in the City would be peaceful.

Mr. Modak who was clarifying the understanding reached between the Shiv Sena leader and the Police said a small group of Shiv Sena volunteers was to hand over a memorandum to the Deputy Prime Minister at Mahim and the car was not to be obstructed anywhere else.

But what was witnessed during Mr. Desai's drive into the city proved that the demonstrators had no intention of remaining peaceful. Even as the convoy accompanying the Deputy Prime Minister was passing along the Express Highway, stones were thrown on the vehicles."

ಇದು ನನಗೆ ಒಂದು ತರಹ ಆಶ್ಚರ್ಯವಾಯಿತು. ಬೊಂಬಾಯಿನಲ್ಲಿ ಏನು ನಡೆಯುತ್ತಿದೆ ಎನ್ನುವುದು ಗೊತ್ತಾಯಿತು. ಎಜಿಟೇಷನ್ ಆಗಬೇಕಾದರೆ ಒಂದು ರೀತಿಯ ಅಗ್ರಿಮೆಂಟ್ ಆಗುತ್ತಾ ಇದ್ದರೆ ಬಹುಶಃ ಇದು ಎಲ್ಲಿಗೆ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಇದು ವಿಷಾದಕರವಾದ ವಿಚಾರ. ಪತ್ರಿಕೆಯಿಂದ ನಮಗೆ ಗೊತ್ತಾಗುತ್ತಾ ಇದೆ, ಶಿವಸೇನ ಮತ್ತು ಪೋಲೀಸರ ನಡುವೆ ಈ ರೀತಿ ಅಗ್ರಿಮೆಂಟ್ ಆಗಿದೆ. ಈ ರೀತಿ ಅಗ್ರಿಮೆಂಟ್ ಆಗಲಿಕ್ಕೆ ಹೊರಟರೆ ದೇಶ ಮುಂದೆ ಎಲ್ಲಿಗೆ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ನಿಜವಾಗಿಯೂ ಇದು ಬಹಳ ವಿಷಾದಕರವಾದ ವಿಚಾರ. ಇವೊತ್ತು ಶಿವಸೇನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಶಿವಸೇನೆಯ ನಾಯಕರಾದಂಥ ಶ್ರೀಮಾನ್ ಬಾಳಠಾಕರೆಯವರು ಜೈಲಿನಲ್ಲಿ ಇದ್ದಾಗ ಅವರು ಒಂದು ಸ್ಟೇಟ್‌ಮೆಂಟ್ ಇಷ್ಯೂ ಮಾಡಿದರು. ಆ ಸ್ಟೇಟ್‌ಮೆಂಟ್ ಹೊರಕ್ಕೆ ಬಂತು. ಅದಕ್ಕೆ ಮೊದಲು ಶಿವಸೇನೆಯ ನಾಯಕರಾದ ಬಾಳಠಾಕರೆಯವರನ್ನು ಅರೆಸ್ಟ್ ಮಾಡಿದ ಮಾರುದಿವಸ ಬಹುಶಃ ಬೆಳಗ್ಗೆ ಏಳುವುದರಲ್ಲಿ ಪೋಸ್ಟರುಗಳನ್ನು ಹಚ್ಚಿದರು. ಅದರಲ್ಲಿ ಏನು ಹೇಳುತ್ತಾರೆ, ಎಂದರೆ ಅದು ಟೈಮ್ಸ್ ಆಫ್ ಇಂಡಿಯಾ ಪೇಪರಿನಲ್ಲಿ ಬಂದಿದೆ. ಅದು ಈ ರೀತಿ ಇದೆ :

"Shiva Sena sign boards and posters were seen at some places of the City stating that 'Bombay will contine to burn as long as Balasaheb Thackeray is in prison'."

ಎಲ್ಲಿಯವರೆಗೆ ಬಾಳಠಾಕರೆಯವರು ಜೈಲಿನಲ್ಲಿ ಇರುತ್ತಾರೆಯೋ ಅಲ್ಲಿಯವರೆಗೆ ಬೊಂಬಾಯಿ ನಗರ ಸುಡುತ್ತಾ ಇರುತ್ತದೆ ಎಂದು ಹೇಳಿದ್ದಾರೆ. ಎಂದರೆ ಅವರು ಯಾವರೀತಿ ಆರ್ಗನೈಜ್ ಮಾಡುತ್ತಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಅಲ್ಲಿಂದ ಜೈಲಿನಿಂದ ಅವರದು ಸ್ಟೇಟ್‌ಮೆಂಟ್ ಇಷ್ಯೂ ಆಗುತ್ತದೆ. ಜೈಲಿನಲ್ಲಿ ಅವರಿಗೆ ತುಂಬಾ ಬಲ ಸಿಕ್ಕುತ್ತದೆ.

"Mr. Bal Thackeray Shiva Sena Chief, currently detained in the Yerwada Central prison here, has issued a statement appealing to all 'Shiva Sainiks' to see that peace is restored immediately and that 'at any cost our struggle should not be allowed to be exploited by Communists'."

The Statement was received through the Inspetor-General of Prisons around 1-30 A. M.

(ಶ್ರೀ ವೀರೇಂದ್ರ ಪಾಟೀಲ್)

ಆ ರೀತಿ ಆದಮೇಲೆ ಯಾವರೀತಿ ಅದನ್ನು ಆರ್ಗನೈಜ್ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಬಹುಶಃ ಈ ಒಂದು ಶಿವಸೇನೆಯವರು ಮಾಡುವಂತಹ ಚಟುವಟಿಕೆಗಳು ಒಮ್ಮೆಂದೊಮ್ಮೆಲೇ ಆಗಿಲ್ಲ ಮಾನ್ಯ ಸದಸ್ಯರು ಹೇಳಿದಹಾಗೆ ಶ್ರೀಮಾನ್ ಬಾಳಠಾಕರೆಯವರು ಬೆಳಗಾಮಿಗೆ ಬಂದಿದ್ದಾರೆ. ಅವರು ಅಲ್ಲಿಗೆ ಬಂದಿದ್ದಾಗ ಅಲ್ಲಿ ಅವರು ಒಂದು ಸ್ಟೇಟ್‌ಮೆಂಟ್ ಮಾಡಿದರು. ಕೇಂದ್ರ ಸರ್ಕಾರದಿಂದ ಮೈಸೂರು-ಮಹಾರಾಷ್ಟ್ರ ಗಡಿಯ ವಿವಾದದಬಗ್ಗೆ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಮಹಾರಾಷ್ಟ್ರ ಸರ್ಕಾರ ಆಬಗ್ಗೆ ಏನೂ ಮಾಡುವುದಿಲ್ಲ. ಆದನ್ನು ನನಗೆ ಬಿಟ್ಟರೆ ನಾನು ಮುಂಬೈ ಷಹರದ ಸ್ಟ್ರೀಟ್‌ನಲ್ಲಿ ನಿರ್ಣಯ ಮಾಡಿ ತೋರಿಸುತ್ತೇನೆ ಎಂದು ಛಾಲೆಂಜ್ ಕೊಟ್ಟರು. ಅದಾದ ಮೇಲೆ ಅನೇಕ ಸಲ ಸ್ಟೇಟ್‌ಮೆಂಟ್ ಕೊಟ್ಟು ಎಲ್ಲಿಯವರೆಗೆ ಬೆಳಗಾವ್ ಮಹಾರಾಷ್ಟ್ರಕ್ಕೆ ಸೇರುವುದಿಲ್ಲವೋ ಅಲ್ಲಿಯವರೆಗೆ ಕೇಂದ್ರ ಸರ್ಕಾರದ ಯಾವ ಮಂತ್ರಿಗಳನ್ನೂ ಮುಂಬೈಗೆ ಬರಗೊಡುವುದಿಲ್ಲ ಕಾಂಗ್ರೆಸ್ ಅಧ್ಯಕ್ಷರನ್ನೂ ಬರಗೊಡುವುದಿಲ್ಲ. ಮೈಸೂರಿನ ಮುಖ್ಯಮಂತ್ರಿಗಳನ್ನೂ ಬರಗೊಡುವುದಿಲ್ಲ ಎಂದು ಹೇಳಿದ್ದಾರೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅನೇಕಡೆ ಕೆಲವು ಜನ ಇದನ್ನು ವಿಚಾರ ಮಾಡಿದ್ದಾರೆ. ಪಾರ್ಲಿಮೆಂಟಿನಲ್ಲೂ ಕೆಲವು ಸದಸ್ಯರು ಇದನ್ನು ವ್ಯಕ್ತ ಮಾಡಿದ್ದಾರೆ. ಇದು ಒಮ್ಮೆಂದೊಮ್ಮೆಲೇ ಆಗುವುದು ಅಲ್ಲ. ವಸ್ತುತಹ ಬಂದಿದೆ. ಟ್ರಬಲ್ ವಾಜ್ ಇನ್ ದಿ ಬ್ರೂವಿಂಗ್ ಆದರೆ ಇವೊತ್ತು ನಾನು ಇಲ್ಲಿ ನಿಂತು ಮಹಾರಾಷ್ಟ್ರದಲ್ಲಿ ಯಾರಿಗೆ ಏನಾಗಿದೆ ಎಂಬುದನ್ನು ಹೇಳುವುದು ಕಷ್ಟವಾಗುತ್ತದೆ. ಮಹಾರಾಷ್ಟ್ರದಲ್ಲಿ ಒಂದು ಸರ್ಕಾರ ಸಮಸ್ತರಿಗೂ ಇವೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೇ ಎನ್ನುವುದು ಎಲ್ಲರೂ ವಿಚಾರ ಮಾಡಬೇಕಾದ್ದು. ಆದರೆ ಕೆಲವು ಸದಸ್ಯರು ಏನು ಹೇಳುತ್ತಾರೆ ಎಂದರೆ ಎರಡುದಿವಸ ಮೊದಲು ಇದರ ಬಗ್ಗೆ ಜಾಗ್ರತರಾಗಿದ್ದರೆ ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ ಎಂದು. ಇದು ಅಭಿಪ್ರಾಯದ ಮಾತು. ಇದರ ಬಗ್ಗೆ ನಾನು ಯಾವ ಅಭಿಪ್ರಾಯವನ್ನೂ ನೀಡುವುದಕ್ಕೆ ಇಷ್ಟಪಡುವುದಿಲ್ಲ. ಇದು ಈ ರೀತಿಯ ಒಂದು ಅನಾಹುತವಾಗುವುದಕ್ಕೆ ಶಿವಸೇನೆಯೇ ಕಾರಣ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರಲ್ಲಿ ಯಾವ ತರಹ ವ್ಯತ್ಯಾಸವೂ ಇಲ್ಲ. ಈ ಸೇನೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಧಾನಿಯವರಿಗೆ ಬರೆದು ನನ್ನ ಮತವನ್ನು ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದೇನೆ, ಹೇಳಿದ್ದೇನೆ. ಈ ತರಹ ಶಿವಸೇನೆಗೆ ಬ್ಯಾನ್ ಮಾಡಲಾರದೆ ನಿಂತುದಕ್ಕಾಗಿ, ಇಲ್ಲಿಯವರೆಗೂ ಬ್ಯಾನ್ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಲಾರದೆ ಇದ್ದುದಕ್ಕಾಗಿ ಈ ತರಹ ಅನಾಹುತವಾಗುತ್ತದೆ ಎಂದು ಹೇಳಿದ್ದೇನೆ. ಅದರ ಅರ್ಥ ನನ್ನ ಅಭಿಪ್ರಾಯದಲ್ಲಿ ಈ ತರಹ ಸೇನೆಗಳು ನಮ್ಮ ರಾಷ್ಟ್ರದಲ್ಲಿ ಇರಬಾರದು, ರಾಷ್ಟ್ರದ ಐಕ್ಯತೆಗೆ ಧಕ್ಕೆ ತರತಕ್ಕ ಸೇನೆಗಳು ಗೋಪಾಲ ಸೇನೆಯಾಗಲೀ, ಲಚಿತ್ ಸೇನೆಯಾಗಲೀ ಭೀಮಸೇನೆಯಾಗಲೀ ಇರಬಾರದು. ನಮ್ಮ ಒಂದು ರಾಷ್ಟ್ರಕ್ಕೆ ಒಂದು ಸೇನೆ ಇರಬೇಕೇ ಹೊರತು ಆ ರೀತಿಯಾದ ಸೇನೆಗಳು ಇರುವುದು ಸಾಧ್ಯವಿಲ್ಲ. ಅದು ನಾಡಿನ ಆರ್ಮಿ. ಅದು ಒಂದು ಮಾತ್ರ ಇರಬೇಕು. ಉಳಿದ ಯಾವುದೇ ಸೇನೆಗಳು ಇರಬಾರದೆಂಬುದನ್ನು ನನ್ನ ಸ್ಪಷ್ಟವಾದ ಅಭಿಪ್ರಾಯ. ಶಿವಸೇನೆಯ ವಿಚಾರದಲ್ಲಿ ಪಾರ್ಲಿಮೆಂಟ್‌ನಲ್ಲಿ ಏನೇನು ವಿಚಾರಗಳು ಬಂದಿವೆ ಎಂಬುದನ್ನು ನಾವು ನೋಡಿದ್ದೇವೆ. ಈ ತರಹ ಸೇನೆಗಳು ಹುಟ್ಟಿಕೊಂಡು ದೇಶದ ಶಾಂತಿಗೆ ಭಂಗ ಉಂಟುಮಾಡಿದಾಗ, ಇಂತಹ ಸೇನೆಗಳಿಂದ ಮತ್ತೆ ದೇಶದಲ್ಲಿ ಅಶಾಂತಿ ಉಂಟಾಗದಂತೆ ಬ್ಯಾನ್ ಮಾಡಬೇಕು. ಈ ರೀತಿ ಬ್ಯಾನ್‌ಮಾಡುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಇಂತಹ ಸಂಸ್ಥೆಗಳನ್ನು ನಿಷೇಧಮಾಡಲು ಕಾನ್ಸಿಟಿಟ್ಯೂಷನ್‌ನ್ನನ್ನು ಮಾರ್ಪಾಟು ಮಾಡುವ ಸಂದರ್ಭ ಬಂದರೆ ಎಲ್ಲಾ ಪಾರ್ಟಿಯ ಮುಖಂಡರುಗಳು ಒಂದೆಡೆ ಸೇರಿ ತೀರ್ಮಾನ ತೆಗೆದುಕೊಂಡು, ಮುಂದೆ ಇಂತಹ ಸಂಸ್ಥೆಗಳು ಹುಟ್ಟದಂತೆ ನೋಡಿಕೊಳ್ಳಬೇಕೆಂದು ಕಳಕಳಿಯಿಂದ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈಗ ನಾನು ಹೇಳಿದಂತೆ ಮೊನ್ನೆ ನಡೆದ ಚಳುವಳಿಯ ಬಗ್ಗೆ ನನ್ನ ಹತ್ತಿರ ಅಧಿಕೃತವಾಗಿ ಯಾವ ವರದಿಯೂ ಇಲ್ಲ. ಲೋಕಸಭೆಯಲ್ಲಿ ಕಾಲಿಂಗ್ ಅಟೆಂನ್‌ಷನ್ ಮೋಷನ್ ಬಂದಾಗ ಅಲ್ಲಿಯ ಗೃಹಮಂತ್ರಿಗಳು ಉತ್ತರವಾಗಿ ಒಂದು ಸ್ಟೇಟ್‌ಮೆಂಟ್ ಮಾಡಿ ಕೊಟ್ಟಿದ್ದಾರೆ. ಅದರಿಂದ ನಾನು ಕೆಲವು ಅಂಕಿಅಂಶಗಳನ್ನು ಶೇಖರಿಸಿದ್ದೇನೆ. ಅವರ ಹೇಳಿಕೆಯ ಪ್ರಕಾರ ಈ ಅನಾಹುತದಲ್ಲಿ 52 ಜನ ಸತ್ತಿದ್ದಾರೆ, 127 ಜನರಿಗೆ ಗಾಯಗಳಾಗಿವೆ. ಖಾಸಗಿಯವರ ಆಸ್ತಿಪಾಸ್ತಿಗಳಿಗೆ ಬೇಕಾದಷ್ಟು ಹಾನಿಯಾಗಿದೆ, ಕೇಂದ್ರ ಸರ್ಕಾರದ ಆಸ್ತಿಪಾಸ್ತಿಗೆ, ಆ ರಾಜ್ಯಸರ್ಕಾರದ ಆಸ್ತಿಪಾಸ್ತಿಗೆ. ಅಲ್ಲಿಯ ಕಾರ್ಪೊರೇಷನ್ ಆಸ್ತಿಪಾಸ್ತಿಗೆ ರೈಲ್ವೆಯ ಆಸ್ತಿಪಾಸ್ತಿಗೆ ಬೇಕಾದಷ್ಟು ಅನಾಹುತ ಸಂಭವಿಸಿದೆ ಎಂಬುದನ್ನು ಹೇಳಿದ್ದಾರೆ. ಇದರ ಜೊತೆಗೆ 19 ಪೋಲೀಸ್ ಚೌಕಿಗಳು, 103 ಮಿಲ್ಕ್ ಬೂತ್‌ಗಳು, 20 ಬೆಸ್ಟ್‌ಸಂಸ್ಥೆಯ ಬಸ್‌ಗಳನ್ನು ಸುಟ್ಟುಹಾಕಲಾಗಿದೆ. 63 ಹೋಟೆಲ್‌ಗಳ ಲೂಟಿ

ಯಾಗಿದೆ. ಇವುಗಳಲ್ಲಿ 43 ಹೋಟೆಲ್‌ಗಳು ದಕ್ಷಿಣಹಿಂದೂಸ್ಥಾನಕ್ಕೆ ಸಂಬಂಧಪಟ್ಟವುಗಳು ಎಂಬುದನ್ನು ಒಪ್ಪಿಕೊಂಡಿದ್ದಾರೆ. 123 ಅಂಗಡಿಗಳು ಲೂಟಿಯಾಗಿವೆ. ಇವುಗಳಲ್ಲಿ 14 ಮಾತ್ರ ದಕ್ಷಿಣ ಹಿಂದೂಸ್ಥಾನಕ್ಕೆ ಸೇರಿದವು ಎಂದು ಹೇಳಿದ್ದಾರೆ. ಅವರು ಕೊಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಎಷ್ಟು ಅನಾಹುತವಾಗಿದೆ ಎಂಬುದು ನಮಗೆ ತಿಳಿದು ಬರುತ್ತದೆ. ಇದಕ್ಕೂ ಹೆಚ್ಚು ಹಾನಿಯಾಗಿದೆ ಎಂದು ಅನಧಿಕೃತವಾಗಿ ನಾವು ಕೇಳುತ್ತಿದ್ದೇವೆ. ಕೆಲವರು 18 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆಯೆಂದು, ಮತ್ತೆ ಕೆಲವರು 22 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆಯೆಂದು ಹೇಳುತ್ತಿದ್ದಾರೆ. ಸರಿಯಾಗಿ ಎಷ್ಟು ಹಾನಿಯಾಗಿದೆ. ಎಂದು ಹೇಳುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ಅನೇಕ ಮಾನ್ಯಸದಸ್ಯರು ಈ ಚಳುವಳಿಯಲ್ಲಿ ನೊಂದಿರುವವರ ಬಗ್ಗೆ ಏನು ಒಂದು ಸಹಾನುಭೂತಿ ಮತ್ತು ದುಃಖವನ್ನು ವ್ಯಕ್ತಪಡಿಸಿದ್ದಾರೆ, ಅದರಂತೆ ನಾನೂ ಕೂಡ ಯಾರು ಯಾರು ಜೀವ ಕಳೆದುಕೊಂಡಿದ್ದಾರೆ, ಆಸ್ತಿಪಾಸ್ತಿ ಕಳೆದುಕೊಂಡಿದ್ದಾರೆ, ಯಾರು ನೊಂದಿದ್ದಾರೆ ಅವರ ಬಗ್ಗೆ ನನ್ನ ಪರವಾಗಿ, ಸರ್ಕಾರದ ಪರವಾಗಿ ಮತ್ತು ಮೈಸೂರು ರಾಜ್ಯದ ಜನತೆಯ ಪರವಾಗಿ ದುಃಖವನ್ನು ಸೂಚನೆ ಮಾಡುತ್ತೇನೆ, ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆದಿದ್ದೇನೆ. ಈ ಚಳುವಳಿಯಲ್ಲಿ ಅಪಾರವಾದ ಹಾನಿಯಾಗಿರುವುದರಿಂದ, ಯಾವ ರೀತಿ ಹಾನಿಯಾಗಿವೆ ಎಂಬುದನ್ನು ತನಿಖೆ ಮಾಡಿಸಬೇಕೆಂದು ಪತ್ರ ಬರೆದಿದ್ದೇನೆ. ಕೇಂದ್ರ ಸರ್ಕಾರದವರು ಪ್ರತ್ಯೇಕವಾಗಿ ತನಿಖೆಯನ್ನು ಮಾಡಿಸಲಿ, ರಾಜ್ಯಸರ್ಕಾರದ ಮುಖಾಂತರ ಮಾಡಿಸಲಿ, ಏನು ಹಾನಿ ಸಂಭವಿಸಿದೆ, ಯಾರು ಯಾರಿಗೆ ತೊಂದರೆಯಾಗಿದೆ ಎಂಬುದನ್ನು ತನಿಖೆಮಾಡಿಸುವುದು ಅವಶ್ಯಕವೆಂದು ಹೇಳಿದ್ದೇನೆ. ಯಾರು ಯಾರಿಗೆ ಹಾನಿ ಸಂಭವಿಸಿದೆ ಅಂತಹವರಿಗೆ ಹಾನಿಯನ್ನು ತುಂಬಿಕೊಡುವುದು ಸರ್ಕಾರದ ಜವಾಬ್ದಾರಿ ಇದೆ. ಅದಕ್ಕಾಗಿ ಪ್ರಯತ್ನ ಮಾಡಬೇಕೆಂದು ಕೇಂದ್ರಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಿದ್ದೇನೆ. ಈ ಒಂದು ಘಟನೆಯಲ್ಲಿ ದಕ್ಷಿಣ ಹಿಂದೂಸ್ಥಾನದ ನಾಲ್ಕು ರಾಜ್ಯಗಳ ಜನರೂ ಸಹ ಹಾನಿಗೊಳಗಾಗಿದ್ದಾರೆ. ಮುಂಬೈ ನಗರದಲ್ಲಿ ಮಹಾರಾಷ್ಟ್ರೀಯರಿಗಿಂತ ನಾನ್-ಮಹಾರಾಷ್ಟ್ರೀಯರೇ ಹೆಚ್ಚು ಇದ್ದಾರೆಂದು ಹೇಳಿದರೆ ತಪ್ಪಾಗಲಾರದು. ಶೇಕಡ 70 ರಷ್ಟು ಹೊರಗಿನ ಜನ ಅಲ್ಲಿ ಇದ್ದಾರೆಂದು ಹೇಳಬಹುದು. ಮುಂಬೈ ನಗರ ಕೇವಲ ಮರಾಠಿಗರಿಗೆ ಸಂಬಂಧಪಟ್ಟಿದ್ದು ಎಂದು ಅಲ್ಲಿನವರು ಹೇಳುತ್ತಿದ್ದಾರೆ. ಮುಂಬೈ ನಗರವನ್ನು ಕಟ್ಟಿಬೆಳೆಸುವುದರಲ್ಲಿ, ಅಭಿವೃದ್ಧಿಪಡಿಸುವಲ್ಲಿ ಇಡೀ ಹಿಂದೂಸ್ಥಾನದ ಎಲ್ಲಾ ಜನರೂ ಸಹಕಾರ ನೀಡಿದ್ದಾರೆ, ಕಾನ್‌ಟ್ರಿಬ್ಯೂಷನ್ ನೀಡಿದ್ದಾರೆ ಎಂದು ನಾನು ತಿಳಿದಿದ್ದೇನೆ. ಮುಂಬೈನಗರದಲ್ಲಿ ಈಗ ಯಾವ ಒಂದು ಘಟನೆ ನಡೆದಿದೆ ಅದರಂತಹ ಹತ್ಯಾಕಾಂಡ, ಹೇಯವಾದ ಕೃತ್ಯ ಮತ್ತೊಂದು ಇಲ್ಲವೆಂದು ನನಗನ್ನಿಸುತ್ತದೆ. ಮುಂಬೈನಗರ ಎಲ್ಲರೂ ಅಭಿಮಾನ ಪಡುವಂತಹ ಒಂದು ನಗರವಾಗಿತ್ತು. ನಾನು ಮೈಸೂರಿನವನಾಗಿರಬಹುದು, ಮುಂಬೈನಲ್ಲಿರುವ ಕನ್ನಡಿಗರ ಹಿತರಕ್ಷಣೆ ಮಾಡುವುದು ಮೈಸೂರು ಸರ್ಕಾರದ ಕರ್ತವ್ಯವಾದರೆ, ಬೆಂಗಳೂರಿನಲ್ಲಿರುವ ಮರಾಠಿಗರ ಹಿತರಕ್ಷಣೆ ಮಾಡುವುದು ಮಹಾರಾಷ್ಟ್ರ ಸರ್ಕಾರದ ಕರ್ತವ್ಯವಾಗುತ್ತದೆ. ಈ ರೀತಿಯಿಂದ ನಡೆದುಕೊಳ್ಳುವುದಾದರೆ ಯಾವ ಒಂದು ದೇಶವೇ ಆಗಲಿ ಅಭಿವೃದ್ಧಿಯಾಗುವುದು ಕಷ್ಟವಾಗುತ್ತದೆ. ಮಹಾರಾಷ್ಟ್ರದ ಜನರು ಬೇರೆ ಬೇರೆ ರಾಜ್ಯಗಳಲ್ಲಿ ಹೋಗಿ ನೆಲೆಸುವುದಕ್ಕೆ ಎಷ್ಟು ಅಧಿಕಾರ ಇದೆಯೋ ಅದೇ ರೀತಿ ಬೇರೆ ಯಾವ ಜಾತಿಯವರೇ ಇರಲಿ, ಯಾವ ಕುಲದವರೇ ಇರಲಿ, ಪ್ರತಿಯೊಬ್ಬರಿಗೂ ಸಹ ಹಿಂದೂಸ್ಥಾನದ ಯಾವ ಭಾಗದಲ್ಲಿ ಬೇಕಾದರೂ ಸಹ ಹೋಗಿ ನೆಲೆಸುವುದಕ್ಕೆ ಕಾನೂನು ಪ್ರಕಾರ ಅಧಿಕಾರ ಇದೆ. ಮಹಾರಾಷ್ಟ್ರದಲ್ಲಿ ನಾನ್-ಮಹಾರಾಷ್ಟ್ರೀಯನರು ಹೋಗಿ ನೆಲಸಬಾರದು ಎಂದು ಹೇಳುವ ವರ್ತನೆ ಖಂಡನೀಯವಾದುದೆಂದು ಹೇಳುತ್ತೇನೆ. ಈ ಶಿವಸೇನೆಯವರು 5 ದಿವಸ ನಡೆಸಿದ ಚಳುವಳಿಯಲ್ಲಿ ಹತ್ಯಾಕಾಂಡವೇ ನಡೆದುಹೋಯಿತು. ಇದರಿಂದ ಮಹಾರಾಷ್ಟ್ರ ಸರ್ಕಾರಕ್ಕೆ ಬಹಳಮಟ್ಟಿಗೆ ಪೆಟ್ಟು ಬಿದ್ದಿದೆ ಎಂದು ತಿಳಿದುಕೊಂಡಿದ್ದೇನೆ. ಮಹಾರಾಷ್ಟ್ರ ಮುಖ್ಯಮಂತ್ರಿಗಳು ಸಹ fair name has been tarnished ಎಂದು ಹೇಳಿದ್ದಾರೆ. ಈ ಚಳುವಳಿಯಿಂದ ನಮ್ಮರಾಜ್ಯಕ್ಕೆ ಧಕ್ಕೆಬಂತು ಎಂದು ಅವರೇ ಒಪ್ಪಿಕೊಂಡಿದ್ದಾರೆ. ಈ ತರಹದ ಚಟುವಟಿಕೆಗಳು ಮುಂದೆ ನಡೆಯದಂತೆ ನೋಡಿಕೊಂಡು ಹೋಗುವ ಜವಾಬ್ದಾರಿ ನಮ್ಮ ದೇಶದ ನಾಯಕರುಗಳಮೇಲೆ ಇದೆಯೆಂದು ಹೇಳುತ್ತೇನೆ. 5 ದಿವಸಗಳಲ್ಲಿ ನಡೆದ ಹತ್ಯಾಕಾಂಡದಲ್ಲಿ ನನಗೆ ತಿಳಿದಮಟ್ಟಿಗೆ ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಬಂಧುಗಳಿಗೆ ಅಪಾರವಾದ ಹಾನಿಯಾಗಿದೆ. ಇವರುಗಳು ಮುಂಬೈನಲ್ಲಿ ಹೋಟೆಲ್‌ಗಳನ್ನು ಇಟ್ಟುಕೊಂಡಿದ್ದರು, ಮತ್ತೆ ಕೆಲವರು ಕೈಗಾರಿಕೆಗಳನ್ನು ನಡೆಸುತ್ತಿದ್ದರು. ಇವರುಗಳ ಮೇಲೆ ಬಹಳಮಟ್ಟಿಗೆ ಅತ್ಯಾಚಾರ ನಡೆದಿದೆ. ಅವರುಗಳು ಬಹಳ ತೊಂದರೆಗೆ ಈಡಾಗಿದ್ದಾರೆಂದು ಕೇಳಿದ್ದೇನೆ. ಮುಂಬೈನಲ್ಲಿ ಇಷ್ಟೆಲ್ಲಾ ಗಲಾಟೆ ನಡೆದಾಗ ನಮ್ಮ ಮೈಸೂರಿನ ಕನ್ನಡಿಗರು ಬಹಳ ಸಂಯಮದಿಂದ ಶಿಸ್ತಿನಿಂದ ನಡೆದುಕೊಂಡಿದ್ದಾರೆಂದು ಹೇಳುತ್ತಿದ್ದೇನೆ. ಅಲ್ಲಿ ನಡೆದ ಚಳುವಳಿಯಿಂದ ಅಲ್ಲಿನ ರಾಜ್ಯಕ್ಕೆ ಅಲ್ಲಿನ ಜನರಿಗೆ ಆದ ಪೆಟ್ಟೇ ನಮ್ಮ ರಾಜ್ಯ

(ಶ್ರೀ ವೀರೇಂದ್ರ ಪಾಟೀಲ್)

ದಲ್ಲಿ ಚಳುವಳಿಯನ್ನು ನಡೆಸಿದರೆ ನಮಗೂ ಆಗಬಹುದೆಂದು ತಿಳಿದುಕೊಂಡು ನಮ್ಮವರು ಸಂಯಮ ದಿಂದ ಮತ್ತು ಶಿಸ್ತಿನಿಂದ ನಡೆದುಕೊಂಡಿದ್ದಾರೆ. ಕೆಲವು ದುಷ್ಟಶಕ್ತಿಗಳು ಬೆಳಗಾಂನಲ್ಲಿಯೂ ಸಹ ಗಲಾಟೆ ಮಾಡಬೇಕೆಂದು ತೀರ್ಮಾನಿಸಿದಾಗ ಅಲ್ಲಿಯ ಜನರು ಸಹಕಾರ ನೀಡಲಿಲ್ಲ. ಯಾವ ರೀತಿಯ ಸಹಕಾರವೂ ಸಿಗದಿದ್ದಾಗ ದುಷ್ಟಶಕ್ತಿಗಳು ಏನೂ ಮಾಡುವುದಕ್ಕಾಗಲಿಲ್ಲ. ಇದಕ್ಕಾಗಿ ಮೈಸೂರಿನ ಜನತೆಯನ್ನು ಅಭಿನಂದಿಸುತ್ತೇನೆ. ಜನರು ಈ ಒಂದು ವಿಷಯದಲ್ಲಿ ಶಿಸ್ತು ಮತ್ತು ಸಂಯಮದಿಂದ ನಡೆದುಕೊಂಡು ಮೈಸೂರು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಈ ರೀತಿ ನಡೆದು ಕೊಂಡರೆ ನಮ್ಮ ಅನೇಕ ಸಮಸ್ಯೆಗಳನ್ನು ಹಗುರವಾಗಿ ನಿವಾರಣೆ ಮಾಡಿಕೊಳ್ಳುವುದಕ್ಕೆ ಸಾಧ್ಯ ವಿದೆ ಎಂದು ತಿಳಿದುಕೊಂಡಿದ್ದೇನೆ. ಕೇಂದ್ರಕ್ಕೆ ಬರೀ ಕಾಗದ ಬರೆದರೆ ಏನಾಗುತ್ತದೆಂದು ಕೆಲವು ಮಾನ್ಯ ಸದಸ್ಯರುಗಳು ಕೇಳುತ್ತಿದ್ದರು. ಈ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಯಾವ ರಾಜ್ಯದಲ್ಲಿ ಆಗಲಿ ಏನಾದರೂ ಅನಾಹುತವಾದರೆ ಅದನ್ನು ತಡೆಗಟ್ಟುವ ಜವಾಬ್ದಾರಿ ಅಲ್ಲಿಯ ಸರ್ಕಾರಕ್ಕೆ ಇರುತ್ತದೆ. ಅಲ್ಲಿಯ ಸರ್ಕಾರ ತಡೆಗಟ್ಟಲಾರದೆ ಹೋದರೆ ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಇದು ಪ್ರತಿಯೊಂದು ರಾಜ್ಯಸರ್ಕಾರಗಳ ಕರ್ತವ್ಯವಾಗಿದೆ. ಅದೇ ರೀತಿ ನಾವು ಮಾಡಿದ್ದೇವೆ. ಈ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೂ ಪ್ರಧಾನ ಮಂತ್ರಿಗಳಿಗೂ ಕಾಗದ ಬರೆದಿದ್ದೇನೆ. ಅದೇ ರೀತಿಯಿಂದ ಮದ್ರಾಸಿನ ಮುಖ್ಯ ಮಂತ್ರಿಗಳು, ಕೇರಳ ಮುಖ್ಯಮಂತ್ರಿಗಳು ಪತ್ರವ್ಯವಹಾರ ನಡೆಸುತ್ತಿದ್ದಾರೆ. ಅಲ್ಲದೆ ಇಲ್ಲಿ ಕೆಲವು ಸ್ನೇಹಿತರು ಹೇಳಿದರು ಕೇಂದ್ರ ಸರಕಾರಕ್ಕೆ ಒತ್ತಾಯಮಾಡಿ ಹೇಳುವ ಧೈರ್ಯ ಇಲ್ಲ ಎನ್ನುವ ಕೆಲವು ಮಾತುಗಳನ್ನು ಇಲ್ಲಿ ಹೇಳಿದರು. ನಾನು ಆಗಲೇ ಹೇಳಿದ ಹಾಗೆ ಮದ್ರಾಸಿನಲ್ಲಿರುವ ಮುಖ್ಯ ಮಂತ್ರಿಗಳು ಕೇಂದ್ರಕ್ಕೆ ಈಗಾಗಲೇ ಇದರ ಬಗ್ಗೆ ತಿಳಿಸಿದ್ದಾರೆ ನಾವೂ ಕೂಡ ಕೇಂದ್ರಕ್ಕೆ ಸರಿಯಾದ ರಕ್ಷಣೆ ಕೊಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದೂ ತಿಳಿಸಿದ್ದೇವೆ.

ಇದರಂತೆ ಕೇರಳದ ಮುಖ್ಯ ಮಂತ್ರಿಗಳಾಗಿರುವ ಶ್ರೀ ಇ. ಎಂ. ಎಸ್. ನಂಬೂದರಿಪಾಡ್ ರವರೂ ಕೂಡ ಕೇಂದ್ರದೊಡನೆ ಪತ್ರ ವ್ಯವಹಾರ ಮಾಡಿ ಯೋಗ್ಯವಾದ ಕಾರ್ಯಕ್ರಮ ತೆಗೆದುಕೊಳ್ಳ ಬೇಕೆಂದು ಒತ್ತಾಯವಾಗಿ ಹೇಳುತ್ತಿದ್ದಾರೆ. ಇದರ ಬಗ್ಗೆ ಏನೇನು ಮಾಡಲು ಸಾಧ್ಯವಿದೆಯೋ ಅದನ್ನೆಲ್ಲಾ ನಮ್ಮ ಸ್ನೇಹಿತರಾದ ಶ್ರೀ ದೇವರಾಜ ಅರಸ್‌ನವರು ಹೇಳಿದ ಹಾಗೆ ಮಾಡುತ್ತಿದ್ದೇವೆ. ಮುಂದೆ ಇಂತಹ ಅನಾಹುತಗಳು ಆಗದಂತೆ ಕೇಂದ್ರ ಸರಕಾರದವರಿಗೂ ಮತ್ತು ಮಹಾರಾಷ್ಟ್ರ ಸರಕಾರದ ಮುಖ್ಯ ಮಂತ್ರಿಗಳಿಗೂ ತಿಳಿಸಲಾಗಿದೆ ಮತ್ತು ಎಷ್ಟು ಸಾಧ್ಯವೊ ಅಷ್ಟನ್ನೂ ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇವೆ. ಇದರ ಬಗ್ಗೆ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬಹುದೋ ಅವನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೇವೆ. ಅಲ್ಲದೆ ಅನಾಹುತಗಳಿಗೆ ಗುರಿಯಾದವರಿಗೆ ಎಷ್ಟು ನಷ್ಟವಾಗಿದೆ ಆ ನಷ್ಟವನ್ನೆಲ್ಲಾ ತುಂಬಲು ಕೇಂದ್ರದವರಿಗೆ ಒತ್ತಾಯಮಾಡಿದ್ದೇವೆ. ಇದನ್ನು ಕೇಂದ್ರ ಸರಕಾರದವರೇ ತುಂಬಲಿ ರಾಜ್ಯ ಸರಕಾರವೇ ತುಂಬಲಿ ಅದರ ಬಗ್ಗೆ ಹೇಳುತ್ತಿಲ್ಲ. ನಷ್ಟಕ್ಕೆ ಒಳಗಾದವರೆಲ್ಲಾ ಭಾರತೀಯರು ಎನ್ನುವ ದೃಷ್ಟಿಯಿಂದ ಯಾರ್ಯಾರು ಈ ಅನಾಹುತಕ್ಕೊಳಗಾಗಿ ನಷ್ಟ ಹೊಂದಿದ್ದಾರೋ ಅವರಿಗೆಲ್ಲಾ ಸಾಕಷ್ಟು ಪರಿಹಾರ ಕೊಡಬೇಕು ಎಂದು ತಿಳಿಸಿದ್ದೇವೆ. ಇಲ್ಲದೆ ಇದ್ದರೆ ಜನತೆಯಲ್ಲಿ ಒಂದು ರೀತಿಯಾದ ಸಂಶಯ ಬರಲು ಕಾರಣವಾಗುತ್ತದೆ. ಎಂದು ನನಗನಿಸುತ್ತದೆ. ಮಹಾರಾಷ್ಟ್ರದಲ್ಲಿರುವವರಿಗೇ ರಕ್ಷಣೆ ಕೊಡಬೇಕು ಇತರರಿಗೆ ಕೊಡ ಕೂಡದು ಎನ್ನುವ ಭಾವನೆ ಬರಕೂಡದು. ಇದಕ್ಕಾಗಿ ಅಲ್ಲಿರುವ ಕನ್ನಡಿಗರ ಸುರಕ್ಷತೆಗಾಗಿ ಹಾಗೂ ಇತರ ಜನತೆಯ ಸುರಕ್ಷತೆಗಾಗಿ ನಾವು ಹೇಳಿದಂತೆ ತಮಿಳುನಾಡಿನ ಮುಖ್ಯ ಮಂತ್ರಿಗಳೂ ಕೇಂದ್ರಕ್ಕೆ ತಿಳಿಸಿದ್ದಾರೆ. ಹೀಗೆ ಒಂದು ರೀತಿಯ ಪ್ರತ್ಯೇಕತೆಯ ಮನೋಭಾವನೆ ನಮ್ಮ ರಾಷ್ಟ್ರ ದಲ್ಲಿ ಬರಲು ಅವಕಾಶ ಕೊಡಬಾರದು ಪ್ರತಿಯೊಬ್ಬರೂ ಅವರು ಯಾವ ಭಾಷೆಯನ್ನೇ ಆಡುತ್ತಿರಲಿ ಅವರು ಎಲ್ಲೇ ಇರಲಿ ಅವರು ಸುರಕ್ಷಿತವಾಗಿರಲು ಭಾರತೀಯರಾಗಿ ಅವರು ಇರಲು ಅವಕಾಶ ಕೊಡಬೇಕು. ಇದರಿಂದ ಭಾರತದ ಐಕ್ಯತೆಗೆ ಅನುಕೂಲವಾಗುತ್ತದೆ. ಹಾಗಿಲ್ಲದೆ ಒಂದು ಭಾಷೆಯವರೇ ಒಂದು ಕಡೆ ಇರಬೇಕು ಎಂದು ಹೇಳಿದರೆ ಅದರಿಂದ ದೇಶದ ಐಕ್ಯತೆಗೆ ಭಂಗ ಬರು ತ್ತದೆ ಕೇವಲ ಬೊಂಬಾಯಿಯವರೇ ಬೊಂಬಾಯಿಯಲ್ಲಿ ಇರಬೇಕು ಎಂದು ಹೇಳುವುದು ಸರಿಯಲ್ಲ. ಆದುದರಿಂದ ನಷ್ಟಕ್ಕೊಳಗಾದವರಿಗೆಲ್ಲಾ ಸೂಕ್ತವಾದ ಪರಿಹಾರವನ್ನು ಕೊಡಬೇಕೆಂದು ಮಾನ್ಯ ಕೇಂದ್ರ ಸಚಿವರ ಗಮನಕ್ಕೆ ತಂದಿದ್ದೇನೆ ಹಾಗೂ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಿಗೂ ತಿಳಿಸಿದ್ದೇನೆ. ಇದೂ ಅಲ್ಲದೆ ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರ ತರಬೇಕಾಗಿದೆ. ನಾನು ಕೆಲವು ವಾರಗಳ ಹಿಂದೆ ಧಾರವಾಡ, ಬೆಳಗಾಂ, ಹುಬ್ಬಳ್ಳಿ, ರಾಯಚೂರು ಹಾಗೂ

ಗುಲ್ಬರ್ಗಾಗಳಲ್ಲಿ ಪ್ರವಾಸ ಮಾಡಿದಾಗ, ಕೆಲವು ಮರಾಠಿ ಹುಡುಗರು ಬೆಳಗಾಂ ಚಳುವಳಿಯಲ್ಲಿ ಭಾಗ ವಹಿಸಿದಂತೆ, ಗುಲಗ್ಬಾರ್ದಲ್ಲೂ ಮಾಡಬೇಕೆಂದು ಕೆಲವು ಹುಡುಗರು ಗುಲ್ಬರ್ಗಾದಲ್ಲಿರುವ ಮಹಾರಾಷ್ಟ್ರ ಮಂಡಳಿಯವರ ಆಫೀಸಿನಲ್ಲಿದ್ದ ಕೆಲವು ಫರ್ನಿಚರುಗಳು ಇತ್ಯಾದಿ ಸಾಮಾನುಗಳನ್ನು ನಷ್ಟಪಡಿಸಿದರು ಎಂದು ನನಗೆ ದೂರು ಬಂತು ಮತ್ತು ನಾನು ಗುಲ್ಬರ್ಗಾಕ್ಕೆ ಹೋದಾಗ ಆ ಮಹಾರಾಷ್ಟ್ರ ಮಂಡಳಿಯವರು ನನ್ನ ಹತ್ತಿರ ಬಂದು ನಮಗೆ ಇಷ್ಟು ಅನಾಹುತವಾಗಿ ನಮ್ಮ ಪುಸ್ತಕ ಬಂಡಾರ ಇತ್ಯಾದಿಗಳಿಗೆ ಬಹಳ ನಷ್ಟವುಂಟಾಗಿದೆ ಎಂದು ಹೇಳಿದ ಕೂಡಲೇ ನಾನು ಅವರಿಗೆ ಸಹಾನುಭೂತಿ ತೋರಿಸಿ, ಅವರ ನಷ್ಟವನ್ನು ನಮ್ಮ ಸರಕಾರ ಪೂರ್ತಿಯಾಗಿ ತುಂಬಿಕೊಡುತ್ತದೆಂದು ಹೇಳಿ ಅಲ್ಲಿನ ಡೆಪ್ಯುಟಿ ಕಮಿಷನವರ ಮೂಲಕ ಪಂಚನಾಮ ನಡೆಸಿ ಅವರಿಗೆ ಎಷ್ಟು ನಷ್ಟವಾಗಿದೆಯೋ ಅದರ ಒಂದು ಪೈಸಾ ಕೂಡ ಕಡಿಮೆಯಾಗದಂತೆ ಅವರಿಗೆ ಕೊಡುವ ಏರ್ಪಾಡು ಮಾಡಿದ್ದೇನೆ. ನಾವು ಐಕ್ಯತಾ ಭಾವನೆಯಿಂದ ಮುಂದುವರಿಯಲು ಅನುಕೂಲವಾಗುತ್ತದೆ ಹಾಗೂ ನಮ್ಮ ಹಿಂದೂಸ್ಥಾನದ ಗೌರವ ಉಳಿಯುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ನಾವು ಮಾಡಬೇಕಾಗಿ ಬಂತು, ಇದಕ್ಕಾಗಿ ನಮ್ಮ ರಾಜ್ಯದಲ್ಲಿ ಅಲ್ಪಸಂಖ್ಯಾತರು ಎಲ್ಲೇ ಇರಲಿ ಅವರಿಗೆ ತೊಂದರೆಯಾಗಲು ಅವಕಾಶ ಕೊಡಬಾರದು. ಹಾಗೆ ಮಾಡದೆ ಕನ್ನಡ ಜನತೆ ಬೇರೆ ಕಡೆ ಇರಕೂಡದು ಎನ್ನುವ ಭಾವನೆ ಬೆಳೆಯುವಂತೆ ಮಾಡಿದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇವೆಲ್ಲ ವಿಚಾರಗಳನ್ನೂ ನಾನು ಆಗಲೇ ಕೇಂದ್ರಕ್ಕೆ ತಿಳಿಸಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇನೆ. ಇದರ ಬಗ್ಗೆ ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಮುಖ್ಯ ಮಂತ್ರಿಗಳು ಗುಲ್ಬರ್ಗಾದಲ್ಲಿ ಮಹಾರಾಷ್ಟ್ರ ಮಂಡಲಿಯವರಿಗೆ ಆದ ನಷ್ಟಕ್ಕೆ ಎಲ್ಲಾ ಪರಿಹಾರ ಕೊಡಲಾಗಿದೆ ಎಂದು ಹೇಳಿದರು. ಈಗ ಕೇಂದ್ರ ಸರ್ಕಾರಕ್ಕೂ ರಾಜ್ಯ ಸರಕಾರಕ್ಕೂ ಮಹಾರಾಷ್ಟ್ರದಲ್ಲಿ ನಷ್ಟಕೊಳಗಾದವರಿಗೆ ಪರಿಹಾರ ಕೊಡಬೇಕೆಂದು ಹೇಳಿದ್ದರೂ ಅವರು ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ ಮತ್ತು ಅವರ ಭರವಸೆಯೂ ಇಲ್ಲ. ಮದ್ರಾಸಿನವರು ಹಾಗೂ ಕೇರಳದವರೂ ಏನು ಮಾಡುತ್ತಾರೋ ಗೊತ್ತಿಲ್ಲ. ನಾನು ತಮ್ಮಲ್ಲಿ ಹೇಳುವುದು ಇಲ್ಲಿ ಬಹುತೇಕ ನಷ್ಟಕ್ಕೊಳಗಾದವರೂ ಕನ್ನಡಿಗರೇ ಹೆಚ್ಚು. ಅದರಲ್ಲೂ ಉಡುಪಿಗೆ ಸೇರಿದ ಜನರೇ ಹೋಟೆಲುಗಳನ್ನು ಕಳೆದುಕೊಂಡು ಬೀದಿ ಭಿಕಾರಿಗಳು ಆಗುವ ಸನ್ನಿವೇಶವುಂಟಾಗಿದೆ. ಇದಕ್ಕಾಗಿ ನಮ್ಮ ವಿಧಾನ ಸಭಾ ಸದಸ್ಯರ ಒಂದು ಕಮಿಷನ್ ಏರ್ಪಾಡು ಮಾಡಿ ಬೊಂಬಾಯಿಗೆ ಹೋಗಿ ಅಲ್ಲಿ ಯಾವ ರೀತಿ ನಷ್ಟಗಳಾಗಿವೆ ಎನ್ನುವುದನ್ನು ಅಸೆಸ್ ಮಾಡಿ ಆನಂತರ ತಕ್ಕ ಕ್ರಮ ತೆಗೆದುಕೊಳ್ಳಲು ಅವಕಾಶ ಮಾಡಿಕೊಡುತ್ತೀರಾ ?

2-00 P.M.

ಶ್ರೀ ವಾಟಾಳ್ ನಾಗರಾಜ್.—ಮುಖ್ಯ ಮಂತ್ರಿಗಳು ಶಿವಸೇನೆಯ ಬಗ್ಗೆ ಅನೇಕ ವಿಚಾರಗಳನ್ನು ಇಲ್ಲಿ ಹೇಳಿದರು. ನಾನು ಈ ದುರಂತ ನಡೆಯುವುದಕ್ಕೆ ಮುಖ್ಯ ಕಾರಣ ಮಹಾಜನ್ ವರದಿ ಕಾರ್ಯಗತ ಮಾಡಿರುವುದೇ ಎಂದು ಹೇಳಿದ್ದೇ ಮತ್ತು ನಮ್ಮ ಸರಕಾರದ ಸ್ಪಷ್ಟ ನಿಲುವೇನು ಎಂತಲೂ ಕೇಳಿದ್ದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲಿ ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್.—ಶಿವಸೇನೆಯಂತಹ ಗಲಭೆಗಳಿಂದ ಅನೇಕ ಜನರ ಆಸ್ತಿಪಾಸ್ತಿಗಳಿಗೆ ಬಹಳ ನಷ್ಟವಾಗಿರುವುದರಿಂದ ಅಲ್ಲೇ ವಿಚಾರಣೆ ನಡೆಸಿದರೆ ಅಲ್ಲಿನ ಜನರು ಸರಿಯಾಗಿ ಸಹಾಯ ಮಾಡುವುದಿಲ್ಲ. ಇದಕ್ಕಾಗಿ ಪ್ರತ್ಯೇಕವಾಗಿ ಇಲ್ಲಿಂದಲೇ ಒಂದು ರೀತಿಯಾಗಿ ನ್ಯಾಯಾಂಗ ವಿಚಾರಣೆ ನಡೆಸಲು ಒಂದು ಸಮಿತಿ ನೇಮಕ ಮಾಡಲು ಪ್ರಯತ್ನ ಮಾಡುತ್ತಾರೆಯೇ ?

Sri V. N. PATIL.—There is a marked difference between the problems of Kerala and Madras States as was pointed out by the Hon'ble Chief Minister But, we bear an additional responsibility and burden upon us. The entire tussel started on account of the Mahajan Award and in order to shelve the Mahajan Award this conspiracy has been hatched. We are not going to budge an inch from our demand that Mahajan Commission's Report should be considered as an Award and Mysore is not going to yield. On the floor of this House we want an assurance on this.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಎರಡು ಮೂರು ವಿಚಾರಗಳನ್ನು ಇಲ್ಲಿ ಕೇಳಿದ್ದಾರೆ. ಮಹಾಜನ್ ಕಮಿಷನ್ ವರದಿ ಬಗ್ಗೆ ನಮ್ಮ ಸರಕಾರದ ನಿಲುವೇನು ಎನ್ನುವುದು. ನಾನು ತಿಳಿದುಕೊಂಡಂತೆ ಎಲ್ಲರಿಗೂ ಗೊತ್ತಿದೆ ಎಂದು ಇದನ್ನು ಪದೇ ಪದೇ ಇಲಿ ಹೇಳುವುದೇನು ಎಂದು ಹೇಳಲಿಲ್ಲ. ಮಹಾಜನ್ ಕಮಿಷನ್ ವರದಿಯನ್ನು ಅವಾರ್ಡ್ ಎಂತಲೇ ಇದನ್ನು ಜಾರಿಗೆ ತರಬೇಕು ಎನ್ನುವುದು ನಮ್ಮ ಸ್ಪಷ್ಟ ನಿಲುವು "Mahajan Commission Report or recommendations should be accepted in toto." ಎಂದು ಹೇಳಿದ್ದೇನೆ. ಇದರ ಬಗ್ಗೆ ಭಯ ಬಂದಿರುವುದು ಈ ಮಹಾಜನ್ ಕಮಿಷನ್ ವರದಿ ಬರೀ ರೆಕಮೆಂಡೇಷನ್ಸ್ ಇವನ್ನು ಜಾರಿಗೆ ತರಬಾರದು ಎಂದು ಕೇಂದ್ರ ಸರ್ಕಾರವಲ್ಲಿ ಒತ್ತಾಯ ತರುತ್ತಿದ್ದಾರೆ ಎನ್ನುವ ಕಾರಣಕ್ಕಾಗಿ ಹೇಳಿರಬಹುದು. ನಾವು ಆಗಾಗ್ಗೆ ಇದರ ಬಗ್ಗೆ ಕೇಂದ್ರಕ್ಕೆ ಪತ್ರ ಬರೆಯುತ್ತಿದ್ದೇವೆ ಮತ್ತು ಕೇಂದ್ರ ಸರಕಾರಕ್ಕೆ ಹೋದಾಗಲೆಲ್ಲಾ ಅವರ ಮೇಲೆ ಒತ್ತಾಯ ತರುತ್ತಿದ್ದೇವೆ. ಕೆಲವರು ಇವನ್ನು ಮೂರಗೊತ್ತಿದ್ದಾರೆಂದೂ ಹೇಳುತ್ತಿದ್ದಾರೆ. ಇದಕ್ಕೆ ನಾವು ಯಾವಾಗಲೂ ಎಡೆ ಕೊಡುವುದಿಲ್ಲ ಎಂದು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ನಮ್ಮ ಮಾನ್ಯ ಸದಸ್ಯರಾದ ಭಾಸ್ಕರಶೆಟ್ಟರು ಒಂದು ಕಮಿಷನ್ ನೇಮಕ ಮಾಡಬೇಕೆಂದು ಹೇಳಿದರು. ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಎರಡನೇ ರಾಜ್ಯ ಸರಕಾರಕ್ಕೆ ನಾವು ಹೋಗಿ ವಿಚಾರ ಮಾಡಬೇಕಾಗಿದ್ದರೆ ಅಲ್ಲಿ ಎನ್‌ಕ್ವೈರಿ ಮಾಡಬೇಕಾಗಿದ್ದರೆ ಅಲ್ಲಿನ ಸರಕಾರದವರು ನಮಗೆ ಸಹಕಾರ ಮಾಡಿದರೆ ಆಗ ಮಾಡಬಹುದು. ಅದಿಲ್ಲದೆ ನಾವು ಐದಾರು ಜನರನ್ನು ಅಲ್ಲಿಗೆ ಕಳುಹಿಸಿದರೆ ಅವರು ಯಾವ ರೀತಿ ಎನ್‌ಕ್ವೈರಿ ಮಾಡುತ್ತಾರೆ ಎಂದು ನೋಡಬೇಕಾಗುತ್ತದೆ. ನಾವು ಹೇಳುವುದನ್ನು ಅವರು ವೆಲ್‌ಕಂ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಅದರಿಂದೇನೂ ಪ್ರಯೋಜನ ಆಗುವುದಿಲ್ಲ. ಇದಕ್ಕಾಗಿ ಕೇಂದ್ರ ಸರಕಾರದವರಿಗೇ ನಾವು ಬರೆದಿದ್ದೇವೆ ಮತ್ತು ಇದಕ್ಕೆ ಸೂಕ್ತ ಕ್ರಮ ತೆಗೆದುಕೊಂಡು ನಷ್ಟವಾದವರಿಗೆ ಹಣ ಕೊಡಿಸಬೇಕು ಮತ್ತು ಸಂಪೂರ್ಣವಾಗಿ ಹಾನಿಯಾಗಿರುವ ವಿವರಗಳನ್ನು ತಿಳಿಸಬೇಕೆಂದೂ ಕೇಳಿದ್ದೇವೆ. ಇದಕ್ಕಾಗಿ ನಾವು ಇಲ್ಲಿಂದ ಒಂದು ಕಮಿಷನ್ ಆಫ್ ಇನ್‌ಕ್ವೈರಿ ಎಂದು ಮಾಡಲು ಒತ್ತಾಯ ಹೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಸಭೆ ಈಗ ಎದ್ದು ಮತ್ತೆ 3-30 ಗಂಟೆಗೆ ಸೇರುತ್ತದೆ.

The House adjourned at Five Minutes past Two of the Clock and reassembled at Thirty Minutes past Three of the Clock.

[Mr. SPEAKER in the Chair]

Rules and practice for taking up General Discussion on the annual Budgets.

SRI M. NAGAPPA (Raichur).—Sir, I rise to a point of order. As per rule 160, there shall be no discussion on the day the budget is presented to the Assembly. But on subsequent days it can be taken up. There is a similar rule in the Lok Sabha also, but in the Lok Sabha the practice is that after the presentation of the budget, it will be taken up for consideration after one week, not later than one week or ten days If we are given so much bulky papers, so many books, how can we be expected to go through all these papers and be prepared to speak on them within 24 hours? We should have some time to study the figures at least relating to our constituencies.

Sri K. PUTTASWAMY (Minister for Law, Labour and Parliamentary Affairs).—Are we concerned with our own rules or the rules of Lok Sabha and practices ?

Sri M. NAGAPPA.—Lok Sabha rules also are worded exactly in the same way, but in actual practice, there is a difference : I quote from the book KAUL'S PRACTICE AND PROCEDURE OF PARLIAMENT (page 515) :

> "No discussion of the budget takes place on the day on which it is presented to the House. According to the practice obtaining in Lok Sabha, generally the budget is ordinarily discussed after a week or ten days of its presentation to the House. The Railway Budget is also taken for discussion after a week of its presentation."

That is the practice there. The rule is the same as ours. I therefore respectfully submit that we should not be expected ourselves fully and forcibly before this House because so much literature is supplied to us. I submit Sir, the same practice that is obtaining in the Parliament may be adopted here and the budget discussion may be taken up in this House also after some time. The Speaker has got residuary powers and by virtue of that he can direct that the budget discussion may be commenced after seven days or ten days. Therefore I submit that the practice which is prevalent in Lok Sabha may be adopted here also.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸದಸ್ಯರಾದ ಶ್ರೀಮಾನ್ ನಾಗಪ್ಪನವರು ಒಂದು ವಾರ ಟೈಂ ಬೇಕು ಎಂದು ಏನು ತಿಳಿಸಿದ್ದಾರೆ. ಅದರ ಬಗ್ಗೆ ನಾನು ಒಂದು ವಿಷಯ ಹೇಳುತ್ತೇನೆ. ಈಪೊತ್ತು ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಶಿವಸೇನೆಯ ಚಟುವಟಿಕೆಗಳ ಬಗ್ಗೆ ಮಾತನಾಡಿದ್ದೇವೆ. ಬಡ್ಜೆಟ್ಟನ್ನು ಡೀಟೇಲ್ ಆಗಿ ಓದಿ, ಅದನ್ನು ಪರಿಶೀಲನೆ ಮಾಡಿ, ಅದರ ಭಾಗಗಳನ್ನು ವಿಂಗಡಣೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಕೆಲವು ಕಾಲ ಬೇಕಾಗುತ್ತದೆ. ಈ ದೃಷ್ಟಿಯಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಈ ಬಡ್ಜೆಟ್ಟನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿರುವುದರಿಂದ ಇದನ್ನು ಜಾಗ್ರತೆ ತೆಗೆದುಕೊಂಡರೆ ತೊಂದರೆಯಾಗುತ್ತದೆಂದು ಸದಸ್ಯರ ಅಭಿಪ್ರಾಯ.

Mr. SPEAKER.—I have heard the hon. Members Sri Nagappa and Sri Bangarappa. I have got great sympathy with what they have said. So far as the position is concerned, the rule is very clear that the budget is not to be taken on the same day. It means that it can be taken up on any subsequent day. It has been pointed out by the hon. member Sri Nagappa that in Lok Sabha, also the rule is the same, but the practice is otherwise. I understand there is full significance in that practice. I would like to give sympathetic consideration to that proposal. But here what has happened is, this programme of the presentation of the Budget and general discussion as also the discussion on the Demands was fixed in consultation with Members of all important groups in this House. Therefore, this is the result of the agreement among all sections of the House here. I can understand there should be sufficient time for the hon. Members to go through it and probably that may be borne in mind hereafter. But under the present circumstances,

(MR. SPEAKER)

it is not possible to make any adjustment as suggested by the hon. Members. There is a very tight schedule There are many holidays. The demands have to be voted by the 28th of March. The last two or three days of March are also holidays. If members insist on postponement like this, probably there would be much inconvenience, not only to this House but to the Government and all parties concerned. Therefore, I am sorry I cannot accept that suggestion now. Hon'ble Members who are prepared to make their observations on the Budget, may go ahead. The general discussion on the Budget, will go on for five days. Such of the Members who feel that they cannot do justice to the matter here and now, can take their turn a little later and offer their remarks. Therefore, I am sorry, that though I have much sympathy with the views expressed by members I cannot accept the point of order, and the debate may therefore proceed. The Hon. Leader of the Opposition Sri S. Sivappa may begin his speech.

Budget Estimates for 1969-70

Gener l Discussion

†ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, 1969-70ನೇ ಸಾಲಿಗೆ ಸಂಬಂಧಪಟ್ಟ ಆಯ ವ್ಯಯ ಪಟ್ಟಿಯ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡುತ್ತ, ಹಣಕಾಸಿನ ಸಚಿವರು ಹೇಳಿದ ರೀತಿಯಲ್ಲಿ ಈ ಸಾರಿಯ ಬಜೆಟ್ ಅತಿ ಹೆಚ್ಚಿನ ಆದಾಯ ಮತ್ತು ಅತಿ ಹೆಚ್ಚಿನ ಖರ್ಚು ಎರಡನ್ನೂ ಹೊಂದಿರತಕ್ಕ ಬಜೆಟ್ ಎಂದು ಹೇಳುತ್ತೇನೆ. ಇದನ್ನು ಅವರು ಸಭೆಯ ಮುಂದೆ ಇಡುತ್ತ ಪಟ್ಟಿರುವ ಪೇಚಾಟವನ್ನು ನೋಡಿದರೆ ನನಗೆ ಹೀಗನಿಸುತ್ತದೆ. ಒಬ್ಬ ಒಳ್ಳೆಯ ಆಸ್ತಿವಂತನಾದ ತಂದೆಗೆ ಷೋಕಿ ಮಾಡುವ ಮಗ ಹುಟ್ಟಿ ಆ ತಂದೆಯ ಆಸ್ತಿಯನ್ನೆಲ್ಲ ಈಡು ಮಾಡಿ, ಭೋಗ್ಯ ಮಾಡಿ ಷೋಕಿ ಮಾಡಿ, ಸಾಲವನ್ನು ತೀರಿಸುವುದಕ್ಕಾಗಿ ಆ ಆಸ್ತಿಯಿಂದ ಬರತಕ್ಕ ಆದಾಯವನ್ನೆಲ್ಲಾ ಕೊಟ್ಟು ಕೊಟ್ಟು ಸಾಕಾಗಿ ಕೊನೆಗೆ ತನಗೆ ಒಬ್ಬ ಮಗನು ಹುಟ್ಟಿದಾಗ ಅವನನ್ನು ಓದಿಸುವುದಕ್ಕೆ ದುಡ್ಡಿಲ್ಲದೆ ಪೇಚಾಡತಕ್ಕ ಯಾವ ಆಸ್ತಿವಂತನ ಮಗನಿದ್ದಾನೆಯೋ ಆವನಿಗೆ ನಮ್ಮ ಕಾಂಗ್ರೆಸ್ ಸರ್ಕಾರವನ್ನು ಹೋಲಿಸಬಹುದು. ಅತಿ ಹೆಚ್ಚಿನ ಆದಾಯವಾದ 213 ಕೋಟಿ ರೂಪಾಯಿಗಳನ್ನು ತುಂಬತಕ್ಕ ಜನ ನಿಮ್ಮ ಕೈಗೆ 213 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಂಥ ಜನತೆಗೆ ಅನುಕೂಲವಾದ ಏನೇನು ಸೂಚನೆಗಳನ್ನು ನೀವು ಮಾಡಿದ್ದೀರಿ ಎನ್ನುವುದನ್ನು ಪರಿಶೀಲನೆ ಮಾಡುತ್ತ ಹೋದರೆ ಬಹಳ ನಿರಾಶಾದಾಯಕವಾಗಿದೆ.

ಮಾನ್ಯ ಹಣಕಾಸಿನ ಸಚಿವರು ಕೊಟ್ಟಿರತಕ್ಕ ಆಯವ್ಯಯ ಪಟ್ಟಿಯ ಹಿನ್ನೆಲೆಗೆ ಹೋಗುವುದಕ್ಕಿಂತ ಮುಂಚೆ ಅವರ ಭಾಷಣದಲ್ಲಿ ಪ್ರಥಮದಲ್ಲಿ ಅತಿ ಮುಖ್ಯವಾದ ಒಂದು ವಿಚಾರವನ್ನು ಪ್ರಸ್ತಾವನೆ ಮಾಡಿದ್ದಾರೆ. ಅದು ಮಧ್ಯಂತರ ಚುನಾವಣೆಗಳ ವಿಷಯ. ಅದಕ್ಕಿಂತ ಮುಂಚೆ ಈ ದೇಶದ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ಹೇಳುತ್ತಿದ್ದಂತೆ ''ಆಯಾರಾಮ್ ಗಯಾ ರಾಮ'', ಮುಖ್ಯಮಂತ್ರಿಗಳ ಆಯಾ ಗಯಾ ವಿಚಾರವನ್ನು ಹೇಳುತ್ತ ಶ್ರೀ ನಿಜಲಿಂಗಪ್ಪನವರು ಹೋದರು ಮತ್ತು ಅವರ ಸ್ಥಾನದಲ್ಲಿ ಹೊಸಬರು ಬಂದರು ಎನ್ನುವ ವಿಚಾರದನ್ನು ಹೇಳಿದ್ದಾರೆ. ಅದಾದ ಮೇಲೆ ಮಧ್ಯಂತರ ಚುನಾವಣೆ ವಿಷಯ ಪ್ರಸ್ತಾಪ ಮಾಡಿ ಇಷ್ಟು ವರ್ಷಗಳ ಕಾಲದಿಂದ ಈ ದೇಶವನ್ನು ಆಳುವುದಕ್ಕೆ ಕಾಂಗ್ರೆಸ್ಸನ್ನು ಬಿಟ್ಟರೆ ಬೇರೆ ಯಾವ ಪಕ್ಷಕ್ಕೂ ಶಕ್ತಿ ಇಲ್ಲ ಎಂದು ತಮ್ಮ ಹೆಗಲನ್ನೇ ಅವರು ತಟ್ಟಿಕೊಂಡು, ತಮ್ಮ ಮೀಸೆಯ ಮೇಲೆ ತಾವೇ ಕೈಹಾಕಿಕೊಂಡು ಇಷ್ಟು ದಿವಸ ತಮ್ಮ ಪೌರುಷವನ್ನು ಹೇಳಿಕೊಳ್ಳುತ್ತಿದ್ದವರು ಈಪ್ರೊತ್ತು ಕಣ್ಣು ಬಿಟ್ಟು ನೋಡುವ ಹಾಗೆ ಆಗಿದೆ. ಇನ್ನೂ ಅನೇಕ ವರ್ಷಗಳು ನಿರಾತಂಕವಾಗಿ ಅಧಿಕಾರವನ್ನು ಅನುಭವಿಸಿಕೊಂಡು ಇರಬೇಕು ಎಂದು ಇದ್ದವರಿಗೆ ಸಿಡಿಲು ಬಡಿದಂತಾಗಿದೆ. ಈಗಲಾದರೂ ದೇಶದಲ್ಲಿರುವ ಎಲ್ಲ ರಾಜಕೀಯ ಪಕ್ಷಗಳೂ ಸೇರಿ ದೇಶದ ಅಭ್ಯುದಯಕ್ಕಾಗಿ ದುಡಿಯಬೇಕು ಎನ್ನುವುದು ನಿಮಗೆ

ಗೋಚರವಾಗಿದೆ. ನಿಮ್ಮ ಪೌರುಷಕ್ಕೆ ಜನ ತಕ್ಕ ಶಾಸ್ತಿಯನ್ನು ಕೊಟ್ಟ ಮೇಲೆ ಸ್ವಲ್ಪ ಬುದ್ಧಿ ಬಂದ ಹಾಗೆ ಕಾಣುತ್ತದೆ. ಆದರೆ ಮೈಸೂರಿನಲ್ಲಿ ಇನ್ನೂ ಕಣ್ಣು ಬಿಟ್ಟು ನೋಡತಕ್ಕ ಪರಿಸ್ಥಿತಿ ಬಂದಿಲ್ಲ. 22 ವರ್ಷಗಳಿಂದ ನಿರಾತಂಕವಾಗಿ ಕಾಂಗ್ರೆಸ್ಸಿನ ಆಡಳಿತ ಮುಂದುವರಿಯುತ್ತಿದೆ. ಈಗಿರತಕ್ಕ ಬುದ್ಧಿ ಭ್ರಮಣೆ ಹೋಗಬೇಕಾಗಿದೆ. ಅದಕ್ಕೆ ಇನ್ನೂ ಸ್ವಲ್ಪ ಕಾಲ ಮೈಸೂರು ದೇಶದಲ್ಲಿ ಬೇಕು. ಕಾಂಗ್ರೆಸ್ಸನ್ನು ಬಿಟ್ಟರೆ ಬೇರೆ ಯಾರಿಗೂ ಕೂಡ ಸರ್ಕಾರವನ್ನು ನಡೆಸತಕ್ಕ ಶಕ್ತಿ ಇಲ್ಲ ಎನ್ನುವ ಭ್ರಮೆಯನ್ನು ಬಿಡಬೇಕು, ಅದು ಶೀಘ್ರದಲ್ಲಿಯೇ ಗೊತ್ತಾಗುತ್ತದೆ ಎನ್ನುವುದನ್ನು ಎಚ್ಚರಿಕೆಯ ರೂಪದಲ್ಲಿ ಹೇಳಬೇಕಾಗಿದೆ.

ಮಧ್ಯಂತರ ಚುನಾವಣೆಗಳಲ್ಲಿ ಮಾನ್ಯ ಮಂತ್ರಿಗಳು ಹೇಳುವ ರೀತಿಯಲ್ಲಿ ಸ್ಪಷ್ಟ ಬಹುಮತವನ್ನು ಪಡೆದಿರತಕ್ಕ ಯಾವುದೇ ಪಕ್ಷ ನಾಲ್ಕು ರಾಜ್ಯಗಳಲ್ಲಿಯೂ ಬಾರದೆ ಇರತಕ್ಕುದು ಪ್ರಜಾಪ್ರಭುತ್ವ ವಿಧಾನದಲ್ಲಿ ವಿಷಾದಕರವಾದ ವಿಚಾರ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಈಗಲಾದರೂ ಕೂಡ ಈ ದೇಶದಲ್ಲಿರುವ ರಾಜಕೀಯ ಪಕ್ಷಗಳು ಪ್ರಜಾತಂತ್ರದಲ್ಲಿ ನಂಬಿಕೆಯುಳ್ಳ ಪಕ್ಷಗಳು, ಸಮಾಜವಾದ, ಪ್ರಜಾಪ್ರಭುತ್ವ, ರಾಷ್ಟ್ರದ ಹಿತ, ರಾಷ್ಟ್ರೀಯತೆ, ಈ ಭಾವನೆಗಳನ್ನು ಉಳ್ಳ ಪಕ್ಷಗಳು 'ಲೈಕ್ ಮೈಂಡೆಡ ಪಾರ್ಟೀಸ್'' ಸೇರಿ ಪೋಲರೈಸೇಷನ್ ಮಾಡಿಕೊಳ್ಳುವುದು ಅವಶ್ಯಕ. 10—12 ಪಕ್ಷಗಳು ಸೇರಿಕೊಂಡು ಭದ್ರವಾದ ಪ್ರಜಾಪ್ರಭುತ್ವವನ್ನು ಕಟ್ಟುತ್ತೇವೆನ್ನುವುದು ಕಷ್ಟ ಎನ್ನುವುದನ್ನು ಎಲ್ಲ ರಾಜಕೀಯ ಮುಖಂಡರೂ ಅರಿತುಕೊಳ್ಳಬೇಕಾಗಿದೆ. ಎಲ್ಲ ರಾಜಕೀಯ ಪಕ್ಷಗಳೂ ಕಲೆತು ಒಂದೇ ತರಹ, ಯೋಚನೆ ಮಾಡತಕ್ಕ, ಒಂದೇ ರೀತಿಯಲ್ಲಿ ಹೋಗತಕ್ಕ ಪಕ್ಷಗಳು ಒಂದು ಕಡೆ ಸೇರಿ ರಾಜಕೀಯದಲ್ಲಿ ಭದ್ರವಾದ ತಳಹದಿಯನ್ನು ಹಾಕಿ ಅದರಂತೆ ನಡೆದುಕೊಳ್ಳಬೇಕಾದ ಜವಾಬ್ದಾರಿ ಅವರ ಮೇಲೆ ಬಿದ್ದಿದೆ ಎಂದು ನಾನು ಒತ್ತಿ ಹೇಳಬೇಕಾಗಿದೆ.

ಹಣಕಾಸಿನ ಸಚಿವರು ನಮ್ಮ ಮುಂದೆ ಬಹಳ ದೊಡ್ಡ ಅಂಕಿಅಂಶಗಳ ಪುಸ್ತಕಗಳ ರಾಶಿಯನ್ನು ಇಟ್ಟಿದ್ದಾರೆ. ಆ ರಾಶಿಯಲ್ಲಿ ಹುಡುಕುತ್ತ ಹೋದರೆ ನಾವು ಎಲ್ಲಿದ್ದೇವೆ ಎನ್ನುವುದು ಕಷ್ಟವಾಗುತ್ತದೆ. ಮೊದಲನೆಯದಾಗಿ 213 ಕೋಟಿ ರೂಪಾಯಿ ಆದಾಯ 226 ಕೋಟಿ ರೂಪಾಯಿ ಖರ್ಚನ್ನು ತೋರಿಸತಕ್ಕ ರೆವಿನ್ಯೂ ಅಕೌಂಟಿನಲ್ಲಿ 13.22 ಕೋಟಿ ರೂಪಾಯಿಗಳ ಖೋತಾ ತೋರಿಸಿದ್ದಾರೆ. ಅವರು ಮಾಡಿರುವ ಭಾಷಣವನ್ನು ನಾವು ಓದುತ್ತಾ ಹೋದರೆ ಖೋತ ಕೇವಲ 13 ಕೋಟಿ ರೂಪಾಯಿ ಅಲ್ಲ, ಇನ್ನೂ ಹೆಚ್ಚು ಖೋತ ಇದೆ ಎನ್ನುವುದನ್ನು ನಾವು ನೋಡಬಹುದಾಗಿದೆ. ಸುಮಾರು ಒಟ್ಟು 33 ಕೋಟಿ ರೂಪಾಯಿ ಖೋತ ಇರುವ ಬಜೆಟ್ಟನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಬಜೆಟ್ ಪ್ರಕಾರ ಓಪನಿಂಗ್ ಬ್ಯಾಲೆನ್ಸ್ 1.65 ಕೋಟಿ ರೂಪಾಯಿ ಇದ್ದುದು 'ಕ್ಲೋಸಿಂಗ್ ಬ್ಯಾಲೆನ್ಸ್'—29.93 ಕೋಟಿ ರೂಪಾಯಿಗಳು ಎಂದರೆ ಓವರ್ ಡ್ರಾಫ್ಟ್ ಅಥವಾ ಅಡ್‌ಹಾಕ್ ಲೋನ್ ಇಲ್ಲದೆ ಇದನ್ನು ಸರಿದೂಗಿಸಬೇಕಾಗುತ್ತದೆ.

ಈವೊತ್ತು ಸರ್ಕಾರದ ಹಣಕಾಸಿನ ಭದ್ರತೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ನಮ್ಮ ದೇಶದ ಅಸೆಟ್ಸ್ ಮತ್ತು ಲಯಬಿಲಿಟೀಸ್ ನೋಡಿದರೆ ಗೊತ್ತಾಗುತ್ತದೆ. ಆಸ್ತಿಯನ್ನು ಎಷ್ಟೊಂದು ಬೆಳೆಸಿಕೊಂಡು ಬಂದಿದ್ದೇವೆ, ಸಾಲ ಎಷ್ಟರಮಟ್ಟಿಗೆ ಬೆಳೆದಿವೆ ಎನ್ನುವುದನ್ನು ನೋಡಿದರೆ ನಮ್ಮ ದೇಶದ ಭದ್ರತೆ ಎಷ್ಟೊಂದು ಕುಂಠಿತವಾಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಸಾಲದ ಹೊರೆ ವಿಷ ಏರಿದ ಹಾಗೆ ದಿನೇ ದಿನೇ ಗಗನಕ್ಕೆ ಏರುತ್ತ ಹೋಗಿದೆ. ಸಾಲದ ಹೊರೆಯನ್ನು ನಾವು ನೋಡುವುದಾದರೆ 1970ನೆ ಇಸವಿಯ ಅಂತ್ಯಕ್ಕೆ ಸುಮಾರು 552 ಕೋಟಿ ರೂಪಾಯಿಗಳ ಮಟ್ಟಕ್ಕೆ ನಮ್ಮ ರಾಜ್ಯದ ಸಾಲ ಏರುತ್ತದೆ ಎನ್ನುವುದನ್ನು ನಾವು ನೋಡಬಹುದಾಗಿದೆ. ಈ ಸಾಲಗಳನ್ನು ಅನೇಕ ರೀತಿಯಲ್ಲಿ ಮಾಡಿದ್ದಾರೆ, ಕೇಂದ್ರ ಸರಕಾರದ ಸಾಲ, ಸಾರ್ವಜನಿಕರಿಂದ ಎತ್ತಿರುವ ಸಾಲ, ಇನ್‌ಷೂರೆನ್ಸ್ ಕಂಪೆನಿಯಿಂದ ತೆಗೆದಿರುವ ಸಾಲ ಇತ್ಯಾದಿ ಸಾಲಗಳಿವೆ. 1968ರಲ್ಲಿ 473 ಕೋಟಿ ರೂಪಾಯಿಗಳ ಸಾಲವಿತ್ತು, 70ನೆಯ ಮಾರ್ಚಿಗೆ ಅದು 552 ಕೋಟಿಗೆ ಏರಿದೆ. ಇದಕ್ಕೆ ಅಸೆಟ್ಸ್ ಇರುವುದು ಸರಕಾರದ ಲೆಕ್ಕದ ಪ್ರಕಾರ 68ರಲ್ಲಿ 566 ಕೋಟಿ, 70ನೇ ಇಸವಿಗೆ ಅದು 646 ಕೋಟಿ ಆಗುತ್ತದೆ. ಇದು ಯಾವುದು ಎಂದರೆ ಸರಕಾರದವರು ಮಾಡಿರುವ ರಸ್ತೆಗಳು, ಕಟ್ಟಿರುವ ಕಟ್ಟಡಗಳು, ಇರಿಗೇಷನ್ ಪ್ರಾಜೆಕ್ಟುಗಳು, ವಿದ್ಯುಚ್ಛಕ್ತಿ ಯೋಜನೆಗಳು, ಇಂಡಸ್ಟ್ರಿಯಲ್ ಪ್ರಾಜೆಕ್ಟುಗಳು ಮುಂತಾದುವು. ಇವನ್ನು ವಿಂಗಡಿಸಿದರೆ ಎಂಥ ಅಸೆಟ್ಸ್ ಇವೆಯೆಂಬುದು ಗೊತ್ತಾಗುತ್ತದೆ. ತಪಶೀಲು ನೋಡಿದರೆ ಕೈಗಾರಿಕೆಗಳಿಗೆ 68ರಲ್ಲಿ 49 ಕೋಟಿಯನ್ನು ವಿನಿಯೋಗಿಸಿ 70ಕ್ಕೆ 83 ಕೋಟಿ ರೂಪಾಯಿಗಳ ಕೈಗಾರಿಕೆ ಬಿಲ್ಡಪ್ ಮಾಡಿದ್ದಾರೆ. ಇರಿಗೇಷನ್‌ಗೆ ಸಂಬಂಧಪಟ್ಟ ಆಸ್ತಿ 70ನೆಯ ಮಾರ್ಚಿಗೆ 186 ಕೋಟಿಯಾಗುವುದು. ವಿದ್ಯುಚ್ಛಕ್ತಿಗೆ ಸಂಬಂಧಪಟ್ಟದ್ದು 106 ಕೋಟಿ, ಅಡ್ವಾನ್ಸು ಮತ್ತು ಸಾಲ ಕೊಟ್ಟಿರುವುದು, ಸರಕಾರ ಗ್ಯಾರಂಟಿ ಕೊಟ್ಟಿರುವುದು, ಕೋಆಪರೇಟಿವ್ ಸೊಸೈಟಿ, ಮಂಡ್ಯ ಸಕ್ಕರೆ ಕಾರ್ಖಾನೆ, ಗುಲ್ಬರ್ಗ ಮಿಲ್

(ಶ್ರೀ ಎಸ್. ಶಿವಪ್ಪ)

ಮುಂತಾದುವುಗಳಿಗೆ ಕೊಟ್ಟಿರುವುದನ್ನೆಲ್ಲಾ ಲೆಕ್ಕ ಹಾಕಬೇಕು. ಈಗ 168 ಕೋಟಿ ಲೋನ್ಸ್ ಅಂಡ್ ಅಡ್ವಾನ್ಸಸ್ ಇವೆ. ರೋಡ್ಸ್ ಅಂಡ್ ಬಿಲ್ಡಿಂಗ್ಸ್, ಓರ್ ಕ್ವಾರಿ ಮಾಡುವ ರಸ್ತೆ, ಸಿಮೆಂಟ್ ಹಾಕಿಲ್ಲದ ಮತ್ತು ಬೀಳುವ ಸ್ಥಿತಿಯಲ್ಲಿರುವ ಕಟ್ಟಡಗಳು ಇವೆಲ್ಲಾ ಸೇರಿ 92 ಕೋಟಿ ಇದೆ. ಇಷ್ಟು ಅಸೆಟ್ಸ್ ಬಿಲ್ಡಪ್ ಮಾಡಿದ್ದೇವೆಂದು ಹೇಳುತ್ತಾರೆ. ಈ ಆಸ್ತಿಯೆಲ್ಲಾ ಲೆಕ್ಕ ಹಾಕಿದರೆ 646 ಕೋಟಿಯಾಗುವುದು. ಇಂದು ರಾಜ್ಯದಲ್ಲಿ ಬೇಕಾದಷ್ಟು ಸಾಲ ಮಾಡಿದ್ದಾರೆ. ಅದನ್ನು ತೀರಿಸುವುದಕ್ಕೆ ಈ ಆಸ್ತಿಯಿಂದ ಲಾಭ ಬರುತ್ತಿದೆಯೇ? ಇಂದು ಸಾಲ ಮಾಡಿರುವುದಕ್ಕೆ ಕೊಡಬೇಕಾಗಿರುವ ಬಡ್ಡಿ ಸುಮಾರು 25 ಕೋಟಿಯಾಗುತ್ತದೆ. ಈ ವರ್ಷ ಪಬ್ಲಿಕ್ ಲೋನ್, ಕೇಂದ್ರ ಸರಕಾರದ ಸಾಲ, ಮುಂತಾದ್ದಕ್ಕೆ ಸುಮಾರು 52 ಕೋಟಿ ಕೊಡಬೇಕಾಗುತ್ತದೆ. ಇದಕ್ಕೆ ಬಡ್ಡಿ ಕೊಡುವುದು 24 ಕೋಟಿ 50 ಲಕ್ಷ. ಎಲ್ಲಾ ಸೇರಿ ಸುಮಾರು 78 ಕೋಟಿಯನ್ನು ಸಾಲ ತೀರಿಸುವುದಕ್ಕೆ ಮತ್ತು ಬಡ್ಡಿ ಕೊಡುವುದಕ್ಕೆ ಜನರು ಕೊಟ್ಟ ತೆರಿಗೆಯಿಂದ ಕೊಡುತ್ತಿದ್ದೇವೆ. ಹೀಗಿರುವಾಗ ಇಂದು ಮಾಡಿರುವ ಆಸ್ತಿ ಎಂಥ ಆಸ್ತಿ? ಅವರ ಆಸ್ತಿ ಹೇಗಿದೆಯೆಂದರೆ ಕಟ್ಟಿರುವ ಪ್ರಾಜೆಕ್ಟುಗಳಿಗೆ ಸುಮಾರು 650 ಕೋಟಿಯಾಗಬಹುದು, ಎಂದು ಅಂದಾಜು ಮಾಡಿದ್ದಾರೆ. ಇದರಲ್ಲಿ ಕಂಟ್ರಾಕ್ಟರುಗಳಿಗೆ ಹೋಗಿರುವುದೆಷ್ಟು, ಅವರು ಎಷ್ಟು ಹಣ ಮಾಡಿಕೊಂಡಿದ್ದಾರೆ, ಎಷ್ಟು ಬಂಗಲೆ ಕಟ್ಟಿದ್ದಾರೆ, ಎಷ್ಟು ಕಾರನ್ನು ಇಟ್ಟಿದ್ದಾರೆ ಇದನ್ನೆಲ್ಲಾ ಸೇರಿಸಿ ಆಸ್ತಿ ಇಷ್ಟು ಎಂದು ಲೆಕ್ಕ ಮಾಡಿದ್ದೀರಾ? ಇದನ್ನೆಲ್ಲಾ ಕಳೆದರೆ ಆಸ್ತಿಯ ಚಿತ್ರ ಎಷ್ಟು ಮೊಟಕಾಗುತ್ತದೆ? ಶರಾವತಿ ಪ್ರಾಜೆಕ್ಟ್ ಮಾರಿದರೆ 100 ಕೋಟಿ ಬರುತ್ತದೆ, ವಿಧಾನಸೌಧ ಮಾರಿದರೆ 2 ಕೋಟಿ ಬರುತ್ತದೆ, ಎಂದು ಮುಂತಾಗಿ ಹೆಗ್ಗಡೆಯವರು ಹೇಳಬಹುದು. ಅದನ್ನು ಕೇಳಿ ಸಮಾಧಾನ ಪಟ್ಟುಕೊಳ್ಳಬೇಕಾಗಿದೆ. ಹೀಗೆ ಮಾರುವುದಕ್ಕೆ ಸರಕಾರ ಪ್ರಯತ್ನಪಡುತ್ತಿದೆ, ಇದನ್ನು ಮುಂದೆ ಹೇಳುತ್ತೇನೆ. ಬಹಳವಾಗಿ ಸಾಲಮಾಡಿ ಜನರಮೇಲೆ ಹೇರಿರುವುದನ್ನು ತೀರಿಸಲು ಸಾಲ ತೀರ್ವೆಗೆ ಮತ್ತು ಬಡ್ಡಿ ಕೊಡಲು ಸುಮಾರು 70—80 ಕೋಟಿ ಬೇಕಾಗಬಹುದು. ಯಾವ ಸಣ್ಣಪುಟ್ಟ ಕೆಲಸ ಮಾಡಬೇಕಾದರೂ ಹಣವಿಲ್ಲ, ತೆರಿಗೆ ಹಾಕಬೇಕು, ಸಾಲ ಮಾಡಬೇಕು ಎಂಬುದು ಒಂದೇ ರಾಗ, ಇಂದು ಇಂಥ ಆರ್ಥಿಕ ಪರಿಸ್ಥಿತಿ ಇದೆ. ಇನ್ನು ಇರುವ ಆಸ್ತಿ ಸಿಂಕಿಂಗ್ ಫಂಡು ಅದನ್ನಾದರೂ ಬೆಳೆಸಬೇಕಾಗಿತ್ತು. ಅದು 1968ರಲ್ಲಿ 9 ಕೋಟಿ 81 ಲಕ್ಷ ಇತ್ತು, 1970ಕ್ಕೆ 6 ಕೋಟಿ 80 ಲಕ್ಷಕ್ಕೆ ಇಳಿಯುತ್ತದೆ. ಕ್ಯಾಷ್ ಸೆಕ್ಯೂರಿಟೀಸ್ ಇತ್ತು, ಸುಮಾರು 18 ಕೋಟಿ ಇದ್ದ ಅದನ್ನು ಮಾರಿದ್ದಾರೆ ಇಂದು ಅದೆಷ್ಟಿದೆ ಎಂದರೆ ಸೊನ್ನೆ. ಈಗ ಆ ಪೈಕಿ 15 ಲಕ್ಷವಾದರೂ ಇದೆಯೋ ಇಲ್ಲವೋ. ಕೇಳಿದರೆ ಸೆಕ್ಯೂರಿಟಿ ಏಕಿರಬೇಕು ಎಂದು ಹೇಳುತ್ತಾರೆ. ಇಂದು ಕಟ್ಟಡಗಳು, ಕಾರ್ಖಾನೆಗಳು ಮುಂತಾದ ಸೆಕ್ಯೂರಿಟಿ ಮಾತ್ರವಿದೆ. ತೆರಿಗೆ ಹೊರೆ ದಿನೇ ದಿನೇ ಏರುತ್ತಿದೆ, ವಿಷವೇರಿದಂತೆ ಅದು ಏರುತ್ತಿದೆ. ಖಜಾನೆಗೆ ಡೈರೆಕ್ಟ್ ಮತ್ತು ಇಂಡೈರೆಕ್ಟ್ ಟ್ಯಾಕ್ಸುಗಳ ಮೂಲಕ ಹಣ ಬರುತ್ತಿದೆ. 1963–64ರಲ್ಲಿ ಡೈರೆಕ್ಟ್ ಟ್ಯಾಕ್ಸ್ 19 ಕೋಟಿ, ಇಂಡೈರೆಕ್ಟ್ ಟ್ಯಾಕ್ಸ್ 35 ಕೋಟಿ, ಎಲ್ಲಾ ಸೇರಿ 54 ಕೋಟಿ ಇತ್ತು. 1969–70ಕ್ಕೆ ಡೈರೆಕ್ಟ್ ಟ್ಯಾಕ್ಸ್ 19 ಕೋಟಿಯಿಂದ 24 ಕೋಟಿಗೆ ಏರುತ್ತದೆ, ಇಂಡೈರೆಕ್ಟ್ ಟ್ಯಾಕ್ಸ್ 34 ಕೋಟಿಯಿಂದ 83 ಕೋಟಿಗೆ ಏರುವುದು. ಒಟ್ಟು 107 ಕೋಟಿ ತೆರಿಗೆ ಹೊರೆ ಜನರಮೇಲಿದೆ. ಕೇವಲ 3—4 ವರ್ಷಗಳಲ್ಲಿ ನೂರಕ್ಕೆ ನೂರರಷ್ಟು ತೆರಿಗೆ ಹೆಚ್ಚಾಗಿ ಜನರಮೇಲೆ ಬೀಳುತ್ತಿದೆ. ಸುಮಾರು 132 ಕೋಟಿ ತೆರಿಗೆ ರೂಪದಲ್ಲಿ ಜನರಿಂದ ಬರುವುದು. ಇಷ್ಟು ಹಣ ಜನರು ಕೊಟ್ಟಮೇಲೆ ಅದು ಯಾವ ರೀತಿ ಖರ್ಚಾಗುತ್ತದೆ ಎಂಬುದನ್ನು ನೋಡಬೇಕು. ಸೂಕ್ಷ್ಮವಾಗಿ ಪರೀಕ್ಷೆ ಮಾಡಿದರೆ ಹಣಕಾಸನ್ನು ಖರ್ಚುಮಾಡುವ ರೀತಿನೀತಿ ನೋಡಿದರೆ ದುಂದು ಖರ್ಚಿಗೆ ಅವಕಾಶ ಕೊಟ್ಟಿಲ್ಲ ಎಂದು ಹೇಳಿದ್ದಾರೆ, ಸಂತೋಷ. ನಾನು ಮಂತ್ರಿಗಳಿಗೆ ಸಂಬಂಧಪಟ್ಟ ವಿಚಾರ ಹೇಳುತ್ತೇನೆ. ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಸುಮಾರು 3 ವರ್ಷಗಳ ಕೆಳಗೆ ಮಂತ್ರಿಗಳಿಗೆಷ್ಟು ಖರ್ಚಾಗುತ್ತಿತ್ತು ಇಂದು ಎಷ್ಟಾಗುತ್ತಿದೆ ಎಂದು ನೋಡಿದರೆ 14—15 ಲಕ್ಷ 3 ವರ್ಷಗಳ ಕೆಳಗೆ ಖರ್ಚಿತ್ತು, ಇಂದು ಅದು 25 ಲಕ್ಷಕ್ಕೆ ಏರಿದೆ. ಮಂತ್ರಿಗಳಿಗೆ ಕಷ್ಟವಿದೆ, ಅವರ ಸ್ಥಾನ ಭದ್ರವಾಗಿಟ್ಟುಕೊಳ್ಳಲು ಬೇಕಾದವರಿಗೆಲ್ಲಾ ಸ್ಥಾನಮಾನ ಕೊಡಬೇಕು, ಅಧಿಕಾರ ಕೊಡಬೇಕು, ಹಣ ಕೊಡಬೇಕು, ಅವರನ್ನು ಬಿಡುವುದಿಲ್ಲ, ಅದಕ್ಕಾಗಿ ಖರ್ಚುಮಾಡಬೇಕಾಗುತ್ತದೆ.

4–00 P.M.

ಎಷ್ಟೇ ಲೆಕ್ಕ ಹಾಕಿದರೂ 216 ಜನ ಅಸೆಂಬ್ಲಿ ಮೆಂಬರುಗಳು, ಸುಮಾರು 60–70 ಜನ ಎಲ್.ಸಿ. ಮೆಂಬರುಗಳು ಅಲ್ಲದೆ ಸಭಾಪತಿಗಳು ಎಲ್ಲರ ಖರ್ಚು ಸೇರಿಸಿದರೂ ಕೂಡ 17–18 ಲಕ್ಷ

ರೂಪಾಯಿ ಆಗುತ್ತದೆ. 300 ಜನಗಳಿಗೆ ಆಗತಕ್ಕ ಖರ್ಚಿಗೆ ಎರಡರಷ್ಟು ಖರ್ಚು ಮಂತ್ರಿಮಂಡಲಕ್ಕೆ ಆಗುತ್ತಾ ಇದೆ. ಎಂದರೆ ಎಂತಹ ಒಂದು ಎಕಾನಮಿ ಮೆಷರು ? ನಿಮಗೆ ಸಂಬಂಧಪಟ್ಟ ವಿಚಾರದಲ್ಲೇ ಇಷ್ಟೊಂದು ತಲೆಕೆಳಕಾಗಿದೆ ಎಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು. ಇನ್ನು ಬೌಂಡರಿ ಕನ್‌ಸರ್ವೇಟೀವ್ ಕಮಿಟಿ ಅಂತ ಹೇಳಿ ಒಬ್ಬ ಕಮಿಷನರು ಅವರಿಗೆ ಒಂದು ಆಫೀಸು, ಒಂದು ಕಾರು ಕೊಟ್ಟಿದ್ದೀರಿ. ಇವೆಲ್ಲಾ ಏಕೆ, ಎಷ್ಟೋವರ್ಷ ಆಯಿತು ಈ ಕಮಿಷನ್ ತನ್ನ ವರದಿಯನ್ನು ಕೊಟ್ಟು. ಮಹಾಜನ್ ಕಮಿಷನ್‌ಗಿಂತ ಮುಂಚೆಯೇ ಅದನ್ನು ಏರ್ಪಾಡು ಮಾಡಿದ್ದೀರಿ ಇನ್ನೂ ಕೂಡ ಏಕೆ ಮುಂದುವರಿಸಿಕೊಂಡು ಬರುತ್ತಾ ಇದ್ದೀರಿ ? ಅದಕ್ಕೆ ಏನು ಕೆಲಸ ಇದೆ ? ಯಾರೋ ನಿಮಗೆ ಬೇಕಾದವರು ಒಬ್ಬರು ಇದ್ದಾರೆ ಅವರಿಗೆ ಕೆಲಸ ಕೊಡಬೇಕು, ಅವರಿಗೆ ಅಲೋಯನ್ಸ್ ಕೊಡಬೇಕು, ಅವರಿಗೆ ಆಫೀಸು ವ್ಯವಸ್ಥೆ ಆಗಬೇಕು ಅದಕ್ಕೆ ಆ ಒಂದು ಹುದ್ದೆಯನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದೀರಿ. ಈ ದೇಶದ ಹಣಕಾಸಿನ ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿರುವಾಗ ಇವತ್ತು ನೀವು ಈ ಮಂತ್ರಿಮಂಡಲದ ನಾಯಕತ್ವವನ್ನು ವಹಿಸಿಕೊಂಡಿರುವಾಗ ಕೋ ಆರ್ಡಿನೇಟೆಡ್ ಎಫರ್ಟ್ಸ್ ಇರಬೇಕು. ಪೋಲೀಸ್ ಮತ್ತು ಇತರ ಮುಖ್ಯವಾದ ದೊಡ್ಡ ದೊಡ್ಡ ಖಾತೆಗಳನ್ನು ಹೊಂದಿದ್ದೀರಿ, ಈವೊತ್ತು ಪೋಲೀಸ್ ಖಾತೆ ಎಷ್ಟುಮಟ್ಟಿಗೆ ನಡೆಯುತ್ತಾ ಇದೆ ಎಂಬುದನ್ನು ನೋಡಿದರೆ ನನಗಂತೂ ಆಶ್ಚರ್ಯವಾಗಿದೆ. ಸಭಾಪತಿಯವರೇ ನನಗೆ ದಿನಬೆಳಗಾದರೆ 1-2-3-4 ಕಾಗದಗಳು ಬರುತ್ತವೆ. ಪೋಲೀಸ್‌ನವರು ಮಾಡತಕ್ಕ ಅತ್ಯಾಚಾರದ ಬಗ್ಗೆ ಪ್ರತಿದಿವಸ ಕಾಗದ ಬರುತ್ತದೆ, ಒಬ್ಬ ಸಬ್ ಇನ್‌ಸ್ಪೆಕ್ಟರು ಮಾಡತಕ್ಕ ಕೆಲಸ, ಮತ್ತೊಬ್ಬ ಇನ್‌ಸ್ಪೆಕ್ಟರು ಮಾಡತಕ್ಕ ಕೆಲಸ, ಚಿತ್ರಹಿಂಸೆಯನ್ನು ಕೊಡುತ್ತಾರೆ, ಜನರು ನೆಮ್ಮದಿಯಿಂದ ಬಾಳತಕ್ಕ ಅವಕಾಶವೇ ಇಲ್ಲವೇನೋ ಎಂಬ ಮಟ್ಟಕ್ಕೆ ಪೋಲೀಸ್ ಇಲಾಖೆ ಹೋಗುತ್ತಾ ಇದೆ. ಇಂತಹ ನಾಚಿಕೆಗೇಡಿನ ಪರಿಸ್ಥಿತಿ ಇದ್ದಾಗ್ಯೂ ಕೂಡ ಮುಖ್ಯಮಂತ್ರಿಗಳು ತಮ್ಮ ಹೇರಳವಾದ ಜವಾಬ್ದಾರಿಯ ಜೊತೆಗೆ ಇದನ್ನು ಎಷ್ಟುಮಟ್ಟಿಗೆ ಹೊರುವುದಕ್ಕೆ ಸಾಧ್ಯ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳುತ್ತೇನೆ. ಪೋಲೀಸ್ ಇಲಾಖೆಗೆ ನೇರವಾಗಿ ಒಬ್ಬ ಮಂತ್ರಿಯನ್ನು ಮಾಡಿ ಆ ಜವಾಬ್ದಾರಿಯನ್ನು ಅವರಿಗೆ ವಹಿಸುವುದು ಲೇಸು ಎಂದು ಸೂಚಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪೋಲೀಸ್ ಇಲಾಖೆಯ ವಿಚಾರವನ್ನು ಹೇಳುತ್ತಾ ಹೋದರೆ ಬಹಳ ಇದೆ. ಮೊನ್ನೆ ಯಾರೋ ಕಳ್ಳನೋಟು ತಯಾರು ಮಾಡುತ್ತಾ ಇದ್ದ ಕದೀಮರನ್ನು ಒಂದು ಕಡೆ ಹೋಗಿ ಬಹಳ ಕಷ್ಟಪಟ್ಟು ಹಿಡಿದಿದ್ದಾರೆ. ಹಿಡಿದವರ ಪೈಕಿ ಒಬ್ಬ ಪೋಲೀಸ್‌ನವನು ಇದ್ದನಂತೆ. ಬೇಲಿಯೇ ಎದ್ದು ಹೊಲ ಮೇಯ್ದರೆ ಹೊಲ ಕಾಯುವವರು ಯಾರು ಸ್ವಾಮಿ ? ಇನ್ನೊಂದು ಸಂದರ್ಭದಲ್ಲಿ ವಜ್ರಗಳನ್ನು ಹಿಡಿದರು, ಅವರ ಪೈಕಿ ಒಬ್ಬ ಪೋಲೀಸ್‌ನವರು ಒಬ್ಬ ಮ್ಯಾಜಿಸ್ಟ್ರೇಟರು ಇದ್ದರು ಎಂದು ಕೇಳಿದೆ. ದೇಶದಲ್ಲಿ ನ್ಯಾಯವನ್ನು ರಕ್ಷಣೆ ಮಾಡತಕ್ಕ ಜನಗಳು, ದೇಶದ ಜನರ ಆಸ್ತಿಪಾಸ್ತಿಗಳನ್ನು ಕಾಯತಕ್ಕ ಸರ್ಕಾರ ಇದೆಯೇ ಅನ್ನುವ ಮಟ್ಟಕ್ಕೆ ಇವತ್ತು ಬಂದಿದೆ. ಸಭಾಪತಿಯವರೇ ಈ ರೀತಿ ಆಗುವುದು ಎಲ್ಲಾದರೂ ಉಂಟೇ ? ದೇಶದಲ್ಲಿ ರಾಜಾರೋಷವಾಗಿ ಕಳ್ಳನೋಟುಗಳನ್ನು ತಯಾರು ಮಾಡುವವರು ಇದ್ದು ಅದರ ತಯಾರಿಕೆ ನಡೆಯುತ್ತಾ ಇದೆ. ಅವರು ಲೀಲಾಜಾಲವಾಗಿ ತಯಾರುಮಾಡುತ್ತಾ ಇದ್ದಾರೆ. ಅವರ ಮೇಲೆ ಕೈ ಮಾಡತಕ್ಕ ಶಕ್ತಿ ನಿಮಗೆ ಬರಲಿಲ್ಲ.

ವಿದ್ಯಾಭ್ಯಾಸದ ಇಲಾಖೆಗೆ 46 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ದೇಶ ಮುಂದುವರಿಯುವುದಕ್ಕೆ ವಿದ್ಯಾಭ್ಯಾಸ ತಳಹದಿ, ಇದರಲ್ಲಿ ಒಬ್ಬೊಬ್ಬ ಸಚಿವರು ಬಂದಾಗಲೂ ಕೂಡ ಒಂದೊಂದು ಹೊಸ ಹೊಸ ಕ್ರಮವನ್ನು ಪ್ರಯೋಗ ಮಾಡುತ್ತಾ ಇದ್ದಾರೆ. ಒಂದು ಕ್ರಮವನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ. ಏಕರೂಪವಾದ ಕ್ರಮ ಏಕರೂಪವಾದ ನೀತಿ ಇನ್ನೂ ಕೂಡ ಕಾಣಲು ಅಸಾಧ್ಯವಾಗಿದೆ. ಸಿಲಬಸ್ ಬದಲಾಯಿಸುವುದು, ಒಂದು ವರ್ಷದ ಪಿ.ಯು.ಸಿ.ಯನ್ನು ಎರಡು ವರ್ಷದ ಪಿ.ಯು.ಸಿ.ಯನ್ನಾಗಿ ಮಾಡುವುದು, ಎರಡು ವರ್ಷದ ಡಿಗ್ರಿ ಕೋರ್ಸನ್ನು ಈಗ ಮೂರು ವರ್ಷದ ಡಿಗ್ರಿ ಕೋರ್ಸ್ ಆಗಿ ಮಾಡಿದ್ದೀರಿ. ಇವತ್ತು ಸಿಟಿಗಳಲ್ಲಿ ವಿದ್ಯಾಭ್ಯಾಸ ಎಷ್ಟುಮಟ್ಟಿಗೆ ಇದೆ ಎಂಬುದನ್ನು ನೋಡಿದರೆ ವಿದ್ಯಾಭ್ಯಾಸ ಕೊಡುತ್ತಾ ಇರಬಹುದು ಆದರೆ ಅವರ ಆರೋಗ್ಯ ಭಾಗ್ಯ ನೋಡುವುದಾದರೆ. ಆ ಮಕ್ಕಳು ಬರೀ ಮೂಳೆ ಚಕ್ಕಳವಾಗಿದ್ದಾರೆ. ಬೆಂಗಳೂರಿನಂತಹ ಊರಿನಲ್ಲೇ ಯಾವ ಒಂದು ಕಾಲೇಜಿನ ಮಕ್ಕಳಿಗೂ ಆಟ ಆಡತಕ್ಕ ಮೈದಾನ ಇಲ್ಲ. ಇವತ್ತಿನ ದಿವಸ 46 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಇಲಾಖೆ ಈಗಲಾದರೂ ಬೆಂಗಳೂರಿನಲ್ಲಿ ಸೊಗಸಾದ 2-3 ದೊಡ್ಡ ಸ್ಟೇಡಿಯಂಗಳನ್ನು ಕಟ್ಟಬೇಕು. ಬೆಂಗಳೂರಿನಲ್ಲಿ ಆಲ್ ಇಂಡಿಯಾ ಫುಟ್‌ಬಾಲ್ ಟೂರ್ನಮೆಂಟ್ ಆಯಿತು. 20 ಸಾವಿರ ಜನ ಹಿಡಿಯುವುದಿಲ್ಲ ಅಂಥ ಸ್ಟೇಡಿಯಂ ಇದೆ. ಬೆಂಗಳೂರಿನಂತಹ ಅಧುನಿಕ ನಗರದಲ್ಲಿ ಒಂದು ಲಕ್ಷ ಜನ ಕುಳಿತುಕೊಳ್ಳತಕ್ಕ ಒಂದು ಇಂಟರ್‌ನ್ಯಾಷನಲ್ ಸ್ಟೇಡಿಯಂ ಕಟ್ಟತಕ್ಕ ಯೋಗ್ಯತೆ ಈ

(ಶ್ರೀ ಎಸ್. ಶಿವಪ್ಪ)

ಸರ್ಕಾರದಲ್ಲಿ ಇಲ್ಲ. ಬೆಂಗಳೂರು ನಗರದಲ್ಲಿರತಕ್ಕ ರೇಸ್‌ಕೋರ್ಸ್‌ನ್ನು ಪಟ್ಟಣದ ಮಧ್ಯಭಾಗ
ದಿಂದ ತೆಗೆದು 5–6 ಮೈಲ ಆಚೆಗೆ ಹಾಕಿ ಆ ಸ್ಥಳದಲ್ಲಾದರೂ ಒಂದು ಆಧುನಿಕವಾದ ಸ್ಟೇಡಿಯಂ
ಅನ್ನು ಕಟ್ಟಬೇಕೆಂದು ನಾನು ಈ ಹಿಂದೆಯೇ ಹೇಳಿದ್ದೆ. ಆ ರೀತಿ ಮಾಡಲು ಈಗಲಾದರೂ ಮಾನ್ಯ
ಸಚಿವರು ಮನಸ್ಸು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ವಿದ್ಯಾರ್ಥಿಗಳಿಗೆ ಅವರು
ಓದತಕ್ಕ ಕಾಲದಲ್ಲಿ ಸಂಪಾದನೆ ಮಾಡಿ ಓದತಕ್ಕ ಸೌಕರ್ಯವನ್ನು ಮಾಡಿಕೊಡಬೇಕು. ಅರ್ನ್
ಅಂಡ್ ಲರ್ನ್ ಎಂಬತಕ್ಕ ಪದ್ಧತಿ ನಮ್ಮ ದೇಶದಲ್ಲಿ ಜಾರಿಗೆ ಬರಬೇಕು. ವಿಶ್ವವಿದ್ಯಾನಿಲಯದ
ಮಟ್ಟದಲ್ಲಾದರೂ ಕೂಡ ಈ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದು ಮಾಡಿದ್ದಾರೆ.
ಬೇರೆಯವರಿಗೂ ಕೂಡ ಇದು ಒಂದು ಆದರ್ಶ ಎಂದು ಹೇಳುತ್ತೇನೆ. ಬಾಕಿ ವಿಚಾರಗಳನ್ನು
ಎಜುಕೇಷನ್ ಡಿಮ್ಯಾಂಡ್ ಬಂದಾಗ್ಗೆ ಮಾತನಾಡುತ್ತೇನೆ.

ಸಹಕಾರ ಶಾಖೆಯ ವಿಷಯವಾಗಿ ಹೇಳುವುದಾದರೆ, ಇದು ಉನ್ನತವಾದ ಧ್ಯೇಯಗಳಿಂದ
ಕೂಡಿದ್ದು ಅದು ಈ ದೇಶದ ಸಮಾಜವಾದದ ಅಡಿಗಲ್ಲು ಎಂದು ಒಪ್ಪಿಕೊಳ್ಳುತ್ತಾರೆ. ಆದರೆ
ಸಹಕಾರ ಸಂಘಗಳ ಕ್ಷೇತ್ರದಲ್ಲಿ ಆಗುತ್ತಿರುವ ಅಧ್ವಾನ ನೀತಿ ಮತ್ತಾವ ಕ್ಷೇತ್ರದಲ್ಲಿಯೂ ಇಲ್ಲ.
ಇದು ಕೇವಲ ದರೋಡೆಕಾರರ ಸಂಘವೆಂದು ನಾನು ಒತ್ತಿಒತ್ತಿ ಹೇಳುತ್ತೇನೆ. ಹಗಲುದರೋಡೆ
ಮಾಡುತ್ತಿದ್ದಾರೆ. ಅಲ್ಲಿ ವಿಶಿಷ್ಟವಾದ ಸ್ಥಾನದಲ್ಲಿನ ಅಧ್ಯಕ್ಷರನ್ನು ಯಾರೇ ಆಗಲೀ ಅಲ್ಲಾಡಿಸುವು
ದಕ್ಕೆ ಆಗುವುದಿಲ್ಲ. ಕೆಲವು ಒಳ್ಳೆಯ ಸೊಸೈಟಿಗಳು ಇರಬಹುದು. ಅದರಲ್ಲಿಯೂ ಒಬ್ಬೊಬ್ಬರೂ
ಒಳ್ಳೆಯವರು ಇರಬಹುದು. ಅವರನ್ನು ಮಧ್ಯೆ ಎತ್ತಿ ಹಾಕುತ್ತಾರೆ ಈವೊತ್ತು ಸಹಕಾರ ಸಂಘ
ಗಳಿಗೆ ನಮ್ಮ ಸರ್ಕಾರದವರು ಸುಮಾರು 20 ಕೋಟಿ 79 ಲಕ್ಷ ರೂಪಾಯಿಗಳಷ್ಟು ಷೇರು
ಬಂಡವಾಳವನ್ನು ಹಾಕಿದ್ದಾರೆ. ಆ ಬಂಡವಾಳ ಹಾಕಿರತಕ್ಕದ್ದಕ್ಕೆ ಸಹಕಾರ ಸಂಘಗಳಿಂದ
ಡಿವಿಡೆಂಡ್ ರೂಪದಲ್ಲಿ ರಿಯಲೈಜ್ ಆಗಿರುವುದು ಸುಮಾರು 17 ಲಕ್ಷ 58 ಸಾವಿರ ರೂಪಾಯಿಗಳು.
ಸೇಕಡ 1.8 ರಷ್ಟು ಮಾತ್ರ ಈಗ ಸುಮಾರು 21 ಕೋಟಿ ರೂಪಾಯಿಗಳ ಬಂಡವಾಳಕ್ಕೆ ಸಹಕಾರ
ಸಂಘಗಳಿಂದ ಬರುತ್ತಾ ಇದೆ. ಎಷ್ಟರಮಟ್ಟಿಗೆ ಸಹಕಾರಸಂಘಗಳು ಕೆಲಸಮಾಡುತ್ತಾ ಇವೆ
ಯೆಂಬುದು ಇದರಿಂದರೇ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಸಂಪತ್ತು ಅಭಿವೃದ್ಧಿಯಾಗಬೇಕಾ
ಗಿದ್ದರೆ, ಬಹುಮುಖ್ಯವಾಗಿ ನಮ್ಮ ದೃಷ್ಟಿಗೆ ಈ ದೇಶದ ಕೈಗಾರಿಕೆ ನೀತಿ, ವ್ಯವಸಾಯ ನೀತಿ
ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಯೋಜನೆಗಳ ನೀತಿಗೆ ಸಂಬಂಧಪಟ್ಟ ವಿಚಾರದಲ್ಲಿ ನಾವು
ಬಹಳ ಹೆಚ್ಚಿನ ಗಮನಕೊಡಬೇಕಾಗಿತ್ತು. ಈವೊತ್ತು ನಮ್ಮ ದೇಶದಲ್ಲಿ ಕೈಗಾರಿಕೆ ಎಷ್ಟರ
ಮಟ್ಟಿಗೆ ಕೆಲಸಮಾಡುತ್ತಿದೆಯೆಂದು ಹೇಳಿದರೆ, ನನಗೆ ಬಹಳ ವ್ಯಸನವಾಗುವ ಮಟ್ಟಕ್ಕೆ
ಮೈಸೂರು ದೇಶದ ಕೈಗಾರಿಕೆ ನೀತಿ ಬಂದಿದೆ. ಇವತ್ತು ನಮ್ಮ ದೇಶದಲ್ಲಿ ಗೌರ್ನಮೆಂಟ್
ಇಂಡಸ್ಟ್ರಿಯಲ್ ಕನ್‌ಸರ್ನ್ಸ್ ಏನಿವೆಯೋ ಅವಕ್ಕೆ ವೆಚ್ಚ ಮಾಡಿರುವುದು ಸುಮಾರು 11 ಕೋಟಿ 16 ಲಕ್ಷ
ರೂಪಾಯಿಗಳು. ಇಷ್ಟು ಮೊಬಲಗು ಸರ್ಕಾರದ ನೇತೃತ್ವದಲ್ಲಿರತಕ್ಕ ಕಾರ್ಖಾನೆಗಳಿಗೆ ಖರ್ಚಾಗು
ತ್ತಿದೆ. ಯಾವಾಗಲೂ ಕೈಗಾರಿಕೆ ಮಾಡುವುದು ಸಂಪತ್ಸಾಧನೆ ಮಾಡುವುದಕ್ಕೋಸ್ಕರ 11 ಕೋಟಿ
16 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವಾಗ ಕೈಗಾರಿಕೆಗಳಿಂದ ಲಾಭ 10 ಕೋಟಿ 85 ಸಾವಿರ
ರೂಪಾಯಿಗಳ ರೆವಿನ್ಯೂ ಬಂದಿದೆ. ಇದರಿಂದ 1 ಕೋಟಿ ರೂಪಾಯಿಗಳವರೆಗೂ ನಷ್ಟವಾಯಿತು.
ಸುಮಾರು 11—12 ಕೋಟಿ ರೂಪಾಯಿಗಳಷ್ಟು ಬಂಡವಾಳ ಹಾಕಿರುವ ಸರ್ಕಾರದ ನೇತೃತ್ವದಲ್ಲಿ
ನಡೆಯುವಂಥ ಕಾರ್ಖಾನೆಗಳಿಂದ ಸುಮಾರು 1 ಕೋಟಿ ರೂಪಾಯಿಗಳಷ್ಟು ನಷ್ಟವಾಯಿತು
ಅಂದರೆ, ಇದು ಎಂತಹ ಕೈಗಾರಿಕೆಯ ನೀತಿ, ಸರ್ಕಾರ ಏನು ಮಾಡುತ್ತಿದೆ ಎಂದು ನಾನು ಪ್ರಶ್ನೆ
ಮಾಡುತ್ತೇನೆ. ಸರ್ಕಾರದವರು ಏನು ಹೇಳುತ್ತಾರೆಂದರೆ, ಇಂತಹ ಕೈಗಾರಿಕೆಗಳನ್ನು ನಮ್ಮ
ನೇತೃತ್ವದಲ್ಲಿ ನಡೆಸಿಕೊಂಡು ಹೋಗುತ್ತಿರುವಾಗ ಪ್ರಾರಂಭದಲ್ಲಿ ಲುಕ್ಸಾನು ಆಗುತ್ತದೆ. ಅದಕ್ಕೆ
ಡೆಸ್ಪರೇಟ್ ಆಗಿ ಹಣಕಾಸಿನ ಸಚಿವರು ಅದನ್ನು ನಾವು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ, ಅದನ್ನು
ಬೇರೆ ರೀತಿಯಲ್ಲಿ ವಿಲೇವಾರಿ ಮಾಡಬೇಕು ಎಂದು ಹೇಳಿದ್ದಾರೆ. ಸರಿಮಾಡಬೇಕೆಂಬ ಯೋಚನೆ
ಯನ್ನು ಇವರು ಬಿಟ್ಟಿದ್ದಾರೆ. ಅವರು ಕೈಗಾರಿಕೆಗೆ ಇಡೀ ಭಾರತದೇಶದಲ್ಲಿ ಒಂದು ಒಳ್ಳೆಯ
ಹೆಸರನ್ನು ಪಡೆದ ಸರ್ ಎಂ. ವಿಶ್ವೇಶ್ವರಯ್ಯನವರು ಹುಟ್ಟಿದ ನಾಡು ಇದು. ಈ ದೇಶವನ್ನು
ಚೆಲುವ ಕನ್ನಡನಾಡು ಎಂದು ಎಲ್ಲರೂ ಹಾಡಿದ್ದಾರೆ. ಕೈಗಾರಿಕೆಗೆ ಪ್ರಥಮ ಶ್ರೇಣಿಯನ್ನು ಈ
ರಾಜ್ಯ ಪಡೆದಿತ್ತು. ಅಂತಹ ಕಾಲದಲ್ಲಿ ಬಂದಂಥ ಕೈಗಾರಿಕೆಗಳನ್ನು ಹೆಚ್ಚಿನ ರೀತಿಯಲ್ಲಿ
ಅಭಿವೃದ್ಧಿಪಡಿಸುವ ಕಾರ್ಯವನ್ನು ಈ ಸರ್ಕಾರ ಏಕೆ ಮಾಡಬಾರದು ? ಇವರು ಅನುಸರಿಸುತ್ತಿರುವ
ಕೈಗಾರಿಕೆಯ ನೀತಿ ನೋಡಿದರೆ, ಈ ದೇಶದಲ್ಲಿ ಸರ್ಕಾರ ಇದೆಯೇ ಎಂದು ನಾನು ಕೇಳಬೇಕಾಗಿದೆ.
ಸರ್ಕಾರ ಎಂದು ಕರೆಯುವುದಕ್ಕೆ ಇದಕ್ಕೆ ಯೋಗ್ಯತೆ ಇದೆಯೇ ? ಈವೊತ್ತು ನಮ್ಮ ದೇಶದಲ್ಲಿ

ಎಷ್ಟೊಂದು ಸಂಪತ್ತು ಇದೆ ಅಂದರೆ, ವಾಣಿಜ್ಯ ಸಂಪತ್ತು, ಅರಣ್ಯ ಸಂಪತ್ತು, ನದಿ ಸಂಪತ್ತು ಮತ್ತು ಸಮುದ್ರ ತೀರಪ್ರದೇಶ ಸಂಪತ್ತು—ಹೀಗೆ ಇಷ್ಟೊಂದು ಪ್ರಕೃತಿ ಸಂಪತ್ತನ್ನುಳ್ಳ ಈ ದೇಶದಲ್ಲಿ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಈವೊತ್ತು ಈ ಸರ್ಕಾರ ಏಕೆ ಇರಬೇಕು ? 22 ವರ್ಷಗಳಿಂದಲೂ ನೀವು ಏನು ಸಾಧನೆ ಮಾಡಿದ್ದೀರಿ ! ನಿಮ್ಮ ಮಿಲಟರಿಯಿಂದ ಈ ದೇಶದಲ್ಲಿ ಆಡಳಿತ ಮಾಡುತ್ತೇವೆಂದು ಹೇಳಿದರೆ ಅದು ಆಗುವುದಿಲ್ಲ. ನಮ್ಮ ಜನ ನಿಮ್ಮ ಖಜಾನೆಗೆ ಕೇಳಿದಷ್ಟು ಹಣ ಕೊಟ್ಟಿದ್ದಾರೆ. ಆದರೆ ನೀವು ಮಾಡಿದಂಥ ಕಾರ್ಯವೇನು ! ಖಜಾನೆಯಲ್ಲಿದ್ದ ಹಣವನ್ನು ಲೂಟಿಮಾಡಿ, ಸಾಲಮಾಡಿ, ಸಾಲಕ್ಕೆ ಬಡ್ಡಿ ಕಟ್ಟುವ ಜನರನ್ನಾಗಿ ಈ ದೇಶದಲ್ಲಿರುವವರನ್ನು ಮಾಡುತ್ತಿದ್ದೀರಿ. ಆದ್ದರಿಂದ ನೀವು ಅರಗಳಿಗೆ ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಿದೆಯೇ ಎಂದು ತಮ್ಮ ಮೂಲಕ ಪ್ರಶ್ನೆ ಕೇಳುತ್ತೇನೆ. ಈ ದೇಶವನ್ನು ಇಷ್ಟೊಂದು ಮಟ್ಟಕ್ಕೆ ತಂದಿರುವ ಜವಾಬ್ದಾರಿಯನ್ನು ಇವರು ಈವೊತ್ತು ಹೊರಲೇ ಬೇಕು. ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದರು. ಇಂಡಸ್ಟ್ರಿಯಲೈಜ್ ಆರ್ ಪೆರಿಷ್ ಎಂದು. ಈವೊತ್ತು ಈ ದೇಶದಲ್ಲಿ ನಾವು ಸರಿಯಾಗಿ ಬಾಳಬೇಕಾಗಿದ್ದರೆ, ಈ ದೇಶದ ಆರ್ಥಿಕ ಸಂಪತ್ತು ಬೆಳೆಯಬೇಕಾಗಿದ್ದರೆ, ಈ ದೇಶದ ಕೈಗಾರಿಕೆಯ ನೀತಿಯನ್ನು ಎಷ್ಟು ಭದ್ರವಾಗಿ ನಡೆಸುತ್ತೇವೋ ಅದರ ಮೇಲೆ ನಿಂತಿದೆ. ನಮ್ಮ ದೇಶದಲ್ಲಿ ಎಲ್ಲಿಯೂ ಇಲ್ಲದೇ ಇರುವಷ್ಟು ಇಂಜನಿಯರಿಂಗ್ ಕಾಲೇಜುಗಳು ಸಹಸ್ರಾರು ಮೆಕಾನಿಕಲ್ ಇಂಜನಿಯರುಗಳು, ಎಲೆಕ್ಟ್ರಿಕಲ್ ಇಂಜನಿಯರುಗಳು ಮತ್ತು ಸಿವಿಲ್ ಇಂಜನಿಯರುಗಳು—ಹೀಗೆ ಎಲ್ಲಾ ತರಹ ಜನಗಳು ಇದ್ದಾರೆ. ಇಷ್ಟೊಂದು ಜನ ಪ್ರವೀಣರು ಇದ್ದು, ಇಷ್ಟೊಂದು ಸಂಪತ್ತನ್ನು ಇಟ್ಟುಕೊಂಡು ಈ ದೇಶ ಆರ್ಥಿಕವಾಗಿ ಏತಕ್ಕೆ ಮುಂದುವರಿಯಲಿಲ್ಲ ? ಈ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕು.

ಇವತ್ತು ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ಮಾಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆ. ಅದು ಬಹಳ ಒಳ್ಳೆಯ ಯೋಚನೆ. ಆ ಕಮಿಟಿಯು ಕೈಕಟ್ಟಿ ಇಂಥಾದ್ದೇ ಮಾಡಿ ಎಂದು ಹೇಳಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ, ಅದು ಸ್ಟ್ಯಾಟ್ಯುಟರಿ ಕಮಿಟಿ ಆಗಬೇಕು. ಹನಗೆಟ್ಟಿರತಕ್ಕ ಕಾರ್ಖಾನೆಗಳನ್ನು ಮೇಲ್ವಿಚಾರಣೆ ಮಾಡಿ ಯಾವರೀತಿಯಲ್ಲಿ ಸಂಪತ್ತನ್ನು ಅಭಿವೃದ್ಧಿ ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಸಭಾಧ್ಯಕ್ಷರಿಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ. ತಾವು ಪಬ್ಲಿಕ್ ಅಕೌಂಟ್ಸ್ ಕಮಿಟಿ ಅಧ್ಯಕ್ಷರಾಗಿ ಕೂತಾಗ್ಗೆ ಮನನೊಂದು ನೋಡಿದ್ದೀರಿ. ಮೈಸೂರು ದೇಶದಲ್ಲಿ ಸಂಪದಭಿವೃದ್ಧಿ ಕಾರ್ಯಕ್ರಮಗಳನ್ನು ಅತಿ ಜಾಗ್ರತೆಯಾಗಿ ಮಾಡಬೇಕು. ಈ ರಾಜ್ಯದಲ್ಲಿರುವಷ್ಟು ಪ್ರವಾಸಿಗಳ ಕೇಂದ್ರಗಳು ಎಲ್ಲಿಯೂ ಇಲ್ಲ. ಮೈಸೂರು ಸುಂದರವಾದ ರಾಜ್ಯವೆಂದು ಹೆಸರು ಪಡೆದಿದೆ. ಮೈಸೂರಿನ ಬೃಂದಾವನ, ಹಳೆಯಬೀಡು, ಬೇಲೂರು, ಶ್ರವಣಬೆಳಗೊಳ—ಮುಂತಾದ ಸ್ಥಳಗಳಲ್ಲಿ ಇತಿಹಾಸ ಪ್ರಸಿದ್ಧಿಯಾಗಿರುವ ಕಲಾಕೃತಿಗಳನ್ನು ನಾವು ನೋಡುತ್ತಿದ್ದೇವೆ. ಇಡೀ ಪ್ರಪಂಚದ ಪ್ರವಾಸಿಗಳನ್ನು ಆಕರ್ಷಣೆ ಮಾಡುವ ಶಕ್ತಿ ಇಡೀ ಮೈಸೂರು ದೇಶದಲ್ಲಿದೆ. ನಾನು ಮೊನ್ನೆ ಪ್ರವಾಸದಲ್ಲಿ ಅನೇಕ ಪಾಶ್ಚಾತ್ಯ ದೇಶಗಳಿಗೆ ಹೋಗಿದ್ದಾಗ ನೋಡಿದ್ದೇನೆ. ನಮ್ಮ ರಾಜ್ಯದಲ್ಲಿದ್ದಂತಹ ಸುಂದರವಾದಂತಹ ಜಾಗಗಳು ಎಲ್ಲೂ ಇಲ್ಲ. ಅಲ್ಲಿದ್ದಂತಹ ಕೆಲವು ಸಣ್ಣ ಸ್ಥಳಗಳನ್ನು ಸುಂದರವಾಗಿ ಮಾಡಿದ್ದಾರೆ. ರಸ್ತೆಗಳನ್ನು ಚೆನ್ನಾಗಿ ಮಾಡಿದ್ದಾರೆ. ಮತ್ತು ಅಲ್ಲಿ ಒಂದು ಸುಂದರಮಯವಾದ ವಾತಾವರಣವನ್ನು ಕಲ್ಪಿಸಿಕೊಟ್ಟಿದ್ದಾರೆ. ಈವೊತ್ತಿನ ದಿವಸ ಇದಕ್ಕೆ ಹತ್ತಾರು ಕೋಟಿ ರೂಪಾಯಿ ಖರ್ಚಾದರೂ ಪರವಾಗಿಲ್ಲ. ಇವತ್ತು ಮೈಸೂರು, ಬೇಲೂರು, ಹಳೆಬೀಡು, ಇಲ್ಲಿಗೆ ಒಂದು ಗಂಟೆಯೊಳಗೆ ಹೋಗಲು ಒಂದು ಡಬ್ಬಲ್ ರೋಡನ್ನು ನಿರ್ಮಾಣ ಮಾಡಬೇಕು. ಇವತ್ತಿನದಿವಸ ಅಲ್ಲಿಗೆ ಯಾರಾದರೂ ಹೋಗಬೇಕಾದರೆ, ಎಲ್ಲಾ ಸರ್ಕಾರವನ್ನು ಬೈಯ್ದುಕೊಂಡು ಹೋಗುತ್ತಿದ್ದಾರೆ. ಮುಂದೆ ಯಾರಾದರೂ ಬರುವವರಿದ್ದರೆ, ಅಲ್ಲಿಗೆ ಹೋಗಬೇಡಿ ಎಂದು ಹೇಳುತ್ತಾರೆ. ಇವತ್ತು ಟೂರಿಸಂ ಎಂಬುದು ಒಂದು ಕೈಗಾರಿಕೆ. ನಮ್ಮ ರಾಜ್ಯದಲ್ಲಿ ಇರುವಂತಹ ಹಂಪೆ, ಜೋಗ್ ಫಾಲ್ಸ್, ಮೊದಲಾದುವುಗಳನ್ನು ಒಂದು ಟೂರಿಸ್ಟ್ ಸೆಂಟರ್ ಆಗಿ ಮಾಡಬೇಕು. ನಾನು ಒಂದು ಸಣ್ಣ ದ್ವೀಪಕ್ಕೆ, ನನ್ನ ಪ್ರವಾಸದಲ್ಲಿ ಹೋಗಿದ್ದೆ. ಅಲ್ಲಿ ಇದರಿಂದ ನೂರು ಕೋಟಿ ರೂಪಾಯಿಯಷ್ಟು ಆದಾಯವನ್ನು ಮಾಡುತ್ತಿದ್ದಾರೆ. ಇವತ್ತು ನಮ್ಮ ಶ್ರವಣಬೆಳಗೊಳದ ಗೋಮಟೇಶ್ವರನ ರೀತಿಯಲ್ಲಿ ಅಲ್ಲಿ ಏನಾದರೂ ಇರುತ್ತಿದ್ದರೆ, ಅದಕ್ಕೆ ಇಲೆಕ್ಟ್ರಿಸಿಟಿ ಹಾಕುತ್ತಿದ್ದರು, ರೋಪ್‌ವೇ ಹಾಕುತ್ತಿದ್ದರು, ಮತ್ತು ಈ ರೀತಿಯಿಂದ ಬೇಕಾದಷ್ಟು ಹಣ ಸಂಪಾದನೆ ಮಾಡುತ್ತಿದ್ದರು. ಆದರೆ ನಮ್ಮ ದೇಶದಲ್ಲಿ ಇವುಗಳನ್ನು ಯಾವುದನ್ನೂ ಮಾಡುವುದಕ್ಕಾಗಲಿಲ್ಲ.

ಇವತ್ತಿನ ದಿವಸ ವ್ಯವಸಾಯದ ವಿಚಾರವನ್ನು ತೆಗೆದುಕೊಳ್ಳುವುದಾದರೆ, ಹಣವನ್ನು ಹೆಚ್ಚಾಗಿ ಖರ್ಚು ಮಾಡಬೇಕೆಂದು ಹೇಳುತ್ತಾರೆಯೇ ಹೊರತು, ವ್ಯವಸಾಯ ಮಾಡತಕ್ಕವನಿಗೆ

(ಶ್ರೀ ಎಸ್. ಶಿವಪ್ಪ)

ಅತ್ಯಗತ್ಯವಾಗಿ ಕೊಡತಕ್ಕದ್ದನ್ನು ಶೀಘ್ರವಾಗಿ, ನೇರವಾಗಿ ಕೊಡುತ್ತಾ ಇಲ್ಲ. ಇವತ್ತು ಅಗತ್ಯವಾಗಿರತಕ್ಕಂತದ್ದು ಟ್ರಾಕ್ಟರ್ಸ್, ಬುಲ್‌ಡೋಸರ್ಸ್, ಬೀಜ, ಗೊಬ್ಬರ ಮುಂತಾದುವುಗಳನ್ನು ಅವನಿಗೆ ನೇರವಾಗಿ ಒದಗಿಸಿಕೊಟ್ಟರೆ, ಅವನು ಭೂಮಿಯನ್ನು ಚೆನ್ನಾಗಿ ಉಪಯೋಗಿಸಿಕೊಂಡು ಸಂಪತ್ತನ್ನು ಹೆಚ್ಚಿಸಿಕೊಳ್ಳಬಹುದು. ಇದರಿಂದ ನಮ್ಮ ಆಹಾರ ಸಮಸ್ಯೆ ಏನಿದೆ, ಅದು ಕೂಡ ಪರಿಹಾರವಾಗುವುದು, ಮಾತ್ರವಲ್ಲದೆ. ಮೈಸೂರಿಗೆ ಆಹಾರ ಉಪಯೋಗಿಸಿಕೊಂಡು, ಹೊರಗಡೆ ಕೂಡಾ ಕಳಿಸುವ ರೀತಿಯಲ್ಲಿ ಉತ್ಪತ್ತಿ ಮಾಡುವ ಶಕ್ತಿ ನಮ್ಮ ರೈತನಿಗೆ ಇದೆ. ಇವತ್ತು ರೈತನಿಗೆ ನೀರಿಲ್ಲದೆ ಬಹಳ ತೊಂದರೆಯಾಗುತ್ತಿದೆ. ಇವತ್ತು ರೈತರಿಗೆ ಎಲ್ಲಿ ನೀರಿಲ್ಲವೋ, ಅಲ್ಲಿ ಬೋರ್‌ವೆಲ್‌ಗಳನ್ನು ತೆಗೆದು, ಟ್ರಾಕ್ಟರ್ಸ್ ಮತ್ತು ಬುಲ್‌ಡೋಸರ್ಸ್ ಎಲ್ಲ ಒಂದೊಂದು ಡಿವಿಜನ್ ಮಾಡಿಕೊಂಡು ಕೊಡಬೇಕು. ಇವತ್ತು ಟ್ರಾಕ್ಟರ್ಸ್ 1000 ಬಂತು ಎಂದು ಕೇಳಿದ್ದೇನೆ. ಅದನ್ನು ಸರಿಯಾಗಿ ಎಲ್ಲರಿಗೂ ಹಂಚಬೇಕು. ಬೋರ್‌ವೆಲ್‌ಗಳನ್ನು ತೆಗೆದು ಶೀಘ್ರವಾಗಿ ನೀರನ್ನು, ಕೊಟ್ಟದ್ದೇ ಆದರೆ, ಬೇಕಾದ ಗೊಬ್ಬರವನ್ನು ಕೊಟ್ಟದ್ದೇ ಆದರೆ, ನಿಮಗೆ ಎಷ್ಟು ಆಹಾರ ಬೇಕು ಅದನ್ನು ನಾನು ಬೆಳೆಸಿಕೊಡುತ್ತೇನೆ. ಇವತ್ತಿನ ದಿವಸ ರೈತನಿಗೆ ಮಾಡತಕ್ಕ ಶಕ್ತಿ ಇದೆ. ಇವತ್ತು ವ್ಯವಸಾಯ ಎಂಬುದು ಎಲ್ಲಾ ಕೈಗಾರಿಕೆಗೂ, ಆಧಾರ ಸ್ತಂಭವಾಗಿರತಕ್ಕದ್ದು.

ಈವೊತ್ತು ನೀರಾವರಿ ವಿಚಾರವನ್ನು ತೆಗೆದುಕೊಂಡು, ಮೈಸೂರಿನಲ್ಲಿ ಇದು ಕುಂಟಿ ಕುಂಟಿ ನಡೆಯುತ್ತಿದೆ. ಇವತ್ತು 171 ಕೋಟಿ ರೂಪಾಯಿ ಬಂಡವಾಳ ಹಾಕಿದ್ದಾರೆ. ಈ ವರ್ಷ 186 ಕೋಟಿ ರೂಪಾಯಿ ಮಾಡುತ್ತೇವೆಂದು ಹೇಳಿದ್ದಾರೆ. ಎಷ್ಟು ಮಾಡಿದರೂ, ಎಲ್ಲಾ ಅರ್ಧಂಬರ್ಧ ನೀರಾವರಿ ಯೋಜನೆಯಾದರೆ, ಪ್ರಯೋಜನ ಏನು? ನೀರಾವರಿಯಿಂದ ಏನು ಪ್ರಯೋಜನ ಬರಬೇಕಾಗಿತ್ತೋ, ಅದು ಬರಲಿಲ್ಲ. ಅದಕ್ಕೋಸ್ಕರ ಇವತ್ತು ಮನಸ್ಸು ಮಾಡಿ ಸರ್ಕಾರದವರು ಕಾವೇರಿ ಬೇಸಿನ್‌ನಲ್ಲಿ 1974ಕ್ಕೆ ಅಗ್ರಿಮೆಂಟ್ ಮುಗಿಯುವುದರೊಳಗೆ, ಹೇರಳವಾದ ಹಣವನ್ನು ಹಾಕಿ ಕೆಲಸ ಮಾಡಬೇಕು. ಇವತ್ತು ಇವರು ರಿಸೋರ್ಸಸ್ ತರಬೇಕೆಂದು ಒಂದು ಕಮಿಟಿ ಮಾಡಿದ್ದಾರೆ. ಹಣ ಏನು ಆಕಾಶದಿಂದ ಬರಬೇಕೋ? ಹಣ ಇದೆ. ದೇಶದಲ್ಲಿ ಹಣವಿಲ್ಲದೆ, ಇನ್ನೆಲ್ಲಿ ಇರುವುದು? ಸರಿಯಾದ ನಿಷ್ಠಾವಂತತೆಯಿಂದ ಇದ್ದರೆ ದೇಶದ ಜನರು ಎಷ್ಟು ಬೇಕಾದರೂ ಕೊಡುತ್ತಾರೆ. ಆದರೆ ಜನರಿಗೆ ಇರತಕ್ಕ ಶಂಕೆ ಏನೆಂದರೆ, ಕೊಟ್ಟ ದುಡ್ಡು ಸೋರಿ ಹೋಗುತ್ತದಲ್ಲ, ಎಂದು. ಇವತ್ತು ಇವರಲ್ಲಿರತಕ್ಕಂತಹ ಪಾತ್ರೆ ತೂತಿನ ಪಾತ್ರೆಯಾಗಿದೆ. ಅದರಲ್ಲಿ ಎಲ್ಲಾ ಸೋರಿ ಹೋಗುತ್ತದೆ. ಆ ಪಾತ್ರೆ ಬಹಳ ಗಟ್ಟಿಯಾಗಿರಬೇಕು. 'ಮಾರಿಯ ಕಣ್ಣು ಹೋತದ ಮೇಲೆ' ಎಂದು ಏನು ಹೇಳುತ್ತಾರೆ, ಅದೇ ರೀತಿ ನಿಮ್ಮ ದೃಷ್ಟಿ ಇವತ್ತು ಹಳ್ಳಿಗಾಡಿನಲ್ಲಿರತಕ್ಕಂತಹ ಜನರ ಮೇಲೆ ಬಿದ್ದಿದೆ. ಹಳ್ಳಿ ಜನರು ಹಣ ಇಟ್ಟಿದ್ದಾರೆ, ಅದನ್ನು ತೆರಿಗೆ ಹಾಕಿ ಖಜಾನೆಗೆ ತೆಗೆದುಕೊಳ್ಳಬೇಕು ಎನ್ನುವಂತದ್ದನ್ನು ಒಂದು ಸಲಹೆಯರೂಪದಲ್ಲಿ ಹೇಳುತ್ತಿದ್ದೀರಿ. ಇದು, ಈ ನಿಮ್ಮ ಒಂದು ಕಲ್ಪನೆ ಏನಿದೆ, ಅದು ತಪ್ಪು ಕಲ್ಪನೆ. ಇವತ್ತು ನೀವು, ಯಾರೋ ಒಬ್ಬೊಬ್ಬರು ಶ್ರೀಮಂತರನ್ನು, ಒಬ್ಬೊಬ್ಬರು ಕಾಫೀ ಪ್ಲಾಂಟರನ್ನು ನೋಡಿಕೊಂಡು, ವ್ಯವಸಾಯದಲ್ಲಿರತಕ್ಕ ಜನರು ಬಹಳ ಐಶ್ವರ್ಯವಂತರಾಗಿದ್ದಾರೆ ಎಂದು ಹೇಳುವುದು ತಪ್ಪು. ಇವತ್ತು 100ಕ್ಕೆ 95 ಭಾಗದ ಜನರು ಒಂದು ಹೊತ್ತು ಕೂಡ ಊಟಕ್ಕಿಲ್ಲದಿರತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಅದನ್ನು ನಾವು ನೋಡಬೇಕು. ಇವತ್ತು ಅವರು ಬೆಂದು ಬೆಂಡಾಗಿ ಹೋಗಿದ್ದಾರೆ. ತಾವು ಹೇಳುತ್ತಿದ್ದೀರಿ-ಕಂದಾಯ ವಜಾ ಮಾಡುತ್ತೇವೆ, ರಿಲೀಫ್ ಕೊಡುತ್ತೇವೆಂದು. ನೀವು ನವಂಬರ್ 30ನೇ ತಾರೀಕಿನ ವರೆಗೆ ರಿಲೀಫ್ ಕಾಮಗಾರಿಗಳನ್ನು ಬಹಳ ನಿಷ್ಠೆಯಿಂದ ಮಾಡಿದ್ದೀರಿ. ಕಾರಣ ತಾಲ್ಲೂಕು ಬೋರ್ಡು ಚುನಾವಣೆ ನವಂಬರ್ 30ನೇ ತಾರೀಕಿನವರೆಗೆ ನಡೆಯಿತು. ಈಗ ಕಾಮಗಾರಿ ಕೆಲಸ ಬಂದಾಗಿ ಹೋಯಿತು. ಇದು ಚುನಾವಣೆಗೋಸ್ಕರ ಮಾಡಿದ್ದೀರಾ, ಅಥವಾ ರೈತರಿಗೋಸ್ಕರ ಮಾಡಿದಿರಾ? ಇವತ್ತು ಅನೇಕ ಪ್ರದೇಶಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ, ಮಾಡುವುದಕ್ಕೆ ಕೆಲಸವಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲ. ಇಂಥ ಪರಿಸ್ಥಿತಿಯಲ್ಲಿ ರಿಲೀಫ್ ಕಾಮಗಾರಿಗಳನ್ನು ಇನ್ನೂ ಮುಂದುವರಿಸಿಕೊಂಡು ಹೋಗಬೇಕಾಗಿದೆ; ಮತ್ತು ಮೂರು ವರ್ಷದಿಂದ ನಿಂತಿರತಕ್ಕ ಕಂದಾಯ ಏನಿದೆ, ಅದನ್ನು ಮುಂದೂಡುವುದಲ್ಲ, ಅದನ್ನು ವಜಾ ಮಾಡಬೇಕು. ಹಿಂದೆ ರಾಚಯ್ಯನವರು ಹೇಳಿದ್ದಾರೆ, ನಾಲ್ಕಾಣೆಗಿಂತ ಕಡಿಮೆ ಬೆಳೆ ಎಲ್ಲಿದೆಯೋ ಅಲ್ಲಿ ವಜಾ ಮಾಡುತ್ತೇವೆಂದು. ಆ ಮಾತು ಎಲ್ಲಿ ಹೋಯಿತು ಸ್ವಾಮಿ!

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ರೆಮಿಶನ್ ಕೊಡುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ಈಗಾಗಲೇ ಹಳ್ಳಿಗಳಲ್ಲಿ ಮೂರು ವರ್ಷದ ಕಂದಾಯವನ್ನು ವಸೂಲು ಮಾಡುವುದಕ್ಕೆ ಅಧಿಕಾರಿಗಳು ಹೊರಟಿದ್ದಾರೆ. ಜಿಲ್ಲಾಧಿಕಾರಿಗಳು ಯಾರು ಹೆಚ್ಚು ಕಂದಾಯ ತಂದು ಕೊಡುತ್ತಾರೆ, ಅವರಿಗೆ ಬಹುಮಾನ ಕೊಡುತ್ತಾರೆಂದು ಹೇಳಿದ್ದನ್ನು ಕೇಳಿದ್ದೇನೆ ಇನ್ನು ಕೆಲವರು ಹೇಳುತ್ತಾರೆ, ವೀರೇಂದ್ರ ಪಾಟೀಲರೇ, 'ಕಂದಾಯ ಯಾರು ಹೆಚ್ಚು ವಸೂಲು ಮಾಡುತ್ತಾರೋ, ಅವರಿಗೆ ಇನಾಮು ಕೊಡುತ್ತೇನೆಂದು' ಹೇಳಿದ್ದಾರಂತೆ. ಇವತ್ತು ಜನರು ಕಂಗೆಟ್ಟು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಆದ್ದರಿಂದ ಹಿಂದಿನ ಕಂದಾಯವನ್ನು ಸಂಪೂರ್ಣ ವಾಗಿ ವಜಾಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಯವರು ನೀರಾವರಿ ಯೋಜನೆಗಳಿಗೆ ಹಣವನ್ನು ಒದಗಿಸಬೇಕೆಂದು ಒಂದು ಹಣವನ್ನು ಪತ್ತೆ ಮಾಡತಕ್ಕ ರಿಸೋರ್ಸಸ್ ಕಮಿಟಿ ಮಾಡಿದ್ದಾರೆ. ನಿನ್ನೆ ತಾನೆ ಆ ಕಮಿಟಿ ಮೀಟಿಂಗ್ ಕರೆದಿದ್ದರು. ನಾನೂ ಹೋಗಿದ್ದೆ. ಅಲ್ಲಿ ಅನೇಕ ಸಲಹೆಗಳು ಬರುತ್ತವೆ. ರೈತರಿಗೆ ಸಾಲ ಕೊಟ್ಟರೆ, ನೀರಾವರಿಯಿಂದ ಅವರು ಬೆಳೆ ಮಾಡಿ, ಅದರ ಫಲ ಬಂದಾಗ, ಅವರೇ ವಾಪಸ್ಸು ಕೊಡುತ್ತಾರೆಂದು ಕೆಲವರು ಹೇಳಿದ್ದಾರೆ. ಇವತ್ತು ಸರ್ಕಾರ ಒಂದು ಮಾರ್ವಾಡಿ ರೀತಿಯಲ್ಲಿ ಕೆಲಸ ಮಾಡುತ್ತಿದೆ, ಯಾವಾಗಿನಿಂದ ಇವರು ಮಾರ್ವಾಡಿಯಾಗಿದ್ದಾರೆ!

4-30 P.M.

ರೈತರ ಹತ್ತಿರ ದುಡ್ಡು ಇಲ್ಲ. ರೈತರಿಗೆ ಅವರ ಮಕ್ಕಳನ್ನು ಓದಿಸುವುದಕ್ಕೆ ಅವರ ಮಕ್ಕಳಿಗೆ ಮದುವೆಯನ್ನು ಮಾಡುವುದಕ್ಕೆ ದುಡ್ಡು ಇಲ್ಲ. ಹೀಗಿರುವಾಗ ನೀವು ರೈತರನ್ನು ದುಡ್ಡು ಸಾಲಕೊಡಿ ನೀರಾವರಿ ಯೋಜನೆಯನ್ನು ಮಾಡುತ್ತೇವೆ. ಮುಂದೆ ನಿಮ್ಮ ಸಾಲವನ್ನು ವಾಪಸ್ಸು ಕೊಡುತ್ತೇವೆ ಎಂದು ಹೇಳಿದರೆ ಇದು ಮಾರ್ವಾಡಿ ನೀತಿಯಾಗುತ್ತದೆ. ನಿಮ್ಮ ನೀರಾವರಿ ಯೋಜನೆ ಆಗುವ ಹೊತ್ತಿಗೆ ರೈತರು ತಮ್ಮ ಜಮೀನೆಲ್ಲವನ್ನೂ ಸಾಹುಕಾರರಿಗೆ ಮಾರಾಟ ಮಾಡಬೇಕಾಗುತ್ತದೆ. ಆದ್ದರಿಂದ ಬಡ ರೈತರು ತಮ್ಮ ಜಮೀನನ್ನು ಸಾಹುಕಾರರ ಅಧೀನಕ್ಕೆ ಒಳಪಡಿಸತಕ್ಕ ಕಾರ್ಯವನ್ನು ಮಾಡಬೇಡಿ. ಈ ರೀತಿ ರೈತರನ್ನು ಹಣವನ್ನು ಕೇಳುವ ಬದಲು ಸರ್ಕಾರವೇ ನೇರವಾಗಿ ಜವಾಬ್ದಾರಿಯನ್ನು ವಹಿಸಿಕೊಂಡು ಯಾವುದಾದರೂ ಬ್ಯಾಂಕು ಗಳಿಂದಲೋ ಎಲ್. ಐ. ಸಿ. ಯಿಂದಲೋ ಸಾಲ ಮಾಡಿ ಹಣ ತಂದು ಪ್ರಜೆಗಳಿಗೋಸ್ಕರ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಿ. ರೈತರ ಆಸ್ತಿಯನ್ನು ಹಾಳುಮಾಡತಕ್ಕ ಪ್ರವೃತ್ತಿ ಮಾಡಬೇಡಿ. ಸರ್ಕಾರದವರೇ ಜವಾಬ್ದಾರಿಯನ್ನು ತೆಗೆದುಕೊಂಡು ನೀರಾವರಿ ಯೋಜನೆಗೆ ಹಣವನ್ನು ಒದಗಿಸಿ ಅದನ್ನು ಕಾರ್ಯಗತಮಾಡಬೇಕು. ಒಂದು ಉದಾಹರಣೆ ಹೇಳುತ್ತೇನೆ. ನಾನು ಮೊನ್ನೆ ಪ್ರವಾಸ ಹೋದಂತಹ ರಾಷ್ಟ್ರದಲ್ಲಿ ಜನ ಟೂರಿಸ್ಟ್ ಬಹಳ ಚೆನ್ನಾಗಿ ಡೆವಲಪ್ ಮಾಡಿದ್ದಾರೆ. ನಾನು ಅವರನ್ನು ಪ್ರಶ್ನೆ ಮಾಡಿದೆ, ಇದಕ್ಕೆಲ್ಲಾ ದುಡ್ಡು ಎಲ್ಲಿಂದ ತಂದಿರಿ ಹೇಗೆ ಮಾಡಿದಿರಿ ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು. ನಾವು ಒಂದು ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂದು ಮಾಡಿಕೊಂಡಿದ್ದೇವೆ. ಅದರ ಮುಖಾಂತರ ಒಂದು ವರ್ಷಕ್ಕೆ 200 ಮಿಲಿಯನ್ ಡಾಲರನ್ನು ಟೂರಿಜಂನಿಂದ ಸಂಪಾದನೆ ಮಾಡುತ್ತೇವೆ ಎಂದು ಅವರು ಹೇಳಿದರು. ತಮ್ಮ ದೇಶದಲ್ಲಿ ಅಘಾದವಾದ ಪ್ರಕೃತಿ ಸಂಪತ್ತು ಇದೆ. ಇಡೀ ಭಾರತದಲ್ಲೇ ಮೈಸೂರನ್ನು ಸಂಪತ್ತಿನ ರಾಜ್ಯವನ್ನಾಗಿ ಮಾಡಬಹುದು. ಇದನ್ನು ಅಭಿವೃದ್ಧಿ ಮಾಡಿಲ್ಲ ಎಂದರೆ ಯಾರು ನಮ್ಮ ರಕ್ಷಣೆಗೆ ಬರುತ್ತಾರೆ. ನಮ್ಮ ದೇಶದಲ್ಲಿರತಕ್ಕ ಬುದ್ಧಿವಂತ ಜನ ಬೇರೆ ಕಡೆಗೆ ಹೋಗಿ ತಮ್ಮ ಜ್ಞಾನವನ್ನು ಬೇರೆಯವರಿಗೆ ಮಾರಾಟಮಾಡಿಕೊಂಡಿದ್ದಾರೆ. ಬೇರೆಯವರಿಗೆ ತಮ್ಮ ಶ್ರಮವನ್ನು ಮಾರಾಟಮಾಡಿಕೊಂಡಿದ್ದಾರೆ. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿರತಕ್ಕ ಪ್ರಕೃತಿ ಸಂಪತ್ತನ್ನು ಉಪಯೋಗಮಾಡಿಕೊಂಡು ನಮ್ಮ ದೇಶವನ್ನು ಇನ್ನೂ ಸಾಕಷ್ಟು ಅಭಿವೃದ್ಧಿ ಸ್ಥಿತಿಗೆ ತರಬೇಕಾದರೆ ಸೂಕ್ತ ನಾಯಕತ್ವ ಬೇಕು. ನಮಗೆ ಡೈನಾಮಿಕ್ ಲೀಡರ್‌ಷಿಪ್ ಬೇಕು. ಭಾರತ ರಾಷ್ಟ್ರಕ್ಕೆ ಸರಿಯಾದಂತಹ ನಾಯಕತ್ವದ ಅಭಾವ ಇರುವುದರಿಂದ ರಾಜ್ಯ ಇಷ್ಟೊಂದು ಪ್ರಕೃತಿ ಸಂಪತ್ತನ್ನು ಇಟ್ಟುಕೊಂಡಿದ್ದರೂ ಬೇರೆ ದೇಶಕ್ಕೆ ಹೋಗಿ ಭಿಕ್ಷಾಂದೇಹಿ ಎಂದು ಭಿಕ್ಷಾಟನೆ ಮಾಡಬೇಕಾಗಿದೆ. ಈ ಪದ್ಧತಿಯನ್ನು ಬಿಟ್ಟು ನಮ್ಮ ಕಾಲಮೇಲೆ ನಾವು ನಿಂತುಕೊಂಡು ನಮ್ಮ ದೇಶದಲ್ಲಿರತಕ್ಕ ಸಂಪತ್ತನ್ನು ಉಪಯೋಗಮಾಡಿಕೊಂಡು ನಮ್ಮ ದೇಶವನ್ನು ಅಭಿವೃದ್ಧಿ ಮಾಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಅನೇಕ ಕಡೆ ನೀರಾವರಿ ಅಭಿವೃದ್ಧಿಗೆ ಕಾರ್ಪೋರೇಷನ್‌ಗಳನ್ನು ಮಾಡಿದ್ದಾರೆ. ಅದೇ ರೀತಿ ನಮ್ಮಲ್ಲಿಯೂ ನೀರಾವರಿ ಅಭಿವೃದ್ಧಿ ಕಾರ್ಪೋರೇಷನ್ ಮಾಡಿ, ಸಾಕಷ್ಟು ನೀರಾವರಿಯನ್ನು ಅಭಿವೃದ್ಧಿ

(ಶ್ರೀ ವೀರೇಂದ್ರ ಪಾಟೀಲ್)

ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ ಎಂದು ನಾನು ಈ ಬಗ್ಗೆ ಆಲೋಚನೆ ಮಾಡುತ್ತಿದ್ದೆ. ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ವಿಚಾರ ಮಾಡಿದರು. ನನ್ನ ವಿಚಾರದಲ್ಲಿ ನಮ್ಮ ರಾಜ್ಯದ ನೀರಾವರಿ ಅವಕಾಶಗಳನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ಎಷ್ಟು ಜಾಗ್ರತೆ ಸಾಧ್ಯವೋ ಅಷ್ಟು ಜಾಗ್ರತೆ ಉಪಯೋಗಮಾಡಿಕೊಳ್ಳಬೇಕು ಎಂದು ನಾವು ನಿರ್ಣಯ ಮಾಡಿಕೊಂಡಿದ್ದೇವೆ. ನಮ್ಮಲ್ಲಿ ಕೃಷ್ಣಾ ವ್ಯಾಲಿ ಮತ್ತು ಕಾವೇರಿ ವ್ಯಾಲಿ ಎರಡು ಮುಖ್ಯ ಪ್ರದೇಶಗಳು ಇವೆ. ಆದ್ದರಿಂದ ಕೃಷ್ಣಾ ವ್ಯಾಲಿ ಕಾರ್ಪೋರೇಷನ್ ಮತ್ತು ಕಾವೇರಿ ವ್ಯಾಲಿ ಕಾರ್ಪೋರೇಷನ್ ಎಂದು ಎರಡು ಕಾರ್ಪೋರೇಷನ್‌ಗಳನ್ನು ಮಾಡಿಕೊಂಡರೆ ಈಗ ಈ ಎರಡು ಇರಿಗೇಷನ್ ಪ್ರಾಜೆಕ್ಟ್‌ಗಳಲ್ಲಿ ನಿರ್ಮಾಣವಾಗಿರುವ ಎಲ್ಲಾ ನಿರ್ಮಾಣ ಮತ್ತು ಆಸ್ತಿಗಳನ್ನು ಅವಕ್ಕೆ ವರ್ಗಾಯಿಸುವುದಕ್ಕೆ ನಾನು ತಯಾರಾಗಿದ್ದೇನೆ. ಕಾರ್ಪೋರೇಷನ್ ರಚನೆಯಾದರೆ ನೀರಾವರಿ ಯೋಜನೆಗಳಿಗೆ ಬೇಕಾದ ಹಣವನ್ನು ಸ್ವತಂತ್ರವಾಗಿ ಎತ್ತಲು ಕಾರ್ಪೋರೇಷನ್ನಿಗೆ ಅಧಿಕಾರ ಬರುತ್ತದೆ. ಡಿಬೆಂಚರ್ ಸಾಲ ಮತ್ತು ಎಲ್. ಐ. ಸಿ. ಯಂತಹ ಸಂಸ್ಥೆಗಳಿಂದ ಹಣ ಪಡೆಯುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಮಾಡಿಕೊಂಡು ಆ ವ್ಯಾಲಿಗಳಲ್ಲಿರತಕ್ಕ ಪ್ರದೇಶದ ಅಭಿವೃದ್ಧಿಗೆ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ನಿನ್ನೆಯ ದಿವಸ ಹಾರಂಗಿ ಯೋಜನೆ ಬರತಕ್ಕ ಪ್ರದೇಶದ ಅನೇಕ ಜನಗಳು ರೈತರು ನನ್ನ ಹತ್ತಿರ ಬಂದಿದ್ದರು. ಅವರು ಲಿಖಿತ ಮೂಲಕ ನನಗೆ ಬರೆದುಕೊಟ್ಟಿದ್ದಾರೆ ಹಾರಂಗಿ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರದ ಬಳಿ ದುಡ್ಡು ಇಲ್ಲದಿದ್ದರೆ ದುಡ್ಡು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ ಆ ಕೆಲಸ ಪ್ರಾರಂಭ ಮಾಡಿ ಅದಕ್ಕೆ ಬೇಕಾದ ಅಧಿಕಾರಿಗಳನ್ನು ಹಾಕಿ ನಾವು ದುಡ್ಡು ಕೊಡುತ್ತೇವೆ ಎಂದು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ರೈತರ ಜೇಬಿನಲ್ಲಿ ದುಡ್ಡು ಇದೆ ಎಂದು ನಾನು ತಿಳಿದುಕೊಂಡಿಲ್ಲ. ಆದರೆ ನಮ್ಮಲ್ಲಿ ನೀರಾವರಿ ಯೋಜನೆಗಳಿಗೆ ಬೇಕಾದ ಹಣವನ್ನು ಒದಗಿಸಿಕೊಳ್ಳುವ ದೃಷ್ಟಿಯಿಂದ ಕೃಷ್ಣಾ ವ್ಯಾಲಿ ಕಾರ್ಪೋರೇಷನ್ ಮತ್ತು ಕಾವೇರಿ ವ್ಯಾಲಿ ಕಾರ್ಪೋರೇಷನ್ ಎಂದು ಎರಡು ಕಾರ್ಪೋರೇಷನ್‌ಗಳನ್ನು ಮಾಡಿಕೊಂಡರೆ ಅದರ ಮುಖಾಂತರ ಷೆಡ್ಯೂಲ್ ಬ್ಯಾಂಕುಗಳ ಮುಖಾಂತರ, ಮತ್ತು ಎಲ್. ಐ. ಸಿ. ಮುಖಾಂತರ ಹಣವನ್ನು ಸಾಲ ಪಡೆಯುವುದಕ್ಕೆ ಅವಕಾಶವಾಗುತ್ತದೆ. ಅದರಿಂದ ಕಾವೇರಿ ವ್ಯಾಲಿ ಮತ್ತು ಕೃಷ್ಣಾ ವ್ಯಾಲಿಯಲ್ಲಿ ಅನೇಕ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಶಿವಪ್ಪ.—ಮುಖ್ಯ ಮಂತ್ರಿಗಳು ಕಾವೇರಿ ಮತ್ತು ಕೃಷ್ಣಾ ವ್ಯಾಲಿಗಳಲ್ಲಿ ಮಾಡಬೇಕಾಗಿರತಕ್ಕ ನೀರಾವರಿ ಯೋಜನೆಗಳನ್ನು ಜಾಗ್ರತೆಯಾಗಿ ಪೂರೈಸುವುದಕ್ಕೆ ಕಾರ್ಪೋರೇಷನ್ ಮಾಡಿ ಅದಕ್ಕೆ ಸಂಬಂಧಪಟ್ಟ ಯೋಜನೆಯನ್ನು ಕಾರ್ಯಗತ ಮಾಡುವ ವಿಚಾರ ಶ್ಲಾಘನೀಯ. ಆದಷ್ಟು ಜಾಗ್ರತೆಯಾಗಿ ನೀರನ್ನು ಉಪಯೋಗಿಸಿಕೊಂಡು ದೇಶದ ಸಂಪತ್ತನ್ನು ಅಭಿವೃದ್ಧಿ ಮಾಡತಕ್ಕ ಕಾರ್ಯವನ್ನು ಎಲ್ಲರೂ ಸೇರಿ ಖಂಡಿತ ಮಾಡಬೇಕು. ಇಲ್ಲದಿದ್ದರೆ ನಮ್ಮ ಕಾರ್ಯವೆಲ್ಲಾ ವಿಫಲವಾಗುತ್ತವೆ.

ಇವೊತ್ತು ನಮ್ಮ ದೇಶದಲ್ಲಿ ಕೈಗಾರಿಕೆ ಇನ್ನೂ ಸಾಕಷ್ಟು ಅಭಿವೃದ್ಧಿ ಆಗಬೇಕಾಗಿದೆ. ನಾನು ಮೊನ್ನೆ ಜಪಾನಿಗೆ ಹೋದಾಗ ಅಲ್ಲಿ ಹೇಳಿದರು ಮೈಸೂರು ದೇಶದಿಂದ ಜಪಾನಿಗೆ ಉಕ್ಕಿನ ಅದುರುಗಳನ್ನು ರಫ್ತು ಮಾಡತಕ್ಕ ಕೆಲಸ ನಡೆಯುತ್ತಿದೆ. ಆದರೆ ಆ ಅದುರನ್ನು ರಫ್ತು ಮಾಡತಕ್ಕದ್ದು ವಿಳಂಬವಾಗಿ ಅದರ ಬೇಸರದಿಂದ ಇದನ್ನು ಬಿಡುವ ರೀತಿಯಲ್ಲಿ ಅವರು ಯೋಚನೆ ಮಾಡುತ್ತಿದ್ದಾರೆ. ಹೀಗಾದರೆ ನಮ್ಮ ಅದುರು ಭೂಗರ್ಭದಲ್ಲೇ ಇರುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿರತಕ್ಕಂಥ ಉಕ್ಕಿನ ಅದುರನ್ನು ವೈಜ್ಞಾನಿಕವಾದ ರೀತಿಯಲ್ಲಿ ಭೂಮಿಯಿಂದ ತೆಗೆದು ಬೇಗ ಬೇಗ ಸಾಗಾಣಿಕೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಇಲ್ಲದಿದ್ದರೆ ಕಷ್ಟವಾಗುತ್ತದೆ. ಉಕ್ಕಿನ ಕೈಗಾರಿಕೆಯನ್ನು ಮಾಡುವುದಕ್ಕೆ ತಕ್ಕಂತೆ ಇದನ್ನು ಅಳವಡಿಸಿಕೊಂಡು ನಮ್ಮ ಕೈಗಾರಿಕಾ ನೀತಿಯನ್ನು ಸೂಕ್ತ ಮಾರ್ಪಾಡು ಮಾಡಬೇಕು. ಇದಕ್ಕೆ ಬೇಕಾದ ಟೆಕ್ನಿಕಲ್ ನೋಹೌವಿನ ಅನುಕೂಲತೆ ಏನಿದೆ ಅದನ್ನು ಅಳವಡಿಸಿಕೊಂಡು ಸರ್ಕಾರದ ಕೈಗಾರಿಕೆ ಮತ್ತು ನೀರಾವರಿ ಅಭಿವೃದ್ಧಿ ಕಡೆಗೆ ಸರ್ಕಾರ ಹೆಚ್ಚಿನ ತೀವ್ರತೆಯನ್ನು ಕೊಟ್ಟು ದೇಶದ ಸಂಪತ್ತನ್ನು ಅಭಿವೃದ್ಧಿ ಮಾಡತಕ್ಕ ಸಾಹಸವನ್ನು ಸರ್ಕಾರ ಮಾಡಬೇಕು. ಇಷ್ಟು ದಿವಸಗಳವರೆಗೂ ಸರ್ಕಾರದವರು ಸಾಲ ಮಾಡಿ ನಮ್ಮ ರಾಜ್ಯದ ಜನರನ್ನು ಬಡ್ಡಿಯ ಮಕ್ಕಳನ್ನು ಮಾಡಿದ್ದಾರೆ. ಇದು ಪ್ರತಿ ರಾಜ್ಯದಲ್ಲೂ ಇರತಕ್ಕ ಬಾಧ್ಯ. ಈ ಬಾಧ್ಯ ಮಾಯವಾದ ಹೊರತು ಮುಕ್ತಿ ಇಲ್ಲ. ಇದನ್ನೆಲ್ಲಾ ಸರ್ಕಾರ ಮಾಡಬೇಕು. ಇಲ್ಲದಿದ್ದರೆ ರಾಜೀನಾಮೆಯನ್ನು ಕೊಟ್ಟು ಹೋಗಬೇಕು.

ನಾನು ಇದನ್ನು ಎಷ್ಟೋ ಸಾರಿ ಹೇಳಿದ್ದೇನೆ. ಇದುವರೆಗೆ ನಾನು ಹೇಳಿದ ಹಾಗೆ ದೇಶದ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಕೆಲಸ ಕಾರ್ಯಗಳನ್ನು ಸರ್ಕಾರ ಮಾಡಬೇಕು. ಇಲ್ಲದಿದ್ದರೆ ಮಾಡಿಯಬೇಕು. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು 1969-70 ನೇ ಇಸವಿಯ ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಇದನ್ನು ನಾನು ಸ್ವಾಗತಿಸಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಸಾರಿಯ ಹಣಕಾಸಿನ ಆಯವ್ಯಯ ಪಟ್ಟಿ ನಾವು ಒಂದು ರೀತಿ ಸಂತೋಷಪಡುವ ಹಾಗೆ ಇದೆಯೆಂದು ಹೇಳಬಹುದು. ಈ ಸಾರಿಯ ಬಡ್ಜೆಟ್ಟಿನಲ್ಲಿ ಹೊಸ ತೆರಿಗೆಗಳು ಇರುವುದಿಲ್ಲ. ಸರ್ವಸಾಧಾರಣವಾಗಿ ತೆರಿಗೆ ಇಲ್ಲದೆ ಇರುವಂಥ ಬಜೆಟ್ಟನ್ನು ಇಟ್ಟರೆ ಅವು ಸಂತೋಷ ಎಂದು ಹೇಳುತ್ತಾರೆ. ಆ ಒಂದು ದೃಷ್ಟಿಯಲ್ಲಿ ನಾನೂ ಸಹ ಸಂತೋಷಪಡುತ್ತಿದ್ದೇನೆ ಎಂದು ಹೇಳುವವನಲ್ಲ. ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಇದುವರೆಗೆ ಭಾಷಣ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿರುವ ಜನರಿಗೆ ತೆರಿಗೆಯ ಭಾರ ಜಾಸ್ತಿಯಾಗಿದೆ, ಜನರು ಸಾಲಗಾರರ ಮಕ್ಕಳಾಗಿದ್ದಾರೆ, ಬಡ್ಡಿಕೊಡುವವರ ಮಕ್ಕಳಾಗಿದ್ದಾರೆ ಮುಂತಾಗಿ ವಿವರಿಸಿ ಹೇಳಿದರು. ಅವರು ಆ ರೀತಿ ಹೇಳಿದರೆ, ದೇಶವನ್ನು ಆರ್ಥಿಕಪ್ರಗತಿಯ ದೃಷ್ಟಿಯಿಂದ ಕಡಿಮೆ ತೆರಿಗೆ ಮೂಲಕ ದೇಶದ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಶ್ರೀಮಾನ್ ಶಿವಪ್ಪನವರೇನಾದರು ಈ ದೇಶದ ನಾಯಕರಾದರೆ ತೆರಿಗೆಭಾರವನ್ನು ಕಡಿಮೆ ಮಾಡಿ ದೇಶದ ಪ್ರಗತಿಯನ್ನು ಸಾಧಿಸುತ್ತಾರೋ ಏನೋ ಎಂಬುದನ್ನು ನೋಡಬೇಕಾಗಿದೆ.

ಶ್ರೀ ಎಸ್. ಶಿವಪ್ಪ.—ಇಷ್ಟೊಂದು ತೆರಿಗೆ ಹಾಕುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ತಮ್ಮ ಪಕ್ಷದವರು ಸರ್ಕಾರ ನಡೆಸುವ ಸಂದರ್ಭ ಬಂದಾಗ ಯಾವ ಯಾವ ಬಾಬಿನಲ್ಲಿ ತೆರಿಗೆಯನ್ನು ತೆಗೆದುಹಾಕುತ್ತೀರೋ ಎಂಬುದನ್ನು ನಾವು ಕಾದು ನೋಡಬೇಕಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ನಮ್ಮ ಕೈಗೆ ಜವಾಬ್ದಾರಿ ಬಂದಾಗ ಯಾವ ಯಾವ ಬಾಬಿನಲ್ಲಿ ತೆರಿಗೆಯನ್ನು ತೆಗೆಯುತ್ತೇವೆ ಎಂಬುದನ್ನು ಹೇಳುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಈ ರೀತಿ ತಾವು ಮಾತನಾಡುತ್ತಿರುವುದರಿಂದಲೇ ತಮ್ಮ ಕೈಗೆ ಅಧಿಕಾರ ಬರುತ್ತದೋ ಇಲ್ಲವೋ ಎಂಬುದು ಗೊತ್ತಾಗುತ್ತಿಲ್ಲ. ಜವಾಬ್ದಾರಿಯಿಂದ ಏನಾದರೂ ತಾವು ಮಾತನಾಡಿದರೆ ಜನರೂ ಸಹ ಇವರ ಕೈಗೆ ಅಧಿಕಾರ ಕೊಡೋಣ ಎಂದು ತೀರ್ಮಾನಿಸಬಹುದು. ಪ್ರಪಂಚದ ಯಾವುದೇ ಒಂದು ದೇಶದ ಆಡಳಿತವನ್ನು ಪ್ರಗತಿಪಥದಲ್ಲಿ ನಡೆಸಬೇಕಾದರೆ ತೆರಿಗೆಯನ್ನು ಹಾಕಬೇಕಾಗುತ್ತದೆ. ಈ ಬಗ್ಗೆ ಹಿಂದಿನಕಾಲದಂತೆ ಮಾತನಾಡುವುದು ಸರಿಯಲ್ಲ. ಪೋಲೀಸ್ ರಾಜ್ಯ ನಡೆಯುತ್ತಿದೆ ಎಂದು ಹೇಳಿದರು. ಪ್ರತಿಯೊಬ್ಬ ಪ್ರಜೆಯ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಒಬ್ಬರಿಂದ ಇನ್ನೊಬ್ಬರಿಗೆ ತೊಂದರೆ ಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿದೆ. ಬೇರೆ ದೇಶದ ಶತ್ರುಗಳು ನಮ್ಮ ದೇಶದ ಮೇಲೆ ದಾಳಿ ಮಾಡದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿದೆ. ದೇಶದ ಒಳಗೆ ಖೂನಿ, ದರೋಡೆ ನಡೆದಾಗ ತಪ್ಪಿತಸ್ಥರನ್ನು ಹಿಡಿದು ಕಾನೂನು ಪ್ರಕಾರ ಶಿಕ್ಷೆ ವಿಧಿಸಬೇಕಾಗುತ್ತದೆ. ಈ ಪ್ರಕಾರ ಪ್ರಜೆಗಳಿಗೆ ರಕ್ಷಣೆಯನ್ನು ಕೊಡಬೇಕಾಗಿರುವುದರಿಂದ ಪೋಲೀಸಿನವರು ಇರಬೇಕಾಗುತ್ತದೆ. ಮನುಷ್ಯನ ಆರ್ಥಿಕ ಸಾಮಾಜಿಕ ಚಟುವಟಿಕೆಗಳ ಬಗ್ಗೆ ಸರ್ಕಾರದವರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರವೇಶಮಾಡಿ ಮನುಷ್ಯನ ಅಭಿವೃದ್ಧಿಗೆ ಸಹಾಯ ಕೊಡಬೇಕಾಗುತ್ತದೆ. ಇದಕ್ಕೆಲ್ಲಾ ಹಣ ಬೇಕಾಗುವುದರಿಂದ ಸರ್ಕಾರದವರು ತೆರಿಗೆಯನ್ನು ಹಾಕಬೇಕಾಗುತ್ತದೆ. ತೆರಿಗೆಯನ್ನು ಹಾಕದೆ ಪ್ರಜೆಗಳ ಹಿತರಕ್ಷಣೆ ಮಾಡುತ್ತೇವೆ ಎಂದು ಹೇಳುವುದು ಭ್ರಾಂತಿಯ ಮಾತಾಗುತ್ತದೆ. ಯಾವುದನ್ನೂ ಕಾರ್ಯತಃ ಮಾಡಿ ತೋರಿಸಬೇಕು. ಒಂದು ಕಾಲಕ್ಕೆ ಅಂದರೆ 1956 ನೇ ಇಸವಿಗೆ ಮುಂಚೆ ಮೈಸೂರು ರಾಜ್ಯದ ಆದಾಯ 10—12 ಕೋಟಿ ರೂಪಾಯಿಗಳಷ್ಟು ಮಾತ್ರ ಇತ್ತು. ಇಷ್ಟು ಹಣದಲ್ಲಿ ಮೂರು ಮೂರೂವರೆ ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಲಾಗುತ್ತಿತ್ತು. ಆದರೆ ಈಗ 46 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಒದಗಿಸಿದ್ದರೂ ಸಹ ಸಾಲದು ಎಂದು ಹೇಳುತ್ತಿದ್ದೇವೆ. ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚುಮಾಡಬೇಕೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಯಾವ ಬಾಬಿನಿಂದ ಕಡಿತಮಾಡಿ ಇದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಆಸ್ಪತ್ರೆಗಳಿಗೆ ರಸ್ತೆಗಳಿಗೆ ಖರ್ಚು ಮಾಡುವ ಹಣವನ್ನು ಕಮ್ಮಿ ಮಾಡಿ ಒದಗಿಸಬೇ

(ಶ್ರೀ ಡಿ. ದೇವರಾಜ ಅರಸ್)

ಕಾಗುತ್ತದೆ. ಆದರೆ ಎಲ್ಲಾ ಕೆಲಸಗಳೂ ಸಹ ಹೆಚ್ಚು ಹೆಚ್ಚು ಆಗಬೇಕು ಎಂದು ಮಾನ್ಯಸದಸ್ಯರುಗಳು ಹೇಳುತ್ತಿರುತ್ತಾರೆ. ಹೆಚ್ಚು ಹೆಚ್ಚು ಕೆಲಸಕಾರ್ಯಗಳು, ಸೋಷಿಯಲ್ ಸರ್ವಿಸಸ್‌ಗಳು ನಮ್ಮ ದೇಶದಲ್ಲಿ ಆಗಬೇಕಾದರೆ ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ತೆರಿಗೆಯನ್ನು ಹಾಕಬೇಕಾಗುತ್ತದೆ. ಮಾನ್ಯಶಿವಪ್ಪನವರು ಪೋಲೀಸ್ ಸ್ಟೇಟ್ ಎಂದು ಹೇಳಿದರು. ಪೋಲೀಸರು ಇಲ್ಲದೆ ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಅವರು ಹೇಳಬೇಕು. ಶಿವಸೇನೆಯ ಬಗ್ಗೆ ಬೆಳಿಗ್ಗೆ ಬಹಳವಾಗಿ ಚರ್ಚೆ ನಡೆದು ಅವರ ಚಟುವಟಿಕೆಗಳ ಬಗ್ಗೆ ಖಂಡನೆ ಮಾಡಿ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಶಿವಸೇನೆಯವರು ಚಳುವಳಿ ನಡೆಸುವಾಗ ಪೋಲೀಸರು ಇಲ್ಲದಿದ್ದರೆ ಇನ್ನು ಏನೇನು ಅನಾಹುತವಾಗುತ್ತಿತ್ತು ಎಂಬುದನ್ನು ಮಾನ್ಯ ಸದಸ್ಯರುಗಳು ಯೋಚನೆ ಮಾಡಬೇಕು. ಇವತ್ತಿನ ದಿವಸ ಪೋಲೀಸರು ಇಲ್ಲದೆ ರಾಜ್ಯನಡೆಸುವುದಕ್ಕೆ ಯಾವ ದೇಶಕ್ಕೂ ಸಾಧ್ಯವಾಗುತ್ತಿಲ್ಲ ದೇಶದ ಜನರ ರಕ್ಷಣೆ ಮಾಡಬೇಕಾದರೆ ಪೋಲೀಸರು ಇರಬೇಕಾಗುತ್ತದೆ. ಇವರ ಸಂಖ್ಯೆಯನ್ನು ಕಡಿಮೆ ಮಾಡಬೇಕು ಎಂದು ಹೇಳುವುದು ಸಾಧುವಾದುದಲ್ಲ.

ಶ್ರೀ ಎಂ. ನಾಗಪ್ಪ.—ವಿದ್ಯಾಭ್ಯಾಸಕ್ಕೆ 46 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಸರಿಯಲ್ಲ ಎಂದು ಹೇಳುವುದಕ್ಕೆ ಕಾರಣವಿಷ್ಟೆ, ಕೆಲವು ಹೆಗ್ಗಣಗಳು ಮಧ್ಯೆ ಮಧ್ಯೆ ಸೇರಿಕೊಂಡು ಹಣವನ್ನು ತಿಂದುಹಾಕುತ್ತಿದ್ದಾರೆ. ಈ ರೀತಿ ಹಾಳಾಗುತ್ತಿರುವುದನ್ನು ತಪ್ಪಿಸಿದರೆ 23 ಕೋಟಿ ರೂಪಾಯಿಗಳಲ್ಲೇ ವಿದ್ಯಾಭ್ಯಾಸದ ಖರ್ಚನ್ನು ಸರಿತೂಗಿಸಬಹುದು, ವಿನಾಕಾರಣ ಒಂದಕ್ಕೆ ಎರಡು ಪಟ್ಟು ಹಣ ಖರ್ಚು ಮಾಡುವುದು ಸರಿಯಲ್ಲ ಎಂದು ನಮ್ಮ ನಾಯಕರು ಹೇಳಿದ್ದು.

ಶ್ರೀ ಡಿ. ದೇವರಾಜ ಅರಸ್.—ವಿದ್ಯಾಭ್ಯಾಸದ ಡಿಮ್ಯಾಂಡ್ ಪ್ರತ್ಯೇಕವಾಗಿ ಬಂದಾಗ ಶ್ರೀಮಾನ್ ನಾಗಪ್ಪನವರು ಮತ್ತು ಶ್ರೀಮಾನ್ ಶಿವಪ್ಪನವರು ಯಾವ ಯಾವ ರೂಪದಲ್ಲಿ ವಿನಾಕಾರಣ ಖರ್ಚಾಗುತ್ತಿದೆ ಎಂಬುದನ್ನು ಹೇಳಲಿ.

ಶ್ರೀ ಎಂ. ನಾಗಪ್ಪ.—ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟನ್ನು ತಾವು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳಿದ್ದೀರಿ, ನಾನು ನೋಡುತ್ತೇನೆ. ಆ ಡಿಮ್ಯಾಂಡ್ ಬಂದಾಗ ನಾನು ಹೇಳಿದ್ದು ತಪ್ಪು ಇದ್ದರೆ ನಾನು ಒಪ್ಪಿಕೊಳ್ಳುತ್ತೇನೆ, ತಾವು ಹೇಳಿದ್ದು ತಪ್ಪು ಎಂದು ತಿಳಿದುಬಂದರೆ ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಒಂದು ಕಡೆ ನೌಕರರಿಗೆ ಸಂಬಳ ಜಾಸ್ತಿಯಾಗಬೇಕು ಇನ್ನೊಂದುಕಡೆ ಸುಧಾರಿಸಿದ ಕಟ್ಟಡಗಳು ಆಗಬೇಕು, ಕಾಲೇಜುಗಳು, ಹೈಸ್ಕೂಲ್‌ಗಳು, ಪ್ರೈಮರಿ ಸ್ಕೂಲ್‌ಗಳು ಆಗಬೇಕು, ಇವುಗಳಿಗೆ ಆಧುನಿಕ ಉಪಕರಣಗಳು, ಸಲಕರಣೆಗಳು ಆಗಬೇಕು, ವಿದ್ಯಾಭ್ಯಾಸ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಪ್ರತ್ಯೇಕವಾದ ಹೆಚ್ಚಿನ ಸಂಬಳ ಕೊಡಬೇಕು, ಇಷ್ಟೆಲ್ಲಾ ಖರ್ಚುಗಳು ಇರುವುದರಿಂದ ಯಾವ ರೀತಿ ಉಳಿತಾಯ ಮಾಡಬಹುದು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅವರು ಒಂದು ಕಡೆ ಹೆಚ್ಚಾಗಿ ಕೊಟ್ಟಿದ್ದಾರೆ ಇನ್ನೊಂದು ಕಡೆ ಖರ್ಚು ಕಡಿಮೆ ಎಂದು ಹೇಳುವುದು ಒಂದಕ್ಕೊಂದು ಸಂಬಂಧವಿಲ್ಲದ ಇರತಕ್ಕ ಮಾತಾಗುತ್ತದೆ. ಒಟ್ಟಿನಲ್ಲಿ ಇವೊತ್ತಿನ ಕಾಲದಲ್ಲಿ ನಾವು ನಮ್ಮ ಖರ್ಚನ್ನು ಕಡಿಮೆ ಮಾಡಬೇಕು ಎಂದು ಹೇಳತಕ್ಕ ಮಾತು ಇದು ನಡೆಯುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ಮಾತಾಗುತ್ತದೆ. ಹೆಚ್ಚು ಹೆಚ್ಚಾಗಿ ಹಣವನ್ನು ಖರ್ಚು ಮಾಡದೇ ಈ ರಾಜ್ಯದಲ್ಲಿ ಸರಕಾರದವರು ಕೆಲಸಗಳನ್ನು ಮಾಡಬೇಕು ಎಂದರೆ ಅದಕ್ಕೆ ಹಣ ಹೇಗೆ ಬರಬೇಕು ! ಯಾವ ರೀತಿ ಸಂಪಾದನೆ ಮಾಡಬೇಕು ? ಒಂದು ಕಡೆ ತೆರಿಗೆಗಳು ಪ್ರತ್ಯಕ್ಷವಾಗಿ ಕೆಲವು ಇವೆ, ಪರೋಕ್ಷವಾಗಿಯೂ ಕೆಲವು ಇವೆ ಮತ್ತು ಎಷ್ಟೇ ಪ್ರಾಮಾಣಿಕವಾಗಿ ಕೆಲಸಗಳನ್ನು ಮಾಡುತ್ತಿದ್ದರೂ ಕೆಲವು ಸಂದರ್ಭಗಳಲ್ಲಿ ಸಾಲಗಳನ್ನು ಸರಕಾರದವರು ಮಾಡಲೇಬೇಕಾಗುತ್ತದೆ. ಸಾಲಗಳನ್ನು ಹೆಚ್ಚು ಮಾಡಬೇಡಿ ಎಂದರೆ ಹೇಗೆ ? ಅದು ಹಿಂದಿನ ಕಾಲದ ಮಾತಾಯಿತು. ಹಿಂದೆ ನಮ್ಮ ಅಜ್ಜಂದಿರು ಹಾಗೂ ಇತರ ದೊಡ್ಡ ದೊಡ್ಡ ವೃದ್ಧರು ಇರುತ್ತಿದ್ದರು. ಆಗಿನ ಕಾಲದಲ್ಲಿ ಅವರು ಮಕ್ಕಳಿಗೆ ಒಂದು ರೂಪಾಯಿ ಸಾಲ ಮಾಡಬೇಡಿ ಎಂದು ಬುದ್ಧಿವಾದ ಹೇಳುತ್ತಿದ್ದರು. ಅವರಿಗೆ ಸಾಲ ಎಂದರೆ ಅಷ್ಟು ಹೆದರಿಕೆ ಇರುತ್ತಿತ್ತು ಆಗಿನ ಕಾಲದಲ್ಲಿ ಹಾಗೆ ನಡೆಯುತ್ತಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಬ್ರಿಟಿಷರು ಹಾಗೆ ಆಳುತ್ತಿದ್ದರು, ಅದಕ್ಕೆ ಹಾಗೆ ಮಾಡುತ್ತಿದ್ದರು.

ಶ್ರೀ ಡಿ. ದೇವರಾಜ ಅರಸ್.—ಬಡ್ಜೆಟ್ಟಿನಲ್ಲಿ ಅದಾಯ ಮತ್ತು ಖರ್ಚು ಇವುಗಳನ್ನು ಸರಿದೂಗಿಸುವಾಗ ಕೆಲವು ವೇಳೆ ದೇಶಕ್ಕಾಗಿ ಸಾಲ ಮಾಡಬೇಕಾಗಿ ಬರುತ್ತದೆ ಮತ್ತು ಅದಕ್ಕೆ ಇಂಟರೆಸ್ಟನ್ನು ಕೊಡಬೇಕಾಗಿ ಬರುತ್ತದೆ. ಇದು ಎಲ್ಲ ದೇಶಗಳ ಅನುಭವವೂ ಆಗಿದೆ. ಇದಕ್ಕೆ ಬ್ರಿಟಿಷರ ಕಾಲದಲ್ಲಿ ಆಗಿನ ಕಾಂಟೆಕ್ಸ್ಟ್ ಹಾಗಿತ್ತು. ಅವರು ಅದನ್ನು ನೋಡಿ ಸುಮ್ಮನೆ ಇರುತ್ತಿದ್ದರು.

ಶ್ರೀ ಎಂ. ಎಸ್. ಕೃಷ್ಣನ್.—ಬ್ರಿಟಿಷರು ಹೋದರು, ಬಿಳೀ ಟೋಪಿ ಬಂತು ಅಷ್ಟೇ!

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಕೆಂಪು ಟೋಪಿಗಳು ಬಂತು, ನಾವೂ ನೋಡಿದ್ದೇವೆ. ಅಲ್ಲದೆ ಒಂದು ಕಾಲಕ್ಕೆ ನಿಮ್ಮ ಪಕ್ಷದವರು ರಾಜ್ಯ ಆಳುತ್ತಾ ಇರಲಿಲ್ಲ. ಇಂದು ನಿಮ್ಮ ಪಕ್ಷದವರೇ ಆಡಳಿತ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಸದ್ಯ ಅಲ್ಲಿ ಒಬ್ಬರಿಗೊಬ್ಬರು ಹೊಡೆದಾಡದೆ ಆಳಿದರೆ ಸಾಲದೇ!

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರ ಸರಕಾರದವರು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಇಟ್ಟುಕೊಂಡಿರುವ ನೀತಿಯೇ ಅದಕ್ಕೆ ಕಾರಣವಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಅಭಿಪ್ರಾಯ ಭೇದಗಳಿರಬಹುದು. ಹಿಂದೆ ಸುಮಾರು ಐವತ್ತು ವರ್ಷಗಳ ಕೆಳಗೆ ಜನರಲ್ಲಿ ಒಂದು ರೀತಿಯಾದ ಕನ್‌ಸರ್‌ವೇಟೀವ್ ಔಟ್‌ಲುಕ್ ಇದೆ ಎಂದು ಹೇಳುತ್ತಿದ್ದರು, ಹಾಗೆ ಇಂದೂ ಕೂಡ ಈ ರೀತಿಯಾದ ಒಂದು ಮನೋಭಾವ ನಮ್ಮಲ್ಲಿರಬಾರದು. ಹಿಂದಿನ ಕಾಲದಲ್ಲಿ ಹಳ್ಳಿಯಲ್ಲಿದ್ದ ರೈತರು ಒಬ್ಬರೂ ಸಾಲ ಮಾಡಬೇಡಿ ಎಂದು ಹೇಳುತ್ತಿದ್ದರು. ಸಾಲ ಮಾಡಿ ಮನೆ ಮಠಗಳನ್ನು ಮಾರಬೇಡಿ, ಜಮೀನು ಹಾಳು ಮಾಡಿಕೊಳ್ಳಬೇಡಿ ಎಂದು ಬುದ್ಧಿಯ ಮಾತುಗಳನ್ನು ಹೇಳುತ್ತಿದ್ದರು. ಆಗ ಅವರಿಗೆ ಸಾಲ ಎಂದರೆ ಒಂದು ರೀತಿಯಾದ ಭಯ ಬಂದಿತ್ತು. ಹಿಂದೆ ಸರ್ವಜ್ಞನೂ ಒಂದು ಕಡೆ ಹೇಳಿದ್ದಾನೆ: ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ, ಎಂದು ಹಿಂದಿನ ಕಾಲದಲ್ಲಿ ಜನ ಸಾಲ ಮಾಡಲು ಹೆದರುತ್ತಿದ್ದರು. ಈಗಿನ ಕಾಲದಲ್ಲಿ ಹಣ ಸಂಪಾದನೆ ಮಾಡುವುದು ಬಹಳ ಕಷ್ಟವಾದುದು. ಹಿಂದೆ ಸಾಲ ಮಾಡಿದರೆ ಅದನ್ನು ವಸೂಲು ಮಾಡುವಾಗ ಬಂದರೆ ಅವನು ತನ್ನ ಹೆಂಡತಿ ಮಕ್ಕಳನ್ನಾದರೂ ಹರಾಜು ಹಾಕಿ ಸಾಲ ವಾಪಸು ಕೊಡು ಎಂದು ಕೇಳುವ ಧೈರ್ಯ ಅವರಲ್ಲಿತ್ತು. ಆಗಿನ ಕಾಲದಲ್ಲಿ ಜನ ಹತ್ತು ಅಥವಾ ಐದು ರೂಪಾಯಿಗಳಷ್ಟು ಸಾಲ ಮಾಡಬೇಕು ಎಂದರೇ ಭಯಪಡುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಹಾಗಿಲ್ಲ. ಹಿಂದೆ ಬ್ಯಾಂಕುಗಳನ್ನೇ ಜನ ನೋಡುತ್ತಿರಲಿಲ್ಲ. ಒಂದು ರೀತಿಯಾದ ಕನ್‌ಸರ್‌ವೇಟೀವ್ ಔಟ್‌ಲುಕ್ ಇರುವಂತಹ ಜನ ಅಲ್ಲಿರುತ್ತಿದ್ದರು. ಈಗ ಹಾಗಿಲ್ಲ ಯಾವ ದೇಶವನ್ನೇ ನೋಡಿ. ಇವೊತ್ತಿನ ದಿವಸ ಸಾಲ ಮಾಡದೇ ಇರುವ ದೇಶವೇ ಇಲ್ಲ, ಸಾಲ ಮಾಡಿಯೇ ದೇಶದ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಸಾಲವಿಲ್ಲದೆ. ಹೆಚ್ಚು ಆದಾಯ ಎಲ್ಲಿಂದ ಬರುತ್ತದೆ ಇದನ್ನು ನಾವು ಯೋಚನೆ ಮಾಡಬೇಕು.

ಶ್ರೀ ಪಿ. ವೆಂಕಟಗಿರಿಯಪ್ಪ.—ಚೈನಾದಲ್ಲಿ ಸಾಲ ಮಾಡಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಚೈನಾದವರಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಸಿಗುತ್ತಿಲ್ಲ. ಅಮೇರಿಕದವರು ಅವರಿಗೆ ಕೊಡುತ್ತಾರೆಯೇ ಎಂದು ಕಾಯುತ್ತಿದ್ದಾರೆ ಮತ್ತು ಅವರು ಇತ್ತೀಚೆಗೆ ಚೈನಾ ದೇಶದವರು ಇಂಟರ್‌ನ್ಯಾಷನಲ್ ಫೀಲ್ಡ್‌ಗೆ ಬರಬೇಕು ಎಂದು ಅದಕ್ಕೆ ತಕ್ಕ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಚೈನಾ ದೇಶದ ಬಗ್ಗೆ ಡೀಟೇಲ್ಸ್ ಬೇಕಾದರೆ ತಾವು ಓದಿ ನೋಡಬಹುದು. ಅವರು ತಮ್ಮ ಕಾಲಿನ ಮೇಲೆ ತಾವೇ ನಿಂತು ದೇಶ ಕಟ್ಟಿದ್ದಾರೆ ಮತ್ತು ಗವರ್ನಮೆಂಟ್ ಆಫ್ ಇಂಡಿಯಾದವರು ಇದರ ಬಗ್ಗೆ ಒಂದು ರಿಪೋರ್ಟು ಬೇಕು ಎಂದು ತರಿಸಿಕೊಂಡಿದ್ದಾರೆ. ಅದನ್ನು ತಾವು ಬೇಕಾದರೆ ತರಿಸಿ ಓದಿ ನೋಡಬಹುದು ಚೈನಾ ದೇಶದವರು ಬೇರೆಯವರ ಹತ್ತಿರ ಹೋಗಿ ಸಾಲ ಕೇಳುತ್ತಿಲ್ಲ.

SRI D. DEVARAJ URS.—I do not know what he wants me to understand by reading the report which he is referring to. Let him give me that report, I shall read and find out whether it has any bearing on what I am speaking today. I am highly doubtful about it.

(SRI D. DEVARAJ URS)

ಮತ್ತೆ ಟ್ಯಾಕ್ಸೇಷನ್ ವಿಚಾರ ತೆಗೆದುಕೊಂಡರೆ ನಮ್ಮ ಹಣಕಾಸಿನ ಸಚಿವರು ಸ್ವಲ್ಪ ಕಾಷಸ್ ಆಗಿ ಇಲ್ಲಿ ಹೇಳಲು ಪ್ರಯತ್ನ ಮಾಡಿದ್ದಾರೆ. ಅವರ ಮನಸ್ಸಿನಲ್ಲಿದ್ದರೂ-ಈಗ ನಾವು ಹೊಸದಾಗಿ ಟ್ಯಾಕ್ಸಸ್ ಹಾಕಬೇಕಾಗಿ ಬರುತ್ತದೆ ಎಂದು ಇಲ್ಲಿ ನೇರವಾಗಿ ಹೇಳಿಲ್ಲ. ಒಟ್ಟಿನಲ್ಲಿ ಈ ಪಂಚ ವಾರ್ಷಿಕ ಯೋಜನೆಗೆ ಹಣವನ್ನು ಒದಗಿಸಬೇಕಾಗಿ ಬರುತ್ತದೆ ಮತ್ತು ಇದರ ಜವಾಬುದಾರಿ ನಮ್ಮ ಮೇಲೆ ಇದೆ. ಐದನೇ ಫೈನಾನ್ಸ್ ಕಮಿಷನ್ನಿನವರು ಏನು ಕೊಡುತ್ತಾರೋ ಅದು ಇನ್ನೂ ನಿಗದಿ ಯಾಗಿಲ್ಲ ಮತ್ತು ಈ ಫೈನಾನ್ಸ್ ಕಮಿಷನ್‌ನವರು ಎಷ್ಟು ಕೊಡುತ್ತಾರೋ ಅದರ ಮೇಲೆ ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ರಚಿಸಬೇಕಾಗುತ್ತದೆ ಎನ್ನುವ ವಿಚಾರವನ್ನೂ ಅವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಕೂಡ ರಿಸೋರ್ಸಸ್‌ಗಳ ಮೂಲಕ ಹಣ ಕಾಸನ್ನು ಹೆಚ್ಚು ಹೆಚ್ಚಾಗಿ ಕೂಡಿಸುವುದಕ್ಕೆ ಪ್ರಯತ್ನಗಳನ್ನು ಮಾಡಬೇಕಾದುದು ಅಗತ್ಯ ಎನ್ನುವ ಮಾತನ್ನೂ ಅವರು ಇಲ್ಲಿ ಹೇಳಿದ್ದಾರೆ. ಇದನ್ನು ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಅವರು ಇಲ್ಲಿ ಡಿಟೇಲ್ಸ್‌ಗಳನ್ನು ಕೊಟ್ಟಿಲ್ಲ. ಒಟ್ಟಿನಲ್ಲಿ ಇಷ್ಟು ದುಡ್ಡು ಎಂದು ಹೇಳಲಿಲ್ಲ. ಅವರಿಗೆ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಹೊಸದಾದ ತೆರಿಗೆಗಳನ್ನು ಹಾಕಬೇಕಾಗಿ ಬರುತ್ತದೆ ಎಂದು ನೇರ ವಾಗಿ ಹೇಳುವುದಕ್ಕೆ ಮನಸ್ಸಿಲ್ಲದೆ ಸ್ವಲ್ಪ ಅವರ ಮನಸ್ಸಿಗೆ ತೋರಿದಂತೆ ಬೇರೆ ರೀತಿಯಾಗಿ ಹೇಳಿ ದ್ದಾರೆ. ಇದನ್ನು ಹೇಳಿದರೆ ಅವರು ಅನ್‌ಪಾಪ್ಯುಲರ್ ಆಗುತ್ತಾರೆ ಎಂದು ಇದನ್ನು ಹೇಳದೇ ಇರಲು ಒಂದು ಕಾರಣವೂ ಇರಬಹುದು. ಆದರೆ ಅವರು ಒಂದು ಹಿಂಟ್ ಮಾಡಿದ್ದಾರೆ. ಅರ್ಬನ್ ಸೆಕ್ಟಾರ್‌ನಲ್ಲಿ ನಾವು ತೆರಿಗೆಗಳನ್ನು ಹಾಕಿರುವುದು ಈಗಾಗಲೇ ಬಹಳ ಜಾಸ್ತಿಯಾಗಿದೆ. ಇನ್ನೂ ಹೆಚ್ಚು ಹೆಚ್ಚಾಗಿ ಅವರಿಗೆ ತೆರಿಗೆ ಹಾಕುವುದು ಕಷ್ಟ. ಆದರೆ ರೂರಲ್ ಸೆಕ್ಟಾರ್‌ನಲ್ಲಿ ಇನ್ನೂ ಅನ್‌ಟ್ಯಾಪ್‌ಡ್ ರಿಸೋರ್ಸಸ್‌ಗಳಿವೆ ಎಂದು ಕಂಡುಬರುತ್ತದೆ ಎಂದು ಹೇಳಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜನರಲ್ ಎಲೆಕ್ಷನ್ ಆದ ಕೂಡಲೆ ಹಳ್ಳಿಗಾಡಿನ ಜನರ ಮೇಲೆ ವ್ಯವಸಾಯಗಾರರ ಮೇಲೆ ತೆರಿಗೆಗಳನ್ನು ಹಾಕಿ ಹಾಗೂ ಬೆಳೆಯುವ ಪದಾರ್ಥಗಳ ಮೇಲೂ ತೆರಿಗೆ ಹಾಕಬೇಕು ಎನ್ನುವ ಒಂದು ಬಿಲ್ಲು ರೆಡಿಯಾಗಿತ್ತು. ಇದನ್ನು ಕಾಂಗ್ರೆಸ್ಸು ಪಕ್ಷದಲ್ಲಿ ಚರ್ಚೆಗೆ ತಂದಿದ್ದಾಗ ಇದರ ಮೇಲೆ ಅನೇಕರು ವಿರೋಧ ವ್ಯಕ್ತ ಮಾಡಿದರು ಎಂದು ಅದನ್ನು ಹಾಗೇ ಗುಪ್ತವಾಗಿರಿಸಿದರು ಎನ್ನುವುದು ತಮಗೂ ತಿಳಿದಿರಬೇಕು.

ಶ್ರೀ ಡಿ. ದೇವರಾಜ ಅರಸ್.—ನಿಮಗಿಂತ ಹೆಚ್ಚಾಗಿ ನನಗೂ ಅದು ಗೊತ್ತಿದೆ. ನಮ್ಮ ಹಣ ಕಾಸಿನ ಸಚಿವರು ಅವರ ಅಭಿಪ್ರಾಯದಲ್ಲಿ ರೂರಲ್ ಸಕ್ಟಾರ್‌ನಲ್ಲಿ ಹಾಗೂ ವ್ಯವಸಾಯ ಕ್ಷೇತ್ರದಲ್ಲಿ ಇನ್ನೂ ತೆರಿಗೆಗಳನ್ನು ಹಾಕಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವ ಮಾತನ್ನು ಇಲ್ಲಿ ತಿಳಿಸಿದ್ದಾರೆ. ನಮ್ಮ ಹಣಕಾಸಿನ ಸಚಿವರು ಇನ್ನೂ ಸ್ವಲ್ಪ ಧೈರ್ಯವನ್ನು ತೆಗೆದುಕೊಂಡು ಇದನ್ನು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿತ್ತು ಎಂದು ನನ್ನ ಭಾವನೆ. ಆಗಲಿ. ಇಷ್ಟಾದರೂ ಮನಸ್ಸು ಮಾಡಿ ಈ ಮಾತನ್ನು ಇಲ್ಲಿ ಹೇಳಿದ್ದಾರೆ.

5–00 P.M.

ಆದರೆ ಅರ್ಥ ಸಚಿವರು ಅರ್ಬನ್ ಸೆಕ್ಟಾರ್ ಮೇಲೆ ನಾವು ಈಗಾಗಲೇ ಸಾಕಷ್ಟು ಹೊರೆ ಹಾಕಿದ್ದೇವೆ ಅದು ಇನ್ನೂ ಹೆಚ್ಚು ಹೊರಲು ಸಾಧ್ಯವಿಲ್ಲ ಎನ್ನುವ ಮಾತನ್ನು ಹೆಚ್ಚು ವ್ಯಕ್ತಪಡಿಸಿ ದ್ದಾರೆ. ಅದಕ್ಕೆ ನಾನು ಹೇಳುವುದು ಏನೆಂದರೆ ಒಂದು ಕಡೆ ತೆರಿಗೆ ಹಾಕುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಇನ್ನೊಂದು ಕಡೆ ಅನ್‌ಟ್ಯಾಪ್ಡ್ ರೀಸೋರ್ಸಸ್ ಇದೆ ಎನ್ನುವ ಮಾತು ಹೇಳುವುದು ಅರ್ಬನ್ ಏರಿಯಾದಲ್ಲಿ ತೆರಿಗೆ ಹಾಕಲು ಏನೂ ಸಾಧ್ಯವಿಲ್ಲ ಎಂದು ಹೇಳುವುದು ಎಲ್ಲಾ ಒಪ್ಪತಕ್ಕ ಮಾತೇ ? ಅದು ಒಪ್ಪತಕ್ಕ ಮಾತಲ್ಲ. ಈವೊತ್ತು ದೇಶದ ಪರಿಸ್ಥಿತಿ ಏನು ಇದೆ ಎಂದರೆ ಅರ್ಬನ್ ಏರಿಯಾದಲ್ಲಿ ದೊಡ್ಡ ದೊಡ್ಡ ಕ್ಷೇತ್ರಗಳಲ್ಲಿರತಕ್ಕಂತ ಜನ ಯಾರು ? ಅವರೆಲ್ಲಾ ವ್ಯಾಪಾರ ಮಾಡು ವಂಥಾವರು, ಕೈಗಾರಿಕೆ ನಡೆಸತಕ್ಕಂಥಾವರು, ದೊಡ್ಡ ದೊಡ್ಡ ಮಿಲ್ಲುಗಳನ್ನು ಇಟ್ಟುಕೊಂಡಿರ ತಕ್ಕಂಥಾವರು, ವ್ಯವಸಾಯ ಕ್ಷೇತ್ರ ಬಿಟ್ಟು ಬೇರೆ ಬೇರೆ ಉದ್ಯಮಗಳನ್ನು ನಡೆಸತಕ್ಕಂಥಾವರು ಪಟ್ಟಣದಲ್ಲಿ ವಾಸ ಮಾಡತಕ್ಕಂಥ ಜನ, ಅವರು ಏನೂ ತೆರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದರೆ ಅದನ್ನು ಯಾವ ಆಧಾರದ ಮೇಲೆ ನಿರ್ಧರಿಸಿದಿರಿ ಎಂದು ಹಣಕಾಸಿನ ಸಚಿವರು ಕೇಳಬೇಕಾಗಿದೆ. ನಾನು ತಿಳಿಸುವುದು ಏನೆಂದರೆ ಅವರು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಅಲ್ಲ. ಈವೊತ್ತು ಪಟ್ಟಣದಲ್ಲಿರತಕ್ಕಂಥ ದೊಡ್ಡ ದೊಡ್ಡ ಉದ್ಯಮಗಳನ್ನು ನಡೆಸತಕ್ಕಂಥ ಜನರು ದೊಡ್ಡ ದೊಡ್ಡ ವ್ಯಾಪಾರಗಾರರು, ದೊಡ್ಡ ದೊಡ್ಡ ಮಿಲ್ಲುಗಳನ್ನು ಇಟ್ಟುಕೊಂಡಿರುವವರ ಕೈಯಲ್ಲಿ ಒಂದು

ಪ್ರಾಪಗಾಂಡ ಮಿಷನ್ ಇದೆ. ಅವರು ನಮ್ಮ ದೇಶದಲ್ಲಿ ಸರ್ಕಾರ ಮಾಡತಕ್ಕಂಥ ಕಾರ್ಯಕಲಾಪ ಗಳ ಬಗ್ಗೆ, ತೆರಿಗೆಗಳ ವಿಚಾರವಾಗಿ ಪ್ರಚಾರ ಮಾಡಿ, ನಮ್ಮ ಮೇಲೆ ಈಗ ಇರತಕ್ಕಂಥ ತೆರಿಗೆಗಳ ವಿಪರೀತವಾಗಿ ಹೊರೆಯಾಗಿ ಇರುವುದರಿಂದ ಇನ್ನೂ ಹೊರಲಿಕ್ಕೆ ಸಾಧ್ಯವಿಲ್ಲ ಹೀಗೆ ಒಂದಲ್ಲಾ ಒಂದು ವಿಚಾರವಾಗಿ ಎಕನಾಮಿಸ್ಟ್‌ನಿಂದ ಆರ್ಟಿಕಲ್ ಬರೆಸಿ ಪ್ರಾಪಗಾಂಡ ಮಾಡುತ್ತಾರೆ. ಅದಕ್ಕೆ ನಾನು ಹೇಳುವುದು ತೆರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಅವರು ಹೇಳು ವುದು ಸರಿಯೇ! ಆದುದರಿಂದ ಮಾನ್ಯ ಹಣಕಾಸಿನ ಸಚಿವರು ಇದನ್ನು ವಿಮರ್ಶೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಸಮಾಜವಾದ ಗುರಿಯನ್ನಿಟ್ಟುಕೊಂಡು ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ನಮ್ಮ ಗುರಿಯೆಂದು ಹೇಳಿ ಈ ಅರ್ಬನ್ ಸೆಕ್ಟಾರ್‌ನಲ್ಲಿ ಏನೂ ತೆರಿಗೆ ಹಾಕಲು ಸಾಧ್ಯವಿಲ್ಲ ಎಂದರೆ ಇದಕ್ಕೆ ಹೊಂದಾಣಿಕೆ ಆಗುತ್ತದೆಯೇ? ಅರ್ಬನ್ ಸೆಕ್ಟಾರ್ ನಲ್ಲಿರತಕ್ಕಂಥ ಜನ ಈ ಸಮಾಜವಾದದ ಗುರಿಗೆ ಸಿಕ್ಕಿ ಅವರಿಗೆ ಇರತಕ್ಕಂಥ ಐಶ್ವರ್ಯವನ್ನು ಕೊಟ್ಟು ಬಿಟ್ಟಿದ್ದಾರೆ ಅವರಿಗೆ ಏನೂ ಕೊಡುವುದಕ್ಕಾಗುವುದಿಲ್ಲ ಎನ್ನುವುದನ್ನು ಯಾವ ಆಧಾರದ ಮೇಲೆ ಹೇಳುತ್ತಾರೆ. ಅರ್ಬನ್ ಏರಿಯಾದಲ್ಲಿ ಒಬ್ಬನಿಗೆ ಎಷ್ಟು ಮನೆಗಳು ಇವೆ? ಎಷ್ಟು ಸೈಟುಗಳು ಇವೆ! ಇನ್ನೂ ಬೇರೆ ಬೇರೆ ಸೌಕರ್ಯಗಳು ಏನೇನು ಇವೆ! ಇಷ್ಟೊಂದು ಪ್ರಮಾಣದಲ್ಲಿ ಇರುವುದಕ್ಕೆ ಕಾರಣ ಏನು! ವರ್ಷದಲ್ಲಿ ಅವನ ಆದಾಯ ಏನು? ಅವನು ವರ್ಷದಲ್ಲಿ ಖರ್ಚು ಮಾಡುವ ಹಣದ ಮೊತ್ತವೆಷ್ಟು? ಇವೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವಿಚಾರಣೆ ಮಾಡಲು ಒಂದು ಬೋರ್ಡ್ ಮಾಡಿವೆ. ಆಗ ಅವರು ತೆರಿಗೆಯನ್ನು ಹೊರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬಹುದು. ಅವರು ಮಾಡತಕ್ಕಂಥ ಪ್ರಾಪಗಾಂಡದ ಮೇಲೆ ಅವರು ಈ ತೆರಿಗೆಯನ್ನು ಹೊರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೀರಿ. ಇದನ್ನು ಯೋಚನೆ ಮಾಡಬೇಕಾಗಿದೆ.

ಇನ್ನು ರೂರಲ್ ಸೆಕ್ಟಾರ್ ಬಗ್ಗೆ ಈ ತೆರಿಗೆಗಳ ವಿಚಾರ ಬಗ್ಗೆ ನಿಷ್ಠೂರವಾದರೂ ಕೂಡ ಒಪ್ಪುತ್ತೇನೆ. ನಾವು ರೈತರ ಪರವಾಗಿ ಮಾತನಾಡತಕ್ಕಂಥ ಜನ ಎಂದು ಯಾರು ಹೇಳುವುದಕ್ಕೆ ಇಲ್ಲಿ ಬಂದಿದ್ದಾರೋ ಅವರೆಲ್ಲರೂ ಕೂಡ ಕ್ಲೈಮು ಮಾಡುವುದು ರೈತರ ಪರವಾಗಿಯೇ ಎಂದು ನನಗೆ ಅನಿಸುತ್ತಿದೆ. ನಾವು ಬಂದಿರುವುದು ರೈತರ ಪರವಾಗಿಯೇ ಅದೂ ನಿಜ. ಆದರೆ ಅದನ್ನು ತಿಳಿದು ಮಾತನಾಡಬೇಕು. ಇದರ ಬಗ್ಗೆ ಆಲೋಚನೆ ಮಾಡಬೇಕು. ಈವೊತ್ತು ದೇಶದಲ್ಲಿರ ತಕ್ಕಂಥ ರೈತರೆಲ್ಲರೂ ಒಂದೇ ರೀತಿಯಿಂದ ಇದ್ದಾರೆಂದು ಪರಿಗಣಿಸಲಿಕ್ಕೆ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ನಾನಾ ರೈತವರ್ಗದವರು ಇದ್ದಾರೆ. ಅದರಲ್ಲಿ ಎಕನಾಮಿಕ್ ಕ್ಲಾಸಿಫಿಕೇಷನ್ ತೆಗೆದು ಕೊಳ್ಳುವುದಾದರೆ ಒಬ್ಬ ಉತ್ತಮ ರೈತನಿದ್ದಾನೆ, ಇನ್ನೊಬ್ಬ ರೈತ ನೀರಾವರಿ ಕ್ಷೇತ್ರದಲ್ಲಿರತಕ್ಕಂಥ ಕಡೆ ಇದ್ದಾನೆ, ಇನ್ನೊಬ್ಬ ರೈತನಿಗೆ ಮಳೆ ಬಂದಾಗ ಜಮೀನಿನಲ್ಲಿ ಬೆಳೆ ಆಗಬಹುದು ಈ ರೀತಿ ಇದೆ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡರೆ ಅವನು ಬಡವ, ಇವನೂ ಬಡವ ಎಂದು ಹೇಳುವುದಾದರೆ ಬಹುಮಂದಿ ಬಡವರೇ ಇರಬಹುದು. ಬಡವರ ಹೆಸರಿನಲ್ಲಿ ಯಾರ್ಯಾರು ಅನುಕೂಲತೆಗಳನ್ನು ಪಡೆಯುತ್ತಾರೆ ಅವರು ಈಗಾಗಲೇ ಪಡೆದಿದ್ದಾರೆ. ಆದುದರಿಂದ ಆ ರೈತರ ಪರವಾಗಿ ನಾವು ಕಂದಾಯ ಕೊಡಲಿಕ್ಕೆ ಸಾಧ್ಯವಿಲ್ಲ, ತೆರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ, ಇನ್‌ಕಂಟ್ಯಾಕ್ಸ್‌ಗೆ ಕಷ್ಟ ಬರುತ್ತದೆ ಎಂದು ಈ ರೀತಿ ಹೇಳುವುದನ್ನು ನಾವು ಬಹಳ ಆಳವಾಗಿ ಆಲೋಚನೆ ಮಾಡಬೇಕು. ಒಂದುವೇಳೆ ಅಗ್ರಿಕಲ್‌ಚರಲ್ ಇನ್‌ಕಮ್‌ಟ್ಯಾಕ್ಸ್ ಹಾಕುವುದಾದರೆ ಲೆಕ್ಕ ಪತ್ರಗಳನ್ನು ಇಡ ಬೇಕಾಗುತ್ತದೆ ಅದರಿಂದ ಅವರಿಗೆ ಕಷ್ಟವಾಗಬಹುದು. ಆದುದರಿಂದ ಇನ್ನು ಯಾವ ರೀತಿ ಯಿಂದ ಅವರಿಂದ ಹಣ ಪಡೆಯಬೇಕು ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆಯೇ ಹೊರತು, ಈವೊತ್ತು ಇರತಕ್ಕಂಥ ಸಾಲದ ಬಗ್ಗೆ ಏನು ಇದೆ ಅದನ್ನು ಯೋಚಿಸದೆ ನೂರಾರು ವರ್ಷಗಳ ಹಿನ್ನೆಲೆ ತೆಗೆದುಕೊಂಡು ಆವೊತ್ತು 1 ಎಕರೆಗೆ 1 ರೂಪಾಯಿ, 2 ಎಕರೆಗೆ 2 ರೂಪಾಯಿ, 10 ಎಕರೆಗೆ 10 ರೂಪಾಯಿ ಲ್ಯಾಂಡ್ ರೆವಿನ್ಯೂ ಇತ್ತು ಎಂದು ಹೇಳುವುದು ಸರಿಯಲ್ಲ. ನಮ್ಮ ದೇಶದ ರೈತರಿಗೆ ಲೆಕ್ಕವನ್ನು ಬರೆಯುವುದಕ್ಕೆ ವಿದ್ಯೆ ಬರುವುದಿಲ್ಲ, ಅದರಿಂದ ಅವರಿಗೆ ಇನ್‌ಕಂಟ್ಯಾಕ್ಸ್ ಹಾಕುವುದು ಇಂಪ್ರ್ಯಾಕ್ಟಿಕಲ್ ಎಂದು ಹೇಳುವುದು ಸರಿ ಅಲ್ಲ. ಆದರೆ ತಕ್ಷಣದಲ್ಲಿ ಇನ್‌ಕಂಟ್ಯಾಕ್ಸ್ ಹಾಕಲು ಸಾಧ್ಯವಿಲ್ಲ. ಅದರ ಬದಲು ಇನ್ನು ಯಾವ ರೀತಿ ಹಾಕಬೇಕು ಎಂದು ಯೋಚನೆ ಮಾಡಬೇಕು. ಮಾನ್ಯ ಶಿವಪ್ಪನವರು ಒಂದು ಮಾತು ಹೇಳಿದರು ಹಿಂದೆ ಲ್ಯಾಂಡ್ ರೆವಿನ್ಯೂ ತೆಗೆದು ಹಾಕುತ್ತೇವೆ ಎಂದು ಹೇಳಿದರು, ಅದನ್ನು ತೆಗೆಯಲಿಲ್ಲ ಎಂದು. ಮಾನ್ಯ ಶಿವಪ್ಪನವರು ಈಗ ಲ್ಯಾಂಡ್ ರೆವಿನ್ಯೂ ತೆಗೆದು ಹಾಕಿ ಎಂದು ಹೇಳಿದರು. ಆದರೆ ಅವರು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಹಾಕಿ ಎಂದು ಹೇಳಿದರೇ? ಈಗ ಅವರು ಏನಾದರೂ ಹೇಳಿದರೆ, ಮುಂದೆ ಅವರ ಸರ್ಕಾರ ಬಂದಾಗ ನಾವು ವ್ಯವ ಸಾಯದ ತೆರಿಗೆ ಹಾಕಿ ಎಂದು ಹೇಳುತ್ತೇವೋ ಎನ್ನುವ ಹೆದರಿಕೆ ಅವರ ಮನಸ್ಸಿನಲ್ಲಿ ಇದೆಯೇ? ಅವರು ಇದರ ಬಗ್ಗೆ ಹೇಳುತ್ತಾರೋ ಇಲ್ಲವೋ ಅನ್ನುವ ಶಂಕೆ ನನಗೆ ಇದೆ. ಆದುದರಿಂದ ಬಹು ಸುಲಭವಾಗಿ ಭೂಕಂದಾಯವನ್ನು ತೆಗೆದು ಹಾಕಿಬಿಡಿ ಎಂದು ಹೇಳಿದರು. ಈವೊತ್ತಿನ ದಿವಸ

(ಶ್ರೀ ಡಿ. ದೇವರಾಜ ಅರಸ್)

ಭೂಕಂದಾಯದಿಂದ 7½–8 ಕೋಟಿ ರೂಪಾಯಿಗಳು ಬರುತ್ತದೆ. ಈ ಭೂಕಂದಾಯವನ್ನು ಬಿಟ್ಟುಬಿಡಿ ಎಂದು ಹೇಳುತ್ತಾರೆ ಮತ್ತೆ ಅವರು ಹೇಳುವ ಬಾಬುಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಡಿ ಎಂದು ಹೇಳುತ್ತಾರೆ. ಅದು ಹೇಗೆ ಸಾಧ್ಯ? ಈಗಾಗಲೇ 13½ ಕೋಟಿ ರೂಪಾಯಿ ತುಂಬುವುದು ಮತ್ತು ಕ್ಯಾಪಿಟಲ್ ಎಕ್ಸ್‌ಪೆಂಡಿಚರ್‌ನಲ್ಲಿ ಇರುವುದನ್ನು ನೋಡಿದರೆ 30 ಕೋಟಿ ರೂಪಾಯಿಗಿಂತಲೂ ಖೋತಾ ಜಾಸ್ತಿ ಬರುತ್ತದೆ. ಇದು ನಮ್ಮ ಹಣಕಾಸಿನ ಸಚಿವರ ವರದಿಯಲ್ಲೂ ಇದೆ. ಇಷ್ಟು ದುಡ್ಡು ಖೋತಾ ಇರುವಾಗ ಈ 7-8 ಕೋಟಿ ರೂಪಾಯಿಗಳನ್ನು ಬಿಟ್ಟುಬಿಡಿ ಎಂದು ಹೇಳಿದರೆ ಇದು ಜಾಣತನದ ಮಾತೇ?

ಶ್ರೀ ಬಿ. ಪರಮೇಶ್ವರಪ್ಪ.—ಲ್ಯಾಂಡ್ ರೆವಿನ್ಯೂ ತೆಗೆದು ಹಾಕುತ್ತೇವೆ ಎಂದು ಏನಾದರೂ ಹೇಳಿದ್ದರೆ ಅದು ನೀವೇ ಮಾಡಿದ್ದು. ಈವೊತ್ತು ಲ್ಯಾಂಡ್ ರೆವಿನ್ಯೂ ತೆಗೆದು ಹಾಕಿದರೆ 7–8 ಕೋಟಿ ರೂಪಾಯಿಯಷ್ಟು ಖೋತಾ ಬರುತ್ತದೆ ಎಂದು ಹೇಳುತ್ತೀರಾ! ಈಗ 2 ವರ್ಷದ ಕೆಳಗೆ ಲ್ಯಾಂಡ್ ರೆವಿನ್ಯೂ ತೆಗೆದು ಹಾಕಿದರೆ ಈ ರೀತಿ ಖೋತಾ ಬರುತ್ತದೆ ಎನ್ನುವ ಮುನ್ಸೂಚನೆ ಆ ದಿನ ತಮಗೆ ಗೊತ್ತಿರಲಿಲ್ಲವೇ? ಅದನ್ನು ಜ್ಞಾಪಕದಲ್ಲಿಟ್ಟುಕೊಂಡು ಮಾತನಾಡಬೇಕು. ಇದು ಜಾಣತನವೇ?

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಮಾನ್ಯ ಸದಸ್ಯರು ಜ್ಞಾಪಕ ಮಾಡಿದ್ದು ಬಹಳ ಸಂತೋಷ. ನಾನು ಮರೆತಿದ್ದೆ, ಅವರು ಜ್ಞಾಪಕ ಮಾಡಿದರು.

1967ನೇ ಇಸವಿಗೆ ಮುಂಚೆ ಇದನ್ನು ನಾವು ಹೇಳಿದ್ದು ನಿಜ. ಎಲೆಕ್ಷನ್‌ಸ್ಟಂಟ್ ಎಂದು ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಹಾಗೆ ಮಾಡದೆ ಹೋದರೆ ಚುನಾವಣೆಗಳಲ್ಲಿ ಗೆಲ್ಲುವುದಕ್ಕೆ ಸಾಧ್ಯವೇ, ಸ್ವಾಮಿ? ಆವಾಗ ನಾವು ಹೇಳತಕ್ಕ ಮಾತಾದರೂ ಏನು? ನಾವು ಭೂಕಂದಾಯವನ್ನು ಈಗ ಇರುವ ರೀತಿಯಲ್ಲಿ ಇರುವುದು ಸರಿಯಿಲ್ಲ, ಅದನ್ನು ತೆಗೆದು ಹಾಕಬೇಕು, ಬೇರೆ ರೂಪದಲ್ಲಿ ಹಾಕುವುದಕ್ಕೆ ಯೋಚನೆ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹೀಗೆ ಹೇಳುತ್ತಿರುವುದು ಚುನಾವಣೆಗಳು ಆದ ಮೇಲೆ.

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳತಕ್ಕ ಮಾತು ಸರಿ ಇಲ್ಲದೆ ಇದ್ದರೆ ರಿಕಾರ್ಡ್ ತೆಗೆಸಿ ನೋಡಲು ಗೊತ್ತಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ಇದೆ.

ಶ್ರೀ ಡಿ. ದೇವರಾಜ ಅರಸ್.—1967ನೇ ಇಸವಿಗೆ ಮುಂಚೆ ತಾವು ಇದ್ದೀರಾ ದೇವರು! ಮಾನ್ಯ ಸದಸ್ಯರಿಗೆ ಗೊತ್ತಿಲ್ಲದೇ ಸುಮ್ಮನೇ ಹೇಳುತ್ತಿದ್ದಾರೆ. ಅವರು ಇಲ್ಲದೇ ಇದ್ದಾಗ ಈ ಸಭೆಯಲ್ಲಿ ಆದಂಥ ಮಾತನ್ನು ಅವರು ಹೇಳುತ್ತಿದ್ದಾರೆ. ಚುನಾವಣೆಗೆ ಮುಂಚೆ ಇದೇ ಮಾನ್ಯ ಸಭೆಯಲ್ಲಿ ಹಿಂದಿನ ಮುಖ್ಯ ಮಂತ್ರಿಯವರು ಈ ವಿಚಾರವಾಗಿ ಮಾತನಾಡಿದರು. ಈಗ ಇರುವ ರೀತಿಯಲ್ಲಿ ಭೂಕಂದಾಯ ಮುಂದುವರಿಯಬೇಕೇ ಇಲ್ಲವೇ ಎನ್ನುವುದರ ಬಗ್ಗೆ ಅವರು ಮಾತನಾಡಿದ್ದರು. ನಾವಾದರೂ ವಿರೋಧ ಪಕ್ಷದ ಜನರು ಯಾರಿದ್ದರೆ ಅವರೆಲ್ಲರೂ ಏಕಾಭಿಪ್ರಾಯ ಉಳ್ಳವರು ಎಂದು ತಿಳಿದುಕೊಂಡಿದ್ದೆವು. ಭೂ ಕಂದಾಯ ಈಗಿರುವ ರೀತಿಯಲ್ಲಿ ಬೇಡ ಎಂದು ಅನೇಕರು ಹೇಳುತ್ತಿದ್ದರು. ಬೇರೆ ಯಾವುದಾದರೂ ರೀತಿಯಲ್ಲಿ ತೆರಿಗೆ ಹಾಕುವುದಕ್ಕೆ ನಮ್ಮ ಸದಸ್ಯರೆಲ್ಲರೂ ಒಪ್ಪುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಇತ್ತೀಚೆಗೆ ಏನಾಯಿತು ಎಂದರೆ ಭೂಕಂದಾಯವನ್ನು ತೆಗೆದು ಹಾಕಿ ಎಂದು ಹೇಳುವುದಕ್ಕೆ ಹೊರಟಿದ್ದಾರೆ. ಅದರ ಬದಲು ಏನು ಮಾಡಬೇಕು ಎನ್ನುವುದು ಕಾಂಗ್ರೆಸ್ಸಿಗೆ ವಿಚಾರ ಎಂದು ಇರಬಹುದು. ಅದನ್ನು ಹೇಳುವುದಿಲ್ಲ. ನಾವು ಬಂದಾಗ ಆಲೋಚನೆ ಮಾಡುತ್ತೇವೆ, ನಿಮಗೆ ಏಕೆ ಈಗಲೇ ಹೇಳಬೇಕು ಎನ್ನುತ್ತಾರೆ. ಭೂಕಂದಾಯವನ್ನು ಏಕಾ ಏಕಿ ತೆಗೆಯಬೇಕು ಎನ್ನುವುದು ಸಾಧ್ಯವಿಲ್ಲದ ವಿಚಾರ. ಅದರ ಬದಲು ಸರ್ಕಾರಕ್ಕೆ ಆದಾಯ ಬರುವ ವಿಚಾರ ಯಾವುದು ಎನ್ನುವುದನ್ನು ಸರ್ಕಾರ ಯೋಚನೆ ಮಾಡುತ್ತಿದೆ. ಇಷ್ಟರಲ್ಲಿ ತಾಲ್ಲೂಕು ಬೋರ್ಡ್ ಚುನಾವಣೆಗಳು ಬಂದವು. ಆ ಚುನಾವಣೆಗಳು ನಡೆದಂಥ ಸಂದರ್ಭದಲ್ಲಿ ನಮ್ಮ ಮಾನ್ಯ ವಿರೋಧ ಪಕ್ಷದ ಸ್ನೇಹಿತರು, ಕಾಂಗ್ರೆಸ್‌ನವರು ಕಂದಾಯ ತೆಗೆದು ಹಾಕುತ್ತೇವೆಂದು ಹೇಳಿದವರು ಅದನ್ನು ತೆಗೆದು ಹಾಕಲಿಲ್ಲ, ಅವರು ಅಂಥ ಮೋಸಗಾರರು ಎಂದು

ಹೇಳಿ ಜನರನ್ನು ಅವರ ಕಡೆಗೆ ಎಳೆದುಕೊಂಡು ಮತಗಳನ್ನು ಪಡೆಯುವ ಸಾಧ್ಯತೆ ಇತ್ತು. ಅವರು ಹಾಗೆ ಏಕೆ ಮಾಡಲಿಲ್ಲ...

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಕೆಂಪು ಜೋಳಿಗೆ ಕೆಲಸ ಮಾಡಿತು.

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದ ರೈತ ಕಂದಾಯವನ್ನು ತೆಗೆದು ಹಾಕುತ್ತೀವೆಂದರೆ ಆ ಮಾತನ್ನು ನಂಬುವುದಿಲ್ಲ. ಕಂದಾಯವನ್ನು ತೆಗೆದು ಹಾಕುವುದಕ್ಕೆ ಆಗುವುದಿಲ್ಲ, ಅದಕ್ಕೆ ಬದಲಾಗಿ ಇನ್ನು ಯಾವುದಾದರೂ ತೆರಿಗೆಯನ್ನು ಹಾಕಿಯೇ ಹಾಕುತ್ತಾರೆಂದು ಅವನು ತಿಳಿದುಕೊಂಡಿದ್ದಾನೆ. ಫಿಪ್ತ್ ಸೆನ್ಸ್ ಎನ್ನುವುದು ಸರ್ವೇ ಸಾಧಾರಣವಾಗಿ ನಮ್ಮ ಮಟ್ಟದಲ್ಲಿರುವುದಿಲ್ಲ, ಸಾಮಾನ್ಯ ಮನುಷ್ಯನಲ್ಲಿ ಇರುತ್ತದೆ. ಕಂದಾಯವನ್ನು ತೆಗೆದು ಹಾಕುತ್ತೇವೆಂದು ನಾವು ಯಾರಾದರೂ ಹೋಗಿ ಹೇಳಿದರೆ ಏನೋ ಮಾತನಾಡುತ್ತ ಇದ್ದಾರೆ, ಅದೆಲ್ಲ ಬೊಗಳೆ ಎಂದು ತಿಳಿದುಕೊಳ್ಳುತ್ತಾನೆ. ಕಂದಾಯವನ್ನು ಹೇಗೆ ತೆಗೆಯುತ್ತೀರಿ, ನನ್ನ ಹೆಸರಿನಲ್ಲಿರುವ ಜಮೀನು ಕುರಿತು ನನಗೆ ಸರ್ಕಾರದಿಂದ ಒಂದು ರಿಕಾರ್ಡ್ ಬೇಡವೇ, ತೆಗೆದುಕೊಳ್ಳುವ ಕಂದಾಯ ತೆಗೆದುಕೊಳ್ಳಿ, ನನ್ನ ರಿಕಾರ್ಡ್ ಚಟ್ ಮಾಡಬೇಡಿ ಎಂದು ಹೇಳುತ್ತಾನೆ. ರಾಜಕೀಯವಾಗಿ ಏನೋ ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಜನ ಅಂಥ ಮಾತುಗಳನ್ನು ಕೇಳುವುದಿಲ್ಲ.

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಪಂಜಾಬ್, ಬಿಹಾರ, ಬಂಗಾಳ ಇವೆಲ್ಲ ಮಧ್ಯ ಕಾಲೀನ ಚುನಾವಣೆಗಳಲ್ಲಿ ಏನಾಗಿದೆ ಎಂಬುದನ್ನು ಸ್ವಲ್ಪ ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದು ವಿಂಧ್ಯ ಪರ್ವತದ ಉತ್ತರದ ವಿಚಾರ. ನಾವು ವಿಂಧ್ಯ ಪರ್ವತದ ದಕ್ಷಿಣದ ಮಾತನ್ನು ನೋಡೋಣ.

ನಾವು ಕಂದಾಯವನ್ನು ಒಂದಲ್ಲ ಒಂದು ರೂಪದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಮಾತನ್ನು ನಾವೆಲ್ಲ ಯೋಚನೆ ಮಾಡಬೇಕಾಗಿರುವುದೇನೆಂದರೆ ಭೂಕಂದಾಯವನ್ನು ಸಣ್ಣ ಹಿಡುವಳಿದಾರರಿಗೆ ತಪ್ಪಿಸುವುದಕ್ಕಾಗುವುದಿಲ್ಲವೇ ಎನ್ನುವುದು. ಅದನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು. ನಾಲ್ಕು ಎಕರೆ, ಮೂರು ಎಕರೆ ಜಮೀನಿರತಕ್ಕ ಹಿಡುವಳಿದಾರ ಕಂದಾಯ ಕೊಡದೆ ಹೋದರೆ ಚಿಂತೆ ಇಲ್ಲ. ಹೆಚ್ಚು ಭೂಮಿ ಇರತಕ್ಕ ಜನ, ನೀರಾವರಿ ಭೂಮಿ ಇರತಕ್ಕ ಜನ, ಇವರಿಂದ ಯಾವ ರೀತಿಯಲ್ಲಿ ಹೆಚ್ಚು ತೆರಿಗೆಯನ್ನು ತೆಗೆದುಕೊಳ್ಳಬಹುದು ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕಾದ ಅಗತ್ಯವಿದೆ. ಇದೊಂದು ಅನ್‌ಟ್ಯಾಪ್ಡ್ ರಿಸೋರ್ಸ್ ಇದೆ. ಒಂದು ಕಡೆ ರೈತನಿಂದ ಕಂದಾಯವನ್ನು, ಇನ್ನೊಂದು ಕಡೆ ದೊಡ್ಡ ದೊಡ್ಡ ವ್ಯಾಪಾರಸ್ಥರು, ವ್ಯವಹಾರ ಮಾಡತಕ್ಕವರು, ಬೇರೆ ಬೇರೆ ಕಸುಬು ಮಾಡತಕ್ಕವರು ಅನುಕೂಲಸ್ಥರು ಇಂಥವರಿಂದ ಹೆಚ್ಚು ತೆರಿಗೆಯನ್ನು ಪಡೆಯುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು.

ಡೈರೆಕ್ಟ್ ಟ್ಯಾಕ್ಸಸ್ ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸಸ್ ಎಂದು ಎರಡು ವಿಧವಿದೆ. ಇವರಲ್ಲಿ ಡೈರೆಕ್ಟ್ ಟ್ಯಾಕ್ಸಸ್ ನಮ್ಮ ದೇಶದಲ್ಲಿ ಕಡಮೆಯಾಗಿ ಇನ್‌ಡೈರೆಕ್ಟ್ ಟ್ಯಾಕ್ಸಸ್ ಜಾಸ್ತಿಯಾಗುತ್ತಿದೆ. ಅವರ ಬಗ್ಗೆ ತುಕೋಳ್ ವರದಿಯಲ್ಲಿ ಕೂಡ ಸ್ವಲ್ಪ ಪ್ರಸ್ತಾಪ ಮಾಡಿದ್ದಾರೆ. 1957ರಿಂದ ಇದುವರೆಗೆ ಹೇಗೆ ಇನ್‌ಡೈರೆಕ್ಟ್ ಟ್ಯಾಕ್ಸಸ್ ಜಾಸ್ತಿಯಾಗುತ್ತಿದೆ ಡೈರೆಕ್ಟ್ ಟ್ಯಾಕ್ಸಸ್ ಪ್ರಪೋರ್ಷನೇಟಾಗಿ ಕಡಮೆಯಾಗುತ್ತಿದೆ ಎನ್ನುವುದನ್ನು ಹೇಳಿದ್ದಾರೆ. ಡೈರೆಕ್ಟ್ ಟ್ಯಾಕ್ಸಸ್ ಕಡಮೆಯಾಗುವುದು ಪ್ರಗತಿದಾಯಕವಾದ ಹೆಜ್ಜೆಯೇ ಹಿಂದಕ್ಕೆ ಹೋಗತಕ್ಕ ವಿಚಾರವೇ ಎನ್ನುವುದನ್ನು ದೀರ್ಘವಾಗಿ ಯೋಚನೆ ಮಾಡಬೇಕು. ನಾಲ್ಕನೆಯ ಯೋಜನೆಗೆ ನಮಗೆ ಸಂಪನ್ಮೂಲಗಳು ಬೇಕು. ಡೈರೆಕ್ಟ್ ಟ್ಯಾಕ್ಸಸ್ ಕಡಮೆಯಾಗುವುದಕ್ಕೆ ಕಾರಣವೇನು, ಅದನ್ನು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲವೇ ಎನ್ನುವುದನ್ನೂ ಯೋಚನೆ ಮಾಡಬೇಕಾಗಿದೆ. ಇನ್‌ಡೈರೆಕ್ಟ್ ಟ್ಯಾಕ್ಸಸ್ ಏಕೆ ಹೆಚ್ಚಾಗುತ್ತಿದೆ, ಯಾರಿಗೆ ಇದರ ಫಲ ಬರುತ್ತಿದೆ, ಸಾಮಾನ್ಯ ಮನುಷ್ಯನಿಗೆ ಇನ್‌ಡೈರೆಕ್ಟ್ ಟ್ಯಾಕ್ಸಸ್ ಜಾಸ್ತಿಯಾಗಿರುವುದರಿಂದ ತೆರಿಗೆಯ ಭಾರ ಜಾಸ್ತಿಯಾಗುತ್ತಿದೆಯೇ ಎನ್ನುವುದನ್ನು ಕೂಡ ಯೋಚನೆ ಮಾಡಬೇಕು. ಮಾರಾಟ ತೆರಿಗೆಯಿಂದ 30 ಕೋಟಿ ಚಿಲ್ಲರೆ ಆದಾಯ ಬರುವಾಗ ಅದೆಲ್ಲ ಕೊಳ್ಳುವವರಿಂದ ಬರುತ್ತದೆ. ಸೇಕಡ ಐದರಷ್ಟು ತೆರಿಗೆ ಜಾಸ್ತಿಯಾದರೆ ಅದರ ಭಾರ ಸಾಮಾನ್ಯ ಜನರ ಮೇಲೆ ಬೀಳುತ್ತದೆ. ಮಾರಾಟ ತೆರಿಗೆಯನ್ನು ಹೆಚ್ಚು ಮಾಡಿದರೆ ಅದು ಜನಗಳಿಗೆ ತಿಳಿಯುವುದಿಲ್ಲ, ಅದು ಇನ್‌ಡೈರೆಕ್ಟ್ ಟ್ಯಾಕ್ಸ್, ಪರೋಕ್ಷವಾಗಿ ಬೀಳುತ್ತದೆ, ಪರವಾ ಇಲ್ಲ ಎಂದು ಹೇಳುವ ಸ್ವಭಾವ ವುಂಟು. ಮಾನ್ಯ ಸದಸ್ಯರು ಈ ಮಾತನ್ನು ಒಪ್ಪುತ್ತಾರೆಯೇ ? ನಾವು ಇನ್‌ಡೈರೆಕ್ಟ್ ಟ್ಯಾಕ್ಸನ್ನು ಜಾಸ್ತಿ ಮಾಡಬೇಕಾದರೆ ನಮ್ಮ ತೆರಿಗೆಯನ್ನು ಹಾಕುವ ನೀತಿ ಯಾವ ರೀತಿ ಇರಬೇಕು, ಯಾವುದರಿಂದ ಹೆಚ್ಚು ಹಣ ಸರ್ಕಾರಕ್ಕೆ ಬರುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಬಹುಶಃ ಈ ಸಭೆ ನನ್ನ ಮಾತನ್ನು ಒಪ್ಪುತ್ತದೆ ಎಂದು ನನ್ನ ಭಾವನೆ.

(ಶ್ರೀ ಡಿ. ದೇವರಾಜ ಅರಸ್)

ಸ್ವಾಮಿ, ಇನ್ನೊಂದು ವಿಚಾರ. ಸರ್ವಿಸಸ್‌ಗೆ ಹೆಚ್ಚು ಖರ್ಚು ಮಾಡುತ್ತಿದ್ದಾರೆಂದು ಶ್ರೀ ಶಿವಪ್ಪನವರು ಟೀಕೆ ಮಾಡಿದ್ದಾರೆ. ತುಕೋಳ್ ವರದಿಯ ಅಂಕಿ ಅಂಶಗಳನ್ನು ಅವರು ನೋಡಲಿ. ಅದರ ಪ್ರಕಾರ ಮೈಸೂರು ರಾಜ್ಯದಲ್ಲಿ ಸಿವಿಲ್ ಅಡ್ಮಿನಿಸ್ಟ್ರೇಷನ್ ಖರ್ಚು ನೋಡಿದರೆ ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದ್ದು ಕಡಮೆ ಇದೆಯೆಂದು ಗೊತ್ತಾಗುವುದು. 68-69ಕ್ಕೆ ಪರ್ಸೆಂಟೇಜ್ ಆಫ್ ಎಕ್ಸ್‌ಪೆಂಡಿಚರ್ ಆನ್ ಸಿವಿಲ್ ಅಡ್ಮಿನಿಸ್‌ಸ್ಟ್ರೇಷನ್ ಅಸ್ ಕಂಪೇರ್ಡ್ ಟು ಟೋಟಲ್ ರೆವೆನ್ಯು ಈ ರೀತಿ ಇದೆ. ಆಂಧ್ರ—14.3, ಅಸ್ಸಾಂ—15.7, ಬಿಹಾರ್—14.1, ಬಾಂಬೆ—(ಬೈಫರ್ಕೇಷನ್ ಆದಮೇಲೆ)—13.1, ಕೇರಳ—8.6, ಮಧ್ಯಪ್ರದೇಶ—13.1, ಮದ್ರಾಸು—15.9, ಮೈಸೂರು—9.3, ಒರಿಸ್ಸ—10, ಪಂಜಾಬ್—10, ರಾಜಸ್ಥಾನ—12.6, ವೆಸ್ಟ್ ಬೆಂಗಾಲ್—15.1. ಕೇರಳ ಒಂದನ್ನು ಬಿಟ್ಟರೆ ಸಿವಿಲ್ ಅಡ್ಮಿನಿಸ್ಟ್ರೇಷನ್ ಖರ್ಚನ್ನು ಇತರ ರಾಜ್ಯಗಳೊಂದಿಗೆ ಹೋಲಿಕೆ ಮಾಡಿದರೆ ಮೈಸೂರಿನದು ಕಡಮೆ ಎಂದು ಕಂಡು ಬರುತ್ತದೆ. ಈ ಕಾರಣದಿಂದ ಶ್ರೀ ಶಿವಪ್ಪನವರು ಹೇಳಿದ್ದು ಸರಿಯಲ್ಲ. ಆದರೆ ಈಗ ಆಗುತ್ತಿರುವ ಖರ್ಚು ಸರಿಯಾಗಿದೆ ಎಂದಲ್ಲ; ಸರಕಾರದವರು ಖರ್ಚು ಬಾಬನ್ನು ಕಡಮೆ ಮಾಡುವುದಕ್ಕೆ ಸಾಧ್ಯವಿರುವ ಕಡೆ ಕಡಮೆ ಮಾಡಬೇಕು. ಹಿಂದೆ ಎ ಜಿ ಆರ್‌ರವರ ವರದಿ ಬಂದಿದೆ, ಅದರ ಪ್ರಕಾರ ಖರ್ಚು ಕಡಮೆ ಮಾಡಲು ಸ್ವಲ್ಪ ಸಾಧ್ಯವಾಗಿದೆ. ಈಗ ಬಂದಿರುವ ವರದಿಯನ್ನು ನೋಡಿ ಎಷ್ಟು ಕಡಮೆ ಮಾಡಲು ಸಾಧ್ಯ ಎಷ್ಟು ಕಡಮೆ ಜನರನ್ನಿಟ್ಟರೆ ಕೆಲಸ ಮಾಡಲು ಸಾಧ್ಯ ಎಂದು ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಮಂತ್ರಿ ಮಂಡಲಕ್ಕೊಂದು ಸಲಹೆ. ಮಂತ್ರಿಗಳೆಲ್ಲರೂ ಕಲೆಕ್ಟಿವ್ ಆಗಿ ಪ್ರಯತ್ನ ಮಾಡದಿದ್ದರೆ ಪ್ರಯೋಜನವಾಗುವುದಿಲ್ಲ. ಇಲಾಖಾ ಮುಖ್ಯಾಧಿಕಾರಿಗಳಿದ್ದಾರೆ, ಅವರು ತಮ್ಮ ಕೈಕೆಳಗಿರುವ ಸಿಬ್ಬಂದಿಯಲ್ಲಿ ಒಬ್ಬರನ್ನೂ ಬಿಟ್ಟು ಕೊಡುವುದಕ್ಕೆ ಒಪ್ಪುವುದಿಲ್ಲ. ಒಬ್ಬರನ್ನು ತೆಗೆದರೂ ಕೂಡ ಕೆಲಸವಾಗುವುದಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಮಂತ್ರಿಗಳು ಒಪ್ಪಬಾರದು, ಇಲಾಖಾ ಅಧಿಕಾರಿಗಳು ಯಾರನ್ನೂ ತೆಗೆಯಬಾರದೆಂದು ಮಂತ್ರಿಗಳಿಗೆ ಹೇಳುತ್ತಲೇ ಇರುತ್ತಾರೆ. ಮಂತ್ರಿಗಳು ತಮ್ಮ ಕೈಕೆಳಗಿರುವ ಅಧಿಕಾರಿಗಳ ಮಾತಿನ ಪ್ರಕಾರ ನಡೆಯುವುದಾದರೆ ಯಾರನ್ನೂ ಖೋತ ಮಾಡುವುದಕ್ಕಾಗುವುದಿಲ್ಲ. ಹಾಗಾದರೆ ಏನು ಮಾಡಬೇಕು! ಮನಸ್ಸು ಮಾಡಬೇಕು. ಕೈಗಾರಿಕಾ ಮಂತ್ರಿಗಳು ಯಾವುದೋ ಕೆಲವು ಪ್ರಪೋಸಲ್ಸ್ ಪ್ರಕಾರ ಖೋತ ಮಾಡುವುದಕ್ಕಾಗುವುದಿಲ್ಲ ಎಂದು ಅವರ ಕೈಕೆಳಗಿನವರು ಹೇಳಿದಾಗ ಅದಕ್ಕೆ ಗಮನ ಕೊಡದೆ ತೆಗೆಯಬೇಕಾಗಿದ್ದವರನ್ನು ತೆಗೆದು ಹಾಕಲು ಆರ್ಡರು ಮಾಡಿದೆ, ತೆಗೆಯಬಾರದೆಂದು ಹೇಳಿದವರ ಮಾತಿಗೆ ಗಮನ ಕೊಡಲಿಲ್ಲ ಎಂದು ಹೇಳಿದರು. ಹಾಗೆ ಧೈರ್ಯ ಮಾಡಿ ಇಲಾಖೆಗಳವರು ಏನೇ ಹೇಳಿದರೂ ಕೇಳದೆ ವಿಚಾರ ಮಾಡಿ ಅನಾವಶ್ಯಕವಾದ ಹುದ್ದೆಗಳನ್ನು ಅವು ಕ್ಲಾಸ್ ಒಂದು ಆದರೂ ಕೂಡ ರದ್ದು ಮಾಡಬೇಕು, ಇದಕ್ಕಾಗಿ ಇಡೀ ಮಂತ್ರಿ ಮಂಡಲ ಏಕರೂಪವಾಗಿ ಪ್ರಯತ್ನ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಇಲ್ಲ. ಅಧಿಕಾರಿಗಳು ಮೊದಲೇ ಯೋಚನೆ ಮಾಡಿಕೊಂಡಿರುತ್ತಾರೆ, ಯಾರನ್ನೂ ತೆಗೆಯದಂತೆ ಏನಾದರೂ ಕಾರಣ ಹೇಳುತ್ತಾರೆ, ವೀಕ್ ಸ್ಪಾಟ್ ಎಲ್ಲಿದೆ ಎಂಬುದನ್ನು ತಿಳಿದುಕೊಂಡಿರುತ್ತಾರೆ, ರಾಜಶೇಖರ ಮೂರ್ತಿಗಳು ಯಾವ ಜಾತಿಯವರು, ಇತರ ಮಂತ್ರಿಗಳು ಯಾವ ಪಂಗಡದವರು ಎಂಬುದನ್ನು ಅವರು ತಿಳಿದುಕೊಂಡಿರುತ್ತಾರೆ. ಮಂತ್ರಿಗಳು ಯಾವ ಜಾತಿಯವರೋ ಆ ಜಾತಿಯ ನೌಕರರು ಅವರಲ್ಲಿಗೆ ಹೋಗಿ ತಮಗೆ ತೊಂದರೆ ಮಾಡಬಾರದೆಂದು ಕೇಳಿಕೊಳ್ಳುತ್ತಾರೆ. ಇದರಿಂದ ಅಧಿಕಾರಿಗಳನ್ನು ತೆಗೆಯುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಇದನ್ನು ಗಮನಿಸಿ ಮುಂದಾದರೂ ಅಧಿಕಾರಿಗಳ ಮಾತಿಗೆ ಕಿವಿ ಕೊಡಬಾರದು, ಜಾತಿಯ ಹೆಸರಿನಲ್ಲಿ ಅಪೀಲು ಮಾಡಿದರೂ ಬೇಡದವರನ್ನು ಇಟ್ಟುಕೊಳ್ಳಬಾರದು. ಬೇಕಾದವರನ್ನು ಮಾತ್ರ ಇಟ್ಟುಕೊಳ್ಳಿ, ಬೇಡದವರನ್ನು ಅವರು ಯಾವ ಜಾತಿಯವರೇ ಆಗಲಿ ತೆಗೆಯಬೇಕು. ಒಂದು ದೃಢವಾದ ಮನಸ್ಸು ಮಾಡಿದರೆ ತುಕೋಳ್ ಸಲಹೆ ಪ್ರಕಾರ ಸೇಕಡ 50 ಭಾಗವಾದರೂ ಕಾರ್ಯಗತವಾಗುವುದಕ್ಕೆ ಸಾಧ್ಯವಿದೆ. ಇಲ್ಲವಿದ್ದರೆ ದಾಕ್ಷಿಣ್ಯಕ್ಕೊಳಗಾದರೆ ಪ್ರಯೋಜನವಾಗುವುದಿಲ್ಲ. ನಾನು ಹೇಳುವುದು ಕಂಠಶೋಷಣೆಯಾಗುತ್ತದೆ, ಏನೂ ಮಾಡುವುದಕ್ಕಾಗುವುದಿಲ್ಲ. ನಾವು ಸುಮ್ಮನೆ ಈ ವಿಚಾರಗಳನ್ನು ತಮಾಷೆಗಾಗಿ ಮಾತನಾಡಿದಂತಾಗುತ್ತದೆ.

ಹಣಕಾಸಿನ ಸಚಿವರು ಮಾಡಿರುವ ಒಟ್ಟು ಭಾಷಣದ ಸಾರಾಂಶವೇನೆಂದರೆ 69-70ರಿಂದ ಮುಂದೆ ನಾಲ್ಕನೆಯ ಯೋಜನ ಕಾಲಕ್ಕೆ ಯಾವ ರೀತಿ ದೇಶದ ಆರ್ಥಿಕ ಪ್ರಗತಿಯನ್ನು ಮಾಡಬೇಕು ಎಂಬ ವಿಚಾರವನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ, ಗುರಿ ಏನಿದೆ ಎಂಬುದರ ಪರಿಚಯ ಮಾಡಿಕೊಟ್ಟಿದ್ದಾರೆ. ಇನ್ನು ಮೇಲೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯಕ್ಕೆ ನಾವು ಹೆಚ್ಚು ಗಮನ ಕೊಡಬೇಕು ಎಂದು ಮನಸ್ಸು ಮಾಡಿದ್ದೇವೆಂದು ಹೇಳಿದ್ದಾರೆ. ನಾವು ಮೊದಲು ಹೀಗೆ

ಮಾಡಬೇಕೆಂದು ಹೇಳಿ ಸಾಕಾಗಿತ್ತು, ಈಗ ಕೇಂದ್ರ ಸರಕಾರ ಈ ರೀತಿ ಮಾಡಿರುವುದರಿಂದ ಇಲ್ಲಿ ಇವರೂ ಮಾಡಿದ್ದಾರೆ, ವ್ಯವಸಾಯಕ್ಕೆ ಹೆಚ್ಚು ಗಮನ ಕೊಡಬೇಕೆಂದು ತಿಳಿಸಿದ್ದಾರೆ. ನಾವು ಎಷ್ಟೇ ಹೇಳಿದರೂ ಅವರು ಒಪ್ಪುತ್ತಿರಲಿಲ್ಲ, ಈಗ ಕೇಂದ್ರವನ್ನು ನೋಡಿ ಅದರಂತೆ ಮಾಡುತ್ತಿದ್ದಾರೆ. ಏನೆ ಆಗಲಿ ಇಂದು ವ್ಯವಸಾಯದ ಕಡೆಗೆ ಎಲ್ಲರ ಗಮನವೂ ತಿರುಗಿರುವುದು ಒಂದು ಸಂತೋಷದ ವಿಚಾರ. ಇದೇ ರೀತಿ ಕೈಗಾರಿಕಾ ವಿಚಾರದಲ್ಲೂ ಆಗಬಾರದು. ಒಂದು ಕಾಲದಲ್ಲಿ ವ್ಯವಸಾಯ ಎಂಬುದು ನಿಷ್ಪ್ರಷ್ಟವಾಗಿತ್ತು, ಅದಕ್ಕೆ ಪ್ರಥಮ ಸ್ಥಾನ ಕೊಡಬೇಕು, ಆದ್ಯತೆ ಕೊಡಬೇಕು ಎಂದು ಈಗ ಹೇಳುತ್ತಿದ್ದಾರೆ. ಇದನ್ನು ಹೇಳುವಾಗ ವ್ಯವಸಾಯ ಯಾವ ರೀತಿ ಹೆಚ್ಚಬೇಕು ಎಂಬುದಕ್ಕೆ ಇರಿಗೇಷನ್ ಹೆಚ್ಚಿಸಬೇಕು, ಅದಕ್ಕಾಗಿ ಇಷ್ಟು ಬಾವಿಗಳನ್ನು ತೆಗೆಸುತ್ತಿದ್ದೇವೆ, ಇಷ್ಟು ಜಲಾಶಯಗಳನ್ನು ನಿರ್ಮಿಸುತ್ತಿದ್ದೇವೆ, ಮೇಜರ್ ಇರಿಗೇಷನ್‌ಗೆ ಮತ್ತು ಮೈನರ್ ಇರಿಗೇಷನ್‌ಗೆ ಇಷ್ಟು ಖರ್ಚು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿರುವ ಇರಿಗೇಷನ್ ಪ್ರಾಬ್ಲಮ್ಸ್ ಏನು, ನಾವು ಬೆಳೆಸಬೇಕಾದ ಪೊಟೆನ್‌ಷಿಯಲ್ ಎಂದು ಹೇಳುವುದೆಷ್ಟಿದೆ, ನಾವು ಕೊಡುವ ಹಣ ಅದಕ್ಕೆ ಪ್ರಪೋರ್ಷನೇಟ್ ಆಗಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ನಾವು ಕೊಡುವ ಹಣ ಬಹಳ ಕಡಿಮೆ, ಸಾಲುವುದಿಲ್ಲ ಎಂಬುದನ್ನು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇವೆ. ಹಾಗಾದರೆ ಹೆಚ್ಚು ಹಣ ಒದಗಿಸುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ.

5-30 P.M.

ಮೇಜರ್ ಇರಿಗೇಷನ್ ಬಗ್ಗೆ ಯಾವ ರೀತಿ ಹಣ ಒದಗಿಸಬೇಕೆನ್ನುವ ಬಗ್ಗೆ ಒಂದು ರಿಸೋರ್ಸಸ್ ಕಮಿಟಿ ಮಾಡಿದ್ದೇವೆ ಎಂದು ಮೊನ್ನೆ ಹಿಂದಿನ ಅಸೆಂಬ್ಲಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಅನೌನ್ಸ್‌ಮೆಂಟ್ ಮಾಡಿದ್ದಾರೆ. ಹೆಚ್ಚು ಹಣ ಒದಗಿಸಬೇಕೆನ್ನುವುದಕ್ಕೆ ನಿಮ್ಮ ಹತ್ತಿರ ರಿಸೋರ್ಸಸ್ ಇಲ್ಲ. ಕೇಂದ್ರ ಸರ್ಕಾರದವರು ಇದುವರೆಗೂ ನಮ್ಮ ಒಂದು ದೊಡ್ಡ ಪ್ರಾಜೆಕ್ಟಿಗೂ ಕೂಡ ಹಣ ಕೊಟ್ಟಿಲ್ಲ, ಶರಾವತಿ ಪ್ರಾಜೆಕ್ಟಿಗೆ ಮಾತ್ರ ಕೊಟ್ಟರು, ಕೃಷ್ಣಾ ಪ್ರಾಜೆಕ್ಟಿಗೆ ಕೊಟ್ಟಿಲ್ಲ, ಕಾವೇರಿ ವ್ಯಾಲಿಯಲ್ಲಿ ಆಗಬೇಕಾದ ದೊಡ್ಡ ದೊಡ್ಡ ಜಲಾಶಯಗಳಿಗೆ ಹಣ ಕೊಡುತ್ತಿಲ್ಲ ಏಕೆ ? ಒಂದು ಕಡೆ ವ್ಯವಸಾಯಕ್ಕೆ ಅತಿ ಪ್ರಾಧಾನ್ಯತೆ ಕೊಡುತ್ತೇವೆ ಎಂದು ಹೇಳುತ್ತಾರೆ ಇನ್ನೊಂದು ಕಡೆ ಹಣ ಒದಗಿಸಬೇಕೆಂದಾಗ ಹಣ ಇಲ್ಲ ಎಂದು ಮಾತನಾಡುತ್ತಾರೆ. ಗೋವಾದಲ್ಲಿ ಎ. ಐ. ಸಿ. ಸಿ. ಸೆಷನ್ ಆಯಿತು ಅಲ್ಲಿ ಅತಿ ಮುಖ್ಯ ವಿಚಾರವಾದ ಪ್ರೊಹಿಬಿಷನ್ ಬಗ್ಗೆ ಚರ್ಚೆಯಾಯಿತು. ಡೆಪ್ಯೂಟಿ ಪ್ರೈಮ್ ಮಿನಿಸ್ಟರು ಶ್ರೀಮಾನ್ ಮುರಾರ್ಜಿ ದೇಸಾಯಿಯವರು ಆ ಚರ್ಚೆಯಲ್ಲಿ ಭಾಗವಹಿಸಿ ಎಲ್ಲರೂ ದೇಶಾದ್ಯಂತ ಅದನ್ನು ಜಾರಿಗೆ ತಂದದ್ದೇ ಆದರೆ ಅದಕ್ಕೆ ಎಷ್ಟು ಹಣ ಖೋತಾ ಆಗುತ್ತದೆ ಅದನ್ನೆಲ್ಲಾ ನಾವು ಕೇಂದ್ರದಿಂದ ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದನ್ನು ಓದಿದ ಜ್ಞಾಪಕ ನನಗೆ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—50 ಪರ್ಸೆಂಟ್ ಮಾತ್ರ.

ಶ್ರೀ ಡಿ. ದೇವರಾಜ ಅರಸ್.—12 ಕೋಟಿ ರೂಪಾಯಿ ನಮ್ಮ ಎಕ್ಸೈಜ್ ಬಾಬು ಇದೆ. ಅದರಲ್ಲಿ 50 ಪರ್ಸೆಂಟ್ ಅಂದರೆ ಆರೂವರೆ ಅಥವಾ ಏಳು ಕೋಟಿ ರೂಪಾಯಿ ಆಯಿತು, ಪ್ರೊಹಿಬಿಷನ್ ಇಂಟ್ರೊಡ್ಯೂಸ್ ಮಾಡಿದರೆ ಏಳು ಕೋಟಿ ರೂಪಾಯಿ ಕೇಂದ್ರದವರು ಕೊಡಲಿ ಬೇರೆ ಬಾಬುಗಳಿಂದ ನೂರಾರು ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅದೇ ಏಳು ಕೋಟಿ ರೂಪಾಯಿಗಳನ್ನು ಪ್ರಾಜೆಕ್ಟುಗಳನ್ನು ಕಟ್ಟುವುದಕ್ಕೆ ಕೊಡಿ ಎಂದು ಮುರಾರ್ಜಿ ಭಾಯಿಯವರನ್ನು ಏಕೆ ಕೇಳಬಾರದು ! ವ್ಯವಸಾಯ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚಾಗಬೇಕು, ಪ್ರಾಜೆಕ್ಟುಗಳನ್ನು ಕಟ್ಟಬೇಕೆಂದರೆ ದುಡ್ಡಿಲ್ಲ ಅನ್ನುತ್ತಾರೆ, ಏಕೆ ಇಲ್ಲ ! ದುಡ್ಡಿಲ್ಲವೋ ಅಥವಾ ಮನಸ್ಸು ಇಲ್ಲವೋ ! ಮಾತನಾಡುವುದು ಒಂದು ಮಾಡುವುದು ಒಂದು ಆಗಿದೆಯಲ್ಲಾ ! ಈ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರದವರು ಸರ್ವ ಪ್ರಯತ್ನ ಮಾಡಿ ದೊಡ್ಡ ದೊಡ್ಡ ಜಲಾಶಯಗಳ ನಿರ್ಮಾಣಕ್ಕೆ ಕೇಂದ್ರದಿಂದ ಅಥವಾ ಪ್ಲಾನಿಂಗ್ ಕಮಿಷನ್‌ನಿಂದ ಹಣ ದೊರಕಿಸಿಕೊಳ್ಳಬೇಕು. ಈ ವಿಷಯದಲ್ಲಿ ಫೈನಾನ್ಸ್ ಕಮಿಷನ್‌ನವರು ಒಂದು ಹೊಸ ನೀತಿಯನ್ನಾದರೂ ಹಾಕಬೇಕಾಗುತ್ತದೆ. ಈ ನದಿಗಳು ಇಡೀ ಇಂಡಿಯಾ ದೇಶದಲ್ಲಿ ಹರಿಯುತ್ತವೆ, ಪ್ರತಿ ತಾಲ್ಲೂಕಿನಲ್ಲಿ ಪ್ರತಿ ಹಳ್ಳಿಯಲ್ಲಿ ಹರಿದು ಹೋಗುತ್ತಾ ಇದೆ ಆದ್ದರಿಂದ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಸಂಪನ್ಮೂಲವನ್ನು ಹೆಚ್ಚಿಸಬೇಕು. ಅದರಿಂದ ಪೂರ್ಣ ಉತ್ಪನ್ನವನ್ನು ದೇಶಕ್ಕೆ ಪಡೆಯಬೇಕು. ಈ ರೀತಿ ಮಾಡುವಾಗ ಕೇಂದ್ರ ಸರ್ಕಾರದವರು

(ಶ್ರೀ ಡಿ. ದೇವರಾಜ ಅರಸ್)

ಯಾವುದೋ ಒಂದು ಕಾಲದ ಕುರುಡು ನೀತಿಯನ್ನು ಅನುಸರಿಸಿ ಅವರಿಗೆ ಯಾವುದು ಅನುಕೂಲವಾಗುತ್ತದೆ ಎಂದು ಕಾಣುತ್ತದೆ ಅವರಿಗೆ ಯಾವುದು ಸರಿ ಎಂದು ಕಾಣುತ್ತದೆ ಅವಕ್ಕೆ ಕೋಟಿಗಟ್ಟಲೆ ಕೊಡುವುದಕ್ಕೆ ತಯಾರಾಗಿದ್ದಾರೆ. ವ್ಯವಸಾಯ ಕ್ಷೇತ್ರದಲ್ಲಿ ಹಣ ಖರ್ಚು ಮಾಡಿ ಜಲಾಶಯಗಳನ್ನು ಕಟ್ಟಬೇಕೆಂದರೆ ಅದಕ್ಕೆ ಹಣ ಇಲ್ಲ ಎಂದು ಮಾತನಾಡುತ್ತಾ ಇದ್ದಾರೆ ಇದರಿಂದ ಏನು ಅನಿಸುತ್ತದೆ ಎಂದರೆ ಇದು ನೀತಿರಹಿತ—ಬಾಹಿರ ಎಂದು ಹೇಳುವುದಿಲ್ಲ ಸ್ವಲ್ಪ ಕಠಿಣವಾದೀತು—ವಾದ ಮಾತು ದಯವಿಟ್ಟು ಇದನ್ನು ಬಿಡಬೇಕು, ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಈ ವಿಷಯವನ್ನು ಚೆನ್ನಾಗಿ ಮನದಟ್ಟು ಮಾಡಬೇಕು, ದೊಡ್ಡ ದೊಡ್ಡ ಜಲಾಶಯಗಳಿಗೆ ಹಣ ಒದಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಇನ್ನೊಂದು ಮಾತನ್ನು ಹೇಳಿದರು ಏನೆಂದರೆ ಈ ಜಲಾಶಯಗಳ ನಿರ್ಮಾಣಕ್ಕೆ ದಾಮೋದರ್ ವ್ಯಾಲಿ ಕಾರ್ಪೊರೇಷನ್ ಮಾದರಿಯಲ್ಲಿ ಅಥವಾ ಟೆನೆಸ್ಸಿ ವ್ಯಾಲಿ ಕಾರ್ಪೊರೇಷನ್ ಮಾದರಿಯಲ್ಲಿ ಏಕೆ ಒಂದು ಕಾರ್ಪೊರೇಷನ್ನನ್ನು ಮಾಡಬಾರದು ಎಂದು. ಸರ್ಕಾರದಿಂದ ಹಣ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಕಾರ್ಪೊರೇಷನ್ ಅಂತ ಮಾಡಿದರೆ ಅವರು ಡಿಬೆಂಚರ್ಸ್, ಲೋನ್ಸ್ ಎತ್ತಿ ಹಣ ಒದಗಿಸುವುದಕ್ಕೆ ಅನುಕೂಲವಾಗಬಹುದು ಏಕೆ ಮಾಡಬಾರದು ಎಂಬ ವಿಚಾರವನ್ನು ಇಟ್ಟಿದ್ದಾರೆ. ಮಾನ್ಯ ಶಿವಪ್ಪನವರಿಗೆ ಅದು ಕೇಳಿತೋ ಇಲ್ಲವೋ ಗೊತ್ತಾಗಲಿಲ್ಲ. ಅವರು "ಸರಿ, ಸರಿ. ಎಲ್ಲಾ ಒಳ್ಳೆಯದೇ" ಅಂತ ಹೇಳಿದರು. ಎಂದರೆ ಯಾವುದು ಒಳ್ಳೆಯದು? ಕಾರ್ಪೊರೇಷನ್ ಇರಬೇಕೇ ಬೇಡವೇ ಅನ್ನುವುದನ್ನು ಅವರು ನಾಳೆಯಾದರೂ ಹೇಳಿದರೆ ಅವರ ಅಭಿಪ್ರಾಯ ಏನೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ, ಒಂದೊಂದು ಸಾರಿ ಅವರು ಏನು ಮಾಡುತ್ತಾರೆ ಎಂದರೆ ಸುಮ್ಮನೆ ಆ ರೀತಿ ಹೇಳುತ್ತಾ ಇರುತ್ತಾರೆ. ಈ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳಿಗೆ ಒಂದು ಎಚ್ಚರಿಕೆಯ ಮಾತು ಹೇಳುವುದು ಸರಿ ಎಂದು ಕಾಣುತ್ತದೆ, ಏನೆಂದರೆ ಅವರೇನು ತಿಳಿದುಕೊಂಡಿರುತ್ತಾರೆ ಪಾಪ, ಅಂತಹ ಸಲಹೆಗಳನ್ನು ಎದುರು ಪಕ್ಷದ ಮುಖಂಡರು ಬಹಳ ಒಳ್ಳೆಯದು ಎಂದು ಹೇಳಿ ಬೆಂಬಲ ಕೊಡುತ್ತಾರೆ ಎಂದು ಅಂದುಕೊಂಡಿರುತ್ತಾರೆ. ಅದಲ್ಲ ಅವರು ಏನು ಮಾಡುತ್ತಾರೆ ಎಂದರೆ ಒಳ್ಳೆಯದನ್ನೂ ಕೆಟ್ಟದ್ದೇ, ಕೆಟ್ಟದ್ದನ್ನೂ ಕೆಟ್ಟದ್ದೆ ಎಂದು ಹೇಳುವುದಕ್ಕೆ ಹೊರಟು ಬಿಡುತ್ತಾರೆ. ಆದರಿಂದ ನಾಳೆಯಾದರೂ ಅವರು ಈ ಬಗ್ಗೆ ಒಂದು ಮಾತು ಹೇಳಿದರೆ ಒಳ್ಳೆಯದು ಆ ರೀತಿ ಕಾರ್ಪೊರೇಷನ್ ಮಾಡಿ ರೈತರಿಗೆ ದುಡ್ಡುಕೊಡುತ್ತೇವೆ ಎಂದು ಮುಂದೆ ಬಂದಿದ್ದೀರಿ. ಇದು ಎಲ್ಲಾದರೂ ಸಾಧ್ಯವೇ? ರೈತರ ಹತ್ತಿರ ಮೂರು ಕಾಸು ಇಲ್ಲ, ಹಣವೇ ಇಲ್ಲ, ಅವರನ್ನು ಏಕೆ ಸಾಲಗಾರರನ್ನಾಗಿ ಮತ್ತೆ ಮಾಡುತ್ತಾ ಇದ್ದೀರಿ ಎಂದು ಮಾನ್ಯ ಶಿವಪ್ಪನವರು ತಮ್ಮ ಭಾಷಣದಲ್ಲಿ ಹಾರಂಗಿ ಪ್ರಾಜೆಕ್ಟ್ ಕಟ್ಟುವುದರ ಬಗ್ಗೆ ಕೆಲವು ರೈತರು ಬಂದು ಹಣ ಕೊಡುತ್ತೇವೆ ಅಂತ ಹೇಳಿದರು ಅನ್ನುವಾಗ, ಹೇಳಿದ್ದಾರೆ. ಕಾರ್ಪೊರೇಷನ್ ಮಾಡುವುದಕ್ಕೆ ಮನಸ್ಸು ಇದ್ದರೆ ಯೋಚನೆ ಮಾಡಿ. ಈ ಬಗ್ಗೆ ನನ್ನ ಸಲಹೆಯಾದರೂ ಏನು ಎಂದರೆ: ಈ ದೊಡ್ಡ ದೊಡ್ಡ ಜಲಾಶಯಗಳ ನಿರ್ಮಾಣಕ್ಕೆ ಕಾರ್ಪೊರೇಷನ್ ಮಾಡುವುದು ಸಾಧ್ಯವಾಗರಾರದೇನೋ ಎಂದು ನನ್ನ ಭಾವನೆ. ಏನೆಂದರೆ ಇದರಲ್ಲಿರತಕ್ಕ ಒಂದು ಆರ್ಥಿಕ ತತ್ವ ಇದುವರೆಗೂ ಮೈಸೂರು ಸರ್ಕಾರವೇ ಅಲ್ಲ ಬೇರೆ ಯಾವ ಸರ್ಕಾರ ಕೇಂದ್ರಸರ್ಕಾರವೂ ಕೂಡ ಅನುಸರಿಸಿಕೊಂಡು ಬಂದಿರತಕ್ಕ ಆರ್ಥಿಕ ನೀತಿ ಏನಿದೆ ಅದಕ್ಕೆ ವಿರೋಧವಾಗಿರತಕ್ಕ ಒಂದು ಹೊಸ ನೀತಿಯನ್ನು ಹಾಕಬೇಕಾಗಿ ಬರುತ್ತದೆ. ಅದು ಹೇಗೆ ಎಂದರೆ ಯಾವ ಒಂದು ಕಾರ್ಪೊರೇಷನ್ ಆಗಲಿ ಅದರ ಒಂದು ಆರ್ಥಿಕ ತತ್ವ ಏನು ಅದು ನೋ ಪ್ರಾಫಿಟ್, ನೋ ಲಾಸ್, ಆಗಿ ಕೆಲಸ ಮಾಡಬೇಕು, ಪ್ರಾಫಿಟ್ ಮಾಡಬಹುದು ಆದರೆ ಲಾಸ್ ಆಗುವುದಕ್ಕೆ ಸಾಧ್ಯವೇ ಇಲ್ಲ. ಈ ಎಕನಾಮಿಕ್ ಪ್ರಿನ್ಸಿಪಲ್ ಏನಿರಬೇಕು 3 ಕೋಟಿ ರೂಪಾಯಿ ನಾವು ಹಾಕಿದರೆ 8 ಅಥವಾ 9 ರೂಪಾಯಿ ಶೇಕಡ ಗಿಟ್ಟುವ ಹಾಗೆ ಇರಬೇಕು, ಮತ್ತು ಅದನ್ನು ಮೇನ್‌ಟೇನ್ ಮಾಡುವುದಕ್ಕೆ ಹಣಕಾಸು ಬೇಕು. ಒಟ್ಟಿನಲ್ಲಿ ಲಾಭ ಸಂಪಾದನೆ ಮಾಡಬೇಕು, ನಷ್ಟವನ್ನು ಮಾಡಿಕೊಳ್ಳುವುದಕ್ಕೆ ಮಾತ್ರ ಸಾಧ್ಯವಿಲ್ಲ. ಹಾಗಲ್ಲದೇ ಹೋದರೆ ಅದಂತಹ ಕಾರ್ಪೊರೇಷನ್ನು ಹೇಗೆ ಡಿಬೆಂಚರ್ ಎತ್ತುವುದಕ್ಕೆ ಸಾಧ್ಯವಾಗುತ್ತದೆ? ಯಾವ ಬ್ಯಾಂಕು ದುಡ್ಡನ್ನು ಕೊಡುವುದಕ್ಕೆ ಮುಂದೆ ಬರುತ್ತದೆ! ಲಾಸ್ ಆಗುವ ಕೆಲಸಮಾಡುವುದಾದರೆ, ಹಾರಂಗಿ ಯೋಜನೆ ಮತ್ತು ಹೇಮಾವತಿ ಯೋಜನೆ ಏಕೆ ತೆಗೆದುಕೊಂಡಿರಿ? ಹಾರಂಗಿ ಯೋಜನೆಗೆ 12 ಕೋಟಿ ರೂಪಾಯಿಗಳು ಅಂದಾಜಾಗಿವೆ. ಕಟ್ಟಿ ಮುಗಿಯಬೇಕಾದರೆ 10 ವರ್ಷಗಳಾಗುತ್ತದೆ. ಅದಕ್ಕೆ 15 ಕೋಟಿ ರೂಪಾಯಿಗಳವರೆಗೂ ಹಾಕುತ್ತೀರಿ. ಹೇಮಾವತಿ ಪ್ರಾಜೆ

ಕ್ಟ್‌ಗೆ 20 ಕೋಟಿ ಅಂದಾಜು ಮಾಡಿದ್ದೀರಿ. ಅದಕ್ಕೆ 22 ಅಥವಾ 25 ಕೋಟಿ ಹಾಕುತ್ತೀರಿ. ಅದೇ ರೀತಿಯಾಗಿ ತುಂಗಭದ್ರಾಗೆ 32 ಅಥವಾ 33 ಕೋಟಿ ರೂಪಾಯಿಗಳು ಆಗಿದೆ. ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೂ ನೀರನ್ನು ಪ್ರತಿಯೊಬ್ಬ ರೈತನ ಹೊಲದ ಹತ್ತಿರ ಬಿಡುವುದಕ್ಕೆ ಏರ್ಪಾಡು ಮಾಡಲಿಲ್ಲ. ಭಾಕ್ರಾನಂಗಾಲು ತೆಗೆದುಕೊಂಡರೆ ನೂರಾರು ಕೋಟಿ ರೂಪಾಯಿಗಳು ಖರ್ಚು ಆಗಿದೆ. ಯಾವ ರೈತ ನೇರವಾಗಿ ನೀರಿನ ಲಾಭವನ್ನು ಹೊಂದುತ್ತಾನೋ ಅವನಿಂದ ವಾಟರ್‌ರೇಟನ್ನು ವಸೂಲುಮಾಡಬೇಕು. ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಒಂದೂಕಾಲು ಲಕ್ಷ ಎಕರೆ ನೀರಾವರಿಯಾಗುತ್ತದೆಂದು ಇಟ್ಟುಕೊಳ್ಳೋಣ. ಈ ಒಂದೂಕಾಲು ಲಕ್ಷ ಎಕರೆ ಜಮೀನಿಗೆ ಯಾವ ರೈತರು ಮಾಲೀಕರಾಗಿದ್ದಾರೆ ? ಆದ್ದರಿಂದ ಕಾಂಟ್ರಿಬ್ಯೂಷನ್ ಬಗ್ಗೆ ಎಷ್ಟು ಕಡೆ ಹಣ ಹಾಕಿದ್ದಾರೆಯೋ ಅವರಿಂದ ಆಗತಕ್ಕ ಬಡ್ಡಿಯನ್ನು ಒದಗಿಸಿಕೊಡಬೇಕು. ಹಾಗಿಲ್ಲದೆ ಹೋದರೆ ಕಾರ್ಪೊರೇಷನ್ನಿನಿಂದ ಲಾಭ ಎಲ್ಲಿ ಬರುತ್ತದೆ, ಬೋತ್ ಎಂಡ್ಸ್ ಮೀಟ್ ಹೇಗೆ ಆಗುತ್ತದೆ. ಲಾಭ ನಷ್ಟ ಇಲ್ಲದ ರೀತಿ ಅದು ಹೇಗೆ ನಡೆಯುತ್ತದೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕು. ಇದು ಸಾಧ್ಯವಿಲ್ಲ. ಈವೊತ್ತು ಬೆಟರ್‌ಮೆಂಟ್ ಲೆವಿ, ಮತ್ತು ವಾಟರ್ ರೇಟ್ ಎಂದು ಹಾಕುತ್ತೀರಿ. ನಾವು ಯಾವುದಾದರೂ ಜಲಾಶಯ ನಿರ್ಮಾಣಕ್ಕೆ ಹಾಕುವ ಒಟ್ಟು ಖರ್ಚು, ಮೇಂಟೆನೆನ್ಸ್ ಚಾರ್ಜಸ್, ರೆಕರಿಂಗ್ ಎಕ್ಸ್‌ಪೆಂಡಿಚರ್, ಇಷ್ಟು ಹಣದ ಬಡ್ಡಿ, ಸಿಬ್ಬಂದಿ ಖರ್ಚು, ಎಲ್ಲಾ ಇದರಿಂದ ಮೀಟ್ ಮಾಡುತ್ತೀರಾ ? ಇಲ್ಲ. ಕೇವಲ ಯಾವುದೋ ಒಂದು ಸಣ್ಣ ಭಾಗ ಇದರಿಂದ ಸಿಗುತ್ತದೆ ಅಂದರೆ ಸಂಪೂರ್ಣವಾಗಿ ಏನೂ ಸಿಗುತ್ತಾ ಇಲ್ಲ. ತುಂಗಭದ್ರ ತೆಗೆದುಕೊಂಡು ನೋಡಿದರೆ, ಸರ್ಕಾರದವರು ಎಷ್ಟು ಕೋಟಿ ರೂಪಾಯಿಗಳನ್ನು ಬೆಟರ್ ಮೆಂಟ್ ಲೆವಿಯ ಮೂಲಕ ವಸೂಲು ಮಾಡಿದ್ದಾರೆ ? ಎರಡೂವರೆ ಕೋಟಿ ರೂಪಾಯಿಗಳನ್ನು ವಸೂಲುಮಾಡಲಿಲ್ಲ. ಕೇವಲ ಒಂದು ಕೋಟಿ ರೂಪಾಯಿಗಳನ್ನಾದರೂ ವಸೂಲು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. 500 ರೂಪಾಯಿಗಳ ಮೇಲೆ ಹಾಕಬೇಡಿ ಎಂದು ಒಬ್ಬರು, 300 ರೂಪಾಯಿಗಳ ಮೇಲೆ ಹಾಕಬೇಡಿ ಎಂದು ಇನ್ನೊಬ್ಬರು. ಒಟ್ಟು ತೆಗೆದುಕೊಂಡು ದಾಮಾಷಾ ಪ್ರಕಾರ ಎಕರೆವಾರು ಹಂಚಿದರೆ ಒಂದೊಂದು ಎಕರೆಗೆ ಎರಡು ಅಥವಾ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ನೀವು ಹಾಕುವುದಕ್ಕೆ ತಯಾರು ಇದ್ದೀರಿ. 500 ರೂಪಾಯಿಗಳು ಹಾಕಿದರೆ ಕೊಡುವುದು ಕಷ್ಟವೆಂದು ಹೇಳುತ್ತೇನೆ. ನಾಳೆ ಕಾರ್ಪೊರೇಷನ್ ಬಂದರೆ, ಅವರು ಎರಡು ಸಾವಿರ ಕೊಡಬೇಕು ಎಂದು ಹೇಳಿದರೆ ಜನರು ಕೊಡುತ್ತಾರೆಯೇ ! ಒಂದು ಎಕರೆಗೆ 100 ಅಥವಾ 150 ರೂಪಾಯಿಗಳನ್ನು ವಾಟರ್ ರೇಟ್ ಆಗಿ ಕೊಡಬೇಕೆಂದು ಹೇಳುತ್ತಾರೆ. ಹಾಗೆ ಕೊಡದೆ ಹೋದರೆ ಮಾಡಿದ ಖರ್ಚು ವಾಪಸ್ಸು ಬರುವುದಿಲ್ಲ ಮತ್ತು. ಸಾಕಷ್ಟು ಬಡ್ಡಿ ಹುಟ್ಟುವುದಿಲ್ಲವೆಂದು ಹೇಳುತ್ತೇನೆ. 25 ರೂಪಾಯಿಗಳಂತೆ ಹಾಕಬೇಕೆಂದು ಮಾನ್ಯ ಶ್ರೀ ಶಿವಪ್ಪನವರು ಕೂಗಾಡುತ್ತಿದ್ದಾರೆ. ಕಾರ್ಪೊರೇಷನ್ ಯೋಜನೆಯ ಪ್ರಕಾರ ಹೀಗೆ ಮಾಡುವುದಕ್ಕೆ ಕಷ್ಟವಾಗುತ್ತದೆ.

ಇನ್ನು ವಿದ್ಯುಚ್ಛಕ್ತಿ ವಿಷಯ. ಸರ್ಕಾರದವರು ಶರಾವತಿ ವ್ಯಾಲಿ ಪ್ರಾಜೆಕ್ಟನ್ನು ಎಷ್ಟೋ ಕೋಟಿ ಖರ್ಚುಮಾಡಿ ಕಟ್ಟಿದ್ದಾರೆ. ಆದರೆ ಪ್ರತಿಯೊಂದು ಯೂನಿಟ್ಟಿಗೂ ಇಷ್ಟು ಎಂದು ಸೇಲ್ ಮಾಡುತ್ತಾರೆ. ನೀರಾವರಿ ಕೆಲಸ ಹಾಗೆ ಆಗುವುದಿಲ್ಲ. ಜನರಲ್ ರೆವಿನ್ಯೂನಿಂದ ಒಂದು ಭಾಗ ಹಾಕಬೇಕಾಗುತ್ತದೆ. ಬೆಟರ್‌ಮೆಂಟ್ ಲೆವಿ ಹಾಕುವ ಒಂದು ತತ್ವವನ್ನು ಬಹಳ ಕಾಲದಿಂದ ಒಪ್ಪಿಕೊಂಡು ಬಂದಿದ್ದಾರೆ. ಅದರಿಂದ ಸ್ವಲ್ಪ ಭಾಗ ಬರುತ್ತದೆಯೇ ಹೊರತು ಎಂಟೈರ್ ಪ್ರೋಪೋರ್ಷನ್ ಬರುವುದಿಲ್ಲ. ಆದ್ದರಿಂದ ಕಾರ್ಪೊರೇಷನ್ ಮಾಡುವುದರಿಂದ ಕಷ್ಟವಾಗುತ್ತದೆ. ನಾವು ಯಾವ ರೀತಿ ಒಂದು ನೀತಿಯನ್ನು ಅನುಸರಿಸಿಕೊಂಡು ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣಮಾಡಿಕೊಂಡು ಬರುತ್ತೇವೋ ಅದನ್ನೇ ಈಗಲೂ ಮುಂದುವರಿಸಬೇಕಾಗುತ್ತದೆ. ಅದಕ್ಕಾಗಿ ರಿಸೋರ್ಸಸ್ಸನ್ನು ಹೆಚ್ಚಿಗೆ ಕಂಡುಹಿಡಿಯಬೇಕಾಗುತ್ತದೆ. ಈ ವಿಚಾರವನ್ನು ನಾನು ಸರ್ಕಾರದ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಹೋದಸಾರಿ ಬಡ್ಜೆಟ್ಟಿನಲ್ಲಿ ಹಣಕಾಸಿನ ಸಚಿವರು ವ್ಯವಸಾಯದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ ಸಣ್ಣ ಪುಟ್ಟ ರೈತರಿಗೆ ಅನುಕೂಲವಾಗುವಂತೆ ನೀರಾವರಿ ಕೆಲಸವಾಗಬೇಕು, ಇರ್ರಿಗೇಷನ್ ವೆಲ್ಸ್ ತೆಗೆಸಬೇಕು ಅದಕ್ಕಾಗಿ ಒಂದು ಹೊಸ ನೀತಿಯನ್ನು ಹಾಕಿದ್ದೇವೆಂದು ಹೇಳಿದರು. ಅಲ್ಲದೆ ಕಮ್ಯೂನಿಟಿ ಇರ್ರಿಗೇಷನ್ ವೆಲ್ಸ್ ತೆಗೆಸುತ್ತೇವೆಂದು ಹೇಳಿದ್ದರು. ನನಗೆ ಹಿಂದಿನ ವರ್ಷದ ಬಡ್ಜೆಟ್ ಭಾಷಣದ ನಕಲು ಸಿಗಲಿಲ್ಲ. ಆ ರೀತಿ ಹೇಳಲಿಲ್ಲವೆಂದು ಹೇಳಲಿ. ನಾನು ಒಪ್ಪುತ್ತೇನೆ. ಅದಕ್ಕಾಗಿ ಸರ್ಕಾರದಿಂದ ಒಂದು ಸಬ್ಸಿಡಿಯನ್ನು ಕೊಡುತ್ತೇವೆಂದು ಒಂದು ಹೊಸ ನೀತಿ ಹೇಳಿದರು. ನಾನು ಅದನ್ನು ಓದಿ ಬಹಳ ಸಂತೋಷಪಟ್ಟೆ. ಏತಕ್ಕೆಂದರೆ. ನಮ್ಮ ಹಳ್ಳಿಗಳಲ್ಲಿ ಈವೊತ್ತೂ ಕೂಡ ಬಾವಿಗಳಿಗೆ ಹಣಸಹಾಯಮಾಡಿದರೆ ಸ್ವಲ್ಪ ಉತ್ತಮವಾಗುತ್ತದೆ. ಎಲ್ಲಿ ಭೂಮಿ ಚೆನ್ನಾಗಿದೆಯೋ

(ಶ್ರೀ ಡಿ. ದೇವರಾಜ ಅರಸ್)

ಅಂತಹ ರೈತರಿಗೆ ಮಾತ್ರ ಸಾಲ ಸಿಗುತ್ತದೆ. ಅದು ಒಂದೆರಡು ಎಕರೆ ಇರತಕ್ಕ ರೈತನಿಗೆ ಸಿಗುವುದಿಲ್ಲ. ಮೈಸೂರು ರಾಜ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಬೇಕಾಗಿದೆ. ಮಲೆನಾಡಿನಿಂದ ಬೆಟ್ಟದ ಸಾಲಿನ ಭಾಗ, ಮಲೆನಾಡು ಅಚೆ ಸಮುದ್ರದ ಕರಾವಳಿ, ಮಲೆನಾಡು ಬಿಟ್ಟರೆ ಮೈದಾನ. ಮಲೆನಾಡು ಮತ್ತು ಬೆಟ್ಟದ ಭಾಗದಲ್ಲಿ ಅಪ್ಸ್ ಅಂಡ್ ಡೌನ್ಸ್ ಬಹಳ ಜಾಸ್ತಿ. ಕೆಲವು ಕಡೆಗಳಲ್ಲಿ 100 ಅಡಿಗಳಷ್ಟು ಆಳ ತೆಗೆದರೂ ನೀರು ಸಿಗುತ್ತಾ ಇಲ್ಲ. ಎಷ್ಟೊ ಜನ ಸಾಲ ತೆಗೆದುಕೊಂಡಿದ್ದರೂ ಬಾವಿಗಳನ್ನು ತೆಗೆಯಲಿಲ್ಲ. ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಯಾವ ರೈತನಿಗೆ ಭೂಮಿ ಎಫಿಷಿಯಂಟಾಗಿ ನೀರು ಬೇಗ ಅಲ್ಲಿ ಸಿಗುತ್ತದೋ ಅಂತಹವರಿಗೆ ಸಾಲ ಕೊಟ್ಟರೆ ಅದರ ಉಪಯೋಗ ಸರಿಹೋಗುತ್ತದೆಂದರೆ ಸಣ್ಣ ಪುಟ್ಟ ರೈತರಿಗೆ ಸಾಲ ಹೇಗೆ ಸಿಕ್ಕೀತು ? ಇದಕ್ಕಾಗಿ ಸರ್ಕಾರದವರು ಹಿಂದೆ ಸುಮಾರು 10, 20, 25, ಎಕರೆ ಜಮೀನುಳ್ಳವರಿಗೆ ಕಮ್ಯೂನಿಟಿ ಇರ್ರಿಗೇಷನ್ ವೆಲ್ಸ್ ತೆಗೆದು ಸರ್ಕಾರದವರೇ ಅವರಿಗೆ ಹಂಚುತ್ತೇವೆಂದು ಹೇಳಿದ್ದರು. ಇದು ನಿಜವಾಗಿ ಅನುಕೂಲವಾಗುವಂಥ ವಿಚಾರ. ಹೋದವರ್ಷದಿಂದ ಇಲ್ಲಿಯವರೆಗೂ ಎಷ್ಟು ಬಾವಿಗಳನ್ನು ತೆಗೆಸಿದ್ದೀರಾ! ಹಿಂದಿನ ಬಡ್ಜೆಟ್ ಭಾಷಣದಲ್ಲಿ ಹೇಳಿರುವ ಪ್ರಕಾರ ಎಷ್ಟು ಕಮ್ಯೂನಿಟಿ ಇರ್ರಿಗೇಷನ್‌ವೆಲ್ಸನ್ನು ತೆಗೆಸಿದ್ದೀರಾ ! ಇದರ ಬಗ್ಗೆ ಸರ್ಕಾರದವರು ಏನು ಪ್ರಯತ್ನ ಮಾಡಿದ್ದಾರೆ ! ಇದನ್ನು ಮಾಡುವುದಕ್ಕೆ ಇಷ್ಟವಿದೆಯೋ ಅಥವಾ ಇದನ್ನು ಮುಂದುವರಿಸುವುದಕ್ಕೆ ಆಗುತ್ತದೋ ಇಲ್ಲವೋ ?

ಶ್ರೀ ಬಿ. ರಾಚಯ್ಯ.—1964ರಲ್ಲಿಯೇ ಫ್ಯಾಮಿನ್ ದುಡ್ಡಿನಲ್ಲಿ ಕಮ್ಯೂನಿಟಿ ಇರ್ರಿಗೇಷನ್ ವೆಲ್ಸ್ ತೆಗೆಯಬೇಕೆಂದು ಮಾಡಿದ್ದೆವು. ಆ ರೀತಿಯಾಗಿ ಕೆಲವು ಕಡೆಗಳಲ್ಲಿ ತೆಗೆದಿದ್ದೇವೆ. ಕೆಲವು ಕಡೆಗಳಲ್ಲಿ ಇನ್ನೂ ತೆಗೆದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಕೆಲವು ಕಡೆಗಳಲ್ಲಿ ಅಂದರೆ ಎಷ್ಟು ಕಡೆ ? 10 ತೆಗೆಸಿದ್ದೀರಾ 100 ತೆಗೆಸಿದ್ದೀರಾ ! ಅಥವಾ 2 ತೆಗೆಸಿದ್ದೀರಾ !

ಶ್ರೀ ಬಿ. ರಾಚಯ್ಯ.—ಬಾಗೆಪಲ್ಲಿ ತಾಲ್ಲೂಕಿನಲ್ಲಿ ತೆಗೆದಿದ್ದೇವೆ. ಕುಣಿಗಲ್ ತಾಲ್ಲೂಕಿನಲ್ಲಿ ತೆಗೆದಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಹಾಕಿರತಕ್ಕ ನೀತಿ ಬಹಳ ಒಳ್ಳೆಯದು. ಅದನ್ನು ಏನು ಕಾರಣದಿಂದಲೂ ನಿಲ್ಲಿಸಬೇಡಿ. ಇನ್ನು ಮೇಲಾದರೂ ಮುಂದುವರಿಸಿ. ಇನ್ನು ಆರು ತಿಂಗಳೊಳಗೆ 100 ತೆಗೆಸಿದ್ದೇವೆಂದು ಒಂದು ವರದಿಯನ್ನು ಕೊಡಿ. ಆಗ ನಾವು ಬೆನ್ನು ತಟ್ಟಬಹುದು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬಸವಕಲ್ಯಾಣದಲ್ಲಿ ಒಂದು ಕಮ್ಯೂನಿಟಿ ವೆಲ್ಲನ್ನು ತೆಗೆದಿದ್ದಾರೆ. ಅಲ್ಲಿ ಒಬ್ಬ ಬಿ. ಡಿ. ಒ.ಗೆ 2 ಎಕರೆ ಇದೆ. ಸಣ್ಣಪುಟ್ಟ ರೈತರಿಗೆ ಐದಾರು ಎಕರೆಗಳಿವೆ.

ಶ್ರೀ ಡಿ .ದೇವರಾಜ ಅರಸ್.—ಮಾನ್ಯ ಮುಖ್ಯ ಮಂತ್ರಿಗಳು ಹಾರಂಗಿ ಜಲಾಶಯದ ಅಚ್ಚುಕಟ್ಟುದಾರರು ಸರ್ಕಾರದ ಮುಂದೆ ಒಂದು ಮನವಿ ಮಾಡಿದ್ದಾರೆಂದು ಹೇಳಿದರು. ಅದರ ಬಗ್ಗೆ ಒಂದು ಸಲಹೆ ಕೊಡುತ್ತೇನೆ. ಹೋದ ಸಾರಿ ನನಗೆ ಜ್ಞಾಪಕವಿರುವ ಹಾಗೆ ಒಂದು ಮಸೂದೆಯನ್ನು ನಮ್ಮ ಮುಂದೆ ತಂದು ಅದನ್ನು ಇಂಟ್ರಡ್ಯೂಸ್ ಮಾಡಿ ಹಾಗೆಯೇ ಇಟ್ಟಿದ್ದಾರೆ. ಈ ಸಾರಿ ಅದನ್ನು ತೆಗೆದುಕೊಂಡು ಬರುತ್ತಾರೆಂದು ನಾನು ಭಾವಿಸಿದ್ದೇನೆ. ಈ ಮಸೂದೆ ಪ್ರಕಾರ ಸರ್ಕಾರಕ್ಕೆ ಒಂದು ಅಧಿಕಾರ ಸಿಗಲೇ ಬೇಕು. ರೈತರು ಅಡ್ವಾನ್ಸಾಗಿ ಬೆಟರ್‌ಮೆಂಟ್ ಲೆವಿ ಮೂಲಕ ಕಂಟ್ರಿಬ್ಯೂಷನ್ ಕೊಡಬೇಕಾದರೆ, ಅದಕ್ಕೆ ಒಂದು ಅಧಿಕಾರ ಬೇಕಾಗುತ್ತದೆ. ಈಗ ಇರುವ ಕಾನೂನಿನಲ್ಲಿ ಆ ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ಜಲಾಶಯವನ್ನು ಕಟ್ಟಿದ ಮೇಲೆ 20 ವರ್ಷಗಳಲ್ಲಿ ಎಷ್ಟೆಷ್ಟು ವಸೂಲು ಮಾಡಬಹುದು ಎಂಬ ಬಗ್ಗೆ ಕಾನೂನು ಇದೆಯೇ ಹೊರತು ಅದನ್ನು ಮುಂಗಡವಾಗಿ ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ, ಕಾನೂನು ಇಲ್ಲ. ಎರಡನೆಯದು ಬ್ಯಾಂಕಿನಲ್ಲಿ ಜಮೀನನ್ನು ಒತ್ತೆ ಇಟ್ಟು ಹಣ ತೆಗೆದುಕೊಳ್ಳುವುದಕ್ಕೆ ಕಾನೂನು ವಿಧಾಯಕ ಮಾಡಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಕಾನೂನನ್ನು ಹಾಗೆಯೇ ಇಟ್ಟಿದ್ದಾರೆ. ಸರಿಯಾಗಿ ಕಾನೂನನ್ನು ಮುಂದುವರಿಸಲಿ. ಇದಕ್ಕೆ ಕೆಲವು ಮಾನ್ಯಸದಸ್ಯರ ಅಭ್ಯಂತರವಿರಬಹುದು. ಮಾನ್ಯ ಶ್ರೀ ಕಂಠಿಯವರು ಇಲ್ಲಿ ಇಲ್ಲ. ಅವರದು ಸ್ವಲ್ಪ ಅಭ್ಯಂತರವಿದೆ. ನಮ್ಮ ಬಿಜಾಪುರಕ್ಕೆ ಏನೂ ಬೇಕಿಲ್ಲ, ಇದ್ದದ್ದು ಇದ್ದಹಾಗೆ ಇರಲಿ, ನೀರು ಇಲ್ಲದೇ ಹೋದರೂ ಚಿಂತೆಯಿಲ್ಲ ಎಂದು ಅವರು ಹೇಳುತ್ತಾರೆ. ಸದಾ ಕಾಲದಲ್ಲಿಯೂ ಕ್ಷಾಮ ಪರಿಸ್ಥಿತಿ ಅಲ್ಲಿ ಇದೆಯೋ ಏನೋ ಗೊತ್ತಿಲ್ಲ. ಹಾಗೇನಾದರೂ ಇದ್ದರೂ ಅವರು ಹಾಗೆಯೇ ಇಟ್ಟುಕೊಳ್ಳಲಿ. ಅದು ಅವರ ಇಷ್ಟ. ಕೆಲವು ಕಡೆಗಳಲ್ಲಿ

ನೀರು ಇದ್ದರೂ ವ್ಯವಸಾಯ ಮಾಡುವುದಕ್ಕೆ ರೈತರಿಗೆ ತಿಳುವಳಿಕೆ ಬಂದಿಲ್ಲ. ಆದರೆ ನಮ್ಮ ತುಂಗಭದ್ರಾ ನದಿಯ ಭಾಗದಲ್ಲಿರತಕ್ಕ ರೈತರಿಗೆ ನೀರಾವರಿ ಕೆಲಸ ಬಹಳ ಸುಲಭವಾದ ಮಾತು. ನೀರು ಸಿಕ್ಕಿದರೆ ಸಾಕು, ವ್ಯವಸಾಯ ಮಾಡುತ್ತಾರೆ. ಎಲ್ಲಾ ರೈತರು ಮುಂದು ಬಂದು ಅವರೇ ಮುಂಗಡವಾಗಿ ಹಣವನ್ನು ಒದಗಿಸುತ್ತಾರೆ. ಆದ್ದರಿಂದ ಇಂಥ ಜಲಾಶಯಗಳನ್ನು ಆದಷ್ಟು ತೀವ್ರವಾಗಿ ನಿರ್ಮಾಣ ಮಾಡಬೇಕು. ಇವೊತ್ತು ಹಾರಂಗಿ ಜಲಾಶಯದಲ್ಲಿ ಕೂಡ, ಹಾಸನ ಜಿಲ್ಲೆಯವರು, ಅರಕಲಗೂಡು, ಕುಶಾಲನಗರ, ಹುಣಸೂರು ಕೆ. ಆರ್. ಪಟ್ಟಣ ಮೊದಲಾದ ಕಡೆಗಳಲ್ಲಿಯ ಜನರು ಬಹಳ ಆಸಕ್ತಿಯಲ್ಲಿದ್ದಾರೆ. ಆದ್ದರಿಂದ ಸರ್ಕಾರದವರು ಈ ರೀತಿ ಜನರೇ ಮುಂದು ಬಂದಿರುವಾಗ, ಇದಕ್ಕೆ ಒಂದು ಕಾನೂನನ್ನು ಮಾಡಿ, ಹಾರಂಗಿ ಜಲಾಶಯವನ್ನು ಮಾಡಿಕೊಡಬೇಕು. ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, ಒಂದು ದೊಡ್ಡ ಕಾಂಟ್ರವರ್ಸಿ ಬಂದು ಮೇಲೆ ಕಟ್ಟಬೇಕೋ, ಅಥವಾ ಕೆಳಗೆ ಕಟ್ಟಬೇಕೋ ಎಂದು, ತಕರಾರು ಬಂದು, ಕೊನಗೆ ಇಟ್ಟಿಮಡು ಎಂಬಲ್ಲಿ ಜಲಾಶಯ ಕಟ್ಟಬೇಕೆಂದು ತೀರ್ಮಾನವಾಯಿತು. ಇನ್ನು ಈ ಹೇಮಾವತಿ ಮತ್ತು ಹಾರಂಗಿ, ಇವೆರಡಕ್ಕೂ ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾಗ ಎರಡೂ ಕಡೆಯೂ ಶಂಕುಸ್ಥಾಪನೆ ಮಾಡಿದ್ದಾರೆ. ಈಗ ಹೇಮಾವತಿ ಪ್ರೊಜೆಕ್ಟ್ ಶುರು ಮಾಡಿಬಿಡಿ ಎಂದು ಹೇಳಿದರೆ, ಈಗ ಎರಡು ಕೋಟಿ ರೂಪಾಯಿ ಒದಗಿಸುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಹಾರಂಗಿ ಜಲಾಶಯದಲ್ಲಿ ಏನಾಯಿತು ಎಂದರೆ, ಎರಡು ಲಕ್ಷ ರೂಪಾಯಿ ಒದಗಿಸುತ್ತೇವೆಂದು ಹೇಳುತ್ತಿದ್ದಾರೆ. ಅದೇನೋ ಅಲ್ಲಿನ ಸಿಬ್ಬಂದಿಯ ಸಂಬಳಕ್ಕೋಸ್ಕರ ಒದಗಿಸಿದ್ದಾರೆಂದು ಕಾಣುತ್ತದೆ. ನಿಮಗೆ ಹೇಮಾವತಿ ಕಟ್ಟಲು ದುಡ್ಡು ಇದೆ, ಏತಕ್ಕೋಸ್ಕರ ನೀವು ಎರಡು ಪ್ರೊಜೆಕ್ಟನ್ನೂ ಮಾಡಿಲ್ಲ ! ಮದ್ರಾಸ್ ಸರ್ಕಾರದವರು ನೀವು ಹೇಮಾವತಿ ಕಟ್ಟುವುದೂ ಬೇಡ, ಹಾರಂಗಿಯನ್ನು ಕಟ್ಟುವುದೂ ಬೇಡ, ಮತ್ತು ಕಂಬದಕಡವನ್ನೂ ಕಟ್ಟುವುದೂ ಬೇಡ, ನೀವು 1924ನೇ ಅಗ್ರಿಮೆಂಟನ್ನು ಒಪ್ಪಿಕೊಂಡರೆ ಇದನ್ನು ಒಪ್ಪಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ನಿಜಲಿಂಗಪ್ಪನವರು ಇದ್ದಾಗ ಒಂದು ಸರ್ಕಾರ, ವೀರೇಂದ್ರ ಪಾಟೀಲ್‌ರು ಇದ್ದಾಗ ಮತ್ತೊಂದು ಸರ್ಕಾರವೇ ! ಆದ್ದರಿಂದ ನಮ್ಮ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ ಏನೆಂದರೆ, ಎರಡಕ್ಕೂ ಯಾವಾಗ ಶಂಕು ಸ್ಥಾಪನೆ ಮಾಡಿದ್ದಾರೋ, ಆದರಿಂದ ಎರಡನ್ನೂ ತೆಗೆದುಕೊಳ್ಳದಿರಲು ಕಾರಣವೇನು ! ನೀವು ಯಾವ ರೀತಿ ಒಂದು ದೇಶಕ್ಕೆ ಆಶ್ವಾಸನೆಯನ್ನು ಕೊಟ್ಟಿದ್ದೀರೋ, ಆ ರೀತಿ ನಡೆದುಕೊಳ್ಳುವಂತೆ ಪ್ರಯತ್ನ ಮಾಡಬೇಕು. ದುಡಿಲ್ಲವೆಂದರೆ, ಅದಕ್ಕೂ ಎರಡು ಕೋಟಿ ಇಲ್ಲ, ಇದಕ್ಕೂ ಇಲ್ಲ. ಅದಕ್ಕೆ ಮಾನ್ಯ ಹಣಕಾಸಿನ ಸಚಿವರು ಹೇಳಬಹುದು, ಹಣವಿಲ್ಲದಿರುವಾಗ ಎರಡಕ್ಕಿಂತ ಒಂದೇ ತೆಗೆದುಕೊಳ್ಳುವುದು, ಒಳ್ಳೆಯದು ಎಂದು. ಅಲ್ಲಷ್ಟು ಇಲ್ಲಷ್ಟು ಹಾಕುವುದು ಬೇಡ ಎಂದು ಹೇಳಬಹುದು: ಅಂದರೆ ಒಂದು ಕಡೆ ಹಾಕಿ ಫಲ ಪಡೆದು ಇನ್ನೊಂದು ಕಡೆ ಜಲಾಶಯವನ್ನು ಮಾಡಬೇಕೆಂದು ಕಾಣುತ್ತದೆ. ಇದನ್ನು ಹಿಂದೆಯೂ ಹೇಳಿದ್ದಾರೆ, ಈಗಲೂ ಹೇಳುತ್ತಿದ್ದಾರೆ. ಇವರ ಬುದ್ಧಿವಂತಿಕೆಯನ್ನು ಒಪ್ಪಿಕೊಳ್ಳುತ್ತೇನೆ. ಹಾಗಿದ್ದರೆ, ನಿಜಲಿಂಗಪ್ಪನವರು ಇದ್ದಾಗಲೇ ಒಂದಕ್ಕೆ ಕಲ್ಲು ಹಾಕಿ, ಒಂದೇ ಸಾಕು ಎಂದು ಹೇಳಬಹುದಿತ್ತು. ಶಂಕುಸ್ಥಾಪನೆ ಹಾಕಿದ ಮೇಲೆ ಎರಡನ್ನೂ ತೆಗೆದುಕೊಳ್ಳಬೇಕಾಗುತ್ತದೆ. ನೀವು ಇವತ್ತು ಏನು ಒಂದು ಬೇಡ ಎಂದು ಹೇಳುತ್ತಿದ್ದೀರೋ, ಅದು ನಮಗೆ ಅನುಮಾನವನ್ನು ತರುತ್ತಿದೆ. ಇವನ್ನೆಲ್ಲಾ 1974ನೇ ಇಸವಿಯೊಳಗೆ ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು, ಇಲ್ಲದಿದ್ದರೆ, ಆಮೇಲೆ ಆಗುವುದಿಲ್ಲ. ಹಿಂದೆಯೂ ಇದರ ಬಗ್ಗೆ ಅಸೆಂಬ್ಲಿಯಲ್ಲಿ ವ್ಯಾಖ್ಯಾನವಾಗಿದೆ. ಸರ್ಕಾರವು ಕೂಡ ಇದನ್ನು ಒಪ್ಪಿದೆ. 74ರ ಆಚೆಗೆ ನೀರನ್ನು ಉಪಯೋಗಿಸಿಕೊಳ್ಳುವುದು ಕಷ್ಟವಾಗುತ್ತದೆ. ಅಗ್ರಿಮೆಂಟಿನ ಅಡಚಣೆ ಬರುತ್ತದೆಂದು ಸರ್ಕಾರಕ್ಕೆ ಗೊತ್ತಿದೆ. ಆದ್ದರಿಂದ ಜಲಾಶಯಗಳನ್ನು ಯಾವ ರೀತಿಯಲ್ಲಾದರೂ, ಕಷ್ಟವಾದರೂ ನಿರ್ಮಾಣ ಮಾಡಬೇಕು. ರೈತರು ಈಗಾಗಲೇ ಮುಂದೆ ಬಂದಿದ್ದಾರೆ. ಅವರ ಸಹಾಯವನ್ನು ಪಡೆದುಕೊಂಡು ಇವುಗಳನ್ನು ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಹಣಕಾಸಿನ ಸಚಿವರು ಇದರಲ್ಲಿ ಒಂದು ಪಾಲಿಸಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ, ಪಬ್ಲಿಕ್ ಸೆಕ್ಟರ್ಸ್ ಇಂಡಸ್ಟ್ರೀಸ್ ನಮ್ಮ ದೇಶದಲ್ಲಿ ಅನೇಕ ಇದ್ದಾವೆ, ಆ ಇಂಡಸ್ಟ್ರೀಸ್ ಅನೇಕ ರೀತಿಯಿಂದ ಕುಂಠಿತವಾಗಿ ನಡಕೊಂಡು ಬರುತ್ತಿವೆ. ನಮಗೆ ನಷ್ಟವೂ ಕೂಡ ಆಗುತ್ತಿದೆ. ಈ ರೀತಿ ನಷ್ಟ ಆಗತಕ್ಕ ಕೈಗಾರಿಕೆಗಳ ಬಗ್ಗೆ ಸಾರ್ವಜನಿಕ ಹಣದ ಹಿತದೃಷ್ಟಿಯಿಂದ ಖಾಸಗಿ ಉದ್ಯಮ ಸಾಹಸಿಗಳೊಡನೆ ಏನಾದರೊಂದು ವ್ಯವಸ್ಥೆ ಮಾಡಿಕೊಳ್ಳಲು ಸರ್ಕಾರದವರು ಹಿಂಜರಿಯುವಂತಿಲ್ಲವೆಂದು ವ್ಯಕ್ತಪಡಿಸಿದ್ದಾರೆ. ಇವರು ಕೈಗಾರಿಕೆಯನ್ನು ಒಂದು ಹೊಸ ರೀತಿಯಲ್ಲಿ ಯೋಜನೆ ಮಾಡಬೇಕೆಂದು ಹೊರಟಿದ್ದಾರೆ. ಇದರ ಸಾಧಕ ಬಾಧಕಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಹೇಳಬಹುದು, ಆಗ ಯೋಚನೆ ಮಾಡೋಣ. ನಮ್ಮ ದೇಶದಲ್ಲಿ ಒಂದು ಮಾತು ನಿಜ. ಪಬ್ಲಿಕ್ ಸೆಕ್ಟರ್

(ಶ್ರೀ ಡಿ. ದೇವರಾಜ ಅರಸ್)

ಇಂಡಸ್ಟ್ರೀಸ್ ಏನಿದ್ದಾವೆ, ಅಥವಾ ಸರ್ಕಾರದವರು ಹೆಚ್ಚು ಹಣ ಹಾಕಿ ಪಾರ್ಟಿಸಿಪೇಟ್ ಮಾಡತಕ್ಕ ಇಂಡಸ್ಟ್ರೀಸ್ ಏನಿವೆ, ಅಥವಾ ಸರ್ಕಾರದವರು ಒಂದಲ್ಲ ಒಂದು ರೀತಿಯಿಂದ ಗ್ಯಾರಂಟಿ ನಿಂತು ಕೋಟಿಗಟ್ಟಲೆ ಹಣ ಸಹಾಯ ಕೊಡತಕ್ಕ ಕಾರ್ಖಾನೆಗಳಾದ, ರೆಮ್‌ಕೋ, ಮಂಡ್ಯ ಪೇಪರ್ ಮಿಲ್ಸ್, ಎಂ.ಎಸ್.ಕೆ. ಮಿಲ್, ಗುಲ್ಬರ್ಗ, ಕೆ.ಸಿ.ಟಿ. ಮಿಲ್ಸ್ ಮುಂತಾದವುಗಳು ಏನಿವೆ, ಇವುಗಳನ್ನೆಲ್ಲಾ ನಾವು ಲೆಕ್ಕ ಹಾಕಿದರೆ, ಸುಮಾರು ಮೂರು ನಾಲ್ಕು ಕೋಟಿ ರೂಪಾಯಿ ಕಾಣುತ್ತದೆ. ಆದರೆ ಇವತ್ತು ನಾವು ಏನು ಗ್ಯಾರಂಟಿ ಮಂಡ್ಯ ಪೇಪರ್‌ಮಿಲ್ಲಿಗೆ ಕೊಟ್ಟಿದ್ದೇವೆ, ಅದರ ಮಾಲೀಕರು ಇವತ್ತು ಇಲ್ಲವೇ ಇಲ್ಲ. ಸರ್ಕಾರದವರು ಮಿಲ್ಲನ್ನು ಮಾರಿದರೂ ನಾವು ಕೊಟ್ಟಿರುವ ಹಣದ ಅರ್ಧದಷ್ಟಾದರೂ ಬರುತ್ತದೋ, ಇಲ್ಲವೋ ಎಂಬುದು ಅನುಮಾನ. ಅದೇ ರೀತಿ ಎಂ. ಎಸ್. ಕೆ. ಮಿಲ್ಲಿನ ಕಾರ್ಮಿಕರು ಸತ್ತು ಹೋಗುತ್ತಾರೆ ಎಂದು ದುಡ್ಡು ಕೊಟ್ಟರು. ಇನ್ನೂ ಕೂಡ ಅದು ಲಾಭದಾಯಕವಾಗಿ ನಡೆಯುತ್ತದೆಯೋ ಎಂದರೆ, ಅದೂ ಇಲ್ಲ. ಅದೇ ರೀತಿ ಹುಬ್ಬಳ್ಳಿಯ ಕೆ. ಸಿ. ಟಿ. ಮಿಲ್ಸ್, ಅದನ್ನು ಕೂಡ ಪುನರುದ್ಧಾರ ಮಾಡುವುದಕ್ಕೆ ಬ್ರಹ್ಮನಿಂದಲೂ ಸಾಧ್ಯವಿಲ್ಲವೆಂದು ಕಾಣುತ್ತದೆ. ಕಾರಣ ವೇನೆಂದರೆ, ಇಲ್ಲಿ ಏನು ಒಂದು ಕೋಆಪರೇಟಿವ್ ಸೆಕ್ಟರ್ಸ್ ಇದೆ, ಅದು ಸರಿಯಾಗಿ ನಡೆಯುತ್ತಾ ಇಲ್ಲ. ಅದನ್ನು ತೆಗೆದು ಅಲ್ಲಿರುವ ಕಾರ್ಮಿಕರಾದರೂ ನಡೆಸುವುದಕ್ಕೆ ಕೊಟ್ಟರೆ, ಅವರು ಸುಮಾರಾಗಿ ನಡೆಸಬಹುದೆಂದು ಕಾಣುತ್ತದೆ.

ರೆಂಕೋ ಫ್ಯಾಕ್ಟರಿಯಲ್ಲಿ ಕೂಡ 30 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹಣ ನಷ್ಟವಾಗಿದೆ. ಹಾಗೆಯೇ ಅನೇಕ ಕಾರ್ಖಾನೆಗಳಲ್ಲಿ ನಷ್ಟವಾಗುತ್ತಿದೆ. ಸಿರ್ಕ್ ಫಿರೇಚರ್‌ನಲ್ಲಿ ಕೂಡ ನಷ್ಟವಾಗುತ್ತಿದೆ. ಇಷ್ಟೊಂದು ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಾ ಇರಬೇಕಾದರೆ ಬಹುಶಃ ಏನು ಕಾರಣಗಳು ಇರಬಹುದು ಅನಿಸುತ್ತದೆ.

6-00 P.M.

ಶ್ರೀ ಎಸ್. ಚನ್ನಯ್ಯ.—ಮಿಲ್ಕ್ ಡೈರಿ ವಿಚಾರ ಹೇಳಿ.

ಶ್ರೀ ಡಿ. ದೇವರಾಜ ಅರಸ್.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ಸಂದರ್ಭದಲ್ಲಿ ಹೇಳುತ್ತೇನೆ. ತಲೆಗೆಲ್ಲಾ ಒಂದೇ ಮಂತ್ರ ಎನ್ನುವ ಹಾಗೆ ಮಿಲ್ಕ್ ಡೈರಿ ಕೆಟ್ಟು ಹೋಯಿತು ಎಂದರೆ ಅದನ್ನು ನಿಲ್ಲಿಸಿ. ಹೀಗೆ ಸರ್ಕಾರದವರು ಈ ಬಗ್ಗೆ ಸರಿಯೋ ತಪ್ಪೋ ಎನ್ನುವುದನ್ನು ಬೇರೆ ಸಂದರ್ಭದಲ್ಲಿ ವಿಮರ್ಶೆ ಮಾಡುವುದು ಇದೆ. ಮಾನ್ಯ ಸದಸ್ಯರು ಟೀಕೆ ಮಾಡಬೇಕಾದರೆ ಮತ್ತು ಸಲಹೆಯನ್ನು ಕೊಡಬೇಕಾದರೆ ರಚನಾತ್ಮಕವಾಗಿ ಯೋಚನೆ ಮಾಡಿ ಕೊಡಬೇಕಾದ್ದು ಇದೆ. ಇಷ್ಟು ಮಾತ್ರ ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಹೆಚ್ಚು ಕಾಲವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೂ ಮತ್ತು ಇದುವರೆಗೂ ಮಾನ್ಯ ಸದಸ್ಯರು ನನ್ನ ಭಾಷಣವನ್ನು ಸಾವಧಾನವಾಗಿ ಕೇಳಿದ ಅವರಿಗೂ ಅಭಿನಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ ಕಾಲಾವಕಾಶ ಕಡಿಮೆ ಇದೆ. ಮಾತನಾಡಬೇಕಾದಂತಹ ಬಹುತೇಕ ವಿಷಯಗಳನ್ನು ಶ್ರೀಮಾನ್ ದೇವರಾಜ್ ಅರಸ್ ಬಹಳ ಚೆನ್ನಾಗಿ ಮನದಟ್ಟಾಗುವಂತೆ ಹೇಳಿದ್ದಾರೆ. ನಾವು ಹೇಳತಕ್ಕಂಥ ವಿಷಯಗಳನ್ನು ಕಡಿಮೆ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಾನು ವಂದನೆಗಳನ್ನು ಸಲ್ಲಿಸುತ್ತೇವೆ. ಮೊದಲನೆಯದಾಗಿ ನಾನು ನೀರಾವರಿ ಬಾಬಿನ ಬಗ್ಗೆ ಸೂಚಿತವಾದ ಒಂದೆರಡು ಮಾತುಗಳನ್ನು ಪ್ರಸ್ತಾಪ ಮಾಡಬೇಕೆಂದು ನಾನು ಇಷ್ಟಪಡುತ್ತೇನೆ. ಹೋದ ಸಾಲಿನಲ್ಲಿ ಆದಾಯ ರೆವಿನ್ಯೂ ಸೈಡ್‌ನಲ್ಲಿ ಇದ್ದದ್ದು ಎರಡು ಕೋಟಿ ರೂಪಾಯಿಗಳು ರಿವೈಜ್ ಆದಂತಹ ಬಡ್ಜೆಟ್ಟಿನಲ್ಲಿ ರೆವಿನ್ಯೂ ಸೈಡಿನಲ್ಲಿರತಕ್ಕಂಥಾದ್ದು 2 ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ಎಕ್ಸ್‌ಪೆಂಡಿಚರ್ ಸೈಡ್‌ನಲ್ಲಿ 13 ಚಿಲ್ಲರೇ ಕೋಟಿ ರೂಪಾಯಿಗಳ ಖೋತಾವನ್ನು ತೋರಿಸಿದ್ದಾರೆ. ಇದರ ಜೊತೆಗೆ ಔಟ್‌ಸೈಡ್ ದಿ ರೆವಿನ್ಯೂ ಅಕೌಂಟ್ಸ್ ಎನ್ನತಕ್ಕದ್ದರಲ್ಲಿ 63 ಕೋಟಿ ರೂಪಾಯಿಗಳು ಇದೆ. ರೆವೆನ್ಯೂ ಸೈಡ್‌ನಲ್ಲಿ ಪಬ್ಲಿಕ್ ಲೋನ್ 9 ಕೋಟಿ ರೂಪಾಯಿಗಳು ಇದೆ. ಕೇಂದ್ರ ಸರ್ಕಾರದಿಂದ ಬೇಕಾದಂಥಾದ್ದು 51 ಕೋಟಿ ಚಿಲ್ಲರೆ ರೂಪಾಯಿಗಳು ಇದೆ. ಬೇರೆ ರೀತಿಯ ಸಾಲ ವಗೈರೆಗಳು 2 ಕೋಟಿ 80 ಲಕ್ಷ ರೂಪಾಯಿಗಳು ಇದೆ. ಒಟ್ಟು 63 ಕೋಟಿ ರೂಪಾಯಿಗಳನ್ನು ಸರ್ಕಾರದವರು ರೆವಿನ್ಯೂ ಸೈಡ್‌ನಿಂದ ನಿರೀಕ್ಷಣೆ ಮಾಡಿದ್ದಾರೆ. ಅದೇ ರೀತಿ ಎಕ್ಸ್‌ಪೆಂಡಿಚರ ಸೈಡ್‌ನಲ್ಲಿ 226 ಕೋಟಿ ಚಿಲ್ಲರೆ ರೂಪಾಯಿಗಳನ್ನು ತೋರಿಸಿದ್ದಾರೆ. ಇದರಲ್ಲಿ ಕೆಲವು ಸಾಲಗಳನ್ನು ವಾಪಸ್ಸು ಕೊಡುವುದಕ್ಕೆ 7$\frac{3}{4}$

ಕೋಟಿ ರೂಪಾಯಿಗಳನ್ನೂ, ಕೇಂದ್ರ ಸರ್ಕಾರದಲ್ಲಿ ಮಾಡಿದಂತಹ ಸಾಲದ ಮರುಪಾವತಿಗೆ 41½ ಕೋಟಿ ರೂಪಾಯಿಗಳನ್ನೂ, ಇನ್‌ಷ್ಯೂರೆನ್ಸ್ ಇಲಾಖೆಯಲ್ಲಿ ಮಾಡಿದಂತಹ ಸಾಲದ ಮರುಪಾವತಿಯ ಬಗ್ಗೆ 1½ ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ. ಒಟ್ಟು ಸುಮಾರು 52 ಕೋಟಿ ರೂಪಾಯಿಗಳನ್ನು ಎಕ್ಸ್‌ಪೆಂಡಿಚರ್ ಸೈಡ್‌ನಲ್ಲಿ ತೋರಿಸಿ 11 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ ಎಂದು ತೋರಿಸಿದ್ದಾರೆ. ಆ ಮೇಲೆ ಮುಂದೆ ನೋಡುವುದಾದರೆ ಲೋನ್ಸ್ ಮತ್ತು ಅಡ್ವಾನ್ಸಸ್ ತೆಗೆದುಕೊಂಡಾಗ ಕೊಡಬೇಕಾದಂಥಾದ್ದು ಎಕ್ಸ್‌ಪೆಂಡಿಚರ್ ಸೈಡಿನಲ್ಲಿ 26 ಕೋಟಿ ರೂಪಾಯಿಗಳು ಆಗುತ್ತದೆ. ರೆಸೀಟ್ಸ್ ಸೈಡಿನಲ್ಲಿ 14 ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ. ಮತ್ತು 12 ಕೋಟಿ ರೂಪಾಯಿಗಳು ಖೋತಾ ಬರುತ್ತದೆ. ರೆವಿನ್ಯೂ ಸೈಡಿನಲ್ಲಿ ಔಟ್ ಸೈಡ್ ದಿ ರೆವಿನ್ಯೂ ಅಕೌಂಟ್ಸ್‌ನಲ್ಲಿ ಉಳಿಯುವಂತಹ ಸರ್‌ಪ್ಲಸ್ 11 ಕೋಟಿ ರೂಪಾಯಿಗಳು ಏನಿದೆ ಅದು ಲೋನ್ಸ್ ಅಂಡ್ ಅಡ್ವಾನ್ಸಸ್‌ನಲ್ಲಿ ಅಡ್ಜಸ್ಟ್ ಆಗಿ ಸೆಟಪ್ ಆಗುತ್ತದೆ. ಖೋತಾ ಹಾಗೆಯೇ ಉಳಿದುಕೊಳ್ಳುತ್ತದೆ. ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಏನಿದೆ ಅದರಲ್ಲಿ ಭಾರೀ ನೀರಾವರಿಗಾಗಿ 42 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದಾರೆ. ಅದು ಖೋತಾ ಸೇರಿಸಿ 55 ಕೋಟಿ ರೂಪಾಯಿಗಳಾಗುತ್ತದೆ. ಇದನ್ನು ಸರಿದೂಗಿಸುವುದಕ್ಕೆ ಬಹುಶಃ ಕೇಂದ್ರ ಸರ್ಕಾರದಿಂದ ಸಹಾಯವನ್ನು ಪಡೆದುಕೊಳ್ಳುತ್ತಾರೆಯೋ ಅಥವಾ ರಿಜರ್ವ್ ಬ್ಯಾಂಕಿನಿಂದ ಓವರ್‌ಡ್ರಾಫ್ಟ್ ತೆಗೆದುಕೊಳ್ಳುತ್ತಾರೆಯೋ ಅಥವಾ ಮಾಯಾ ಮಂತ್ರ ಮಾಡಿದ್ದಾರೆಯೋ ಹೇಗೆ ಎನ್ನತಕ್ಕಂಥಾದ್ದನ್ನು ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಬೇಕು. ಇದರಲ್ಲಿ ಎಕ್ಸ್‌ಪೆಂಡಿಚರ್ ಬಹಳ ಪ್ರಾಮುಖ್ಯವಾದದು. ಹೋದ ಸಾರಿ ಹೆಚ್ಚು ಖರ್ಚಾಗಿದೆ. ಕಲೆಕ್ಷನ್ ಆಫ್ ಟ್ಯಾಕ್ಸ್ ಎಕ್ಸ್‌ಟ್ರ ಐದು ಚಿಲ್ಲರೆ ಕೋಟಿ ರೂಪಾಯಿಗಳಿಂದ 9 ಚಿಲ್ಲರೆ ಕೋಟಿಗೆ ಹೋಗಿದೆ. ಲ್ಯಾಂಡ್ ರೆವಿನ್ಯೂಗೆ ಸಂಬಂಧಪಟ್ಟ ಕಲೆಕ್ಷನ್ 2—40 ಕೋಟಿ ರೂಪಾಯಿಗಳಿಂದ 6—19 ಕೋಟಿ ರೂಪಾಯಿಗಳಿಗೆ ಹೋಗಿದೆ. ಶ್ಯಾನುಭೋಗರಿಗೆ ಪರಿಹಾರವನ್ನು ಕೊಡುವುದಕ್ಕೆ ಮತ್ತು ವಿಲೇಜ್ ಅಕೌಂಟೆಂಟರುಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಇದಕ್ಕಾಗಿ 4 ಕೋಟಿ ರೂಪಾಯಿಗಳು ಈ ಸಾರಿ ಖರ್ಚು ಬಂದಿದೆ. ಒಂದು ದೇಶದ ಆಡಳಿತವನ್ನು ನಡೆಸಬೇಕಾದರೆ ಮೊದಲು ಯಾವುದಕ್ಕೆ ಹೆಚ್ಚಿಗೆ ಮನ್ನಣೆ ಕೊಡಬೇಕು, ಯಾವುದಕ್ಕೆ ಹೆಚ್ಚು ಖರ್ಚು ಮಾಡಬೇಕೆಂಬುದನ್ನು ಆಸಕ್ತಿ ವಹಿಸಿ ಇವೊತ್ತು ಆಲೋಚನೆ ಮಾಡತಕ್ಕ ಮುತ್ಸದ್ದಿತನ ಸರ್ಕಾರವನ್ನು ನಡೆಸತಕ್ಕ ವ್ಯಕ್ತಿಗಳಿಗೆ ಇಲ್ಲ. ಅದು ಇರಬೇಕಾದ್ದು ಅವಶ್ಯಕ. ಭಾರಿ ನೀರಾವರಿ ಯೋಜನೆಗಳಿಗೆ ಆಸಕ್ತಿಯನ್ನು ವಹಿಸಿ. ಮುತುವರ್ಜಿಯನ್ನು ವಹಿಸಿ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮಾತೆತ್ತಿದರೆ ಸರ್ಕಾರದವರು ಹಣ ಇಲ್ಲ ಹಣ ಇಲ್ಲ ಎಂದು ಹೇಳುತ್ತಾರೆ. ದೇಶದಲ್ಲಿ ಜನ ಅನ್ನ ಅನ್ನ ಎಂದು ಬಡಿದುಕೊಂಡರೆ ಸರ್ಕಾರದವರು ಅದಕ್ಕೆ ಏನು ಮಾಡಿದ್ದಾರೆ ? ಶ್ಯಾನುಭೋಗರನ್ನು ತೆಗೆದು, ಅವರಿಗೆ ಪರಿಹಾರವನ್ನು ಕೊಡುವುದು, ವಿಲೇಜ್ ಅಕೌಂಟೆಂಟರುಗಳನ್ನು ನೇಮಕ ಮಾಡುವುದು ಈ ಕೆಲಸಕ್ಕಾಗಿ ಹಣವನ್ನು ಖರ್ಚು ಮಾಡಿದ್ದಾರೆ. ಇದನ್ನು ಈಗಲೇ ತೆಗೆದುಕೊಳ್ಳುವ ಔಚಿತ್ಯವೇನಿತ್ತು ಎಂದು ನಾನು ಪ್ರಶ್ನೆ ಮಾಡುತ್ತೇನೆ. ಯಾವುದಕ್ಕೆ ಮೊದಲು ಮನ್ನಣೆ ಕೊಡಬೇಕೋ ಅದಕ್ಕೆ ಮನ್ನಣೆ ಕೊಟ್ಟು ಆ ಕೆಲಸವನ್ನು ಮೊದಲು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ದೇಶದಲ್ಲಿ ಜನತೆಗೆ ಏನು ಕಷ್ಟ ಸುಖಗಳು ಇವೆ, ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ ? ದೇಶದಲ್ಲಿ ಏನು ಕೂಗು ಇದೆ, ಯಾವುದು ಪ್ರಾಮುಖ್ಯವಾದ ವಿಚಾರವೋ ಅದಕ್ಕೆ ಸಕಾರದವರು ಗಮನ ಕೊಡಬೇಕು. ಇವರು ಈಗ 10 ವರ್ಷಗಳಿಂದ ಏನು ಮಾಡಿದ್ದಾರೆ ಎಂದರೆ ಶ್ಯಾನುಭೋಗರನ್ನು ತೆಗೆಯತಕ್ಕಂಥ ಒಂದು ಕೆಲಸವನ್ನು ಇವರು ಮಾಡಿದ್ದಾರೆ. ಅದಕ್ಕಾಗಿ ಇವೊತ್ತು ಅವರಿಗೆ ಪರಿಹಾರಕೊಡುವುದಕ್ಕೆ ಬಜೆಟ್ಟಿನಲ್ಲಿ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಕಾರ್ಯವನ್ನು ಇನ್ನೂ ಕೆಲವು ವರ್ಷಗಳಾದ ಮೇಲೆ ಅನುಕೂಲ ಪರಿಸ್ಥಿತಿ ಉಂಟಾದಾಗ ಇದನ್ನು ಮಾಡಬಹುದಾಗಿತ್ತು. ಇದು ಒಂದು ಅನಾವಶ್ಯಕವಾದ ಖರ್ಚು. ಇದನ್ನು ನಮ್ಮನೆ ಹೆಚ್ಚು ಮಾಡಿಕೊಂಡಿದ್ದಾರೆ; ಎನ್ನತಕ್ಕದ್ದನ್ನು ಹೇಳದೆ ಗತ್ಯಂತರ ಇಲ್ಲ.

ವಿದ್ಯಾಭ್ಯಾಸದಲ್ಲಿ ಕೂಡ ಬಹುಶಃ 19‌6 ನೇ ಇಸವಿಯಿಂದ ಇಲ್ಲಿಯವರೆಗೆ ಈ ಬಾಬಿಗೆ ಖರ್ಚು ಮಾಡಿರತಕ್ಕ ವೆಚ್ಚವನ್ನು ನೋಡಿದರೆ ಇದರ ಖರ್ಚು ವೆಚ್ಚ ಹೆಚ್ಚಾಗಿದೆ. ಹೋದ ಸಲಕ್ಕೂ ಈ ಸಲಕ್ಕೂ ಹೋಲಿಸಿ ನೋಡಿದರೆ ಈ ವರ್ಷ ಈ ವಿದ್ಯಾಭ್ಯಾಸಕ್ಕೆ 9 ಕೋಟಿ ರೂಪಾಯಿಗಳನ್ನು ಹೆಚ್ಚು ಒದಗಿಸಿದ್ದಾರೆ. ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವುದು ಬೇಡ ಎಂದು ನಾನು ಹೇಳುವುದಿಲ್ಲ. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕು ಸಂತೋಷ. ಜನಗಳಿಗೆ ವಿದ್ಯಾಭ್ಯಾಸವನ್ನೂ ಕೊಡಬೇಕು, ಅನ್ನವನ್ನೂ ಕೊಡಬೇಕು. ಇದರಲ್ಲಿ ಕೂಡ ಪ್ರೊಗ್ರಸೀವ್ ಆಗಿಲ್ಲ. ವಿದ್ಯಾಭ್ಯಾಸದ ಖರ್ಚು ಕೂಡ ಘನತರವಾಗಿ ಏರಿದೆ, ಇದರಲ್ಲಿ ಕೂಡ ರೆವಿನ್ಯೂ ಅಕೌಂಟ್ಸ್ ಇನ್‌ಕಂ ಸೈಡ್‌ನಲ್ಲಿ ಎಷ್ಟೋ ಹಣವನ್ನು ಮಿಗಿಸುವುದಕ್ಕೆ ಸಾಧ್ಯವಾಗುತ್ತಿತ್ತು.

(ಶ್ರೀ ಹೆಚ್. ಎನ್. ನಂಜೇಗೌಡ)

ಇದರಲ್ಲಿ ಅಪ್ರಕೃತವಾದುದನ್ನು ತೆಗೆದುಹಾಕುವ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಈ ಬಜೆಟ್‌ನಿಂದ ಗೊತ್ತಾಗುತ್ತದೆ. ಟೆಕ್ನಿಕಲ್ ಕಾಲೇಜ್‌ಗಳು, ಸ್ಕೂಲ್‌ಗಳು ಮತ್ತು ಪಾಲಿಟೆಕ್ನಿಕ್‌ಗಳನ್ನು ಕಡಿಮೆ ಮಾಡುವ ಬಗ್ಗೆ ಯೋಚನೆ ಮಾಡಬಹುದಾಗಿತ್ತು. ಕೆಲವು ಕಾಲೇಜ್‌ಗಳಲ್ಲಿ ಮತ್ತು ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಆಗುತ್ತಿರುವ ಹೆಚ್ಚಿನ ಖರ್ಚನ್ನು ಕಡಿಮೆ ಮಾಡುವ ಮೂಲಕ ಮತ್ತು ಅಲ್ಲಿ ನಡೆಯುತ್ತಿರುವ ಲೋಪದೋಷಗಳನ್ನು ತಡೆಯುವ ಬಗ್ಗೆ ಬಿಗಿ ನೀತಿಯನ್ನು ಅನುಸರಿಸಿದ್ದರೆ, ದಕ್ಷ ರೀತಿಯಲ್ಲಿ ಆಡಳಿತ ನಡೆಸುವಂತೆ ಏರ್ಪಾಡು ಮಾಡಿದ್ದರೆ ಕೆಲವು ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡುವುದಕ್ಕೆ ಅವಕಾಶವಾಗುತ್ತಿತ್ತು. ಈಗ ಬಜೆಟ್ಟಿನಲ್ಲಿ ಪಬ್ಲಿಕ್ ಹೆಲ್ತ್ ಬಗ್ಗೆ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ರೂರಲ್ ಆಸ್ಪತ್ರೆಗಳಿಗೆ ಕೊಡುತ್ತಿರುವ ಹಣವನ್ನು ಹೆಚ್ಚು ಮಾಡಿದ್ದೀರಿ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಲ್ಲಿ ಸರಿಯಾಗಿ ಔಷಧಗಳೇ ಸಿಗುತ್ತಿಲ್ಲ. ಈ ಬಗ್ಗೆ ವಿಚಾರ ಮಾಡಿಸಿ ನನಗೆ ಉತ್ತರ ಕೊಡಬೇಕು. ನಮ್ಮ ನಾಯಕರಾದ ಶ್ರೀಮಾನ್ ಶಿವಪ್ಪನವರು ಅಧಿಕಾರಿಗಳ ಬಗ್ಗೆ ಮಾತನಾಡಿದ್ದು ಸರಿಯಲ್ಲ ಎನ್ನುವ ಧಾಟಿಯಲ್ಲಿ ಶ್ರೀಮಾನ್ ದೇವರಾಜ ಅರಸ್ ಅವರು ಹೇಳಿದರು. ಇವತ್ತಿನ ದಿವಸ ಅಧಿಕಾರಿಗಳ ಬಗ್ಗೆ ಖರ್ಚು ಜಾಸ್ತಿಯಾಗುತ್ತಿದೆಯೇ ಹೊರತು ಅದಕ್ಕೆ ತಕ್ಕಂತೆ ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಎಂಬುದನ್ನು ನಾವು ನೋಡಬೇಕಾಗಿದೆ. ಸರ್ಕಾರದವರು ಹಾಸನ ಜಿಲ್ಲೆಗೆ ಕ್ಷಾಮ ಪರಿಹಾರ ಕೆಲಸಗಳಿಗಾಗಿ 42 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಕೇವಲ 14 ಲಕ್ಷ ರೂಪಾಯಿಗಳನ್ನು ಅಧಿಕಾರಿಗಳು ಖರ್ಚು ಮಾಡಿದ್ದಾರೆ. ಕಾರಣ ಇದು ವಿರೋಧಪಕ್ಷದವರ ಕ್ಷೇತ್ರ ಎಂದು ಇರಬೇಕು.

ಶ್ರೀ ಬಿ. ರಾಚಯ್ಯ.—ಆ ರೀತಿ ಏನಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅದೇ ಚಿಕ್ಕಮಗಳೂರು ಜಿಲ್ಲೆಗೆ ಇದೇ ಕೆಲಸಕ್ಕಾಗಿ 26 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಇಪ್ಪತ್ತೈದೂವರೆ ಲಕ್ಷ ರೂಪಾಯಿಗಳವರೆಗೂ ಸಹ ಖರ್ಚು ಮಾಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ಸಹ ಹೆಚ್ಚು ಜನ ಸದಸ್ಯರುಗಳು ವಿರೋಧಪಕ್ಷದವರೇ ಆಗಿದ್ದಾರೆ. ಪಕ್ಷದ ದೃಷ್ಟಿಯಿಂದ ಕೆಲಸಗಳನ್ನು ಮಾಡಿಸುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಾವುಗಳು ಸರ್ಕಾರದ ಹುಳುಕನ್ನು ಎತ್ತಿ ತೋರಿಸುತ್ತೇವೆ ಎನ್ನುವ ಕಾರಣದಿಂದ ನಮ್ಮ ಕ್ಷೇತ್ರಗಳಲ್ಲಿ ಯಾವ ಒಂದು ಕೆಲಸಗಳನ್ನು ಸಹ ಮಾಡಿಸುತ್ತಿಲ್ಲವೆಂದು ಕಾಣುತ್ತದೆ. ನಮ್ಮ ಜಿಲ್ಲೆಯ ಕಾಂಗ್ರೆಸ್ ಸದಸ್ಯರಾದ ಶ್ರೀಮಾನ್ ನಂಜಪ್ಪನವರನ್ನು ಮತ್ತು ನನ್ನನ್ನು ಒಂದು ತಕ್ಕಡಿಯಲ್ಲಿಟ್ಟು ತೂಗಿ ಅದರ ಆಧಾರದ ಮೇಲೆ ಕೆಲಸಗಳನ್ನು ಮಾಡಿಸುತ್ತಿರುವಂತೆ ಕಾಣುತ್ತದೆ.

ಶ್ರೀ ಎಸ್. ಶಿವಪ್ಪ.—ಇವರು ಮಾಡಿಸುತ್ತಿರುವುದು ಕ್ಷಾಮ ಪರಿಹಾರ ಕೆಲಸಗಳು ಅಲ್ಲ, ಕಾಂಗ್ರೆಸ್ ಪರಿಹಾರದ ಕೆಲಸಗಳು.

ಶ್ರೀ ಎಚ್. ಎನ್. ನಂಜೇಗೌಡ.—ಈ ಸರ್ಕಾರೀ ಅಧಿಕಾರಿಗಳು ಕೆಲಸಗಳನ್ನು ಮಾಡಿಸುವುದರಲ್ಲಿ ಕರ್ತವ್ಯಲೋಪ ಮಾಡಿ ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದಾರೆ. ಶ್ರೀಮಾನ್ ನಂಜಪ್ಪನವರ ಕ್ಷೇತ್ರದಲ್ಲಿ ಡಿ.ಎಲ್.ಬಿ. ರೋಡ್‌ಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಅದೇ ಶ್ರೀಮಾನ್ ದೇವೇಗೌಡರು ಕಾಂಗ್ರೆಸ್ ಸೇರಿದ ಮೇಲೆ 35 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಡಿ.ಎಲ್.ಬಿ. ರೋಡ್‌ಗಳನ್ನು ತೆಗೆದುಕೊಂಡಿದ್ದಾರೆ. ಶ್ರೀಮಾನ್ ಲಕ್ಕಪ್ಪನವರ ಕ್ಷೇತ್ರದಲ್ಲಿ 5 ರೋಡ್‌ಗಳನ್ನು ತೆಗೆದುಕೊಂಡಿದ್ದಾರೆ.

ಇನ್ನು ಹಾರಂಗಿ ಯೋಜನೆ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಸಾಯುವವನ ಬಾಯಿಗೆ ಮೂರು ಕಾಳು ನೀರು ಬಿಟ್ಟರು ಎಂಬ ಗಾದೆಯಂತೆ ಈ ಯೋಜನೆಗಾಗಿ 3 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಶ್ರೀ ಬಸಣ್ಣ ಎಂಬುವವರನ್ನು ಚೀಫ್ ಇಂಜನಿಯರ್ ಆಗಿ ಮಾಡಿದ್ದಾರೆ. ಇವರು ಹಾರಂಗಿ ಡಿವಿಜನನ್ನು ವೈಂಡ್‌ಅಪ್ ಮಾಡುವಂತೆ ಆ ಡಿವಿಜನ್ನಿನ ಸೂಪರಿಂಟೆಂಡಿಂಗ್ ಇಂಜನಿಯರ್‌ಗೆ ಕಾಗದ ಬರೆದಿದ್ದಾರೆ. ಅದೂ ಮಾರ್ಚ್ 15 ರೊಳಗೆ ಮಾಡಬೇಕೆಂದು ಕಾಗದ ಬರೆದಿದ್ದಾರೆ. ಈ ಡಿವಿಜನನ್ನು ಸಮಾಧಿ ಮಾಡುವ ಕೆಲಸವನ್ನು ಸರ್ಕಾರದವರು ಮಾಡುತ್ತಿದ್ದಾರೆ. ಬೀಸುವ ದೊಣ್ಣೆಯನ್ನು ತಪ್ಪಿಸಿಕೊಂಡರೆ ಸಾವಿರ ವರ್ಷ ಆಯುಸ್ಸು ಎಂಬ ಗಾದೆಯಂತೆ ನಮ್ಮ ಮುಖ್ಯಮಂತ್ರಿಗಳು ಈ ನದಿ ನೀರನ್ನು ಉಪಯೋಗಿಸುವ ಬಗ್ಗೆ ಎರಡು ಕಮಿಟಿಗಳನ್ನು ಮಾಡಿದ್ದಾರೆ.

ಒಂದು ರಿಸೋರ್ಸಸ್ ಕಮಿಟಿ, ಇನ್ನೊಂದು ಟೆಕ್ನಿಕಲ್‌ಗೆ ಸಂಬಂಧಪಟ್ಟ ಕಮಿಟಿ. ಟೆಕ್ನಿಕಲ್‌ಗೆ ಸಂಬಂಧಪಟ್ಟಂತೆ ಮೊನ್ನೆ ಒಂದು ಸಭೆ ಸೇರಿದ್ದರು. ಯಾವ ಒಂದು ಟರ್ಮ್ಸ್ ಆಫ್ ರೆಫರೆನ್ಸ್ ಕೂಡ ಇಲ್ಲದೆ ಯಾವ ರೀತಿ ಕಮಿಟಿ ನಡೆಸಿದರು, ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈ ಮನೆಯ 42 ಜನ ಮಾನ್ಯ ಸದಸ್ಯರುಗಳು ಕೊಟ್ಟ ಸೂಚನೆ ಪ್ರಕಾರ ಈ ಒಂದು ಕಮಿಟಿಯನ್ನು ಸರ್ಕಾರದವರು ಮೊನ್ನೆ ಕರೆದಿದ್ದರು. ಟರ್ಮ್ಸ್ ಆಫ್ ರೆಫರೆನ್ಸ್ ಇಲ್ಲದೆ ಮಾನ್ಯ ಸದಸ್ಯರು ಯಾವ ರೀತಿ ಈ ಕಮಿಟಿಗೆ ಮಾನ್ಯತೆ ಕೊಟ್ಟರೋ ನನಗೆ ಗೊತ್ತಾಗುತ್ತಿಲ್ಲ. ನಮ್ಮ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಸರ್ಕಾರದವರು ಯಾವ ಒಂದು ಗೌರ್ನಮೆಂಟ್ ಆರ್ಡರನ್ನೂ ಮಾಡದೆ ಮೊನ್ನೆ ಒಂದು ಇನ್‌ಕ್ಯಾಮರಾ ಮೀಟಿಂಗ್‌ನ್ನು ನಡೆಸಿದರು. ಇಂತಹ ಒಂದು ಸಭೆಗೆ ಮಾನ್ಯ ಸದಸ್ಯರು ಹೋಗಿದ್ದು ನನಗೆ ಆಶ್ಚರ್ಯವಾಗಿ ಕಾಣುತ್ತಿದೆ. ಈಗತಾನೆ ಮುಖ್ಯಮಂತ್ರಿಗಳು ಹೇಳಿದರು, ಹಾರಂಗಿ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರದ ಬಳಿ ಹಣವಿಲ್ಲದಿದ್ದರೆ ನಾವು ಒದಗಿಸುತ್ತೇವೆ ಎಂದು ಆ ಪ್ರದೇಶದ ನಿಯೋಗವೊಂದು ಬಂದು ತಮಗೆ ತಿಳಿಸಿದೆಯೆಂದು. ನನಗೆ ತಿಳಿದ ಮಟ್ಟಿಗೆ ಯಾರೂ ಆ ರೀತಿ ಬಂದಿರಲಾರರು ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ ಆ ಪ್ರದೇಶದಲ್ಲಿ 19 ಸಾವಿರ ಎಕರೆ ಜಮೀನು ಇದೆ. ಈ ಜಮೀನಿನಲ್ಲಿ ಎರಡು ಮೂರು ಎಕರೆ ಹೊಂದಿರುವವರೇ ಹೆಚ್ಚು ಜನರು ಇದ್ದಾರೆ. ಇಂತಹವರು ಈಗಾಗಲೇ ಎರಡು ಮೂರು ಸಾವಿರ ರೂಪಾಯಿಗಳನ್ನು ಸಾಲ ಮಾಡಿಕೊಂಡಿದ್ದಾರೆ. ಇಂತಹವರ ಹತ್ತಿರ ಯೋಜನೆ ಬಗ್ಗೆ ಅವರ ಜಮೀನನ್ನು ಯಾವುದಾದರೂ ಬ್ಯಾಂಕ್‌ಗೆ ಮಾರ್ಟ್‌ಗೇಜ್ ಮಾಡಿಸಿ ನಂತರ ಹಣವನ್ನು ಬಡ್ಡಿ ವಸೂಲು ಮಾಡಬೇಕಾಗುತ್ತದೆಯೇ ಹೊರತು ಅವರಾಗಿಯೇ ಮುಂದು ಬಂದು ಕೊಡುವ ಸ್ಥಿತಿಯಲ್ಲಿ ಇಲ್ಲ. ಹತ್ತಾರು ಎಕರೆ ಹೊಂದಿರುವವರು ಬೇಕಾದರೆ ಕೊಡಬಹುದು. ಇಂತಹವರು ಬಹಳ ಕಡಿಮೆ ಇದ್ದಾರೆ. ಇವತ್ತಿನದಿವಸ ಕೇಂದ್ರಸರ್ಕಾರದವರು ಬೇರೆ ರಾಜ್ಯಗಳಿಗೆ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಲು ಹಣ ಕೊಡುತ್ತಿದ್ದಾರೆ. ಟೆಕ್ನಿಕಲ್ ಕ್ಲಿಯರೆನ್ಸ್ ಇಲ್ಲದೆ ಕಟ್ಟುತ್ತಿರುವ ಯೋಜನೆಗಳಿಗೂ ಸಹ ಕೇಂದ್ರ ಸರ್ಕಾರದವರು ಹಣ ಸಹಾಯ ಮಾಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಕಟ್ಟಬೇಕೆಂದಿರುವ ಯೋಜನೆಗಳಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೂಡ ಕೊಡುತ್ತಿಲ್ಲ. It is the duty of the Government of India to finance our projects and also to give technical clearence. ಈ ಹಾರಂಗಿ ಯೋಜನೆ ಬಗ್ಗೆ ಹೇಳುವುದಾದರೆ ಸರ್ಕಾರದವರು ಜಾಗ್ರತೆ ಮಾಡಿ ಮುಗಿಸಿದರೆ ನಾಲ್ಕೂವರೆ ಪರ್‌ಸೆಂಟ್ ರೆವಿನ್ಯೂ ರಿಟರ್ನ್ ಬರುತ್ತದೆ. ಅದೂ ಅಲ್ಲದೆ ಕಡಿಮೆ ಖರ್ಚಿನಲ್ಲಿ ಆಗತಕ್ಕಂಥ ಪ್ರಾಜೆಕ್ಟ್. ಆಂಧ್ರದವರು ಮತ್ತು ಮದ್ರಾಸ್‌ನವರು ಈಗಾಗಲೇ ಅಕ್ರಮವಾಗಿ ಅನೇಕ ಯೋಜನೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಹೋಗಿ ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಅವಕಾಶವಿದ್ದರೂ ಸಹ ಯಾವ ಒಂದು ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಹಾರಂಗಿ ಯೋಜನೆ ಬಗ್ಗೆ ಸರ್ಕಾರದವರು ಇದೇ ಧೋರಣೆಯನ್ನು ಅನುಸರಿಸುವುದಾದರೆ ಬಹುಶಃ ನಾವು ಚಳುವಳಿ ಮಾಡಬೇಕಾಗುತ್ತದೆ. ಆ ಭಾಗದ ಅಚ್ಚುಕಟ್ಟುದಾರರಿಗೆ ಕಂದಾಯವನ್ನು ಸರ್ಕಾರಕ್ಕೆ ಕೊಡಬೇಡಿ ಎಂದು ಹೇಳಬೇಕಾಗುತ್ತದೆ. ಆ ಭಾಗದಲ್ಲಿ ಒಂದು ಲಕ್ಷದ 50 ಸಾವಿರ ಜನರು ಇದ್ದಾರೆ. ಈ ಯೋಜನೆಗೆ ಕೇವಲ ಮೂರು ಲಕ್ಷ ರೂಪಾಯಿಗಳನ್ನು ಒದಗಿಸಿರುವುದರಿಂದ ಅಸಹಕಾರ ಚಳುವಳಿಯನ್ನು ಹೂಡುವುದಕ್ಕೆ ಯಾವ ಯಾವ ರೀತಿ ಸಾಧ್ಯವಿದೆಯೋ ಅದನ್ನೆಲ್ಲಾ ಮಾಡಿಸುತ್ತೇನೆ. ಇಷ್ಟು ಅಲ್ಪ ಹಣವನ್ನು ಒದಗಿಸಿರುವುದನ್ನು ಕೊಡಗಿನ ಜನ ನೋಡಿ ಚೆಂಬು ಹಾಲನ್ನು ಕುಡಿಯುತ್ತಾರೆ. ಈ ಒಂದು ಮಂದಗತಿಯಲ್ಲಿಯೇ ಮುಂದುವರಿಸಿದರೆ ಕೊನೆಯದಾಗಿ ಅಲ್ಟಿಮೇಟಮ್‌ನ್ನು ಕೊಟ್ಟು ಚಳುವಳಿ ಹೂಡುತ್ತೇವೆಂದು ಹೇಳುತ್ತೇನೆ. ಇದಕ್ಕಾಗಿ ಸುಪ್ರೀಂ ಕೋರ್ಟಿಗೆ ಹೋಗಲೇಬೇಕಾಗುತ್ತದೆ ಎನ್ನುವ ಒಂದು ರೀತಿಯಾದ ಧೋರಣೆ ಬರುತ್ತಿದೆ. ಇದಕ್ಕಾಗಿ ನೀವು ಇಂದು ಕೇಂದ್ರ ಸರ್ಕಾರಕ್ಕೆ ಒಂದು ಎಚ್ಚರಿಕೆ ಕೊಡಬೇಕು. ಮದ್ರಾಸು ಸರಕಾರದವರು ಮಾಡುವ ಒಂದು ಅನ್ಯಾಯದಿಂದ ಮೈಸೂರು ಸರಕಾರಕ್ಕೆ ಅನ್ಯಾಯವಾಗುತ್ತದೆ. ಮದ್ರಾಸು ಸರಕಾರದವರು ಇರುವ ಅಗ್ರಿಮೆಂಟನ್ನೂ ಮೀರಿ ಅವರು ಎಲ್ಲ ಯೋಜನೆಗಳನ್ನೂ ಮಾಡಿಕೊಳ್ಳುತ್ತಿದ್ದಾರೆ. ನಮಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೂಡ ಇನ್ನೂ ಕೇಂದ್ರದವರು ಕೊಡಲಿಲ್ಲ.

You must ask them to explain. Can they have different standards to deal with different people?

ಮದ್ರಾಸಿನವರು ಮಾಡುತ್ತಿರುವ ಕೆಲಸಗಳಿಂದಾಗಿ ಮೈಸೂರಿಗೆ ಅನ್ಯಾಯವಾಗುತ್ತಿದೆ ರಾಜ್ಯಾಂಗಬದ್ಧವಾಗಿ ಎಲ್ಲ ರಾಜ್ಯ ಸರಕಾರಗಳು ಕೆಲಸ ಮಾಡಬೇಕು. ಹಾಗಿಲ್ಲದೇ ಇದ್ದರೆ ಇದರಿಂದೇನೂ ಆಗುವುದಿಲ್ಲ ಇದರಿಂದಾಗಿ ನಮ್ಮ ಕಾವೇರಿ ರೈಟ್ಸ್‌ಗಳು ಇಂದು ಹೋಗುತ್ತಿದೆ ಇದರಂತೆ ಕೃಷ್ಣಾ ನದಿಯ ರೈಟುಗಳೂ ಆಗುತ್ತಿವೆ.

(ಶ್ರೀ ಎಚ್. ಎನ್. ನಂಜೇಗೌಡ)

How can they discriminate from State to State ? With these words I conclude my speech.

†ಶ್ರೀ ಕೆ. ಹೆಚ್. ಶ್ರೀನಿವಾಸ (ಸಾಗರ).—ಸನ್ಮಾನ್ಯ ಅಧ್ಯಕ್ಷರೇ, 213.26 ಕೋಟಿ ರೂಪಾಯಿಗಳ ಆದಾಯ ಮತ್ತು 226.48 ಕೋಟಿ ರೂಪಾಯಿಗಳ ವೆಚ್ಚ ತತ್ಫಲವಾಗಿ 13.22 ಕೋಟಿ ರೂಪಾಯಿಗಳ ಖೋತಾ ಕಾಣಿಸಿರತಕ್ಕ ಆಯವ್ಯಯದ ಅಂದಾಜು ಪತ್ರವನ್ನು ನಾನು ಸ್ವಾಗತಿಸುತ್ತೇನೆ. ಇದನ್ನು ಈಗಾಗಲೇ ತಮ್ಮದೇ ಆದ ಒಂದು ಧಾಟಿಯಲ್ಲಿ ವಿಮರ್ಶೆ ಮಾಡುತ್ತಾ ಕೆಲವು ವಿಚಾರಗಳನ್ನು ಈ ಸಭೆಯ ಮುಂದೆ ನಮ್ಮ ವಿರೋಧ ಪಕ್ಷದ ನಾಯಕರು ಇಟ್ಟಿದ್ದಾರೆ. ರಾಜ್ಯದಲ್ಲಿ ಇಂತಹ ಒಂದು ಖೋತಾ ಪರಿಸ್ಥಿತಿ ಇರುವಾಗ ರಾಜ್ಯ ಸರಕಾರಕ್ಕೆ ಇರತಕ್ಕ ಋಣ ಬಾಧೆ ಹಾಗೂ ಏನು ಅಸೆಟ್ಸ್‌ಗಳಿರುತ್ತವೆ ಆ ಆಸ್ತಿಗಳ ಸ್ವರೂಪ ಹಾಗೂ ಆದಾಯಗಳ ಬಗ್ಗೆ ಬಹು ಕಟುವಾದ ಟೀಕೆಗಳನ್ನು ಮಾಡಿದ ಅವರ ಭಾಷಣವನ್ನು ನಾನು ಬಹಳ ಕುತೂಹಲದಿಂದ ಮತ್ತು ತಾಳ್ಮೆಯಿಂದ ಕೇಳಿದ್ದೇನೆ. ಅವರು ಇಲ್ಲಿ ಅರ್ಥ ಸಚಿವರಿಗೆ ಉತ್ತಮವಾದ ಸಲಹೆಗಳನ್ನು ಕೊಡುತ್ತಾರೆ ಎಂದು ಭಾವಿಸಿದ್ದೆ. ಇಂದಿನ ಪರಿಸ್ಥಿತಿಯಲ್ಲಿ ಅರ್ಥ ವ್ಯವಸ್ಥೆಯನ್ನು ಇನ್ನೂ ಉತ್ತಮಪಡಿಸಲು ಸಾಧ್ಯವಿದೆ ಎಂದು ಆಯವ್ಯಯ ಪತ್ರವನ್ನು ಸ್ವಾಗತಿಸಿ ಸಲಹೆಗಳನ್ನು ಕೊಟ್ಟಿದ್ದರೆ ನಾನೂ ಒಪ್ಪುತ್ತಿದ್ದೆ. ಆದರೆ ಅಂತಹ ಯಾವ ಕ್ರಿಯಾತ್ಮಕವಾದ ಸಲಹೆಗಳು ಅವರ ಭಾಷಣದಲ್ಲಿ ಬಾರದೆ ಇದ್ದುದು ವಿಷಾದಿಸತಕ್ಕ ಒಂದು ಅಂಶವಾಗಿದೆ. ಈವೊತ್ತು ಆಯವ್ಯಯ ಪತ್ರವನ್ನು ಮಂಡಿಸಿರತಕ್ಕ ಒಂದು ರಾಜ್ಯದ ಅರ್ಥ ಮಂತ್ರಿಗಳಿಗೆ ಒಂದು ಇತಿ ಮಿತಿ ಇರುತ್ತದೆ. ಆ ಮಿತಿಯೊಳಗೆ ಇರುವಾಗ ಇದಕ್ಕಿಂತ ಇನ್ನು ಉತ್ತಮವಾದ ಅರ್ಥ ವ್ಯವಸ್ಥೆಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ. ಇದಕ್ಕಾಗಿ ನಮ್ಮ ಅರ್ಥ ಮಂತ್ರಿಗಳು ಇಂದ್ರಜಾಲ್ ಮಾಡಿ ತೋರಿಸಲು ಸಾಧ್ಯವಿಲ್ಲ ಯಾವುದೇ ರೀತಿಯಲ್ಲಿ ಟ್ಯಾಕ್ಸ್‌ಗಳನ್ನು ಜಾಸ್ತಿ ಮಾಡಕೂಡದು ಎಂದು ಹೇಳುತ್ತಾರೆ. ಇಂಡಸ್ಟ್ರೀಸ್‌ಗಳನ್ನು ಮಾಡುವಾಗ ಇನ್ನೂ ಪ್ರಾಫಿಟಬಲ್ ಆಗಿ ಮಾಡಲು ಏನಾದರೂ ಕಾರ್ಯಕ್ರಮ ಮಾಡಿದರೆ ಅದು ಸೋಷಿಯಲಿಸಂ ಅಲ್ಲ ಎಂದು ಹೇಳಿಕೊಂಡು ಪ್ರತಿವರ್ಷವೂ ನಷ್ಟವಾಗುತ್ತಿದ್ದರೂ ಚಿಂತೆಯಿಲ್ಲ ಅಂತಹ ಇಂಡಸ್ಟ್ರೀಸ್‌ಗಳನ್ನು ನಡೆಸಿಕೊಂಡು ಹೋಗಬಹುದು ಎಂದು ಹೇಳುತ್ತಾ ಯಾವುದೇ ರೀತಿಯಾಗಿ ವ್ಯವಹಾರಿಕವಾಗಿ ಪ್ರಾಗ್‌ಮ್ಯಾಟಿಕ್ ಆಗಿ ಸೂಚನೆ ಕೊಡದೆ ಒಂದಕ್ಕೊಂದು ತದ್ವಿರುದ್ಧವಾಗಿರುವ ಸಲಹೆಗಳನ್ನು ಕೊಟ್ಟರೆ ಅದು ಯಾವ ರೀತಿಯಾಗಿ ಸಹಾಯವಾಗುತ್ತದೆ ಎಂದು ಇಲ್ಲಿ ನಾನು ಪ್ರಶ್ನೆ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಈವೊತ್ತು ಈ ದೇಶದಲ್ಲಿ ಸಾಲ ಮಾಡಬಾರದು, ದೇಶದ ಜನರ ಮೇಲೆ ಹೊಸ ಟ್ಯಾಕ್ಸ್‌ಗಳನ್ನು ಹಾಕಕೂಡದು ಎಂದರೆ ಈ ದೇಶದ ವ್ಯವಹಾರಗಳನ್ನು ಯಾವ ರೀತಿ ನಡೆಸುವುದಕ್ಕೆ ಸಾಧ್ಯ ? ಸರಕಾರದವರು ತಮ್ಮ ಅರ್ಥ ವ್ಯವಹಾರಗಳನ್ನು ರೂಢಿಸುವುದಕ್ಕಾಗಿ ಒಂದು ತೀರ್ಮಾನ ತೆಗೆದುಕೊಂಡು ಮಾಡುವಾಗ ಅದಕ್ಕೆ ಅನೇಕ ವಿಧವಾದ ಅಡ್ಡಿ ತಡೆಗಳು ಮುಂದೆ ಬರಬಹುದು. ಈಗ ಟ್ಯಾಕ್ಸು ಹಾಕಿರುವ ರೀತಿಯಲ್ಲಿ ಒಂದು ಕಡೆ ಜಾಸ್ತಿಯಾಗಿರಬಹುದು ಒಂದು ಕಡೆ ಕಡಿಮೆಯಾಗಿರಬಹುದು ಮತ್ತು ಅವರು ಅಗ್ರಿಕಲ್ಚರ್ ಸೆಕ್ಟರಿನಲ್ಲಿ ಟ್ಯಾಕ್ಸು ಹಾಕಲು ಅವಕಾಶವೇ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಪ್ಪು ಅರ್ಥ ಬರುವಂತೆ ಇಲ್ಲಿ ಹೇಳುತ್ತಿದ್ದಾರೆ. ಟ್ಯಾಕ್ಸ್ ಹಾಕಬೇಡಿ ಎಂದಲ್ಲ. ಸಾಲ ತೆಗೆದುಕೊಳ್ಳುವಾಗ ಸಾಲದ ಹೊರೆ ಹೆಚ್ಚಾಗಿ ಸಾಲದ ಬಡ್ಡಿಗೇ ನಮ್ಮ ಹಣ ಹೋಗುತ್ತದೆ ಅದರ ಬಗ್ಗೆ ಹೇಳುತ್ತಿದ್ದಾರೆ. ಇದರ ಬಗ್ಗೆ ತಾವು ಸ್ವಲ್ಪ ಹೇಳಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ.—ಸಾಲದ ಬಗೆಗೆ ಮತ್ತು ಅದರ ಮರುಪಾವತಿ ಬಗ್ಗೆ ಎಲ್ಲವನ್ನೂ ಪರಿಶೀಲನೆ ಮಾಡಿ ಸುಮಾರು ಐವತ್ತು ಕೋಟಿಯಷ್ಟು ಮರು ಪಾವತಿ ಮಾಡಿದ್ದಾರೆ ಮಾನ್ಯ ಆರ್ಥಿಕ ಸಚಿವರೇ ಡೆಟ್ ಸರ್ವಿಸಸ್ ಒಂದು ರೀತಿಯಾಗಿ ಅಲಾರ್ಮಿಂಗ್ ಆಗಿ ಇದೆ ಎಂದು ಒಪ್ಪಿಕೊಂಡಿದ್ದಾರೆ. ಸಾಲ ತೆಗೆದುಕೊಂಡ ಹಣವನ್ನು ಯಾವ ರೀತಿ ಖರ್ಚು ಮಾಡಿದ್ದಾರೆಂದು ಹೇಳುವಾಗ ಯಾವುದೋ ಮುರುಕು ಬಿಲ್ಡಿಂಗುಗಳಿಗಾಗಿ ಮತ್ತು ರಸ್ತೆಗಳನ್ನು ವಿಸ್ತಾರ ಮಾಡುವುದಕ್ಕಾಗಿ ಇಷ್ಟು ಲಕ್ಷ ಖರ್ಚು ಮಾಡುತ್ತಿದ್ದಾರೆ ಎಂದು ಹೇಳುತ್ತಾ ಹೋದರೆ ನಮ್ಮ ಸರಕಾರದ ಪ್ರಯತ್ನಗಳು ಅಯಶಸ್ವೀಯಾದೀತು. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಇಂತಹ ಅಂಕಿಗಳನ್ನು ಎಲ್ಲಿಂದ ತೆಗೆದು ಹೇಳಿದರೋ ಗೊತ್ತಾಗಲಿಲ್ಲ. ಬಜೆಟ್ಟಿನಲ್ಲಿರತಕ್ಕ ಅಂಕಿ ಸಂಖ್ಯೆಗಳ ಪ್ರಕಾರ ಡೆಟ್ ಸರ್ವಿಸಸ್‌ನಲ್ಲಿ 397.25 ಕೋಟಿಯಷ್ಟು ಇದೆ

ಮತ್ತು ಅದೇ ರೀತಿ ಅಸೆಟ್ಸ್‌ಗಳನ್ನು ನೋಡಿದರೆ ಸುಮಾರು 484.65 ಕೋಟಿಯಷ್ಟು ಇದೆ. ಅಸೆಟ್ಸ್‌ಗಳಲ್ಲಿ ದೊಡ್ಡ ಪ್ರಾಜೆಕ್ಟ್‌ಗಳು ಸರಕಾರದ ಕಟ್ಟಡಗಳು ಮತ್ತು ನ್ಯಾಷನಲ್ ಹೈವೇಸ್‌ಗಳು ಹಾಗೂ ಸೆಂಟ್ರಲ್ ಗವರ್ನಮೆಂಟು ಬಿಲ್ಡಿಂಗುಗಳು ಇವೆ ಎಂದು ಹೇಳುತ್ತಿರುವುದು ಅಷ್ಟು ಸರಿಯಲ್ಲ.

ಶ್ರೀ ಎಸ್. ಶಿವಪ್ಪ.—ಬಡ್ಜೆಟ್ ಮೆಮೊರ್ಯಾಂಡಂನಲ್ಲಿರುವ ಪುಟ 329 ರಿಂದ 330 ರ ವರೆಗೆ ತಾವೇ ಓದಿ ನೋಡಿ, ತಮಗೇ ಗೊತ್ತಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ.—ಸಾಲದ ಬಗ್ಗೆ ವಿಚಾರ ಮಾಡುವಾಗ ಇದರ ಬಗ್ಗೆ ಇಲ್ಲಿ ಸವಿಸ್ತಾರವಾಗಿ ಯೋಚನೆ ಮಾಡಬೇಕು. ನಮ್ಮ ದೇಶ ಬಹಳ ಹಿಂದುಳಿದಿದೆ. ಒಂದು ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕಾದರೆ ಸಾಲದ ಒಂದು ವ್ಯವಸ್ಥೆ ಇಲ್ಲದೆ ಅದನ್ನು ಸುಧಾರಿಸತಕ್ಕದ್ದು ಹೇಗೆ ಸಾಧ್ಯವಾಗುತ್ತದೆ. ಈವೊತ್ತು ನಮ್ಮ ದೇಶದಲ್ಲಿ ಕೋಟ್ಯಾಂತರ ಜನರ ಆಸ್ತಿ ಪಾಸ್ತಿಗಳಿರುತ್ತವೆ, ಅಥವಾ ವಿವಿಧ ಅಭಿವೃದ್ಧಿ ಸಂಸ್ಥೆಗಳು ಇರುತ್ತವೆ ಹಾಗೂ ತಾಲ್ಲೂಕು ಅಭಿವೃದ್ಧಿ ಸಂಸ್ಥೆಗಳು ಇರುತ್ತವೆ. ಇದೊಂದು ವಿಷ ವೃತ್ತ ಎಲ್ಲರಿಗೂ ಬಾಧಿಸುತ್ತಿದೆ. ಈ ವಿಷಸ್ ಸರ್ಕಲ್ ಹೇಗಿದೆ ಎಂದರೆ ಹುಚ್ಚು ಬಿಟ್ಟ ಹೊರತು ಮದುವೆಯಾಗುವುದಿಲ್ಲ ಮದುವೆ ಆಗದ ಹೊರತು ಹುಚ್ಚು ಬಿಡುವುದಿಲ್ಲ ಎಂತಾಗಿದೆ. ಹಣವಿಲ್ಲದೆ ಯಾವುದೇ ರಾಜ್ಯವನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ಇದನ್ನ ಮಾಡಲಿಕ್ಕೆ ಸಾಧ್ಯವಾಗಬೇಕಾದರೆ ಹಣದ ಶಕ್ತಿಯನ್ನು ಉತ್ತಮಪಡಿಸಬೇಕಾಗುತ್ತದೆ. ಇಂತಹ ಒಂದು ವಿಷ ವೃತ್ತವನ್ನು ಎದುರಿಸಬೇಕಾದಾಗ ಸಾಲ ಮಾಡುವುದು ಅನಿವಾರ್ಯವಾದೀತು. ಸರಿಯಾದ ಉದ್ದೇಶಕ್ಕಾಗಿ ಸಾಲ ಮಾಡಿ ಅದನ್ನು ಸರಿಯಾಗಿ ವೆಚ್ಚ ಮಾಡುತ್ತಾರೆ ಮತ್ತು ಹಾಗೆ ಮಾಡುವಾಗ ಅಂತಹ ವೆಚ್ಚವನ್ನು ಪ್ರಾಮಾಣಿಕವಾಗಿ ಮಾಡುತ್ತಾರೆಯೇ ಇಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು.

ಈ ದೃಷ್ಟಿಯಿಂದ ವಿಮರ್ಶೆ ಮಾಡಿದಾಗ ಮೈಸೂರು ರಾಜ್ಯದ ಸಾಲದ ಮತ್ತು ಆಸ್ತಿಯ ಸ್ಥಿತಿಗತಿಗಳ ಒಂದು ಪರಿಸ್ಥಿತಿಯನ್ನು ನೋಡಿದರೆ ಅದು ಸಂತೃಪ್ತಿಗೆ ಅವಕಾಶವಿಲ್ಲದಿದ್ದರೂ ಕೂಡ ಶ್ರೀಮಾನ್ ಶಿವಪ್ಪನವರು ಹೇಳಿದ ಒಂದು ದುಂದುಗಾರಿಕೆ ಪರಿಸ್ಥಿತಿಯಲ್ಲಿ ಏನೂ ಇಲ್ಲ. ಅದುದರಿಂದ ಅವರು ಹೇಳಿದುದು ವಾಸ್ತವಾಂಶವಲ್ಲವೆಂಬ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

6-30 P.M.

ಈಗ ಬಡ್ಜೆಟ್ಟಿನಲ್ಲಿ ಅತ್ಯಂತ ಸಂತೋಷಪಡಬೇಕಾದ ಒಂದು ವಿಚಾರ ಏನೆಂದರೆ ದಿ ಎಕ್ಸಿಸ್ಟಿಂಗ್ ಲೆವಲ್ ಆಫ್ ಟ್ಯಾಕ್ಸೇಷನ್‌ನಲ್ಲಿ ಈಗ ಇರತಕ್ಕಂಥಾ ತೆರಿಗೆಗಳ ಮೇಲೆಯೇ ನಮ್ಮ ಆದಾಯ 200 ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಹೋಗಿರತಕ್ಕಂಥಾದ್ದು ಮತ್ತು ಈಗಿರತಕ್ಕಂಥ ಟ್ಯಾಕ್ಸ್ ಕಲೆಕ್ಷನ್ ಮಟ್ಟದ ಪ್ರಕಾರ ಇಂಪ್ರೂವ್ ಮಾಡಬಹುದು. ಆ ಒಂದು ದೃಷ್ಟಿಯಿಂದ ಅತ್ಯಂತ ಸ್ವಾಗತಾರ್ಹವಾದುದು ಮತ್ತು ಸಂತೋಷಕರವಾದ ವಿಚಾರ. ಈಗ ಇರುವಂತೆ 13 ಕೋಟಿ ಚಿಲ್ಲರೆ ರೂಪಾಯಿಯ ಖೋತಾವನ್ನು ತೋರಿಸಿದ್ದಾರೆ. ಮತ್ತು ಎಕ್ಸಿಸ್ಟಿಂಗ್ ಲೆವಲ್ ಆಫ್ ಟ್ಯಾಕ್ಸೇಷನ್ ಒಳಗೆ ಹೊಸ ತೆರಿಗೆಗಳು ಏನೂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಇನ್ನೊಂದು ಕಡೆಯಲ್ಲಿ ಹೇಳುತ್ತಾರೆ ಟ್ಯಾಕ್ಸ್ ಮೂಲಕ ಹಣವನ್ನು ಒದಗಿಸಿಕೊಳ್ಳಬೇಕಾದರೆ ಅವಕಾಶವೂ ಇದೆ ಅದಕ್ಕೆ ಪ್ರಯತ್ನಮಾಡಬೇಕು ಎಂದು ಹೇಳಿದ್ದಾರೆ. ಅದಕ್ಕೋಸ್ಕರವಾಗಿ ಒಂದು ಸಮಿತಿಯನ್ನೂ ನೇಮಿಸಿದ್ದಾರೆ ಶ್ರೀ ಭೂತಲಿಂಗಂ ವರದಿಯ ಸಲಹೆಗಳ ಆಧಾರದ ಮೇಲೆ ಇರುವಂಥ ಟ್ಯಾಕ್ಸೇಷನ್ ಸ್ಟ್ರಕ್ಚರ್ ವ್ಯವಸ್ಥೆಯನ್ನು ಇನ್ನಷ್ಟು ವ್ಯವಸ್ಥೆಗೊಳಿಸಲು ಅಥವಾ ಹೊಸದಾಗಿ ಯಾವ ಟ್ಯಾಕ್ಸ್ ಪರಿಗಣಿಸಬೇಕು ಎಂದು ಹೇಳುವುದು ನೋಡಿದರೆ ಏನು ಟ್ಯಾಕ್ಸ್ ಬರಬಹುದು ಎನ್ನುವ ಸೂಚನೆ ಇದೆ.

> "There is very little scope for getting substantial revenue from direct taxation. Large investments have been made in the rural sector by way of large, medium and minor irrigation projects, irrigation wells, soil conservation, facilities of modern agricultural practices like supply of good seeds, fertilisers, tractors, rural electrification, etc. Supply of pumpsets and energising them have also contributed considerably to agricultural production. There is no doubt about the fact that all

(ಶ್ರೀ ಕೆ. ಎಚ್. ಶ್ರೀನಿವಾಸ)

these measures have generated considerable wealth and a section of agriculturists who have benefited to the maximum have almost escaped the proper incidence, incidence of taxation and their contribution to domestic savings is negligible. Since 1967 there has been an unhealthy tendency in several States to forego existing source of revenue and take certain expensive measures to earn easy propularity. This, apart from worsening the financial position of those States, will create problems for other States. If our object is to improve the economic condition of the people through planned development, it is inevitable that we must raise maximum possible resources and also educate the people to pay for the services rendered."

ಈ ವಾಕ್ಯಗಳು ನನ್ನ ದೃಷ್ಟಿಯಲ್ಲಿ ಒಂದು ಸ್ಪಷ್ಟವಾದ ಸೂಚನೆ. ಈ ವರ್ಷದ ಕೊನೆಯೊಳಗೆ ವ್ಯವಸಾಯಗಾರರು ಏನು ಇದ್ದಾರೆ ಅವರ ಮೇಲೆ ಒಂದು ತೆರಿಗೆಯ ಭಾರ ಬೀಳುತ್ತದೆ ಎನ್ನುವ ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೆ ಇದರ ಬಗ್ಗೆ ಅನೇಕರ ವಿರೋಧ ಇರುವುದು ನಿಜ. ಇದರಲ್ಲಿ ಎರಡು ದೃಷ್ಟಿಗಳುಇವೆ. ವ್ಯವಸಾಯಗಾರರ ಮೇಲೆ ಇನ್ನೂ ಹೆಚ್ಚಿಗೆ ತೆರಿಗೆ ಭಾರ ಹೊರಿಸುತ್ತಿದ್ದಾರೆ ಎನ್ನುವುದು ಒಂದು ಮತ್ತು ಅದರ ಬಗ್ಗೆ ಕಾಳಜಿ ಮಾಡುತ್ತಾ ಇಲ್ಲ. ಕೆಲವರಿಗೆ ಇದರಮೇಲೆ ಜೀವನ ಮಾಡಲು ಕಷ್ಟ ಇರುವಾಗ ಸ್ವಲ್ಪ ಜಾಸ್ತಿ ಹಣ ಕೊಡಲಿಕ್ಕೆ ಕೆಲವು ವ್ಯವಸಾಯಗಾರರಿಗೆ ಶಕ್ತಿ ಬಂದಿರಬಹುದು. ಅದನ್ನು ಹೇಳಲು ಬಯಸುವುದಿಲ್ಲ. ಆದರೆ ಇದಕ್ಕೆ ಒಂದು ಪ್ರಬಲವಾದ ವಿರೋಧವಿದೆ ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕಂಥವರು ಹೆಚ್ಚಿನ ವಿದ್ಯಾವಂತರೇ ಅಲ್ಲ ಅವಿದ್ಯಾವಂತರೂ ಇದ್ದಾರೆ. ಅಂಥ ಸಂದರ್ಭದಲ್ಲಿ ಅವರಿಗೆ ಈ ಕಿರುಕುಳದ ಬಾಧೆ ವಿಪರೀತವಾಗುತ್ತದೆ ಮತ್ತು ಈ ತೆರಿಗೆಯನ್ನು ವ್ಯವಸಾಯದ ವರಮಾನದಕ್ಷೇತ್ರದ ಮೇಲೆ ಏರಿಸುವಾಗ ಅದರ ತದ್ವಿರುದ್ಧವಾದ ಪರಿಣಾಮ ಉಂಟಾಗುತ್ತದೆ. ಆದುದರಿಂದ ಯಾವುದೇ ತೆರಿಗೆಹಾಕಬೇಕಾದರೂ ದೇಶದ ಹಿತದೃಷ್ಟಿಯಿಂದ, ಅನಿವಾರ್ಯವಾದ ಪಕ್ಷದಲ್ಲಿ ಕಿರುಕುಳ ಆಗದೇ ಇರತಕ್ಕಂಥ ತೆರಿಗೆಯನ್ನು ತರುವಂತೆ ಯೋಚಿಸಬೇಕು ಎಂದು ತೀವ್ರವಾಗಿ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಇನ್ನು ವೇತನ ಆಯೋಗದ ಶಿಫಾರಸ್ಸನ್ನು ಕಾರ್ಯಗತ ಮಾಡಬೇಕು ಎಂದರೆ ಈ ವರ್ಷ 22 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದನ್ನು ತಕ್ಷಣ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ 3–3¼ ಕೋಟಿ ರೂಪಾಯಿಯಲ್ಲಿ ಡಿ.ಎ., ಎಚ್.ಆರ್.ಎ. ಸಿ.ಸಿ.ಎ. ಇವುಗಳಿಗೆ ಸಂಬಂಧಪಟ್ಟ ಸೂಚನೆಗಳನ್ನು ಮಾನ್ಯ ಆರ್ಥಿಕ ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ಅದನ್ನು ಈ ಬಡ್ಜೆಟ್ಟಿನ ಅಂದಾಜಿನಲ್ಲಿ ತೋರಿಸಿಲ್ಲ. ಆರ್ಥಿಕ ಆಯೋಗದವರು ಕೊಡತಕ್ಕದ್ದು ಏನು ಇದೆ ಅದರಲ್ಲಿ ಕೂಡಿ ಬರುತ್ತದೆ. ಈ ಅಂಶವನ್ನೂ ಕೂಡ ಆರ್ಥಿಕ ಸಚಿವರು ತಿಳಿಸಿದ್ದಾರೆ. ಇದು ಕೂಡಿ ಬರುವುದು ಅಗತ್ಯ. ಅಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ಸುಧಾರಣೆ ಮಾಡುವುದಕ್ಕೆಆದಷ್ಟು ಜಾಗ್ರತೆಯಾಗಿ ಸೆಂಟ್ರಲ್ ಅವಾರ್ಡ್‌ನಿಂದ ಬರುವ ಸಹಾಯ ಏನು ಇದೆಯೋ ಅದನ್ನು ಫೈನಾನ್ಸ್ ಕಮೀಷನ್ನಿಂದ ಪಡೆಯುವುದಕ್ಕೆ ಪ್ರಯತ್ನಪಟ್ಟು ಅವರನ್ನು ಒತ್ತಾಯಪಡಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ದಿವಸ ಆಯೋಗದವರು ತಮ್ಮ ವರದಿಯಲ್ಲಿ ಕೆಲವೊಂದು ಸಂಪನ್ಮೂಲಗಳನ್ನು ಸೂಚಿಸಿದ್ದಾರೆ. ಅವುಗಳನ್ನು ಯಾವುದಾದರೂ ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೋ, ಯಾವುದನ್ನಾದರೂ ಕಾರ್ಯಗತ ಮಾಡಿದ್ದಾರೆಯೋ, ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವೇ, ಯಾವ ಅಭಿಪ್ರಾಯವನ್ನೂ ಕೂಡ ಈ ಬಡ್ಜೆಟ್ಟಿನ ಭಾಷಣದಲ್ಲಿ ತೋರಿಸಿಲ್ಲ. ಬಹುಶಃ ಆರ್ಥಿಕ ಸಚಿವರು ತಮ್ಮ ಉತ್ತರದಲ್ಲಾದರೂ ಪ್ರಸ್ತಾಪ ಮಾಡಬಹುದು ಎಂದು ನಾನು ನಂಬಿಕೊಂಡಿದ್ದೇನೆ. ಅದೂ ಅಲ್ಲದೆ ಆಯೋಗದವರು ಕೆಲವು ಸಿಬ್ಬಂದಿಗಳನ್ನು ಖೋತಾ ಮಾಡುವುದು ಮತ್ತು 5 ವರ್ಷದಲ್ಲಿ ಈಗ ಇರತಕ್ಕ ಸಿಬ್ಬಂದಿಯಲ್ಲಿ 20 ಪರ್ಸೆಂಟು ಖೋತಾ ಆಗಬೇಕು ಎಂದು ಸೂಚನೆ ಮಾಡಿದ್ದಾರೆ, ಅದಲ್ಲದೆ ಆಡಳಿತದ ಬಗ್ಗೆ ಅನೇಕ ಸುಧಾರಣೆಗಳನ್ನೂ ಕೂಡ ಮಾಡಿದ್ದಾರೆ. ಆಡಳಿತದ ಯಂತ್ರದಲ್ಲಿ ಈಗ ಇರುವ ಸ್ಥಿತಿಯಲ್ಲಿ ಯಾವುದೇ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಇದು ಒಂದು ಪ್ರೊಸೀಜರ್ ಬೌಂಡ್ ಆಗಿದೆ. ಒಬ್ಬ ಮನುಷ್ಯನು ಏನಾದರೂ ಒಂದು ರೆಪ್ರೆಸೆಂಟೇಷನ್ ಸಲ್ಲಿಸಿದರೆ

ರೆವಿನ್ಯೂ ಇನ್‌ಸ್ಪೆಕ್ಟರಿಗೆ ಹೋಗಿ ಒಂದೊಂದು ಮಟ್ಟದಲ್ಲೂ ರಿಪೋರ್ಟ್ ಹೋಗಿ ಬರಬೇಕು. ಈ ರೀತಿ ಪ್ರೊಸೀಜರ್ ಬೌಂಡ್ ಆಗಿರತಕ್ಕಂಥ ಆಡಳಿತ ಯಂತ್ರವನ್ನು ಸುಧಾರಿಸಲಿಕ್ಕೆ ಅನೇಕ ಸಲಹೆಗಳನ್ನು ಮಾಡಿದ್ದಾರೆ. ಅವರು ಏನು ಒಂದು ಸುಧಾರಣೆಯನ್ನು ಮಾಡಿದ್ದಾರೋ, ಸಿಬ್ಬಂದಿ ಖೋತಾ ಇವುಗಳನ್ನು ಖಡ್ಡಾಯವಾಗಿ ಜಾರಿಗೆ ತರಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ಮುಂದೆ ರಾಜ್ಯದ ಕೈಗಾರಿಕೆಗಳ ವಿಷಯವಾಗಿ ಒಂದು ಧೋರಣೆಯನ್ನು ಪ್ರಸ್ತಾಪ ಮಾಡಿರುವುದು ಈ ಒಂದು ಬಡ್ಜೆಟ್ ಭಾಷಣದಲ್ಲಿ ಬಂದಿದೆ. ಅದರಲ್ಲಿ ಒಂದು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಎಷ್ಟೇ ಲುಕ್ಸಾನು ಆದರೂ ಕೂಡ ಇದೇ ರೀತಿ ಕೈಗಾರಿಕೆಗಳಿಗೆ ಕೈ ಖರ್ಚಿನಿಂದ ಬೆಂಬಲ ಕೊಡುತ್ತಾ ಇರುವುದನ್ನು ಮುಂದುವರಿಸಬೇಕೇ, ಅಥವಾ ಈವೊತ್ತು ವ್ಯವಸಾಯಕ್ಕೆ ಆದ್ಯತೆ ಕೊಡಬೇಕಾಗಿರುವ ಪರಿಸ್ಥಿತಿ ಇರುವುದರಿಂದ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಡಬೇಕೇ ಎನ್ನುವ ಪರಿಸ್ಥಿತಿ ನಮ್ಮ ಮುಂದೆ ಇದೆ. ಇಂತಹ ಒಂದು ಸಂದರ್ಭದಲ್ಲಿ ಮದ್ರಾಸ್ ರಾಜ್ಯ ಏನು ಒಂದು ಈವೊತ್ತು ಸಾಧನೆ ಮಾಡಿದೆ ಎಂದರೆ ಕೈಗಾರಿಕೆಗಳಲ್ಲಿ ಪ್ರೈವೇಟ್ ಸೆಕ್ಟಾರಿಗೆ ಹೆಚ್ಚು ಪ್ರೋತ್ಸಾಹ ಕೊಡುವುದರ ಮೂಲಕ ಡೆವಲಪ್ ಮಾಡಿದೆ. ಮತ್ತು ಮದ್ರಾಸ್ ರಾಜ್ಯದಲ್ಲಿ ಶ್ರೀ ಆರ್. ವೆಂಕಟರಾಮನ್‌ರವರ ನೇತೃತ್ವದಲ್ಲಿ ನೇಮಿಸಿದ ಒಂದು ಸಮಿತಿಯಲ್ಲಿ ಈ ಕೈಗಾರಿಕೆ ಕ್ಷೇತ್ರ ಒಂದು ಬೆಳವಣಿಗೆ ಆಗಿ ಅದರ ಉತ್ಪತ್ತಿಯ ಹೆಚ್ಚಳವನ್ನು ಸಾಧನೆ ಮಾಡಿದೆ.

ಈವೊತ್ತು ಸಮಾಜವಾದ ಎನ್ನತಕ್ಕ ಮಾತನ್ನು ಮುಂದಿಟ್ಟು ಎಷ್ಟು ಲುಕ್ಸಾನಾದರೂ ನಮ್ಮ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗಬೇಕು ಎಂದು ಹೇಳಿದರೆ ಅದು ಸಮಾಜವಾದವಾಗಲಿಕ್ಕಿಲ್ಲ. ಅರ್ಥ ಸಚಿವರು ಪರೋಕ್ಷವಾದ ಧೋರಣೆಯಲ್ಲಿ ಏನೊಂದು ಸೂಚನೆಯನ್ನು ಇಟ್ಟಿದ್ದಾರೆ ಆ ಸೂಚನೆ ಬಹಳ ಅವಶ್ಯಕವಾದುದು ಎಂದು ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಒಂದು ಕೈಗಾರಿಕೆಯನ್ನು ಸರ್ಕಾರಕ್ಕೆ ಲಾಭದಾಯಕವಾಗಿ ನಡೆಸುವುದಕ್ಕೆ ಅಸಾಧ್ಯ ಅನ್ನಿಸುತ್ತದೆ ಅಂಥ ಕೈಗಾರಿಕೆಯನ್ನು ನಡೆಸುವುಧಕ್ಕೆ ಖಾಸಗಿ ಉದ್ಯಮಿಗಳಿಗೆ ಅವಕಾಶ ಮಾಡಿಕೊಡತಕ್ಕುದು, ಅವರಿಗೆ ಉತ್ತೇಜನ ಕೊಡತಕ್ಕುದು ಯಾವ ರೀತಿಯಿಂದಲೂ, ತಪ್ಪಾದ ಕೆಲಸವಾಗಲಾರದು ಏಕೆಂದರೆ ಈವೊತ್ತು ನಾವು ಕೈಗಾರಿಕೆಗಳನ್ನು ನಡೆಸಬೇಕು ಎಂದರೆ ನಮ್ಮ ಸರ್ಕಾರಿ ಯಂತ್ರದ ಮೂಲಕ ನಡೆಸುವುದಕ್ಕೆ ಪ್ರಯತ್ನ ಪಡಬೇಕಾಗುತ್ತದೆ. ಕೈಗಾರಿಕೆಗಳನ್ನು ನಡೆಸುವುದಕ್ಕೆ ವಿಶೇಷವಾಗಿ ಬೇಕಾದ ಆಡಳಿತ ಯಂತ್ರವನ್ನು ಸರ್ಕಾರ ಸಿದ್ಧಮಾಡಿಕೊಳ್ಳಲಿಕ್ಕೆ ಈ 20 ವರ್ಷಗಳಲ್ಲಿ ಆಗಿಲ್ಲ ಮತ್ತು ಇರುವಂಥ ಆಡಳಿತ ಯಂತ್ರ ಸರ್ವೇಸಾಮಾನ್ಯವಾದ ಆಡಳಿತವನ್ನು ನಡೆಸುವುದಕ್ಕೇ ಕಷ್ಟವಾಗಿರುವ ಕಾಲದಲ್ಲಿ ಇಂಥ ಸೂಕ್ಷ್ಮವಾದ, ಜಟಿಲವಾದ, ಲಾಭನಷ್ಟ ಪ್ರತಿ ದಿವಸದ ವ್ಯವಹಾರ ಎನ್ನತಕ್ಕ ಕೈಗಾರಿಕೆಗಳನ್ನು ಸರ್ಕಾರ ನಡೆಸಬೇಕು ಎಂದರೆ ಅದು ಕಷ್ಟವಾಗುತ್ತದೆ, ಅದು ಸಾಧ್ಯವಾಗುವುದಿಲ್ಲ, ಅವ್ಯವಹಾರಿಕವಾಗುತ್ತದೆ. ಅದಕ್ಕಾಗಿ ಬದಲಾವಣೆಯಾದರೆ ಒಳ್ಳೆಯದು.

ವಿದ್ಯಾಭ್ಯಾಸದ ವಿಷಯವಾಗಿ ವೆಚ್ಚ ಹೆಚ್ಚತಕ್ಕದ್ದು ಸಹಜವಾಗಿದೆ. ವಿದ್ಯಾಭ್ಯಾಸದ ಹೆಚ್ಚಳ ಬಹುಶಃ ಅಗಾಧವಾದ ರೀತಿಯಲ್ಲಿ ಸಾಧನೆಯಾಗಿದೆ. ವಿದ್ಯಾರ್ಥಿಗಳು ಈವೊತ್ತು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು, ಡಿಗ್ರಿಗಳನ್ನು ಪಡೆದುಕೊಂಡು ಹೊರಗೆ ಬರುತ್ತಿದ್ದಾರೆ. ಅವರು ಈವೊತ್ತು ನಿರುದ್ಯೋಗದ ಸ್ಥಿತಿಯನ್ನು ಎದುರಿಸಬೇಕಾಗಿದೆ. ಫಸ್ಟ್‌ಕ್ಲಾಸ್ ಇಂಜಿನಿಯರಿಂಗ್ ಗ್ರ್ಯಾಜುವೇಟುಗಳು ನಿರುದ್ಯೋಗ ಸ್ಥಿತಿಯಲ್ಲಿ ಅಲೆದಾಡುತ್ತ ಇದ್ದಾರೆ. ಅಂಥ ಪರಿಸ್ಥಿತಿ ಬಂದಿದೆ ಎಂದರೆ ನಿರುದ್ಯೋಗದ ಪ್ರಮಾಣ ಯಾವ ಮಟ್ಟದಲ್ಲಿದೆ ಎನ್ನುವುದನ್ನು ನಾವು ಊಹಿಸಿಕೊಳ್ಳಬಹುದು. ಕಳೆದ ಸಾರಿ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ 'ಇಂಡಿಯಾ ಓವರ್ ಟೂ ಡಿಕೇಡ್ಸ್' ನೋಡಲು ಹೋಗಿದ್ದಾಗ ಅಲ್ಲಿ ಇಬ್ಬರು ಸ್ನೇಹಿತರು, ಫಸ್ಟ್‌ಕ್ಲಾಸ್ ಇಂಜಿನಿಯರಿಂಗ್ ಗ್ರ್ಯಾಜುವೇಟ್ಸ್ ಸಿಕ್ಕಿದರು. ಬಹುಶಃ ಅವರೂ ನೋಡಲು ಬಂದಿದ್ದಾರೆ ಎಂದು ನನ್ನ ಭಾವನೆ ಇತ್ತು. ಕೊನೆಗೆ ಬಹಳ ವಿಷಾದಪೂರ್ವಕವಾಗಿ ನಾನು ತಿಳಿದುಕೊಳ್ಳಬೇಕಾಯಿತು, ಅವರು ಕೆಲಸವಿಲ್ಲದ ಕಾರಣದಿಂದ ದಿವಸಕ್ಕೆ ಐದು ರೂಪಾಯಿ ಕೂಲಿ ಮೇಲೆ ಕೆಲಸಕ್ಕೆ ಸೇರಿಕೊಂಡಿದ್ದಾರೆ ಎಂದು. ಇಂಥ ಪದವಿಗಳನ್ನು ಪಡೆದೂ ನಿರುದ್ಯೋಗಿಗಳಾಗಿರುವ ಪರಿಸ್ಥಿತಿ ಬಂದಿದೆ. ಇದು ನಮ್ಮ ವಿದ್ಯಾಭ್ಯಾಸದಲ್ಲಿರುವ ಒಂದು ದೋಷದ ಕಡೆಗೆ ಬೆಟ್ಟುಮಾಡಿ ತೋರಿಸುತ್ತದೆ.

ಇನ್ನೊಂದು ವಿದ್ಯಾವಂತ ಯುವಜನರಲ್ಲಿ ಸಹನೆ ತಪ್ಪಿ ಹೋಗುತ್ತಿದೆ. ಯಾವುದೇ ವಿಷಯದ ಬಗ್ಗೆ ಹೆಚ್ಚು ತಾಳ್ಮೆ ಇಲ್ಲದೆ ತಾಳ್ಮೆಗೆಟ್ಟು ದೇಶದ ತುಂಬ ಅಶಾಂತಿ ಅಷ್ಟೇ ಅಲ್ಲ ದೇಶದ ಅಮೂಲ್ಯವಾದ ಆಸ್ತಿಪಾಸ್ತಿಗಳನ್ನು ನಷ್ಟ ಮಾಡುವಂಥ ಸತತವಾದ ಚಳುವಳಿ ದೊಡ್ಡ ಸಾಂಕ್ರಾಮಿಕ ಜಾಡ್ಯದಂತೆ ಎದ್ದು ಕಾಣುತ್ತಿದೆ. ವಿದ್ಯಾಭ್ಯಾಸ ಬರೀ ಹೆಚ್ಚು ಮಾಡಿದರೆ

(ಶ್ರೀ ಕೆ. ಎಚ್. ಶ್ರೀನಿವಾಸ)

ಸಾಲದು. ಅದರ ಕ್ವಾಲಿಟಿ ಇಂಪ್ರೂವ್ ಆಗಬೇಕು ಎಂದು ಬಜೆಟ್ ಭಾಷಣದಲ್ಲಿ ತೋರಿಸಿರುವುದರ ಅವಶ್ಯಕತೆ ಸ್ಪಷ್ಟಪಡಿಸುತ್ತದೆ. ವಿದ್ಯಾಭ್ಯಾಸದ ಕ್ರಮವನ್ನು ಸ್ಟ್ರೀಮ್‌ಲೈನ್ ಮಾಡಬೇಕು ಮತ್ತು ವಿದ್ಯಾವಂತರಾಗಿರುವವರು ನಿರುದ್ಯೋಗಿಗಳಾಗಿ ಅಲೆದಾಡದೆ ಇರುವ ಪರಿಸ್ಥಿತಿ ನಿರ್ಮಾಣ ವಾಗಬೇಕು. ಅದೂ ಅಲ್ಲದೆ ವಿದ್ಯಾಭ್ಯಾಸಕಾಲದಲ್ಲಿ ದೃಢವಾದ ಜೀವನದ ಮೌಲ್ಯಗಳನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸ್ಥಾಪನೆ ಮಾಡುವುದರಿಂದ ದೇಶದಲ್ಲಿ ಕ್ರಿಯಾಶೀಲವಾದ ಸೇವೆಯನ್ನು ಸಲ್ಲಿಸುವಂಥ ಸತ್ಪ್ರಜೆಯಾಗುವಂಥ ಕ್ರಮವನ್ನು ವಿದ್ಯಾಭ್ಯಾಸದಲ್ಲಿ ಅಳವಡಿಸಬೇಕಾದ್ದು ಅತ್ಯಾವಶ್ಯಕ. ಇನ್ನೂ ತಡ ಮಾಡಿದರೆ ತಿದ್ದಿಕೊಳ್ಳಲಿಕ್ಕೆ ಸಾಧ್ಯವಾಗದೆ ಇರುವ ವಿಚಾರವಾದೀತು ಎಂದು ಸ್ಪಷ್ಟಪಡಿಸುತ್ತೇನೆ.

ವ್ಯವಸಾಯದ ಬಗ್ಗೆ ಕೆಲವು ವಿಷಯಗಳು. ವ್ಯವಸಾಯವನ್ನು ಸುಧಾರಣೆ ಮಾಡಬೇಕಾದರೆ ಶಾಶ್ವತವಾದ ನೀರಾವರಿ ವ್ಯವಸಾಯವನ್ನು ಆದಷ್ಟೂ ಹೆಚ್ಚು ಮಾಡಬೇಕು. ಶಾಶ್ವತವಾದ ನೀರಾವರಿಯನ್ನು ಜಾಸ್ತಿ ಮಾಡುವುದಕ್ಕೆ ನಮಗೆ ಸಹಜವಾಗಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಅಷ್ಟೊಂದು ನೀರಾವರಿಯನ್ನು ಸಾಧಿಸುವುದು ಸಾಧ್ಯವಿಲ್ಲ. ಸಾಧ್ಯವಿರುವುದರಲ್ಲಿಯೂ ಬಹಳ ಕನಿಷ್ಠ ಮಟ್ಟದಲ್ಲಿದ್ದೇವೆ. ಭಾರಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ನಮ್ಮ ಹತ್ತಿರ ಹಣವಿಲ್ಲ. ಮುಖ್ಯವಾಗಿ ಕೇಂದ್ರ ಸರ್ಕಾರದವರು ಮತ್ತು ಫೈನಾನ್ಸ್ ಕಮಿಷನ್—ತನ್ನ ಅವಾರ್ಡ್ ಕೊಡುವುದಿದೆ—ಅದು ಈ ಪರಿಸ್ಥಿತಿಯನ್ನು ತೀವ್ರವಾಗಿ ಗಮನಿಸದೆ ಹೋದರೆ ಕೇವಲ ನಮ್ಮ ಪ್ರಯತ್ನದಿಂದ ಅದನ್ನು ಸಾಧನೆ ಮಾಡಲಿಕ್ಕೆ ಸಾಧ್ಯವಿದೆ ಎಂದು ನನಗನ್ನಿಸುವುದಿಲ್ಲ, ಕೆಲವೊಂದು ಭಾರಿ ನೀರಾವರಿ ಯೋಜನೆಗಳಿಗೆ ವಿಶೇಷವಾದ ಸಹಾಯವನ್ನು ಕೇಂದ್ರ ಸರ್ಕಾರ ಮಾಡಬೇಕು. ಕೃಷ್ಣ ಬೇಸಿನ್‌ನಲ್ಲಿ ಅಥವಾ ಕಾವೇರಿ ಬೇಸಿನ್‌ನಲ್ಲಿ ಪ್ರಾಜೆಕ್ಟ್‌ಗಳಿಗೆ ಅವರು ನೆರವನ್ನು ಕೊಡಬೇಕಾಗಿದೆ. ಬ್ಯಾಂಕುಗಳು ಕೂಡ ಕೆಲವೊಂದು ಯೋಜನೆಗಳನ್ನು ಮುಂದಿಟ್ಟುಕೊಂಡು ಮುಂಗಡವಾಗಿ ಹಣವನ್ನು ಕೊಡತಕ್ಕ ಯೋಜನೆಗಳನ್ನು ಮುಂದಿಡುತ್ತಿವೆ. ಎಲ್ಲ ರೀತಿಯ ಪ್ರಯತ್ನಗಳನ್ನೂ ಮಾಡಿ ನೀರಾವರಿ ಜಮೀನುಗಳ ಹೆಚ್ಚಳವನ್ನು ನಾವು ಸಾಧಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ನಮಗೆ ಅತ್ಯಂತ ಹೆಚ್ಚಿನ ನೆರವು ನೀಡುವ ರೀತಿ ನಮಗೆ ಸಾಧ್ಯವಿರುವ ಒತ್ತಡವನ್ನು ತರಬೇಕೆಂದು ನಾನು ಸೂಚನೆ ಮಾಡುತ್ತೇನೆ.

ವ್ಯವಸಾಯಕ್ಕೆ ಸಂಬಂಧಪಟ್ಟಂತೆ ನಮ್ಮ ದೇಶದಲ್ಲಿ ಯಾವತ್ತಿಗೂ ದೃಢವಾದ ಪ್ರೈಸ್ ಪಾಲಿಸಿ ಇಲ್ಲ. ಕಳೆದ ವರ್ಷ ಮೇಜ್ ಎಲ್ಲಾ ಕಡೆಯೂ ಬೆಳೆಯುವುದಕ್ಕೆ ಹಚ್ಚಿದರು. ಇದ್ದಕ್ಕಿದ್ದಂತೆ ಬೆಲೆ ಕಡಮೆಯಾಯಿತು. ಈ ರೀತಿಯಿಂದ ಡೆಫಿನಿಟ್ ಪ್ರೈಸ್ ಪಾಲಿಸಿ ಇಲ್ಲದೆ ಹೋದರೆ ವ್ಯವಸಾಯಗಾರ ಬೆಳೆದುದಕ್ಕೆ ಅಗತ್ಯವಾದ ಪ್ರೈಸ್ ಸಪೋರ್ಟ್ ಕೊಡದೆ ಹೋದರೆ ವ್ಯವಸಾಯ ಕ್ಷೇತ್ರದಲ್ಲಿ ಏನು ಚೈತನ್ಯ ಕಂಡುಬಂದಿದೆ ಅದು ಬಹಳ ಬೇಗನೆ ನಿರುತ್ಸಾಹಕ್ಕೆ ತಿರುಗಬಹುದು ಎನ್ನುವ ಶಂಕೆಯನ್ನು ವ್ಯಕ್ತಪಡಿಸಿರುವುದು ಬಹಳ ವಾಸ್ತವಿಕವಾದ ವಿಚಾರ. ಅದರ ಬಗ್ಗೆ ಕಾರ್ಯಕ್ರಮಗಳಲ್ಲಿ ಕೂಡ ಕೆಲವೊಂದು ಸೂಚನೆ ಮಾಡಿದ್ದಾರೆ. ಮೈಜ್‌ನಿಂದ ಸ್ಟಾರ್ಚ್ ತಯಾರಿಸಲು ಒಂದು ಸ್ಟಾರ್ಚ್ ಫ್ಯಾಕ್ಟರಿ ಮಾಡಬೇಕೆಂದು ಕೂಡ ಇದರಲ್ಲಿ ಸೂಚನೆ ಮಾಡಿದ್ದಾರೆ. ಇಂಥ ಶ್ಲಾಘನೀಯವಾದ ಸೂಚನೆಗಳನ್ನು ನಾನು ಸ್ವಾಗತ ಮಾಡುತ್ತೇನೆ.

ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಮುಂದಿನ ವರ್ಷ ಯಾವ ಊರೂ ಕೂಡ ಕುಡಿಯುವ ನೀರಿನ ಅನುಕೂಲ ಆದಕ್ಕೆ ಇಲ್ಲದೆ ಇರುವುದು ಹೋಗಬೇಕು ಎನ್ನುವ ದೃಢ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ನಾನು ಅರ್ಥ ಸಚಿವರನ್ನು ಬಹಳ ಅಭಿನಂದಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಇದಕ್ಕೆ ಮುಂದಿನ ವರ್ಷ ಹೆಚ್ಚು ಗಮನ ಕೊಡುತ್ತೇವೆ, ಮುಂದಿನ ವರ್ಷ ಆದಷ್ಟು ಹಳ್ಳಿಗಳಿಗೆ ನೀರನ್ನು ಒದಗಿಸುತ್ತೇವೆ ಎಂದು ಹೇಳಿರುವುದಕ್ಕೆ ಹಣಕಾಸಿನ ಸಚಿವರ ಭಾಷಣದಲ್ಲಿ ಇದರ ಬಗ್ಗೆ ತೀವ್ರವಾದ ಕಾರ್ಯ ಕ್ರಮವನ್ನು ಯೋಚನೆ ಮಾಡಿರುವುದಕ್ಕೆ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ರೂರಲ್ ಎಲೆಕ್ಟ್ರಿಫಿಕೇಷನ್ ವಿಚಾರವಾಗಿ ಹೇಳಬೇಕಾದರೆ, ಈಹೊತ್ತು ನಮ್ಮ ವ್ಯವಸಾಯ ಕ್ರಾಂತಿಕಾರಕವಾಗಿ ಬದಲಾವಣೆ ಹೊಂದಬೇಕು ಎಂದು ಆದರೆ, ಹಳ್ಳಿಗಳಲ್ಲಿ ಕೂಡ ಕೈಗಾರಿಕೆಗಳು ಸ್ಥಾಪನೆಯಾಗಬೇಕಾದ ಅಗತ್ಯವಿದೆ ಎಂದಾದರೆ ಅದಕ್ಕೆ ಪೂರ್ವಭಾವಿಯಾಗಿ ರೂರಲ್ ಎಲೆಕ್ಟ್ರಿಫಿಕೇಷನ್ ಸಾಧಿಸಬೇಕಾದ್ದು ಅಗತ್ಯ. ಈ ದೃಷ್ಟಿಯಿಂದಲೂ ಕೂಡ ಮದ್ರಾಸು ಸರಕಾರ ಯಾವ ರೀತಿಯಲ್ಲಿ ಪ್ರಗತಿ ಸಾಧಿಸಿದೆ ಆ ಉದಾಹರಣೆಯನ್ನು ನಮ್ಮ ಸರಕಾರ ಎದುರಿಗೆ ಇಟ್ಟು ಕೊಂಡು ಇಲ್ಲೂ ಕೂಡ ಸರಿಯಾದ ರೀತಿಯಲ್ಲಿ ಕಾರ್ಯ ಮಾಡುತ್ತದೆ ಎಂದು ಆಶಿಸಿ ಇಷ್ಟು

—

ವಿಷಯ ಪ್ರಸ್ತಾಪಮಾಡಿ ಈ ರಾಜ್ಯದ ಈವರೆಗಿನ ಹಿನ್ನೆಲೆಯನ್ನು ನೋಡಿದರೆ ಈ ದಿವಸ ನಮ್ಮ ಮುಂದಿರುವ ಅನೇಕ ಸಮಸ್ಯೆಗಳು, ವ್ಯವಸಾಯಕ್ಕೆ, ಆಹಾರದ ಉತ್ಪತ್ತಿಗೆ ಅವಶ್ಯಕವಾದ ನೀರಾವರಿ ಯೋಜನೆಗಳಿಗೆ ಕೊಡಲಾಗಿರುವ ಆದ್ಯತೆ ಮುಂತಾದುವನ್ನೆಲ್ಲಾ ಪರಿಗಣಿಸಿದರೆ ಮತ್ತು ದೇಶದಲ್ಲಿ ಇಂದು ಆರ್ಥಿಕ ಪರಿಸ್ಥಿತಿ ಏನಿದೆ, ಜನರ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡಿದರೆ ನಮ್ಮ ಮುಂದಿಟ್ಟಿರುವ ಈ ಆಯವ್ಯಯ ಪತ್ರ ಬಹಳ ವಾಸ್ತವಿಕವಾದ ಅಂಶಗಳನ್ನು ಒಳಗೊಂಡಿದೆ, ಈಗಿರುವ ಕಠಿಣ ಪರಿಸ್ಥಿತಿಯಲ್ಲಿ ಶ್ಲಾಘನೀಯವಾದ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿದೆ ಎಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).— ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿನ ಮಾನ್ಯ ಅರ್ಥ ಸಚಿವರು ನಮ್ಮ ಮುಂದೆ ಮಂಡಿಸಿರುವ ಈ ಆಯವ್ಯಯಪಟ್ಟಿಯ ಬಗ್ಗೆ ಹೇಳ ಬೇಕಾದರೆ ಇದು ಬಹಳ ಬುದ್ಧಿವಂತಿಕೆಯಿಂದ ತಯಾರಿಸಿರುವ ವಿಂಡೋ ಡ್ರೆಸ್ಡ್ ಬಜೆಟ್ ಎಂದು ಹೇಳಿದರೆ ತಪ್ಪಾಗಲಾರದೆಂದು ನಾನು ತಿಳಿದಿದ್ದೇನೆ. ಇದರಲ್ಲಿ ಸಾಕಷ್ಟು ದಿವಾಳಿತನದ ಅಂಕಿಅಂಶ ಗಳಿದ್ದರೂ ಕೂಡ ಅದನ್ನು ಎಚ್ಚರಿಕೆಯಿಂದ ಮುಚ್ಚಿ ನಮ್ಮ ಮುಂದೆ ಒಂದು ನಾಜೂಕಾದ ಬಜೆಟ್ಟ ನ್ನಿಟ್ಟಿದ್ದಾರೆ. ಸುಖೀರಾಜ್ಯವನ್ನೊದಗಿಸುತ್ತೇವೆಂದು ಹೇಳುವವರು ಜನಸಾಮಾನ್ಯರಿಗೆ ಯಾವ ವಿಧವಾದ ಸುಖವನ್ನು ಉಂಟುಮಾಡಿಲ್ಲ. ಈಗ ಅಕ್ಕಿ, ಗೋದಿ, ರಾಗಿ, ಮುಂತಾದ ಪದಾರ್ಥಗಳ ಬೆಲೆ ದಿನದಿನಕ್ಕೆ ಏರುತ್ತಿದೆ, ಸಕ್ಕರೆ, ಕಾಫಿ, ಟೀ ಮೊದಲಾದುವುಗಳ ಬೆಲೆಯೂ ಏರುತ್ತಿದೆ. ಬಟ್ಟೆ ಬರೆಗಳ ವಿಚಾರ ಹೇಳುವುದಕ್ಕೇ ಸಾಧ್ಯವಿಲ್ಲ. ಮನೆ ಬಾಡಿಗೆ ಕಡಿಮೆಯಾಗಿಲ್ಲ ಪ್ರಯಾಣದ ವೆಚ್ಚ ದಿನದಿನಕ್ಕೆ ಏರುತ್ತಿದೆ, ವಿದ್ಯಾಭ್ಯಾಸಕ್ಕೆ ಹೆಸರಿಗೆ ಮಾತ್ರ 46 ಕೋಟಿ ರೂಪಾಯಿಗಳ ಖರ್ಚು ಉಚಿತ ಶಿಕ್ಷಣ, ಆದರೆ ವಿದ್ಯಾಭ್ಯಾಸದ ವೆಚ್ಚವೆಷ್ಟು, ಎಂಬುದು ಅದರ ಬಿಸಿ ತಗಲಿರುವ ತಂದೆ ತಾಯಿಗಳಿಗೆ ಗೊತ್ತು. ಹೀಗಿರುವಾಗ ಯಾವ ವಿಧವಾದ ಸುಖವನ್ನು ಕೊಡದಿರುವ ಈ ಬಜೆಟ್ಟನ್ನು ಹೇಗೆ ಸ್ವಾಗತಿಸಬೇಕು ಎಂಬುದರ ಬಗ್ಗೆ ಸ್ವಲ್ಪ ದೀರ್ಘವಾಗಿ ಯೋಚನೆಮಾಡಬೇಕಾಗಿದೆ. ಈಗ ಸುಮಾರು 13 ಕೋಟಿ ರೂಪಾಯಿ ಖೋತ ಇದೆ ಎಂದು ತೋರಿಸಿದ್ದಾರೆ. ಆದರೆ ಅವರು ಹೇಳುವ ಪ್ರಕಾರ ನಮ್ಮ ನೌಕರರಿಗೆ ಕೊಡಬೇಕಾದ ತುಟ್ಟಿಭತ್ಯ ಮತ್ತಿತರ ಸೌಕರ್ಯಗಳ ಬಗ್ಗೆ 3.25 ಕೋಟಿ ರೂಪಾಯಿ ಏನು ಬೇಕು ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಅದನ್ನು ಸೇರಿಸಿದರೆ ಸುಮಾರು 16.5 ಕೋಟಿ ಖೋತ ಆಗುತ್ತದೆ. ಮತ್ತು ಪ್ಲಾನ್‌ಗೆ ಸಂಬಂಧಪಟ್ಟಹಾಗೆ ಅನೇಕ ಸಂದರ್ಭಗಳಲ್ಲಿ ಹೆಚ್ಚಿನ ಬೇಡಿಕೆ ತೋರಿಸಿದ್ದಾರೆ. ಇದಕ್ಕೆ ಬೇಕಾಗಿರುವ ವರಮಾನವನ್ನು ಸೃಷ್ಟಿ ಮಾಡಿಲ್ಲ. ಆದುದರಿಂದ ಶಿವಪ್ಪನವರು ಹೇಳಿದಹಾಗೆ ಈಗಲೇ 30 ಕೋಟಿಗಿಂತ ಹೆಚ್ಚು ಖೋತ ಇದ್ದರೆ ಇದು ಸರಿಯಾದ ಬಜೆಟ್ಟೇ ಎಂದು ಸ್ವಲ್ಪ ಯೋಚನೆಮಾಡಬೇಕಾಗಿದೆ. ಇದರ ಜೊತೆಗೆ ಎಷ್ಟೋ ನನ್ನ ಕಾಂಗ್ರೆಸ್ ಮಿತ್ರರು ಸಾಲಸೋಲಗಳ ಬಗ್ಗೆ ಮತ್ತು ಖರ್ಚಿನ ಬಗ್ಗೆ ವಾದಿಸಿದರೂ ಕೂಡ ಈಗ ಇರುವ ಸಾಲಗಳಿಗೆ ಸುಮಾರು 20 ಕೋಟಿಯಷ್ಟು ಬಡ್ಡಿ ಕೊಡಬೇಕು ಮತ್ತು ಹೆಡಂಭೂತವಾದ ನೌಕರರ ಸಿಬ್ಬಂದಿಯನ್ನು ಬೆಳೆಸುತ್ತಿದ್ದಾರೆ. ಕೊಡುವ ಬಡ್ಡಿ, ಸಿಬ್ಬಂದಿ ಖರ್ಚು ಏರುತ್ತದೆ. ಇದನ್ನು ಲೆಕ್ಕಹಾಕಿದರೆ ನಮ್ಮ ದೇಶದ ಆಡಳಿತ ಯಾವ ಕಡೆಗೆ ಹೋಗುತ್ತಿದೆ ಎಂಬುದನ್ನು ದೀರ್ಘವಾಗಿ ಯೋಚನೆಮಾಡಬೇಕಾದ ಪರಿಸ್ಥಿತಿ ಇದೆ. ಇದು ಮಾಮೂಲ ಬಜೆಟ್. ನಮ್ಮ ಮುಂದೆ ಇದನ್ನು ಇಟ್ಟು ಒಪ್ಪಿಗೆ ಪಡೆಯುತ್ತಿದ್ದಾರೆ. ಮಕ್ಕೀಕಮಕ್ಕಿ ಬಜೆಟ್ ಇಟ್ಟು ವ್ಯವಹರಿಸುವ ಬಗ್ಗೆ ಸಂತೋಷ ಪಡಬೇಕಾಗಿಲ್ಲ.

ಅನೇಕ ಸದಸ್ಯರು ಅಮೂಲ್ಯ ಸಲಹೆಗಳನ್ನು ಕೊಡುತ್ತಾರೆ. ಆದರೆ ಹಿಂದೆ ಕೊಟ್ಟ ಸಲಹೆ ಗಳನ್ನು ಯಾವ ರೀತಿ ಗಮನಿಸಿದ್ದಾರೆ ಎಂಬುದಕ್ಕೆ ವಿವರ ಯಾವುದೂ ಕೊಟ್ಟಿಲ್ಲ. 45 ದಿನ ಬಜೆಟ್ ಪ್ರಸ್ತಾಪಮಾಡುತ್ತಾರೆ, ಡಿಮ್ಯಾಂಡುಗಳಿಗೆ ಅಂಗೀಕಾರ ಪಡೆಯುತ್ತಾರೆ, ಇಷ್ಟು ಹೊರತು ಸದಸ್ಯರು ಮಾಡಿರುವ ಸಲಹೆ ವಿಚಾರದಲ್ಲಿ ಕ್ರಮ ತೆಗೆದುಕೊಂಡಿರುವ ಬಗ್ಗೆ ವಿವರ ಕೊಡುತ್ತಿಲ್ಲ, ಇದು ಶೋಚನೀಯ. ಬೇರೆಬೇರೆ ವಿಚಾರಗಳನ್ನು ಮಾನ್ಯ ಮಿತ್ರರು ಹೇಳುವುದರಿಂದ ಈಗ ನಾನು 15 ಲಕ್ಷ ಪ್ರಜೆಗಳಿರುವ ಬೆಂಗಳೂರಿನ ನಾಗರೀಕರಿಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಮಾತ್ರ ಹೇಳುತ್ತೇನೆ, ಕ್ಷಮಿಸಬೇಕು. ಬೆಂಗಳೂರಿನ ನೀರು ಸರಬರಾಜಿಗೆ ಸುಮಾರು 194 ಲಕ್ಷ ಕೊಡು ತ್ತೇವೆಂದು ಹೇಳಿದ್ದಾರೆ. ಆದರೆ ರಿವೈಜ್ ಮಾಡಿರುವ ಯೋಜನೆ ಪ್ರಕಾರ ಈ ಬಾಬಿಗೆ 22.32 ಕೋಟಿ ಬೇಕು. 194 ಲಕ್ಷದಂತೆ ಪ್ರತಿ ವರ್ಷ ಕೊಡುವುದಾದರೆ ಬೆಂಗಳೂರಿನ ನೀರು ಯೋಜನೆ ಪೂರ್ಣವಾಗಲು 10 ವರ್ಷ ಬೇಕು. ಈಗ ಒಪ್ಪಿರುವ ಪ್ರಕಾರ ಇದಕ್ಕೆ ಬೇಕಾದ ಹಣಕ್ಕೆ ಬಡ್ಡಿ ಸಹ ಖರ್ಚಿನಲ್ಲಿ ಸೇರುವುದರಿಂದ ಅದಕ್ಕೆ 5 ಕೋಟಿಯಾಗುತ್ತದೆ. 10 ವರ್ಷ ಕಾಲ ತಡವಾಗುವುದ ರಿಂದ ನಾಗರೀಕರು ಬಹಳ ತೊಂದರೆಪಡಬೇಕಾಗುತ್ತದೆ. ಈಗ ಅದೃಷ್ಟವಶಾತ್ ಹೋದ ವರ್ಷ ಮಳೆ ಕೊನೆಯಲ್ಲಿ ಬಂದುದರಿಂದ ಈಗ ನೀರಿದೆ. ಮಳೆ ಬಾರದೆ ಹೋಗಿದ್ದರೆ ಈ ಅಧಿವೇಶನ

(ಶ್ರೀ ಟಿ. ಆರ್. ಶಾಮಣ್ಣ)

ನಡೆಸುವುದಕ್ಕೆ ಹಿಂದುಮುಂದು ನೋಡಬೇಕಾಗಿತ್ತು. 15 ಲಕ್ಷ ಪ್ರಜೆ ಇರುವ 46 ಚದರ ಮೈಲಿ ಇರುವ ದೊಡ್ಡ ನಗರ ನಿರ್ಮಾಣವಾಗುವುದಕ್ಕೆ ಎಲ್ಲರೂ ಕಾರಣರಾಗಿದ್ದಾರೆ. ಇದಕ್ಕೆ ಬೇಕಾದ ನೀರಿನ ಬಗ್ಗೆ ಅಲಕ್ಷ್ಯಮಾಡಿರುವುದು ನಿಜವಾಗಿಯೂ ಕೂಡ ಮೆಚ್ಚತಕ್ಕ ವಿಚಾರವಲ್ಲ. 1970 ನೆಯ ಇಸವಿಯಲ್ಲಿ ಈ ಕೆಲಸ ಷುರುವಾಗುತ್ತದೆ, ಹಿಂದುಮುಂದು ನೋಡಿ ನಿಧಾನವಾಗಿ ಕೆಲಸ ಆರಂಭಿಸುತ್ತಿದ್ದಾರೆ. ಇದರ ಬಗ್ಗೆ ತೀವ್ರವಾಗಿ ಕಾರ್ಯಕ್ರಮ ಕೈಗೊಳ್ಳದಿದ್ದರೆ ನಾಗರಿಕರಿಗೆ ಮಾತ್ರ ತೊಂದರೆಯಾಗುವುದಲ್ಲದೆ ಮೈಸೂರು ದೇಶದ ರಾಜಧಾನಿಯಾದ ನಗರದ ಬಗ್ಗೆ ಅಲಕ್ಷ್ಯ ಮಾಡಿದ್ದಾರೆಂದು ಬಹಳವಾಗಿ ಟೀಕೆಗೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಕೆ ಕೊಡಬೇಕಾಗಿದೆ.

ಬೆಂಗಳೂರಿನ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್ ಉತ್ತಮಪಡಿಸಲು ಹಣ ಒದಗಿಸಿರುವು ದಾಗಿ ತಿಳಿಸಿದ್ದಾರೆ. ಒಂದು ಕಡೆ ಹೀಗೆ ಹೇಳಿ ಮತ್ತೊಂದು ಕಡೆ ಈ ಉದ್ಯಾನಗಳ ಅನೇಕ ಭಾಗಗಳನ್ನು ಒತ್ತುವರಿ ಮಾಡಿ ಕಟ್ಟಡಗಳಿಗೆ ಜಾಗ ಕೊಡುತ್ತಿದ್ದಾರೆ; ರಿಸರ್ವ್ ಬ್ಯಾಂಕು, ಇಂಡಸ್ಟ್ರಿಯಲ್ ಮ್ಯೂಸಿಯಂ ಮುಂತಾದುವುಗಳನ್ನು ಕಟ್ಟಲು ಅವಕಾಶ ಕೊಟ್ಟು ಬೆಂಗಳೂರು ನಲ್ಲಿರುವ ಓಪನ್ ಸ್ಪೇಸ್ ಕಡಮೆಯಾಗುತ್ತಿದೆ ಹೀಗೆ ಮಾಡುವುದರಿಂದ ಇರುವ ಜಾಗ ಕಡಮೆ ಯಾಗುವುದೂ ಅಲ್ಲದೆ ಅಂದವೂ ಕೆಡುತ್ತದೆ ಮತ್ತು ಪಾರ್ಕುಗಳೆಲ್ಲಾ ಬಂಗಲೆಗಳಿಗೆ ಜಾಗವಾಗ ಬಹುದು. ಆದುದರಿಂದ ಒತ್ತುವರಿಗೆ ಅವಕಾಶ ಕೊಡದೆ ಪಾರ್ಕುಗಳನ್ನು ಬೆಳೆಸಬೇಕಾದುದು ಅವಶ್ಯಕ, ಬೆಂಗಳೂರಿನಲ್ಲಿ ಇನ್ನೂ ಅನೇಕ ಪಾರ್ಕುಗಳು ಮತ್ತು ತೋಟಗಳು ನಿರ್ಮಾಣವಾಗ ಬೇಕು. ಒಂದಾನೊಂದು ಕಾಲದಲ್ಲಿ ಬೆಂಗಳೂರನ್ನು ಗಾರ್ಡನ್ ಸಿಟಿ ಆಫ್ ಇಂಡಿಯ ಎಂದು ಹೇಳುತ್ತಿದ್ದರು. ಈಗ ಅದಕ್ಕೆ ಚ್ಯುತಿ ಬಂದಿದೆ. ಇದಕ್ಕೆ ಮುಖ್ಯವಾಗಿ ಬೇಕಾಗಿರುವುದು ನೀರಿನ ಸೌಕರ್ಯ. ಇದರ ಬಗ್ಗೆ ಸ್ವಲ್ಪ ಅನುಕೂಲಮಾಡಿಕೊಡಬೇಕು ಎಂದು ಹೇಳುತ್ತೇನೆ. ಈಗಾಗಲೇ ಎಸ್ಟಿಮೇಟ್ಸ್ ಕಮಿಟಿ ನೀರಿನ ರಿಯಾಯಿತಿಯ ವಿಚಾರದಲ್ಲಿ ಸೂಕ್ತವಾದ ಸಲಹೆಮಾಡಿದೆ, ಉಚಿತ ನೀರು ಸರಬರಾಯಿ ಮತ್ತು ದರದ ಬಗ್ಗೆ ಸ್ವಲ್ಪ ಚೌಕಾಸಿ ಮಾಡಿ ರಿಯಾಯಿತಿಯನ್ನು ಪ್ರಕಟಿಸಿ ದ್ದಾರೆ. ಅದಕ್ಕಾಗಿ ವಂದನೆಗಳು. ಆದರೆ ಈ ರಿಯಾಯಿತಿಗೆ ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್ ಕೊಡಬೇಕು. ಹಾಗೆ ಕೊಡುವ ವರೆಗೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಆದುದರಿಂದ ನೀರಿನ ರಿಯಾಯಿತಿಯನ್ನು ಹಿಂದಿನಿಂದ ಕೊಡುವುದಕ್ಕೆ ರಿಟ್ರಾಸ್‌ಪೆಕ್ಟಿವ್ ಎಫೆಕ್ಟ್ ಕೊಡುವುದಕ್ಕೆ ಅವಕಾಶಮಾಡಬೇಕು.

ಉಪಾಧ್ಯಕ್ಷರು.—ಈಗ ಒಂದು ವಿಷಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ಈಗ ಒಂದು ವಸ್ತುಪ್ರದರ್ಶನ ನಮ್ಮ ಅಧ್ಯಕ್ಷರು ಉದ್ಘಾಟಿಸುತ್ತಾರೆ, ಎಲ್ಲಾ ಮಾನ್ಯ ಸದಸ್ಯರು ಅಲ್ಲಿಗೆ ದಯಮಾಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಇಲ್ಲಿಗೆ ಸಭೆಯು ಮುಗಿದು ಮತ್ತೆ ಸಭೆ ನಾಳೆ ಒಂದು ಗಂಟೆಗೆ ಸೇರುವುದು.

The House adjourned at Seven of the Clock to meet again at One of the Clock on Wednesday, the 26th February 1969.

WD 12380—GPB—600—16-6-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 26th February 1969

The House met in the Assembly Chamber, Vidhana Soudha, Bangalore, at One of the Clock.

Mr. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Harijan Colony

20. SRI T. K. GANGI REDDY (Chintamani).—

Will the Minister for Revenue be pleased to state :—

(*a*) since how many years the acquisition proceedings in respect of Harijan Colony, Venkatagirikote in Chintamani Town is pending ;

(*b*) the number of families for which sites have been asked for constructing houses ;

(*c*) the population of the said colony ?

SRI H. V. KOUJALGI (Minister for Revenue).—

(*a*) Preliminary notification was published on 27th January 1966.

(*b*) 100 families.

(*c*) 488.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಚಿಂತಾಮಣಿ ಟೌನ್ ವೆಂಕಟಗಿರಿಕೋಟೆ ಹರಿಜನರ ವಸಾಹುತುವಿಗೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರಿಲಿಮಿನರಿ ನೋಟಿಫಿಕೇಷನ್ ಆಗಿದೆ ಎಂದು ಹೇಳಿದ್ದೀರಿ, ಇಂಥಾ ನೋಟಿಫಿಕೇಷನ್ ಎಷ್ಟು ಸಲ ಆಗಿದೆ ?

ಶ್ರೀ ಎಚ್. ವಿ. ಕೌಜಲಗಿ.—ದುರ್ದೈವದಿಂದ ಆ ಸ್ಕೀಮು ಎರಡು ಮೂರು ಸಾರಿ ಬದಲಾವಣೆಯಾಗಿ ತಡವಾಗಿದೆ.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಈಗಲಾದರೂ ಇನ್ನು ಅದನ್ನು ಬದಲಾವಣೆ ಮಾಡುವುದಿಲ್ಲ ಎಂದು ಭರವಸೆ ಕೊಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗ ನೋಟಿಫಿಕೇಷನ್ ಮಾಡಿರುವುದು ಸರಿಯಾಗಿ ವಿಚಾರ ಮಾಡಿ ಅಕ್ವೈರ್ ಮಾಡಬೇಕೆಂದು ಮಾಡಿದೆ, ಆ ಜಮೀನಿನವರು ಒಳ್ಳೆಯವರು ಅವರು ತಕರಾರು ಮಾಡುವುದಿಲ್ಲ, ಅವರು ಆ ಜಮೀನನ್ನು ಬಿಟ್ಟು ಕೊಡುತ್ತಾರೆ ಎಂದು ವರದಿಯಲ್ಲಿ ಬಂದಿದೆ.

Election to Belgaum Municipality

155. Sri B. B. SAYANAK (Belgaum).—

Will the Minister of State for Municipal Administration be pleased to state :—

(*a*) when the Government is going to hold elections to Belgaum City Municipality ;

(*b*) whether it is a fact that 3rd Jaunary 1968 is the last date of the Muoicipal Election in the State according to Mysore Municipal Act ;

(*c*) if so, the reason for the delay ?

Sri B. M. PATIL (Minister of State for Municipal Administration).—

(*a*) On 21st January 1969.

(*b*) No.

(*c*) Does not arise in view of reply to clause (*b*).

Sri B. B. SAYANAK.—I wish to know whether it is a fact that 3rd January 1969, and not 3rd January 1968, is the last date of the Municipal Election in the State according to Mysore Municipal Act ?

† Sri B. M. PATIL.—3rd January 1969 is the last date.

Sri B. B. SAYANAK.—Since the elections are over, I do not want to put further questions.

Supply of Power to Pump Sets

255. Sri H. PUTTADASA (Sathnur).—

Will the Chief Minister be pleased to state :—

(*a*) the number of pump sets already purchased and kept idle for want of servicing at Kallanakuppe, Banavasi, Hunasanahalli, Thatter-kere and Kotekoppa in Kanakapura Taluk, for the last 3 years ;

† Indicates that remarks or speeches have not been revised by the member concerned.

(b) whether Government in view of drought and distress condition in the Taluk would give special attention and top priority to these places in respect of supply of power ?

Sri D. PARAMESWARAPPA (Deputy Minister for Major Irrigation and Electricity).—

(a) The record regarding pump sets purchased by the parties is not maintained by the Mysore State Electricity Board.

(b) Special attention has been given to the condition of the Taluk while finalising revised programme for supply of power to irrigation pump sets during the current year.

ಶ್ರೀ ಎಚ್. ಪುಟ್ಟದಾಸ.—ಸ್ವಾಮಿ, ನಾನು ನನ್ನ ಪ್ರಶ್ನೆಯಲ್ಲಿ ಕನಕಪುರ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಪಂಪುಸೆಟ್ಟುಗಳನ್ನು ಕೊಂಡುಕೊಂಡಿದ್ದು ವಿದ್ಯುಚ್ಛಕ್ತಿ ಸರಬರಾಜು ಮಾಡದಿರುವುದರಿಂದಾಗಿ ಉಪಯೋಗಿಸದೇ ಇಟ್ಟುಕೊಂಡಿರುವ ಪಂಪುಸೆಟ್ಟುಗಳೆಷ್ಟು ಎಂದು ಕೇಳಿದ್ದಕ್ಕೆ ಪಂಪುಸೆಟ್ಟುಗಳನ್ನು ಕೊಂಡುಕೊಂಡ ವ್ಯಕ್ತಿಗಳ ಬಗ್ಗೆ ದಾಖಲು ಇಟ್ಟಿರುವುದಿಲ್ಲ ಎಂದು ಹೇಳಿದ್ದೀರಿ, ಈಗ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿ ಉಪಯೋಗಿಸತಕ್ಕ ಪಂಪುಸೆಟ್ಟುಗಳು ಎಷ್ಟು ಎಂಬುದನ್ನು ಹೇಳುತ್ತೀರಾ ?

Sri D. PARAMESWARAPPA.—The target that was fixed for Kanakapura Taluk, is 135 during the year 1968-69 and so far, up to the end of January 1969, 154 pumpsets have been serviced.

ಶ್ರೀ ಎಚ್. ಪುಟ್ಟದಾಸ.—ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ವಿಶೇಷ ಗಮನವನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ, ಎರಡು ಪೋಲುಗಳನ್ನು ಹಾಕಿ ನೀರಾವರಿ ಬಾವಿಗೆ ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥವುಗಳಿಗೂ ಪೋಲುಗಳಿಲ್ಲ ಎಂದು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ತಂಟೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ, ಅಂಥವುಗಳನ್ನು ತಮ್ಮ ಗಮನಕ್ಕೆ ತಂದರೆ ಅವರಿಗೆ ಬೇಗ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಕ್ಕೆ ತಾವು ಆದೇಶವನ್ನು ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಒಂದೆರಡು ಪೋಲುಗಳು ಬೇಕಾದಕಡೆ ಎಲೆಕ್ಟ್ರಿಸಿಟಿ ಬೋರ್ಡಿನವರು ಈಗಾಗಲೇ ಹಾಕಿ ಸರ್ವೀಸ್ ಕೊಟ್ಟಿದ್ದಾರೆ. ಅಂಥಾದ್ದು ಏನಾದರೂ ಉಳಿದದ್ದನ್ನು ಸರ್ಕಾರದ ಗಮನಕ್ಕೆ ತಂದರೆ ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಕನಕಪುರ ತಾಲ್ಲೂಕಿನಲ್ಲಿ ಪಂಪುಸೆಟ್ಟು ಕೊಟ್ಟಿರುವ ಕಡೆ ವಿದ್ಯುಚ್ಛಕ್ತಿ ಸರಬರಾಜು ಮಾಡಿಲ್ಲ. ಅಂಥಾದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಅಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ.

Famine Relief Measures

280. **Sri D. M. SIDDAIAH** (Biligere).—

Will the Minister for Revenue be pleased to state :—

(a) the amount spent for the famine relief measures in the State ;

(SRI D. M. SIDDAIAH)

(*b*) the amount spent in each Taluk in Mysore District; the number of works completed and the number of works, that are still to be completed;

(*c*) whether the Government would consider the necessity of completing the incomplete works, so that further relief may be provided for those who have no means of livelihood;

(*d*) whether Government have thought of providing some permanent relief in order to meet the challenge of vagaries of nature;

(*e*) if so, which are these and the measures taken to meet the demand?

SRI H. V. KOUJALGI (Minister for Revenue).—

(*a*) Rs. 8.10 crores as on 31st December 1968.

(*b*) The amount spent in each taluk up to 31st December 1968 is indicated in the Statement appended.

(1) Number of works completed up to 31-12-1968	...	1,481
(2) Number of works in progress	...	581

(*c*) Yes.

(*d*) Yes; a special initial programme involving an outlay of Rs. 20 crores has been sent to the Government of India.

(*e*) This comprises contour-bunding over about 4,00,000 acres, minor irrigation works to stabilise irrigation over about 15,000 acres and adding fresh irrigation for 4,000 acres, sinking 10,000 new irrigation wells, supply of 5,000 pump sets and energising 6,000 additional pump sets, purchase of twenty high speped rigs, and laying of 600 miles of inter-village communications, setting up 10 large Poultry Farms with subsidiary Units, and laying out Village Forests and fuel plantations, as also raising the number of beneficiaries from the present emergency feeding centres to 15 lakh persons from the present ceiling of 9 lakh persons.

STATEMENT

Showing the amount spent in each Taluk of Mysore District up to 31st December 1968.

Sl. No.	Taluka	"64 Famine Relief Works."	Agriculture Soil Conservation under "64 Famine Relief."	Public Works Department under "64 Famine Relief."
1	2	3	4	5
1	Mysore ...	4,10,307-76	1,38,500-00	1,24,094-00
2	Nanjangud ...	1,36,654-00	1,02,900-50	46,260-00
3	T. Narasipur ...	78,647-16	1,61,000-00	1,47,060-00
4	Chamarajanagar ..	1,68,238-93	56,824-66	3,34,075-00
5	Gundlupet ...	65,084-84	54,100-00	37,563-00
6	Kollegal ...	2,34,658-10	89,348-47	41,815-00
7	Yelandur ...	33,916-50	82,495-00	66,559-00
8	Heggadadevana-kote.	65,821-05	...	68,825-00
9	Hunsur ...	1,02,723-93	15,087-50	2,53,810-00
10	Periyapatna ...	1,61,227-00	15,162-50	1,88,887-00
11	K. R. Nagar ...	72,832-41	45,500-00	1,79,688-00
	Total ...	15,30,111-68	7,60,818-63	13,88,536-00

SRI D. M. SIDDAIAH.—The Hon. Minister is kind enough to reply that the number of works completed is 1481 and uncompleted works are 581. What is the amount required to complete these works?

SRI H. V. KOUJALGI.—We want to work up to a certain stage. We have called for the information and the definite amount is not before the House.

Sri D. M. SIDDAIAH.—It is stated in answer to (*d*) that a Rs. 20 crore programme has been sent to the Ceutral Government for seeking their help. What is the stage at which this Rs. 20 crore programme stands? The Minister has given very attractive items of work to have permanent famine relief. So, may I know at what stage is this programme involving Rs. 20 crores?

Sri H. V. KOUJALGI.—It is still under the consideration of the Government. Now it cannot be replied at what stage it is and when it will be finalised.

Sri SIDDIAH KASIMATH.—Will the amount earmarked for the incomplete works, be spent during 1969–70?

Sri H. V. KOUJALGI.—It will be spent only this year,

ಶ್ರೀ ಎಚ್. ಬಿ. ಜ್ವಾಲನಯ್ಯ.—ಕ್ಷಾಮಪರಿಹಾರದ ಬಗ್ಗೆ ಕೆಲವು ಕೆಲಸಗಳನ್ನು ತೆಗೆದು ಕೊಂಡಿದ್ದೀರಿ. ಹಾಸನ ಜಿಲ್ಲೆಯಲ್ಲಿ ಅದರಲ್ಲೂ ಹಾಸನ ತಾಲ್ಲೂಕ್‌ನಲ್ಲಿ ಮಳೆಬೆಳೆ ಇಲ್ಲದೆ ಜನರು ಆಹಾರವಿಲ್ಲದೆ ತೊಂದರೆಪಡುತ್ತಿದ್ದಾರೆ. ಆದ್ದರಿಂದ ಈ ಕಾಮಗಾರಿ ಕೆಲಸಗಳನ್ನು ಮತ್ತೆ ಪ್ರಾರಂಭ ಮಾಡುತ್ತೀರಾ?

Sri H. V. KOUJALGI.—I have already informed that incomplete works will be brought to some stage—not only in Hassan Taluk but in other parts of the State also.

Sri D. B. KALMANKAR.—Which are the districts that are going to be covered by this Rs. 20 crore programme?

Sri H. V. KOUJALGI.—The whole State.

Sri C. K. RAJAIAH SHETTY.—Is it a fact that the Government have sent a circular to all the Tahsildars to stop all these relief works immediately from 1st January 1969?

Sri H. V. KOUJALGI.—No Sir. For sometime the works were asked to be discontinued. But we have since given instructions to continue them. As I already said, just now the amount has also been disbursed.

ಶ್ರೀ ಬಿ. ಪರಮೇಶ್ವರಪ್ಪ.—ಮಳೆ ಬಂದಮೇಲೆ ಈ ಕೆಲಸಗಳನ್ನು ಪರಿಪೂರ್ಣವಾಗಿ ನಿಲ್ಲಿಸಿ ಬಿಟ್ಟಿದ್ದಾರೆ. ಇದರಿಂದ ಕೆಲವು ಕೆಲಸಗಳನ್ನು ಅರ್ಧದಲ್ಲಿ ನಿಲ್ಲಿಸಿದಂತಾಗಿದೆ. ಈ ಕೆಲಸಗಳನ್ನು ಪೂರ್ಣ ಮಾಡಲು ಹಣವಿಲ್ಲದೆ ತೊಂದರೆಯಾಗಿದೆ ಎಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ತಿಳಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. V. KOUJALGI.—I think my hon. friend did not catch my answer. Only two days' back we have given some amount.

Sri K. H. RANGANATH.—Out of this sum of Rs. 8.10 crores, what is the amount spent for the rural communcation roads?

Sri H. V. KOUJALGI.—If I am right, some booklet has been distributed to all the hon. Members giving details as to how this amount has been spent and what attempts have been made to give relief.

ಶ್ರೀ ಜಿ. ದುಗ್ಗಪ್ಪ.—ಈ ಕಾಮಗಾರಿ ಕೆಲಸಗಳನ್ನು ಮುಂದುವರಿಸುವ ಅಗತ್ಯ ಇದೆಯಾದ್ದರಿಂದ ಮತ್ತೆ ಹಣವನ್ನು ಒದಗಿಸಬೇಕೆಂದು ಚಿತ್ರದುರ್ಗದ ಜಿಲ್ಲಾಧಿಕಾರಿಗಳು ಸರ್ಕಾರವನ್ನು ಕೇಳಿದ್ದಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ಅವರು ಕೇಳುವುದಕ್ಕೆ ಮುಂಚೆಯೇ ಹಣವನ್ನು ಒದಗಿಸಿದ್ದೇವೆ.

Smt. WINNIFRED F. FERNANDES.—A sum of Rs. 8.10 crores has been spent. May I know how much has been spent in the South Kanara District for flood relief works ?

Sri H. V. KOUJALGI.—The question does not arise.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗ ಜಿಲ್ಲೆಗೆ ಎಷ್ಟು ಹಣವನ್ನು ಮತ್ತೆ ಒದಗಿಸಿದ್ದೀರಾ ?

Sri H. V. KOUJALGI.—The amount is always given to the Divisional Commissioner and he allots it to the various districts and the hon. Member can get the information in the concerned district.

Sri BAPU GOWDA.—May I know whether the Government could earmark to Districts where works are incomplete, to enable completion of works ?

Sri H. V. KOUJALGI.— Yes Sir. We want to bring all incomplete works to some definite stage. It is not only that, just the other day we have distributed some amount.

ಶ್ರೀ ಎಂ. ನಾಗಪ್ಪ.—ಕೆಲವು ಕಡೆಗಳಲ್ಲಿ ಬಾವಿಗಳನ್ನು ಮಾಡಿಸುವಾಗ ನೂರು ಬಾವಿ ಕೆಲಸ ಮಾಡಬೇಕು ಎಂದು ಕೆಲಸ ತೆಗೆದುಕೊಂಡು ಐವತ್ತು ಬಾವಿಗಳ ಕೆಲಸ ಮುಗಿದಿರುತ್ತವೆ. ಇನ್ನುಳಿಕೆಯಾದ ಐವತ್ತು ಬಾವಿಗಳ ಕೆಲಸವನ್ನು ಇನ್‌ಕಂಪ್ಲೀಟ್ ವರ್ಕ್‌ಗಳು ಎಂದು ತೆಗೆದುಕೊಳ್ಳುತ್ತೀರೋ ಇಲ್ಲವೇ ಬೇರೆ ರೀತಿ ಆರಂಭ ಮಾಡುತ್ತೀರೋ ?

ಶ್ರೀ ಹೆಚ್. ವಿ. ಕೌಜಲಗಿ.—ಇಂತಹ ಬಾವಿಗಳ ಬಗ್ಗೆ ಏನು ಮಾಡಬೇಕು ಎನ್ನುವುದು ಇನ್ನೂ ಸರಕಾರದ ವಿಚಾರದಲ್ಲಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಕ್ಷಾಮ ಪರಿಹಾರ ಕೆಲಸಗಳನ್ನು ಮಾಡುವ ಕೂಲಿಗಳಿಗೆ ಸ್ವಲ್ಪ ಜಾಸ್ತಿ ಕೂಲಿ ಕೊಡಲು ಆಗುವುದಿಲ್ಲವೇ ?

ಶ್ರೀ ಹೆಚ್. ವಿ. ಕೌಜಲಗಿ.—ರಿಲೀಫ್ ವರ್ಕ್ಸ್ ಕೆಲಸಗಳಲ್ಲಿ ಕೂಲಿ ಯಾವ ರೀತಿ ಕೊಡಬೇಕು ಎನ್ನುವುದಕ್ಕೆ ನಿಯಮ ಇದೆ. ಅದರ ಪ್ರಕಾರ ಕೊಡಲಾಗುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—8.10 ಕೋಟಿ ಕೊಟ್ಟಿರುವ ಹಣದಲ್ಲಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಕೊಡಲಾಗಿದೆ ?

ಶ್ರೀ ಹೆಚ್. ವಿ. ಕೌಜಲಗಿ.—ನಾನಾಗಲೇ ಹೇಳಿದೆ. ಇದರ ಮಾಹಿತಿಗಳ ಪಟ್ಟಿಯನ್ನು ಎಲ್ಲ ಸದಸ್ಯರಿಗೂ ಕೊಡಲಾಗಿದೆ. ಅದರಿಂದ ತಿಳಿಯಬಹುದು.

ಶ್ರೀ ಎನ್. ಎ. ಚನ್ನೇಗೌಡ.—ಕೂಲಿ ಹೆಚ್ಚು ಮಾಡುವುದಿಲ್ಲ ಎಂದು ಇಲ್ಲಿ ಕಳ್ಳ ಬಿಲ್ಲುಗಳನ್ನು ಮಾಡಿ ಹೆಚ್ಚು ಕೂಲಿ ಕೊಟ್ಟು ಕೆಲಸ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ವಿ. ಕೌಜಲಗಿ.—ಬಂದಿಲ್ಲ. ಹಾಗೆ ಇದ್ದರೆ ಅದನ್ನು ತಿಳಿಸಿದರೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ.—ಈ ರಿಲೀಫ್ ವರ್ಕ್‌ಗಳನ್ನು ಕಂಟ್ರಾಕ್ಟ್ ಮೂಲಕ ಮಾಡಿಸುತ್ತೀರಾ ಇಲ್ಲವೇ ಇಲಾಖೆ ಮೂಲಕ ಮಾಡುತ್ತಾರೆಯೇ ?

ಶ್ರೀ ಹೆಚ್. ವಿ. ಕೌಜಲಗಿ.—ಕೆಲವು ಕಡೆ ಟಿ ಡಿ ಬಿ ಮೂಲಕ ಮಾಡುತ್ತಾರೆ ಮತ್ತೆ ಕೆಲವು ಕಡೆ ಪಿ ಡಬ್ಲ್ಯು ಡಿ ಮೂಲಕ ಮಾಡಲಾಗುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ.—ಪಿ ಡಬ್ಲ್ಯು ಡಿ ನಲ್ಲಿ ಕೂಲಿ ಯಾವ ರೀತಿ ಕೊಡುತ್ತಾರೋ ಹಾಗೆ ರಿಲೀಫ್ ಕೆಲಸ ಮಾಡುವ ಕೂಲಿಗಳಿಗೂ ಹೆಚ್ಚು ಕೂಲಿ ಕೊಟ್ಟು ಅನುಕೂಲ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಹೆಚ್. ವಿ. ಕೌಜಲಗಿ.—ಇದಕ್ಕೆ ನಿಯಮಗಳಿವೆ, ಅದರ ಪ್ರಕಾರ ಕೊಡುತ್ತಾರೆ.

ಶ್ರೀ ಎಂ. ಮಲ್ಲಪ್ಪ.—ನಮ್ಮ ಜಿಲ್ಲೆಯಲ್ಲಿ 91 ಬಾವಿಗಳಿವೆ ಹಣ ಮಂಜೂರಾಗಿತ್ತು, ಇದರಲ್ಲಿ 27 ಬಾವಿಗಳು ಮುಗಿದಿವೆ. ಉಳಿಕೆ ಹಣ ಹಾಗೇ ಲ್ಯಾಪ್ಸ್ ಆಗುತ್ತದೆಯೇ ಹೇಗೆ?

ಶ್ರೀ ಹೆಚ್. ವಿ. ಕೌಜಲಗಿ.—ಇದು ಲ್ಯಾಪ್ಸ್ ಆಗುವುದಿಲ್ಲ. ಸ್ಕೇರ್ಸಿಟಿ ಕೆಲಸಗಳನ್ನು ತೆಗೆದು ಕೊಳ್ಳುವಾಗ ಇದನ್ನೂ ಸ್ಪೆಷಲ್ ವರ್ಕ್‌ಗಳಾಗಿ ತೆಗೆದುಕೊಳ್ಳಬೇಕು ಎನ್ನುವ ವಿಚಾರ ಇದೆ. ಇದರ ಬಗ್ಗೆ ಇನ್ನೂ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ನೀರಾವರಿ ಯೋಜನೆಗಳಲ್ಲದೆ ರಸ್ತೆ ಕೆಲಸಗಳನ್ನು ಮಾಡುವಾಗ ಹೊಸದಾಗಿ ಬೇರೆ ರಸ್ತೆ ಮಾಡಬಾರದು ಎಂದು ಒಂದು ಸರ್‌ಕ್ಯುಲರು ಹೊರಡಿಸಿದ್ದೀರಿ. ಹಾಗಾದರೆ ಹಿಂದೆ ಪೂರ್ತಿಯಾಗದೆ ಉಳಿದಿರುವ ರಸ್ತೆ ಹಾಗೂ ಬಾವಿ ಕೆಲಸಗಳನ್ನು ಯಾವ ರೀತಿ ಪೂರ್ತಿ ಮಾಡಬೇಕೆಂದು ಇದ್ದೀರಿ?

ಶ್ರೀ ಹೆಚ್. ವಿ. ಕೌಜಲಗಿ.—ಹೊಸದಾಗಿ ಯಾವ ಕೆಲಸವನ್ನು ಆರಂಭ ಮಾಡುವುದಿಲ್ಲ. ಉಳಿದಿರುವ ಕೆಲಸಗಳನ್ನು ಇನ್‌ಕಂಪ್ಲೀಟ್ ವರ್ಕ್‌ಗಳು ಎಂದು ಭಾವಿಸಿ ಕೆಲಸ ಮಾಡುತ್ತಾರೆ.

Inter State Permits for Transport Vehicles

305. Sri G. T. GOVINDA REDDY (Madhugiri).—

Will the Minitter for Transport be pleased to state :—

(*a*) the procedure followed in granting inter state permits to transport vehicles;

(*b*) whether it is a fact that the Commissioner has granted permits by getting the applications directly though there were applications with the District R.T.O.;

(*c*) whether it has come to their notice that by doing so injustice is being done to the applicants whose applications are in the District R.T.O's office?

Sri MOHAMED ALI (Minister for Transport).—

(*a*) The procedure followed for the grant of Inter-State permits in respect of Inter-State routes for transport vehicles is as prescribed in section 57 read with sections 47 and 63 of the Motor Vehicles Act, 1939.

(*b*) No.

(*c*) Does not arise in view of reply to clause (*b*) above.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—1968-69 ನೇ ಸಾಲಿನಲ್ಲಿ ಆಂಧ್ರದಿಂದ ಮೈಸೂರಿಗೆ ಹಾಗೂ ಮೈಸೂರಿನಿಂದ ಆಂಧ್ರಕ್ಕೆ ಎಷ್ಟು ಪರವಾನಗಿಗಳನ್ನು ಕೊಟ್ಟಿದ್ದೀರಿ?

ಅಧ್ಯಕ್ಷರು.—ಇಲ್ಲಿರುವ ಪ್ರಶ್ನೆ ಪ್ರೊಸೀಜರು ಬಗ್ಗೆ ಇದೆ. ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳುತ್ತಿದ್ದಾರೆ. ಇದು ಇಲ್ಲಿ ಬರುವುದಿಲ್ಲ. I disallow it.

ಶ್ರೀ ಸಿದ್ದಯ್ಯ ಕಾಶೀಮಠ್.—ಇಂಟರ್ ಸ್ಟೇಟ್ ಪರ್ಮಿಟ್ಟುಗಳಿಗಾಗಿ ಅನೇಕ ಅರ್ಜಿಗಳು ಬಂದಿವೆ. ಇವನ್ನು ಬೇಗನೆ ಮಂಜೂರು ಮಾಡಿಕೊಡುತ್ತೀರಾ?

Sri MOHAMED ALI.—Much depends upon the reciprocal agreement we enter into with the Andhra Pradesh Government. So far as the Mysore State is concerned, much of the border is sealed for inter-state

private stage carriages because of nationalisation of routes particularly after the routes in Kolar District.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಇಂಟರ್ ಸ್ಟೇಟ್ ಪರ್ಮಿಟ್‌ಗಳ ಪ್ರಕಾರ ನಮ್ಮ ಸ್ಟೇಟಿನವರು ಆಂಧ್ರದಲ್ಲಿ ಬಸ್ಸುಗಳನ್ನು ಓಡಿಸುವಾಗ ಅಲ್ಲಿ ಬೇರೆ ಒಂದು ರೇಟು ಇರುತ್ತದೆ. ಗಡಿ ಭಾಗದಲ್ಲಿ ಬೇರೆ ರೇಟುಗಳಿರುತ್ತವೆ. ನಮ್ಮ ಬಸ್ಸುಗಳನ್ನು ಆಂಧ್ರದವರು ಇಲ್ಲಿ ಓಡಿಸುವಾಗ ಎಷ್ಟು ರೇಟು ಕೊಡಬೇಕೆಂದು ಮಾಡಿದ್ದಾರೆ ?

Sri MOHAMED ALI.—The agreement is that when our buses enter Andhra Pradesh we have to follow our own rules and when the Andhra Pradesh buses enter Mysore State they will follow their own rules.

Sri G. CHANDRAKANTH.—While granting inter-State permits, the Government of Andhra Pradesh has not kept up its promise under the reciprocal agreement.

Sri MOHAMED ALI.—There was some difficulty in ratifying the agreement which has been arrived at by the Commissioners of both the States because according to the agreement the proposal was to allow the operators of Andhra Pradesh to operate on the nationalised routes which is not permissible according to the Law and as per rulings of the High Court and the Supreme Court.

Sri G. CHANDRAKANTH.—Is it not a fact that only Andhra Pradesh buses are coming to the Mysore State and that Mysore State buses are not plying in Andhra Pradesh ?

Sri MOHAMED ALI.—That is not correct.

Sri M. S. KRISHNAN.—Has it come to the notice of the Government that a graded mamool has been fixed by the Commissioner and other authorities in the matter of granting inter-State permits ?

Sri MOHAMED ALI.—No such thing has come to the notice of the Government.

Seniority List in Agricultural Department

367. Sri S. R. BOMMAI (Kundagol).—

Will the Minister for Agriculture be pleased to state :—

(*a*) whether the Seniority List in the Agricultural Department is finalised and given effect ;

(*b*) if not, the reasons for the delay ?

Sri B. RACHAIAH (Minister for Agriculture).—

(*a*) Out of fifteen Cadres 14 is finalised.
Fieldmen is yet to be finalised.

Of these 14 final Inter State Seniority lists 13 have been implemented and one list pertaining to Agricultural Demonstrators is not yet implemented.

(SRI B. RACHAIAH)

(*b*) The question of implementing the final I. S. S. list of Agricultural Demonstrators is under the consideration of Government in the light of the orders passed by the Supreme Court in the case of Shri Shankaraiah and others. The I. S. S. list of Field Assistants and Fieldmen could not be finalised as orders of High Court are awaited on a memo filed by the State Government to discharge the writs issued in two writ cases.

SRI S. R. BOMMAI.—The Inter-State Seniority List was published by the Government of India in 1967. May I know why it has not been implemented so far ?

SRI B. RACHAIAH.—Subsequenly there was some decision of the Supreme Court that the list published by the Government of India is to be treated as a proposal and that the people who are aggrieved by the list should be given an opportunity to send review petitions.

SRI S. R. BOMMAI.—When were the review petitions disposed of ?

SRI B. RACHAIAH.—They are being sent to the Government of India.

ಶ್ರೀ ಸಿದ್ದಯ್ಯ ಕಾಶೀಮಠ್.—ಸ್ವಾಮಿ, ಎರಡು ವರ್ಷದಿಂದಲೂ ಫೀಲ್ಡ್‌ಮನ್‌ಗಳ ಬಗ್ಗೆ ಸೀನಿಯಾರಿಟಿ ಲಿಸ್ಟನ್ನು ಅಂತಿಮಗೊಳಿಸದೇ ಇರುವುದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಅದನ್ನು ಏನಾದರೂ ಶೀಘ್ರ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI B. RACHAIAH.—So far as the implementation of the Inter-State Seniority List of Fieldmen is concerned, there are two writ petitions in the High Court and we have moved the High Court to vacate the stay order. After the High Court takes a decision, this will be implemented.

SRI C. K. RAJAIAH SHETTY.—In most of the departments so far as the question of Seniority List is concerned, there will be so many writ petitions. Do Government consider the desirability of appointing a committee with one of the High Court judges as Chairman to solve the problem of Inter-State Seniroity List ?

SRI B. RACHAIAH.—That may not be possible according to the existing rules.

SRI S. R. BOMMAI.—Has any stay order been issued by the Government of India on the review petitions ?

SRI B. RACHAIAH.—No such stay order has been issued.

SRI S. R. BOMMAI.—Then, why should not the Goverument implement the list ?

SRI B. RACHAIAH.—In a similar case the Supreme Court has given the decision that this list should be treated as a proposal and that the aggrieved people should be given an opportunity to send reveiw petitions. Naturally, Government will have to give opportunity in all other departments also.

ಶ್ರೀ ಬಿ. ನಂಜಪ್ಪ.—ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರ ಸೀನಿಯಾರಿಟಿ ಪಟ್ಟಿಯನ್ನು ಸರ್ಕಾರದಿಂದ ಕಳಿಸಿದ್ದರೂ ಕೂಡ ಡೈರೆಕ್ಟರವರು ಅದನ್ನು ಕಾರ್ಯಗತ ಮಾಡುತ್ತಿಲ್ಲ ಎನ್ನುವುದು ನಿಜವೇ ?

ಶ್ರೀ ಬಿ. ರಾಚಯ್ಯ.—ಈಗ 14 ಕೇಡರ್ಸ್ ಫೈನಲೈಜ್ ಮಾಡಿದ್ದೇವೆ, 13 ಇಂಪ್ಲಿಮೆಂಟ್ ಆಗಿದೆ. ಫೀಲ್ಡ್‌ಮನ್ ಮತ್ತು ಡೆಮಾನ್‌ಸ್ಟ್ರೇಟರ್ ಇವರುಗಳಿಗೆ ಸಂಬಂಧಪಟ್ಟದ್ದನ್ನು ಮಾತ್ರ ಮಾಡುವುದಕ್ಕೆ ಆಗಿಲ್ಲ.

ಶ್ರೀ ಬಿ. ನಂಜಪ್ಪ.—ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರ ಪಟ್ಟಿಯನ್ನು ಅಂತಿಮವಾಗಿ ಕಳಿಸಿದ್ದರೂ ಕೂಡ ಅದನ್ನು ಡೈರೆಕ್ಟರ್ ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ ಎನ್ನುವುದು ನಿಜವೇ ಎಂದು ನಾನು ಕೇಳಿದೆ. ಅದಕ್ಕೆ ಉತ್ತರ ಹೇಳುತ್ತಾರೆಯೇ, ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರುಗಳದ್ದು ಇಂಪ್ಲಿಮೆಂಟ್ ಮಾಡಲಾಗಿದೆ ಎಂದು ರಿಪೋರ್ಟ್ ಇದೆ.

ಶ್ರೀ ಕೆ. ಎಚ್. ಪಾಟೀಲ್.—ಒಕ್ಕಲುತನ ಖಾತೆಯ ಅಧಿಕಾರಿಗಳ ಲಿಸ್ಟ್ ಫೈನಲೈಸ್ ಮಾಡುವಾಗ ಇಂಡಿಯನ್ ಸೆಂಟ್ರಲ್ ಕಾಟನ್ ಕಮಿಟಿಯವರು ಕೊಟ್ಟ ಸಲಹೆಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಲಿಸ್ಟ್ ಫೈನಲೈಸ್ ಮಾಡಿರುವುದರಿಂದ ವಿನಾಕಾರಣ ತೊಂದರೆಗೆ ಅವಕಾಶವಾಗಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ ಅದನ್ನು ತೀವ್ರ ಪರಿಶೀಲಿಸಿ ಫೈನಲೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದನ್ನು ಯೋಚನೆ ಮಾಡುತ್ತೇವೆ ಸ್ವಾಮಿ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸೀನಿಯಾರಿಟಿ ಲಿಸ್ಟ್ ತಯಾರು ಮಾಡುವಾಗ ಯಾವ ಯಾವುದಕ್ಕೆ ಆದ್ಯತೆಯನ್ನು ಕೊಡಲಾಗಿದೆ? ಸರ್ವಿಸಿಗೋ, ಅರ್ಹತೆಗೋ ಅಥವಾ ದಕ್ಷತೆಗೋ ?

ಶ್ರೀ ಬಿ. ರಾಚಯ್ಯ.—ಸ್ಟೇಟ್ ರೀ ಆರ್ಗನೈಜೇಶನ್ ಆಕ್ಟಿನ 15ನೇ ಪ್ರಾವಿಷನ್ ಪ್ರಕಾರ ಮಾಡಲಾಗಿದೆ.

Sale of Adulterated Sugar

390. Sri G. CHANDRKANTH (Bidar).—

Will the Minister of State for Food and Civil Supplies be pleased to state :—

whether it has come to the notice of the Government that some Co-operative Societies and Fair Price Shops at Bidar have sold sugar by mixing 'Soji'; if so, the action the Government has taken against them ?

Sri B. VITHALDAS SHETTY (Minister of State for Food and Civil Supplies).—

Yes.

From the report of the Deputy Commissioner, adulteration appears to have taken place during transportation of the sugar from the factory to the premises of the wholesale agent *viz.*, the Bidar Primary Consumers' Co-operative Stores.

Notwithstanding this, the clearing agents, the District Central Co-operative Wholesale Stores, Bidar, have, under the direction of the Deputy Commissioner, replaced 13 adulterated sugar bags by quality sugar bags purchased in the open market.

(SRI B. VITHALDAS SHETTY)

The clearing agents have also terminated the services of the transport contractor and the security deposit made by this contractor has also been forfeited.

An undertaking that, in future, the clearing agents will be more vigilant and will ensure that such incidents do not recur, is being obtained by the Deputy Commissioner, from the clearing agents.

SRI G. CHANDRAKANTH.—Is it not a fact that the sugar that leaves the factory is sealed in bags and therefore there is no chance for the Transport Contractor to adulterate it during transit and in this case responsibilty has been fixed not after due enquiry ?

†SRI B. VITHALDAS SHETTY.—Responsibility has been fixed after enquiry, and in this particular case the Transport Contractors, M/s. Patil & Co., have directly given it to the primary society concerned.

SRI G. CHANDRAKANTH.—Sugar comes in sealed bags. When the seal was not there, it was up to the primary co-operative stores to accept it or not to accept it !

SRI B. VITHALDAS SHETTY.—They have accepted it and have reported the matter to the concerned authorities.

SRI V. N. PATIL.—Will the Hon. Minister be pleased to inform the House whether in order to shield the Chairman of the particular Society who happens to be their party-man the responsibility has been fixed on a petty contractor ?

SRI B. VITHALDAS SHETTY.—What the hon. Member says is not true. We have not been trying to shield anybody. On 6th August 1968 the Correspondent of Samyukta Karnataka has reported the matter to the Deputy Commissioner and immediately we have taken action and from the report it is found that the Transport Agent has given it to the Co-operative Society and it has been accepted by the Primary Co-operative Society. So, the question of shielding anybody does not arise.

Sale or Lease of Land for Congress Exhibition

396. SRI C. K. RAJAIAH SHETTY (Chikkanayakanahally).—

Will the Minister for Agriculture be pleased to state :—

(*a*) whether Government has sanctioned any land on sale or long lease basis for Congress Exhibition in Bangalore City ;

(*b*) if so, the cost or the rent fixed and the extent of the said land sanctioned ?

Sri B. RACHAIAH (Minister for Agriculture).—

(*a*) The question of lease of land in Subhashnagar Tank is under consideration of the Government.

(*b*) Does not arise in view of the reply at (*a*).

Sri C. K. RAJAIAH SHETTY.—Since Bangalore is the capital City and Government being the major participant to represent all departments and industrial concerns in the Exhibition, do Government consider to run the Exhibition by itself ?

Sri D. B. PAWAR (Deputy Minister for Agriculture).—
There is no such proposal before the Government and it is not under the consideration of the Government.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ ಪಕ್ಷದವರು ಇದನ್ನು ಗೇಣಿಗೆ ಕೊಡಬೇಕು ಎಂದು ಕೇಳಿರುವುದನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಅದೇ ರೀತಿ ವಿರೋಧ ಪಕ್ಷದವರು ಅದೇ ಸ್ಥಳದಲ್ಲಿ ವಸ್ತು ಪ್ರದರ್ಶನವನ್ನು ನಡೆಸಬೇಕೆಂದು ಅರ್ಜಿ ಕೊಟ್ಟರೆ ಆ ಅರ್ಜಿಯನ್ನೂ ಪರಿಶೀಲಿಸುತ್ತಿರಾ ?

ಶ್ರೀ ಬಿ. ರಾಚಯ್ಯ,—ಸರ್ಕಾರ 30 ವರ್ಷಗಳ ಗೇಣಿಗೆ ಕಾಂಗ್ರೆಸ್ ವಸ್ತುಪ್ರದರ್ಶನಕೆ ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದೆ.

Sri C. K. RAJAIAH SHETTY.—May I konw the rate at which it has been given and also the terms ?

Sri D. B. PAWAR.—The details are still to be worked out.

Sri C. K. RAJAIAH SHETTY.—When the Government has given a portion at the rate of Rs. 125 per sq. yard to the Road Transport Corporation, do Government consider that the rate at which it has been given to the Exhibition is not reasonable ?

Sri D. B. PAWAR.—Sir, I have already stated that the terms and conditions are still to be finalised and they have not been worked out as yet.

ಶ್ರೀ ವಾಟಾಳ್ ನಾಗರಾಜ್.—ಈಗ ಮಾನ್ಯ ಮಂತ್ರಿಗಳು ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ 30 ವರ್ಷಗಳ ಗೇಣಿಗೆ ಕೊಡಲಾಗಿದೆ ಎಂದು ಹೇಳಿದರು. ಕೋಟಿಗಟ್ಟಲೆ ಬೆಲೆಬಾಳುವ ಸ್ಥಳವನ್ನು ಕೇವಲ ಒಂದು ಪಕ್ಷದ ಹಿತದೃಷ್ಟಿಯಿಂದ ಕಾಂಗ್ರೆಸ್ ಸಂಸ್ಥೆಗೆ 30 ವರ್ಷಗಳವರೆಗೆ ಕೊಟ್ಟಿರುವುದರ ಉದ್ದೇಶವಾದರೂ ಏನು ? ಇದಕ್ಕೆ ಆಧಾರವೇನು ?

ಶ್ರೀ ಬಿ. ರಾಚಯ್ಯ.—ಹಿಂದಿನಿಂದ ಅಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಸಿಕೊಂಡುಬರುತ್ತಿದ್ದರು. ಇಂಥ ಪ್ರದರ್ಶನಗಳ ಅಗತ್ಯ ಇದೆ ಎಂದು ತಿಳಿದು ಅವರಿಗೆ ಕೊಡಲು ತೀರ್ಮಾನ ಮಾಡಲಾಗಿದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಈ ಪ್ರದರ್ಶನವನ್ನು ನಡೆಸುವುದಕ್ಕೆ ಜಾಗ ಬೇಕೆಂದು ಕಾಂಗ್ರೆಸ್ ಸಂಸ್ಥೆ ಕೇಳಿದಾಗ ಬೇರೆ ಪಕ್ಷಗಳಿಂದಲೂ ಕೂಡ ಆ ಜಾಗ ಬೇಕೆಂದು ಅರ್ಜಿ ಬಂದಿತ್ತೆ ?

ಶ್ರೀ ಬಿ. ರಾಚಯ್ಯ.—ಬಂದಿರಲಿಲ್ಲ.

ಶ್ರೀ ಜಿ. ದುಗ್ಗಪ್ಪ.—ಸುಭಾಷ್ ನಗರದಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯವರಿಗೆ ಜಾಗ ಕೊಟ್ಟಿದ್ದೀರಿ. ಅವರು ಆ ಜಾಗದಲ್ಲಿ ಕಟ್ಟಡ ಕಟ್ಟುತ್ತಾ ಇದ್ದಾರೆ. ಹೀಗಿರುವಾಗ 30 ವರ್ಷಗಳವರೆಗೆ ಗೇಣಿಗೆ ಕಾಂಗ್ರೆಸ್ ಎಗ್ಸಿಬಿಷನ್‌ಗೆ ಅವಕಾಶ ಕೊಟ್ಟರೆ ತೊಂದರೆಯಾಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ವಸ್ತು ಪ್ರದರ್ಶನ ನಡೆಸುವುದರಿಂದ ಅನುಕೂಲವಿದೆ, ತೊಂದರೆ ಇಲ್ಲ ಎಂದೇ ಒಂದು ತೀರ್ಮಾನಮಾಡಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಸರಕಾರದವರು ಬೆಲೆಬಾಳುವ ಈ ಜಮೀನನ್ನು ಲೀಜಿಗೆ ಕೊಡುವ ಪೂರ್ವದಲ್ಲಿ ಟೆಂಡರ್ ಕರೆದು ಕೊಟ್ಟಿರಾ? ಸಾರ್ವಜನಿಕರಿಂದ ಈ ಬಗ್ಗೆ ತಕರಾರು ಏನಾದರೂ ಇದೆಯೇ ಎಂದು ಬಹಿರಂಗವಾಗಿ ಕೊಡುವುದಕ್ಕೆ ಮುಂಚೆ ಕೇಳಿದ್ದೀರಾ? ಈ ಎರಡೂ ಇಲ್ಲದೇ ಕೊಡುವುದರಿಂದ ಸರಕಾರದ ಆಸ್ತಿಯನ್ನು ಸರಕಾರಿ ಪಕ್ಷದವರಿಗೆ ಏಲೇ ಮಾಡಿದ್ದಾರೆ, ಲಾಭ ಪಡೆಯಲು ಹೀಗೆ ಮಾಡಿದ್ದಾರೆ ಎಂದು ಅಪಾದನೆ ಬರುವುದಕ್ಕೆ ಅವಕಾಶವಾಗುವುದಿಲ್ಲವೇ?

1–30 P.M.

ಶ್ರೀ ಬಿ. ರಾಚಯ್ಯ.—ಇದನ್ನೆಲ್ಲಾ ಟೆಂಡರ್ ಕರೆದು ಕೊಡುವುದಕ್ಕಾಗುವುದಿಲ್ಲ. ಕ್ರಿಕೆಟ್ ಕ್ಲಬ್‌ನವರು ಕೇಳುತ್ತಾರೆ ಸ್ಟೇಡಿಯಂ ಕಟ್ಟಬೇಕೆಂದು, ಕೊಡಬೇಕಾಗುತ್ತದೆ, ಹಾಗೆಯೇ ವಸ್ತು ಪ್ರದರ್ಶನಕ್ಕೆ ಕೊಡಬೇಕೆಂದು ಕೇಳುತ್ತಾರೆ. ಸ್ಯಾನಿಟೋರಿಯಂ ಹಾಕುತ್ತೇವೆ ಎಂದು ಹೇಳುತ್ತಾರೆ ಅದು ಅನುಕೂಲವಾಗುತ್ತದೆ, ಕೊಡಬೇಕಾಗುತ್ತದೆ ಆದ್ದರಿಂದ ಇದನ್ನೆಲ್ಲಾ ಟೆಂಡರ್ ಕರೆದು ಕೊಡುವುದಕ್ಕಾಗುವುದಿಲ್ಲ.

Sri D. M. SIDDAIAH.—Is it not a fact that the Congress is conducting exhibitions there for the last several years and is it not a fact that the Congress made a request to the Government to give that land permanently for conducting Congress Exhibtions?

Sri B. RACHAIAH.—Yes.

ಶ್ರೀ ಬಿ. ಪಿ. ಗಂಗಾಧರ್.—ಒಂದುಸಾರಿ ಅವಕಾಶ ಸಿಕ್ಕಬೇಕಾದರೆ ಹತ್ತು ಸಾರಿ ಎದ್ದು ಕುಳಿತುಕೊಳ್ಳಬೇಕಾಗುತ್ತದೆ. ಅರ್ಧ ಗಂಟೆಯಿಂದ ನನಗೆ ತಾವು ಒಂದು ಪ್ರಶ್ನೆಯನ್ನು ಕೇಳುವುದಕ್ಕೂ ಕೂಡ ಅವಕಾಶ ಕೊಟ್ಟಿಲ್ಲ. Since half an hour, I have been standing up but I have not been given an opportunity to put a single supplementary. I feel I have been discriminated. May I know why I have been discriminated. Is it merely because I have been keeping quiet?

Sri K. PUTTASWAMY (Minister for Law, Labour and Parliamentary Affairs).—I rise to a point of order.

Mr. SPEAKER.—There can be no point of order during Question Hour.

Sri B. P. GANGADHAR.—I have been discriminated. That should not be done.

Mr. SPEAKER.—It is completely and totally wrong to say that the Chair is making any discrimination. The hon. Member should withdraw that statement.

Sri B. P. GANGADHAR.—I feel that I have been discriminated.

Mr. SPEAKER.—No discrimination is made by the Chair aganist any hon. Member. It amounts to saying that I am partial. Therefore the hon. Member should withdraw that statement.

Sri D. B. KALMANKAR.—In view of the fact that the Opposition Party also wants that it should be leased to them, may I know whether the Government will reconsider the whole issue so that the Opposition Party may also be allowed to have that opportunity?

Sri B. RACHAIAH.—The same area cannot be leased out to two parties.

ಶ್ರೀ ಬಿ. ಪಿ. ಗಂಗಾಧರ್.—ಈ ಜಾಗವನ್ನು 30 ವರ್ಷದ ಲೀಸ್‌ಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇಷ್ಟು ದಿವಸಗಳಿಂದ ಕಾಂಗ್ರೆಸ್ ಎಕ್ಸಿಬಿಷನ್ ನಡೆಸುತ್ತಾ ಇದ್ದಾರೆ. ಪ್ರತಿವರ್ಷ ಒಂದು ಒಂದೂವರೆ ತಿಂಗಳು ಆ ಪೀರಿಯಡ್‌ನಲ್ಲಿ ಮಾತ್ರ ವರ್ಷೇ ವರ್ಷೇ ಕೊಟ್ಟ ಹಾಗೆ ಲೀಸ್‌ಗೆ ಕೊಟ್ಟಿದ್ದೀರೋ ಅಥವಾ ಆ ಎಂಟೈರ್ ಏರಿಯಾವನ್ನು ಪರ್ಮನೆಂಟ್ ಆಗಿ 30 ವರ್ಷ ಅವರ ಪೂರ್ಣ ಸುಪರ್ದಿಗೆ ಅದನ್ನು ಉಪಯೋಗಿಸಿಕೊಳ್ಳಬಹುದು ಎಂದು ಹೇಳಿದ್ದೀರೋ? ಹಾಗಿದ್ದರೆ ಎಷ್ಟು ಏರಿಯಾವನ್ನು ಕೊಟ್ಟಿದ್ದೀರಿ ? ಮತ್ತು ಅಷ್ಟು ಏರಿಯಾವನ್ನು ಕೊಡಬೇಕಾಗಿದ್ದರೆ ಇಷ್ಟು ಹಣಕ್ಕೆ ಕೊಡುವುದು ಸಾಧ್ಯ ಅಂತ ಹಣ ಇತ್ಯರ್ಥಮಾಡದೆ ಕೊಟ್ಟಿದ್ದರೆ ಅದು ತಪ್ಪಲ್ಲವೆ ?

ಶ್ರೀ ಬಿ. ರಾಚಯ್ಯ.—ಆ ಅಗ್ರಿಮೆಂಟ್ ಇನ್ನೂ ಪೂರ್ಣವಾಗಿಲ್ಲ. ಸುಮಾರು 12 ಎಕರೆ ಯಷ್ಟು ಭೂಮಿ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಅಬ್ಬಾ, ಲೂಟಿ ಆಯಿತು, ದೇಶ ಲೂಟಿ ಹೊಡೆದಿರಿ, ನಮ್ಮ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತಾ ಇದೆ.

Mr. SPEAKER.—During question time, Questions are to be put and answers are to be extracted. If any points arise out of answers, there are ample opportunities according to rules to discuss them. There is the general discussion on the Budget, and the hon. Member is free to refer to it in his speech. But he should not make a speech during Question time.

ಶ್ರೀ ಬಿ. ರಾಚಯ್ಯ.—ಈ ಭೂಮಿಯನ್ನು ಎಗ್ಸಿಬಿಷನ್‌ಗೋಸ್ಕರವಾಗಿ ಉಪಯೋಗಿಸ ಬೇಕೆಂದು ಹೇಳಿದ್ದೇವೆ. ಅದನ್ನು ಪರ್ಮನೆಂಟಾಗಿ ಎಗ್ಸಿಬಿಷನ್‌ಗೋಸ್ಕರವಾಗಿ ಉಪಯೋಗಿಸ ಬೇಕೆಂದು ಕೊಡಲು ಒಪ್ಪಿದ್ದೇವೆ. ಇದಕ್ಕೆ ಆಗತಕ್ಕ ಒಪ್ಪಂದ ಇನ್ನೂ ಪೂರ್ಣವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕೋಟ್ಯಾಂತರ ರೂಪಾಯಿ ಬೆಲೆಬಾಳುವ 12 ಎಕರೆಯಷ್ಟು ಜಮೀನು ವ್ಯರ್ಥವಾಗುತ್ತದೆ. ದೇಶದ ಹಣ ಲೂಟಿಯಾಗುತ್ತಿದೆ. ಕಾಂಗ್ರೆಸ್‌ನವರಿಂದ ದೇಶವೇ ಹಾಳಾಗುತ್ತದೆ. ಆದ್ದರಿಂದ ಈ ಅಗ್ರಿಮೆಂಟನ್ನು ನಿಲ್ಲಿಸಬೇಕು.

ಅಧ್ಯಕ್ಷರು.—ನಾನು ಆಗಲೇ ಹೇಳಿದ್ದೇನೆ. ಇದು ಪ್ರಶ್ನೋತ್ತರವೇಳೆಯೆಂದು. ಈ ಕಾಲಕ್ಕೆ ಪ್ರಶ್ನೆ ಕೇಳುವುದು, ಉತ್ತರ ಹೇಳುವುದು ಅಷ್ಟೇ. ತಮಗೆ ಉತ್ತರ ತೃಪ್ತಿ ಇಲ್ಲದೇ ಇದ್ದರೆ ಅದರ ಮೇಲೆ ಜನರಲ್ ಬಡ್ಜೆಟ್ ಚರ್ಚೆ ಕಾಲದಲ್ಲಿ ಮಾತನಾಡಬಹುದು. ಈ ಪ್ರಶ್ನೋತ್ತರ ಕಾಲದಲ್ಲಿ ಆ ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ. ದಯಮಾಡಿ ಈ ಪಾಯಿಂಟ್ ಬಗ್ಗೆ ವಿಶೇಷವಾಗಿ ಭಾಷಣಮಾಡಬೇಡಿ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಕಾಂಗ್ರೆಸ್ ಎಗ್ಸಿಬಿಷನ್ ಮಾಡಲು ಆಡಳಿತಪಕ್ಷವು ತನ್ನ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದೆ ಎಂಬುದಾಗಿ ಸಾರ್ವಜನಿಕರು ಭಾವಿಸಿರುವುದರಿಂದ ಇದನ್ನು ನ್ಯಾಷನಲ್ ಎಗ್ಸಿಬಿಷನ್ ಎಂದು ಕರೆದು ಸರ್ಕಾರವೇ ಇದನ್ನು ನಡೆಸುವುದಕ್ಕೆ ಪ್ರಯತ್ನ ಮಾಡುತ್ತದೆಯೆ ?

ಶ್ರೀ ಬಿ. ರಾಚಯ್ಯ.—ಈಗ ಅದು ಆಗುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಮಂತ್ರಿಗಳು ಉತ್ತರ ಕೊಡುತ್ತಾ ಇನ್ನೂ ಅಗ್ರಿಮೆಂಟ್ ಮಾಡಲಿಲ್ಲವೆಂದು ಹೇಳಿದರು. ಕಂಡೀಷನ್ನಿನಲ್ಲಿ ಕಾಂಗ್ರೆಸ್ ಎಗ್ಸಿಬಿಷನ್ ಹೊರತುಪಡಿಸಿ, ಸಾರ್ವಜನಿಕರಿಗೆ ಉಪಯೋಗಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇದೆಲ್ಲಾ ಪೂರ್ಣವಾಗಿಲ್ಲ. ಒಪ್ಪಂದದಲ್ಲಿ ಅನೇಕ ಕಂಡೀಷನ್ಸ್ ಇವೆ. ಸರ್ಕಾರಕ್ಕೆ ಯಾವಾಗ ಬೇಕೊ ಆಗ ಅದನ್ನು ಕೊಡುವುದಕ್ಕೆ ಅವಕಾಶವಿದೆ.

ಶ್ರೀ ವಿ. ಎನ್. ಪಾಟೀಲ್.—ಕಾಂಗ್ರೆಸ್‌ನವರಿಗೆ ಸ್ಥಳ ಕೊಟ್ಟಮೇಲೆ ಕಾಂಗ್ರೆಸ್‌ನವರಿಗೆ ಸಪ್ಲಿಮೆಂಟರಿ ಹಾಕುವುದಕ್ಕೆ ಏತಕ್ಕೆ ನೀವು ಅವಕಾಶವನ್ನು ಕೊಡಬೇಕು ? ಅವರಿಗೆ ಅವಕಾಶ ಕೊಡಬಾರದು ಎಂದು ನಾನು ಪ್ರಾರ್ಥನೆಮಾಡುತ್ತೇನೆ.

ಅಧ್ಯಕ್ಷರು.—ಇವರು ಕಾಂಗ್ರೆಸ್ ಪಕ್ಷದವರು, ಇವರು ವಿರೋಧಪಕ್ಷದವರು ಎಂಬ ಲೆಕ್ಕ ಚೇರ್‌ಗೆ ಇಲ್ಲ. ನನಗೆ ಎಲ್ಲರೂ ಒಂದೇ. All members here are alike to the Chair. I do not make any distinction on the ground of party or the affiliation of members.

ಶ್ರೀ ಕೆ. ಎನ್. ವೀರಪ್ಪ ಗೌಡ.—ಅನೇಕ ಕಾಲದಿಂದ ಈ ವಸ್ತುಪ್ರದರ್ಶನವನ್ನು ನಡೆಸುತ್ತಿರುವುದು ಸಾರ್ವಜನಿಕರ ಉಪಯೋಗಕ್ಕಾಗಿ ಮತ್ತು ಹೊರಗಡೆಯಿಂದ ಲಕ್ಷಾಂತರ ಜನರು ಬಂದು ಅದರ ಉಪಯೋಗವನ್ನು ಪಡೆಯುತ್ತಾರೆ ಎಂದು ಅರ್ಥವಾಗಿದೆಯೋ ?

ಶ್ರೀ ಬಿ. ರಾಚಯ್ಯ.—ಅದು ಗೊತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಜಾಗವನ್ನು 30 ವರ್ಷಗಳ ಕಾಲ ಒಂದು ವರ್ಷಕ್ಕೆ ಒಂದು ಸಹಸ್ರ ರೂಪಾಯಿಗಳಂತೆ ಕೊಟ್ಟಿದ್ದೇವೆಂದು ಹೇಳುತ್ತೀರಿ. ಇದು ಬೆಂಗಳೂರು ನಗರದ ಮೈಸೂರುದೇಶದ ಜನತೆಗೆ ದ್ರೋಹ ಬಗೆಯುವ ಹಾಗೆ ಆಗುವುದಿಲ್ಲವೆ ? ಅನ್ಯಾಯ ಮಾಡಿದ ಹಾಗೆ ಆಗುವುದಿಲ್ಲವೇ ? ಬೇರೆ ಪಕ್ಷಗಳಾಗಲೀ, ಬೇರೆ ಸಂಸ್ಥೆಗಳಾಗಲೀ ಇದರ ಬಗ್ಗೆ ನಮಗೂ ಕೊಡಬೇಕೆಂದು ಕೇಳಿದ್ದರೆ, ಅವನ್ನು ಬಹಿರಂಗವಾಗಿ ವಿಚಾರಣೆ ನಡೆಸಿ ಯಾರು ಜಾಸ್ತಿ ಕೊಡುವುದಕ್ಕೆ ತಯಾರಿದ್ದಾರೋ ಅದನ್ನು ಅವರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇದು ದ್ರೋಹ ಮಾಡಿದ ಹಾಗೆ ಆಗಲಿಲ್ಲ. ಸಾರ್ವಜನಿಕ ಉದ್ದೇಶಗಳಿಗಾಗಲಿ, ಅಥವಾ ಬೇರೆ ಪಕ್ಷಗಳಿಗಾಗಲಿ, ಖಾಸಗೀ ಸಂಸ್ಥೆಗಳಿಗಾಗಲಿ, ಭೂಮಿಯನ್ನು ಕೇಳಿದಾಗ ಸರ್ಕಾರ ಕೊಟ್ಟುಕೊಂಡು ಬಂದಿದೆ, ಮುಂದೆ ಕೂಡ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮೂವತ್ತು ವರ್ಷದ ಲೀಸನ್ನು ಕಾಂಗ್ರೆಸ್ ಎಕ್ಸಿಬಿಷನ್‌ಗೆ ಕೊಡುವುದನ್ನು ಸಾರ್ವಜನಿಕರು ಮತ್ತು ಎಲ್ಲಾ ರಾಜಕೀಯ ಪಕ್ಷಗಳೂ ಸೇರಿ ವಿರೋಧ ಮಾಡತಕ್ಕ ವಾತಾವರಣ ಇರುವುದರಿಂದ, ಇದರ ಬಗ್ಗೆ ಸರ್ಕಾರದವರು ಒಂದು ಕೆಟ್ಟ ಹೆಸರನ್ನು ತೆಗೆದುಕೊಳ್ಳುವುದರ ಬದಲು, ಎಲ್ಲಾ ಪಕ್ಷಗಳನ್ನು ಸೇರಿಸಿ, ಇದಕ್ಕೆ ಒಂದು ಕಮಿಟಿ ನೇಮಕ ಮಾಡಿ, ಒಂದು ವೇಳೆ ಕಾಂಗ್ರೆಸ್ಸಿಗೇನೆ ಕೊಡಬೇಕೆಂದಿದ್ದರೂ, 30 ವರ್ಷದ ಲೀಸ್ ಏನು ಇದೆ, ಅದನ್ನು ಮಧ್ಯೆ ಯಾವಾಗ ಬೇಕಾದರೂ ಹಿಂದೆ ತೆಗೆದುಕೊಳ್ಳಬಹುದು ಎನ್ನುವ ಒಂದು ಕಂಡಿಶನ್ ಹಾಕುವಂತೆ ಮಾಡುತ್ತೀರಾ ? ಏಕೆಂದರೆ, ನಿಮ್ಮ ಕಾಂಗ್ರೆಸ್ ಸರ್ಕಾರವೇ ಮೂವತ್ತು ವರ್ಷದ ವರೆಗೆ ಉಳಿಯುತ್ತದೆ ಎಂದು ಹೇಗೆ ಹೇಳುತ್ತೀರಾ, ಯಾವ ಗ್ಯಾರಂಟಿಯಲ್ಲಿ ಹೇಳುತ್ತೀರಿ ? ಆದ್ದರಿಂದ ಆ ಒಂದು ಷರತ್ತು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈ ಮೂವತ್ತು ವರ್ಷದ ಸಮಯ ಇದ್ದರೂ, 10 ವರ್ಷಕ್ಕೊಮ್ಮೆ ರಿವಿಜನ್ ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಂಡಿದ್ದೇವೆ.

ಶ್ರೀ ಎಂ. ನಾಗಪ್ಪ.—ತಾವು ಅಗ್ನಿಹೋತ್ರಿಯವರು "ಬೇರೆ ಯಾವ ಪಕ್ಷಗಳ ಅರ್ಜಿಯೂ ಆ ಸಮಯಕ್ಕೆ ಇರಲಿಲ್ಲವೇ" ಎಂದು ಕೇಳಿದ್ದಕ್ಕೆ "ಹೌದು" ಎಂದು ಹೇಳಿದ್ದೀರಿ. ಹಾಗಾದರೆ, ಈ ಅರ್ಜಿ ಬಂದನಂತರ ಬೇರೆ ಯಾವುದಾದರೂ ಪಕ್ಷ ಅರ್ಜಿ ಕೊಡುತ್ತಾರೆಯೋ ಎನ್ನತಕ್ಕಂತಹ ಪ್ರಕಟಣೆ ಹೊರಡಿಸಿ, ಬೇರೆ ಅರ್ಜಿಗಳನ್ನು ಕೇಳಿದ್ದೀರಾ ? ಎರಡನೆಯದು ಟರ್ಮ್ಸ್ ಅಂಡ್ ಕಂಡಿಶನ್ಸ್ ಯಾವುದೂ ಆಗುವವರೆಗು ಯಾವ ಲೀಸ್ ಆಗುವುದಿಲ್ಲ. ಅದು ಆಗದೆ, ಲೀಸ್ 30 ವರ್ಷಕ್ಕೆ ಕೊಡಲು ಏಕಪಕ್ಷೀಯವಾಗಿ ನಿರ್ಣಯ ಮಾಡಿದ್ದು ಕಾಯಿದೆಗೆ ವಿರುದ್ಧವಲ್ಲವೇ ? ಮತ್ತು ಈ ಕಾಂಗ್ರೆಸ್ ಎಕ್ಸಿಬಿಷನಿನಲ್ಲಿ ಬರತಕ್ಕ ಆದಾಯ ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತದೆಯೋ, ಇಲ್ಲವೇ ಎಂದು ಉತ್ತರ ಕೊಡಬೇಕು.

ಶ್ರೀ ಬಿ. ರಾಚಯ್ಯ.—ಭೂಮಿ ಕೇಳಿದಾಗ ಬೇರೆ ಪಕ್ಷಗಳ, ಅಥವಾ ಖಾಸಗಿಯವರ ಅರ್ಜಿ ಇರಲಿಲ್ಲ. ಮತ್ತು ಅದೇ ಸ್ಥಳದಲ್ಲಿ ಕಾಂಗ್ರೆಸ್ಸಿನವರು ವಸ್ತುಪ್ರದರ್ಶನವನ್ನು ನಡೆಸಿಕೊಂಡು ಬರುತ್ತಿದ್ದರು. ಅದಕ್ಕೋಸ್ಕರ ಪ್ರತಿವರ್ಷವೂ ಲೀಸ್ ಮಾಡುವ ಬದಲಾಗಿ ಒಂದು ದೂರವಾದಂತಹ, ಹೆಚ್ಚು ವರ್ಷಗಳ ಕಾಲಾವಧಿಯ ಲೀಸ್ ಕೊಟ್ಟರೆ, ಒಂದು ಶಾಶ್ವತವಾದ ವಸ್ತುಪ್ರದರ್ಶನವನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆಂದು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಬೇರೆ ಪಕ್ಷಕ್ಕೆ ಕೊಡಬಾರದು ಎಂದು ಏನೂ ನಾವು ಮಾಡಿಕೊಂಡಿಲ್ಲ. ಬೇರೆ ಕಡೆ ಕೇಳಿದರೆ ಕೊಡುವುದಕ್ಕೆ ಅವಕಾಶ ಇದೆ.

ಶ್ರೀ ಎಸ್. ಎ. ಚನ್ನೇಗೌಡ.—ಇದೇ ದರದಲ್ಲಿ ಬೇರೆ ಜಾಗದಲ್ಲೂ ಬೇರೆಯವರಿಗೂ ಕೂಡ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಆ ಸಂದರ್ಭ ಬಂದಾಗ ಯೋಚನೆ ಮಾಡೋಣ.

ಶ್ರೀ ಎರ್. ಶ್ರೀಕಂಠಯ್ಯ.—10 ವರ್ಷಗಳಿಗೆ ಮೇಲ್ಪಟ್ಟು ಕಾಂಗ್ರೆಸ್ ಪಕ್ಷದವರು ಇಲ್ಲಿ ಆಡಳಿತವನ್ನು ನಡೆಸುತ್ತೇವೆಂದು ಅವರು ವಿಧಾನಸೌಧವನ್ನೇನಾದರೂ ಬಾಡಿಗೆಗೆ ಕೇಳಿದರೆ ಕಾಂಗ್ರೆಸ್ ಪಕ್ಷದವರಿಗೆ ವಿಧಾನಸೌಧವನ್ನು ಬಾಡಿಗೆಗೆ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದಕ್ಕೂ ಈ ಪ್ರಶ್ನೆಗೂ ಯಾವ ಸಂಬಂಧವೂ ಇಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ನನಗೆ ತಿಳಿದ ಹಾಗೆ ವಸ್ತು ಪ್ರದರ್ಶನದಲ್ಲಿ ನಮ್ಮ ದೇಶದ ಪ್ರಗತಿಯನ್ನು ಏನು ಸಾಧಿಸಿವೆ ಎಂಬುದನ್ನು ತೋರಿಸುತ್ತಾರೆ ಎಂದು ನಾನು ತಿಳಿದು ಕೊಂಡಿದ್ದೇನೆ. ಆದರೆ ಈ ವಸ್ತು ಪ್ರದರ್ಶನದಲ್ಲಿ ಹುರುಗಾಳಿನ ಅಂಗಡಿ ಮತ್ತು ಬಟ್ಟೆ ಅಂಗಡಿಗಳು ಜಾಸ್ತಿ ಇರುತ್ತವೆ. ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರಿಗೆ ಹುರುಗಾಳಿನ ಅಂಗಡಿಯನ್ನು ನೋಡಿದ್ದು ಮಾತ್ರ ಜ್ಞಾಪಕವಿರಬಹುದು. ಆದರೆ ನಾನು ಅನೇಕ ವಿಷಯಗಳನ್ನು ನೋಡಿದ್ದೇನೆ.

ಶ್ರೀ ಎಸ್. ಶಿವಪ್ಪ.—ಬೆಂಗಳೂರು ಕಲ್ಯಾಣ ನಗರ. ಆದ್ದರಿಂದ ಸರ್ಕಾರದವರು ನೇರವಾಗಿ ಒಂದು ಪರ್ಮನೆಂಟ್ ಎಗ್ಸಿಬಿಷನ್ ಬಿಲ್ಡಿಂಗ್ ಮಾಡಿ ಸದಾಕಾಲದಲ್ಲಿಯೂ, ಎಂದರೆ 365 ದಿವಸಗಳೂ ನಡೆಯುತಕ್ಕಂಥ ನ್ಯಾಷನಲ್ ಮ್ಯೂಜಿಯಂ ರೀತಿಯಲ್ಲಿ ಮಾಡುವುದನ್ನು ಬಿಟ್ಟು ಪಕ್ಷದ ಹಿತಕ್ಕೋಸ್ಕರ ಪಕ್ಷದ ಬೆಳವಣಿಗೆಗೋಸ್ಕರ ಈ ರಾಜ್ಯದ ಆಸ್ತಿಯನ್ನು ಮಾರಾಟ ಮಾಡುವುದಕ್ಕೆ ಸರ್ಕಾರದವರಿಗೆ ಇದ್ದ ಪ್ರಬಲವಾದ ಕಾರಣವೇನು ?

ಶ್ರೀ ಬಿ. ರಾಚಯ್ಯ.—ನಾನು ಮೊದಲು ಈ ಪ್ರಶ್ನೆಗೆ ಕೊಟ್ಟಂಥಾ ಉತ್ತರವನ್ನು ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬೇಕು. ಈ ಜಾಗವನ್ನು ಒಂದು ವರ್ಷಕ್ಕೆ ಒಂದು ಸಾವಿರ ರೂಪಾಯಿ ಗಳಂತೆ ಬಾಡಿಗೆಗೆ ಕೊಟ್ಟಿದ್ದೇವೆ ಎಂದು ನಾನು ಹೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ನನ್ನ ಬಳಿಯಲ್ಲಿ ಇಲ್ಲದ ಕಾರಣ ಅದು ತಪ್ಪಾಗಿದೆ. ಅದನ್ನು ತಿದ್ದುಪಡಿ ಮಾಡಿಕೊಳ್ಳಬೇಕು. ಅದು ಈ ರೀತಿ. ಇದೆ ಮೊದಲನೆ 10 ವರ್ಷಗಳಲ್ಲಿ 25 ಸಾವಿರ ರೂಪಾಯಿಗಳಂತೆಯೂ, ಎರಡನೇ 10 ವರ್ಷಗಳಲ್ಲಿ 30 ಸಾವಿರ ರೂಪಾಯಿಗಳಂತೆಯೂ, 3ನೇ 10 ವರ್ಷಗಳಲ್ಲಿ 35 ಸಾವಿರ ರೂಪಾ ಯಿಗಳಂತೆಯೂ, ಮತ್ತು 4 ನೇ 10 ವರ್ಷಗಳಲ್ಲಿ 40 ಸಾವಿರ ರೂಪಾಯಿಗಳ ಹಾಗೆಯೇ ಬಾಡಿಗೆಗೆ ಕೊಡಬೇಕೆಂದು ನಾವು ಮಾಡಿಕೊಂಡಿದ್ದೇವೆ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರ ಹೇಳಿದರೆ ಸಾಕು, ನನ್ನ ಪ್ರಶ್ನೆ ಇಷ್ಟೇ: ಈಗ ಸುಭಾಷ್ ನಗರದ ಕೆರೆಯಲ್ಲಿನ ಮೈದಾನ ಏನಿದೆ ಆ ಜಾಗವನ್ನು ಸರ್ಕಾರದವರೇ ನೇರವಾಗಿ ವಶಪಡಿಸಿಕೊಂಡು ಅಲ್ಲಿ ಸರ್ಕಾರದ ಒಂದು ರಾಷ್ಟ್ರೀಯ ಮ್ಯೂಜಿಯಂ ಕಟ್ಟಡವನ್ನು ಕಟ್ಟಿ ಸದಾಕಾಲದಲ್ಲಿಯೂ ಪರ್ಮನೆಂಟಾಗಿ ಎಗ್ಸಿಬಿಷನ್ ಮಾಡತಕ್ಕ ಏರ್ಪಾಡನ್ನು ಸರ್ಕಾರದವರು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇಲ್ಲಾ, ಸ್ವಾಮಿ.

ಶ್ರೀ ಎಸ್. ಶಿವಪ್ಪ.—ರಾಜ್ಯದ ಒಂದು ಮುಖ್ಯ ಸ್ಥಳವನ್ನು ಕೇವಲ ಒಂದು ಪಕ್ಷದ ಹಿತಕ್ಕೋಸ್ಕರ ಸರ್ಕಾರ ಕೊಟ್ಟಿರತಕ್ಕದ್ದು ರಾಷ್ಟ್ರಘಾತುಕವಾದ ವಿಚಾರ. ಇದನ್ನು ಸರ್ಕಾರದವರು ಕೈ ಬಿಡುತ್ತೀರಾ ?

(ಉತ್ತರವಿಲ್ಲ)

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ಸಿನವರು ದೇಶದ್ರೋಹ ಮತ್ತು ಖಜಾನೆಯನ್ನು ಲೂಟಿ ಮಾಡುತ್ತಿದ್ದಾರೆ. ಆ ಜಾಗವನ್ನು ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಗುತ್ತಿಗೆಗೆ ಕೊಡುವ ಅಗ್ರಿಮೆಂಟನ್ನು ನಿಲ್ಲಿಸಬೇಕು. ಆ ಅಗ್ರಿಮೆಂಟ್ ನಿಲ್ಲದೇ ಇದ್ದರೆ ಈ ಸಭೆಯನ್ನು ಮುಂದಕ್ಕೆ ಹಾಕಲಿ. ಇಲ್ಲದೇ ಹೋದರೆ ಮಾನ್ಯ ಮಂತ್ರಿಗಳು ಅಗ್ರಿಮೆಂಟ್ ನಿಲ್ಲಿಸುತ್ತೇವೆಂದು ಹೇಳಲಿ.

ಅಧ್ಯಕ್ಷರು.—ಇದು ಪ್ರಶ್ನೋತ್ತರ ಕಾಲ, ಚರ್ಚೆ ಮಾಡುವ ಸಮಯವಲ್ಲ. ಸದಸ್ಯರು ಪ್ರಶ್ನೆ ಕೇಳಿದರೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಮಾನ್ಯಸದಸ್ಯರು ಇದೇ ರೀತಿ ಗಲಾಟೆ ಮಾಡಿದರೆ ಉಳಿದ ಪ್ರಶ್ನೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ತಮಗೆ ಮಹತ್ತರವಾದ ಗೌರವ ಕೊಡುತ್ತಿದ್ದೇನೆ. ಇದು ಕೋಟ್ಯಾಂತರ ರೂಪಾಯಿಗಳ ವ್ಯವಹಾರವಾದ್ದರಿಂದ ಬೇರೆ ವ್ಯವಹಾರಗಳನ್ನು ನಿಲ್ಲಿಸಿ ಇದನ್ನು ಮೊದಲು ತೀರ್ಮಾನ ಮಾಡಬೇಕು.

ಅಧ್ಯಕ್ಷರು.—ಅದನ್ನು ಹೌಸ್ ನಿರ್ಣಯ ಮಾಡಬೇಕು. ತಮಗೆ ಸ್ವಲ್ಪ ಸಂಯಮ ಇರಬೇಕು. ನಾನು ಎದ್ದು ನಿಂತಿರುವಾಗ ಬೇರೆಯವರು ನಿಲ್ಲಬಾರದು. ಇದು ಸಭಾಮರ್ಯಾದೆ. ಈಗ

(ಅಧ್ಯಕ್ಷರು)

ಪ್ರಶ್ನೋತ್ತರ ಕಾಲವಾದ್ದರಿಂದ ತಾವು ಕೇವಲ ಪ್ರಶ್ನೆಗಳನ್ನು ಕೇಳಬೇಕು ಸರ್ಕಾರದವರು ಉತ್ತರ ಕೊಡುತ್ತಾರೆ. ಈ ವಿಚಾರದಲ್ಲಿ ಬೇಕಾದರೆ ಬಜೆಟ್ ಮೇಲೆ ಮಾತನಾಡುವಾಗ ಹೇಳಬಹುದು. ಈಗ ಶ್ರೀ ಶಿವಪ್ಪನವರು ಪ್ರಶ್ನೆ ಕೇಳುತ್ತಾರೆ. ಉಳಿದವರು ಕೂರಬೇಕು.

ಶ್ರೀ ಎಸ್. ಶಿವಪ್ಪ.—ಬೆಂಗಳೂರು ನಗರದ ಸುಭಾಷ್ ನಗರದ ಕೆರೆಯಲ್ಲಿನ ಜಮೀನನು ಕಾರ್ಪೊರೇಷನ್ನಿಗೆ ವಹಿಸಿಕೊಡಬೇಕು. ಮತ್ತು ಈ ರಾಜ್ಯದ ಆಸ್ತಿಯನ್ನು ಕಾಂಗ್ರೆಸ್ ಪಕ್ಷದವರು ತೆಗೆದುಕೊಂಡು ತನ್ನ ಪಕ್ಷದ ಬಾವುಟವನ್ನು ಹಾರಿಸುವುದನ್ನು ಕೈಬಿಟ್ಟು ಸರ್ಕಾರದವರು ಅಥವಾ ಕಾರ್ಪೊರೇಷನ್ ಅವರು ಮಾತ್ರ ಅಲ್ಲಿ ವಸ್ತುಪ್ರದರ್ಶನ ಏರ್ಪಡಿಸುವ ವಿಚಾರವನ್ನು ಈಗಲಾದರೂ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇನ್ನೂ ಅಗ್ರಿಮೆಂಟ್ ಆಗಿಲ್ಲವೆಂದು ಈಗಾಗಲೇ ಹೇಳಿದೆ. ಸಂಬಂಧಪಟ್ಟ ಫೈಲ್ ನನ್ನ ಹತ್ತಿರ ಇರಲಿಲ್ಲವಾದ್ದರಿಂದ 30 ವರ್ಷ ಎಂದು ತಪ್ಪು ಉತ್ತರ ಕೊಟ್ಟಿದ್ದೇನೆ. ಅದು ಸರಿಯಿಲ್ಲ. 99 ವರ್ಷ............

SOME HON. MEMBERS.—Shame ! Shame !.

(ಸಭೆಯಲ್ಲಿ ಗದ್ದಲ)

[ಶ್ರೀ ವಾಟಾಳ್ ನಾಗರಾಜ್, ಶ್ರೀ ಬಿ. ಪಿ. ಗಂಗಾಧರ್, ಎಂ. ಎಸ್. ಕೃಷ್ಣನ್, ಕೆ. ಎಚ್. ಪಾಟೀಲ್, ಹಾಗೂ ಇನ್ನೂ ಹಲವು ಸದಸ್ಯರುಗಳು ಒಟ್ಟಿಗೆ ಎದ್ದು ಮಾತನಾಡಲಾರಂಭಿಸಿದರು.]

* * * * * *

Mr. SPEAKER.—Nothing to be recorded.

* * * * * *

ಅಧ್ಯಕ್ಷರು.—ಮಾನ್ಯ ಸದಸ್ಯರ ವರ್ತನೆ ನನಗೆ ಅರ್ಥವಾಗುವುದಿಲ್ಲ. ತಾವು ಒಂದು ಲಕ್ಷ ಜನರನ್ನು ಪ್ರತಿನಿಧಿಸುವಾಗ ಸ್ವಲ್ಪ ಸಮಾಧಾನದಿಂದ ತಮ್ಮ ಪ್ರಶ್ನೆಗಳನ್ನು ಕೇಳಬೇಕು. ಇದು ಪ್ರಶ್ನೋತ್ತರದ ಕಾಲ. ಈ ಕಾಲದಲ್ಲಿ ಬೇರೇನೂ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾವು ತಾಳ್ಮೆಯನ್ನು ಕಳೆದುಕೊಂಡಿದ್ದೇವೆ.

ಅಧ್ಯಕ್ಷರು.—ಮೊದಲಿಗೆ ನಾನು ಹೇಳುವುದು ಸರಕಾರದ ಕಡೆಯವರು ತಮ್ಮ ಪ್ರಶ್ನೆಗೆ ಏನು ಉತ್ತರ ಕೊಡುತ್ತಾರೋ ಅದನ್ನು ಸಮಾಧಾನದಿಂದ ಕೇಳಿ ಅದರ ಬಗ್ಗೆ ಅಸಮಾಧಾನವಾಗಿದ್ದರೆ ಮತ್ತು ಅದಕ್ಕೆ ಪ್ರತಿಭಟನೆ ತೋರಿಸಬೇಕಾಗಿದ್ದರೆ ಅದಕ್ಕೆ ಬೇರೆ ಕಾಲ ಇದೆ. ಪ್ರಶ್ನೋತ್ತರ ಕಾಲದಲ್ಲಿ ಅಲ್ಲ ಅದಕ್ಕೆ ನಿಯಮಗಳಿವೆ. ಅದರ ಪ್ರಕಾರ ತಾವು ಚರ್ಚೆ ಮಾಡಬಹುದು. ಇದು ಈಗ ಪ್ರಶ್ನೋತ್ತರ ಕಾಲ. ಇದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಈ ರೀತಿ ಗಲಾಟೆ ಮಾಡಿದರೆ ಸರಿಯಾಗುವುದಿಲ್ಲ.

Question Hour is over.

QUESTIONS FOR ANSWERS ON THE DAY

(but not taken up)

Construction of Bridges in Belgaum Taluk

294. Sri P. B. NANDIHALI (Uchgaon).—

Will the Minister for Public Works be pleased to state :—

(*a*) whether Government are aware of the fact that there is a great necessity of the bridges on the following roads in Belgaum Taluk :—

(1) Bijagarni to Belavatti

---

* * * Matter not recorded as ordered by the Chair.

(2) Bijagarni to Kavalewadi
(3) Vadagaon to Dhamne :
(4) Belgaum to Benakanahalli
(5) Piranwadi to Kinage (Bridges) ;

(b) whether Government are aware that vehicles cannot run on these roads in the Rainy Season :

(c) what action Government has taken to construct bridges on these roads ?

SRI K. LAKKAPPA (Minister for Public Works).—

(a) Yes.

(b) Yes, to some extent.

(c) Construction work of the bridge on the road from Belgaum to Benakanhalli has been taken up.

The construction of bridges on Vadagaon-Dhamane road, Piranwadi-Kinage road, Bijagarni-Belavathi road and Bijagarni-Kavalewadi roads will be taken up depending upon the availability of funds.

Construction of Buildings for the Community Welfare Centre

350. SRI PRABHURAO JAGADALE (Hulsoor).—

Will the Minister for Social Welfare be pleased to state :—

(a) the stage of consideration and sanction of a building for Community Welfare Centre (SC) at Village Nittur, Taluk Bhalki, Bidar District ;

(b) the steps taken for its early construction ?

SRI V. L. PATIL (Minister for Social Welfare).—

(a) There is no such proposal.

(b) Does not arise.

Sluices on Tungabhadra High Level Canal

382. SRI R. NAGAN GOUDA (Hospet).—

Will the Chif Minister be pleased to state :—

(a) the number of sluices located between the T. B. Dam and Kamalapuram villages, on the high level canal of the Tungabhadra project in Hospet Taluk ;

(SRI. R. NAGAN GOUDA)

(b) Is there request from the Chairman and Members of the Panchayat Board, Malapanagudi, Hospet Taluk for a sluice for them at mile 5/5 of High Level Canal which is expected to irrigate about 800 acres land ;

(c) whether the Government has carried out any survey to determine the number of acres that would be commanded by a sluice at 5/5 of H. L. C. ;

(d) the other steps taken by the Government in investigating the above work on the request of Malapanagudi Panchayat;

(e) whether the Government propose to construct a sluice for the lands of Malapanagudi ?

SRI VEERENDRA PATIL (Chief Minister).—

(a) One.

(b) Yes.

(c) A sluice has already been constructed at Mile 5/5 of High Level Canal to irrigate 852 acres in the villages of Ananthasayanagudi, Muddapuram, Nagenahalli and Kondanayakanahalli of Hospet Taluk.

(d) The request for providing irrigation for lands of Mallappanagudi and Kariganur villages is being examined.

(e) Can be decided after detailed investigation.

Smuggling of Foodgrains

405. SRI B. M. IDINABBA (Mangalore),—

Will the Minister of State for Food and Civil Supplies be pleased to state :—

(a) whether the Government has thought of cancelling zonal system to prevent smuggling of foodgrains ;

(b) whether it is a fact that the Police are indifferent in preventing the smuggling of foodgrains ;

(c) the special measures taken by them so far to prevent smuggling of foodgrains ;

(d) whether they are contemplating to have severe measures instead of the existing measures ?

SRI B. VITHALDAS SHETTY (Minister of State for Food and Civil Supplies).—

(a) This is a matter to be considered by the Government of India.

(b) No.

(c) A Food Cell in the Police Department along with four Regional Centres, hass been established to prevent the smuggling of foodgrains across the State borders to Kerala, Madras, Goa, Maharashtra and Andhra Pradesh. 133 Police Check posts have been established all along the State borders. In addition, 24 mobile police squads have also been sanctioned in the border districts to work under the supervision of the Superintendents of Police of the Districts concerned. The Regional Centres have each been provided with a Government Jeep. Additional staff of 2 Sub-Inspectors, 2 Head Constables has been sanctioned to the Regional Food Cell, Mangalore.

(d) The present measures – administrative and legal—are considered adequate to deal with the situation effectively.

Recruitment in Secretariat Service

411. SRI V. N. PATIL (Humnabad).—

Will the Chief Minister be pleased to state :—

(a) the number of times recruitment was made in the Secretariat service since the year 1956 (*i.e.*, after the re-organisation of States) ;

(b) the number of persons selected indicating the post for the above services (Separate figures from the Hyderabad-Karnataka, Bombay-Karnataka, and Mysore-Karnataka areas be furnished ;

(c) whether any fresh appointments are being contemplated by the Government; if so, for what posts and their numbers?

SRI VEERENDRA PATIL (Chief Minister).—

(a) Six times.

(b) 710.

(i) Assistants	...	236
(ii) Junior Assistants	...	185
(iii) Stenographer	...	71
(iv) Typists	...	218

For regionwise figures please see the Annexure appended.

(c) Yes.

(i) Assistants	...	48
(ii) Junior Assistants	...	119
(iii) Stenographers	...	24
(iv) Typists	...	110

(SRI VEERENDRA PATIL)

This is the forecast of vacancy position given to the Public Service Commission at the time of advertisement on 29th February 1968.

ANNEXURE

Region	Assistants	Junior Assistants	Steno-graphers	Typists	Total
1 Hyderabad Karnatak	4	1	nil	2	7
2 Bombay Karnataka	22	3	nil	4	29
3 Mysore Karnataka	205	179	71	212	667
4 Other areas	5	2	...	...	7
Grand Total ...	236	185	71	218	710

Hidkal Dam in Belgaum District

417. SRI L. S. NAIK (Gokak).—

Will the Chief Minister be plased to state:—

(a) the estimated cost of constructing Hidkal Dam in Belgaum District and when it will be completed;

(b) whether it is a fact that the contractor constructing the said dam is selling the Steel and Cement in blackmarket;

(c) if so, whether any action has been taken against them;

(d) whether any Government or forest lands will be granted to the people whose lands will be submerged by the Hidkal Dam;

(e) if so, the area where the lands will be given;

(f) if any compensation is to be paid to them at what rate it will be paid?

SRI VEERENDRA PATIL (Chief Minister).—

(a) Estimated cost Rs. 3,500 lakhs.
Expected to be completed by 1973.

(b) No.

(c) Does not arise in view of reply to (b) above.

(*d*) Yes.

(*e*) In the released forest lands of Khanapur, Hukeri and Belgaum Taluks and in Ghataprabha left bank canal command area in Gokak, Raibag, Athani, Jamakhandi Mudhol and Bilgl Taluks.

(*f*) the actual rate depends upon the type of the land and crops grown, etc.

Payment of Increments Arrears to Revenue Employees

422. Sri V. L. SHIVAPPA (Tiptur).—

Will the Minister for Revenue be pleased to state :—

(*a*) whether the Government has paid all the arrears of increments of the Revenue employees in Tumkur District that were withheld for not passing Departmental Examinations ;

(*b*) if not, the number of employees still to receive the arrears of increment ;

(*c*) the reasons for not paying the arrears till to-day ;

(*d*) whether the Government intend to settle the arrears before the end of December 1968 ?

A.—Sri H. V. KOUJALGI (Minister for Revenue).—

(*a*) Yes, except in 19 cases.

(*b*) Nineteen (19).

(*c*) It is reported by the Local officers that the sanction of arrear increments to some of the officials is delayed for non-receipt of relevant references from the Officers where they were previously working, and in some other cases, it is delayed for non-sanction of allocation prior to that period.

(*d*) Yes, action is being taken to settle the claims early.

Pay Scales of Non-S.S.L.C. and Untrained Teachers

425. Sri B. P. GANGADHAR (Tumkur).—

Will the Minister for Education be pleased to state:—

(*a*) the pay scales prescribed for non-S.S.L.C. and untrained Teachers ;

(*b*) whether according to the Government Order No. E 1033/EDN/ 49-47-12 dated 2nd August 1949, the Non-S.S.L.C. and untrained

(SRI B. P. GANGADHAR)

Teachers, who have attained the age of 45 years, are entitled to the pay scale of Rs. 70-2-80-3-110;

(*c*) whether they have given effect to the Government Order No. E. 1033/EDN 49-47-12 dated 2nd August 1949;

(*d*) whether Government had assured on the floor of the House that immediate steps would be taken to give effect to the Government Order stated above;

(*e*) the reasons for the delay in implementing the above orders?

SRI K. V. SHANKARA GOWDA (Minister for Education).—

(*a*) Non-S.S.L.C. Trained Rs. 70-2-80-3-110.
Non-S.S.L.C. Untrained Rs. 65-1-70-2-90.

(*b*) Yes. Such Untrained teachers got to the benefit of getting into trained teachers' scale up to 1st June 1951.

(*c*) Yes. The Government Order was in force only till 1st Jnne 1951.

(*d*) Does not arise.

(*e*) Does not arise.

Inclusion of Archaeology Department in Southern Zone

414. SRI P. THIMMAIAH (Basavanagudi).—

Will the Minister for Education be pleased sto tate:—

(*a*) whether the Department of Archaeology of our State is included in the Southern Zone, Madras;

(*b*) whether there is any proposal before the Government to have a separate Circle for Mysore;

(*c*) the reasons for not having a separate circle for Mysore?

SRI K. V. SHANKARA GOWDA (Minister for Education).—

(*a*) No. The Department of Archaeology is not subordinate to the Central Archaeological Department.

(*b*) Yes.

(*c*) The matter is under the consideration of the Government of India.

Construction of Choultry at Srisailam

466. Sri K. M. PUTTASWAMY (Chickballapur).—

Will the Minister for Revenue be pleased to state :—

(a) whether Government have decided to construct a choultry at Srisailam (A.P.);

(b) if so, the reasons for inordinate delay in executing the work?

Sri H. V. KOUJALGI (Minister for Revenue).—

(a) Government propose to advance a loan of Rs. 5 lakhs towards the cost of construction of a choultry at Srisailam (A.P.).

(b) The organisation to whom the loan is to be advanced and certain other legal formalities have to be completed. The matter is under active consideration.

Submersible area of Coffee Plantation

470. Sri H. N. NANJEGOWDA (Arkalgud).—

Will the Chief Minister be pleased to state :—

(a) the submersible area of Coffee Plantation and other lands in case the Harangi Reservoir Project is constructed at 'Hardur' and 'Hudgur, Sites (separate figures may kindly be furnished for 100′, 120′, 140′, 160′ and 182′ at both the sites);

(b) the storage capacity of the dam at the height of 100 ft., 120 ft. 140 ft., 160 ft. and 180 ft. after the completion of the project (separate figures in respect of both the sites may kindly be furnished);

(c) the extent of land that will be irrigated after its completion (separate figures in respect of different heights at both the sites may kindly be furnished)?

Sri VEERENDRA PATIL (Chief Minister).—

(a) Particulars for 182 ft. at Hardur site and 120 ft. at Hudgur site are furnished as per statement appended. Details for other heights are not surveyed.

(SRI VEERENDRA PATIL)

(b) The storage capacity of the Dam at Hudgur and Hardur Sites are as under :—

Heights in feet	Gross Net Capacity in M. C. Ft.	
	Hardur Site	Hudgur Site
100 ft.	4,348	1,435
120 ft.	6,030	3,032
140 ft.	8,001	4,582
160 ft.	9,826	...
180 ft.	12,884	...

(c) *Hardur site* :—

182 ft. Dam	1,05,000 Acres
80 ft. Pick up	30,000 Acres

Hudgur site :—

150 ft. Dam	75,000 Acres
120 ft. Dam	51,000 Acres

STATEMENT

Sl. No.	Particulars	Hardur Site (River Bed Level R. L. 2820.00) 182 ft. height (RL 3002)	Hudgur Site (River Bed Level R.L. 2704.00) 120 ft. height (RL 2824)
	Submersion in Acres:		
	(a) Coffee lands ...	842	53
	(b) Wet lands ...	1,180	816
	(c) Cardamom lands...	93	...
	(d) Private water lands	2,162	137
	(e) Government Waste lands, Forest, River portion, etc.	733	1,315
	Total ...	5,010	2,321

Cancellation of Rice Mill Licence

489. **Sri S. H. PUTTARANGANATH** (Belur).—

Will the Minister of State for Food and Civil Supplies refer to the reply given to starred Question No. 451 on 8th April 1968 and state :—

(*a*) whether it is a fact that the licence granted to Sri A. P. Puttaswamy to run a rice mill was cancelled by the departmental people on the direction given by the former Minister for Food and Civil Supplies, if so, on what grounds the licence was cancelled ;

(*b*) whether it is a fact that the present Minister of State for Food ordered his subordinates to renew the same licence to the said school master ?

Sri B. VITHALDAS SHETTY (Minister of State for Food and Civil Supplies).—

(*a*) No. However, having come to know that Sri Puttaswamy had not disclosed the fact that he was Government School Master when he applied for grant of a Rice Mill Permit, the Director of Food and Civil Supplies requested the Deputy Commissioner, Hassan, not to renew until further orders the rice mill licence of Sri Puttaswamy which had expired on 31st December 1967.

(*b*) On further consideration of the facts of the case, it was found that there was no valid ground to withhold the renewal of Rice Mill Licence held by Sri Puttaswamy who had retired from service and the Director of Food and Civil Supplies was asked to advise the Deputy Commissioner, Hassan to renew the same.

Lease of land for the Congress Exhibition at the Subhas Nagar Tank, Bangalore

2–00 P.M.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಕಾಂಗ್ರೆಸ್ ವಸ್ತು ಪ್ರದರ್ಶನಕ್ಕಾಗಿ ಬೆಂಗಳೂರು ನಗರದಲ್ಲಿ ಅತಿ ಹೆಚ್ಚಿನ ಬೆಲೆಯುಳ್ಳಂಥ ಪ್ರದೇಶವನ್ನು ಕಾಂಗ್ರೆಸ್ಸು ತಾನು ಅಧಿಕಾರದಲ್ಲಿದೆಯೆಂದು, ಆ ಆಸ್ತಿಯನ್ನು ತನ್ನ ಪಕ್ಷಕ್ಕೆ ಈಡು ಮಾಡಿದೆ. ಈ ಪ್ರವೃತ್ತಿ ಎಲ್ಲಿಯವರೆಗೆ ಬೆಳಸಿದ್ದೀರಿ ? ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಭೂಮಿ ಏನು ಇದೆ ಅದನ್ನು ಕಾಂಗ್ರೆಸ್ ಪಕ್ಷದ ಬೆಳವಣಿಗೆಗಾಗಿ ಈಡುಮಾಡಿ ಈ ಒಂದು ದೊಡ್ಡ ಅಪರಾಧ ಮಾಡಿ ಇದರಿಂದ ದೇಶದ ಖಜಾನೆಗೆ ನಷ್ಟ ಮಾಡಿದ್ದೀರಿ. ಆದುದರಿಂದ ಈಗಲೂ ಕೂಡ ತಮ್ಮ ಮುಖಾಂತರ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಈವತ್ತಿನ ದಿವಸ ಅವರು ಇದಕ್ಕೆ ಉತ್ತರ ಹೇಳಬೇಕು. ಸರ್ಕಾರ ಈ ರೀತಿ ತಮ್ಮ ಪಕ್ಷದ ಬೆಳವಣಿಗೆಗಾಗಿ ಏನಾದರೂ ತೀರ್ಮಾನ ತೆಗೆದುಕೊಂಡಿದ್ದಾರೆಯೇ ಅಥವಾ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವ ಒತ್ತಾಯ ಬಂತೇ ? ಆ ಆಸ್ತಿಯನ್ನು ತಮ್ಮ ಪಕ್ಷಕ್ಕೆ ಕೊಡುವುದಾದರೆ ಇದರಿಂದ ದೊಡ್ಡ ಅನಾಹುತವಾಗುತ್ತದೆ; ಅಲ್ಲದೆ ದೊಡ್ಡ ದಂಗೆ ಉಂಟಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಮುಖ್ಯ ಸಚಿವರು ಯೋಚನೆ ಮಾಡಿ ಒಂದು ಸಮಾಧಾನಕರವಾದ ಉತ್ತರವನ್ನು ಹೇಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಈ ಪ್ರಶ್ನೆಯ ಸಂಬಂಧವಾಗಿ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇನೆ. ಅದರ ವಿಚಾರ ಏನಾಯಿತು, ಸ್ವಾಮಿ ?

ಅಧ್ಯಕ್ಷರು.—ಸುಭಾಷ್ ನಗರ ಕೆರೆಯ ವಿಚಾರವಾಗಿ ನೀವು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿರುವುದು 12.5 ಗಂಟೆಗೆ ನೀವು 2 ಗಂಟೆ ಮುಂಚಿತವಾಗಿ ಕೊಡಬೇಕಾಗಿತ್ತು, ಕೊಟ್ಟಿಲ್ಲ. ಅದನ್ನು ವಿಚಾರ ಮಾಡಿ ನಾಳೆ ಅದರ ಸಂಬಂಧದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಇದಕ್ಕೆ ಸಮಾಧಾನಕರವಾದ ಉತ್ತರ ಕೊಡಬೇಕು.

ಅಧ್ಯಕ್ಷರು.—ಈಗ ಜನರಲ್ ಡಿಬೇಟ್ ಇದೆ. ಅದರಲ್ಲಿ ಮಾತನಾಡುವುದಕ್ಕೆ ಅವಕಾಶ ಇದೆ. ಈಗ ಒಂದು ನೋಟೀಸ್ ಬರೆದುಕೊಟ್ಟರೆ 6 ಗಂಟೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಇದು ಅತಿ ಜರೂರಾದ ವಿಷಯವಾದುದರಿಂದ ಈವಾಗಲೇ ಇದನ್ನು ತೆಗೆದುಕೊಳ್ಳಬೇಕು. ಇದು ಬೆಂಗಳೂರು ನಾಗರೀಕರ ಗಮನವನ್ನು ಸೆಳೆಯುವಂಥ ವಿಚಾರ. ಇದನ್ನು ಈಗಲೇ ತೀರ್ಮಾನ ಮಾಡಿ ಉತ್ತರ ಹೇಳಬೇಕು.

ಅಧ್ಯಕ್ಷರು.—ಬರೆದುಕೊಡುವುದಕ್ಕೆ ಟೈಂ ಕೊಡುತ್ತೇನೆ, ಬರೆದುಕೊಡಿ. ಶ್ರೀಮಾನ್ ಶಿವಪ್ಪನವರು ಲೀಡರ್ ಆಫ್ ದಿ ಅಪೋಸಿಷನ್ ಆಗಿರುವುದರಿಂದ ಈ ಪ್ರಶ್ನೆ ಬಗ್ಗೆ ಏನು ರೈಸ್ ಮಾಡಿದ್ದಾರೆ ತಾವು ಶಾಂತಿಯಿಂದ ಕೇಳಿ, ಗಲಾಟೆ ಮಾಡಬೇಡಿ. ತಮ್ಮ ಪಾಯಿಂಟ್ ಮೇಲೆ ಏನಾದರೂ ಉತ್ತರ ಬೇಕಾಗಿದ್ದರೆ ಜನರಲ್ ಡಿಬೇಟ್‌ನಲ್ಲಿ ಮಾತನಾಡಿ, ಈಗ ಕೂತುಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಅದೇ ಜಾಗಕ್ಕೆ 2 ಲಕ್ಷ ಕೊಡುವವರೂ ಇದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು–ಕೋಟೆ).—ಸ್ವಾಮಿ, ಜನತಾಪಕ್ಷದವರು 50 ಸಾವಿರ ರೂಪಾಯಿ ಕೊಡುವುದಕ್ಕೆ ಸಿದ್ಧವಾಗಿದ್ದಾರೆ ಅವರಿಗೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಸುಭಾಷ್ ನಗರದ ಗ್ರೌಂಡ್‌ನಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನ ಅನೇಕ ವರ್ಷಗಳಿಂದ ನಡೆಯುತ್ತಿದೆ. ನಾನು ಈ ರಾಜ್ಯಕ್ಕೆ ಬಂದದ್ದು 1956ರಲ್ಲಿ. ನಾನು ಕೇಳಿದ್ದು ಅನೇಕ ವರ್ಷಗಳಿಂದ ಸುಭಾಸ್ ನಗರ ಗ್ರೌಂಡ್‌ನಲ್ಲಿ.......

ಶ್ರೀ ಟಿ. ಆರ್. ಶಾಮಣ್ಣ.—ಅನೇಕ ವರ್ಷಗಳಿಂದ ಅಲ್ಲ, 15 ವರ್ಷಗಳಿಂದ ಮಾತ್ರ ನಡೆಯುತ್ತಿದೆ,

ಅಧ್ಯಕ್ಷರು.—ಮಾನ್ಯ ಸದಸ್ಯರು ಮುಖ್ಯ ಮಂತ್ರಿಗಳು ಹೇಳುವುದನ್ನು ಕೇಳಬೇಕು.

ಶ್ರೀ ಕೆ. ಎಚ್. ರಂಗನಾಥ್.—ಅವರು ಈ ಊರಿನವರು.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಬೇಕು ಎನ್ನುವಂಥಾದ್ದನ್ನು ಮಾನ್ಯ ಸದಸ್ಯರಿಗೆ ಕೇಳಬೇಕು ಎನ್ನುವ ಇಚ್ಛೆ ಇದ್ದರೆ ದಯವಿಟ್ಟು ಮಧ್ಯದಲ್ಲಿ ಅವರು ಏನಾದರೂ ಮಾತನಾಡದೆ ನನಗೆ ಹೇಳುವುದಕ್ಕೆ ಅವಕಾಶ ಕೊಟ್ಟರೆ ಹೇಳುತ್ತೇನೆ.

ನಾನು ಈ ರಾಜ್ಯಕ್ಕೆ ಬಂದದ್ದು 1956ರಲ್ಲಿ. ಅದಕ್ಕೂ ಪೂರ್ವದಲ್ಲಿ ಅನೇಕ ವರ್ಷಗಳಿಂದ ಕಾಂಗ್ರೆಸ್ ವಸ್ತು ಪ್ರದರ್ಶನ ಇಲ್ಲಿ ನಡೆಯುತ್ತಿತ್ತು ಎನ್ನುವಂಥದ್ದು ಅನೇಕ ಸದಸ್ಯರಿಗೆ ಗೊತ್ತೇ ಇದೆ. ಕಾಂಗ್ರೆಸ್ ವಸ್ತುಪ್ರದರ್ಶನವನ್ನು ನಡೆಸಿದವರು, ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ಪದಾಧಿಕಾರಿಗಳಾಗಿದ್ದವರು, ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಈಗ ಎಲ್ಲಿ ಪ್ರದರ್ಶನ ನಡೆಯುತ್ತಿದೆಯೋ ಆ ಜಾಗ ಬೇಕು ಎಂದು ಕೇಳಿದವರ ಪೈಕಿ ಕೆಲವರು ಈವೊತ್ತು ಆ ಕಡೆ ಕುಳಿತಿದ್ದಾರೆ.....

(ಕೆಲವು ಸದಸ್ಯರು ಒಮ್ಮೆಲೇ ಮಾತನಾಡಲು ಎದ್ದರು)

ಶ್ರೀ ಎಸ್. ಚನ್ನಯ್ಯ.—ಮಧ್ಯೆ ಮಾತನಾಡಲು ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಕೇಳಿ. ಅನಂತರ ಏನಾದರೂ ಹೇಳುವುದಿದ್ದರೆ ಅದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಚನ್ನಯ್ಯ.—ಅವರು ಹೇಳಿಕೆ ನೀಡುವಾಗ ಮಧ್ಯೆ ಏನಾದರೂ ಕೇಳುವುದಕ್ಕೆ ನಮಗೆ ಹಕ್ಕು ಇದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಪ್ರಶ್ನೆ ಕೇಳುವುದಕ್ಕೆ ಅಧಿಕಾರವಿದೆ. ಆದರೆ ಅವರು ಹೇಳಿಕೆ ಕೊಟ್ಟ ನಂತರ ಏನಾದರೂ ಕೇಳುವುದಕ್ಕೆ ತಮಗೆ ಪರವಾನಗಿ ಕೊಡುತ್ತೇನೆ.

ಶ್ರೀ ಎಸ್. ಚನ್ನಯ್ಯ.—ಈ ಕಡೆ ಕುಳಿತವರು ಎಂದರೆ ಯಾರು ಎಂದು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಏನು ಹೇಳಬೇಕು, ಏನು ಬಿಡಬೇಕು ಎನ್ನುವುದು ನನಗೆ ಬಿಟ್ಟ ವಿಚಾರ. ನಾನು ಹೇಳಿದೆ..........

ಶ್ರೀ ಎಸ್. ಚನ್ನಯ್ಯ.—ಅವರ ಹತ್ತಿರ ಪಾಠ ಕಲಿಯಬೇಕಾದ್ದಿಲ್ಲ. ಅವರಿಗೆ ಕಲಿಸಿ ಕೊಡುತ್ತೇವೆ.

Sri VEERENDRA PATIL.—I am making the statement because the Hon. Leader of the Opposition wanted me to make a statement. If the House is not anxious to listen to me, I do not want to make a statement.

Mr. SPEAKER.—I want to know whether the hon. Members want to listen to the Hon. Chief Minister's statement.

ಶ್ರೀ ವಾಟಾಳ್ ನಾಗರಾಜ್.—ಮೊದಲು ಅಗ್ರಿಮೆಂಟ್ ಇಲ್ಲದಿರಲಿ ಅವರ ಸ್ಟೇಟ್‌ಮೆಂಟ್ ನಮಗೇತಕ್ಕೆ ?

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಶ್ರೀ ವಾಟಾಳ್ ನಾಗರಾಜ್‌ರವರಿಗೋಸ್ಕರ ಸ್ಟೇಟ್ ಮೆಂಟ್ ಮಾಡುತ್ತಿಲ್ಲ, ಸಭೆಗಾಗಿ ಮಾಡುತ್ತಿದ್ದಾರೆ. ಸಭೆಯಲ್ಲಿರುವ ಸದಸ್ಯರು ಯಾರಿದ್ದಾರೆ ಅವರ ಪೈಕಿ ಶ್ರೀ ವಾಟಾಳ್ ನಾಗರಾಜ್ ರವರೂ ಒಬ್ಬರು. ವಿರೋಧ ಪಕ್ಷದ ನಾಯಕರು ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ಕೇಳಿದ್ದಾರೆ. ಅವರ ಬೇಡಿಕೆಯಂತೆ ಮಾಡಬೇಕಾಗಿದೆ.

ಶ್ರೀ ಎಸ್. ಚನ್ನಯ್ಯ.—ಅದು ನಮಗೂ ಗೊತ್ತಿದೆ. ಆದರೆ ಮಧ್ಯೆ ಬೇಕಾದರೆ ಮಾತ ನಾಡುವುದಕ್ಕೆ ನಮಗೆ ಅವಕಾಶ ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಅನೇಕ ವರ್ಷಗಳಿಂದ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ಬೆಂಗಳೂರು ನಗರದಲ್ಲಿರುವ ಸುಭಾಷ್ ನಗರದಲ್ಲಿ ನಡೆಸುತ್ತಿದ್ದರು ಎಂದು ನಾನು ಹೇಳುತ್ತಿದ್ದೆ. ಅನೇಕ ವರ್ಷಗಳಿಂದ ಎಲ್ಲಿ ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಯು ತ್ತಿದೆಯೋ ಅಲ್ಲಿ ಒಂದು ಪರ್ಮನೆಂಟ್ ಎಗ್ಜಿಬಿಷನ್ ಆಗಬೇಕು, ಅದಕ್ಕೆ ಪರ್ಮನೆಂಟ್ ಕಟ್ಟಡವಾಗ ಬೇಕು, ಅದಕ್ಕೆ ಸ್ಥಳ ಕೊಡಬೇಕು ಎಂದು ಕಾಂಗ್ರೆಸ್ ವಸ್ತುಪ್ರದರ್ಶನವನ್ನು ನಡೆಸುವವರು ಕೇಳುತ್ತಿದ್ದರು. ಆದರೆ ಹೀಗೆ ಕೇಳುತ್ತಿದ್ದರೂ ಕೂಡ ಈ ಬಗ್ಗೆ ನಿರ್ಣಯ ಮಾಡುವುದಕ್ಕೆ ಸಾಧ್ಯ ವಾಗಿರಲಿಲ್ಲ. ಇವತ್ತು ಸರಕಾರ ಸರಿಯಾಗಿ ವಿಚಾರಮಾಡಿ, ಬಹುಶಃ ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಸುವವರಿಗೆ ಕೊಡುವುದಕ್ಕೆ ಸಾಧ್ಯವಾಗಬಹುದು ಎಂದು ನಿರ್ಣಯ ಮಾಡಿಕೊಂಡಿದ್ದೇವೆ. ಆದರೆ ನಾವು ನಿರ್ಣಯ ಮಾಡಿದರೆ ಅದೇ ಕೊನೆಯಲ್ಲ. ನಿರ್ಣಯ ಮಾಡಿರುವುದನ್ನು ವಸ್ತುಪ್ರದರ್ಶನ ನಡೆಸುವ ಸಮಿತಿಯು ಒಪ್ಪುತ್ತದೆಯೇ, ಒಪ್ಪಿದರೆ ಯಾವ ಕಂಡಿಷನ್ನಿನ ಮೇಲೆ ಒಪ್ಪುತ್ತದೆ, ಎಂಬು ದನ್ನು ತಿಳಿದು ಚರ್ಚೆ ಮಾಡಿ ಒಂದು ನಿರ್ಣಯ ಕೈಕೊಳ್ಳಬೇಕು. ಇಂದು ಒಂದು ನಿರ್ಣಯ ಮಾಡಿ ದ್ದೇವೆ. ಆದರೆ ಅದರ ಬಗ್ಗೆ ಅಗ್ರಿಮೆಂಟ್ ಆಗಿಲ್ಲ. ಅಗ್ರಿಮೆಂಟ್ ಆಗಿ ಗವರ್ನಮೆಂಟ್ ಆರ್ಡರ್ ಇಷ್ಯೂ ಆದಮೇಲೆ ಫೈನಲ್ ಆಯಿತು ಎಂದು ಹೇಳಬಹುದು. ವಸ್ತು ಪ್ರದರ್ಶನ ನಡೆಸುವ ಸ್ಥಳ ಯಾವ ಕಂಡಿಷನ್ನಿನಮೇಲೆ ಕೊಡಬೇಕು, ಅದರಲ್ಲಿ ಸರಕಾರದ ಹಿತರಕ್ಷಣೆ ಯಾವ ರೀತಿ ಮಾಡಬೇಕು ಮತ್ತು ಸ್ಥಾಯಿಕವಾದ ಒಳ್ಳೆಯ ಎಗ್ಜಿಬಿಷನ್ ಬೆಂಗಳೂರು ನಗರದಲ್ಲಿ ಮಾಡಬೇಕು ಮತ್ತು ಸ್ಥಾಯಿಕವಾದ ಒಳ್ಳೆಯ ಎಗ್ಜಿಬಿಷನ್ ಬೆಂಗಳೂರು ನಗರದಲ್ಲಿ ಆಗುವುದಕ್ಕೆ ಏನು ಕ್ರಮ ತೆಗೆದು ಕೊಳ್ಳಬೇಕು ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಿ ಪರ್ಮನೆಂಟ್ ಎಗ್ಜಿಬಿಷನ್ ನಡೆಸಲು ಸಂಬಂಧಪಟ್ಟವರೊಡನೆ ಚರ್ಚೆಮಾಡಿ ಅಂತಿಮ ನಿರ್ಣಯ ಮಾಡಲಿಲ್ಲ. ಹಾಗೆ ಮಾಡದಿರುವುದರಿಂದ ಯಾವ ಆರ್ಡರನ್ನೂ ಮಾಡಿಲ್ಲ. ಇನ್ನೂ ಅಗ್ರಿಮೆಂಟ್ ಮಾಡಿಕೊಂಡಿಲ್ಲ ಎಂದು ವಿನಯದಿಂದ ತಿಳಿಸುತ್ತಿದ್ದೇನೆ.

ಶ್ರೀ ಎಸ್. ಶಿವಪ್ಪ.—ಅಲ್ಲಿ ಖಾಯಮಾಗಿ ಒಂದು ವಸ್ತು ಪ್ರದರ್ಶನ ನಡೆಸುವ ವಿಚಾರ ಕೂಡ ಸರಕಾರದ ಮುಂದಿದೆ. ಪರ್ಮನೆಂಟ್ ಕಟ್ಟಡ ಕಟ್ಟಿ ವಸ್ತುಪ್ರದರ್ಶನ ನಡೆಸುವಾಗ ಸರ ಕಾರವೇ ಏಕೆ ಅದನ್ನು ನಡೆಸಬಾರದು ? ಈ ವಿಚಾರ ಪರಿಶೀಲನೆಯಲ್ಲಿದೆಯೇ ? ಯಾವುದೇ ಒಂದು ಪಕ್ಷಕ್ಕೆ ಸರಕಾರದ ಆಸ್ತಿಯನ್ನು ಕೊಟ್ಟು ಅದು ಪ್ರದರ್ಶನ ನಡೆಸುವುದಕ್ಕೆ ಬದಲಾಗಿ ಹೀಗೆ ಒಂದು ರಾಜಕೀಯ ಪಕ್ಷಕ್ಕೆ ಕೊಡುವುದನ್ನು ಕೈಬಿಟ್ಟು ಸರಕಾರ ಅಥವ ಕಾರ್ಪೊರೇಷನ್ ಈ ಜಾಗವನ್ನು ತೆಗೆದುಕೊಂಡು ಖಾಯಮಾಗಿ ಏಕೆ ವಸ್ತುಪ್ರದರ್ಶನ ನಡೆಸುವ ವಿಚಾರ ಮಾಡಬಾರದು ? ಈಗ ಕಾಂಗ್ರೆಸ್ ಪಕ್ಷಕ್ಕೆ ಕೊಡಬೇಕೆಂದಿರುವ ಅವಕಾಶ ಕೈಬಿಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ವಿರೋಧ ಪಕ್ಷದ ನಾಯಕರು ನಾನು ಹೇಳಿದ್ದನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಸಂಬಂಧಪಟ್ಟವರು ಅನೇಕ ದಿವಸಗಳಿಂದ ಈ ಸ್ಥಳ ಕೊಟ್ಟರೆ ಸ್ಥಾಯಿಕ ಪರ್ಮನೆಂಟ್ ಎಗ್ಸಿಬಿಷನ್ ನಡೆಸುತ್ತೇವೆ ಎಂದು ಕೇಳುತ್ತಿದ್ದರು. ಅದಕ್ಕೆ ಅವಕಾಶ ಕೊಡಬೇಕೆಂದು ವಿಚಾರ ಮಾಡಿಕೊಂಡಿದ್ದೆವು. ಆದರೆ ಈ ವಿಷಯವನ್ನು ಚರ್ಚೆಮಾಡಿ ಕಂಡೀಷನ್ ಯಾವರೀತಿ ಹಾಕಬೇಕು, ಏನು ಕಂಡೀಷನ್ ಹಾಕಬೇಕು, ಪ್ಲಾನ್ ಯಾವರೀತಿ ಮಾಡಬೇಕು ಎಂದು ಸಂಬಂಧಪಟ್ಟವರೊಡನೆ ಚರ್ಚಿಸಿ ಅಂತಿಮ ತೀರ್ಮಾನ ಮಾಡಿರುವುದಿಲ್ಲ. ಈ ಬಗ್ಗೆ ಅಗ್ರಿಮೆಂಟ್ ಕೂಡ ಆಗಿಲ್ಲ. ಈ ಎಲ್ಲಾ ವಿಚಾರಗಳನ್ನೂ ತಪಶೀಲಾಗಿ ಇಂದು ಹೇಳುವುದು ಕಷ್ಟ. ಯಾವ ವಿಧವಾದ ಅಗ್ರಿಮೆಂಟ್ ಮಾಡಿಕೊಳ್ಳಬೇಕು, ಹೇಗೆ ಮಾಡಿಕೊಂಡರೆ ದೇಶದ ಹಿತ, ರಾಜ್ಯದ ಹಿತ ರಕ್ಷಣೆ ಮಾಡಬಹುದು, ಅಲ್ಲದೆ ಒಳ್ಳೆಯ ವಸ್ತು ಪ್ರದರ್ಶನ ಸ್ಥಾಯಿಕವಾಗಿ ನಡೆಸುವುದಕ್ಕೆ ಅನುಕೂಲವಾಗುತ್ತದೆ ಎಂಬುದನ್ನು ಯೋಚಿಸಿ ಅದಕ್ಕೆ ತಕ್ಕ ಕ್ರಮ ಮುಂದೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಶಾಶ್ವತವಾದ ಒಂದು ವಸ್ತುಪ್ರದರ್ಶನವನ್ನು ರಾಜ್ಯಸರ್ಕಾರದ ವತಿಯಿಂದ ಏರ್ಪಾಡು ಮಾಡುವುದಾದರೆ, ಅದಕ್ಕೆ ಸರ್ಕಾರದವರು ಏನಾದರೂ ಪ್ರಯತ್ನ ಮಾಡಿದ್ದಾರೆಯೇ, ವಿಚಾರ ಮಾಡಿದ್ದಾರೆಯೇ ಅನ್ನುವುದು ಒಂದು. ಈ ಕಾಂಗ್ರೆಸ್ ಒಂದು ರಾಜಕೀಯ ಸಂಸ್ಥೆಗೆ ನೀವು ಅವಕಾಶ ಕೊಟ್ಟರೆ ಪಿ. ಎಸ್. ಪಿ. ಅವರು, ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿಯವರು, ಜನತಾ ಪಕ್ಷದವರು, ಜನಸಂಘದವರು, ರಿಪಬ್ಲಿಕನ್ ಪಾರ್ಟಿಯವರು, ಕಮ್ಯೂನಿಸ್ಟ್ ಪಾರ್ಟಿಯವರು, ಇನ್ನು ಉಳಿದಿರುವ ಪಾರ್ಟಿಯವರು ಅವರೆಲ್ಲರಿಗೂ ಸುಭಾಷ್‌ನಗರದಲ್ಲಿ ಶಾಶ್ವತವಾಗಿ ವಸ್ತು ಪ್ರದರ್ಶನ ಮಾಡುವುದಕ್ಕೆ ಅವಕಾಶ ಕೊಡುವಂತಹ ವಿಚಾರವನ್ನು ಮಾಡಿದ್ದೀರಾ? ಕಾಂಗ್ರೆಸ್ ವಸ್ತುಪ್ರದರ್ಶನದಿಂದ ಬಂದ ಪೂರ್ತಿ ಹಣ ಸರ್ಕಾರಕ್ಕೆ ಬರುವಂತೆ ಮಾಡುತ್ತೀರಾ ಅನ್ನುವುದು ಇನ್ನೊಂದು ಪ್ರಶ್ನೆ.

ಎರಡನೆಯದಾಗಿ ದಯಾದಂದ ಸಾಗರ್‌ರವರು ಒಂದು ರಾಷ್ಟ್ರೀಯ ಪ್ರದರ್ಶನ ಮಾಡಿದ್ದಾರಲ್ಲಾ ಅದಕ್ಕೆ ತಾವು ಮೊದಲು ಅಂಗೀಕಾರ ಕೊಟ್ಟದ್ದು ಉಂಟೇ? ಮೈಸೂರು ಸರ್ಕಾರದ ಸ್ಟಾಲ್‌ಗಳನ್ನು ಕೊಡುತ್ತೇವೆ ಎಂದು ಒಪ್ಪಿಗೆ ಕೊಟ್ಟು ಪತ್ರ ಬರೆದದ್ದು ಉಂಟೇ? ಅನಂತರದಲ್ಲಿ ಅವರಿಗೂ ನಿಮಗೂ ಭಿನ್ನಾಭಿಪ್ರಾಯ ಬಂದು ಆ ಕಾಗದಪತ್ರಗಳನ್ನೆಲ್ಲಾ ವಾಪಸು ತೆಗೆದುಕೊಂಡು ಅವರು ವಸ್ತು ಪ್ರದರ್ಶನ ನಡೆಸದಂತೆ ತಾವು ಪ್ರಯತ್ನ ಮಾಡಿದ್ದು ಉಂಟೇ? ಈ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಕಾಂಗ್ರೆಸ್ ವಸ್ತುಪ್ರದರ್ಶನ ಯಾವ ಸ್ಥಳದಲ್ಲಿ ನಡೆಯುತ್ತಾ ಇದೆ ಅದೇ ಪ್ರಕಾರ ಪಿ.ಎಸ್.ಪಿ. ಯವರು, ಎಸ್.ಎಸ್.ಪಿ. ಯವರು, ಜನಸಂಘದವರು ಮತ್ತು ಇನ್ನೂ ಅನೇಕ ಪಾರ್ಟಿಗಳವರು ಕೇಳಿದರೆ ಅವರಿಗೂ ಅವಕಾಶ ಕೊಡುತ್ತೀರಾ ಹೇಗೆ ಅಂತ ಮಾನ್ಯ ಗೋಪಾಲಗೌಡರು ಕೇಳಿದರು. ಈಗ ಪ್ರಶ್ನೆ ಬಂದಿರುವಂತಹದು, ಕಾಂಗ್ರೆಸ್ ವಸ್ತು ಪ್ರದರ್ಶನ ಸಮಿತಿಯವರು ಆ ಸ್ಥಳ ನಮಗೆ ಸ್ಥಾಯಿಕವಾಗಿ ಪ್ರದರ್ಶನ ನಡೆಸುವುದಕ್ಕೆ ಕೊಡಬೇಕೆಂದು ಕೇಳಿದ್ದು ಇವತ್ತು ಕೇಳಿದ್ದಲ್ಲ, ಅನೇಕ ವರ್ಷಗಳಿಂದ ಅವರ ಬೇಡಿಕೆ ಸರ್ಕಾರದ ಮುಂದೆ ಇದೆ. ಈ ರೀತಿಯಿಂದ ಬಹುಶಃ ಎರಡನೇ ಯಾವ ರಾಜಕೀಯ ಪಾರ್ಟಿಯಿಂದಲೂ ಬಂದಿಲ್ಲ. ಮತ್ತು ಯಾವ ರಾಜಕೀಯ ಪಕ್ಷಗಳೂ ನನಗೆ ನೆನಪು ಇದ್ದಂತೆ ಅಲ್ಲಿ ವಸ್ತುಪ್ರದರ್ಶನ ಮಾಡಿಲ್ಲ ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ. ಎರಡನೆಯದು ನ್ಯಾಷನಲ್ ಫೇರ್ ಪ್ರಶ್ನೆ. ಇದಕ್ಕೆ ಅನುಮತಿ ಕೊಟ್ಟಿದ್ದು, ಸ್ಟಾಲ್ ಹಾಕುವುದಕ್ಕೆ ಒಪ್ಪಿಗೆ ಕೊಟ್ಟು ಅನಂತರ ವಿತ್‌ಡ್ರಾ ಮಾಡಿದ್ದೀರಿ ಅನ್ನುವ ಮಾತನ್ನು ಹೇಳಿದ್ದಾರೆ. ಆ ಬಗ್ಗೆ ಸವಿಸ್ತಾರವಾಗಿ ಹೇಳುವಂತಹ ಪರಿಸ್ಥಿತಿಯಲ್ಲಿ ಈಗ ನಾನು ಇಲ್ಲ. ಪ್ರತ್ಯೇಕ ಪ್ರಶ್ನೆ ಅಥವಾ ಮತ್ತಿನ್ನೇನಾದರೂ ಕೇಳಿದಾಗ ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಎಸ್ ಚನ್ನಯ್ಯ.—ಪ್ರತ್ಯೇಕ ಪ್ರಶ್ನೆ ಎಂದರೆ ಅರ್ಥವೇನು, ಪುನಃ ಬೇರೆ ಬರೆದು ಕಳುಹಿಸಬೇಕೇ?

ಶ್ರೀ ವೀರೇಂದ್ರ ಪಾಟೀಲ್.—ನ್ಯಾಷನಲ್ ಫೇರ್ ಅಂತ ಈಗ ನಡೆಯುತ್ತಾ ಇರುವ ಜಾಗ ನಮ್ಮದು ಅಂತ ನಾವು ಅನೇಕ ವರ್ಷಗಳಿಂದ ತಕರಾರು ಹಾಕಿದ್ದೇವೆ. ಮಿಲಿಟರಿಯವರು ತಮ್ಮದು ಅಂತ ಅವರು ತಕರಾರು ಹಾಕಿದ್ದಾರೆ. ನ್ಯಾಷನಲ್ ಫೇರ್ ನಡೆಸಬೇಕೆನ್ನುವುದಕ್ಕೆ ಮಿಲಿಟರಿಯವರ ಹತ್ತಿರ ಅವರು ಪರ್ಮಿಷನ್ ತೆಗೆದುಕೊಂಡು ಆಮೇಲೆ ನಮ್ಮ ಹತ್ತಿರ ಪತ್ರವ್ಯವಹಾರ ಮಾಡಿದ್ದಾರೆ, ಆದ್ದರಿಂದ ಈ ಮಾನ್ಯ ಸಭೆಗೆ ಹೇಳಬೇಕಾಗಿದ್ದರೆ ವಿಷಯಗಳನ್ನು ತಿಳಿದುಕೊಂಡು ಹೇಳಬೇಕಾಗುತ್ತದೆ, ನನ್ನ ತಲೆಯಲ್ಲಿ ಎಷ್ಟು ಇದೆಯೋ ಅದನ್ನು ಹೇಳಿದರೆ ತಪ್ಪಾಗುತ್ತದೆ.

ಶ್ರೀ ಎಸ್. ಚನ್ನಯ್ಯ.—ಅವರಿಗಿಂತ ಹೆಚ್ಚಾಗಿ ನನಗೆ ಗೊತ್ತಿದೆ ಆ ಜಾಗ ಯಾರರು ಅಂತ. ಮುನಿಸಿಪಲ್ ಕಾರ್ಪೊರೇಷನ್ ಕಟ್ಟಡ ಕಟ್ಟಕೂಡದು ಅಂತ ಹೇಳಿದ್ದಾರೆ ಆ ವಿಚಾರ ಬೇರೆ. ಎರಡನೆಯ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆಂದರೆ ಏನರ್ಥ !

ಶ್ರೀ ವೀರೇಂದ್ರ ಪಾಟೀಲ್.—ನಾನು ಎಲ್ಲಾ ರಿಕಾರ್ಡ್ಸ್ ನೋಡಿಕೊಂಡು ಉತ್ತರ ಹೇಳುತ್ತೇನೆ. ನಾನು ಬಹುಶಃ ಸರ್ವಜ್ಞನಾಗಿದ್ದರೆ ಕಳಕಳಿಯಿಂದ ತಕ್ಷಣ ಉತ್ತರ ಹೇಳಬಹುದಾಗಿತ್ತು. ನಾನು ಉತ್ತರ ಹೇಳಬೇಕಾದರೆ ಬಹಳ ಜವಾಬ್ದಾರಿಯುತವಾಗಿ ಹೇಳಬೇಕಾಗಿದೆ.

ಶ್ರೀ ಎಸ್. ಚನ್ನಯ್ಯ.—ಅಧ್ಯಕ್ಷರೇ, ಅವರಿಗೆ ಎಷ್ಟು ಜವಾಬ್ದಾರಿ ಇದೆಯೋ ನಮಗೂ ಅಷ್ಟೇ ಜವಾಬ್ದಾರಿ ಇದೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಶ್ರೀ ಗೋಪಾಲಗೌಡರು ಒಂದು ವಿಚಾರವನ್ನು ಕೇಳಿದರು. ಅದು ನ್ಯಾಷನಲ್ ಫೇರ್‌ನಲ್ಲಿ ಸ್ಟಾಲ್ಸ್ ಹಾಕುತ್ತೇವೆಂದು ಹೇಳಿ ಹಾಕಲಾರದೆ ಅವನ್ನು ವಿತ್‌ಡ್ರಾವಮಾಡಿದ್ದೇವೆಂದು ಅದರ ಬಗ್ಗೆ ಏನು ಬರೆದುಕೊಟ್ಟಿದ್ದೇವೆಂಬುದನ್ನು ಗೊತ್ತಿಲ್ಲದೆ ಒಮ್ಮೆಯೇ ಹೇಗೆ ಇಲ್ಲ ಹೇಳಲಿ. ಅದನ್ನು ತಿಳಿದುಕೊಂಡು ಹೇಳುವುದಕ್ಕೆ ತಯಾರಿದ್ದೇನೆ. ಈಗ ಹೇಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಎಸ್. ಚನ್ನಯ್ಯ.—ಇವರು ಸ್ಟಾಲ್ಸ್ ಹಾಕುತ್ತೇವೆಂದು ಮೊದಲು ಪ್ರಾಮಿಸ್ ಮಾಡಿರಲಿಲ್ಲವೇ ? ಇವರು ಒತ್ತಾಯ ಬಂದದ್ದರಿಂದ ಅದನ್ನು ನಿಲ್ಲಿಸಿದ್ದಾರೆ. ಇವರು ಮೊದಲು ಒಪ್ಪಿಕೊಂಡು ಆಮೇಲೆ ಏಕೆ ಅದಕ್ಕೆ ವಿರೋಧವಾಗಿ ವರ್ತಿಸಿದರು ! ನಾನೇನು ಮಾನ್ಯ ಶ್ರೀ ದಯಾನಂದಸಾಗರ್ ಅವರಿಗೆ ಸಪೋರ್ಟ್‌ಮಾಡುತ್ತಿಲ್ಲ. ಈ ದೇಶದ ಮುಖ್ಯಮಂತ್ರಿಗಳು ವಚನ ಕೊಟ್ಟು ನಂತರ ಅದನ್ನು ಹಿಂದುರುಗಿ ತೆಗೆದುಕೊಂಡಿದ್ದಾರೆಂದು ಹೇಳಿದರೆ ಇವರು ಏನು ಮಾಡುವುದಕ್ಕೂ ತಯಾರಾಗಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮುಖ್ಯ ಮಂತ್ರಿಗಳು ಕಾಂಗ್ರೆಸಿನವರು ಮೊದಲೇ ಅರ್ಜಿ ಹಾಕಿಕೊಂಡರು, ಇನ್ನಾವ ರಾಜಕೀಯ ಪಕ್ಷಗಳು ಅರ್ಜಿ ಹಾಕಿಕೊಳ್ಳಲಿಲ್ಲ ಆದ್ದರಿಂದ ಕಾಂಗ್ರೆಸ್ಸಿನವರ ಅರ್ಜಿಯನ್ನು ಪರಿಶೀಲನೆಮಾಡಿದ್ದೇವೆಂದು ಹೇಳುತ್ತಾರೆ. ನಾನು ಯೋಚನೆಮಾಡುವುದು ಏನೆಂದರೆ, ಇದು ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರರ ಪ್ರಶ್ನೆಯಲ್ಲ, ಇದು ಈದೇಶದ ಹಾಗೂ ಜನಗಳ ಹಿತದ ಪ್ರಶ್ನೆ. ಆ ಒಂದು ದೃಷ್ಟಿಯಿಂದ ಈ ವಸ್ತು ಪ್ರದರ್ಶನ ಆಗಬೇಕು. ಸರ್ಕಾರಕ್ಕೂ ಹೆಚ್ಚಿಗೆ ಇದರಿಂದ ವರಮಾನ ಬರಬೇಕು. ಇದು ನನ್ನ ಅಭಿಪ್ರಾಯ. ಮೈಸೂರಿನಲ್ಲಿ ಎಗ್ಜಿಬಿಷನ್ ನಡೆಯುತ್ತಾ ಇರುತ್ತದೆ. ಅದರ ವರಮಾನದ ಮೇಲೆ ಯಾವ ರಾಜಕೀಯಪಕ್ಷಕ್ಕೂ ಹಕ್ಕಿಲ್ಲ. ಅದರ ಬಗ್ಗೆ ಏನೂ ಅಭ್ಯಂತರವಿಲ್ಲ. ತಕರಾರು ಇಲ್ಲ. ಆದ್ದರಿಂದ ಇಲ್ಲಿಯೂ ಸಹ ಎಲ್ಲರಿಗೂ ಅನುಕೂಲವಾಗುವಂತೆ ಈ ಸಾರ್ವಜನಿಕ ಸ್ಥಳವನ್ನು ಒಂದು ಪಕ್ಷಕ್ಕೇ ಕೊಡದೆ, ಎಲ್ಲ ಪಕ್ಷದವರಿಗೂ ಅನ್ವಯಿಸುವ ಹಾಗೆ ಸರ್ಕಾರದವರೇ ಒಂದು ಎಗ್ಜಿಬಿಷನ್ ಮಾಡುವುದಕ್ಕೆ ಆಗುವುದಿಲ್ಲವೇ ? ಆ ರೀತಿ ಮಾಡುವುದು ಉತ್ತಮ, ಒಳ್ಳೆಯದು. ವಿರೋಧ ಪಕ್ಷದವರು ಕಳಕಳಿಯಿಂದ ಒತ್ತಾಯಮಾಡುವುದರಿಂದ ಅದರ ಬಗ್ಗೆ ಧೈರ್ಯವಾಗಿ ಯೋಚನೆ ಮಾಡಿ ಸರ್ಕಾರದವರು ತೆಗೆದುಕೊಂಡಿರುವುದನ್ನು ಕೈಬಿಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆ ಕೇಳಿದ್ದಾರೆ. ನಾನು ಇಲ್ಲಿಯವರೆಗೂ ಏನಾಗಿದೆಯೆಂದು ಹೇಳಿದ್ದೇನೆ. ಅವರು ಹೇಳುವುದು ಇದನ್ನು ಪೂರ್ತಿಯಾಗಿ ಕೈಬಿಡಬೇಕೆಂದು. ಅವರು ಸರ್ಕಾರದ ವತಿಯಿಂದ ಒಂದು ಎಗ್ಜಿಬಿಷನ್ ಕಟ್ಟಿಸಬೇಕು ಎಂಬುದಾಗಿ ಹೇಳಿದ್ದಾರೆ. ಅದನ್ನು ಪರಿಶೀಲನೆಮಾಡಬಹುದು. ಆದರೆ ಅದರ ಬಗ್ಗೆ ಇವತ್ತು ಏನೂ ಹೇಳುವುದಕ್ಕಾಗುವುದಿ.

ಶ್ರೀ ಎಸ್. ಶಿವಪ್ಪ.—ಈಗ ಮಾನ್ಯ ಮುಖ್ಯಮಂತ್ರಿಗಳು ಈ ಜಾಗವನ್ನು ಕಾಂಗ್ರೆಸ್ಸಿನವರು ಕೇಳಿದ್ದಾರೆ, ಅದನ್ನು ಕೊಡಬೇಕೇ ಬಿಡಬೇಕೇ, ಅವರ ಬಗ್ಗೆ ಯಾವರೀತಿ ಅಗ್ರಿಮೆಂಟ್ ಆಗಬೇಕ ಅದಕ್ಕೆ ಏನು ಕಂಡೀಷನ್ಸ್ ಹಾಕಬೇಕು ಎನ್ನುವ ವಿಚಾರದಲ್ಲಿ ಇನ್ನೂ ಅಗ್ರಿಮೆಂಟ್ ಆಗಿಲ್ಲವೆಂದ ಹೇಳಿದ್ದಾರೆ. ಇದು ಇನ್ನೂ ಆ ಮಟ್ಟದಲ್ಲಿರಬೇಕಾದರೆ, ಕೊನೆಯ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ ಎಲ್ಲಾ ವಿರೋಧಪಕ್ಷದ ಮುಖಂಡರನ್ನು ಕರೆಸಿ ಆ ಜಮೀನು ಬಗ್ಗೆ ಒಂದು ಖೈರು ತೀರ್ಮಾನ ಮಾಡಬೇಕು. ಇದನ್ನು ಸರ್ಕಾರದವರು ಮಾಡುವುದು ಅಥವಾ ಕಾರ್ಪೊರೇಷನ್ನಿಗೆ ಕೊಡುವುದು ಇದರ ಬಗ್ಗೆ ಎಲ್ಲರ ಹತ್ತಿರ ಸಮಾಲೋಚನೆ ಮಾಡಿ ಒಂದು ಅಂತ್ಯ ತೀರ್ಮಾನ ಮಾಡುತ್ತೇವೆಂದು ಹೇಳಿಕೆ ಕೊಟ್ಟರೆ ನಮಗೆ ಸಮಾಧಾನವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಇವತ್ತಿನ ದಿವಸ ಭರವಸೆ ಕೊಡುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ನಿರ್ಣಯ ತೆಗೆದುಕೊಳ್ಳುವಾಗ ಅದು ರಾಜ್ಯದ ಹಿತದೃಷ್ಟಿಯಿಂದ ಮತ್ತು ಬೆಂಗಳೂರಿನಲ್ಲಿ ಒಳ್ಳೆಯ ಭೂಷಣಪ್ರಾಯವಾದ ವಸ್ತುಪ್ರದರ್ಶನ ಬರುವಂತಹ ದೃಷ್ಟಿಯಿಂದ ನಿರ್ಣಯ ತೆಗೆದುಕೊಳ್ಳುತ್ತೇವೆ. ಸರ್ಕಾರಿ ಮಟ್ಟದಲ್ಲಿ ಅನೇಕ ನಿರ್ಣಯಗಳನ್ನು ತೆಗೆದು ಕೊಳ್ಳುತ್ತೇವೆ. ಅನೇಕ ಡಿಸ್ಕ್ರೀಶನರಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆ. ಎಲ್ಲಿ ವಿರೋಧ ಪಕ್ಷದ ನಾಯಕರನ್ನು ಸಮಾಲೋಚನೆ ಮಾಡುವ ಅವಶ್ಯಕತೆ ಇದೆ ಎಂದು ಕಂಡುಬಂದಾಗ, ಅಲ್ಲಿ ಆ ರೀತಿ ಮಾಡುತ್ತೇವೆ. ಎಲ್ಲಿ ಅವಶ್ಯವಿಲ್ಲವೋ, ಅಲ್ಲಿ ಮಾಡುವಂತಹ ಪ್ರಸಂಗ ಬರುವುದಿಲ್ಲ. ಆದ್ದರಿಂದ ಸಮಾಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ನೀಡುವುದು ಕಷ್ಟ.

ಅಧ್ಯಕ್ಷರು.—ಈ ರೀತಿ ಸಭೆಯಲ್ಲಿಯೇ ಮಾತನಾಡುತ್ತಾ ಇದ್ದರೆ, ಈ ಮಾತು ಮುಗಿಯುವುದು ಕಷ್ಟ. ಆದ್ದರಿಂದ ವಿರೋಧಪಕ್ಷದ ನಾಯಕರೂ ಮತ್ತು ಸಭಾನಾಯಕರೂ ಒಟ್ಟಿಗೆ ಕೂತುಕೊಂಡು ಮಾತುಕತೆ ನಡೆಸಬಹುದು.

ಶ್ರೀ ಎಸ್. ಚನ್ನಯ್ಯ. - ಅದನ್ನು ಅವರಿಗೆ ಹೇಳಿ, ಸ್ವಾಮಿ.

ಅಧ್ಯಕ್ಷರು.—ಅವರು ಹೇಳುವ ಉತ್ತರದಲ್ಲಿ ತಮಗೆ ಸಮಾಧಾನ ಇಲ್ಲವೆಂದು ಕಾಣುತ್ತದೆ. ಅದಕ್ಕೆ ಈಗ ಎರಡು ವಿಧಾನ ಇದೆ. ಒಂದು ಈ ಮನೆಯ ಓಟು ತೆಗೆದುಕೊಳ್ಳುವುದು. ಇನ್ನೊಂದು ಪ್ರತ್ಯೇಕವಾಗಿ ಪ್ರೈವೇಟ್ ಆಗಿ ಚರ್ಚೆ ಮಾಡುವುದು. ಅದಲ್ಲದೆ, ಇದರಲ್ಲಿ ಅಧ್ಯಕ್ಷರು ಏನು ಹೇಳುವುದಕ್ಕಾಗುತ್ತದೆ? ಇಲ್ಲಿ ಕೂತು ಅವರು ಒಂದು ಹೇಳುವುದು, ನೀವು ಒಂದು ಪ್ರಶ್ನೆ ಕೇಳುವುದು ? ಇದು ಒಂದು ಡಿಂಗ್ ಡಾಂಗ್ ಫೈಟ್ ಆಗುತ್ತದೆ ಅಷ್ಟೆ. ಆದ್ದರಿಂದ ನಾನು ಈಗ ಮನೆಯನ್ನು ಅಜರ್ನ್ ಮಾಡಲೋ ?

ಶ್ರೀ ವಾಟಾಳ್ ನಾಗರಾಜ್.—ಅಡ್ಜರ್ನ್ ಆಗಲಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ಪದೇ ಪದೇ ಎದ್ದು ನಿಲ್ಲುವುದು ಕೂತುಕೊಳ್ಳುವುದು ಸರಿಯಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಏನು ಸ್ವಾಮಿ, ಈ ರೀತಿ ಹೇಳುತ್ತೀರಿ ? ನಮಗೆ ಮಾತನಾಡಲು ತಾವು ಅವಕಾಶ ಕೊಡುತ್ತಾ ಇಲ್ಲ. ತಾವು ಎದ್ದುನಿಲ್ಲುತ್ತೀರಿ, ಕೂತುಕೊಳ್ಳುತ್ತೀರಿ ಎಂದು ಹೇಳುತ್ತೀರಿ, ನಾವು ಏನು ಮಾಡೋಣ ?

2–30 P.M.

ಶ್ರೀ ಎಸ್. ಚನ್ನಯ್ಯ.—ತಾವು ಹೇಳಿದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ಕೇಳುವುದಕ್ಕೆ ಸರಿಯಾಗಿ ಉತ್ತರ ಕೊಡದಿದ್ದರೆ, ಏನು ಮಾಡೋಣ. ತಾವು ಹೇಳಿದಿರಿ, ನಾವು ಪ್ರಶ್ನೆ ಹಾಕಿದರೆ, ಅವರು ಉತ್ತರ ಕೊಡುತ್ತಾರೆಂದು. ನಾವು ಕೇಳಿದ್ದಕ್ಕೆ ಸರಿಯಾದ ಉತ್ತರ ಕೊಡುವುದಿಲ್ಲವಲ್ಲ ! ಆದ್ದರಿಂದ ನಾನು ತಮ್ಮನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ ತಾವು ಎಲ್ಲರಿಗೂ ಹೇಳಿ. ತಾವು ಶ್ರೀಮಾನ್ ಶಿವಪ್ಪನವರಿಗೆ ಮಾತ್ರ ಹೇಳಬೇಡಿ.

Mr. SPEAKER.—I am requesting all the hon. Members to decide the matter in a constitutional way. As I said, there are two ways of doing it. It is apparent that there is difference of opinion and that difference can be resolved by a vote in this House or by private discussion. Let us stop this discussion and go over to the important subject of General Discussion on the Budget. We are hard pressed for time and several hon. Members want to take part in this discussion. Hon. Members can bring up this matter in the course of the debate.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಈ ವಿಷಯ ಏನಿದೆ ಇದು ಬರೀ ಬೆಂಗಳೂರು ನಗರಕ್ಕೆ ಮಾತ್ರ ಸಂಬಂಧಪಟ್ಟ ವಿಷಯವಲ್ಲ, ಇಡೀ ಮೈಸೂರು ದೇಶದ ಜನತೆಯ ಗಮನವನ್ನು ಸೆಳೆಯುವ ಮಹತ್ವಪೂರ್ಣವಾದ ವಿಚಾರ. ಸರ್ಕಾರ ಬಿಗಿ ಮುಷ್ಟಿಯಿಂದ ನಾವು ಕೊಟ್ಟಿದ್ದು ಕೊಟ್ಟಿದ್ದೇ ಎಂದರೆ ಸುಭಾಷ್ ನಗರದಲ್ಲಿ ಕಾಂಗ್ರೆಸ್ ಎಗ್ಜಿಬಿಷನ್‌ನಲ್ಲಿ ಬಾವುಟ ಹಾರಿಸಿ ಅವರು ವಸ್ತು ಪ್ರದರ್ಶನ ಮಾಡುವುದಕ್ಕೆ ಮೈಸೂರಿನ ಜನತೆ ಬಿಟ್ಟುಕೊಡುವುದಕ್ಕೆ ತಯಾರಾಗಿಲ್ಲ ಎಂದು ನಾನು

ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಪಕ್ಷದ ಹಿತಕ್ಕೋಸ್ಕರ ಇದನ್ನು ಕೊಡುವುದು ಪ್ರಜಾಪ್ರಭುತ್ವ ನೀತಿಗೆ ವಿರೋಧವಾಗಿದೆ. I am prepared for a talk even now. If the Hon. Chief Minister wants something else, we are prepared for that also. I do not want to make a threat like that but I wish to mention that the people are agitated over this issue. I am again appealing to the Government to give up the idea of giving this costly land to a political party.

Mr. SPEAKER.—I understand that the matter is not yet decided and is still under negotiation.

(*Several members stood up and began to speak simultaneously*)

Mr. SPEAKER.—In view of this confusion, I adjourn the House for half an hour. The House will meet again at 3 P.M.

The House adjourned at Thirty-five Minutes past Two of the Clock and reassembled at Forty-five Minutes past Three of the Clock.

(Mr. SPEAKER in the Chair)

Sri K. PUTTASWAMY (Minister for Law, Labour and Parliamentary Affairs).—Sir, it is a matter for regret that the House had to be adjourned on a very, very small matter.

(*Interruptions*)

ಶ್ರೀ ವಾಟಾಳ್ ನಾಗರಾಜ್.—ಕೋಟ್ಯಾಂತರ ರೂಪಾಯಿ ಲೂಟಿ ಆಗತಕ್ಕ ವಿಷಯ ಇದು ಮಾನ್ಯ ಮಂತ್ರಿಗಳು ಹೇಳುವ ಹಾಗೆ ಸಣ್ಣ ವಿಷಯವಲ್ಲ.

ಅಧ್ಯಕ್ಷರು.—ಅವರು ಏನು ಹೇಳುತ್ತಾರೆಯೋ ಕೇಳೋಣ. ತಮಗೆ ದೊಡ್ಡದು ಅನ್ನಿಸಿದ್ದು ಅವರಿಗೆ ಸಣ್ಣದಿರಬಹುದು, ತಮಗೆ ಸಣ್ಣದು ಅನ್ನಿಸಿದ್ದು ಅವರಿಗೆ ದೊಡ್ಡದು ಅನ್ನಿಸಬಹುದು.

(ಅನೇಕ ಸದಸ್ಯರು ಒಟ್ಟಿಗೇ ಎದ್ದು ಮಾತನಾಡಲು ಪ್ರಯತ್ನ ಮಾಡಿದರು.)

ಶ್ರೀ ಎಚ್. ಎನ್. ನಂಜೇಗೌಡ.—ಗ್ರ್ಯಾಂಡ್ ಫಾದರ್ಸ್ ಪ್ರಾಪರ್ಟಿ ಅಲ್ಲ......

Sri K. PUTTASWAMY.—I do appreciate the feelings of the hon. Members. Sri Nanje Gowda was heard to say—if I am wrong I will apologise, that it is not my grandfather's property. It is no doubt true that it is not my grandfather's property, but that is the property belonging to the entire 2½ crores of people and I am one of them. I never meant that it was a small matter. It is a matter which has agitated a fairly sizable section of this House. What I was referring to was the last portion, namely, the Leader of the Opposition wanting an assurance from the Chief Minister that he should have prior discussion and consultation of the matter with the leaders of several Opposition parties before taking a decision. The Leader of the House, the Chief

(Sri K. Puttaswamy)

Minister, made it very clear that a final decision has not been taken. When the Leader of the Opposition wanted an assurance, what the Chief Minister said was that it would be rather difficult for the Government to give such an assurance as that would set up a wrong precedent Perhaps the Leader of the Opposition did not expect the Chief Minister to give an assurance of consultation on every matter. Perhaps what he was referring to was this particular matter.

We know this is fairly an important matter. Let not my hon. friends think that I am small enough to think that this is a very small matter. I know it is twelve acres of land and the adjacent land had been sold at Rs. 125 per sq. yard to a corporate body which is functioning under the Government. I do not feel that it is small matter. But now the point at issue is, whether the Chief Minister has to consult the leaders of the Opposition parties before taking a final decision in this matter. Sir, under a democratic set up, whenever any Member desire to discuss—whether he belongs to this Party or tha Party—it is the duty of those in charge of the administration to give an opportunity to discuss the matter and then take any decision they like. So far as this particular instance is concerned, I do not think the Chief Minister would refuse to consult the hon. Members, especially the Leader of the Opposition. Therefore, I feel that if the Leader of the Opposition has in his mind only this particular instance and discussion on this matter before the Government takes decision, I do not think there would be any difficulty for the Chief Minister to consider this very favourably. I would like the Leader of Opposition to make his position clear to enable the Chief Minister to make his position clear in respect of this matter.

ಶ್ರೀ ಎಸ್. ಚನ್ನಯ್ಯ—ಶ್ರೀ ಕೆ. ಪುಟ್ಟಸ್ವಾಮಿಯವರು ಹೇಳಿದುದು ಸರಿಯಾಗಿ ಅರ್ಥವಾಗಲಿಲ್ಲ. ಈ ರೀತಿಯಾಗಿ ಅವರು ಹೇಳುತ್ತಾರೆಂದು ನಾನು ತಿಳಿದಿರಲಿಲ್ಲ. ಯಾರಿಗೆ ಬೇಕಾದರೂ ಕೊಡಲಿ ಕೊಡುವುದಕ್ಕೆ ಎಲ್ಲರನ್ನೂ ಕನ್‌ಸಲ್ಟ್ ಮಾಡಲಿ. ಸರಕಾರದವರು ಎಲ್ಲ ಪಕ್ಷದವರನ್ನೂ ಕರೆಸಿ ಅವರೊಂದಿಗೆ ಮಾತನಾಡಿ ಎಲ್ಲರ ಒಪ್ಪಿಗೆಯನ್ನೂ ಪಡೆದು ಕೊಡಬೇಕು. ಶ್ರೀ ಪುಟ್ಟಸ್ವಾಮಿಯವರು ಹೇಳಿದ್ದನ್ನು ಒಪ್ಪುವುದಕ್ಕಾಗುವುದಿಲ್ಲ.

†ಶ್ರೀ ಎಸ್. ಶಿವಪ್ಪ.—ಮಾನ್ಯ ಪಾರ್ಲಿಮೆಂಟರಿ ಸಚಿವರು ನಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಹೇಳಿದ್ದಾರೆ. ಅದನ್ನು ಈಗ ಸ್ಪಷ್ಟಪಡಿಸುತ್ತೇನೆ. ಸುಭಾಷ್ ನಗರದಲ್ಲಿರುವ ಭೂಮಿಯನ್ನು ಕಾಂಗ್ರೆಸ್ ಪಕ್ಷದ ವಸ್ತುಪ್ರದರ್ಶನ ನಡೆಸುವುದಕ್ಕೆ ಸರಕಾರ ಅನೇಕ ವರ್ಷಗಳವರೆಗೆ ಲೀಸ್ ಮೂಲಕ ಅಥವ ಖರೀದಿಯ ಮೂಲಕ ಕೊಡಬೇಕೆಂಬ ಅರಿಕೆ ಸರಕಾರದ ಮುಂದಿದೆ. ಸರಕಾರ ಏಕಾಏಕಿ ತಮ್ಮ ಹತ್ತಿರ ಅರ್ಜಿ ಬಂದರೆ ಒಂದು ತೀರ್ಮಾನ ಮಾಡುವುದು, ಒಂದು ನಿರ್ಣಯಕ್ಕೆ ಬಂದು ತನ್ನ ಪಕ್ಷಕ್ಕೆ ಸಹಾಯ ಮಾಡುವುದು, ಈ ಸಂಬಂಧವಾದ ನಿಲುವನ್ನು ಕೈಕೊಂಡಿರುವುದು ಅಪಾಯಕಾರಿ. ಇದುವರೆಗೆ ಈ ಭೂಮಿಯನ್ನು ಕೊಡುವ ವಿಚಾರವನ್ನು ಇತ್ಯರ್ಥ ಮಾಡಿಲ್ಲ ಎಂದು ಈಗಾಗಲೇ ಸಭಾ ನಾಯಕರು ತಿಳಿಸಿದ್ದಾರೆ. ಆದುದರಿಂದ ಪುನಃ ಹೇಳುವುದು ಆ ಭೂಮಿಯನ್ನು ಯಾರಿಗಾದರೂ ವಿಲೇ ಮಾಡುವುದಕ್ಕೆ ಮುಂಚೆ ಈ ಸಭೆಯ ವಿರೋಧ ಪಕ್ಷವನ್ನು ನಂಬಿಕೆಗೆ ತೆಗೆದುಕೊಂಡು, ಅದನ್ನು ಭೇಟಿ ಮಾಡಿ, ಅದರೊಂದಿಗೆ ಚರ್ಚೆ ಮಾಡಿ ತೀರ್ಮಾನಮಾಡಬೇಕು. ಇದಕ್ಕೆ ಮುಂಚೆ ಯಾವುದೇ ತೀರ್ಮಾನ ಮಾಡಬಾರದು ಎಂಬ ಭರವಸೆಯನ್ನು ಸಭಾ ನಾಯಕರು ಈ ಸಭೆಗೆ ಕೊಡಬೇಕು. ಇದನ್ನು ನಾನು ವಿರೋಧಪಕ್ಷದ ಪರವಾಗಿ ಒತ್ತಾಯ ಮಾಡುತ್ತೇನೆ.

† ಶ್ರೀ ಎಸ್. ಗೋಪಾಲಗೌಡ.—ಈಗ ನಡೆದ ಚರ್ಚೆಯಲ್ಲಿ ಅನೇಕ ವಿಷಯಗಳು ಸಭೆಯ ಗಮನಕ್ಕೆ ಬಂದಿದೆ. ಈ ಭೂಮಿಯು ಹಾರ್ಟಿಕಲ್‌ಚರ್ ಇಲಾಖೆಗೆ ಸೇರಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಮತ್ತೊಬ್ಬರನ್ನು ಕೇಳಿದಾಗ ಕಾರ್ಪೋರೇಷನ್‌ಗೆ ಆ ಜಮೀನು ಸೇರಿದೆ, ಅದಕ್ಕಾಗಿ ಹೈಕೋರ್ಟಿಗೆ ಹೋಗುತ್ತೇವೆ ಎಂದು ಹೇಳಿದರು. ಆದುದರಿಂದ ಈ ಭೂಮಿ ಯಾರಿಗೆ ಸೇರಿದೆ ಎಂಬುದು ಇನ್ನೂ ನಿರ್ಧಾರವಾಗಿಲ್ಲ.

ಎರಡನೆಯದಾಗಿ ಕಾಂಗ್ರೆಸ್ ವಸ್ತುಪ್ರದರ್ಶನ ಬಹಳ ವರ್ಷದಿಂದ ನಡೆಸಿಕೊಂಡು ಬರುತ್ತಿದೆ. ಅದನ್ನು ಸಹಿಸಿಕೊಂಡು ಬಂದಿದ್ದಾರೆ. ಆದರೆ ನೀವು 90 ವರ್ಷಕ್ಕೆ 100 ವರ್ಷಕ್ಕೆ ಹೀಗೆ ದಾನಕೊಡುವುದಾದರೆ ಇದು ಇತಿಹಾಸದಲ್ಲಿ ದೊಡ್ಡ ತಪ್ಪಾಗುತ್ತದೆ. 90 ವರ್ಷ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುತ್ತದೆಯೆಂಬ ನಂಬಿಕೆ ನನಗೇನೋ ಇಲ್ಲ. ಆದುದರಿಂದ ಈ ಅಗ್ರಿಮೆಂಟ್ ಆನರ್ ಮಾಡಬೇಕಾದರೆ ಮತ್ತೊಂದು ಸರಕಾರ ಪುನಃ ಕೋರ್ಟಿಗೆ ಹೋಗಬೇಕಾಗಬಹುದು ಎಂಬುದು ಕೆಲವು ವಕೀಲರ ಅಭಿಪ್ರಾಯ. ನನ್ನ ಅಭಿಪ್ರಾಯದಲ್ಲಿ ಅಗ್ರಿಮೆಂಟ್ ಕ್ಯಾನ್ಸಲ್ ಮಾಡಬಹುದು. ಅದು ಬೇರೆಯ ವಿಷಯ. ಇದು ಇಡೀ ರಾಜ್ಯದ ಜನರ ಮನವನ್ನು ಸೆಳೆದಿರುವುದು. ಈಗ ಬಹಳ ದಿವಸಗಳಿಂದ ಇದರ ಬಗ್ಗೆ ಚಳುವಳಿಯಾಗುತ್ತಿದೆ. ಅಲ್ಲದೆ ಈ ವಸ್ತುಪ್ರದರ್ಶನದಿಂದ ಬರುವ ಹಣ ಪೂರ್ತಿಯಾಗಿ ಕಾಂಗ್ರೆಸ್ಸಿಗೆ ಬರುತ್ತದೆಂಬ ನಂಬಿಕೆ ನನಗಾದರೂ ಇಲ್ಲ. ಅಲ್ಲಿ ಕೆಲವು ಹಿತಾಸಕ್ತಿಗಳು ಹುಟ್ಟಿಕೊಂಡಿವೆ. ಆದುದರಿಂದ ಕಾಂಗ್ರೆಸ್ಸಿಗೆ ಪ್ರಯೋಜನವಾಗುವುದಿಲ್ಲ. ಇದಕ್ಕಾಗಿ ನಾನು ತಮ್ಮ ಮೂಲಕ ಮುಖ್ಯ ಮಂತ್ರಿಗಳಿಗೆ ಒಂದು ಸಲಹೆ ಮಾಡುತ್ತೇನೆ. ವಸ್ತುಪ್ರದರ್ಶನ ಏರ್ಪಡಿಸಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ ಅದನ್ನು ಒಂದು ಶಾಶ್ವತವಾದ ಒಳ್ಳೆಯ ಸ್ಥಳದಲ್ಲಿ ಮಾಡಬೇಕು. ಅಲ್ಲಿ ಸರಕಾರದ ಎಲ್ಲಾ ಇಲಾಖೆಗಳೂ ಕಡಿಮೆ ಬಾಡಿಗೆಯಲ್ಲಿ ಸ್ಥಳ ಪಡೆಯಲಿ. ಅಲ್ಲಿ ಮನರಂಜನೆಗೂ ಅವಕಾಶ ಮಾಡಲಿ. ಜನರು ಹಣ ಕೊಡುವರು. ಸರರಕ್ಕೆ ಈಗ ಲಾಟರಿ ನಡೆಸಬೇಕೆಂಬ ಅಭಿಪ್ರಾಯವಿದೆ. ಈ ಯೋಚನೆಗಿಂತ ಶಾಶ್ವತವಾದ ಒಳ್ಳೆಯ ಸ್ಥಳದಲ್ಲಿ ಉತ್ತಮವಾದ ರೀತಿಯಲ್ಲಿ ವಸ್ತು ಪ್ರದರ್ಶನ ನಡೆಸಲಿ. ಅದರಮೇಲೆ ಒಳ್ಳೆಯ ರೀತಿಯಲ್ಲಿ ಹೆತೋಟಿಯನ್ನಿಟ್ಟುಕೊಂಡರೆ ಪ್ರತಿ ದಿವಸ 2–3 ಸಾವಿರ ರೂಪಾಯಿಗಳ ಆದಾಯ ಸರಕಾರಕ್ಕೆ ಬರುತ್ತದೆ. ಸರಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಈ ರೀತಿಯ ಗೊಂದಲವೂ ತಪ್ಪುವುದು. ಆದುದರಿಂದ ಮಾನ್ಯ ಶಿವಪ್ಪನವರು ಹೇಳಿರುವ ರೀತಿಯಲ್ಲಿ ವಿಚಾರಮಾಡಿ ಜೊತೆಗೆ ನಾನು ಕೊಟ್ಟಿರುವ ಸಲಹೆಯನ್ನು ಸಹ ಗಮನಿಸಿ, ಶ್ರೀ ಎಂ. ಎಸ್. ಕೃಷ್ಣನ್ ಹೇಳಿರುವುದನ್ನೂ ಮನಸ್ಸಿನಲ್ಲಿಟ್ಟುಕೊಂಡು ಒಂದು ತೀರ್ಮಾನಕ್ಕೆ ಬರಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಎರಡು ವಿಚಾರ. ಸುಭಾಷ್ ನಗರದ ಜಮೀನಿನಲ್ಲಿ ಅರ್ಧಭಾಗ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ನಿಗೆ ಕೊಟ್ಟಾಗ, 1 ಕೋಟಿ 45 ಲಕ್ಷಕ್ಕೆ ಕೊಟ್ಟಾಗ ಕಾರ್ಪೋರೇಷನ್ ಅದು ನಮ್ಮ ಜಾಗ, ಅದನ್ನು ಇತರರು ಕೊಡುವುದಕ್ಕೆ ಅವಕಾಶ ಅಲ್ಲಿ ಕೆಲವು ನಿರ್ಣಯ ಮಾಡಿದ್ದಾರೆ. ಕಳೆದ 5 ವರ್ಷಗಳಿಂದ ಸತತವಾಗಿ ಇದು ಕಾರ್ಪೋರೇಷನ್ ಜಾಗ, ಸರಕಾರ ಅದನ್ನು ಬೇರೆಯವರಿಗೆ ಕೊಡುವುದಕ್ಕೆ ಅವಕಾಶವಿಲ್ಲ, ಇದಕ್ಕೆ 50 ವರ್ಷಗಳ ರಿಕಾರ್ಡಿದೆ, ಕಾರ್ಪೋರೇಷನ್ ಪ್ರಾಪರ್ಟಿ ಲಿಸ್ಟಿನಲ್ಲಿ, ರಿಜಿಸ್ಟರಿನಲ್ಲಿ ಸ್ಪಷ್ಟವಾಗಿ ಇದಕ್ಕೆ ದಾಖಲೆ ಇದೆ. ಮತ್ತು ಇದು ಬೆಂಗಳೂರು ನಗರಕ್ಕೆ ನೀರು ಒದಗಿಸುವ ಜಾಗ. ಆದುದರಿಂದ ಇದು ಕಾರ್ಪೋರೇಷನ್ನಿಗೇ ಸೇರಬೇಕು ಎಂದು ನಿರ್ಣಯಮಾಡಿದೆ, ಹೀಗೆ ನಿರ್ಣಯವನ್ನು ಕಾರ್ಪೋರೇಷನ್ ಮಾಡಿ ಅದಕ್ಕೆ ದಾಖಲೆ ಕೊಟ್ಟಿದೆ. ಆದುದರಿಂದ ಇಡೀ ಮಾಲೀಕತ್ವದ ಬಗ್ಗೆ ಪ್ರಶ್ನೆ ಇರುವಾಗ ಒಂದು ತೀರ್ಮಾನ ಮಾಡುವುದು ಸರಿಯಲ್ಲ. ಇದನ್ನು ಒಂದು ಪಕ್ಷದವರಿಗೆ ಕೊಡುವುದು ಸರಿಯಲ್ಲ. ಇದರ ಬಗ್ಗೆ ಚರ್ಚೆ ಮಾಡಲು ಮುಖ್ಯ ಮಂತ್ರಿಗಳು ಸಾಕಾದಷ್ಟು ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

4-00 P. M.

† ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮಾನ್ ಶಾಮಣ್ಣನವರು ಒಂದು ಮಾತು ಹೇಳಿದರು; ಇನ್ನೊಂದು ವಿಷಯವನ್ನು ತಮ್ಮ ಮೂಲಕ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಸುಭಾಷ್ ನಗರದ ಮೈದಾನದ ಒಂದು ಭಾಗವನ್ನು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್‌ಗೆ ಒಂದು ಕೋಟಿ ಚಿಲ್ಲರೆ ಲಕ್ಷ ರೂಪಾಯಿಗಳಿಗೆ ಕೊಡಲಾಗಿದೆ ಎಂದು ತಿಳಿದು ಬಂದಿದೆ. ಈಗ ಕಾಂಗ್ರೆಸ್ ಎಕ್ಸಿಬಿಷನ್‌ಗೆ ಕೊಡಬೇಕೆಂದಿರುವ ಜಾಗದಲ್ಲೂ ಸಹ ಒಂದು ಭಾಗ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್‌ಗೆ ಸೇರಿದೆಯೆಂದು ತಿಳಿದು ಬಂದಿದೆ. ಹಾಗೆ ಕೊಡುವಾಗ ಎಷ್ಟು ಹಣ ಕೊಡುವುದು ಅಂತ ಜಿಜ್ಞಾಸೆ ಬಂದಿದೆ. ಈ ತಕರಾರು ಇರಬೇಕಾದರೆ, ಪ್ರಾಪರ್ಟಿ

(ಶ್ರೀ ಎಂ. ಎಸ್. ಕೃಷ್ಣನ್)

ರೈಟ್ಸ್ ಯಾರದು ಅನ್ನುವುದು ಗೊತ್ತಿಲ್ಲದೆ ಇರುವಾಗ ಈ ತರಹ ಆ ಜಾಗವನ್ನು ಒಂದು ಪಕ್ಷಕ್ಕೆ ಕೊಡುವುದು ಸರಿಯಾದ್ದಲ್ಲ ಎಂದು ಮಾತ್ರ ಪುನಃ ವಿನಂತಿ ಮಾಡಿಕೊಳ್ಳಬೇಕಾಗಿದೆ. ಆಗಲೇ ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕಾದ ಒಂದು ಸಲಹೆ ಎಂದು ಹೇಳಿದರು. ಸಾರ್ವಜನಿಕರಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರೇ ಒಂದು ಎಕ್ಸಿಬಿಷನ್ ಶ್ರೀಮಾನ್ ಗೋಪಾಲ ಗೌಡರು ಹೇಳಿದ ಹಾಗೆ ಮಾಡಿದರೆ ಒಳ್ಳೆಯದು. ಹಾಗೆ ಮಾಡಿದರೆ ಸರ್ಕಾರದ ಬೊಕ್ಕಸಕ್ಕೂ ಹಣ ತುಂಬುತ್ತದೆ. ಈ ಒಂದು ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಜಾರಿಗೆ ತರಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಹೇಳಿದುದನ್ನು ನಾನು ಸ್ವಾಗತಿಸುತ್ತೇನೆ. ವಿರೋಧ ಮಾಡುವುದಿಲ್ಲ. ಸುಭಾಷ್ ನಗರದಲ್ಲಿ ಈಗಾಗಲೇ ಮುಕ್ಕಾಲು ಭಾಗ ಸ್ಟಾಲ್‌ಗಳು ಏಳುತ್ತಾ ಇವೆ, ಮುಗಿದಿದೆ. ಸರ್ಕಾರದವರು ಅಲ್ಲಿ ಸ್ಟಾಲ್ ತೆರೆಯಬೇಕೆಂದು ತೀರ್ಮಾನವಾಗಿದೆ. ಆದ್ದರಿಂದ ಒಂದು ಪಕ್ಷದ ಹೆಸರಿನಲ್ಲಿ ವಸ್ತು ಪ್ರದರ್ಶನ ನಡೆಸಬಾರದು ಎಂದು ಹೇಳಿ ತಿಳಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ಈಗಾಗಲೇ ನನ್ನ ಅಭಿಪ್ರಾಯವನ್ನು ಈ ಸಭೆಗೆ ವ್ಯಕ್ತಪಡಿಸಿದ್ದೇನೆ. ಸರ್ಕಾರ ಇನ್ನೂ ಅಂತಿಮವಾಗಿ ಇದರ ಬಗ್ಗೆ ಆರ್ಡರ್ ಹೊರಡಿಸಿಲ್ಲ, ಏಕೆಂದರೆ ಯಾವ ಷರತ್ತಿನಮೇಲೆ ಕೊಡಬೇಕೆನ್ನುವುದರ ಬಗ್ಗೆ ನಾವು ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಅದಕ್ಕೆ ಪೂರ್ವದಲ್ಲೇ ಹೇಳಿದೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುಂದೆ ಎಲ್ಲಾ ವಿಚಾರಗಳನ್ನೂ ಗಮನದಲ್ಲಿ ಇಟ್ಟುಕೊಂಡು ಅಲ್ಲಿ ಒಂದು ನ್ಯಾಯಿಕವಾಗಿ ಎಕ್ಸಿಬಿಷನ್ ಆಗಬೇಕು ಮತ್ತು ಸರ್ಕಾರದ ಹಿತರಕ್ಷಣೆ ಆಗಬೇಕು ಎನ್ನುವ ದೃಷ್ಟಿಯಿಂದ ಮಾಡಬೇಕೆಂದಿದ್ದೇವೆ ಎಂದು. ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ನೀವು ಈ ಸಭೆಗೆ ಒಂದು ಆಶ್ವಾಸನೆಯನ್ನು ಕೊಡಬೇಕು, ಏನಾದರೂ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳುವ ಪೂರ್ವದಲ್ಲಿ ನಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಮೊದಲೇ ಹೇಳಿದೆ ಆ ರೀತಿಯಿಂದ ಸರ್ಕಾರ ದಿನಂಪ್ರತಿ ಕೆಲಸಕಾರ್ಯಗಳನ್ನು ಮಾಡುವ ಮುಂದೆ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳುವ ಮುನ್ನ ವಿರೋಧಪಕ್ಷದ ನಾಯಕರ ಜೊತೆಗೆ ಸಮಾಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳಬೇಕೆಂದರೆ ಸರ್ಕಾರ ನಡೆಸುವುದಕ್ಕೆ ಕಷ್ಟವಾಗುತ್ತದೆ, ಅದನ್ನು ಯಾರೂ ಒಪ್ಪುವುದಿಲ್ಲ. ಅದಕ್ಕೇ ನನ್ನ ಮನಸ್ಸಿನಲ್ಲಿರುವ ಭಯ ಎಂದರೆ ಇದನ್ನೇ ಒಂದು ಪ್ರಿಸೀಡೆಂಟ್ ಅಂತ ಮುಂದೆ ಕ್ವೋಟ್ ಮಾಡಬಾರದು. ಆ ದೃಷ್ಟಿಯಿಂದ ಹೇಳಿದೆ ಈ ತರಹದ ಭರವಸೆಯನ್ನು ನೀಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು. ಇದರ ಬಗ್ಗೆ ಬಹಳ ಕಳವಳಕ್ಕೆ ಕಾರಣವಾಗಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು, ಮತ್ತು ಅದಕ್ಕಾಗಿಯೇ ಸಮಾಲೋಚನೆ ಮಾಡಬೇಕೆನ್ನುವ ಮಾತನ್ನೂ ಹೇಳಿದರು. ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ ಮುಂದೆ ಯಾವ ರೀತಿಯಿಂದಲೂ ಇದನ್ನು ಪ್ರಿಸಿಡೆಂಟ್ ಅಂತ ಕೋಟ್ ಮಾಡದಂತೆ ಇದರ ಬಗ್ಗೆ ಅವರ ಅಭಿಪ್ರಾಯ ಏನಿದೆ ಅದನ್ನು ತಿಳಿದುಕೊಂಡು ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

Leave of Absence to Sri G. N. Desai—Grant of

Mr. SPEAKER.—I have received a letter dated 24th February, 1969 from Sri G. N Desai, Member, Legislative Assembly requesting under Rule 18- for leave of absence from attending the current sittings of Assembly till March 15th, 1969 due to ill-health.

Is it the pleasure of the Assembly that permission be granted to Sri G. N. Desai from being absent from attending the curernt Sittings of the Assembly till March 15, 1969?

HON. MEMBERS.—Yes.

Mr. SPEAKER.—Permission to remain absent is granted.

I now call upon Hon. Member Sri T. R. Shamanna to continue his speech.

Point of Order *re* : discrimination between members by the Chair

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ ಕ್ಷಮಿಸಬೇಕು. ಪ್ರಶ್ನೋತ್ತರದ ವೇಳೆಯಲ್ಲಿ ನಾನು ಒಂದು ಕ್ರಿಯಾಲೋಪ ಎತ್ತಿದ್ದೆ ಆಗ ಮಾನ್ಯಸದಸ್ಯರು ಪ್ರಶ್ನೋತ್ತರ ವೇಳೆಯಲ್ಲಿ ಕ್ರಿಯಾಲೋಪ ಎತ್ತುವುದಕ್ಕಾಗುವುದಿಲ್ಲ ಎಂದು ಆಕ್ಷೇಪಣೆ ತೆಗೆದರು, ಆದ್ದರಿಂದ ನಾನು ಅಲ್ಲಿಗೇ ನಿಲ್ಲಿಸಿದೆ. ಈಗ ಆ ಕ್ರಿಯಾಲೋಪವನ್ನು ಎತ್ತುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರ್‌ರವರು ತಮ್ಮನ್ನು ಉದ್ದೇಶಿಸಿ ಕೆಲವು ಮಾತುಗಳನ್ನು ಆಡಿದರು. "I am being discriminated by the Chair" ಎಂದು ಹೇಳಿದರು. ನೀವು ಅನೇಕ ಸಾರಿ ಪದೇ ಪದೇ ಆ ವಿಚಾರದಲ್ಲಿ ಅವರು ಹೇಳಿದ್ದು ಸರಿಯಲ್ಲ ಎಂದು ಹೇಳಿದರೂ ಕೂಡ ಅದೇ ವಿಚಾರವನ್ನು ಅವರು ಪದೇ ಪದೇ ಪ್ರಸ್ತಾಪ ಮಾಡಿದರು. ತಾವು ಒಂದು ರೂಲಿಂಗ್ ಕೂಡ ಕೊಟ್ಟಿರಿ—ಆ ಪದಗಳನ್ನು — ಆ ವಾಕ್ಯವನ್ನು ಹಿಂದೆಗೆದುಕೊಳ್ಳಬೇಕು ಎಂದು ಹೇಳಿದಿರಿ, ಅದನ್ನು ಅವರು ಆಗ ಮಾನ್ಯ ಮಾಡಲಿಲ್ಲ, ಮಾನ್ಯ ಮಾಡಿದ್ದರೆ ಚೆನ್ನಾಗಿತ್ತು. ನಾನಾದರೂ ಈಗ ಎತುತ್ತಾ ಇರತಕ್ಕ ಕ್ರಿಯಾಲೋಪ ಅವರು ಹೇಳಿದಂತಹ ವಾಕ್ಯ ಏನಿದೆ ಅದು ಸರಿಯಾದ್ದಲ್ಲ ಅದು ಅಧ್ಯಕ್ಷರ ಮೇಲೆ ಆರೋಪಣೆ ಬರುವಂತಹ ಮಾತು, ಆ ಮಾತನ್ನು ಅವರು ವಾಪಸು ಪಡೆದುಕೊಳ್ಳಬೇಕು. ಆ ಮಾತನ್ನು ಅವರು ಉಪಯೋಗಿಸಿದ್ದಕ್ಕಾಗಿ ಈ ಸಭೆಗೆ ಕ್ಷಮಾಪಣೆಯನ್ನು ಕೇಳಬೇಕು.

Mr. SPEAKER.—Let the hon. Member Sri B. P. Gangadhar state clearly.

Sri B. P. GANGADHAR.—Sir, I did not follow what the Minister said.

ಅಧ್ಯಕ್ಷರು.—"ನೀವು ಡಿಸ್ಕ್ರಿಮಿನೇಷನ್ ಮಾಡುತ್ತಾ ಇದ್ದೀರಿ" ಎಂದು ಹೇಳಿದಿರಿ, ಸ್ಪೀಕರ್ ಎಂದೆಂದೂ ಡಿಸ್ಕ್ರಿಮಿನೇಟ್ ಮಾಡಿಲ್ಲ. ಒಂದೇ ವ್ಯಾಳ್ಯಕ್ಕೆ 3-4 ಜನರು ಎದ್ದು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ಹಾಗೆ ಹೇಳಬೇಕಾಗಿ ಬರುತ್ತದೆ. ಅದು ಡಿಸ್ಕ್ರಿಮಿನೇಷನ್ ಮಾಡಿದಂತೆ ಅಲ್ಲ, ಮಾನ್ಯಸದಸ್ಯರು ಹೇಳಿದ್ದನ್ನು ವಾಪಸು ತೆಗೆದುಕೊಳ್ಳಬೇಕೆಂದು ನಾನು ಹೇಳಿದೆ. ಆ ರೀತಿ ಅಪಾದನೆ ಮಾಡಿದರೆ ಬರೀ ಚೇರ್‌ಗೆ ಮಾತ್ರವಲ್ಲ, ಇಡೀ ಸಭೆಗೆ ಅನ್ವಯವಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತಾ ಇದ್ದೇನೆ.

ಶ್ರೀ ಬಿ. ಪಿ. ಗಂಗಾಧರ್.—ಪ್ರೊಸೀಡಿಂಗ್ಸ್ ಕಾಪಿಯನ್ನು ಕೊಡಿಸಬೇಕು ಸ್ವಾಮಿ. Before I say anything, I want to go through the proceedings as to how it is recorded, because I feel that I have not expressed in that language; that is not the language that is used by me. Let a copy of the proceedings be made available to me.

Mr. SPEAKER.—The office will give a copy of that portion of the proceedings to the hon. Member.

Lease of Land for the Congress Exhibition at the Subhash Nagar Tank, Bangalore

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮುಖ್ಯಮಂತ್ರಿಗಳು ವಿರೋಧಪಕ್ಷಗಳ ನಾಯಕರುಗಳನ್ನು ಕರೆಸಿ ಇದರ ಬಗ್ಗೆ ಸಮಾಲೋಚನೆ ನಡೆಸಿ ಒಂದು ಅಂತ್ಯ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದರ ಬಗ್ಗೆ ನನಗೆ ಒಂದು ಸಂದೇಹ ಬಂದಿದೆ. ಅದನ್ನು ತಮ್ಮ ಮುಂದೆ ಇಡುತ್ತೇನೆ.

Mr. SPEAKER.—When the atmosphere has been cleared, I request the hon. Member not to add to the bitterness.

ಶ್ರೀ ಎಲ್. ಶ್ರೀಕಂಠಯ್ಯ.—ಈ ಜಮೀನಿನ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಇಲ್ಲಿ ಹೇಳುವುದು, ಆಮೇಲೆ ತಮ್ಮ ಇಷ್ಟಬಂದ ಹಾಗೆ ಮಾಡುತ್ತೇವೆಂದು ಹೇಳುವುದು ಸರಿಯೇ ? ಇಲ್ಲಿ ಇಷ್ಟು ಈ ಲ್ಯಾಂಡ್ ಡಿಸ್‌ಪೋಜಲ್ ಬಗ್ಗೆ ಚರ್ಚೆಮಾಡಿ ನಾವು ಹೇಳಿದ ಅಭಿಪ್ರಾಯ ಸರ್ಕಾರದ ಮೇಲೆ ಬದ್ಧಪಡಿಸುತ್ತದೆಂದು ವ್ಯಕ್ತಪಡಿಸಲಿಲ್ಲ. ಅಂದಮೇಲೆ ನೀವು ಹೇಳುವುದು ಹೇಳಿ, ನಾವು ಮಾಡುವುದು ಮಾಡುತ್ತೇವೆಂದು ಅಭಿಪ್ರಾಯವೆ ?

Mr. SPEAKER.—Let the matter lie over as it is. I request the Member not to try to complicate the things in the interest of smooth working of the House.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಬೀಸುವ ದೊಣ್ಣೆಗೆ ತಲೆ ತಪ್ಪಿಸಿಕೊಂಡರೆ ಸಾವಿರ ವರ್ಷಗಳ ಆಯಸ್ಸಂತೆ. ಆ ರೀತಿ ಇಲ್ಲಿ ಆಗಿದೆ. ನಮ್ಮ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು ಅದನ್ನು ಸರಿಯಾದ ರೀತಿಯಲ್ಲಿ ವ್ಯವಹರಿಸುತ್ತೇವೆಂದು ಹೇಳುವುದು ಒಂದು ರೀತಿ. ಅದನ್ನು ಬಿಟ್ಟು ನಾನು ಮಹಾರಾಜ, ನೀವು ಪ್ರಜೆಗಳು, ದೂರು ಕೊಡಿರಿ, ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಅವರು ಹೇಳುವುದಾದರೆ ಅದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದು ಸರಿಯೋ ತಪ್ಪೋ ಎಂದು ಹೇಳುವಂಥ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಸರ್ವರಿಗೂ ಒಪ್ಪಿಗೆಯಾಗುವ ರೀತಿ ಜಾಗ್ರತೆಯಾಗಿ ತೀರ್ಮಾನವನ್ನು ಅದರ ಬಗ್ಗೆ ತೆಗೆದುಕೊಳ್ಳುತ್ತೀರಾ ?

Sri S. V. AGNIHOTRI (Dharwar Rural).—I rise to a point of order.

Mr. SPEAKER.—Under what rule ?

Sri S. V. AGNIHOTRI.—It is under convention.

Sri S. BANGARAPPA (Sorab).—When there is no point, there can be never any point of order.

Mr. SPEAKER.—When the hon. Member rises, should I not listen to him ? I have already indicated to the hon. Members that whenever they rise to a point of order they should indicate in the first instance what particular rule or provision of the regulatory procedure is violated and then substantiate the point. The hon. Member is explaining. Should I not hear him ?

Sri K. H. PATIL (Hubli).—When the Speaker is convinced that the State's interest is in clash at the hands of the Government, it is within the discretion of the Chair to suspend the rules and allow the House to get proper replies from the Government.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಬೇಕಾದರೆ, ರೂಲ್ಸ್ ಆಫ್ ಪ್ರೊಸೀಜರ್ ನೋಡಿ ರೂಲ್ ಕೋಟ್ ಮಾಡಬಹುದು. ಕೆಲವೊಂದು ಪಾಯಿಂಟ್ ಆಫ್ ಆರ್ಡರ್ಸ್ ಕನ್‌ವೆನ್‌ಷನ್ ಪ್ರಕಾರ ಕೇಳಲಿಕ್ಕೆ ಬರುತ್ತದೆ. ಈ ಮಾನ್ಯ ಸಭೆಯಲ್ಲಿ ಕೆಲವು ಸದಸ್ಯರು ಹೊಸಬರು ಇದ್ದಾರೆ. ಅವರಿಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ಈಗ ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಈ ಮಾನ್ಯ ಸಭೆಯಲ್ಲಿ ಉಚ್ಚತರಗತಿಯ ಸಂಪ್ರದಾಯವನ್ನು ಹಿಂದೆ ಇದ್ದಂಥ ಸ್ಪೀಕರ್ ಅವರು, ಅವರ ಹಿಂದೆ ಇದ್ದಂಥ ಸ್ಪೀಕರ್ ಅವರು ಇನ್ನೂ ಅನೇಕ ಗಣ್ಯ ಸದಸ್ಯರು ಜಾರಿಯೊಳಗೆ ತಂದಿದ್ದಾರೆ. ಈ ಸಭೆಯಲ್ಲಿ ಯಾರೇ ಆಗಲಿ, ಈ ಮನೆಯ ಸದಸ್ಯರಲ್ಲದವರ ಹೆಸರನ್ನು ಎತ್ತಿ ಅವರ ಬಗ್ಗೆ ಏನೂ ಮಾತನಾಡಬಾರದೆಂಬುದಾಗಿ ಒಂದು ನಿಯಮವಿದೆ. ಮಾನ್ಯ ಸದಸ್ಯರಾದ ಶ್ರೀ ನಂಜೇಗೌಡ ಅವರು ಈ ಸಭೆಯ ಸದಸ್ಯರಲ್ಲದವರ ಬಗ್ಗೆ ಮಾತನಾಡಿ, ನಮ್ಮ ಅಪ್ಪ, ನಮ್ಮ ದೊಡ್ಡಪ್ಪ, ಅಜ್ಜ ಎಂಬುದಾಗಿ ಹೇಳಿದರೆ ಅವರನ್ನು ಹೆಸರಿನಿಂದ ಕರೆಸಿ ಅವರ

ಬಗ್ಗೆ ತಿಳಿಸಿ ಹೇಳುವುದಕ್ಕೆ ಸಾಧ್ಯವಿಲ್ಲ. ಈ ಮಾನ್ಯ ಸಭೆಯ ಗೌರವ ಉಳಿಯಬೇಕಾದರೆ, ಅಷ್ಟು ದೊಡ್ಡಪ್ಪ ಹೀಗೆ ಬೇರೆ ಜನರನ್ನು ಕರೆಸಲಿಕ್ಕೆ ಸಾಧ್ಯವಿಲ್ಲ. ಇದನ್ನು ತಾವು ನಡೆಯಕೊಟ್ಟರೆ ಎಲ್ಲಾ ಸದಸ್ಯರೂ ತೊಂದರೆಗೊಳಪಡುತ್ತಾರೆ. ಸ್ವಲ್ಪ ದಯಮಾಡಿ ಈ ಸಭೆಯ ಸದಸ್ಯರಲ್ಲದವರ ಮತ್ತು ಸ್ವರ್ಗಲೋಕದಲ್ಲಿರುವವರ ಹೆಸರನ್ನು ಈ ಸಭೆಯಲ್ಲಿ ತರುವಹಾಗೆ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ತಾವು ರೂಲಿಂಗ್ ಕೊಡುವುದಕ್ಕೆ ಮೊದಲು ಒಂದು ಮಾತನ್ನು ಹೇಳುತ್ತೇನೆ. ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಬೇಕಾದರೆ ರೂಲ್ಸ್ ಪ್ರಕಾರ ಯಾವ ರೂಲ್ ಎಂದು ನಮ್ಮನ್ನು ಕೇಳುವ ಪ್ರಕಾರ, ಹಾಗೆಯೇ ಅವರಿಗೂ ತಾವು ಕೇಳಬೇಕು. ಹಿಂದೆ ಇರತಕ್ಕ ಅನುಭವಸ್ಥರು, ಈ ಮಾನ್ಯ ಸಭೆಯ ಸದಸ್ಯರು ಆ ಒಂದು ಕನ್‌ವೆನ್‌ಷನ್ನನ್ನು ಬಿಟ್ಟು ಹೋಗಿದ್ದಾರೆ. ಅದನ್ನು ಪರಿಪಾಲನೆಮಾಡಬೇಕಾಗುತ್ತದೆ. ಆ ಪ್ರಕಾರ ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಬೇಕಾಗುತ್ತದೆ. ಹಾಗೆ ಮಾಡಬೇಕಾಗಿದೆಯೇ ಎಂಬುದನ್ನು ಮೊದಲು ತಿಳಿಸಿದರೆ, ಆಮೇಲೆ ರೂಲಿಂಗ್ ವಿಷಯ ಯಾವಾಗ ಬೇಕಾದರೂ ಹೇಳಬಹುದು.

ಅಧ್ಯಕ್ಷರು.—ಪ್ರೊಸೀಡಿಂಗ್ಸ್ ಎಲ್ಲಾ ನೋಡಿ, ನನ್ನ ರೂಲಿಂಗ್ ಕೊಡುತ್ತೇನೆ. ಬಡ್ಜೆಟ್ ಚರ್ಚೆ ಕಾಲದಲ್ಲಿ ಯಾರು ಬೇಕಾದರೂ ಈ ವಿಚಾರದ ಬಗ್ಗೆ ಮಾತನಾಡಬಹುದು.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸರಿಯಾಗಿ ಅವರಿಂದ ಉತ್ತರ ಬರಲಿಲ್ಲ. ಬಡ್ಜೆಟ್ ಚರ್ಚೆಯ ಕಾಲದಲ್ಲಿ ಮಾತನಾಡಬೇಕೆಂದು ಹೇಳಿದರೆ, ಈ ಕಥೆ ಇನ್ನೂ ಇಲ್ಲಿಗೇ ಮುಗಿಯುಲಿಲ್ಲ. ಇದು ಬಡ್ಜೆಟ್ ಸ್ಪೀಚ್‌ಗೆ ಸಂಬಂಧಪಟ್ಟಿಲ್ಲ ಮುಗಿದಿದ್ದು ಸಮಾಧಾನಕರವಾಗಿ ಮುಗಿದಿಲ್ಲ.

ಅಧ್ಯಕ್ಷರು.—ಈಗಾಗಲೇ ವಿರೊಧಪಕ್ಷದ ಮುಖಂಡರು ಹೇಳಿದರು, ಮತ್ತು ಈ ಸಭೆಯ ನಾಯಕರು ಉತ್ತರ ಕೊಟ್ಟರು. The matter should stand there. ಯಾವುದೇ ಪಬ್ಲಿಕ್ ಇಂಟರೆಸ್ಟ್ ಅಡ್ವಾನ್ಸ್ ಮಾಡಬೇಕಾದರೂ ಅದಕ್ಕೆ ಒಂದು ಪ್ರೊಸೀಜರ್ ಇದೆ. The matter is entrusted to the Leader of the Opposition and therefore the Leader of the House will consult him and the matter should end there. Nothing is going to happen. ಯಾವಾಗಲೂ ಈ ವಿಚಾರದಲ್ಲಿ ವ್ಯಾತಮಾಟಿಕಲ್ ಫಾರ್ಮುಲಾ ಅನುಸರಿಸಬಾರದು. Hon. Member should construe matters as an advocate. He should not try to add to the trouble. We are losing time. Hon. Member should know that we are spending thousands of rupees every day in this House.

ಶ್ರೀ ವಾಟಾಳ್ ನಾಗರಾಜ್.—ವಿರೋಧಪಕ್ಷದ ನಾಯಕರು ಹೇಳಿದ್ದು ನಿಮಗೆ ಗೊತ್ತಾಗಲಿಲ್ಲ. ಮಾನ್ಯ ಶ್ರೀ ಎಲ್. ಶ್ರೀಕಂಠಯ್ಯನವರ ಮತ್ತು ಮಾನ್ಯ ಶ್ರೀ ನಂಜೇಗೌಡರ ವಾದ ಇಷ್ಟೇ. ಮಾನ್ಯ ಶ್ರೀ ಶಿವಪ್ಪನವರು ಇದರ ಬಗ್ಗೆ ತೀರ್ಮಾನಮಾಡುವುದಕ್ಕೆ ಮುಂಚಿತವಾಗಿ ವಿರೋಧಪಕ್ಷದ ಎಲ್ಲಾ ನಾಯಕರನ್ನು ಕರೆದು ಸಮಾಲೋಚನೆ ಮಾಡಿ ಮುಂದೆ ಹೋಗಬೇಕೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಬಹಳ ನಾಜೋಕಾಗಿ ತಪ್ಪಿಸಿಕೊಂಡು ಉತ್ತರ ಕೊಟ್ಟಿದ್ದಾರೆಂಬ ಅಭಿಪ್ರಾಯವನ್ನು ನಾನು ತಿಳಿಯುತ್ತೇನೆ. ಅವರು ಏನು ಮಾಡುತ್ತಾರೆಂಬುದು ಗೊತ್ತಾಗಲಿಲ್ಲ.

Sri H. N. NANJE GOWDA,—If the lands are disposed of tomorrow the people will fix the responsibility not only on the Government, but on the Leader of the Opposition if they are not convinced and if their opinion is not carried out. It is not a simple matter.

Mr. SPEAKER.—In my view the opinion of the House is final. It is not the opinion of one section or the other. He has given certain assurance and therefore, the matter should end there. The members should have confidence in their leader. I cannot compel the Chief Minister to make a statement.

Sri H. N. NANJE GOWDA.—I want Sri Shivappa to have a fixed responsibility in this matter. Nothing of that sort is forthcoming. The proceedings will show that.

Mr. SPEAKER.—I request the hon. Member not to raise the problem again.

ಶ್ರೀ ಬಿ. ಪಿ. ಗಂಗಾಧರ್.—ಅಸೆಂಬ್ಲಿ ಮುಗಿದ ಮೇಲೆ ಶಿವಪ್ಪನವರಿಗೆ ಅವರು ಒಂದು ಕಾಗದ ಬರೆಯುತ್ತಾರೆ. ಅಲ್ಲಿಗೆ ನಮ್ಮ ರೆಸ್ಪಾನ್ಸಿಬಿಲಿಟಿ ಮುಗಿಯಿತು ಎಂದು ಒಂದು ಡಿಸಿಶನ್ ತೆಗೆದುಕೊಂಡು 99 ವರ್ಷಕ್ಕೆ ಲೀಸ್ ಮಾಡಿದರೆ ಏನು ಮಾಡುವುದು ? This matter is a vital matter costing crores and crores of rupees. We want this matter to be settled. Let the State Government run the show. We want to give them full support. If the Government wants to give the land to a particular party, our protest, warning and everything is there. ಇವರು ದೇಶದ ಸೊತ್ತು ಲಪಟಾಯಿಸುವುದಿಲ್ಲವೆಂದು ಹೇಳಲಿ.

†**Sri K. H. PATIL**—The party in power in enjoying the benefits of that property and this House is only anxious to know the exact opinion of the Government. The very same Government wanted to acquire Ramapriya building at a very high cost. When such is the attitude of the Government, there is no wonder if they give this bit of land at this rate to their Organisation. No prudent Government would do like this. The opinion of this House is against giving this land. Therefore it is our desire that the Leader of the House and the Leader of the Opposition should make us feel that no wrong act will be done. Our interest should be safeguarded. There is no remedy left for us except urging the Government to come forward with a statement. Therefore, I earnestly request the Speaker to give protection to the Hon. Members of this House and see that this malpractice is stopped and such things are brought to order. The Leader of the House has said that the Government has decided to give it on lease. This party will be benefited by this deal. This is nothing but swindling the public money. There is an offer of Rs. 50,000 from Janatha Party. But the Leader of the House wants to lease it to his party. Therefore our blood is boiling when we hear all these things. We are not in a mood to follow the constitutional method when things have not been done fairly. We are here to co-operte and respect the Chair but at the same time we would like you to understand our feelings also.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಬಹುಶಃ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದರು, ಅದನ್ನು ಈ ಸಭೆಯವರು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ ಅವರು ತೀರ್ಮಾನ ಇನ್ನೂ ತೆಗೆದುಕೊಂಡಿಲ್ಲವೆಂದು. ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು, ಈ ವಿಚಾರವನ್ನು ಸಮಾಲೋಚಿಸುತ್ತೀರಾ ಎಂದಾಗ, ಅದಕ್ಕೂ ಆಗಲಿ ಎಂದು ಹೇಳಿದ್ದಾರೆ. ಈಗ ಈ ಸಭೆಯಲ್ಲಿ ಹೇಳುವ ಅಭಿಪ್ರಾಯ ಬಹಳ ಆಶ್ಚರ್ಯವನ್ನುಂಟು ಮಾಡುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ. ಅದು ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಕೆ ಯಾರಿಗೂ ಕೊಡುವುದಿಲ್ಲವೆಂದು ಹೇಳಿಬಿಡಿ, ಅಥವಾ ವಿರೋಧಪಕ್ಷದ ಸದಸ್ಯರು ಹೇಳಿದಂತೆ ಮಾಡಿಬಿಡಿ, ಎಂದು ಹೇಳಿದರೆ ನಾನಾದರೂ ಹೇಳಬೇಕಾಗುತ್ತದೆ, ಏನೆಂದರೆ ಯಾವುದೇ ಸರ್ಕಾರವೂ ಕೂಡ ಅಂಥ ಪರಿಸ್ಥಿತಿಯನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು. ವಿರೋಧ ಪಕ್ಷದವರ ಜೊತೆಗೆ ಸಮಾಲೋಚನೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ನಾನಾದರೂ ಹೇಳುತ್ತೇನೆ, ಈಗ ಬಹಳ ಮುಖ್ಯವಾದಂತಹ ವಿಚಾರ, ದೇಶದ ಆಯವ್ಯಯದ ವಿಚಾರ, ಚರ್ಚೆಯಾಗುವುದು ಇದೆ. ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ದೇಶದ ಸೊತ್ತು, ದೇಶಕ್ಕೆ ಇರಲಿ, ಎಂದು ಹೇಳಿದರೆ, ಅದಕ್ಕೆ ಒಂದು ಅಶ್ಯುರೆನ್ಸ್ ಕೊಡುವುದಕ್ಕಾಗುವುದಿಲ್ಲವೆಂದರೆ, ಏನು ಅರ್ಥ ?

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದರಲ್ಲಿ ತಪ್ಪಿಸಿಕೊಂಡಿದ್ದಾರೆ. ಈಗ ದೇಶದ ಸೊತ್ತು ಹೀನಾಯವಾಗಿ ಹೋಗುತ್ತಿದೆ. ಅದನ್ನು ಒಂದು ಪಾರ್ಟಿಯ ಉದ್ಧಾರಕ್ಕಾಗಿ ಮಾರುತ್ತಿದ್ದಾರೆ. ಇದನ್ನು ಮಾರುವುದಕ್ಕೆ ಮುಂಚೆ ವಿರೋಧಪಕ್ಷದ ಎಲ್ಲಾ ಸದಸ್ಯರನ್ನು ಕರೆಸಿಕೊಂಡು ಮಾತನಾಡಿ, ಅವರ ಅಭಿಪ್ರಾಯವನ್ನು ತಿಳಿದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಹಲವು ಸದಸ್ಯರುಗಳು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು.—ತಾವು ಹೇಳುತ್ತಾ ಇರುವುದು ನನಗೆ ತಿಳಿದಿದೆ. ಅದು ಬಹಳ ಮುಖ್ಯವಾದ ಆಸ್ತಿ ಇದೆ. ಅದನ್ನು ನಾನು ತಿಳಿದುಕೊಂಡಿದ್ದೇನೆ.

4-30 P.M.

ಶ್ರೀಮತಿ ಚಂಪಾಬಾಯಿ ಭೋಗಲೇ (ಕಾಗವಾಡ್).—ಸ್ವಾಮಿ, ಅಧ್ಯಕ್ಷರೇ, ಇವರು ಪ್ರಜಾ ಪ್ರಭುತ್ವವನ್ನು ಕೊಲೆ ಮಾಡುತ್ತಿದ್ದಾರೆ. ನಾವು ಪ್ರತಿಯೊಬ್ಬ ಸದಸ್ಯರೂ ಒಂದು ದಿವಸಕ್ಕೆ 25 ರೂಪಾಯಿ ತೆಗೆದುಕೊಂಡು ಸರಿಯಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸದೆ ಸಭೆಯ ಕಾಲವನ್ನು ವ್ಯರ್ಥ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಹಾತಾಯಿ ಚಂಪಾಬಾಯಿ ಭೋಗಲೆಯವರ ಬಗ್ಗೆ ನಮಗೆ ಗೌರವ ಇದೆ.

Sri B. P. GANGADHAR.—This is an important matter. Let an assurance be given by the Government that thay will not dispose of this property and this public property will be retained.

Sri K. PUTTASWAMY.—I am not going to give any assurance.

(*Several members rose to speak*)

Sri B. P. GANGADHAR.—This is a very important matter and we are more serious about this matter more than the budget. We are particularly interested to see that this public property is saved to the State.

Mr. SPEAKER.—I know that every hon. Member here is as anxious as hon. Members Sri Gangadhar or Sri Nagaraj or Sri Nanje Gowda. I am sure Government is not going to part with this property in favour of anybody.

Sri H. N. NANJE GOWDA.—Shall I give you an example, Sir. This very Government has disposed of about 52 acres of revenue land. I have got evidence to prove that.

Sri B. P. GANGADHAR.—What we want is that good sense should prevail upon the Government in the interest of the State to retain this public property with the Government.

Mr. SPEAKER.—I cannot compel the Hon. Minister or anybody to give an assurance. Under what provisions of the rules or Constitution can I compel the Hon. Minister to give an assurance on the matter? ಇದೇ ಪ್ರಕಾರ ನೀವು ಮಾಡಬೇಕು ಎಂದು ನಾನು ಅವರಿಗೆ ಹೇಳುವುದಕ್ಕಾಗುವುದಿಲ್ಲ. ಇದೇ ರೀತಿ ನಿರ್ಣಯ ಮಾಡಿ ಎಂದೂ ನಾನು ಅವರಿಗೆ ಹೇಳುವುದಕ್ಕೆ ಅಧಿಕಾರವಿಲ್ಲ.

ಒಬ್ಬ ಸದಸ್ಯರು.—ಆ ಅಧಿಕಾರ ಈ ಕಡೆಯ ಸದಸ್ಯರಿಗೂ ಇಲ್ಲ. ಆ ಕಡೆಯ ಸದಸ್ಯರಿಗೂ ಇಲ್ಲ.

(ಶ್ರೀ ವಾಟಾಳ್ ನಾಗರಾಜ್ ಅವರು ಮಾತನಾಡುವುದಕ್ಕೆ ಎದ್ದು ನಿಂತರು).

(*Interruptions*)

Smt. K. LEELAVATHI RAI (Bantwal) I rise to a point of order, Sir.

Sri H. N. NANJE GOWDA.—Sir, there cannot be any point of order when the Hon, Speaker is on his legs.

ಅಧ್ಯಕ್ಷರು.—ಮಾನ್ಯ ಸದಸ್ಯರು ಮೊದಲು ದಯವಿಟ್ಟು ಕುಳಿತುಕೊಳ್ಳಬೇಕು. ಸರ್ಕಾರದವರು ಇದೇ ರೀತಿ ನಿರ್ಣಯ ಮಾಡಬೇಕು ಎಂದು ಯಾವ ಸದಸ್ಯರು ಹೇಳುವುದಕ್ಕಾಗುವುದಿಲ್ಲ. ಶ್ರೀಮಾನ್ ಶಿವಪ್ಪನವರ ಸರ್ಕಾರ, ಎಂದರೆ ವಿರೋಧ ಪಕ್ಷದವರ ಸರ್ಕಾರ ಬಂದರೂ ಕೂಡ, ಸರ್ಕಾರದವರು ಇದೇ ರೀತಿ ನಿರ್ಣಯ ಮಾಡಬೇಕೆಂದು ಯಾವ ಸದಸ್ಯರೂ ಹೇಳುವುದಕ್ಕಾಗುವುದಿಲ್ಲ. ಅಸೆಂಬ್ಲಿಯಲ್ಲಿ ಆದಂತಹ ನಿರ್ಣಯ ಮಾತ್ರ ಖಾಯಂ ಆಗುತ್ತದೆ. ಈ ಬಗ್ಗೆ ಅಷ್ಯೂರೆನ್ಸ್ ಕೊಡಿ ಎಂದು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕಾಗುವುದಿಲ್ಲ. ಈ ಸಭೆಯ ವೇಳೆಯೆಲ್ಲಾ ಕಳೆದು ಹೋಗುತ್ತಿದೆ. ಮುಂದೆ ಬಡ್ಜೆಟ್ಟಿನ ಮೇಲೆ ಜನರಲ್ ಡಿಸ್‌ಕಷನ್ ಆಗಬೇಕಾಗಿದೆ. ಅದು ಬಹಳ ಮಹತ್ವದ್ದು ಇದೆ.

† ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಆಯವ್ಯಯದ ಮೇಲೆ ಚರ್ಚೆ ನಡೆಯಬೇಕು ಎನ್ನುವುದರ ಬಗ್ಗೆ ತಮಗೆ ಎಷ್ಟು ಕಾತುರ ಇದೆಯೋ, ಅಷ್ಟೇ ಕಾತುರ ಈ ಮನೆಗೂ ಇದೆ. ವಿರೋಧಪಕ್ಷದ ಸದಸ್ಯರಿಗೂ ಇದೆ. ಆದರೆ ಇದರಲ್ಲಿ ಒಂದು ತಪ್ಪು ಇದೆ. ತಾವು ಈ ಸಭೆಯನ್ನು ಅಡ್ಜರ್ನ್ ಮಾಡಿದ ಮೇಲೆ ನಾವು ಕೆಲವರು ಒಳಗಡೆ ಬಂದು ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ್ದೇವೆ. ಆದರೆ ಈಗ ವಾಸ್ತವವಾಗಿ ಸ್ಪಷ್ಟವಾದ ಒಂದು ಭರವಸೆ ಸರ್ಕಾರದಿಂದ ಈ ಸಭೆಗೆ ಬರಲಿಲ್ಲ. ಇದು ಸಾರ್ವಜನಿಕರ ವಿಷಯ ಎನ್ನುವುದು ವಿರೋಧಪಕ್ಷದ ಸದಸ್ಯರಿಗೂ ಮತ್ತು ಎಲ್ಲರಿಗೂ ಗೊತ್ತಿದೆ. ಈಗ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹಾಜರು ಇಲ್ಲ. ಅವರು ಕೊಟ್ಟಂಥ ಹೇಳಿಕೆ ಅಷ್ಟು ಸ್ಪಷ್ಟವಾಗಿದೆ, ಭರವಸೆ ರೂಪದಲ್ಲಿ ಇದೆ, ಎಂದು ನಾವು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಈಗ ಮೊದಲನೆಯದಾಗಿ ಶ್ರೀಮಾನ್ ಪುಟ್ಟಸ್ವಾಮಿಯವರು ಈ ಸಭೆಗೆ ಒಂದು ಅಷ್ಯೂರೆನ್ಸ್ ಕೊಡಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಈ ಭೂಮಿ ಇನ್ನು ಯಾರಿಗೆ ಸೇರಿದೆ ಎನ್ನುವುದು ವಿವಾದಾಸ್ಪದವಾದ ವಿಷಯ ಎನ್ನುವುದು ಒಂದು. ಕಾಂಗ್ರೆಸ್ಸಿನವರು ಬಹಳ ವರ್ಷಗಳಿಂದ ಆ ಜಾಗದಲ್ಲಿ ಪ್ರದರ್ಶನವನ್ನು ನಡೆಸುತ್ತಾ ಇರಬಹುದು. ಆದರೆ ಅದು ಅವರಿಗೆ ಹಕ್ಕು ಬರುವುದಿಲ್ಲ. ಬಹಳ ಕಾಲದಿಂದ ಅಲ್ಲಿ ವಸ್ತುಪ್ರದರ್ಶನ ನಡೆಸುತ್ತಿದ್ದೇವೆ ಎಂದ ಮಾತ್ರಕ್ಕೆ ಆ ಭೂಮಿಯನ್ನು 99 ವರ್ಷದ ಗುತ್ತಿಗೆಗೆ ಪಡೆದುಕೊಳ್ಳುವುದಕ್ಕೆ ಹಕ್ಕು ಅವರಿಗೆ ಬರುವುದಿಲ್ಲ ಈ ವಿಚಾರದಲ್ಲಿ ಮಾನ್ಯ ಶಿವಪ್ಪನವರು ಬಹಳ ಸೌಜನ್ಯದಿಂದ ಈಗ ಒಳಗೆ ನಡೆದ ಸಭೆಯಲ್ಲಿ ಅಭಿಪ್ರಾಯಗಳನ್ನು ಗ್ರಹಿಸಿಕೊಂಡು ಹೊರಗೆ ಬಂದು ವಿರೋಧಪಕ್ಷದ ಸದಸ್ಯರಿಗೆ ಸಮಾಧಾನಕರವಾದಂತಹ ರೀತಿಯಲ್ಲಿ ಹೇಳುತ್ತಾರೆಂದು ನಮ್ಮ ಕಡೆಯ ಸದಸ್ಯರು ತಿಳಿದಿದ್ದರು. Will you give us a categorical assurance that this land would not be leased out to Congress for 99 years? ಒಳಗೆ ಒಂದು, ಹೊರಗೆ ಒಂದು ಹೇಳುವುದಕ್ಕಾಗುವುದಿಲ್ಲವೆಂದು ನಾನು ಹೇಳಿದ್ದೇನೆ. ನಮ್ಮ ಮಾತ ತೆಗೆಯುವ ಸ್ಥಿತಿಗೆ ತಾವು ಬಂದಿದ್ದೀರಿ. ನಾವು ಒಳಗೆ ಹೋಗಿ ಕಾಫಿ ಕುಡಿದು ಅವರು ಹೇಳಿದಂತೆ ಕೇಳಿಕೊಂಡು ಬರುತ್ತೇವೆ ಎಂದು ನಮ್ಮ ಕಡೆಯ ತರುಣ ಸದಸ್ಯರು ಯಾರೂ ಅನುಮಾನಪಡಬೇಕಾಗಿಲ್ಲ. ಅವರು ನಮಗೆ ಕಾಫಿ ಕುಡಿಸಿ ತಲೆಯ ಮೇಲೆ ಕೈ ಎಳೆಯುತ್ತಾರೆಂದು ತಾವು ತಿಳಿಯಬಾರದು. ನಮ್ಮ ಕಡೆಯ ಅನೇಕ ಮಾನ್ಯ ಸದಸ್ಯರು ಈಗ ಹೇಳಿದಂತೆ ಈ ಭೂಮಿಯ ಸ್ವತ್ತು ಇಡೀ ದೇಶಕ್ಕೆ ಸೇರಿದ್ದು. ಇದನ್ನು ಯಾವ ಒಂದು ಪಕ್ಷವೂ ಅನುಭವಿಸುವುದಕ್ಕೆ ಸಾಧ್ಯವಿಲ್ಲ. ಪ್ರದರ್ಶನ ರೂಪದಲ್ಲಿ ಆಗಲೀ ಬಾಡಿಗೆ ರೂಪದಲ್ಲಿ ಆಗಲೀ ಅಥವಾ ಬೇರೆ ಯಾವ ರೂಪದಲ್ಲಿ ಆಗಲೀ ಅನುಭವಿಸುವುದಕ್ಕೆ ಸಾಧ್ಯವಿಲ್ಲ. ಈ ಚರ್ಚೆಯನ್ನು ಉಪಶಮನ ಮಾಡದಿದ್ದರೆ ಸಭೆಯನ್ನು ಮುಂದಕ್ಕೆ ಹಾಕುತ್ತೇನೆಂದು ಅಧ್ಯಕ್ಷರು ಹೇಳುವುದು ಬೇರೆ ಮಾತು. ಈ ಬಗ್ಗೆ ಶ್ರೀಮಾನ್ ಪುಟ್ಟಸ್ವಾಮಿಯವರು ಸರ್ಕಾರದ ಪರವಾಗಿ ಆಶ್ವಾಸನೆ ಕೊಡಬಲ್ಲವರು ಎಂದು ನಾನು ತಿಳಿದಿದ್ದೇನೆ. ಈಗ ಆ ಜಾಗದಲ್ಲಿ ಸ್ಟಾಲ್‌ಗಳನ್ನು ಕಟ್ಟುತ್ತಾ ಇದ್ದಾರೆಂದು ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದರು. ತಮಗೆ

ಮನಸ್ಸಿಗೆ ಬಂದಂತೆ ನಡೆದುಕೊಳ್ಳುವುದು ಪ್ರಜಾಪ್ರಭುತ್ವದ ನೀತಿಯಲ್ಲ. ಇಷ್ಟೆಲ್ಲಾ ಕೂಗಾಟ ಮಾಡಿದ ಮೇಲೂ ಕೂಡ ಕಾಂಗ್ರೆಸ್ ಪಕ್ಷಕ್ಕೆ 99 ವರ್ಷಗಳ ಗುತ್ತಿಗೆಗೆ ಕೊಡುತ್ತೇವೆಂದು ತಾವು ಹೇಳುವುದಾದರೆ, ಅಲ್ಲಿಂದ ಬರುವ ಆದಾಯ ಸರ್ಕಾರದ ಬೊಕ್ಕಸಕ್ಕೆ ಬರಬೇಕು. ಹಿಂದಿನ ಸರ್ಕಾರದವರು ಒಂದು ಮನೆಯನ್ನು ದಾನದ ರೂಪದಲ್ಲಿ ಒಂದು ರೂಪಾಯಿ ಬಾಡಿಗೆಯ ರೂಪದಲ್ಲಿ ಕೊಟ್ಟಿರುವ ಉದಾಹರಣೆ ಇದೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಆಗ ರಾಜರುಗಳ ಸರ್ಕಾರ ಇತ್ತು. ಆ ಕಾರಣದಿಂದ ಕೊಟ್ಟಿರಬಹುದು.

ಶ್ರೀ ಎಸ್ ಗೋಪಾಲಗೌಡ.—ಆದ್ದರಿಂದ ಆ ಕಾಲ ಹೋಯಿತು. ಈ ಜಾಗದಲ್ಲಿ ಕಟ್ಟುವ ಸ್ಟಾಲ್‌ಗಳಿಂದ ಬರುವ ಆದಾಯ ಸರ್ಕಾರದ ಬೊಕ್ಕಸಕ್ಕೆ ಬರಬೇಕು ಇಲ್ಲದಿದ್ದರೆ ಎಲ್ಲಾ ಪಕ್ಷಗಳಿಗೂ ಸಮನಾಗಿ ಹಂಚಬೇಕು. ತಾವು ಮಾಡುತ್ತಿರುವ ಅನ್ಯಾಯಗಳನ್ನು ಹಿಂದಿನಿಂದಲೂ ಸಹಿಸಿಕೊಂಡು ಬಂದಿದ್ದಾಯಿತು. ಇನ್ನು ಮುಂದೆ ಸಹಿಸುವುದಕ್ಕಾಗುವುದಿಲ್ಲ. ಫೈಲ್ ನೋಡದೆ ತಪ್ಪು ಉತ್ತರ ಕೊಟ್ಟೆ ಎಂದು ಒಬ್ಬ ಮಂತ್ರಿಗಳು ಹೇಳಿದರು. ಅಂತಿಮ ತೀರ್ಮಾನವಾಗಿಲ್ಲ ಎಂದು ಮತ್ತೊಬ್ಬ ಮಂತ್ರಿಗಳು ಹೇಳಿದರು. ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ಕೂಲಂಕಷವಾಗಿ ವಿಚಾರವಾಗಬೇಕು ಎಂದು ಇನ್ನೊಬ್ಬ ಮಂತ್ರಿಗಳು ಹೇಳಿದರು. ಈ ರೀತಿ ಮೂರು ಜನ ಮಂತ್ರಿಗಳು ಮೂರು ತರಹ ಉತ್ತರ ಕೊಟ್ಟಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೇ 99 ವರ್ಷದ ಗುತ್ತಿಗೆಗೆ ಈ ಜಮೀನನ್ನು ಕೊಡುತ್ತೇವೆಂದು ಶ್ರೀ ಪುಟ್ಟಸ್ವಾಮಿಯವರು ಬೇಕಾದರೆ ಒಂದು ನಿರ್ಣಯ ತರಲಿ. ಅದು ಬಹುಮತದಿಂದ ತೀರ್ಮಾನವಾದರೆ ಅದಕ್ಕೆ ನಾವು ತಲೆಬಾಗುತ್ತೇವೆ. ಸರ್ಕಾರ ತನ್ನ ಕೈಯಲ್ಲಿ ಅಧಿಕಾರವಿದೆಯೆಂದುಕೊಂಡು ಯಾವ ಭೂಮಿಯನ್ನು ಬೇಕಾದರೂ ಸಹ ತನಗೆ ಬೇಕಾದವರಿಗೆ ಕೊಡುವುದಾದರೆ ಅದಕ್ಕೆ ನಾವು ಒಪ್ಪುವುದಕ್ಕಾಗುವುದಿಲ್ಲ. ಇಂತಹ ತೀರ್ಮಾನಗಳಿಗೆ ನಾವು ಭಾಗಿಗಳಾಗುವುದಿಲ್ಲ. ಅದಕ್ಕೆ ನಮ್ಮ ಪ್ರತಿಭಟನೆ ಇದೆ. ಈ ಮಾತನ್ನು ನಮ್ಮ ಸ್ನೇಹಿತರು ಉದ್ವೇಗದಿಂದ ಹೇಳಿದ್ದಾರೆ. ಈ ಬಗ್ಗೆ ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ನಮ್ಮನ್ನು ಆತ್ಮವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಜನತೆ, ದೇಶ ಎಲ್ಲರೂ ಒಪ್ಪತಕ್ಕಂಥ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕು. ಇದರಲ್ಲಿ ಕಿಂಚಿತ್ ಕಮ್ಮಿಯಾದರೂ ಸಹ ಈ ವಿಷಯದಲ್ಲಿ ದೊಡ್ಡ ಪ್ರಕರಣವಾಗುತ್ತದೆ ಮತ್ತು ಇದಕ್ಕೆ ಸರ್ಕಾರ ಹೊಣೆಯಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ವಿಚಾರದಲ್ಲಿ ಪದೇ ಪದೇ ಚರ್ಚೆಯಾಗುತ್ತಿದೆ. ಆದರೂ ಸಹ ಶ್ರೀ ಗೋಪಾಲಗೌಡರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಈ ಜಾಗ ಯಾರಿಗೆ ಸೇರಿದ್ದು ಎಂಬ ಬಗ್ಗೆ ವಿವಾದಾಸ್ಪದವಾದುದಾಗಿದೆ. ಈ ಜಾಗದ ಬಗ್ಗೆ ಸರ್ಕಾರದಲ್ಲಿ ಕೆಲವು ದಾಖಲೆಗಳು ಇವೆ. ಈ ದಾಖಲೆಗಳ ಪ್ರಕಾರ ಈ ಜಾಗ ಸರ್ಕಾರಕ್ಕೆ ಸೇರಿದ್ದು ಎಂಬ ಕಾರಣದಿಂದ ಆ ಜಾಗದ ಒಂದು ಭಾಗವನ್ನು ರೋಡ್ ಟ್ರಾನ್ಸ್‌ಪೋರ್ಟ್‌ಗೆ ಕೊಟ್ಟಿದ್ದೇವೆ. ಬೆಂಗಳೂರು ಕಾರ್ಪೊರೇಷನ್ ಸ್ಟ್ಯಾಚ್ಯುಟರಿ ಬಾಡಿ. ಅದು ಅಸ್ತಿತ್ವಕ್ಕೆ ಬಂದಮೇಲೆ ಕಾರ್ಪೊರೇಷನ್ ನಡೆಸುವವರು ಈ ಜಾಗದ ಬಗ್ಗೆ ವಿವಾದವನ್ನು ಎತ್ತುವುದಕ್ಕೆ ಅವಕಾಶವಿದೆ. ಆ ವಿಷಯಕ್ಕೆ ನಾನು ಈಗ ಹೋಗುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಇನ್ನೊಂದು ವಿಚಾರ ಹೇಳಿದರು. ಏನೆಂದರೆ ಈ ವಿಚಾರದಲ್ಲಿ ಎಲ್ಲರ ಮನಸ್ಸು ಸಹ ಕಲಕಿದೆ ಎಂದು. ಈ ವಿಚಾರದಲ್ಲಿ ಎರಡುಗಂಟೆಯಿಂದ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ಎಲ್ಲರ ಮನಸ್ಸು ಕಲಕಿದೆ ಎಂಬುದು ಸ್ಪಷ್ಟವಾಗಿದೆ. ಮತ್ತು ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸರಿಯಾದ ನಿಲುವನ್ನು ತಳೆದರು. ಏನೆಂದರೆ ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಇನ್ನೂ ತೀರ್ಮಾನವಾಗಿಲ್ಲ ಎಂದಾಗ, ತೀರ್ಮಾನ ಮಾಡುವುದಕ್ಕೆ ಮುಂಚೆ ವಿರೋಧ ಪಕ್ಷದ ಪ್ರಮುಖರಲ್ಲಿ ಸಮಾಲೋಚನೆ ಮಾಡಿ ಅವರ ಒಂದು ಅಭಿಪ್ರಾಯ ಪಡೆದುಕೊಂಡು ತೀರ್ಮಾನ ಮಾಡುತ್ತೇವೆ ಎನ್ನುವ ಭರವಸೆ ಕೊಡುತ್ತೀರಾ ಎಂದು ಹೇಳಿದರು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಏನು ಉತ್ತರ ಕೊಟ್ಟರು ಎಂಬುದು ಎಲ್ಲರಿಗೂ ಗೊತ್ತಿದೆ. ನಾನು ಅರ್ಥ ಮಾಡಿಕೊಂಡಿದ್ದದಲ್ಲಿ ಸರ್ಕಾರ ಇಂತಹ ವಿಚಾರ ಬಂದಾಗ ಮಾನ್ಯ ಸದಸ್ಯರು ಹೇಳಿದಂತೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಒಂದು ಸಂಶಯ ಬಂದಿದೆ. ಈ ಜಾಗವನ್ನು ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಕೊಡುವುದಿಲ್ಲ ಎನ್ನುವ ಭರವಸೆಯನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಇದರ ಅರ್ಥ ಏನಾಯಿತು ಎಂದರೆ, ವಿರೋಧಪಕ್ಷದವರೊಡನೆ ವಿಚಾರವಿನಿಮಯ ಮಾಡಿಕೊಳ್ಳದೆ ಈ ಬಗ್ಗೆ ಅವ್ವರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಸ್ವಾತಂತ್ರ್ಯವಿಲ್ಲ ಎಂಬುದಾಗಿ. ಇದುವರೆಗೆ ಈ ವಿಷಯದ ಬಗ್ಗೆ ಬಹಳವಾಗಿ ಚರ್ಚೆಯಾಗಿ ಎಲ್ಲರ ಮನಸ್ಸು

(ಶ್ರೀ ಕೆ. ಪುಟ್ಟಸ್ವಾಮಿ)

ಕಲಕಿದೆಯೆಂದು ಹೇಳುತ್ತೇನೆ. ಈ ಬಗ್ಗೆ ಒಂದು ಭರವಸೆ ಕೊಟ್ಟರೆ ಮುಂದಿನ ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತೇವೆ ಎಂದು ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗ ಅಂತಹ ಭರವಸೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಎಂತಹ ಭರವಸೆ ?

ಶ್ರೀ ಕೆ. ಪುಟ್ಟಸ್ವಾಮಿ.—ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಕೊಡುವುದಿಲ್ಲ ಎನ್ನುವ ಭರವಸೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇನೆ ಹೊರತು ಅಖೈರಾಗಿ ಏನು ತೀರ್ಮಾನ ಮಾಡಿದ್ದೇವೆ ಎಂದು ಹೇಳಲಿಲ್ಲ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರ ತೀವ್ರತೆಯನ್ನು ನಾನು ಪ್ರಶಂಸೆ ಮಾಡುತ್ತೇನೆ. ಅವರು ಬೆಂಗಳೂರು ನಗರದಲ್ಲಿ ಪೌರಸಭಾ ಸದಸ್ಯರಾಗಿದ್ದಂತಹವರು ಮತ್ತು ನಗರದಲ್ಲಿ ಯಾವ ಚಳುವಳಿಯೇ ನಡೆಯಲಿ ಅದಕ್ಕೆ ಮೊದಲಲ್ಲೇ ಶ್ರೀಮಾನ್ ವಾಟಾಳ್ ನಾಗರಾಜ್‌ರವರ ಹೆಸರು ಬರುತ್ತದೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಮ್ಮ ಸಹೋದ್ಯೋಗಿಗಳಾದ ಶ್ರೀಮಾನ್ ರಾಚಯ್ಯನವರು ಹೇಳಿದುದು ಇದರ ಅಂಕಿ ಅಂಶಗಳ ಬಗ್ಗೆ ಇನ್ನೂ ಅಖೈರಾಗಿ ತೀರ್ಮಾನವಾಗಿಲ್ಲ. ಇದನ್ನು ಪರಿಶೀಲನೆ ಮಾಡುವಾಗ Loud thinking became an offence ಎಂದಂತಾಗಿದೆ. ಈಗ ಇಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಕೇಳುತ್ತ ಇರತಕ್ಕದ್ದು ಇದನ್ನು ಮಾಡುವುದಿಲ್ಲ ಎನ್ನುವ ಭರವಸೆಯನ್ನು ಈಗಲೇ ಕೊಡಬೇಕು ಎಂದು. ಇದರಲ್ಲಿ 30 ವರ್ಷಗಳೇ ಇಲ್ಲವೇ 99 ವರ್ಷಗಳೇ ಮಾಡಬೇಕೇ ಇಲ್ಲವೇ ಯಾವ ಕಂಡಿಷನ್‌ಗಳ ಮೇಲೆ ಮಾಡಬೇಕೇ ಎನ್ನುವುದು ಇನ್ನೂ ಇತ್ಯರ್ಥವಾಗಿಲ್ಲ.

ಶ್ರೀ ಹಂಜೀ ಶಿವಣ್ಣ (ತರೀಕೆರೆ).—99 ವರ್ಷ ಎಂದಿರುವುದನ್ನು 999 ವರ್ಷಗಳು ಎಂದು ಮಾಡಿ ಆಗ ಸರಿಹೋಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—999 ವರ್ಷಗಳೂ ಆಗುತ್ತವೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಹತ್ತಿರ ಇರುವ ಗೋಲ್ಫ್ ಕ್ಲಬ್‌ಗೆ ಜಾಗವನ್ನು 999 ವರ್ಷಗಳವರೆಗೆ ಲೀಸ್ ಮೇಲೆ ಕೊಡಲಾಗಿದೆ. ಇದರಲ್ಲಿ ಎಷ್ಟು ವರ್ಷಗಳ ಕಾಲ ಲೀಸು ಕೊಡಲಾಗಿದೆ ಎಂತೆಂತಹ ಕಂಡಿಷನ್‌ಗಳ ಮೇಲೆ ಮತ್ತು ಎಷ್ಟು ಹಣ ಬಾಡಿಗೆಯಾಗಿ ಬರುತ್ತದೆ ಇದರ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. ಆದರೆ ಇಲ್ಲಿ ಜಾಗ ಕೊಡುವುದರ ಬಗ್ಗೆ ಈ ದಿವಸ ಇಲ್ಲಿ ಸುಮಾರು ಒಂದು ಗಂಟೆಯಿಂದ ಆರಂಭವಾಗಿ ಇಲ್ಲಿ ಎರಡು ಮೂರು ಗಂಟೆಗಳ ಕಾಲ ಡಿಸ್‌ಕಷನ್ ಆಗಿದೆ. 99 ವರ್ಷಗಳ ಕಾಲ ಇದನ್ನು ಕೊಡಬೇಕು ಎನ್ನುವ ತೀರ್ಮಾನ ಮಾಡಿದ್ದೀರಾ ಇಲ್ಲವೇ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬೇಕೆಂದು ಕೇಳುತ್ತಿದ್ದಾರೆ. ಇದರಲ್ಲಿ ತೀರ್ಮಾನ ಮಾಡಬೇಕಾದರೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಇದರ ಬಗ್ಗೆ ಇನ್ನೂ ಯಾವ ಅಂತಿಮ ತೀರ್ಮಾನವನ್ನು ಮಾಡಿಲ್ಲ.

ಶ್ರೀ ಜಿ. ದುಗ್ಗಪ್ಪ (ಭವಾನಿಸಾಗರ).—ಸ್ವಾಮಿ, ಮಾನ್ಯಮಂತ್ರಿಗಳು ಇಲ್ಲಿ ಲೌಡ್‌ಥಿಂಕಿಂಗು ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಇದರಲ್ಲಿ ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಇದರಲ್ಲಿ ಅಗ್ರಿಮೆಂಟು ಡೀಟೇಲ್ಸ್ ಇವುಗಳನ್ನು ಮಾತ್ರ ವರ್ಕ್ ಔಟ್ ಮಾಡಬೇಕಾಗಿದೆ ಎಂದು ಹೇಳಿದರು. ಎಂದರೆ ಸರಕಾರ ಇದರ ಬಗ್ಗೆ ಆಗಲೇ ತೀರ್ಮಾನ ತೆಗೆದುಕೊಂಡುಬಿಟ್ಟಿದ್ದಾರೆ. It is not loud thinking as you just now said. ಇದರ ಕಾಂಟೆಕ್ಸ್ ಏನು ಎನ್ನುವುದನ್ನು ಮಾತ್ರ ಇಲ್ಲಿ ತಮಗೆ ತಿಳಿಸುತ್ತಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ನಾನು ಇಲ್ಲಿ ಒಂದು ವಿಚಾರವನ್ನು ಹೇಳುವುದನ್ನು ಮರೆತೆ. ಅಗ್ರಿಮೆಂಟು ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಇನ್ನೂ ಅಖೈರು ತೀರ್ಮಾನವೇ ಆಗಿಲ್ಲ ಎಂದು ಹೇಳಿದರು. ಯಾವುದಾದರೂ ಒಂದು ಒಪ್ಪಿಗೆ ಕರಾರು ಆಗಬೇಕಾದರೆ ಉಭಯ ಪಕ್ಷಗಳವರೂ ಮೊದಲು ಒಪ್ಪಬೇಕು. ಇಲ್ಲಿ ಉಭಯ ಪಕ್ಷಗಳೂ ಒಪ್ಪುವ ಸ್ಟೇಜೇ ಬಂದಿಲ್ಲ. ಹಾಗೂ ಕಾಂಗ್ರೆಸ್ಸು ವಸ್ತುಪ್ರದರ್ಶನಕ್ಕೆ ಕೊಡಬೇಕೇ ಎನ್ನುವುದು ಇನ್ನೂ ಅಖೈರು ತೀರ್ಮಾನವಾಗಿಲ್ಲ. ಮಾನ್ಯ ದೇವರಾಜ ಅರಸಿನವರು ಆಗಲೇ ಹೇಳಿದಂತೆ ಇನ್ನೂ ಅವರನ್ನು ಯಾರು ಕನ್‌ಸಲ್ಟ್ ಮಾಡಿಲ್ಲ. ಇನ್ನು ಮಾನ್ಯ ಸದಸ್ಯರಾದ ಶ್ರೀ ಗೋಪಾಲ ಗೌಡರು ಇನ್ನೊಂದು ವಿಚಾರ ಹೇಳಿದರು. ಕಾನೂನು ಪ್ರಕಾರ ಈ ಜಾಗವನ್ನು ಕೊಡಲು ಅವಕಾಶವಿದೆಯೇ ಈಗ ಯಾವ ರೀತಿಯಾಗಿ ವಸ್ತು ಪ್ರದರ್ಶನ ನಡೆಯಲು ಅವಕಾಶ

ಕೊಟ್ಟಿದ್ದೀರಿ. ದೀರ್ಘಾವದಿ ಕಾಲಕ್ಕೆ ಕೊಟ್ಟಿದ್ದಾರೆಯೋ ಮತ್ತು ಎಷ್ಟು ಬಾಡಿಗೆ ಕೊಡುತ್ತಿದ್ದಾರೆ ಎಂದು ಕೇಳಿದರು. ಪ್ರತಿವರ್ಷವೂ ಯಾವ ರೀತಿಯಾಗಿ ಎಷ್ಟು ಕಾಲಕ್ಕೆ ಕೊಡಬೇಕು ಎಂದು ಮಾಡಿದ್ದಾರೋ ಅದೇ ಅವಧಿಗೆ ಬಾಡಿಗೆಗೆ ಈ ಸಾಲಿಗೂ ಅದನ್ನು ಅನುಸರಿಸಿಯೇ ಕೊಡುತ್ತಿದ್ದಾರೆ. ಆದರೆ ಇಲ್ಲಿ ನಾನು ಆಗಲೇ ತಿಳಿಸಿದಂತೆ ಇದರ ಬಗ್ಗೆ ಅಖೈರು ತೀರ್ಮಾನ ಮಾಡಿಲ್ಲ. ಇದರಲ್ಲಿ 99 ವರ್ಷಗಳಿಗೆ ಕೊಡಬೇಕೇ ಮೂವತ್ತು ವರ್ಷಗಳಿಗೆ ಕೊಡಬೇಕೇ ಅಥವಾ 50 ವರ್ಷಗಳಿಗೆ ಕೊಡಬೇಕೇ ಇಲ್ಲವೇ ಹತ್ತು ವರ್ಷಗಳಿಗೆ ಕೊಡಬೇಕೇ ಅಥವಾ ಇದಕ್ಕೂ ಕಡಿಮೆ ಅವಧಿಗೆ ಕೊಡಬೇಕೇ ಎನ್ನುವುದು ಯಾವುದೂ ಇನ್ನೂ ನಿಶ್ಚಿತವಾಗಿ ಆಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೊಡನೆ ಇದರ ಬಗ್ಗೆ ಸಮಾಲೋಚನೆ ಮಾಡಲು ಮುಖ್ಯ ಮಂತ್ರಿಗಳು ಕ್ರಮ ತೆಗೆದುಕೊಂಡು ತೀರ್ಮಾನ ಮಾಡುತ್ತಾರೆ ಎಂದು ಆಗಲೇ ಹೇಳಲಾಗಿದೆ. ಇದಕ್ಕಿಂತ ಹೆಚ್ಚು ಇನ್ನೇನೂ ಹೇಳಬಯಸುವುದಿಲ್ಲ. ಮಾನ್ಯ ಸದಸ್ಯರಿಗೆ ನಾನು ಇಷ್ಟು ಮಾತ್ರ ಆಶ್ವಾಸನೆ ಕೊಡುತ್ತೇನೆ. ಆದುದರಿಂದ ಇದರ ಬಗ್ಗೆ ಹೆಚ್ಚು ಚರ್ಚೆ ಮಾಡದೇ ಇಲ್ಲಿರುವ ಮುಂದಿನ ಕಾರ್ಯಕ್ರಮಗಳನ್ನು ಮಾಡಲು ಒಳ್ಳೆಯ ವಾತಾವರಣವನ್ನು ಉಂಟು ಮಾಡಬೇಕು ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್(ದೇವದುರ್ಗ).—ಸ್ವಾಮೀ, ಇದರ ಬಗ್ಗೆ ನಾನು ತಮಗೆ ಒಂದು ವಿಚಾರ ಹೇಳುತ್ತೇನೆ. ಈ ಜಾಗವನ್ನು ಕಾಂಗ್ರೆಸ್ಸು ಪಕ್ಷಕ್ಕೂ ಕೊಡಬೇಡಿ, ವಿರೋಧ ಪಕ್ಷಕ್ಕೂ ಕೊಡಬೇಡಿ, ಹರಾಜು ಹಾಕಿ ಬಿಡಿ. ಆಗ ಯಾರು ಬೇಕಾದರೂ ತೆಗೆದುಕೊಳ್ಳಲಿ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಇವೊತ್ತು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆಯಂತೆ ಇದು ಇನ್ನೂ ತೀರ್ಮಾನವಾಗಿಲ್ಲ ಇದರ ಬಗ್ಗೆ ಎಲ್ಲರೊಡನೆ ಸಮಾಲೋಚನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗ ನಮ್ಮ ಪಾರ್ಲಿಮೆಂಟರಿ ವ್ಯವಹಾರ ಶಾಖಾ ಸಚಿವರು ಹೇಳುವುದನ್ನು ಕೇಳಿದರೆ ಅದಕ್ಕೆ ತದ್ವಿರುದ್ಧವಾಗಿ ಕಾಣುತ್ತಿದೆ. ಇದರ ಬಗ್ಗೆ ತೀರ್ಮಾನವಾಗಿದೆ. ಇದರ ವಿವರಗಳನ್ನು ಮಾತ್ರ ಈಗ ಪರಿಶೀಲನೆ ಮಾಡಿ ನಿರ್ಧಾರ ಮಾಡಬೇಕು ಎಂದು ಹೇಳುತ್ತಾರೆ. ಇದನ್ನು ನೋಡಿದರೆ ಒಂದಕ್ಕೊಂದು ವ್ಯತ್ಯಾಸವಿರುವಂತೆ ಕಾಣುತ್ತದೆ, ಹಾಗಿರುವ ಪಕ್ಷಕ್ಕೆ ನಮ್ಮನ್ನು ಕನ್‌ಸಲ್ಟ್ ಮಾಡಬೇಕಾದ ಅಗತ್ಯವೇ ಇಲ್ಲ. ಅದರ ವಿವರಗಳು ಮತ್ತು ಷರತ್ತುಗಳನ್ನು ಚರ್ಚೆ ಮಾಡುವುದಕ್ಕೆ ಬೇಕಾದರೆ ಇಲ್ಲಿರುವ ನಾವು ಎದುರು ಪಕ್ಷದವರು ಇದರಲ್ಲಿ ಭಾಗವಹಿಸಲು ಇಷ್ಟಪಡುವುದಿಲ್ಲ. ಈ ರೀತಿ ತೀರ್ಮಾನವಾಗಿರುವ ವಿಚಾರವನ್ನು ನಮ್ಮ ಜೊತೆಯಲ್ಲಿ ಕನ್‌ಸಲ್ಟ್ ಮಾಡುವ ಅಗತ್ಯವೇನೂ ಕಾಣುವುದಿಲ್ಲ. ಏನಾದರೂ ತೀರ್ಮಾನ ಮಾಡುವುದಕ್ಕೆ ಮುಂಚೆ ವಿಚಾರಗಳು ಇದ್ದರೆ ಆಗ ನಮ್ಮನ್ನು ಕನ್‌ಸಲ್ಟ್ ಮಾಡಿದ್ದರೆ ಅದರಿಂದ ಏನಾದರೂ ಉಪಯೋಗವಾಗುತ್ತಿತ್ತು.

ಶ್ರೀ ಸದಾಶಿವಪ್ಪ ಪಾಟೀಲ್.—ಇದಕ್ಕೆ ಸ್ವಾಮೀ ನಾನು ಹೇಳುತ್ತಿರುವುದು ಸರಕಾರದ ಪಕ್ಷದವರಿಗೂ ಬೇಡ ಇತರ ವಿರೋಧ ಪಕ್ಷಗಳಿಗೂ ಬೇಡ ಇದನ್ನು ಹರಾಜು ಹಾಕಿಬಿಟ್ಟರೆ ಆಯಿತು.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮೀ, ಮಾನ್ಯ ಸ್ನೇಹಿತರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಇದರ ಬಗ್ಗೆ ತೀರ್ಮಾನವಾಗಿದೆ. ನಾವು ಇದರಲ್ಲಿ ಏಕೆ ಭಾಗವಹಿಸಬೇಕು ಎಂದು ಹೇಳಿದರು. ಇದುವರೆಗೆ ಇಲ್ಲಿ ಚರ್ಚೆಯಾಗಿರುವಂತೆ ಈ ವಿಚಾರದಲ್ಲಿ ಇನ್ನೂ ಅಖೈರಾಗಿ ಯಾವ ತೀರ್ಮಾನವೂ ಆಗಿಲ್ಲ ಎಂದು ನಾನು ತಿಳಿಯುತ್ತೇನೆ. ಇದುವರೆಗೆ ಆದ ಚರ್ಚೆಯನ್ನೆಲ್ಲಾ ಕೂಲಂಕಷವಾಗಿ ನೋಡಿದರೆ ಸ್ಪಷ್ಟವಾಗಿ ಇದನ್ನು ಯಾರಿಗೆ ಕೊಡಬೇಕು ಎನ್ನುವುದು ಇನ್ನೂ ತೀರ್ಮಾನವಾಗಬೇಕಾಗಿದೆ ಅಂತಿಮವಾಗಿ ಯಾವ ತೀರ್ಮಾನವೂ ಆಗಿಲ್ಲ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಇದರಲ್ಲಿ ಪಾರ್ಲಿಮೆಂಟರಿ ಶಾಖಾ ಸಚಿವರು ಈ ವಿಷಯವನ್ನು ಮತ್ತಷ್ಟು ಗೊಂದಲಕ್ಕೆ ಈಡು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಇದರ ಬಗ್ಗೆ ಮಾತುಕಥೆಗಳನ್ನು ಮಾಡಿದಾಗ ಹೇಳಿದ ವಿಚಾರಗಳಿಗೂ ಇಲ್ಲಿ ಹೇಳುತ್ತಿರುವುದಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಮಾನ್ಯ ಮುಖ್ಯಮಂತ್ರಿಗಳು ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ ಎಂದು ಹೇಳುವಾಗ ಅವರು ಈ ಮಾತುಗಳೊಂದನ್ನೂ ತಿಳಿಸಲಿಲ್ಲ. ಇದರಿಂದ ಈ ಸಭೆಯ ಸದಸ್ಯರ ನಂಬಿಕೆಗೆ ಮೋಸ ಮಾಡಿ ಅವರು ಇಂದು ಈ ಮಾತನ್ನು ಹೇಳಿ ಈ ರೀತಿ ನಂಬಿಕೆ ದ್ರೋಹ ಮಾಡಿದ್ದಾರೆ. ಇವರು ಯಾವುದೋ ಬೇರೆ ಅರ್ಥ ಬರುವ ರೀತಿಯಲ್ಲಿ ಇಲ್ಲಿ ನಮಗೆ ಹೇಳುತ್ತಿದ್ದಾರೆ. ನಮ್ಮನ್ನು ಇಲ್ಲಿ ಇಕ್ಕಟ್ಟಿಗೆ ಸಿಕ್ಕಿಸುತ್ತಿದ್ದಾರೆ. ಇದನ್ನು ಅವರು ಸರಿಯಾಗಿ ಸ್ಪಷ್ಟೀಕರಿಸಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತೀರ್ಮಾನ ಮಾಡಿಬಿಟ್ಟಿದ್ದರೆ ಈ ಮನೆಯೊಳಗೆ ಇದನ್ನು ಚರ್ಚೆ ಮಾಡಿ ಪರೀಕ್ಷೆ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಮತ್ತು ಇದರಲ್ಲಿ ನಾವು ಸಲಹೆ ಮಾಡುವುದೇನಿದೆ?

5-00 P.M.

Sri B. P. GANGADHAR.—This is a very serious matter. A categorical assurance must be given by the Government that this Government property would be retained for the State.

Mr. SPEAKER.—I think there is much confusion. I have been a very impartial listener of what is going on. What I have understood is, there is a sort of contemplation in the mind of the Government to give the property to the Congress if certain conditions are fulfilled. It is merely a contemplation; it is no decision. The Hon. Chief Minister made it completely clear and the impression I carry is that there is no decision to hand over the property to the Congress for the purpose of its occupation.

Sri G. DUGGAPPA.—Government have taken a decision. Please look into the records.

Sri H. N. NANJE GOWDA.—The Chair should not misinterpret the statement of the Minister or the opinion of the Government.

Mr. SPEAKER.—I have stated what has happened because there is confusion. I am not mis-interpreting anybody. I want the time of the House to be properly utilised.

Sri H. N. NANJE GOWDA,—The Leader of the Opposition should not be treated like that

Mr. SPEAKER.—The Leader of the opposition is properly treated.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಕಾಂಟೆಂಪ್ಲೇಷನ್ ಎಂದು ಹೇಳಿದಿರಿ. ಮಾನ್ಯ ರಾಚಯ್ಯನವರೂ ಮತ್ತು ಮಾನ್ಯ ಪುಟ್ಟಸ್ವಾಮಿಯವರೂ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಡಿಸಿಷನ್ ತೆಗೆದುಕೊಂಡಿದೆ ಆದರೆ ಸೆಟಲ್‌ಮೆಂಟ್ ಆಗಿಲ್ಲ, ಅಗ್ರಿಮೆಂಟ್ ಬರೆದುಕೊಟ್ಟಿಲ್ಲ ಎಂದು. ನಾನು ತಿಳಿದುಕೊಂಡ ಹಾಗೆ ಕೊಡಬೇಕು ಎನ್ನುವ ತೀರ್ಮಾನ ಆಗದೆ ಇದ್ದರೆ, ಶ್ರೀಮಾನ್ ಶಿವಪ್ಪನವರನ್ನಾಗಲಿ ಬೇರೆಯವರನ್ನಾಗಲೀ ಕೇಳುವ ಪ್ರಮೇಯ ಇದೆ. ಆದುದರಿಂದ ಡಿಸಿಷನ್ ತೆಗೆದುಕೊಳ್ಳಬೇಕೋ, ಬಿಡಬೇಕೋ ಎನ್ನುವುದನ್ನು ವಿರೋಧಪಕ್ಷದ ನಾಯಕರನ್ನು ಕರೆಸಿ ಅವರ ಜೊತೆಯಲ್ಲಿ ಚರ್ಚಿಸಿ ತೀರ್ಮಾನ ಮಾಡಿ ಇಲ್ಲದಿದ್ದರೆ ನಮಗೆ ಸಮಾಧಾನವಾಗುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಈಗ ಸಭೆಯ ಮುಂದಿರತಕ್ಕಂಥ ವಿಚಾರ ನೋಡಿದರೆ ನಮಗಂತೂ ಇದು ಹೆಚ್ಚಿನ ಗೊಂದಲವಾಗಬಹುದು ಎಂದು ಕಾಣುತ್ತದೆ. ಕಾರಣ ಏನೆಂದರೆ ಶ್ರೀಮಾನ್ ಶಿವಪ್ಪನವರು ಹೇಳುವುದನ್ನೂ ಕೇಳಿವೆ ಮತ್ತು ಶ್ರೀಮಾನ್ ಪುಟ್ಟಸ್ವಾಮಿಯವರು 2—3 ಸಾರಿ ಹೇಳುವುದನ್ನೂ ಕೇಳಿದ್ದೇನೆ. ಈಗ ಶಿವಪ್ಪನವರೂ ಇದ್ದಾರೆ. ವಿರೋಧ ಪಕ್ಷದವರ ಅಭಿಪ್ರಾಯ ಇದುವರೆಗೆ ತಾವು ತಿಳಿದುಕೊಂಡಿರುವ ಹಾಗೆ ಸರ್ಕಾರ ಇನ್ನೂ ಅಂತ್ಯ ತೀರ್ಮಾನ ತೆಗೆದುಕೊಂಡಿಲ್ಲ ಅದಕ್ಕೆ ಪೂರ್ವಭಾವಿಯಾಗಿಯೇ ವಿರೋಧಪಕ್ಷದ ನಾಯಕರನ್ನು ಕೇಳುತ್ತೇವೆ ಈ ರೀತಿ ಮುಖ್ಯ ಮಂತ್ರಿಗಳು ಅಭಿಪ್ರಾಯ ಇಟ್ಟುಕೊಂಡಿದ್ದರು ಎಂದು ಅವರು ಹೇಳುತ್ತಾರೆ. ಅದು ಸರಿಯೇ? ಅದಕ್ಕೆ ನಮ್ಮ ಮಂತ್ರಿಗಳು ಹೇಳುತ್ತಾರೆ, ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಮತ್ತೇ ಆ ತೀರ್ಮಾನವನ್ನು ಯಾವರೀತಿ ಜಾರಿಗೆ ತರಬೇಕು, 30 ವರ್ಷಕ್ಕೋ, 20 ವರ್ಷಕ್ಕೋ, 5 ವರ್ಷಕ್ಕೋ, 5 ಗಂಟೆಗೋ ಎನ್ನುವುದನ್ನು ನಾವು ಆಲೋಚನೆ ಮಾಡೋಣ ಎಂದು. ಇದರ ಮೇಲೆ ಚರ್ಚೆ ಮಾಡುವುದಕ್ಕಿಂತ ಮುಖ್ಯಮಂತ್ರಿಗಳು ಇದರ ಬಗ್ಗೆ ಅಂತ್ಯ ತೀರ್ಮಾನ ತೆಗೆದುಕೊಂಡಿದ್ದಾರೆಯೇ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ತೀರ್ಮಾನವಾಗಬೇಕಾದರೆ ಉಭಯತ್ರರೂ ಕೂಡ ಒಪ್ಪಬೇಕು ಎಂದು ಹೇಳುವುದು ಅದರ ಅರ್ಥ.

ಆದುದರಿಂದ ಈ ಸಭೆಯನ್ನು 10 ನಿಮಿಷ ಅಡ್ಜರ್ನ್ ಮಾಡಿ ಒಬ್ಬರಿಗೊಬ್ಬರು ಸಮಾಲೋಚನೆ ಮಾಡಿಕೊಂಡು ಅವರು ತೀರ್ಮಾನ ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ತಿಳಿದು ಕೊಂಡು ಆಮೇಲೆ ಅವರು ಸ್ಪಷ್ಟವಾಗಿ ಹೇಳಲಿ.

† ಶ್ರೀ ಜಿ. ದುಗ್ಗಪ್ಪ.—ಅಧ್ಯಕ್ಷರೇ, ಇದು ಬಹಳ ವಿಚಿತ್ರವಾದ ಪರಿಸ್ಥಿತಿ ಎಂದು ಕಾಣುತ್ತದೆ. ಇದಕ್ಕೆ ತೆಲುಗಿನಲ್ಲಿ ಒಂದು ಗಾದೆ ಇದೆ. ಅದು ಏನೆಂದರೆ ಕುದುರೆಗಿಂತ ಲದ್ದಿ ಬಿರುಸು ಎಂಬಂತೆ ಆಗಿದೆ. ಶ್ರೀಮಾನ್ ನಿಜಲಿಂಗಪ್ಪನವರು ಇದ್ದರೆ ಈ ರೀತಿ ಅವ್ಯವಹಾರ ಮಾಡುತ್ತಾ ಇರಲಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಎ.ಐ.ಸಿ.ಸಿ. ಅಧ್ಯಕ್ಷರಾಗಿದ್ದರೂ ಸಹ ಅವರು ಈ ರೀತಿ ಉಡಾಫ್ ಮಾಡುತ್ತಾ ಇರಲಿಲ್ಲ. ಏನು ಸ್ವಾಮಿ, ಇವರು ಅವರನ್ನು ಮೀರಿಸಿ ಹೋರಟಿದ್ದಾರೆ. ಶ್ರೀಮಾನ್ ರಾಚಯ್ಯನವರು ಉತ್ತರ ಕೊಡುವಾಗ 30 ವರ್ಷ ಎಂದು ಹೇಳಿ ಕೊನೆಗೆ ನಾನು ತಪ್ಪು ಹೇಳಿದೆ ಅದನ್ನು ಕರೆಕ್ಟ್ ಮಾಡಿದೆ ಎಂದು ಹೇಳಿದರು. ಈ ರೀತಿ 30 ವರ್ಷಕ್ಕೆ, 99 ವರ್ಷಕ್ಕೆ ಅವರು ಕೇಳಿದರು ಕೊಡುವುದಕ್ಕೆ ತಯಾರಿದ್ದೀರಾ? ಶ್ರೀಮಾನ್ ಪುಟ್ಟಸ್ವಾಮಿಯವರು ತಿಂಗಳು ಎಂದು ಹೇಳಿದರು. 99 ವರ್ಷದ ಮೇಲೂ ಕಾಂಗ್ರೆಸ್ಸಿನವರು ಇರುತ್ತಾರೆಯೇ! ವಿರೋಧ ಪಕ್ಷದವರ ಹತ್ತಿರ ಮಾತನಾಡಬೇಕು ಎನ್ನುವ ಅಭಿಪ್ರಾಯ ಇದ್ದರೆ ನೀವು ತೀರ್ಮಾನ ತೆಗೆದು ಕೊಳ್ಳುವುದಕ್ಕಿಂತ ಮುಂಚಿತವಾಗಿ ಕರೆಸಿಕೊಂಡು ಮಾತನಾಡಿ. ಮನಸ್ಸಿನಲ್ಲಿ ಒಂದು, ಹೊರಗಡೆ ಒಂದು ಈ ರೀತಿಯ ದ್ವಂದ್ವ ಭಾಷಣದಲ್ಲಿ ಅರ್ಥವಿಲ್ಲ. ಇದು ನನ್ನ ಸ್ಪಷ್ಟವಾದ ನಿಲುವು.

ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ಈಗ ಏನು ಗೊಂದಲ ಉಂಟು ಮಾಡಿದೆ ಈಗ ಏನು ನಡೆಯುತ್ತಿದೆ ಅದನ್ನು ನೋಡಿದರೆ ನಾವು ಮಿಸ್‌ಅಪ್ರೆಹೆನ್‌ಷನ್‌ನಲ್ಲಿ ಇದ್ದೇವೆ ಎಂದು ನನಗನ್ನಿಸುತ್ತದೆ. ಈ ಪ್ರಶ್ನೆಗೆ ಉಪಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಇಂಟರ್‌ವೀನ್ ಮಾಡಿ ಮಾನ್ಯ ಸಚಿವರಾದ ರಾಚಯ್ಯನವರು ಹೇಳಿದರು, ಮೊದಲು ಕೊಟ್ಟಂಥ ಉತ್ತರ ಅಲ್ಲಿಂದೀಚೆಗೆ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ, ಇದನ್ನು ಸಬ್‌ಸ್ಟಿಟ್ಯೂಟ್ ಅನ್ಸರ್ ಎಂದು ತೆಗೆದುಕೊಳ್ಳಬೇಕು ಎಂದು ತಿಳಿಸಿ ಟರ್ಮ್ಸ್ ಅಂಡ್ ಕಂಡೀಷನ್ಸ್ ಮಾತ್ರ ಉಳಿದಿದೆ ಎನ್ನುವ ಮಾತನ್ನು ಹೇಳಿದರು. ಈಗ ಅವರು ಹೇಳಿದ ಮಾತಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಸಭೆಗೆ ಹೇಳಲೇ ಇಲ್ಲ. ಅವರು ಸ್ಪಷ್ಟವಾಗಿ ಹೇಳಿದುದೇನೆಂದರೆ ಅಂತಿಮ ನಿರ್ಣಯ ತೆಗೆದು ಕೊಳ್ಳುವುದಕ್ಕೆ ಮುಂಚಿತವಾಗಿ ನಾನು ವಿರೋಧಪಕ್ಷದ ಎಲ್ಲಾ ನಾಯಕರನ್ನು ಕರೆಸಿ ಕೇಳಿ ಟರ್ಮ್ಸ್ ಅಂಡ್ ಕಂಡೀಷನ್ಸ್ ಸೆಟಲ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಶ್ರೀಮಾನ್ ಪುಟ್ಟಸ್ವಾಮಿಯವರು ಆ ಮಾತನ್ನು ಸ್ಥಿರಪಡಿಸಿದ್ದಾರೆ. ಅದಕ್ಕಾಗಿ ಈ ಸಭೆಯಲ್ಲಿ ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಒಬ್ಬರು ಒಂದು ತರಹ ಉತ್ತರ, ಇನ್ನೊಬ್ಬರು ಇನ್ನೊಂದು ತರಹ ಉತ್ತರ ಕೊಟ್ಟ ಪರಿಣಾಮವಾಗಿ ಶಬ್ದಗಳ ಜಾಲದಲ್ಲಿ ನಮ್ಮನ್ನು ಹಾಕಿ ನಮ್ಮನ್ನೆಲ್ಲ ಬೇರೆ ಮಾರ್ಗಕ್ಕೆ ತೆಗೆದುಕೊಂಡು ಹೋಗತಕ್ಕ ವ್ಯವಸ್ಥೆಯನ್ನುಂಟುಮಾಡಿದ್ದಾರೆ. ಅದನ್ನು ಬಹಳ ಸಣ್ಣ ವಿಷಯ ಎಂದು ತಾವು ತಿಳಿದಿರಬಹುದು. ಹಣಕಾಸು ಪಟ್ಟಿಯಷ್ಟೇ ಇದೂ ಬಹಳ ಮುಖ್ಯವಾದುದು ಎಂದು ನಾನು ತಿಳಿದುಕೊಂಡಿದ್ದೇನೆ. ಕೋಟಿಗಟ್ಟಲೆ ಬಾಳತಕ್ಕ ಆಸ್ತಿಯನ್ನು ಸರ್ಕಾರದವರು ತಮ್ಮ ಪಕ್ಷಕ್ಕೆ ಜಮೀನನ್ನು ಕೊಡಲು ತೀರ್ಮಾನ ಮಾಡಿದ್ದಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಹೇಳು ವಂತೆ ನಮ್ಮ ಸರ್ಕಾರ ನಡೆದಿದೆ ಎಂದು ತಿಳಿದುಕೊಳ್ಳತಕ್ಕ ಪರಿಸ್ಥಿತಿಯಲ್ಲಿ ಅವರಿದ್ದಾರೆ. ಅಂಥ ರೀತಿಯಲ್ಲಿ ಅವರು ಏನೋ ಮಾಡಿಕೊಂಡಿದ್ದಾರೆ ಎನ್ನುವ ಪರಿಸ್ಥಿತಿ ಇದೆ. ಇಂಥ ಪರಿಸ್ಥಿತಿಯಲ್ಲಿ ಈ ಸಭೆಯ ನಿರ್ಣಯ ತಿಳಿದು ನಿರ್ಣಯ ಮಾಡಲಿಕ್ಕೆ ಸಾಧ್ಯವೇ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅಲ್ಲದೆ ಇದು ಒಂದು ಪ್ರಿಸಿಡೆಂಟ್ ಆಗಕೂಡದು, ಅಂಥ ಪ್ರಿಸಿಡೆಂಟ್ ಆಗುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿದರು. ಅವರು ರಾಜರಂತೆ ಮಾತನಾಡತಕ್ಕುದಲ್ಲ. He is subordinate to this House. ಸಭೆಯ ನಿರ್ಣಯವನ್ನು ಅವರು ತಲೆಯ ಮೇಲೆ ಹೊತ್ತು ಕೊಂಡು ಹೋಗಬೇಕಾಗುತ್ತದೆ. ವಾಸ್ತವವಾಗಿ ಅವರು ಒಂದು ಪಕ್ಷವನ್ನು ಮಾತ್ರ ಈ ಸಭೆಯಲ್ಲಿ ಪ್ರತಿನಿಧಿಸುತ್ತಿಲ್ಲ. ಇಡೀ ಸಭೆಯ ಎಲ್ಲ ಸದಸ್ಯರು, ವಿರೋಧಪಕ್ಷದಲ್ಲಿ ಇದ್ದವರು, ಆ ಕಡೆ ಆಳುವ ಪಕ್ಷದಲ್ಲಿರುವವರು ಎಲ್ಲರಿಗೂ ಸಭಾ ನಾಯಕರೇ ಹೊರತು ಕಾಂಗ್ರೆಸ್ ಪಕ್ಷದ ನಾಯಕರು ಮಾತ್ರವಲ್ಲ. ಹಾಗೆ ಆಗುವುದಾದರೆ ಲೀಡರ್ ಆಫ್ ದಿ ಹೌಸ್ ಎನ್ನುವ ಮಾತನ್ನು ತೆಗೆದುಹಾಕ ಬೇಕು ಅಥವಾ ತಿದ್ದುಪಡಿ ಮಾಡಬೇಕು. ಶ್ರೀ ಎಂ. ಎನ್. ಕೌಲ್ ಅವರ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಎಂಬ ಪುಸ್ತಕದ 104ನೇ ಪುಟದಲ್ಲಿ 'ಲೀಡರ್ ಆಫ್ ದಿ ಹೌಸ್'' ಅವರ ಜವಾಬ್ದಾರಿ ಗಳೇನು ಎನ್ನುವ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದನ್ನು ಓದುತ್ತೇನೆ :

"The responsibility of the Leader of the House is not only to the Government and its supporters in the House but to the

(ಶ್ರೀ ಎಂ. ನಾಗಪ್ಪ)

Opposition and the House as a whole. He maintains liaison between the Government and the Opposition groups in the House. He is the guardian of the legitimate rights of the Opposition as well as those of the Government. As such, he should be among the foremost champions of the rlghts of the House as a whole and see that the House is not denied, despite pressure from any quarter, its rightful opportunities.

The Leader of the House, it has been aptly said, should possess an intuitive instinct about what is going on in the minds of the members of both sides, and in case of any trouble brewing, he should be able to estimate the nature and extent of the commotion. When there is a strong parliamentary pressure on any matter, especially when it comes from both sides, he must be ready to bend to it."

ಯಾವುದಾದರೂ ಒಂದು ವಿಷಯವನ್ನು ಈ ಸಭೆಯಲ್ಲಿ ಒತ್ತಿ ಹೇಳಿ ಸರ್ಕಾರ ಅನ್ಯಾಯ ಮಾಡುತ್ತಿದೆ ಎನ್ನುವ ಪರಿಸ್ಥಿತಿಯಲ್ಲಿ, ವಿರೋಧಪಕ್ಷದವರೆಲ್ಲ ಒಟ್ಟಾಗಿ ಭರವಸೆಯನ್ನು ಕೊಡಬೇಕು ಎಂದು ಕೇಳಿದ ಕಾಲಕ್ಕೆ ಇದು ಒಂದು ಪ್ರಿಸಿಡೆಂಟ್ ಆಗಬಾರದು, ಅದನ್ನು ಒಪ್ಪಲಿಕ್ಕೆ ತಯಾರಿಲ್ಲ ಎನ್ನುವ ಮಾತನ್ನು ಅವರು ವಾಪಸು ತೆಗೆದುಕೊಳ್ಳಬೇಕು. ಅದು ಅವರ ಕರ್ತವ್ಯ. ವಿರೋಧ ಪಕ್ಷದವರು ಹೇಳುವ ಇಂಥ ಮಾತುಗಳನ್ನು ಅವರು ಸ್ವಾಗತಿಸಬೇಕು, ಅದರಂತೆ ವರ್ತಿಸಬೇಕು, ಅದರಂತೆ ಕೆಲಸಮಾಡಬೇಕು. ಈಗ ಸಭೆಯಲ್ಲಿ ಬಂದಿರುವ ವಿಷಯದ ಬಗ್ಗೆ ಭಾಷಣದ ಗೊಂದಲ ದಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ವಿರೋದಪಕ್ಷದ ಎಲ್ಲ ಪ್ರಮುಖರನ್ನೂ ಕರೆಸಿ, ಮಾತನಾಡಿ ಅವರ ನಿರ್ಣಯ ತೆಗೆದುಕೊಂಡು ಅವರು ಸರಿ ಎಂದರೆ ಮಾತ್ರ ಅದನ್ನು ಒಪ್ಪುತ್ತೇವೆ, ಇಲ್ಲದೆ ಇದ್ದರೆ ಕೈ ಬಿಡುತ್ತೇವೆ ಎನ್ನುವ ಸ್ಪಷ್ಟವಾದ ಆಶ್ವಾಸನೆಯನ್ನು ಈ ಸಭೆಗೆ ಅವರು ಕೊಡಬೇಕು. ದೇಶದ ಹಿತದೃಷ್ಟಿಯಿಂದ ನಾವು ಮಾತನಾಡುತ್ತಿದ್ದೇವೆ. ಅದಕ್ಕಾಗಿ ಉಪಯೋಗವಾಗಿರುವ ಮೂರು ಗಂಟೆ ಸಮಯ ಏನೋ ವ್ಯರ್ಥವಾಗಿ ಕಳೆದಿದ್ದೇವೆ ಎನ್ನುವ ಅಭಿಪ್ರಾಯವನ್ನು ಪಡಬಾರದು. ಇದು ದೊಡ್ಡ ಆತ್ಮೀಯ ಪ್ರಶ್ನೆ ಇದೆ. ಅದಕ್ಕಾಗಿ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳಾಗಲೀ, ಜಾಯಿಂಟ್ ರೆಸ್ಪಾನ್ಸಿಬಲಿಟಿ ಇದ್ದರೆ ಯಾರಾದರೂ ಮಂತ್ರಿಯವರು ಎದ್ದು ಈ ವಿಷಯವನ್ನು ಪುನರಪಿ ಹೊಸದಾಗಿ ಪರಿಶೀಲಿಸುತ್ತೇವೆ ಎನ್ನುವ ವಿಷಯವನ್ನು ಸ್ಪಷ್ಟಪಡಿಸಿದರೆ ಮುಂದಿನ ವ್ಯವಹಾರ ನಡೆಯಬಹುದು. ಇಲ್ಲವಾದರೆ 1967ರಲ್ಲಿ ನಡೆದಂತೆ ಪರಿಸ್ಥಿತಿ ಬರಬಹುದು. ಆ ರೀತಿ ಆಗಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I have heard the Hon. Member He has raised. various points regarding the duties of the Leader of the House. I request the hon. Member to pass on the book to me. I shall go through it and also the proceedings and give my considered ruling on the points raised by him.

† ಶ್ರೀ ಎಚ್. ಎನ್. ನಂಜೇಗೌಡ.—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ ಶ್ರೀ ಕೆ. ಪುಟ್ಟಸ್ವಾಮಿಯವರು ಮಂತ್ರಿಗಳಾಗಿ ಇಲ್ಲಿ ಏನಾದರೂ ಹೇಳುವುದು ಲೋಪವಾಗುತ್ತದೆ. ಅದಕ್ಕೆ ಕಾರಣ ಹೇಳುತ್ತೇನೆ. ಅಧ್ಯಕ್ಷರು ಸರಕಾರದ ಅಭಿಪ್ರಾಯ ಬದಲಾಯಿಸಿ ಹೇಳಬಾರದು ಎಂದೇನು ಹೇಳಿವೆ ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಸಭಾಧ್ಯಕ್ಷರು ಹೇಳಿದ್ದರಲ್ಲ ನನಗೆ ಗೌರವವಿದೆ. ಮುಖ್ಯ ಮಂತ್ರಿಗಳು ತೀರ್ಮಾನವಾಗಿಲ್ಲವೆಂದು ಹೇಳಿದರೆಂದು ತಾವು ಹೇಳಿವಿರಿ. ತೀರ್ಮಾನಮಾಡುವಾಗ ವಿರೋಧ ಪಕ್ಷವನ್ನು ನಂಬಿಕೆಗೆ ತೆಗೆದುಕೊಂಡು ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು. ಹಾಗಿರುವಾಗ ಇನ್ನೊಬ್ಬ ಮಂತ್ರಿಗಳು ತೀರ್ಮಾನವಾಗಿದೆ ಎಂದು ತದ್ವಿರುದ್ಧ ವಾದ ಸಂಗತಿ ಹೇಳಿ ಈ ಸಭೆಯನ್ನು ತಪ್ಪುಮಾರ್ಗಕ್ಕೆ ಎಳೆಯುವುದು ಸರಿಯಲ್ಲ. ಮುಖ್ಯ ಮಂತ್ರಿ ಗಳ ಹೇಳಿಕೆ ತಪ್ಪಾಗಿರಬಹುದು. ಅಧ್ಯಕ್ಷರು ಮುಖ್ಯ ಮಂತ್ರಿಗಳು ಹೇಳಿರುವುದು ನಿಜ ಎಂದು

ಹೇಳಿದರು. ಆದರೆ ಅವರು ಹೇಳಿರುವುದು ಸತ್ಯಕ್ಕೆ ದೂರವಾದುದು, ತಪ್ಪು ದಾರಿಗೆ ಎಳೆಯಲು ಪ್ರಯತ್ನ ಪಟ್ಟಿದ್ದಾರೆ. ಮಂತ್ರಿಗಳಾಗಿ ಮಾತನಾಡುವ ಹಕ್ಕು ಶ್ರೀ ಪುಟ್ಟಸ್ವಾಮಿಯವರಿಗಿಲ್ಲ, ಅವರು ಮಾತನಾಡುವುದಾದರೆ ಸಾಮಾನ್ಯ ಸದಸ್ಯರಾಗಿ ಮಾತನಾಡಬೇಕು. ಮಂತ್ರಿಗಳಾಗಿ ಅವರು ಹೇಳು ವುದಾದರೆ ಅವರು ತಾವು ಕೊಟ್ಟಿರುವ ಅಭಿಪ್ರಾಯವನ್ನು ವಾಪಸ್ಸು ಪಡೆದು ತಾವು ಹೇಳಿರುವುದು ಸತ್ಯ ಸಂಗತಿಯಲ್ಲ ಎಂದು ಒಪ್ಪಿಕೊಂಡು ಮಾತನಾಡಬೇಕು. ಇಲ್ಲದಿದ್ದರೆ ಅವರು ಮಾತನಾಡುವುದು ಬೇಕಾಗಿಲ್ಲ.

† SRI K. H. PATIL.—Sir, I agree with the hon. Member Sri H. N. Nanje Gowda. The Hon. Minister Sri Puttaswamy might have told the truth and the Hon. Chief Minister might not have told the truth. The Hon. Minister Sri Rachaiah said that the Cabinet has taken a decision. There is a little difference between what the Chief Minister said and what Sri Rachiah said and Sri Puttaswamy has made it clear. After hearing all the three Ministers, I feel that Sri Puttaswamy may be correct and that the Chief Minister and Sri Rachiah are trying to hide something from this House. So, we are in a confusion. I therefore appeal to the Chair to call upon the Chief Minister to produce all the records that are relevant for the purpose. This site has been given to the Congrees and Congress is not a registered institution ; it has no legal entity. It may be a political party but it has no legal basis to own property. All these things are quite necessary to come to a conclusion. When all the records are placed before us, we will express our views, we will come to a decision and we will direct the Government. If we suspect the bona fides of the Government, we will try to dismiss this Ministry on this ground. This is another Rampriya deal. So, every material should be placed before the House.

ಶ್ರೀ ಕೆ. ಸಂಗನಗೌಡ (ಲಿಂಗಸ್ಸುಗೂರು).—ಇಲ್ಲಿ ಶ್ರೀ ರಾಚಯ್ಯನವರಾಗಲಿ ಅಥವ ಶ್ರೀ ಪುಟ್ಟಸ್ವಾಮಿಯವರಾಗಲಿ ಸುಭಾಷ್ ನಗರದಲ್ಲಿರುವ ಜಮೀನನ್ನು ಲೀಜ (lease) ಕೊಡುವ ಬಗ್ಗೆ ಆರ್ಡರು ಮಾಡಿದ್ದಾರೆ ಅಂತಾ ಹೇಳಿದರು. ಆದುದರಿಂದ ಈ ಸಭೆಯ ಯಾವ ಸದಸ್ಯರೂ ಕೂಡ ತಪ್ಪಭಿ ಪ್ರಾಯ ಪಡುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಈ ಜಮೀನನ್ನು ಲೀಜ್ ಮೇಲೆ ಕೊಡಲು ಸರಕಾರ ತೀರ್ಮಾನಮಾಡಿದೆ, ಅದು ಯಾವ ಉದ್ದೇಶಕ್ಕೆ ಬೇಕಾದರೂ ಇರಲಿ. ಶ್ರೀ ಪುಟ್ಟಸ್ವಾಮಿಯವರು ಮತ್ತು ಸಂಬಂಧಪಟ್ಟವರು ಈ ಬಗ್ಗೆ ನಿರ್ಣಯವಾಗಿದೆ ಎಂದು ಹೇಳಿದರೇ ಹೊರತು ಅಂತಿಮ ತೀರ್ಮಾನವಾಗಿದೆ ಮತ್ತು ಕೊಡಬೇಕೆಂದು ಆರ್ಡರಾಗಿದೆ ಎಂದು ಹೇಳಲಿಲ್ಲ. ಇದಕ್ಕೆ ಈ ಮನೆಯ ಲೀಡರ್ ಅಂದರೆ ಮುಖ್ಯ ಮಂತ್ರಿಗಳು ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ ವಿರೋಧಪಕ್ಷದ ನಾಯಕರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳುವುದಾಗಿ ಸೂಕ್ಷ್ಮವಾಗಿ ಹೇಳಿರು ವುದು ಸರಿಯಾಗಿದೆ. ಶ್ರೀ ಪುಟ್ಟಸ್ವಾಮಿವರು ಲೀಸ್ ಮೇಲೆ ಕೊಡುವುದಕ್ಕೆ ನಿರ್ಣಯವಾಗಿದೆ ಎಂದು ಹೇಳಿದ್ದಾರೆ. ಆದರೆ ಅಂತಿಮ ತೀರ್ಮಾನ ತೆಗೆದುಕೊಂಡಿದೆಯೆಂದು ಹೇಳಿಲ್ಲ. ಆದುದರಿಂದ ತಪ್ಪು ಅಭಿಪ್ರಾಯವೇನೂ ಹೊರಬಿದ್ದಿಲ್ಲ ಕೇವಲ ಲೀಸ್ ಮೇಲೆ ಕೊಡುವುದಕ್ಕೆ ನಿರ್ಣಯವಾಗಿದೆ ಎಂದು ಮಾತ್ರ ಹೇಳಿದ್ದಾರೆ. ಆದುದರಿಂದ ಈ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಮಾಡಬೇಕು. ಮುಂದೆ ಬೆಳೆಸಬಾರದು.

ಶ್ರೀ ಸದಾಶಿವಪ್ಪ ಪಾಟೀಲ್.—ಕಾಂಗ್ರೆಸ್ ಪಕ್ಷಕ್ಕೆ ಕೊಡಬೇಕೆಂದು ತೀರ್ಮಾನವಾಗಿದೆ, ಬೇರೆ ಪಕ್ಷಗಳಿಗೆ ಕೊಡುವ ಇಚ್ಛೆಯಿಲ್ಲ. ನಿರ್ಣಯವನ್ನು ಯಾವ ಆಧಾರದಮೇಲೆ ತೆಗೆದುಕೊಂಡಿದೆ? ಯಾವ ವಿಷಯದ ಮೇಲೆ ನಿರ್ಣಯ ಕೈಕೊಳ್ಳಲಾಗಿದೆ? ಕಾಂಗ್ರೆಸ್ ಪಕ್ಷದವರಿಗೇ ಕೊಡಬೇಕೆಂದು ಹೇಗೆ ತೀರ್ಮಾನ ಮಾಡಲಾಯಿತು? ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಕೊಟ್ಟಿರುವುದಕ್ಕೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅಧ್ಯಕ್ಷರು ರೂಲಿಂಗ್ ಕೊಡಲಿಲ್ಲ.

ಅಧ್ಯಕ್ಷರು.—ಕೊಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ವಿಶದವಾಗಿ ಹೇಳಿದ್ದೇನೆ. ನಾನು ಆಡಿದ ಕೆಲವು ಮಾತುಗಳಿಗೆ ವಿಷಾದವನ್ನು ವ್ಯಕ್ತಪಡಿಸಿದ್ದೇನೆ. ಅಧ್ಯಕ್ಷರ ಬಗ್ಗೆ ಬಗೆಯಾಗಿ ಮಾತನಾಡಿದ್ದಕ್ಕೆ ವಿಷಾದಿಸುತ್ತೇನೆ. ಈ ಸಭೆಯನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಅವಕಾಶವಿರಬಾರದು. ಮುಖ್ಯ ಮಂತ್ರಿಗಳ ಸ್ಟೇಟ್‌ಮೆಂಟ್ ಇದೆ. ಅಧ್ಯಕ್ಷರು ತಪ್ಪು ದಾರಿಗೆ ಎಳೆದರು ಎಂದು ಅನುಮಾನ ಬರ ಬಾರದು. ಇದನ್ನು ಗಮನಿಸಬೇಕು. ಶ್ರೀ ಪುಟ್ಟಸ್ವಾಮಿಯವರು ಆಗಾಗ್ಗೆ ಎದ್ದುನಿಂತು ಈ ವಿಚಾರದಲ್ಲಿ ಬಾಯಿಹಾಕುವುದಕ್ಕೆ ಅವಕಾಶ ಕೊಡಬಾರದು.

† ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ಇದುವರೆಗೆ ಮಂತ್ರಿಗಳು ಯಾವರೀತಿಯಲ್ಲಿ ತಪ್ಪುದಾರಿಗೆ ಎಳೆದಿದ್ದಾರೆ ಎಂಬುದನ್ನು ಬಹಳ ಮಂದಿ ಸ್ಪಷ್ಟವಾಗಿ ಹೇಳಿದ್ದಾರೆ. ಬಹಳಮಟ್ಟಿಗೆ ಇದುವರೆಗೆ ಕಾಂಗ್ರೆಸ್ ಪಕ್ಷ ಒಗ್ಗಟ್ಟಿನಿಂದ ಮತ್ತು ಶಿಸ್ತಿನಿಂದ ಇದೆ, ವಿರೋಧಪಕ್ಷ ಹಾಗಿಲ್ಲ ಎಂದು ಹೇಳಿದ್ದಾರೆ. ನಿಜವಾಗಿಯೂ ಹೇಳುವುದಾದರೆ ಇಂದು ಮೂರು ಜನ ಮಂತ್ರಿಗಳು ಉತ್ತರ ಹೇಳಿದ್ದಾರೆ, ಶ್ರೀ ರಾಚಯ್ಯನವರು ಹೇಳಿದರು, ಅವರು ಹೇಳಿದ್ದು ತಪ್ಪು, ರಿಕಾರ್ಡು ತರಿಸಿ ನೋಡಬಹುದು, ಒಂದೊಂದು ಸಲ ಒಂದೊಂದು ರೀತಿಯಲ್ಲಿ ಅವರು ಹೇಳಿದರು. ಒಂದು ಸಾರಿ 30 ವರ್ಷ ಎಂದು, ಇನ್ನೊಂದು ಸಾರಿ 40 ವರ್ಷ ಎಂದು, ಇನ್ನೊಂದು ಸಲ 99 ವರ್ಷ ಎಂದು ಹೇಳಿದ್ದಾರೆ. ಒಟ್ಟನಮೇಲೆ ವಿರೋಧಪಕ್ಷದ ಮುಖಂಡರನ್ನು ಕರೆಸಿ ಪೂರ್ಣವಾಗಿ ಈ ವಿಚಾರ ಇತ್ಯರ್ಥ ಮಾಡುವಾಗ ಮುಂಚೆ ಅಭಿಪ್ರಾಯ ತಿಳಿದು ನಿರ್ಣಯಮಾಡುತ್ತೇವೆ ಎಂದು ಹೇಳಿದರು. ಹೀಗೆ ಹೇಳಿ ಸಮಾಧಾನ ಮಾಡಿದರು. ಇದರ ಜೊತೆಗೆ ಶ್ರೀ ಪುಟ್ಟಸ್ವಾಮಿಯವರು ಎದ್ದು ಮಾತನಾಡಿ ಗೊಂದಲವನ್ನುಂಟುಮಾಡಿದರು. ರಿಕಾರ್ಡು ನೋಡಿ ಹೇಳುವುದಿಲ್ಲ, ಒಬ್ಬೊಬ್ಬರು ಒಂದೊಂದು ರೀತಿ ಹೇಳುವುದು ಸರಿಯಲ್ಲ. ನಿರ್ಣಯವಾಗಿದೆ ಎಂದು ಅಧಿಕೃತವಾಗಿ ಹೇಳಿ, ಕೊಡುವಾಗ ಏನು ಕಂಡೀಷನ್ ಹಾಕಬೇಕು ಎಂಬುದು ತೀರ್ಮಾನವಾಗಬೇಕು, ಅದು ಉಳಿದಿದೆ ಎಂದು ಹೇಳಿದರು. ಹೀಗೆ ಒಂದೊಂದು ಸಲ ಒಂದೊಂದು ರೀತಿಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ಹೇಳುವಾಗ ಹೇಗೆ ತಾಳ್ಮೆಯಿಂದಿರುವುದಕ್ಕೆ ಸಾಧ್ಯ ? ಅಧ್ಯಕ್ಷರು ಸಭೆಯ ಗೌರವ ಕಾಪಾಡಬೇಕು, ಲೆಕ್ಕಾಚಾರ ಸರಿಯಾಗಿ ನಡೆಯಬೇಕು. ದಾರಿ ತಪ್ಪಿ ಹೋಗುವಾಗ ಸುಮ್ಮನಿರಲು ಹೇಗೆತಾನೆ ಸಾಧ್ಯ ? ತಾಳ್ಮೆ ಹೇಗಿರುವುದು ? ಆದುದರಿಂದ ದಯಮಿಟ್ಟು ಆಡಿದಂತೆ ಖಚಿತವಾಗಿ ಕೊಟ್ಟಿದ್ದಾಗಿದೆಯೇ ಎಂಬುದು ತಿಳಿಯಬೇಕು. ಮುಖ್ಯ ಮಂತ್ರಿಗಳು ಹೇಳಿದ್ದು ಸರಿಯೇ ಅಥವ ಇತರ ಮಂತ್ರಿಗಳು ಹೇಳಿದ್ದು ಸರಿಯೇ ಎಂಬುದನ್ನು ರಿಕಾರ್ಡು ನೋಡಿ ತಿಳಿಯಬೇಕು. ಯಾರಾದರೂ ಒಬ್ಬರು ಹೇಳಿದ್ದು ಆದರೂ ಸರಿಯಾಗಿರಬೇಕು. ಯಾರು ಹೇಳಿರುವುದು ಸರಿಯಾಗಿದೆ ಎಂಬುದು ಗೊತ್ತಾಗಬೇಕು.

ಅಧ್ಯಕ್ಷರು.—ಮಂತ್ರಿಗಳಿಗೆ ನಿಮ್ಮ ಗೈಡೆನ್ಸ್ ಬೇಕಾಗಿಲ್ಲ, ಮಾನ್ಯ ಸದಸ್ಯರು ರೈಸ್ ಮಾಡಿರುವ ಪಾಯಿಂಟಿಗೆ ಉತ್ತರ ನಾನು ಕೊಡುತ್ತಿದ್ದೇನೆ.

5-30 P.M.

Hon. Member Sri H. N. Nanje Gowda wanted me to say as to what role was played by the Hon. Minister for Parliamentary Affairs in this. I do not understand how any motive can be attributed to any one. I am grateful to the Hon. Member Sri Nanje Gowda for expressing his regert for having used certain words. I know the hon- Member is not a person to offend anybody and least the Chair. This is a matter, which, of course, is not free from doubt. We have spent about 3½ hours on this. The doubt that has arisen is that the Hon. Deputy Minister for Agriculture said something, the Hon. Minister for Agriculture said something. Then the Hon. Minister for Labour and Parliamentary Affairs said something. And finally the Hon. Chief Minister also said something on this subject. There was not perfect harmony between all these statements. Therefore, the statement made by the Hon. Chief Minister may be accepted. I have no objection if the Hon. Minister for Parliamentary Affairs were to explain the position.

Sri K. H. PATIL.—Is it not possible to get the documents produced befor the House, Sir?

Mr SPEAKER.—Let the Hon. Member point out the authority on which I can order the Government to produce the documents!

Sri H. N. NANJE GOWDA.—When we accept the statement of the Hon. Chief Minister, it means that the other Ministers have misled the House, and they must withdraw.

Mr. SPEAKER.—It is not like that. There is no such inconsistency between these statements. It is only a question of harmonious interpretation. It is not proper to attribute any motive to any Member or Minister. I just now received a copy of the statement made by the Hon. Chief Minister, and it should be taken to be an authoritative one. I think, the Hon. Minister for Parliamentary Affairs wants to say something, and he may do so.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ತಮ್ಮಲ್ಲಿ ನಾನು ಬಹಳ ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ, ಬಹುಶಃ ನಾನ ಇನ್ನು ಎರಡು ಮೂರು ವಾಕ್ಯ ಹೇಳಿದ್ದರೆ ನನ್ನ ಭಾಷಣ ಮುಗಿಯುತ್ತಾ ಇತ್ತು. ಆ ಮಧ್ಯೆ ಕ್ರಿಯಾಲೋಪ ಎತ್ತಿದ್ದರಿಂದ ಕುಳಿತುಕೊಳ್ಳಬೇಕಾಗಿ ಬಂದು ಆ ಮಧ್ಯೆ ಬೇಕಾದಷ್ಟು ಭಾಷಣಗಳು ಆದವು. ಆದರ ಮೇಲೆ ನಾನು ಏನೂ ವ್ಯಾಖ್ಯಾನ ಅಥವಾ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಸಭೆಯಲ್ಲಿ ಮಂತ್ರಿಯಾಗಿ ಮಾತನಾಡತಕ್ಕ ಹಕ್ಕನ್ನು ನಾನು ಕಳೆದುಕೊಂಡಿದ್ದೇನೆ, ಸಭೆಯನ್ನು ತಪ್ಪು ಮಾರ್ಗಕ್ಕೆ ಎಳೆದಿದ್ದೇನೆ ಎಂದು ಮಾನ್ಯ ಮಿತ್ರರಾದ ನಂಜೇಗೌಡರು ಹೇಳಿದರು.

Sri H. N. NANJE GOWDA.—Sir, when the ruling has already been given, what is the fun of the Hon. Minister arguing the same point!

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರು ತಾವು ಹೇಳಬಹುದಾದ್ದನ್ನು ಹೇಳಬಹುದು ನಮಗೆ ಅದಕ್ಕೆ ಪ್ರತಿಯಾಗಿ ಹೇಳತಕ್ಕ ಸ್ವಾತಂತ್ರ್ಯ ಇಲ್ಲ ಎಂದು ತಿಳಿದುಕೊಂಡಿದ್ದಾರೆ, ಅದು ತಪ್ಪು. ನಾನಾದರೂ ಹೇಳುವುದು ಇಷ್ಟೆ, ನಾನು ಯಾವ ವಿಧವಾದ ತಪ್ಪು ಅಭಿಪ್ರಾಯ ಬರುವಂತಹ ಮಾತನ್ನು ಆಡಿಲ್ಲ ಎಂದು ಹೇಳಿ ಇನ್ನೊಂದು ಸಾರಿ ನಾನು ಏನು ಹೇಳಿದೆ ಎಂಬುದನ್ನು ಸ್ಪಷ್ಟಪಡಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ನಾನು ಹೇಳಿದ್ದು ನಾವು ತೀರ್ಮಾನ ಮಾಡಿಕೊಂಡಿದ್ದೇವೆ, ಅಗ್ರಿಮೆಂಟ್ ಆಗಿಲ್ಲ, ಪೂರ್ತಿಯಾಗಿ ಕಂಡೀಷನ್‌ಗಳನ್ನೆಲ್ಲಾ ಒಪ್ಪಿಲ್ಲ ಆದ್ದರಿಂದ ಅಂತಿಮವಾಗಿ ತೀರ್ಮಾನವಾಗಿಲ್ಲ ಎಂದು ಈ ರೀತಿ ನಾನು ಹೇಳಿದ್ದಕ್ಕೂ ಮುಖ್ಯಮಂತ್ರಿಗಳು ಹೇಳಿದ್ದಕ್ಕೂ ರಾಚಯ್ಯನವರೂ ಹೇಳಿದ್ದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಆದರೆ ಏನಾಗುತ್ತದೆ, ಅನೇಕ ವೇಳೆ ಮಾತನಾಡುವಾಗ ಒಂದೊಂದು ಸಾರಿ ಒಂದೊಂದು ಮಾತು ಬರುತ್ತದೆ.

Sri K. H. PATIL.—Sir, I rise to a Point of Order. The Hon. Speaker has categorically made it clear in his Ruling that there is some difference in the statement made by the four Ministers. Having once accepted the Ruling, can any Member—even though he is from the Treasury Bench—make any statement challenging the Ruling? With great respect to the Hon. Minister Sri Puttaswamy, I should say that he is not right, he is not within his limit to contradict the Ruling. He is also not competent to say anything more than what he has stated already, because unless the documents are here before us, it is very difficult to believe the version that has been adduced by the Treasury Bench.

Mr. SPEAKER.—I said that there are certain matters not in harmony with each other, and that is why I permitted the Hon. Minister

(MR. SPEAKER)

for Parliamentary Affairs to find out whether all the matters can be harmonised. He is trying to do it to clarify the position, and he is perfectly right in doing it.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಚರ್ಚೆಗೆ ಅಸ್ಪದ ಕೊಡದೆ, ಈಗ ಎದ್ದಿರುವ ವಿವಾದದ ಬಗ್ಗೆ ಅಧ್ಯಕ್ಷರು ತೀರ್ಮಾನ ಆಗಬೇಕಾದರೆ, ತಮ್ಮ ಆಫೀಸಿನಿಂದ ಇದಕ್ಕೆ ಸಂಬಂಧಪಟ್ಟ ಪ್ರೊಸೀಡಿಂಗ್ಸನ್ನು ಪಡೆದಿದ್ದೇನೆ ಅದನ್ನು ತಮ್ಮ ಅಪ್ಪಣೆ ಪಡೆದು ಓದುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ: "ಸನ್ಮಾನ್ಯ ಅಧ್ಯಕ್ಷರೇ, ಅನೇಕ ವರ್ಷಗಳಿಂದ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ಬೆಂಗಳೂರು ನಗರದಲ್ಲಿರುವ ಸುಭಾಷ್‌ನಗರದಲ್ಲಿ ನಡೆಸುತ್ತಿದ್ದರು ಎಂದು ನಾನು ಹೇಳುತ್ತಿದ್ದೆ. ಅನೇಕ ವರ್ಷಗಳಿಂದ ಎಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಯುತ್ತಿದ್ದೆಯೋ ಅಲ್ಲಿ ಒಂದು ಪರ್ಮನೆಂಟ್ ಎಗ್ಸಿಬಿಷನ್ ಆಗಬೇಕು, ಅದಕ್ಕೆ ಪರ್ಮನೆಂಟ್ ಕಟ್ಟಡವಾಗಬೇಕು, ಅದಕ್ಕೆ ಸ್ಥಳ ಕೊಡಬೇಕು ಎಂದು ಕಾಂಗ್ರೆಸ್ ವಸ್ತುಪ್ರದರ್ಶನವನ್ನು ನಡೆಸುವವರು ಕೇಳುತ್ತಿದ್ದರು. ಆದರೆ ಹೀಗೆ ಕೇಳುತ್ತಿದ್ದರೂ ಕೂಡ ಈ ಬಗ್ಗೆ ನಿರ್ಣಯಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಇವತ್ತು ಸರ್ಕಾರ ಸರಿಯಾಗಿ ವಿಚಾರಮಾಡಿ, ಬಹುಶಃ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಸುವವರಿಗೆ ಕೊಡುವುದಕ್ಕೆ ಸಾಧ್ಯವಾಗಬಹುದು ಎಂದು ನಿರ್ಣಯ ಮಾಡಿಕೊಂಡಿದ್ದೇವೆ. ಆದರೆ ನಾವು ನಿರ್ಣಯಮಾಡಿದರೆ ಅದೇ ಕೊನೆಯಲ್ಲ. ನಿರ್ಣಯಮಾಡಿರುವುದನ್ನು ವಸ್ತುಪ್ರದರ್ಶನ ನಡೆಸುವ ಸಮಿತಿಯು ಒಪ್ಪುತ್ತದೆಯೋ, ಒಪ್ಪಿದರೆ ಯಾವ ಕಂಡೀಷನ್ನಿನ ಮೇಲೆ ಒಪ್ಪುತ್ತದೆ, ಎಂಬುದನ್ನು ತಿಳಿದು ಚರ್ಚೆ ಮಾಡಿ ಒಂದು ನಿರ್ಣಯ ಕೈಕೊಳ್ಳಬೇಕು. ಇಂದು ಒಂದು ನಿರ್ಣಯಮಾಡಿದ್ದೇವೆ. ಆದರೆ ಅದರ ಬಗ್ಗೆ ಅಗ್ರಿಮೆಂಟ್ ಆಗಿಲ್ಲ. ಅಗ್ರಿಮೆಂಟ್ ಆಗಿ ಗವರ್ನ್‌ಮೆಂಟ್ ಆರ್ಡರ್ ಇಷ್ಯೂ ಆದಮೇಲೆ ಫೈನಲ್ ಆಯಿತು ಎಂದು ಹೇಳಬಹುದು. ವಸ್ತುಪ್ರದರ್ಶನ ನಡೆಸುವ ಸ್ಥಳ ಯಾವ ಕಂಡೀಷನ್ನಿನ ಮೇಲೆ ಕೊಡಬೇಕು, ಅದರಲ್ಲಿ ಸರ್ಕಾರದ ಹಿತರಕ್ಷಣೆ ಯಾವ ರೀತಿ ಮಾಡಬೇಕು ಮತ್ತು ಸ್ಥಾಯಿಕವಾದ ಒಳ್ಳೆಯ ಎಗ್ಸಿಬಿಷನ್ ಬೆಂಗಳೂರು ನಗರದಲ್ಲಿ ಮಾಡಬೇಕು ಮತ್ತು ಸ್ಥಾಯಿಕವಾದ ಒಳ್ಳೆಯ ಎಗ್ಸಿಬಿಷನ್ ಬೆಂಗಳೂರು ನಗರದಲ್ಲಿ ಆಗುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಿ ಪರ್ಮನೆಂಟ್ ಎಗ್ಸಿಬಿಷನ್ ನಡೆಸಲು ಸಂಬಂಧಪಟ್ಟವರೊಡನೆ ಚರ್ಚೆಮಾಡಿ ಅಂತಿಮ ನಿರ್ಣಯ ಮಾಡಲಿಲ್ಲ. ಹಾಗೆ ಮಾಡದಿರುವುದರಿಂದ ಯಾವ ಆರ್ಡರನ್ನೂ ಮಾಡಿಲ್ಲ. ಇನ್ನು ಅಗ್ರಿಮೆಂಟ್ ಮಾಡಿಕೊಂಡಿಲ್ಲವೆಂದು ವಿನಯದಿಂದ ತಿಳಿಸುತ್ತಿದ್ದೇವೆ. ಈ ಮಧ್ಯೆ ಮಾನ್ಯ ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದ್ದಾರೆ. ಅದನ್ನೂ ಸಹ ಓದುತ್ತೇನೆ. ಏಕೆಂದರೆ ಸದಸ್ಯರಿಗೆ ಅವರು ಏನು ಹೇಳಿದ್ದಾರೋ, ಏನೋ ಎಂಬ ಸಂಶಯ ಬರಬಾರದು. ಅದು ಈ ರೀತಿ ಇದೆ:

"ಶ್ರೀ ಎಸ್. ಶಿವಪ್ಪ.—ಅಲ್ಲಿ ಖಾಯಂಆಗಿ ಒಂದು ವಸ್ತುಪ್ರದರ್ಶನ ನಡೆಸುವ ವಿಚಾರ ಕೂಡ ಸರ್ಕಾರದ ಮುಂದಿದೆ. ಪರ್ಮನೆಂಟ್ ಕಟ್ಟಡ ಕಟ್ಟಿ ವಸ್ತುಪ್ರದರ್ಶನ ನಡೆಸುವಾಗ ಸರ್ಕಾರವೇ ಏಕೆ ಅದನ್ನು ನಡೆಸಬಾರದು ? ಈ ವಿಚಾರ ಪರಿಶೀಲನೆಯಲ್ಲಿದೆಯೋ ? ಯಾವುದೇ ಒಂದು ಪಕ್ಷಕ್ಕೆ ಸರ್ಕಾರವೆ ಆಸ್ತಿಯನ್ನು ಕೊಟ್ಟು ಅದು ಪ್ರದರ್ಶನ ನಡೆಸುವುದಕ್ಕೆ ಬದಲಾಗಿ ಹೀಗೆ ಒಂದು ರಾಜಕೀಯ ಪಕ್ಷಕ್ಕೆ ಕೊಡುವುದನ್ನು ಕೈಬಿಟ್ಟು ಸರ್ಕಾರ ಅಥವಾ ಕಾರ್ಪೊರೇಷನ್ ಈ ಜಾಗವನ್ನು ತೆಗೆದುಕೊಂಡು ಖಾಯಂ ಆಗಿ ಏಕೆ ವಸ್ತುಪ್ರದರ್ಶನ ನಡೆಸುವ ವಿಚಾರಮಾಡಬಾರದು ? ಈಗ ಕಾಂಗ್ರೆಸ್ ಪಕ್ಷಕ್ಕೆ ಕೊಡಬೇಕೆಂದಿರುವ ಅವಕಾಶ ಕೈಬಿಡಲು ಪ್ರಯತ್ನಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ವಿರೋಧಪಕ್ಷದ ನಾಯಕರು ನಾನು ಹೇಳಿದ್ದನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಸಂಬಂಧಪಟ್ಟವರು ಅನೇಕ ದಿವಸಗಳಿಂದ ಈ ಸ್ಥಳ ಕೊಟ್ಟರೆ ಸ್ಥಾಯಿಕ ಪರ್ಮನೆಂಟ್ ಎಗ್ಸಿಬಿಷನ್ ನಡೆಸುತ್ತೇವೆಂದು ಕೇಳುತ್ತಿದ್ದರು. ಅದಕ್ಕೆ ಅವಕಾಶ ಕೊಡಬೇಕೆಂದು ವಿಚಾರಮಾಡಿಕೊಂಡಿದ್ದೆವು. ಆದರೆ ಈ ವಿಷಯವನ್ನು ಚರ್ಚೆಮಾಡಿ ಕಂಡೀಷನ್ ಯಾವರೀತಿ ಹಾಕಬೇಕು, ಏನು ಕಂಡೀಷನ್ ಹಾಕಬೇಕು, ಪ್ಲಾನ್ ಯಾವ ರೀತಿ ಮಾಡಬೇಕು ಎಂದು ಸಂಬಂಧಪಟ್ಟವರೊಡನೆ ಚರ್ಚಿಸಿ ಅಂತಿಮ ತೀರ್ಮಾನ ಮಾಡಿರುವುದಿಲ್ಲ. ಈ ಬಗ್ಗೆ ಅಗ್ರಿಮೆಂಟ್ ಕೂಡ ಆಗಿಲ್ಲ. ಈ ಎಲ್ಲಾ ವಿಚಾರಗಳನ್ನು ತಪಶೀಲಾಗಿ ಇಂದು ಹೇಳುವುದು ಕಷ್ಟ. ಯಾವ ವಿಧವಾದ ಅಗ್ರಿಮೆಂಟ್

> ಮಾಡಿಕೊಳ್ಳಬೇಕು, ಹೇಗೆ ಮಾಡಿಕೊಂಡರೆ ದೇಶದ ಹಿತ, ರಾಜ್ಯದ ಹಿತರಕ್ಷಣೆ ಮಾಡಬಹುದು, ಅಲ್ಲದೆ ಒಳ್ಳೆಯ 'ವಸ್ತುಪ್ರದರ್ಶನ ಸ್ಥಾಯಿಕವಾಗಿ ನಡೆಸುವುದಕ್ಕೆ ಅನುಕೂಲವಾಗುತ್ತದೆಂಬುದನ್ನು ಯೋಚಿಸಿ ,ಅದಕ್ಕೆ ಸಕ್ಕ ಕ್ರಮ ಮುಂದೆ ತೆಗೆದುಕೊಳ್ಳಬೇಕಾಗುತ್ತದೆ.''

ಇದು ಒಂದು. ಹಾಗೆಯೇ ಪುನಃ ಮುಂದುವರಿಸಿ, ಮಾನ್ಯ ಮುಖ್ಯ ಮಂತ್ರಿಗಳು ಹೀಗೆ ಹೇಳಿದ್ದಾರೆ.

''ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ಈಗಾಗಲೇ ನನ್ನ ಅಭಿಪ್ರಾಯವನ್ನು ಈ ಸಭೆಗೆ ವ್ಯಕ್ತಪಡಿಸಿದ್ದೇನೆ. ಸರ್ಕಾರ ಇನ್ನೂ ಅಂತಿಮವಾಗಿ ಇದರ ಬಗ್ಗೆ ಆರ್ಡರ್ ಹೊರಡಿಸಿಲ್ಲ, ಏಕೆಂದರೆ ಯಾವ ಷರತ್ತಿನ ಮೇಲೆ ಕೊಡಬೇಕೆನ್ನುವುದರ ಬಗ್ಗೆ ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಅದಕ್ಕೆ ಪೂರ್ವದಲ್ಲಿಯೇ ಹೇಳಿದೆ, ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುಂಚೆ ಎಲ್ಲಾ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು ಅಲ್ಲಿ ಒಂದು ಸ್ಥಾಯಿಕವಾಗಿ ಎಗ್ಸಿಬಿಷನ್ ಆಗಬೇಕು ಮತ್ತು ಸರ್ಕಾರದ ಹಿತರಕ್ಷಣೆಯಾಗಬೇಕು ಎನ್ನುವ ದೃಷ್ಟಿಯಿಂದ ಮಾಡಬೇಕೆಂದಿದ್ದೇವೆ ಎಂದು ವಿರೋಧಪಕ್ಷದ ನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ನೀವು ಈ ಸಭೆಗೆ ಒಂದು ಅಶ್ವಾಸನೆಯನ್ನು ಕೊಡಬೇಕು, ಏನಾದರೂ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳುವ ಪೂರ್ವದಲ್ಲಿ ನಮ್ಮ ಜೊತೆಯಲ್ಲಿ ಸಮಾಲೋಚನೆಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಮೊದಲೇ ಹೇಳಿದೆ. ಆರೀತಿಯಿಂದ ಸರ್ಕಾರ ದಿನಂಪ್ರತಿ ಕೆಲಸಕಾರ್ಯಗಳನ್ನು ಮಾಡುವ ಮುಂದೆ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳುಮುನ್ನ ವಿರೋಧ ಪಕ್ಷದ ನಾಯಕರ ಜೊತೆಗೆ ಸಮಾಲೋಚನೆಮಾಡಿ ನಿರ್ಣಯ ತೆಗೆದುಕೊಳ್ಳಬೇಕಾದರೆ ಸರ್ಕಾರ ನಡೆಸುವುದಕ್ಕೆ ಕಷ್ಟವಾಗುತ್ತದೆ. ಅದನ್ನು ಯಾರೂ ಒಪ್ಪುವುದಿಲ್ಲ. ಅದಕ್ಕೆ ನನ್ನ ಮನಸ್ಸಿನಲ್ಲಿರುವ ಭಯ ಎಂದರೆ, ಇದನ್ನೇ ಒಂದು ಪ್ರಿಸೀಡೆಂಟ್ ಅಂತ ಮುಂದೆ ಕ್ವೋಟ್ ಮಾಡಬಾರದು. ಆ ದೃಷ್ಟಿಯಿಂದ ಹೇಳಿದೆ, ಈ ತರಹದ ಭಾವನೆಯನ್ನು ನೀಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಇದರ ಬಗ್ಗೆ ಬಹಳ ಕಳವಳಕ್ಕೆ ಕಾರಣವಾಗಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ಮತ್ತು ಅದಕ್ಕಾಗಿಯೇ ಸಮಾಲೋಚನೆ ಮಾಡಬೇಕೆನ್ನುವ ಮಾತನ್ನೂ ಹೇಳಿದರು. ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ ಮುಂದೆ ಯಾವ ರೀತಿಯಿಂದಲೂ ಇದನ್ನು ಪ್ರಿಸೀಡೆಂಟ್ ಅಂತ ಕ್ವೋಟ್ ಮಾಡದಂತೆ ಇದರ ಬಗ್ಗೆ ಅವರ ಅಭಿಪ್ರಾಯ ಏನಿದೆ ಅದನ್ನು ತಿಳಿದುಕೊಂಡು ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಇಷ್ಟು ಮಾತ್ರ ಹೇಳುತ್ತೇನೆ.''

ನಾನು ತಮ್ಮಲ್ಲಿ ಅತಿ ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ. ಮಾನ್ಯ ಶ್ರೀ ರಾಚಯ್ಯನವರು ಹೇಳಿದ್ದರಲ್ಲಾಗಲೀ, ಮುಖ್ಯಮಂತ್ರಿಗಳು ಹೇಳಿದ್ದರಲ್ಲಾಗಲೀ, ನಾನು ಹೇಳಿದ್ದರಲ್ಲಾಗಲೀ ಯಾವ ವಿಧವಾದ ವ್ಯತ್ಯಾಸವೂ ಇಲ್ಲ. ಇರತಕ್ಕ ಪರಿಸ್ಥಿತಿಯನ್ನು ಮತ್ತೊಮ್ಮೆ ಸ್ಪಷ್ಟಪಡಿಸುವುದಕ್ಕೆ ಅಪೇಕ್ಷಪಡುತ್ತೇನೆ. ಸರ್ಕಾರ ತನ್ನ ಒಂದು ನಿರ್ಣಯ ಮಾಡಿಕೊಂಡಮ್ಮ ಕೊಡಬಹುದೆಂದು ಆದರೆ, ಯಾವ ಷರತ್ತಿನ ಮೇಲೆ ಯಾವ ಬಾಡಿಗೆ ಮೇಲೆ, ಎಷ್ಟು ಕಾಲ ಕೊಡಬೇಕು ಎನ್ನುವುದು ಯಾವುದೂ ಕೂಡ ಇನ್ನೂ ತೀರ್ಮಾನವಾಗಿಲ್ಲ. ನಮ್ಮ ಮನಸ್ಸಿನಲ್ಲಿ ಏನೇನೋ ಇರಬಹುದು. ಅದು ಏಕಪಕ್ಷೀಯವಾಗಿ ತೀರ್ಮಾನವಾಗುತ್ತದೆ. ಆ ಒಂದು ಒಪ್ಪಂದವಾಗಬೇಕಾದರೆ, ಉಭಯ ಪಕ್ಷಗಳು ಸೇರಬೇಕೆಂಬುದು ಪಾಯಿಂಟ್ ಅಲ್ಲ.

Sri H. N. NANJE GOWDA.—On a point of order under Rule 311. He is misleading the House. Again he is mis-interpreting. Mr. Rachiah told in the first instance that it is leased out for 10 years. For the second time, he told that it is leased out for many years. You cannot interpret now.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀ ನಂಜೇಗೌಡರಲ್ಲಿ ಒಂದು ನಮ್ರವಾದ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನನ್ನದು ಆ ಕಸುಬಲ್ಲ: ನನ್ನ ಕಸುಬಿನಲ್ಲಿ ಬೇರೆಯವರಿಗೆ ತಪ್ಪುದಾರಿ ತೋರಿಸುವ ಹಾಗೆ ಯಾವತ್ತೂ ಮಾಡಿಲ್ಲ. ಮಾನ್ಯ ಸದಸ್ಯರು ಕೊಡುವ ಎಚ್ಚರಿಕೆಗೆ ನಾನು ಕೃತಜ್ಞನಾಗಿದ್ದೇನೆ. ನಮ್ಮ ಮೂರು ಜನರ ನಿಲುವಳಿಯಲ್ಲಿ ಯಾವ ವಿಧವಾದಂಥ ವ್ಯತ್ಯಾಸವಿಲ್ಲವೆನ್ನುವುದನ್ನು ನಾನು ಸ್ಪಷ್ಟಪಡಿಸಿದ್ದೇನೆ. ಮತ್ತು ಒಂದು ಪ್ರಶ್ನೆಗೆ ಉತ್ತರ ಹೇಳಬೇಕಾದುದು ಅಗತ್ಯ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನೂ ಅನೇಕ ವಿರೋಧ ಪಕ್ಷದ ಮಾನ್ಯ ಸದಸ್ಯರು 'ನಿಮ್ಮ ತೀರ್ಮಾನವಾದ ಮೇಲೆ, ಟರ್ಮ್ಸ್ ಅಂಡ್ ಕಂಡಿಶನ್ಸ್ ವಿಚಾರದಲ್ಲಿ ನಮ್ಮ ಜೊತೆಯಲ್ಲಿ ಕನ್‌ಸಲ್ಟ್ ಮಾಡುತ್ತೀರಾ, ಹಾಗಿದ್ದ ಮೇಲೆ, ನಮ್ಮಲ್ಲಿ ಚರ್ಚೆ ಮಾಡಿ ಏನು

(ಶ್ರೀ ಕೆ. ಪುಟ್ಟಸ್ವಾಮಿ)

ಪ್ರಯೋಜನ ?' ಎಂದು ಕೇಳಿದರು. ಅದು ಸ್ವಾಭಾವಿಕವಾದ ಪ್ರಶ್ನೆ. ನನ್ನ ಆಶ್ವಾಸನೆಯನ್ನು ಇದರಲ್ಲಿ ಹೇಳುವುದಕ್ಕಿಂತ, ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ, ಅದನ್ನೇ ಇಲ್ಲಿ ಪುನಃ ಹೇಳಿದರೆ, ಸಾಕಾಗುತ್ತದೆ ಎಂದು ಕಾಣುತ್ತದೆ. ನಮ್ಮ ಕೈಯಲ್ಲಿ ಎಷ್ಟು ಶಕ್ತಿ ಇದೆ, ಅಷ್ಟು ಹೇಳುತ್ತೇವೆ. ಮಾನ್ಯ ಸದಸ್ಯರನ್ನು ಸಮಾಧಾನಗೊಳಿಸತಕ್ಕಂತಹ ಹೇಳಿಕೆ ಕೊಡುವ ಶಕ್ತಿ ನನಗೆ ಇದ್ದಿದ್ದರೆ, ನಾನು ಬಹಳ ಕೃತಜ್ಞನಾಗುತ್ತಿದ್ದೆ. ಆದರೆ ಅನೇಕ ವೇಳೆ, ನಾನು ಹೇಳಿದ್ದು ಅವರಿಗೆ ಸಮಾಧಾನವಾಗುವುದಿಲ್ಲ. ಆದರೆ, ಈ ಒಂದು ಸಭೆಯಲ್ಲಿರುವಾಗ, ಇಂಥ ಅನಿವಾರ್ಯವಾದಂತಹ ಅತೃಪ್ತಿ ಇದ್ದರೂ ಕೂಡ ಈ ಸಭೆಯಲ್ಲಿ ಸಾಮರಸದಿಂದ ಕೆಲಸ ಮಾಡತಕ್ಕದ್ದು ಅವಶ್ಯಕ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ನಿರ್ಣಯವನ್ನು ಮಾಡಿಕೊಂಡಿದ್ದೇವೆ ಎಂದರೆ ಅರ್ಥವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಶ್ರೀಕಂಠಯ್ಯನವರು ಹಲವು ಕಾಲ ಪ್ರಾಧ್ಯಾಪಕರಾಗಿದ್ದರು ಈಗ ವಕೀಲಿ ನಡೆಸುತ್ತಿದ್ದಾರೆ. ಇಲ್ಲಿ, ಈ ಸದನದಲ್ಲಿ ಆದಂತಹ ಕಾನೂನುಗಳ ಮೇಲೆ, ಅಲ್ಲಿ ಮೊಕದ್ದಮೆಗಳಲ್ಲಿ ಅವರದ್ದೇ ಆದಂತಹ ವ್ಯಾಖ್ಯಾನವನ್ನು ಮಾಡುತ್ತಾರೆ. ನಾನು ಏನು ಹೇಳಿದ್ದೇನೆ, ಅದರಿಂದ ಯಾವ ಅರ್ಥವಾಗುತ್ತದೆ, ಅದನ್ನು ಮಾಡಿಕೊಳ್ಳಲಿ. ಮಾನ್ಯ ಮುಖ್ಯಮಂತ್ರಿಯವರು ಹೇಳಿದರು : "ಇದರ ಬಗ್ಗೆ ಅಂತಿಮವಾದ ಆರ್ಡರ್ ಹೊರಡಿಸಿಲ್ಲ. ಯಾವ ಶರತ್ತುಗಳಲ್ಲಿ ಕೊಡಬೇಕೆಂಬುದರ ಬಗ್ಗೆ ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಅದಕ್ಕೆ ಪೂರ್ವದಲ್ಲೇ ಹೇಳಿದೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುಂಚೆ ಎಲ್ಲಾ ವಿಚಾರಗಳನ್ನೂ ಗಮನದಲ್ಲಿ ಇಟ್ಟುಕೊಂಡು ತೀರ್ಮಾನ ಮಾಡುತ್ತೇವೆ, ಮತ್ತು ಇದರ ಬಗ್ಗೆ ಬಹಳ ಕಳವಳಕ್ಕೆ ಕಾರಣವಾಗಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ, ಮುಂದೆ ಯಾವ ರೀತಿಯಿಂದಲೂ ಇದನ್ನು ಪ್ರಿಸಿಡೆಂಟ್ ಅಂತ ಕ್ವೋಟ್ ಮಾಡದಂತೆ ಇದರ ಬಗ್ಗೆ ಅವರ ಅಭಿಪ್ರಾಯ ಏನಿದೆ ಅದನ್ನು ತಿಳಿದುಕೊಂಡು ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಇಷ್ಟು ಮಾತ್ರ ಹೇಳುತ್ತೇನೆ" ಎಂದು ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಸಾಧ್ಯವಿಲ್ಲ.

†ಶ್ರೀ ಎಸ್. ಶಿವಪ್ಪ.—ತಾವು ಹೇಳಿದ ರೀತಿಯಲ್ಲಿ, ರಾಚಯ್ಯನವರು ಹೇಳಿದ್ದು ಏನಿದೆ, ಪುಟ್ಟಸ್ವಾಮಿಯವರು ಹೇಳಿದ ವ್ಯಾಖ್ಯಾನ ಏನಿದೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದು ಏನಿದೆ' ಇದರಲ್ಲಿ ಅಷ್ಟೊಂದು ಹಾರ್ಮನಿ ಇಲ್ಲ. ನಾನು ರಾಚಯ್ಯನವರು ಹೇಳಿದಾಗ ಇಲ್ಲಿ ಇರಲಿಲ್ಲ' ನಾನು ಬಂದಾಗ ಈ ವಿಚಾರ ನಡೆಯುತ್ತಿತ್ತು. ಆವಾಗ ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿದೆ, ಈ ವಿಚಾರದಲ್ಲಿ ಏನು ಮಾಡಿದ್ದೀರಿ, ಕಾಂಗ್ರೆಸ್ ಸಂಸ್ಥೆಗೆ ಕೊಡಬೇಕೆಂದು ಮಾಡಿದ್ದೀರಾ, ಎಂದು. ಇದರ ಮೇಲೆ ನಾನು ಏನೂ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ, ಅಗ್ರಿಮೆಂಟ್ ಮಾಡಿಕೊಂಡಿಲ್ಲವೆಂದು ಹೇಳಿದರು. ಮತ್ತು ಈ ವಿಚಾರವನ್ನು ನಮ್ಮ ಜೊತೆ ಸಮಾಲೋಚನೆ ಮಾಡಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆಮೇಲೆ ತಾವು ಸಭೆಯನ್ನು ಮುಂದೂಡಿದಿರಿ. ನಾವು ಎಲ್ಲಾ ಅಲ್ಲಿ ಮಾತನಾಡುವುದಕ್ಕೆ ಹೋಗಿದ್ದೆವು. ಗೋಪಾಲಗೌಡರು, ಚನ್ನಯ್ಯನವರು ಎಲ್ಲಾ ಸೇರಿ ಸ್ಪಷ್ಟವಾಗಿ ಹೇಳಿದ್ದೇವೆ. ಅಂತಿಮವಾಗಿ ನಿರ್ಣಯವಾಗಿಲ್ಲ ಇನ್ನೂ ಅಗ್ರಿಮೆಂಟ್ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಕಾಂಗ್ರೆಸ್ಸಿನವರಿಗೆ ಜಾಗವನ್ನು ಕೊಡತಕ್ಕ ವಿಚಾರದಲ್ಲಿ ಒಂದು ಖಡಾಖಂಡಿತವಾದ ಉತ್ತರವನ್ನು ಹೇಳಬೇಕಾಗಿದೆ. ನಮ್ಮ ಎಲ್ಲಾ ವಿರೋಧ ಪಕ್ಷದ ಸದಸ್ಯರನ್ನೂ ಕರೆಸಿಕೊಂಡು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಅದಕ್ಕೆ ನಾವು ಅದನ್ನು ಪ್ರಿಸಿಡೆಂಟ್ ಆಗಿ ಮಾಡುವುದಿಲ್ಲವೆಂದು ಹೇಳಿದ್ದಾರೆ. ಅದನ್ನು ಅವರೇ ಹೇಳಿಕೊಂಡಿದ್ದಾರೆ. ಅದಕ್ಕೆ ನಾವು ಬದ್ಧರಲ್ಲ. ಮುಂದೆ ನಿಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟರೂ, ಈ ಮಧ್ಯೆ ಮಾನ್ಯ ಪುಟ್ಟಸ್ವಾಮಿಯವರು ಹೇಳಿದರು, ಆಗಲೇ ಸರ್ಕಾರ ನಿರ್ಣಯ ಮಾಡಿದೆ, ಮ್ಯಾಟರ್ ಆಫ್ ಡಿಟೈಲ್ಸ್, ಟರ್ಮ್ಸ್ ಅಂಡ್ ಕಂಡಿಶನ್ಸ್ ಎನ್ನತಕ್ಕಂತಹ ಒಪ್ಪಂದವಾಗಿಲ್ಲವೆಂದು ಹೇಳಿದರು. ನನಗನ್ನಿಸುತ್ತದೆ, ಇವರನ್ನು ನಾವು ಇವತ್ತಿನ ದಿವಸ ಭೇಟಿ ಮಾಡುವುದು ಏಕೆ? ಸಮಾಲೋಚನೆ ಏಕೆ ಮಾಡಬೇಕು? ಇವರು ಲಾಯರು ಆಗಿದ್ದಾರೆ. ಇವತ್ತು ಏನು ಈಗ ಈ ಟರ್ಮ್ಸ್ ಅಂಡ್ ಕಂಡಿಷನ್ಸ್ ಮಾತ್ರ ಒಂದು ಆಗುವ ಹಂತದಲ್ಲಿದ್ದರೆ, ಆ ರೀತಿ ನಿಮ್ಮ ವ್ಯಾಖ್ಯಾನವಾಗಿದ್ದರೆ, ಅದಕ್ಕೆ ನಾವು ಒಪ್ಪುವುದಕ್ಕೆ ತಯಾರಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರ ಹತ್ತಿರ ಈ ತರದ ಒಂದು

ವಿಚಾರವಿದ್ದರೆ, ಅವರ ಹತ್ತಿರ ಹೋಗುವುದಿಲ್ಲ. ಈ ವಿಚಾರ ಅವರಲ್ಲಿದ್ದರೆ, ಅವರನ್ನು ಭೇಟಿ ಮಾಡುವುದು ನಿಷ್ಫಲ ಮತ್ತು ಪ್ರಯೋಜನವಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ ಆದರೆ, ಇವತ್ತಿನ ದಿವಸ ನೀವು ಏನು ಒಂದು ತೀರ್ಮಾನ ಮಾಡುತ್ತಿದ್ದೀರಿ, ಅದು ಒಂದು ರೀತಿಯ ನಾಟಕದ ರೀತಿಯಲ್ಲಿ ಮಾಡುತ್ತಿದ್ದೀರಿ. ಆದ್ದರಿಂದ ನೀವು ಇದರಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ಸ್ಪಷ್ಟವಾಗಿ ನಮಗೆ ಹೇಳಬೇಕು. ನೀವು ಸುಮ್ಮನೆ ನಿರ್ಣಯ ಮಾಡುತ್ತೇವೆ, ಸಮಾಲೋಚನೆ ಮಾಡುತ್ತೇವೆ ಎಂದು ಹೇಳಿದರೆ ಅದು ಬಹಳ ಅಪಹಾಸ್ಯವಾಗುತ್ತದೆ. ಇದನ್ನು ಸರ್ಕಾರ ಬಹಳ ಗೋಪ್ಯವಾಗಿಟ್ಟು, ಈ ರೀತಿ ಮಾಡುತ್ತಾ ಇರುವುದು ಒಳ್ಳೆಯದಲ್ಲ. ಹಿಂದೆ ರಾಮಪ್ರಿಯರ ವಿಚಾರ ಕೂಡ ಇದೇ ರೀತಿ ಬಂದು ಅನೇಕ ಚರ್ಚೆಯಾಯಿತು. ಅದನ್ನು ಕೂಡ ಮುಚ್ಚಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಕೊನೆಗೆ, ಮಾಡಿದ್ದು ತಪ್ಪು ಎಂದು ತಿಳಿದು ಆ ವ್ಯವಹಾರವನ್ನು ಕೈಬಿಟ್ಟದ್ದು ಈ ಸಭೆಗೆ ಗೊತ್ತಿದೆ. ಅದಕ್ಕಿಂತಲೂ 100 ರಷ್ಟು ಉಗ್ರವಾದ ಕೆಲಸ ಇದು. ಇಂಥದರಲ್ಲಿ ಸರ್ಕಾರದವರು ಧೈರ್ಯವಾಗಿ ಹೇಳಬೇಕು. ಎಲ್ಲಿ ಹೇಳಿ ಬಿಟ್ಟರೆ ಅವಮಾನವಾಗುತ್ತದೆ ಎಂದು ತಿಳಿದುಕೊಳ್ಳುವುದು ಬೇಡ. ಇಷ್ಟು ಹೊತ್ತು ಚರ್ಚೆ ಮಾಡಿ, ಪ್ರಚೋದನೆ ಮಾಡಿ ರತಕ್ಕ ವಿಚಾರದಲ್ಲಿ ಸರ್ಕಾರ ಇದನ್ನು ಮನಸ್ಸಿಗೆ ತೆಗೆದುಕೊಂಡು ನಾವು ಈ ವ್ಯವಹಾರದಲ್ಲಿ ಮುಂದುವರಿಯುವುದಿಲ್ಲ, ಎಂದು ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟರೆ, ನಮಗೆ ಸಮಾಧಾನವಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ, ಮಾನ್ಯ ಪುಟ್ಟಸ್ವಾಮಿಯವರೇ ಆಗಲಿ, ಯಾರೇ ಆಗಲಿ, ಈ ವಿಚಾರದಲ್ಲಿ ಒಂದು ಸ್ಪಷ್ಟವಾದ ಅಂಶವನ್ನು ಹೇಳಿದರೆ, ಈ ಸಭೆಯ ನಂಬಿಕೆಗೆ ನೀವು ಪಾತ್ರರಾಗುತ್ತೀರಿ. ಆ ಒಂದು ಸ್ಪಷ್ಟೀಕರಣವನ್ನು ಚೆನ್ನಾಗಿ ಕೊಡಬೇಕೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಎಸ್. ಸದಾಶಿವಪ್ಪ ಪಾಟೀಲ್.—ಸ್ವಾಮಿ, ಈಗ ಎಲ್ಲಾ ಕಡೆಯು ಎ. ಐ. ಸಿ. ಸಿ. ಅಧಿವೇಶನ ಮಾಡಿದ ಭಾಗಗಳಲ್ಲಿ, ಆ ಸ್ಥಳವನ್ನೆಲ್ಲಾ ಕಾಂಗ್ರೆಸ್ ಸದಸ್ಯರಿಗೆ ಮತ್ತು ಬೇಕಾದವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅಥವಾ ಇತರ ಉದ್ದೇಶಗಳಿಗೆ ಲೀಸ್‌ನಲ್ಲಿ ಕೊಡುತ್ತಿದ್ದಾರೆ. ಹಾಗೆ ಮಾಡದೆ ಇದನ್ನು ಸಾರ್ವಜನಿಕರಿಗಾಗಿ ಆಕ್ಷನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

6-00 P.M.

Mr. SPEAKER.—I am just putting across certain points to the Hon. Leader of the Opposition. Let us forget what has happened, on this understanding that the statement made by the Hon. Chief Minister may be accepted as final by the Leader of the Opposition and other Leaders of Parties. The Chief Minister is the head of the administration and therefore his statement should be accepted as final by all the members.

Sri K. PUTTASWAMY.—That would land me in a rather very compromising position.

Mr. SPEAKER.—I am saying that the Chief Minister's statement should be accepted as final.

Sri K. H. PATIL.—Sir, the Speaker should call for all the relevant records and files.

Mr. SPEAKER.—I have absolutely no objection for that. But there is no authority under the Constitution or under the rules vested in the Speaker to order the the Government to produce their files. If the members can show that the Speaker has such an authority, I will consider it.

Sri K. H. PATIL.—But the Hon. Speaker has every right to bring moral pressure on the Government to produce the files. If they have a clean slate, let the Government produce the files and document.

ಶ್ರೀ ಎಸ್. ಗೋಪಾಲಗೌಡ.—ಈಗ ಯಾವ ಒಂದು ಸಾರ್ವಜನಿಕರ ವಿಷಯವನ್ನೂ ಈ ಸಭೆಗೆ ಮುಚ್ಚಿಡಬಾರದು. ಇದು ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಿದೆ, ಹೌಸ್ ಆಫ್ ಕಾಮನ್ಸ್‌ನಲ್ಲಿಯೂ ತೀರ್ಮಾನವಾಗಿದೆ, ಮಂತ್ರಿಗಳು ಸ್ವಲ್ಪ ಮಿಸ್ ಲೀಡ್ ಮಾಡುವ ಹೇಳಿಕೆಯನ್ನು ಕೊಟ್ಟರೂ ಅವರಿಗೆ ಶಿಕ್ಷೆ ಯಾಗುತ್ತದೆ. ಸುಳ್ಳು ಹೇಳಿದರು ಶಿಕ್ಷೆಯಾಗುತ್ತದೆ. ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳುವುದು ನಿಜವಾಗಿದ್ದು, ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಮರೆ ಮಾಚಿದ್ದರೆ ಅದು ಮತ್ತೊಂದು ದೊಡ್ಡ ಅಫೆನ್ಸ್ ಆಗುತ್ತದೆ.

Mr. SPEAKER.—Without casting any aspersion upon any hon. Member or the Hon. Minister as ragards what is stated, I am putting forward in the interest of the work of the House, one proposition before the Leader of the Opposition and Leading members of the Opposition that the Statement made by the Chief Minister should be accepted.

ಶ್ರೀ ಎಚ್. ಎನ್. ನಂಜೇಗೌಡ.—ವಿರೋಧಪಕ್ಷದವರ ಮಾತಿಗೆ ಬೆಲೆ ಕೊಟ್ಟು ವಿರೋಧಪಕ್ಷದವರ ಜೊತೆಯಲ್ಲಿ ಚರ್ಚೆ ಮಾಡಿ ಈ ಬಗ್ಗೆ ಅಖೈರು ತೀರ್ಮಾನವನ್ನು ಕೈಗೊಳ್ಳುತ್ತೇವೆಂಬ ಭರವಸೆಯನ್ನು ಕೊಡಬೇಕೆಂದು ಕೇಳಿದೆವು. Our objection started with the statement of the Chief Minister. It is not a clear assurance to the Opposition Party Leader.

Mr. SPEAKER.—Consultation means consultation. It cannot go beyond consultation.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಜಾಗವನ್ನು ಈಗಾಗಲೇ ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಕಾಂಗ್ರೆಸ್ಸಿನವರಿಗೆ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ ಇದರ ಬಗ್ಗೆ ವಿವರಗಳು ಮಾತ್ರ ಉಳಿದಿವೆ ಎನ್ನುವ ಅರ್ಥ ಇದ್ದರೆ ಶ್ರೀಮಾನ್ ಪುಟ್ಟಸ್ವಾಮಿಯವರ ಹೇಳಿಕೆಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ನಮಗೆ ಇದರಲ್ಲಿ ಸಮಾಧಾನ ಆಗುವುದಿಲ್ಲ. ಮಾನ್ಯ ಪಾರ್ಲಿಮೆಂಟರಿ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀಮಾನ್ ರಾಚಯ್ಯನವರ ಹೇಳಿಕೆಯಾಗಲೀ, ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಗಾಗಲಿ, ನನ್ನ ಹೇಳಿಕೆಗಾಗಲೀ ಯಾವ ವ್ಯತ್ಯಾಸವೂ ಇಲ್ಲ ಆ ಜಾಗವನ್ನು ಕಾಂಗ್ರೆಸ್ಸಿನವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ, ವಿವರಗಳು ಮಾತ್ರ ಉಳಿದಿವೆ ಎಂದು ಹೇಳಿದ್ದಾರೆ. ಆ ರೀತಿ ಮುಖ್ಯ ಮಂತ್ರಿಗಳ ಹೇಳಿಕೆ ಇದ್ದರೆ ನಾವು ಅದನ್ನು ಒಪ್ಪುವುದಿಲ್ಲ. ನಾವು ಇದರಲ್ಲಿ ಭಾಗವಹಿಸುವುದಕ್ಕೆ ಇಷ್ಟ ಪಡುವುದಿಲ್ಲ. ಇದು ನಮ್ಮ ಸ್ಪಷ್ಟ ಅಭಿಪ್ರಾಯ.

†ಶ್ರೀ ಎಂ. ಎಸ್. ಕೃಷ್ಣನ್.—ಈಗ ಈ ವಿಚಾರದಲ್ಲಿ ಪ್ರತಿಯೊಬ್ಬ ಸದಸ್ಯರೂ ಪದೇ ಪದೇ ಮಾತನಾಡುತ್ತಿದ್ದಾರೆ. ಆದರೆ ಇದರಲ್ಲಿ ಏನು ಸ್ಪಷ್ಟತೆ ಇದೆಯೆಂಬುದು ಗೊತ್ತಾಗಲಿಲ್ಲ. ಈ ಜಾಗವನ್ನು ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ವಿವರಗಳು ಮಾತ್ರ ಉಳಿದಿವೆ, ಇದರ ವಿವರಗಳು ಮತ್ತು ಷರತ್ತುಗಳನ್ನು ಮಾತ್ರ ವಿರೋಧಪಕ್ಷದವರೊಡನೆ ಚರ್ಚೆ ಮಾಡಿ ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಾದರೆ ಇದು ಬಹಳ ತೊಂದರೆಯಾಗುತ್ತದೆ; ಮತ್ತು ಬಹಳ ಗೊಂದಲಕ್ಕೆ ಅವಕಾಶವಾಗುತ್ತದೆ. ಈ ವಿಷಯಕ್ಕೆ ವಿರೋಧಪಕ್ಷದರಾದ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಏನಾದರೂ ತೀರ್ಮಾನಕ್ಕೆ ಮುಂಚೆ ಮಾನ್ಯ ಮುಖ್ಯ ಮಂತ್ರಿಗಳು ನಮ್ಮೊಡನೆ ಸಮಾಲೋಚನೆ ಮಾಡುವುದಾದರೆ ಮಾಡಲಿ, ಏನೋ ಮರ್ಯಾದೆಗೋಸ್ಕರ ನಮ್ಮೊಡನೆ ಸಮಾಲೋಚನೆ ಮಾಡುತ್ತೇವೆ ಎಂದು ಹೇಳಿದರೆ ಅವರು ಮರ್ಯಾದೆಯ ಮೇಲೆ ನಿಂತುಕೊಳ್ಳಬೇಕಾಗಿಲ್ಲ. ಆದ್ದರಿಂದ ಈ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳಿ. ಏನೋ ಮರ್ಯಾದೆಗೋಸ್ಕರ ವಿರೋಧಪಕ್ಷದವರೊಡನೆ ಸಮಾಲೋಚನೆ ಮಾಡಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಅದರಿಂದ ಬೆಂಗಳೂರು ಜನತೆಗೆ ಸಮಾಧಾನವಾಗುವುದಿಲ್ಲ. ಮೈಸೂರು ರಾಜ್ಯದ ಜನಗಳಿಗೆ ಸಮಾಧಾನವಾಗುವುದಿಲ್ಲ. ಇದರಿಂದ ಒಂದ ದೊಡ್ಡ ತಪ್ಪು ಮಾತ್ರವಲ್ಲ, ಒಂದು ಲೋಪ ಕೂಡ ಆಗುತ್ತದೆ.

Mr. SPEAKER.—Bangalore City is a part of the entire State of Mysore. It is not a question of satisfying one town or one city. More than that this city of Bangalore which is the capital of the State, does not belong only to people here but it belongs to the entire State and the entire State is represented in this body which is supreme. We are all

governed by the Constitution. Constitution is supreme. I am stating these points for the consideration of the hon. Members. I just permitted the Leader of the Opposition to raise the point about which he was anxious and the Chief Minister replied to that. I permitted on the assurance that he wanted to give notice under rule 312. He did it and I accepted it and the discussion went on. While permitting notice under rule 312 I thought it would shorten the whole thing and the normal proceedings can go on to the advantage of all the hon. Members. Now it seems to me that we are not coming to any decision, and I am unable to bring the two sides together. Of course, I must say that I have become helpless in the matter. Therefore the only way to end this sort of discussion is far an hon. Member to move a motion upon which a decision of this House can be taken and I can allow it. We have taken oath of allegiance to the Constitution; let us abide by it. The Constitution is final and the rules regulating the procedure in this House are final. Therefore if any member wants a decision of this House to be taken, let a regular motion be moved under the Rules of Procedure. I will consider that motion and try to help the members to come to a decision in the matter. In the absence of such a motion, I request the hon. Members to stop this kind of discussion because no discussion can take place except on a motion.

AN HON. MEMBER.—Let us now adjourn.

Mr. SPEAKER.—The time is up to 7 p.m. and I am going to sit up to 7 p.m. Therefore, if the members want to have a decision in this matter, let them move a motion. Let us stop this and continue the work.

Sri K. H. PATIL.—On a point of order.

Mr. SPEAKER.—There can be no point of order against the ruling of the Chair.

Sri H. N. NANJE GOWDA.—We are seized of this matter. That being so, how can we give another motion ?

Mr. SPEAKER.—The hon. Member is probably talking out of ignorance. A request was made to raise the matter under rule 312. It is not a motion. It is only a point and explanation was given by the Chief Minister. It is not a motion.

Sri L. SRIKANTAIAH.—Sir, you were pleased to state that motion is not there. But you yourself was pleased to state "Will the House accept the Chief Minister's statement". That is the point at issue. The Chief Minister's statement is not clear. We wanted to clarify the matter.

Mr. SPEAKER.—I am not here to interpret. That statement is there. The hon. Members are at liberty to interpret. I only want to say it is only a point and no motion is before the House.

Sri H. N. NANJE GOWDA.—The Chief Minister is not a dictator. He can be summoned and asked to explain.

Mr. SPEAKER.—There is no scope for further discussion here. If the member wants to move a motion, he may do so. I will permit.

ಶ್ರೀ ಎಚ್. ಎನ್. ನಂಜೇಗೌಡ.—ನಾವುಗಳು ಕಳೆದ ನಾಲ್ಕು ಘಂಟೆಯಿಂದ ಅಪಾದನೆ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೇನೂ ಸ್ವರ್ಗ ಲೋಕದಲ್ಲಿ ಇಲ್ಲ. ಇಲ್ಲಿಯೇ ಇರಬಹುದು. ಅವರಿಗೆ ಹೇಳಿಕಳಿಸಿ. ಅವರು ಬಂದು ಈ ವಿಷಯದಲ್ಲಿ ಭರವಸೆ ಕೊಡಬೇಕು. That will end the matter. We do not want to have a bad name. Why should the names of our leaders be dragged into this ? ತೀರ್ಮಾನ ತೆಗೆದು ಕೊಳ್ಳುವುದು ಬಿಡುವುದು ನಮಗೆ ಸೇರಿದ್ದು, ನಾವು ಸರ್ವಾಧಿಕಾರಿಗಳಂತೆ ತೀರ್ಮಾನ ತೆಗೆದು ಕೊಳ್ಳುತ್ತೇವೆ, ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಸುವುದಕ್ಕೆ ಆ ಜಾಗವನ್ನು ಕೊಡುತ್ತೇವೆ ಎಂದು ಹೇಳುವುದಾದರೆ ಹೇಳಿಬಿಡಲಿ. ಈ ಬಗ್ಗೆ ಒಂದು ಜಾಯಿಂಟ್ ಸ್ಟಾಕ್ ಕಂಪನಿ ಮಾಡಿಕೊಂಡು ಲಾಭ ಮಾಡಿಕೊಳ್ಳುತ್ತೇವೆಂದು ಹೇಳುವುದಾದರೆ ಹೇಳಿಬಿಡಲಿ. ನಾವು ಸುಮ್ಮನೆ ಗಾಳಿಗೆ ಗುದ್ದಿ ಕೈನೋಯಿಸಿಕೊಳ್ಳುವುದಕ್ಕೆ ಇಲ್ಲಿಗೆ ಬಂದಿಲ್ಲ.

Mr. SPEAKER.—It is not fair to attribute motives. No hon. Member should attribute motives. If members want a decision of this House let a proper motion be moved under the rules. At present there is no motion before the House.

Sri B. P. GANGADHAR.—I agree, motives should not be attributed to anybody. In fact we may have the impression that no motive is there. But what they are doing is beyond doubt and there is all the motive about it. They want to knock off this property. We want to dissociate ourselves from that.

ಶ್ರೀ ವಾಟಾಳ್ ನಾಗರಾಜ್.—ನಾವು ಬಹಳವಾಗಿ ಒತ್ತಾಯ ಮಾಡುತ್ತಿದ್ದೇವೆ. ಈಗ ಉತ್ತರ ಕೊಟ್ಟಿರುವುದು ನಮಗೆ ಸಮಂಜಸವಾಗಿ ಕಾಣುತ್ತಿಲ್ಲ. ಆದ್ದರಿಂದ ಕೂಡಲೇ ಮುಖ್ಯಮಂತ್ರಿ ಗಳನ್ನು ಕರೆಸಿ, ಇಲ್ಲದಿದ್ದರೆ ಸಭೆಯನ್ನು ಮುಂದಕ್ಕೆ ಹಾಕಿ. ಈ ಬಗ್ಗೆ ಸತ್ಯ ಸಂಗತಿಯನ್ನು ಸಭೆಗೆ ಮುಖ್ಯಮಂತ್ರಿಗಳು ತಿಳಿಸುವವರೆಗೂ ನಾವು ಬೇರೆ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಬಿಡುವುದಿಲ್ಲ. ಈಗ ಮೂರು ಜನ ಮಂತ್ರಿಗಳು ಮೂರು ರೀತಿಯ ಉತ್ತರ ಕೊಟ್ಟಿದ್ದಾರೆ. ಯಾವುದು ಸರಿ ಎಂಬುದು ನಮಗೆ ತಿಳಿಯುತ್ತಿಲ್ಲ. ಮುಖ್ಯಮಂತ್ರಿಗಳು ಕಾಟಾಚಾರಕ್ಕೆ ಏನೋ ಒಂದು ಹೇಳಿಕೆ ಕೊಟ್ಟು ಹೋಗಿದ್ದಾರೆ. ಅವರನ್ನು ಮತ್ತೆ ಕರೆಸಿ ಸ್ಪಷ್ಟವಾದ ಹೇಳಿಕೆಯನ್ನು ತಾವು ಕೊಡಿಸಬೇಕು. ಅದುವರೆಗೆ ಮುಂದಿನ ಕಾರ್ಯಗಳನ್ನು ನಡೆಸುವುದಕ್ಕೆ ಬಿಡುವುದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರದವರು ಈ ವಿಷಯದಲ್ಲಿ ಭರವಸೆ ಕೊಡಬೇಕು. ಇಲ್ಲದಿದ್ದರೆ ಸರ್ಕಾರದವರು ತಮಗೆ ಇಷ್ಟಬಂದಂತೆ ತೀರ್ಮಾನ ತೆಗೆದುಕೊಳ್ಳುತ್ತೇವೆ, ವಿರೋಧ ಪಕ್ಷದವರನ್ನು ಕೇವಲ ಕೇರ್‌ಟೇಕರ್ ರೀತಿ ಇಟ್ಟುಕೊಳ್ಳುತ್ತೇವೆ ಎಂಬುದನ್ನಾದರೂ ಹೇಳಲಿ. ನಮ್ಮ ಅಭಿಪ್ರಾಯ ತೆಗೆದುಕೊಳ್ಳುವುದು ಬೇಡ ಅನ್ನತಕ್ಕಂಥ ಒಂದು ನಿರ್ದಿಷ್ಟವಾದ ಹೇಳಿಕೆಯನ್ನು ಸರ್ಕಾರದವರು ಕೊಡಲಿ, ಅದನ್ನು ದೇಶದ ಜನರು ಸಹ ಅರ್ಥಮಾಡಿಕೊಳ್ಳುತ್ತಾರೆ.

ಅಧ್ಯಕ್ಷರು.—ಹೊರಗೆ ತಾವು ಹೇಗೆ ಬೇಕಾದರೂ ಮಾತನಾಡಬಹುದು. ಆದರೆ ಸಭೆಯ ಒಳಗೆ ಮಾತನಾಡುವಾಗ ಸ್ವಲ್ಪ ಗಂಭೀರವಾಗಿ ಮಾತನಾಡಿದರೆ, ಚೆನ್ನಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಜವಾಬುದಾರಿ ಹೊತ್ತ ಮುಖ್ಯಮಂತ್ರಿಗಳು ಇಲ್ಲಿ ಹೇಳಬೇಕು.

† ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಇದುವರೆಗೆ ಮೂರು ಜನ ಮಂತ್ರಿಗಳು ಬೇರೆ ಬೇರೆಯಾಗಿ ಇಲ್ಲಿ ಏನು ಹೇಳಿದ್ದಾರೆ ಅದು ಆಗಲೇ ಇಲ್ಲಿನ ಪ್ರೊಸೀಡಿಂಗ್ಸ್‌ನಲ್ಲಿದೆ. ಇದರಲ್ಲಿ ಮೂರು ಜನ ಮಂತ್ರಿಗಳು ಹೇಳಿರುವ ಹೇಳಿಕೆ ಒಂದಕ್ಕೊಂದು ವಿರೋಧವಾಗಿವೆ ಎನ್ನುವ ವಿಚಾರಗಳ ಬಗ್ಗೆ ತಕ್ಷಣ ತಾವು ರಿಕಾರ್ಡುಗಳನ್ನು ತರಿಸಿ ಮಂತ್ರಿಗಳು ಹೇಳಿರುವ ಹೇಳಿಕೆಗಳಲ್ಲಿ ಅಂತಹ ಯಾವ ವಿಚಾರಗಳೂ ಇಲ್ಲ ಎಂದು ಕ್ಲಾರಿಫೈ ಮಾಡಿ ಹೇಳುತ್ತಾ, ಎಲ್ಲ ಮಂತ್ರಿಗಳು ಹೇಳಿರುವ ಹೇಳಿಕೆ ಗಳಲ್ಲಿ ತಾತ್ವಿಕವಾಗಿ ಒಂದೇ ರೀತಿಯಾಗಿವೆ ಇದರಲ್ಲಿ ಯಾವ ರೀತಿಯಾದ ಭೇದ ಭಾವವೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ನಮ್ಮ ವಿರೋಧ ಪಕ್ಷದ ನಾಯಕರು ಶಂಕೆ ವ್ಯಕ್ತಪಡಿಸುತ್ತಿರುವುದು

ಮುಖ್ಯ ಮಂತ್ರಿಗಳು ಹೇಳಿರುವ ಮಾತುಗಳನ್ನು ಒಪ್ಪುವುದು ಒಳ್ಳೆಯದು ಎಂದರೂ, ಪಾರ್ಲಿಮೆಂಟರಿ ಮಿನಿಸ್ಟರ್‌ವರು ವಿಶದೀಕರಣ ಮಾಡುವಾಗ, ಇದರ ಬಗ್ಗೆ ತೀರ್ಮಾನವಾಗಿದೆ ಇದರ ಡೀಟಲ್ಸ್‌ಗಳನ್ನು ಮಾತ್ರ ಪರಿಶೀಲನೆ ಮಾಡಬೇಕು ಎಂದಾಗ ಇದನ್ನು ಒಪ್ಪುವುದು ಕಷ್ಟವಾಗುತ್ತದೆ ಎಂದು ಅವರು ಹೇಳುತ್ತಾರೆ. ಇನ್ನೂ ಕೆಲವು ಮಾನ್ಯ ಸದಸ್ಯರು ಶ್ರೀಮಾನ್ ವಾಟಾಳ್ ನಾಗರಾಜ್‌ರವರು, ಶ್ರೀಮಾನ್ ನಂಜೇಗೌಡರು ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತಿದ್ದಾರೆ. ಆಗಲೇ ಇವರೆಲ್ಲಾ ಸ್ಪಷ್ಟವಾಗಿ ಹೇಳಬೇಕಾದುದನ್ನೆಲ್ಲಾ ಹೇಳಿಬಿಟ್ಟಿದ್ದಾರೆ. ಅದು ಸರಿಯೇ ತಪ್ಪೇ ಎನ್ನುವುದರ ಬಗ್ಗೆ ಮುಖ್ಯಮಂತ್ರಿಗಳು ವಿವರಣೆ ಕೊಡಬೇಕೆಂದು ಕೇಳುತ್ತಿದ್ದಾರೆ. ಸಂಬಂಧಪಟ್ಟ ಮಂತ್ರಿಗಳೇ ಆಗಲಿ ಮುಖ್ಯ ಮಂತ್ರಿಗಳೇ ಆಗಲಿ ಇದರ ಬಗ್ಗೆ ಹೇಳುವುದನ್ನೆಲ್ಲಾ ಹೇಳಿರುವಾಗ ಇಲ್ಲಿ ಸಭೆಯ ನಡೆವಳಿಕೆಗಳನ್ನು ನಡೆಸುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದರೆ ಹೇಗೆ? ಕಾನೂನು ಪ್ರಕಾರ ಮಂತ್ರಿಗಳೇ ಆಗಲೀ ಮುಖ್ಯ ಮಂತ್ರಿಗಳೇ ಆಗಲೀ ಹೇಳಲೇಬೇಕು ಎಂದು ನಿರ್ಬಂಧ ಮಾಡುವುದು ನನಗೆ ಅರ್ಥವಾಗುವುದಿಲ್ಲ. ಸರಕಾರದವರು ತಮಗೆ ಇಷ್ಟಪಟ್ಟು ಹೇಳುವುದನ್ನೆಲ್ಲಾ ಹೇಳಿದ್ದಾರೆ. ಮತ್ತೆ ಈ ಸಭೆಯಲ್ಲಿ ಮುಂದಿನ ಯಾವ ಕಾರ್ಯ ಕ್ರಮಗಳನ್ನೂ ನಡೆಸುವುದಕ್ಕೆ ಬಿಡುವುದಿಲ್ಲ ಎಂದು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳುವುದು ನನಗಂತೂ ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ. ಅವರೊಬ್ಬರಿಗಾಗಿಯೇ ಏನು ಈ ಸಭೆಯನ್ನು ನಡೆಸುತ್ತಿರುವುದು? ಈ ಸಭೆಯಲ್ಲಿ ಇನ್ನೂ ಇತರ ಸದಸ್ಯರುಗಳೂ ಇದ್ದಾರೆ ಅವರೆಲ್ಲರೂ ಇದನ್ನು ಕೇಳಿಕೊಂಡೇ ಇರಬೇಕೇನು ? ಒಂದು ವೇಳೆ ಸರಕಾರ ತೀರ್ಮಾನ ಮಾಡಿರುವುದು ತಪ್ಪು ಎಂದು ಅವರಿಗೆ ಕಂಡು ಬಂದ ಪಕ್ಷದಲ್ಲಿ ವಿರೋಧ ಪಕ್ಷದವರು ಬೇರೆ ವಿಚಾರ ತಂದು ಇಲ್ಲಿ ಸರಿಯಲ್ಲ ಎಂದು ಹೇಳಲಿ. ಬೇಕಾದರೆ, ಈ ಅಸೆಂಬ್ಲಿ ಮುಂದೆ ಈ ರೀತಿ ಮಾಡುವುದು ಸರಿಯಲ್ಲ ಎಂದು ಒಂದು ಖಂಡನಾ ನಿರ್ಣಯವನ್ನು ಕೂಡಲೇ ತಂದು ಅದರ ಬಗ್ಗೆ ಮಾತನಾಡಬಹುದಲ್ಲ. ಇದನ್ನು ಬಿಟ್ಟು ಸಭೆಯ ನಡವಳಿಕೆಗಳನ್ನು ನಡೆಯಲು ಬಿಡುವುದಿಲ್ಲ ಎಂದು ಹೇಳುವುದು ತೀರಾ ವಿಷಾದಕರವಾದುದು. ಇಂತಹ ಒಂದು ಆಟಿಟ್ಯೂಡ್ ವಿರೋಧ ಪಕ್ಷದ ಸದಸ್ಯರಲ್ಲಿ ಇರುವುದು ಸರಿಯಲ್ಲ. ಅಂಥ ಒಂದು ಭಾವನೆ ಅಷ್ಟು ಸೂಕ್ತವೂ ಅಲ್ಲ. ಅವರೆಲ್ಲರೂ ಈ ಸಭೆ ಸೂಕ್ತವಾಗಿ ನಡೆಯುವುದಕ್ಕೆ ದಯಮಾಡಿ ಅವಕಾಶ ಕೊಡಲಿ. ಈ ರೀತಿ ಅಡ್ಡಿ ಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಎಷ್ಟು ಚರ್ಚೆ ಮಾಡಿದರೂ ಸಮಾಧಾನಕರವಾಗಿಲ್ಲ ಎಂದರೆ ಬಿಡಿ. ಮುಂದಿನ ಸಭಾಕಾರ್ಯಕಲಾಪಗಳು ನಡೆಯಲು ಅವಕಾಶ ಮಾಡಿಕೊಡಿ. ಮೂರು ಜನ ಮಂತ್ರಿಗಳು ಅವರು ಹೇಳುವುದನ್ನೆಲ್ಲಾ ಹೇಳಿದ್ದಾರೆ. ಇದನ್ನು ಅಲ್ಲಿಗೇ ಬಿಡಿ.

† ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ಆಡಳಿತ ಪಕ್ಷದವರು ಇಲ್ಲಿ ವಿರೋಧ ಪಕ್ಷದವರು ಆತಂಕ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದರಲ್ಲಿ ಆತಂಕ ಎಂದು ತಿಳಿಯಬಾರದು. ಅಧಿಕಾರದಲ್ಲಿರುವ ಜನ ಜನತೆಗೆ ವಿರೋಧವಾಗಿ ಇಷ್ಟೊಂದು ಹಣದ ದುರುಪಯೋಗ ಮಾಡುತ್ತಿರುವಾಗ ಅವರು ಆಡಳಿತವನ್ನು ನಡೆಸುತ್ತಿರುವುದು ಸರಿಯಾಗಿದೆಯೇ ಎಂದು ನಾವು ಕೇಳುತ್ತಿದ್ದೇವೆ. ಇಂದು ಇರುವ ಡೆಮಾಕ್ರಟಿಕ್ ಸೆಟ್‌ಅಪ್‌ನಲ್ಲಿ ಇದನ್ನು ನಾವು ಕೇಳಲೇಬೇಕಾಗುತ್ತದೆ. ಇವೊತ್ತು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ವ್ಯಕ್ತಮಾಡಿದಂತಹ ವಿಚಾರ ಒಬ್ಬ ವ್ಯಕ್ತಿಗಳಿಗೇ ಸಂಬಂಧಪಟ್ಟಿದ್ದಲ್ಲ. ಇದು ಇಡೀ ವಿರೋಧ ಪಕ್ಷದ ಸದಸ್ಯರಿಗೆ ಹಾಗೂ ದೇಶದ ಜನರಿಗೆ ಸಂಬಂಧಿಸಿದ ಪ್ರಶ್ನೆ ಎನ್ನುವುದನ್ನು ಎಲ್ಲರೂ ಇಲ್ಲಿ ಅರ್ಥಮಾಡಿಕೊಳ್ಳಬೇಕು. ಇದರ ಬಗ್ಗೆ ಈ ರೀತಿ ಇಲ್ಲಿ ಹೇಳುತ್ತಿರುವುದನ್ನು ನೋಡಿ ನನಗೆ ತುಂಬಾ ವ್ಯಸನವಾಗುತ್ತದೆ. ಇವೊತ್ತಿನ ಕಾರ್ಯಕಲಾಪಗಳು ನಡೆಯಲು ಅಡ್ಡಿಯಾಗಿದ್ದರೆ ಅದು ಪ್ರಾಮುಖ್ಯವಾಗಿ ಮಂತ್ರಿಗಳು ಹಾಗೂ ಅವರ ಅಧಿಕಾರ ವರ್ಗದವರಿಂದ ಇಷ್ಟೊಂದು ಮಹತ್ವವಾದ ವಿಚಾರಗಳನ್ನು ಇಲ್ಲಿ ಪ್ರತಿಪಾದನೆ ಮಾಡುತ್ತಿದ್ದರೂ ಇದರ ಗಂಭೀರತೆಯನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೇ, ಇದರ ಕಾಗದಪತ್ರಗಳೇನು ಎನ್ನುವುದನ್ನು ಇದುವರೆಗೂ ಹಾಜರುಪಡಿಸಲಿಲ್ಲ. ಲಕ್ಷ ರೂಪಾಯಿಗಳಿಗಿಂತ ಮೇಲ್ಪಟ್ಟು ಬೆಲೆ ಬಾಳುವ ಪ್ರದೇಶವನ್ನು ಕಾಂಗ್ರೆಸ್ಸು ಪಕ್ಷದವರು ನಡೆಸುವ ವಸ್ತು ಪ್ರದರ್ಶನಕ್ಕಾಗಿ ಕೊಡಬೇಕೆಂದು ಹೇಳುವುದು ಲಂಚಗುಳಿತನಕ್ಕೆ ಅವಕಾಶ ಮಾಡಿ ಕೊಡುವುದಿಲ್ಲವೆ? ಇದರ ಬಗ್ಗೆ ನಾವು ಅಡ್ಡಿ ಮಾಡುತ್ತೇವೆ ಎಂದು ಹೇಳುವುದು ತಪ್ಪು ಭಾವನೆಗಳನ್ನು ಮೂಡಿಸುವುದಕ್ಕಾಗಿ ಇಂತಹ ನಡೆವಳಿಕೆಗಳನ್ನು ಪ್ರಾಮಾಣಿಕವಾಗಿ ವಿರೋಧ ಮಾಡುತ್ತಿರುವ ನಮ್ಮ ಪಕ್ಷದವರನ್ನು ಆತಂಕ ಮಾಡುತ್ತಾರೆ ಎಂದು ಹೇಳುವುದು ಸರಿಯಲ್ಲ. ಇಂತಹ ಕ್ಲಿಷ್ಟ ವಿಚಾರಗಳನ್ನು ಪ್ರತಿಪಾದನೆ ಮಾಡುತ್ತಿರುವಾಗ ಇದರ ಬಗ್ಗೆ ಆತಂಕ ವ್ಯಕ್ತ ಮಾಡುತ್ತಾರೆ ಎಂದು ಶ್ರೀಮಾನ್ ದೇವರಾಜ ಅರಸ್‌ರವರು ಏಕೆ ಹೇಳುತ್ತಾರೆ ಎನ್ನುವುದನ್ನು ಅವರೇ ಹೇಳಲಿ. ಮುಂದೆ ನಾವು ಮಾತನಾಡುವುದಿಲ್ಲ.

Mr. SPEAKER.—As the Speaker of this House, I am not concerned. with what the members should do and what should be their decision. I am concerned with the regulation of business here. I have already made it clear that no discussion can be conducted without a motion. When there was no motion here, only at the request of the hon. Leader of the Opposition I permitted the matter to be clarified by the Chief Minister under Rule 312. I now bring to the notice of this House that there can be no motion under Rule 312. So no discussion can take place. I think the discussion on this point should be stopped absolutely. If the Opposition wants to have any motion, I welcome it provided they satisfy the rules; they can seek the decision of the House. In the absence of a motion, I request the hon. Members to resume the normal function of the House today, namely, General Debate on the Budget Estimates. On this point, I am not going to permit any discussion in one way or the other. Let it be understood in a very, very absolute sense.

Sri K. H. PATIL.—* * * *

Mr. SPEAKER.—Nothing should be recorded on this point.

* * * *

Point *re*: Not recording of the proceedings of the House under orders of the Chair

6-30 P.M.

† Sri L. SRIKANTAIAH.—Sir, you have directed the staff not to record the proceedings. Has it been said that the members are obstructing the proceedings and have you given a ruling to that effect? Now, the discussion has all along been going on and you have been asking us to bring a motion if this matter is to be discussed. Our contention is that the House is already seized of this subject and the only question for consideration is whether the statement made by the Chief Minister is clear or not clear. Our contention is that the statement is not clear whereas you have been contending that the statement is all-comprehensive and quite clear. We have expressed a doubt and our Leader of the Opposition has cryptically said that the Chief Minister has misled the House. On the one hand they say that the whole land grant to the Congress is suspended while on the other hand they say that have taken a decision and that only the details are being discussed. Now, what is the stand? You have been appealing to us to accept the statement of the Chief Minister. The whole thing is proceeding on a legal basis and discussion is going on on a crucial point. I therefore fail to see eye to eye with the Chair when it is directing the staff not to record the proceedings.

---

* * * * Matter not recorded as ordered by the Chair.

SRI K. H. SRINIVAS (Sagara).—Can those matters which have been ordered not to be recorded, be taken cognizance of by the House ?

MR. SPEAKER.—I am taking the initiative myself.

† SRI M. NAGAPPA.—Sir, rule 314 says :

> "The Secretary shall cause to be prepared a full report of the proceedings of the Assembly at each of its sitting and shall, as soon as practicable, publish it in such form and manner as the Speaker may, from time to time, direct."

Rules 315 and 316 relate to expunction of words from debates. So, in this chapter the Chair has not been given any powers to direct the staff not to record the proceedings. On the contrary, everything that transpires in the House has to be recorded. Suppose tomorrow something happens on the floor of the House and if the Chair directs the staff not to record the proceedings, then there will be funny things on the floor of the House. Therefore, under rules 314, 315 and 316 the Speaker has no powers at all to direct the Reporters not to record the proceedings of the Hause ; he has only the right of expunction of words from debates. I hope he will concede this point.

MR. SPEAKER.—A point is raised whether the Chair has got any power to direct the Reporters not to record the proceedings which are not according to the Rules. The proceedings of the House are to be conducted in accordance with the provisions of the Constitution and the Rules of Procedure and Conduct of Business of this House. Take for instance rule 146 which runs as follows :—

> "Save in so far as is otherwise provided in the Constitution or in these rules, no discussion of a matter of general public interest shall take place except on a motion made with the consent of the Speaker."

The other rule to which I wish to make a reference is rule 325 which says :

> "All matters not specifically provided for in these rules and all questions relating to the detailed working of these rules shall be regulated in such manner as the Speaker may from time to time direct."

Therefore, only matters which are in accordance with the Rules of Procedure and the provisions of the Constitution have a place on the records of this House. Matters which are against the Rules of Procedure and the provisions of the Constitution cannot be considered to be regular proceedings. I have already said that there is no motion before the House which is under discussion. A clarification was sought by the Hon'ble the Leader of the Opposition and it has been given. It may be that the clarification is not to the satisfaction of the Leader of the Opposition and of certain members of the Opposition ; that is another matter. The Chair has no power to direct a Minister or a member to

(MR. SPEAKER)

speak in a particular manner or give a particular assurance; that is beyond the competence of the Chair. Therefore, the Chair is perfectly within the powers conferred on it under rule 325 to say that matters which are not in accordance with the Rules of Procedure and the provisions of the Constitution need not be recorded by the Reporters.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ಸಾಮಾನ್ಯವಾಗಿ ಸಭೆಯಲ್ಲಿ ಕಾನೂನು ಪ್ರಕಾರವಾಗಿ ಎಲ್ಲ ಕಾರ್ಯಕಲಾಪಗಳೂ ನಡೆಯಬೇಕು. ಆದರ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಸಭೆಯಲ್ಲಿ ಬಗೆಹರಿಯದಂಥ ಕೆಲವು ವಿಷಯಗಳನ್ನು ಅಧ್ಯಕ್ಷರ ಕೊಠಡಿಯಲ್ಲಿ ಎಲ್ಲರನ್ನೂ ಸೇರಿಸಿ ತೀರ್ಮಾನಕ್ಕೆ ಬರುವಂತೆ ಪ್ರಯತ್ನ ಮಾಡುವಂಥ ಪ್ರಸಂಗಗಳು ಅನೇಕವಿರುತ್ತವೆ. ಅಂಥ ಒಂದು ಪ್ರಸಂಗ ಈವೊತ್ತು ಬಂದಿದೆ. ರೂಲ್ಸ್ ಪ್ರಕಾರ ಮೋಷನ್ ಇಲ್ಲದೆ ಚರ್ಚೆ ಮಾಡಕೂಡದು ಎನ್ನುವುದು ಸ್ಪಷ್ಟವಾಗಿದೆ. ಹಾಗಿದ್ದರೂ ಕೂಡ ತಮ್ಮ ಚೇಂಬರಿನಲ್ಲಿ ಒಂದು ತೀರ್ಮಾನಕ್ಕೆ ಬಂದ ಮೇಲೆ ಇಲ್ಲಿ ಚರ್ಚೆ ನಡೆಯಿತು. ಮುಖ್ಯ ಮಂತ್ರಿಯವರು ಒಂದು ಹೇಳಿಕೆ ಕೊಟ್ಟರು, ಅವರ ಹೇಳಿಕೆಯ ಅರ್ಥ ನಮಗೆ ಸ್ಪಷ್ಟವಾಗಿ ಆಗ ಗೊತ್ತಾಗಲಿಲ್ಲ. ನಿರ್ಣಯ ತೆಗೆದುಕೊಂಡಿದ್ದಾರೆ, ವಿವರಗಳು ಮಾತ್ರ ಉಳಿದಿವೆ ಎನ್ನುವುದು ನಮಗೆ ಏನೂ ಅರ್ಥವಾಗಲಿಲ್ಲ. ಪಾರ್ಲಿಮೆಂಟರಿ ವ್ಯವಹಾರಗಳ ಸಚಿವರು ವಿವರಗಳನ್ನು ಕೊಟ್ಟು ನಮಗೆ ಬಹಳ ಉಪಕಾರ ಮಾಡಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದನ್ನು ಒಪ್ಪುವುದು ಸರಿಯಲ್ಲ ಎನ್ನುವುದು ನಮ್ಮ ಅಭಿಪ್ರಾಯ. ಆದರೆ ಆ ವಿಷಯದ ಬಗ್ಗೆ ಇನ್ನು ಮುಂದೆ ಚರ್ಚೆ ಸಾಕು ಎಂದು ತಾವು ಅಭಿಪ್ರಾಯ ಕೊಡುತ್ತಿದ್ದೀರಿ. ಇವೊತ್ತು ಚರ್ಚೆ ಸಾಕು ಎಂದು ಹೇಳಿದರೂ ಕೂಡ ಇದರ ತೀರ್ಮಾನ ಹೇಗಾದರೂ ಬಗೆಹರಿಯಲೇ ಬೇಕು. ಅದಕ್ಕಾಗಿ ತಾವು ಮತ್ತೊಂದು ಅವಕಾಶವನ್ನು ಕಲ್ಪಿಸಿ ವಿರೋಧ ಪಕ್ಷದ ನಾಯಕರನ್ನೂ, ಸಭಾ ನಾಯಕರನ್ನೂ ಸೇರಿಸಿ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಈ ದಿವಸ ನಾವು ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದು ರಾಹುಕಾಲದಲ್ಲಿ ಎಂದು ಕಾಣುತ್ತದೆ. ಅದಕ್ಕೋಸ್ಕರ ಒಂದು ಮಧುರವಾದ ವಾತಾವರಣವನ್ನು ಮತ್ತೆ ಉಂಟುಮಾಡುವುದಕ್ಕೋಸ್ಕರ ಮತ್ತೊಂದು ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಸಭೆ ವೇಳೆ ಮುಗಿಯುವುದರಲ್ಲಿರುವುದರಿಂದ ನಾಳೆ ಇದನ್ನು ಬಗೆಹರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ವಿಷಯದ ಬಗ್ಗೆ ಒಂದು ತೀರ್ಮಾನಕ್ಕೆ ಎಲ್ಲರೂ ಬರಬೇಕು ಎಂದು ನಾನು ಪ್ರಯತ್ನ ಮಾಡಿದ್ದು ತಮಗೂ ಗೊತ್ತಿದೆ. ಆದರೆ ಆ ಪ್ರಕಾರ ಏನೂ ಆಗಿಲಲ್ಲ, ಆಗುವ ಸಂಭವವೂ ಕಾಣುವುದಿಲ್ಲ. ಈಗ ಸಭೆಯ ಮುಂದೆ ಯಾವ ಸೂಚನೆಯೂ ಇಲ್ಲ. ನಾನು ಮಾಡಿದ ಪ್ರಯತ್ನ ನಿಷ್ಫಲವಾಗಿದೆ, ಅದರಿಂದ ಏನೂ ಫಲ ಬರಲಿಲ್ಲ. ಮಾನ್ಯ ಸದಸ್ಯರು ಸೂಚನೆ ಮಾಡಿದ ಪ್ರಕಾರ ವಿರೋಧ ಪಕ್ಷದ ನಾಯಕರು ಮತ್ತು ಸಭಾ ನಾಯಕರನ್ನು ಒಂದು ಕಡೆ ಸೇರಿಸಲಿಕ್ಕೆ ಯಾವತ್ತಿಗೂ ನಾನು ಸಿದ್ಧನಿದ್ದೇನೆ.

I am interested in bringing about harmony between the various sections of the House. That is my interest and I shall try to set up a precedent. I think, the way in which we should conduct ourselves is thousand times more valuable than a piece of land. Without meaning any offence to anybody I should say there should be certain method of dealing with things, we should all try to come to certain understanding. Unfortunately that understanding has eluded us. But the hon. Members should not behave in a manner which is contrary to the Constitution or the Rules. These Rules are framed by the entire House. Let us maintain certain standard of democratic principles. If you come to an understanding, nobody would be better pleased than myself.

† ಶ್ರೀ ಎಸ್. ಶಿವಪ್ಪ.-ಸಭಾಪತಿಯವರೇ, ತಾವು ಈಗ ರಾಜ್ಯಾಂಗ ಮತ್ತು ಪ್ರಜಾಪ್ರಭುತ್ವವನ್ನು ಸಾಕಷ್ಟು ಎತ್ತರದ ಮಟ್ಟದಲ್ಲಿ ತೆಗೆದುಕೊಂಡು ಹೋಗಬೇಕು ಎನ್ನುವ ದೃಷ್ಟಿಯಲ್ಲಿ

ಹೇಳಿರುವುದಕ್ಕಾಗಿ ತಮಗೆ ಅಭಿನಂದಿಸುತ್ತೇನೆ. ಕೆಲವು ಗಹನ ವಿಚಾರಗಳು ಬಂದಾಗ ಶಾಂತ ರೀತಿಯಿಂದ, ಒಳ್ಳೆಯ ರೀತಿಯಲ್ಲಿ ಅದನ್ನು ಇತ್ಯರ್ಥ ಮಾಡಲು ಏನು ಪ್ರಯತ್ನ ಮಾಡಿದಿರಿ ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಪ್ರಜಾಪ್ರಭುತ್ವ ಈ ದೇಶದಲ್ಲಿ ಬಾಳಬೇಕು ಎಂದು ಎಲ್ಲರೂ ಹೇಳುತ್ತೇವೆ. ಆದರೆ ಕಾಂಗ್ರೆಸ್ ಸರ್ಕಾರ ತನ್ನ ಪಕ್ಷದ ಹಿತಸಾಧನೆಗಾಗಿ ಮಾಡುತ್ತಿರುವ ಈ ಅನ್ಯಾಯವನ್ನು ಎತ್ತಿ ತೋರಿಸುವುದಕ್ಕಾಗಿ ಇಲ್ಲಿ ವಿಷಯ ಪ್ರತಿಪಾದನೆ ಮಾಡಿದರೆ, ಅಂಥ ಅನ್ಯಾಯವನ್ನು ತಡೆಗಟ್ಟತಕ್ಕ ಶಕ್ತಿ ಈ ಸಭೆಗೆ ಇಲ್ಲದೆ ಹೋದರೆ ಈ ದೇಶದಲ್ಲಿ ಈ ಶಾಸನ ಸಭೆ ಇದ್ದು ಏನು ಪ್ರಯೋಜನ ? ನೀವು ಇದನ್ನು ಅರಿತುಕೊಂಡೇ ಶಾಸನಸಭೆ ನಡೆಯುತ್ತಿದ್ದ ಕಾಲದಲ್ಲಿ ಇಂಥ ಅಕೃತ್ಯಗಳು ನಡೆಯಬಾರದು, ಸರ್ಕಾರಕ್ಕೆ ಈಗಲಾದರೂ ಜ್ಞಾನೋದಯವಾಗಿ ಈ ಕೆಲಸವನ್ನು ಕೈ ಬಿಡುತ್ತಾರೆ ಎನ್ನುವ ಆಶ್ವಾಸನೆಯನ್ನು ಕೊಡುತ್ತಾರೆನ್ನುವ ಉದ್ದೇಶದಿಂದ ಸಭೆಯನ್ನು ಒಂದು ಸಾರಿ ಮುಂದುವರಿಸಿದಿರಿ ಮತ್ತು ವಿರೋಧಪಕ್ಷದ ಸದಸ್ಯರು ಎಷ್ಟು ಹೇಳಿದರೂ ಕೂಡ ಅದೆಲ್ಲ ಗೋರ್ಕಲ್ಲ ಮೇಲೆ ಮಳೆ ಸುರಿದಂತಾಗಿದೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ಇವರ ಕೈಯಲ್ಲಿ ಬಾಳುತ್ತದೆ ಎನ್ನುವ ನಂಬಿಕೆ ಇಲ್ಲ. ತಮಗಾದರೂ ಇದೆಯೋ ಎನ್ನುವುದನ್ನು ಯೋಚನೆ ಮಾಡಿ. ಸಭಾ ನಾಯಕರು, ಈ ವಿಚಾರದಲ್ಲಿ ಇಷ್ಟೊಂದು ಗೊಂದಲವಾಗಿರುವಾಗ ಪಕ್ಷದ ಹಿತಸಾಧನೆಗಾಗಿ ದೇಶದ ಆಸ್ತಿಯನ್ನು ಕೊಡಲು ತೀರ್ಮಾನ ಮಾಡಿರುವುದನ್ನು ನಿಲ್ಲಿಸುತ್ತೇವೆ ಎಂದು ಸಭೆಗೆ ಹೇಳಿದ್ದರೆ ಅವರು ಹೇಳತಕ್ಕ ಮಾತನ್ನು ಶಿರಸಾವಹಿಸಿ ಪಾಲಿಸುತ್ತಿದ್ದೆವು. ಪ್ರಜಾ ಪ್ರಭುತ್ವ ಆಕಾಶದಿಂದ ಬರುವುದಿಲ್ಲ. ಅವರು ಮಾಡತಕ್ಕ ಕಾರ್ಯಾಚರಣೆಯೊಳಗೆ ಬರುತ್ತದೆ. ಇಂಥ ಗಹನವಾದ ವಿಚಾರಗಳು ಬಂದಾಗ ನಮ್ಮ ಪಕ್ಷಕ್ಕೆ ಸೇರಿದ್ದು, ನಮಗೆ ಬಹುಮತವಿದೆ, ಸರ್ಕಾರದ ಅಧಿಕಾರವಿದೆ, ಅಧಿಕಾರ ದಂಡವಿದೆ, ಏನು ಬೇಕಾದರೂ ಮಾಡುತ್ತೇವೆ ಎನ್ನತಕ್ಕ ಒಂದೇ ಒಂದು ಒರಟುತನದಿಂದ ಪ್ರಜಾಪ್ರಭುತ್ವವನ್ನು ಬೆಳೆಸಿಕೊಂಡು ಹೋಗುತ್ತೇವೆ ಎಂದು ಹೇಳಿದರೆ ಅದು ಸಾಧ್ಯವೇ ಎನ್ನುವುದನ್ನು ಮಾನ್ಯ ಸಭಾಪತಿಗಳಾದ ತಾವು ಯೋಚನೆ ಮಾಡಬೇಕು. ನಾವು ಏನು ಹೇಳಿದರೂ ಅವರು ಮರದ ದಿಮ್ಮಿಯಂತೆ ಕುಳಿತಿದ್ದಾರೆ. ಪ್ರಜಾಪ್ರಭುತ್ವ ಜೀವಕಳೆಯಿಂದ ಕೂಡಿರಬೇಕು. ಇವರು ದೇಶದ ಸ್ವತ್ತನ್ನು ತಮ್ಮ ಪಕ್ಷಕ್ಕಾಗಿ ಕೊಡುತ್ತಿದ್ದಾರೆ. ಇದರಿಂದ ನಮಗೆ ಬಹಳ ದುಃಖವಾಗುತ್ತಿದೆ. ಆದರೆ ಇವರು ಸಂತೋಷವಾಗಿದ್ದಾರೆ. ಇದರ ಇಂಗಿತವೇನೆಂದರೆ ಪಕ್ಷಕ್ಕೆ ಲಾಭವಾಗುತ್ತಿದೆ ಎನ್ನುವುದು. ಹೀಗೆ ಮಾಡಿದರೆ ಪ್ರಜಾಪ್ರಭುತ್ವ ನಿಜವಾಗಿಯೂ ಸಾಧನೆಯಾಗುತ್ತದೆಯೇ ? ನಿಮ್ಮ ಪಕ್ಷದವರಿಗೇಕೆ ಈ ಆಸ್ತಿಯನ್ನು ಕೊಟ್ಟಿರಿ ? ಇಂದು ಇಂಥ ಕೆಲಸ ಮಾಡಿ ಪ್ರಜಾ ಪ್ರಭುತ್ವಕ್ಕೆ ತಿಲಾಂಜಲಿ ಕೊಡುವುದು ಸರಿಯಲ್ಲ. ಒಂದು ನಿರ್ಣಯ ತನ್ನಿ, ಅದರಮೇಲೆ ಸಭೆಯ ಅಭಿಪ್ರಾಯ ತೆಗೆದುಕೊಳ್ಳೋಣ. ಅದುವರೆಗೆ ಸಭೆ ಮುಂದುವರೆಸೋಣ. ಅಧ್ಯಕ್ಷರು ನಿಯಮಾವಳಿ ಪ್ರಕಾರ ನಡೆದುಗೊಳ್ಳಬೇಕೆಂದು ಹೇಳುವುದು ನ್ಯಾಯವಾಗಿದೆ. ಆದರೆ ಇದು ಓಟಿಗೆ ಹಾಕಿ ನಿರ್ಣಯ ಮಾಡುವ ವಿಚಾರವಲ್ಲ. ಹಾಗೆ ಮಾಡಬಹುದಾಗಿದ್ದರೆ ಬೆಳಿಗ್ಗೆಯೇ ಅದನ್ನು ಹೇಳುತ್ತಿದ್ದೆ. ಇದು ಓಟಿನಿಂದಲೇ ನಿರ್ಣಯಮಾಡುವ ವಿಷಯವಲ್ಲ. ನಾವು ಒಳ್ಳೆಯ ಸಂಪ್ರದಾಯ, ಒಂದು ಸರಿಯಾದ ಮೇಲುಪಂಕ್ತಿ ಈ ಸಭೆಯಲ್ಲಿ ಹಾಕಬೇಕು. ಸಂಪ್ರದಾಯಬದ್ಧರಾಗಿ ಒಳ್ಳೆಯ ರೀತಿಯಲ್ಲಿ ಸರಕಾರ ಸರಿಯಾದ ನೀತಿಯನ್ನು ಅಳವಡಿಸಿಕೊಂಡು ಹೋಗಲಿ ಎಂದು ನಾನು ಇಷ್ಟೆಲ್ಲಾ ಹೇಳುತ್ತೇನೆ. ಶ್ರೀ ರಾಮಕೃಷ್ಣ ಹೆಗ್ಗಡೆಯವರು ನನ್ನ ಹಾಗೇ ವಿಶ್ವಪರ್ಯಟನ ಮಾಡಿದ್ದಾರೆ. ಯಾವ ರಾಷ್ಟ್ರದಲ್ಲಾದರೂ ಕೂಡ ಹೀಗೆ ವಸ್ತು ಪ್ರದರ್ಶನ ನಡೆಸುವುದಕ್ಕೆ ಸರಕಾರ ಕಟ್ಟಡ ಕಟ್ಟಿದ್ದಾರೆಯೇ ? ಇತರ ರಾಷ್ಟ್ರಗಳಲ್ಲಿ ನಾಲ್ಕಾರು ಮ್ಯೂಸಿಯಂಗಳಿವೆ, ಸರಕಾರದವರು ಲಕ್ಷಾಂತರ ಖರ್ಚುಮಾಡಿ ಅಲ್ಲಿರುವ ಜನರು ಇಡೀ 365 ದಿವಸ ಪ್ರದರ್ಶನ ನೋಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಇಲ್ಲೂ ಕೂಡ ಸರಕಾರ ಅದೇ ರೀತಿ ಮಾಡಬೇಕೆಂದು ಸಲಹೆಮಾಡಿದೆ. ಮ್ಯೂಸಿಯಂ ಇತರ ರಾಷ್ಟ್ರಗಳಲ್ಲಿರುವಂತೆ ಇಲ್ಲೂ ಮಾಡಿದರೆ ಬೆಂಗಳೂರಿನ ನಾಗರಿಕರಿಗೆ ಮತ್ತು ಪ್ರವಾಸಿಗರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರೆ, ಸರಕಾರ ಹಾಗೆ ಮಾಡುವುದಿಲ್ಲ, ಪಕ್ಷಕ್ಕೆ ಈ ಅವಕಾಶ ಕೊಡುತ್ತೇವೆ ಎಂದು ಹೇಳುವುದು ಸರಿಯೇ ? ಪ್ರಜಾಪ್ರಭುತ್ವದಲ್ಲಿ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ಖಂಡಿತವಾಗಿ ಹೇಳಬೇಕಾಗಿದೆ. ನಿಯಮಾವಳಿಯ ಪ್ರಕಾರ ಇಲ್ಲಿ ಚರ್ಚೆ ನಡೆಯದಿದ್ದುದಕ್ಕಾಗಿ ಅಧ್ಯಕ್ಷರಿಗೆ ಮನಸ್ಸು ನೊಂದಿದೆ. ಅವರು ಒಳ್ಳೆಯ ಸಂಪ್ರದಾಯವನ್ನು ಹಾಕಿದ್ದಾರೆ. ಮೈಸೂರು ಶಾಸನಸಭೆ ಆಡಳಿತ ಮಾದರಿಯಾಗಿದೆ ಎಂಬುದನ್ನು ಇಡೀ ಭಾರತ ಮನಗಂಡಿದೆ, ಈ ಸಭೆ ಖಂಡಿತ ವ್ಯರ್ಥವಾಗಿ ಕಾಲ ಕಳೆದಿಲ್ಲ, ಕುರ್ಚಿಗಳನ್ನು ತೆಗೆದುಕೊಂಡು ಹೊಡೆದಾಡಿಲ್ಲ. ನಿಯಮಗಳಿಗನುಗುಣವಾಗಿ ಕೆಲಸ ಇಲ್ಲಿ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ.

† ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಪ್ರತಿಕ್ರಿಯೆ ಇಲ್ಲ, ನಿರ್ಜೀವ ನಮ್ಮ ಪಕ್ಷದಲ್ಲಿ ಇದ್ದಂತಿದೆ ಎಂದು ಟೀಕೆಮಾಡಿದರು. ಯಾವ ಪ್ರತಿಕ್ರಿಯೆಯೂ ಸರಕಾರ ವ್ಯಕ್ತಪಡಿಸದಿರುವುದಕ್ಕೆ ಕಾರಣವೇನು ಎಂದು ಕೇಳಿದರು. ಕಾರಣ ಇಷ್ಟೆ: ನಮ್ಮ

(ಶ್ರೀ ಕೆ. ಪುಟ್ಟಸ್ವಾಮಿ)

ವಿರೋಧ ಪಕ್ಷದ ನಾಯಕರು ಕಠಿಣವಾಗಿ ಹೇಳುವಾಗಲೂ, ಕಠೋರ ಸತ್ಯ ಹೇಳುವಾಗಲೂ ಕಾಂಗ್ರೆಸ್ಸಿನವರು ನಗುತ್ತಾ ಇರುತ್ತಾರೆ, ಅವರಿಗೆ ನೋವಾಗುವುದಿಲ್ಲ ಎಂದು ಹೇಳಿದರು. ಅವರು ಹೇಳುವುದನ್ನು ನಾವು ಸಮಾಧಾನದಿಂದ ಕೇಳುತ್ತಿದ್ದೆವು. ನಾವು ನಿರ್ಜೀವಿಗಳಂತೆ ಇದ್ದೆವು, ಪ್ರತಿಕ್ರಿಯೆ ಏನೂ ವ್ಯಕ್ತಮಾಡಿಲಲ್ಲ ಎಂದು ಅವರು ಭಾವಿಸಬಾರದು ಪ್ರಜಾಸತ್ತೆಯಲ್ಲಿ ಅವರು ತಳೆದಿರುವ ನಂಬಿಕೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಅವರು ತಪ್ಪು ಮಾಡುವುದೇನೆಂದರೆ ಮಿಸ್ಟೇಕಿಂಗ್ ದಿ ಟ್ರೀ ಫಾರ್ ದಿ ವುಡ್, ಹೀಗಿದೆ. ಪ್ರಜಾಸತ್ತೆ ವಿಚಾರದಲ್ಲಿ, ಈ ಸಭೆಯ ವಿಚಾರದಲ್ಲಿ ನಾವು ಭಯಭಕ್ತಿಗಳಿಂದ ನಡೆದುಕೊಳ್ಳುತ್ತಿದ್ದೇವೆ. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದಕ್ಕೆ ಪ್ರತಿಕ್ರಿಯೆ ಇಲ್ಲ ಎಂದು ಅವರು ತಿಳಿಯಬಾರದು. ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಈ ಸಭೆಯ ಅಭಿಪ್ರಾಯಕ್ಕೆ ನಾವು ಗಮನಕೊಡುತ್ತಿದ್ದೇವೆ, ಆದರೆ ವಿರೋಧ ಪಕ್ಷದ ನಾಯಕರು ಹೇಳುವುದು ಸಭೆಯ ಅಭಿಪ್ರಾಯವಲ್ಲ, ಸಭೆಯ ಅಭಿಪ್ರಾಯ ಸ್ಪಷ್ಟವಾಗಬೇಕು, ಅದನ್ನು ತಿಳಿಯುವುದಕ್ಕೆ ಅವಕಾಶವಿದೆ. ಆದುದರಿಂದ ಈ ವಿಚಾರದಲ್ಲಿ ಜಿಜ್ಞಾಸೆ ಬೇಡ. ಈ ದಿವಸ 2 ಗಂಟೆಯಿಂದ 7 ಗಂಟೆಯವರೆಗೆ ಸುಮಾರು ನಾಲ್ಕೂವರೆ ಗಂಟೆ ಕಾಲ ಈ ವಿಚಾರ ಚರ್ಚೆಯಾಗಿದೆ, ಈ ಸಭೆಯಲ್ಲಿರುವ ಬಹಳ ಮಂದಿ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಪ್ರದರ್ಶನ ನಡೆಸಲು ಜಾಗ ಕೊಡುವುದು ಸರಿಯಲ್ಲವೆಂದು ಅನೇಕರು ಸ್ಪಷ್ಟಪಡಿಸಿದ್ದಾರೆ, ಇದರಲ್ಲಿ ಸಂಶಯವಿಲ್ಲ, ಅವರ ಜೊತೆಯಲ್ಲಿ ಚರ್ಚೆಮಾಡಿ ನಾವು ಐಕ್ಯರಾಗಿ ತೀರ್ಮಾನಮಾಡುವುದು ಈ ಸಭೆಯ ಸಮ್ಮತಿಯನ್ನು ಪಡೆದು ಮಾಡವುದೇ ಆಗಿದೆ. ಹಾಗೆ ಮಾಡುತ್ತೇವೆ ಎಂದು ಭರವಸೆ ಕೊಡುತ್ತೇನೆ. ಆದುದರಿಂದ ನಾನು ಮಾನ್ಯ ಸಭೆಯಲ್ಲಿ ವಿನಂತಿಮಾಡಿಕೊಳ್ಳುತ್ತೇನೆ, ಮುಖ್ಯ ಮಂತ್ರಿಯವರು ಈಗ ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಚರ್ಚೆ ಮಾಡುವುದಾಗಿ ಹೇಳಿದ್ದಾರೆ, ಅವರು ಹೇಳಿದ್ದನ್ನೇ ಪುನಃ ಹೇಳಿದ್ದಾರೆ. ಒಂದು ಪಕ್ಷ ಏಕಪಕ್ಷೀಯವಾಗಿ ನಾವು ನಿರ್ಣಯಮಾಡಿದ್ದರೆ ಅದರ ವಿಚಾರದಲ್ಲಿ ಇತರರ ಅಭಿಪ್ರಾಯವನ್ನು ಕೇಳುತ್ತೇವೆ, ಕೊಡಬೇಕೆ, ಬೇಡವೆ, ಹೇಗೆ ಉಪಯೋಗಿಸಬೇಕು ಎಂಬ ವಿಚಾರವನ್ನು ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬರುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇಷ್ಟು ವಿವರಣೆ ಹೇಳಿದಮೇಲೆ ಈ ಮಾನ್ಯ ಸಭೆಯು ಸರಕಾರದ ನಿಲುವು ಸರಿಯಾಗಿದೆ ಎಂದು ಭಾವಿಸಿ ಇನ್ನಾದರೂ ನಮ್ಮ ಮುಂದಿರುವ ಗಹನವಾದ 69—70 ಆಯುವ್ಯಯದ ವಿಚಾರವಾಗಿ ಚರ್ಚೆ ಮಾಡವುದಕ್ಕೆ ಮಾನ್ಯ ಸದಸ್ಯರು ಉದ್ಯುಕ್ತರಾಗುತ್ತಾರೆಂದು ನಂಬಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಪುನರ್ವಿಮರ್ಶೆ ಮಾಡುವುದಕ್ಕೆ ಸಿದ್ಧ ಎಂದು ಹೇಳಿದ ಹಾಗಾಯಿತು.

7-00 P. M.

ಶ್ರೀ ಕೆ. ಪುಟ್ಟಸ್ವಾಮಿ.—ಹತ್ತು ಸಾರಿ ನಾವು ಉತ್ತರ ಹೇಳುವುದು ಅನುಚಿತ, ಆದರೆ ವಿಧಿಯಿಲ್ಲ. ಮಾತನಾಡಿದಾಗಲೆಲ್ಲಾ ಮುಖ್ಯ ಮಂತ್ರಿಗಳು ಹೇಳುವುದಕ್ಕೂ ರಾಚಯ್ಯನವರು ಹೇಳುವುದಕ್ಕೂ ವ್ಯತ್ಯಾಸವಿದೆ, ಕ್ರಿಯಾಲೋಪವಿದೆ, ಮಿಸ್‌ಲೀಡ್ ಮಾಡುತ್ತಿದ್ದಾರೆ ಅಧಿಕಾರದಲ್ಲಿರಲು ಸರಕಾರಕ್ಕೆ ಅರ್ಹತೆ ಇಲ್ಲ ಎಂದು ಮುಂತಾಗಿ ಹೇಳುತ್ತಿದ್ದಾರೆ. ನಾನು ಈ ವಿಚಾರವನ್ನು ಪುನರ್ವಿಮರ್ಶೆಮಾಡುವುದಾಗಿ ಹೇಳಲಿಲ್ಲ. ಕಾಂಗ್ರೆಸ್‌ನವರು ಪ್ರದರ್ಶನ ನಡೆಸುವುದಕ್ಕೆ ಅವಕಾಶ ಕೊಡಬಾರದು ಎಂಬ ನಿಲುವು ವಿರೋಧ ಪಕ್ಷಕ್ಕೆ ಇದೆ ಆದುದರಿಂದ ಈ ವಿಷಯವನ್ನು ಚರ್ಚೆಮಾಡುವುದಕ್ಕೆ ಸಿದ್ಧ ಎಂದು ನಾನು ಹೇಳಿದೆ.

Mr. SPEAKER.—What does Sri Shivappa say ?

Sri S. SIVAPPA.—We shall take it up tomorrow.

Mr. SPEAKER.—That is a matter to be decided.

Sri D. M. SIDDIAH (Beligere).—I do not understand the Hon. Speaker asking the leader of the Opposition for his opinion. What

the Hon. Minister has said on this side has to be taken for granted. He has said the truth. I think it is not for the Hon. Chair to ask whether the Leader of the Opposition is agreeable to that.

Mr. SPEAKER.—I have stated the position of the rules that discussions and decisions of this House are final and none else could have their say in any matter, and for recording decisions a motion is necessary. In view of the statement made by the hon. Minister for Law and Parliamentary Affairs I want to konw whether all the Members are amenable to create an atmosphere which is consistent with the dignity of this House. The House will now rise and meet again tomorrow at 1-00 P.M.

The House adjourned at Three Minutes past Seven of the Clock to meet again at One of the Clock on Thursday, the 27th February 1969.

WD 12495—GPB—600—3-7-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 4th March 1969

The House met in the Assembly Chamber, Vidhana Soudha, Bangalore, at Twelve of the Clock.

Mr. SPEAKER [SRI S. D. KOTHAVALE] in the Chair.

STARRED QUESTIONS

(to which oral answers were given)

ಶ್ರೀ ಗಂಗಾಬೋವಿ.—ಸ್ವಾಮಿ, ನನಗೆ ಕನ್ನಡದಲ್ಲಿ ಕೊಶ್ಚನ್ ಲಿಸ್ಟ್ ಕೊಟ್ಟಿಲ್ಲ ?

Sri B. P. GANGADHAR.—Kannada list of questions and Answers have not been supplied to us. Arrangements may kindly be made to supply the same.

Mr. SPEAKER.—I will see that it is done. The Hon. Minister is also not present. I shall take it up after he comes.

Sri M. NAGAPPA.—The question cannot be held up for absence of the Hon'ble Minister. It cannot be held up for no fault of the Hon'ble Member.

Mr. SPEAKER.—Now the Minister has come. The Hon'ble Member can put that question.

Construction of a Well in Gulur Hobli

43. Sri GANGA BOVI (Gulur).—

Will the Minister for Revenue be pleased to state :—

(*a*) whether it is not a fact that a well was constructed behind the tank of Kondapura village coming under Chikkasarangi Panchayathi, Gulur Hobli, Tumkur taluk by them at a cost of about Rs. 3,000 to Rs. 4,000 for famine relief and that the stone work has not been done;

(SRI GANGA BOVI)

(*b*) the reason for the Divisional Commissioner in not taking action regarding the stone work of the well even though the Deputy Commissioner sent the concerned papers to him on 23rd July 1966 ;

(*c*) whether they would take action in this behalf at least now and help the villagers ?

SRI H. V. KOUJALGI (Minister for Revenue).—

(*a*) The said well was dug up through the Tahasildar, Tumkur District at an estimated cost of Rs. 2,600. As there was no provision for stone work in the said estimate the stone work was not done. The said well has been completed as per the estimate and an expenditure of Rs. 1,722-86 has been incurred for the said well.

(*b*) and (*c*) Sanction has been accorded in this behalf.

ಶ್ರೀ ಗಂಗಾಬೋವಿ.—ಇದೇ ರೀತಿ ಇರುವ ಬಾವಿಗಳು ತುಮಕೂರು ತಾಲ್ಲೂಕಿನಲ್ಲಿ ಎಷ್ಟಿವೆ ಎನ್ನುವುದನ್ನು ತಿಳಿಸಲಾಗುತ್ತದೆಯೇ ?

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

ಶ್ರೀ ಬಿ. ಪಿ. ಗಂಗಾಧರ.—ಈ ಬಾವಿ ಮಣ್ಣಿನ ಬಾವಿ ಎಂದು ಕಾಣುತ್ತದೆ. ಇದಕ್ಕೆ ಕಲ್ಲು ಕಟ್ಟಡವನ್ನು ಕಟ್ಟದೆ ಇದ್ದರೆ ಬಾವಿ ಕುಸಿದು ಬಿದ್ದು ಬಹಳ ನಷ್ಟವಾಗುವ ಸಂಭವವಿರುವುದರಿಂದ ಕಲ್ಲು ಕಟ್ಟಡವನ್ನು ಕಟ್ಟಿಸುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಸ್ಟೋನ್ ರಿವೆಟ್‌ಮೆಂಟ್ ಕಟ್ಟಲು ಮಂಜೂರು ಮಾಡಲಾಗಿದೆ.

Mysore Cattle Trespass Act, 1966

98. SRI M. R. PATIL (Hubli).—

Will the Minister of State for Municipal Administration be pleased to state :—

(*a*) the reasons for delay in framing rules by the Government under Section 31 of the Mysore Cattle Trespass Act, 1966;

(*b*) the reasons for delay in not fixing the scale of fine as required by section 10 of the said Act, to be levied by the pound keeper for the Cattle impounded;

(*c*) whether the Hubli Taluk Raiyat Sangha has requested the Government—

- (i) to fix progressively increasing scales of fine in respect of cattle seized within a distance of 4 miles from the boundary of City survey area of Hubli City as per proviso to sub-section (1) of Section 10, and
- (ii) to direct, by notification, a special penalty under sub-section (4) of Section 25 of the said Act, for damage caused by cattle to crops, etc., in the said local area;

(*d*) if so, the steps taken by the Government in that regard?

SRI B. M. PATIL (Minister of State for Municipal Administration).—

(*a*) and (*b*) The draft rules are almost finalised for publication, but for the forms required to be incorporated in the schedule to the draft rules and the scale of security to be disposited under Section 10 of the Act. These particulars have been called for, from the Divisional Commissioners.

(*c*) Yes.

(*d*) *Vide* notification No. HMA 1 MLR 69, dated 7th January 1969 appended.

Notification. No. HMA 1 MLR 69. Bangalore, dated 7th January 1969.

S.O. 88.—In exercise of the powers conferred by sub-section (4) of Section 25 of the Mysore Cattle Trespass Act, 1966 (Mysore Act No. 19 of 1966), the Government of Mysore hereby directs that with respect to Hubli-Dharwar Taluks' area, Section 25 of the said Act shall be read as if the words "Imprisonment for a period which may extend to three months or with fine which may extend to Five hundred rupees or with both" were substituted for the words "fine which may extend to fifty rupees."

This Notification shall come into force on 25th January, 1969.

SRI M. R. PATIL.—Have the Government taken steps to fix up the scale of fine as required by Section 10 as represented by Hubli Taluka Rayat Sangha ?

† SRI B. M. PATIL.—In accordance with the provision of Section 10, the Divisional Commissioners have already been addressed to submit to Government the scales of fine that are obtaining in different regions.

SRI M. R. PATIL.—May I know how long does it take to finalise the rules under this Act ?

SRI B. M. PATIL.—Rules have already been published and the finalisation is pending till the receipt of information regarding the scales of fine that are obtaining in different regions.

ಶ್ರೀ ಎಂ. ನಾಗಪ್ಪ.—ಈ ಕಾಯದೆ ಪಾಸಾಗಿ ಮೂರು ವರ್ಷವಾಯಿತು. ಇನ್ನೂ ಅದಕ್ಕೆ ರೂಲ್ಸ್ ಮಾಡದೇ ಇದ್ದರೆ ಕಾಯದೆಯನ್ನು ಪಾಸ್ ಮಾಡಿ ಯಾವ ತರಹ ಉಪಯೋಗಕ್ಕೂ ಬರುವುದಿಲ್ಲ ಎನ್ನುವುದು ಸರ್ಕಾರದ ಗಮನದಲ್ಲಿದೆಯೇ? ಹಾಗಿದ್ದರೆ ನಿಧಾನವಾಗಲಿಕ್ಕೆ ಕಾರಣವೇನು ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಹೇಳಿದ ಹಾಗೆ ರೂಲ್ಸ್ ಡ್ರಾಫ್ಟ್ ಆಗಿ ಎಲ್ಲ ಕೊನೆಯ ಹಂತದಲ್ಲಿದೆ. ಡಿವಿಜನಲ್ ಕಮಿಷನರಿಂದ ಸೆಕ್ಷನ್ 10ರ ಪ್ರಕಾರ ಯಾರಾದರೂ ತಪ್ಪು ಮಾಡಿದ್ದು ಅವರಿಗೆ ದಂಡ ಹಾಕಬೇಕಾದರೆ ಬೇರೆ ಬೇರೆ ಭಾಗಗಳಲ್ಲಿ ಕೆಲವು ಸ್ಕೇಲುಗಳವೆ. ಅಲ್ಲಿಯ ಪರಿಸ್ಥಿತಿಗನುಗುಣವಾಗಿ ಯಾವ ಯಾವ ಸ್ಕೇಲ್ಸ್ ಇದೆ ಎನ್ನುವುದು ಸಂಬಂಧಪಟ್ಟ ಅಧಿಕಾರಿಗಳಿಂದ ಬಂದ ನಂತರ ತೀವ್ರವಾಗಿ ಸರ್ಕಾರ ಕಾರ್ಯಗತ ಮಾಡುತ್ತದೆ.

† indicates that remarks or speeches have not been revised by the member concerned.

Sri M. R. PATIL.—Is the Government aware that damage to crops to the tune of several lakhs, is caused round about 5 miles of Hubli on account of stray cattle?

Sri B. M. PATIL.—Yes. After the receipt of representation from the local ryots, the Government have already issued notification in the month of January prescribing heavy fine and also imprisonment for 3 months.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೂಲ್ಸ್ ಮಾಡಿದಮೇಲೆ ಅದನ್ನು ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಗೆ ಕಳಿಸಿ ವ್ಯತ್ಯಾಸವೇನಾದರೂ ಇದ್ದರೆ ಸರಿಪಡಿಸಿ ಫೈನಲೈಜ್ ಮಾಡುವಂತೆ ವ್ಯವಸ್ಥೆ ಮಾಡುತ್ತೀರಾ? ವ್ಯತ್ಯಾಸವಿದ್ದರೆ ಆ ಕಮಿಟಿಯವರು ತಿದ್ದುಪಾಟು ಮಾಡಿದಮೇಲೆ ಕಾರ್ಯರೂಪಕ್ಕೆ ತರುವುದು ಒಳ್ಳೆಯದಲ್ಲವೆ?

ಶ್ರೀ ಬಿ. ಎಂ. ಪಾಟೀಲ್.—ಈಗೇನು ಆಕ್ಟ್ ಇದೆ ಅದಕ್ಕೆ ಅನ್ವಯವಾಗುವಂತೆ ರೂಲ್ಸ್ ತಯಾರಿಸುತ್ತಿದ್ದಾರೆ. ವ್ಯತ್ಯಾಸ ಬರಬಹುದು, ಬಂದಾಗ ಸೂಕ್ತ ಬದಲಾವಣೆ ಮಾಡಲಾಗುವುದು.

Supply of water to villages merged in Belgaum City Municipality

152. Sri B. B. SAYANAK (Belgaum).—

Will the Minister of State for Municipal Administration be pleased to state :—

(a) daily capacity of water in the reservoir at Belgaum (in terms of litres);

(b) the number of litres of water supplied to the people of Belgaum City per day;

(c) whether it is a fact that the merged villages in the City Municipality are not supplied with water;

(d) if so, when these villages will be supplied with water;

(e) whether it is a fact that the Government is supplying water to the Aluminium Factory ignoring these villages?

Sri B. M. PATIL (Minister of State for Municipal Administration).—

(a) 40.9 million li res.

(b) 7.264 million litres.

(c) Yes.

(d) All efforts are being made to supply water as early as possible.

(e) No.

Sri B. B. SAYANAK.—In the year 1967 Marathi speeches were recorded in Marathi. But now there is no provision for recording Marathi speeches. So I boycott the proceedings of today.

(*The Member then withdrew.*)

Construction of Aerodromes

162. Sri H. N. NANJE GOWDA (Arkalgud).—

Will the Minister for Public Works be placed to state :—

(*a*) whether there are any proposals to take up the construction of few more 'Aerodromes' in the District and the estimated cost of each one of them ;

(*b*) whether the Union Government has agreed to the proposals ;

(*c*) whether the funds to be made available for the said works would be met by the Central Government or by the State Government ?

Sri BASAVARAJ MAGAVI (Deputy Minister for Public works).—

(*a*) No.

(*b*) & (*c*) Does not arise in view of reply to clause (*a*).

Sri H. N. NANJE GOWDA.—I would like to know whether the construction of aerodromes in all the districts is taken up by the Government.

Mr. SPEAKER.—I think the question confines to the member's own district.

Sri H. N. NANJE GOWDA.—I mean all district headquarters, Sir.

† Sri BASAVARAJ MAGAVI.—We are not contemplating to have aerodromes at all district headquarters. There is already one in progress in the member's district.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಮೈಸೂರಿನಲ್ಲಿ ನಗರಸಭೆಗೆ ಸಂಬಂಧಪಟ್ಟಂತೆ ಶತಮಾನೋತ್ಸವ ನಡೆದಾಗ ಆ ಸಮಾರಂಭದಲ್ಲಿ ಮಾತನಾಡುವಾಗ ಹಾಸನ, ಬಿಜಾಪುರ, ಮುಂತಾದ ಕಡೆಗಳಲ್ಲಿ ಏರೋಡ್ರೋಂಗಳನ್ನು ಮಾಡಲು ಕೇಂದ್ರ ಸರಕಾರ ಅನುಮತಿ ಕೊಟ್ಟಿದೆಯೆಂದು ಹೇಳಿದ್ದರು. ಅದು ಯಾವ ಹಂತದಲ್ಲಿದೆ ?

ಶ್ರೀ ಬಸವರಾಜ ಮಾಗಾವಿ —ತಮ್ಮ ಪ್ರಶ್ನೆಯಲ್ಲಿ ಎಲ್ಲಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರು ಗಳಲ್ಲಿ ಮಾಡುವ ವಿಚಾರ ಕೇಳಲಾಗಿದೆ. ಅದಾಗುವುದಿಲ್ಲ ಎಂದು ಹೇಳಿದೆ, ಆದರೆ ಹಾಸನದಲ್ಲಿ ಟೂರಿಸ್ಟ್ ಇಲಾಖೆ ಹೋದ ವರ್ಷ ಟೂರಿಸ್ಟ್ ಈಯರ್ ಆದ ಪ್ರಯುಕ್ತ ಅಲ್ಲಿ ಏರ್ ಸ್ಟ್ರಿಪ್‌ಗೆ ಅವಕಾಶವಿದೆಯೇ ಎಂದು ಇನ್‌ವೆಸ್ಟಿಗೇಟ್‌ಮಾಡಿ ಅಲ್ಲಿ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯಲ್ ಸಿಕ್ಕುವುದಿಲ್ಲವೆಂದು ಸುಮ್ಮನಾದರು.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮುಖ್ಯ ಮಂತ್ರಿಗಳ ಭಾಷಣದ ವಿಚಾರ ಒಂದು ಕಡೆ ಇರಲಿ. ರಾಜ್ಯದಲ್ಲಿ ಭೌಗೋಳಿಕವಾಗಿ ರೈಲು, ಮೋಟಾರು ಸೌಕರ್ಯವಿದ್ದರೂ ಕೂಡ ರಾಜ್ಯ ವಿಶಾಲವಾಗಿರುವುದರಿಂದ ಬೆಳಗಾವಿ, ಬಿಜಾಪುರ, ಗುಲ್ಬರ್ಗ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಏರ್‌ಸ್ಟ್ರಿಪ್ ಮಾಡುವುದಕ್ಕೆ ನಿರ್ಣಯಮಾಡಿ ಸರಕಾರ ಆ ವಿಚಾರವನ್ನು ಪರಿಶೀಲನೆ ಮಾಡುವಂತೆ ಕೇಂದ್ರ ಸರಕಾರವನ್ನು ರಾಜ್ಯ ಸರಕಾರ ಯಾವಾಗಲಾದರೂ ಒತ್ತಾಯಮಾಡಿತ್ತೇ ?

ಶ್ರೀ ಬಸವರಾಜ ಮಾಗಾವಿ.—ಅನೇಕ ಸಲ ನಾವು ಕೇಂದ್ರಸರ್ಕಾರದವರಿಗೆ ಈ ಬಗ್ಗೆ ಒತ್ತಾಯ ಮಾಡಿದ್ದೇವೆ. ಈಗ ಅದರ ಪ್ರಯುಕ್ತ ಬಿಜಾಪುರದಲ್ಲಿ ಒಂದು ಲ್ಯಾಂಡ್ ಕೂಡ ನಮ್ಮಿಂದ ಕೇಳಿದ್ದಾರೆ ಫ್ರೀ ಆಫ್ ಕಾಸ್ಟ್ ಕೊಡಬೇಕೆಂದು. ಅದನ್ನೂ ಕೂಡ ಸರ್ಕಾರದವರು ತೀವ್ರ ಪರ್ಯಾಲೋಚನೆ ಮಾಡುತ್ತಾ ಇದ್ದೇವೆ. ನಾವು ಅನೇಕ ಸಂದರ್ಭಗಳಲ್ಲಿ ಈ ರೀತಿಯಾದ ಒಂದು ಬೇಡಿಕೆಯನ್ನು ಕೇಂದ್ರಸರ್ಕಾರದವರ ಮುಂದೆ ಮಂಡಿಸಿದರೂ ಕೂಡ ಅವರು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಏರ್ ಸ್ಟ್ರಿಪ್‌ಗೆ ಸಾಕಾದಷ್ಟು ಹಣವನ್ನು ಒದಗಿಸಿಲ್ಲ ಎಂಬ ಕಾರಣವನ್ನು ಮುಂದಿಟ್ಟು ಅದನ್ನು ತಟಸ್ಥಗೊಳಿಸಿದ್ದಾರೆ ಎಂದು ಹೇಳಬೇಕಾಗಿದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಪಂಡಿತ ಜವಹರಲಾಲ್ ನೆಹರೂರವರು ಪ್ರಧಾನ ಮಂತ್ರಿಗಳಾಗಿದ್ದಾಗ ಧಾರವಾಡದಲ್ಲಿ ಒಂದು ಏರೋಡ್ರೋಂ ಆಗಬೇಕೆಂದು ನಿರ್ಣಯವಾಗಿ ಆ ಬಗ್ಗೆ ಸರ್ವೆ ಕೆಲಸ ಕೂಡ ಆಗಿತ್ತು ಅದು ಹುಬ್ಬಳ್ಳಿಯಲ್ಲಿ ಆಗಬೇಕೇ, ಧಾರವಾಡದಲ್ಲಿ ಆಗಬೇಕೇ, ಎನ್ನುವ ಬಗ್ಗೆ ಜಿಜ್ಞಾಸೆ ಹುಟ್ಟಿದ್ದರಿಂದ ಆಗಲಿಲ್ಲ, ಇಬ್ಬರೂ ಕೂಡ ಎಲ್ಲಿ ಆಗಬೇಕೆಂಬ ಬಗ್ಗೆ ನಿರ್ಣಯ ಮಾಡಿಕೊಂಡು ಬಂದರೆ ಸರಿ, ಏರೋಡ್ರೋಂ ಮಾಡುತ್ತೇವೆ ಎಂದು ಅವರು ವಚನ ಕೊಟ್ಟಿದ್ದರು. ಈಗ ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್ ಆಗಿರುವುದರಿಂದ ಕಾರ್ಪೊರೇಷನ್‌ದವರು ಠರಾವು ಮಾಡಿ ಹುಬ್ಬಳ್ಳಿ ಮತ್ತು ಧಾರವಾಡ ಕಾರ್ಪೊರೇಷನ್ ಏರಿಯಾದಲ್ಲಿ ಆಗಬೇಕೆಂದು ನಿರ್ಣಯ ಮಾಡಿ ಕಳುಹಿಸಿದ್ದಾರೆ. ಆ ಬಗ್ಗೆ ಏನು ಯೋಚನೆ ಮಾಡಿದ್ದೀರಿ ? ಅಥವಾ ಮಾಡುತ್ತೀರಿ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರಿಗೆ ಇದ್ದಷ್ಟೇ ಆಸಕ್ತಿ ರಾಜ್ಯಸರ್ಕಾರಕ್ಕೂ ಕೂಡ ಇದೆ. ಸಾಧ್ಯವಿದ್ದಷ್ಟೂ ಅನೇಕ ಕಡೆಗಳಲ್ಲಿ ಮಾಡಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಆದರೆ ದುರಾದೃಷ್ಟದಿಂದ ಈ ಕಾರ್ಯವನ್ನು ಕೇಂದ್ರಸರ್ಕಾರದವರು ನಿರ್ಣಯಮಾಡಿ ಮಾಡಬೇಕಾಗುತ್ತದೆಯೇ ವಿನಾ ಇದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ ಅಲ್ಲ ಆದ್ದರಿಂದ ಸ್ವಲ್ಪ ತೊಂದರೆಯಾಗುತ್ತಾ ಇದೆ. ಹುಬ್ಬಳ್ಳಿ—ಧಾರವಾಡದಲ್ಲಿ ಆಗಬೇಕೆಂದು ನಾವು ಪ್ರಪೋಸಲ್ ಕಳುಹಿಸಿದ್ದೇವೆ. ಮೊನ್ನೆ ಮೊನ್ನೆ ಹುಬ್ಬಳ್ಳಿ—ಧಾರವಾಡ ಕಾರ್ಪೋರೇಷನ್ ಮೇಯರ್‌ರವರೂ ಕೂಡ ಒಂದು ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀಲ.—ರಾಜ್ಯಸರ್ಕಾರದಿಂದ ಕೇಂದ್ರಸರಕಾರಕ್ಕೆ ತಾವು ಶಿಫಾರಸು ಮಾಡುವ ಸಂದರ್ಭದಲ್ಲಿ ಯಾವ್ಯಾವ ಕಾರಣಗಳನ್ನು ಇಟ್ಟುಕೊಂಡು ಈ ನಿರ್ಮಾಣದ ಬಗ್ಗೆ ಶಿಫಾರಸು ಮಾಡುತ್ತೀರಿ.

ಶ್ರೀ ಬಸವರಾಜ ಮಾಗಾವಿ.—ಯಾವುದಾದರೂ ಒಂದು ಊರಿಗೆ ಟೂರಿಸ್ಟ್ ಇಂಪಾರ್ಟೆನ್ಸ್ ಇದ್ದರೆ ಅಥವಾ ಬೇರೆ ರೀತಿಯಲ್ಲಿ ಅದು ಇಂಟೆನ್‌ಸೀವ್ ಅಗ್ರಿಕಲ್ಚರಲ್ ಡಿಸ್ಟ್ರಿಕ್ಟ್ ಆಗಿದ್ದರೆ—ಈ ರೀತಿ ನಾನಾ ಕಾರಣಗಳನ್ನು ಮುಂದೆ ಇಟ್ಟುಕೊಂಡು ಶಿಫಾರಸು ಮಾಡುತ್ತೇವೆ. ನಾವು ಕೇಂದ್ರ ಸರ್ಕಾರದವರಿಗೆ ಮೇಲಿಂದ ಮೇಲೆ ಬರೆಯುತ್ತಾ ಇದ್ದೇವೆ, ಕೆಲವು ಕಡೆಗಳಿಗೆ ಬಿಟ್ಟು ಬೇರೆ ಕಡೆಗಳಿಗೆ ಅವರು ಸಾಕಾದಷ್ಟು ಆಸ್ಥೆ ತೋರಿಸುತ್ತಾ ಇಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಶರಾವತಿ ಯೋಜನೆಯ ಪ್ರದೇಶದಲ್ಲಿ ಒಂದು ವಿಮಾನ ನಿಲ್ದಾಣವನ್ನು ಮಾಡಬೇಕೆಂಬ ಸಲಹೆ ಅನೇಕ ವರ್ಷಗಳಿಂದ ಸರ್ಕಾರದವರ ಪರಿಶೀಲನೆಯಲ್ಲಿತ್ತು, ಆ ಸಲಹೆ ಏನಾಗಿದೆ ? ಮತ್ತು ಈಗ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಬಸವರಾಜ ಮಾಗಾವಿ.—ಅದನ್ನು ಶಿವಮೊಗ್ಗಾದಲ್ಲಿ ಮಾಡಬೇಕೆಂದು ಹೇಳಿ ಸರ್ಕಾರ ಹಿಂದೊಮ್ಮೆ ಯೋಚನೆ ಮಾಡಿ ಅದಕ್ಕೆ ಬಜೆಟ್‌ನಲ್ಲೂ ಕೂಡ ಪ್ರೊವಿಜನ್ ಮಾಡಿತ್ತು. ಕೇಂದ್ರದಿಂದ ಆ ಬಗ್ಗೆ ಸಾಕಾದಷ್ಟು ಗ್ರಾಂಟು ನಮಗೆ ಬರದೇ ಇದ್ದುದರಿಂದ ಅಥವಾ ಅವರು ತೆಗೆದುಕೊಳ್ಳದೇ ಇದ್ದುದರಿಂದ ಇದುವರೆಗೂ ಅದು ತಟಸ್ಥವಾಗಿದೆ. ಅಲ್ಲೂ ಕೂಡ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ವಿಮಾನ ನಿಲ್ದಾಣ ನಿರ್ಮಿಸುವ ಕಾರ್ಯದಲ್ಲಿ ಕೇಂದ್ರ ಸರ್ಕಾರಕ್ಕೆ ಆಗಿಂದಾಗ್ಗೆ ಒತ್ತಾಯ ರೂಪವಾಗಿ ಮನವಿಯನ್ನು ಸಲ್ಲಿಸಿದ್ದೇವೆ ಎಂದು ಹೇಳಿದ್ದೀರಿ. ಒಂದು ನಿಲ್ದಾಣವನ್ನು ಸ್ಥಾಪನೆ ಮಾಡಬೇಕಾದರೆ ಆಗತಕ್ಕ ಖರ್ಚು ಎಷ್ಟು, ಸ್ವಾಮಿ ?

ಶ್ರೀ ಬಸವರಾಜ ಮಾಗಾವಿ.—ಅಜಮಾಯಿಷು, ಈಗ ಎರಮರಸ್‌ನಲ್ಲಿ ಮಿಲಿಟೆರಿಯವರು ವಿಮಾನ ನಿಲ್ದಾಣವನ್ನು ಮಾಡಿದ್ದಾರೆ. ಅದಕ್ಕೆ 13 ಲಕ್ಷ ರೂಪಾಯಿ ವೆಚ್ಚವಾಗಿದೆ. ಆದರೆ ಅದು ಸರಿಹೋಗುವುದಿಲ್ಲ. ನಮ್ಮ ವಿಮಾನ ನಿಲ್ದಾಣಕ್ಕೆ 50 ಲಕ್ಷ ರೂಪಾಯಿ ಬೇಕಾಗುತ್ತದೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಕೋಲಾರದ ಹತ್ತಿರ ಹಿಂದೆ ಮಿಲಿಟೆರಿಯವರು ಬೇಕಾದಷ್ಟು ಹಣ ಖರ್ಚು ಮಾಡಿ ವಿಮಾನ ನಿಲ್ದಾಣವನ್ನು ಮಾಡಿದ್ದರು. ಅಲ್ಲಿ ನಿಲ್ದಾಣ ಮಾಡುವುದಕ್ಕೆ ಸರ್ಕಾರದವರಿಗೆ ಏನಾದರೂ ಆಲೋಚನೆ ಇದೆಯೇ ?

ಶ್ರೀ ಬಸವರಾಜ ಮಾಗಾವಿ.—ಹಿಂದೆ ಡಿಫೆನ್ಸ್ ಡಿಪಾರ್ಟ್‌ಮೆಂಟಿನವರು ರಾಜ್ಯದಲ್ಲಿ ಅನೇಕ ಕಡೆ ಏರ್ ಸ್ಟ್ರಿಪ್‌ಗಳನ್ನು ಮಾಡಿದ್ದಾರೆ. ಮುಂದೆ ನಾವು ಅವುಗಳನ್ನು ರೆಗ್ಯುಲರ್ ಪ್ಲಾನ್‌ನಲ್ಲಿ ಸೇರಿಸಿ ಇಂಪ್ರೂವ್‌ಮೆಂಟ್ ಮಾಡಬೇಕಾಗುತ್ತದೆ, ಇಲ್ಲದೇ ಇದ್ದರೆ ಅದು ಇನ್‌ಫ್ರಕ್ಚುಯಸ್ ಎಕ್ಸ್‌ಪೆಂಡಿಚರ್ ಆಗುತ್ತದೆ, ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಇಂಟೆನ್ಸಿವ್ ಅಗ್ರಿಕಲ್ಚರಲ್ ಡಿಸ್ಟ್ರಿಕ್ಟ್ ಆದರೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ. ಏರ್‌ಪೋರ್ಟ್‌ನಲ್ಲಿ ಈಗಾಗಲೇ 13 ಲಕ್ಷ ರೂಪಾಯಿ ಖರ್ಚಾಗಿದೆ. ರಾಯಚೂರು ಡಿಸ್ಟ್ರಿಕ್ಟನ್ನು ಇರಿಗೇಷನ್‌ನಲ್ಲಿ ಐ.ಎ.ಡಿ.ಪಿ. ಅಂತ ಡಿಕ್ಲೇರ್ ಮಾಡಿದ್ದಾರೆ. ಈ ಎರಡೂ ದೃಷ್ಟಿಯಿಂದ ಅಲ್ಲದೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೈದ್ರಾಬಾದ್ ಕರ್ನಾಟಕದಲ್ಲಿ ಟೂರ್ ಮಾಡಬೇಕಾದರೆ ಆಂಧ್ರದಲ್ಲಿರತಕ್ಕ ಹೈದ್ರಾಬಾದಿಗೆ ಬಂದು ಇಳಿದು ಅಲ್ಲಿಂದ ಬರಬೇಕಾಗಿ ಬಂತು. ಆ ರೀತಿ ಬರಬಾರದು, ಬರಬೇಕಾದ್ದಿಲ್ಲ ಎಂಬ ಪರಿಸ್ಥಿತಿಯಲ್ಲಿ ಅವರ ಟೂರನ್ನು ಕ್ಯಾನ್ಸಲ್ ಮಾಡಬೇಕಾಗಿ ಬಂತು. ಈ ಎಲ್ಲಾ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ರಾಯಚೂರಿನ ಏರೋಡ್ರೋಮನ್ನು ಆದಷ್ಟು ಜಾಗ್ರತೆ ಕಾರ್ಯಗತಗೊಳಿಸಲು ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಏರಮರಸ್ಸಿನಲ್ಲಿ ಒಂದು ವಿಮಾನ ನಿಲ್ದಾಣವಾಗಬೇಕೆಂಬುದು ಸರ್ಕಾರದವರ ಆಸೆ. ಅದಕ್ಕಾಗಿ 6 ಲಕ್ಷ 74 ಸಾವಿರ ರೂಪಾಯಿಗಳ ಒಂದು ಅಂದಾಜನ್ನೂ ಕೂಡ ತಯಾರಿಸಿ ಅದನ್ನು ಕೇಂದ್ರದ ಒಪ್ಪಿಗೆಗೆ ಕಳುಹಿಸಲಾಗಿದೆ. ಅದನ್ನು ಇಂಪ್ರೂವ್ ಮಾಡುವುದಕ್ಕೆ ಕೇಂದ್ರದವರ ಅನುಮತಿಗಾಗಿ ನಾವು ಪದೇ ಪದೇ ಅವರನ್ನು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮೈಸೂರಿನಲ್ಲೂ ಒಂದು ಏರ್‌ಸ್ಟ್ರಿಪ್ ಇತ್ತು. ಸರ್ಕಾರದವರು ಪುನಃ ಅದನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಅಲ್ಲಿಗೆ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯಲ್ ಇಲ್ಲ ಎಂದು ಅದನ್ನು ಕೈಬಿಡಲಾಗಿದೆ. ಆದಾಗ್ಯೂ ಅಲ್ಲಿ ಒಂದು ಗ್ಲೈಡಿಂಗ್ ಸೆಂಟರನ್ನು ಮಾಡಬೇಕೆಂಬ ಆಲೋಚನೆ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ್—ಧಾರ್ವಾಡ-ಹುಬ್ಬಳ್ಳಿಯಲ್ಲಿ ಒಂದು ವಿಮಾನ ನಿಲ್ದಾಣ ಮಾಡುವುದಕ್ಕೆ ಅಲ್ಲಿಗೆ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯಲ್ ಇಲ್ಲ ಎಂದು ಹೇಳೋಣವಾಯಿತು. ಆದರೆ ಅಲ್ಲಿ ಆಗತಕ್ಕ ಲುಕ್ಸಾನನ್ನು ಆ ಕಾರ್ಪೊರೇಷನ್ನಿನವರು ತುಂಬಿಕೊಡಲು ಮುಂದೆ ಬಂದರೆ ಅಲ್ಲಿ ಒಂದು ನಿಲ್ದಾಣವನ್ನು ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಬಸವರಾಜ ಮಾಗಾವಿ.—ಅದು ಅಷ್ಟು ಹಗುರವಾದ ವಿಚಾರವಲ್ಲ. ಸರ್ಕಾರದವರೇ ಹಿಂದೆ ಆ ಮಂಗಳೂರು ವಿಮಾನ ನಿಲ್ದಾಣದ ಬಗ್ಗೆ ಆಗತಕ್ಕ ಲುಕ್ಸಾನನ್ನು ತುಂಬಿಕೊಡುವುದಾಗಿ ಹೇಳಿದ್ದಾಗ ಕೆಲವು ತಿಂಗಳಲ್ಲೇ ಅದು ಒಂದು ಫೆಂಟ್ಯಾಸ್ಟಿಕ್ ಅಮೌಂಟಾಯಿತು. ಅವರು ಆ ವಿಚಾರದಲ್ಲಿ ಒಂದು ಖಚಿತವಾದ ತೀರ್ಮಾನಕ್ಕೆ ಬಂದರೆ ನಾವು ಸಿವಿಲ್ ಏವಿಯೇಷನ್ನಿನವರಿಗೆ ಬರೆಯುತ್ತೇವೆ.

ಶ್ರೀ ಎಸ್. ರುದ್ರಪ್ಪ.—ರಾಜ್ಯದಲ್ಲಿ ಹಲವಾರು ನಿಲ್ದಾಣಗಳನ್ನು ತೆರೆಯತಕ್ಕ ಬಗ್ಗೆ ಕೇಂದ್ರಕ್ಕೆ ಶಿಫಾರ್ಸನ್ನು ಮಾಡಲಾಗಿದೆ ಎಂದು ಹೇಳೋಣವಾಯಿತು. ಅಂದಾಗ್ಯ ಆ ಶಿಫಾರ್ಸಿನಲ್ಲಿ ಗುಲ್ಬರ್ಗ ಕೂಡ ಸೇರಿದೆಯೇ ? ಸೇರಿದ್ದರೆ ಅದಕ್ಕೆಷ್ಟು ಅಂದಾಜು ಮಾಡಿದೆ ?

ಶ್ರೀ ಬಸವರಾಜ ಮಾಗಾವಿ.—ಕೇಂದ್ರ ಸರ್ಕಾರದವರು ಇಂಥಾ ಕಡೆ ನಾವು ಒಂದು ಏರ್ ಸ್ಟ್ರಿಪ್ಪನ್ನು ಮಾಡಬೇಕೆಂದಿದ್ದೇವೆ. ಅದರ ಬಗ್ಗೆ ಅಂದಾಜ ಇತ್ಯಾದಿಗಳನ್ನು ಕಳುಹಿಸಿ ಎಂದು ಅವರು ಕೇಳಿದರೆ ನಾವು ಆಗ ಅದನ್ನು ಕಳುಹಿಸುತ್ತೇವೆ. ಆದರೆ ನಮ್ಮ ಸರ್ಕಾರದವರೇ ಗುಲ್ಬರ್ಗಾದಲ್ಲಿ ಸ್ಪೆಸಿಫಿಕ್ಕಾಗಿ ಒಂದು ಗ್ಲೈಡಿಂಗ್ ಸೆಂಟರನ್ನಾದರೂ ಮಾಡಬೇಕೆಂಬ ಆಲೋಚನೆ ಇದೆ.

ಶ್ರೀ ಎಸ್. ಎಚ್. ಅರಕೇರಿ.—ನಮ್ಮ ಗುಲ್ಬರ್ಗದಲ್ಲಿ ಒಂದು ವಿಮಾನ ನಿಲ್ದಾಣ ಮಾಡತಕ್ಕ ಸಲುವಾಗಿ ಅಲ್ಲಿ 5–6 ಲಕ್ಷ ರೂಪಾಯಿಗಳ ಬೆಲೆ ಬಾಳತಕ್ಕ ಭೂಮಿಯನ್ನು ರೈತರು ಫ್ರೀಯಾಗಿ ಕೊಟ್ಟಿದ್ದರೂ ಸರ್ಕಾರದವರು ಅದರ ಬಗ್ಗೆ ಕೇಂದ್ರಕ್ಕೇನು ಸಿಫಾರಸು ಮಾಡಿದ್ದಾರೆ ? ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ?

ಶ್ರೀ ಬಸವರಾಜ ಮಾಗಾವಿ.—ನಾವು ಆ ವಿಜಾಪುರದಲ್ಲಿ ಒಂದು ನಿಲ್ದಾಣ ಮಾಡುವುದಕ್ಕೆ ಕೇಂದ್ರ ಸರ್ಕಾರದ ಗೃಹಖಾತೆಗೆ ಶಿಫಾರ್ಸನ್ನು ಮಾಡಿದ್ದೇವೆ. ಅಲ್ಲಿ ಮೊದಲು ಆ ಮೊಹರಂ ಕ್ವೊರಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದದ್ದನ್ನು ಈಗ ಕೊಡುವುದಕ್ಕೆ ಒಪ್ಪಿದೆ. ಆದರೆ ಅದರ ಬಗ್ಗೆ ಇನ್ನೂ ಡೀಟೇಲ್ಸ್‌ಗಳನ್ನು ವರ್ಕ್ ಔಟ್ ಮಾಡಿಲ್ಲ. ಸರ್ವೆ ಕೆಲಸಗಳು ಮಾತ್ರ ಮುಗಿದಿವೆ. ಕೇಂದ್ರದವರಿಂದ ನಮಗಿನ್ನೂ ನಿರ್ಣಯ ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯ ಎಲವಾರದಲ್ಲಿ ಒಂದು ವಿಮಾನ ನಿರ್ಮಾಣವನ್ನು ಕಟ್ಟಲು ಲಕ್ಷಗಟ್ಟಲೆ ಖರ್ಚು ಮಾಡಿದ್ದಾರೆ. ಕೆ.ಜಿ.ಎಫ್. ಚಿನ್ನದ ಗಣಿ ಕೇಂದ್ರ ಸರ್ಕಾರಕ್ಕೆ ಸೇರಿರುವುದರಿಂದ ಅಲ್ಲಿರತಕ್ಕ ಏರೋಡ್ರೋಮನ್ನು ಮಿಲಿಟರಿಯವರಿಂದ ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ನಡೆಸುವುದಕ್ಕೆ ಇಂಡಿಯಾ ಸರ್ಕಾರದವರಿಗೆ ಏನಾದರೂ ಪತ್ರ ಬರೆದಿದ್ದೀರಾ? ಯಾವ ತಾರೀಖಿನಲ್ಲಿ ಬರೆದಿದ್ದೀರಾ?

ಶ್ರೀ ಬಸವರಾಜ ಮಾಗಾವಿ.—ಮಿಲಿಟರಿಯವರು ಯಾವ ಏರ್‌ಸ್ಟ್ರಿಪ್ ತೆಗೆದುಕೊಳ್ಳಬೇಕೆಂಬುದು ಅವರಿಗೆ ಬಿಟ್ಟ ನಿರ್ಣಯ. ಕೋಲಾರದಲ್ಲಿ ಅದರ ಬಗ್ಗೆ ಐ.ಎ.ಸಿ. ಅವರ ಅಬ್‌ಜಕ್ಷನ್ ಇದೆ. ಬೆಂಗಳೂರಿನಿಂದ 40 ಮೈಲಿ ದೂರದಲ್ಲಿ ಇರುವುದರಿಂದಲೂ ಮತ್ತು ಅನೇಕ ಕಾರಣಗಳಿಂದ ಬೆಂಗಳೂರು ಸಮೀಪ ಏರ್ ಸರ್ವಿಸ್‌ಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗ ಕೇಂದ್ರ ಸರ್ಕಾರದಿಂದ ಪಡೆಯತಕ್ಕ ಸೌಲಭ್ಯಗಳನ್ನು ಹೆಚ್ಚಿಗೆ ಉತ್ತರ ಇಂಡಿಯಾದವರೇ ಪಡೆದುಕೊಳ್ಳುತ್ತಿದ್ದಾರೆ ದಕ್ಷಿಣ ಇಂಡಿಯಾದಲ್ಲಿ, ಮದ್ರಾಸ್ ಮತ್ತು ಆಂಧ್ರ ಪ್ರದೇಶದವರು ಇದರ ಸೌಕರ್ಯವನ್ನು ಹೆಚ್ಚಿಗೆ ಪಡೆದಿದ್ದಾರೆ. ಮೈಸೂರಿಗೆ ಬಹಳ ಕಡಿಮೆ ಏರ್‌ಸ್ಟ್ರಿಪ್‌ಗಳನ್ನು ಕೊಟ್ಟಿರುವುದರಿಂದ, ಕೇಂದ್ರ ಸರ್ಕಾರದವರು ಈ ರೀತಿ ಮಾಡುವ ತಾರತಮ್ಯವನ್ನು ರಾಜ್ಯ ಸರ್ಕಾರದವರು ವಿಚಾರ ಮಾಡಿದ್ದಾರೆಯೇ? ಈ ಸೌಕರ್ಯವನ್ನು ಉತ್ತರ ಭಾರತಕ್ಕೆ ಹೆಚ್ಚಿಗೆ ಕೊಟ್ಟು ಇಲ್ಲಿ ಕಡಿಮೆ ಕೊಡುವ ಕಾರಣವಾದರೂ ಏನು ?

ಶ್ರೀ ಬಸವರಾಜ ಮಾಗಾವಿ.—ಇದರಲ್ಲಿ ಕೇಂದ್ರ ಸರ್ಕಾರದ ಭೇದಭಾವದ ಪ್ರಶ್ನೆ ಇಲ್ಲ ಐ.ಎ.ಸಿ. ಎಂಬುದು ಅದೊಂದು ವ್ಯಾಪಾರಸಂಸ್ಥೆ. ಟ್ರಾಫಿಕ್ ಪೊಟೆನ್ಸಿಯಲ್ ಎಲ್ಲಿ ಇದೆಯೊ ಅಲ್ಲಿ ಅವರು ಹೇಗಾದರೂ ಮಾಡಬಹುದು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—(ಅ)ಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ಈಗ ಮಂತ್ರಿಗಳು ಉತ್ತರ ಕೊಡುವಾಗ ಅನೇಕ ಕೇಸುಗಳನ್ನು ಶಿಫಾರಸು ಮಾಡಿದ್ದೇವೆ ಎಂಬುದಾಗಿ ಹೇಳಿದ್ದಾರೆ. ಇಲ್ಲಿ ಅವನ್ನೆಲ್ಲಾ ಏಕೆ ನಮೂದು ಮಾಡಲಿಲ್ಲ ? ಹಾಸನದಲ್ಲಿ ಆಗತಕ್ಕ ಏರ್‌ಸ್ಟ್ರಿಪ್ ಬಹಳ ತೀವ್ರಗತಿಯಿಂದ ನಡೆಯುತ್ತಿದೆಂದು ಹೇಳಿದ್ದೀರಿ. ಅವಕ್ಕೆ ಎಷ್ಟು ಹಣವನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿದ್ದಾರೆ? ಅದು ಯಾವಾಗ ಮುಗಿಯುತ್ತದೆ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ನಲ್ಲಿ ವಿಮಾನ ನಿಲ್ದಾಣ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲವೆಂದು ಉತ್ತರ ಹೇಳಿದ್ದೇನೆ. ಎರಡನೆಯದು ಹಾಸನದ ಬಗ್ಗೆ ಮಾನ್ಯ ಸದಸ್ಯರಿಗೆ ಹೇಳುವುದಾದರೆ, 8 ಲಕ್ಷ ರೂಪಾಯಿಗಳನ್ನು ಸೆಂಟ್ರಲ್ ಪಿ.ಡಬ್ಲ್ಯೂ.ಡಿ.ಯವರು ಅದಕ್ಕಾಗಿ ಈಗಾಗಲೇ ಖರ್ಚು ಮಾಡಿದ್ದಾರೆ. ಇನ್ನೂ 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅಂದ ಮೇಲೆ ಒಟ್ಟು 16 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಮೊದಲನೆಯ ಹಂತದಲ್ಲಿ ಒಟ್ಟು ಅದಕ್ಕೆ 58 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಯೋಜನೆಯನ್ನು ಇಟ್ಟುಕೊಂಡಿದ್ದಾರೆ ಅದು ಟೂರಿಸ್ಟ್ಸ್ ಪ್ಲೇಸ್ ಆಗಿರುವುದರಿಂದ ಕೇಂದ್ರ ಸರ್ಕಾರದ ಮೂಲಕ ಟೂರಿಸ್ಟ್ಸ್ ಡಿಪಾರ್ಟ್‌ಮೆಂಟಿನವರು ಫಾರಿನರ್ಸ್‌ಗೆ ಅನುಕೂಲವಾಗಲಿ ಎಂದು ಮುತುವರ್ಜಿ ವಹಿಸಿ ಆ ಕೆಲಸ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ವಿಮಾನ ನಡೆಸುವುದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟದ್ದು ಅಲ್ಲ. ಅದನ್ನು ನಾನು ಒಪ್ಪುತ್ತೇನೆ. ವಿಮಾನದಲ್ಲಿ ಓಡಾಟ ಮಾಡುವುದು ಸದ್ಯಕ್ಕೆ ಜನಕೋಟಿಯ ಪ್ರಶ್ನೆಯಲ್ಲ. ಅದನ್ನೂ ಒಪ್ಪುತ್ತೇನೆ. ಆದರೆ ಆಡಳಿತ ದಕ್ಷತೆಗೆ, ಅವಸರದ ಹಾಗೂ ಆಕಸ್ಮಿಕ ಸಂದರ್ಭಗಳಲ್ಲಿ ಯಾರಾದರೂ ಇದನ್ನು ಉಪಯೋಗಿಸುವ ಅವಕಾಶವಿರುವಾಗ ಈ ರಾಜ್ಯ ಸರ್ಕಾರದವರಿಗೂ ಆ ಸೌಲಭ್ಯ ಇರಬೇಕು, ಸಾರ್ವಜನಿಕರಿಗೂ ಆ ಸೌಲಭ್ಯ ಇರಬೇಕು, ವ್ಯಾಪಾರೋದ್ಯಮಿಗಳಿಗೂ ಆ ಅನುಕೂಲವಿರಬೇಕು. ಕೇಂದ್ರ ಸರ್ಕಾರದವರಾದರೆ ಯಾವುದಾದರೂ ಒಂದು ನದಿಯಲ್ಲಿ ಪ್ರವಾಹ ಬಂದಿದೆಯೆಂದರೆ ವಿಶೇಷವಾಗಿ ಮಂತ್ರಿಗಳು ವಿಮಾನದಲ್ಲಿ ಹೋಗುತ್ತಾರೆ. ಅದೇ ರೀತಿ ಮೈಸೂರಿನಲ್ಲಿಯೂ ಹೋಗಲು ಅವಕಾಶವಿರಬೇಕು. ಮೈಸೂರು ಸರ್ಕಾರದ ಅದಕ್ಷತೆಯಿಂದ ಈ ವಿಷಯದ ಬಗ್ಗೆ ಸಾಕಷ್ಟು ಗಮನವನ್ನು ಕೊಡಲಿಲ್ಲದಿರುವುದರಿಂದ ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲಿಲ್ಲ. ಬೆಂಗಳೂರು ರಕ್ಷಣಾ ದೃಷ್ಟಿಯಿಂದ ವಿಶೇಷವಾದಂಥ, ಮತ್ತು ಪ್ರಾಧಾನ್ಯವಾದಂಥ ಪ್ರದೇಶವಾದರೂ ಈ ರಾಜ್ಯಕ್ಕೆ ಏನೂ ಸೌಲಭ್ಯವನ್ನು ಒದಗಿಸುತ್ತಿಲ್ಲ. ಇದಕ್ಕೆ ತಾವು ಏನು ಹೇಳುತ್ತೀರಿ ?

12-30 P.M.

ಶ್ರೀ ಬಸವರಾಜ ಮಾಗಾವಿ.—ಇದು ಬಹಳ ವ್ಯಾಪ್ತಿಯಾದ ಪ್ರಶ್ನೆಯೆಂದು ಕಾಣುತ್ತದೆ. ಮಾನ್ಯ ಗೋಪಾಲ ಗೌಡರು ಹೇಳಿದ ಹಾಗೆ, ನಮ್ಮ ರಾಜ್ಯದಲ್ಲಿ ಗುಲ್ಬರ್ಗಾದಲ್ಲಿ ಒಂದು ವಿಮಾನ ನಿಲ್ದಾಣ ಆಗಬೇಕೆಂದು ಒತ್ತಾಯ ಮಾಡಿದ್ದೇವೆ. ಉಳಿದ ರಾಜ್ಯ ಸರ್ಕಾರದವರು ವಿಮಾನಗಳನ್ನು ಇಟ್ಟುಕೊಂಡರೂ ಕೂಡ ನಾವು ಇಟ್ಟುಕೊಂಡಿಲ್ಲ. ಏಕೆಂದರೆ, ಅನೇಕರಿಗೆ ಬಂಡಿ ಹತ್ತುವುದಕ್ಕೆ ಇಲ್ಲದಿದ್ದಾಗ ನೀವು ವಿಮಾನ ಇಟ್ಟುಕೊಂಡಿದ್ದೀರಿ ಎಂದು ಟೀಕೆಯನ್ನು ನಾಳೆ ಇವರು ಮಾಡಬಹುದು. ಆದ್ದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

Condition of Tanks in State

264. Sri B. P. GANGADHAR (Tumkur).—

Will the Minister for Public Works be pleased to state :—

(*a*) the number of tanks in Tumkur District, both Major and Minor (the statistics of the same, talukwise may be furnished) ;

(*b*) whether several tanks are breached and several of them have neither sluice nor Waste-Weir, if so, the number of them breached and the number of them that have no sluice and waste-weir ;

(*c*) the action taken to restore the said tanks and to repair the same ;

(*d*) the number of tanks and pickups in Tumkur Taluk, with particular reference to Kasaba and Bellavi Hoblis in Tumkur Taluk ;

(*e*) the number of works for the construction of tanks that Government has undertaken in Tumkur Taluk, with special reference to Kora, Bellavi and Kasaba Hoblis in Tumkur Taluk ?

Sri D. PARAMESWARAPPA (Deputy Minister for Major Irrigation) [on behalf of SRI A. J. DODDAMETI (Minister of State for Minor Irrigation)].—

(*a*), (*b*) and (*c*) *Vide* Statement 'A' appended.

(*d*) *Tumkur Taluk* :	*Major Tanks*	*Minor Tanks*	*Pickups*
Kasaba Hobli	18	17	...
Bellavi Hobli	7	15	...

(*e*)—	*Construction of new Tanks*	*Construction of pick-ups*
Kora Hobli	1	1 *
Bellavi Hobli	...	1 *
Kasaba Hobli	1	... *

*Statement 'B' appended.

(SRI D. PARAMESWARAPPA)

STATEMENT 'A'

Sl. No.	Name of the Taluk	Clause (a)		Clause (b)			Clause (c)
		Major tanks	Minor tanks	No. of breached tanks	No. of tanks without wasteweir	No. of tanks without sluice	Action taken to restore the said tanks and repair the ssme
1	Tumkur Taluk ...	64	131	...	...	...	...
2	Gubbi Taluk ...	45	115	2	...	...	Action has been taken to restore the breached tanks and also to repair the sluices and Waste-weir of other tanks.
3	Tiptur Taluk ...	46	106	...	6	12	do
4	Turuvekere Taluk ...	55	22	3	...	...	do
5	Kunigal Taluk ...	25	104	3	...	...	do
6	Sira Taluk ...	59	108	1	1	...	do
7	Madhugiri Taluk ...	58	89	3	12	...	Restoration in respect of two tanks out of 3 breached tanks are under progress. Estimate is being prepared in respect of the other one tank work.

8	Koratagere Taluk ...	28	68	3	...	...	Action has been taken to restore these tanks.
9	Pavagada Taluk ...	37	105	5	3	...	Restoration of one tank work out of 5 breached tanks has been taken up. The other works are under consideration.
10	Chicknaikanahalli ...	33	115	4	5	1	Restoration of 3 tanks works been started and the remaining one work is under examination.
	Total ...	450	963	24	27	13	

(SRI D. PARAMESWARAPPA)

STATEMENT 'B'

Statement of new tanks and pickups under construction

Sl. No.	Name of Hobli	Construction of new tanks	Construction of pickups
1	Kora Hobli ...	1. Channamuddenahalli new-tank—1,02,000	1. Pickups near Ad-viswami Mutt. Rs. 35,000
2	Bellavi Hobli ...	Nil	1. Sorekunte Pick-up
3	Kasaba Hobli...	1. New tank near Swade-nahalli village—Rs. 86,000	Nil

SRI B. P. GANGADHAR.—In Tumkur Taluk there are no big rivers for constructing projects. So, wherever it is possible to construct minor tanks, is it not the duty of the Government to see that such places are explored and tanks builtup ?

SRI D. PARAMESWARAPPA.—Hitherto all those cases have been investigated and wherever there is scope for construction of tanks works have been taken up.

ಶ್ರೀ ಬಿ. ಪಿ. ಗಂಗಾಧರ್.—ಎಲ್ಲೆಲ್ಲಿ ಕೆರೆಗಳನ್ನು ಕಟ್ಟಿಸಲು ಸಾಧ್ಯ ಇದೆಯೋ ಅದು ವರ್ಕ್ ಔಟ್ ಮಾಡಿ ಒಂದು ಲಿಸ್ಟ್ ಕೊಟ್ಟರೆ, ಅಲ್ಲಿ ಮೈನರ್ ಟ್ಯಾಂಕುಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತೀರಾ ?

SRI D. PARAMESWARAPPA.—There is no such list before the Government. If my hon. friend suggests any tanks, those cases would be investigated and estimates prepared.

ಶ್ರೀ ಎನ್. ಹುಚ್ಚುಮಾಸ್ತಿಗೌಡ.—ಕೊಟ್ಟಿರತಕ್ಕಂತಹ ಪರಿಶಿಷ್ಟದಲ್ಲಿ ತುರುವೆಕೆರೆ, ಕುಣಿಗಲ್, ಸಿರಾ, ಈ ಮೂರು ತಾಲ್ಲೂಕುಗಳಲ್ಲಿ ತೆಗೆದುಕೊಂಡಿಲ್ಲ. ಉಳಿದ ತಾಲ್ಲೂಕುಗಳಲ್ಲಿ ತೆಗೆದುಕೊಂಡಿದ್ದಾರೆ. ಆದ್ದರಿಂದ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ? ಮತ್ತು ಎಷ್ಟು ದಿವಸಗಳಲ್ಲಿ ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ತಕ್ಕ ಏರ್ಪಾಡು ಮಾಡುತ್ತೇವೆ. ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಮಧುಗಿರಿ ತಾಲ್ಲೂಕಿನಲ್ಲಿ ಬಡವನಹಳ್ಳಿ ಕೆರೆ ಒಡೆದು ಹೋಗುವ ಪರಿಸ್ಥಿತಿ ಇದೆ; 8–10 ವರ್ಷಗಳಿಂದಲೂ ಆ ಹಳ್ಳಿಯವರು ನೂರಾರು ಅರ್ಜಿಗಳನ್ನು ಸಲ್ಲಿಸಿದರೂ, ಸರ್ಕಾರದವರು ಏನೂ ಕ್ರಮ ತೆಗೆದುಕೊಳ್ಳದಿರುವುದರಿಂದ, ಆ ಕೆರೆ ಬ್ರೀಚ್ ಆಗಿ ಸುಮಾರು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಪಾಸ್ತಿಗಳು ಕಳೆದುಕೊಳ್ಳುವ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗೆ ಬಂದಿದ್ದರೆ, ಸರ್ಕಾರದವರು ಅವರಿಗೆ ಕಂಪೆನ್‌ಸೇಶನ್ ಕೊಡುತ್ತಾರೆಯೇ ಎರಡನೆಯದು, ಈಗ ಕೊಟ್ಟಿರುವ ಲಿಸ್ಟಿನ ಕೆರೆಗಳಲ್ಲಿ ವೇಸ್ಟ್‌ವೇರ್ ಮತ್ತು ಸ್ಲೂಯಿಸ್ ಗಳಿಲ್ಲ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

SRI D. PARAMESWARAPPA.—There are about 27 tanks which have no waste-weirs because there are natural waste-weirs and the Department has examined them; and if it is possible to take them up, they will take them up.

Chamarajanagara-Satyamangala Railway Line

286. SRI D. M. SIDDAIAH (Biligere).—

Will the Minister for Public Works be pleased to state:—

(*a*) when was the proposal sent by the Government to the Central Government to take up the Chamarajanagar Satyamangala Railway Line;

(*b*) the steps taken to urge upon the Centre to implement the same and why nothing has been done though the linking up the Satyamangala-Chamarajanagar line is all important in view of the development of trade and commerce;

(*c*) instead of taking up the abovesaid railway line, is it a fact that there is a move to remove the line from Nanjangud to Chamarajanagar;

(*d*) if so, what are the steps taken by the State Government to prevent such a move?

SRI K. LAKKAPPA (Minister for Public Works).—

(*a*) 7th April, 1955.

(*b*) Government moved again the Central Government for taking up this Railway Line during 1965 and this will be given consideration in the IV Five Year Plan.

(*c*) No.

(*d*) Does not arise in view of reply to clause (*c*).

ಶ್ರೀ ಡಿ. ಎಂ. ಸಿದ್ದಯ್ಯ.—ಚಾಮರಾಜನಗರ—ಸತ್ಯಮಂಗಲ ರೈಲ್ವೆಗೆ 1955ರಲ್ಲಿ ಎಸ್ಟಿಮೇಟ್ ಆಯಿತು ಎಂದು ಹೇಳಿದ್ದೀರಿ. ಇದೇ ಸಮಯಕ್ಕೆ ಕೇಳಿದ ಹಾಸನ - ಮಂಗಳೂರು ರೈಲ್ವೆ ಶುರುವಾದರೂ, ಇದು ಇಷ್ಟು ವಿಳಂಬವಾಗುವುದಕ್ಕೆ ಕಾರಣವೇನು ?

† ಶ್ರೀ ಕೆ. ಲಕ್ಕಪ್ಪ.—ಈ ರೈಲ್ವೆ ಲೈನು ಆಗಬೇಕು ಎನ್ನುವ ದೃಷ್ಟಿಯಿಂದ ಬಹಳ ಹಿಂದಿನಿಂದಲೂ ಎಂದರೆ 1891ನೇ ಇಸವಿಯಿಂದಲೂ ಕೇಳುತ್ತಿದ್ದಾರೆ. ಮನವಿಗಳನ್ನು ಸಲ್ಲಿಸುತ್ತಿದ್ದಾರೆ ಈ ಬಗ್ಗೆ ಸಾಕಷ್ಟು ಸರ್ವೆ ಸಹ ನಡೆದಿದೆ. 1896 ನೇ ಇಸವಿಯಲ್ಲಿ ಸರ್ವೆ ನಡೆದಿದೆ. 1918ರಲ್ಲಿ ಸರ್ವೆ ನಡೆದಿದೆ. 1927ನೇ ಇಸವಿಯಲ್ಲಿ ಸರ್ವೆ ನಡೆದಿದೆ. 1942ನೇ ಇಸವಿಯಲ್ಲಿ ಸರ್ವೆ ನಡೆದಿದೆ 1948ನೇ ಇಸವಿಯಲ್ಲಿ ಸರ್ವೆ ನಡೆದಿದೆ. ಹೀಗೆ ಅನೇಕ ಬಾರಿ ಸರ್ವೆ ನಡೆದಿದೆ. ಸರ್ಕಾರದವತಿಯಿಂದ ಕೂಡ ಪದೇ ಪದೇ ಕೇಂದ್ರ ಸರ್ಕಾರಕ್ಕೆ ಇದನ್ನು ಒತ್ತಾಯ ಹಾಕುತ್ತಿದ್ದಾರೆ. ತಮಗೆ ಉತ್ತರ ಕೊಟ್ಟಿರುವ ಹಾಗೆ 1955 ನೇ ಇಸವಿಯಲ್ಲಿ ಸರ್ಕಾರದವರು ಒತ್ತಾಯ ಮಾಡಿದ್ದಾರೆ. ಪುನಃ 1955 ನೇ ಇಸವಿಯಲ್ಲಿ ಸಹ ಹೆಚ್ಚಿನ ಒತ್ತಾಯ ಮಾಡಿ ಇದನ್ನು ಮಾಡಬೇಕೆಂದು ಸರ್ಕಾರದವರು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ಅವರು ನಾಲ್ಕನೆಯ ಪಂಚವಾರ್ಷಿಕಯೋಜನೆ ಫೈನಲ್ ಆಗುವ ಸನ್ನಿವೇಶದಲ್ಲಿ ಇದನ್ನು ಗಮನದಲ್ಲಿ ಇಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ ಎಂದು ಉತ್ತರ ಹೇಳಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ ಹಾಗೆ 1891ನೇ ಇಸವಿಯಿಂದಲೂ ಇದನ್ನು ಪರಿಶೀಲಿಸುತ್ತಿದ್ದಾರೆ. ಅನೇಕವೇಳೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಇಷ್ಟಾದರೂ ಕೂಡ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸುವುದಕ್ಕೆ ಯೋಚನೆ ಮಾಡುತ್ತೇವೆ ಎಂದು ಹೇಳಿದರೆ ಇದೇನು ಮುಖ್ಯ ರೈಲ್ವೆ ಮಾರ್ಗವಲ್ಲವೇ, ಇದನ್ನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲವೇ, ಅಥವಾ ತಾವು ಒತ್ತಾಯ ಹಾಕಿದ್ದು ಪರಿಣಾಮಕಾರಿಯಾಗಿ ಆಗಿಲ್ಲವೇ ಹೇಗೆ, ಇದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಕೆ. ಲಕ್ಕಪ್ಪ.—ಈ ಬಗ್ಗೆ ಸರ್ಕಾರದವರು ಸಾಕಷ್ಟು ಒತ್ತಾಯವನ್ನು ಹಾಕುತ್ತಿದ್ದಾರೆ. ಅದರ ಜೊತೆಗೆ ವಿಧಾನಪರಿಷತ್ತಿನಲ್ಲಿ ಈ ಬಗ್ಗೆ ಒಂದು ಖಾಸಗಿ ನಿರ್ಣಯ ಕೂಡ ಬಂದು ಅದನ್ನು ಅವರು ಒಪ್ಪಿ ಸರ್ಕಾರದ ಮುಂದಿಟ್ಟಿದ್ದಾರೆ. ಮೊನ್ನೆ ಕೇಂದ್ರದ ರೈಲ್ವೆ ಖಾತೆಯ ಮಂತ್ರಿಗಳಾದ ಶ್ರೀಮಾನ್ ಪೂಣಚ್ಚ ಅವರು ಇಲ್ಲಿಗೆ ಬಂದಿದ್ದಾಗ್ಯೆ ಮುಖ್ಯ ಮಂತ್ರಿಗಳ ಚೇಂಬರಿನಲ್ಲಿ ಈ ಬಗ್ಗೆ ಡಿಸ್‌ಕಷನ್ ಮಾಡಿ ಒತ್ತಾಯ ಮಾಡಿದ್ದೇವೆ. ಇಷ್ಟೊಂದು ಒತ್ತಾಯ ಹಾಕಿದರೂ ಕೂಡ ಈ ರೈಲ್ವೆ ಲೈನು ಕಾರ್ಯಗತವಾಗಿಲ್ಲ. ಇನ್ನೂ ನಾವೆಲ್ಲರೂ ಈ ಬಗ್ಗೆ ಹೆಚ್ಚಿನ ಒತ್ತಾಯ ಹಾಕಿದರೆ ಪ್ರಾಯಶಃ ಇದು ಜಾಗ್ರತೆಯಾಗಿ ಫಲಕಾರಿಯಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—1955ನೇ ಇಸವಿಯಿಂದ ಈಚೆಗೆ ಬೆಂಗಳೂರು-ಸೇಲಂ ರೈಲ್ವೆ ಮಾರ್ಗ ಆಗಿದೆ ಇದು ಮಾತ್ರ ಆಗಲಿಲ್ಲ. ಏತಕ್ಕೆ ಇದು ಆಗಲಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದವರ ಎಕ್ಸ್‌ಪ್ಲನೇಷನ್ ತಮ್ಮ ಮುಂದೆ ಇದೆಯೇ!

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರ್ಕಾರದವರನ್ನು ನಾವು ಎಕ್ಸ್‌ಪ್ಲನೇಷನ್ ಕೇಳುವ ಸ್ಥಿತಿಯಲ್ಲಿ ಇಲ್ಲ. ಇದು ಆಗಬೇಕು ಎನ್ನತಕ್ಕಂಥ ಒತ್ತಾಯವನ್ನು ಹಾಕಿದರೂ ಸಹ ಕೇಂದ್ರ ಸರ್ಕಾರದವರು ಇದನ್ನು ತೆಗೆದುಕೊಂಡಿಲ್ಲ. ಮುಂದೆ ಇದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಇದರ ಪ್ರಾಮುಖ್ಯತೆ ಇದೆ, ಇದನ್ನು ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರದವರು ಇದುವರೆಗೂ ಆ ಕಡೆ ತಮ್ಮ ಗಮನವನ್ನು ಹರಿಸಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಅಳವಡಿಸುತ್ತಾರೆಯೇ ಹೇಗೆ ಎನ್ನುವುದನ್ನು ನಾವು ಕಾದು ನೋಡಬೇಕಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ತಾವು ಹೇಳುತ್ತಿದ್ದೀರಿ ಕೇಂದ್ರ ಸರ್ಕಾರದವರು ತಮ್ಮ ಕಡೆ ಗಮನ ಕೊಡುತ್ತಿಲ್ಲ ಎಂದು ಹಿಂದೆ ದಾಸಪ್ಪನವರು ರೈಲ್ವೆ ಖಾತೆಯ ಮಂತ್ರಿಗಳಾಗಿದ್ದರು. ಅವರು ನಮ್ಮ ರಾಜ್ಯದವರು. ಈಗ ಮೊನ್ನೆ ತಾನೆ ರೈಲ್ವೆ ಖಾತೆಯನ್ನು ಬಿಟ್ಟು ಕೊಟ್ಟವರು ಶ್ರೀಮಾನ್ ಪೂಣಚ್ಚ ಅವರು ನಮ್ಮ ರಾಜ್ಯದವರು. ಮುಂದೆ ಯಾರು ಬರುತ್ತಾರೆಯೋ ಕಾಣುವುದಿಲ್ಲ. ಈಗಾಗಲೇ ಮಹಾರಾಷ್ಟ್ರದಲ್ಲಿ, ಮತ್ತು ಉತ್ತರ ಹಿಂದೂಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಬ್ರಾಡ್ ಗೇಜ್ ರೈಲ್ವೆ ಲೈನುಗಳನ್ನು ಹಾಕುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ನಾವು ಕೇಳುವಂತಹ ಯಾವ ರೈಲ್ವೆ ಲೈನೂ ಕೂಡ ನಮಗೆ ಬರಲಿಲ್ಲ. ಇದಕ್ಕೆ ಮುಖ್ಯ ಕಾರಣವೇನು ? ಮುಂದೆ ಬರುವಂಥವರ ಮೇಲೆ ಹೀಗೆ ಆಶೆಯನ್ನು ಇಟ್ಟು ಕೊಳ್ಳಬಹುದೇ ?

ಶ್ರೀ ಕೆ. ಲಕ್ಕಪ್ಪ.—ಮುಖ್ಯ ಕಾರಣ ಏನು ಎನ್ನತಕ್ಕಂಥಾದ್ದು ಗೊತ್ತಾಗುವುದಿಲ್ಲ. ಇನ್ನೂ ಯಾವ ರೀತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒತ್ತಾಯವನ್ನು ಹಾಕುವ ಬಗ್ಗೆ ಏನಾದರೂ ಸಲಹೆಗಳನು ಕೊಟ್ಟರೆ ಆ ರೀತಿ ಮಾಡೋಣ.

ಶ್ರೀ ಕೆ. ಎಂ. ತಮ್ಮಯ್ಯ.—ಹಾಸನ ಮಂಗಳೂರು ರೈಲ್ವೆ, ಮತ್ತು ಕಡೂರು-ಮಂಗಳೂರು ರೈಲ್ವೆ ಲೈನು ಹಾಕುವ ಬಗ್ಗೆ ನಮ್ಮ ಹತ್ತಿರ ಲಕ್ಷಾಂತರ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಈಗ ಅದನ್ನು ತಾತ್ಸಾರ ಮನೋಭಾವದಿಂದ ನೋಡುತ್ತಿದ್ದಾರೆ. ಇದನ್ನು ಹಾಗೆಯೇ ಅರ್ಧ ದಾರಿಯಲ್ಲೇ ಕೈಬಿಟ್ಟಿದ್ದಾರೆ. ಕಡೂರು-ಮಂಗಳೂರು ಲೈನನ್ನು ಸಕಲೇಶಪುರದ ಹತ್ತಿರ ಸೇರಿಸಬೇಕು ಎನ್ನುವ ಒಂದು ಪ್ರಪೋಜಲ್ ಇತ್ತು. ಇದನ್ನು ಶಿಫಾರಸ್ಸು ಮಾಡಿ ಮಾಡಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ತಾವು ಹೇಳುವ ಬಗ್ಗೆ ಸಹ 1965ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಹರಿಹರ-ಮೂಡಬಿದ್ರೆ-ಶಿವಮೊಗ್ಗ-ಭದ್ರಾವತಿ ಚಿಕ್ಕಮಗಳೂರು ಮಾರ್ಗವಾಗಿ ಒಂದು ರೈಲ್ವೆ ಲೈನ್ ಹಾಕಬೇಕೆಂದು ನಮ್ಮ ಸರ್ಕಾರದವರು—ಕೇಂದ್ರ ಸರ್ಕಾರದವರನ್ನು ಕೇಳಿದ್ದಾರೆ.

Amruthur-Yadavanne Road

331. Sri N. HUTCHMASTHY GOWDA (Kunigal).—

Will the Minister for Public Works be pleased to state :—

(a) the places on Amruthur-Yadavanne road where the execution of work has stopped ;

(b) when the said work was stopped ;

(c) whether acquisition proceeding is in progress ;

(d) the stage at which the acquisition proceeding stands at present ?

Sri BASAVARAJ MAGAVI (Deputy Minister for Public Works).—

(a) At miles 8/6, 1 and 2/7, 2 and 3/5, 6/2.
(b) In 1963-64.
(c) Yes.
(d) Firancial Notification has been issued.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1963-64ರಿಂದ ಈ ರಸ್ತೆಗೆ ಬೇಕಾಗಿರುವ ಜಮೀನು ತಮ್ಮ ಸ್ನೇಹಿತರಿಗೆ ಬೇಕಾಗಿದ್ದುದು ಎಂದು ಅಕ್ವೈರ್ ಮಾಡಿಕೊಳ್ಳದೆ ಕೈಬಿಟ್ಟಿದ್ದಿರೋ ಅಥವಾ ಈ ರಸ್ತೆಯ ಅವಶ್ಯಕತೆ ಇಲ್ಲವೆಂದು ಕೈಬಿಟ್ಟಿದ್ದಿರೋ, ಅವಶ್ಯಕತೆ ಇದ್ದರೆ ಎಷ್ಟು ಬೇಗ ಜಮೀನನ್ನು ಅಕ್ವೈರ್ ಮಾಡಿಕೊಂಡು ರಸ್ತೆಯನ್ನು ಮಾಡಿಸುತ್ತೀರಾ ಎಂಬುದನ್ನು ಹೇಳಬೇಕು ?

† ಶ್ರೀ ಬಸವರಾಜ ಮಾಗಾವಿ.—ಇದರಲ್ಲಿ ಮುಖ್ಯವಾಗಿರುವ ತೊಂದರೆ ಎಂದರೆ, ಅಂಚಿಪುರ ಗ್ರಾಮದವರು ರೆಕಗ್‍ನೈಸ್ಡ್ ಪಾತ್ ಬಿಟ್ಟು ಮಾಮೂಲಿ ರಸ್ತೆಯನ್ನೇ ಇಂಪ್ರೂವ್ ಮಾಡಿಕೊಂಡು ಬಂದರು. ಈ ಕಾರಣದಿಂದ ಗಲಾಟೆಯಾಗಿ ರೆವಿನ್ಯೂ ಅಪಲೆಟ್ ಟ್ರಿಬ್ಯುನಲ್‍ಗೆ ತೀರ್ಮಾನಕ್ಕಾಗಿ ಹೋಯಿತು. ಅವರು ತೀರ್ಮಾನ ಕೊಟ್ಟಿದ್ದಾರೆ. ಅವರ ತೀರ್ಮಾನದ ಪ್ರಕಾರ ಭೂಸ್ವಾಧೀನದ ಕಾರ್ಯ ಪ್ರಾರಂಭವಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೆವಿನ್ಯೂ ಅಪಲೆಟ್ ಟ್ರಿಬ್ಯುನಲ್ ಅವರು ತೀರ್ಮಾನ ಕೊಟ್ಟು 3 ವರ್ಷವಾಯಿತು. ಈ ರಸ್ತೆಯನ್ನು ಆದಷ್ಟು ಬೇಗ ಮಾಡಿಸಲು ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಭೂಸ್ವಾಧೀನ ಮಾಡಿಕೊಳ್ಳುವ ಕೆಲಸ ಸ್ವಲ್ಪ ತೊಂದರೆಯಾಗಿದೆ. ಆದರೂ ಈ ರಸ್ತೆಯನ್ನು ತ್ವರಿತಗತಿಯಿಂದ ಮಾಡಿಸಲು ಫೈನಲ್ ನೋಟಿಫಿಕೇಷನ್ ಹೊರಡಿಸಿದ್ದೇವೆ.

Water Supply Scheme

361. Sri M. NAGAPPA (Raichur).—

Will the Minister of State for Municipal Administration be pleased to state :—

(a) whether any comprehensive water supply scheme for Raichur Town is pending before the Government ;

(b) if so, the stage at which this scheme stands at present ;

(c) when the scheme will be completed ?

Sri B. M. PATIL (Minister of State for Municipal Administration). —

(a) Yes.

(b) The scheme is under examination.

(c) As early as possible.

ಶ್ರೀ ಎಂ. ನಾಗಪ್ಪ.—ಈ ಯೋಜನೆಯು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಈಗ ಯಾವ ಹಂತದಲ್ಲಿ ಇದೆ ಎಂದು ಹೇಳುತ್ತೀರಾ ?

† ಶ್ರೀ ಬಿ. ಎಂ. ಪಾಟೀಲ್.—ಈಗ ಕೊನೆಯ ಹಂತದಲ್ಲಿ ಇದೆ. ಎಸ್ಟಿಮೇಟ್ ತಯಾರಾಗಿದೆ. ಸರ್ಕಾರದ ಮಂಜೂರಾತಿಯಾದ ಮೇಲೆ ಎಲ್. ಐ. ಸಿ. ಯಿಂದ ಸಾಲ ತೆಗೆದುಕೊಳ್ಳುವ ಬಗ್ಗೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಎಂ. ನಾಗಪ್ಪ.—ಈ ಯೋಜನೆಯ ಅಂದಾಜು ವೆಚ್ಚ ಎಷ್ಟು?

ಶ್ರೀ ಬಿ. ಎಂ. ಪಾಟೀಲ್.—ಇದರಲ್ಲಿ ಎರಡು ಸ್ಟೇಜ್‌ಗಳು ಇವೆ. ಮೊದಲನೆ ಸ್ಟೇಜ್‌ಗೆ 67.5 ಲಕ್ಷ ರೂಪಾಯಿಗಳು ಖರ್ಚು ಆಗುತ್ತದೆ. ಎರಡನೆಯ ಸ್ಟೇಜ್‌ಗೆ 7.99 ಲಕ್ಷ ರೂಪಾಯಿಗಳು ಖರ್ಚು ಆಗುತ್ತದೆ.

ಶ್ರೀ ಎಂ. ನಾಗಪ್ಪ.—ಈ ಯೋಜನೆಗೆ ಅಡ್ಮಿನಿಸ್ಟ್ರೇಟಿವ್ ಸಾಂಕ್ಷನ್ ಆಗುವುದಕ್ಕೆ ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳುವಂತೆ ಬಹಳ ದಿವಸಗಳಾಗಿಲ್ಲ. 1968ರಲ್ಲಿ ಮೊದಲನೆಯ ಎಸ್ಟಿಮೇಟ್ 60 ಲಕ್ಷ ರೂಪಾಯಿಗಳಿಗೆ ತಯಾರಾಗಿತ್ತು. ಈಗ ಡೀಟೈಲ್ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರು ಮಾಡಲಾಗಿದೆ. ಈ ಬಗ್ಗೆ ಅಲ್ಲಿಯ ಮುನಿಸಿಪಾಲಿಟಿಯವರು ತಮ್ಮ ಭಾಗವನ್ನು ಕೊಡುವ ಬಗ್ಗೆ ಒಂದು ಠರಾವನ್ನು ಮಾಡಿ ಕಳಿಸಬೇಕೆಂದು ಬರೆದಿದ್ದೇವೆ. ಅದರಂತೆ ಅವರು ಡಿಸೆಂಬರ್ 1968ರಲ್ಲಿ ಮಾಡಿ ಕಳಿಸಿದ್ದಾರೆ. ಈಗ ಕೊನೆಯ ಹಂತಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ.

Sri D. B. KALMANKAR.—What is the source of water supply ?

Sri B. M. PATIL.—The source in Krishna river.

Sri M. NAGAPPA.—It is not Krishna river but is Tunga Bhadra Left Bank Canal.

Sri B. M. PATIL.—I shall verify it.

ಶ್ರೀ ಸದಾಶಿವಪ್ಪ ಪಾಟೀಲ್.—ಕುಡಿಯುವ ನೀರಿನ ಯೋಜನೆಯ ಪ್ರಶ್ನೆ ಬಂದಾಗಲೆಲ್ಲಾ ಸರ್ಕಾರದವರು ಪರಿಶೀಲನೆಯಲ್ಲಿ ಇದೆ ಎಂದು ಉತ್ತರ ಕೊಡುತ್ತಿರುತ್ತಾರೆ. ಅದನ್ನು ಬಿಟ್ಟು ಜಾಗ್ರತೆ ಮಾಡುತ್ತೇವೆ ಎಂಬ ಉತ್ತರವನ್ನು ಇನ್ನು ಮುಂದೆ ಕೊಡುತ್ತಾರೆಯೇ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಹೇಳಿದ್ದೇನೆ. ತ್ವರಿತವಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಎಂ. ನಾಗಪ್ಪ.—ಎಲ್. ಐ. ಸಿ. ಯಿಂದ ಲೋನ್ ತೆಗೆದುಕೊಂಡರೆ ಇಂಟರೆಸ್ಟ್ ಯಾವರೀತಿ ಹಾಕುತ್ತಾರೆ. ಆ ಇಂಟರೆಸ್ಟನ್ನು ಕೊಡುವ ಶಕ್ತಿ ಮುನಿಸಿಪಾಲಿಟಿಯವರಿಗೆ ಸಾಧ್ಯವೇ ಎಂಬುದನ್ನು ಸರ್ಕಾರದವರು ಪರಿಶೀಲಿಸಿ, ಸರ್ಕಾರದವರೇ ಲೋನ್ ಕೊಡುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್ ಅವರು ಮುನಿಸಿಪಾಲಿಟಿಯ ಆದಾಯ ಚೆನ್ನಾಗಿದೆ ಎಂದು ಹೇಳಿದ್ದಾರೆ. ಎಲ್. ಐ. ಸಿ. ಅವರಿಂದ ತೆಗೆದುಕೊಂಡ ಸಾಲವನ್ನು 20 ಕಂತುಗಳಲ್ಲಿ ಕೊಡಬೇಕಾಗುತ್ತದೆ. ಮತ್ತು 6. 31 ಪರ್ಸೆಂಟ್ ಇಂಟರೆಸ್ಟ್ ಚಾರ್ಜ್ ಮಾಡುತ್ತಾರೆ.

Sanction of Loan to Primary Land Development Banks

378. **Sri P. VENKATAGIRIYAPPA** (Kolar).—

Will the Minister for Development be pleased to state :—

(*a*) whether it has come to the notice of the Government that the State Land Development Bank is not extending the loan facility to the Primary Land Development Banks who have not collected 90 per cent of their dues from their members ;

(*b*) the number of Primary Banks affected by the decision of the State Land Development Bank in the State ;

(*c*) whether they are aware that the condition stipulated by the State Land Development Banks cannot be fulfilled by the Primary Land Development Bank due to successive famine conditions prevailing in their Taluks ?

Sri B. L. GOWDA (Deputy Minister for Co-operation).—

(*a*) Yes.

(*b*) 110.

(*c*) Yes.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗೆ ಕೊಟ್ಟ ಸಾಲವನ್ನು ಸರಿಯಾಗಿ ವಸೂಲಿ ಮಾಡಲು ಅವಕಾಶವಿಲ್ಲದುದರಿಂದ ಕನಿಷ್ಟ ಪಕ್ಷ ಶೇಕಡಾ ಐವತ್ತರಷ್ಟು ವಸೂಲಿಯಾಗಿರುವವರಿಗೆ ಸಾಲ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇದಾಗುವುದಿಲ್ಲ. ಇದಕ್ಕೆ ರಿಸರ್ವ್ ಬ್ಯಾಂಕಿನವರು ಒಪ್ಪುವುದೂ ಇಲ್ಲ. ಅವರೇ ಹೇಳಿರುವಂತೆ ಸುಸ್ತಿ ಇರುವ ಬ್ಯಾಂಕುಗಳಿಗೆ ಪುನಃ ಸಾಲ ಕೊಡಕೂಡದು ಎಂದು ಹೇಳಿದ್ದಾರೆ. ಆದುದರಿಂದ ಶೇಕಡಾ 90 ರಷ್ಟು ಬಾಕಿ ಇರಕೂಡದು ಎನ್ನುವುದನ್ನು ನಾವು ಸ್ಪೆಷಲ್ ಆಗಿ ಶೇಕಡಾ 80 ರಷ್ಟು ಇಳಿಸಲಾಗಿದೆ ಇನ್ನು ಇಳಿಸುವುದಕ್ಕಾಗುವುದಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ಕೆಲವು ಕಡೆ ಬಾವಿಗಳಿಗೆ ಸಾಲ ಕೊಟ್ಟು ಬಾವಿ ಕೆಲಸ ಅರ್ಧದಷ್ಟು ಮುಕ್ಕಾಲು ಭಾಗದಷ್ಟು ಕೆಲಸವಾಗಿ ಇನ್ನೂ ಕಾಲು ಭಾಗ ಮಾತ್ರ ಉಳಿದಿವೆ. ಇಂತಹ ಕಡೆಗಳಲ್ಲಿ ಸಾಲ ಕೊಡುತ್ತೀರಾ ಹೇಗೆ ?

ಶ್ರೀ ಬಿ. ಎಲ್. ಗೌಡ.—ಎಲ್ಲೆಲ್ಲಿ ಸಾಲ ಮಂಜೂರಾಗಿ ಅದರಲ್ಲಿ ಒಂದೆರಡು ಕಂತುಗಳು ಬಾಕಿ ಇದ್ದರೆ ಅಂತಹ ಕಡೆಗಳಲ್ಲೂ ಸಾಲ ಕೊಡುತ್ತಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಹೊಸದಾಗಿ ಬಾವಿಗಳಿಗೆ ಸಾಲ ತೆಗೆದು ಕೊಳ್ಳುವ ಬ್ಯಾಂಕುಗಳಿಗೆ ಈಗ ಇರುವ ಪದ್ಧತಿಯಿಂದ ತೊಂದರೆಯಾಗುತ್ತದೆ ಇದರ ಬಗ್ಗೆ ಹೇಗೆ ಮಾಡುತ್ತೀರಿ ?

ಶ್ರೀ ಬಿ. ಎಲ್. ಗೌಡ.—ಇದು ಕೋಆಪರೇಟೀವ್ ಎಫರ್ಟ್ ಮೇಲೆ ಇದೆ. ಸಂಸ್ಥೆಯಲ್ಲಿರುವವರು ಚೆನ್ನಾಗಿ ಕೆಲಸ ಮಾಡಿದರೆ ಇಲ್ಲಿನ ಕೆಲಸಗಳು ಚೆನ್ನಾಗಿರುತ್ತವೆ. ಆದರೆ ಇದರಲ್ಲಿರುವ ವ್ಯಕ್ತಿಗಳು ಸರಿಯಾಗಿ ಕೆಲಸ ಮಾಡದೇ ಇದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಾವು ಸಂಸ್ಥೆಗೆ ಸಹಾಯ ಮಾಡುತ್ತೇವೆ. ವ್ಯಕ್ತಿಗಳಿಗಲ್ಲ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಲ್ಯಾಂಡು ಮಾರ್ಟ್‌ಗೇಜು ಬ್ಯಾಂಕುಗಳ ಮೂಲಕ ಕೊಡುವಾಗ ಸುಮಾರು 110 ಬ್ಯಾಂಕುಗಳಲ್ಲಿ ತೊಂದರೆಗಳಾಗಿವೆ. ಆದುದರಿಂದ ಪುನಃ ರೆವೆನ್ಯೂ ಖಾತೆಯಲ್ಲಿ ಹಿಂದೆ ಯಾವ ರೀತಿ ಪದ್ಧತಿ ಇತ್ತೋ ಆದರಂತೆ ಮಾಡಲು ಆಗುವುದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಈಗ ಆ ಪ್ರಕಾರ ಮಾಡಲಾಗುವುದಿಲ್ಲ. ಸುಮಾರು 30 ಸಾವಿರ ಬಾವಿಗಳನ್ನು ಈಗ ಹಂಚಲು ಅನುಕೂಲವಾಗಿದೆ. ಹಿಂದೆ ರೆವೆನ್ಯೂ ಖಾತೆಯಲ್ಲಿದ್ದಾಗ ಒಂದು ಸಾವಿರ ಅಥವಾ ಎರಡು ಸಾವಿರಕ್ಕೆ ಮೇಲೆ ಬಾವಿಗಳಿಗೆ ಹಣ ಕೊಡಲಾಗುತ್ತಿರಲಿಲ್ಲ. ಈಗಿರುವ ಬ್ಯಾಂಕುಗಳಿಂದ ಜನಕ್ಕೆ ಹೆಚ್ಚು ಅನುಕೂಲವಾಗಿದೆ.

ಶ್ರೀ ಇ. ನಾರಾಯಣಗೌಡ.—ಸ್ವಾಮಿ, ಬ್ಯಾಂಕ್‌ನವರು ತಮ್ಮ ಸದಸ್ಯರುಗಳಿಂದ ಶೇಕಡ 90 ರಷ್ಟು ವಸೂಲ್ಮಾಡದಿದ್ದರೆ ಸಾಲದ ಸೌಲಭ್ಯವನ್ನು ಮಂಜೂರು ಮಾಡುವುದಿಲ್ಲ. ಇದರಿಂದ ಹೊಸದಾಗಿ ಅನುಕೂಲ ಪಡೆಯತಕ್ಕಂಥ ರೈತರಿಗೆ ತೊಂದರೆಯಾಗುತ್ತದೆ. ಸರ್ಕಾರದವರು ಈ ಧೋರಣೆಯನ್ನು ಬಿಟ್ಟು ಅಭಾವ ಪರಿಸ್ಥಿತಿಯುಳ್ಳಿರುವ ಪ್ರದೇಶಕ್ಕೆ ಅಲ್ಲಿ 50—60 ಪರ್ಸೆಂಟು ವಸೂಲ್ಮಾಡಿದ್ದರೆ ಸಾಲವನ್ನು ಹೊಸದಾಗಿ ಮಂಜೂರ್ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅಭಾವ ಪರಿಸ್ಥಿತಿ ಎನ್ನುವುದು ಡೆವಲಪ್‌ಮೆಂಟ್ ಲೋನ್ಸ್‌ಗೆ ಅಪ್ಲೈ ಆಗುವುದಿಲ್ಲ ಅಲ್ಲಿನ ಅಧಿಕಾರಿಗಳು ಮತ್ತು ಅಧಿಕಾರ ವರ್ಗದವರು ವಸೂಲ್ಮಾಡಿದರೆ ಸಾಧ್ಯವಾಗುತ್ತದೆ. ಬಹುಶಃ ಅವರ ತಾಲ್ಲೂಕಿನಲ್ಲಿ ವಸೂಲ್ಮಾಡಿರುವುದು ಅಷ್ಟು ಚೆನ್ನಾಗಿಲ್ಲ. ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕಿನಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಚೆನ್ನಾಗಿ ವಸೂಲ್ಮಾಡಿದ್ದಾರೆ. ಆದುದರಿಂದ ಚೆನ್ನಾಗಿ ವಸೂಲಾಗದೇ ಇರುವ ಕಡೆ ಸಾಲವನ್ನು ಮಂಜೂರ್ಮಾಡುವುದಕ್ಕೆ ಸಾಧ್ಯವಿಲ್ಲ.

Mangalore Fertiliser Factory

395. Sri C. K. RAJAIAH SHETTY (Chikkanayakanahally).—

Will the Minister for Industries, Information and Publicity be pleased to state :—

(*a*) the proposed cost of Mangalore Fertiliser Factory ;

(*b*) whether Government has finally concluded agreement with any foreign collaboration for establishing the factory ;

(*c*) whether any advance has been paid to any private firm as Government share or otherwise ;

(*d*) if so, how much ?

Sri M. RAJASEKHARA MURTHY (Minister for Industries, Information and Publicity).—

(*a*) The total investment for the first phase of the Project, namely, 600 tons ammonia and 1,000 tons urea, is about Rs. 40 crores. The capital structure consists of equity of Rs. 11 crores and preference of Rs. 3 crores.

(*b*) No. The foreign collaboration agreement with the foreign collaborators will be entered into by M/s. Malabar Chemicals and Fertilisers Ltd., and not by Government. Sanction of the Government of In'ia to the collaboration agreement is awaited.

(*c*) and (*d*) Mrs. Malabar Chemicals and Fertilizer Ltd., is a public Limited Company and not a private firm. Government have agreed to subscribe Rs. 2 crores to the share capital of the Company.

The Company has mads a call of 10 per cent and Government have subscribed Rs. 20 lakhs as share capital through the Mysore State Industrial Investment and Development Corporation Limited.

Sri C. K. RAJAIAH SHETTY.—May I know who is the Managing Director for this company and the investment of the Managing Director?

Sri M. RAJASEKHARA MURTHY.—The Managing Director has not yet been appointed.

Sri C. K. RAJAIAH SHETTY.—Very recently, the Government of India sanctioned a unit of this Fertiliser factory to Madras Government with the collaboration of Japan, whereas it is refused to Mysore. May I know why this disparity?

Sri M. RAJASEKHARA MURTHY.—Sir, the information of the hon. Member is wrong. The matter is now pending before the Sub-Committee of the Central Cabinet, and it is going to be cleared in about 15 days time; the matter is at an advance stage and would be cleared very early.

ಶ್ರೀ ಎಲ್. ಶ್ರೀಕಂಠಯ್ಯ.—ತಾವು ಫರ್ಟಿಲೈಸರ್ಸ್ ಕಂಪನಿಗೆ 20 ಲಕ್ಷ ರೂಪಾಯಿ ಷೇರು ಕ್ಯಾಪಿಟಲ್ಲನ್ನು ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಅಂಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮುಖಾಂತರವಾಗಿ ಕೊಟ್ಟಿದ್ದೀರಿ ಮಲಬಾರ್ ಕಂಪನಿ ಫರ್ಟಿಲೈಸರ್ಸ್‌ನವರು ಅವರು ಎಷ್ಟು ಕ್ಯಾಪಿಟಲ್ ಹಾಕಿದ್ದಾರೆ? ಮತ್ತು ಇದೇ 20 ಲಕ್ಷ ರೂಪಾಯಿಗಳನ್ನು ಕೊಟ್ಟು ಪಬ್ಲಿಕ್‌ನಿಂದಲೂ ಕಲೆಕ್ಟ್ ಮಾಡಿ ನೀವೇ ಇದನ್ನು ಪ್ರಾರಂಭ ಮಾಡುವುದಕ್ಕೆ ಏನು ಆಗಿತ್ತು?

Sri M. RAJASEKHARA MURTHY.—The total cost of the project is Rs. 40 crores for the First Stage and for the Final Stage is Rs. 65 crores. The State Government cannot start it in the public sector.

ಶ್ರೀ ಎಸ್. ಶಿವಪ್ಪ.—ಸ್ವಾಮಿ ಮಲಬಾರ್ ಕೆಮಿಕಲ್ ಫರ್ಟಿಲೈಸರ್ಸ್ ವ್ಯಾಪ್ತಿ ಏನು? ಅದರಲ್ಲಿರುವ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಅನುಭವ ಇದೆಯೇ? ಇದು ಹೊಸದಾಗಿ ಮೈಸೂರು ಸರ್ಕಾರದೊಡನೆ ವ್ಯವಹಾರ ಮಾಡುವುದಕ್ಕೆ ಹುಟ್ಟಿಕೊಂಡಿರುವುದೇ? ಇದರ ಕೆಪಾಸಿಟಿ ಮತ್ತು ಸ್ಟೆಬಲಿಟಿ ಏನು ಎನ್ನುವುದು ಹೇಳುತ್ತೀರಾ?

Sri M. RAJASEKHARA MURTHY.—It is a Joint Stock Company with an authorised capital of Rs. 20 crores, which is going to issue about Rr. 14 crores, Rs. 11 crores equity and Rs. 3 crores preferential capital. Since the amendment to the original license has not been secured, they have not gone to the market for public subscription.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಸ್ವಾಮಿ ಮಂಗಳೂರು ಗೊಬ್ಬರ ಕಾರ್ಖಾನೆ ಪರಿಸ್ಥಿತಿ ಬಹಳ ಡೋಲಾಯಮಾನವಾಗಿದೆ. ಈಗ ಮಲಬಾರ್ ಫರ್ಟಿಲೈಸರ್ಸ್‌ನವರು ಸಾಧ್ಯ ಇಲ್ಲ ಎಂದು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಆದುದರಿಂದ ಬ್ರಿಟಿಷ್ ಮತ್ತು ಡಚ್ ಕಂಪನಿಯ ಸಹಾಯದೊಂದಿಗೆ ಮೈಸೂರು ಸರ್ಕಾರದವರು ಮಾಡುತ್ತಾರೆ ಎಂದು ಸರ್ಕಾರದ ವಕ್ತಾರರೊಬ್ಬರು ಹೇಳುತ್ತಾರೆ. ಪೇಪರ್ ಕಟಿಂಗ್ ಬೇಕಾದರೆ ಮಂತ್ರಿಗಳಿಗೆ ಕೊಡುತ್ತೇನೆ. ಇದರ ವಿಷಯವಾಗಿ 1962ನೇ ಇಸವಿಯಿಂದಲೂ ಹೇಳುತ್ತಾ ಇದ್ದಾರೆ. ಆದುದರಿಂದ ಇದು ಯಾವಾಗ ಆಗುತ್ತದೆ; ಯಾರು ಮಾಡುತ್ತಾರೆ? ಕೊಲಾಬರೇಷನ್‌ನಿಂದ ನಡೆಯುತ್ತದೆಯೇ ಏನು ಎನ್ನುವುದನ್ನು ತಿಳಿಸುತ್ತೀರಾ?

Sri M. RAJASEKHARA MURTHY.—The hon. Member has not been correctly informed about this Company. This company is going to execute an agreement with M/s. Mac and Glasgo U.K. and M/s. Humphery of Holland, who are the foreign collaborators.

Mr. SPEAKER.—Next Question.

Sri S. SIVAPPA.—Sir, I have asked a clear question. I want to know the standing of that company.

Mr. SPEAKER.—If the member desires he may raise an half-an-hour discussion on it and I shall permit it.

Government Officers in Political Party

409. Sri VATAL NAGARAJ (Chickpet).—

Will the Minister for Law, Labour and Parliamentary Affairs be pleased to state:—

(*a*) whether Government Pleader or Assistant Pleader con hold a prominent place in a Political Party of any district of the state ;
(*b*) whether there is anybody like that ?

Sri K. PUTTASWAMY (Minister for Law, Labour and Parliamentary Affairs).—

(*a*) Not possible according to rules.
(*b*) No.

ಶ್ರೀ ವಾಟಾಳ್ ನಾಗರಾಜ್.—ನಿಯಮಗಳ ಪ್ರಕಾರ ಇರುವುಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಯಾರಾದರೂ ಇದ್ದರೆ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಇದ್ದರೆ ಎಂದು ಕೇಳಿರುವುದು ಹೈಪೋಥಿಟಿಕಲ್ ಆಗುತ್ತದೆ. ಆ ರೀತಿ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ಜಿಲ್ಲೆ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಒಬ್ಬರು ಅಸಿಸ್ಟೆಂಟ್ ಪ್ಲೀಡರ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಗಮನಕ್ಕೆ ಬಂದಿಲ್ಲ ವಿಚಾರಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸರ್ಕಾರಿ ನೌಕರರು ರಾಜಕೀಯ ಪಕ್ಷದಲ್ಲಿ ಇರಕೂಡದು ಎಂದಿದೆ. ಪಾರ್ಟ್ ಟೈಂ ಪ್ರೊಫೆಸರುಗಳಾಗಿ ಲಾ ಕಾಲೇಜಿಗೆ ನೇಮಕಗಳನ್ನು ಮಾಡಿದವರಲ್ಲಿ ಕೆಲವರು ಕಾಂಗ್ರೆಸ್ ಸಂಸ್ಥೆಯಲ್ಲಿ ಕೆಲವರು ಸದಸ್ಯರಾಗಿದ್ದಾರೆ. ಇಂಥವರು ರಾಜಿನಾಮೆ ಕೊಟ್ಟಿದ್ದಾರೆಯೇ ಸ್ವಾಮಿ ?

Sri K. PUTTASWAMY.—Sir, may I know whether it arises out of this question ?

Mr. SPEAKER.—It is a quostion pertaining to Government Pleader. Supplementaries pertaining to other matters will not be permitted to be put.

ಶ್ರೀ ಬಿ. ಪಿ. ಗಂಗಾಧರ್.—ಸರ್ಕಾರಿ ಪ್ಲೀಡರುಗಳು, ಅಸಿಸ್ಟೆಂಟ್ ಪ್ಲೀಡರುಗಳು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರುಗಳು, ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರುಗಳು ಇವರನ್ನು ಎಲ್ಲ ಕಡೆ ತೆಗೆದುಕೊಳ್ಳುವಾಗ ಅವರಲ್ಲಿಯೂ ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಗಳ ಕಾಂಗ್ರೆಸ್ ಪಕ್ಷದಲ್ಲಿ ಕೆಲಸಮಾಡಿದ ಜನರನ್ನು ತೆಗೆದುಕೊಳ್ಳಲಾಗಿದೆ. ಅವರು ಈಗಲೂ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ. ಅಂಥ ಜನರನ್ನು ಆರಿಸಿಕೊಟ್ಟಿದ್ದಾರೆ ಅಲ್ಲವೇ ?

Mr. SPEAKER.—It is not relevant.

Sri D. B. KALMANKAR.—It is a very relevant question.

Mr. SPEAKER.—My Ruling is binding upon all the hon. Members. Next question.

ಶ್ರೀ ವಾಟಾಳ್ ನಾಗರಾಜ್.—ಪ್ರಶ್ನೆ ಕೇಳಿರುವವನು ನಾನು. ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮುಂದಿನ ಪ್ರಶ್ನೆಯನ್ನು ಕರೆದ ಮೇಲೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನನಗೆ ಅವಕಾಶ ಕೊಡಲೇ ಬೇಕು, ಸ್ವಾಮಿ. ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಅಸಿಸ್ಟೆಂಟ್ ಪ್ಲೀಡರ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಇಲ್ಲ ಎಂದು ಹೇಳಿದರು. ಅದರ ಹೆಸರು ಹೇಳಿದರೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಸ್ವಾಮಿ!

Mr. SPEAKER.—It is disallowed.

ಶ್ರೀ ವಾಟಾಳ್ ನಾಗರಾಜ್.—ಎಚ್. ಎಸ್. ರೇಣುಕಾ ಪ್ರಸಾದ್ ಎಂಬುವರನ್ನು ನೇಮಕ ಮಾಡಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ, ಸ್ವಾಮಿ?

Mr. SPEAKER.—That is disallowed.

Sri S. SIVAPPA.—Sir, it is an important question……

Mr SPEAKER.—When I have called the next Question, it should be respected.

Sri S. SIVAPPA.—You are shielding the Government!

Mr. SPEAKER.—The hon. leader of the opposition should not make an allegation against the Chair.

Sri D. B. KALMANKAR.—Sir, it is a very impartant question and I have a very important supplementary to put; it is very relevant.

Sri K. PUTTASWAMY.—Sir, if you can kindly permit me, I will clarify the position. The rule is very definite………

Sri M. N. RAMANNA.—The Chair has already said that the question is over. Sir, you are again permitting the Hon. Minister to speak. There should not be any disparity between a Minister and a Member.

Mr. SPEAKER.—Now it is One O'Clock. The Question Hour is over.

1–00 P.M.

ಶ್ರೀ ಬಿ. ಪಿ. ಗಂಗಾಧರ್.—ನೀವೇನು ಹೇಳಿದಿರಿ ಅದನ್ನು ಒಪ್ಪಿಕೊಂಡು ನಾವು ಕುಳಿತುಕೊಂಡೆವು. ಆದರೆ ಎಲ್ಲಾ ಕಡೆ ಕಾಂಗ್ರೆಸ್ಸಿಗೆ ಅವಕಾಶ ಕೊಟ್ಟಿದ್ದಾರೆ, ತುಮಕೂರು, ಬೆಂಗಳೂರು ಮುಂತಾದ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷದವರಿಗೆ ಟಿಕೆಟ್ ಸಿಕ್ಕಿದೆ. It is a question whether Government has definitely shown a partisan spirit.

Mr. SPEAKER.—The Hon. Members should know that the time is limited. If hon. Members go on putting supplementaries it would be impossible to take up all the questions. It is rather uncharitable to say that the Chair is shielding either this side or that side. If hon. Members desire to have more information on this particular question, I will permit half-an-hour discussion, if any hon. Member gives notice of it.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾನು ಸಭೆಯ ನಿಯಮಗಳನ್ನು ಉಲ್ಲಂಘನೆ ಮಾಡಬೇಕೆಂದಿಲ್ಲ, ಆ ಅಭಿಪ್ರಾಯ ನನಗಿಲ್ಲ, ಅಧ್ಯಕ್ಷರಿಗೆ ಅಗೌರವ ತೋರಿಸಬೇಕೆಂಬ ಅಭಿಪ್ರಾಯ ನನಗಿಲ್ಲ. ಆದರೆ ನಿಯಮಾವಳಿಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು, ಎಂದು ಕೆಲವು ಹೊಸ ಸೂಚನೆಗಳನ್ನು ನಾವು ಮಾಡಿದ್ದೆವು. ಹೊಸ ನಿಯಮಗಳು ಕೆಲವನ್ನು ಅಂಗೀಕಾರ ಮಾಡಬೇಕೆಂಬ ಸೂಚನೆಯನ್ನು ಸರಕಾರದ ಮುಂದೆ ನಾವು ಇಟ್ಟಿದ್ದೆವು. ಶ್ರೀ ವಾಟಾಳ್ ನಾಗರಾಜ್‌ರವರ ಪ್ರಶ್ನೆ ಸ್ಪಷ್ಟವಾಗಿದೆ. ಹಿಂದೆ ಶ್ರೀ ಎಂ. ವಿ. ರಾಮರಾಯರು ಒಂದು ಸಲ ಅಡ್ವೊಕೇಟ್ ಜನರಲ್‌ರವರ ಅಪಾಯಿಂಟ್ ಆಗುವಾಗ ಅದು ಪೊಲಿಟಿಕಲ್ ಅಪಾಯಿಂಟ್‌ಮೆಂಟ್ ಎಂದು ಹೇಳಿದರು. ನಾನು ಹಳಬನಾಗಿರುವುದರಿಂದ ಪದೇಪದೇ ಏನಾದರೂ ಅವಶ್ಯವಾದ್ದನ್ನು ಹೇಳಲು ನಿಲ್ಲಬಹುದು, ಮಂತ್ರಿಗಳಲ್ಲಿ ಕಲವರು ಹೊಸಬರಿರಬಹುದು. ನಮಗೆ ಕೆಲವು ಸಂಗತಿಗಳು ಹಿಂದೆ ನಡೆದಿರುವುದು ನೆನಪಿರುತ್ತವೆ. ಈ ಪ್ರಶ್ನೆಯಲ್ಲಿ ರಾಜಕೀಯ ಅಪಾಯಿಂಟ್‌ಮೆಂಟ್ ಮಾಡು ತ್ತಿದ್ದೀರಾ ಎಂದು ಕೇಳಿದ್ದಾರೆ. ನಿಯಮಗಳ ಪ್ರಕಾರ ಆಗುವುದಿಲ್ಲ ಎಂದು ಹೇಳಿದ್ದಾರೆ. ಆ ರೀತಿ ಯಾರಾದರೂ ಇದ್ದಾರೆಯೇ ಅಂದರೆ ಇಲ್ಲ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಈ ಪ್ರಶ್ನೆಯ ಮೇಲೆ ಅರ್ಧ ಘಂಟೆ ಚರ್ಚೆಗೆ ಬೇಕಾದರೆ ಅವಕಾಶ ಕೇಳಿ, ಅದಕ್ಕೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ನಮಗೆ ಪ್ರತಿಯೊಂದು ಪ್ರಶ್ನೆಯ ಮೇಲೂ ಅರ್ಧ ಘಂಟೆ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಲು ಸಮಯವೆಲ್ಲದೆ ?

Mr. SPEAKER.—There is provision in the rules to permit half-an-hour discussion. Let any hon. Member give notice for half-an-hour discussion, I shall permit that.

ಶ್ರೀ ಎಸ್. ಗೋಪಾಲಗೌಡ.—ಅದಕ್ಕಾಗಿಯೇ ಸರಕಾರ ಸತ್ಯವಾದ ಹೇಳಿಕೆಗಳನ್ನು ಕೊಡ ಬೇಕೆಂದು ಒತ್ತಾಯ ಪಡಿಸುವುದು. ಈ ಸಭೆಯಲ್ಲಿ ಸರಕಾರ ಅಥವ ಯಾವುದೇ ಸದಸ್ಯ ಸತ್ಯಕ್ಕೆ ದೂರವಾದ ಮಾತನ್ನು ಆಡಿದರೆ ಅವರು ಶಿಕ್ಷೆಗೆ ಗುರಿಯಾಗುತ್ತಾರೆ. ಆದುದರಿಂದ ಈಗ ಶ್ರೀ ವಾಟಾಳ್ ನಾಗರಾಜ್‌ರವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಸರಕಾರ ಪರಿಶೀಲನೆ ಮಾಡಿದೆಯೇ ಕಾಂಗ್ರೆಸ್ ಸದಸ್ಯರು ಹೀಗೆ ಪ್ಲೀಡರ್ ಆಗಿದ್ದಾರೆಯೇ ಎಂದು ನೋಡಿ ಹೇಳಿದ್ದೀರಾ ಅಥವ ಇಲ್ಲವೇ ಎಂದು ಕೇಳಬೇಕಾಗಿದೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ಕಾಲ ಒಂದು ಗಂಟೆ, ಅದು ಮುಗಿದು ಈಗ ಐದು ನಿಮಿಷ ಆಗಿದೆ, ಇದೇ ರೀತಿ ಮುಂದುವರಿದರೆ ಇನ್ನೂ 20 ನಿಮಿಷ ಆಗುತ್ತದೆ. ಎಲ್ಲಾ ಪ್ರಶ್ನೆಗಳನ್ನೂ ತೆಗೆದುಕೊಳ್ಳುವುದಕ್ಕೆ ಅವಕಾಶವಾಗಬೇಕೆಂಬ ಉದ್ದೇಶದಿಂದ ಈ ರೀತಿ ಒಂದು ಕ್ರಮವನ್ನು ಅನುಸರಿಸುತ್ತಾ ಇದ್ದೇನೆ. ಆದ್ದರಿಂದ ವೇಳೆಯನ್ನು ಕಡಿಮೆ ಮಾಡಬೇಕಾಗುತ್ತದೆ. ಅದಕ್ಕೆ ಎಲ್ಲಾ ಸದಸ್ಯರು ಸಹಕಾರ ಮಾಡಬೇಕು. ತಮ್ಮ ಅಭಿಪ್ರಾಯದಲ್ಲಿ 20 ಪ್ರಶ್ನೆಗಳು ಬೇಡ ಎಂದರೆ, 5 ಅಥವಾ 10 ಪ್ರಶ್ನೆಗಳನ್ನು ಇಡುತ್ತೇನೆ. ಆಗ ವೇಳೆಯನ್ನು ಹೆಚ್ಚುಕಮ್ಮಿ ಕೊಡಲಿಕ್ಕೆ ಬರುತ್ತದೆ. ಆದರೆ ಹೆಚ್ಚು ಪ್ರಶ್ನೆಗಳಿಗೆ ಅವಕಾಶ ಸಿಕ್ಕಲಿ ಎಂದು ಹೇಳಿ ಈ ರೀತಿ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರಿಗೆ ಬೇಕಾದರೆ ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಪ್ರೊವಿಜನ್ ಇದೆ ಆ ರೀತಿ ಮಾಡಬಹುದು. Now, I think there is no controvery over this matter.

ಶ್ರೀ ಎಸ್. ಶಿವಪ್ಪ.—ಈ ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ತದ್ವಿರುದ್ಧವಾಗಿ ಸರ್ಕಾರದ ಕಡೆಯಿಂದ ಉತ್ತರ ಬರುವುದಕ್ಕೆ ತಾವು ಅನುಮತಿ ಕೊಡುದಾದರೆ ತಾವು ಸರ್ಕಾರಕ್ಕೆ ರಕ್ಷಣೆ ಕೊಟ್ಟಹಾಗಾಗುತ್ತದೆ ಎಂಬ ಮಾತನ್ನು ಆಗಲೇ ಹೇಳಿದ್ದೇನೆ ಈಗಲೂ ಹೇಳುತ್ತೇನೆ. ಬೇಕಾದರೆ ಅದು ಹೇಗೆ ಎಂಬುದನ್ನು ತೋರಿಸಿಕೊಡುತ್ತೇನೆ. ಈ ಸಭೆಯಲ್ಲಿ ಪ್ರಶ್ನೋತ್ತರಗಳ ವೇಳೆಯಲ್ಲಿ ಸ್ಪಷ್ಟವಾಗಿ ಅವರಿಂದ ಇನ್‌ಫರ್ಮೇಷನ್ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ತೆಗೆದು ಕೊಳ್ಳತಕ್ಕ ಸರ್ವ ಹಕ್ಕು ಈ ಸಭೆಗೆ ಇದೆ. ಅದನ್ನು ಯಾರೂ ಕೂಡ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ನಿಮಗೂ ಕೂಡ ಅವರಿಗೆ ರಕ್ಷಣೆ ಕೊಡುವುದಕ್ಕೆ ಶಕ್ತಿ ಇಲ್ಲ. ಅವರೂ ಕೂಡ ತೆಗೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇವತ್ತು ಈ ಕೆಲಸವನ್ನು ಮಾಡಿಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡುತ್ತಾ ಇದ್ದೇವೆ. ವಾಟಾಳ್ ನಾಗರಾಜ್‌ರವರ ಪ್ರಶ್ನೆಗೆ ಸ್ಪಷ್ಟವಾಗಿ ಏನು ಉತ್ತರ ಹೇಳಿದ್ದಾರೆ ಅದಕ್ಕೆ ತದ್ವಿರುದ್ಧವಾಗಿ ಈಗ ಅವರು ಉತ್ತರವನ್ನು ಹೇಳುತ್ತಾ ಇದ್ದಾರೆ.

ರಾಜಕೀಯದಲ್ಲಿರುವವರು ಆ ಹುದ್ದೆಯನ್ನು ಹೊಂದುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳಿದ್ದಾರೆ. ಅಂತಹ ಒಬ್ಬ ವ್ಯಕ್ತಿ ಯಾರು ವಿರುದ್ಧವಾಗಿದ್ದಾರೆ. ಅವರ ಮೇಲೆ ಏನು ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಿ ಅಂತ ಅನ್ನುವುದಕ್ಕೆ ಇನ್‌ಫರ್ಮೇಷನ್ ಕೊಡದಿದ್ದರೆ ಹೇಗೆ ?

ಶ್ರೀ ಎಂ. ಎನ್. ರಾಮಣ್ಣ.—ಪಾಯಿಂಟ್ ಆಫ್ ಆರ್ಡರ್ ಸರ್ ಈ ಪ್ರಶ್ನೆ ಆಯಿತು ಅಂತ ಹೇಳಿ ಬೇರೆ ಪ್ರಶ್ನೆಯನ್ನು ತಾವು ಕರೆದಿದ್ದೀರಿ.

ಅಧ್ಯಕ್ಷರು.—ಪ್ರಶ್ನೋತ್ತರಗಳ ವೇಳೆ ಮುಗಿಯಿತು ಎಂದು ಹೇಳಿದೆ.

Sri K. PUTTASWAMY.—I am very sorry that I was not understood properly. Sir, I have stated very clearly that according to existing rules no Public Prosecutor or Government Pleader can be a member of any political party. I will read out the rule for the information of Hon'ble Members of this House : Rule 6 of the Mysore Law Officers' (Conditions of Service) Rules, 1959 reads as follows :

"6. *Taking part in Politics and Election* :—(1) No Government Pleader or Public Prosecutor shall be a member of, or be otherwise associated with, any political party or organisation which takes part in politics nor shall he take part in, subscribe in aid of, or assist in any other manner, any political movement or activity.

(2) If any question arises whether any movement or activity falls within the scope of this rule, the decision of Government shall be final.

(3) If a person appointed as Government Pleader or Public Prosecutor is a member of any Political organisation before his appointment, he shall resign his membership immediately after his appointment as Government Pleader or Public Prosecutor."

So Sir, the rule is very clear and therefore in answsr to clause (a) of the question it is replied that it is not possible according to rules; and in answer to (b) whether there is anybody like that, according to the best information the Government is having, there is nobody like that. Now, hon. Member Sri Vatal Nagraj mentioned a name and said that he is engaged in political activities. I do not know whether he is a Government Pleader, Assistant Pleader, or Public Prosecutor etc. Now that the hon. Member has given that information, I have promised already that I will look into the matter and if it is a fact I will take action according to rules.

Sri B. P. GANGADHAR.—Is it not a fact that Government Pleaders and public prosecutors have applied for Congress tickets for general elections and such of the persons who have not been given tickets have been provided here in Tumkur District especially ?

ಅಧ್ಯಕ್ಷರು.—ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಅರ್ಧ ಗಂಟೆಯ ಚರ್ಚೆ ಸೂಚನೆಯನ್ನು ಕಳುಹಿಸಿಕೊಡಿ, ಅದಕ್ಕೆ ನಾನು ಅವಕಾಶ ಮಾಡಿಕೊಡುವುದಾಗಿ ಹೇಳಿದ್ದೇನೆ.

QUESTIONS FOR ANSWERS ON THE DAY

(but not taken up)

Underground Drainage

17. SRI R. NAGAN GOUDA (Hospet).—

Will the Minister of State for Municipal Administration be pleased to state :—

(*a*) whether the Hospet Municipal Council has asked for a loan or guarantee for a loan from the Life Insurance Corporation of India for the construction of underground drainage in the City ;

(*b*) whether an estimate has been prepared for the underground drainage, if so, the amount estimated ;

(*c*) whether it has come to the notice of the Government that since the inauguration of the water supply scheme in the City, pools of water have increased with the result that insanitary conditions are on the increase ;

(*d*) how soon will it be possible for the Government to grant a loan to the Municipality and enable it to take up the drainage scheme ?

SRI B. M. PATIL (Minister of State for Municipal Administration).—

(*a*) Yes.

(*b*) Yes ; Estimated cost Rs. 50.00 lakhs.

(*c*) Yes.

(*d*) As early as possible.

Drinking Water Supply

234. SRI H. SIDDAVEERAPPA (Harihar).—

Will the Minister of State for Municipal Administration be pleased to state.—

(*a*) whether any work is in progress for the supply of drinking water to Davanagere City Municipality by the Publi Health Department from Doddabathi Tank in Davanagere Taluk ;

(*b*) whether they are aware that this tank is a settling tank where water from Bhadra Canal is stored and further let out for irrigation ;

(e) whether the seepage water from the upper reaches of the irrigated area under Bhadra Project also gets into this tank, thus polluting the water as the seepage water carries the sediments of highly poisonous drugs, such as Folidol, DDT, Endrine, etc., which are used to protect the irrigated crop from the fungus diseases ;

(d) whether cattle are bathed in this tank and also vehicles are cleaned ;

(e) whether there is any Technical report for having examined the water from the Reservoir to assure that it is fit for human consumption and if so, whether a copy of the same would be placed on the Table of the House ;

SRI B. M. PATIL (Minister of State for Municipal Administration).-

(a) Yes.

(b) Yes.

(c) Yes, to a slight extent. However pollution is not revealed by the Test results.

(d) Yes, but this will be stopped when water supply is started.

(e) Yes. A copy of the test result is appended.

(Sri B. M. Patil)

FORM No. I

Results of Chemical Analysis of the undermentioned samples of Water received from the, Assistant Engineer, PHE Sub-division, Davangere Ref: Nil, dated 22nd September 1967.

Sl. No.	Name of work	Total solids	Chlorides	Free Ammonia	Albuminoid Ammonia	Total Hardness	Permanent Hardness	Temporary Hardness	Nitrites	Nitrates	P. H. Value	Oxygen Absorbed in 2 hours	Physical Character	Opinion
1	2	3	4	5	6	7	8	9	10	11	12	13	14	15
	Sample of Water from the channel of Batti Tank, Davanagere.	16	1	0·018	0·012	9	3	6	Traces	...	8·4	0·14	Clear with sediments	The sample of water can be used for potable purpose after suitable treatment and Bacteriological Examinations.

Water Supply Scheme

289. Sri P. B. NANDIHALI (Uchagaon).—

Will the Minister for Development be pleased to state:—

(a) whether there is a great necessity of water supply schemes for drinking purposes for the following villages in Belgaum Taluk.—

1. Yellur
2. Rajhansgad
3. Santibastwad
4. Janewad
5. Mangirge
6. Basarikatti
7. Khadarwadi ;

(b) whether the request is not being made to the Government often on the floor of this House ;

(c) whether any promise was held out by the Hon. Minister concerned to take some of the schemes this year ;

(d) the action take by Government in respect of each scheme ?

Sri P. M. NADGOUDA (Minister for Development).—

(a) Representations have been received from three villages *viz.*, Rajhansgad, Yellur and Santibastwad.

(b) Yes.

(c) Action is being taken to get the schemes investigated.

(d)

Yellur Rajhansgad Janewadi Hangirge	Detailed investigation is to be carried out.
Basrikatte ...	Plans and estimates have been prepared.
Santibastwad ...	An estimate amounting to Rs. 42,000 has been prepared.
Khadarwadi ...	Investigation is completed.

Water Supply Scheme

352. Sri PRABHURAO JAGADALE (Hulsoor).—

Will the Minister for Development be pleased to state :–

(*a*) whether the piped water supply scheme is ready for being commissioned at village Nittur, Taluk Bhalki, District Bidar ;

(*b*) the expenditure incurred so far ;

(*c*) whether the work was undertaken through a contractor or the Department ;

(*d*) whether it has come to the notice of the Government that construction of the over-head Tank and the raising main is not up to the standard ;

(*e*) whether the bad state of the pump house has come to the notice of the Government;

(*f*) whether it has come to the notice of the Government that there is wide spread leakage all along the pipe line and no efforts are made to repair them;

(*g*) the steps taken to repair the same urgently?

Sri P. M. NADGOUDA (Minister for Development).—

(*a*) Yes.

(*b*) Rs. 73,347-00.

(*c*) Partly through contractor and partly by Department.

(*d*) No.

(*e*) No.

(*f*) No.

(*g*) Does not arise.

Bullet Injury to M.L.A. during Khedda Operation

463. Sri P. V. AITHALA (Suratkal).—

Will the Minister of State for Forests be pleased to state :— .

(*a*) whether the Government is aware of the bullet injury caused to Sri Rattankumar Kattemar, M.L.A. during the last Khedda Operation at Kakankote Forest, Mysore on 10th January 1968 ;

(*b*) whether the L.G. of the Bullet has been removed ;

(*c*) whether the concerned Minister had stated on the floor of both the Houses that they will arrange to send him to foreign country if it is desired by the victim ;

(*d*) whether they have received any application from him in this matter ;

(*e*) if so, the reason for the delay to send him abroad ;

(*f*) whether he had claimed any damages from the Government and if so, whether it has been paid ?

Sri ALUR HANUMANTHAPPA (Minister of State for Forests).—

(*a*) Yes.

(*b*) No.

(*c*) It was indicated that, if need be, he will be treated outside India at Government cost.

(*d*) Yes.

(*e*) Suggestion has been made to him to kindly consult the Neuro-Surgeons at Vellore, Madras or Bombay to obtain a second opinion about the treatment to be undertaken.

(*f*) A claim for damages has been received. It is being examined.

Seizure of Sandalwood

467. Sri K. M. PUTTASWAMY (Chickballapur).—

Will the Minister of State for Forests be pleased to state :—

(*a*) whether the Forest Department have seized logs of sandal wood kept at Kumaraswamy Temple in Bellary District and other places in the year 1960 ;

(*b*) the number of persons who were in possession of these logs ;

(*c*) the action taken by the Government in the matter ?

Sri ALUR HANUMANTHAPPA (Minister of State for Forests).—

(*a*) No Sandalwood has been seized at Kumaraswamy Temple. It has been seized in other places in Bellary District.

(*b*) Four.

(*c*) The property in respect of one case has been returned to the Department.

In respect of others, Civil suits have been filed.

Civil Hospital, Raichur

473. Sri SADASHIVAPPA PATIL (Deodurg). —

Will the Minister for Health be pleased to state :—

(*a*) since when the X-Ray Plant and Oxygen Cylinders are not in working condition in Raichur Civil Hospital;

(*b*) the action taken by the concerned authoritis in the early commissioning of the plant ?

Sri Y. RAMAKRISHNA (Minister for Health).—

(*a*) The X-Ray Machine was out of order during 1968 and is under repairs.

The Oxygen cylinders are in working condition.

(*b*) Action is being taken to get the machine repaired and also to install the new machine of 200 M.A. capacity purchased recently.

Post and Telegraph Advisory Committee

482. Sri K. H. PATIL (Gadag).—

Will the Minister for Public Works be pleased to state :—

(*a*) whether the Government has instructed the Karnatak C hamber of Commerce to send the panel of names to be selected to the Post and Telegraph Advisory Committee to be constituted by the Central Government;

(*b*) if so, whether this is to avoid direct election through which the said Chamber was sending their representatives ever since British regime ?

Sri K. LAKKAPPA (Minister for Public Works).—

(*a*) Yes.

(*b*) No.

Aided Engineering Colleges

504. Sri H. B. JWALANAIAH (Hassan).—

Will the Minister for Education be pleased to state :—

(*a*) the number of Aided Engineering Colleges, where All India Council of Technical Education Scales of pay has been implemented;

(*b*) when the Central Government intimated the State Government about this Scheme;

(*c*) while the benefit of pay scales of University Grants Commission has been implemented without any restrictions of qualification why the same should not be given effect in respect of All India Council of Technical Education Scales of Pay?

Sri K. V. SHANKARA GOWDA (Minister for Education).—

(*a*) Nil.

(*b*) 29-7-1965.

(*c*) The two Schemes are Central Government Schemes and the conditions are laid down by Government of India. While the University Grants Commission pay scale is meant as a general revision of pay of college teachers the All India Council of Technical Education Scales are meant for attracting qualified teachers to the Engineering College and Polytechnics. It is not a general revision based on rank only. The State Government cannot change the rules.

Incorrect Replies to Questions

Sri K. H. PATIL (Hubli).—On a point of order. While Hon. Minister Sri Rajasekhara Murthy was replying in the House to a supplementary of Sri Sivappa, he was trying to hide the information. Sri Sivappa wanted to know since what date the Company has come into existence. The Hon. Minister narrated something else, In my opinion the question asked by the hon. Member should be replied to as relevantly as possible and no Minister should try to hide any information from the House. Therefore, I seek the protection of the Chair that in all such matters, the Minister should be directed to furnish all facts that are available on record and the Members should not be misled by giving information which is not wanted by the Member.

Mr. SPEAKER.—There is no point of order because when a question is put, it is for the Hon. Minister to reply. It is for the House to judge whether the reply is adequate or not, and the Chair has no authority under the rules to judge it.

Sri K. H. PATIL.— I am not speaking about adequacy.

Mr. SPEAKER.—I am giving the ruling.

Sri K. H. PATIL.— At the time of giving the ruling, if the Speaker has not understood me, I have to correct him. My point is not about giving adequate reply. I say it should be a relevant reply.

Mr. SPEAKER.—I have already said that if anybody wants to give notice of half-an-hour discussion, I shall permit it. Then the hon. Member may get the necessary information from the Hon. Minister.

Allowing members to put more supplementaries during Question Hour.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).–ಸ್ವಾಮಿ, ಅಧ್ಯಕ್ಷರೇ, ತಮ್ಮಲ್ಲಿ ನನ್ನ ಒಂದು ಅರಿಕೆ ಇದೆ:—ಇಲ್ಲಿ ಚರ್ಚೆ ನಡೆಯುತ್ತಿರುವಾಗ ಯಾವ ಒಬ್ಬ ಮಾನ್ಯ ಸದಸ್ಯರಿಗೂ ಯಾವ ಒಂದು ವ್ಯತ್ಯಾಸವನ್ನೂ ತೋರಿಸಬಾರದೆಂದಿದೆ. ಅನೇಕರು ಇಲ್ಲಿ ಪ್ರಶ್ನೆಗಳನ್ನು ಕೇಳತಕ್ಕ ಸಂದರ್ಭದಲ್ಲಿ ನೀವು ಕೂಡ್ರಿ, ನಿಮಗೆ ಇನ್ನೊಮ್ಮೆ ಅವಕಾಶ ಕೊಡುತ್ತೇನೆಂದು ತಾವು ಹೇಳಿ, ತಾವು ಕೆಲವರಿಗೆ ಉಪಪ್ರಶ್ನೆಗಳನ್ನು ಹಾಕಲು ಎರಡು ಮೂರು ಅವಕಾಶಗಳನ್ನು ಕೊಟ್ಟಿದ್ದರೂ ಈ ದಿವಸ ನಾನು ಭೂ ಅಭಿವೃದ್ಧಿ ಬ್ಯಾಂಕ್‌ನ ಬಗ್ಗೆ ಒಂದು ಉಪಪ್ರಶ್ನೆಯನ್ನು ಮಾತ್ರ ಹಾಕಿದೆ, ಇನ್ನೊಂದು ಪ್ರಶ್ನೆಯನ್ನು ಹಾಕುವುದಕ್ಕೆ ತಾವು ಅವಕಾಶವನ್ನೇ ಕೊಡಲಿಲ್ಲ. ತಾವು ಇಲ್ಲಿ ಕೆಲವರನ್ನು 'ಎ''ಕ್ಲಾಸ್ ಸದಸ್ಯರನ್ನಾಗಿಯೂ ಕೆಲವರನ್ನು ''ಬಿ''ಕ್ಲಾಸ್ ಸದಸ್ಯರನ್ನಾಗಿಯೂ ಮತ್ತು ಇನ್ನ ಕೆಲವರನ್ನು ''ಸಿ''ಕ್ಲಾಸ್ ಸದಸ್ಯರನ್ನಾಗಿ ಕಾಣುತ್ತಿರುವಂತೆ ಭಾಸವಾಗುತ್ತಿದೆ. ಆದರೆ ಹೀಗೆ ಯಾವ ತರಗತಿಗಳು ಇರುವುದಕ್ಕೂ ಅವಕಾಶವಿಲ್ಲ. ಅಂಥ ಅನಾದರಣೆಯನ್ನೂ ಅಧ್ಯಕ್ಷರು ಮಾಡಬಾರದು. ತಾವು ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡಿಕೊಂಡು ಹೋಗಬೇಕೆಂಬುದಾಗಿ ನಾನು ಅಧ್ಯಕ್ಷರಲ್ಲಿ ಬಹಳ ಗೌರವದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—I am sorry. I have made it clear several times that I never make distinction between one member and another. I have the highest respect for every hon. Member. If I am not able to concede supplementaries adequately and equally to all the Members, it is only for want of time. I assure the hon. Member Sri Venkatagiriyappa, whether a member sits in the front line or back line, no distinction will be made.

Question of Privilege against Sri S. K. Patil

ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ನಾನು ಒಂದು ಹಕ್ಕುಬಾಧ್ಯತೆ ಪ್ರಶ್ನೆಯ ಬಗ್ಗೆ ಒಂದು ನೋಟೀಸ್ ಕಳುಹಿಸಿದ್ದೇನೆ. ನೆನ್ನೆ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಮಾನ್ಯ ಶ್ರೀ ಎಸ್. ಕೆ. ಪಾಟೀಲ್ ಅವರ ಒಂದು ಹೇಳಿಕೆ ಬಂದಿದೆ.

Mr. SPEAKER.—I have gone through that notice and I am applying my mind to it. I have got one thought in me and I wish to express it loudly. I am thinking whether the judgment of the highest court and High Court cannot be subject to criticism without attributing any motive to them or without casting reflection on them and whether a member has no right to make a *bona fide* criticism. On this point, if Hon. Member has got any authority, let him pass it on to me so that I shall go through it and give my ruling within a day or two.

Sri M. NAGAPPA.—For that you have to see the intention.

Mr. SPEAKER.—I have given my mind. I shall give a hearing.

Sri M. NAGAPPA.—The Chair has just now explained what it has got in its mind and what it wants. I must explain.

Mr. SPEAKER.—I shall hear the hon. member in my Chamber. I shall call Sri D. B. Kalmankar also to my chamber in this connection.

Notice of Adjournment Motion by Sri Vatal Nagaraj
re : Lease of land to the Congress Party for the Exhibition

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಾನು ತಮಗೆ ಕಾಲಕ್ಕೆ ಸರಿಯಾಗಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಬೆಳಗ್ಗೆ ಒಂಭತ್ತುವರೆ ಗಂಟೆಯೊಳಗೆ ತಮಗೆ ಸೇರುವಂತೆ ತಲುಪಿಸಿದ್ದೇನೆ. ಬೆಂಗಳೂರು ನಗರದಲ್ಲಿ ಈ ವರ್ಷ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಯುತ್ತದೆ. ಸರ್ಕಾರದ ಕಡೆಯಿಂದ ಲಕ್ಷಾಂತರ ರೂಪಾಯಿಗಳಷ್ಟು ಮಳಿಗೆಗಳ ಬಾಡಿಗೆಗಾಗಿ ಕೊಡುತ್ತಾ ಇದ್ದಾರೆ. ಸರ್ಕಾರ ಈ ಹಣವನ್ನು ಇನ್‌ಡೈರೆಕ್ಟಾಗಿ ಒಂದು ಪಾರ್ಟಿಗೆ ಕೊಟ್ಟಹಾಗೆ ಆಗುತ್ತದೆ. ಒಂದು ಪಾರ್ಟಿ ಎಗ್ಜಿಬಿಷನ್ನಿಗೆ ಹಣ ಕೊಡುವುದನ್ನು ನಿಲ್ಲಿಸಿ, ಈ ಸರ್ಕಾರದ ಮೂಲಕ ಲಕ್ಷಾಂತರ ರೂಪಾಯಿಗಳನ್ನು ಅದಕ್ಕಾಗಿ ಖರ್ಚುಮಾಡುವುದನ್ನು ಕೂಡಲೇ ನಿಲ್ಲಿಸಿ, ವಸ್ತುಪ್ರದರ್ಶನವನ್ನು ಸರ್ಕಾರವೇ ನಡೆಸಬೇಕೆಂದು ಕಳುಹಿಸಿದ್ದೇನೆ. ಅದನ್ನು ಚರ್ಚೆ ಮಾಡಲು ಅವಕಾಶ ಕೊಡಬೇಕು. 10-15 ವರ್ಷಗಳಿಂದಲೂ ಮುಖ್ಯಮಂತ್ರಿಗಳು ಮತ್ತು ಕೈಗಾರಿಕೆಯ ಸಚಿವರು ಇನ್‌ಫ್ಲುಯೆನ್ಸ್ ಮಾಡಿ ಅವರಿಗೆ ಸಹಾಯ ಮಾಡುತ್ತಿದ್ದಾರೆ. ಅವರ ಅಧಿಕಾರ ದುರುಪಯೋಗ ಮಾಡಿ ಖಾಸಗೀ ಸಂಸ್ಥೆಗಳವರಿಂದ ಸಾವನೀರಿಗೆ ಅಡ್ವರ್ಟೈಸ್‌ಮೆಂಟ್ ಮೂಲಕ ಲಕ್ಷಾಂತರ ರೂಪಾಯಿಗಳನ್ನು ಕಲೆಕ್ಷನ್ ಮಾಡಿ ತಮ್ಮ ಪಕ್ಷವನ್ನು ನಡೆಸುವುದಕ್ಕಾಗಿ ಉಪಯೋಗಿಸುತ್ತಿದ್ದಾರೆ. ಅದನ್ನು ಕೂಡಲೇ ನಿಲ್ಲಿಸಿ. ಈ ವಸ್ತುಪ್ರದರ್ಶನ ಕಾಂಗ್ರೆಸ್ಸು ಸಂಸ್ಥೆಯ ಪರವಾಗಿ ನಡೆಯುವುದರಿಂದ ಅದರಲ್ಲಿ ಮಂತ್ರಿಗಳು ಯಾರೂ ಭಾಗವಹಿಸಕೂಡದೆಂದು ನಾನು ಹೇಳುತ್ತೇನೆ.

Mr. SPEAKER.—I have received notice. I will communicate my decision to the hon. Member.

Sri B. P. GANGADHAR (Tumkur).—Some more facts are brought to your notice.

ಅಧ್ಯಕ್ಷರು.—ಇದೇ ಸ್ವರೂಪದ್ದು ಒಂದು ನಿಲುವಳಿ ಸೂಚನೆಯನ್ನು ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಕೊಟ್ಟಿದ್ದರು. ಅದರ ಸಂಬಂಧವಾಗಿ ನಾನು ಅವರಿಗೆ ಕನ್‌ಸೆಂಟ್ ಕೊಡುವುದಕ್ಕಾಗುವುದಿಲ್ಲವೆಂದು ತಿಳಿಸಿದ್ದೇನೆ. ಕಾರಣ, ಅದು ಠರಾವು ರೂಪದಲ್ಲಿದೆ. ಇದನ್ನು ಸರ್ಕಾರದವರೇ ಸ್ವತಃ ಮಾಡಬೇಕು ಎನ್ನುವ ಸೂಚನೆ ರೆಕಮೆಂಡೇಟರಿ ಇದೆ. ಇಂತಹ ವಿಷಯ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಸರಿಹೊಂದುವುದಿಲ್ಲವೆಂದು ತಿಳಿದುಕೊಂಡು ನಾನು ಅವರಿಗೆ ಆ ರೀತಿ ಕಳಿಸಿದೆ. ಆದ್ದರಿಂದ ಅದರ ಸಲುವಾಗಿ ಮಾತನಾಡಲಿಕ್ಕೆ ಅವಕಾಶವಿಲ್ಲ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ತಾವು ಏನು ಮಾಡಬೇಕಾಗಿದೆ, ಅದನ್ನು ಮಾಡಿದ್ದೀರಿ. ಈಗಿರತಕ್ಕಂತಹ ವಿಚಾರ, ಸರ್ಕಾರ ತನ್ನ ಅಧಿಕಾರವನ್ನು ತನ್ನ ಪಕ್ಷದ ಹಿತಸಾಧನೆಗೋಸ್ಕರ ಉಪಯೋಗಿಸುವುದು ಯಾವುದೂ ಚೆನ್ನಾಗಿರುವುದಿಲ್ಲ ಮತ್ತು ಅದು ರಾಜ್ಯಾಂಗಕ್ಕೂ ವಿರುದ್ಧವಾಗಿದೆ. ವಾಟಾಳ್ ನಾಗರಾಜರು ತಂದಿರತಕ್ಕಂತಹ ವಿಚಾರ, ಸರ್ಕಾರ ಕಾನೂನು ಬಾಹಿರವಾಗಿ, ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ತನ್ನ ಪಕ್ಷದ ಏಳಿಗೆಗೋಸ್ಕರ ಮುಂದುವರಿಸಿಕೊಂಡು ಹೋಗುವಂತಹ ಕೆಲಸ ಏನಿದೆ, ಇದನ್ನು ಚರ್ಚೆ ಮಾಡಲೇಬೇಕಾಗಿದೆ. ಅದನ್ನು ಚರ್ಚೆ ಮಾಡಲು ಈ ಸಭೆಗೆ ಅವಕಾಶ ಕೊಡಬೇಕು. ಇವತ್ತಿನ ದಿವಸ ಕಾಂಗ್ರೆಸ್ಸಿನ ಬಾವುಟವನ್ನು ಅಲ್ಲಿ ಹಾರಿಸಿಕೊಂಡು ನಮ್ಮ ರಾಷ್ಟ್ರಧ್ವಜಕ್ಕೆ ಅವಮಾನ ಮಾಡುವ ಈ ಒಂದು ವಸ್ತುಪ್ರದರ್ಶನ ಏನಿದೆ, ಇದಕ್ಕಿಂತಲೂ ಕೀಳಾದುದು ಬೇರೇನೂ ಇಲ್ಲ. ಇದು ನಿಜವಾಗಿಯೂ ಗಹನವಾದ ವಿಚಾರ. ಈ ಸಭೆಯ ಎಲ್ಲಾ ಇತರ ವಿಷಯವನ್ನು ಬದಿಗೊತ್ತಿ, ಈ ವಿಷಯದ ಚರ್ಚೆಗೆ ಅವಕಾಶ ಮಾಡಬೇಕು, ಮತ್ತು ಸರ್ಕಾರ ಈ ವಸ್ತುಪ್ರದರ್ಶನಕ್ಕೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡಿದೆಯೇ, ಎಷ್ಟು ಹಣ ಸಹಾಯ ಕೊಟ್ಟಿದೆ, ಅದು ಯಾವ್ಯಾವ ರೀತಿಯಲ್ಲಿ ಕೊಟ್ಟಿದೆ ಎಂಬುದಕ್ಕೆ ವಿವರಣೆಯನ್ನು ಕೊಡಬೇಕು. ಅದಕ್ಕೆ ಸಭಾಧ್ಯಕ್ಷರು ಕೊಂಚ ಕಾಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(Sri M. S. Krishnan stood up to speak.)

Mr. SPEAKER.—I will not allow anybody to speak. Sri Krishnan may please resume his seat. I have already intimated in writing that this matter cannot be allowed since a similar motion was already disallowed yesterday. The reasons for disallowing the motion have been conveyed to the hon. Member. As to the point raised by the Leader of the Opposition whether the Government has to make a statement or not I shall find out. I think the Government while replying will cover that point also. Therefore, I request the hon. Members to respect the decision of the Chair and to go ahead with the discussion.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಸ್ವಾಮಿ, ಈಗ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ಅವರು ಯಾವಾಗ ಉತ್ತರ ಕೊಡುತ್ತಾರೆ? ಇದು ಹಣಕ್ಕೆ ಸಂಬಂಧಪಟ್ಟ ವಿಚಾರ ಸ್ವಾಮಿ.

Mr. SPEAKER.—I shall permit any member to raise that point under Rule 312.

ಶ್ರೀ ಎಸ್. ಚನ್ನಯ್ಯ.—ಅವರು ಉತ್ತರ ಕೊಡದಿದ್ದರೆ ಏನು ಮಾಡುತ್ತೀರಾ?

Mr. SPEAKER.—If they do not reply on this point, I shall permit any member to raise it under Rule 312.

Sri D. B. KALMANKAR (Aland).—You do not allow adjournment motion to be moved nor you allow the calling attention notice. You are almost shutting out the discussion on these things. We are much agitated.

Mr. SPEAKER.—If there is a call atteution notice I will allow it.

ಶ್ರೀ ಎಸ್. ಚನ್ನಯ್ಯ.—ನೀವು ಸರ್ಕಾರಕ್ಕೆ ಸಪೋರ್ಟ್ ಮಾಡುತ್ತೀರಿ. ಅದಕ್ಕೆ ನಮಗೆ ಕೋಪ ಬರುತ್ತದೆ. ನೀವು ಮಾತನಾಡುವುದನ್ನು ನೋಡಿದರೆ ನೀವು ಸರ್ಕಾರಕ್ಕೆ ಬೆಂಬಲ ನೀಡುತ್ತಿದ್ದೀರೆಂದು ನಾನು ಘಂಟಾಘೋಷವಾಗಿ, ಧೈರ್ಯವಾಗಿ ಹೇಳುತ್ತೇನೆ. ದುಡ್ಡು ಖರ್ಚು ಮಾಡುವುದು ಅವರದ್ದು ಅಲ್ಲ, ನಮ್ಮದೂ ಅಲ್ಲ. ಸರ್ಕಾರ ಇಂಥಾ ಪ್ರದರ್ಶನ ಮಾಡಲಿ, ನಷ್ಟ ಆದರೂ ಚಿಂತೆಯಿಲ್ಲ.

ಅಧ್ಯಕ್ಷರು.—ಬಡ್ಜೆಟ್ ಭಾಷಣದ ಮೇಲಿನ ಚರ್ಚೆಗೆ ಮಂತ್ರಿಗಳು ಉತ್ತರ ಕೊಡುವಾಗ ಈ ವಿಷಯಕ್ಕೆ ಉತ್ತರ ಕೊಡದಿದ್ದರೆ 312ನೇ ರೂಲ್ ಪ್ರಕಾರ ಈ ವಿಷಯದ ಚರ್ಚೆಗೆ ನಾನು ಅನುಮತಿಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ ಸರ್ಕಾರದವರು ತಮ್ಮ ಪಾರ್ಟಿಯ ಹಿತಕ್ಕೋಸ್ಕರ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ನನ್ನ ನಿಲುವಳಿ ಸೂಚನೆಯ ಚರ್ಚೆಗೆ ಎರಡೂವರೆ ಗಂಟೆ ಕಾಲಾವಕಾಶವನ್ನು ಕೊಡಿ. ಇದು ಬಹಳ ಪ್ರಾಮುಖ್ಯವಾದ ವಿಷಯ. ಆದ್ದರಿಂದ ಈ ಬಗ್ಗೆ ನಾನು ಕಳುಹಿಸಿರುವ ನಿಲುವಳಿ ಸೂಚನೆಗೆ ಎರಡೂವರೆ ಗಂಟೆಗಳ ಚರ್ಚೆಗೆ ಅವಕಾಶವನ್ನು ಕೊಡಿ ಇಲ್ಲದಿದ್ದರೆ ಗಲಾಟೆ ಮತ್ತು ದುರಂತಗಳಾಗಬಹುದು. ನಾಳೆ ಕಾಂಗ್ರೆಸ್ ಎಗ್ಸಿಬಿಷನ್ನಿನ ಟಿಕೆಟ್‌ಗಳನ್ನು ಕಿತ್ತುಹಾಕಬಹುದು. ಈ ಎಗ್ಸಿಬಿಷನ್‌ನಲ್ಲಿ ಒಂದು ದಿವಸಕ್ಕೆ 10 ಸಾವಿರ ರೂಪಾಯಿಗಳು ಕಲೆಕ್ಷನ್ ಆಗುತ್ತದೆ. ಶನಿವಾರ ಮತ್ತು ಭಾನುವಾರ ಒಂದು ದಿವಸಕ್ಕೆ 50 ಸಾವಿರ ರೂಪಾಯಿಗಳು ಕಲೆಕ್ಷನ್ ಆಗುತ್ತದೆ. ಇದು ಎರಡೂವರೆ ತಿಂಗಳು ಕಾಲ ನಡೆಯುತ್ತದೆ. ಲಕ್ಷಾಂತರ ರೂಪಾಯಿಗಳನ್ನು ಕಾಂಗ್ರೆಸ್ಸಿನವರು ಸಂಪಾದನೆ ಮಾಡುತ್ತಿದ್ದಾರೆ.

Sri K. H. SRINIVAS (Sagar).—On a Point of order, Sir. You were pleased to announce several times in the House that you are not permitting. You were also kind enough to say that you are permitting to raise this under Rule 312 Therefore, the Chair may be pleased to direct the Hon. Members to follow that procedure.

Mr. SPEAKER.—I have have already stated that I have refused consent. That decision should be respected. He says there is a Call Attention notice. I will allow it.

1-30 P.M.

I want all things to be discussed here. I do not want to shut out any discussion.

ಶ್ರೀ ಎಸ್. ಚೆನ್ನಯ್ಯ.—ನಿಮ್ಮ ಮಾತಿಗೆ ಬೆಲೆ ಕೊಡುತ್ತೇವೆ, ಯಾವಾಗ ಈ ವಿಚಾರವನ್ನು ತೆಗೆದುಕೊಳ್ಳುತ್ತೀರಾ ಎಂಬುದನ್ನು ಹೇಳಬೇಕು.

ಅಧ್ಯಕ್ಷರು.—ಅವರು ಆ ವಿಚಾರದ ಬಗ್ಗೆ ಉತ್ತರ ಕೊಡದೇ ಇದ್ದರೆ ಆಗ ತಾವು ಪ್ರಸ್ತಾಪ ಮಾಡಿ. ನಾನು ತಮಗೆ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಮಂತ್ರಿಗಳು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಕೆ. ಪುಟ್ಟಸ್ವಾಮಿ.—ನಮಗೆ ಒಂದು ತೊಂದರೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಸುಭಾಸ್‌ನಗರದಲ್ಲಿ ಏರ್ಪಾಡು ಮಾಡುತ್ತಿರುವ ಕಾಂಗ್ರೆಸ್ ವಸ್ತುಪ್ರದರ್ಶನದ ವಿಚಾರವಾಗಿ ಸ್ವಲ್ಪ ಕಳವಳ ವ್ಯಕ್ತಪಡಿಸಿದ್ದಾರೆ ಮತ್ತು ಆ ಬಗ್ಗೆ ಮಾಹಿತಿಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಬಗ್ಗೆ ಎಲ್ಲಾ ವಿಚಾರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಈ ವಿಚಾರದಲ್ಲಿ ನಾನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೆ, ಆದರೆ ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಮೂಲಕ ಮಾತನಾಡುತ್ತಿದ್ದುದರಿಂದ ನನಗೆ ಅವಕಾಶ ಸಿಗಲಿಲ್ಲ. ಈ ವಿಚಾರದಲ್ಲಿ ತಾವು ಯಾವುದಾದರೂ ಒಂದು ನಿಯಮದ ಪ್ರಕಾರ ಚರ್ಚೆ ನಡೆಸುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಸಿದ್ಧರಾಗಿದ್ದೀರಿ. ಈ ವಿಚಾರ ವಿರೋಧಪಕ್ಷದ ಸದಸ್ಯರುಗಳಿಗೆ ಗೊತ್ತಿದೆ. ಮಾನ್ಯ ಸದಸ್ಯರುಗಳು ರೂಲ್ ಪ್ರಕಾರ ಕಾನೂನು ಪ್ರಕಾರ ಈ ಬಗ್ಗೆ ಚರ್ಚೆ ನಡೆಯಬೇಕೆಂದು ಏನು ಒಂದು ಭಾವನೆ ಮಾಡಿಕೊಂಡಿದ್ದಾರೋ ಅದೇ ಭಾವನೆ ಬೇರೆಯವರಲ್ಲಿಯೂ ಇದೆ. ರೂಲ್ 50 ರ ಪ್ರಕಾರ ಈ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಕೊಡಲಿಲ್ಲ. ರೂಲ್ 59ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಈ ರೂಲ್ ಬಗ್ಗೆ ಮಾನ್ಯ ಸದಸ್ಯರು ಏನೂ ಪ್ರಯತ್ನಮಾಡಿಲ್ಲ. ಆ ರೀತಿ ಮಾಡಿದಾಗ ತಾವು ಏನು ಹೇಳುತ್ತೀರೋ ನನಗೆ ಗೊತ್ತಿಲ್ಲ. ಇನ್ನು ರೂಲ್ 63ರ ಪ್ರಕಾರ ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಶ್ರೀಮಾನ್ ಕಲಮಂಕರ್ ಅವರು ಕೊಟ್ಟಿದ್ದಾರೆಂದು ತಾವು ಹೇಳಿದ್ದೀರಿ.

ಶ್ರೀ ಎಂ. ನಾಗಪ್ಪ.—ಅದು ಡಿಸ್-ಅಲೋ ಆಗಿದೆ ಎಂದು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗೆ ತಾವು ಅವಕಾಶ ಕೊಟ್ಟರೆ ಕಾಲವಿಳಂಬವಿಲ್ಲದೆ ನಾವು ಉತ್ತರ ಕೊಡುತ್ತೇವೆ. ಇವು ಮೂರು ರೂಲ್‌ಗಳ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಈ ಮೂರು ನಿಯಮಗಳನ್ನು ಬಿಟ್ಟು ಎಕ್ಸ್‌ಟ್ರಾರ್ಡಿನರಿ ಪ್ರಾವಿಜನ್ ಒಂದು ಇದೆ. ಅದು ರೂಲ್ 312. 312ರ ಪ್ರಕಾರ ಚರ್ಚೆಯಾಗುವುದು ಬಹಳ ವಿರಳ. ಕೋರಿಕೆಯ ಮೇರೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ ಈ ರೂಲ್‌ಪ್ರಕಾರ ಚರ್ಚೆಮಾಡಲು ತಾವು ಒಪ್ಪಿಗೆ ಕೊಟ್ಟರೆ ಅವಕಾಶ ಇದೆ. ಈ ವಿಚಾರದಲ್ಲಿ ಈಗಾಗಲೇ ತಾವು ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದೀರಿ.

ಮಾನ್ಯ ಸದಸ್ಯರು ರೂಲು 312 ರ ಪ್ರಕಾರ ಈ ವಿಚಾರ ಚರ್ಚೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸೂಚನೆ ಮಾತ್ರ ನಾನು ಇಲ್ಲಿ ಮಾಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಇದು ನಿಮಗೆಲ್ಲಾ ಗೊತ್ತಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಯಾವಾಗಲೂ ಗೊತ್ತಿರತಕ್ಕ ವಿಚಾರವನ್ನೇ ಪದೇ ಪದೇ ಇಲ್ಲಿ ಚರ್ಚೆ ಮಾಡುತ್ತಿರುತ್ತಾರೆ.

ಶ್ರೀ ಎಸ್. ಚೆನ್ನಯ್ಯ.—ಏತಕ್ಕೋಸ್ಕರ ಇದನ್ನೆಲ್ಲಾ ಹೇಳುತ್ತೀರಿ ? ಇದರಲ್ಲೇನೋ ಇರುವ ಹಾಗೆ ಕಾಣುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ರೂಲ್ 312 ಈ ರೀತಿ ಇದೆ :

"A Member who wishes to bring to the notice of the Assembly any matter which is not a point of order shall give notice to the Secretary in writing stating briefly the point which he wishes to raise in the Assembly together with reasons for wishing to raise it and he shall be permitted to raise it only after the Speaker has given his consent and at such time and date as the Speaker may fix."

ಶ್ರೀ ಎಸ್. ಚನ್ನಯ್ಯ.—ಇದನ್ನೆಲ್ಲಾ ಏತಕ್ಕಾಗಿ ಹೇಳುತ್ತಾರೋ ನಮಗೆ ಇದೊಂದೂ ಅರ್ಥವಾಗುತ್ತಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಇದರಲ್ಲೇ ಇದೆ. A member shall give notice to the Secretary in writing stating briefly the point which he wishes to raise in the Assembly.

ಶ್ರೀ ಎಸ್. ಚನ್ನಯ್ಯ.—ಇದನ್ನು ಬೇರೆ ಬೇರೆ ರೀತಿಯಾಗಿ ಹೇಳುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಆದರೆ ನಾನು ಇಲ್ಲಿ ಹೇಳುತ್ತಿರುವುದು ಯಾವ ಪಾಯಿಂಟಿಗಾದರೂ ಸರ್ಕಾರ ಉತ್ತರ ಕೊಡಬೇಕು. ಯಾವುದನ್ನೂ ಮುಚ್ಚಿಡುವುದಕ್ಕೆ ಆಗುವುದಿಲ್ಲ. ಆದರೆ ನಾವೇನೂ ಸರ್ವಜ್ಞರಲ್ಲ. ಎಲ್ಲ ವಿಚಾರಗಳೂ ನಮ್ಮಲ್ಲೇ ಇರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಯಾವ ವಿಚಾರವಾಗಿ ಇಲ್ಲೇ ಪ್ರಸ್ತಾಪ ಮಾಡಬೇಕು ಎನ್ನುವುದನ್ನು ತಮಗೆ ಪೂರ್ವಭಾವಿಯಾಗಿ ತಿಳಿಸಿದರೆ ಆ ವಿಚಾರಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನೂ ಹಾಗೂ ಇತರ ಅಂಕಿ ಅಂಶಗಳನ್ನೂ ಪಡೆದು ಈ ಸಭೆಗೆ ಕೊಡಬೇಕಾದ್ದು ನಮ್ಮ ಕರ್ತವ್ಯ. ಯಾವುದೇ ಒಂದು ಚರ್ಚೆಯಾಗುವಾಗ ತಾವೇ ಇಲ್ಲ ಅನೇಕ ಸಾರಿ ಹೇಳಿದ್ದೀರಿ, ಅದು ಯೂಸ್‌ಫುಲ್ ಆಗಿ ಪರಿಣಾಮಕಾರಿಯಾಗಿ ಹಾಗೂ ಫಲಪ್ರದ ವಾಗಬೇಕು ಎಂದು. ಇದರ ಬಗ್ಗೆ ಹೇಳಬೇಕೆಂದು ನಾನು ಆಗಲೇ ನಿಂತುಕೊಂಡೆ. ಇದರ ಬಗ್ಗೆ ನಾನು ಇನ್ನೊಮ್ಮೆ ಇಲ್ಲಿ ಆಶ್ವಾಸನೆ ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಸರ್ಕಾರ ತನ್ನ ವಶದಲ್ಲಿ ರತಕ್ಕ ಯಾವುದೇ ಸಮಾಚಾರವನ್ನಾಗಲೀ ಒದಗಿಸಿಕೊಡುವುದಕ್ಕೆ ಸಿದ್ಧವಾಗಿದೆ ಮತ್ತು ವಿರೋಧ ಪಕ್ಷದವರು ಅಪೇಕ್ಷೆ ಪಟ್ಟರೆ ಪಾರ್ಲಿಮೆಂಟರಿ ಪದ್ಧತಿಯಂತೆ ಯಾವ ನಿಯಮಗಳಿರುತ್ತವೋ ಅದನ್ನು ಯಾವ ರೀತಿ ಕಲ್ಪನೆ ಮಾಡಿಕೊಂಡು ಪಡೆಯಬಹುದೋ ಅದರಂತೆ ಪಡೆಯಬಹುದು. ಪಾರ್ಲಿ ಮೆಂಟರಿ ವ್ಯವಸ್ಥೆಯಲ್ಲಿ ಇದನ್ನೆಲ್ಲಾ ಒದಗಿಸಿಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಸರ್ಕಾರ ಯಾವುದೇ ವಿಚಾರಗಳನ್ನು ಈ ಸಭೆಯಿಂದ ಮುಚ್ಚಿಡುವುದಕ್ಕೆ ಅಪೇಕ್ಷೆಪಡುವುದಿಲ್ಲ. ಇದು ಪ್ರಜಾಸತ್ತಾತ್ಮಕವಾದ ಪದ್ಧತಿಯಲ್ಲಿ ಸರ್ಕಾರದ ಅಭಿಪ್ರಾಯವಾಗಿದೆ ಎಂದು ಇಲ್ಲಿರುವ ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ಇಲ್ಲಿ ಈಗ ಇದನ್ನು ಹೇಳುತ್ತಿರುವುದು ಅಷ್ಟು ಸಮಂಜಸವಾಗುವುದಿಲ್ಲ. ಆ ಮೇಲೆ ರೂಲು 312 ರ ಬಗ್ಗೆ ಏನಿದೆ ಎನ್ನುವುದನ್ನೂ ಇಲ್ಲಿ ಹೇಳಿಬಿಟ್ಟರು. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪುಟ್ಟಸ್ವಾಮಿಯವರು ಇಲ್ಲಿ ಯಾವ ವಿಚಾರ ವನ್ನೂ ಹೇಳಲಿಲ್ಲ ಎಂದು ಇದರ ವಿಚಾರ ಆಗಲೇ ಇಲ್ಲಿ ಪ್ರಸ್ತಾಪಕ್ಕೆ ಬಂದು ಸುಮಾರು 10-15 ನಿಮಿಷಗಳ ಕಾಲ ಚರ್ಚೆಯಾಗಿರುವಾಗ ಇವೆಲ್ಲಾ ಚೆನ್ನಾಗಿ ಎಲ್ಲರಿಗೂ ಗೊತ್ತಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಇಲ್ಲಿ ಹೇಳಬೇಕಾಗಿಯೇ ಇರಲಿಲ್ಲ ಮತ್ತು ಇದರ ಅಗತ್ಯವೂ ಇರಲಿಲ್ಲ. ಇದನ್ನು ಯಾವಾಗ ಚರ್ಚೆ ಮಾಡಬೇಕು ಎನ್ನುವುದು ಈಗ ನಮ್ಮ ಮುಂದಿರುವ ಪ್ರಶ್ನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಯಾವ ವಿಷಯವನ್ನೂ ಈ ಸಭೆ ಯಲ್ಲಿ ಮುಚ್ಚಿಡಬಾರದು ಎಲ್ಲವನ್ನೂ ಸತ್ಯವಾಗಿ ಹೇಳಬೇಕು ಎನ್ನುವುದನ್ನು ಮಾನ್ಯ ಸಚಿವರೇ ಒಪ್ಪಿ ಕೊಂಡಿದ್ದಾರೆ. ನಾನು ಹಾಗೂ ನನ್ನ ಇತರ ಕೆಲವು ಸ್ನೇಹಿತರು ಸಹಿ ಹಾಕಿ ಕಳುಹಿಸಿರುವ ಪ್ರಿವಿ ಲೇಜು ಮೋಷನ್ ಇನ್ನೂ ಹಾಗೇ ಇದೆ. ನನಗನಿಸುವುದು ಇಲ್ಲಿ ಯಾವ ವಿಷಯಗಳನ್ನು ಹೇಳ ಬೇಕೋ ಅವಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಈಗಾಗಲೇ ಗೊತ್ತಾಗಿದೆ. ಈ ಸಭೆಯ ನಡ ವಳಿಕೆಗಳು ನಡೆಯುತ್ತಿರುವಾಗ ಏನೇನು ನಡೆದಿದೆ ಎನ್ನುವುದನ್ನೆಲ್ಲಾ ಇಲ್ಲಿರುವ ಸ್ಟೆನೋಗ್ರಾಫರು ಗಳು ತೆಗೆದುಕೊಂಡು ಬರೆದು ಇಟ್ಟಿದ್ದಾರೆ. ಅವನ್ನೆಲ್ಲಾ ನಾವು ಇನ್ನೂ ನಮ್ಮ ಕಡೆಗೆ ಕೊಡ ಬೇಕೆಂದು ಕೇಳಿಕೊಂಡಿಲ್ಲ. ಇದರ ವಿಚಾರದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಚಯ್ಯ

ನವರು ಹೇಳುವಾಗ ಇದನ್ನು 99 ವರ್ಷಗಳ ಲೀಸು ಮಾಡಿದ್ದೇವೆ ಎನ್ನುವ ನಿರ್ಣಯ ಆಗಿದೆಯೋ ಇಲ್ಲವೇ ಎನ್ನುವುದನ್ನು ಆಗಲೇ ಹೇಳಿದ್ದಾರೆ. ಯಾವುದರ ಬಗೆಗೆ ಎನ್ನುವುದನ್ನು ನಾವು ಇಲ್ಲಿ ಕೇಳ ಬೇಕಾಗಿದೆ. ಇದರಲ್ಲಿ ನಾಲ್ಕು ಜನ ಮಂತ್ರಿಗಳು ನಾಲ್ಕು ತರಹದಲ್ಲಿ ಹೇಳಿದ್ದಾರೆ. ಇದು ಸಭೆಯ ಹಕ್ಕುಬಾಧ್ಯತೆಗಳಿಗೆ ಲೋಪತರಬಹುದು ಎನ್ನುವ ಅನುಮಾನಗಳು ಬಂದಿವೆ. ಇದರಲ್ಲಿ ಏನೇನು ಹೇಳಿದ್ದಾರೆ ಇದರಲ್ಲೇನಾದರೂ ತಪ್ಪುಗಳಿವೆಯೇ ಸರಿಯೇ ಎನ್ನುವುದರ ಬಗ್ಗೆ ಹೇಳುವಾಗ ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲರವರು ಇದರಲ್ಲಿ ಕೊನೆಯ ನಿರ್ಣಯವಾಗಿದೆ ಎಂದೂ ತಿಳಿಸಿದ್ದಾರೆ. ಇವನ್ನೆಲ್ಲಾ ಇನ್‌ಕ್ಲೂಡ್ ಮಾಡಿ ನಾವು ಇಲ್ಲಿ ಪ್ರಿವಿಲೇಜು ಮೋಷನ್ ಕೊಟ್ಟಿ ದ್ದೇವೆ. ಅದು ಇನ್ನೂ ಸತ್ತಿಲ್ಲ. ಜೀವಂತವಾಗಿದೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು-ಕೋಟೆ).—ಮಾನ್ಯ ಸಭಾಪತಿಗಳೇ, ತಾವು ರೂಲ್ಸ್ ಪ್ರಕಾರ ನಡೆದುಕೊಳ್ಳಬೇಕು ಎಂದು ಹೇಳಿದಿರಿ. ನಿಮಗೆ ಹೇಳುವ ಹಕ್ಕು ಸಹ ಇದೆ. ನಾವು ಶಿರಸಾ ವಹಿಸಿ ನಡೆದುಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ನಾನು ಈ ಎಕ್ಸಿಬಿಷನ್ ಗ್ರೌಂಡ್ ವಿಚಾರವಾಗಿ ಸಲಹೆ ಕೇಳಲು ಒಬ್ಬ ಲಾಯರ್ ಮನೆಗೆ ಹೋಗಿದ್ದೆ. ಅವರು ಈ ರೀತಿ ಅನ್ಯಾಯಗಳು ಬಹಳ ಆಗುತ್ತಾ ಇವೆ, ಈ ಸರ್ಕಾರಕ್ಕೆ ಹೆಣ್ಣು ಗಂಡುಮಾಡುವುದಕ್ಕಾಗುವುದಿಲ್ಲ, ಗಂಡು ಹೆಣ್ಣು ಮಾಡು ವುದಕ್ಕಾಗುವುದಿಲ್ಲ. ಅದು ಒಂದನ್ನು ಬಿಟ್ಟು ಇನ್ನು ಏನು ಬೇಕಾದರೂ ಮಾಡುತ್ತಾರೆ ಎಂದು ಹೇಳಿದರು.

ಅಧ್ಯಕ್ಷರು.—ಅವರು ಕಾಲ್ ಅಟೆನ್ಷನ್ ನೋಟೀಸ್ ಕೊಟ್ಟಿದ್ದಾರೆ. ರೂಲ್ 312 ರ ಪ್ರಕಾರ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ ಮೇಲೆ ತಾವು ಮತ್ತೇನೂ ಹೇಳಬೇಕಾಗಿಲ್ಲ. ಈಗ ಬಡ್ಜೆಟ್ ಮೇಲಿನ ಚರ್ಚೆಗೆ ಉತ್ತರ ಹೇಳಬೇಕಾಗಿದೆ. ಟೈಂ ವೇಸ್ಟ್ ಆಗುತ್ತಾ ಇದೆ. ಅವರು ಬಡ್ಜೆಟ್ ಭಾಷಣದಲ್ಲಿ ಉತ್ತರ ಕೊಡದಿದ್ದರೆ ಟೈಂ ಕೊಡು ತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಟಿ. ಆರ್. ಶಾಮಣ್ಣ.—ಅವರು ಬಡ್ಜೆಟ್ ಸ್ಪೀಚ್‌ನಲ್ಲಿ ಲೋಕಾಭಿರಾಮವಾಗಿ ಉತ್ತರ ಹೇಳಿಬಿಟ್ಟರೆ ಸಾಲದು. ಇದರ ಬಗ್ಗೆ ವಿಶದವಾಗಿ ಚರ್ಚೆ ಆಗಬೇಕಾದ್ದು ಇದೆ. ಆದುದರಿಂದ ಇದಕ್ಕೆ ಪ್ರತ್ಯೇಕವಾಗಿ ಟೈಂ ಮಾಡಕೊಡಬೇಕು ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳು ತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸ್ವಾಮಿ, ಈ ಹೊತ್ತಿನ ಕೊಶ್ಚನ್‌ನಲ್ಲಿ ಐದು ಕೊಶ್ಚನ್ ಬಿಟ್ಟು ಹೋಗಿವೆ. ಹಾಗಾದರೆ ಇವೊತ್ತು ರಿಪ್ಲೈ ಮಾಡಿದ್ದರಲ್ಲಿ 15 ಕೊಶ್ಚನ್ ಇಂಪಾರ್ಟೆಂಟ್ ಉಳಿದದ್ದು ಐದು ಕೊಶ್ಚನ್ ಇಂಪಾರ್ಟೆಂಟ್ ಅಲ್ಲ ಎನ್ನುವುದನ್ನು ತಾವು ತೋರಿಸಿ ಕೊಟ್ಟ ಹಾಗಾಗುತ್ತದೆ. ಕೊಶ್ಚನ್ ಅವರ್‌ನಲ್ಲಿ ಕೆಲವು ಕೊಶ್ಚನ್‌ಗೆ 40 ನಿಮಿಷಗಳನ್ನು ತೆಗೆದು ಕೊಂಡು ಇನ್ನು ಉಳಿದ 20 ನಿಮಿಷಗಳಲ್ಲಿ ಎಲ್ಲಾ ಕೊಶ್ಚನ್‌ಗಳನ್ನೂ ಮುಗಿಸಿ ಬಿಟ್ಟರೆ ತಾವು ಇದರ ಬಗ್ಗೆ ಡಿಸ್ಕ್ರಿಮಿನೇಷನ್ ತೋರಿಸಿದ ಹಾಗಾಗುತ್ತದೆ. ಈ ಹೊತ್ತು ಐದು ಪ್ರಶ್ನೆಗಳು ಲ್ಯಾಪ್ಸ್ ಆಗಿದೆ. ಆದುದರಿಂದ ನಾನು ಹೇಳುವುದು ಈ ಐದು ಪ್ರಶ್ನೆಗಳು ಇಂಪಾರ್ಟೆಂಟ್ ಅಲ್ಲ ಎಂದು ಹೇಳುವುದಾದರೆ ನಾವು ಕೊಶ್ಚನ್ ಕಳುಹಿಸುವಾಗ ಅಥವಾ ಟೇಬಲ್ ಮೇಲೆ ಇಡುವ ಮುನ್ನ ಇದು ಇಂಪಾರ್ಟೆಂಟ್ ಅಲ್ಲ, ಇದನ್ನು ಡಿಸ್ ಅಲೋ ಮಾಡಿದ್ದೇವೆ ಎಂದು ಹೇಳಬಿಡಿ.

† ಶ್ರೀ ಎಸ್. ಚೆನ್ನಯ್ಯ.—ಸ್ವಾಮಿ, ಈ ವಿಷಯ ತಾವು ಕೊನೆಯಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ. ದಯವಿಟ್ಟು ಬೇಡಿ. ನಾಳೆ ದಿವಸ ಕೊಶ್ಚನ್ ಅವರ್ ಆದಮೇಲೆ ತೆಗೆದುಕೊಳ್ಳ ಬೇಕು. ಈಹೊತ್ತು 7–8 ಗಂಟೆ ಆದಮೇಲೆ ತೆಗೆದುಕೊಂಡರೆ ಎಲ್ಲರಿಗೂ ಆಯಾಸ ಆಗಿರುತ್ತೆ. ನಮಗೂ ಕೂತುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಹೆಚ್ಚಿಗೆ ಮಾತನಾಡ ಬೇಕು. ಕೆಲವು ವಿಷಯಗಳನ್ನು ಶಾಂತವಾಗಿ ಹೇಳಬೇಕು ಕಾರಣ ಏನೆಂದರೆ ಈಗಾಗಲೇ ಕಾಂಗ್ರೆಸ್ಸಿನವರು ಕಾಂಗ್ರೆಸ್ ಎಕ್ಸಿಬಿಷನ್‌ಗ್ರೌಂಡನ್ನು ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ ಎಂದು ಹೇಳುತ್ತಾರೆ. ಈ ಕಡೆಯವರು ಬೆಂಕಿ ಹಚ್ಚಬೇಕು ಎಂದು ತೀರ್ಮಾನ ಮಾಡಿದ್ದಾರೆ. ಹೀಗೆ ಬಿಸಿ ವಾತಾವರಣ ಇರುವುದರಿಂದ ಇದನ್ನು ನಾಳೆ ದಿವಸ ಕೊಶ್ಚನ್ ಅವರ ಆದಮೇಲೆ ತೆಗೆದುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಅಧ್ಯಕ್ಷರೇ, ನಾನು ಐದಾರು ಸಲ ಎದ್ದು ನಿಂತುಕೊಂಡೆ, ಗಟ್ಟಿಯಾಗಿ ಮಾತನಾಡುವುದಕ್ಕಾಗುವುದಿಲ್ಲ. ತಾವು ಈಗ ರೂಲಿಂಗ್ ಕೊಟ್ಟಿದ್ದೀರಿ. ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೀರಿ, ಅದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದೀರಿ. ಇದರಲ್ಲಿ ನಮಗೆ ಬಂದಿರುವ ತೊಂದರೆ ಏನೆಂದರೆ ಮಾನ್ಯ ಪುಟ್ಟಸ್ವಾಮಿಯವರು ಹೇಳಿದ್ದನ್ನೂ ಕೇಳಿದೆ.

(ಶ್ರೀ ಎಂ. ಎಸ್. ಕೃಷ್ಣನ್)

ರೂಲ್ 312 ರ ಪ್ರಕಾರ ಚರ್ಚೆ ಆಗಿ ಅಲ್ಲಿಗೇ ನಿಂತು ಹೋಗುತ್ತದೆ ರೂಲ್ 63ರ ಪ್ರಕಾರ ಕಾಲ್ ಅಟೆನ್‌ಷನ್ ನೋಟೀಸ್‌ಗೆ ಸ್ಟೇಟ್‌ಮೆಂಟ್ ಕೊಡುತ್ತಾರೆ, ಅಲ್ಲಿಗೇ ನಿಂತು ಹೋಗುತ್ತದೆ. ಕಾಂಗ್ರೆಸ್ ವಸ್ತು ಪ್ರದರ್ಶನ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ, ನಿಜ. ಹಣ ದುರುಪಯೋಗ ಮಾಡುತ್ತಿದ್ದಾರೆ, ಪಕ್ಷಕ್ಕೆ ದುರುಪಯೋಗ ಮಾಡುತ್ತಿದ್ದಾರೆ ಎನ್ನುವ ಭಾರಿ ಆರೋಪವನ್ನು ಜನ ಪದೇ ಪದೇ ಮಾಡುತ್ತಿದ್ದಾರೆ. ಹೀಗೆ ಮಾಡುತ್ತಿದ್ದರೂ ಕೂಡ ಸರ್ಕಾರದವರು ಕಾಂಗ್ರೆಸ್ ಪಕ್ಷದವರೇ ಆಡಳಿತ ನಡೆಸುವವರಾಗಿರುವುದರಿಂದ ತಮಗೆ ಇಷ್ಟಬಂದ ಹಾಗೆ ಮಾಡಿಕೊಳ್ಳುತ್ತಿದ್ದಾರೆ. ಈಗಲೂ ಸಹ ಎರಡೂವರೆ, ಮೂರು ಲಕ್ಷಕ್ಕೆ ಕೊಡಬೇಕು ಎಂದು ಇದ್ದಾರೆ. Is it not a matter of public impertance ಎನ್ನುವ ಪ್ರಶ್ನೆ ಬರುತ್ತದೆ. ಸ್ಟಾಲ್‌ಗಳು ಈಗಾಗಲೇ ಬರುತ್ತಿವೆ, ಅಂಗಡಿಗಳನ್ನು ಕಟ್ಟುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಇದನ್ನು ಅರ್ಜೆಂಟ್ ಪಬ್ಲಿಕ್ ಇಂಪಾರ್ಟೆನ್ಸ್ ಆಗಿ ಪರಿಶೀಲಿಸಬೇಕು ಎಂದು ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ. ಹಾಗೆ ಮಾಡಿದರೆ ಇಂದು ಸರ್ಕಾರದವರು ಏನು ಕಾರ್ಯ ಮಾಡುವುದಕ್ಕೆ ಹೊರಟಿದ್ದಾರೆ, ಸಹಾಯ ಮಾಡುವುದಕ್ಕೆ ಹೊರಟಿದ್ದಾರೆ, ಹಣ ದುರುಪಯೋಗ ಮಾಡುವುದಕ್ಕೆ ಹೊರಟಿದ್ದಾರೆ, ಲೂಟಿ ಮಾಡುವುದಕ್ಕೆ ಹೊರಟಿದ್ದಾರೆ ಅದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಈ ವಿಷಯಗಳನ್ನು ಪರಿಶೀಲಿಸಬೇಕು ಎಂದು ಹೇಳುತ್ತೇನೆ.

Mr. SPEAKER.—I have already explained that after taking all facts into consideration the matter has beeu disallowed. Therefore, it is not open to any hon. Member to raise any question about it. Therefore, as an alternative I have accepted the suggestion that a notice under rule 312 be given and I shall allow it.

As regards the point raised by the hon. Member Sri Sadasivappa Patil, I agree that all questions should be answered. That is why I make a request to all the hon. Members to exercise restraint while putting supplementaries. When I restrict supplementaries, some challenging attitude is taken towards the Chair. I shall try to see that all questions are answered without distinction and if it is not possible, I shall reduce the number and put only 10 questions per day.

Collection of Land Revenue from Raiyats in famine affected areas of Tumkur

Sri B. P. GANGADHAR.—I have given notice under rule 59 to raise a discussion on a matter with respect to tyranny and coercion to which all the ryots are subjected to in Tumkur District—a famine affected area. They have been compelling 'every' ryot to pay land revenue. For the last four years there was famine in almost all the taluks of the District and they are incapable of paying any land revenue.

Mr. SPEAKER.—When did the hon. Member give notice?

Sri B. P. GANGADHAR.—Yesterday.

Mr. SPEAKER.—I shall find out.

ಶ್ರೀ ಎಸ್. ಶಿವಪ್ಪ.—ಮಾನ್ಯ ಗಂಗಾಧರ್ ಅವರು ಏನು ವಿಷಯವನ್ನು ತಂದಿದ್ದಾರೆ ಅದು ಇಡೀ ದೇಶಕ್ಕೇ ವ್ಯಾಪಕವಾಗಿದೆ. ಬೇರೆ ಕಡೆಗಳಲ್ಲಿಯೂ ಅದೇ ರೀತಿ ಇದೆ. ಇದನ್ನು ಕೂಡ ಅಧ್ಯಕ್ಷರು ಯೋಚನೆ ಮಾಡಬೇಕು.

ಶ್ರೀ ಬಿ. ಪಿ. ಗಂಗಾಧರ್.—ಈಗ ಪರಿಸ್ಥಿತಿ ಏನಾಗಿದೆ ಎಂದರೆ ಎಲ್ಲ ರೆವೆನ್ಯೂ ಇನ್‌ಸ್ಪೆಕ್ಟರುಗಳೂ ಹಳ್ಳಿಗಳಿಗೆ ಹೋಗಿದ್ದಾರೆ. They have been taking the assistance of police to see that land revenue is paid. ನಾಲ್ಕು ವರ್ಷದಿಂದ ಸಸ್‌ಪೆಂಡ್ ಮಾಡಿಕೊಂಡು ಬಂದರು. ಸಾರ್ವತ್ರಿಕ ಚುನಾವಣೆಗಳಾದುವು, ತಾಲ್ಲೂಕು ಬೋರ್ಡ್ ಚುನಾವಣೆಗಳಾದುವು. ಅದಕ್ಕಾಗಿ ಸಸ್‌ಪೆಂಡ್ ಮಾಡಿಕೊಂಡು ಬಂದರು. ಈಗ ನಾಲ್ಕು ವರ್ಷದ್ದೂ ಒಟ್ಟಿಗೇ ಕೊಡಿ ಎಂದು ಕೇಳುತ್ತಾರೆ. ಹಳ್ಳಿಗಳಲ್ಲಿ ರೈತರು ಉಳಿಯುವ ಹಾಗೆ ಇಲ್ಲ. It is a very serious matter and it is a very urgent matter. This may kindly be taken up.

Grant of Compensation to victims of Siva Sena excesses in Bombay

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸದ ಪತ್ರಿಕೆಗಳಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಗೆ ನಮ್ಮ ಪ್ರಧಾನ ಮಂತ್ರಿಗಳಾದ ಇಂದಿರಾ ಗಾಂಧಿಯವರು ಮತ್ತು ಮುಂಬೈ ರಾಜ್ಯದ ಮುಖ್ಯ ಮಂತ್ರಿಯವರಾದ ವಿ. ಪಿ. ನಾಯಕ್ ಅವರು ಒಂದು ಪತ್ರ ಬರೆದು ಶಿವಸೇನೆ ಗಲಭೆಯ ಸಂತ್ರಸ್ತರಿಗೆ ಪರಿಹಾರವನ್ನು ನೀಡುವ ಪ್ರಶ್ನೆ ಉದ್ಭವವಾಗುವುದಿಲ್ಲ, ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಶಿವ ಸೇನೆಯ ಗಲಭೆ ವಿಚಾರದಲ್ಲಿ ಈ ಮನೆಯಲ್ಲಿ ಚರ್ಚೆಯಾದಾಗ ಅದಕ್ಕೆ ಉತ್ತರ ಕೊಡುತ್ತ ಕನ್ನಡಿಗರು ಎಲ್ಲೇ ಇರಲಿ, ಅವರ ಆಗುಹೋಗುಗಳಲ್ಲಿ ನಾನು ಸಂಪೂರ್ಣ ಜವಾಬ್ದಾರಿಯಾಗಿದ್ದೇನೆ, ಅವರಿಗೆ ಪರಿಹಾರ ಕೊಡುವ ವಿಷಯದಲ್ಲಿ ಕೂಡ ಸರ್ಕಾರ ಆಲೋಚನೆ ಮಾಡುತ್ತಿದೆ. ಒಂದು ವೇಳೆ ಅಲ್ಲಿಯ ಸರ್ಕಾರದವರು ಪರಿಹಾರ ಕೊಡದೆ ಇದ್ದಾಗ ಆ ವಿಷಯದಲ್ಲಿ ಏನು ಮಾಡಬೇಕು ಎಂಬುದನ್ನು ನೋಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಕನ್ನಡಿಗರ ಸುಮಾರು 57 ಉಡುಪಿ ಹೋಟೆಲುಗಳಿಗೆ ನಷ್ಟವಾಗಿದೆ, ಅವನ್ನು ಸುಟ್ಟಿದ್ದಾರೆ. ಸಾಧಾರಣವಾಗಿ 2 ಕೋಟಿಗೆ ಮೇಲ್ಪಟ್ಟು ನಷ್ಟವಾಗಿದೆ, ಈ ಬಗ್ಗೆ ದಿನವೂ ಕಾಗದ ಮತ್ತು ಟೆಲಿಗ್ರಾಂ ಬರುತ್ತಿದೆ, ಮುಂಬಯಿನಲ್ಲಿರುವ ನಮ್ಮ ಕನ್ನಡಿಗರು ಬೀದಿ ಭಿಕಾರಿಗಳಾಗಿದ್ದಾರೆ. ಸರಕಾರದ ನಿರ್ದಿಷ್ಟವಾದ ನಿಲುವನ್ನು ಈ ಮಾನ್ಯ ಸಭೆಗೆ ತಿಳಿಸಬೇಕು, ಸಂತ್ರಸ್ತರಿಗೆ ಪರಿಹಾರ ಕೊಡುವುದರ ಬಗ್ಗೆ ಸರಕಾರದ ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ತಿಳಿಸಬೇಕೆಂದು ಅಧ್ಯಕ್ಷರು ಹೇಳಬೇಕು, ಹೇಳಿ ಮುಖ್ಯ ಮಂತ್ರಿಗಳಿಂದ ಈ ವಿಚಾರದಲ್ಲಿ ಒಂದು ಹೇಳಿಕೆ ಕೊಡಿಸಬೇಕು ಎಂದು ಒತ್ತಾಯ ಮಾಡುತ್ತೇನೆ.

Sri B. P. GANGADHAR.—In this connection, the Prime Minister has categorically stated that payment of compensation to those who suffered in the recent Shiv Sena violence in Bombay, does not arise.

ಅಧ್ಯಕ್ಷರು.—ಅದು ಎಲ್ಲರಿಗೂ ಗೊತ್ತೇ ಇದೆ.

ಶ್ರೀ ಎಸ್. ಚನ್ನಯ್ಯ.—ನನ್ನ ಸೂಚನೆಯೇನಾಗಿದೆ?

ಅಧ್ಯಕ್ಷರು.—ನೋಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಶ್ರೀ ಭಾಸ್ಕರಶೆಟ್ಟರು ಎತ್ತಿರುವ ವಿಷಯ ಬಹಳ ಗಹನವಾದುದು.

ಅಧ್ಯಕ್ಷರು.—ಇಂದು ಚರ್ಚೆಗೇನು ವಿಷಯವಿದೆ ಅದನ್ನು ಮೊದಲು ತೆಗೆದುಕೊಳ್ಳೋಣ. ರೂಲ್ 312ರ ಪ್ರಕಾರ ನೋಟೀಸ್ ಕೊಡಿ ಎಂದು ಹೇಳಿದ್ದೇನೆ. ಸರಕಾರವಾದರೂ ಸಮಾಚಾರ ತರಿಸಿಕೊಂಡು ವಿಚಾರಮಾಡಿ ಹೇಳಬೇಕಾಗುತ್ತದೆ. ಈಗಲೇ ಉತ್ತರ ಕೊಡಿ ಎಂದು ಹೇಳುವುದಕ್ಕಾಗುತ್ತದೆಯೇ?

Sri S. SIVAPPA.—I only request the Government to give a reply on this point specifically while replying on the Budget Debate.

ಅಧ್ಯಕ್ಷರು.—ಅದಕ್ಕೆ ಒಂದು ಪ್ರೊಸೀಜರ್ ಏನಿದೆ ಅದನ್ನು ಅನುಸರಿಸಬೇಕು. ಬರೆದು ಕೊಟ್ಟರೆ ನಾನು ಅದನ್ನು ಸರಕಾರಕ್ಕೆ ಕಳಿಸಿಕೊಡುತ್ತೇನೆ. ನಂತರ ಸರಕಾರದವರು ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್. – ಶ್ರೀ ಭಾಸ್ಕರಶೆಟ್ಟರು ಹೇಳುವುದು ಬಹಳ ಪ್ರಾಮುಖ್ಯವಾದ ವಿಚಾರ. ಅವರು ತೊಂದರೆಯಾಗಿರುವುದನ್ನು ಗಮನಕ್ಕೆ ತಂದರು. ತಾವು ನಿಧಾನಮಾಡ ಬಾರದು, ಅತಿ ಶೀಘ್ರವಾಗಿ ಸರಕಾರ ಈ ವಿಚಾರದಲ್ಲಿ ಹೇಳಿಕೆ ಕೊಡುವಂತೆ ಒತ್ತಾಯಮಾಡ ಬೇಕು. ರೂಲ್ 63ರ ಪ್ರಕಾರ ನಾನೊಂದು ಸೂಚನೆ ಕಳಿಸಿದ್ದೆ. ಅದೇನಾಯಿತು ಎಂಬುದು ಗೊತ್ತಿಲ್ಲ. ಲೋಕಸಭೆಯಲ್ಲಿ ಪ್ರಧಾನಮಂತ್ರಿಗಳು ಮಹಾಜನ್ ವರದಿಯ ಬಗ್ಗೆ ಹೇಳಿಕೆ ಕೊಟ್ಟಿರುವ ಬಗ್ಗೆ ರೂಲ್ 63ರ ಪ್ರಕಾರ ನಾನು ಸೂಚನೆ ಕೊಟ್ಟಿದ್ದೆ. ಅದರ ವಿಚಾರ ಗೊತ್ತಾಗಲಿಲ್ಲ.

ಅಧ್ಯಕ್ಷರು.—ತಮಗೆ ಉತ್ತರ ಬಂದಿಲ್ಲವೆ ?

ಶ್ರೀ ವಾಟಾಳ್ ನಾಗರಾಜ್.—ಇಲ್ಲ.

ಅಧ್ಯಕ್ಷರು.—ಪ್ರೆಸ್‌ನಲ್ಲಿ ಬರುವುದನ್ನು ತೆಗೆದುಕೊಂಡು ಕಾಲ್‌ಅಟೆನ್‌ಷನ್ ನೋಟೀಸ್ ಕೊಡುವುದಕ್ಕೆ ಬರುವುದಿಲ್ಲ. ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ, ಮಹಾಜನ್ ಕಮಿಷನ್ ವರದಿಯೇನಿದೆ ಅದನ್ನು ಇರುವ ಹಾಗೆ ಒಪ್ಪಿಕೊಳ್ಳಬೇಕು ಎಂದು ಸರಕಾರ ಒತ್ತಾಯಮಾಡಿದೆ. ಆದುದರಿಂದ ತಮ್ಮ ನೋಟೀಸಿಗೆ ನಾನು ಸಮ್ಮತಿ ಕೊಟ್ಟಿಲ್ಲ. ಅದರಮೇಲೆ ಮಾತನಾಡಬಾರದು Now the Calling Attention notice.

Calling Attention to Matters of Urgent Public Importance

(*i*) *re* : The removal of the foundation stone at Alamatti (Upper Krishna Project)

ಶ್ರೀ ಎಸ್. ಎಸ್. ಅರಕೇರಿ (ಬೆಳ್ಳೊಳ್ಳಿ).—ಆಲಮಟ್ಟಿ ಯೋಜನೆಗೆ ಶ್ರೀ ಲಾಲ್‌ಬಹದ್ದೂರು ಶಾಸ್ತ್ರಿಗಳು ಅಸ್ತಿಭಾರಶಿಲೆಯನ್ನು ಹಾಕಿದ್ದರು. ವಿಶ್ವಬ್ಯಾಂಕಿನವರು ಅಲ್ಲಿಗೆ ಭೇಟಿ ಕೊಟ್ಟಾಗ ಅಸ್ತಿಭಾರ ಶಿಲೆಯನ್ನು ತೆಗೆದುಹಾಕಲಾಗಿದೆ. ಅದರ ಸಲುವಾಗಿ ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ಈ ವಿಷಯವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

† Sri D. PARAMESWARAPPA (Deputy Minister for Major Irrigation).—Sir, there is nothing mysterious or illegal about the removal of the foundation-stone.

Mr. SPEAKER.—The Hon. Deputy Minister may read the written statement, if he has one.

Sri D. PARAMESWARAPPA.—This written statement will satisfy my learned friend :

With a view to facilitating movement of vehicles for construction purposes, the foundation stone has been removed and preserved in the Stores of the Project. It is merely accidental that the preservation of the foundation stone in the Stores was made just at the time of the visit of the World Bank Team to the Project area.

The stone will be fixed at a suitable place after the construction of the dam is over.

(ii) *re*: Spread of Monkey disease in four Taluks of Shimoga District.

SRI K. H. SRINIVAS (Sagar).—Sir, I call the attention of the Minister for Health to the flaring up of Kyasanur forest disease (Monkey Disease) in some Taluks of Shimoga District.

†SRI Y. RAMAKRISHNA (Minister for Health).—Kyasanur Forest Disease is a Virus Disease restricted to a small part of Sagar and Sorab Taluks of Shimoga District. The total area in which human cases have occurred does not exceed 600 Sq. Miles. Even in this area, it is concentrated in a few localities. The population of the entire affected area does not exceed 20,000. This disease also occurred in three villages of Shikaripur Taluk during the year 1968; there were three attacks but no deaths. No cases have been reported in this Taluk since August 1968.

The disease was first detected in 1957 when an abnormal monkey mortality was reported in the Forest Area of Sagar and Sorab Taluks. Due to the frequent occupational contact of the villagers with the forest area, the disease is found to be transmitted through the bite of Vector ticks that inhabit the forests. The human beings acquire the ticks when they go to the forest.

While no period of the year may be free from the disease, the period January to June (drier-months) accounted for most of the cases with peaks in March-April. There have been considerable variations in the number of human cases from year to year.

In addition to monkeys, other smaller animals and birds have been found to harbour the virus and the natural cycle occurs in them-and keep up the continuity of infection.

Prevention of tick bites and destruction of ticks in the forest require large scale organisations and repeated insecticide applications. Village cattle have to be kept free of the ticks to keep the human infection under control.

Treatment of human cases is at present only symptomatic as no specific drug to destroy the virus in the human cases has been discovered. Attempts are being made to discover a suitable drug.

There has been an increased incidence of human cases of Kyasanur Forest Disease in Sagar and Sorab areas of Shimoga District during the month of December 1968 and January 1969 and February 1969 (up to 15-2-1969) compared to the same period of the previous year, *viz.*, December 1967, and January and February 1968 as can be seen from the enclosed statement In the previous year, during the period December 1967 to February 1968, there were 80 human cases with one death and 60 monkey deaths, but in the current year from 1st December 1968 to 15th February 1969, there have been 197 human cases with 8 deaths and 68 monkey deaths. Out of the 197 cases, 93 cases were found positive for Kyasanur Forest Disease Virus on

(SRI Y. RAMAKRISHNA)

Laboratory examination. A larger number of villages have been affected this year but most of them are within the previously known infected zone.

The following measures have been undertaken for control of spread of the disease and treatment of human cases.

(1) Notification of the infected areas in Sagar and Sorab Taluks and keeping the villagers informed about monkey deaths and dissuading the villagers from entering such infected areas.

(2) Transportation and hospitalisation of human cases and early treatment in the nearest dispensary or hospital are undertaken. Necessary drugs like glucose, saline, anti coagulents and A.P.C. have been supplied to the dispensaries and hospitals in the area for symptomatic treatment of cases. There are three hospitals and 8 dispensaries in Sagar Taluk and 6 dispensaries in Sorab Taluk for treatment of Kyasanur Forest disease cases in addition to other diseases. In the hospitals and Primary Health Centres there are 1 0 beds available for treatment of Kyasanur Forest Disease cases as well as other diseases, preference being given to Kyasanur Forest Disease cases. During January and February 1969, 81 cases of Kyasanur Forest Disease were admitted and 24 of them have been discharged so far up to 15th February 1969. The remaining cases are undergoing treatment.

2-00 P.M.

An experimental study for tick control with BHC was undertaken during the period January to May 1968 and this has shown good results. Orders will be issued for sanctioning a scheme to take up large scale experiments for control of ticks in 1969. The Director, Virus Research Centre, Poona has opined that it is adviasable to take up these measures from 1st December 1969 onwards in order to keep the ticks under control and thus prevent occurrence of human cases in the next season. He has also stated that it is rather too late to take up tick control measure now as it will not yield good results and as the prevalance of Nymphal stage of the ticks has already reached its peak.

With regard to prevention of occurrence of human cases a killed vaccine prepared by Haffkine Institute, Bombay, was tried last year and did not yield good results as the immunity built up by human being was of a low order. It was not fit for field use. A live vaccine which is under preparation requires elaborate studies and it is hoped that a vaccine considered safe for human use may be made available by the end of 1969 by the Virus Research Centre, Poona. This will be a programme to vaccinate 10,000 persons in December 1969 and January 1970.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೇ, ನನಗೆ ಈಗತಾನೆ ಮಂತ್ರಿಗಳು ಮಾಡಿದ ಸ್ಟೇಟ್‌ಮೆಂಟಿನ ಬಗ್ಗೆ ಒಂದು ವಿವರಣೆ ಬೇಕಾಗಿದೆ—ಅದೇನೆಂದರೆ ಈಗ ತಲೆದೋರಿರತಕ್ಕ ಫಾರೆಸ್ಟ್

ರೋಗವನ್ನು ಸಂಪೂರ್ಣವಾಗಿ ಗುಣಪಡಿಸುವುದಕ್ಕೆ ತಕ್ಕ ಔಷಧಿಗಳಿನ್ನೂ ಸಿದ್ಧವಾಗಿಲ್ಲ ಎಂದು ಹೇಳಿದರು. ಅದಕ್ಕಾಗಿ ಈ ರೋಗದ ಹಾವಳಿಯನ್ನು ತಡೆಗಟ್ಟತಕ್ಕ ಉದ್ದೇಶದಿಂದ ಈ ರೋಗದ ಚಿಕಿತ್ಸೆ ಬೆಡ್ಡುಗಳ ಸಂಖ್ಯೆಯನ್ನು ಇನ್ನೂ ಜಾಸ್ತಿ ಮಾಡಬೇಕು ಎನ್ನುವುದು ಒಂದು ; ಇನ್ನೊಂದು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿಗೆ ಬೆಡ್‌ಗಳನ್ನು ಒದಗಿಸುವುದಕ್ಕೆ ಏರ್ಪಾಡನ್ನು ಮಾಡುವುದು— ಈ ಎರಡಕ್ಕೂ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತಾರೆಯೇ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

SRI Y. RAMAKRISHNA.—Necessary arrangements have already been made and if anything more is required we are prepared to supply.

Budget Estimates for 1969-70

(General Discussion)

(Debate Continued)

†ಶ್ರೀ ಬಾಪೂಗೌಡ (ಶಹಪೂರ್).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಈ ಸಭೆಗೆ ಒಪ್ಪಿಸಿರತಕ್ಕ ಆಯವ್ಯಯ ಪಟ್ಟಿಯ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಇಚ್ಛೆ ಪಡುತ್ತೇನೆ.

1969–70ರ ಈ ಆಯವ್ಯಯ ಪಟ್ಟಿಯು ಒಂದು ಖೋತಾಪಟ್ಟಿಯಾಗಿದ್ದರೂ ಇದು ತೆರಿಗೆರಹಿತವಾದಂಥ ಪಟ್ಟಿಯಾಗಿದೆ. ಈ ಪಟ್ಟಿಯನ್ನು ನಾವು 1965 ರಿಂದ 1969ರ ವರೆಗೂ ಅವಲೋಕನ ಮಾಡಿದರೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಿರುವಂತೆ ಕಂಡುಬರುತ್ತದೆ. 1965 ರಲ್ಲಿ 170 ಕೋಟಿ 40 ಲಕ್ಷ ಇದ್ದದ್ದು 1969ಕ್ಕೆ ಇದು 194 ಕೋಟಿಗೇರಿದೆ ಎಂದರೆ ಅದು ತಪ್ಪಾಗುವುದಿಲ್ಲ. ಈ ವರ್ಷಕ್ಕೆ ಎಲ್ಲಾ ಬಾಬುಗಳಿಂದಲೂ ಸರ್ಕಾರಕ್ಕೆ ಬರತಕ್ಕ ವರಮಾನ 213 ಕೋಟಿ ಎಂದು ತೋರಿಸಿದ್ದಾರೆ. ಅಂದರೆ 1965 ರಿಂದ 1969 ರವರೆಗೆ ಸುಮಾರು 70 ಕೋಟಿ ರೂಪಾಯಿಗಳ ಹೆಚ್ಚು ಆದಾಯವನ್ನು ನಾವು ಇಂದು ಕಾಣುತ್ತಿದ್ದೇವೆ. ಆದಾಗ್ಯೂ ಏರುತ್ತಿರುವ ಜನಸಂಖ್ಯೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಿದರೆ ನಾವು ಇನ್ನೂ ನಮ್ಮ ಆರ್ಥಿಕ ಅಥವಾ ಸಾಮಾಜಿಕ ಸಮಸ್ಯೆಗಳನ್ನು ಸಂಪೂರ್ಣವಾಗಿ ಬಗೆಹರಿಸಿಕೊಂಡಹಾಗೆ ಕಾಣುತ್ತಿಲ್ಲ. ಆದ್ದರಿಂದ ನಮಗೆ ಇನ್ನೂ ಹೆಚ್ಚಿನ ಆದಾಯದ ಅಗತ್ಯವಿದೆ ಎಂಬುದು ಒಪ್ಪತಕ್ಕ ವಿಷಯ. ಆದರೆ ನಮ್ಮ ಸರ್ಕಾರದವರು 1966–67 ರಲ್ಲಿ ಪಂಚವಾರ್ಷಿಕ ಯೋಜನೆಗೆ ಕೊಟ್ಟ ನಿಗಾವನ್ನು ಆ ಹಿಂದಿನ 1–2 ಮತ್ತು 3 ನೆ ಪಂಚವಾರ್ಷಿಕ ಯೋಜನೆಗಳಿಗೆ ಉಳಿದ ವರ್ಷಗಳಲ್ಲಿ ಕೊಡಲಿಲ್ಲ. ಅದರಿಂದ ನಮ್ಮ ವರ್ತಕತನದ ಆರ್ಥಿಕ ಪರಿಸ್ಥಿತಿ ಸ್ವಲ್ಪ ಕುಂಠಿತವಾಗಿದೆ. ರಾಜ್ಯ ಸರ್ಕಾರದವರು ಒಕ್ಕಲುತನಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಆದಷ್ಟುಮಟ್ಟಿಗೆ ಹಳ್ಳಿಗಾಡಿನಲ್ಲಿರತಕ್ಕ ರೈತನ ಆರ್ಥಿಕ ಮಟ್ಟವನ್ನು ಅಭಿವೃದ್ಧಿಪಡಿಸಲು ಹೇರಳವಾಗಿ ಹಣವನ್ನು ಕೊಡುತ್ತಿದ್ದಾರೆ. ಸುಮಾರು 3–4 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ನೀರಾವರಿ ಪರ್ಸೆಂಟೇಜನ್ನು ಹೆಚ್ಚುಮಾಡತಕ್ಕ ಪ್ರಯತ್ನಮಾಡಿದ್ದರೂ ಕೂಡ ಅದು ತೃಪ್ತಿಕರವಾಗಿಲ್ಲ. 1960 ರಿಂದ ಸಣ್ಣ ನೀರಾವರಿ ಯೋಜನೆ ಮತ್ತು ದೊಡ್ಡ ನೀರಾವರಿ ಯೋಜನೆ ಮತ್ತು ಬಾವಿಗಳ ಪಂಪುಸೆಟ್ಟುಗಳನ್ನು ಹಂಚುವಿಕೆ—ಈ ಕಾಮಗಾರಿಗಳನ್ನು ಕೈಗೊಂಡರೂ ಕೂಡ ಕೇವಲ ಸೇಕಡ 10 ಕ್ಕೆ ಇವತ್ತು ಮುಟ್ಟಿದ್ದೇವೆ. ಕೇವಲ 20 ಲಕ್ಷ ಎಕರೆ ನೀರಾವರಿಗೆ ಬಂದು ಮುಟ್ಟಿದ್ದೇವೆ. ಆದರೂ ತೃಪ್ತಿಕರವಾಗಿಲ್ಲ, ಬಾವಿಗಳ ಮುಖಾಂತರ ಹಾಗೂ ಪಂಪುಸೆಟ್ಟುಗಳ ಮುಖಾಂತರ ಸಣ್ಣ ನೀರಾವರಿ ಯೋಜನೆಗಳನ್ನು ಮೈಸೂರು ರಾಜ್ಯದಲ್ಲಿ ಕೈಕೊಂಡರೂ ಕೂಡ ತ್ವರಿತ ರೀತಿಯಿಂದ ಒಕ್ಕಲಗರಿಗೆ ಅದರ ಪ್ರತಿಫಲ ತೀವ್ರವಾಗಿ ಮುಟ್ಟಿಲ್ಲ.

ಇನ್ನೊಂದು ವಿಷಯ. ಈ ದಿವಸ ಯಾವ ಒಕ್ಕಲಿಗ ತನ್ನ ಭೂಮಿಯಲ್ಲಿ ಬಾವಿ ಇದೆ, ಯಾವನಿಗೆ 4–5 ಎಕರೆ ಭೂಮಿ ಇದೆ, ಅವನಿಗೆ ಬೇಕಾಗಿರತಕ್ಕ ಪಂಪುಸೆಟ್ಟು ಮತ್ತು ಬೇಕಾದಂಥ ಅನುಕೂಲತೆಗಳನ್ನು ಅವನು ಕೇಳಿದಾಕ್ಷಣ ತೀವ್ರಗತಿಯಲ್ಲಿ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದಾರೆ. ಒಂದು ವೇಳೆ ನಾಲೆಗಳ ಅನುಕೂಲ ಇದ್ದರೂ ಕೂಡ, ಅಲ್ಲಿ ನಾಲೆಯ ದಂಡೆಯಲ್ಲಿರತಕ್ಕ ಒಕ್ಕಲಿಗ ತನ್ನ ಭೂಮಿಯಲ್ಲಿ ಬಾವಿ ಇದೆ, ತನಗೆ ಪಂಪುಸೆಟ್ಟು ಬೇಕೆಂದು ಹೇಳಿದ ಕೂಡಲೇ

(ಶ್ರೀ ಬಾಪೂಗೌಡ)

ಪಂಪುಸೆಟ್ಟುಗಳನ್ನು ನಿರ್ದಿಷ್ಟವಾಗಿ ಕೊಟ್ಟು ಅವನಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಕೊಡಿಸಿ ಆ ಒಕ್ಕಲಿಗನಿಗೆ ನೀರನ್ನು ತ್ವರಿತವಾಗಿ ಒದಗಿಸುವ ಏರ್ಪಾಡು ಮಾಡಿದ್ದಾರೆ. ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಮುಖಾಂತರ ಪಂಪುಸೆಟ್ಟುಗಳನ್ನು ಯಾವ ರೀತಿಯಾಗಿ ಪಡೆಯಬೇಕೆಂಬ ಜ್ಞಾನ ಅಷ್ಟಾಗಿ ರೈತರಿಗೆ ಇಲ್ಲ. ಅವನ್ನು ತೀವ್ರಗತಿಯಿಂದ ಪಡೆಯುವ ಶಕ್ತಿ ಅನೇಕ ರೈತರಿಗೆ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಆದಷ್ಟುಮಟ್ಟಿಗೆ ಸರ್ಕಾರ ಹೆಚ್ಚು ಹಣ ಕೊಡಬೇಕು. ಡೀಸಲ್ ಇಂಜನ್ನಿಗೆ ಬೇಕಾದಷ್ಟು ಹಣವಿದೆ. ಆದರೂ ಕೂಡ ಅದನ್ನು ಪಡೆಯುವುದಕ್ಕೆ ಮಾಡಿರುವ ಪ್ರೊಸೀಜರ್ ಹೆಚ್ಚು ಕಂಬರ್‌ಸಂ ಆಗಿರುವುದರಿಂದ ರೈತ ಅದನ್ನು ಜಾಗ್ರತೆ ಪಡೆಯುವುದಕ್ಕಾಗುವುದಿಲ್ಲ. ಆದಷ್ಟುಮಟ್ಟಿಗೆ ನೀರಾವರಿ ಪ್ರಶ್ನೆ ಬಂದಾಗ್ಗೆ ಎಲ್ಲಿ ನಾಲೆಗಳು, ಬಾವಿಗಳು ಇವೆಯೋ ಅಲ್ಲಿ ಬೇಕಾದಷ್ಟು ಪಂಪುಸೆಟ್ಟುಗಳನ್ನು ರೈತರಿಗೆ ಜಾಗ್ರತೆಯಾಗಿ ಒದಗಿಸಿಕೊಡಬೇಕು. ಆಗ ನಾವು ಈ ಬಾಬಿಗೆ ಒದಗಿಸಿರತಕ್ಕ ಹಣ ಸದುಪಯೋಗವಾಗಿ ಆಹಾರ ಯೋಜನೆಗಳು ಸಫಲವಾಗುತ್ತವೆ. ಸುಮ್ಮನೆ ರೈತರಿಗೆ ಬ್ಯಾಂಕಿನ ಮುಖಾಂತರ ಕೊಡುವುದಕ್ಕೆ ಹಣವಿದೆ, ಸಾಕಾದಷ್ಟು ಕರೆಂಟ್, ಪಂಪುಸೆಟ್ಟುಗಳು ಇವೆಯೆಂದು ಹೇಳಿದರೆ ಅದರಿಂದೇನೂ ಆಗುವುದಿಲ್ಲ. ನಾವು ಕೊಟ್ಟ ಹಣ ರೈತನ ಕೈಗೆ ಸೇರಬೇಕು. ಇಲ್ಲದಿದ್ದರೆ ನಾವು ಯಾವ ಒಂದು ದೃಷ್ಟಿಯಿಂದ ರೈತನ ಏಳಿಗೆ ಮಾಡಬೇಕೆಂದು ನಿಂತಿದ್ದೇವೋ ಅದು ಸಫಲವಾಗುವುದಿಲ್ಲ. ಆದರೂ ಕೂಡ ಸರ್ಕಾರದವರು ತೀವ್ರಗತಿಯಿಂದ ರೈತರಿಗೆ ಹಣ ಕೊಡುವ ವ್ಯವಸ್ಥೆ ಮಾಡಬೇಕು. ರಾಜ್ಯದಲ್ಲಿ ಸುಮಾರು 400 ಕೋಟಿ ರೂಪಾಯಿಯ ಯೋಜನೆಯನ್ನು ಕೈಗೊಳ್ಳಬೇಕೆಂದಿದ್ದಾರೆ. ಕೃಷ್ಣಾ ಯೋಜನೆ, ಘಟಪ್ರಭಾ ಯೋಜನೆ ಎಲ್ಲಾ ಇದೆ. ಆದರೆ ನಮ್ಮ ದುರ್ದೈವದಿಂದ ನಮ್ಮ ರಾಜ್ಯ ಸರ್ಕಾರದವರು ಯಾವ ರೀತಿಯಿಂದ ಇದನ್ನೆಲ್ಲಾ ಸಂಪೂರ್ಣ ಮಾಡಿ ರಾಜ್ಯದ ಆರ್ಥಿಕ ಮಟ್ಟವನ್ನು ಹೆಚ್ಚು ಮಾಡಬೇಕೆಂದು ಒಂದು ಪಾಲಿಸಿ ಇಟ್ಟುಕೊಂಡಿದ್ದಾರೋ ಆ ರೀತಿಯಲ್ಲಿ ಸಾಗದೆ, ಈ ವರ್ಷ ಕೇವಲ 12 ಕೋಟಿ ರೂಪಾಯಿ ಇಟ್ಟಿದ್ದಾರೆ. ಹೀಗೆ ಪ್ರತಿ ವರ್ಷ 12 ಕೋಟಿ ರೂಪಾಯಿಯನ್ನು ಒದಗಿಸುತ್ತಾ ಹೋದರೆ, ಈ ಯೋಜನೆ ಎಲ್ಲಾ ಮುಗಿಸಲು 40-50 ವರ್ಷ ಬೇಕಾಗುತ್ತದೆ. ಈ 40 ವರ್ಷದಲ್ಲಿ ರಾಜ್ಯಕ್ಕೆ ಬೇಕಾದಂತಹ ಆಹಾರ, ಈ ನೀರಾವರಿಗೆ ಬೇಕಾದಂತಹ ಹಣ ಎಲ್ಲಾ ಸುಮಾರು 3-4 ಪಟ್ಟು ಹೆಚ್ಚು ಆಗಿ, ಹೆಚ್ಚು ಭಾರ ಸರ್ಕಾರಕ್ಕೆ ಬೀಳುತ್ತದೆ. ವರ್ಷಕ್ಕೆ ಸುಮಾರು 12 ಕೋಟಿ ರೂಪಾಯಿ ಇಟ್ಟರೆ, ಇದನ್ನು ಮಾಡುವುದಕ್ಕಿಂತ, ಕೈಬಿಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ಹೈದರಾಬಾದಿನ ಯೋಜನೆಯಾಗಿರುವಾಗ ಕೇವಲ 30 ಕೋಟಿ ರೂಪಾಯಿಯಾಗಿತ್ತು. ಇಂದಿನ ದಿವಸ ಅದರ ಮೊದಲ ಹಂತಕ್ಕೆ ಸುಮಾರು 75 ಕೋಟಿ ರೂಪಾಯಿ ಬೇಕಾಗುತ್ತದೆ. ಆದರೂ ಈ ವರ್ಷದ ಒಂದು ಬಡ್ಜೆಟ್ಟನ್ನು ನೋಡಿದರೆ, ಕೇವಲ ಎರಡು ಕೋಟಿ ರೂಪಾಯಿ ಇಟ್ಟಿದ್ದಾರೆ. ಅದರಲ್ಲಿ 25 ಲಕ್ಷ ರೂಪಾಯಿ ಸಿಬ್ಬಂದಿಗೆ ಹೋಗುತ್ತದೆ, 22 ಲಕ್ಷ ಟೂಲ್ಸ್ ಅಂಡ್ ಪ್ಲಾಂಟ್ಸ್‌ಗೆ ಹೋಗುತ್ತದೆ, ಮತ್ತು ಉಳಿದಂತದ್ದು ಅರ್ಥನ್ ಡ್ಯಾಮ್‌ಗೆ ಹೋಗುತ್ತವೆ. ಅವಕ್ಕೆ ಟೆಂಡರ್ ಕರೆದಿದ್ದಾರೆ. ಒಂದು ಕೋಟಿ 60 ಲಕ್ಷ ಬೇಕಾಗುತ್ತದೆ. ಈ ಕೃಷ್ಣಾ ಮೇಲ್ದಂಡೆ ಯೋಜನೆ ಏನಿದೆ, ಇದಕ್ಕೆ ಎರಡು ಕೋಟಿ ಒದಗಿಸಿದ್ದು ಏನೂ ಸಾಲದು. ಈಗ ಮೇಲ್ಗಡೆ ಕೊಯ್ನಾ ಮಹಾರಾಷ್ಟ್ರದವರದ್ದು. ಕೆಳಗಡೆ ನಾಗಾರ್ಜುನ, ಆಂಧ್ರದವರದ್ದು ಇದೆ. ನಾಗಾರ್ಜುನ ಸಾಗರದಕ್ಕೆ ಒಂದು ಕೋಟಿ ರೂಪಾಯಿ ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ನಮ್ಮ ರಾಜ್ಯಕ್ಕೆ, ರಾಜ್ಯದವರು ಒತ್ತಾಯ ಮಾಡಿದರೂ ಕೂಡ ಕೇಂದ್ರ ಸರ್ಕಾರದಿಂದ ಒಂದು ಪೈ ಕೂಡ ತೆಗೆದುಕೊಳ್ಳಲು ಸಾಮರ್ಥ್ಯ ಬಂದಿಲ್ಲ. ಈ ರೀತಿ ಕೇಂದ್ರ ಸರ್ಕಾರದ ನೀತಿ, ವರ್ತನೆ ನಮ್ಮ ರಾಜ್ಯದ ಪರವಾಗಿ ಏನೂ ಸಮಾಧಾನಕರವಾಗಿಲ್ಲ. ಅದರಲ್ಲೂ ಮೇಜರ್ ಇರಿಗೇಶನ್ ಸಂಬಂಧವಾಗಿ ಏನೂ ಇಲ್ಲ, ಈ ರೀತಿ ಇದಕ್ಕೆ ಎರಡು ಕೋಟಿ ರೂಪಾಯಿ ಕೊಡತಕ್ಕದು ಸರಿಯಲ್ಲ ಮತ್ತು ಇದರಿಂದ 40-50 ವರ್ಷಗಳ ಕಾಲ ಹೋಗುತ್ತದೆ. ಇದರಿಂದ ಉತ್ಸಾಹದಲ್ಲಿರತಕ್ಕಂತಹ ರೈತರಿಗೆ ಆಸಕ್ತಿ ಕಡಿಮೆಯಾಗುತ್ತದೆ ಮತ್ತು ಇದರಿಂದ ನಮ್ಮ ಆಹಾರ ಸಮಸ್ಯೆಗೆ ಒಂದು ರೀತಿಯ ಹಾನಿಯಾಗುತ್ತದೆ. ಇದನ್ನು ವರ್ಲ್ಡ್ ಬ್ಯಾಂಕಿನವರು ಕೂಡ ಬಂದು ನೋಡಿದ್ದಾರೆ. ಇದು ಚೆನ್ನಾಗಿದೆ, ಒಳ್ಳೆಯ ಭೂಮಿ ಇದೆ, ಒಳ್ಳೇ ಫಲಬರುತ್ತದೆ ಎಂದು ಎಲ್ಲಾ ಹೇಳಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರದವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಆದಷ್ಟು ಮಟ್ಟಿಗೆ ಹೆಚ್ಚಿನ ಪ್ರಯತ್ನ ಮಾಡಿ, ಸರ್ಕಾರದವರಲ್ಲಿ ಶಕ್ತಿ ಇಲ್ಲದಿದ್ದರೂ, ವರ್ಲ್ಡ್ ಬ್ಯಾಂಕ್ ಮತ್ತು ಇನ್ನಿತರ ಸೋರ್ಸ್‌ನಿಂದ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೃಷ್ಣಾ ಮೇಲ್ದಂಡೆಯ ಯೋಜನೆಗೆ ಅರ್ದನ್ ಡ್ಯಾಮ್ ಮತ್ತು ಮೇಸನರಿ ಡ್ಯಾಮ್ ಕಟ್ಟುವುದಕ್ಕೆ, 17 ಮೈಲಿ ಕೆನಾಲ್ ನಿರ್ಮಾಣಕ್ಕೆ ಟೆಂಡರ್ ಕರೆದಿದ್ದಾರೆ. ಅರ್ದನ್ ಡ್ಯಾಮ್ ಮತ್ತು ಕೆನಾಲ್ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಡಿಸಿಷನ್ ಕೊಟ್ಟಿಲ್ಲ. ಅರ್ದನ್ ಡ್ಯಾಮ್ ಮತ್ತು ಕೆನಾಲಿಗೆ 1970 ನೆಯ ಇಸವಿಯ ವೇಳೆಗೆ 7 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕೃಷ್ಣಾ ಮೇಲ್ದಂಡೆಯ ಯೋಜನೆ ಮೈಸೂರು ರಾಜ್ಯದ ಆರ್ಥಿಕ ಜೀವಾಳವಾಗಿದೆ. ಆದ್ದರಿಂದ ನಮ್ಮ ಸರ್ಕಾರದವರು ಆದಷ್ಟು ಮಟ್ಟಿಗೆ ಕೇಂದ್ರ ಸರ್ಕಾರದವರ ಮೇಲೆ ಒತ್ತಾಯವನ್ನು ಹಾಕಿ ವರ್ಲ್ಡ್ ಬ್ಯಾಂಕಿನಿಂದ ಹಣ ಸಹಾಯವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಈ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕದ ಕೆಲವು ಭಾಗಕ್ಕೆ ಅನುಕೂಲವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಕಂಬದಕಡ, ಹಾರಂಗಿ ಮೊದಲಾದ ಪ್ರಾಜೆಕ್ಟುಗಳು ಏನಿವೆ ಅವುಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ತೆಗೆದುಕೊಳ್ಳದೆ ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ತೆಗೆದುಕೊಂಡರೆ ಕೆಲವು ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಾರು ಎನ್ನುವ ಭಯ ಇದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿಯ ಒಂದು ಸಂಶಯ ಇಟ್ಟುಕೊಂಡು ಈ ಕೆಲಸವನ್ನು ಮಾಡದೆ ಇದ್ದರೆ ತಪ್ಪಾಗುತ್ತದೆ. ಅಂಥಾ ಸಂಶಯವನ್ನು ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಳ್ಳಬಾರದು. ಕೇಂದ್ರ ಸರ್ಕಾರದವರ ಮೇಲೆ ಒತ್ತಾಯವನ್ನು ಹಾಕಿ ವರ್ಲ್ಡ್ ಬ್ಯಾಂಕಿನಿಂದಲೋ ಅಥವಾ ಎಲ್.ಐ.ಸಿ.ಯಿಂದಲೋ ಹಣವನ್ನು ಪಡೆದು ಈ ಒಂದು ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ರಾಜ್ಯದ ಅರ್ಥ ಸಚಿವರು ಮಂಡಿಸಿರತಕ್ಕ ಬಡ್ಜೆಟ್ ಭಾಷಣದ ಬಗ್ಗೆ ನಾನು ನಾಲ್ಕು ಮಾತುಗಳನು ಹೇಳುವುದಕ್ಕೆ ಆಶೆಪಡುತ್ತೇನೆ. ಶ್ರೀಮಾನ್ ಘೋರ್ಪಡೆಯವರು ಮಾತನಾಡುತ್ತಾ, ಬಡ್ಜೆಟ್ಟನ್ನು ತಯಾರು ಮಾಡತಕ್ಕ ಪದ್ಧತಿ, ಮಂತ್ರಿಗಳ ವಿಷಯ, ಹಾಗೂ ರಾಜ್ಯ ಸರ್ಕಾರದ ವಿಷಯ ಇವುಗಳನ್ನು ಪ್ರಸ್ತಾಪ ಮಾಡುತ್ತಾ ಒಂದು ವಿಷಯವನ್ನು ಹೇಳಿದರು. ಅದನ್ನು ನಾನು ಒಪ್ಪಲಿಲ್ಲ, ಅದನ್ನು ಒಪ್ಪುವುದಕ್ಕೆ ಮನಸ್ಸು ಬರುತ್ತಿಲ್ಲ. ಏತಕ್ಕೆಂದರೆ ಶ್ರೀಮಾನ್ ಘೋರ್ಪಡೆಯವರು ಹೇಳಿದರು ರಾಜ್ಯ ಸರ್ಕಾರಕ್ಕೆ ಆದಾಯ ಎಷ್ಟು ಇದೆ, ಆ ಆದಾಯದ ಆಧಾರದ ಮೇಲೆ ಬಡ್ಜೆಟ್ ತಯಾರು ಮಾಡಬೇಕೇ ವಿನಾ, ಖೋತಾ ಇರತಕ್ಕ ಬಡ್ಜೆಟ್ಟನ್ನು ತಯಾರು ಮಾಡಿ ಕೇಂದ್ರ ಸರ್ಕಾರದಿಂದ ಇಷ್ಟು ಕೋಟಿ ರೂಪಾಯಿಗಳು ಬರಬಹುದು, ಮತ್ತು ನಮ್ಮ ರಾಜ್ಯದ ಸಂಪನ್ಮೂಲಗಳಿಂದ ಇಷ್ಟು ಕೋಟಿ ರೂಪಾಯಿಗಳು ಬರಬಹುದು ಎನ್ನುವ ಆಧಾರದ ಮೇಲೆ ನಾವು ಬಡ್ಜೆಟ್ಟನ್ನು ತಯಾರು ಮಾಡಬಾರದು ಎನ್ನುವ ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ ರಾಜ್ಯಸರ್ಕಾರವಾಗಲೀ, ಕೇಂದ್ರಸರ್ಕಾರವಾಗಲೀ, ತಮಗಿರತಕ್ಕಂಥ ಸಂಪನ್ಮೂಲಗಳು ಬರತಕ್ಕಂಥ ಆದಾಯ ನೋಡಿಕೊಂಡು ಬಡ್ಜೆಟ್ ತಯಾರು ಮಾಡುವುದಾದರೆ ನಮ್ಮ ಪ್ರಗತಿ ಕುಂಠಿತವಾಗುತ್ತದೆ. ಏಕೆಂದರೆ ಕೇಂದ್ರಸರ್ಕಾರದ ಮತ್ತು ರಾಜ್ಯಸರ್ಕಾರದ ಆದಾಯಗಳು ಬಹಳ ಕಡಿಮೆ ಇದೆ. ಆದ್ದರಿಂದ ಶ್ರೀಮಾನ್ ಘೋರ್ಪಡೆಯವರು ಹೇಳಿರುವ ಮಾತನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಖೋತಾ ಇರುವ ಬಡ್ಜೆಟ್ ತಯಾರು ಮಾಡಬಾರದೆಂದು ಏನು ಅವರು ಹೇಳಿದ್ದಾರೆ ಆ ಮಾತನ್ನು ನಾನು ಒಪ್ಪುವುದಿಲ್ಲ. ಮಾನ್ಯ ಆರ್ಥಿಕ ಸಚಿವರು ಈ ಸಾಲಿನ ಬಡ್ಜೆಟ್ ತಯಾರು ಮಾಡಿ, ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಹಂಚಿದ್ದಾರೆಂಬುದನ್ನು ವಿವರವಾಗಿ ಹೇಳಿದ್ದಾರೆ. ಅವರ ಬಡ್ಜೆಟ್‌ನ್ನು ನಾನು ಸಂಪೂರ್ಣವಾಗಿ ಮತ್ತು ಕೂಲಂಕಷವಾಗಿ ಓದಿದ್ದೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ವಿದ್ಯಾ ಇಲಾಖೆಯ ಬಗ್ಗೆ, ನೀರಾವರಿಯ, ಬಗ್ಗೆ ಹೇಳಿದ್ದಾರೆ. ಆದ್ದರಿಂದ ನಾನು ಆ ವಿಚಾರಗಳನ್ನು ಹೆಚ್ಚು ಹೇಳುವುದಿಲ್ಲ. ರಾಜ್ಯದಲ್ಲಿರುವ ಪ್ರತಿಯೊಂದು ವರ್ಗದವರೂ ಸಹ ಪ್ರಗತಿಯಾಗುವ ರೀತಿಯಲ್ಲಿ ಬಡ್ಜೆಟ್ ತಯಾರು ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆಯೇ ವಿನಾ ಕೆಲವರಿಗೆ ಮಾತ್ರ ಅನುಕೂಲವಾಗುವಂತೆ ಬಡ್ಜೆಟ್ ತಯಾರು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ರೀತಿಯಿಂದ ಕೆಲವರಿಗೆ ಮಾತ್ರ ಅನುಕೂಲವಾಗುವ ರೀತಿ ಬಡ್ಜೆಟ್ ತಯಾರು ಮಾಡುವುದರಿಂದ ನಾನು ಈ ಬಡ್ಜೆಟ್‌ನ್ನು ವಿರೋಧ ಮಾಡಬೇಕಾಗಿದೆ. ಕಾರಣ ಇಷ್ಟೆ, ಅಪ್ಪರ್ ಕೃಷ್ಣಾ ಯೋಜನೆಯನ್ನು, ಕಂಬದಕಡ ಯೋಜನೆಯನ್ನು ಕಾರ್ಯಗತಗೊಳಿಸಲು ಇಷ್ಟು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆಂದು ಹೇಳಿದ್ದಾರೆ. ಈ ದೇಶ ಮನುಷ್ಯನ ದೇಹ ಇದ್ದಂತೆ. ದೇಶದ ಎಲ್ಲಾ ಜನರನ್ನೂ ಒಂದೇ ರೀತಿ ನೋಡಿಕೊಳ್ಳಬೇಕಾಗುತ್ತದೆ. "the haves and have nots are there in our Society". ಕಾಂಗ್ರೆಸ್ ಸರ್ಕಾರಬಂದು 20-21 ವರ್ಷಗಳಾಯಿತು. ಇಷ್ಟು ವರ್ಷಗಳ ಇವರ ಆಡಳಿತದಲ್ಲಿ

(ಶ್ರೀ ಎಸ್. ಬಂಗಾರಪ್ಪ)

ಏನೂ ಇಲ್ಲದಂತಹ ಜನರಿಗೆ ಯಾವ ಒಂದು ಅನುಕೂಲವನ್ನೂ ಸಹ ಮಾಡಿಕೊಟ್ಟಿಲ್ಲ. ದೊಡ್ಡ ದೊಡ್ಡ ಯೋಜನೆಗಳನ್ನು ತಯಾರು ಮಾಡುವ ಬಗ್ಗೆ ನನ್ನ ವಿರೋಧ ಇಲ್ಲ. ದೊಡ್ಡ ದೊಡ್ಡ ಯೋಜನೆಗಳಿಂದ ಆಹಾರದ ಪರಿಸ್ಥಿತಿ ಸುಧಾರಿಸುತ್ತದೆಂದು ನಾನು ತಿಳಿದಿದ್ದೇನೆ. ಆದರೆ ಈ ದೊಡ್ಡ ದೊಡ್ಡ ಯೋಜನೆಗಳಿಂದ ಯಾರಿಗೆ ಅನುಕೂಲವಾಗುತ್ತದೆಂದು ನಾನು ಕೇಳಬೇಕಾಗುತ್ತದೆ. ಜಮೀನು ಇಲ್ಲದ ಜನರು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಇದ್ದಾರೆ. ಉದ್ಯೋಗ ಇಲ್ಲದ ನಿರ್ಗತಿಕರು ಬಹಳ ಜನ ಇದ್ದಾರೆ. ಉದ್ಯೋಗ ಇಲ್ಲದೆ ಬೀದಿಯಲ್ಲಿರುವ ಜನರು ಬಹಳ ಇದ್ದಾರೆ. ಯಾರಿಗೋಸ್ಕರ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಂಡು ಅನುಕೂಲ ಮಾಡಿಕೊಡುತ್ತಿದ್ದೀರೋ ಅದೇ ರೀತಿ ಜಮೀನು ಇಲ್ಲದ ಬೇರೆ ಬೇರೆ ವರ್ಗದ ಜನರಿಗೂ ಸಹ ಅನುಕೂಲ ಮಾಡಿಕೊಡುವುದು ಸರ್ಕಾರದ ಕರ್ತವ್ಯ. ದೊಡ್ಡ ಯೋಜನೆಯ ನೀರಿನಿಂದ ಬೀದಿಯಲ್ಲಿರುವ ಸಾಮಾನ್ಯ ಮನುಷ್ಯನಿಗೆ ಅನುಕೂಲವಾಗುವುದಿಲ್ಲ. ಈ ಬಡ್ಜೆಟ್‌ನ್ನು ನಾನು ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿದ್ದೇನೆ. ಸಾಮಾನ್ಯ ವರ್ಗದವರ ಬಗ್ಗೆ ಒಂದು ಮಾತನ್ನೂ ಸಹ ಈ ಕಾಂಗ್ರೆಸ್ ಸರ್ಕಾರದವರು ಹೇಳಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ದೊಡ್ಡ ದೊಡ್ಡ ಯೋಜನೆಗಳು ಬೇಡ ಎಂದು ನಿಮ್ಮ ಅರ್ಥವೇ?

ಶ್ರೀ ಎಸ್. ಬಂಗಾರಪ್ಪ.—ದೊಡ್ಡ ದೊಡ್ಡ ಯೋಜನೆಗಳನ್ನು ಸಹ ಕೈಗೊಳ್ಳಬೇಕು. ಆದರೆ ಸಾಮಾನ್ಯ ಮನುಷ್ಯರಿಗೂ ಸಹ ಸಾಕಷ್ಟು ಅನುಕೂಲಗಳನು ಮಾಡಿಕೊಡಬೇಕು. ಒಬ್ಬ ಸಾಮಾನ್ಯ ಮನುಷ್ಯ ಒಂದು ಮೀಟರ್ ಬಟ್ಟೆ ತೆಗೆದುಕೊಂಡಾಗ ಟ್ಯಾಕ್ಸ್ ಕೊಟ್ಟಿರುತ್ತಾನೆ. ಈ ಟಾಕ್ಸನ್ನು ಕೇವಲ ದೊಡ್ಡ ದೊಡ್ಡ ಯೋಜನೆಗಳಿಗೆ ಖರ್ಚು ಮಾಡುವುದು ಸರಿಯಲ್ಲ. ಹರಿಜನ ಮತ್ತು ಗಿರಿಜನರು ಅಲ್ಲದೆ ಸಾವಿರಾರು ಬಡ ಕುಟುಂಬಗಳು ನಮ್ಮ ರಾಜ್ಯದಲ್ಲಿ ಇವೆ. ಇವರಿಗೆ ವಸತಿ ಸೌಕರ್ಯವನ್ನು ಒದಗಿಸುವುದಕ್ಕಾಗಿ ಎಷ್ಟು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ ಎಂಬ ವಿಷಯವನ್ನು ಬಡ್ಜೆಟ್‌ನಲ್ಲಿ ಹೇಳಿದ್ದರೆ ನಾನು ಬಡ್ಜೆಟ್‌ನ್ನು ಸ್ವಾಗತಿಸುವುದಕ್ಕೆ ಸಿದ್ಧನಾಗಿದ್ದೇನೆ ಎಂದು ಹೇಳಬಹುದಾಗಿತ್ತು. ಇಂತಹ ವಿಷಯದ ಬಗ್ಗೆ ಒಂದು ಮಾತೂ ಇಲ್ಲ. ಇಷ್ಟೇ ಅಲ್ಲ ; ನಮ್ಮ ರಾಜ್ಯ ಸರಕಾರದವರು ಇಲ್ಲಿನ ಹಳ್ಳಿಗಾಡಿನ ಜನಕ್ಕೆ ಜಮೀನನ್ನು ಹಂಚಬೇಕು ಎಂದು ಕೇಳುತ್ತಿದ್ದರೂ ಸುಮಾರು ಹತ್ತಾರು ವರ್ಷಗಳಿಂದಲೂ ಇವರಿಗೆ ಯಾವ ಜಮೀನೂ ಹಂಚಿಕೆಯಾಗಲಿಲ್ಲ. ಹೀಗಾದರೆ ಇವರು ಜೀವನ ಮಾಡುವುದಾದರೂ ಹೇಗೆ ? ನನ್ನ ಹತ್ತಿರ ಒಂದು ಸಣ್ಣ ಪೊಟ್ಟಣ ತಂದಿದ್ದೇನೆ ; ಇದರೊಳಗೆ ರಾಗಿ ಕಾಳಿನಂತೆ ಸಣ್ಣಸಣ್ಣ ಬೀಜಗಳಿವೆ. ಇವು ಒಣಗಿದ ಹುಲ್ಲು ಬೀಜಗಳು. ಇಲ್ಲಿರುವ ಹಳ್ಳಿ ಜನರು ಇದನ್ನು ಸುಮಾರು ಮಳೆ ಬೆಳೆ ಇಲ್ಲದ ಪರಿಸ್ಥಿತಿಯಲ್ಲಿ ಉಪಯೋಗಿಸಿಕೊಂಡು ಸುಮಾರು ಮೂರು ನಾಲ್ಕು ತಿಂಗಳ ಕಾಲ ಜೀವನ ಮಾಡಿದರು. ಇದು ಮಾನ್ಯ ಉಪಸಚಿವರಾದ ಶ್ರೀಮಾನ್ ಬಸವಣ್ಣಪ್ಪನವರ ಕ್ಷೇತ್ರ. ಅವರು ಹಳ್ಳಿಗಾಡಿನ ಜನಕ್ಕೆ ಅನುಕೂಲ ಮಾಡಬೇಕೆಂದೇ ಕಾಂಗ್ರೆಸ್ಸು ಪಕ್ಷಕ್ಕೆ ಸೇರಿದ್ದೇನೆ ಎಂದು ಎಲ್ಲರಿಗೂ ಹೇಳಿ ಬಂದಿದ್ದಾರೆ. ಅವರು ಇರುವ ಹಳ್ಳಿಯ ಜನರ ಪರಿಸ್ಥಿತಿ ಬಗ್ಗೆ ಇಲ್ಲಿ ಹೇಳುತ್ತಿದ್ದೇನೆ. ಅವರು ಇರುವ ಕ್ಷೇತ್ರ ಹಾಗೂ ನನ್ನ ಕ್ಷೇತ್ರ ಪಕ್ಕ ಪಕ್ಕದಲ್ಲೇ ಇದೆ. ಅವರ ಕ್ಷೇತ್ರದಲ್ಲಿರುವ ಜನಕ್ಕೆ ಬಹಳವಾದ ಹಾನಿಯುಂಟಾಗಿದೆ. ಇಲ್ಲಿನ ಜನಕ್ಕೆ ಸ್ವಂತವಾಗಿ ಯಾವ ಜಮೀನೂ ಇಲ್ಲ. ಗೇಣಿಗೂ ಭೂಮಿ ಇಲ್ಲ. ಇಂತಹ ಜನಕ್ಕೆ ಅನುಕೂಲ ಮಾಡುವುದರ ಬಗ್ಗೆ ಈ ಬಡ್ಜೆಟ್‌ನಲ್ಲಿ ಏನಾದರೂ ಪ್ರಾವಿಷನ್ ಮಾಡಿದ್ದಾರೆಯೇ ಎಂದು ನೋಡಿದರೆ ಇದರ ಬಗ್ಗೆ ಏನೂ ಮಾಡಿಲ್ಲ. ನಾನು ಇಲ್ಲಿ ತೋರಿಸುತ್ತಿರುವ ಪೊಟ್ಟಣದಲ್ಲಿರುವ ಹುಲ್ಲು ಬೀಜಗಳಿಂದ ಇವರು ಜೀವನ ನಡೆಸಬೇಕಾಗಿ ಬಂದಿದೆ. ಇಂತಹ ಕಾಳಿನಿಂದ ರೊಟ್ಟಿ ಮಾಡಿ ತಿಂದು ಜೀವಿಸಬೇಕಾಗಿ ಬಂದಿದೆ. ಸುಮಾರು ಮೂರು ತಿಂಗಳ ಕಾಲ ಇಂತಹ ಬೀಜಗಳಿಂದ ಜೀವನ ನಡೆಸಿದರು. ಈ ಪೊಟ್ಟಣವನ್ನು—ಮಾನ್ಯ ಆಹಾರ ಮಂತ್ರಿಗಳು ಇಲ್ಲಿರಬಹುದು ಎಂದು ತೋರುತ್ತೆ ಅವರು ಆಹಾರ ಸಚಿವರಲ್ಲ ಕ್ಷಾಮ ಸಚಿವರು ಎಂದು ಕಾಣುತ್ತದೆ—ಅಧ್ಯಕ್ಷರ ಮೂಲಕ ಅವರ ಕಡೆಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಆರೋಗ್ಯ ಖಾತೆಯ ಉಪಸಚಿವರ ಕ್ಷೇತ್ರದಲ್ಲೇ ಪರಿಸ್ಥಿತಿ ಹೀಗಿದೆ, ಇದನ್ನು ಸರಕಾರ ಗಮನಿಸಿದಂತೆ ಕಾಣುತ್ತಿಲ್ಲ. ಈ ಕಾಂಗ್ರೆಸ್ಸು ಸರಕಾರ ಬಂದು ಇಪ್ಪತ್ತು ವರ್ಷಗಳಾದರೂ ಕೂಡ ಇಲ್ಲಿಯವರೆಗೆ ಹಳ್ಳಿಗಾಡಿನ ಜನತೆಗೆ ಇನ್ನೂ ಒಳ್ಳೆಯ ವಸತಿ ಸೌಕರ್ಯ ಹಾಗೂ ಜಮೀನು ಹಂಚುವಿಕೆ ಕಾರ್ಯವನ್ನು ಮಾಡಲಾಗಲಿಲ್ಲ. ಇದರಿಂದ ಎಷ್ಟೋ ಕಡೆಗಳಲ್ಲಿ ಇರುವ ಹಳ್ಳಿಗಾಡಿನ ಜನರು ನಿರ್ಗತಿಕರಾಗಿ ಬೀದಿಪಾಲಾಗಿದ್ದಾರೆ. ಇದರ ಬಗ್ಗೆ ಸರಕಾರ ಇನ್ನಾದರೂ ಉಪೇಕ್ಷೆ ಮಾಡದ ಹಳ್ಳಿಗಾಡಿನ ಜನಕ್ಕೆ ಹೆಚ್ಚು ಸೌಲಭ್ಯಗಳನ್ನು ಒದಗಿಸಿಕೊಡುತ್ತಾರೆಂದು ನಾನು ಇಲ್ಲಿ ಆಸೆ ಪಡುತ್ತೇನೆ.

ಇನ್ನು ಈ ದೇಶದಲ್ಲಿರುವ ಅರಣ್ಯ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಶಿವಮೊಗ್ಗಾ ಜಿಲ್ಲೆಯ ಅರಣ್ಯದ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಸರಕಾರ ಜಪಾನ್ ದೇಶದ ಇಂಡಸ್ಟ್ರಿಯಲಿಸ್ಟ್‌ಗೆ ಸಹಾಯ ಮಾಡಬೇಕೆಂದು ಜಪಾನಿನ ಮೆಸರ್ಸ್ ಸೇನ್ ಅಂಡ್ ಎಂ. ನರಸ್ವಾಗಾ ಎನ್ನುವವರಿಗೆ ಒಂದು ಅಡಿ ಮರಕ್ಕೆ ನೂರರಿಂದ ಮುನ್ನೂರು ರೂಪಾಯಿಗಳ ವರೆಗೆ ಬೆಲೆ ಬಾಳುವಂತಹ ಮರಗಳನ್ನು ಒಂದು ಸಿ.ಎಫ್.ಟಿ.ಗೆ 20 ರಿಂದ 25 ರೂಪಾಯಿಗಳವರೆಗೆ ಮಾರಿದ್ದಾರೆ. ಇದರಿಂದ ಸರಕಾರಕ್ಕೆ ಸುಮಾರು ನಾಲ್ಕು ಲಕ್ಷದಷ್ಟು ನಷ್ಟವಾಗಿದೆ. ಇದರಲ್ಲಿ ಶಿವಮೊಗ್ಗಾದಲ್ಲಿರುವ ಅರಣ್ಯ ಇಲಾಖೆಯ ಅಧಿಕಾರಿಗಳಿಗೂ ಇದರ ವಿಚಾರ ತಿಳಿದಿದೆ. ಇದರಲ್ಲಿ ಚೀಫ್‌ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಎನ್ನುವ ಉನ್ನತ ಅಧಿಕಾರಿಗಳು ಇದ್ದರೂ ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟರು ಎನ್ನುವುದು ನನಗೆ ತಿಳಿಯದ ಸಂಗತಿಯಾಗಿದೆ. ಸರಕಾರಕ್ಕೆ ಹೀಗೆ ಲಕ್ಷಾಂತರ ರೂಪಾಯಿಗಳ ನಷ್ಟ ಮಾಡುತ್ತಿದ್ದರೆ ಇದರ ಕಡೆಗೆ ಗಮನ ಕೊಡಬೇಡವೇ? ಹೀಗೆ ರಾಜ್ಯ ಸರಕಾರಕ್ಕೆ ಬರುವ ಆದಾಯವನ್ನು ಕಡಿಮೆ ಮಾಡಲು ಇದ್ದಂತಹ ಕಾರಣಗಳೇನು? ಇಷ್ಟೇ ಅಲ್ಲ. ಅರಣ್ಯ ಸಂಪತ್ತು ನಾಶವಾಗಲು ಇಲ್ಲಿರುವ ಅರಣ್ಯದ ಅಧಿಕಾರಿಗಳೂ ಕಾರಣರಾಗಿರುತ್ತಾರೆ. ಇವರ ಕೈವಾಡ ಏನು ಕಡಿಮೆ ಇಲ್ಲ. ಶಿವಮೊಗ್ಗಾದಲ್ಲಿ ಎರಡು ಸರ್ಕಲ್‌ಗಳಿವೆ ಇದಕ್ಕೆ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಎನ್ನುವ ಅಧಿಕಾರಿಗಳು ಹೆಡ್ ಆಗಿರುತ್ತಾರೆ. ಇವರ ಕೈಕೆಳಗೆ ರೇಂಜು ಫಾರೆಸ್ಟು ಅಧಿಕಾರಿಗಳಿರುತ್ತಾರೆ. ಇವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡಬೇಕಾದರೆ ಐದು ಸಾವಿರ ರೂಪಾಯಿಗಳನ್ನು ಲಂಚವಾಗಿ ಕೊಟ್ಟರೇನೇ ವರ್ಗಾಯಿಸು ತ್ತಾರೆ. ಇಲ್ಲದೇ ಇದ್ದರೆ ಇವರ ವರ್ಗ ಆಗುವುದೇ ಇಲ್ಲ. ಈ ರೀತಿ ಐದು ಸಾವಿರ ರೂಪಾಯಿ ಗಳು ಕೊಡಬೇಕೆಂದು ನಿಗದಿಯಾಗಿರುತ್ತದೆ. ಇದರಂತೆ ರೇಂಜು ಫಾರೆಸ್ಟು ಅಧಿಕಾರಿ ಗಳಾಗಿರುವವರು ಐದು ಸಾವಿರ ರೂಪಾಯಿಗಳಷ್ಟು ಲಂಚ ಕೊಟ್ಟು ವರ್ಗಾವಣೆ ಮಾಡಿಕೊಳ್ಳು ತ್ತಾರೆ. ಒಬ್ಬ ರೇಂಜ್ ಫಾರೆಸ್ಟ್ ಆಫೀಸರ್ ಆಗಿರುವವನು ತಿಂಗಳಿಗೆ ಸುಮಾರು 30 ರಿಂದ 40 ಸಾವಿರ ರೂಪಾಯಿಗಳಷ್ಟು ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಇಲ್ಲಿರುವ ನಾಟಾಗಳ ಬೆಲೆ ಒಂದಕ್ಕೆ ಎರಡರಷ್ಟು ಹಾಗೂ ಕೆಲವು ವೇಳೆ ನಾಲ್ಕರಷ್ಟು ಹೆಚ್ಚಾಗಿದೆ. ಇದರಲ್ಲೂ ರೋಸ್‌ವುಡ್ ಹಾಗೂ ಇನ್ನಿತರ ಉತ್ತಮವಾದ ಬೀಟಿ ಮರಗಳ ಬೆಲೆ ಐದು ಸಾವಿರದ ವರೆಗೂ ಇರುತ್ತದೆ.

2-30 P.M.

ಅದಕ್ಕೋಸ್ಕರ 5 ಸಾವಿರ ರೂಪಾಯಿ ಲಂಚ ಕೊಟ್ಟು ದುಡ್ಡನ್ನು ದುಡಿಮೆ ಮಾಡಿಕೊಳ್ಳು ತ್ತಿದ್ದಾರೆ. ಶಿವಮೊಗ್ಗಾದಲ್ಲಿ ವರ್ಗಾವರ್ಗಿ ಕಾಲ ಬಂದಾಗ ಸುಮಾರು ಲಕ್ಷಗಟ್ಟಲೆ ದುಡ್ಡನ್ನು ದುಡಿಮೆ ಮಾಡಿಕೊಳ್ಳುತ್ತಾರೆ. ಫಾರೆಸ್ಟ್ ಮಿನಿಸ್ಟರು ಕೇಳಿದರೂ ಕೂಡ ಯಾವ ಆಫೀಸರು ಇದನ್ನು ಹೇಳುವುದಕ್ಕೆ ತಯಾರಿದ್ದಾರೆ. ಅವರು 5 ಸಾವಿರ ರೂಪಾಯಿ ಕೇಳಿದರು, ಅದಕ್ಕೋಸ್ಕರ ಕೊಡುತ್ತೇನೆ ಎಂದು ರುಜುವಾತು ಮಾಡುವುದಕ್ಕೆ ಸಾಧ್ಯವೆ! ಇಂತಹ ಕಳ್ಳರನ್ನು ಹಿಡಿದು ಹಣ ರಾಸ್ ಮಾಡುವುದನ್ನು ನಿಲ್ಲಿಸಬೇಕು. ಶಿವಮೊಗ್ಗ ರೇಂಜ್ ಫಾರೆಸ್ಟ್ ಆಫೀಸರು ಒಬ್ಬೊಬ್ಬರೂ ಲಕ್ಷಾಂತರ ರೂಪಾಯಿ ಬೆಲೆಬಾಳುವ ಮನೆಗಳನ್ನು ಕಟ್ಟಿದ್ದಾರೆ. ಇದು ಫಾರೆಸ್ಟ್ ಮಿನಿಸ್ಟರ್‌ಗೆ ಅರ್ಥವಾಗುತ್ತದೋ ಇಲ್ಲವೋ ಗೊತ್ತಿಲ್ಲ. ಫಾರೆಸ್ಟ್ ಆಫೀಸಿನಲ್ಲಿ ಅನ್ಯಾಯಗಳೂ, ಲೂಟಿಗಳೂ ನಡೆಯುತ್ತಾ ಇವೆ. ಜಪಾನ್ ದೇಶದವರಿಗೂ ಕೂಡ ಇಲ್ಲಿರುವ ರೋಸ್ ಉಡ್‌ನ್ನು ಕಳುಹಿಸಿಕೊಡುತ್ತಿದ್ದಾರೆ. ಡಿಪಾರ್ಟ್‌ಮೆಂಟ್ ಆಫೀಸರ್ಸ್ ಮತ್ತು ಕಂಟ್ರಾಕ್ಟರ್ಸ್ ಸೇರಿಕೊಂಡು ಕೋಟಿ ಕೋಟಿ ರೂಪಾಯಿಗಳವರೆಗೂ ರಾಜ್ಯ ಸರ್ಕಾರದ ಖಜಾನೆಗೆ ಬರುವ ಆದಾಯಕ್ಕೆ ಚ್ಯುತಿ ತಂದಿದ್ದಾರೆ. ಈ ರೀತಿ ಅರಣ್ಯ ಸಂಪತ್ತನ್ನು ಲೂಟಿ ಹೊಡೆಯುವ ವರ್ಗಕ್ಕೆ ರಾಜ್ಯ ಸರ್ಕಾರ ದವರು ಮೂಗುದಾರ ಹಾಕದೇ ಇದ್ದರೆ ಅವರು ಬಗ್ಗುವ ಹಾಗಿಲ್ಲ. ಇದರ ಜೊತೆಗೆ ಪೇ ಕಮೀಷನ್ ವರದಿಯಂತೆ ರೇಂಜ್ ಫಾರೆಸ್ಟ್ ಆಫೀಸರುಗಳನ್ನು ಗೆಜೆಟೆಡ್ ಆಫೀಸರ್ ದರ್ಜೆಗೆ ಏರಿಸಿ ಸಂಬಳ ಸಾರಿಗೆಗಳನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಇದ್ದಾರೆ.

ಇನ್ನು ಒಂದು ವಿಷಯ. ಹೊಸಪೇಟೆಯಲ್ಲಿ ಆಗತಕ್ಕಂಥ ಸ್ಟೀಲ್ ಪ್ಲಾಂಟ್ ಬಗ್ಗೆ ಅರ್ಥಿಕ ಸಚಿವರು ಒಂದು ಮಾತನ್ನೂ ಉಲ್ಲೇಖ ಮಾಡಿಲ್ಲ. ಆಂಧ್ರ ಪ್ರದೇಶ ಸರ್ಕಾರದವರು ಸ್ಟೀಲ್ ಪ್ಲಾಂಟ್ ನಮಗೆ ಬೇಕು ಎಂದು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕಿಕೊಂಡು ಕೂತಿದ್ದಾರೆ. ನಮ್ಮ ಸರ್ಕಾರದವರೂ ಕೂಡ ಕ್ಲೇಂ ಹಾಕಿಕೊಂಡು ಕೂತಿದ್ದಾರೆ. ರಾಜ್ಯ ಸರ್ಕಾರದವರೇ ಸ್ವಂತ ಖರ್ಚಿನಿಂದ ಹೊಸಪೇಟೆಯಲ್ಲಿ ಸ್ಟೀಲ್ ಪ್ಲಾಂಟ್‌ನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ಏತಕ್ಕೆ ತಡ ಮಾಡುತ್ತಿದ್ದಾರೆ? ರಾಜ್ಯ ಸರ್ಕಾರ

(ಶ್ರೀ ಎಸ್. ಬಂಗಾರಪ್ಪ)

ದವರು ಏನು ಕ್ರಮ ಕೈಗೊಳ್ಳಬೇಕೆಂದು ಇದ್ದಾರೆ ಎನ್ನುವ ಬಗ್ಗೆ ಈ ಬಜೆಟ್ ಭಾಷಣದಲ್ಲಿ ಒಂದು ಮಾತನ್ನೂ ಹೇಳಲಿಲ್ಲ. ನಾನು ಈಗಲಾದರೂ ಹೇಳುತ್ತೇನೆ, ರಾಜ್ಯ ಸರ್ಕಾರದವರು ಇನ್ನು ಮೇಲಾದರೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹಾಕಬೇಕು. ಆಂಧ್ರ ಪ್ರಾಂತದ ಭಾರಿ ಭಾರಿ ಮಂತ್ರಿಗಳು ಸೇರಿಕೊಂಡಿದ್ದಾರೆ, ಅವರು ಒತ್ತಡ ಹಾಕಿ ಸ್ಟೀಲ್ ಪ್ಲಾಂಟ್ ತೆಗೆದುಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇದೆ. ನಮ್ಮ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಹಳ ವೀಕ್ ಆಗಿದ್ದಾರೆ, ಕೇಂದ್ರದಲ್ಲಿ, ಅದರಲ್ಲಿ ಅನುಮಾನವಿಲ್ಲ. ಈಗಲಾದರೂ ರಾಜ್ಯ ಸರ್ಕಾರದವರು ಜವಾಬ್ದಾರಿಯನ್ನು ಹೊತ್ತು ಸ್ಟೀಲ್ ಪ್ಲಾಂಟ್ ಹೊಸಪೇಟೆಗೆ ಪಡೆಯತಕ್ಕ ಯೋಚನೆಯನ್ನು ಮಾಡಬೇಕು. ಈ ವಿಷಯವನ್ನು ಬಜೆಟ್ ಭಾಷಣದಲ್ಲಿ ಹೇಳಿಲ್ಲ. ರಾಜ್ಯ ಸರ್ಕಾರ ಇದರ ಬಗ್ಗೆ ಕೂಡಲೇ ತೀರ್ಮಾನ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ವಿದ್ಯಾಭ್ಯಾಸದ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ಸಲವೂ ಕೂಡ ಹೆಚ್ಚು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಮೀಸಲಾಗಿಟ್ಟಿದ್ದಾರೆ. ಯಾವ ನಮೂನೆ ವಿದ್ಯಾಭ್ಯಾಸ ಕೊಡಲಿಕ್ಕೆ ಎಂದು ಕೇಳುತ್ತೇನೆ. ಕಾಂಗ್ರೆಸ್ ಸರ್ಕಾರದ 21 ವರ್ಷಗಳ ಆಡಳಿತದಲ್ಲಿ ಶಾಲೆಗಳನ್ನು ಕಾರ್ಖಾನೆಗಳ ನಮೂನೆಯಲ್ಲಿ ಪ್ರಾರಂಭ ಮಾಡಿ ಓದತಕ್ಕ ಜನಗಳಿಗೆ ನೌಕರಿ ಕೊಡುತ್ತೇವೆ ಎಂದು ಹೇಳಿ 62ನೇ ಇಸವಿಯಲ್ಲಿ ಪಾಸಾದ ಡಿಪ್ಲೊಮಾ ಹೋಲ್ಡರುಗಳು, ಪದವೀಧರರು, ಸಿವಿಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವೀಧರರು ಇವರಿಗೆ ಏನೂ ಉದ್ಯೋಗ ಕೊಡದೆ ಇದ್ದಾರೆ. ಮಾನ್ಯ ವಿದ್ಯಾಖಾತೆಯ ಉಪಮಂತ್ರಿಯವರಾದ ಶ್ರೀಮಾನ್ ಸೋಗಿ ಅವರೂ ಮಾನ್ಯ ಮಂತ್ರಿಗಳಾದ ಶಂಕರ ಗೌಡರೂ ಒಂದು ಸಂದರ್ಭದಲ್ಲಿ ಉತ್ತರ ಕೊಡುತ್ತ ಓದಿದವರಿಗೆಲ್ಲ ನೌಕರಿ ಕೊಡುತ್ತೇವೆಂದು ಹೇಳಿಲ್ಲ ಎಂದು ನುಣುಚಿಕೊಳ್ಳುವ ನೀತಿಯನ್ನು ಪರಿಪಾಲನೆ ಮಾಡಿಕೊಂಡು ಬಂದಿದ್ದಾರೆ. ವಿದ್ಯಾಭ್ಯಾಸಕ್ಕೆ ಇಷ್ಟೊಂದು ಹಣವನ್ನು ಖರ್ಚು ಮಾಡಿದರೂ, ರಾಜ್ಯ ಸರ್ಕಾರದ ಮನೆ ಬಾಗಿಲಿಗೆ ಬಂದು ನೌಕರಿ ಕೊಡಿ ಎಂದು "ಬೆಗಿಂಗ್ ಬೌಲ್" ಹಿಡಿದುಕೊಂಡು ಬರಬೇಕಾದರೆ ಅಂಥ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವಾಗ ಬಹಳ ಎಚ್ಚರಿಕೆಯಿಂದ ಇರಬೇಕು. ವಿದ್ಯಾಭ್ಯಾಸ ಪಡೆಯುವವನು ದೇಶದ ಸತ್ಪ್ರಜೆಯಾಗುವುದಕ್ಕೆ, ಅವನಿಂದ ದೇಶದ ಅಭಿವೃದ್ಧಿ ಆಗುವುದಕ್ಕೆ ಅನುಕೂಲವಾದ ವಿದ್ಯಾಭ್ಯಾಸವನ್ನು ಕೊಡಬೇಕು. ಹಾಗಿಲ್ಲದೆ ಸುಮ್ಮನೆ ಹಣವನ್ನು ಖರ್ಚುಮಾಡಿ ಕಾರ್ಖಾನೆಗಳೋಪಾದಿಯಲ್ಲಿ ಶಾಲೆ ಕಾಲೇಜುಗಳನ್ನು ಮಾಡಿ ಅದಕ್ಕೆ ಹಣವನ್ನು ಖರ್ಚುಮಾಡಿ ಕೊನೆಗೂ ಕೂಡ ಉದ್ಯೋಗವಿಲ್ಲದೆ ಇರುವಂಥ ವಿದ್ಯಾವಂತ ವರ್ಗಕ್ಕೆ ಏನೂ ಕೆಲಸವನ್ನು ಕೊಡದೆ ನಡುನೀರಿನಲ್ಲಿ ಕೈ ಬಿಡುವಂಥ ಮಾತುಗಳನ್ನು ರಾಜ್ಯ ಸರ್ಕಾರ ಹೇಳಬಾರದು. ಅದಕ್ಕೋಸ್ಕರ ವಿದ್ಯಾಭ್ಯಾಸಕ್ಕಾಗಿ ಖರ್ಚಾಗತಕ್ಕ ಹಣ ಸದುಪಯೋಗವಾಗಲಿ ಎನ್ನುವಂಥ ಮಾತನ್ನು ಹೇಳುತ್ತೇನೆ.

ಜಮೀನಿಲ್ಲದೆ ಇರುವವರಿಗೆ ಜಮೀನು ಮಂಜೂರು ಮಾಡಲೇ ಬೇಕು. ಸರ್ಕಾರದವರು ಹಾಗೆ ಮಾಡದೆ ಇದ್ದರೆ ನೇರವಾದ ಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಈಗ ಲ್ಯಾಂಡ್ ರೂಲ್ಸ್ ಹೊಸದಾಗಿ ತರುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಅದು ಯಾವ ನಮೂನೆಯಲ್ಲಿ ಬರುತ್ತದೆ ಎನ್ನುವುದು ನನಗೆ ಗೊತ್ತಿದೆ. ಅದರಿಂದ ಏನೇನೂ ಪ್ರಯೋಜನವಾಗುವುದಿಲ್ಲ. ಜಮೀನಿನ ಮೇಲೆ ಜನ ನುಗ್ಗಿ ಸಾಗುವಳಿ ಮಾಡತಕ್ಕ ಕಾಲ ಬರುತ್ತದೆ. ರಾಜ್ಯ ಸರ್ಕಾರ ತಾನು ಹೊತ್ತಿರತಕ್ಕ ಜವಾಬ್ದಾರಿಯನ್ನು 20 ವರ್ಷಗಳಿಂದಲೂ ನಿರ್ವಹಿಸುವುದಕ್ಕೆ ಅಶಕ್ತವಾಗಿರುವುದರಿಂದ ಪ್ರಜೆಗಳೇ ಪ್ರಜಾಸತ್ತೆಯನ್ನು ತಮ್ಮ ಕೈಗೆ ತೆಗೆದುಕೊಂಡು ನೇರವಾಗಿ ಜಮೀನಿಗೆ ನುಗ್ಗುವುದರ ಮೂಲಕ ಜಮೀನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ; ಮತ್ತು ಅಂತಹ ಜಮೀನನ್ನು ಮಂಜೂರು ಮಾಡಿ ಕೊಡಿ ಎಂದು ಕೇಳಬೇಕಾಗುತ್ತದೆ. ಜಮೀನಿಲ್ಲದವರು ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಅದಕ್ಕೆ ಅತಿಕ್ರಮ ಪ್ರವೇಶ ಎಂದು ಹೆಸರು ಕೊಟ್ಟಿದ್ದಾರೆ. ಅಕ್ರಮ ಯಾವುದು, ಕ್ರಮ ಯಾವುದು ? ಸರ್ಕಾರದ ಹಣವನ್ನು ಲೂಟಿ ಮಾಡುತ್ತಾ, ಕಂಟ್ರಾಕ್ಟರು ಎಂದು ಹೇಳಿಕೊಂಡು ಅದರ ಹೆಸರಿನಲ್ಲಿ ಲೂಟಿ ಹೊಡೆಯುವುದು ಕ್ರಮ ಎಂದು ಅದಕ್ಕೆ ರಾಜು ಹಾಕುತ್ತಾರೆ. ಬಡವನಾದವನು ಹೊಟ್ಟೆಗಿಲ್ಲದೆ ಜಮೀನಿನ ಮೇಲೆ ನುಗ್ಗಿ ಜಮೀನನ್ನು ಸಾಗುವಳಿ ಮಾಡಿಕೊಂಡು ಹೊಟ್ಟೆ ಹೊರೆಯುವ ವ್ಯವಸಾಯ ಮಾಡಿಕೊಂಡು ಆಹಾರಧಾನ್ಯಗಳನ್ನು ಉತ್ಪಾದನೆ ಮಾಡಿದರೆ ಇದು ಅಕ್ರಮ ಪ್ರವೇಶ ಎಂದು ಹೇಳುತ್ತಾರೆ. ನನ್ನ ಅಭಿಪ್ರಾಯದಲ್ಲಿ ಜಮೀನಿಲ್ಲದವನು ಸರ್ಕಾರಿ ಜಮೀನಿನ ಮೇಲೆ ಹೋಗಿ ಅದರಲ್ಲಿ ಸಾಗುವಳಿ ಮಾಡಿ ಅದರಿಂದ ಫಸಲು ಪಡೆದರೆ ಅದು ಕ್ರಮವಾದ ಪ್ರವೇಶ. ಅದನ್ನೇ ಈಗಿರುವ ಸರ್ಕಾರ ಮಾನ್ಯತೆ ಮಾಡಬೇಕಾದ ಪ್ರಸಂಗ ಬಂದೀತು ಎನ್ನುವ ಮಾತನ್ನು, ಅದನ್ನು ಎಚ್ಚರಿಕೆ ಎಂದು ಬೇಕಾದರೂ ತಿಳಿದುಕೊಳ್ಳಿ, ನಿಮ್ಮ ಗಮನಕ್ಕೆ ತಂದು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, 1969-70ನೆಯ ಸಾಲಿನ ಆಯವ್ಯಯದ ವರದಿಯನ್ನು ಮಾನ್ಯ ಆರ್ಥಿಕ ಮಂತ್ರಿಗಳು ಮಂಡಿಸಿದ್ದಾರೆ. ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಮೊದಲನೆಯದಾಗಿ ಈ ವರದಿಯ ಬಗ್ಗೆ ಒಂದು ವಿಷಯ ಹೇಳಬೇಕೆಂದರೆ ಈ ವರದಿಯು ಒಬ್ಬ ಪುರೋಹಿತ ನದೀತೀರದಲ್ಲಿ ನಿಂತು ಸೂರ್ಯನನ್ನು ನೋಡುತ್ತಾ ಅರ್ಘ್ಯ ಬಿಟ್ಟಂತೆ ಜನತೆಗೆ ಆಯವ್ಯಯ ವರದಿಯ ಮೂಲಕ ಅರ್ಘ್ಯ ಬಿಟ್ಟಿದ್ದಾರೆ ನಮ್ಮ ಹಣಕಾಸಿನ ಪುರೋಹಿತ ಹೆಗಡೆಯವರು. ತಾನು ಕೊಟ್ಟ ಅರ್ಘ್ಯದಿಂದ ಸೂರ್ಯನಿಗೆ ಪ್ರೀತಿಯಾಗುವುದೆಂಬ ನಂಬಿಕೆ ಆ ವೈದಿಕ ಪುರೋಹಿತನದಾದರೆ ನಾನು ಕೊಟ್ಟ ಆಯವ್ಯಯ ವರದಿಯ ಅರ್ಘ್ಯದಿಂದ ಜನತೆಗೆ ತೃಪ್ತಿಯಾದೀತೆಂಬ ನಂಬಿಗೆ ರಾಜ್ಯದ ಹಣಕಾಸಿನ ಪುರೋಹಿತ ಹೆಗಡೆಯವರದು. ವೈದಿಕ ಪುರೋಹಿತರು ಅರ್ಘ್ಯ ಕೊಡುವಾಗ ಮಂತ್ರ ಹೇಳಿದಂತೆ ರಾಜ್ಯದ ಆಯವ್ಯಯದ ಸ್ಥಿತಿಗತಿಗಳ ಮಂತ್ರಗಳನ್ನು ವರದಿಯ ಮೂಲಕ ಪಠಿಸಿದ್ದಾರೆ ನಮ್ಮ ಪುರೋಹಿತ ಹೆಗಡೆಯವರು.

ಇಲ್ಲಿ ಸೂರ್ಯ ಕೇಂದ್ರ ಸರಕಾರ, ನದೀತೀರವೇ ಜನತೆ, ಆಯವ್ಯಯ ವರದಿಯೇ ಮಂತ್ರಗಳ ಪುಸ್ತಕ, ಅರ್ಘ್ಯ ಬಿಡುವುದೂ ಮಂತ್ರ ಹೇಳುವುದೂ ನನ್ನ ಕರ್ತವ್ಯ, ಅದನ್ನು ಮಾಡಿದ್ದೇನೆ, ನಿಮ್ಮ ಅಭಿಪ್ರಾಯ ನಿರೀಕ್ಷಿಸುತ್ತಿದ್ದೇನೆ ಎಂದು ಹೆಗಡೆಯವರು ವಿಧಾನಸಭೆಯ ಪ್ರತಿಕ್ರಿಯೆ ನಿರೀಕ್ಷಿಸುತ್ತಿದ್ದಾರೆ. ಆ ನಿರೀಕ್ಷಣೆಗೆ ನನ್ನ ಉತ್ತರ ಹೀಗಿದೆ. ಒಬ್ಬ ಪುರೋಹಿತರು ನದೀತೀರದಲ್ಲಿ ಅರ್ಘ್ಯ ಬಿಡುತ್ತಿದ್ದುದನ್ನು ಒಬ್ಬ ರೈತ ನೋಡಿದ. ಕೂಡಲೇ ತಾನೂ ನೀರಿಗಿಳಿದು ಸೂರ್ಯನ ಕಡೆ ಬೆನ್ನುಮಾಡಿಕೊಂಡು ಎರಡು ಕೈಗಳಿಂದ ನದಿ ನೀರನ್ನು ಹೋಗು ಹೋಗು ಎಂದು ತಳ್ಳುತ್ತಿದ್ದ. ಪುರೋಹಿತರಿಗೆ ಆಶ್ಚರ್ಯವಾಗಿ ಏನು ಮಾಡುತ್ತಿದ್ದೀಯಪ್ಪಾ ಎಂದು ಕೇಳಿದರು, ನನ್ನ ಮಾತಿರಲಿ ನೀವೇನು ಮಾಡುತ್ತಿದ್ದೀರಿ ! ಮೊದಲು ಹೇಳಿ ಎಂದು ರೈತ ಕೇಳಿದ. ನಾನು ಸೂರ್ಯನಿಗೆ ಅರ್ಘ್ಯ ಕೊಡುತ್ತಿದ್ದೇನೆ, ಎಂದು ಪುರೋಹಿತರು ಉತ್ತರಿಸಿದರು. ನಾನು ನಮ್ಮ ತೋಟಕ್ಕೆ ನದೀ ನೀರು ತಳ್ಳುತ್ತಿದ್ದೇನೆ ಎಂದು ರೈತನು ಉತ್ತರ ಹೇಳಿದ. ಏನಯ್ಯಾ ನದಿಯಲ್ಲಿ ನಿಂತು ನೀರು ತಳ್ಳಿದರೆ ತೋಟಕ್ಕೆ ಹೋಗುವುದೇ ಎಂದು ಪುರೋಹಿತನ ಪ್ರಶ್ನೆ. ನೀವು ಕೊಟ್ಟ ಅರ್ಘ್ಯ ಸೂರ್ಯನಿಗೆ ತಲ್ಪುವುದಾದರೆ ನಾನು ತಳ್ಳಿದ ನೀರು ತೋಟಕ್ಕೆ ಹೋಗಲಾರದೆ ಸ್ವಾಮಿ ಎಂದು ರೈತನ ಉತ್ತರ. ಮುಂದೆ ಪ್ರಶ್ನೆ ಮರುಪ್ರಶ್ನೆಯ ಮಾತೇ ಇಲ್ಲ. ಇದರಂತೆ ಶ್ರೀ ಹೆಗಡೆಯವರು ಆಯವ್ಯಯ ಹೇಗಿದೆ ಎಂದು ಕೇಳುವಂತಿಲ್ಲ, ಹೀಗಿದೆ ಎಂದು ನಾವೂ ಹೇಳುವಂತಿಲ್ಲ. ಸರ್ಕಾರಕ್ಕೂ ನೆಗಡಿಯಾಗಿದೆ, ನಮಗೂ ನೆಗಡಿಯಾಗಿದೆ. ರಿ-ರಿ-ರಿ ಕೊಂಚ ನಶ್ಯ ಇದ್ದರೆ ಕೊಡ್ರಿ ಎಂದು ನಾವು ಕೇಳಿದರೆ ಲಲಗೆ ಇಲ್ಲ, ಲಲಿಗೆಲ್ಲಿ ತರಲಿ ಎಂದು ನೆಗಡಿಯಾಗಿರುವ ಹೆಗಡೆಯವರು ಹೇಳುತ್ತಾರೆ. ಇದು ಈ ವರ್ಷದ ಆಯವ್ಯಯದ ಅಂತರಾಳ.

[MR. DEPUTY SPEAKER in the Chair]

ಪಂಚವಾರ್ಷಿಕ ಯೋಜನೆಗಳ ನೆರವು ನಮ್ಮ ರಾಜ್ಯಕ್ಕೆ ನ್ಯಾಯ ಪ್ರಮಾಣದಲ್ಲಿ ದೊರೆತಿಲ್ಲವೆಂಬುದು ಸೂರ್ಯಪ್ರಕಾಶದಷ್ಟೇ ಸತ್ಯವಾದ ವಿಚಾರ. ಅನೇಕ ರಾಜ್ಯಗಳಿಗೆ ಪ್ರಥಮ ದ್ವಿತೀಯ ಸ್ಥಾನ ದೊರೆತಿದ್ದರೆ, ನಮಗೆ ಕೊನೆಯ ಸ್ಥಾನ. ಈ ವಿಚಾರದಲ್ಲಿ ಇತರರು ಆಧುನಿಕ ವಾಹನಗಳಲ್ಲಿ ಹೋಗುತ್ತಿದ್ದರೆ, ನಾವು ಎತ್ತಿನ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದೇವೆ. ಹೀಗೇಕೆ ತಾರತಮ್ಯ ? ನಮ್ಮ ಸರಕಾರದ ಪ್ರಯತ್ನ ಪ್ರಭಾಯುತವಾಗಿಲ್ಲವೋ ? ಅಥವಾ ಕೇಂದ್ರವೇ ನಿರ್ಲಕ್ಷಿಸುತ್ತಿದೆಯೋ ! ಎಂದು ಪ್ರಶ್ನಿಸಬೇಕಾಗುತ್ತದೆ. ಡೆಲ್ಲಿಯ ದೊರೆಗಳೇ, ನಾವು ಶ್ರೀಮಂತರಲ್ಲದಿದ್ದರೂ ಪ್ರಭಾವಕ್ಕೆ ಯಾರಿಗೂ ಕಡಮೆಯಿಲ್ಲ ಎಂಬುದನ್ನು ಸ್ಪಷ್ಟವಾಗಿ ಅವರಿಗೆ ಹೇಳಬೇಕು. ಈ ಕೆಲಸವನ್ನು ಅಂಜದೆ ಅಳುಕದೆ ಸರ್ಕಾರ ಮಾಡಲೆಂದು ಹೇಳಬಯಸುತ್ತೇನೆ.

ರಾಜ್ಯದ ತಲಾ ಆದಾಯವನ್ನು ರಾಷ್ಟ್ರೀಯ ತಲಾ ಆದಾಯದೊಡನೆ ಹೋಲಿಸಿ, ತಲಾ ತೆರಿಗೆಯನ್ನ ತಲಾ ಆದಾಯದೊಡನೆ ಹೋಲಿಸುವುದು ಸಮಂಜಸವಾಗಿ ಕಾಣುವುದಿಲ್ಲ. ಒಬ್ಬ ಇಂಜನೀಯರು ಒಂದು ನದಿಯನ್ನು ದಾಟಬೇಕೆಂದು ನಾಲ್ಕಾರು ಕಡೆ ನೀರಿನ ಆಳ ಅಳತೆಮಾಡಿನೋಡಿ ಸರಾಸರಿ ಆಳ ಇಷ್ಟಿರುತ್ತೆ ಎಂದು ಲೆಕ್ಕಹಾಕಿ ದಾಟಲು ಹೋಗಿ ನಡುನದಿಯಲ್ಲಿ ಮುಳುಗಿದಂತಾಗುತ್ತದೆ. ಈ ಲೆಕ್ಕಾಚಾರ ಆಯಾ ರಾಜ್ಯದ ಆದಾಯ ವ್ಯಯಗಳ ಮೇಲೆ ಲೆಕ್ಕಾಚಾರ ಹಾಕಬೇಕೇ ಹೊರತು, ಯೋಜನಾ ಆಯೋಗದವರ ಲೆಕ್ಕಾಚಾರದಂತೆ ಆದರೆ ನಾವು ಮುಳುಗಿಹೋಗುತ್ತೇವೆ. ಇದನ್ನು ಯೋಜನಾ ಆಯೋಗಕ್ಕೆ ನಿದರ್ಶನಗಳಪೂರ್ವಕ ಮನವರಿಕೆ ಮಾಡಿಕೊಟ್ಟು ಈ ಬಗ್ಗೆ ನಮಗಾಗಬಹುದಾದ ನಷ್ಟಕ್ಕೆ ಗುರಿ ಮಾಡಬಾರದೆಂದು ಆಯೋಗಕ್ಕೆ ಅಗ್ರಹಪೂರ್ವಕ ಹೇಳಬೇಕು.

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಕಲ್ಯಾಣ ಯೋಜನೆಗಳಿಗಾಗಿ ಕೇಂದ್ರವು ಮಾಡುತ್ತಿರುವ ಅತಿ ಹೆಚ್ಚಿನ ವ್ಯಯವನ್ನು ಕಡಿಮೆಮಾಡಿ, ರಾಜ್ಯ ವಲಯಗಳ ವೆಚ್ಚ ಪ್ರಮಾಣವನ್ನು ಹೆಚ್ಚಿಸುವುದು ನ್ಯಾಯವೂ ಹೌದು, ಅವಶ್ಯಕವೂ ಹೌದು. ಆಗ ಸಮಗ್ರ ಭಾರತದ ಜನಸಾಮಾನ್ಯರ ಕಲ್ಯಾಣಕಾರ್ಯ ಸಮಪ್ರಮಾಣದಲ್ಲಿ ನಡೆದಂತಾಗುತ್ತದೆ. ಹೀಗಾಗದಿದ್ದರೆ, ಅತೃಪ್ತ ಜನತೆ, ಅನರ್ಥಕಾರಿ ಮಾರ್ಗದಲ್ಲಿ ಹೋಗಲು ಸಂದೇಹವೇ ಇಲ್ಲ. ಈ ವಿಚಾರದಲ್ಲಿ ಕೇಂದ್ರದ ಸ್ವಲ್ಪ ಪ್ರಮಾಣದ ನಿರ್ಲಕ್ಷ್ಯವೂ ಅಪಾಯಕಾರಿ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ಬಗ್ಗೆ ಕೇಂದ್ರದವರು ಸರಿಯಾದ ತೀರ್ಮಾನ ತೀವ್ರ ತೆಗೆದುಕೊಳ್ಳಲು, ಒತ್ತಾಯ, ಆಗ್ರಹ ವಗೈರೆ ಯಾವುದೇ ಕ್ರಮ ನಮ್ಮ ಸರ್ಕಾರ ಕೈಕೊಂಡರೂ ಜನತೆಯ ಸಂಪೂರ್ಣ ಬೆಂಬಲವುಂಟೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಆರ್ಥಿಕ ಆಯೋಗದ ಮುಂದೆ ರಾಜ್ಯದ ಹಣಕಾಸಿನ ಕಷ್ಟ ನಷ್ಟಗಳನ್ನು ಆಯೋಗದ ಮನ ಕರಗುವಂತೆ ಹೇಳಿಕೊಂಡಿರುವುದಾಗಿ ಅರ್ಥಿಕ ಮಂತ್ರಿಗಳು ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ತುಂಬಾ ಸಂತೋಷ. ''ಬಾಗಿಲನು ತೆಗಿಸಿ ಸೇವೆಯನು ಕೊಡೋ ಹರಿಯೇ, ಕೂಗುವಾ ಧ್ವನಿಯು ಕೇಳಲಿಲ್ಲವೇ ದೊರೆಯೆ'' ಎಂದು ಕನಕದಾಸರು ಕೇಳಿದ್ದಕ್ಕೆ ಶ್ರೀ ಕೃಷ್ಣ ದರ್ಶನ ಕೊಟ್ಟಂತೆ ''ಬಿಗುಮಾನ ತೊರೆಯಿರೈ! ಮಿಗಿಲಾದ ವೆಚ್ಚವಿದೆ–ಸುಗಮ ವೆಚ್ಚಕ್ಕೆ ತಕ್ಕ ಹಣ ನೀಡಿ–ದುಗುಡವಂ ಪರಿಹರಿಸಿ ಆಯೋಗ ಮಂಡಳಿಯೆ'' ಎಂದು ನೀವು ಕೇಳಿದ್ದಕ್ಕೆ ಆಯೋಗ ಅಸ್ತು ಅನ್ನಬಹುದೆಂದು ನಿರೀಕ್ಷಿಸೋಣ ಈ ನಿರೀಕ್ಷೆ ಫಲಕಾರಿಯಾಗಲು ನಿಮ್ಮ ಶಕ್ತಿ ಮೀರಿ ಪ್ರಯತ್ನಿಸಿರಿ. ನಮ್ಮ ಬೆಂಬಲವುಂಟೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಮೇಲ್ಕಂಡ ಒಂದೆರಡು ಸಲಹೆಗಳು ನೆರವೇರಿದರೆ ಮಾತ್ರ 13 ಕೋಟಿ ರೂಪಾಯಿಯ ಕೊರತೆ, ಮತ್ತು ಕೊರತೆಗೆ ಸೇರಿಸದೆ ಇರುವ ನೌಕರರ ತುಟ್ಟಿಭತ್ಯ ವಗೈರೆಯ 3 ಕೋಟಿ 25 ಲಕ್ಷದ ಕೊರತೆ ಇನ್ನೂ ಚಿಕ್ಕಪುಟ್ಟ ಕೊರತೆಗಳು ಸೇರಿ ಆಯವ್ಯಯದ ಒಟ್ಟು ಕೊರತೆ 17–18 ಕೋಟಿಗಳಿಗೇರುತ್ತದೆ ಈ ಕೊರತೆ ನಿವಾರಣೆಯಾಗಲು ಕೇಂದ್ರ ಆರ್ಥಿಕ ಕೊಡುಗೆಯಿಂದ ಮಾತ್ರ ಸಾಧ್ಯ. ಈ ಬಗ್ಗೆ ಕೇಂದ್ರವನ್ನು ಒತ್ತಾಯಿಸಲು ನಮಗೆ ಹಕ್ಕುಂಟು. ಏಕೆಂದರೆ ಪಾಂಚವಾರ್ಷಿಕ ಯೋಜನಾ ಸಹಾಯ ನಮಗೆ ದೊರೆತಿರುವುದು, ತುಂಬಾ ಕನಿಷ್ಠ ದರ್ಜೆಯದು. ಕಣ್ಣೊರೆಸುವಷ್ಟು ಮಾತ್ರ. ಪ್ರಯುಕ್ತ ಈ ಬಗ್ಗೆ ಹೆಚ್ಚು ಒತ್ತಾಯ ಕೇಂದ್ರದ ಮೇಲೆ ಸರ್ಕಾರ ಮಾಡಬೇಕೆಂದು ವಿನಂತಿಸುತ್ತೇನೆ.

ವಿದ್ಯಾ ಇಲಾಖೆಗೆ 46 ಕೋಟಿ ನೀಡಿರುವುದು ಅಭಿನಂದನೀಯ. ಇಷ್ಟಾದರೂ ಖಾಸಗಿಯವರನೇಕರಿಂದ ನಡೆಯುವ ಕಾಳ ರೀತಿಯ ವಿದ್ಯಾ ವ್ಯಾಪಾರ ಬೆಳೆಯುತ್ತಿದೆಯೇ ಹೊರತು ಇಳಿಮುಖವಾಗುತ್ತಿಲ್ಲ. ಖಾಸಗಿಯವರ ಕರಾಳ ವಿದ್ಯಾ ವ್ಯಾಪಾರ ಎಂದು ನಿಲ್ಲುವುದೋ ಅಂದೇ ವಿದ್ಯಾ ಇಲಾಖೆಗೆ ಪಾವಿತ್ರ್ಯತೆ ದೊರೆಯುತ್ತದೆ. ಖಾಸಗಿಯವರ ಕರಾಳ ವಿದ್ಯಾ ವ್ಯಾಪಾರ ತಡೆಗಟ್ಟಲು ನ್ಯಾಯವಾಗಿ ನಡೆಸಲು ತಕ್ಕ ರೀತಿ, ನೀತಿ, ನಿಯಮಗಳನ್ನು, ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಸೂಚಿಸುತ್ತೇನೆ. ಸರ್ಕಾರಿ ಕಾಲೇಜುಗಳ ಶುಲ್ಕದ ಮಟ್ಟಕ್ಕೆ ಖಾಸಗಿ ಶಾಲೆ ಕಾಲೇಜುಗಳ ಶುಲ್ಕವನ್ನು ತರಲಾಗದಿದ್ದರೂ ಈಗಿರುವ ಬೇರೆ ಬೇರೆ ಖಾಸಗಿ ಶಾಲಾ ಕಾಲೇಜುಗಳ ಕರಾಳ ಶುಲ್ಕವನ್ನು ನ್ಯಾಯವಾದ ಮಟ್ಟಕ್ಕೆ ತರುವುದು ಸೂಕ್ತವೆಂದು ನನ್ನ ಅಭಿಪ್ರಾಯ. ಹಣದಾಸೆಯಿಂದ ಸೀಟುಗಳನ್ನು ಬೇರೆ ರಾಜ್ಯದ ಅಭ್ಯರ್ಥಿಗಳಿಗೆ ಮಾರುವ ಖಾಸಗಿಯವರ ಕರಾಳ ಪದ್ಧತಿ ತಪ್ಪಬೇಕು. ಶ್ರೀಮಂತರಿಗೆ ಮಾತ್ರ ಸಾಧ್ಯವಾಗಿರುವ ಮೆಡಿಕಲ್ ವಿದ್ಯಾಭ್ಯಾಸ ಅರ್ಹರಾದವರಿಗೆ ಬಡವನಾದರೂ ದೊರೆಯುವಂತಿರಬೇಕು. ಆರೋಗ್ಯ ಮತ್ತು ವಿದ್ಯಾ ಮಂತ್ರಿಗಳು ಈ ಬಗ್ಗೆ ತುಂಬಾ ಗಮನ ಕೊಡಬೇಕೆಂದು ವಿನಂತಿಸುತ್ತೇನೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಫೆಡರಲ್ ವಿಶ್ವವಿದ್ಯಾನಿಲಯವಾಗಿ ಮಾಡಲು ಏನೆಲ್ಲಾ ಪ್ರಯತ್ನಗಳನ್ನು ಮಾಡಲೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಆರೋಗ್ಯ ಇಲಾಖೆಗೆ ಈಗಿನ ಮಂತ್ರಿಗಳಿಂದ ಸ್ವಲ್ಪ ಚಟುವಟಿಕೆ ಬಂದಿರುವುದು ಕಂಡುಬಂದಿದೆ. ಆದರೆ ಅಹಂಕಾರ ಮನೋಭಾವವ, ನಿರ್ಲಕ್ಷ್ಯ ಮುಖ್ಯಾಧಿಕಾರಿಗಳಿಂದ ಆಗುತ್ತಿರುವ ಕಿರುಕುಳ ತಪ್ಪಬೇಕು. ಅನೇಕ ಆಸ್ಪತ್ರೆಗಳಲ್ಲಿ ಹೇಳುವವರಿಲ್ಲ, ಕೇಳುವವರಿಲ್ಲ. ದಾದಿಲ್ಲ, ಫಿರ್ಯಾದಿಲ್ಲ. ಅಕ್ರಮ ವ್ಯವಹಾರಗಳು ನಡೆಯುತ್ತಲೇ ಇವೆ. ಪ್ರಭಾವ, ಹಣ, ಇದ್ದವರಿಗೆ ಮಾತ್ರ ಆಸ್ಪತ್ರೆ ಸೇವೆ. ಜನ ಸಾಮಾನ್ಯರಿಗೆ ಯಮಧರ್ಮನ ಸೇವೆ ಎಂಬುದು ಬೀದಿ ಮಾತಾಗಿದೆ. ''ಬೆಂಕಿಯಿಲ್ಲದೆ ಹೊಗೆ ಬರುವುದಿಲ್ಲ'' ಈ ಮಾತಿನಲ್ಲಿ ತಥ್ಯವಿರುವುದರಿಂದಲೇ ಇದು ಬೀದಿ ಮಾತಾಗಿದೆ. ಆಸ್ಪತ್ರೆಯ ಆಡಳಿತಕ್ಕೆ ಮುಸುಗಿರುವ ಧೂಳು ಜಾಡಿಸುವ ಕಾರ್ಯಕ್ರಮ ಆರೋಗ್ಯ ಮಂತ್ರಿಗಳು ಕೈಕೊಂಡರೆ ತುಂಬಾ ಕೀರ್ತಿ ಬರುತ್ತದೆ.

ವ್ಯವಸಾಯದ ಇಲಾಖೆ ತುಂಬಾ ಜಾಗೃತವಾಗಿದೆಯೆಂದು ಅರ್ಥಮಂತ್ರಿಗಳ ವರದಿಯಿಂದ ಕಂಡುಬರುತ್ತದೆಯೇ ಹೊರತು ಪ್ರತ್ಯಕ್ಷ ಅದಕ್ಕೆ ನಿದರ್ಶನಗಳು ಕಂಡುಬಂದಿಲ್ಲ. ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿ ಬೋರ್‌ವೆಲ್ ತೆಗೆಸಲು, ಹದಗೆಟ್ಟ ಜಮೀನನ್ನು ಉತ್ತಮ ಪಡಿಸಲು—ಬುಲ್ ಡೋಜರ್-ಟ್ರ್ಯಾಕ್ಟರ್ ವಗೈರೆ ಬಾಡಿಗೆಗೆ ಅಪೇಕ್ಷಿಸಿದರೆ ವ್ಯವಸಾಯ ಇಲಾಖೆಯಿಂದ ದೊರೆಯುವುದು ಕಷ್ಟವೆಂಬುದು ನನ್ನ ನಿದರ್ಶನಕ್ಕೆ ಬಂದಿದೆ, ಪಾವಗಡ ತಾಲ್ಲೂಕಿನಲ್ಲಿರುವ ನಮ್ಮ 10 ಎಕರೆ ಜಮೀನನ್ನು ಸರಿಪಡಿಸಲು ಬುಲ್‌ಡೋಜರ್ ಕೇಳಿ 8-10 ತಿಂಗಳಾದರೂ ವ್ಯವಸಾಯ ಇಲಾಖೆಯಿಂದ ದೊರೆತಿಲ್ಲ. ಶಾಸಕರು ತಾವಾಗಿಯೇ ಹೋದರೂ ರೈತರಿಗೆ ಬೇಕಾದ ಈ ವ್ಯವಸಾಯದ ಸಲಕರಣೆಗಳನ್ನು ಪಡೆಯಬೇಕಾದರೆ ಎಷ್ಟು ಕಷ್ಟಪಡಬೇಕೆಂಬುದನ್ನು ಮಾನ್ಯ ಸಚಿವರು ಗಮನಿಸಬೇಕೆಂದು ನಾನು ಸೂಚಿಸಬಯಸುತ್ತೇನೆ. ಶಾಸಕರ ಕೋರಿಕೆಯೇ ಈ ರೀತಿಯಾದರೆ ಬಡರೈತನಿಗೆ ದೊರೆಯುವುದು ಮೂರು ನಾಮ. ವ್ಯವಸಾಯ ಇಲಾಖೆಯಲ್ಲಿ ಡೈರೆಕ್ಟರುಗಳು, ಜಾಯಿಂಟ್ ಡೈರೆಕ್ಟರುಗಳು ಅಸಿಸ್ಟೆಂಟ್ ಡೈರೆಕ್ಟರುಗಳು, ಜಿಲ್ಲಾ ವ್ಯವಸಾಯಾಧಿಕಾರಿಗಳು ವಗೈರೆ ಲೆಕ್ಕವಿಲ್ಲದಷ್ಟು ಜನ ಇದ್ದಾರೆ. ಆದಾಗ್ಯೂ ಭೂಮಿ ಸರಿಪಡಿಸಿಕೊಳ್ಳಲು, ಬಾವಿ ತೋಡಿಸಿಕೊಳ್ಳಲು, ಬಾಡಿಗೆಗೆ ಉಪಕರಣಗಳನ್ನು ಕೊಡಿಸಲು ಆಗದಿರುವ ವ್ಯವಸಾಯ ಇಲಾಖೆ ಇದ್ದರೂ ಇಲ್ಲದಿದ್ದರೂ ಒಂದೇ ಇದು ನಾಚಿಕೆಗೇಡಿನ ಪ್ರಸಂಗ. ಹೆಸರು ಗಂಗಾಧರ, ಕುಡಿಯಲು ನೀರಿಲ್ಲ ಎಂಬಂತೆ ವ್ಯವಸಾಯದ ಇಲಾಖೆಯಿಂದ ರೈತನಿಗೆ ದೊರೆಯುತ್ತಿರುವುದು ಅರ್ಘ್ಯ ಮಾತ್ರ. ಈ ಇಲಾಖೆಯನ್ನು ಚುರುಕುಗೊಳಿಸಲು ವ್ಯವಸಾಯ ಮಂತ್ರಿಗಳು ಪೂರ್ಣ ನಿಗಾ ತೆಗೆದುಕೊಂಡರೆ ಕೀರ್ತಿಬರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ!

ರಸ್ತೆಸಾರಿಗೆ ಇಲಾಖೆಯವರು ಒಂದು ಕಡೆಯಿಂದ ರಾಷ್ಟ್ರೀಕರಣ ಮಾಡುತ್ತಾ ಹೋಗಿ, ಮತ್ತೊಂದು ಕಡೆಯಿಂದ ಖಾಸಗೀ ಬಸ್ಸುಗಳಿಗೆ ಟೂರಿಸ್ಟ್ ಎಂದು ಲೈಸೆನ್ಸ್ ನೀಡುತ್ತಿದ್ದಾರೆ. ಟೂರಿಸ್ಟ್ ಎನ್ನುವ ಹೆಸರಿನಲ್ಲಿ ಮತ್ತೆ ಖಾಸಗೀ ಬಸ್ಸುಗಳು ಓಡಾಟ ಪ್ರಾರಂಭಿಸಿವೆ. ಅವು ಹೆಚ್ಚು ಸೌಕರ್ಯಯುತವಾಗಿರುವುದರಿಂದಲೂ ಛಾರ್ಜು ಕೂಡ ಸರ್ಕಾರಿ ಬಸ್ಸುಗಳಷ್ಟೇ ಇರುವುದರಿಂದ ಜನರು ಹೆಚ್ಚಾಗಿ ಅವುಗಳಲ್ಲಿ ಪ್ರಯಾಣಮಾಡುತ್ತಿದ್ದಾರೆ. ಇದರಿಂದ ಇಲಾಖೆಗೆ ನಷ್ಟವಾಗುತ್ತಿದೆ. ಸರ್ಕಾರ ಯಾವುದಾದರೊಂದು ನೀತಿಯನ್ನು ಅನುಸರಿಸಿದರೆ ಅದನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಅಂದರೆ ಸಂಪೂರ್ಣ ರಾಷ್ಟ್ರೀಕರಣ ಮಾಡಬೇಕು, ಇಲ್ಲವೇ ಖಾಸಗಿಯವರಿಗೆ ಅದನ್ನು ವಹಿಸಿಕೊಡಬೇಕು. ರಸ್ತೆಸಾರಿಗೆ ಇಲಾಖೆಯ ವ್ಯವಹಾರದಲ್ಲಿ ಬಂಡವಾಳಕ್ಕೆ ತಕ್ಕ ಆದಾಯ ಬರುತ್ತಿಲ್ಲ. ಆಡಳಿತದಲ್ಲಿ ಜವಾಬ್ದಾರಿತನ ಇಲ್ಲದಿರುವುದರಿಂದ ಹಣ ಪೋಲಾಗುತ್ತಿದೆ. ಈ ಇಲಾಖೆಯ ಬಗ್ಗೆ ಸರ್ಕಾರ ಎಷ್ಟು ಬೇಗ ಕ್ರಮ ಕೈಗೊಂಡರೆ ಅಷ್ಟೂ ಒಳ್ಳೆಯದು. ಆದರೆ ಅದೇಕೆ ಕ್ರಮತೆಗೆದುಕೊಳ್ಳಲು ವಿಳಂಬಮಾಡುತ್ತಿದೆಯೋ ತಿಳಿಯದು.

ಇನ್ನು ನಗರಸೌಂದರ್ಯಕ್ಕೆ ಕ್ಯಾನ್ಸರಿನಂತೆ ಬೆಳೆಯುತ್ತಾ ಕುಂದನ್ನು ತರುತ್ತಿರುವ, ಕಂಡರೂ ಕಾಣದಂತೆ ಹೆಚ್ಚುತ್ತಿರುವ ಈ ಕೊಳಚೇ ಪ್ರದೇಶಗಳ ನಿವಾರಣೆ ಆಗದಿರುವುದರಿಂದ ನಗರದಲ್ಲಿ ರೋಗರುಜಿನಗಳ ಅಪರಾಧಗಳ ಹಾಗೂ ದುಷ್ಕಾರ್ಯಗಳ ಮೂಲಸ್ಥಾನಗಳಾದ ಈ ಕೊಳಚೇ ಪ್ರದೇಶಗಳ ಬಗ್ಗೆ ಕೂಡಲೆ ಸರ್ಕಾರ ಸ್ವಲ್ಪ ಕಠಿಣವಾಗಿ ನಿರ್ದಾಕ್ಷಿಣ್ಯವಾಗಿ ನಡೆಯದಿದ್ದರೆ ತುಂಬಾ ಅಪಾಯವಿದೆ. ಅವರು ಅಂಥಾ ಪಾಪಕೂಪಗಳಲ್ಲಿ ವಾಸಿಸುವುದನ್ನು ತಪ್ಪಿಸುವ ಮಾನವೀಯ ಭಾವನೆಯಿಂದಲಾದರೂ ಅಂತಹ ಪ್ರದೇಶಗಳು ಇರಬಾರದು. ಈ ಬಗ್ಗೆ ಕಟ್ಟುನಿಟ್ಟಾದ ಕಾರ್ಯಕ್ರಮವನ್ನು, ಪಂಚವಾರ್ಷಿಕ ಯೋಜನೆಗಳಲ್ಲಾದರೂ ಸರಿಯೇ, ಹಾಕಿಕೊಂಡು ಮತ್ತೆ ಅವು ತಲೆಯೆತ್ತದಂತೆ ನೋಡಿಕೊಳ್ಳಬೇಕು.

ಇನ್ನು ಪಡಿತರ ಖಾತೆ: ಕಡಲತೀರದ ಮುಕ್ಕಾಲು ಮಂತ್ರಿ ಶ್ರೀ ವಿಠಲದಾಸ ಶೆಟ್ಟರ ಕೈಸೇರಿದೆ. ಕಲಬೆರಕೆ, ಅಕ್ರಮ ವ್ಯವಹಾರ ದಾಸ್ತಾನಿನ ಅಂಕೆ ಸಂಖ್ಯೆಗಳಲ್ಲಿ ಏರಿಳಿತ ರವೆ ಉಂಡೆಗೆ ಬರುವ ಕ್ಷಯ ವಗೈರೆ-ವಗೈರೆ ಭ್ರಷ್ಟಾಚಾರಗಳನ್ನು ಮೆಟ್ಟಿನಡೆಯಬೇಕಾಗಿದೆ. ಶ್ರೀ ಶೆಟ್ಟರು "ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು; ತನ್ನಂತೆ ಪರರ ಬಗೆದಂದು ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಎಂಬಂತೆ ನನ್ನಿಯ ಮಾತಿನಲ್ಲಿ ಶೆಟ್ಟರು ಬಲ್ಲದರು. ಇನ್ನು ಪಂಕ್ತಿಭೇದವಿಲ್ಲದೆ ಒಳ್ಳೆಯ ಅನ್ನವನ್ನು ಕೊಡುವುದರಲ್ಲಿ ಇವರು ಸೈ ಅನ್ನಿಸಿಕೊಳ್ಳಬೇಕಾಗಿದೆ. ಚೊಕ್ಕಟವಾಗಿ ಕೆಲಸ ಮಾಡಿ ಮುಕ್ಕಾಲು ಮಂತ್ರಿಯಿಂದ ಪಕ್ಕಾಮಂತ್ರಿಗೇರಲೆಂದು ಹಾರೈಸುತ್ತೇನೆ. ರಾಜ್ಯದಲ್ಲಿ ಹೆಚ್ಚಾಗಿ ಬೆಂಗಳೂರು ನಗರದಲ್ಲಿ ಅನೇಕ ವ್ಯಕ್ತಿಗಳೂ ಮತ್ತು ಸಂಸ್ಥೆಗಳೂ ಚಿಟ್ ಫಂಡ್‌ಗಳೆಂಬ ಹೆಸರಿನಲ್ಲಿ ಭಾರಿ ಹಣದ ವ್ಯವಹಾರ ನಡೆಸುತ್ತಿವೆ. ಎಲ್ಲಿ ನೋಡಿದರೂ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಈ ಚಿಟ್ ಫಂಡ್‌ಗಳಿಂದ ಸಾರ್ವಜನಿಕರಿಗೆ ತುಂಬಾ ಮೋಸವಾಗುತ್ತಿದೆ. ಇವುಗಳ ಸ್ಥಾಪಕರನೇಕರು ಜನರಿಗೆ ವಂಚಿಸಿ ಹಣದೊಂದಿಗೆ ಪರಾರಿಯಾಗು

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ತ್ತಿದ್ದಾರೆ. ಇದು ಬಹಿರಂಗ ದರೋಡೆ. ಇಂತಹ ಸಂಸ್ಥೆಗಳೂ, ವ್ಯಕ್ತಿಗಳೂ ಪ್ರಕಟವಾಗುತ್ತಾರೆ. ಮಾಯವಾಗುತ್ತಾರೆ. ಈ ಬಗ್ಗೆ ಸರ್ಕಾರದ ಕಾನೂನು ಮತ್ತು ರಕ್ಷಣಾ ಖಾತೆ ತುಂಬಾ ಗಮನವಿಟ್ಟು ಇಂತಹ ಸಾರ್ವಜನಿಕ ವಂಚನ ವ್ಯಕ್ತಿಗಳು ಮತ್ತು ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಯುಕ್ತವೆಂದು ನನ್ನ ಅಭಿಪ್ರಾಯ. ಕೇರಳ ಸರ್ಕಾರ ತನ್ನ ನೌಕರರಿಗಾಗಿ ಆರಂಭಿಸುತ್ತಿರುವ ಚಿಟ್ ಫಂಡ್ ವಿಚಾರವನ್ನು ನಮ್ಮ ಸರ್ಕಾರವೂ ಈ ಬಗ್ಗೆ ಯೋಚಿಸಿ ಪರಿಶೀಲಿಸ ಬಹುದಾದ ಅಂಶವಾಗಿದೆಯೆಂದು ನಾನು ಹೇಳಬಯಸುತ್ತೇನೆ.

ರಾಜ್ಯದ ಆರ್ಥಿಕಪರಿಸ್ಥಿತಿ ಚೆನ್ನಾಗಿಲ್ಲದಿರುವಾಗ ಹಣ ರೂಢಿಸಿಕೊಳ್ಳಲು ಹೊಸಮಾರ್ಗ ಗಳನ್ನು ಕಂಡುಹಿಡಿಯಬೇಕು. ಲಾಟರಿ ಎಗ್ಜಿಬಿಷನ್ ವಗೈರೆ ಸೂಕ್ತ ಮಾರ್ಗದಲ್ಲಿ ಸರ್ಕಾರವೇ ನಡೆಸಿ ಹಣ ರೂಢಿಸಿಕೊಳ್ಳುವುದು ಯುಕ್ತವೆಂದು ನನ್ನ ಅಭಿಪ್ರಾಯ. ಕೆಲವರು ಸರ್ಕಾರ ಲಾಟರಿ ಆರಂಭಿಸಲು ವಿರೋಧಿಸುತ್ತಿರುವುದು ಆಶ್ಚರ್ಯ. ಜನರ ನೈತಿಕಮಟ್ಟ ಇದರಿಂದ ಇಳಿಯುತ್ತದೆ ಎಂದು ತಿಳಿದಿರುವುದು ತಪ್ಪುಭಾವನೆ. ಕುಡಿತ, ಕುದುರೆ ಜೂಜು, ಕ್ಲಬ್ಬುಗಳ ಜೂಜಾಟ, ಚಿಟ್‌ಫಂಡ್ಸ್, ಸಾಂಸ್ಕೃತಿಕ ಮೇಳಗಳ ಹೆಸರಿನಲ್ಲಿ ಬಹಿರಂಗ ಜೂಜಾಟ ನಡೆಸಿ ನಮ್ಮ ಹಣ ದೋಚುತ್ತಿರುವಾಗ, ಅಶ್ಲೀಲ ಸಿನಿಮಾ ಚಿತ್ರಗಳು ದೇಶದಲ್ಲಿ ನಡೆಯುತ್ತಿರುವಾಗ ಇತರೇ ರಾಜ್ಯಗಳಲ್ಲಿ ಸರ್ಕಾರಗಳು ಲಾಟರಿಯನ್ನು ಅಧಿಕೃತವಾಗಿ ನಡೆಸುತ್ತಿರುವಾಗ ನಮ್ಮ ರಾಜ್ಯ ಸರ್ಕಾರ ಸೂಕ್ತಮಾರ್ಗದಲ್ಲಿ ನಡೆಸುವುದು ತಪ್ಪೇನೂ ಇಲ್ಲ. ಈ ಪ್ರಶ್ನೆ ಅಖಿಲಭಾರತೀಯ ಪ್ರಶ್ನೆ. ಇಲ್ಲಿ ಲಾಟರಿ ನಡೆಸದಿದ್ದರೆ, ಬೇರೆ ರಾಜ್ಯಗಳಲ್ಲಿ ನಡೆಯುವ ಲಾಟರಿಗೆ ಇಲ್ಲಿಂದ ಹಣ ಹೋಗು ವುದನ್ನು ತಪ್ಪಿಸಲಾಗುವುದಿಲ್ಲ. ಅಖಿಲಭಾರತದಲ್ಲೇ, ಈ ಪ್ರಶ್ನೆಯ ಬಗ್ಗೆ ನಿರ್ಧಾರವಾಗುವವರೆಗೂ ಆಗುವುದೂ ಕಷ್ಟ. ನಾವು ನಡೆಸುವುದರಲ್ಲಿ ತಪ್ಪೇನೂ ಇಲ್ಲ. ಸರ್ಕಾರ ಈ ಬಗ್ಗೆ ಆಗುಹೋಗು ಗಳನ್ನು ಗಮನಿಸಿ ಆರ್ಥಿಕ ಪರಿಸ್ಥಿತಿಯನ್ನು ಅಷ್ಟು ಸುಧಾರಿಸಿಕೊಳ್ಳಲಿ ಎಂದು ಅಪೇಕ್ಷಿಸುತ್ತೇನೆ. ಇತ್ತೀಚೆಗೆ ಫೈನಾನ್ಸ್ ಕಾರ್ಪೊರೇಷನ್ ವಗೈರೆ ಹೆಸರುಗಳನ್ನು ಇಟ್ಟುಕೊಂಡು ಲೇವಾದೇವಿ ವ್ಯವಹಾರ ನಡೆಸುವ ಅನೇಕ ಸಂಸ್ಥೆಗಳು ತಲೆ ಎತ್ತುತ್ತಿವೆ. ಇವುಗಳ ಕೋಟ್ಯಾಂತರ ವ್ಯವಹಾರ ನಡೆಯುತ್ತಿದೆ. ಕೆಲವು ವ್ಯಕ್ತಿಗಳು ತಮ್ಮ ಭಾರೀ ವ್ಯವಹಾರದ ಅನುಕೂಲಕ್ಕಾಗಿ ಮಾಡಿ ಕೊಳ್ಳುತ್ತಿರುವ ಇಂತಹ ಸಂಸ್ಥೆಗಳಿಂದ ಕೆಲವರ ಶ್ರೀಮಂತಿಕೆ ಬೆಳೆಯಲು ಅನುಕೂಲವಾಗುವುದೇ ಹೊರತು ಬೇರೇನೂ ಇಲ್ಲ. ಬ್ಯಾಂಕುಗಳೇ ರಾಷ್ಟ್ರೀಕರಣವಾಗಬೇಕಾಗಿರುವ ಪ್ರಸಂಗದಲ್ಲಿ ಇಂತಹ ಕಾರ್ಪೊರೇಷನ್‌ಗಳಿಂದ ಆರ್ಥಿಕ ಸಮತೋಲನಕ್ಕೇನಾದರೂ ಪರಿಣಾಮವಾದೀತೇ ಎಂದು ಗಂಭೀರವಾಗಿ ಈಗ ಯೋಚಿಸಬೇಕಾಗಿದೆ.

ಇನ್ನು ಕನ್ನಡ ಚಿತ್ರಗಳಿಗೆ ಸಹಾಯಧನ ನೀಡುವುದರಲ್ಲಿ ವಿಚಾರವಿಮರ್ಶೆ ಇರಬೇಕಾಗಿದೆ. ನಮ್ಮ ನಾಡಿನ ಸಂಸ್ಕೃತಿ ಸಭ್ಯತೆಗಳ ಪರಂಪರೆಗೆ ಅಪಚಾರವೆಸಗುವ ಅನೇಕ ಕೀಳು ದರ್ಜೆಯ ಚಿತ್ರಗಳು ಬರುತ್ತಿವೆ. ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಗಳಿಗೆ, ನೈತಿಕ ಮಟ್ಟದ ಚಿತ್ರಗಳಿಗೆ, ಸಹಾಯಧನ ಹೆಚ್ಚು ಕೊಟ್ಟರೂ ಚಿಂತೆ ಇಲ್ಲ, ಅತ್ಯುತ್ತಮ ಚಿತ್ರಗಳಿಗೆ ಮಾತ್ರ ನೆರವು ನೀಡಿರೆಂದು ಸೂಚಿಸಬಯಸುತ್ತೇನೆ.

3-00 P.M.

ಕೊನೆಯದಾಗಿ ಕನ್ನಡಿಗರ ದುರ್ದೈವವೋ, ಅಧಿಕಾರದಲ್ಲಿರುವವರ ಹೊಯ್ದಾಟ ಮನೋ ಭಾವದ ಫಲವೋ ರಾಜ್ಯಕ್ಕೆ ಇನ್ನೂ ಕರ್ನಾಟಕ ಎಂದು ನಾಮಕರಣವಾಗದಿರುವುದು ಒಂದು ದೊಡ್ಡ ಕೊರಗು ಜನತೆಗಿದೆ. ಇಂತಹ ರಾಷ್ಟ್ರೀಯ ಪ್ರಶ್ನೆಯಲ್ಲಿ ''ಅಂದರಕಿ ಮಂಚಿವಾಳ್ಳು ಅನಂತಯ್ಯ'' ಆಗುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೇ ಅಗ್ರಸ್ಥಾನ. ಈ ಪ್ರಜಾಪ್ರಭುತ್ವ ನೀತಿಗೆ ವಿರೋಧ ಹೋಗುವುದೂ ಸರಿಯಲ್ಲ. ಕಾರಣ ಸರ್ಕಾರ ಬಹುಮತಕ್ಕೆ ಮನ್ನಣೆ ಕೊಟ್ಟು ಈ ಬಗ್ಗೆ ಈ ಅಧಿವೇಶನದಲ್ಲೇ ನಾಮಕರಣ ಕಾರ್ಯ ಮಗು ಮುಪ್ಪಾಗು ವವರೆಗೂ ತಳ್ಳದೆ ಸರ್ಕಾರ ನಿರ್ಣಯ ಮಾಡಲೆಂದು ವಿನಂತಿಮಾಡಿಕೊಂಡು, ಆಯವ್ಯಯ ಪಟ್ಟಿಯನ್ನು ಸ್ವಾಗತ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಆಯವ್ಯಯದ ಮೇಲೆ ಮಾತನಾಡುವ ಪೂರ್ವದಲ್ಲಿ ನಾನು ಹಿಂದೆ ವಿಷಾದದಿಂದ ಈ ಅಸೆಂಬ್ಲಿಯಲ್ಲಿ ಹೇಳಿದ ಸಲಹೆಯನ್ನು ಮತ್ತೊಂದು ಬಾರಿ ಈ ಮಾನ್ಯ ಸಭೆಗೆ ಮತ್ತು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಕಳೆದ ಎರಡು ವರ್ಷದಲ್ಲಿ ನಾನು ಇದೇ ಸಭೆಯಲ್ಲಿ ಒಂದು ಮಾತನ್ನು ಹೇಳಿದ್ದೆ. ಇಂದು

ಪ್ರಜಾಪ್ರಭುತ್ವವು ಬಾಳಿ ಬೆಳಗಲು ಮತ್ತು ದೇಶದೆಲ್ಲ ಸರ್ವಾಂಗ ಸುಂದರವಾದ ಆಡಳಿತ ನಡೆವ ದೃಷ್ಟಿಯಿಂದ, ದೇಶದ ಹಿತಕ್ಕಾಗಿ ಹೋರಾಡಿ, ಭಾರತ ದೇಶದ ಹಣೆಬರಹವನ್ನು ಬರೆದ ಡಾಕ್ಟರ್ ಅಂಬೇಡ್ಕರ್ ಅವರ ಭಾವ ಚಿತ್ರವನ್ನು ವಿಧಾನಸಭೆಯಲ್ಲಿ ಹಾಕಬೇಕೆಂದು. ಹಾಗೆ ಹಾಕುವುದರಿಂದ ನಾವು ಸಮಯೋಚಿತವಾದಂತಹ ಮತ್ತು ಒಳ್ಳೆಯ ಆದರ ಭಾವನೆಯಿಂದ ಗೌರವ ಸಲ್ಲಿಸುವ ದೃಷ್ಟಿಯಿಂದ ಅನುಕೂಲವಾಗುತ್ತದೆ, ಅದರ ಸಲುವಾಗಿ ಡಾಕ್ಟರ್ ಅಂಬೇಡ್ಕರ್ ಅವರ ಭಾವ ಚಿತ್ರವನ್ನು ಸರ್ಕಾರದವರು ಸರ್ದಾರ್ ವಲ್ಲಭಾಯಿ ಪಟೇಲರ ಫೋಟೋದ ಪಕ್ಕಕ್ಕೆ ಹಾಕಬೇಕೆಂದು ಕೇಳಿಕೊಂಡಿದ್ದೆ. ಏಕೆಂದರೆ ಡಾಕ್ಟರ್ ಅಂಬೇಡ್ಕರ್, ಸರ್ದಾರ್ ಪಟೇಲರ, ನೆಹರೂರವರ, ರಾಜೇಂದ್ರ ಪ್ರಸಾದರ ಮತ್ತು ಡಾ. ರಾಧಾಕೃಷ್ಣನ್‌ರವರ ಮಾಲಿಕೆಯಲ್ಲಿ ಬರುತ್ತಾರೆ ಮತ್ತು ಅದಕ್ಕೆ ಯಾವುದರಲ್ಲೂ ಕಡಿಮೆ ಇಲ್ಲ. ನೆಹರೂರವರು ಹೇಳಿದ್ದಾರೆ "ಭಾರತ ದೇಶದಲ್ಲಿ ಸಮಾಜ ಕ್ರಾಂತಿಯನ್ನು ಡಾಕ್ಟರ್ ಅಂಬೇಡ್ಕರ್ ಮಾಡಿದ್ದಾರೆ ಇಂಥ ಒಂದು ಅಮೂಲ್ಯ ರತ್ನ ನನ್ನ ಮಂತ್ರಿಮಂಡಲದಲ್ಲಿ ಬೇರೆಯಾರು ಸಿಗುವುದಿಲ್ಲ, ಇವರ ಬಗ್ಗೆ ಯಾವ ವಿಶೇಷವಾದಂತಹ ಗೌರವವನ್ನು ಸಲ್ಲಿಸಿದರೂ ಅದು ಹೆಚ್ಚಾಗಲಾರದು" ಎಂದು. ಒಟ್ಟಾರೆ, ಡಾ. ಅಂಬೇಡ್ಕರವರು ರಾಜ್ಯಾಂಗವನ್ನು ಬರೆದರು. ಅವರು ಅಪಾರವಾದ ರಾಷ್ಟ್ರ ಸೇವೆ ಮಾಡಿರುವುದರಿಂದ ಅವರನ್ನು ಪ್ರಶಂಸಿಸಿ, ಕೇಂದ್ರದವರು ಒಂದು ಕಂಚಿನ ಪ್ರತಿಮೆಯನ್ನು ಪಾರ್ಲಿಮೆಂಟ್ ಭವನದ ಆವರಣದಲ್ಲಿ ನಿಲ್ಲಿಸಿ ಗೌರವಿಸಿದ್ದಾರೆ. ಅದೇ ರೀತಿ ಸತ್ಸಂಪ್ರದಾಯವನ್ನು ಉಳಿದ ಪ್ರಾಂತ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ಮದ್ರಾಸ್ ಮತ್ತು ಉತ್ತರ ಹಿಂದೂಸ್ಥಾನದ ಅನೇಕ ಪ್ರಾಂತಗಳಲ್ಲಿ ಡಾ. ಅಂಬೇಡ್ಕರವರ ಭಾವಚಿತ್ರವನ್ನು ಅಸೆಂಬ್ಲಿಯಲ್ಲಿ ಹಾಕಿದ್ದಾರೆ. ಮಹಾರಾಷ್ಟ್ರ ಅಸೆಂಬ್ಲಿ ಮತ್ತು ಹೈಕೋರ್ಟು ಮಧ್ಯದಲ್ಲಿ ಕಂಚಿನ ಪ್ರತಿಮೆಯನ್ನು ನಿಲ್ಲಿಸಿದ್ದಾರೆ. ಅದರ ಸಲುವಾಗಿ, ಈ ವಿಷಯದ ಬಗ್ಗೆ ನಾನು ಹಿಂದಿನ ಅಧ್ಯಕ್ಷರಾದಂತಹ ಶ್ರೀ ವೈಕುಂಠಬಾಳಿಗಾರವರಲ್ಲಿ ಚರ್ಚಿಸಿದ್ದೆ. ಆಗ ಅವರು, ಇದು ಉತ್ತಮವಾದ ಸಲಹೆ, ಮಾನ್ಯ ಮುಖ್ಯ ಮಂತ್ರಿಯವರೊಡನೆ ಮಾತನಾಡುತ್ತೇನೆ ಎಂದು ಹೇಳಿದ್ದರು. ಅದೇ ರೀತಿ ಹಿಂದಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೊಡನೆ ಕೂಡ ಇದನ್ನು ನಾನು ಮಾತನಾಡಿದ್ದೆ. ಅದನ್ನು ಸಹಾನುಭೂತಿಯಿಂದ ಪರಿಶೀಲನೆಮಾಡಿ ಒಂದು ತೈಲ ಚಿತ್ರವನ್ನು ಹಾಕುವಂತಹ ಪ್ರಯತ್ನವನ್ನು ಮಾಡಬೇಕು. ಈ ಏಪ್ರಿಲ್ ತಿಂಗಳ 14ನೇ ತಾರೀಖಿನೊಳಗಾಗಿ ಅದನ್ನು ಹಾಕುವುದಾಗಿ ಭರವಸೆಯನ್ನು ಕೊಟ್ಟಿದ್ದರು. ಆ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬರು ಕೈಲಾಸವಾಸಿಗಳಾಗಿದ್ದಾರೆ. ಇನ್ನೊಬ್ಬರು ಭಾರತದ ಉನ್ನತ ಮಟ್ಟದ ಕಾಂಗ್ರೆಸ್ ಸಂಸ್ಥೆಯಲ್ಲಿ ಅಧಿಕಾರದಲ್ಲಿದ್ದಾರೆ. ಅವರು ಏನೊಂದು ವಚನವನ್ನು ಕೊಟ್ಟಿದ್ದಾರೆಯೋ ಆ ಪ್ರಕಾರ ಈ ಹೊತ್ತಿನ ದಿವಸ ಸರಕಾರ ನಡಿಸಿ ಕೊಡಬೇಕು.

ಇನ್ನೊಂದು ಸಲ ಈ ಸಲಹೆಯನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಕೊಠಾವಳೆಯವರಿಗೂ ಮತ್ತು ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರಪಾಟೀಲರಿಗೂ ನಾನು ಹೇಳಬಯಸುತ್ತೇನೆ. ಅದು ಏನೆಂದರೆ ಡಾ. ಅಂಬೇಡ್ಕರ್ ಅವರ ಫೋಟೋವನ್ನು ಈ ಅಸೆಂಬ್ಲಿ ಹಾಲನಲ್ಲಿ ಹಾಕುವುದಕ್ಕೆ ವ್ಯವಸ್ಥೆಮಾಡಬೇಕು. ಇದನ್ನು ಹಾಕುವ ಬಗ್ಗೆ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಶ್ರೀಮಾನ್ ಬಿ. ವೈಕುಂಠ ಬಾಳಿಗಾ ಅವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಇದೇ ಏಪ್ರಿಲ್ ತಿಂಗಳು 14ನೇ ತಾರೀಖಿನ ಒಳಗಾಗಿ ಈ ನಿರ್ಧಾರವನ್ನು ಕೈಗೊಳ್ಳಬೇಕು. ಇನ್ನು ಉಳಿದ ನಮ್ಮ ದೇಶದ ಅನೇಕ ಪ್ರಾಂತ್ಯಗಳು ಡಾ॥ ಅಂಬೇಡ್ಕರ್ ಅವರ ಭಾವಚಿತ್ರವನ್ನು ಹಾಕುವುದರಲ್ಲಿ ಮರ್ಯಾದೆ ಕೊಟ್ಟಿದ್ದಾರೆ. ಅದರಲ್ಲಿ ಮೈಸೂರು ಹಿಂದೆ ಉಳಿಯಬಾರದು. ಇನ್ನೊಂದು ಸಲಹೆಯೇನೆಂದರೆ ಬೇರೆ ಪ್ರಾಂತ್ಯಗಳಲ್ಲಿ ಡಾ॥ ಅಂಬೇಡ್ಕರ್ ಅವರ ಕಂಚಿನ ಪುತ್ಥಳಿಯನ್ನು ಮಾಡಿಸಿ ನಿಲ್ಲಿಸಿದ್ದಾರೆ ಅದೇ ರೀತಿ ಮೈಸೂರು ಸರ್ಕಾರದವರು ವಿಧಾನಸೌಧದ ಮುಂದೆ ಒಂದು ಕಂಚಿನ ಪುತ್ಥಳಿಯನ್ನು ನಿರ್ಮಿಸುವ ಬಗ್ಗೆ ಸ್ಥಾಪನೆ ಮಾಡುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಬೇಕು ಎಂದು ನಾನು ಸೂಚನೆ ಮಾಡುತ್ತೇನೆ. 3ನೆಯದಾಗಿ ಕೆ. ಆರ್. ಸರ್ಕಲ್‌ನಿಂದ ಕಾಫೀ ಬೋರ್ಡಿನವರಗೆ ಇರತಕ್ಕಂಥ ವಿಧಾನವೀಧಿಗೆ ಡಾ. ಅಂಬೇಡ್ಕರ್ ರೋಡು ಎಂದು ಹೆಸರಿಡಬೇಕು. ಮತ್ತು ಬೆಂಗಳೂರು ನಗರದಲ್ಲಿ ರವೀಂದ್ರ ಕಲಾಕ್ಷೇತ್ರದ ಪಕ್ಕದಲ್ಲಿರತಕ್ಕ ಜಾಗದಲ್ಲಿ ಡಾ॥ ಅಂಬೇಡ್ಕರ್ ಭವನ ಒಂದು ಕಟ್ಟಿಸಿ ಅದನ್ನು ಸಾಮಾಜಿಕ ಕೆಲಸಕಾರ್ಯಗಳಿಗೆ ಕೊಡುವಂತಹ ಒಂದು ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಬಡ್ಜೆಟ್ಟಿನ ವಿಷಯವಾಗಿ ಹೇಳುವಾಗ ಶ್ರೀಮಾನ್ ರಾಮಕೃಷ್ಣಹೆಗಡೆಯವರು ಇಲ್ಲಿ ಇಲ್ಲ. ಅವರು ಮುಂದಿನ ವರ್ಷದ ಬಡ್ಜೆಟ್ಟನ್ನು ಮಂಡಿಸುವ ವೇಳೆಗೆ ಇಲ್ಲಿ ಇರುವುದಿಲ್ಲ, ರಾಯಭಾರಿ ಆಗಿ ಹೋಗುತ್ತೇನೆ ಎಂದು ತಿಳಿದುಕೊಂಡಿರುವಂತಿದೆ. ಮುಖ್ಯವಾಗಿ ಈ ಹೊತ್ತಿನ ದಿವಸ ಖೋತಾ ಆಯವ್ಯಯವನ್ನು ಮಂಡಿಸಿರುವುದನ್ನು ನೋಡಿದಾಗ ನಮ್ಮ ನಿರೀಕ್ಷಣೆ ನಿರಾಶೆಯಲ್ಲಿ ಕೊನೆ

(ಶ್ರೀ ಎಸ್. ಎಸ್. ಅರಕೇರಿ)

ಗೊಳ್ಳುವ ಹಾಗೆ ಕಾಣುತ್ತದೆ. 2½ ಕೋಟಿ ಜನತೆಯು 2-3 ಆಯವ್ಯಯ ಪತ್ರವನ್ನು ನೋಡಿದಾಗ ಬಡವರ ಸಲುವಾಗಿ ಯಾವ ಒಂದು ಪ್ರಾವಿಜನ್ನೂ ಮಾಡಿಲ್ಲ. ಇಷ್ಟೇ ಅಲ್ಲದೆ ಈ ಹೊತ್ತಿನ ದಿವಸ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಇದು ಒಂದು ಗಂಭೀರವಾದ ಸಮಸ್ಯೆಯಾಗಿದೆ. ಇದರ ಬಗ್ಗೆ ಹೇಳುವಾಗ ಮನಸ್ಸು ಬಹಳ ನೋಯುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸ್ ಇದೆ. ಜಿಲ್ಲಾ ಎಂಪ್ಲಾಯ್‌ಮೆಂಟ್ ಕಮಿಟಿ ಎಂದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಕಮಿಟಿಯನ್ನು ಮಾಡಿ ಅದಕ್ಕೆ ಎಂ. ಎಲ್. ಎ. ಗಳನ್ನು ಸದಸ್ಯರನ್ನಾಗಿ ಮಾಡಿದ್ದಾರೆ. ಬಿಜಾಪುರ ಜಿಲ್ಲಾ ಎಂಪ್ಲಾಯ್‌ಮೆಂಟ್ ಕಮಿಟಿಗೆ ನನ್ನನ್ನು ಸಹ ಒಬ್ಬ ಸದಸ್ಯನನ್ನಾಗಿ ಸೇರಿಸಿದ್ದಾರೆ. ಕಳೆದ 1½ ವರ್ಷದಿಂದ ನಮ್ಮ ಜಿಲ್ಲಾ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಕಮಿಟಿಯ ಮೀಟಿಂಗ್ ಕರೆದಿಲ್ಲ. ಪ್ರತಿಯೊಂದು ಜಿಲ್ಲೆಯಲ್ಲಿಯೂ 50 ಸಾವಿರ ಮತ್ತು 75 ಸಾವಿರದವರೆಗೂ ನಿರುದ್ಯೋಗಿಗಳ ಸಂಖ್ಯೆ ಇದೆ. ಈ ಹೊತ್ತು ಇಡೀ ರಾಜ್ಯದ ದೃಷ್ಟಿಯಿಂದ ನೋಡಿದರೆ 12 ಲಕ್ಷ ಜನ ನಿರುದ್ಯೋಗಿಗಳು ಇದ್ದಾರೆ. 2½ ಲಕ್ಷ ಜನ ಗ್ರಾಜುಯೇಟ್ಸ್ ನಿರುದ್ಯೋಗಿಗಳು ಇದ್ದಾರೆ. 5 ಸಾವಿರ ಜನ ಇಂಜಿನಿಯರುಗಳು ನಿರುದ್ಯೋಗಿಗಳಾಗಿದ್ದಾರೆ. ಒಂದು ಉದಾಹರಣೆ ಹೇಳುತ್ತೇನೆ. ನನ್ನ ಮಿತ್ರರೊಬ್ಬರು ಬ್ರಾಹ್ಮಣರು ಎಂ. ಎಸ್. ಸಿ. ಪಾಸು ಮಾಡಿದ್ದಾರೆ. ಅವರು ಬ್ರಾಹ್ಮಣರಾದಂತಹ ತಪ್ಪಿಗಾಗಿ ಅವರಿಗೆ ಈಗ 3 ವರ್ಷಗಳಿಂದ ಒಂದು ಕೆಲಸ ಸಿಕ್ಕುತ್ತಾ ಇಲ್ಲ. ಇದನ್ನು ನೋಡಿದಾಗ ಬ್ರಾಹ್ಮಣ ಎಂಬ ಒಂದೇ ಕಾರಣದಿಂದ ಕೆಲಸ ಸಿಕ್ಕಿಲ್ಲ ಎಂದು ನನ್ನ ಭಾವನೆಯಾಗಿದೆ.

ಉಪಾಧ್ಯಕ್ಷರು.—ಮುಂದೆ ಆಯಾ ಇಲಾಖೆಗಳ ಡಿಮ್ಯಾಂಡ್ ಬಂದಾಗ ಮಾನ್ಯಸದಸ್ಯರು ಈ ವಿಚಾರಗಳನ್ನು ಪ್ರಸ್ತಾಪ ಮಾಡಬಹುದು. ಈಗ ಜನರಲ್ ಆಗಿ ಮಾತನಾಡಿ ಜಾಗ್ರತೆ ಮುಗಿಸಬೇಕು.

ಶ್ರೀ ಎಸ್. ಎಸ್. ಅರಕೇರಿ.—ಇಂತಹ ಪರಿಸ್ಥಿತಿ ಇರುವುದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಭಾರಿ ನೀರಾವರಿ ಯೋಜನೆಗಳ ಬಗ್ಗೆ ಒಂದು ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ಸಾಲಾಗಿ ಕುಳಿತಿರುವ ಕಲ್ಲಿನ ದೇವರುಗಳಿಗೆ ಬೆಣ್ಣೆಯನ್ನು ಸ್ವಲ್ಪ ಸ್ವಲ್ಪ ಹಚ್ಚುವಂತೆ ಈ ಅರ್ಥಿಕ ಮಂತ್ರಿಗಳು ಎಲ್ಲಾ ಯೋಜನೆಗಳಿಗೂ ಸ್ವಲ್ಪ ಸ್ವಲ್ಪ ಹಣವನ್ನು ಹಂಚಿದ್ದಾರೆ. ಎಲ್ಲರನ್ನು ಸಮಾಧಾನಪಡಿಸುವುದಕ್ಕೆ ಹೋಗಿ ಯಾವ ಯೋಜನೆಯನ್ನು ಸಹ ಜಾಗ್ರತೆ ಮುಗಿಸಲು ವಿಫಲರಾಗಿದ್ದಾರೆ. ಒಂದು ಯೋಜನೆಯನ್ನು ಕಟ್ಟಿ ಮುಗಿಸಿ ಇನ್ನೊಂದು ಯೋಜನೆಯನ್ನು ತೆಗೆದುಕೊಳ್ಳುವ ನೀತಿ ಈ ಸರ್ಕಾರಕ್ಕೆ ಇಲ್ಲ. ಅಪ್ಪರ್ ಕೃಷ್ಣಾಯೋಜನೆಗೆ ಕೇವಲ 2 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಹಣದಲ್ಲಿ ಆಲಮಟ್ಟಿ ಯೋಜನೆಗೆ ಏನೂ ಸಿಗುವುದಿಲ್ಲವೆಂದು ಕಾಣುತ್ತದೆ. ವಿಶ್ವಬ್ಯಾಂಕ್‌ನವರು ತಾರೀಖು 27-1-1969ರಲ್ಲಿ ಬಂದು ಈ ಯೋಜನೆಯ ಪ್ರದೇಶವನ್ನು ನೋಡಿಕೊಂಡು ಹೋಗಿದ್ದಾರೆ. ಹಿಂದೆ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಆಲಮಟ್ಟಿಯಲ್ಲಿ ಹಾಕಿದ್ದ ಅಡಿಗಲ್ಲನ್ನು ಯಾರೋ ತೆಗೆದು ಹಾಕಿದ್ದಾರೆ. ಈ ರೀತಿ ತೆಗೆದವರಿಗೂ ಸರ್ಕಾರದವರಿಗೂ ಅಂತರ್ಗತವಾಗಿ ಏನಾದರೂ ಪತ್ರ ವ್ಯವಹಾರ ನಡೆದಿರಬಹುದೆಂದು ಕಾಣುತ್ತದೆ. ಈ ರೀತಿ ತೆಗೆದಿದ್ದರಿಂದ ಹಿಂದಿನ ಪ್ರಧಾನಮಂತ್ರಿಗಳಿಗೆ ಅಗೌರವ ತೋರಿಸಿದಂತಾಗಿದೆಯೆಂದು ತಿಳಿದಿದ್ದೇನೆ. ಈಗ ಆಲಮಟ್ಟಿ ಸ್ಮಶಾನ ಇದ್ದಂತೆ ಇದೆ. ಅತಿ ಮುತುವರ್ಜಿಯಿಂದ ಸರ್ಕಾರದವರು ಈ ಯೋಜನೆಯನ್ನು ಕೈಗೊಳ್ಳುತ್ತಾರೆಯೋ ಎಂಬ ಬಗ್ಗೆ ನಮಗೆ ಸಂಶಯ ಬಂದಿದೆ. ಈ ಯೋಜನೆಯನ್ನು ಕೈಗೊಳ್ಳುವುದರಿಂದ ಹಳೆಯ ಮೈಸೂರಿನ ಯಾರಿಗಾದರೂ ಅನ್ಯಾಯ ಮಾಡಿದಂತಾಗುವುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿದುಕೊಂಡಿದ್ದರೆ, ಅವರಿಗೆ ಆ ರೀತಿ ಭಾವನೆ ಇದ್ದರೆ, ಅದನ್ನು ಪೂರ್ತಿಯಾಗಿ ಮರೆತು, ಈ ಯೋಜನೆಯನು ವಿಶ್ವಬ್ಯಾಂಕ್‌ನಿಂದ ಸಾಲ ಪಡೆದಾದರೂ ಸಹ ಕಾರ್ಯಗತ ಮಾಡಿ ಮುಗಿಸಿದರೆ ಬರಗಾಲದ ಜಿಲ್ಲೆಗಳಾದ ಗುಲ್ಬರ್ಗ, ರಾಯಚೂರು, ಬಿಜಾಪುರ ಜಿಲ್ಲೆಯ ಜನರಿಗೆ ಅನುಕೂಲ ಮಾಡಿದಂತಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಯೋಜನೆಯನ್ನು ಪ್ರಾಮಾಣಿಕತನದಿಂದ ಜಾಗ್ರತೆ ಮುಗಿಸಬೇಕೆಂದು ಹೇಳುತ್ತೇನೆ.

ಇನ್ನು ಆಸ್ಪತ್ರೆಗಳ ಬಗ್ಗೆ ಹೇಳಬೇಕೆಂದರೆ ಬಿಜಾಪುರಕ್ಕೆ 500 ಹಾಸಿಗೆಗಳು ಉಳ್ಳಂತಹ ಒಂದು ಸಿವಿಲ್ ಆಸ್ಪತ್ರೆಯನ್ನು ಮಂಜೂರು ಮಾಡಬೇಕೆಂದು ಕೇಂದ್ರಸರ್ಕಾರಕ್ಕೆ ಮತ್ತು ರಾಜ್ಯ

ಸರ್ಕಾರಕ್ಕೆ ಕೇಳಿದ್ದೆವು. ಡಿ. ಡಿ. ಸಿ. ಮೀಟಿಂಗ್‌ನಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನು ಪಾಸ್ ಮಾಡಿ ಸರ್ಕಾರಕ್ಕೆ ಕಳಿಸಿದ್ದೆವು. ಆದರೆ ಈ ಸಾಲಿನ ಬಡ್ಜೆಟ್‌ನಲ್ಲಿ 100 ಹಾಸಿಗೆಗಳು ಉಳ್ಳ ಸ್ಯಾನಿಟೋರಿಯಂ ಒಂದನ್ನು ಮಂಜೂರು ಮಾಡಿರುವುದಾಗಿ ಹೇಳಿದ್ದಾರೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಟೂರಿಸ್ಟ್ ಸೆಂಟರ್‌ನ್ನು ಪ್ರಾರಂಭ ಮಾಡುವ ಬಗ್ಗೆ ಬಡ್ಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. ಅಖಿಲ ಭಾರತದ ಮಟ್ಟದಲ್ಲಿ ತೆಗೆದುಕೊಂಡರೆ, ಅನೇಕ ಪ್ರವಾಸಿಗರು ನಮ್ಮ ಜಿಲ್ಲೆಗೆ ಬರುತ್ತಾರೆ. ಅವರು ಇಳಿದುಕೊಳ್ಳುವುದಕ್ಕೆ ಒಂದು ಒಳ್ಳೆಯ ಹೋಟಲ್ ಇಲ್ಲ. ಖಾಸಗೀ ಹೋಟಲ್‌ಗಳಲ್ಲಿ ಸುರಾದೇವಿಯ ಕಾಟ ಇರುವುದರಿಂದ ಒಳ್ಳೆಯ ಜನರು ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ. ಎಲ್. ಐ. ಜಿ. ಟೂರಿಸ್ಟ್ ಬಂಗ್ಲೆ ಒಂದು ಇದೆ. ಅಲ್ಲಿ 10 ರೂಮ್‌ಗಳು ಮಾತ್ರ ಇವೆ. ಇನ್ನೂ ಹತ್ತು ರೂಮ್‌ಗಳನ್ನು ಕಟ್ಟಿಸಬೇಕೆಂದು ಸರ್ಕಾರಕ್ಕೆ ಕೇಳಿದ್ದೆವು. ಆದರೆ ಆ ಬಗ್ಗೆ ಹಣವನ್ನು ಬಡ್ಜೆಟ್‌ನಲ್ಲಿ ಸೇರಿಸಿಲ್ಲ. ಈ ಹೊತ್ತಿನದಿವಸ ಬಿಜಾಪುರಕ್ಕೆ ಬರುವ ಪ್ರವಾಸಿಗಳು ಸರಿಯಾದ ವಸತಿ ಸೌಕರ್ಯವಿಲ್ಲದೆ ನಿರಾಶೆಯಿಂದ ವಾಪಸ್ ಹೋಗಬೇಕಾಗಿದೆ. ಅಲ್ಲಿ ಟೂರಿಸ್ಟ್ ವ್ಯಾನ್‌ಗಳು ಸಹ ಇಲ್ಲ. ಇತಿಹಾಸದ ಸ್ಥಳಗಳು ಒಂದು ಮೈಲಿ ಅರ್ಧ ಮೈಲಿದೂರ ದೂರದಲ್ಲಿ ಇವೆ. ಈ ಸ್ಥಳಗಳಿಗೆ ಹೋಗಿಬರುವುದು ಒಂದು ಸಮಸ್ಯೆಯಾಗಿದೆ. ಆದ್ದರಿಂದ ವ್ಯಾನ್‌ಗಳನ್ನು ಒದಗಿಸುವುದು ಒಳ್ಳೆಯದು. ಈ ಎಲ್ಲಾ ಕುಂದುಕೊರತೆಗಳನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಮೂರನೇದಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಹಿಂದುಳಿದ ಜನಾಂಗದವರನ್ನು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುವಂತಹ ಸರಿಯಾದ ಪಾಲಸಿಗಳನ್ನು ಇಲ್ಲಿ ಮಾಡಬೇಕು. ಲ್ಯಾಂಡ್ ರೆವೆನ್ಯೂ ಆಕ್ಟ್‌ನ್ನು ಅಮೆಂಡು ಮಾಡುವಾಗ ಒಂದು ಮಾತನ್ನು ಸರಕಾರ ಲಕ್ಷದಲ್ಲಿ ಇಟ್ಟುಕೊಳ್ಳಬೇಕು ಎಂದು ನಾನು ಹಿಂದೆ ಕೂಡ ಸರಕಾರಕ್ಕೆ ಸೂಚನೆಗಳನ್ನು ಕಳುಹಿಸಿದ್ದೆ. ಈಚೆಗೆ ಸರಕಾರ ಈ ಆಕ್ಟ್‌ನ್ನು ಅಮೆಂಡು ಮಾಡುತ್ತಾರೆಂದು ಕೇಳಿದ್ದೇನೆ. ಹಾಗೆ ಅಮೆಂಡ್‌ಮೆಂಟನ್ನು ತರುವಾಗ ಸರಕಾರ ನೇರವಾಗಿ ಹಿಂದುಳಿದವರ ಜನಾಂಗಕ್ಕೆ ಅನುಕೂಲವಾಗುವಂತೆ ಮಾಡಬೇಕು ಎಂದು ಇಲ್ಲಿ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಇದು ಪ್ರತಿ ಸಾರಿ ಅಸೆಂಬ್ಲಿ ನಡೆಯುವಾಗಲೂ ಹೇಳುತ್ತಲೇ ಇದ್ದೇನೆ. ಅದು ಈ ಸಭಾ ಭವನದಲ್ಲಿ ನಮ್ಮ ಹಿಂದುಳಿದ ಜನಾಂಗದ ನಾಯಕರಾದ ಮತ್ತು ರಾಷ್ಟ್ರೀಯ ನಾಯಕರಾದ ಶ್ರೀ ಅಂಬೇಡಕರ್‌ರವರ ಫೋಟೋ ಹಾಕಬೇಕೆಂದು ಎಷ್ಟು ಸಾರಿ ಸರಕಾರಕ್ಕೆ ಮನವಿ ಮಾಡಿದರೂ ಇನ್ನೂ ಅದನ್ನು ಕಾರ್ಯಗತ ಮಾಡಲಿಲ್ಲ. ಇಲ್ಲಿ ಇತರ ಎಲ್ಲಾ ನಾಯಕರ ಫೋಟೋಗಳನ್ನು ಹಾಕಿರುತ್ತಾರೆ. ಆದರೆ ಇನ್ನೂ ಇಲ್ಲಿ ಡಾಕ್ಟರ್ ಅಂಬೇಡಕರ್‌ರವರ ಫೋಟೋವನ್ನು ಹಾಕಿಲ್ಲ. ರಾಜ್ಯಾಂಗವನ್ನು ರೂಪಿಸಿದ ಇಂತಹ ಮಹಾನಾಯಕನ ಚಿತ್ರವನ್ನು ಇಲ್ಲಿ ಹಾಕುವುದು ಯೋಗ್ಯ. ಇದನ್ನು ಸರಕಾರ ಬೇಗನೆ ಇಲ್ಲಿ ಹಾಕಲು ಪ್ರಯತ್ನ ಮಾಡಬೇಕು ಹಾಗೆ ಮಾಡದೇ ಹೋದರೆ ನಾವು ಚಳವಳಿ ಮಾಡಬೇಕಾಗಿ ಬರುತ್ತದೆ. ನಮ್ಮ ಜನಾಂಗಕ್ಕೆ ಸೇರಿದ ಶ್ರೀ ರಾಚಯ್ಯನವರು, ಶ್ರೀ ರಾಮಕೃಷ್ಣರವರು ಹಾಗೂ ಉಪಾಧ್ಯಕ್ಷರಾದ ಶ್ರೀ ಮಂಜುನಾಥರವರು ಇದ್ದಾರೆ. ಇನ್ನು 1972 ನೇ ಎಲೆಕ್ಷನ್ ಬರುವ ವೇಳೆಗೆ ಯಾರು ಇರುತ್ತಾರೋ ನಮಗೆ ಗೊತ್ತಿಲ್ಲ. ಆದುದರಿಂದ ಇಲ್ಲಿ ಡಾ. ಅಂಬೇಡಕರ್‌ರವರ ಫೋಟವನ್ನು ಬೇಗನೆ ಹಾಕಬೇಕೆಂದು ಸರಕಾರದ ಕೀರ್ತಿ ಹಾಗೂ ಹೆಸರನ್ನು ಉಳಿಸಬೇಕೆಂದೂ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಬಡ್ಜೆಟ್ಟನ್ನು ಇಟ್ಟಿರುವ ಸಂದರ್ಭದಲ್ಲಿ, ಆ ಬಡ್ಜೆಟ್ಟನ್ನು ಸ್ವಾಗತಿಸುತ್ತಾ, ನಾನು ಕೆಲವು ಸೂಚನೆಗಳನ್ನು ಇಡುವುದಕ್ಕಾಗಿ ನಿಂತುಕೊಂಡಿದ್ದೇನೆ.

ಮೊದಲನೇದಾಗಿ ನಮಗೆ ಈ ವರ್ಷ ಬಂದ ಕಷ್ಟದ ಸಮಯದಲ್ಲಿ, ಫ್ಯಾಮಿನ್ ಬಂತು ಎಂದು, ಕ್ಷಾಮ ಪರಿಹಾರದ ಕೆಲಸಗಳನ್ನು ಕೇಂದ್ರ ಸರಕಾರದವರ ಸಹಾಯದಿಂದ, ರಾಜ್ಯ ಸರಕಾರದವರು ಮಾಡಿದರು ಮತ್ತು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಮಾಡಲು ಸುಮಾರು ಹತ್ತು ಕೋಟಿ ರೂಪಾಯಿಯಷ್ಟು ಸಹಾಯ ಧನವನ್ನು ಕೊಟ್ಟು ಸುಧಾರಿಸಿದರು. ಇದಕ್ಕಾಗಿ ನಾನು ಇಲ್ಲಿ ಮೊದಲು ಕೇಂದ್ರ ಸರ್ಕಾರಕ್ಕೂ ಮತ್ತು ನಮ್ಮ ಸರ್ಕಾರಕ್ಕೂ ನನ್ನ ಧನ್ಯವಾದಗಳನ್ನು ಹೇಳಬೇಕಾಗಿದೆ. ಏಕೆಂದರೆ ನಾನು ಅಂತಹ ಒಂದು ಏರಿಯಾದಿಂದ ಬರುತ್ತಿದ್ದೇನೆ. ಅಲ್ಲಿನ ಜನರ ಕಷ್ಟಗಳನ್ನು ಸುಧಾರಿಸಬೇಕೆಂದು ಇವರ ಸಲುವಾಗಿ ಕೇಂದ್ರ ಸರಕಾರದವರು ರಾಜ್ಯ ಸರಕಾರಕ್ಕೆ ಸಹಾಯ ಮಾಡಿರುವುದಕ್ಕಾಗಿ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ನನ್ನ ಮೊದಲನೇ ಕರ್ತವ್ಯ ಎಂತಲೂ ಭಾವಿಸಿದ್ದೇನೆ. ಆದರೆ ಹೀಗೇ ಎಷ್ಟು ದಿವಸ ಡ್ರಾಟ್

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಸ್ಟ್ರಿಕನ್ ಏರಿಯಾ, ಇಲ್ಲವೇ ಸ್ಕೇರ್ಸಿಟಿ ಏರಿಯಾ ಎಂದು ಹೇಳಿಕೊಳ್ಳಬೇಕು, ಹೀಗೇ ಎಷ್ಟು ಕಾಲ ಫ್ಯಾಮಿನ್ ರಿಲೀಫ್ ವರ್ಕ್ಸ್ ಮಾಡಬೇಕೆಂದು ಕೇಳಬೇಕು—ಇದನ್ನು ತಡೆಗಟ್ಟಲು ಯಾವ ಯೋಜನೆ ಮಾಡಬೇಕು ಎಂದು ಕೇಳಬೇಕಾಗಿ ಬಂದಿದೆ? ನಾನೂ ಕೂಡ ಈ ಸಭೆಗೆ ಬಂದು ಸುಮಾರು 12 ವರ್ಷಗಳಾದವು. ಪ್ರತಿ ವರ್ಷವೂ ನಾನು ಮಾಡಿರುವ ಭಾಷಣವನ್ನು ನೋಡಿದರೆ ನಾವು ಕಷ್ಟದಲ್ಲಿ ಸಿಕ್ಕಿಕೊಂಡಿದ್ದೇವೆ, ಇದಕ್ಕಾಗಿ ಕಂದಾಯ ಮಾಫೀ ಮಾಡಿ, ನಮ್ಮ ರೈತರಿಗೆ ತೊಂದರೆಯಾಗುತ್ತಿದೆ, ಕೆಲಸ ಒದಗಿಸಿ, ಮೇವು ಒದಗಿಸಿ, ಆಹಾರ ಸರಬರಾಜು ಮಾಡಿ, ಎಂದು ಗೋಗರೆದೂ ಗೋಗರೆದೂ ಸಾಕಾಗಿದೆ. ಮತ್ತು ನಾಚಿಕೆಯಾಗಿದೆ. ಸರಕಾರದವರು ಇಂತಹ ಫ್ಯಾಮಿನ್ ಏರಿಯಾಗಳು ಯಾವುವು, ಇದನ್ನು ನಿವಾರಣೆ ಮಾಡುವುದಕ್ಕೆ ಏನೇನು ಮಾಡಬೇಕು, ಎನ್ನುವುದನ್ನು ಸರ್ವೆ, ಮಾಡಿಸಿ, ನಿರ್ಧರಿಸಿ ಇದಕ್ಕಾಗಿ ಒಂದು ಸರಿಯಾದ ಪ್ರಾಜೆಕ್ಟ್ ತಯಾರು ಮಾಡಬೇಕು. ಇದನ್ನು ತಯಾರು ಮಾಡಿ ಅದರಂತೆ ಸಾಯಿಲ್ ಕನ್‌ಸರ್‌ವೇಷನ್ ಎಲ್ಲಾ ಆಗಬೇಕು, ಕಾಂಟೂರು ಬಂಡಿಂಗ ಕೆಲಸ ಎಲ್ಲಾ ಆಗಬೇಕು, ಅಫಾರೆಸ್ಟೇಷನ್ ಕೆಲಸಗಳು ಎಲ್ಲಾ ಆಗಬೇಕು ಹಾಗೂ ಅನಿಮಲ್ ಹಸ್‌ಬೆಂಡ್ರಿ ಸ್ಕೀಂಗಳು ಎಲ್ಲೆಲ್ಲಿ ಆಗಬೇಕು, Lift Irrigation ಎಲ್ಲಾ ಆಗಬೇಕು ಎನ್ನುವುದನ್ನು ಕಂಡು ಹಿಡಿದು ಇವೆಲ್ಲಾ ಪ್ಲಾನುಗಳಲ್ಲಿ ಒಳಗೊಂಡಿದೆಯೋ ಇಲ್ಲವೇ ಇಲ್ಲದಿದ್ದರೆ ಇದಕ್ಕೆ ದುಡ್ಡನ್ನು ಎಲ್ಲಿಂದ ಒದಗಿಸಿಕೊಳ್ಳಬೇಕು ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡು ಆ ಪ್ರಾಜೆಕ್ಟ್ ಮುಂದುವರಿಸಲು ಅಗ್ರಿಕಲ್‌ಚರಲ್ ರೀ ಫೈನಾನ್ಸ್ ಕಾರ್ಪೊರೇಷನ್ನಿನ ಮೂಲಕ ಸಾಧ್ಯವಾದಷ್ಟು ಹಣವನ್ನೂ ತೆಗೆದುಕೊಂಡು ಅದರ ಮೂಲಕ ಯಾವುದಾದರೂ ಒಂದು ಏಜನ್ಸಿಯನ್ನು ನಿಗದಿ ಮಾಡಬೇಕು. ಇವನ್ನೆಲ್ಲಾ ಮಾಡಿ ಜನರಿಗೆ ಅನುಕೂಲ ಮಾಡಬೇಕಾದ್ದು ಸರಕಾರದ ಮೊದಲನೇ ಕರ್ತವ್ಯ. ಏಕೆಂದರೆ ನಾವು ಇಲ್ಲಿ ಬಂದು ಪ್ರತಿ ಸಾರಿಯೂ ನಮ್ಮ ಜನರಿಗೆ ಕಷ್ಟವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದೇ ತರಹ ಕಷ್ಟಗಳು ದೇಶದ ಎಷ್ಟೋ ಕಡೆಗಳಲ್ಲೂ ಇರುತ್ತವೆ ಅಂತಹ ಕಡೆಗಳಲ್ಲಿರುವ ತೊಂದರೆಗಳೇನು ಎನ್ನುವುದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಅಲ್ಲಿನ ಜನರಿಗೆ ಏನೇನು ಅನುಕೂಲಗಳು ಬೇಕೋ ಅವನ್ನೆಲ್ಲಾ ಮಾಡಿಕೊಡಬೇಕು. ನಿಜವಾಗಿಯೂ ಸರಕಾರ ಇದರ ಕಡೆಗೆ ಗಮನ ಕೊಟ್ಟರೆ ಜನರಿಗೆ ತುಂಬಾ ಅನುಕೂಲ ಮಾಡಿಕೊಡಬಹುದು.

ಇನ್ನು ಇರಿಗೇಷನ್ ವಿಷಯವಾಗಿ ಕೆಲವು ವಿಷಯಗಳನ್ನು ಮಾತನಾಡಬೇಕಾಗಿದೆ. ನಮ್ಮ ಸರ್ಕಾರದವರು ಒಂದು ಕೆಂಪು ಪುಸ್ತಕ ಕೊಟ್ಟಿದ್ದಾರೆ. ಅದು ರೆವ್ಯೂ ಆಫ್ ದಿ ವರ್ಕಿಂಗ್ ಆಫ್ ದಿ ಗೌರ್ನಮೆಂಟ್ ಡಿಪಾರ್ಟ್‌ಮೆಂಟ್. ಅದರ 121ನೇ ಪೇಜಿನಲ್ಲಿ ಇರಿಗೇಷನ್ ಬಾಬಗಾಗಿ ಇಟ್ಟಿರುವ ಅಂಕಿ ಅಂಶ ಕೊಟ್ಟಿದ್ದಾರೆ. ಹಳೇ ಮೈಸೂರಿಗೆ ಸುಮಾರು 360 ಲಕ್ಷ ರೂಪಾಯಿ, ಹೊಸ ಮೈಸೂರಿಗೆ 814 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈಗತಾನೆ ಮಾನ್ಯ ಸದಸ್ಯರಾದ ಶ್ರೀ ಅರಕೇರಿಯವರು ಹೇಳಿದರು ಏನು ಬೇಕಾದರೂ ಆಗಲಿ ಕೃಷ್ಣಾ ಪ್ರಾಜೆಕ್ಟ್ ಆಗಬೇಕು ಎಂದು. ಅದು ಮಾಡಬೇಕಾದುದೇನೋ ಸರಿ. ಅದು ಕ್ಷಾಮದ ಪ್ರದೇಶ ಸರಿ. ಅವರು ಹೊಸ ಮೈಸೂರಿಗೆ ಬರುವುದಕ್ಕಿಂತ ಮುಂಚಿತವಾಗಿ ಏನು ಮಾಡುತ್ತಾ ಇದ್ದರು ಎನ್ನುವ ಒಂದು ಪ್ರಶ್ನೆ ಕೇಳಬೇಕಾಗಿದೆ. ಅದನ್ನು ಮಾಡಬೇಡಿ ಎಂದು ಹೇಳುವ ಪೈಕಿ ನಾನಲ್ಲ. ನಮ್ಮ ಕುತ್ತಿಗೆಗೆ ಬಂದಿರುವ ಕಾವೇರಿ ಬೇಸಿನ್‌ನಲ್ಲಿರುವ ಕಬಿನಿ ಪ್ರಾಜೆಕ್ಟು ಮುಂತಾದವುಗಳನ್ನು ಮಾಡದೆ ಹೋದರೆ ನಮಗೆ ನೀರು ಇಲ್ಲದೆ ಇರುವ ಹಾಗೆ ಆಗುತ್ತದೆ. ಅದನ್ನು ಮೊದಲು ಯೋಚಿಸಬೇಕು. ಇನ್ನು ಹಾರಂಗಿ ಪ್ರಾಜೆಕ್ಟ್, ಕಂಬದ ಕಡ, ಇವೆಲ್ಲಾ ಮುಗಿದು ನಮಗೆ ನೀರು ಸಿಕ್ಕುತ್ತದೆ ಎಂದು ಸ್ವಪ್ನ ಕಾಣುತ್ತಿದ್ದೇವೆ.

ಇನ್ನು ಇರಿಗೇಷನ್ ಪ್ರಾಜೆಕ್ಟಿನಲ್ಲಿ ಇನ್ನೊಂದು ದೊಡ್ಡ ಕಾಂಟ್ರವರ್ಸಿ ಪೇಪರ್‌ನಲ್ಲಿ ನೋಡುತ್ತಾ ಇದ್ದೇವೆ. ಅದು ಕೆ. ಆರ್. ಸಾಗರದಿಂದ ವರುಣಾ ಚಾನೆಲ್ ಮುಖಾಂತರ ಮೈಸೂರು ತಾಲ್ಲೂಕಿನವರಿಗೆ ನೀರು ಕೊಡುವುದು; ಇದು ಏನಾಗಿದೆ ಎಂದರೆ ಅರಮನೆಯಲ್ಲಿ ಎರಡು ಹೆಗ್ಗಣಗಳು ಸೇರಿಕೊಂಡು ಅರಮನೆ ಸಾಮಾನಿಗೆ ಜಗಳವಾಡುತ್ತಿತ್ತು. ಆ ರೀತಿ ಮಂಡ್ಯ ಮೈಸೂರಿನವರು ಜಗಳ ಆಡುತ್ತಾ ಇದ್ದಾರೆ. ಕಬಿನಿ ಪ್ರಾಜೆಕ್ಟಿನಿಂದ ಶಿಂಶಾಗೆ ನೀರು ಬಿಟ್ಟು—ಕೆ.ಆರ್.ಎಸ್. ನಿಂದ ವರುಣಾ ನಾಲೆಗೆ ನೀರು ಬಿಟ್ಟರೆ ಮಂಡ್ಯದವರು ಜಗಳ ಆಡುತ್ತಾರೆ. ಇವರು ಜಗಳ ಆಡುವುದು ಇರಲಿ. ಕಬನಿ ಪ್ರಾಜೆಕ್ಟಿನಿಂದ ಕೆ. ಆರ್. ಎಸ್. ನೀರು ಬಿಡುವುದು ತಪ್ಪು. ಕಬನಿ ಪ್ರಾಜೆಕ್ಟ್ area ಮೊದಲು develop ಆಗಬೇಕು. ನುಗು ಏರಿಯಾದಲ್ಲಿ 24 ಸಾವಿರ ಎಕರೆ ಅಚ್ಚುಕಟ್ಟಿನಲ್ಲಿ 10 ಸಾವಿರ ಎಕರೆಯೂ ಕೂಡ ಇರಿಗೇಟ್ ಆಗಿಲ್ಲ. ಇನ್ನು 14 ಸಾವಿರ ಎಕರೆಗೆ ಆಗುವಷ್ಟು ನೀರು ಬೇಕು. ಅಲ್ಲಿಗೆ ಮೊದಲು ನೀರು ಬಿಡಬೇಕು. ಅಲ್ಲಿಂದ ಮುಂದಕ್ಕೆ ಮೂಳೆಹೊಳೆ ಪ್ರಾಜೆಕ್ಟ್‌ಗೆ ನೀರು ಪಂಪ್ ಮಾಡಬೇಕು. ಈ ವಿಚಾರದಲ್ಲಿ ಗೊತ್ತಿಲ್ಲದೇ ಮಾತನಾಡಬಾರದು ಎಂದು ತಿಳಿದಂಥ expertsರಲ್ಲಿ ವಿಷಯ ತಿಳಿದುಕೊಂಡು ಮಾತನಾಡುತ್ತಿದ್ದೇನೆ. ನುಗು ಎತ್ತರದಲ್ಲಿದೆ, ಕಬನಿ ಕೆಳಗಡೆ

ಇದೆ. ಒಂದಕ್ಕೊಂದಕ್ಕೆ ಸೇರಿಸುವುದಕ್ಕೆ ಕಷ್ಟ ಎಂದು ಈ ರೀತಿ ವರುಣ ಚಾನಲ್‌ಗೆ ಶುರು ಮಾಡಿದ್ದಾರೆ. ಆದರೆ ಇದು ಶುದ್ಧ ತಪ್ಪು ಅಭಿಪ್ರಾಯ ಎಂದು ಗಹಗಹಿಸಿ ನಕ್ಕು, ಈ ಯುಗದಲ್ಲಿ, ಇಷ್ಟೊಂದು ಇಂಜಿನಿಯರಿಂಗ್ ಫೀಟ್ಸ್ ಆಗುತ್ತಿರುವಾಗ ಇಷ್ಟು ಕಷ್ಟ ಏತಕ್ಕೆ. ನುಗು ಹತ್ತಿರ ಇರುವ ಅಕ್ವಡಕ್ಟ್ ಹತ್ತಿರ ಬೂಸ್ಟರ್ಸ್ ಹಾಕಿ ಪಂಪ್ ಮಾಡಿದರೆ ನುಗು ಪ್ರಾಜೆಕ್ಟ್ ಅಚ್ಚುಕಟ್ಟಿಗೇ ನೀರನ್ನು ಬಿಡಬಹುದು. ಅಲ್ಲಿಂದ ಮೇಲಕ್ಕೂ ತೆಗೆದುಕೊಂಡು ಹೋಗಬಹುದು ಎಂದು ಅವರ ಚೊಕ್ಕ-ನಿರ್ಧಾರ ಅಭಿಪ್ರಾಯ ಹೇಳಿದರು. ಅಲ್ಲಿನ ಜನಗಳಿಗೆ ನೀರಿಲ್ಲದೆ ಸತ್ತು ಹೋಗುತ್ತಿರುವವರನ್ನು ಬದುಕಿಸುವುದು ಬಿಟ್ಟು ಈ ಪ್ರದೇಶದ ಜನಗಳಿಗೆ ಜೀವ ಕೊಡುವುದನ್ನು ಬಿಟ್ಟು, ಅವರ ನೀರನ್ನು, ಅವರಿಗೆ ಹಕ್ಕಿರುವ, ಅವರಿಗೆ ಸಲ್ಲುವ ನೀರನ್ನು, ಅವರಿಗೆ ಮೋಸ ಮಾಡಲು ಪ್ರಯತ್ನ ಮಾಡದೆ ಅವರ ಪಕ್ಷ ಪರಪಕ್ಷ ವಹಿಸದೆ ಈ ಜೀವನ ಮರಣ ಸಮಸ್ಯೆ ಬಗ್ಗೆ ಯೋಚನೆ ಮಾಡಿ ನಂತರ ನೀವು ಯಾವ ಕೆಲಸಕ್ಕಾದರೂ ಕೈಹಾಕಬೇಕಾಗಿ ಕೇಳಿಕೊಳ್ಳುತ್ತೇನೆ.

ಕೆಲವು ಪ್ರಾಜೆಕ್ಟ್‌ಗಳು ಮೂರು ನಾಲ್ಕು ವರ್ಷಗಳಿಂದ ಏಕೆ ಹತ್ತು ವರ್ಷಗಳಿಂದಲೂ ಕಮಿಟೆಡ್ ಪ್ರಾಜೆಕ್ಸ್ ಎಂದು ಇದೆ. ಅವುಗಳಿಗೆ ಈ ಸಲದ ಪಟ್ಟಿಯಲ್ಲೂ ಹಣವಿಲ್ಲ. ನಿನ್ನೆ ಯಾರೋ ಬಂದಿರುತ್ತಾರೆ, ಯಾರೋ ಅಪ್ಲಿಕೇಷನ್ ಕೊಡುತ್ತಾರೆ, ಅಲ್ಲಿ ಹೋಗಿ ಅಳತೆ ಮಾಡಿ, ಸರ್ವೆ ಮಾಡಿ ಅದಕ್ಕೆ ಹಣವನ್ನೂ ಮಂಜೂರು ಮಾಡುತ್ತಾರೆ. ಟೆಂಡರ್ ಸಹ ಕರೆಯುತ್ತಾರೆ, ನಮ್ಮ ತಾಲ್ಲೂಕಿನಲ್ಲಿ ಮಂಗಳ ಪ್ರಾಜೆಕ್ಟ್ ಮಂಜೂರಾಗಿದೆ. ಇದು ಬಂಡೀಪುರ ಕಾಡಿನಲ್ಲಿದೆ. ಅದಕ್ಕೆ 13 ಲಕ್ಷ ರೂಪಾಯಿ ಮಂಜೂರಾಗಿದೆ. ಬಡ್‌ಜೆಟ್ಟಿನಲ್ಲಿ ಕೂಡ ಬಂದಿದೆ. ಅದನ್ನು ಕಟ್ಟಲಿ. ಅದರಿಂದ ಒಬ್ಬಿಬ್ಬರಿಗೆ ಮಾತ್ರ ಅನುಕೂಲವಾಗುತ್ತದೆ. ಬಾಕಿ ಎಲ್ಲ ಕಾಡೇ. ಇದನ್ನ ನೋಡಿದರೆ 'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ' ಎನ್ನುವಂತಾಗಿದೆ. ''ನಳೂರು ಕೆರೆ'' ಕಮಿಟೆಡ್ ಪ್ರಾಜೆಕ್ಟ್. ಅದಕ್ಕೆ ಒಂದು ಕಾಸೂ ಇಲ್ಲ. ಅಲ್ಲ ಪಿಕಪ್ ಮಾಡಲು ನಾಲ್ಕು ಲಕ್ಷ ರೂಪಾಯಿ ಆಗಲೇ ಖರ್ಚು ಮಾಡಿದ್ದಾರೆ. ಈ ವರ್ಷ ಅದನ್ನು revise ಮಾಡಿ ರಿಸರ್ವಾಯರ್ ಮಾಡುವುದಕ್ಕೆ 75 ಲಕ್ಷ ರೂಪಾಯಿಗಳಿಗೆ ಅಂದಾಜು ಮಾಡಿ ಐದು ಸಾವಿರ ಎಕರೆ ಅಚ್ಚುಕಟ್ಟು ಇರುವ ಹಾಗೆ ಮಾಡಿದ್ದಾರೆ. ಇದನ್ನು ಮೊದಲು ಪಿಕಪ್ ಆಗಿ ಮಾಡಿ ಈಗ ದೊಡ್ಡ ಕೆರೆಯಾಗಿ ಏಕೆ ಮಾಡುವುದಕ್ಕೆ ಹೋಗಬೇಕಾಗಿತ್ತು ? ಮೊದಲೇ ಕೆರೆ ಏಕೆ ಮಾಡಲಿಲ್ಲ ? ಈ ಕೆರೆ ಗುಂಡ್ಲುಪೇಟೆಯ ಮಧ್ಯದಲ್ಲಿ (ಹಾರ್ಟ್ ಆಫ್ ಗುಂಡ್ಲುಪೇಟೆ) ಇದೆ. ಐದು ಸಾವಿರ ಎಕರೆ ಸಾಗುವಳಿ ಆಗುವ ಕೆರೆಯನ್ನು ಬಿಟ್ಟು ಕಾಡಿನಲ್ಲಿ ಒಬ್ಬಿಬ್ಬರಿಗೆ ಅನುಕೂಲವಾಗುವಂಥ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಅದನ್ನು ಮಾಡುವುದಕ್ಕೆ ಅಡ್ಡಿ ಇಲ್ಲ. ಆದರೆ ಈ ಕೆರೆಯನ್ನು ಬಿಟ್ಟು ಅದನ್ನು ಮಾಡುತ್ತೇವೆಂದರೆ ನಿಜವಾಗಿಯೂ ಅನ್ಯಾಯ ಮಾಡಿದ ಹಾಗೆ, ಜನಗಳಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಅದರಲ್ಲಿಯೂ ನಾನು ಹೇಳದೆ ಹೋದರೆ ಅಲ್ಲಿನ ಜನಗಳಿಗೆ ತುಂಬ ದ್ರೋಹ ಮಾಡಿದ ಹಾಗೆ ಆಗುತ್ತದೆ ಎಂದು ಇದನ್ನು ಸರ್ಕಾರದ ದೃಷ್ಟಿಗೆ ತರುವುದಕ್ಕೆ ಇಷ್ಟಪಡುತ್ತೇನೆ.

ಈ ವರ್ಷ ಗಾಂಧಿ ಶತಾಬ್ದಿ ವರ್ಷ. ಅವರಿಗೆ ಅಚ್ಚುಮೆಚ್ಚಾದ ಒಂದು ಕೆಲಸವೆಂದರೆ ಖಾದಿ ಕೆಲಸ. ನಮ್ಮಲ್ಲಿ 1927 ರಲ್ಲಿ ಬದನವಾಳ ಸ್ಪಿನ್ನಿಂಗ್ ಸೆಂಟರ್ ಪ್ರಾರಂಭವಾಯಿತಂತೆ. ನನಗೆ ಗೊತ್ತಿಲ್ಲ. 1958 ರಲ್ಲಿ ಬದನವಾಳ ಖಾದಿ ಸ್ಪಿನ್ನಿಂಗ್ ಸೆಂಟರ್ ಎಂದು ಬದಲಾವಣೆ ಆಯಿತು. ಅದಕ್ಕೆ ಐದು ಬ್ರಾಂಚ್‌ಗಳಿವೆ. ಕಬ್ಬಹಳ್ಳಿ, ಮಾದ್ರಹಳ್ಳಿ, ಮಲೆಯೂರು, ನೇರಳೆ, ಬದನಗುಪ್ಪೆ. ಕಬ್ಬಹಳ್ಳಿ ಶಾಖೆಗೆ 10—12 ಗ್ರಾಮಗಳು ಸೇರಿಕೊಂಡಿವೆ. ಸುಮಾರು 1500 ಜನ ಸ್ಪಿನ್ನರ್ಸ್ ಇದ್ದಾರೆ. ಅವರು ಒಂದು ಕೆ.ಜಿ. ಹತ್ತಿ ತೆಗೆದುಕೊಂಡರೆ ಅದಕ್ಕೆ 4-50 ರೂಪಾಯಿ ಕೊಡಬೇಕು. ಕಾರ್ಡಿಂಗ್ ಎಂದು ಒಂದು ರೂಪಾಯಿ ಚಾರ್ಜ್ ಮಾಡುತ್ತಾರೆ. ಇದರಲ್ಲಿ ಸುಮಾರು 18-20 ಲಡಿ ನೂಲು ಆಗುತ್ತದೆ. ಇದನ್ನೆಲ್ಲಾ ಹೆಣ್ಣುಮಕ್ಕಳು ತಮ್ಮ ಮನೆ ಕೆಲಸವನ್ನು ಮಾಡಿಕೊಂಡು ಬಿಡುವಿನ ವೇಳೆಯಲ್ಲಿ ಮಾಡುತ್ತಾರೆ. ಅದರಲ್ಲಿಯೂ ಹೊಟ್ಟೆಗೆ ಇಲ್ಲದೆ ಇರುವವರು ರಾತ್ರಿ ಹಗಲು ನೂತು ಅದರಿಂದ ಮನೆಗೆ ಬೇಕಾದ ಕೆಲವು ಸಾಮಾನುಗಳನ್ನು ಕೊಂಡುಕೊಳ್ಳುತ್ತಾರೆ. 18-20 ಲಡಿ ನೂಲಿಗೆ ಅವರಿಗೆ ಸಿಕ್ಕುವುದು 8 ರಿಂದ ಒಂಬತ್ತೂವರೆ ರೂಪಾಯಿಗಳವರೆಗೆ ಎಂದರೆ ಹತ್ತಿಯ ಬೆಲೆಯನ್ನು ಕಳೆದರೆ ಸುಮಾರು ಮೂರೂವರೆ ಅಥವಾ ನಾಲ್ಕು ರೂಪಾಯಿ ಸಿಕ್ಕುತ್ತದೆ. ಖಾದಿ ಕಮಿಷನ್‌ನವರು ಒಂದು ಕಾಸ್ಟ್ ಚಾರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಏನಾಗಿದೆ ಎಂದರೆ ಮೂರು ವರ್ಷದ ಹಿಂದೆ ಖಾದಿ ಕಮಿಷನ್‌ನವರು ನಾವು ಇದನ್ನು ನಡೆಸುವುದಕ್ಕೆ ಆಗುವುದಿಲ್ಲ. ನೀವೇ ಯಾರಾದರೂ ಸೊಸೈಟಿಯನ್ನು ಮಾಡಿಕೊಂಡು ಕೆಲಸ ಮಾಡಿ ಎಂದು ಹೇಳಿದ ಮೇಲೆ ಈಗ ಕೆಲವರು ಸೊಸೈಟಿಯಾಗಿ ಕನ್‌ವರ್ಟ್ ಮಾಡಿ ಬದನವಾಳ ಖಾದಿ ಸೊಸೈಟಿ ಮಾಡಿದ್ದಾರೆ. ಇವರುಗಳು ಈಗ ಏನು ಮಾಡುತ್ತಿದ್ದಾರೆ ಎಂದರೆ, ಖಾದಿ commission ನವರು ನಿಗದಿ ಮಾಡಿರುವ ರೇಟು ಕೊಡುತ್ತಿಲ್ಲ. ಅವರು ಕಾಸ್ಟ್ ಚಾರ್ಟ್‌ನಲ್ಲಿ 67 ಪೈಸೆ ಇದ್ದರೆ ಕೊಡುವುದು 18 ಕೌಂಟಿಗೆ 53 ಪೈಸೆ, 64 ಪೈಸೆ ಇದ್ದರೆ ಲಡೀಗೆ 20 ಕೌಂಟಿಗೆ 53 ಪೈಸೆ, 62 ಪೈಸೆ ಇದ್ದರೆ ಲಡೀಗೆ, 22

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೌಂಟಿಗೆ 52 ಪೈಸೆ, 62 ಪೈಸೆ ಇದ್ದರೆ ಲಡೀಗೆ, 24 ಕೌಂಟಿಗೆ 50 ಪೈಸೆ—ಹೀಗೆ ಕೊಡುತ್ತಿದ್ದಾರೆ. ಈಗ ಮತ್ತೆ price rise ಆಗಿದೆ. ಹೀಗಾಗಿ ಸಾವಿರಾರು ರೂಪಾಯಿ ಬಡ ಹೆಣ್ಣುಮಕ್ಕಳಿಗೆ ಕೊಡಬೇಕಾದ್ದನ್ನು ಕೊಡದೆ ಮೋಸ ಮಾಡುತ್ತಿದ್ದಾರೆ. ಇದಕ್ಕೆ ಅನೇಕ ರೀತಿಯ ಪತ್ರವ್ಯವಹಾರ ಆಯಿತು. ನಾನೂ ಕೂಡ ಸಂಬಂಧಪಟ್ಟ ಸೆಕ್ರೆಟರಿಗಳಿಗೆ, ಉಪಸಚಿವರಿಗೆ ಹೇಳಿದೆ. ಅವರು ಇನ್‌ಸ್ಪೆಕ್ಟರನ್ನು ಕಳಿಸಿ ಪರೀಕ್ಷೆ ಮಾಡಿಸಿದರು, ಹಣ ಉಳಿದಿರುವುದನ್ನು ಕೊಡಬೇಕೆಂದು ಎರಡು ಸಲ ಹೇಳಿದರು, ಟೆಲಿಗ್ರಾಂ ಕೊಟ್ಟರು, ಅದಕ್ಕೆಲ್ಲ ನನ್ನಲ್ಲಿ ದಾಖಲೆ ಇದೆ. ಆಮೇಲೆ ಮೀಟಿಂಗ್ ಒಂದು ಆಯಿತಂತೆ. ಅಲ್ಲಿಯ ದೊಡ್ಡ ಮನುಷ್ಯರ ಜನರು ನನ್ನಲ್ಲಿ ಹೇಳಿಕೊಳ್ಳುವುದಾಗಿ ತಿಳಿಸಿದಕ್ಕೆ ಅವರು ಮಾವನವರ ಮನೆಯಲ್ಲಿ ಬೇಕಾದಷ್ಟಿದೆ, ತಂದುಕೊಡಲಿ ಎಂದು ಹೇಳಿದರಂತೆ. ಇವರು ಮೋಸ ಮಾಡುವುದಕ್ಕೂ ನಮ್ಮ ಮಾವನವರಿಗೂ ಏನು ಸಂಬಂಧವೋ, ಅವರಿಗೇ ಗೊತ್ತಿರಬೇಕು. ಖರ್ಚು ಮಾಡಿರುವ ವಿವರ ಹೇಳಿದ್ದೇನೆ. ಆ ವ್ಯವಹಾರ ತಿಳಿಸಿದ್ದೇನೆ. ಈ ಗಾಂಧಿ ವರ್ಷದಲ್ಲಿ ಗಾಂಧೀಜಿಯವರಿಗೆ ಮೆಚ್ಚುಗೆಯಾಗುವಂತ ಇಂಥ ಕೆಲಸದಲ್ಲೂ ದರೋಡೆ ಆಗುತ್ತಿದ್ದರೆ ಅದನ್ನು ನೋಡುತ್ತಾ ಸುಮ್ಮನಿರುವುದು ಸರಿಯೇ ? ಎಂದು ಸಂಬಂಧಪಟ್ಟ ಮಂತ್ರಿಗಳನ್ನು ಕೇಳಲು ಇಚ್ಛಿಸುತ್ತೇನೆ.

3-30 P.M.

ಶ್ರೀ ಡಿ. ಎಂ. ಸಿದ್ದಯ್ಯ.—ಅಲ್ಲಿಗೆ ಸಪ್ಲೈ ಆಗದೆ ಹತ್ತಿಯನ್ನು ನಂಜನಗೂಡಿನಲ್ಲಿರುವ ಕಪಿಲಾ ಟೆಕ್ಸ್‌ಟೈಲ್ಸ್‌ಗೆ ಕೊಡುತ್ತಿದ್ದಾರೆ ಎಂಬ ವದಂತಿ ಇದೆ. ಇದು ನಿಮಗೆ ಗೊತ್ತೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದರ ವಿಚಾರ ನನಗೆ ಗೊತ್ತಿಲ್ಲ. ಇದ್ದರೂ ಇರಬಹುದು. ಹೆಣ್ಣುಮಕ್ಕಳಿಗೆ ಮೋಸಮಾಡಿ ಮ್ಯಾನೇಜರು 180ರಿಂದ 320 ರೂಪಾಯಿಗಳ ಗ್ರೇಡನ್ನು ಮಾಡಿಕೊಂಡರು. ಅಕೌಂಟೆಂಟ್ ಫಸ್ಟ್ ಡಿವಿಜನ್ ಕ್ಲಾರ್ಕ್ ಗ್ರೇಡ್ 110-220 ಇದ್ದುದನ್ನು 270 ರವರೆಗೆ ಏರಿಸಿದರು, ಪ್ರೆಸಿಡೆಂಟರಿಗೆ 150 ರೂಪಾಯಿ ಆನರೇರಿಯಂ ಇದ್ದುದು 300 ರೂ ಮಾಡಿಕೊಂಡರು. ಇದರ ಜೊತೆಗೆ ಎಷ್ಟು ಹಣ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ಇದಲ್ಲದೆ 7 ಸಾವಿರ ರೂಪಾಯಿ ಕಾರು ಕೊಳ್ಳಲು ಸಾಲ ತೆಗೆದುಕೊಂಡರು, ಅದು ಟ್ಯಾಕ್ಸಿಯಾಗಿ ರನ್ ಆಗುತ್ತಿತ್ತು, ಅದಕ್ಕೆ ಆಕ್ಸಿಡೆಂಟ್ ಆಗಿದೆ. ಅಕೌಂಟೆಂಟಿಗೆ ಮನೆ ಕಟ್ಟಲು ಸಾವಿರಾರು ರೂಪಾಯಿ ಸಾಲ ಕೊಡಲಾಗಿದೆ. ಈ ದುಡ್ಡೆಲ್ಲ ನೂಲುವವರಿಗೆ ಸಲ್ಲಬೇಕಾದದ್ದು ಇವರ ಮನಸೋ ಇಚ್ಛೆ ಖರ್ಚು ಮಾಡುವುದು ಸರಿಯೇ ? ಧರ್ಮವೇ ? ಇದೆ ಗಾಂಧಿ ನೀತಿಯೇ ? ಇದೆಲ್ಲಾ ನ್ಯಾಯವೇ ? ಇದೆಲ್ಲಾ ಗಾಂಧಿಯವರಿಗೆ ಆಗಬೇಕೆಂಬ ಇಷ್ಟವಿತ್ತೇ ಎಂದು ಕೇಳುತ್ತೇನೆ. ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ಇದು ಕೇವಲ ಹೆಣ್ಣುಮಕ್ಕಳ ಕೆಲಸ. ಅವರಿಗೆ ಕೊಡಬೇಕಾದ್ದನ್ನು ಕೊಟ್ಟು ಉತ್ತೇಜನ ಕೊಡಬೇಕು ಎಂಬುದಕ್ಕಾಗಿ ಇದನ್ನು ಹೇಳುತ್ತಿದ್ದೇನೆ. ಅವರು ದುಡಿದಮೇಲೆ ಅವರಿಗೆ ಹೊಟ್ಟೆಬಟ್ಟೆಗೆ ಸರಿಯಾಗಿ ಕೊಡಬೇಕಾದ್ದು ನ್ಯಾಯ. ಇದನ್ನು ಕೈಗಾರಿಕಾ ಮಂತ್ರಿಗಳು ಸರಿಯಾಗಿ ವಿಚಾರಮಾಡಿ ತಕ್ಕ ವ್ಯವಸ್ಥೆ ಮಾಡಬೇಕು.

ಇನ್ನು ಸಹಕಾರ ಇಲಾಖೆ. ನಮ್ಮ ಗುಂಡಲಪೇಟೆ ಸಹಕಾರ ಸೊಸೈಟಿ ಒಂದು ಗಡವನ ಲಾಯವಾಗಿದೆ. ಅದರ ಕಥೆಯನ್ನು ಇನ್ನೊಂದು ಸಲ ಹೇಳುತ್ತೇನೆ. ಇದರಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ದೇವರೇ ಬರಬೇಕು.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಪಾಲಿಸಿ ಮಾಡಿದ್ದಾರೆ. ಹೊಸದಾಗಿ ಪ್ರಾರಂಭಿಸುವ ಯಾವ ಶಾಲೆಗೂ 5 ವರ್ಷಗಳವರೆಗೆ ಗ್ರಾಂಟು ಕೊಡುವುದಿಲ್ಲ ಎಂದು ತಿಳಿಸಿದ್ದಾರೆ. ಇದು ಹೆಣ್ಣುಮಕ್ಕಳ ಶಾಲೆಗಳಿಗೂ ಅನ್ವಯಿಸುವುದು. ಪಟ್ಟಣಗಳಲ್ಲಿ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಒಟ್ಟಿಗೆ ಓದುವುದಕ್ಕೆ ಅನುಕೂಲವಿದೆ. ಆದರೆ ಕಷ್ಟವಿರುವುದು ಹಳ್ಳಿಗಳಲ್ಲಿ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣುಮಕ್ಕಳಿಗೆ ಶಾಲೆ ತೆರೆಯುವುದಾದರೆ ಅದಕ್ಕೆ ಗ್ರಾಂಟು ಕೊಡಬೇಕು. ಮೇಲಿನ ಪಾಲಿಸಿ General policy ಆಗಕೂಡದು.

ವ್ಯವಸಾಯದ ಇಲಾಖೆಯಲ್ಲಿ ಫರ್ಟಿಲೈಜರ್ಸ್ ವಿಚಾರದಲ್ಲಿ ಮಾಡಿರುವ ಅನ್ಯಾಯ ಬಹಳವಾಗಿದೆ. ಅಲ್ಲಿ ಸಬ್ಸಿಡಿ ತೆಗೆದು ಬೆಲೆ ಜಾಸ್ತಿ ಮಾಡಿದ್ದಾರೆ. ಫರ್ಟಿಲೈಜರ್ಸ್ ಜಾಸ್ತಿ ಉಪಯೋಗಿಸಬೇಕು ಎಂದು ಜನಗಳಿಗೆ ತಿಳುವಳಿಕೆ ಕೊಟ್ಟು ಆ ದಿಶೆಯಲ್ಲಿ ಈಗತಾನೇ ಕಾಲಿಡುತ್ತಿರುವಾಗಲೇ ಹೀಗೆ ಒಂದೇ ಸಮನೆ ಬೆಲೆ ಜಾಸ್ತಿ ಮಾಡಿರುವುದು ಸರಿಯಲ್ಲ. ಹೂ ಎಂದು ಕೂಗುವುದಕ್ಕೆ ಮೊದಲೇ

ಕತ್ತೆ ಹಾಗೆ ಕೂಗು ಅಂದರೆ ಸಾಧ್ಯವೇ! ಈಗಿನ ಪರಿಸ್ಥಿತಿ ಹೀಗೇ ಆಗಿದೆ. ಇದು ಸರಿಯಲ್ಲ. ಇದಕ್ಕೆ ನಿಗಾ ಕೊಡಬೇಕು. ಇನ್ನೂ ಹೇಳಬೇಕಾದ ವಿಚಾರಗಳು ಅನೇಕವಾಗಿದ್ದವು. ಆದರೆ ಅಧ್ಯಕ್ಷರು ಮುಂದೆ ಹೇಳಲು ಕಾಲಾವಕಾಶ ಕೊಡುತ್ತಾರೆಂದು ನಂಬಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ಈ ಬಜೆಟ್ಟನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Smt.. WINNIFRED F. FERNANDES (Coondapur):—Mr. Speaker, Sir, at the outset, I must thank the Hon. Minister for Finance for the tax-free Budget, because he has not overburdened the common man. Of course, the Central Budget is too harsh on the poor and is too soft on the rich. I must also thank the Finance Minister for giving the enhancement of D.A. to the Government employees. But, I think, he has done some injustice to the Class IV and Class III employees in the pay range of Rs. 90-109. They are the losers by about Rs. 12 p.m.

Sri RAMAKRISHNA HEGDE.—I am getting it examined.

Smt. WINNIFRED F. FERNANDES.—Please see to it, because it should be a fair deal to all.

In various departments, there are about 5,000 local candidates working and their services should be regularised, and no one should be ousted. The Hon. Chief Minister was kind enough to state the other day during Question Hour that they are given a chance to appear for the P.S.C. examination. They should be given age-bar exemption because of their vast experience for having worked for 3 to 4 years. I request the Government to regularise the services of local candidates who have joined after 1965.

The Hon. Finance Minister has stated in his Budget speech that the Local bodies also can give this enhancement of D.A. to their employees. He has given an assurance that every assistance will be given to the Local bodies. Same kind of assurance was given last year when there was enhancement of D.A. I am the President of the Coondapur Town Panchayat, I have written several letters to give us assistance, but not a single paisa has been given so far, even though they say that every assistance will be given to the local bodies. I request the Government to see that some assistance is given to the local bodies in future.

Of course, the Government has given top priority in the Fourth Five Year Plan for agriculture. I think, they do not practice as they preach. When top priority is given to agriculture, they should see to the necessities of the poor ryots. Irrigation pump-sets, fertilizers, seeds, etc., should be supplied to the ryots as and when they need. But now-a-days we see there are several loans which are given to the ryots like the takavi loan, land development loan, etc. But these loans are given only to the landlords. When the poor ryots or the middlemen approach the Government for these loans they are only sent with empty hands. The landlords are given loans at a lower rate of interest and in turn they invest this loan amount in banks and derive higher rate of interest. Is it the policy of the Government to give

(SMT. WINNIFRED F. FERNANDES)

loans to landlords to earn high interest by investing the loan amounts in the banks? s it the way the interest of the poor ryots is served? Is it the way the ryots are encouraged? Therefore Sir, I would urge upon the Minister concerned to look into the matter and see that in future these benefits are given to one and all. I also like the Government to give these benefits to the Chalgeni tenants. According to the present policy of the Government these benefits are not given to them. Mostly in South Kanara there are Chalgeni tenants—of course majority of them have been deprived of these benefits. They should be given these benefits. Also pumpsets for irrigation purposes should be given to these Chalgeni tenants.

In regard to food, I would like to say, that the levy is collected only from the middle class and not from the rich landlords. The revenue officials go house to house and collect the levy by force. They simply send their peons and collect the levy without even giving a receipt and this is the harassment that is being done. at present, in Coondapur. The Government should look into this. Also I ask the Hon. Minister for Finance to look into the prices of essential commodities used by common man. Now-a-days the prices are rocketting day by day in regard to the essential commodities and the result is, the Government employees and all alike, are not able to meet both their ends out of what they get. Unless the State Government urges upon the Centre to check the soaring prices, I think, the Government will not be in a position to let go. If the State is to prosper, the soaring prices should be checked.

Regarding Fisheries and Animal Husbandry I would like to say that the provision made in the Budget is very inadequate. If the Government really wants to encourage the fisheries and animal husbandry, more and more amount should be provided for this, and it would also help in solving the food problem, to some extent. The dairy farming, poultry, piggery should be started in every taluka also so that the food problem could de solved to some extent. Sir. I am told, that in Kolar inland fishery is being developed. When Kolar is a famine stricken area how can the inland fisheries be developed there? When there is no possibility of getting water for cultivation, why should the Government spend such a large amount on rearing these fishes in an area like Kolar? I would like to ask the Government why should they spend such huge amount lavishly? Why should it not be spent in coastal belts where all facilities for rearing these fishes are available? Therefore, Sir. it would be better to spend money in coastal belt areas and encourage the fishermen by supplying mechanised boats also.

In regard to Rural Water supply the Government has sanctioned some of the water supply schemes to some villages with the condition that they should give 10 per cent of the contribution of the estimated cost and in some villages they are asked to pay only 5 per cent of the

contribution. I would like to know from the Government as to why they should show partiality of this kind and step-motherly treatment? Of course, in my village the Water Supply scheme has been sanctioned and the estimated cost of it, is about 4 lakhs and odd and the 10 per cent contribution to be paid to Government, comes to about 50 thousand rupees. On behalf of the Panchayat, I have deposited 5 per cent of the total estimated cost which comes to about Rs. 25,000 few months back and the money is lying in the treasury without any interest thereon. But so far, no technical sanction has been accorded. There has been inordinate delay in this respect even though I have reminded the Government several times in the matter. I request the Government to expedite the matter and also to see that all the villages in the State are given this facility of water supply, in view of the fact that there is a contageous disease called 'fileria' spreading in the villages. I request the Government to take suitable steps to provide rural water supply so as to see that this disease does not spread further.

In regard to pensions to retired teachers I would like to say that teachers who retired before re-organisation of States, do not get any pension, for no fault of theirs. Just because they retired before 1956 they do not get the benefit of pension as against other teachers. I request that Government should see that pension benefits are given even to those teachers who retired before States re-organisation along with other benefits like triple benefit schemes, etc.

I would also like to mention that the applications sent to the revenue authorities are being kept pending for many months together without taking any action on the applications. Though there is a rule that papers should move within two months or so, nothing is being done in this respect. In the Tahsildars' offices the poor and old people when they submit their applications they are kept pending without giving any attention to them. I request the Government to see that these applications are perused and necessary action taken thereon immediately.

Lastly, I want to say something in regard to what I said on 25th instant in connection with the 'Shiva Sena' and 'Bantara Sena' activities at Coondapur. Sir, yesterday I was challenged by hon. Member Smt. Leelavathi Rai that such a thing, as stated by me in my speech on that day, has not at all happened in Coondapur. What I saw with my own eyes, I had stated in this House. It is my responsibility to safeguard the interest of my constituents. I did not blame the entire community in general. When I referred to 'Bantara Sena' at Coondapur I also said that there are both good people and bad people.

Smt. K. LEELAVATHI RAI (Bantwal).—Sir, I rise to a point of order. I am coming from an area where majority of the catholics are supporters of these Senas. What I said, the other day was, that the hon. Member need not bring communalism in this House.

Mr. DEPUTY SPEAKER.—I request the hon. Member not to interrupt. The portion of speech relating to the challenge made against another Member has been expunged from the proceedings.

Smt. WINNIFRED F. FERNANDES.—The incident which happened on the 10th is that the other community people were beaten up severely and with broken legs they were admitted to the Hospital. Majority of the Bunts are supporting me and still supporting me. Only Bunts people voted for me.

Smt. K. LEELAVATHI RAI.—She is again bringing the communal issue. I have not said that. She should not create such a false impression.

Smt. WINNIFRED F. FERNANDES.—So, I want to tell the Hon. Speaker what has happened in Coondapur. There was no need for the Hon. Member to challenge me.

Lastly, I want to tell you about rural communication roads. These be taken up by the P.W.D. because if they are not taken up, the villagers cannot take their produce to the market. So, at an early date all these roads which are left out, should be taken up by the Government. So far as flood protective measures are concerned, in South Kanara, there are heavy floods and so far no protective measures are taken. In order to prevent flood havoc, I request the Government to see that rivetments are built on both sides of the river so that water may not come in and destroy cultivation as well as lives of the people.

Lastly, this being the Gandhi Centenary year, I request that more Mahila Mandals and nursery schools should be opened throughout the State, specially in each Taluk there should be at least 10 such institutions. There are only one or two now. Every woman should be encouraged to come forward and partake in these activities. With these words, I thank the Chair.

† ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ ಗ್ರಾಮಾಂತರ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ನಮ್ಮ ಮುಂದೆ ಮಂಡಿಸಿರತಕ್ಕ ವರದಿಯನ್ನು ನಾನು ಸ್ವಾಗತಿಸುತ್ತಾ, ಅವರು ಮಾಡಿರತಕ್ಕ ಭಾಷಣದ ಬಗ್ಗೆ ಒಂದೆರಡು ಅಂಶಗಳನ್ನು ಪ್ರಸ್ತಾಪಿಸುತ್ತ ನನ್ನ ಮನಸ್ಸಿನ ಪ್ರತಿಕ್ರಿಯೆ ಯೇನು ಎಂಬುದನ್ನು ವ್ಯಕ್ತಪಡಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಸರ್ಕಾರದವರು ಇತ್ತೀಚೆಗೆ ಕೈಗೊಂಡಂಥ ಮೇಜರ್ ಮತ್ತು ಮಿಡಿಯಂ ಇರಿಗೇಷನ್ ಪ್ರಾಜೆಕ್ಟುಗಳ ಮೇಲೆ ಸರ್ಕಾರದವರು ಕೋಟ್ಯಾನು ಕೋಟಿ ರೂಪಾಯಿಗಳನ್ನು ತೊಡಗಿಸಿರುವುದ ರಿಂದಲೂ ಹಳ್ಳಿಗಳಲ್ಲಿರತಕ್ಕ ಜನಕ್ಕೆ ಅಂದರೆ ರೈತಾಪಿ ಜನರಿಗೆ ಇರಿಗೇಷನ್ ಪಂಪ್‌ಸೆಟ್‌ಗಳನ್ನು, ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಕೋಟ್ಯಾನು ಕೋಟಿ ರೂಪಾಯಿಗಳನ್ನು ತೊಡಗಿಸಿರುವುದ ರಿಂದಲೂ ಮತ್ತು ರೈತರಿಗೆ ಅಗತ್ಯವಾಗಿ ಬೇಕಾಗಿರತಕ್ಕ ಗೊಬ್ಬರ ಇತ್ಯಾದಿಗಳನ್ನು ಒದಗಿಸುವುದಕ್ಕೆ ಸಾಕಷ್ಟು ಹಣವನ್ನು ಸರ್ಕಾರ ತೊಡಗಿಸಿರುವುದರಿಂದಲೂ ರೈತರು ಬಹಳ ಲಾಭವನ್ನು ಜಿರಾಯಿತು ಕಸುಬಿನಲ್ಲಿ ಗಳಿಸಿದ್ದಾರೆ. ಹಾಗೆ ಅವರು ಗಳಿಸಿರತಕ್ಕ ಲಾಭದಲ್ಲಿ ಆ ಪ್ರತಿಫಲದಲ್ಲಿ ಸರ್ಕಾರಕ್ಕೆ ಒಂದು ಭಾಗ ಬರಬೇಕಾಗಿತ್ತು; ಅದು ಬಂದಿಲ್ಲ. ಆ ಜನರು ತೆರಿಗೆಯಿಂದ ಪಾರಾಗಿದ್ದಾರೆಂದು ಅದಕ್ಕಾಗಿ ಈಗ ಭೂತಲಿಂಗಂ ಕಮಿಟಿಯನ್ನು ಕೂಡ ನೇಮಕ ಮಾಡತಕ್ಕ ಅಗತ್ಯವುಂಟಾಗಿದೆ ಎಂದೂ; ಆ ಕಮಿಟಿ ಈಗ ಈ ವಿಚಾರದಲ್ಲಿ ಸಾರಾಸಾರ ವಿಚಾರಣೆ ನಡೆಸಲಿದೆಯೆಂದೂ ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ರೈತರ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿದೆ ಅನ್ನುವುದು ನಿಜ. ಅಂದ ಮಾತ್ರಕ್ಕೇ ಈ ವಿಚಾರದಲ್ಲಿ ಸರ್ಕಾರವಾಗಲೀ ಅಥವಾ ನಾವಾಗಲೀ ಒಂದು ರಂಜಕವಾದ ರೀತಿಯಲ್ಲಿ ಅಭಿಪ್ರಾಯ ಪಡಬಾರದು ಅನ್ನುವುದು ನನ್ನ ಅಭಿಪ್ರಾಯ.

ರೈತಾಪಿವರ್ಗವೆಲ್ಲಾ ತನ್ನ ಆರ್ಥಿಕ ಪರಿಸ್ಥಿತಿಯನ್ನು ಬಹಳ ಮಟ್ಟಿಗೆ ಸುಧಾರಣೆ ಮಾಡಿಕೊಂಡಿದೆ, ಅವರೆಲ್ಲಾ ಬಹಳ ಶ್ರೀಮಂತರಾಗಿದ್ದಾರೆ, ಅವರಮೇಲೆ ತೆರಿಗೆಯನ್ನು ಈ ದಿವಸ ಹಾಕಬಹುದು ಎಂಬುದಾಗಿ ಒಂದು ವರ್ಗದ ಜನರು ಬಹಳ ಪ್ರಚಾರಗಳನ್ನು ನಡೆಸುವುದಕ್ಕೆ ಹತ್ತಿದ್ದಾರೆ. ಉದ್ಯಮ ವರ್ಗದಲ್ಲಿರತಕ್ಕ ಜನತೆ ಇನ್ನು ತಮ್ಮಮೇಲೆ ಎಲ್ಲಿ ಹೆಚ್ಚಿನ ಒಂದು ತೆರಿಗೆ ಹೊರೆ ಬೀಳುತ್ತದೋ ಎಂಬ ಭಯದಿಂದ ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಆ ವರ್ಗದವರು ಈ ದಿವಸ ರೈತರ ಮೇಲೆ ಒಂದು ತೆರಿಗೆಯನ್ನು ಸರ್ಕಾರ ಹೇರುವಂತೆ ಮಾಡಲು ಬಹಳ ಪ್ರಯತ್ನಗಳನ್ನು ನಡೆಸಿದ್ದಾರೆ. ಆ ಉದ್ಯಮವರ್ಗದವರು ಸಾಕಷ್ಟು ಅಂಕೆಸಂಖ್ಯೆಗಳನ್ನು ಶೇಖರಣೆ ಮಾಡಿಕೊಂಡಿದ್ದಾರೆ, ಅವರಲ್ಲಿ ಸಂಘಟನಾ ಶಕ್ತಿ ಚೆನ್ನಾಗಿ ಬೆಳೆದಿದೆ. ಸರ್ಕಾರಕ್ಕೆ ಬೇಕಾದ ಅಂಕೆಸಂಖ್ಯೆಗಳನ್ನು ಅವರು ಒದಗಿಸ ಬಲ್ಲರು. ಸರ್ಕಾರದವರನ್ನು ತಮ್ಮವಾದದತ್ತ ಒಲಿಸಿಕೊಳ್ಳತಕ್ಕ ಚಮತ್ಕಾರ ಅವರಲ್ಲಿದೆ. ಅವರು ಹೇಳತಕ್ಕದ್ದೆಲ್ಲಾ ನಿಜವೇ ಇರಬೇಕು ಅನ್ನುವಷ್ಟು ವಿಷಯಗಳನ್ನು ಅವರು ಸರ್ಕಾರದವರ ಮುಂದೆ ಇಟ್ಟಿದ್ದಾರೆ. ಆದರೆ ರೈತಾಪಿವರ್ಗದಲ್ಲಿ ಅಂಥ ಸಂಘಟನಾ ಶಕ್ತಿ ಇಲ್ಲ. ಅವರಿಗೆ ಈ ಉದ್ಯಮ ವರ್ಗದವರಿಗಿದ್ದ ಹಾಗೆ ಛೇಂಬರ್ ಆಫ್ ಕಾಮರ್ಸ್ ಅಥವಾ ಛೇಂಬರ್ ಆಫ್ ಇಂಡಸ್ಟ್ರೀಸ್‌ಗಳಂಥ ಬಲವಾದ ಸಂಸ್ಥೆಗಳ ಬೆಂಬಲವಿಲ್ಲ. ಆದ್ದರಿಂದ ನಾನು ಈ ವಿಚಾರದಲ್ಲಿ ಸರ್ಕಾರಕ್ಕೆ ವಿನಂತಿಮಾಡಿ ಕೊಳ್ಳುವುದೇನೆಂದರೆ — ರೈತನ ಆರ್ಥಿಕ ಪರಿಸ್ಥಿತಿಯಲ್ಲಿ ಅಷ್ಟು ಸುಧಾರಣೆಯಾಗಿಲ್ಲ, ಅಷ್ಟು ರಂಜಕವಾದ ಪ್ರಚಾರಕ್ಕೆ ಸರ್ಕಾರದವರು ಕಿವಿಗೊಡಬಾರದು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ರೈತಾಪಿ ವರ್ಗ ಸಹಸ್ರಾರು ವರ್ಷಗಳಿಂದ ಬಡತನದಲ್ಲಿ ಬಿದ್ದು ಸಾಲವಂದಿಗರಾಗಿ ಬಹಳ ನರಳಿ ದ್ದಾರೆ. ಆದರೆ ಈಗೇನೋ ಇತ್ತೀಚಿನ ಕಾಲ ಬದಲಾವಣೆಯಿಂದ ಅವರು ಸ್ವಲ್ಪಮಟ್ಟಿಗೆ ಸುಧಾರಿಸಿ ದ್ದಾರೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ, ಚೇತರಿಸಿಕೊಂಡಿದ್ದಾರೆ. ಆದರೆ ಇದೇ ವೇಳೆಯಲ್ಲಿ ಮತ್ತೆ ಸರ್ಕಾರದವರು ಆ ರೈತನು ಕಡಿದುಬೀಳುವಷ್ಟು ಮಟ್ಟಿಗೆ ಅವನ ಮೇಲೆ ಭದ್ರವಾಗಿ ತೆರಿಗೆ ಗಳನ್ನು ಹೇರುವುದು ಸರಿಯಲ್ಲ, ನ್ಯಾಯವಾದ್ದೂ ಅಲ್ಲ. ಆದ್ದರಿಂದ ಸರ್ಕಾರದವರು ಅವಸರದಲ್ಲಿ ಯಾವ ತೀರ್ಮಾನವನ್ನೂ ತೆಗೆದುಕೊಳ್ಳಬಾರದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೀರಾವರಿ ಬಾಬುಗಳಲ್ಲಿ ಸರ್ಕಾರದವರೇನೋ ಬಹಳವಾಗಿ ಹಣವನ್ನು ತೊಡಗಿಸಿದ್ದಾರೆ. ಅವರ ಪರಿಸ್ಥಿತಿ ಅಷ್ಟಾಗಿ ಸುಧಾರಿಸಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಯಾವ ರೈತ ಹೆಚ್ಚಿನ ತೆರಿಗೆಯನ್ನು ಕೊಡಬಲ್ಲ ಎಂಬುದನ್ನು ನೋಡಿ ಇದನ್ನು ತೀರ್ಮಾನ ಮಾಡಬೇಕು. ಸಾಮಾನ್ಯ ರೈತನ ಮೇಲೆ ಈ ಕರಭಾರ ಬೀಳದಂತೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದ್ದರಿಂದ ಇದರ ಬಗ್ಗೆ ಒಂದು ಅವಸರದ ಕಾಯಿದೆಯನ್ನು ಮಾಡಬಾರದು. ಹಾಗೆ ಮಾಡಿದ್ದೇ ಆದರೆ ರೈತವರ್ಗ ಬಹಳ ವಿಚಿತ್ರ ಹಿಂಸೆಗೆ ಒಳಗಾಗಬೇಕಾಗುವುದು. ಇದನ್ನು ಇಡೀ ದೇಶದಲ್ಲಿರತಕ್ಕ ರೈತವರ್ಗ ವಿರೋಧಮಾಡುತ್ತಿದೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಗ್ಗೆ ಸರಿಯಾಗಿ ಲೆಕ್ಕಪತ್ರಗಳನ್ನಿಡಬೇಕು. ಹಾಗೆ ಲೆಕ್ಕಪತ್ರ ಇಡಲು ನಮ್ಮ ಹಳ್ಳಿಗಳ ರೈತರಿಂದ ಸಾಧ್ಯವಿಲ್ಲ. ಅವರು ಒಂದು ವೇಳೆ ಸತ್ಯಸಂಗತಿಯ ಲೆಕ್ಕ ಇಟ್ಟಾಗ್ಯೂ ಅಧಿಕಾರಿಗಳು ಅದನ್ನು ನಂಬುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟೇ ಅಲ್ಲ. ಅವನಿಗೆ ಮೇಲಿಂದ ಮೇಲೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಆಫೀಸರ್ ಕಡೆಯಿಂದಾಗಲೀ ಅಥವಾ ಮತ್ತೆ ಯಾವ ಆಫೀಸರ್ ಕಡೆಯಿಂದಾಗಲೀ ಅವನಿಗೆ ತೊಂದರೆಗಳು ಬರುತ್ತಾ ಇರುತ್ತವೆ.

4–00 P.M.

ಶ್ರೀ ಎಸ್. ಬಂಗಾರಪ್ಪ.—ಆ ತೆರಿಗೆಯನ್ನು ನೂರಾರು ಎಕರೆ ಜಮೀನು ಇರುವ ಶ್ರೀಮಂತರ ಮೇಲೆ ಹಾಕಬೇಕೇ ಬೇಡವೇ ? ದೊಡ್ಡ ರೈತರ ಮೇಲೆ ಕರಭಾರವನ್ನು ಹೇರಬೇಡವೇ ?

ಶ್ರೀ ಎಂ. ಆರ್. ಪಾಟೀಲ್.—ಆ ರೀತಿ ಹೇರಬಾರದೆಂಬ ಅಭಿಪ್ರಾಯ ನನ್ನದಲ್ಲ. ಈ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸನ್ನು ಈಗಿನ ರೀತಿ ಹೇರಬಾರದೆಂದು ನಾನು ಹೇಳುತ್ತೇನೆ. ಯಾರೇ ಅಧಿಕಾರಿಗಳಾಗಿರಲಿ, ಅವರು ಇದಕ್ಕೆ ಸಂಬಂಧಪಟ್ಟ ಕಾಯಿದೆಯನ್ನು ಪೂರ್ವ ವಿಚಾರ ಮಾಡದೆ ಹೇರಬಾರದು ಎಂಬುದು ನನ್ನ ಮುಖ್ಯಾಭಿಪ್ರಾಯ. ಸರ್ಕಾರದವರು ಆ ಬಗ್ಗೆ ಯೋಗ್ಯ ವಾದಂಥ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸುಮಾರು 5 ಸಾವಿರ ರೂಪಾಯಿಗಳ ನಿವ್ವಳ ಉತ್ಪನ್ನ ಬರಬೇಕಾದರೆ, ನೀರಾವರಿ ಇರುವ ಕಡೆಗಳಲ್ಲಿ ಎಷ್ಟು ಭೂಮಿ ಅವನಿಗೆ ಇರ ಬೇಕೆಂಬುದನ್ನು ಮೊದಲು ನಿರ್ದಿಷ್ಟಪಡಿಸಬೇಕು. ಅದರ ಸಲುವಾಗಿ ಅಧಿಕಾರಿಯಾಗಿರುವವರು ಕೆಲವು ನಾನ್ ಅಫಿಷಿಯಲ್ಸ್‌ನ್ನು ಕೂಡಿಸಿಕೊಂಡು ಅವರೆಲ್ಲರೂ ಇಡೀ ಪ್ರಾಂತದಲ್ಲಿ ತಿರುಗಾಡಿ ನೀರಾವರಿ ಪ್ರದೇಶಗಳಲ್ಲಿ ಮತ್ತು ಉಳಿದ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವ ಪ್ರದೇಶಗಳಲ್ಲಿ ಸುಮಾರು 5 ಸಾವಿರ ರೂಪಾಯಿಗಳಷ್ಟು ಉತ್ಪನ್ನ ಬರಬೇಕಾದರೆ, ಅವನಿಗೆ ಎಷ್ಟು ಎಕರೆ

(ಶ್ರೀ ಎಂ. ಆರ್. ಪಾಟೀಲ್)

ಜಮೀನು ಇರಬೇಕೆಂದು ನಿರ್ಣಯಮಾಡಿಕೊಳ್ಳಬೇಕು. ಹಾಗೆ ಇಷ್ಟೇ ಎಕರೆಯಷ್ಟು ಜಮೀನು ಎಂಬುದಾಗಿ ನಿರ್ಣಯ ಮಾಡಿದಮೇಲೆ, ಅದಕ್ಕಿಂತ ಕಡಿಮೆ ಜಮೀನು ಇರುವವರಿಗೆ ಯಾವ ತರಹ ತೆರಿಗೆಯನ್ನೂ ಹಾಕಬಾರದು. 5 ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಉತ್ಪನ್ನ ಬರುವ ಜಮೀನು ಇದ್ದರೆ, ಅವನು ಆ ಜಮೀನಿನ ಉತ್ಪತ್ತಿಯ ಮೇಲೆ ಅವಲಂಬಿಸಿಕೊಂಡಿದ್ದರೆ, ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಹಾಕದೆ, ಸ್ಲ್ಯಾಬ್ ರೇಟಿನಲ್ಲಿ ತೆರಿಗೆ ಹಾಕಬೇಕು. ಅದಕ್ಕೆ ನನ್ನ ವಿರೋಧವಿಲ್ಲ. ಯಾವುದಾದರೂ ಒಂದು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕಾಯಿದೆ ಮಾಡಿ ರೈತರಿಂದ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ತೆಗೆದುಕೊಳ್ಳುತ್ತೇವೆಂದರೆ, ಅದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ರೈತರ ಮೇಲೆ ಯಾವುದಾದರೂ ಒಂದು ತೆರಿಗೆಯನ್ನು ಹಾಕಬೇಕೆಂದು ಮನಸ್ಸು ಮಾಡಿದರೆ, ಯಾವುದೂ ಲೆಕ್ಕಪತ್ರವಿಲ್ಲದೆ ತೆರಿಗೆಯನ್ನು ನಿರ್ಧಾರವಾಗಿ ತಿಳಿದುಕೊಳ್ಳುವಂಥ ಮತ್ತು ತೆರಿಗೆ ವಸೂಲಮಾಡುವ ಅಧಿಕಾರಿಯೂ ಸಹ ಇಂತಿಷ್ಟು ಅವನಿಂದ ಬರಬೇಕೆಂಬುದಾಗಿ ಸ್ಪಷ್ಟವಾಗಿ ತಿಳಿಯುವಂಥ ಒಂದು ಯೋಜನೆಯನ್ನು ಸರ್ಕಾರದವರು ಮಾಡಿಕೊಳ್ಳಬೇಕು. ಇದರಿಂದ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ನಮ್ಮ ಭಾಗಗಳಲ್ಲಿ ಎಲ್ಲೆಲ್ಲಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇದೆಯೋ ಅದನ್ನೂ ತೆಗೆದುಹಾಕಿ ಇಂತಿಂಥ ಭೂಮಿಗಳಿಗೆ ಇಂತಿಷ್ಟು ಎಕರೆವೈಜ್ ತೆರಿಗೆಕೊಡಬೇಕೆಂದು ಒಂದು ನಿಯಮ ಹಾಕತಕ್ಕದ್ದು ಒಳ್ಳೆಯದು. ಏಕೆಂದರೆ, ನಾಳೆ ಭೂತಲಿಂಗಂ ಕಮಿಟಿಯವರು ಬಂದಾಗ್ಗೆ ಅವರ ಮುಂದೆ ರೈತರ ಅಭಿಪ್ರಾಯಗಳನ್ನು ಹೇಳುವ ಒಂದು ಸಂಘ ಸಂಸ್ಥೆಯೂ ಇಲ್ಲ. ವ್ಯಾಪಾರಸ್ಥರು ಮತ್ತು ಉದ್ಯಮಗಾರರು ಛೇಂಬರ್ ಆಫ್ ಕಾಮರ್ಸ್ ಎಂಬುದಾಗಿ ಸಂಘಟನೆಮಾಡಿಕೊಂಡು ಅವರ ತೊಂದರೆಗಳನ್ನು ಆ ಕಮಿಟಿಯ ಮುಂದೆ ಮಂಡಿಸಬಹುದು. ಆದರೆ ನಮ್ಮ ಪ್ರಾಂತದ ರೈತರಿಗೆ ಅಂತಹ ಒಂದು ಸಂಘಟಣೆ ಅಥವಾ ಒಂದು ಸಂಸ್ಥೆ ಇಲ್ಲ. ನಮ್ಮೊಳಗೆ ಯಾವ್ಯಾವ ಭಾಗದಲ್ಲಿ ಎಷ್ಟೆಷ್ಟು ಎಕರೆ ಉತ್ಪನ್ನ ಬರಬಹುದು ಎನ್ನುವ ನಿರ್ಣಯವನ್ನು ತೆಗೆದುಕೊಂಡು ನಾವು ಇಡೀ ಪ್ರಾಂತದ ರೈತರ ವತಿಯಿಂದ ಒಂದು ಯೋಜನೆಯನ್ನು ಸರ್ಕಾರದ ಮುಂದಿಡುವುದಕ್ಕೆ ಸಾಧ್ಯವಿಲ್ಲ. ನಾವು ಒಂದು ಶಿಸ್ತಿನ ಜನರಲ್ಲ, ರೈತರು ಅಂತಹ ಪಂಡಿತರಲ್ಲ. ಆದ್ದರಿಂದ ರೈತರ ವತಿಯಿಂದ ಅವರ ಮನವಿಯನ್ನು ಆ ಕಮಿಟಿ ಮುಂದೆ ಇಡಬೇಕಾದರೆ ಆ ಕೆಲಸವನ್ನು ಸರ್ಕಾರದವರೇ ಮಾಡಬೇಕು. ಸರ್ಕಾರದವರು ಅವರ ಮೇಲೆ ತೆರಿಗೆ ಹಾಕುವುದಕ್ಕೆ ಜವಾಬ್ದಾರಿ ವಹಿಸಿರುವಾಗ, ಅವರ ತೊಂದರೆಗಳನ್ನು ಆ ಕಮಿಟಿ ಮುಂದೆ ಇಡುವುದಕ್ಕೂ ಸಹ ಅವರೇ ಜವಾಬ್ದಾರಿ ವಹಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಯಾರಾದರೂ ಒಬ್ಬರು ಒಂದು ಅಭಿಪ್ರಾಯ ಹೇಳಿದರೆ ಅವರ ಅಭಿಪ್ರಾಯಕ್ಕೆ ಮತ್ತು ಮತ್ತೊಬ್ಬರ ಅಭಿಪ್ರಾಯಕ್ಕೆ ಸ್ವಲ್ಪ ಹೆಚ್ಚುಕಡಿಮೆಯಾಗಬಹುದು. ಆದ್ದರಿಂದ ಈ ವಿಷಯದಲ್ಲಿ ಒಕ್ಕಲಿಗರ ಮೇಲೆ ಯಾವುದೇ ಹೆಚ್ಚಿನ ತೆರಿಗೆ ಹಾಕುವುದು ನ್ಯಾಯವಲ್ಲ. ನಾನು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ರೂಲ್ಸನ್ನು ಓದಿದ್ದೇನೆ. ರೈತನ ಉತ್ಪನ್ನ ಏನಿದೆಯೋ ಅದರ ಅರ್ಧದಷ್ಟು ಖರ್ಚಾದರೆ, ಉಳಿದುದು ತನ್ನ ಉತ್ಪನ್ನವೆಂದು ತೆಗೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಒಂದು ಕಾಸು ನಿವ್ವಳ ಉತ್ಪನ್ನ ಬಂದರೆ ಅದರ ಮುಕ್ಕಾಲರಷ್ಟು ಕನಿಷ್ಠ ಖರ್ಚಾಗಿರುತ್ತದೆ. ಇಷ್ಟೇ ಅಲ್ಲ ಬಯಲು ಪ್ರದೇಶದಲ್ಲಿ ಸಾಮಾನ್ಯವಾಗಿ ಬೆಳೆ ಬೆಳೆದರೆ, ಆ ಬೆಳೆಯ ಪೈಕಿ ಒಂದು ಪಾಲು ನಿವ್ವಳ ಉತ್ಪನ್ನ ಬರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ನಮ್ಮ ಪ್ರಾಂತದ 19 ಜಿಲ್ಲೆಗಳ ಪೈಕಿ 14–15 ಜಿಲ್ಲೆಗಳಲ್ಲಿ ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತವೆ. ಆದುದರಿಂದ ಸರ್ಕಾರದವರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂಬುದಾಗಿ ಹೆಚ್ಚಿನ ತೆರಿಗೆಯನ್ನು ರೈತರಿಂದ ಅಪೇಕ್ಷೆಮಾಡುವುದು ಒಳ್ಳೆಯದಲ್ಲ. ಈಗಾಗಲೇ ಒಕ್ಕಲುತನದ ಹುಟ್ಟುವಳಿ ಧಾರಣೆಗಳು ಕೆಳಗೆ ಬೀಳಲಿಕ್ಕೆ ಹತ್ತಿವೆ. ಬೆಲ್ಲದ ಧಾರಣೆ ಎಲ್ಲಕ್ಕೂ ಕೆಳಗೆ ಹೋಗಿದೆ. ಸೇಂಗ ಮತ್ತು ಬೇಳೆ ಕಾಳುಗಳ ಗೋಧಿ ಧಾನ್ಯಗಳ ಧಾರಣೆ ಕೆಳಗೆ ಬಿದ್ದಿದೆ. ಇದೇ ಪರಿಸ್ಥಿತಿಯಲ್ಲಿ ರೈತ ಬೆಳೆಯುವ ಪದಾರ್ಥಗಳ ಧಾರಣೆ ಕೆಳಗೆ ಇಳಿಯುತ್ತಾ ಹೋದರೆ, ಇದು ಯಾವ ಮಟ್ಟಕ್ಕೆ ಮುಟ್ಟುತ್ತದೊ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುವುದೇನೆಂದರೆ, ರೈತನಾದವನು ಇವತ್ತಿನದಿವಸ ಬಹಳ ವರ್ಷಗಳಿಂದ ನರಳಿ ಚೇತರಿಸಿಕೊಳ್ಳುವುದಕ್ಕೆ ಹೊರಟಿದ್ದಾನೆ. ಆದ್ದರಿಂದ ಅವನ ಮೇಲೆ ಈ ಇನ್‌ಕಂಟ್ಯಾಕ್ಸನ್ನು ಹೇರದೆ ಅವನಿಗೆ ಒಳ್ಳೆಯದಾಗುವಂಥ ಯೋಜನೆಗಳನ್ನು ಕೈಗೊಳ್ಳಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರ್ಥಿಕ ಮಂತ್ರಿಗಳು ಅವರ ಭಾಷಣದಲ್ಲಿ ನಗರವಾಸಿಗಳ ಮೇಲಿನ ತೆರಿಗೆ ಭಾರ ಹೆಚ್ಚಾಗಿದೆ. ಆ ಭಾರವನ್ನು ಅವರು ಹೋರುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳಿದ್ದಾರೆ. ನಾನು ಆ ಮಾತಿಗೆ ಅಷ್ಟು ಒಪ್ಪಿಗೆ ಕೊಡಲಾರೆ. ಇವತ್ತಿನದಿವಸ ನಮ್ಮ ಪ್ರಾಂತ್ಯದಲ್ಲಿ ಸುಮಾರು

22 ಸಾವಿರ ಮೋಟಾರು ಕಾರುಗಳಿವೆ. ಪ್ರತಿವರ್ಷವೂ ಹೊಸದಾಗಿ ಒಂದೊಂದು ಸಾವಿರ ಮೋಟಾರುಕಾರುಗಳು ಹೆಚ್ಚಿಗೆ ಬೆಳೆಯುತ್ತಾ ಹೋಗುತ್ತಿವೆ. ಇದು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಹೊರಟಿದೆ ಎಂದು ತೋರಿಸುತ್ತದೆ. ಇದು ಸಾರ್ವಜನಿಕರು ಹೆಚ್ಚಿನ ಕರಭಾರ ಹೊರುವುದಕ್ಕೆ ಸಾಧ್ಯವಿಲ್ಲವೆಂದು ಸೂಚಿಸುವುದಿಲ್ಲ. ಇವತ್ತಿನ ದಿವಸ ಎಷ್ಟೋ ಮಂದಿ ಕಾರುಗಳು ಬೇಕು ಎಂಬುದಾಗಿ ಕೇಳುತ್ತಾರೆ. ಅಂತಹವರಿಗೆ ಒಂದು ವರ್ಷಕ್ಕೆ ಒಂದು ಕಾರಿಗೆ 200 ರೂಪಾಯಿಗಳ ತೆರಿಗೆ ಹಾಕಿದರೆ ಸುಮಾರು 30-40 ಲಕ್ಷ ರೂಪಾಯಿಗಳಷ್ಟು ವರಮಾನ ತೆರಿಗೆ ರೂಪದಲ್ಲಿ ಬರುತ್ತದೆ. ಇದಕ್ಕೇಕೆ ಸರ್ಕಾರದವರು ಹಿಂದುಮುಂದು ನೋಡಬೇಕು ? ಈ ಯೋಜನೆಗೆ ನಮ್ಮ ಅಧಿಕಾರಿಗಳು ವಿರೋಧಮಾಡುತ್ತಾರೆಂದು ನನಗೆ ಗೊತ್ತಿದೆ. ಅವರಿಗೆ ಕಾರುಗಳನ್ನು ಇಡುವ ಪ್ರಸಂಗ ಬಂದಾಗ, ಅವರಿಗೆ ಹೆಚ್ಚಿನ ಕರಭಾರ ಬಂದರೆ ಅದನ್ನು ಸಹಿಸಲಾರರು, ಅದಕ್ಕೆ ವಿರೋಧಮಾಡುವ ಸಂಭವವೂ ಉಂಟು. ಯಾವ ಅಧಿಕಾರಿ ಅವಶ್ಯಕವಾಗಿ ಕಾರುಗಳನ್ನು ಇಡಲೇ ಬೇಕೋ ಅಂತಹವರು ಅವನ್ನು ಕೊಡಬಹುದು. ಒಟ್ಟಿನಲ್ಲಿ ಕಾರುಗಳಮೇಲೆ ಧಾರಾಳವಾಗಿ ತೆರಿಗೆ ಹಾಕಬೇಕೆಂದು ನಾನು ಸರ್ಕಾರದವರಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಸಿನಿಮಾ ಹೌಸಸ್ ದಿನೇ ದಿನೇ ಬೆಳೆಯುತ್ತಿವೆ. ಲೈಸೆನ್ಸ್ ನಮಗೆ ಕೊಡಿ ಎಂಬುದಾಗಿ ಅನೇಕ ಸಿನಿಮಾ ಹೋಲ್ಡರ್ಸ್ ಬಹಳವಾಗಿ ಕೇಳುತ್ತಾ ಇದ್ದಾರೆ. ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದರೆ, ಸರ್ಕಾರದವರು ಬೇಕಾದಷ್ಟು ಹಣ ವನ್ನು ಪಡೆಯುತ್ತಾರೆ. ಸಾಮಾನ್ಯವಾಗಿ ಒಂದು ವರ್ಷಕ್ಕೆ ಒಬ್ಬರಿಂದ 10 ಸಾವಿರ ರೂಪಾಯಿಗಳಷ್ಟು ಹಣ ತೆಗೆದುಕೊಂಡರೆ, ಅವನಿಗೆ ಯಾವ ಹಾನಿಯೂ ಆಗಲಿಕ್ಕಿಲ್ಲ. ಆ ದೃಷ್ಟಿಯಿಂದ ಈ ಯೋಜನೆಯನ್ನು ಸರ್ಕಾರದವರು ಕೈಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳು ತ್ತೇನೆ. ಅದೇ ರೀತಿ ಇವತ್ತು ಸಿನೇಮ ಟಿಕೆಟ್ಟು ಕೂಡ ಬ್ಲಾಕ್ ಮಾರ್ಕೆಟಿನಲ್ಲಿ ಮಾರುತ್ತಿದ್ದಾರೆ. ಈ ದುಡ್ಡು ಯಾರಿಂದ ಬರುತ್ತದೆ ? ಅವಕ್ಕೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು, ಮೇಲಿನ ತರಗತಿಗೆ ಇನ್ನೂ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುತ್‌ಗೆ ಸಂಬಂಧಪಟ್ಟ ವಿಚಾರ ಮಾನ್ಯ ಆರ್ಥಿಕ ಮಂತ್ರಿಗಳು ಹೇಳಿದ್ದಾರೆ. ಹಳ್ಳಿ ಗಳಿಗೆ ಇಲೆಕ್ಟ್ರಿಫಿಕೇಶನ್ ಕಡಿಮೆ ಇದೆ. ಇವತ್ತು ಹಳ್ಳಿಗಳಲ್ಲಿ ಜನರು ಇಲೆಕ್ಟ್ರಿಸಿಟಿಯನ್ನು ಕೊಳ್ಳಲು ಆತುರರಾಗಿದ್ದಾರೆ. ಆದ್ದರಿಂದ ಈ ಟ್ಯಾರಿಫ್ ರೇಟನ್ನು ಏರಿಸಬೇಕೆಂದು ಇದ್ದಾರೆ. ಅದೇ ರೀತಿ ಪಟ್ಟಣದಲ್ಲಿರುವವರಿಗೂ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಇವತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಂದು ಸಾವಿರ ರೂಪಾಯಿ ಬಾಡಿಗೆ ಬರುವಂತಹ ಮನೆಗಳೂ ಅನೇಕ ಇದ್ದಾವೆ. ಇವತ್ತು ನೋಡಲಿಕ್ಕೆ ಹೋದರೆ, ಬಾಡಿಗೆಗೆ ಮನೆಯೇ ಸಿಗುತ್ತಾ ಇಲ್ಲ. ಮನೆ ಬಾಡಿಗೆಗೆ ಕೊಟ್ಟಂತವರು ಬೇಕಾದಷ್ಟು ಬಾಡಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಅದಕ್ಕೆ ಒಂದು ಮಿತಿಯೇ ಇಲ್ಲ. ನಾನಾದರೂ ಕೇಳುತ್ತೇನೆ, ಇಂಥವರಿಗೆ ಅರ್ಬನ್ ಪ್ರೊಪರ್ಟಿ ಟ್ಯಾಕ್ಸ್ ಏಕೆ ಹಾಕಬಾರದು ? ನಾನು ಏನೂ ಸಣ್ಣ ಮನೆಗಳ ಮೇಲೆ ಹಾಕಿ ಎಂದು ಹೇಳುತ್ತಿಲ್ಲ. ಸುಮಾರು 10 ಸಾವಿರ ಉತ್ಪನ್ನ ಮಾಡುವಂತಹ ಮನೆಗಳಿಗೆ ಟ್ಯಾಕ್ಸ್ ಹಾಕಿ. ಸ್ವತಃ ಮನೆ ಮಾಡಿಕೊಂಡು ತಾವೇ ಆ ಮನೆಯಲ್ಲಿರುವವರಿಗೆ ಹಾಕಬೇಡಿ. ಈ ರೀತಿ ದೊಡ್ಡ ದೊಡ್ಡ ಮನೆಗಳಿಗೆ ಟ್ಯಾಕ್ಸ್ ಹಾಕಿದರೆ, ಲಕ್ಷಾಂತರ ರೂಪಾಯಿ ಸರ್ಕಾರದವರು ದೊರಕಿಸಿಕೊಳ್ಳಬಹುದೆಂದು ನನಗನಿಸುತ್ತದೆ. ಅದೇ ರೀತಿ ಮನೆಯಲ್ಲಿ ಆರ್ ಎಲೆಕ್ಟ್ರಿಕ್ ಏನು ಇದೆ, ಅದಕ್ಕೆಲ್ಲ ಇನ್ನೂ ಬೇಕಾದರೆ ಜಾಸ್ತಿ ಮಾಡಬಹುದು. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಅದರಿಂದ ಸರ್ಕಾರಕ್ಕೆ ಹೆಚ್ಚು ಉತ್ಪನ್ನ ಬರಬಹುದೆಂದು ಹೇಳುತ್ತೇನೆ. ಇವತ್ತು ನೀವು ರೈತರ ಮೇಲೆ ಟ್ಯಾಕ್ಸ್ ಹಾಕಬಾರದು. ಬೇಕಾದರೆ, ಹೆಚ್ಚಿನ ಉತ್ಪನ್ನ ಬರುವ ರೈತರಿಗೆ ಒಂದು ಭೂಮಿಯ ಕನಿಷ್ಠ ಮಿತಿಯನ್ನು ಇಟ್ಟುಕೊಂಡು ಕರವನ್ನು ಹಾಕಿ. ಅಥವಾ, ಎಕರೆವೈಸ್ ಮಾಡಿ ಕೊಂಡು ಕರವನ್ನು ಹಾಕತಕ್ಕದ್ದು ಅವಶ್ಯಕ. ಇವಕ್ಕೆ ಅಂಕೆ ಸಂಖ್ಯೆಗಳನ್ನು ತರಿಸಿಕೊಂಡು, ಭೂತಲಿಂಗಮ್ ಕಮಿಟಿ ಬರುವ ಮೊದಲು ಯೋಜನೆಯನ್ನು ಹಾಕಬೇಕೆಂದು ಕೇಳಿಕೊಂಡು, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ದೇಶದಲ್ಲಿ, ಕೃಷ್ಣಾ, ತುಂಗಭದ್ರಾ, ಹೇಮಾವತಿ, ಶರಾವತಿ, ಕಾಳಿ ಮೊದಲಾದ ಜೀವನದಿಗಳಿದ್ದೂ, ಸುಮಾರು 200 ಮೈಲುಗಳಷ್ಟು ಕರಾವಳಿ ಪ್ರದೇಶವಿದ್ದೂ, ಹೊಸಪೇಟೆ ಮತ್ತು ಕುದುರೆಮುಖ ಎಂಬ ವಿಶ್ವ ಶ್ರೇಷ್ಠವಾದ ಕಬ್ಬಿಣದ ಅದುರು ದೊರೆಯುವ ಸ್ಥಳಗಳಿದ್ದೂ ವಿಶಾಲವಾದ ಕಾಡು ಪ್ರದೇಶಗಳಿದ್ದೂ, ಅತಿ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ನಾವು ಉತ್ಪಾದನೆ ಮಾಡುತ್ತಿದ್ದೂ, ಇತರ ಯಾವ ರಾಜ್ಯಗಳಲ್ಲಿಯೂ ನಡೆಸದಷ್ಟು ಕೈಗಾರಿಕೆಗಳು ಈ ರಾಜ್ಯದಲ್ಲಿದ್ದೂ, ಉತ್ತಮವಾದ ವ್ಯವಸಾಯವನ್ನು ಮಾಡುತ್ತಿದ್ದೇ ವೆಂದು ಹೇಳುತ್ತಾ ಸಣ್ಣ ನೀರಾವರಿ ಯೋಜನೆಗಳನ್ನು ದೊಡ್ಡ ನೀರಾವರಿ ಯೋಜನೆಗಳನ್ನು 18

(ಶ್ರೀ ಎಚ್. ಬಿ. ಜ್ವಾಲನಯ್ಯ)

ವರ್ಷಗಳಿಂದಲೂ ಮಾಡುತ್ತಿದ್ದೇವೆಂದು ಹೇಳುತ್ತಾರೆ, ನಮ್ಮ ಆರ್ಥಿಕ ಮಂತ್ರಿಯವರು 63–64ನೇ ಇಸವಿಯಲ್ಲಿ 5,416 ಲಕ್ಷ ಇದ್ದಂತಹ ತೆರಿಗೆಯನ್ನು 69–70 ರಲ್ಲಿ 10,675 ಲಕ್ಷಕ್ಕೆ ಏರಿಸಿದರೂ ಕೂಡ ನಮ್ಮ ರಾಜ್ಯದಲ್ಲಿರುವಷ್ಟು ತೆರಿಗೆ ಭಾರತದ ಇನ್ನಾವ ರಾಜ್ಯದಲ್ಲಿ ಇಲ್ಲ ಎನ್ನುವ ಸಂಗತಿ ಇದ್ದರೂ, ಭಾರತದಲ್ಲಿ ಇರುವಂತಹ ಬಡ ರಾಜ್ಯಗಳಲ್ಲಿ ಮೈಸೂರು ರಾಜ್ಯ ಎರಡನೇ ಸ್ಥಾನದಲ್ಲಿದೆ ಎಂದರೆ, ನಮ್ಮ ರಾಜ್ಯದಲ್ಲಿ ಇಷ್ಟೆಲ್ಲಾ ಸಂಪತ್ತು ಇದ್ದರೂ ಕೂಡ, ನಮ್ಮ ಸರ್ಕಾರದ ಕೈಗೆ ಸಿಕ್ಕಿದರೂ ಕೂಡ, ಇನ್ನೂ ನಮ್ಮ ರಾಜ್ಯ ಬಡ ರಾಜ್ಯವಾಗಿ ಉಳಿದಿದೆ ಎಂದರೆ, ನಾವು ಯಾವು ರೀತಿಯಲ್ಲಿ ಈ ಬಜೆಟನ್ನು ಸ್ವಾಗತಿಸಬೇಕೆಂದು ಗೊತ್ತಾಗಿಲ್ಲ. ನಮ್ಮ ಆರ್ಥಿಕ ಮಂತ್ರಿಯವರು ಹೇಳಿದ ರೀತಿಯಲ್ಲಿ ನಾವು ಕೊಡಬೇಕಾದ ಸಾಲ 425 ಕೋಟಿ ರೂಪಾಯಿ. ಈ ಸಾರಿ ಮಾನ್ಯ ಆರ್ಥಿಕ ಮಂತ್ರಿಯವರು ನಮ್ಮ ಮುಂದೆ 13 22 ಕೋಟಿ ರೂಪಾಯಿಯ ಖೋತಾ ಬಜೆಟನ್ನು ಇಟ್ಟಿದ್ದಾರೆ. ನಿನ್ನೆ ಮಾತನಾಡಿದಂತಹ ಶ್ರೀ ಘೋರ್ಪಡೆಯವರು "ಡಿಫಿಸಿಟ್ ಬಜೆಟ್ ರಾಜ್ಯ ಸರ್ಕಾರದವರು ಮಂಡಿಸುವುದಕ್ಕೆ ಅವಕಾಶ ಇಲ್ಲ, ಅದು ಕೇವಲ ಕೇಂದ್ರ ಸರ್ಕಾರದವರು ಮಾತ್ರ ಮಂಡಿಸಬಹುದು" ಎಂದು ಹೇಳಿದರು. ಮತ್ತು ಕೇಂದ್ರ ಸರ್ಕಾರದಲ್ಲಿ ಹಣ ಇಲ್ಲದೆ ಇದ್ದರೂ, ಕೂಡ ನೋಟನ್ನು ಪ್ರಿಂಟ್ ಮಾಡಿ ಹಂಚಿ, ಬಿಲ್ಸ್ ಮುಖಾಂತರ ವ್ಯವಹಾರ ನಡೆಸುವುದಕ್ಕೆ ಅವಕಾಶವಾಗುತ್ತದೆ ಎಂದೂ ಹೇಳಿದರು. ಇದು ಸತ್ಯ ಎಂದು ಕಾಣುತ್ತದೆ. ಈ ದೃಷ್ಟಿಯಿಂದ ಖೋತಾ ಬಜೆಟ್ ಮಂಡಿಸಿರುವಂತದ್ದು ಸರಿಯಲ್ಲ. ನಮ್ಮ ಆರ್ಥಿಕ ಮಂತ್ರಿಯವರು ಹೇಳಿದ್ದಾರೆ, ನಮಗೆ 13 ಕೋಟಿ ಚಿಲ್ಲರೆ ಕಡಿಮೆ ಬೀಳುತ್ತದೆ ಎಂದು. ಅವರು ಕೊಟ್ಟಿರುವಂತಹ ಪ್ರತಿಯೊಂದು ಅಂಶವನ್ನು ವಿಮರ್ಶೆ ಮಾಡಿ ನೋಡಿದರೆ ಸುಮಾರು 30 ಕೋಟಿ ರೂಪಾಯಿ ಕಡಿಮೆ ಬೀಳುತ್ತದೆಂದು ನನಗನಿಸುತ್ತದೆ. ಅವರ ಈ ಸಾಹಸ ನಿಜವಾಗಿಯೂ ಮೆಚ್ಚಬೇಕಾದುದು. ಹೋದ ಸಾರಿಯೂ ಖೋತಾ ಬಜೆಟ್ ಮಂಡಿಸಿದ್ದಾರೆ. ಇತರ ರಾಜ್ಯಗಳೂ ಮಂಡಿಸಿದೆ, ನಾವೇ ಅಲ್ಲ ಮಂಡಿಸಿದ್ದು ಎಂದೂ ಹೇಳಿದ್ದಾರೆ. ಕೊರತೆಯನ್ನು ಕೇಂದ್ರದವರು ಕೊಟ್ಟರೆ ಸರಿದೂಗಿಸಬಹುದು ಎಂದು ಹೇಳುತ್ತಿದ್ದಾರೆ. ಈಗ ಸುಮಾರು 119.61 ಕೋಟಿ ರೂಪಾಯಿ ಸಾಲ ಇದೆ. ಇದನ್ನು ಸರಿದೂಗಿಸಬೇಕಾಗಿದೆ. ಇವರ ಅಂದಾಜು ಪ್ರಕಾರ ಮುಂದಿನ ವರ್ಷದ ವರಮಾನವು 213.26 ಕೋಟಿ ರೂಪಾಯಿಯಷ್ಟಾಗಬಹುದೆಂಬ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ. ಇದಕ್ಕೆ ಬಡ್ಡಿಯೇ ಸುಮಾರು 30 ಕೋಟಿ ರೂಪಾಯಿಯಾಗುತ್ತದೆ. ಜೊತೆಗೆ 68–69 ರಲ್ಲಿ 6 ಕೋಟಿ ಸಾರ್ವಜನಿಕ ಸಾಲವನ್ನೂ ಮಾಡಿದ್ದಾರೆ. ಇದರ ಬಗ್ಗೆ ಏನು ಹೇಳಬೇಕೆಂದು ಗೊತ್ತಿಲ್ಲ. ಇವತ್ತು ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಒಂದು ಹುಲಿಯ ಗಾಯಕ್ಕೆ ಹೋಲಿಸಬಹುದು. ಹುಲಿಯು ತನ್ನ ಮೈಯಲ್ಲಿ ಒಂದು ಗಾಯವಾದರೆ ಅದನ್ನು ಮುಚ್ಚಿಕೊಳ್ಳುವುದಕ್ಕೆ ಇನ್ನೊಂದು ಭಾಗದ ಮಾಂಸವನ್ನು ಕಿತ್ತು ಮುಚ್ಚುತ್ತದೆ. ಹೀಗೆ ದೇಹವೆಲ್ಲಾ ಗಾಯವಾಗಿ, ಕೊನೆಗೆ ಅದು ಸತ್ತು ಹೋಗುವ ಪರಿಸ್ಥಿತಿ ಬರುತ್ತದೆ. ಅದೇ ರೀತಿ, ನಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿಯು ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಗ್ರಾಮಾಂತರ ಪ್ರದೇಶದ ರೈತರ ಮತ್ತು ಇತರ ಜನತೆಯ ನೆತ್ತರನ್ನು ಡೈರೆಕ್ಟ್ ಮತ್ತು ಇಂಡೈರೆಕ್ಟ್ ಟ್ಯಾಕ್ಸ್ ಮುಖಾಂತರ ನೀವು ಹೀರುತ್ತಿದ್ದೀರಿ. ಹಳ್ಳಿಗಾಡಿನ ಜನತೆ ಯಾರೂ ಸುಖವಾಗಿಲ್ಲ. ಎಲ್ಲಾ ರಾಜ್ಯಗಳ ಮುಖಂಡರೂ ಕೇಂದ್ರದಲ್ಲಿ ಸಭೆ ಸೇರಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಯಾವ ರೀತಿ ಹಣವನ್ನು ಕೂಡಿಸಬೇಕು ಎನ್ನುವುದನ್ನು ವಿಚಾರ ಮಾಡಿದ್ದಾರೆ. ಮತ್ತು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಕೂಡ ಈ ಬಗ್ಗೆ ವಿಚಾರ ಮಾಡಿದ್ದಾರೆ. ಮೈಸೂರು ರಾಜ್ಯದ ಪರ್‌ಕ್ಯಾಪಿಟಾ ಇನ್‌ಕಂ 2 ಪರ್ಸೆಂಟ್ ಜಾಸ್ತಿ ಇರುವುದರಿಂದ ಶೇಕಡಾ 10 ರಷ್ಟು ಹಣ ಬರುವುದಕ್ಕೆ ಸಾಧ್ಯವಿಲ್ಲದೆ ಬಹಳ ಹಣವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳೂ ಇದ್ದರು, ಅದೇ ರೀತಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಅಲ್ಲಿ ಇದ್ದರು. ಮೈಸೂರಿಗೆ ಅನ್ಯಾಯವಾಗುತ್ತದೆ ಎನ್ನುವುದು ವರದಿಯಲ್ಲಿ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ಒತ್ತಾಯ ಮಾಡಲಿಲ್ಲವೋ ಏನೋ ಅರ್ಥವಾಗುವುದಿಲ್ಲ. ಇಲ್ಲಿಯವರೆಗೆ ಗ್ರಾಮಾಂತರ ಪ್ರದೇಶದ ಯೋಜನೆಗಳಿಗೆ ಬಹು ಮೊತ್ತದ ಹಣ ಖರ್ಚಾಗಿದೆ, ಆದ್ದರಿಂದ ಇನ್ನು ಮುಂದೆ ಅವರು ಹೆಚ್ಚಿನ ತೆರಿಗೆಯನ್ನು ಹೊರಬೇಕು ಎಂದು ನಮ್ಮ ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ. ಇದು ಗ್ರಾಮಾಂತರ ಪ್ರದೇಶದ ಜನಗಳಿಗೆ ಇವರು ಕೊಟ್ಟಿರುವ ಒಂದು ಎಚ್ಚರಿಕೆ ಎಂದು ಹೇಳಬಹುದು. ಬಡ್ಜೆಟ್ಟಿನಲ್ಲಿ ಯಾವ ತೆರಿಗೆಯನ್ನೂ ಸೂಚಿಸಿಲ್ಲ. ತೆರಿಗೆ ಇಲ್ಲದೆ ಇರುವ ಬಡ್ಜೆಟ್ಟು ಎಂದು ಹೇಳುವುದು ಸರಿಯಾದ್ದಲ್ಲ, ಏತಕ್ಕೆಂದರೆ ಭೂತಲಿಂಗಂ ಅವರ ನೇತೃತ್ವದಲ್ಲಿ

ಒಂದು ಕಮಿಟಿಯನ್ನು ನೇಮಕ ಮಾಡಿ ಹೆಚ್ಚು ತೆರಿಗೆಯನ್ನು ಯಾವ ಯಾವುದರ ಮೇಲೆ ಹಾಕಬಹುದು, ಯಾವ ರೀತಿ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬಹುದು ಎನ್ನುವ ಬಗ್ಗೆ ಸಲಹೆಗಳನ್ನು ಕೊಡುವುದಕ್ಕೋಸ್ಕರ ರಾಜ್ಯ ಸರ್ಕಾರದವರು ಸಮಿತಿಗೆ ತಿಳಿಸಿದ್ದಾರೆ. ಅವರು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಮೇಲೆ ಯಾವು ಯಾವುದರ ಮೇಲೆ ತೆರಿಗೆಯನ್ನು ಹಾಕಬೇಕೆಂದು ಶಿಫಾರಸ್ಸು ಮಾಡಿರುತ್ತಾರೆಯೋ ಅದನ್ನು ಸರ್ಕಾರದವರು ಕಾರ್ಯರೂಪಕ್ಕೆ ತರಬೇಕಾಗುತ್ತದೆ, ಅದನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ.

ನಮ್ಮ ರಾಜ್ಯದಲ್ಲಿ ಕಾವೇರಿ ಬೇಸಿನ್‌ನಲ್ಲಿರತಕ್ಕ ಯೋಜನೆಗಳನ್ನು ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ 213 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ಯೋಜನೆಗಳು ಬಹು ಮುಖ್ಯವಾದ ಯೋಜನೆಗಳು. ಇಂಥಾ ಯೋಜನೆಗಳಿಗೆ ಬಜೆಟ್ಟಿನಲ್ಲಿ 12.83 ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಇದರಲ್ಲಿ ಹೇಮಾವತಿ ಪ್ರಾಜೆಕ್ಟಿಗೆ 50 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಈ ಹಣದಲ್ಲಿ ಸುಮಾರು 28–30 ಲಕ್ಷ ರೂಪಾಯಿಗಳು ಬರೀ ಸಿಬ್ಬಂದಿಗಾಗಿಯೇ ಖರ್ಚಾಗುತ್ತದೆ. ಇನ್ನು ಉಳಿದ 10–12 ಲಕ್ಷ ರೂಪಾಯಿಗಳಲ್ಲಿ ಈ ಯೋಜನೆಯು ಯಾವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾದೀತು ? ಈ ಯೋಜನೆಯನ್ನು ಪೂರ್ತಿ ಮಾಡಬೇಕಾದರೆ 16 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ನನ್ನ ಅಭಿಪ್ರಾಯದ ಪ್ರಕಾರ ಈ ಯೋಜನೆ ಪೂರ್ತಿಯಾಗಬೇಕಾದರೆ 60–70 ಕೋಟಿ ರೂಪಾಯಿಗಳವರೆಗೂ ಹೋಗುತ್ತದೆ. ಸರ್ಕಾರದವರಿಗೆ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಮನಸ್ಸು ಇದೆಯೋ ಇಲ್ಲವೋ ಗೊತ್ತಿಲ್ಲ. ಜನತೆಯ ಕಣ್ಣಿಗೆ ಮಣ್ಣು ಎರಚುವುದಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆ. ಕಂಬದ ಕಡ ಪ್ರಾಜೆಕ್ಟಿಗೆ 3 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಿಂದ ಏನೇನೂ ಕೆಲಸ ಆಗುವುದಿಲ್ಲ. ನಿಮ್ಮ ಕೈಯ್ಯಲ್ಲಿ ಈ ಯೋಜನೆಗಳನ್ನು ಮಾಡುವುದಕ್ಕೆ ಶಕ್ತಿ ಇಲ್ಲದೇ ಇದ್ದರೆ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ. ಹೇಮಾವತಿ ಯೋಜನೆಯಿಂದ ಮುಳಗಡೆಯಾಗುವ ಜಮೀನಿನ ಒಡೆಯರಾದ ರೈತರ ಪರಿಸ್ಥಿತಿ ಹೇಗಿದೆ ಎಂದರೆ ಯಾವ ಯಾವ ಜಮೀನು ಎಷ್ಟೆಷ್ಟು ಯಾವಾಗ ಮುಳುಗಡೆಯಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ. ಆ ಜಮೀನುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿಲ್ಲದಂತಾಗಿದೆ. ನಾವು ಅನೇಕ ಸಾರಿ ಹೇಮಾವತಿ ಯೋಜನೆಯ ಪ್ರದೇಶಕ್ಕೆ ಹೋದಾಗ ನೋಡುತ್ತಿದ್ದೇವೆ, ಆ ಯೋಜನೆಯ ಕಾರ್ಯಕ್ಕೆ ಸಂಬಂಧಪಟ್ಟ ಸಿಬ್ಬಂದಿವರ್ಗದವರು ತಮ್ಮ ವೇಳೆಯಲ್ಲಿ ಏನೂ ಕೆಲಸಮಾಡುವುದಕ್ಕೆ ಇಲ್ಲದೆ ಇಸ್ಪೀಟ್ ಆಡುತ್ತಿರುತ್ತಾರೆ. ಈ ಹೇಮಾವತಿ ಯೋಜನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡುವುದಾದರೆ ಒಂದು ಲಕ್ಷ ಎಕರೆಗಿಂತ ಹೆಚ್ಚು ಜಮೀನಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ. ಇದರಿಂದ ಆ ಭಾಗದ ಜನತೆಯ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿಯಾಗುವ ಪರಿಸ್ಥಿತಿ ಬರುತ್ತದೆ. ಇಂಥಾ ಒಂದು ಯೋಜನೆಗೆ ಸರ್ಕಾರದವರು ಒಂದು ವರ್ಷಕ್ಕೆ 2–3 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದರೆ ಹೇಗೆ ? ಈಗ ಸರ್ಕಾರದವರು ಅನೇಕ ಇಲಾಖೆಗಳಿಗೆ ದುಡ್ಡನ್ನು ಹಂಚಿದ್ದಾರೆ. ಒಂದೊಂದು ಇಲಾಖೆಯಲ್ಲಿ 5 ಪರ್ಸೆಂಟ್ ಹಣವನ್ನು ಕಡಿಮೆ ಮಾಡುವುದಾದರೆ ಅದರಿಂದ 3 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ. ಆ ಹಣವನ್ನು ಈ ಹೇಮಾವತಿ ಯೋಜನೆಗೆ ಖರ್ಚು ಮಾಡುವುದಾದರೆ ಅದರಿಂದ ಎಷ್ಟೋ ಉಪಯೋಗವಾಗುತ್ತದೆ. ಮತ್ತು ಕಂಬದಕಡ, ಹೇಮಾವತಿ, ಹಾರಂಗಿ, ಯಗಚಿ ಈ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಬೇಕಾದಂತಹ ಹಣವನ್ನು ಸರ್ಕಾರದವರು ಯಾವರೀತಿಯಿಂದಲಾದರೂ ಒದಗಿಸಿಕೊಂಡು ಆ ಯೋಜನೆಗಳನ್ನು ಪೂರ್ತಿ ಮಾಡುವುದಾದರೆ ಅವುಗಳಿಂದ ದೇಶಕ್ಕೆ ಕಲ್ಯಾಣವಾಗುತ್ತದೆ. ಈ ಯೋಜನೆಗಳನ್ನು ತಡ ಮಾಡುವುದರಿಂದ ಯೋಜನೆಗಳ ಅಂದಾಜು ವೆಚ್ಚ ಹೆಚ್ಚು ಕಡಿಮೆಯಾಗುತ್ತದೆ. ಪ್ರತಿ ವರ್ಷ ಪಿ.ಡಬ್ಲ್ಯು. ರೇಟನ್ನು ರಿವೈಜ್ ಮಾಡುತ್ತಿರುವುದನ್ನು ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯನ್ನು ನೋಡಿದಾಗ ಗೊತ್ತಾಗುತ್ತದೆ. ನೆಗೋಷಿಯೇಟ್ ಆದ ಹಣಕ್ಕಿಂತ ಹೆಚ್ಚು ಹಣವನ್ನು ಅನೇಕ ಸಂದರ್ಭಗಳಲ್ಲಿ ಕೊಟ್ಟಿದ್ದಾರೆ. ಸಣ್ಣ ಸಣ್ಣ ಕಾರಣಗಳಿಗೋಸ್ಕರ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವ ಅವ್ಯವಸ್ಥೆಯನ್ನು ನಾವು ನೋಡಿದ್ದೇವೆ.

ವಿದ್ಯುಚ್ಛಕ್ತಿಯ ಬಗ್ಗೆ ಬಹಳ ಹಿರಿಮೆಯ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಆರ್ಥಿಕ ಮಂತ್ರಿಗಳು ಹೇಳುತ್ತಾರೆ, ವಿದ್ಯುಚ್ಛಕ್ತಿಯಿಂದ ಬೇಕಾದಷ್ಟು ಆದಾಯವನ್ನು ಸಂಪಾದನೆ ಮಾಡುತ್ತಿದ್ದೇವೆಂದು. ಒಂದು ಯೂನಿಟ್ಟಿಗೆ 5 ನಯಾಪೈಸೆಯಂತೆ ಬೇರೆಯವರಿಗೆ ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡಿ ನಮ್ಮವರಿಗೆ ಮನೆಬಳಕೆಗೆ ಒಂದು ಯೂನಿಟ್ಟಿಗೆ 26 ನಯಾಪೈಸೆಯಂತೆ ಚಾರ್ಜ್ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ಎಂದರೆ ಅಲ್ಲಿಂದ 2 ಪರ್ಸೆಂಟ್ ರಿಟರ್ನ್ ಬರುವುದಿಲ್ಲ, ಅದಕ್ಕೋಸ್ಕರ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿರತಕ್ಕ 27 ಸಾವಿರ ಗ್ರಾಮಗಳ ಪೈಕಿ 5–6 ಸಾವಿರ ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದ ವಿದ್ಯುಚ್ಛಕ್ತಿಯನ್ನೆಲ್ಲಾ ಹೊರಗಡೆಗೆ ಕೊಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಾದರೆ ಅಲ್ಲಿಂದ ಡೈರೆಕ್ಟಾಗಿ 2 ಪರ್ಸೆಂಟ್ ಉತ್ಪತ್ತಿ ಬರುವುದಾದರೂ ಇನ್‌ಡೈರೆಕ್ಟಾಗಿ 25 ಪರ್ಸೆಂಟ್ ಉತ್ಪತ್ತಿ ಬರುವಂತಹ ಅವಕಾಶ ಇದೆ. ಅದು ಬಿಟ್ಟು ನಮ್ಮ ವಿದ್ಯುಚ್ಛಕ್ತಿಯನ್ನು ಬೇರೆ ಕಡೆಗೆ ಕೊಡುವುದು ಸರಿಯಲ್ಲ. ಕೈಗಾರಿಕೆಗಳ ಬಗ್ಗೆ ಅರ್ಥ ಮಂತ್ರಿಗಳು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಹಟ್ಟಿನ ಕೈಗಾರಿಕೆಗಳನ್ನೇನೊ ಸರ್ಕಾರದವರು ನಡೆಸುತ್ತಿದ್ದಾರೆ. ಆದರೆ ಆ ಕೈಗಾರಿಕೆಗಳಲ್ಲಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಕಷ್ಟಪಟ್ಟು ಸಂಪಾದಿಸಿದ ತೆರಿಗೆಯ ಹಣವನ್ನು ಕೈಗಾರಿಕೆಯ ನಷ್ಟಕ್ಕೋಸ್ಕರ ಉಪಯೋಗಿಸುತ್ತಿದ್ದಾರೆ. ದೇಶದ ಪ್ರಗತಿಗೆ ಉಪಯೋಗಿಸಬೇಕಾದಂತಹ ಹಣವನ್ನು ಕೈಗಾರಿಕೆಯ ನಷ್ಟಕ್ಕೆ ಉಪಯೋಗ ಮಾಡುತ್ತಿದ್ದಾರೆ. ಕೈಗಾರಿಕೆಗಳನ್ನು ಬೆಳೆಸಬೇಕಾದರೆ, ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗಿದ್ದರೆ ಸರ್ಕಾರಕ್ಕೆ ಹಣ ಬೇಕು. ಈಗ ಸರ್ಕಾರದವರು ಯಾವ ಕೈಗಾರಿಕೆಗಳನ್ನು ನಷ್ಟದಿಂದ ನಡೆಸುವುದಕ್ಕೆ ಆಗುವುದಿಲ್ಲವೋ ಅಂಥಾ ಕೈಗಾರಿಕೆಗಳನ್ನು ಯಾರಾದರೂ ಖಾಸಗಿಯವರು ನಡೆಸುವುದಾದರೆ ಅವರಿಗೆ ಕೊಟ್ಟು ಆ ಹಣದಿಂದ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಒಳ್ಳೆಯದು. ಬೆಂಗಳೂರು, ಹುಬ್ಬಳ್ಳಿ ಬೆಳಗಾಮ್, ಮತ್ತು ಮಂಗಳೂರು ಪಟ್ಟಣಗಳ ಸುತ್ತ ಮುತ್ತ ಕೈಗಾರಿಕೆಗಳನ್ನು ಕಾನ್‌ಸೆನ್‌ಟ್ರೇಟ್ ಮಾಡುವುದಕ್ಕೆ ಅವಕಾಶವನ್ನು ಕೊಡದೆ ಹಿಂದುಳಿದಿರುವ ಜಿಲ್ಲೆಗಳ ಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ; ಈಗ ಸರ್ಕಾರದವರು ಕೆಲವು ಜಿಲ್ಲೆಗಳಲ್ಲಿ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಟ್ಟಿಸಿದ್ದಾರೆ. ಅವುಗಳನ್ನು ಯಾವ ಉದ್ದೇಶಕ್ಕಾಗಿ ಕಟ್ಟಿಸಿದರೋ ಆ ಉದ್ದೇಶಕ್ಕೆ ಉಪಯೋಗ ಮಾಡದೆ ಅವುಗಳಲ್ಲಿ ಕತ್ತೆ, ಕುದುರೆ, ದನಗಳು ನಿಲ್ಲುವುದಕ್ಕೆ ಅವಕಾಶವಾಗಿದೆ. ಕೆಲವು ಕಡೆ ಈ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಆಹಾರಧಾನ್ಯವನ್ನು ಶೇಖರಣೆ ಮಾಡುವುದಕ್ಕೆ ಗೋಡೌನ್ ಮಾಡಿಕೊಂಡಿದ್ದಾರೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಈಗ ಸರ್ಕಾರದವರು ನಡೆಸುತ್ತಿರುವ ಕೈಗಾರಿಕೆಗಳಲ್ಲಿ ನಷ್ಟದಿಂದ ನಡೆಯುತ್ತಿರುವ ಕೈಗಾರಿಕೆಗಳನ್ನು ಯಾರಾದರೂ ನಡೆಸುವವರು ಮುಂದೆ ಬಂದರೆ ಅವರಿಗೆ ಅವುಗಳನ್ನು ಕೊಟ್ಟು ಅವುಗಳಿಂದ ಬಂದಂಥ ಹಣದಿಂದ ಹೊಸ ಹೊಸ ಕೈಗಾರಿಕೆಗಳನ್ನು ಜಿಲ್ಲೆಗಳಲ್ಲಿ ಪ್ರಾರಂಭ ಮಾಡಬೇಕು. ದೇಶದಲ್ಲಿ ಕೈಗಾರಿಕೆಗಳನ್ನು ಹರಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳಬೇಕಾದರೆ ಸರ್ಕಾರದವರು ಈ ಬಗ್ಗೆ ಚಿನ್ನಾಟ ಆಡುತ್ತಿದ್ದಾರೆ. ಈ ಸರ್ಕಾರದವರು ಮಾಡುತ್ತಿರುವಷ್ಟು ಚಿನ್ನಾಟವನ್ನು ಎಕ್ಸ್‌ಪೆರಿಮೆಂಟನ್ನು ಬೇರೆ ಯಾರೂ ಮಾಡುತ್ತಿಲ್ಲ. ತಾವು ಜೇಡಿಮಣ್ಣಿನಿಂದ ಗಣಪತಿಯನ್ನು ಮಾಡುವುದಕ್ಕೆ ಹೋಗಿ ಅವರಪ್ಪನನ್ನು ಮಾಡಿದುತ್ತಿದ್ದೀರೆಂದು ಹೇಳಬಹುದು. ನಿಮ್ಮ ನೀತಿಯಲ್ಲಿ ಯಾರಿಗೂ ವಿಶ್ವಾಸ ಇಲ್ಲವಾಗಿದೆ. ಬೇಸಿಕ್ ಎಜುಕೇಷನ್ ಮತ್ತು ಕ್ರಾಫ್ಟ್ ಎಜುಕೇಷನ್ ಬಗ್ಗೆ ನಿಮಗೆ ಶ್ರದ್ಧೆ ಇದ್ದರೆ ಆ ಸಂಸ್ಥೆಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸಿ. ಇಲ್ಲದಿದ್ದರೆ ಆ ಸಂಸ್ಥೆಗಳನ್ನು ಮುಚ್ಚಿ ಬಿಡಿ. ಇಂತಹ ಸಂಸ್ಥೆಗಳಲ್ಲಿ ಬೇಕಾಗುವ ಸಲಕರಣೆಗಳು ಇಲ್ಲವೆಂದು ಕೇಳಿದ್ದೇನೆ. ಸರಿಯಾದ ಉಪಾಧ್ಯಾಯರುಗಳು ಇಲ್ಲವೆಂದು ಕೇಳಿದ್ದೇನೆ. ಈ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸೂಚಿಸ ಬಯಸುತ್ತೇನೆ. ಇದೇ ರೀತಿ ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿದ್ದೀರಿ. ಅನೇಕ ಖಾಸಗೀ ಪ್ರೆಸ್‌ನವರು ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಲು ಮುಂದೆ ಬರುತ್ತಿದ್ದರೂ ಸಹ ಸರ್ಕಾರದವರು ಕೆಲವೇ ಖಾಸಗೀ ಪ್ರೆಸ್‌ನವರಿಂದ ಪ್ರಿಂಟ್ ಮಾಡಿಸುತ್ತಿದ್ದಾರೆ. ಈ ಪ್ರೆಸ್‌ನವರು ಸತ್ಯಕ್ಕೆ ದೂರವಾದ ವಿಷಯಗಳನ್ನು ಪ್ರಿಂಟ್ ಮಾಡುತ್ತಿದ್ದಾರೆ. ಇದನ್ನು ಸರಿಪಡಿಸಬೇಕು.

4-30 P.M.

ಇನ್ನು ತೆರಿಗೆಯ ಬಗ್ಗೆ ಹೇಳಬೇಕೆಂದರೆ, ಎಲ್ಲರೂ ತೆರಿಗೆಯನ್ನು ಕೊಡಬೇಕಾಗುತ್ತದೆ. ಆದರೆ ಇವತ್ತಿನ ದಿವಸ ಯಾರು ಸತ್ಯವಾಗಿ ನ್ಯಾಯವಾಗಿ ತೆರಿಗೆಯನ್ನು ಕೊಡುತ್ತಿದ್ದಾರೋ ಅಂತಹವರಿಗೆ

ಸರ್ಕಾರದ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ಸೇಲ್ಸ್ ಟ್ಯಾಕ್ಸ್ ವಸೂಲಿ ಮಾಡುವ ಬಗ್ಗೆ ಸ್ಕ್ವಾಡ್ ಇದೆ. ಅದು ಸರ್ಕಾರದವರು ರಚನೆ ಮಾಡಿದ ಸ್ಕ್ವಾಡೋ ಅಥವಾ ನಕಲಿ ಸ್ಕ್ವಾಡೋ ಎಂಬುದು ಗೊತ್ತಿಲ್ಲ. ಇವರು ಹಾಸನ ಮತ್ತು ಅರಸೀಕೆರೆಯಲ್ಲಿ ಸಂತೆ ನಡೆಯುವ ದಿನಗಳಲ್ಲಿ ಹೋಗಿ ವರ್ತಕರ ಹತ್ತಿರ ಹಣ ವಸೂಲಿ ಮಾಡುತ್ತಿದ್ದಾರೆಂದೂ ವರ್ತಕರು ಕೊಡದಿದ್ದರೆ ಅವರ ಸಾಮಾನುಗಳನ್ನು ಹೊರಗೆ ತೆಗೆದು ಹಾಕುತ್ತಿದ್ದಾರೆಂದೂ ನನಗೆ ತಿಳಿದು ಬಂದಿದೆ. ಇವರು ವಸೂಲಿ ಮಾಡುವ ಹಣ ಸರ್ಕಾರಕ್ಕೆ ಕೂಡ ತಲುಪದೆ ಅವರೇ ತಮ್ಮ ಸ್ವಂತಕ್ಕೆ ಉಪಯೋಗ ಮಾಡಿ ಕೊಳ್ಳುತ್ತಿದ್ದಾರೆ. ಕೆಲವು ಸತ್ಯವಂತರಾದ ವರ್ತಕರ ಬಳಿ ಹೋಗಿ ಅವರ ಲೆಕ್ಕದ ಪುಸ್ತಕಗಳನ್ನು 20-30 ಸಾರಿ ಹಿಂದೆಮುಂದೆ ತಿರುಗಿಸಿ ನೋಡಿ, ಲೆಕ್ಕ ಸರಿಯಾಗಿದ್ದರೂ ಸಹ ಅವರೇ ತೆಗೆದುಕೊಂಡು ಹೋದರೆಂದೂ, ನಂತರ ಆ ವರ್ತಕರಲ್ಲಿ ಕೆಲವರ ಹೇಳಿಕೆಯ ಪ್ರಕಾರ 100 ರೂಪಾಯಿ ವಸೂಲು ಕೊಟ್ಟಮೇಲೆ ಆ ಪುಸ್ತಕಗಳು ಎರಡು ನಿಮಿಷದಲ್ಲಿ ಅವರ ಮನೆ ಬಾಗಿಲಿಗೆ ವಾಪಸ್ ಬಂದವೆಂದು ಕೇಳಿದ್ದೇನೆ. ಈ ರೀತಿಯ ಕಿರುಕುಳವನ್ನು ಸರ್ಕಾರದವರು ತಪ್ಪಿಸಬೇಕು. ಕೆಲವು ವರ್ತಕರು ಇವರ ಕಿರುಕುಳವನ್ನು ತಡೆಯುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರದವರು ಬೇಕಾದರೆ 2,500 ರೂಪಾಯಿ ತೆರಿಗೆ ಕೊಡಬೇಕೆಂದು ಹೇಳಿದರೆ ಅವರು ಕೊಡುವುದಕ್ಕೆ ತಯಾರಿದ್ದಾರೆ. ಆದರೆ ನಿಮ್ಮ ಅಧಿಕಾರಿಗಳ ಕಿರುಕುಳವನ್ನು ತಪ್ಪಿಸಬೇಕು. ನಿಮ್ಮ ಅಧಿಕಾರಿಗಳು ವರ್ತಕರ ಬಳಿಗೆ ಹೋಗಿ ಅಕೌಂಟೆಂಟ್ ಇಟ್ಟುಕೊಂಡು ಲೆಕ್ಕವನ್ನು ತಯಾರಿಸಿ ಎಂದು ಹೇಳುತ್ತಿರುವುದು ಸರಿಯಿಲ್ಲ. ಈಗಿರುವ ಪದ್ಧತಿಯನ್ನು ಇನ್ನೂ ಸುಲಭಗೊಳಿಸಬೇಕು. ನಿಮ್ಮ ಅಧಿಕಾರಿಗಳು ತೆರಿಗೆ ಕೊಡುವವರಿಗೆ ಗೌರವ ಕೊಡಬೇಕು. ಈ ಬಗ್ಗೆ ನಿಮ್ಮ ಅಧಿಕಾರಿಗಳಿಗೆ ಟ್ರೈನಿಂಗ್ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಟ್ರೈನಿಂಗ್ ಕೊಡಿಸುತ್ತಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಬರುವ ಹಣದಲ್ಲಿ 50 ಪರ್‌ಸೆಂಟ್‌ವರೆಗೆ ಈ ಅಧಿಕಾರಿಗಳು ವರ್ತಕರಿಗೆ ಕಿರುಕುಳ ಕೊಡುವ ಮೂಲಕ ವಸೂಲಿ ಮಾಡಿ ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ರೀತಿಯಾಗುವುದನ್ನು ತಪ್ಪಿಸಿದರೆ ವರ್ತಕರಿಗೂ ಅನುಕೂಲವಾಗುವುದಲ್ಲದೆ ಸರ್ಕಾರಕ್ಕೂ ಕೂಡ ಹೆಚ್ಚಿನ ಆದಾಯ ಬರುತ್ತದೆ ಮತ್ತು ದೇಶದ ಅಭಿವೃದ್ಧಿಯೂ ಸಹ ಆಗುತ್ತದೆ. ನಮ್ಮ ಅರ್ಥಿಕ ಮಂತ್ರಿಗಳು ಬಹಳ ಕಷ್ಟದಿಂದ ಬಹಳ ನೋವಿನಿಂದ ತಮ್ಮ ಆತ್ಮಕ್ಕೆ ವಿರುದ್ಧವಾದ ಬಡ್ಜೆಟ್‌ನ್ನು ಮಂಡಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಹೊಸ ತೆರಿಗೆ ಇಲ್ಲದ ಖೋತಾ ಬಡ್ಜೆಟನ್ನು ಮಂಡಿಸಿದ್ದಾರೆ. 13 ಕೋಟಿ ರೂಪಾಯಿಗಳ ಖೋತಾ ಇರಬೇಕಾದರೆ ಮುಂದೆ ತೆರಿಗೆ ಬೀಳುತ್ತದೆಂದು ಹೇಳಬಹುದು. ನಾಲ್ಕನೆಯ ಯೋಜನೆಯ ಗಾತ್ರ ಏನೆಂಬುದು ಇವರಿಗೆ ಗೊತ್ತಿಲ್ಲ. ಈಗ ಜಿಲ್ಲಾ ಮಟ್ಟದಲ್ಲಿ ಯೋಜನೆಗಳನ್ನು ಕೈಗೊಂಡಿದ್ದೀರಿ. ಇದೇ ರೀತಿ ಮುಂದೆ ತಾಲ್ಲೂಕ್ ಮಟ್ಟದಲ್ಲಿ ಕೂಡ ಮಾಡಿದರೆ ಅನುಕೂಲವಾಗುತ್ತದೆ. ಎಲ್ಲಾ ಜಿಲ್ಲೆಗಳಲ್ಲಿ ಯೋಜನೆಗಾಗಿ ಖರ್ಚು ಮಾಡುವ ಹಣದ ವೆಚ್ಚವನ್ನು ಕ್ರೋಢೀಕರಿಸಿ ನಮಗೆ ಅಂಕಿ ಅಂಶಗಳನ್ನು ಒದಗಿಸಿದ್ದರೆ ಚೆನ್ನಾಗಿರುತ್ತಿತ್ತು. ಇನ್ನು ಮುಂದೆ ಯೋಜನೆಗಳನ್ನು ಕೇವಲ ಕಾಗದದಲ್ಲಿ ಮಾಡಿ ತೋರಿಸದೆ ನಿಜವಾಗಿಯೂ ಕಾರ್ಯರೂಪಕ್ಕೆ ತರಬೇಕು. ಕಾರ್ಯರೂಪಕ್ಕೆ ತರದಿದ್ದರೆ ಕೇವಲ ಕಾಗದದ ಹುಲಿಯಾದೀತೆಂದು ಹೇಳಬೇಕಾಗುತ್ತದೆ. ಒಂದೊಂದು ಯೋಜನೆಗಳಿಗೆ ಮೂರು ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸುವುದಕ್ಕಿಂತ ಆ ಯೋಜನೆಗಳನ್ನೇ ಮುಚ್ಚಿಬಿಡುವುದು ಒಳ್ಳೆಯದು. ನಾನು ಮೊದಲೇ ಹೇಳಿದಂತೆ ಮಂತ್ರಿಗಳಿಗೆ ಆಗುವ ಖರ್ಚಿನಲ್ಲಿ ಐದು ಪರ್‌ಸೆಂಟ್ ಕಟ್ ಮಾಡಿದರೆ ಸರ್ಕಾರಕ್ಕೆ ಬಹಳ ಹಣ ಉಳಿಯುತ್ತದೆ. ಈ ಹಣವನ್ನು ಸಹ ಯೋಜನೆಗಳಿಗೆ ಉಪಯೋಗಿಸಬಹುದು. ಕಬಿನಿ ಮತ್ತು ಕಂಬದಕಡ ಯೋಜನೆಗಳನ್ನು ಜಾಗ್ರತೆ ಮಾಡಿ ಮುಗಿಸಬೇಕು. ಈ ಯೋಜನೆಗಳನ್ನು ಜಾಗ್ರತೆ ಮಾಡಿ ಮುಗಿಸದಿದ್ದರೆ ಈ ಯೋಜನೆಗಳು ಸರ್ಕಾರವನ್ನೇ ತಿಂದು ಬಿಡುತ್ತವೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಈ ಬಡ್ಜೆಟ್‌ನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರಾದ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿರುವ ಮುಂಗಡ ಪತ್ರವನ್ನು ನಾನು ಸ್ವಾಗತಿಸುತ್ತಾ ನನ್ನ ಹಿರಿಯ ಮಿತ್ರರಾದಂಥ ಶ್ರೀ ದೇವರಾಜ ಅರಸ್ ಅವರು ಬಡ್ಜೆಟ್ ವಿಷಯದಲ್ಲಿ ಏನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೋ ಅದನ್ನು ನಾನು ಪೂರ್ಣವಾಗಿ ಸ್ವಾಗತ ಮಾಡುತ್ತಾ ಹಾಗೂ ನನ್ನ ಮಿತ್ರರಾದಂಥ ಶ್ರೀ ಘೋರ್ಪಡೆಯವರು ಪ್ರಸ್ತಾಪ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಮಾಡಿದ ಕೆಲವು ಭಾಗಗಳನ್ನು ಮಾತ್ರ ನಾನು ಒಪ್ಪುತ್ತೇನೆ. ಶ್ರೀ ಘೋರ್ಪಡೆಯವರು ಅರ್ಥ ಶಾಸ್ತ್ರಜ್ಞರು. ಅವರು ಮತ್ತು ನಾನು ಕಳೆದ 15 ವರ್ಷಗಳಿಂದ ಇಲ್ಲಿ ಸದಸ್ಯರಾಗಿದ್ದೇವೆ. ಆದರೆ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಕೆಲವನ್ನು ಮಾತ್ರ ನಾನು ಒಪ್ಪುತ್ತೇನೆ. ನನ್ನ ಸನ್ಮಿತ್ರರಾದಂಥ ಶ್ರೀಮಾನ್ ದುಗ್ಗಪ್ಪನವರು ಸಹ ಕೆಲವು ವಿಚಾರಗಳನ್ನು ಹೇಳಿದರು. ಈ ಸಾಲಿನ ಮುಂಗಡ ಪತ್ರದಲ್ಲಿ ಎರಡು ದೊಡ್ಡ ಈವೆಂಟ್ಸ್ ಇದೆ ಎಂದು ಶ್ರೀಮಾನ್ ದುಗ್ಗಪ್ಪನವರು ಹೇಳಿದರು. ಅದನ್ನು ಮಾನ್ಯ ಆರ್ಥಿಕ ಮಂತ್ರಿಗಳು ತಿಳಿದುಕೊಳ್ಳಬೇಕು. ಈ ಸಭಾನಾಯಕರಾಗಿದ್ದವರು ಈಗ ದೊಡ್ಡ ಹೊರೆಯನ್ನು ಹೊತ್ತು ಹೋಗಿದ್ದಾರೆ. ಆ ಬಗ್ಗೆ ಎರಡು ಮಾತುಗಳನ್ನು ಶ್ರೀಮಾನ್ ದುಗ್ಗಪ್ಪನವರು ಹೇಳಿದರು. ಬಹುಶಃ ಅವರೇ ಈ ಗಾಂಧಿ ಶತಮಾನೋತ್ಸವದ ಕಾಲದಲ್ಲಿ ಮುಖ್ಯ ಮಂತ್ರಿಯಾಗಿ ಮುಂದುವರಿದಿದ್ದರೆ ಒಂದು ದೊಡ್ಡ ಘಟನೆಯಾಗುತ್ತಿತ್ತು ಎಂದು ಹೇಳಿದರು. Unfortunately in our country politics has become a matter of numbers. Nowhere else in the world such a thing is happening. ಎಂದು ಇಷ್ಟು ಮಾತ್ರ ಅವರಿಗೆ ಹೇಳುತ್ತೇನೆ. ನಮ್ಮ ಹಣಕಾಸಿನ ಸಚಿವರಾದ ಶ್ರೀ ರಾಮಕೃಷ್ಣ ಹೆಗಡೆಯವರು ಬಜೆಟಿನಲ್ಲಿ ಮಧ್ಯಕಾಲೀನ ಚುನಾವಣೆಯ ಬಗ್ಗೆ, ಅಭಾವದ ಬಗ್ಗೆ, ಆಹಾರದ ಪರಿಸ್ಥಿತಿಯ ಬಗ್ಗೆ, ಫೈನಾನ್ಸ್ ಕಮಿಷನ್ ಮುಂದೆ ನಡೆದಂಥ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ನಾಲ್ಕನೆಯ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕಾಗಿ ಒಂದು ಆನ್ಯುಯಲ್ ಪ್ಲಾನ್ ಎಂದು ಮಾಡುವುದೊಳ್ಳೆಯದು. ನನ್ನ ಸ್ವಂತ ಅಭಿಪ್ರಾಯದಲ್ಲಿ ಹೇಳಬೇಕಾದರೆ ಈ ಬಜೆಟ್ಟು This is a Budget in embryo. I am putting in unequivocal terms. ನಮ್ಮ ಫೈನಾನ್ಸ್ ಮಿನಿಸ್ಟರ್‌ರವರು ಕೊಟ್ಟಿರುವ ಮೆಮೊರ್ಯಾಂಡಂನಲ್ಲಿ ಈ ವಿಷಯ ಹೇಳುತ್ತಾ ಇದಕ್ಕೆ ಒಂದು ರೂಪ ಕೊಡಬೇಕೆಂದಿದ್ದಾರೆ ಎನ್ನುವುದೂ ಇದೆ. ಅವರೇ ಹೇಳಿರುವ ಭಾಷಣದಲ್ಲಿ ಯೋಜನೆಗಳ ಬಗ್ಗೆ ಹೇಳುತ್ತಾ ಇದಕ್ಕಾಗಿ ಒಂದು ಕಮಿಟಿ ಮಾಡಿದ್ದೇವೆ ಎಂದು ಹೇಳಿದರು. ಆದರೆ ಆ ಸಮಿತಿಯಲ್ಲಿ ಹರಿಜನರು ಒಬ್ಬರನ್ನೂ ಹಾಕಲಿಲ್ಲ. ಇಂತಹ ಸಮಿತಿಯಲ್ಲಿ ಹರಿಜನರು ಒಬ್ಬರನ್ನು ಹಾಕಿದ್ದರೆ ಚೆನ್ನಾಗಿರುತ್ತಿತ್ತು. ನಾನಾದರೂ ಹೇಳುತ್ತೇನೆ ಈ ಸಂದರ್ಭದಲ್ಲಿ ಹೇಳುವುದು ಸರ್ಕಾರ ಇದರಲ್ಲಿ ಕರ್ತವ್ಯ ಲೋಪ ಮಾಡಿದೆ ಎಂದು.

ಇನ್ನು ಟ್ಯಾಕ್ಸೇಷನ್ ವಿಚಾರದಲ್ಲಿ ಮಾನ್ಯ ಫೈನಾನ್ಸ್ ಮಿನಿಸ್ಟರೇ ಹೇಳಿದ್ದಾರೆ, ನಾವು ಹೊಸದಾಗಿ ಇನ್ನೂ ಯಾವ ತೆರಿಗೆಗಳನ್ನು ಹಾಕಲು ಭೂತಲಿಂಗಂ ಎನ್ನುವವರ ರಿಪೋರ್ಟನ್ನು ಕಾಯುತ್ತಿದ್ದೇವೆ. ಅವರು ಏನು ಹೇಳುತ್ತಾರೋ ಅದನ್ನು ನೋಡಿಕೊಂಡು ನಾವು ಇಲ್ಲಿ ನಮ್ಮ ಯೋಜನೆಗಳನ್ನು ಸರಿ ಮಾಡಿಕೊಳ್ಳಬೇಕು ಎಂದು. In the Urban area, taxation has reached the saturation point ಎನ್ನುವುದು ಸರಿಯಾದ ಅಭಿಪ್ರಾಯವಲ್ಲ. ನಗರ ಪ್ರದೇಶಗಳಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ದೇವರಾಜ ಅರಸಿನವರು ಹೇಳಿದಂತೆ ಇನ್ನೂ ತೆರಿಗೆ ಹಾಕಬಹುದು ಮತ್ತು ಅದನ್ನು ಅಲ್ಲಿನ ಜನ ಕೊಡಲು ಶಕ್ತಿ ಕೂಡ ಇದೆ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಇನ್ನು ಪ್ರಾಮುಖ್ಯವಾದ ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಮಾತ್ರ ಇಲ್ಲಿ ಮಾತನಾಡಿ ಬಾಕಿ ವಿಚಾರಗಳ ಬಗ್ಗೆ ಆಯಾ ಡಿಮ್ಯಾಂಡುಗಳು ಬಂದಾಗ ಅದರ ಬಗ್ಗೆ ಮತ್ತೆ ಹೇಳುತ್ತೇನೆ. ಮೊದಲು ರಾಜ್ಯಾಂಗ ಬದ್ಧವಾಗಿರುವ ನಮ್ಮ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಬಗ್ಗೆ ಹೇಳಬೇಕಾಗಿದೆ. The State shall strive to promote the welfare of the people by securing and protecting as effectively as possible justice, social and political and shall inform all the Institutes of national life ಎಂದು ಚೆನ್ನಾಗಿ ಹೇಳಿದ್ದಾರೆ. ಇದನ್ನೇ ಪಂಡಿತ ಜವಹರಲಾಲ್ ನೆಹರೂರವರು 14ನೇ ಮಾರ್ಚ್ 1955ರಲ್ಲಿ ಲೋಕಸಭೆಯಲ್ಲಿ ಒಂದು ಸಾರಿ ಹೇಳಿದ್ದಾರೆ. Pandit Nehru on March 14, 1955, while asking the Loka Sabha to refer the Constitution Fourth Amendment Bill to a Committee, declared that the Fundamental Rights should observe the rights of State Policy. ನಮ್ಮ ದೇಶದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿರುವವರು ದೇಶದ ಪ್ರಗತಿಯನ್ನು ಸಾಧಿಸಲು ಸರಿಯಾದ ಒಂದು ಸ್ಟೇಟ್ ಪಾಲಿಸಿಯನ್ನು ಹಾಕಿಕೊಳ್ಳದೇ ಇದ್ದರೆ ದೇಶದ ಪ್ರಗತಿ ಕುಂಠಿತವಾಗುತ್ತದೆ. ರಾಜ್ಯಾಂಗದ ಒಂದು ಇತಿಮಿತಿಯೊಳಗೆ ಇವೆಲ್ಲವನ್ನೂ ಕಾರ್ಯಗತ ಮಾಡಲು ಅನುಕೂಲವಾಗುವಂತೆ ನಮ್ಮ ಪ್ಲಾನುಗಳನ್ನು ಮಾಡಬೇಕು. ಇಂದು ನಮ್ಮ ದೇಶದ ಯೋಜನೆಗಳು ಯಾವ ರೀತಿ ಇವೆ ಎಂದರೆ, ಮೊದಲನೇ ಯೋಜನೆಯಾಗಿ, ಎರಡನೇ ಯೋಜನೆ ಮುಗಿದು ಮೂರನೇ

ಯೋಜನೆ ಮುಗಿದು ನಾಲ್ಕನೆಯ ಯೋಜನೆಯನ್ನು ಆರಂಭಿಸುವುದರಲ್ಲಿದ್ದೇವೆ. ಇಷ್ಟು ಯೋಜನೆಗಳನ್ನು ಮಾಡಿದರೂ ಇವರಿಂದ ಜನಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿದೆಯೇ ಎನ್ನುವುದನ್ನು ನಮ್ಮ ಅರ್ಥ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮ ಸರಕಾರದಲ್ಲಿ ಅತಿ ಮುಖ್ಯವಾದ ಸ್ಥಾನದಲ್ಲಿರುವವರು ಫೈನಾನ್ಸ್ ಮಿನಿಸ್ಟರ್ ಎನ್ನುವುದನ್ನು ತಿಳಿಯಬೇಕು. ಅವರೇ ತಮ್ಮ ಭಾಷಣದಲ್ಲಿ 26ನೇ ಪುಟದಿಂದ ಹಿಡಿದು ಸುಮಾರು ಮೂರು ನಾಲ್ಕು ಪೇಜುಗಳಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ನಾನಾದರೂ ಈ ಸಂದರ್ಭದಲ್ಲಿ ಹೇಳುವುದು ಯಾವ ಒಂದು ಪಬ್ಲಿಕ್ ಸೆಕ್ಟರ್ ಆದರೂ ಅದನ್ನು ನಾವು ಪ್ರಾಮಾಣಿಕವಾಗಿ ಸ್ವಾಗತಿಸಬೇಕು ಎಂದು ಹೇಳಲು ಇಚ್ಛಿಸುತ್ತೇನೆ. We should go on supporting public sector undertakings even at the cost of other sectors' economy. ಇದು 1956ರಲ್ಲಿ ಪಾಸಾದ ಇಂಡಸ್ಟ್ರಿಯಲ್ ಪಾಲಿಸಿ ರೆಸಲ್ಯೂಷನ್ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಂಡು ಇಲ್ಲಿ ಹೇಳುತ್ತಿದ್ದೇನೆ. ನಮ್ಮ ಸರಕಾರದ ಅಧಿಕೃತ ಸದಸ್ಯರಾದ ಮತ್ತು ನನ್ನ ಸ್ನೇಹಿತರಾದ ಅರ್ಥ ಮಂತ್ರಿಗಳಿಗೆ ಪಬ್ಲಿಕ್ ಸೆಕ್ಟರಿನಲ್ಲಿ ನಂಬಿಕೆ ಇಲ್ಲದಿರಬಹುದು. ಆದರೂ ಇದು ರಾಷ್ಟ್ರಾದ್ಯಂತ ಇರುವ ನೀತಿ. ಇದನ್ನು ಪಾರ್ಲಿಮೆಂಟಿನಲ್ಲೂ ಕೂಡ ಒಪ್ಪಿಕೊಂಡಿದ್ದಾರೆ.

At page 23 it is said :

> " The industrial policy resolution of April 1956 says that the adoption of a socialistic pattern of society as a national objective as well as the need for planned and rapid development, requires that all industries of basic and strategic importance which are in the nature of public utility services should be in the public sector. Other industries, which are essential in the present circumstances also should be in the public sector."

ಇದನ್ನು ಒಪ್ಪಿಕೊಂಡಿರುವಾಗ ಇದರಿಂದೇನಾಗುತ್ತದೆ ಎನ್ನುವುದನ್ನು ನಾವು ಇಲ್ಲಿ ವಿಚಾರ ಮಾಡಬೇಕು. ನೂರು ಇನ್ನೂರು ವರ್ಷಗಳ ಹಿಂದೆ ಏನಿತ್ತೋ ಅದೇ ಮಟ್ಟದಲ್ಲಿ ಕೈಗಾರಿಕೆಯನ್ನು ಬೆಳೆಸಿಕೊಂಡು ಬಂದಿದ್ದೇವೆ. ನಾವು ಈ ಸಂದರ್ಭದಲ್ಲಿ ಡಾ. ಅಂಬೇಡಕರರನ್ನು ನೆನಸಿಕೊಳ್ಳಬೇಕು. ಅವರು ಹಿಂದೆ ಕಾನ್ಸ್‌ಟಿಟ್ಯೂಯಂಟ್ ಅಸೆಂಬ್ಲಿಯಲ್ಲಿ ಸದಸ್ಯರಾಗಿದ್ದಾಗ ರಾಜ್ಯಾಂಗವನ್ನು ಬರೆದ ಸಂದರ್ಭದಲ್ಲಿ ಪೊಲಿಟಿಕಲ್ ಸ್ಟ್ರಕ್ಚರು ಯಾವ ರೀತಿ ಇರಬೇಕು ಅದನ್ನು ನಮ್ಮ ದೇಶದಲ್ಲಿ ಯಾವ ರೀತಿ ತರಬೇಕು ಎನ್ನುವುದನ್ನು ಹೇಳಿದ್ದಾರೆ. ಇದನ್ನು ನಾವು ಯಾವಾಗ ಒಪ್ಪಿಕೊಂಡಿದ್ದೇವೋ ಅದೇ ರೀತಿಯಲ್ಲಿ ಇಂದಿನ ರಾಜ್ಯಾಂಗದ ಚೌಕಟ್ಟು ಕೂಡ ಇರುತ್ತದೆ. ಇದು ಕಾನ್‌ಸ್ಟಿಟ್ಯೂಷನಲ್ ಲಾದಲ್ಲಿ ಕೂಡ ಹೇಳಿದೆ. ಇದರ ಬಗ್ಗೆ ಏನು ಉಪಾಯ ಮಾಡಬೇಕು ಎನ್ನುವುದನ್ನು ಯಾರೂ ವಿಚಾರ ಮಾಡಿಲ್ಲ. ಇದು ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ. ಇದರಂತೆ ಹೋಗುವುದು ಎಲ್ಲಾ ಸಾಮಾನ್ಯ ಪ್ರಜೆಯ ಹಿತದೃಷ್ಟಿಯಿಂದ ಒಳ್ಳೆಯದು. ಈಗಾಗಲೇ ನಾವು ಸಪ್ತ ವಾರ್ಷಿಕ ಯೋಜನೆಗಳನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ. ಇದರಲ್ಲಿ ದೇಶದಲ್ಲಿರುವ ಕಾರ್ಮಿಕರ ಹಾಗೂ ಹಳ್ಳಿಗಾಡಿನ ಜನರ ಉದ್ಧಾರಕ್ಕಾಗಿ ಯಾವ ಯಾವ ಯೋಜನೆಗಳನ್ನು ಮಾಡಿದ್ದೀರಿ ! ಇದರಲ್ಲಿ ಪ್ಲಾನ್ ಎಫರ್ಟ್ ಎಲ್ಲಿಯವರೆಗೆ ಯಶಸ್ವಿ ಆಗಿದೆ ಎನ್ನುವುದನ್ನು ವಿಚಾರ ಮಾಡುವುದಾದರೆ ಇದರ ತತ್ವಕ್ಕೇ ತಿಲಾಂಜಲಿಯನ್ನು ನಾವು ಕೊಟ್ಟಿದ್ದೇವೆ. ನಮ್ಮ ರಾಜ್ಯದಲ್ಲಿ ಈ ಕೈಗಾರಿಕೆ ಎಷ್ಟು ಪ್ರಗತಿಯಾಗಿದೆ ಎನ್ನುವುದು ಬಹು ಮುಖ್ಯ. 1910 ರಲ್ಲಿ ಮೈಸೂರು ಎಕನಾಮಿಕ್ ಕಾನ್‌ಫರೆನ್ಸ್ ಎಂದು ಆಗಿನ ಕಾಮರ್ಸ್ ಮತ್ತು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟು ಏರ್ಪಾಡು ಮಾಡಿತ್ತು. ಅಲ್ಲಿಂದ ಇಲ್ಲಿಯವರೆಗೆ ಎಷ್ಟು ಇಂಡಸ್ಟ್ರೀಗಳನ್ನು ಬೆಳೆಸಿಕೊಂಡು ಬಂದಿದ್ದೇವೆ ಎನ್ನುವುದನ್ನು ವಿಚಾರ ಮಾಡಿದರೆ ಸುಮಾರು 1-11-56 ರ ವರೆಗೆ ಹಳೇ ಮೈಸೂರು ಭಾಗದಲ್ಲಿ 945 ಇಂಡಸ್ಟ್ರಿಯಲ್ ಎಸ್ಟಾಬ್ಲಿಷ್‌ಮೆಂಟುಗಳು ಇದ್ದವು. ಹೊಸ ಮೈಸೂರು ಬಂದಮೇಲೆ ಆ ಭಾಗದಿಂದ ಸುಮಾರು 690 ಇಂಡಸ್ಟ್ರಿಯಲ್ ಎಸ್ಟಾಬ್ಲಿಷ್‌ಮೆಂಟುಗಳು ಬಂದವು. ಎಂದರೆ ಒಟ್ಟು ಇವೆಲ್ಲಾ ಇಂಡಸ್ಟ್ರಿಯಲ್ ಎಸ್ಟಾಬ್ಲಿಷ್‌ಮೆಂಟುಗಳಲ್ಲಿ ಸುಮಾರು 1,82,000 ಜನ ಕೆಲಸವನ್ನು ಮಾಡುತ್ತಾ ಇದ್ದರು. ಇವೊತ್ತಿನ ದಿವಸ ಇದರಲ್ಲಿ ಯಾವ ಒಂದು ನೀತಿಯನ್ನು ಅನುಸರಿಸಿಕೊಂಡು ಹೋಗುತ್ತಿದ್ದಾರೆ ಇದನ್ನು ನೋಡಿದರೆ ಪಬ್ಲಿಕ್ ಸೆಕ್ಟರು ಇಂಡಸ್ಟ್ರೀಸ್‌ಗಳು ಏನು ಪ್ರಗತಿ ಸಾಧನೆ ಮಾಡಿಲ್ಲ ಎನ್ನುವುದು ಗೊತ್ತಾಗುತ್ತದೆ ಇದಕ್ಕೆಲ್ಲಾ ಕಾರಣವೇನು ಎನ್ನುವುದನ್ನು ನಾವು ಲೆಕ್ಕ ಹಾಕಿ ನೋಡಿದರೆ ನಮ್ಮ ರಾಜಕೀಯ ಪಾಲಿಸಿಯಲ್ಲಿ ಜನರಿಗೆ ವಿಶ್ವಾಸವಿಲ್ಲ. ಏಕೆಂದರೆ ಕೈಗಾರಿಕೆಗಳನ್ನು ನಡೆಸುವುದರಲ್ಲಿ ಅರ್ಥ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಶಾಸ್ತ್ರ ಪರಿಣತರು ಇಲ್ಲ, ತಜ್ಞರು ಇಲ್ಲ. ಇದರಿಂದ ಪ್ರಗತಿಗೆ ಧಕ್ಕೆಯುಂಟಾಗಿದೆ. ಕೈಗಾರಿಕಾ ನೀತಿ ಇಂದು ಸೂಯಿಸೈಡಲ್ ಆಗಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಇದರ ಹಿನ್ನೆಲೆಯನ್ನು ನಾವು ಇಲ್ಲಿ ವಿಚಾರ ಮಾಡಬೇಕು. ತಜ್ಞರು ಇದನ್ನು ವಿಚಾರ ಮಾಡುವಾಗ ಒಂದು ಸಂದರ್ಭದಲ್ಲಿ ಅವರೇ ಹೇಳಿದ್ದಾರೆ:. Industries in public sector have not fared well. ಇವೊತ್ತಿನ ದಿವಸ ನಮ್ಮ ಅರ್ಥ ಮಂತ್ರಿಗಳು ಪಬ್ಲಿಕ್ ಸೆಕ್ಟರು ಇಂಡಸ್ಟ್ರೀಗೆ ಸಾಕಷ್ಟು ಹಣ ಕೊಟ್ಟಿದ್ದೇವೆಂದು ಹೇಳುತ್ತಾ ಅವರು ಎರಡನೇ ಯೋಜನೆಯಲ್ಲಿ ಸುಮಾರು 33,600 ದಶಲಕ್ಷ ರೂಪಾಯಿಗಳು ಹಾಕಿದ್ದರೆ ಇಂದು ಮೂರನೇ ಯೋಜನೆಯಲ್ಲಿ ಸುಮಾರು $10\frac{1}{2}$ ಸಾವಿರ ದಶಲಕ್ಷ ಹಣವನ್ನು ಹಾಕಿದ್ದರೂ ಅದರಿಂದ ಎಷ್ಟು ಪ್ರಗತಿಯಾಗಬೇಕೋ ಅಷ್ಟು ಪ್ರಗತಿಸಾಧನೆಯಾಗಲಿಲ್ಲ ಎಂದು ಅವರೇ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಇಲ್ಲಿ ಹೆಚ್ಚು ಈಗ ಹೇಳಲು ಹೋಗುವುದಿಲ್ಲ, ಇಂದು ಇಲ್ಲಿರುವ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಎಷ್ಟು ಜನ ಮ್ಯಾನೇಜಿಂಗ್ ಡೈರೆಕ್ಟರುಗಳಾಗಲಿ ಚೇರ್ಮನ್ನರುಗಳಾಗಲೀ ಅಥವಾ ಇತರ ಸದಸ್ಯರೇ ಆಗಲಿ ತಜ್ಞರಾಗಿದ್ದಾರೆ ಎನ್ನುವುದನ್ನು ನೋಡಿದರೆ ಹೆಚ್ಚು ಮಂದಿ ತಜ್ಞರೇ ಇಲ್ಲದೇ ಇರುವುದರಿಂದ ಇಂದಿನ ಕೈಗಾರಿಕೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲದೇ ಅನೇಕ ಕೈಗಾರಿಕೆಗಳಲ್ಲಿ ಇಂದು ನಷ್ಟವಾಗುತ್ತಿದೆ.

ಬಹುಶಃ ಒಂದಲ್ಲ ಒಂದು ದಿವಸ ಇದೇ ನೀತಿಯನ್ನು ಅನುಸರಿಸಿಕೊಂಡು ಬಂದರೆ ಈ ದೇಶದ ಭವಿಷ್ಯಕ್ಕೆ ಆಡಳಿತದಲ್ಲಿ ದೇಶದ ಒಳಗಡೆ ಶಾಂತಿ ಇಲ್ಲವೆ, ಅಂತರರಾಷ್ಟ್ರೀಯದಲ್ಲಿಯೂ ಶಾಂತಿ ಇಲ್ಲದೆ, ವಿರೋಧಿಗಳು ಜಾಸ್ತಿ ಆಗಲು ಕಾರಣವಾಗುತ್ತದೆ ಎಂದು ನನಗೂ ಭಯವಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸ್ಟೀಲ್‌ಪ್ಲಾಂಟ್ ವಿಷಯದಲ್ಲಿ ಆಗಾಗ್ಗೆ ನಮ್ಮ ನಾಯಕರು ಹೇಳುತ್ತಿದ್ದಾರೆ. ನಮ್ಮ ಮುಖಂಡರಾದಂಥವರು ಮೈಸೂರನ್ನು ನಕ್ಕುನಗಿಸುವ ಹಾಗೆ ಮಾಡಿದ್ದಾರೆ. ಅನ್‌ಡೆವಲಪ್ಡ್ ಎಕಾನಮಿ ಇರತಕ್ಕಂಥ ಎಲ್ಲಾ ರಾಜ್ಯಗಳಲ್ಲೂ ಇದನ್ನು ನೋಡುತ್ತಿದ್ದೇವೆ. ಒಂದು ಸಾರಿ ಒಂದು ತತ್ವವನ್ನು ಒಪ್ಪಿಕೊಂಡು ಅದರಂತೆ ರಿಪೋರ್ಟ್ ಕೊಟ್ಟರೆ ಅದನ್ನು ಆಗು ಮಾಡುವ ಶಕ್ತಿ ನಮಗೆ ಇಲ್ಲವಲ್ಲಾ ಆ ದಕ್ಷತೆ ನಮಗೆ ಬರಲಿಲ್ಲವಲ್ಲಾ ಎಂದು ವ್ಯಸನದಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ದೇವರಾಜ ಅರಸ್‌ರವರು ಮತ್ತು ಶ್ರೀ ಘೋರ್ಪಡೆಯವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಈ ಶಿವಸೇನೆಯಂತಹ ಆಕ್ಟಿವಿಟೀಸ್ ಯಾವ ರಾಜ್ಯದಲ್ಲಿ ತಾನೇ ಇಲ್ಲ ಎಂದು ಹೇಳಿದರು. ಶ್ರೀ ಘೋರ್ಪಡೆಯವರು ಈ ಇಂತಹ ಚಟುವಟಿಕೆಗಳು ಒಂದಲ್ಲ ಒಂದು ಮುಸುಕಿನ ಅಡಿಯಲ್ಲಿ ನಡೆಯುತ್ತದೆ ಎಂದು ಹೇಳಿದರು. ನಿಜವಾಗಿಯೂ ಇವನ್ನು ಒಪ್ಪಬೇಕಾದ್ದೇ ಇಲ್ಲ ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದಲ್ಲೂ ಕೂಡ ಜಾತಿಸೇನೆ ಇದೆ. ಇಂಡಿಯಾದೇಶದಲ್ಲಿ ಎಲ್ಲಾ ತರಹ ಸೇನೆಗಳೂ ಇವೆ. I am expressing the innermost feelings of the people of my State. ಹರಿಜನರ ಬಗ್ಗೆ ಒಂದು ವಾಕ್ಯವೂ ಈ ಬಜೆಟ್ಟಿನಲ್ಲಿ ಇಲ್ಲ. ಬಹುಶಃ ಅವರು ಮುಂದೆ ಬಂದಿದ್ದಾರೆ ಎಂದು ತಿಳಿದು ಇರಬೇಕು. ಯಾರೂ ಅವರ ವಿಷಯದಲ್ಲಿ ಮಾತನಾಡಲಿಲ್ಲ. ಪ್ರತಿವರ್ಷವೂ ಬಜೆಟ್ಟಿನಲ್ಲಿ ಅವರ ವಿಷಯ ಹೇಳಬೇಕು ಎಂದರೆ ನಾಚಿಕೆಯಾಗುತ್ತೆ. ಅದು ಹೇಳುವುದು ನಮ್ಮ ನಿಸ್ಸಹಾಯಕತೆಯನ್ನು ತೋರಿಸಿದಂತಾಗುತ್ತದೆ. ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂದು ಒಂದು ಪಟ್ಟಿ ಮಾಡಿ ಕೇಂದ್ರ ಸರ್ಕಾರಕ್ಕೆ ಒಂದು ಮೆಮೋರ್ಯಾಂಡಂ ಕೊಟ್ಟಿದ್ದಾರೆ. ಅವರ ವಿಚಾರದಲ್ಲಿ ಏನೂ ಕಾರ್ಯಕ್ರಮ ತೆಗೆದುಕೊಳ್ಳದೆ ಉದಾಸೀನ ತೋರಿಸಿದ್ದಾರೆ. Perhaps they want to cut at the very root of their political existence. ಮೈಸೂರು ಸ್ಟೇಟಿನಲ್ಲೇ ಅಲ್ಲ, ಇಡೀ ಇಂಡಿಯಾದೇಶದಲ್ಲಿ ನಮಗೆ ಇದೇ ರೀತಿ ತೊಂದರೆಯಾಗಿದೆ. Discipline is not to be measured in terms of the needs of the Leader or of any party for that matter. There are very well-defined conventions about party discipline and policy ಏನು ಹೇಳೋಣ. ಈ ಅಸ್ಪೃಶ್ಯ ಜನರ ವಿಚಾರವಾಗಿ ನಾನು 12 ವರ್ಷದಿಂದಲೂ ಬಜೆಟ್‌ಮೇಲೆ ಭಾಷಣ ಮಾಡುತ್ತಾ ಇದ್ದೇನೆ. ಅದನ್ನು ತೆಗೆದು ನೋಡಿ. ಹರಿಜನರ ವಿಷಯದಲ್ಲಿ ಒಂದು ಮಾತೂ ಕೂಡ ಈ ಸಾರಿ ಬಜೆಟ್ ಭಾಷಣದಲ್ಲಿ ಹೇಳಿಲ್ಲ. ಅದರ ವ್ಯಾಖ್ಯಾನ ನೋಡಿದರೆ ಹರಿಜನರ ವಿಷಯದಲ್ಲಿ ಒಂದು ರೆಫರೆನ್ಸ್ ಸಹ ಇಲ್ಲ. ಹರಿಜನರು ಮುಂದೆ ಬಂದಿದ್ದಾರೆ ಎಂದು ತಿಳಿದುಕೊಂಡಿದ್ದಾರೆಯೇ? ಹಿಟ್ಲರನ ಕಾಲದಲ್ಲಿ ಜರ್ಮನರು ಹೇಗೆ ನೋಡುತ್ತಿದ್ದರೋ ಹಾಗೆ ಹರಿಜನರನ್ನು ಇವರು ನೋಡಬೇಕೆಂದಿದ್ದಾರೋ? Just as the Americans treat Negroes and the Germans treat the Jews, they want to treat the poor untouchables. There

is their systematic oppression. ಈ ಹರಿಜನರ ಸಮಸ್ಯೆ ಒಂದು ರಾಜಕೀಯವಾಗಿ ಬೆಳೆದು ಬಂದರೆ ನಾಳೆ ದಿವಸ ಅದು ಕುಠಾರಪ್ರಾಯ ವಾಗಬಹುದು. ಆದುದರಿಂದ ಈಗಲೂಕೂಡ ಸರ್ಕಾರದವರು ಎಚ್ಚರಿಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ವಿಷಯದಲ್ಲಿ ಯಾರೂ ಮಾತನಾಡಲಿಲ್ಲ. ಇದು ದೇಶದ ಮುಂದಿರತಕ್ಕ ಪ್ರಶ್ನೆ. ಇಂಡಿಯಾ ದೇಶದಲ್ಲಿ ಚರಿತ್ರಾರ್ಹವಾದಂಥಾದ್ದು. Second Five Year ಪ್ಲಾನ್‌ನಲ್ಲಿ ಬೋವಿ ಜನಾಂಗದವರನ್ನು ಬ್ಯಾಕ್‌ವರ್ಡ್ ಲಿಸ್ಟಿನಲ್ಲಿ ಸೇರಿಸಿಕೊಂಡು ಅವರ ಮನವೊಲಿಸಿ ರಾಜಕೀಯದ ಒಂದು ಅಸ್ತ್ರವನ್ನು ಉಪಯೋಗಿಸಿ, ಅವರು ಆರ್ಥಿಕವಾಗಿ ಹಿಂದುಳಿದಿದ್ದಾರೆ ಎಂದು ಅವರಿಗೆ ಅನುಕೂಲತೆಗಳನ್ನು ಕೊಟ್ಟು ಹರಿಜನರನ್ನು ತುಳಿಯುವುದಕ್ಕೆ ನದೆಬಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ಬಹಳ ತಪ್ಪು. Thereby you are committing a fraud on the Constitution of India. Not only that, I am not afraid to say that they are committing Political rascalism and administrative rascalism on the people. I am using those phrases with care. ಇವೂತ್ತಿನ ದಿವಸ ಹರಿಜನರ ಅಭಿವೃದ್ಧಿಯಾಗುವುದು ಒಳ್ಳೆಯದು ಎಂದು ಹೇಳುತ್ತೇನೆ. ಹರಿಜನರ ಅಭಿವೃದ್ಧಿ ಆಗಬೇಕು. ಕಮ್ಯೂನಿಸಮ್ ನ್ಯಾಷನಲಿಸಮ್ ಕ್ಯಾಸ್ಟ್ ಸೇನಾ ಎನ್ನುವುದರ ಬಗ್ಗೆ ಶ್ರೀಮತಿ ನಾಗರತ್ನಮ್ಮನವರು ಎಷ್ಟುಮಟ್ಟಿಗೆ ಬೆಳೆಯುತ್ತಾ ಇವೆ ಎಂದು ಹೇಳಿದರು. The existence or emergence of Sena I welcome if it is to prevent injustices social, political and economic, done to any section of the people, if it is to seeve democracy if it is to protect any population—major or minor or any community from suppression. ಶ್ರೀಮತಿ ನಾಗರತ್ನಮ್ಮನವರು ಜಾತಿ ಸೇನೆ ವಿಚಾರವಾಗಿ ಹೇಳಿದರು. ನಾನು ಅದರ ವಿಚಾರ ಮುಚ್ಚುಮರೆ ಇಲ್ಲದೆ ಮಾತನಾಡುತ್ತೇನೆ.

Before Integration, this was my honest opinion. I am expressing the innermost feelings of the people. Before Integration, Sri Nijalingappa was a political shoe-maker. After Integration, he became a commual shoe-maker. He expected Sri Veerendra Patil not only to become a Political shoe-maker but also a communal shoe-maker and suppress Harijans. They are sowing seeds of communalism.

Therefore, if he wants the Harijans to be wiped out from the body politic of the State, we are going to bring it to the notice of the Government of India and refer to it in other forums.

With these words, I conclude my speech and thank the Deputy Speaker.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ) —ಮಾನ್ಯ ಸಭಾಪತಿಗಳೇ, 1969-70ನೇ ಸಾಲಿನ ಆಯವ್ಯಯ ಪತ್ರವನ್ನು ನಮ್ಮ ಹಣಕಾಸಿನ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಂಕಿಅಂಶಗಳ ಸಮೇತ ತಯಾರಿಸಿ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯ ಒಂದು ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಮೈಸೂರು ರಾಜ್ಯದ ವ್ಯವಸಾಯ ಪರಿಸ್ಥಿತಿ ಬಹಳ ಸುಧಾರಿಸಿದೆ, ನಮ್ಮ ಕೈಗಾರಿಕೆಗಳು ಬಹಳ ಚೆನ್ನಾಗಿ ನಡೆಯುತ್ತಾ ಇವೆ ಎನ್ನುವ ಒಂದು ಆಶಾದಾಯಕವಾದ ಚಿತ್ರವನ್ನು ಅವರು ಕೊಟ್ಟಿದ್ದಾರೆ. ಆದರೆ ವಾಸ್ತವಿಕವಾದ ಪರಿಸ್ಥಿತಿಯನ್ನು ನೋಡಿದರೆ ಅವರು ಹೇಳುವಷ್ಟು ಆಶಾದಾಯಕವಾದಂಥ ಪತ್ರವಲ್ಲ, ತುಂಬಾ ನಿರಾಶಾದಾಯಕವಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇದೆ ಎನ್ನುವುದನ್ನು ತಿಳಿಸಬಯಸುತ್ತೇನೆ. ಇದುವರೆಗೂ ನಮ್ಮ ಹಣಕಾಸಿನ ಮಂತ್ರಿಗಳು ಜನತೆಯ ಬೇಡಿಕೆಯನ್ನು ಈಡೇರಿಸದಿರುವುದರಿಂದ ಒಂದು ಹೆಚ್ಚಿನ ಪ್ರಗತಿಪರ ಆಯವ್ಯಯ ಪತ್ರವನ್ನು ಇವರಿಂದ ನಿರೀಕ್ಷಿಸಲು ಹೇಗೆ ಸಾಧ್ಯವಾದೀತು. ಸರ್ಕಾರ ಕಳೆದ ಎರಡು ದಶಕಗಳಿಂದಲೂ ಏನನ್ನೂ ನೆರವೇರಿಸಿಲ್ಲ. ಈ 20 ವರ್ಷದಿಂದ ಯಾವ ಸಾಧನೆಗಾಗಿ ಇವರು ಎಷ್ಟು ಹಣ

(ಶ್ರೀ ಪಿ. ವೆಂಕಟಗಿರಿಯಪ್ಪ)

ಖರ್ಚು ಮಾಡುತ್ತಿದ್ದಾರೋ ಅದರ ¼ ಭಾಗದಷ್ಟು ಸಾಧನೆ ಆಗಲಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ನಾನು ಹೇಳುವುದಕ್ಕಿಂತಲೂ ಕೂಡ ಮಾನ್ಯ ತುಕೋಳ್ ಕಮೀಷನ್ನಿನವರು ಹೀಗೆ ಹೇಳಿದ್ದಾರೆ:

5-00 P.M.

"The aforesaid discussion reveals the following features as regards our economic development :—

1 the economic development in the State in the face of the increase of population is slow ;

2 the growth of income has been tardy ;

3 agricultural progress is semi-stagnant ;

4 in such a context, industrial expansion also is insecure ; and

5 unemployment has been increasing."

ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವಂಥ ಭರವಸೆಯನ್ನು ಕೊಡುತ್ತ ಬಂದಿದ್ದಾರೆ. ಆದರೆ ನಿರುದ್ಯೋಗ ಯಾವ ಮಟ್ಟಕ್ಕೆ ಮುಟ್ಟಿದೆ ಎನ್ನುವುದರ ಬಗ್ಗೆ ಕೂಡ ಅವರು ಹೇಳಿದ್ದಾರೆ.

Again one page 17 of the Pay Commission's Report it is stated :

"The addition to the labour force during the Third Plan was estimated at 9. 80 lakhs. Thus for full employment the total employment that had to be created during the Third Plan period was 13.11 lakhs. The employment created during the Third Plan period was stated to be of the order of 5.62 lakhs. Therefore, the gap is 7.49 lakhs which constitutes the backlog of unemployment for the Fourth Plan. It is, therefore, clear that the increase in employment has not kept pace with the growth of labour force in the State."

ಇದನ್ನೆಲ್ಲ ನೋಡಿದರೆ ನಮ್ಮ ಆರ್ಥಿಕ ತಜ್ಞರು, ಮೇಧಾವಿಗಳು ಕೊಟ್ಟಿರುವ ಅನೇಕ ಅಭಿಪ್ರಾಯಗಳ ಪ್ರಕಾರ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ನಮ್ಮ ಆರ್ಥಿಕ ಮಂತ್ರಿಗಳು ಹೇಳುವ ರೀತಿಯಲ್ಲಿ ಅಷ್ಟು ಆಶಾದಾಯಕವಾಗಿಲ್ಲ. ನಮ್ಮ ಎಲ್ಲ ಸಂದರ್ಭಗಳಲ್ಲಿಯೂ ವ್ಯವಸಾಯ ಅಭಿವೃದ್ಧಿ ಎಲ್ಲಕ್ಕಿಂತ ಬಹಳ ಅವಶ್ಯಕವಾದುದು, ಅದಕ್ಕೆ ಪ್ರಾಧಾನ್ಯತೆ ಕೊಡಬೇಕು ಎಂದು ನಮ್ಮ ಸರ್ಕಾರದವರು ಹೇಳುತ್ತಿರುತ್ತಾರೆ. ಆದರೆ ಪ್ರಾಧಾನ್ಯತೆಯನ್ನು ವ್ಯವಸಾಯಕ್ಕೆ ಕೊಡುತ್ತೇವೆ ಎಂದು ಬಾಯಿ ಮಾತಿನಲ್ಲಿ ಹೇಳುವುದರಿಂದ ವ್ಯವಸಾಯಾಭಿವೃದ್ಧಿ ಆಗುವುದಿಲ್ಲ. ವ್ಯವಸಾಯದ ಅಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ನಮ್ಮಲ್ಲಿ ನೀರಾವರಿ ಹೆಚ್ಚಬೇಕು. ನೀರಾವರಿ ನಮ್ಮ ರಾಜ್ಯದಲ್ಲಿ 10 ಪರ್ಸೆಂಟ್‌ಗಿಂತ ಕಡಮೆ ಪ್ರದೇಶದಲ್ಲಿದೆ. ಇದನ್ನು ಕನಿಷ್ಠ ಸೇಕಡ 25—30ರ ವರೆಗೆ ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೂ ನಮ್ಮ ರಾಜ್ಯ ವ್ಯವಸಾಯಾಭಿವೃದ್ಧಿಯಾಗಿ ಆಹಾರದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸುವುದಕ್ಕಾಗುವುದಿಲ್ಲ. ಕೈಗಾರಿಕಾ ದೃಷ್ಟಿಯಿಂದಲೂ ಕೂಡ ನಾವು ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ನೀರಾವರಿಯನ್ನು ಹೆಚ್ಚು ಮಾಡಲು ನಮಗೆ ಇರತಕ್ಕುದು ಎರಡೇ ಮಾರ್ಗಗಳು. ಕೃಷ್ಣ ಮೇಲ್ದಂಡೆ ಯೋಜನೆ ಮತ್ತು ಕಾವೇರಿ ನದಿ ಯೋಜನೆಗಳು. ಅವುಗಳನ್ನು ಮಾಡಿದ ಹೊರತು ನಮ್ಮ ರಾಜ್ಯಕ್ಕೆ ಭವಿಷ್ಯವಿಲ್ಲ. ಒಂದು ಕಾಲದಲ್ಲಿ ಮೈಸೂರು ಕೃಷ್ಣರಾಜಸಾಗರ

ವನ್ನು ಕಟ್ಟದೇ ಹೋಗಿದ್ದರೆ ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿನ ಪರಿಸ್ಥಿತಿ ಕೋಲಾರ, ತುಮಕೂರು ಜಿಲ್ಲೆಗಳಿಗಿಂತ ತೊಂದರೆಯಲ್ಲಿದ್ದು ಅಲ್ಲಿ ಕೂಡ ಕ್ಷಾಮ ಪರಿಸ್ಥಿತಿ ಇರುತ್ತಿತ್ತು. ಆದ್ದರಿಂದ ಕೃಷ್ಣ ಮೇಲ್ದಂಡೆ ಯೋಜನೆ ಮತ್ತು ಇತರ ದೊಡ್ಡ ದೊಡ್ಡ ನೀರಾವರಿ ಯೋಜನೆಗಳೆಲ್ಲವನ್ನೂ ಅದಕ್ಕೆ ಎಷ್ಟೇ ಹಣ ಖರ್ಚಾಗಲಿ ಮಾಡಿ ಮುಗಿಸಲೇ ಬೇಕು. ಸರ್ಕಾರದವರು ಎರಡು ಕೋಟಿ ರೂಪಾಯಿಗಳನ್ನು ಈ ಯೋಜನೆಗಳಿಗೆ ಕೊಟ್ಟಿದ್ದಾರೆ. ಸುಮಾರು 200 ಕೋಟಿ ರೂಪಾಯಿ ಯೋಜನೆಗೆ ಇಷ್ಟು ಅಲ್ಪ ಹಣವನ್ನು ಒದಗಿಸಿದರೆ ಆ ಕೆಲಸಗಳು ಮುಗಿಯಬೇಕಾಗಿದ್ದರೆ 100 ವರ್ಷಗಳಾದರೂ ಬೇಕು. ಆದ್ದರಿಂದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಬೇಗ ಮುಗಿಸುವುದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಿ ಹೆಚ್ಚಿನ ಹಣವನ್ನು ತೆಗೆದುಕೊಳ್ಳಬೇಕು. ಅಲ್ಲದೆ ಅಂಡರ್‌ಗ್ರೌಂಡ್ ವಾಟರ್ ಇರುವುದನ್ನೂ ಉಪಯೋಗಮಾಡಿಕೊಳ್ಳಬೇಕು. ಕೋಲಾರ ಮತ್ತು ಬೇರೆ ಕೆಲವು ಜಿಲ್ಲೆಗಳಲ್ಲಿ ದೊಡ್ಡ ನೀರಾವರಿ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥ ಕಡೆಗಳಲ್ಲಿ ಹೆಚ್ಚು ಹೆಚ್ಚಾಗಿ ನೀರಾವರಿ ಬಾವಿಗಳನ್ನು ಮಾಡುವುದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು. ಇಂಥ ಬಾವಿಗಳಿಗೆ ಹಣವನ್ನು ಸಾಲವಾಗಿ ಭೂ ಅಭಿವೃದ್ಧಿ ಬ್ಯಾಂಕುಗಳು ಕೊಡುತ್ತಿವೆ. ಇಲ್ಲಿ ಏನಾಗಿದೆ ಎಂದರೆ ನೂರಕ್ಕೆ 90ರಷ್ಟು ಸಾಲ ಪಡೆದ ಹಣವನ್ನು ವಾಪಸು ಕೊಟ್ಟಿದ್ದರೆ ಮಾತ್ರ ಅಂಥ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಪುನಃ ಹಣ ಕೊಡಲಾಗುತ್ತಿದೆ ಎಂದು ಹೇಳುತ್ತಾರೆ. ಒಂದು ತಾಲ್ಲೂಕಿನಲ್ಲಿ 200 ಜನ ಸಾಲ ತೆಗೆದುಕೊಂಡಿದ್ದು ಅದರಲ್ಲಿ ಬಹಳ ಜನ ಸಾಲವನ್ನು ವಾಪಸು ಕೊಟ್ಟಿಲ್ಲವೆಂದು ಇಡೀ ತಾಲ್ಲೂಕಿನಲ್ಲಿರುವ ಜನರಿಗೆ ತೊಂದರೆಯಾಗುವಂಥ ಕೆಲಸವನ್ನು ಮಾಡಬಾರದು. ಸಾಲ ತೆಗೆದುಕೊಂಡಿರುವವರು ಅವರಿಗೆ ಇರುವ ಆಸ್ತಿಯನ್ನು ಆಧಾರ ಮಾಡಿ ಸಾಲ ತೆಗೆದುಕೊಂಡಿರುತ್ತಾರೆ. ಒಂದು ವೇಳೆ ಯಾರಾದರೂ ಕಂತುಗಳನ್ನು ಕೊಡದೆ ಇದ್ದರೆ ಆಧಾರ ಮಾಡಿರುವ ಆಸ್ತಿಯನ್ನು ಹರಾಜು ಮಾಡಿ ವಸೂಲ್ಮಾಡಬಹುದು. ಹಾಗೆ ಮಾಡದೆ ಕೆಲವರು ತೆಗೆದುಕೊಂಡ ಹಣವನ್ನು ವಾಪಸು ಕೊಡಲಿಲ್ಲವೆಂದು ಯಾರಿಗೂ ಹಣವನ್ನು ಕೊಡುವುದಿಲ್ಲ ಎಂದರೆ ಅದು ನ್ಯಾಯವಾಗಿ ಕಾಣಿಸುವುದಿಲ್ಲ. ಆದ್ದರಿಂದ ಎಲ್ಲಿ ನೂರಕ್ಕೆ 50 ಭಾಗವಾದರೂ ಹಣ ವಸೂಲಾಗಿದೆಯೋ ಅಂಥ ಪ್ರಾಥಮಿಕ ಬ್ಯಾಂಕುಗಳಿಗೆ ಹಣವನ್ನು ಕೊಟ್ಟು ಹೆಚ್ಚು ಬಾವಿಗಳನ್ನು ತೆಗೆಯುವುದಕ್ಕೆ ಸರ್ಕಾರ ಸಹಾಯ ಮಾಡಬೇಕು.

ತೆರಿಗೆಗಳ ವಿಷಯವನ್ನು ತೆಗೆದುಕೊಂಡರೆ, ತೆರಿಗೆ ಹಾಕಲೇ ಬಾರದು ಎಂದು ನಾವು ಎಂದಿಗೂ ಹೇಳುವುದಿಲ್ಲ. ತೆರಿಗೆಗಳನ್ನು ಹಾಕದೆ ಯಾವ ಸರ್ಕಾರವನ್ನೂ ನಡೆಸುವುದಕ್ಕಾಗುವುದಿಲ್ಲ. ತೆರಿಗೆಯನ್ನು ಹಾಕುವುದರಲ್ಲಿ ಎಷ್ಟು ಪ್ರಮಾಣದಲ್ಲಿ ಹಾಕಬೇಕು ಎನ್ನುವುದನ್ನು ಯೋಚನೆ ಮಾಡಿ ಹಾಕಬೇಕು. ತೆರಿಗೆಯಿಂದ ಬಂದಂಥ ಹಣವನ್ನು ಹೇಗೆ ಖರ್ಚು ಮಾಡಬೇಕು, ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು, ಮಿತವ್ಯಯವನ್ನು ಹೇಗೆ ಸಾಧಿಸಬೇಕು ಎನ್ನುವುದರಲ್ಲಿ ನಮಗೂ ಸರ್ಕಾರಕ್ಕೂ ವ್ಯತ್ಯಾಸವಿದೆ. ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಪಟ್ಟಣಗಳಲ್ಲಿ ತೆರಿಗೆ ಹಾಕುವುದಕ್ಕೆ ಅವಕಾಶವಿಲ್ಲ, ಹಳ್ಳಿಗಾಡಿನಲ್ಲಿ ತೆರಿಗೆ ಹಾಕುವುದಕ್ಕೆ ಅವಕಾಶವಿದೆ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರು ನಗರದಲ್ಲಿ ಎಲ್ಲಿ ನೋಡಿದರೂ ಕೂಡ ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ಹೊಸದಾಗಿ ಭವ್ಯ ಭವನಗಳು ನಿರ್ಮಾಣವಾಗುತ್ತಿವೆ. ಈ ರೀತಿ ನಿರ್ಮಾಣವಾಗುತ್ತಿರುವ ಮನೆಗಳನ್ನೂ, ಅವುಗಳಿಗೆ ಮಾಡಿರುವ ಶೃಂಗಾರಗಳನ್ನೂ ನೋಡಿದರೆ ಪಟ್ಟಣಗಳಲ್ಲಿರುವವರಲ್ಲಿ ಹಣವಿಲ್ಲವೇ? ನಗರಗಳಲ್ಲಿ ತೆರಿಗೆ ಹಾಕಿ ಹಣ ವಸೂಲ್ಮಾಡಬೇಕು ಎಂದರೆ ಮಧ್ಯಮ ವರ್ಗದವರ ಮೇಲೆ ಅಥವಾ ಸಣ್ಣ ವರ್ಗದವರ ಮೇಲೆ ತೆರಿಗೆ ಹಾಕಬೇಕು ಎಂದಲ್ಲ. ಯಾರಲ್ಲಿ ಕಾಳಧನವಿದೆಯೋ, ಯಾರು ತೆರಿಗೆಗಳನ್ನು ಕೊಡಬೇಕಾದುದನ್ನು ಕೊಡದೆ ಸರ್ಕಾರಕ್ಕೆ ಮೋಸ ಮಾಡಿ ಬೇಕಾದ ಹಾಗೆ ವೈಭೋಗದ ಜೀವನವನ್ನು ನಡೆಸುತ್ತಾರೆಯೋ ಅಂಥವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು.

ವ್ಯವಸಾಯ ಕ್ಷೇತ್ರದಲ್ಲಿ ತೆರಿಗೆಗಳನ್ನು ಹಾಕುವ ವಿಷಯದಲ್ಲಿ ಮಾನ್ಯ ವಿ. ಎನ್. ಪಾಟೀಲ್ ಅವರು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುವುದು ಬೇಡ, ಅದಕ್ಕೆ ಸುಲಭ ರೂಪವೆಂದರೆ ಹೆಚ್ಚಿನ ಜಮೀನು ಇರುವವರು, ಹೆಚ್ಚು ಬೆಳೆ ಬೆಳೆಯುವವರು ಇಂಥವರಿಂದ ವಸೂಲ್ಮಾಡಬೇಕು ಎಂದು ಹೇಳಿದುದನ್ನು ನಾನು ಪೂರ್ಣವಾಗಿ ಅನುಮೋದಿಸುತ್ತೇನೆ. ಸಣ್ಣ ಸಣ್ಣ ರೈತರಿಗೆ ಬಹಳ ತೊಂದರೆ ಇರುತ್ತದೆ. ಯಾರು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಾರೆ, ಯಾರು ನೂರಿನ್ನೂರು ಎಕರೆ ಪ್ರದೇಶದಲ್ಲಿ ಕಬ್ಬು ಬೆಳೆಯುತ್ತಾರೆ ಅಂಥವರಿಂದ ಮಾತ್ರ ತೆರಿಗೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಸಣ್ಣ ಸಣ್ಣ ರೈತರಮೇಲೆ ತೆರಿಗೆಯನ್ನು ಹಾಕಬಾರದು. ಹಳ್ಳಿಗಳಲ್ಲಿ ಕೆಲವೇ ಜನಗಳಲ್ಲಿ ಹಣದ ಶೇಖರಣೆಯಾಗಿ ಸಣ್ಣ ಸಣ್ಣ ರೈತರು ಜಮೀನು

(ಶ್ರೀ ಪಿ. ವೆಂಕಟಗಿರಿಯಪ್ಪ)

ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಕೆಲವು ಕಡೆ ಒಂದು ಎಕರೆ ಜಮೀನಿಗೆ 15 ಸಾವಿರ, 20 ಸಾವಿರ ರೂಪಾಯಿ ಕೊಟ್ಟು ಕೊಂಡುಕೊಳ್ಳುತ್ತಾರೆ. ಇದರಿಂದ ಸಾಧಾರಣ ರೈತರಿಗೆ ಜಮೀನು ಸಿಕ್ಕುವುದಿಲ್ಲ. ಬೇರೆ ಪ್ರದೇಶಗಳಲ್ಲಿ ಕೂಡ ಶ್ರೀಮಂತರಾಗಿರುವವರು ಒಂದು ಎಕರೆಗೆ ಎರಡು ಸಾವಿರ ರೂಪಾಯಿ ಬೆಲೆ ಬಾಳುವುದಕ್ಕೆ ಐದು ಸಾವಿರ ರೂಪಾಯಿ ಕೊಡುವುದಕ್ಕೆ ತಯಾರಾಗಿರುತ್ತಾರೆ. ಹಳ್ಳಿಗಳಲ್ಲಿರುವ ಕೆಲವು ಶ್ರೀಮಂತರು, ಶ್ರೀಮಂತ ರೈತರು, ಲೇವಾದೇವಿ ಮಾಡುವವರು ಇಂಥವರ ಮೇಲೆ ಯಾವುದೇ ರೀತಿಯ ತೆರಿಗೆಯನ್ನಾದರೂ ಹಾಕಿ ಅವರ ಹಣವನ್ನು ಸರ್ಕಾರಕ್ಕೆ ತೆಗೆದುಕೊಂಡರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ, ಅದಕ್ಕೆ ಪೂರ್ಣವಾಗಿ ಬೆಂಬಲ ಕೊಡುತ್ತೇವೆ ಎಂದು ಹೇಳುತ್ತಿದ್ದೇನೆ.

ಸರ್ಕಾರಕ್ಕೆ ಸುಮಾರು 213 ಕೋಟಿ ರೂಪಾಯಿಗಳ ಆದಾಯವಿದೆ. ಈ ಹಣದಲ್ಲಿ ಬಹುಭಾಗ ದುಂದು ವೆಚ್ಚ ಮಾಡುತ್ತಿದ್ದಾರೆ. ಕಂಟ್ರಾಕ್ಟರುಗಳಿಗೆ, ದಳ್ಳಾಳಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಖರ್ಚು ಮಾಡುವುದು ನಮ್ಮ ಸರ್ಕಾರದ ದಿನಚರಿಯಾಗಿದೆ. ಸರ್ಕಾರದ ಬಗ್ಗೆ ನಮ್ಮ ಮೊದಲನೆಯ ದೂರು ಇದು.

ಇಷ್ಟೇ ಅಲ್ಲದೆ ಮಿತವ್ಯಯ ಮಾಡುತ್ತೇವೆ ಎಂದು ಹೇಳುತ್ತಾರೆ. ಸಹಕಾರ ಇಲಾಖೆ ಮತ್ತಿತರ ಅನೇಕ ಇಲಾಖೆಗಳಲ್ಲಿ ಅನಾವಶ್ಯಕವಾಗಿ ಡೆಪ್ಯುಟಿ ರೆಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್ ಮುಂತಾದ ಹುದ್ದೆಗಳನ್ನು ಕ್ರಿಯೇಟ್ ಮಾಡಿ ಹಣಕಾಸಿನ ಮುಗಟ್ಟಿರುವಾಗ ತೊಂದರೆ ಮಾಡುತ್ತಿದ್ದಾರೆ. ಇಂದು 4 ಜನರು ಕೆಲಸ ಮಾಡುವ ಕಡೆ 10 ಜನರನ್ನು ಹಾಕಿ ಹಣವನ್ನು ಪೋಲು ಮಾಡುತ್ತಿದ್ದಾರೆ. ಆಂಧ್ರದಲ್ಲಿ 280 ಕೋಟಿ ರೂಪಾಯಿಗಳ ಬಜೆಟ್ ಆಗಿದೆ, ಮದ್ರಾಸು ರಾಜ್ಯದಲ್ಲಿ ಮತ್ತು ಆಂಧ್ರದಲ್ಲಿ ಪ್ರಾಜೆಕ್ಟುಗಳಿಗೆ ಖರ್ಚುಮಾಡುವುದು, ಕೈಗಾರಿಕೆಗಳಿಗೆ ಖರ್ಚುಮಾಡುವುದನ್ನು, ಪ್ರಗತಿಯನ್ನು ನೋಡಬೇಕು. ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ದುಂದು ಖರ್ಚಾಗುತ್ತಿದೆ. ಎ. ಪಿ. ಆರ್. ಸಮಿತಿ ಸಲಹೆಗೆ, ಈ ಸಭೆಯ ಸಲಹೆಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಇಂದು ಎಲ್ಲಕ್ಕಿಂತ ಮುಖ್ಯವಾಗಿ ಮಿತವ್ಯಯ ಮಾಡಬೇಕೆಂದು ಹೇಳುವಾಗ ಮಂತ್ರಿಗಳು ಕೂಡ ಕಡಿಮೆ ಖರ್ಚುಮಾಡಬೇಕು. ಹೊಸ ಮಂತ್ರಿಮಂಡಲ ಬಂದ ಮೇಲೆ ಶ್ರೀ ವೀರೇಂದ್ರ ಪಾಟೀಲರು ಹೆಚ್ಚು ಕೆಲಸ ಮಾಡುತ್ತೇವೆ, ತಿಂಗಳಿಗೆ ಹತ್ತು ದಿವಸ ಮಾತ್ರ ಪ್ರವಾಸಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಕೆಲವು ದಿವಸಗಳಾದಮೇಲೆ ಏನಾಗುತ್ತಿದೆ ಎಂಬುದನ್ನು ನೋಡಬಹುದು. ಒಂದು ತಿಂಗಳಲ್ಲಿ 25—26 ದಿವಸಗಳ ಕಾಲ ಪ್ರವಾಸ ಮಾಡಿರುವ ಮಂತ್ರಿಗಳಿದ್ದಾರೆ, ಬೇಕಾದರೆ ಹೆಸರು ಹೇಳುತ್ತೇನೆ. ಹೇಳುವುದಕ್ಕೂ ಮಾಡುವುದಕ್ಕೂ ಸಂಬಂಧವಿಲ್ಲ. ಒಡದೇಶದಲ್ಲಿರುವಾಗ ಹಿಂದೆ ಶಾಸಕರ ಭವನದಲ್ಲಿದ್ದವರು ಮಂತ್ರಿಗಳಾದಮೇಲೆ ವಾಸದ ಮನೆಯ ಬಗ್ಗೆ ಜಗಳ ಮಾಡುವುದಾದರೆ ಅದು ಸರಿಯೇ? ಮಂತ್ರಿಗಳೂ ಕೂಡ ಮನಸ್ಸು ಮಾಡಿದರೆ ಮಿತವ್ಯಯ ಮಾಡಬಹುದು.

ಇನ್ನು ಕ್ಷಾಮ ಪರಿಹಾರದ ವಿಷಯ. ಇದಕ್ಕಾಗಿ ಸುಮಾರು 7-8 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ ಎಂದು ರೆವಿನ್ಯೂ ಮಂತ್ರಿಗಳು ತಿಳಿಸಿದ್ದಾರೆ. ಹಿಂದೆ ಕೂಡ ಇದನ್ನು ಈ ಸಭೆಯಲ್ಲಿ ಅನೇಕ ಸಾರಿ ಹೇಳಲಾಗಿದೆ. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ದಳ್ಳಾಳಿಗಳ ಕೈ ಸೇರಿದೆ. ಈಚೆಗೆ ಡೀಸಿಲ್ಟಿಂಗ್, ಒಡ್ಡು ಹಾಕುವುದು ಮುಂತಾದ ಕೆಲಸ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನೀರಾವರಿ ಬಾವಿಗಳಿಗೆ ಈ ಹಣ ಕೊಟ್ಟರೆ ವಿಶೇಷ ಪರಿಹಾರ ದೊರಕಿ ಕೂಲಿಗಳಿಗೆ ಕೆಲಸ ಸಹ ದೊರೆಯುವುದು ಎಂದು ಕೈಮುಗಿದು ಬೇಡಿದರೂ ದಳ್ಳಾಳಿಗಳಿಗೆ ಲಾಭವಾಗುವಂತೆ ಫೀಡರ್ ಛಾನಲ್ ಮುಂತಾದ ಕೆಲಸಗಳನ್ನು ಕೈಕೊಳ್ಳುತ್ತಿದ್ದಾರೆ. ಇನ್ನು ಮುಂದಾದರೂ ಕೋಲಾರ ಜಿಲ್ಲೆಯಲ್ಲಿ ಈ ಸಂಬಂಧದಲ್ಲಿ ಕೊಡುವ ಹಣವನ್ನು ನೀರಾವರಿ ಬಾವಿಗಳಿಗೆ ರಿಲೀಫ್ ಕಮಿಟಿಯ ಮೂಲಕ ಕೊಡಬೇಕು, ಆದರಿಂದ ವಿಶೇಷ ಸಹಾಯವಾಗುತ್ತದೆ, ಕೂಲಿಗಳಿಗೆ ಕೆಲಸ ದೊರೆಯುತ್ತದೆ ಎಂದು ತಿಳಿಸುತ್ತೇನೆ. ಇಷ್ಟೇ ಅಲ್ಲದೆ ಮಾಲೂರು ತಾಲ್ಲೂಕಿನಲ್ಲಿ ಸರಕಾರ ಕೆಲವು ಕೆಲಸಗಳನ್ನು ಮಾಡಿಸಿದ್ದಾರೆ, ಜಿಲ್ಲಾಧಿಕಾರಿಗಳಿಗೆ ರಿಲೀಫ್ ಕಮಿಟಿಯ ಮೂಲಕ ಹಣ ಬರಬೇಕು, ನಂತರ ಅದನ್ನು ಅವರು ಕೊಡಬೇಕು. ಅಲ್ಲಿ 2—3 ಲಕ್ಷ ಖರ್ಚಾಗಿದೆ, 15 ದಿವಸಗಳಲ್ಲಿ ಕೆಲಸ ಅಷ್ಟು ಆಗಿದೆ ಎಂದು ಹೇಳುತ್ತಿದ್ದಾರೆ, ಅಂದಾಜಾಗಿಲ್ಲ. ಮೂರೂವರೆ ಲಕ್ಷ ಸರಕಾರ ಕೊಡಬೇಕು ಎಂದು ಮುಖಂಡರು ಪ್ರಭಾವ ಬೀರುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಮಿತವ್ಯಯದ ಮಾತನ್ನು ಅರ್ಥ ಮಂತ್ರಿಗಳು ಹೇಳುತ್ತಾರೆ. ರಾಜಕೀಯ ದೃಷ್ಟಿಯಿಂದ ಅಥವ ತಮ್ಮವರು ಕೆಲವರಿಗೆ ಅನುಕೂಲ ಮಾಡಬೇಕೆಂದು ಈ ಮೂರೂವರೆ ಲಕ್ಷವನ್ನು ಕೊಡಬಾರದು, ಈ ವಿಚಾರದಲ್ಲೇನು ಮಾಡುತ್ತಾರೆಂದು ನಾನು ಕಾದು ನೋಡುತ್ತೇನೆ. ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ, ಏನ ಮಾಡುತ್ತಾರೋ ನೋಡುತ್ತೇನೆ.

ಇನ್ನು ಭೂ ಕಂದಾಯದ ವಿಷಯ. ಇಂದು ಭೂ ಕಂದಾಯ ರಾಜ್ಯದಲ್ಲಿ ಮಾತ್ರವಲ್ಲ, ಹಿಂದೂಸ್ಥಾನದಲ್ಲಿ ಎಲ್ಲಾ ಕಡೆಯೂ ಅದು ರದ್ದಾಗಬೇಕೆಂದು ಬೇಡಿಕೆಯಿದೆ. ಉತ್ತರ ಹಿಂದೂಸ್ಥಾನದಲ್ಲಿ ಕೆಲವು ರಾಜ್ಯಗಳಲ್ಲಿ ಅದು ರದ್ದಾಗಿದೆ. ಮದ್ರಾಸಿನಲ್ಲಿ ಖುಷ್ಕಿ ಜಮೀನು ಕಂದಾಯವನ್ನು ರದ್ದು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಹಣಕಾಸಿನ ಮಂತ್ರಿಗಳು ಈ ಕಂದಾಯವನ್ನು ರದ್ದು ಮಾಡುವುದಾಗಿ ಹೇಳಿ ಮತ್ತೆ ಪ್ರಭಾವಕ್ಕೊಳಗಾಗಿ ಅಥವ ಬೇರೆ ಕಾರಣದಿಂದ ಅದಕ್ಕೆ ವಿರುದ್ಧವಾಗಿ ವಾದ ಮಾಡುತ್ತಿದ್ದಾರೆ. ಭೂ ಕಂದಾಯ ಯಾವ ರೀತಿಯಲ್ಲೂ ಸೈಂಟಿಫಿಕ್ ಆಗಿಲ್ಲ, ಅದನ್ನು ರದ್ದು ಮಾಡಬೇಕು. ಯಾರಿಗೆ ಹೆಚ್ಚು ಆದಾಯವಿದೆ, 4—5 ಸಾವಿರಕ್ಕಿಂತ ಹೆಚ್ಚು ವರಮಾನವಿದೆ ಅವರಿಂದ ತೆರಿಗೆ ವಸೂಲು ಮಾಡಬೇಕು, ಭೂ ಕಂದಾಯ ರದ್ದು ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ. ಈಗ ಕಂದಾಯವನ್ನು ಬಲಾತ್ಕಾರವಾಗಿ ವಸೂಲು ಮಾಡುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಅಭಾವವಿದೆ ಎಂದು ಸುಮಾರು 25 ಲಕ್ಷ ಖರ್ಚು ಮಾಡಿದ್ದಾರೆ, ಹೋದ ಸಾರಿ ಕ್ಷಾಮವಿತ್ತು. ಈ ಸಾರಿ ಬಲಾತ್ಕಾರದಿಂದ ನಿಂತಿರುವ ಕಂದಾಯವನ್ನು ಅಲ್ಲಿ ವಸೂಲು ಮಾಡುತ್ತಿದ್ದಾರೆ, 4-5 ವರ್ಷದ ಬಾಕಿಯನ್ನು ಒಂದೇ ಸಾರಿ ವಸೂಲು ಮಾಡುತ್ತಿದ್ದಾರೆ. ಇದರಿಂದ ತೊಂದರೆಯಾಗಿದೆ. ಒಂದು ಕಡೆ ಕ್ಷಾಮ ಪರಿಹಾರದ ಕೆಲಸವಾಗುತ್ತಿದೆ. ಹೀಗಿರುವಾಗ ಕಂದಾಯ ಬಲಾತ್ಕಾರವಾಗಿ ಬಾಕಿಯ ಸಹಿತ ವಸೂಲು ಮಾಡುವುದು ವಿಚಿತ್ರವಾಗಿದೆ. ಆದರೆ 500—1,000 ರೂಪಾಯಿಗಳಷ್ಟು ಹೆಚ್ಚು ಬಾಕಿ ಇರುವವರಿಂದ ವಸೂಲು ಮಾಡುತ್ತಿಲ್ಲ, ಬಡವರಿಂದ 50 ರೂಪಾಯಿ ಕೊಡಬೇಕಾದವರಿಂದ ಕಿರುಕುಳ ಕೊಟ್ಟು ವಸೂಲು ಮಾಡುತ್ತಿದ್ದಾರೆ. ಇದು ನ್ಯಾಯವಲ್ಲ. ಕನಿಷ್ಠ ಪಕ್ಷ 50 ರೂಪಾಯಿಗಳಿಗಿಂತ ಕಡಿಮೆ ಬಾಕಿ ಇಟ್ಟುಕೊಂಡಿರುವವರಿಂದ ಕ್ಷಾಮ ಪರಿಸ್ಥಿತಿಯಿರುವಾಗ ವಸೂಲು ಮಾಡಬಾರದು. ಬೇಕಾದರೆ ಶ್ರೀಮಂತರಿಂದ ಒಂದೆರಡು ಸಾವಿರ ಬಾಕಿ ಇಟ್ಟುಕೊಂಡಿರುವವರಿಂದ ವಸೂಲು ಮಾಡಿ. ಬಡವರಿಗೆ ತೊಂದರೆ ಮಾಡಬಾರದು. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ಇತರ ವಿಷಯಗಳನ್ನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ ಎಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† **Sri R. DAYANAND SAGAR** (Chamarajpet).—Speaker, Sir, I have very great pleasure indeed to welcome this very realistic and thought-provoking budget. I have also pleasure to congratulate the Hon. Finance Minister Sri Ramakrishna Hegde for presenting this Budget which has levied no additional taxation. Perhaps this is a red-letter day in the history of this Legislature that a budget has come forward without levy of fresh taxation. People in our country and in our State, Sir, have already been very heavily taxed and particularly I thank the Hon. Finance Minister when he said that taxation in urban areas have reached the saturation point. It is true that though many of my friends here who represent the rural population may not agree with me, but I who represent the urban population, do know the feelings and sufferings and worries of the people whom I represent.

Sir, in the urban areas of the State you find many industrialists and industries which produce wealth. To-day, unfortunately they are being treated as criminals, thugs, thieves, etc. Their houses are being searched every day for finding whether there is hidden wealth or not. They have been suspected and they have been harassed by one officer or the other. This is the fate of many of the industrialists of the country as a whole. This should not happen. The producers of wealth whether it be in terms of agricultural produce or in terms of industrial products, are the real patriots of this country because they produce wealth, food and industrial articles for the benefit of the people of the country and the country will grow richer and richur. At a time when the

(SRI R. DAYANAND SAGAR)

population of the State have been carrying heavy loads of taxation, the Finance Minister has come forward with a budget which levies no taxation. On behalf of the urban population and on my own behalf, I have great pleasure to thank him and congratulate him.

In the Budget Speech, Sir, top priority has been given for agriculture and irrigation and the Government deserves congratulations. Agriculture is a very very important Department, a very important thing in life. But we have been treating agriculture almost in a step-motherly way. They have been speaking on the various platforms, in the Legislatures and in Parliament, that agriculture should be given prime position in the country's economy. But nothing has came up. It is most unfortunate thing that year after year, we go with begging bowls asking America and other countries for food. It is a most disgraceful thing If I were at the helm of affairs, I would have taken proper steps to improve the production of food and I would not have allowed our leaders to go to the foreign countries with begging bowls. 20 years have lapsed. What have we done for improving our food production either in the State or in the country ? We have been making mouthful, wonderful speeches on the platforms eveywhere. But the production of food has not been increased. When this is a question of self-respect and honour of not only of individual but also of society, we should not go with begging bowls for food. When this question pertains to self-respect, honour and dignity of the Nation, what are we to do ? Take for example the Chinese and Pakisthani aggressions. What we did during that emergency period ? We mustered our strength and we became one-man, whether Government, opposition, men, women and children : and eveybody had faced the enemy as one. What have we done for the last 20 years. in respect of agriculture ? We did not have enough food. The scarcity conditions have not been tackled in a proper way. Sir, the Indians and especially the Mysoreans are most timid people. I am sorry to say liks this. We are suffering without food year after year. The pepole have come to a stage and feel satisfied if they get a slice of bread and curry. You can think how the city life in this country would be when there is scarcity of food. The morsel of food determines the values of life. This is the most unfortunate situation in which we are placed. Sir, I suggest to the Government of India also the Government here that the problem of food should be tackled as a problem of warfare. We must think we are on a warfooting and we must think we are actually facing a war. We have to organise every possible resources and see that agriculture is improved. For every area there is a M. L. A. He has to look after his area. Let him have a few wells dug up and tanks constructed, and see that lands are irrigated. The Central Government has not Master Plan for the whole. The country needs a quantum of food which has to be produced. But where is the Master Plan for production ? The Champions of agriculture are saying that land should belong to the tiller. Has it been actually

achieved ? This has not been satisfactorily done. If I were in charge of this portfolio I would not have done and I would have arranged that such and such plots belong to such and such people and have given all possible facilities to the agriculturist. I would have treated the production of food on a war-footing and tried hard for the prosperity of the country. Now there is not even arm for sample as advocated by so many people. We have to formulate policies so as to facilitate to produce more food in this country. Population has been increased geometrically and the agriculture has grown arithmetically. When this is the situation we will never improve in this direction. Without planning we cannot go ahead. Most of the people in this country eat rice and they use curry for eating rice. There are other things which are very important as food. We include production of meat, milk, fish, fruits, chickens, etc. There should be a great drive to increase these things also.

Regarding the fisheries, our Hon. Finance Minister has given an account as to how the Government is doing. I have had an occasion to go round the world a number of times. I have seen how they have developed fishing industry and fish has become common food. The fish has become an exportable article in some of the countries. We have a coast-line of over 200 miles. But yet, the fish produce is not very much. We have only about 510 mechanised boats. Sir, if you go to a country like Japan, if you see the fish market there, it is as big as half of Bangalore City. The fishermen of Japan go as far as the American Coast on one side and come as near as the Indian Coast line on this side for fishing. Fish as food is available from the vast seas. This has to be exploited. If you were to simply go on abusing nature, and say 'God did not give us enough food', it is no use. There is food in plenty in the country, on the land and in our seas. We have not mustered our strength, organised ourselves to get these things. Therefore, to have a few mechanised boats—boats, not ships or steamers—if you go to Tokyo and see how they catch fish, you will see big steamers going about on the high seas; they have what is known as fish-finders. They find out exactly the area in which fish are available at a particular time and then they cast their net and the fish caught will be processed by the time the steamer reaches the shore. That is how fishery industry is organised there. My friend Mr. Reddy is looking at me. I should suggest to him to go abroad and see how fisheries are conducted in Japan.

5-30 P.M.

If you cannot do your job any justice, then you may just resign and come out. If you want to do your job properly, you must put your heart and soul and achieve results. The nation wants only the results. Having 200 miles of coast-line and having only boats, you cannot do a proper job and you cannot go about fishing and my dear friend, how will you solve the food problem in the country ?

Sri M. S. KRISHNAN.—He is trying to fish in troubled waters !

Sri R. DAYANANDA SAGAR.—Sir, regarding animal husbandry, I should say it is not developed very much at all. We have got to breed in large numbers the quick multiplying species such as pigs, poultry, sheep, goats, etc. The world famous Bannur sheep is not properly developed. There are certain things to which our Hon. Minister for State for Animal Husbandry has got to give his interest and look into it.

Regarding cattle, our cattle are the poorest in the whole world. Our cattle wealth is the poorest. We have got to take steps to improve our cattle breed. The type of cattle that you find in our country, is never considered proper cattle wealth at all. We have got to improve the breed and only encourage cows which yield between 20 to 40 litres of milk everytime.

Sir, we have the Bangalore Dairy Project. This has come into being in a very big way Unfortunately, the way it is functioning is very deplorable. It procures about 80 thousand litres of milk every day and distributes only about 40,000 litres. The rest of it has to be converted into milk products.........

Sri T. R. SHAMANNA.—Is that figure of 80,000 litres correct ?

Sri R. DAYANANDA SAGAR.—Why do you interfere with me Mr. Shamanna ? I never interfered with you when you spoke.

Therefore, unfortunatety this Bangalore Dairy Project has not got the equipment to convert the remaining milk into milk products. You must have read in newspapers sometime ago that tons and tons of ghee has been burnt away. This is more unfortunate and most inhuman thing to be done. When people are suffering without essentials like ragi or rice, we find that milk and ghee is being burnt to ashes. This is the most unfortunate thing to happen. I do not know what the department has been doing all the while without having the required equipment to convert milk into milk products.

Sir, so far as industries are concerned, Mysore has always been a Model State even in the days of the Maharajas and Dewans. But now, I am sorry to say that we are not at all progressive. When we compare ourselves with Madras or Punjab, and see whether our industries have progressed, we have got to hang our head in shame and in inferiority complex. Those States have taken all the necessary help and advantages from the Government of India and other organisations. They have very nicely organised industries in their State. This State which was once the promoter of industrial development, has gone far far behind. Somebody has got to give an explanation to it and I am sorry to say that the Industries Department of the State is still deteriorating further. Here I have got a few facts and figures :

Government Spun Silk Factory :

1966-67 profit earned	Rs.8.01 lakhs
1967-68 profit earned reduced	Rs.2.82 lakhs

Mysore Implements Factory, Hassan

1966-67	incurred loss	Rs.1.91 lakhs
1967-68	loss increased	Rs.6.20 lakhs

Central Industrial Workshop, Bangalore

1966-67	earned a profit of	Rs.3.06 lakhs
1967-68	profit reduced to	Rs.2.81 lakhs

These figures go to show that there is something wrong in the Industries Department and the person heading the Department. When the Hon'ble Finance Minister was also the Minister for Industries, we had very great hopes as he had gone abroad and contacted many parties, collaborations and things like that. There were very high hopes of big industries coming up in the State. Not that I want to praise him. I do not hesitate a man who is praiseworthy. We have got very few administrators in the country and one of them is my Hon'ble friend the Hon'ble Minister for Finance. Unfortunately for some reason or the other, the portfolio has been changed and somebody else has taken charge of industries and industries are going down. I want to ask why? Drastic changes have taken place in the Industries Department, One of our senior officers, Sri T. Shamanna who is acclaimed to be an efficient administrator of industries, who has been elevated to the post of Commissioner of Industries, is degraded and put in charge of a small industrial unit as Managing Director. I cannot understand that. Is it because he belongs to a small minority community and there are no MLAs backing him and because he has no strong men behind him? Here is a man who has gone round the world many times and he has been put in charge of a small unit. I want to ask why?

There is a licensing department and quota issuing department to which a Minister's relative has been appointed. Ceasar's wife must be above suspicion. I am a Congressman. If a Congress Minister does a good thing, I pat him on the back. If a Congressman whether he be the Chief Minister or a Minister, does anything harming the nation, I hit him because my nation is bigger than my family or my society. Such a thing should not happen. People are not shutting their eyes. My hon'ble friend Sri Mallikarjunaswamy mentioned of *Sena*. We are aware of the senas existing here. I am giving a warning. Let that Sena understand that we are not shutting our eyes; we are quite alive to the situation; we lead furores, we lead battles, we fight men, we fight everybody.

HON'BLE MEMBERS.—Hear, hear.

Sri R. DAYANANDA SAGAR.—The silk industry is very near to my bossom. This is fast time a gold mine in our State. India is the fourth largest country producing silk in the whole world. This industry has been very much neglected in our State because Mysore produces

(SRI R. DAYANANDA SAGAR)

nearly 75 to 80 per cent of India's silk. If India is the fourth largest country producing silk in the world, Mysore is the fourth largest State producing that silk. This has a great potentiality. It is not only the Queen of fabrics in the State for our women and our folks here but it has a wonderful export potentiality. I was in charge of it and I had given Rs. 8 lakhs profit and it has come down to Rs. 2 lakhs. Therefore, this silk industry needs proper treatment by the Government. We are hardly spending 20 lakhs every year for the development of this industry. When I was in charge of this industry I drew up a master plan for Rs. 13 5 crores for doubling the quantum of silk and also to improve the quality of silk so that we may export tonnes and tonnes of silk and earn foreign exchange. That report is put in the cold storage.

Sir, I would like to speak a word or two about the Education Department. This is a fools' paradise. There is no wisdom ever in the Education Department ever since the very inception. Ideas come and and ideas go ; policies come and policies go ; schemes come and schemes go and sufferers are the students, the parents and the people. We had two year Intermediate course. It was converted into one year P. U. C. There was a brainwave and they introduced one year in the high school stage—11th standard and created anomalies and confusion. Again we are re-thinking to have two years. What is all this foolhardiness ? At whose cost these people are making experiments ? Why not a sane man head the department and give right policies ? There is teachers' training. Trained teachers have to be paid reasonably more than the untrained teachers. The Education Department wants teachers to be trained but they do not want them to be given enhanced salary. For teacher training in the lower level there was one year's course. As an educationist I can say with confidence that one year's training for teaching in primary schools is more than enough. There was a brainwave here also it' was extended to two years. Why should anybody come for taking two years course after passing S.S.L C. ? He can as well go to spend two more years and become a graduate and draw more salary. Now a graduate teacher can have only one year course to get B.Ed, but an S.S.L.C. has to undergo two years course to teach in primary schools and yet get the same salary as another S.S.L.C. who is not trained. This kind of foolhardy and unreasonable thing should be put down. I do not think whether the men in charge are ever doing education portfolio work or whiling away their time elsewhere. We require men who can sit tight and work. We require such men in our country.

Another foolhardiness in the Education Department is, they have made a rule recently that every high school which has been started five or eight years back should deposit Rs. 10,000, in the name of Director of Education. That money should lie over there yielding no benefits or

advantages to any body. What is the meaning of this kind of order? The Department could as well say "give me landed security for Rs. 10,000 or school building or library security". But it wants Rs. 10,000 deposit in cash in the name of the Director for ever. Voluntary organisations have got to come forward and organise schools and colleges. Which fool is going to come forward and organise? You are incapable of managing and you do not encourage people who want to organise schools or colleges? What is this policy? There should be some sense in making policies. Just because a Director or a Joint Director or a clerk writes a note, should you blindfold sign it and make it a State policy? These are all certain things, which we have got to think and act.

Regarding the Corporation of the City of Bangalore, I want to speak one or two words. A supersession took place and the Government presented us a despot, a Nawab in the name of Sri Balasubramanyam. Fortunately he has gone out. This is how the citizens of Bangalore have been treated for such a long time. Not less than 30 M.L.As approached the Chief Minister a number of times and at last gracefully our Chief Minister came forward just to transfer him. This is not good. If 30 M.L. As could not influence the State's Chief Minister or the Government to change a bad officer, what should happen to the country, what should happen to the democracy and what should happen to the people's representation? 30 M.L.As. means representation of 30 lakhs of people. These people went and said he is a bad man. What kind of man, he was? No humble man, no poor man, not even an M.L.A. could approach him. He would refuse; his word was law. Such kinds of despots could exist when bureaucrats ruled the country, when Nawabs ruled the country. But these are days when people rule the country. At a time when the people have to rule the country and the State, this should not happen.

Now, this Bangalore City has been very much neglected. The State Government spends lots and lots of money on improvement of many Cities and Districts, etc., and I am not going to enumerate all that to-day. But my City has been very much neglected. The Government does not give any grants. On the other hand, whatever revenues are produced in the City have been taken away. Vehicle taxes coming from the City have been taken away by the Government. Then how is the Corporation to maintain roads? The slums are in a horrible condition. I am the President of the Slum Dwellers Association of the City. You have also seen the plight of these slum dwellers and you know how unfortunate is their lot. Nothing has been done to improve their lot. But this despot who ruled the City for a few years only looked at the big roads of the City and put beautiful street lights on important roads and improved roads frequented by honourable persons like you. But unfortunately; the less fortunate areas, which I particularly represent, have been ignored.

Mr. DEPUTY SPEAKER.—Please conclude.

Sri R. DAYANANDA SAGAR.—I do not want to take much of the time of the House as I think I have already taken enough. So saying, I very happily welcome the Budget presented by my hon. friend Sri Ramakrishna Hegde.

Thank you, Sir.

†ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕಂತಹ ಮುಂಗಡ ಪತ್ರವನ್ನು ವಿರೋಧಿಸುತ್ತಾ ನನ್ನ ಒಂದೆರಡು ಅಭಿಪ್ರಾಯಗಳನು ಹೇಳಬಯಸುತ್ತೇನೆ. ಈ ಮುಂಗಡಪತ್ರ ಸಾಮಾನ್ಯವಾಗಿ ವರ್ಷೇ ವರ್ಷೇ ಬರುತ್ತದೆ, ಹಾಗೆ ಈ ವರ್ಷ ಕೂಡ ಇಟ್ಟಿದ್ದಾರೆ. ಇದು ಪ್ರಜಾಪ್ರಭುತ್ವದಲ್ಲಿ, ಪ್ರಜೆಗಳ ಮುಖಂಡರು ತಯಾರುಮಾಡಿದ ಬಜೆಟ್ಟಲ್ಲವೆಂದು ನನಗಾದರೂ ಅನಿಸುತ್ತದೆ. ಅಧಿಕಾರಿ ವರ್ಗದವರು ಹಿಂದೆ ಏನು ಮಾಮೂಲನಂತೆ ತಯಾರು ಮಾಡುತ್ತಿದ್ದರೋ ಅದೇ ತರಹ ಈ ಬಜೆಟ್ಟನ್ನೂ ತಯಾರು ಮಾಡಿದ್ದಾರೆ. ಒಂದು ಸಂತೋಷದ ವಿಚಾರವೇನೆಂದರೆ, ಟ್ಯಾಕ್ಸೇಷನ್ ಹಾಕಿಲ್ಲ. ಇವತ್ತು ನಮ್ಮ ಮುಂದೆ ಇವರು ಡಿಫಿಸಿಟ್ ಬಜೆಟ್ ಇಟ್ಟಿದ್ದಾರೆ. ನಾನು ಹೇಳಿದೆ, ಇದು ಪ್ರಜಾಪ್ರಭುತ್ವದಲ್ಲಿ ಪ್ರಜಾಮುಖಂಡರು ತಯಾರು ಮಾಡತಕ್ಕ ಬಜೆಟ್ಟಲ್ಲವೆಂದು. ಹಾಗೆ ಇದ್ದಮೇಲೆ ಪ್ರಜಾಪ್ರಭುತ್ವ ಇಲ್ಲವೇ ಎಂದು ಯಾರಾದರೂ ಕೇಳಬಹುದು. ಈ ಪ್ರಜಾಪ್ರಭುತ್ವ ಹೇಗಿದೆ ಎಂದರೆ, ಯಾರಾದರೂ ಒಬ್ಬ ಮುಖಂಡರು ಇದ್ದರೆ, ಅವರ ಆಶ್ರಯದಲ್ಲಿ ಇತರರು ಆಶ್ರಯ ಪಡೆದು ಸ್ಥಾನಮಾನ ಗಳಿಸಿಕೊಂಡು ಮಂತ್ರಿಯಾಗಿ, ಅಥವಾ ಡೆಪ್ಯುಟಿ ಮಂತ್ರಿಯಾಗಿ ಮೆರೆಯುತ್ತಿದ್ದಾರೆಯೇ ಹೊರತು, ದೇಶದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಇದನ್ನು ಯಾವನಾದರೂ ನೋಡಿದರೆ ಹೇಳುತ್ತಾನೆ. ಕೆಲವು ಮಂತ್ರಿಗಳು ಒಂದು ಅಭ್ಯಾಸವನ್ನು ಇಟ್ಟುಕೊಂಡಿದ್ದಾರೆ. ಅವರು ಎಲ್ಲಿಯಾದರೂ ಹೋಗಬೇಕಾದರೆ ಆ ಕ್ಷೇತ್ರದ ಸದಸ್ಯರನ್ನು ಕರೆದು, ಅಲ್ಲಿ ಸಮಸ್ಯೆ ಏನಿದೆ ಎನ್ನುವುದನ್ನು ಕೇಳತಕ್ಕ ಗೋಜಿಗೆ ಹೋಗುವುದಿಲ್ಲ. ಆದರೆ ಅವರ ಪಾರ್ಟಿ ಜನರಿಗೆ ಹೇಳಿ ಕಳಿಸುತ್ತಾರೆ. ಆಯಾ ಕ್ಷೇತ್ರದ ಸದಸ್ಯರನ್ನು ಏನೂ ಕೇಳುವುದಕ್ಕೆ ಹೋಗುವುದಿಲ್ಲ. ಈ ರೀತಿ ನಡೆಯುತ್ತಿರುವಾಗ ಪ್ರಜಾಪ್ರಭುತ್ವದಲ್ಲಿ ಈ ಮಂತ್ರಿ ಮಂಡಲದಿಂದ ನಮ್ಮ ದೇಶಕ್ಕೆ ದೊರೆಯತಕ್ಕ ಅನುಕೂಲ ಏನಿದೆ ಎಂದು ಕೇಳಬೇಕಾಗಿದೆ. ನಮ್ಮ ಸಾಮಾನ್ಯ ಜನರೇ ಹೇಳುತ್ತಿದ್ದಾರೆ, ಹಿಂದೆ ಚಿಕ್ಕ ಮೈಸೂರು ಇದ್ದಾಗ, ಮಹಾರಾಜರು ಇದ್ದ ಕಾಲದಲ್ಲಿ ನಮಗೆ ಮೂರು-ಮೂರೂವರೆ ಕೋಟಿ ವರಮಾನವಿತ್ತು, ಆಗ ಎಷ್ಟೋ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಕನ್ನಂಬಾಡಿ, ಭದ್ರಾವತಿ, ಕಾರ್ಖಾನೆ ಮುಂತಾದವುಗಳು ಆಗಿನ ಕಾಲದಲ್ಲಿ ಆಗಿವೆ. ಆದರೆ ಪ್ರಜಾಪ್ರಭುತ್ವ ಬಂದರೂ ಅಂಥದ್ದು ಏನೂ ಕಾಣುತ್ತಾ ಇಲ್ಲ, ಇದರಿಂದ ನಮಗೆ ಏನು ಪ್ರಯೋಜನ? ಎಂದು ಜನರು ಹೇಳುತ್ತಿದ್ದಾರೆ. ವರಮಾನ 213 ಕೋಟಿ ಯಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಅಭಿವೃದ್ಧಿ ಏನೂ ಕಾಣುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಹೋದರೆ, ಅಲ್ಲಿ ಹಿಂದೆ ಹೇಗೆ ಇತ್ತೋ, ಸ್ವಾತಂತ್ರ್ಯ ಬರುವುದಕ್ಕೆ ಹಿಂದೆ ಹೇಗೆ ಇತ್ತೋ, ಅದೇ ರೀತಿ ಇವೊತ್ತಿನ ದಿವಸ ಕೂಡ ಇದೆ. ಎಲ್ಲಾ ಊರಿಗೆ ಬ್ರಿಡ್ಜಾಗಲಿ, ರೋಡಾಗಲೀ, ಕುಡಿಯುವ ನೀರಿನ ವ್ಯವಸ್ಥೆಯಾಗಲಿ, ಸರಿಯಾಗಿ ಆಗಿಲ್ಲ ಇದು ಪ್ರಜಾಪ್ರಭುತ್ವ. ಅಲ್ಲಿ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ಮಲಗುವುದಕ್ಕೆ ಸ್ಥಳವಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲ. ಪ್ರತಿಯೊಬ್ಬ ಪ್ರಜೆಯೂ ಸಾರ್ವಭೌಮನೆಂದು ಇವರು ಹೇಳುತ್ತಿದ್ದಾರೆ. ಇದು ಅವನ ಓಟು ತೆಗೆದುಕೊಳ್ಳುವಾಗ ಮಾತ್ರ ಹೇಳುತ್ತಿದ್ದಾರೆ. ಆದರೆ ನಂತರ ಜನರ ಏಳಿಗೆಗಾಗಿ ಮಾಡುವ ಕೆಲಸ ಏನೂ ಕಾಣುತ್ತಿಲ್ಲ. ಇವತ್ತು ದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ಬೇಕಾದಷ್ಟು ಆಗಿದೆ; ಮತ್ತು ವ್ಯವಸಾಯಕ್ಕೆ ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆಂದೂ ಹೇಳುತ್ತಿದ್ದಾರೆ. ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ, ಅದು ಹೇಗೆ ಆಗುತ್ತದೆ? ಕಾಲಕಾಲಕ್ಕೆ ಮಳೆ ಇಲ್ಲದಿದ್ದರೆ ಹೇಗೆ ಆಗುತ್ತದೆ? ಕಾವೇರಿ ಬೇಸಿನ್‌ನಲ್ಲಿ ನೀರಾವರಿ ಪ್ರೊಜೆಕ್ಟ್ ಮಾಡಿ ವ್ಯವಸಾಯವನ್ನು ಅಭಿವೃದ್ಧಿ ಮಾಡುತ್ತೇವೆಂದು ಅಲ್ಲಿ ಇಲ್ಲಿ ಹೇಳುತ್ತಿದ್ದಾರೆ. ಅದು ಹೇಗೆ ಮಾಡುತ್ತಾರೆಂದು ಗೊತ್ತಾಗುವುದಿಲ್ಲ. ಮಂಡ್ಯ ಜಿಲ್ಲೆ, ಹಾಸನ ಜಿಲ್ಲೆ ಮತ್ತು ಮೈಸೂರು ಜಿಲ್ಲೆಗಳಲ್ಲಿ ವ್ಯವಸಾಯಕ್ಕೆ ಅನುಕೂಲವಾಗುವಂತಹ ಪ್ರೊಜೆಕ್ಟುಗಳು ಇದ್ದರೂ ಅವುಗಳನ್ನು ಇನ್ನೂ ಮಾಡದೆ ಕೇವಲ ಇವರು ಷೋಗೋಸ್ಕರ ಹೇಳುತ್ತಿದ್ದಾರೆಂದು ಕಾಣುತ್ತದೆ. ಈಗಾಗಲೇ 10-15 ವರ್ಷವಾಯಿತು. ಆದರೂ ಯಾವುದನ್ನೂ ಪೂರ್ತಿಮಾಡಿ ವ್ಯವಸಾಯಕ್ಕೆ ಉಪಯೋಗವಾಗುವ ಹಾಗೆ ಮಾಡಲಿಲ್ಲ. ಗೋರೂರಿನ ಪ್ರೊಜೆಕ್ಟಿಗೆ 20—22 ಲಕ್ಷ ಇಟ್ಟಿದ್ದಾರೆ. ಈ ರೀತಿ ಹಣ ಒದಗಿಸಿದರೆ ಇದು ಎಷ್ಟು ವರ್ಷದಲ್ಲಿ ಪೂರ್ತಿಯಾಗುತ್ತದೆ? ಹಾಗೆ ಕಬಿನಿ ಪ್ರೊಜೆಕ್ಟ್ ಕೂಡ ಇನ್ನೂ ಮುಗಿಯಲಿಲ್ಲ. ಅದೇ ಪ್ರಕಾರ, ಕಂಬದಕಡ, ಹಾರಂಗಿ ಯೋಜನೆಗಳು. ಫೌಂಡೇಶನ್ ಒಂದು ಸಾರಿ ಒಂದುಕಡೆ

ಹಾಕುತ್ತಾರೆ, ಮತ್ತೆ ಪುನಃ ಇನ್ನೊಂದು ಹಾಕುತ್ತಿದ್ದಾರೆ. ಈ ರೀತಿ ಮಾಡಿದರೆ, ಯಾವಾಗ ನಮ್ಮ ದೇಶದ ಅಭಿವೃದ್ಧಿಕಾರ್ಯಗಳನ್ನು ಮಾಡುವುದು ಎಂದು ಅರ್ಥವಾಗುವುದಿಲ್ಲ. ಆ ಕಡೆ ಸದಸ್ಯರು ಕೂಡ ಒಂದು ವಾರ್ ಫುಟಿಂಗ್ ಮೇಲೆ ಕಟ್ಟಡ, ರೋಡು ಕೆಲಸದ ಹಣವನ್ನು ಈ ವ್ಯವಸಾಯಕ್ಕೆ ಕೊಟ್ಟು ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಿದ್ದಾರೆ. ಕೆಲವಾರು ದಿವಸಗಳ ಹಿಂದೆ ನಾನು ಪತ್ರಿಕೆಯಲ್ಲಿ ಒಂದು ವಿಚಾರ ಓದಿದ್ದೇನೆ.

6-00 P. M.

ಹಾರಂಗಿ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡುವುದಾದರೆ ನಾವು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಆ ಪ್ರದೇಶದ ರೈತರು ಮುಂದೆ ಬಂದಿದ್ದಾರೆಂದು ಗೊತ್ತಾಗಿದೆ. ಅದನ್ನು ಸ್ವಾಗತಿಸಬೇಕು, ಅದೇ ರೀತಿಯಲ್ಲಿ ನಮ್ಮ ಕೆಲಸವನ್ನೂ ಸರ್ಕಾರದವರು ಮಾಡುವುದಾದರೆ ನಾವೂ ಕೂಡ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ದೃಷ್ಟಿಯಿಂದ ಈ ಅಡ್ವಾನ್ಸ್ ಕಾಂಟ್ರಿಬ್ಯೂಷನ್‌ಅನ್ನು ವಸೂಲು ಮಾಡುವುದಕ್ಕೆ ಬೇಕಾದಂತಹ ಒಂದು ಕಾನೂನು ಮಾಡಿ ಹಣವನ್ನು ಒದಗಿಸಿಕೊಂಡು ನೀರಾವರಿ ಕೆಲಸಗಳನ್ನು ಕಾರ್ಯಗತಮಾಡಿದರೆ ಆಹಾರದ ಉತ್ಪತ್ತಿ ಜಾಸ್ತಿಯಾಗುತ್ತದೆ. ಅದರಿಂದ ನಿರುದ್ಯೋಗ ಸಮಸ್ಯೆಕೂಡ ಹೋಗುತ್ತದೆ. ಹಾಗೇನೇ ಗೊರೂರು ಪ್ರಾಜೆಕ್ಟ್ ಕೂಡ ಬಹಳ ಮುಖ್ಯವಾದ ಪ್ರಾಜೆಕ್ಟ್. ಆ ಪ್ರಾಜೆಕ್ಟ್ ಕೆಳಗೆ ಬರತಕ್ಕ ಹೊಳೇನರಸೀಪುರ, ಅರಕಲಗೂಡು, ಕೃಷ್ಣರಾಜಪೇಟೆ ಪಾಂಡವಪುರ ಈ ಪ್ರದೇಶಗಳ ಭೂಮಿ ಬಹಳ ಶ್ರೇಷ್ಠವಾದ ಭೂಮಿ. ಅಲ್ಲಿ ಸರಿಯಾಗಿ ಮಳೆ ಆಗದೇ ಇರುವುದರಿಂದ, ಭೂಮಿಯಲ್ಲಿ ಯಾವ ಉತ್ಪತ್ತಿಯೂ ಸಹ ಇಲ್ಲದಂತಾಗಿದೆ. ಅಲ್ಲಿ ನೀರಾವರಿ ಆಗುವುದಾದರೆ ಎಷ್ಟೋ ಜನಗಳಿಗೆ ಉದ್ಯೋಗ ಸಿಕ್ಕುತ್ತದೆ. ಅದರಿಂದ ಆಹಾರದ ಅಭಾವವನ್ನು ನೀಗುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಗೋರೂರು ಪ್ರಾಜೆಕ್ಟ್ ಕೆಲಸವನ್ನು ಆದಷ್ಟುಬೇಗ ಮುತುವರ್ಜಿ ವಹಿಸಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇವೊತ್ತು 50 ಲಕ್ಷ ರೂಪಾಯಿಗಳನ್ನು ಆ ಒಂದು ಪ್ರಾಜೆಕ್ಟಿಗೆ ಒದಗಿಸುವುದಾದರೆ ಅದರಲ್ಲಿ ಸುಮಾರು 20—25 ಲಕ್ಷ ರೂಪಾಯಿಗಳು ಸಿಬ್ಬಂದಿವರ್ಗಕ್ಕೇ ಖರ್ಚಾಗುತ್ತದೆ. ಒಂದು ವರ್ಷಕ್ಕೆ 50 ಲಕ್ಷ ರೂಪಾಯಿಗಳಂತೆ ಆ ಪ್ರಾಜೆಕ್ಟಿಗೆ ಹಣವನ್ನು ಒದಗಿಸುವುದಾದರೆ 50 ವರ್ಷಗಳಾದರೂ ಆ ಪ್ರಾಜೆಕ್ಟನ್ನು ಮುಗಿಸುವುದಕ್ಕಾಗುವುದಿಲ್ಲ. ನಿಮಗೆ ದುಡ್ಡಿನ ಅಭಾವ ಇದೆಯೆಂದು ಹೇಳಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಆ ಪ್ರಾಜೆಕ್ಟನ್ನು ಸರ್ಕಾರದವರು ಬೇಗ ಮುಗಿಸುವುದಕ್ಕೆ ಪ್ರಯತ್ನಮಾಡಬೇಕು. ಹಾಗೆ ಆಗುವುದಾದರೆ ದೇಶದಲ್ಲಿ ಆಹಾರದ ಅಭಾವವನ್ನು ನೀಗಿ ಅಭಿವೃದ್ಧಿ ಕಾರ್ಯಗಳನ್ನ ಸಾಗಿಸುವುದಕ್ಕೆ ಅನುಕೂಲವಾಗುತ್ತದೆ. ಈ ಪ್ರಾಜೆಕ್ಟುಗಳ ಕೆಲಸಗಳನ್ನ ತೆಗೆದುಕೊಂಡು ಮುಗಿಸದೇ ಹೋದರೆ ಮುಂದಿನ ನಮ್ಮ ಪೀಳಿಗೆ ನಮ್ಮನ್ನು ಶಪಿಸುತ್ತಾರೆ. ಈ ದೃಷ್ಟಿಯಿಂದ ಯಾವ ಇರಿಗೇಷನ್ ಪ್ರಾಜೆಕ್ಟನ್ನೇ ಆದರೂ ತಾತ್ಸಾರ ಮನೋಭಾವದಿಂದ ಸರ್ಕಾರ ನೋಡಬಾರದು. ದೇಶವನ್ನು ಮುಂದಕ್ಕೆ ತರಬೇಕು, ಆಹಾರೋತ್ಪಾದನೆಯನ್ನು ಹೆಚ್ಚು ಉತ್ಪತ್ತಿಮಾಡಿ ಆಹಾರದ ಅಭಾವವನ್ನು ನೀಗಬೇಕು ಎಂದರೆ ಯಾವ ಯಾವ ಪ್ರಾಜೆಕ್ಟುಗಳ ಕೆಲಸ ಪ್ರಾಮುಖ್ಯವಾಗಿ ಆಗಬೇಕೋ ಅವುಗಳನ್ನೆಲ್ಲಾ ಬೇಗ ತೆಗೆದುಕೊಂಡು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ದೇಶದಲ್ಲಿ ಕ್ಷಾಮ ಆಗಿಂದಾಗ್ಗೆ ಬರುತ್ತಿದೆ, ನಮ್ಮ ಏರಿಯಾದಲ್ಲಂತೂ ಆಗಿಂದಾಗ್ಗೆ ಅಭಾವ ಬಂದೇಬರುತ್ತದೆ. ಆದ್ದರಿಂದ ಅಲ್ಲಿ ಸಾಕಷ್ಟು ರಿಲೀಫ್ ವರ್ಕ್ಸ್‌ಗಳನ್ನು ತೆಗೆದುಕೊಳ್ಳಬೇಕು. ಈಗ ಸುಮಾರು 10-12 ವರ್ಷಗಳಿಂದ ಪ್ರಕೃತಿಗೆ ಏನಾದರೂ ವಿಕೋಪ ಬಂದಿದೆಯೋ ಏನೋ ಕಾಲಕಾಲಕ್ಕೆ ಸರಿಯಾಗಿ ಮಳೆಬಾರದೆ ಬೆಳೆಯಾಗದೆ ಜನ ಕಂಗೆಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಕ್ಕೆ ಹೋಗಿ ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಜನ ಹೇಗೋ ಏನೋ ಕಾಲಹರಣ ಮಾಡುತ್ತಾ ಪ್ರಾಣ ಉಳಿಸಿಕೊಂಡು ಬರುತ್ತಿದ್ದಾರೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಸರ್ಕಾರದವರು ಪ್ರಾಜೆಕ್ಟುಗಳನ್ನು ಕಟ್ಟುವುದರಲ್ಲಿ ತಾತ್ಸಾರ ಮನೋಭಾವವನ್ನು ಅನುಸರಿಸಿಕೊಂಡು ಹೋಗತಕ್ಕದ್ದು ಸರಿಯಲ್ಲ. ಆದಷ್ಟು ಜಾಗ್ರತೆ ಈ ಪ್ರಾಜೆಕ್ಟನ್ನು ಕಟ್ಟಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎಷ್ಟೋ ಸಂದರ್ಭಗಳಲ್ಲಿ ಈ ಮನೆಯಲ್ಲಿ ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ. 1965ನೇ ಇಸವಿಯಿಂದ ಆಚೆಗೆ ಇರತಕ್ಕ ಭೂಕಂದಾಯವನ್ನು ವಸೂಲು ಮಾಡುತ್ತೇವೆ. ಹೊಸ ಕಂದಾಯವನ್ನು ವಸೂಲು ಮಾಡುವುದಿಲ್ಲ ಎಂದು ಪದೇ ಪದೇ ಹೇಳಿದ್ದಾರೆ. ಆದರೆ ಅಧಿಕಾರಿಗಳು ಹೊಸ

(ಶ್ರೀ ಎಂ. ಕೆ. ಬೊಮ್ಮೇಗೌಡ)

ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಹೊಸ ದರದ ಪ್ರಕಾರ ಕಂದಾಯವನ್ನು ಎಂದರೆ ಒಂದು ಎಕರೆಗೆ 25-30 ರೂಪಾಯಿಗಳವರೆಗೂ ವಸೂಲು ಮಾಡುತ್ತಿದ್ದಾರೆ. 1965ನೇ ಇಸವಿಗೆ ಮುಂಚೆ ಏನು ಕಂದಾಯ ಇತ್ತೋ ಆ ದರದ ಪ್ರಕಾರ ಕಂದಾಯವನ್ನ ವಸೂಲು ಮಾಡುತ್ತೇವೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟು ಈ ರೀತಿ ಹೊಸ ದರದಲ್ಲಿ ಕಂದಾಯವನ್ನು ವಸೂಲುಮಾಡಿ ಎಂದು ಹೇಳಿದರೆ ಇದಕ್ಕೆ ಏನು ಹೇಳಬೇಕೋ ಗೊತ್ತಿಲ್ಲ. ನಿಮ್ಮನ್ನು ನಂಬಬೇಕೊ ಬೇಡವೋ ಆ ಪ್ರಶ್ನೆ ನಿಮ್ಮ ಮುಂದೆ ಇದೆ. ನಾವು ಹೇಳಿದಹಾಗೆ ಮಾಡುತ್ತವೆ, ಹೀಗೆ ಮಾಡುತ್ತೇವೆ ಎಂದು ಹೇಳಿ ಇವೊತ್ತು ಹೊಸ ದರದ ಪ್ರಕಾರ ಕಂದಾಯವನ್ನ ವಸೂಲುಮಾಡಿ ಎಂದು ಅಧಿಕಾರಿಗಳಿಗೆ ಹೇಳಿ, ಅಧಿಕಾರಿಗಳಿಗೂ ಮತ್ತು ರೈತರಿಗೂ ಘರ್ಷಣೆ ಆಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಇದು ಸರಿಯಲ್ಲ. 1965ನೇ ಇಸವಿಯಿಂದ ಆಚೆಗೆ ಇದ್ದಂತಹ ಕಂದಾಯವನ್ನ ವಸೂಲು ಮಾಡಬೇಕೆಂದು ಹಿಂದೆ ಏನು ಹೇಳಿದ್ದಿರಿ ಅದರಂತೆ ಕಂದಾಯವನ್ನು ವಸೂಲು ಮಾಡಬೇಕೆಂದು ಈಗಲಾದರೂ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಇಲ್ಲದಿದ್ದರೆ ಈಬಗ್ಗೆ ಒಂದು ದೊಡ್ಡ ಗಲಾಟೆಯಾಗುತ್ತದೆ.

ನಮ್ಮ ದೇಶದಲ್ಲಿ ಸಹಕಾರ ತತ್ವವನ್ನು ಜಾರಿಗೆ ತಂದಿದ್ದೀರಿ. ಮಂಡ್ಯಾ ಜಿಲ್ಲೆಯಲ್ಲಿರತಕ್ಕ 300 ಕ್ರೆಡಿಟ್ ಸೊಸೈಟಿಗಳಲ್ಲಿ 200 ಸೊಸೈಟಿಗಳು ಡೀಫಾಲ್ಟ್ ಆಗಿವೆ. ಅನೇಕ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ. ಸೊಸೈಟಿಗಳಲ್ಲಿ ವೆಸ್ಟೆಡ್ ಇಂಟರೆಸ್ಟ್ ಇರತಕ್ಕವರು ಸೇರಿಕೊಂಡಿದ್ದಾರೆ. ಇದರಿಂದ ಅಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿವೆ. ನಮ್ಮ ಜಿಲ್ಲೆಯಲ್ಲಿರತಕ್ಕ ಸಹಕಾರಿ ರೈಸ್ ಮಿಲ್ಲುಗಳ ಬಗ್ಗೆ ನಾನು ಮೊನ್ನೆ ಒಂದು ಇಂಟರ್‌ಪೆಲೇಷನ್ ಕೂಡ ಕೇಳಿದ್ದೆ. ಅದಕ್ಕೆ ಸರ್ಕಾರದ ಕಡೆಯಿಂದ ಸರಿಯಾದ ಉತ್ತರ ಬರಲಿಲ್ಲ. ಸರ್ಕಾರದವರು ಸಹಕಾರಿ ಮಿಲ್ಲುಗಳ ಮೂಲಕ ಬತ್ತವನ್ನು ಕೊಳ್ಳಬೇಕು ಎಂದು ಮಾಡಿದ್ದಾರೆ. ರೈತ ಮಿಲ್ಲಿಗೆ ಒಂದು ಪಲ್ಲ ಬತ್ತವನ್ನು ತೆಗೆದುಕೊಂಡುಹೋದರೆ, ಒಂದು ಪಲ್ಲ ಬತ್ತಕ್ಕಿಂತ 30-40 ಕೆ. ಜಿ. ಮುಂಗಡವಾಗಿ ತೂಗುವಂತೆ ತೆಗೆದುಕೊಂಡು ಹೋದರೂ ಕೂಡ ಅಲ್ಲಿನ ತೂಕದ ಪ್ರಕಾರ ಒಂದು ಪಲ್ಲಕ್ಕೆ 30 ಸೇರು ಕಡಿಮೆ ಬರುತ್ತದೆ. ಏತಕ್ಕೆ ಇಷ್ಟೊಂದು ಕಡಿಮೆ ಬಂದಿದೆ ಎಂದು ಕೇಳಿದರೆ ಅದು ಆರುವಾಸಿ ಬರುತ್ತದೆ ಅದಕ್ಕಾಗಿ ಕಡಿಮೆ ಬರುತ್ತದೆ ಎಂದು ಹೇಳುತ್ತಾರೆ. ಅವರ ಕೈಯಲ್ಲಿ ಜಗಳ ಮಾಡುವುದಕ್ಕಾಗದೆ ಸುಮ್ಮನೆ ಬಂದದ್ದು ಆಯಿತು. ಈ ರೀತಿ ಮಿಲ್ಲುಗಳ ಮೂಲಕ ಬತ್ತವನ್ನು ಕೊಳ್ಳುವುದು ನಡೆಯುತ್ತಿದೆ. ನನ್ನ ಏರಿಯಾದಲ್ಲಿ ಸಹಕಾರಿ ರೈಸ್ ಮಿಲ್ ಇದೆ. ಅವರು ಬತ್ತವನ್ನು ಕೊಳ್ಳುವಾಗ ಹೆಚ್ಚು ತೂಕ ತೂಗಿಕೊಂಡು 200—300 ಮೂಟೆಯವರೆಗೂ ಕೂಡಿಹಾಕಿಕೊಂಡು ಬೇರೆಯವರಿಗೆ ಮಾರಿಕೊಳ್ಳುತ್ತಾರೆ.

ಸಹಕಾರ ಸಂಘಗಳಿಂದ ದೇಶದ ಆರ್ಥಿಕ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಘನ ಉದ್ದೇಶದಿಂದ ಇದನ್ನು ತಂದಿದ್ದಾರೋ ಅಥವಾ ಈ ದೇಶದ ಒಂದು ಗುಂಪಿನ ಜನರನ್ನು ಬೆಳೆಸುವುದಕ್ಕಾಗಿ ತಂದಿದ್ದಾರೋ ಎಂಬುದನ್ನು ಸರ್ಕಾರದವರು ಹೇಳಬೇಕು. ಇನ್ನುಮುಂದೆಯಾದರೂ ಸಹ ಇದನ್ನೆಲ್ಲಾ ಸರಿಪಡಿಸಿ ಸುವ್ಯವಸ್ಥಿತವಾದ ರೀತಿಯಲ್ಲಿ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನೊಂದು ತಪ್ಪು ಎಂದರೆ ಸಹಕಾರ ಸಂಘಗಳ ಮೂಲಕ ಬತ್ತವನ್ನು ಕೇವಲ ಒಂದು ಮಿಲ್‌ಗೆ ಅಕ್ಕಿ ಮಾಡಲು ಕೊಟ್ಟು ಉಳಿದ ಮಿಲ್‌ಗಳಿಗೆ ಕೊಡದೆ ನಿಲ್ಲಿಸಿರುವುದು. ಈ ರೀತಿಯಾಗಿ ಮನಾಪಲಿ ಮಾಡುವುದಾದರೆ ಲಾಭವೆಲ್ಲಾ ಒಬ್ಬರಿಗೇ ಹೋಗುತ್ತದೆ. ಬೇರೆಯವರಿಗೆ ನ್ಯಾಯ ದೊರಕಿದಂತಾಗುವುದಿಲ್ಲ. ಒಂದೇ ಮಿಲ್ ನವರಿಗೆ ಬತ್ತ ಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುವುದರಿಂದ, ಅವರು ತೆಗೆದುಕೊಂಡಿದ್ದೇ ಅಳತೆಯಾಗಿದೆ. ಅದೂ ಸಹ ಎರಡು ದಿವಸ ಕಾಯಿಸಿ ನಂತರ ಬತ್ತವನ್ನು ಅಳೆಸಿಕೊಳ್ಳುತ್ತಾರೆ. ನಾನು ನಡೆಯುತ್ತಿರುವ ವಾಸ್ತವಾಂಶವನ್ನು ಮಾತ್ರ ಹೇಳುತ್ತಿದ್ದೇನೆ. ಎರಡೆರಡು ದಿವಸಗಳವರೆಗೆ ಗಾಡಿಯವರು ತಮ್ಮ ಬತ್ತವನ್ನು ಕೊಡಲು ತೂಕಮಾಡಿಸುವ ಜಾಗದಲ್ಲಿ ಕುಳಿತುಕೊಂಡಿರಬೇಕಾಗುತ್ತವೆ. ಈರೀತಿಯಾಗುತ್ತಿರುವುದನ್ನು ಸರ್ಕಾರದವರು ಜಾಗ್ರತೆ ಸುಧಾರಿಸದೇ ಹೋದರೆ ಇನ್ನೂ ಹೆಚ್ಚಿನ ಅನಾಹುತವಾದೀತು ಎಂದು ಎಚ್ಚರಿಕೆ ಕೊಡಬೇಕಾಗುತ್ತದೆ. ಇನ್ನೂ ಬಹಳ ವಿಷಯಗಳನ್ನು ಮಾತನಾಡುವುದು ಇತ್ತು, ಆದರೆ ಸಮಯ ಇಲ್ಲದಿರುವುದರಿಂದ ಅಧ್ಯಕ್ಷರು ಇಷ್ಟು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ಅವರನ್ನು ವಂದಿಸಿ, ಈ ಬಜೆಟ್ಟನ್ನು ವಿರೋಧಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, 1969-70ನೇ ಸಾಲಿನ ಬಜೆಟ್‌ನ್ನು ನಾನು ಸ್ವಾಗತಿಸುತ್ತಾ ಎರಡು ಸೂಚನೆಗಳನ್ನು ಕೊಡಬಯಸುತ್ತೇನೆ. ಮೊದಲನೆ

ಯಾಗಿ ಭೂ ಕಂದಾಯದ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಮುಖ್ಯ ಮಂತ್ರಿಗಳು ಎರಡು ತಿಂಗಳ ಕೆಳಗೆ ಒಂದು ಹೇಳಿಕೆಯನ್ನು ಕೊಟ್ಟರು, ಏನೆಂದರೆ, ರೀ ಸೆಟ್ಲ್‌ಮೆಂಟ್ ಮಾಡುವಾಗ ಅನೇಕ ತಪ್ಪುಗಳಾಗಿವೆ. ಅದನ್ನು ಸರಿಪಡಿಸುವವರೆಗೆ 1965 ಕ್ಕೆ ಮುಂಚೆ ಏನು ಒಂದು ಕಂದಾಯ ಇತ್ತೋ ಅದನ್ನೇ ತೆಗೆದುಕೊಳ್ಳುತ್ತೇವೆಂಬ ಸಣ್ಣ ಹೇಳಿಕೆಯನ್ನು ಕೊಟ್ಟರು. ಮಾನ್ಯ ರೆವಿನ್ಯೂ ಮಂತ್ರಿಗಳು ಸಹ ಇದೇ ಹೇಳಿಕೆಯನ್ನು ಪಬ್ಲಿಕ್ ಮೀಟಿಂಗ್‌ನಲ್ಲಿ ಮೂರು ನಾಲ್ಕು ಸಲ ಕೊಟ್ಟಿದ್ದಾರೆ. ಭೂ ಕಂದಾಯವನ್ನು ಪುನರ್ವಿಮರ್ಶೆ ಮಾಡುವಾಗ ಬಹಳ ತಪ್ಪುಗಳಾಗಿವೆ. ಅನೇಕ ಒಳ್ಳೆಯ ಭೂಮಿಗಳು ಇದ್ದರೂ ಕೂಡ ಆ ಭೂಮಿಗಳಿಗೆ ಹೆಚ್ಚಿನ ಕಂದಾಯವನ್ನು ಹಾಕಿಲ್ಲ. ನನಗೆ ತಿಳಿದ ಮಟ್ಟಿಗೆ ರೀಸೆಟ್ಲ್‌ಮೆಂಟ್ ಮಾಡುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ವಿಶೇಷವಾಗಿ ಹೈದರಾಬಾದ್ ಕರ್ಣಾಟಕದೊಳಗೆ ಭೂಮಿಯನ್ನು ನೋಡದೆ, ತಾಲ್ಲೂಕ್ ಆಫೀಸಿನಲ್ಲಿ ಅಥವಾ ಜಿಲ್ಲಾ ಕಛೇರಿಯಲ್ಲಿ ಕುಳಿತುಕೊಂಡು ಎಲ್ಲಾ ಭೂಮಿಗೂ ಒಂದೇ ತರಹದ ಕಂದಾಯವನ್ನು ವಿಧಿಸಿದ್ದಾರೆ. ನಮ್ಮ ಭಾಗದ ಅಂದರೆ ಕುಷ್ಟಗಿ, ಕೊಪ್ಪಳ ಮತ್ತು ಎಲಬುರ್ಗಿ ಭಾಗಗಳಲ್ಲಿರುವ ಜಮೀನನ್ನು ಒಂದನೇ ತರಗತಿಯ ಭೂಮಿ ಎಂದು ತೀರ್ಮಾನ ಮಾಡಿದ್ದಾರೆ. ಆದರೆ ಎಲ್ಲಾ ಜಮೀನು ಒಂದನೇ ತರಗತಿಯವು ಆಗಿಲ್ಲ. ಕೆಲವು ಭಾಗದಲ್ಲಿ ಮಾತ್ರ ಒಳ್ಳೆಯ ಭೂಮಿ ಇದೆ. ಕಂದಾಯ ಕಡಿಮೆ ಮಾಡಿ ಎಂದು ನಾನು ಹೇಳುತ್ತಿಲ್ಲ. ರೀಸೆಟ್ಲ್‌ಮೆಂಟ್ ಮಾಡುವಾಗ ಈ ರೀತಿ ಸಣ್ಣ ಅನ್ಯಾಯಗಳು ಆಗಿರುವುದರಿಂದ ಸರ್ಕಾರದವರು ಈಗ ಹುಕುಂ ಹೊರಡಿಸಿರುವಂತೆ 1965 ರ ಹಿಂದಿನ ಕಂದಾಯವನ್ನೇ ವಸೂಲಿ ಮಾಡಬೇಕೆಂದು ನನ್ನ ನಮ್ರವಾದ ಸೂಚನೆಯಾಗಿದೆ. ನೀರಾವರಿ ಪ್ರದೇಶದಲ್ಲಿ ರೀಸೆಟ್ಲ್‌ಮೆಂಟ್ ಪ್ರಕಾರ ಅನ್ಯಾಯವಾಗಿದೆಯೆಂದು ಬಯಲುಸೀಮೆಯವರು ರಿಟ್ ಹಾಕಿದ್ದಾರೆ. ಆದರೆ ಅವರಿಗೆ ಮಾತ್ರ ಅನ್ಯಾಯವಾಗಿದೆಯೆಂದು ಹೇಳುವುದು ತಪ್ಪಾಗುತ್ತದೆ. ಸರ್ಕಾರದವರು ಬಯಲುಸೀಮೆಯವರಿಗೆ ಮಾತ್ರ ಅನುಕೂಲ ಮಾಡಿಕೊಡುವುದಾದರೆ ನಮ್ಮ ಭಾಗದವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದಕಾರಣ ರೀ-ಸೆಟ್ಲ್‌ಮೆಂಟ್ ಮಾಡಿದಾಗ ಏನು ಅನ್ಯಾಯಗಳಾಗಿವೆ, ಅದನ್ನು ಸರಿಪಡಿಸುವವರೆಗೆ ಹಿಂದಿನ ಕಂದಾಯವನ್ನೇ ಅಮಲ್‌ನಲ್ಲಿ ತರಬೇಕೆಂದು ನಾನು ನಮ್ರಪೂರ್ವಕವಾಗಿ ಹೇಳಬಯಸುತ್ತೇನೆ.

ಇನ್ನು ಎರಡನೆಯ ವಿಷಯವೆಂದರೆ ಸರ್ಕಾರದವರು ದೇಶದ ಅಭಿವೃದ್ಧಿಯ ಸಲುವಾಗಿ ಮತ್ತು ರೈತರ ಅಭಿವೃದ್ಧಿಯಸಲುವಾಗಿ ಅನೇಕ ಕಡೆಗಳಲ್ಲಿ ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ಬಾವಿ ತೆಗೆಸುವುದಕ್ಕೆ ಮತ್ತು ಪಂಪ್‌ಸೆಟ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಹಣವನ್ನು ಸಾಲವಾಗಿ ಕೊಡಿಸುತ್ತಿದ್ದಾರೆ. ಈ ವಿಚಾರದಲ್ಲಿ ಮೊದಲು ಬಹಳ ಅನಾನುಕೂಲಗಳು ಇದ್ದವು, ತಾಲ್ಲೂಕ್‌ಮಟ್ಟದ ಅಧಿಕಾರಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು ಆದೇಶಕೊಡುವವರಗೂ ಸಹ ಸಾಲಸಿಗುವುದು ಕಷ್ಟವಾಗುತ್ತಿತ್ತು. ಈಗ ಈ ತೊಂದರೆಗಳು ದೂರವಾಗಿವೆ. ಈಗ ಗ್ರಾಮಸ್ಥರೇನಾದರೂ ಗ್ರಾಮಾಧಿಕಾರಿಗಳಹತ್ತಿರ ಹೋಗಿ ಮೂರುವರ್ಷದ ಪಹಣಿ ಲೆಕ್ಕವನ್ನು ಕೊಡಿ ಎಂದು ಕೇಳಿದರೆ ಕೊಡದೆ ಬಹಳ ಕಷ್ಟ ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ಮೇಲಿನ ಅಧಿಕಾರಿಗಳು ಕೆಳಗಿನ ಅಧಿಕಾರಿಗಳಿಗೆ ಸರ್ಕ್ಯುಲರ್ ಮೂಲಕ ತಿಳಿಸಿದ್ದರೂ ಸಹ, ಕೆಳಗಿನ ಅಧಿಕಾರಿಗಳು ಸರಿಯಾಗಿ ನಡೆದುಕೊಳ್ಳುತ್ತಿಲ್ಲ. ಇತ್ತೀಚೆಗೆ ತಹಶೀಲ್‌ದಾರರ ಆಫೀಸ್‌ನಲ್ಲಿ ಮೂರು ವರ್ಷದ ಪಹಣಿ ಲೆಕ್ಕ ಸಿಗುವಂತಹ ವ್ಯವಸ್ಥೆಯಾಗಿದೆ. ಈ ಬಗ್ಗೆ ಫಾರಂಗಳು ಸಹ ಪ್ರಿಂಟ್ ಆಗುತ್ತಿವೆ. ಆದಷ್ಟು ಜಾಗ್ರತೆ ಗ್ರಾಮಸ್ಥರಿಗೆ ಶಾನುಭೋಗರಿಂದ ಸಿಗಬೇಕಾಗಿದ್ದ ಪಹಣಿ ಲೆಕ್ಕ ತಹಶೀಲ್‌ದಾರರ ಆಫೀಸ್‌ನಲ್ಲಿಯೇ ಸಿಗುವಂತೆ ಮಾಡಿದರೆ ಸಣ್ಣ ಸಣ್ಣ ರೈತರಿಗೆ ಬಹಳ ಅನುಕೂಲವಾಗುತ್ತದೆಂದು, ಇದನ್ನು ತೀವ್ರ ಗತಿಯಿಂದ ಮಾಡಿಸಬೇಕೆಂದು ಸರ್ಕಾರದವರಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರವಾದ ಕುಷ್ಟಗಿಯಲ್ಲಿ ಅನೇಕ ವರ್ಷಗಳಿಂದ ಸರಿಯಾಗಿ ಮಳೆಬೆಳೆಯಾಗದೆ ಜನರಿಗೆ ಬಹಳ ತೊಂದರೆಯಾಗಿದೆ. ನನ್ನ ಕ್ಷೇತ್ರ ಬಯಲು ಪ್ರದೇಶ. ಸರಿಯಾಗಿ ಮಳೆಯಾದರೆ ಮಾತ್ರ ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಈಗ ನಾಲ್ಕಾರು ವರ್ಷಗಳಿಂದ ಸರಿಯಾಗಿ ಮಳೆ ಬೆಳೆಯಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿರುವ 177 ಹಳ್ಳಿಗಳ ಪೈಕಿ 172 ಹಳ್ಳಿಗಳಲ್ಲಿ ಆಣೇವಾರಿ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಉಳಿದ 5 ಹಳ್ಳಿಗಳಲ್ಲಿ ಕಂದಾಯ ವಸೂಲ ಮಾಡಬೇಂದು ಇದೆ. ಸರಕಾರದಲ್ಲಿರುವ ಲೆಕ್ಕದಲ್ಲೇ ನೋಡಿದರೆ ಒಂದೊಂದು ಹಳ್ಳಿಯಲ್ಲಿರುವ ಆಣೆವಾರಿ 15 ಪೈಸೆಇಲ್ಲ 10ಪೈಸೆ ಇದೆ ಎನ್ನುವುದು ನಮಗೆ ಕಂಡುಬರುತ್ತದೆ; ಮತ್ತು ಇದಕ್ಕೂ ಕಮ್ಮಿ ಕೆಲವು ಕಡೆ ಇದೆ. ಬಹಳ ಹೆಚ್ಚು ಎಂದರೆ ಸುಮಾರು 37 ಪೈಸೆವರೆಗೆ ಇದೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಇನ್ನೂ ಸರ್ವೆಸೆಟಲ್‌ಮೆಂಟ್ ಕೆಲಸವೇ ಆಗಿಲ್ಲ. ಸರಕಾರ ಈಗ ಕಂದಾಯ ವಸೂಲಿಯನ್ನು ನಿಲ್ಲಿಸಿ ರೈತರಿಗೆ ಅನುಕೂಲವಾಗುವ ಕ್ಷಾಮ ಪರಿಹಾರ ಕಾರ್ಯಕ್ರಮಗಳನ್ನು ಆದಷ್ಟು ತೀವ್ರವಾಗಿ

(ಶ್ರೀ ಇ. ಪುಂಡಲೀಕಪ್ಪ)

ಕೈಗೊಂಡು ಅದಕ್ಕಾಗಿ ಹೆಚ್ಚು ದುಡ್ಡು ಕೊಟ್ಟು ಕೆಲಸ ಮಾಡಿದುದಕ್ಕಾಗಿ ನಾನು ಸರಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಾಧಾರಣವಾಗಿ ಈ ಇಪ್ಪತ್ತು ವರ್ಷಗಳಲ್ಲಿ ಇಂತಹ ತ್ವರಿತವಾದ ಕೆಲಸಗಳು ಯಾವಾಗಲೂ ನಡೆದಿರಲಿಲ್ಲ ಮತ್ತು ಯಾವ ಕಾಲದಲ್ಲೂ ಆಗದೇ ಇದ್ದಂತಹ ಕೆಲಸಗಳನ್ನು ಇಷ್ಟು ತೀವ್ರಗತಿಯಿಂದ ಇಲ್ಲಿನ ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದಲ್ಲಿರುವ ಅಧಿಕಾರಿಗಳು ಹಾಗೂ ನಮ್ಮ ಮಂತ್ರಿಗಳು ಉಪ ಮಂತ್ರಿಗಳು ಎಲ್ಲರೂ ಕೂಡಿಕೊಂಡು ಬಹಳ ತ್ವರಿತವಾಗಿ ಎಲ್ಲ ಕೆಲಸಗಳನ್ನು ಮಾಡಿದುದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಇಲ್ಲಿ ಸಲ್ಲಿಸುತ್ತೇನೆ. ಆದರೆ ಇದರೊಳಗೆ ಇನ್ನು ಉಳಿದಿರುವ ಕೆಲಸಗಳನ್ನು ತೀವ್ರವಾಗಿ ಮಾಡಿ ಮುಗಿಸಬೇಕೆಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿರುವ ಕುಷ್ಟಗಿ, ಲಿಂಗಸಗೂರು ಹಾಗೂ ಕೊಪ್ಪಳ ಇವು ಬಯಲು ಸೀಮೆಗಳು ಎಂದು ಕೆಲವಾರು ಸ್ಕೀಂಗಳನ್ನು ಹಾಕಿಕೊಂಡಿದ್ದಾರೆ. ಅವನ್ನು ತೀವ್ರವಾಗಿ ತೆಗೆದುಕೊಂಡು ಬೇಗನೆ ಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನೀರಾವರಿ ಕೆಲಸಗಳನ್ನು ಮಾಡಲು ಅನೇಕ ಕಡೆ ಯೋಜನೆಗಳನ್ನು ಮಾಡುತ್ತಿದ್ದಾರೆ ಇದಕ್ಕೆ ಅನುಕೂಲವಾಗುವಂತೆ ಒಂದು ಟ್ರಾಕ್ಟರು ಯೂನಿಟ್ ಎಂದು ಮಾಡಿದ್ದಾರೆ, ಇದರಲ್ಲಿ ಒಂದೆರಡು ಟ್ರಾಕ್ಟರುಗಳು ಇದ್ದರೂ ಇದರಿಂದ ಹೆಚ್ಚು ಉಪಯೋಗ ಮಾಡಲು ಆಗುತ್ತಿಲ್ಲ. ಆದುದರಿಂದ ತಕಾವಿ ಸಾಲದ ರೂಪದಲ್ಲಿ ಟ್ರಾಕ್ಟರುಗಳನ್ನು ಪಡೆಯಲು ಅನುಕೂಲವಾಗುವಂತೆ ಈ ಟ್ರಾಕ್ಟರು ಯೂನಿಟ್ಟನ್ನು ಮಾಡಿಕೊಡಬೇಕು ಎಂದು ಸರಕಾರದಲ್ಲಿ ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅನೇಕ ಕಡೆ ನೀರಾವರಿ ಬಾವಿಗಳಿಗಾಗಿ ಸಾಲ ಕೊಡುತ್ತಿದ್ದಾರೆ. ಆದರೆ ಕೆಲವು ಕಡೆಗಳಲ್ಲಿ ಬಾವಿಗಳನ್ನು ತೋಡುವಾಗ ಕಲ್ಲು ಸಿಗುತ್ತದೆ. ಇಂತಹ ಕಲ್ಲುಬಂಡೆಗಳನ್ನು ಒಡೆದು ನೀರು ತೆಗೆಯಬೇಕಾಗುತ್ತದೆ. ಕೆಲವು ವೇಳೆ ನೀರು ಬಂದರೂ ಬರುತ್ತೆ, ಇಲ್ಲದಿದ್ದರೂ ಇಲ್ಲ. ಆದುದರಿಂದ ಇಂತಹ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಮಾಡಲು ಅನುಕೂಲ ಮಾಡಿಕೊಡಬೇಕು.

ಇನ್ನು ಶಿಕ್ಷಣ ಖಾತೆಯ ಬಗ್ಗೆ ಹೇಳಬೇಕು ಎಂದರೆ ನಮ್ಮ ಹಳ್ಳಿಗಳಲ್ಲಿರುವ ಶಿಕ್ಷಕರು ಸ್ವಲ್ಪವೇ ಮಂದಿ ಇದ್ದರೂ ಇವರು ಸುಮಾರು ಒಂದೇ ಸ್ಥಳದಲ್ಲಿ ಇಪ್ಪತ್ತು ವರ್ಷಗಳಿಂದಲೂ ಇದ್ದಾರೆ. ಇದರ ಕಡೆಗೆ ಸರಕಾರ ನಿಗಾ ಇಟ್ಟು ಇವರನ್ನು ಬೇರೆ ಕಡೆಗೆ ವರ್ಗ ಮಾಡಬೇಕು. ಸರಕಾರ ಕೆಲವು ಕಡೆಗಳಲ್ಲಿ ಒಬ್ಬರು ಅಧಿಕಾರಿಗಳನ್ನು ಮೂರು ವರ್ಷಕ್ಕೆ ಮೇಲ್ಪಟ್ಟು ಇಟ್ಟುಕೊಳ್ಳಬಾರದು ಎಂದು ಮೂರು ವರ್ಷಕ್ಕೊಮ್ಮೆ ವರ್ಗಾವರ್ಗಿಗಳನ್ನು ಮಾಡುತ್ತಿರುತ್ತಾರೆ. ಆ ಪ್ರಕಾರ ಎಜುಕೇಷನ್ ಇಲಾಖೆಯಲ್ಲಿ ಮಾಡುತ್ತಿಲ್ಲ ಎಂದು ತೋರುತ್ತೆ. ನಮ್ಮಲ್ಲಿ ಸುಮಾರು ಇಪ್ಪತ್ತು ವರ್ಷಗಳಾದರೂ ಇನ್ನೂ ಅವರನ್ನು ಬೇರೆ ಜಾಗಕ್ಕೆ ವರ್ಗ ಮಾಡಿಲ್ಲ.

ಕೊನೆಯದಾಗಿ ಕುಷ್ಟಗಿಯಲ್ಲಿರುವ ಸರಕಾರಿ ಹೈಸ್ಕೂಲಿಗೆ ಒಂದು ಕಟ್ಟಡವನ್ನು ಕಟ್ಟಿಸಿಕೊಡಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಜಾಲಿಸಟಗಿ (ಭಟ್ಕಳ್).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ತಾತ್ವಿಕ ದೃಷ್ಟಿಯಿಂದ ವಿರೋಧಿಸುತ್ತಾ, ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ಅವರು ಇಲ್ಲಿ ಮಾಡಿರುವ ಭಾಷಣದಲ್ಲಿ ಭೂಸುಧಾರಣೆ ಬಗ್ಗೆ ಯಾವುದೇ ವಿಷಯ ಪ್ರಸ್ತಾಪಕ್ಕೆ ಬರಲಿಲ್ಲ. ಮುಂಬಯಿ ಕರ್ಣಾಟಕದವರಿಗೆ ಸ್ಟೇಟ್ ರೀಆರ್ಗನೈಸೇಷನ್ ಮಾಡಿರುವುದು ಒಂದು ಶಾಪವಾಗಿ ಪರಿಣಮಿಸಿದೆ. ಏಕೆಂದರೆ 1956-57 ನೇ ಸಾಲಿನವರೆಗೂ ರೈತರು ಸುಗ್ಗಿಯಲ್ಲಿ ಭೂಮಾಲೀಕರಿಗೆ ಅವರ ಗೇಣಿಯನ್ನು ಸರಿಯಾಗಿ ಕೊಡುತ್ತಿದ್ದರು. ಆದರೆ ಸ್ಟೇಟ್ ರೀಆರ್ಗನೈಸೇಷನ್ ಆದ ಮೇಲೆ ಭೂಸುಧಾರಣೆ ಕಾಯಿದೆ ಬಂದು ಇದರಲ್ಲಿ ಮೂಲಭೂತವಾದ ಧ್ಯೇಯ ಏನಿತ್ತೋ ಅದರಂತೆ ರೈತರು ಭೂಮಾಲೀಕರಿಗೆ ಎಕರೆಗೆ 20 ರೂಪಾಯಿಯಂತೆ ಗೇಣಿ ಕೊಡಬೇಕೆಂದು ಇದೆ. ಆದರೆ ಹಿಂದಿನ ಮುಂಬಯಿ ಸರಕಾರದ ಕಾಯಿದೆ ಪ್ರಕಾರ ಸಾಧಾರಣವಾಗಿ ಗೇಣಿ ಎಕರೆಗೆ 200 ರಿಂದ 300 ರೂಪಾಯಿಗಳವರೆಗೆ ಇತ್ತು. ಈಗ ನಮ್ಮ ಭಾಗದ ರೈತರು ಹೊಸ ಕಾಯಿದೆಯಲ್ಲಿ ಯಾವ ರೀತಿಯ ಗೇಣಿ ಇದೆಯೋ ಅದರಂತೆ ಕೊಡುತ್ತೇವೆ ಎಂದು ಹೇಳಲು ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ ಸರಕಾರ ಭೂಸುಧಾರಣೆ ಬಗ್ಗೆ ಯಾವ ಕಾಯಿದೆಯನ್ನೂ ಜಾರಿಗೆ ತಂದಿಲ್ಲ. ಸರ್ಕಾರ ತರುವ ಕಾಯಿದೆಯಿಂದ ನಮ್ಮ ರೈತರಿಗೆ ತೊಂದರೆಯಾಗುತ್ತದೆ

ಎಂದು ಇದಕ್ಕಾಗಿ ಒಂದು ಚಳುವಳಿಯನ್ನು ಹೂಡಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ಆದಷ್ಟು ಬೇಗ ಭೂಸುಧಾರಣೆ ಕಾನೂನನ್ನು ಮುಂದಿನ ವರ್ಷದಲ್ಲಾದರೂ ತರಲು ಸರಕಾರ ಪ್ರಯತ್ನ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಭೂಸುಧಾರಣೆ ಕಾಯಿದೆಯಿಂದ ಮೈಸೂರಿನಲ್ಲಿರುವ ಭೂಮಾಲೀಕರಿಗೂ ತೃಪ್ತಿ ಇಲ್ಲ. ಏಕೆಂದರೆ ಈ ಕಾಯಿದೆಯಲ್ಲಿ ಗೇಣಿ ಐದನೇ ಒಂದು ಅಂಶಕೊಡಬೇಕು ಎಂದಿದೆ. 1965-66 ನೇ ಸಾಲಿನಿಂದ ಗೇಣಿ ಬಾಕಿ ಇದೆ. ಎಂದು ಇಂದು ಲ್ಯಾಂಡ್ ಟ್ರಿಬುನಲ್‌ನಲ್ಲಿ ಎಷ್ಟೋ ಕೇಸುಗಳು ಇವೆ. ಇದರ ಇನ್‌ವೆಸ್ಟಿಗೇಷನ್ ಸರಿಯಿಲ್ಲ ಮತ್ತು ಇಲ್ಲಿನ ರೈತರು ಈಗಿರುವ ಟೆನೆನ್ಸಿ ಕಾಯಿದೆ ಪ್ರಕಾರ ತೆರಿಗೆ ಕೊಡಬೇಕೆಂದು ಕೇಳಿದರೆ ಕೊಡುವುದಿಲ್ಲ ಎನ್ನುವ ದೂರುಗಳು ಈಚೆಗೆ ಬರುತ್ತಿವೆ ಮತ್ತು ಗೇಣಿಯನ್ನು ಭೂಮಾಲೀಕರು ವಸೂಲು ಮಾಡುವುದಕ್ಕೂ ಆಗುತ್ತಿಲ್ಲ. ಈಗಿನ ಕಾಯಿದೆಯಲ್ಲಿ ಎಕರೆಗೆ 20 ರೂಪಾಯಿ ನಂತೆ ಗೇಣಿ ಕೊಡಬೇಕೆಂದು ಇದೆ. ಹಿಂದಿನ ಮುಂಬಯಿ ಕಾಯಿದೆಯಂತೆ ಎಕರೆಗೆ 200 ರೂಪಾಯಿ ಗಳವರೆಗೆ ಗೇಣಿ ಕೊಡುತ್ತಿದ್ದರು. ಇದನ್ನೇ ಮುಂದೆಯೂ ಅನುಸರಿಸುವುದು ಸೂಕ್ತವಾಗಿದೆ. ಇಲ್ಲದಿದ್ದರೆ ನಮ್ಮ ಕಡೆಯ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಈ ಕಾಯಿದೆಯಲ್ಲಿ ಸ್ವಲ್ಪ ದೋಷಗಳು ಇವೆ ಎಂದೂ ಇದು ಪ್ಲಾನಿಂಗ್ ಕಮಿಷನ್ ಮುಂದೆ ಹೋಗಿದೆ ಎಂದೂ ಕೇಳುತ್ತೇವೆ. ಅವರಿಂದ ಬೇಗನೆ ಭೂಸುಧಾರಣೆ ಕಾಯಿದೆ ತೀವ್ರವಾಗಿ ಬರುವಂತೆ ಪ್ರಯತ್ನ ಮಾಡಬೇಕು. ಗೇಣಿ ಬಾಕಿ ಇಡುವುದು ಸರಿಯಲ್ಲ. ಭೂಮಾಲೀಕರಿಗೆ ನ್ಯಾಯವಾಗಿ ಕೊಡಬೇಕಾಗಿರುವ ಗೇಣಿಯನ್ನು ಉಳಿಸಿಕೊಳ್ಳದೆ ಕಂತಿನ ಮೇಲಾದರೂ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದು, ನಮ್ಮ ಭಾಗದಲ್ಲೇ ಶೇಕಡಾ 81 ರಷ್ಟು ಅರಣ್ಯ ಇದೆ. ಮಲೆನಾಡಿನಲ್ಲಿ ಶೇಕಡಾ 60 ರಷ್ಟು ಇದೆ, ಆದರೆ ಸರಕಾರ ಇದರ ಬಗ್ಗೆ ಒಂದು ನಿರ್ದಿಷ್ಟವಾದ ಆಲ್ ಇಂಡಿಯಾ ಪಾಲಿಸಿ ವಹಿಸುತ್ತಿಲ್ಲ. ನಮ್ಮಲ್ಲಿ ಶೇಕಡಾ 81 ರಷ್ಟು ಇರುವ ಅರಣ್ಯ ಪ್ರದೇಶನ್ನು ಇನ್ನೂ ಹೆಚ್ಚಾಗಿ ಉತ್ತಮ ಮಾಡುವ ಪ್ರಯತ್ನ ನಡೆಸಬೇಕು ಎಂದು ಮಾನ್ಯ ಅರ್ಥ ಸಚಿವರೂ ತಮ್ಮ ಭಾಷಣದಲ್ಲೂ ಹೇಳಿದ್ದಾರೆ. ಆದರೆ ನಮ್ಮ ಅರಣ್ಯದಲ್ಲಿ ಇರುವ ಪ್ರದೇಶಗಳಿಂದ ಜಮೀನು ಇಲ್ಲದವರಿಗೆ ವ್ಯವಸಾಯ ಮಾಡಲು ಕೊಡಲಿಕ್ಕೆ ಸಾಕಷ್ಟು ಭೂಮಿ ಇದೆ, ಸುಮಾರು ಎರಡು ಲಕ್ಷ ಎಕರೆಗಳಷ್ಟು ಪ್ರದೇಶವನ್ನು ಭೂಮಿ ಇಲ್ಲದವರಿಗೆ ಕೊಡಬಹುದು. ಆದರೆ ಸರಕಾರ ಒಂದು ಲಕ್ಷ ಎಕರೆ ಕೊಡಬಹುದು ಎಂದು ಈಚೆಗೆ ಜಾಹೀರು ಮಾಡಿದ್ದಾರೆಯೇ ವಿನಾ ಅದು ಇನ್ನೂ ಕೃತಿಗೆ ಇಳಿಯಲಿಲ್ಲ. ಸುಮಾರು 8–9 ವರ್ಷಗಳಿಂದಲೂ ಇಲ್ಲಿನ ರೈತರು ತಾಲ್ಲೂಕಾ ಆಫೀಸುಗಳಿಗೆ ಆ ನಂತರ ಅಸಿಸ್ಟೆಂಟ್ ಕಮಿಷನರಿಗೆ ಆಮೇಲೆ ಡೆಪ್ಯುಟಿ ಕಮಿಷನರವರಿಗೆ ಹೋಗಿ ಭೂಮಿ ಕೊಡಬೇಕೆಂದು ಕೇಳಿದರೆ ಅಲ್ಲಿನ ಅಧಿಕಾರಿಗಳು ಈಗಿರುವ ಲ್ಯಾಂಡ್ ಗ್ರ್ಯಾಂಟ್ ರೂಲ್ಸು ಸರಿಯಾಗಿಲ್ಲ, ಇವನ್ನು ಶೀಘ್ರದಲ್ಲೇ ದುರಸ್ತು ಮಾಡುತ್ತೇವೆ. ಸರಕಾರಕ್ಕೆ ಇದನ್ನು ಅನುಮತಿಗಾಗಿ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಹೀಗೆ ನಿಧಾನ ಮಾಡುತ್ತಾ ಹೋದರೆ ರೈತರಿಗೆ ಭೂಮಿ ಕೊಟ್ಟಂತಾಗುವುದಿಲ್ಲ. ಆದಷ್ಟು ಬೇಗ ಸರಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ರೈತರಿಗೆ ಭೂಮಿ ಕೊಡುವ ವ್ಯವಸ್ಥೆ ಮಾಡಿದರೆ ಈಗಿರುವ ಆಹಾರ ಸಮಸ್ಯೆ ಬಗೆಹರಿಯುತ್ತದೆ ಮತ್ತು ಬೇಕಾದಷ್ಟು ಆಹಾರವೂ ನಮ್ಮ ಜನಕ್ಕೆ ಸಿಗುತ್ತದೆ.

6-30 P.M.

ಇಡೀ ಮೈಸೂರು ದೇಶದಲ್ಲಿ ನಮ್ಮ ಜಿಲ್ಲೆ ನಾಲ್ಕನೆಯದು. ನಮ್ಮ ಕಡೆ ಒಂದು ಲಕ್ಷ ಎಕರೆ ಜಮೀನನ್ನು ಬಿಡುಗಡೆ ಮಾಡಿ ಜನರಿಗೆ ಹಂಚಬೇಕು ಬಾಕಿ ಕಡೆ ಮಳೆ ಬೀಳುವುದಿಲ್ಲ ನಮ್ಮಲ್ಲಿ ಮಳೆ ಬರುತ್ತದೆ ಮತ್ತು ಜಮೀನೂ ಇವೆ. ಜನರು ಬೇಸಾಯ ಮಾಡಲು ತಯಾರಿದ್ದಾರೆ. ಈ ತರಹ ಪರಿಸ್ಥಿತಿ ಇದ್ದರೂ ಕೂಡ ಜಮೀನು ವಿತರಣೆ ಮಾಡದೆ ಇದ್ದಾರೆ. ಆದ್ದರಿಂದ ಸರ್ಕಾರದವರು ತೆಗೆದುಕೊಂಡ ನಿರ್ಣಯದಂತೆ ಒಂದು ಲಕ್ಷ ಎಕರೆ ಜಮೀನನ್ನು ಆದಷ್ಟು ಬೇಗ ರೈತರಿಗೆ ಕೊಡುವಂತೆ ಕ್ರಮ ತೆಗೆದುಕೊಳ್ಳಿ ಎಂದು ನಾನು ಸರ್ಕಾರದವರನ್ನು ಬೇಡಿಕೊಳ್ಳುತ್ತೇನೆ.

ಮೂರನೆಯದಾಗಿ ಕಂದಾಯದ ಹಣ ಲೋಕಲ್‌ಬೋರ್ಡಿಗೂ, ಪಂಚಾಯತಿಗೂ ಕೊಡುತ್ತೇವೆ ಎಂದು ಸರ್ಕಾರದವರು ಜಾಹೀರು ಮಾಡಿದ್ದಾರೆ. ನಮ್ಮಲ್ಲಿ ಅರಣ್ಯ ಹೆಚ್ಚಿಗೆ ಇರುವುದರಿಂದ ಕಂದಾಯ ಬಹಳ ಕಡಿಮೆ. ತಾಲ್ಲೂಕ್ ಬೋರ್ಡಿಗೂ ಮತ್ತು ಪಂಚಾಯಿತಿಗೂ ಏನು ಕಂದಾಯ ಸಿಕ್ಕುತ್ತದೆ ಅದು ಬಹಳ ಕಡಿಮೆ. ಇಡೀ ಮೈಸೂರು ದೇಶದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯದಿಂದ ಬರುವಂಥ ಉತ್ಪನ್ನ ಬಾಕಿ ಕಡೆ ಎಲ್ಲೂ ಬರುವುದಿಲ್ಲ. ಆದುದರಿಂದ ನಮ್ಮ ಕಡೆ ಅರಣ್ಯದಿಂದ

(ಶ್ರೀ ಎಂ. ಎಂ. ಜಾಲಿಸಟಗಿ)

ಬರುವ ಉತ್ಪನ್ನದಲ್ಲಿ ಶೇಕಡ 15 ರಷ್ಟನ್ನಾದರೂ ತಾಲ್ಲೂಕು ಬೋರ್ಡಿಗೂ, ಪಂಚಾಯಿತಿಗೂ ಕೊಡುವಂತೆ ಸರ್ಕಾರದವರು ಒಂದು ಸವಲತ್ತು ಕೊಡುವುದು ಅವಶ್ಯ ಇದೆ. ಏಕೆಂದರೆ ಅಲ್ಲಿ ಕಂದಾಯ ಬಹಳ ಕಡಿಮೆ. ಇದರಿಂದ ಇಲ್ಲಿ ಸಾಕಾದಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲದೇ ಹೋಗಿದೆ.

ಇನ್ನು ಫಿಷರೀಸ್ ವಿಷಯ. ಮಾನ್ಯ ಅರ್ಥ ಸಚಿವರು ಫಿಷರೀಸ್ ಬಗ್ಗೆ ಯೋಗ್ಯವಾದ ಕ್ರಮ ತೆಗೆದುಕೊಳ್ಳುತ್ತೇವೆ, 510 ಮೆಕನೈಸ್ಡ್ ಬೋಟ್ಸ್ ಕೊಡುತ್ತೇನೆ ಎಂದು ಹೇಳಿದರು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇವೆರಡೂ ಕಡೆ ಕರಾವಳಿ ಪ್ರದೇಶ ಸರಿಸಮಾನವಾಗಿದ್ದರೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಾದಷ್ಟು ಅಭಿವೃದ್ಧಿ ಆಗಿಲ್ಲ. ಮೆಕನೈಸ್ಡ್ ಬೋಟ್ಸ್ ಕಡಿಮೆ. ನಮ್ಮಲ್ಲಿ ಇಂಡೋನಾರ್ವೇಜಿಯನ್ ಸ್ಕೀಮ್ 1962-63 ರಲ್ಲಿ ಬಂದಿರಬಹುದು. ಇಲ್ಲಿಯವರೆಗೆ ಅದು ಕಾರ್ಯರೂಪಕ್ಕೆ ಬರಲಿಲ್ಲ. ಇಂಡೋನಾರ್ವೇಜಿಯನ್ ಸ್ಕೀಮು ಉತ್ತರ ಕನ್ನಡ ಜಿಲ್ಲೆಗೆ ಮಂಜೂರಾಗಿದೆ ಎಂದು ಹೇಳುತ್ತಾರೆ. ಏತಕ್ಕೆ ಸರಿಯಾಗಿ ಕೆಲಸ ಮಾಡುವುದಿಲ್ಲವೋ, ಅದರಲ್ಲಿ ಬಾಟಲ್‌ನೆಕ್ ಏನು ಇದೆ ಎನ್ನುವುದನ್ನು ಮಾನ್ಯ ಫಿಷರೀಸ್ ಮಿನಿಸ್ಟರ್ ಹೇಳಬೇಕು. ಕಾರವಾರದಲ್ಲಿ ಫ್ರೀಜಿಂಗ್ ಪ್ಲಾಂಟ್ ಮಾಡಬೇಕು ಎಂದು ಹೇಳುತ್ತಿದ್ದಾರೆ. ಅದು ಅಸ್ತಿತ್ವದಲ್ಲಿ ಬರಲಿಲ್ಲ. ಇದನ್ನು ಬೇಗ ಮಾಡುವುದು ಅವಶ್ಯ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸ ಆಗಿದೆ ಎಂದು ನಾವು ಅವರ ಮೇಲೆ ಅಸೂಯೆಯಿಂದ ಹೇಳುತ್ತಾ ಇಲ್ಲ. ನಮ್ಮ ಜಿಲ್ಲೆ ಹಿಂದೆ ಇದೆ. ಅದು ಮುಂದೆ ಬರುವಂತೆ ಸರ್ಕಾರದವರು ಆದಷ್ಟು ಮುತುವರ್ಜಿ ವಹಿಸಬೇಕು. ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮ ಜಿಲ್ಲೆಯ ಮಂತ್ರಿಗಳಾಗಿದ್ದರೂ ಕೂಡ ಬಾಕಿ ಜಿಲ್ಲೆಯವರು ಏನಾದರೂ ತಿಳಿದುಕೊಳ್ಳುತ್ತಾರೆ ಎಂದು ಬಹಳ ಸಂಕೋಚದಿಂದ ಉತ್ತರ ಕನ್ನಡ ಜಿಲ್ಲೆಗೆ ಸಹಾಯ ಮಾಡುತ್ತಾ ಇಲ್ಲ. ಅದು ಹಾಗಾಗಬಾರದು.

ಇನ್ನು ಆಹಾರ ಸಮಸ್ಯೆಯನ್ನು ಬಿಡಿಸಬೇಕಾದರೆ ನಿಸರ್ಗ ಕೊಟ್ಟ ಆಹಾರದಿಂದ ಬಹುಮಟ್ಟಿಗೆ ಸಾಧ್ಯವಾಗುತ್ತದೆ ಎಂದು ಶ್ರೀ ದಯಾನಂದಸಾಗರ್ ಅವರು ಹೇಳಿದರು. ಈ ಪ್ರೋಟಿನ್‌ಫುಡ್ಡನ್ನು ಹಿಡಿದು ತರುವ ವ್ಯವಸ್ಥೆಗೆ ಸರ್ಕಾರದವರು ಅನುಕೂಲ ಮಾಡಿಕೊಟ್ಟರೆ ಬಹಳ ಜನ ಮುಂದೆ ಬರುತ್ತಾರೆ. ಅಲ್ಲಿನ ಜನಕ್ಕೂ ಕೆಲಸ ಸಿಕ್ಕಿದಂತಾಗುತ್ತದೆ, ನಮ್ಮ ಆಹಾರ ಸಮಸ್ಯೆಯನ್ನೂ ಬಿಡಿಸಲಿಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಆದುದರಿಂದ ಸರ್ಕಾರದವರು ಇದರ ಕಡೆ ಲಕ್ಷ್ಯ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

[Mr. Speaker in the Chair]

ಇನ್ನು ನಮ್ಮಲ್ಲಿ ಅರಣ್ಯ ಬಹಳ ಇದೆ. ಆದುದರಿಂದ ಅರಣ್ಯಕ್ಕೆ ಸಂಬಂಧಪಟ್ಟಂತೆ ಕೈಗಾರಿಕೆಗಳನ್ನು ಬೆಳೆಸಬೇಕು ಎಂದು ಕೇಳಿಕೊಳ್ಳುತ್ತೇನೆ. ಟೈಲ್‌ಫ್ಯಾಕ್ಟರಿ ಮಾಡಿದರು. ಅದು ಹೆಸರಿಗೆ ಇದೆಯೇ ಹೊರತು ಅಲ್ಲಿ ಕಾಡು ಬೆಳೆದುಕೊಂಡಿದೆ. ಅಂತಹ ಇಂಡಸ್ಟ್ರೀಸ್ ಬಗ್ಗೆ ಯೋಗ್ಯ ಲಕ್ಷ್ಯ ತೆಗೆದುಕೊಳ್ಳಬೇಕು. ನಮ್ಮಲ್ಲಿ ಕೆಲವು ವಿಶಿಷ್ಟ ಪರಿಸ್ಥಿತಿ ಇದೆ. ಸರ್ಕಾರದವರು 15 ಸಾವಿರ ರೂಪಾಯಿ ಬರುವ ಕಡೆ ತಲಾಟಿ ನೇಮಿಸಬಹುದು ಎಂದು ಮಾಡಿದ್ದಾರೆ. ಎಲ್ಲಿ 5 ಸಾವಿರ ರೂಪಾಯಿ ತೆರಿಗೆ ಕೊಡುತ್ತಾರೋ ಅಲ್ಲಿ ತಲಾಟಿ ಇರಬೇಕೆಂದು ಮೊದಲು ನಿರ್ಣಯ ಮಾಡಿದ್ದರು. ಈಗ 15 ಸಾವಿರ ರೂಪಾಯಿ ಬರುವ ಕಡೆ ಇರಬೇಕು ಎಂದು ಮಾಡಿಬಿಟ್ಟರೆ ಕೆಲಸ ಆಗುವುದಿಲ್ಲ. ಏಕೆಂದರೆ ನಮ್ಮಲ್ಲಿ ತುಂಡು ಜಮೀನುಗಳು ಇವೆ. ಆದುದರಿಂದ ಆ ಕಡೆ ಲಕ್ಷ್ಯ ಕೊಟ್ಟು 5 ಸಾವಿರ ರೂಪಾಯಿ ಬರುವ ಕಡೆ ತಲಾಟಿ ನೇಮಿಸುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲಿ ಉಗ್ರಾಣಿ ಪರಿಸ್ಥಿತಿ ಬಹಳ ಕಷ್ಟ ಇದೆ. ಬಾಕಿ ಕಡೆ ವತನದಾರರು ಇದ್ದು ಉಗ್ರಾಣಿ ಕೆಲಸ ಮಾಡುತ್ತಾ ಇದ್ದಾರೆ. ನಮ್ಮಲ್ಲಿ ಹಾಗೆ ಇಲ್ಲ, ಅವರು ಇಡೀ ದಿವಸ ಕೆಲಸ ಮಾಡಬೇಕು. ಅವರಿಗೆ ಪಗಾರ 37½ ರೂಪಾಯಿ ಕೊಡುತ್ತಿದ್ದಾರೆ. ಅಷ್ಟಕ್ಕೆ ಅವರು ಕೆಲಸ ಮಾಡಬೇಕಾಗಿದೆ. ಈ ಪರಿಸ್ಥಿತಿ ಶೋಚನೀಯವಾಗಿದೆ. ಇವರ ವಿಷಯಗಳನ್ನು ಪದೇ ಪದೇ ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ. ಮೊದಲು 25 ರೂಪಾಯಿ ಇದ್ದುದು ಈಗ 36-37½ ರೂಪಾಯಿ ಮಾಡಿದ್ದಾರೆ. ಇವರಿಗೆ ಟ್ರಾವಲಿಂಗ್ ಅಲೋಯನ್ಸ್ ಇಲ್ಲ. ವಾರಕ್ಕೆ 2-3 ಸಲ ಟಪಾಲಿಗೆ

ಬರಬೇಕು. ಮೊದಲು ಹಳ್ಳಿಗೆ ಹೋದರೆ ಊಟ ಸಿಕ್ಕುತ್ತಿತ್ತು. ಈಗ ಸಿಕ್ಕುವುದಿಲ್ಲ. ಅವರಿಗೆ ಸರಿಯಾದ ಪಗಾರ ಕೊಡಬೇಕು. ಅವರನ್ನು 4ನೇ ಕ್ಲಾಸ್ ಗೌರ್ನಮೆಂಟ್ ಸರ್ವೆಂಟ್ಸ್ ಎಂದು ಎಣಿಸಿ ಅವರಿಗೆ ಪಗಾರ ಕೊಡಬೇಕು.

ಇನ್ನು ಓರ್ ರೋಡ್ಸ್‌ಗಾಗಿ ಸೆಂಟ್ರಲ್ ಗೌರ್ನಮೆಂಟ್‌ನವರು ಹಣ ಕೊಟ್ಟಿದ್ದಾರೆ. ಬಿ. ಹೆಚ್. ರೋಡ್, ಟಿಪ್ಪುಸುಲ್ತಾನ್ ರೋಡನ್ನು ಬೆಂಗಳೂರು-ಹೊನ್ನಾವರ ರೋಡ್ ಎಂದು ಮಾಡಿದರು. ಅದು ಹೊನ್ನಾವರ ಮುಟ್ಟಲಿಲ್ಲ. ಹೊಸಪೇಟೆಯಿಂದ ಓರ್ ತೆಗೆದುಕೊಂಡು ಹೋಗುವುದಕ್ಕೆ ಬೆಂಗಳೂರು-ಹೊನ್ನಾವರ ರೋಡ್ ಮಾಡುತ್ತಾ ಇದ್ದಾರೆ. ಬಹಳ ವರ್ಷದಿಂದ ಆ ಕೆಲಸ ನಡೆಯುತ್ತಾ ಇದೆ. ಅದು ಬೇಗನೆ ಆಗಬೇಕು ಇಲ್ಲದಿದ್ದರೆ ಹೊಸಪೇಟೆ ಓರ್ ಮದ್ರಾಸ್, ಗೋವಾಕ್ಕೆ ಬೇರೆಕಡೆಯಿಂದ ಹೋಗುತ್ತದೆ. ಇದಕ್ಕೆ ಸಮೀಪವಾದಂಥ ಹೊನ್ನಾವರದಿಂದ ಈ ಕಬ್ಬಿಣದ ಅದಿರು ಹೋಗಬೇಕೆಂದು ಸೆಂಟ್ರಲ್ ಗೌರ್ನಮೆಂಟ್‌ನವರು ಹಣ ಮಂಜೂರು ಮಾಡಿದ್ದರೂ ರಸ್ತೆ ಕೆಲಸ ಮಾತ್ರ ಕಾರ್ಯಗತವಾಗಿಲ್ಲ. ಈ ಅದಿರು ಬೇರೆ ಕಡೆ ಡೈವರ್ಟ್ ಆದರೆ ಇಲ್ಲಿಗೆ ಬರುವುದು ಕಷ್ಟವಾಗುತ್ತದೆ. ಆದುದರಿಂದ ಓರ್ ರೋಡು ಆದಷ್ಟು ಬೇಗ ಪೂರ್ಣವಾಗುವಂತೆ ಸರ್ಕಾರದವರು ಲಕ್ಷ್ಯ ಕೊಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಇಷ್ಟು ಮಾತುಗಳನ್ನಾಡಲು ಅಧ್ಯಕ್ಷರು ನನಗೆ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಂಚೇಗೌಡ (ಮದ್ದೂರು).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ಸಮರ್ಥಿಸುತ್ತ ಕೆಲವು ಅಂಶಗಳನ್ನು ಮಾತ್ರ ಸಭೆಯ ಮುಂದೆ ಇಡಲು ಇಚ್ಛಿಸುತ್ತೇನೆ. ಮಾನ್ಯ ಅರ್ಥಸಚಿವರು ಆಯವ್ಯಯ ಪಟ್ಟಿಯ ಮೊದಲನೆಯ ಭಾಗದಲ್ಲಿ ನಮ್ಮ ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ಅವಲೋಕಿಸಿ, ಮತ್ತೆ ಕೆಲವು ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸದೆ ಅಲ್ಲಿಗೇ ಬಿಟ್ಟಿದ್ದಾರೆ. ಯಾವ ಒಂದು ವಿಷಯದ ಬಗ್ಗೆಯೂ ಕೂಡ ಖಚಿತವಾದ ಅಭಿಪ್ರಾಯವನ್ನು ಅವರು ಕೊಟ್ಟಿಲ್ಲ.

ಮೊದಲನೆಯದಾಗಿ ಮಧ್ಯಂತರ ಚುನಾವಣೆಯ ನಂತರವೂ ಭಾರತದ ಕೆಲವು ರಾಜ್ಯಗಳಲ್ಲಿ ಸುಭದ್ರ ಸರ್ಕಾರದ ರಚನೆ ಸಾಧ್ಯವಾಗದೆ ಹೋಗಿದೆ ಎನ್ನುವುದರ ಬಗ್ಗೆ ಹೇಳಿದ್ದಾರೆ. ನಾನು ಆ ಬಗ್ಗೆ ಎರಡು ಮಾತನ್ನು ಹೇಳುವುದಾದರೆ ಕಳೆದ 18 ವರ್ಷಗಳಿಂದ ಏನು ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಯೋಜನೆಗಳನ್ನು ಹಾಕಿಕೊಂಡು ಬಂದಿದ್ದೇವೆ, ಅವುಗಳನ್ನು ಯಾವರೀತಿ ಕಾರ್ಯಗತ ಮಾಡುತ್ತ ಬಂದಿದ್ದೇವೆ, ಬಹಳ ಮಟ್ಟಿಗೆ ಈ ಅನಿಶ್ಚಿತ ಪರಿಸ್ಥಿತಿಗೆ ಅದೇ ಕಾರಣ ಎಂದು ಹೇಳಿದರೆ ತಪ್ಪಾಗುವುದಿಲ್ಲ ಎನ್ನುವುದು ನನ್ನ ಭಾವನೆ. ಮತ್ತೆ ನಮ್ಮ ಮುಂದೆ ಇರತಕ್ಕ ಆಯವ್ಯಯ ಪಟ್ಟಿಯನ್ನು ಪರಿಶೀಲಿಸಿದರೆ ಈ ಅನಿಶ್ಚಿತ ಪರಿಸ್ಥಿತಿ ನಮ್ಮ ರಾಜಕೀಯ ಮಟ್ಟದಲ್ಲಿ ಯಾವತ್ತಿಗೂ ಕೂಡ ಬಾರದಂತೆ ತಡೆಯಲು ಸಾಧ್ಯವೇ ಎಂದು ಯೋಚಿಸಿದರೆ ಬಹುಶಃ ಸಾಧ್ಯವಾಗುವುದಿಲ್ಲವೆಂದು ಕಾಣುತ್ತದೆ. ಇದಕ್ಕೆ ಈ ಸರ್ಕಾರದವರೇ ಜವಾಬ್ದಾರರು ಎಂದು ಹೇಳುವುದಿಲ್ಲ. ಮೊದಲನಿಂದಲೂ ಕೂಡ ಆ ರೀತಿಯ ನೀತಿಯನ್ನು ಅನುಸರಿಸಿಕೊಂಡು ಬಂದು ಏಕಾಏಕಿ ಆ ನೀತಿಯಿಂದ ತಪ್ಪಿಸಿಕೊಂಡು ಹೋಗಬೇಕಾದರೆ ಯಾರಿಗಾದರೂ ಅಸಾಧ್ಯವಾಗುತ್ತದೆ. ಈಗ ಏನು ಖೋತಾ ಬಜೆಟ್ ಮಂಡಿಸಿದ್ದಾರೆ ಅದರಲ್ಲಿ ಬಹು ಭಾಗವನ್ನು ಸಾಲವನ್ನು ತೀರಿಸುವುದಕ್ಕೋಸ್ಕರ ಮತ್ತು ಬೇರೆ ಬೇರೆ ಅನಾವಶ್ಯಕ ಬಾಬುಗಳಿಗೆ ಕೊಟ್ಟಿದ್ದಾರೆ. ಯಾರು ನಮ್ಮ ರಾಜ್ಯದಲ್ಲಿ ಬಹುತೇಕ ಮಂದಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆಯೋ ಆ ಜನರ ಬಗ್ಗೆ, ನೂರಕ್ಕೆ 90ಕ್ಕಿಂತ ಹೆಚ್ಚಾಗಿ ವ್ಯವಸಾಯದ ಮೇಲೆ ಅವಲಂಬಿಸಿಕೊಂಡಿರುವ ರೈತರ ಅಭಿವೃದ್ಧಿಗೆ ಅಥವಾ ಅವರ ಸ್ಥಿತಿಯನ್ನು ಸುಧಾರಿಸುವುದಕ್ಕೆ ಈ ಆಯವ್ಯಯ ಪಟ್ಟಿಯಲ್ಲಿ ಒದಗಿಸಿರುವ ಮೊಬಲಗು ಎಷ್ಟರಮಟ್ಟಿಗೆ ಸಹಕಾರಿಯಾಗುತ್ತದೆ ಎಂದರೆ ಏತಕ್ಕೂ ಕೂಡ ಸಾಲದುದಾಗಿದೆ. ವ್ಯವಸಾಯಾಭಿವೃದ್ಧಿ ಎಂದು ವ್ಯವಸಾಯದ ಇಲಾಖೆಗೋಸ್ಕರ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಅದೆಲ್ಲ ಇಲಾಖೆಯ ಅಧಿಕಾರಿಗಳ ವೇತನಕ್ಕೆ ಖರ್ಚಾಗಿ ನಮ್ಮಲ್ಲಿನ ಅಭಾವ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಸಾಧ್ಯವೇ ಆಗುವುದಿಲ್ಲ. ರೈತರಿಗೆ ಬೇಕಾದಂಥ ಸಪ್ಲೈಸ್ ಅಂಡ್ ಸರ್ವಿಸಸ್ ವ್ಯವಸಾಯ ಇಲಾಖೆಯಿಂದ ಸಹಕಾರ ಇಲಾಖೆಗೆ ವರ್ಗಾವಣೆಯಾಗಿದೆ. ಇನ್ನು ವ್ಯವಸಾಯದ ಇಲಾಖೆಗೆ ಇರುವುದಾದರೂ ಏನು ? ಹೊಸ ತಳಿಯನ್ನು ಕಂಡುಹಿಡಿಯುವುದು, ಜನಗಳಿಗೆ ತಿಳುವಳಿಕೆ ಕೊಡತಕ್ಕದು, ಟೆಕ್ನಿಕಲ್ ನೋ ಹೌ ಜನಗಳಿಗೆ ಒದಗಿಸತಕ್ಕದು. ಇದನ್ನು ಒದಗಿಸಬೇಕಾದರೆ 10 ಕೋಟಿ ರೂಪಾಯಿ ಬೇಕೇ ಎಂದು ಕೇಳುತ್ತೇನೆ. ಬೇಕಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಏಳನೇ ಪುಟದಲ್ಲಿ ಅರ್ಥ ಸಚಿವರು ಒಂದು ವಿಷಯವನ್ನು ಹೇಳಿದ್ದಾರೆ,

(ಶ್ರೀ ಎಂ. ಮಂಚೇಗೌಡ)

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುದ್ದೀಪಗಳ ಪೂರೈಕೆ, ಮತ್ತು ಪಂಪ್‌ಸೆಟ್‌ಗಳ ಪೂರೈಕೆ ಇವುಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ ನಮ್ಮ ರಾಜ್ಯದಲ್ಲಿ ಬಹಳವಾದ ಕಠಿಣ ಪರಿಸ್ಥಿತಿ ಒದಗಿದ್ದು 1968ನೇ ಇಸವಿಯಲ್ಲಿ. 1968ನೇ ಇಸವಿಯಲ್ಲಿ ಎಷ್ಟು ಬಾವಿಗಳು ಮಂಜೂರಾಗಿವೆ ಎಂದು ನೋಡಿದರೆ ಬಹಳ ನಿರಾಸೆಯಾಗುತ್ತದೆ. ಒಂದೇ ಒಂದು ಉದಾಹರಣೆ ಕೊಡುವುದಾದರೆ ಹಾಸನದಲ್ಲಿ ನಾಲ್ಕು ಬಾವಿಗಳು, ಮಂಡ್ಯದಲ್ಲಿ 17, ಮೈಸೂರಿನಲ್ಲಿ 25 ಹೀಗೆ ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನು? ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಈ ಕೆಲಸವನ್ನು ವಹಿಸಲಾಗಿದೆ ಎಂದು ಅತ್ತ ಕಡೆ ಕೈ ತೋರಿಸುತ್ತಾರೆ. ಅಲ್ಲಿ ಎರಡನೇ ಕಂತು ಕೊಡುವುದಕ್ಕೆ ಹಣವಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಆದಾಯ ಹೆಚ್ಚಿದೆ, ರೈತರ ಆದಾಯ ಹೆಚ್ಚಿದೆ, ಆದ್ದರಿಂದ ತೆರಿಗೆ ಹಾಕಲಿಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ತೆರಿಗೆ ಹಾಕುವ ವಿಚಾರದಲ್ಲಿ ಸಲಹೆಗಳನ್ನು ಕೊಡಲು ಭೂತಲಿಂಗಂ ಕಮಿಟಿ ಮಾಡಿದ್ದಾರೆ. ಬಹುಶಃ ಆ ಕಮಿಟಿ ಮಾಡಿರುವುದು ವ್ಯರ್ಥ ಎಂದರೂ ತಪ್ಪಾಗುವುದಿಲ್ಲ. ಈ ಸಂದರ್ಭದಲ್ಲಿ ನೀರಾವರಿಗೆ ಒದಗಿಸಿರುವ ಮೊಬಲಗನ್ನು ನೋಡಿದರೆ ಇದೇ ಮಟ್ಟದಲ್ಲಿ ಸಾಗಿದರೆ ಇನ್ನು ನೂರು ವರ್ಷಗಳಾದರೂ ಕೂಡ ಮಂಜೂರಾಗಿರುವ ಕೆಲಸಗಳನ್ನು ಮುಗಿಸುವುದಕ್ಕೆ ಸಾಧ್ಯವಿಲ್ಲ. ನೀರಾವರಿ ನಮ್ಮ ದೇಶದಲ್ಲಿ ಬಹಳ ಅಗತ್ಯವಾಗಿ ಆಗಬೇಕಾಗಿರುವ ಕೆಲಸ. ಏನಾದರೂ ಮಾಡಿ ಬೇರೆ ಬೇರೆ ಬಾಬುಗಳಿಗೆ ಕೊಟ್ಟಿರುವ ಹಣವನ್ನು ಕಡಮೆ ಮಾಡಿ ನೀರಾವರಿ ಬಾಬಿಗೆ ಹೆಚ್ಚು ಹಣವನ್ನು ಒದಗಿಸಬೇಕು ಮತ್ತು ನೀರಾವರಿ ಜಮೀನನ್ನು ಹೆಚ್ಚಿಸತಕ್ಕ ಸಂದರ್ಭದಲ್ಲಿ ಹೊಸ ಹೊಸದಾಗಿ ಕೆರೆ ಕಟ್ಟೆಗಳನ್ನು ಕಟ್ಟಿ ಹೆಚ್ಚಿಸಬೇಕೇ ವಿನಾ ಇರುವ ಕೆರೆಗಳಿಗೆ ಎರಡು ತೂಬು ಮಾಡುವುದರಿಂದ ಅಥವಾ ಇತರ ಸಣ್ಣ ಪುಟ್ಟ ಕೆಲಸಗಳಿಂದ ನೀರಾವರಿ ಆಗುವ ಪ್ರದೇಶವನ್ನು ಹೆಚ್ಚಿಸುವುದಕ್ಕಾಗುವುದಿಲ್ಲ.

ಕೃಷ್ಣರಾಜ ಸಾಗರವನ್ನು ಕಟ್ಟತಕ್ಕ ಸಂದರ್ಭದಲ್ಲಿ ಬಲದಂಡೆ ನಾಲೆ ಇರಬೇಕೇ, ಎಡದಂಡೆ ನಾಲೆ ಇರಬೇಕೇ ಎನ್ನುವುದನ್ನು ತಜ್ಞರು ಪರಿಶೀಲಿಸಿ 1923ನೇ ಇಸವಿಗೆ ಮುಂಚೆಯೇ ಒಂದು ತೀರ್ಮಾನಕ್ಕೆ ಬಂದು ಎಡದಂಡೆ ನಾಲೆ ಮಾತ್ರ ಇರಬೇಕು, ಬಲದಂಡೆ ನಾಲೆಯನ್ನು ಕೈಬಿಡಬೇಕು ಎಂದು ಆಗಲೇ ಬಿಟ್ಟಿದ್ದಾರೆ. ಇಂಥದನ್ನು ಮತ್ತೆ ಮಾಡುವುದು ಎಂದರೆ ಇದು ಅರ್ಥವಿಲ್ಲದ ಮಾತು. ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ ವರುಣನಾಲೆ ಮಾಡುವುದಾದರೆ ಮಂಡ್ಯ ಜಿಲ್ಲೆಯ ಜನಗಳ ಸಮಾಧಿಯ ಮೇಲೆ ಮಾತ್ರ ಆ ರೀತಿ ಮಾಡಲು ಸಾಧ್ಯವೇ ವಿನಾ ಇನ್ನು ಯಾವ ರೀತಿಯಿಂದಲೂ ಕೂಡ ಸಾಧ್ಯವಿಲ್ಲ. ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಜನ್ಮ ತಾಳಿದ್ದು ಮಂಡ್ಯ ಜಿಲ್ಲೆಯಲ್ಲಿ. ಧೈರ್ಯ, ಸ್ಥೈರ್ಯ, ಮಂಡ್ಯಜಿಲ್ಲೆ ಜನಗಳಿಗೆ ಹೇಳಿಕೊಡಬೇಕಾಗಿಲ್ಲ. ಹೋರಾಟ ಮಾಡುವುದನ್ನು ಕಲಿಸಿಕೊಡಬೇಕಾಗಿಲ್ಲ. ಏನೇ ಆಗಲೀ, ಶತಾಯ ಗತಾಯ ಬಲದಂಡೆ ನಾಲೆಯನ್ನು ಮಾಡುವುದಕ್ಕೆ ಬಿಡುವುದಿಲ್ಲ. ಈಗ ತಜ್ಞರು ಯಾವ ದೃಷ್ಟಿಯಿಂದ ಒಂದು ತೀರ್ಮಾನಕ್ಕೆ ಬಂದರು ಎಂದರೆ, ಅವರು ಸಾಕಷ್ಟು ಅಂಕಿಅಂಶಗಳನ್ನು ಪಡೆದುಕೊಂಡು ತೀರ್ಪು ಕೊಡುವುದಕ್ಕೆ ಸಾಕಷ್ಟು ಕಾಲಾವಕಾಶವನ್ನು ತೆಗೆದುಕೊಳ್ಳಲಿಲ್ಲ ಎಂದು ನನಗನ್ನಿಸುತ್ತದೆ. ನಮ್ಮ ತಜ್ಞರು ಕಷ್ಟಪಟ್ಟು ಶ್ರಮ ವಹಿಸಿ ಹಿಂದೆ ಇದರ ಬಗ್ಗೆ ಏನೇನು ಅಭಿಪ್ರಾಯಗಳನ್ನು ತಜ್ಞರು ಕೊಟ್ಟಿದ್ದಾರೆ ಎನ್ನುವುದನ್ನೆಲ್ಲ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬಂದಂತೆ ನನಗೆ ಕಾಣುತ್ತಿಲ್ಲ. ನಾನು ನಮ್ಮ ತಜ್ಞರ ಬಗ್ಗೆ ಟೀಕೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅವರು ಅವನ್ನೆಲ್ಲಾ ಪರಿಶೀಲಿಸಿದ್ದರೆ ಆ ರೀತಿಯಲ್ಲಿ ಹೇಳುತ್ತಿರಲಿಲ್ಲ ಎಂದು ನನ್ನ ನಂಬಿಕೆ.

ಸರ್ಕಾರದವರು ನೀರಾವರಿ ಬಾಬಿಗೆ ಹೆಚ್ಚು ಹಣವನ್ನು ಒದಗಿಸಿ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರು 1969-70ನೆಯ ಸಾಲಿನ ಮುಂಗಡ ಪತ್ರವನ್ನು ಮಂಡಿಸಿದ್ದಾರೆ, ಅದನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ಶ್ರೀ ಹೆಗಡೆಯವರು ತಮ್ಮ ಭಾಷಣದಲ್ಲಿ ಶ್ರೀ ನಿಜಲಿಂಗಪ್ಪನವರನ್ನು ಪ್ರಶಂಸೆ ಮಾಡಿದ್ದಾರೆ. ಶರಾವತಿ ವಿಷಯದ ಘಟನೆ ಮತ್ತು ಜನರಲ್ ಎಲೆಕ್ಷನ್ನಿನಲ್ಲಿ ಅವರು ಆರಿಸಿ ಬಂದಿರುವುದು – ಈ ಒಂದು ಘಟನೆ ಹೀಗೆ ಎರಡು ಘಟನೆಗಳಿವೆ. ಆಯವ್ಯಯ ಭಾಷಣದಲ್ಲಿ ಇಂಥವರ ಹೆಸರನ್ನು ಸೂಚಿಸಬಾರದಾಗಿತ್ತು. ಅದಲ್ಲದೆ

ಈಗಿನ ಮುಖ್ಯ ಮಂತ್ರಿಗಳ ಬಗ್ಗೆ ಶ್ಲಾಘನೆ ಮಾಡಿ ಒಳ್ಳೆಯ ರೀತಿಯಿಂದ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಕಾರಣ ಗೊತ್ತಿಲ್ಲ. ಅವರು ಸುಪ್ರೀಂಕೋರ್ಟಿನ ತೀರ್ಮಾನ ಎಕ್ಸೈಜು ಬಾಬಿನ ವಿಚಾರದಲ್ಲಿ ಬಂದಮೇಲೂ ಬಹಳ ಧೈರ್ಯದಿಂದ ಇದ್ದಾರೆ, ಅವರು ನಿಸ್ವಾರ್ಥಿಗಳು ಎಂದು ತೋರಿಸಿ ಪ್ರಶಂಸೆಮಾಡಿದ್ದಾರೆ.

ಮಾನ್ಯ ಮಂತ್ರಿಗಳು ಎಲ್ಲಾ ರಾಜ್ಯಗಳಲ್ಲೂ ಖೋತ ಬಜೆಟ್ ಮಂಡಿಸಿರುವುದರಿಂದ ಇಲ್ಲೂ ಕೂಡ ಅದೇ ರೀತಿ ಖೋತ ಬಜೆಟ್ಟನ್ನು ಮಂಡಿಸಿರಬಹುದು. ಮದ್ರಾಸು ರಾಜ್ಯದಲ್ಲಿ ಶಿಕ್ಷಣದ ಬಾಬು ನೋಡಿದರೆ ಪಿ.ಯು.ಸಿ.ವರೆಗೆ ಉಚಿತ ಶಿಕ್ಷಣ ಕೊಡುತ್ತೇವೆಂದು ಹೇಳಿ ಖೋತ ಬಜೆಟ್ ಮಂಡಿಸಿರುವಾಗ ನಮ್ಮ ಸಚಿವರು ಸೆಕೆಂಡರಿ ಶಿಕ್ಷಣದವರೆಗೆ ಮಾತ್ರ ರಿಯಾಯಿತಿ ತೋರಿಸಿ ಖೋತ ಬಜೆಟ್ ಮಂಡಿಸಿರುವುದು ಶೋಚನೀಯವಾಗಿದೆ. ಮಾನ್ಯ ಚಾಗಲಾರವರು ಹೇಳಿದ ಹಾಗೆ ಕಮರ್ಷಿಯಲೈಜ್ಡ್ ಎಜುಕೇಷನ್ ನಮ್ಮ ಸರಕಾರದಲ್ಲಿದೆ. ಉದಾಹರಣೆಗೆ ಟೆಕ್ನಿಕಲ್ ಎಜುಕೇಷನ್ ಎಲ್ಲಾ ಕಡೆಯೂ ಇದೆ, ಎಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಗುಲ್ಬರ್ಗದಲ್ಲಿವೆ. ಅಲ್ಲಿಗೆ ಒಂದು ಕೋಟಿ ಕೊಟ್ಟಿದ್ದಾರೆ, ಅಲ್ಲಿ ನೋಡಿದರೆ ಏನೂ ಇಲ್ಲ. ಏನು ಮೆರಿಟ್ಟಿನ ಮೇಲೆ ಕೊಟ್ಟಿದ್ದಾರೆ? ಅಲ್ಲಿ ರೊಕ್ಕ ಇದ್ದರೆ ಸಾಕು, ಕರ್ನಾಟಕದವರಲ್ಲದೆ ಬೇರೆ ದೇಶಗಳವರಿಗೂ ಸೀಟು ದೊರೆಯುವುದು, ಶ್ರೀಮಂತರಾದರೆ ಸಾಕು, ಅವರಿಗೆ ಸ್ಥಾನ ದೊರೆಯುವುದು. ಅಲ್ಲಿ ಸೀಟಿಗೆ ಬೆಲೆ ಇಲ್ಲ. ಅಂಥ ಸಂಸ್ಥೆಯನ್ನು ಸರಕಾರ ನಡೆಸಿ ಸಾವಿರಾರು ಇಂಜನಿಯರುಗಳನ್ನು ಮತ್ತು ಡಾಕ್ಟರುಗಳನ್ನು ತಯಾರಿಸುತ್ತಿದೆ. ಅಲ್ಲಿ ಯೂನಿವರ್ಸಿಟಿಯಲ್ಲಿ ಅಥವ ಕಾಲೇಜುಗಳಲ್ಲಿ ಮಂತ್ರಿಗಳು ಹೋಗಿ ಭಾಷಣ ಮಾಡುವಾಗ, ನಾಯಕರು ಹೋಗಿ ಭಾಷಣ ಮಾಡುವಾಗ ವಿದ್ಯಾರ್ಥಿಗಳು ನಿಸ್ವಾರ್ಥ ಸೇವೆ ಸಲ್ಲಿಸಬೇಕೆಂದು ಹೇಳುತ್ತಿದ್ದಾರೆ. ಆದರೆ ಅದು ಹೇಗೆ ಸಾಧ್ಯ? 20 ಸಾವಿರ ರೂಪಾಯಿಗಳನ್ನು ಕೊಟ್ಟು ಸೀಟನ್ನು ಪಡೆದ ಮೇಲೆ ಮುಂದೆ ಡಾಕ್ಟರಾದ ಮೇಲೆ, ಇಂಜನಿಯರಾದ ಮೇಲೆ ಕೊಟ್ಟಿರುವ ಹಣವನ್ನು ಅವರು ಮೊದಲು ಪಡೆಯಬೇಕಾಗಿದೆ. ಹಾಗಿರುವಾಗ ಯಾವ ರೀತಿಯಿಂದ ಪ್ರಾಮಾಣಿಕವಾಗಿ ನಿಸ್ವಾರ್ಥ ಸೇವೆ ಸಲ್ಲಿಸಲು ಸಾಧ್ಯವಾಗುವುದು? ನಮ್ಮ ಸರಕಾರ ಯಾರು ಬಂದರೂ ಕಲಿಸುವುದಕ್ಕೆ ಹೊರಟಿದೆ. ಈ ಬಗ್ಗೆ ಘೋಷಣೆಯಿದೆ. ಪ್ರಜಾಪ್ರಭುತ್ವದಲ್ಲಿ ಶಿಕ್ಷಣವು ಮುಖ್ಯ ಪಾತ್ರವನ್ನು ವಹಿಸುವುದು. ಇದನ್ನು ವಿಶ್ವಾಸದಿಂದ ನಾಯಕರು ಬಾಯಲ್ಲಿ ಹೇಳುತ್ತಾರೆ, ಆದರೆ ಕಾರ್ಯತಃ ಆಚರಣೆಗೆ ತರುವುದಿಲ್ಲ. ಹೀಗಾದರೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ.

ಮುಂದಿನ ವಿಷಯ ನೀರಾವರಿ. ಇದರ ಬಗ್ಗೆ ಹೇಳಬೇಕಾದರೆ ತುಂಗಭದ್ರ ಯೋಜನೆಯಲ್ಲಿ ಒಂದು ಲಕ್ಷ ಎಕರೆ ಲೋಕಲೈಜ್ ಮಾಡುತ್ತೇವೆಂದು ಹೇಳಿದ್ದಾರೆ. ಸುಮಾರು 9 ಲಕ್ಷ ಎಕರೆ ಲೋಕಲೈಜ್ ಆಗಿದೆಯೆಂದು ಹೇಳುತ್ತಾರೆ. ಆದರೆ ನಿಜವಾಗಿ ನೀರಾವರಿಯಾಗಿರುವುದು 3 ಲಕ್ಷ ಎಕರೆ ಮಾತ್ರ. ಉಳಿದ 6 ಲಕ್ಷ ಎಕರೆಗೆ ನೀರೇ ಬಂದಿಲ್ಲ. ಅವರು ಜನರಿಗೆ ಹೇಳುವುದು ಬೇರೆ ಪ್ರಾಂತಗಳಿಗೆ ನಿಜವೇ, ಅಲ್ಲವೇ ಎಂಬುದು ಗೊತ್ತಾಗುವುದಿಲ್ಲ. ನೀರು ಬಹಳವಾಗಿ ಕೊಡಲಾಗಿದೆ ಎಂದು ಹೇಳುವುದು ಕಂಡುಬರುತ್ತದೆ. ನೀವು ಹೇಳಿದಂತೆ ಮಾಡಬೇಕು ಎಂದು ಕೇಳಿದಾಗ ತುಂಗಭದ್ರ ಡ್ಯಾಂ ಮಾಡಿ ನೀರು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ನೀರು ಮಾತ್ರ ದೊರೆತಿಲ್ಲ. ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ನಾಲ್ಕನೆ ಪಂಚವಾರ್ಷಿಕ ಯೋಜನೆ ಮೊತ್ತವನ್ನು ತೀರ್ಮಾನ ಮಾಡಿ ಸರಕಾರಕ್ಕೆ ಕಳಿಸಿದ್ದಾರೆ. ಅದರ ಬಗ್ಗೆ ಅಭಿಪ್ರಾಯ ಪಡೆಯುವುದಾಗಿ ಹೇಳಿದರು. ನಾವು ನಮ್ಮ ಜಿಲ್ಲೆಯಲ್ಲಿ ಕಾಲುವೆ ಕೆಲಸ ಪ್ರಾರಂಭಿಸಿ, 200 ರೂಪಾಯಿನಂತೆ ಕೊಡುತ್ತೇವೆ ಎಂದು ಹೇಳಿದೆವು. ಸುಮಾರು 2 ಕೋಟಿಯ ಯೋಜನೆ ಇವೆ. ಬಹುಶಃ ಆ ಹಣವನ್ನು ಅಫಿಷಿಯಲ್ಸ್ ಕ್ವಾರ್ಟರ್ಸ್‌ಗೆ ಮತ್ತಿತರ ಕೆಲಸಗಳಿಗಾಗಿ ಕೊಟ್ಟಿರಬಹುದು. ವಿಚಾರ ಗೊತ್ತಿಲ್ಲ.

ಇನ್ನೊಂದು ವಿಷಯ, ದೇಶದಲ್ಲಿ ಸಂಪನ್ಮೂಲ ಹೆಚ್ಚಿಸಬೇಕು ಎಂದು ಹೇಳಿದ್ದಾರೆ, ಆದಾಯ ಬಹಳ ಕಡಮೆ ಬರುತ್ತಿದೆ ಎಂದು ತಿಳಿಸಿದ್ದಾರೆ. ನಿಜವಾಗಿಯೂ ಸಂಪನ್ಮೂಲಗಳು ಹೆಚ್ಚಾಗಿದ್ದರೂ ಅವನ್ನು ಉಪಯೋಗ ಮಾಡುವ ಶಕ್ತಿ ಸರಕಾರಕ್ಕಿಲ್ಲ. ಸರಕಾರದವರೇ ಮೂಲದಲ್ಲಿ ಭಾಗ ಪಡೆಯುತ್ತಿದ್ದಾರೆ, ಅವರು ಇಲ್ಲೀಗಲ್ ಭಾಗಸ್ಥರಾಗಿದ್ದಾರೆ. ಎಕ್ಸೈಜ್ ಬಾಬಿನಲ್ಲಿ ಬಹಳ ಲಾಭವಿದೆ, ಹರಾಜು ಮಾಡಿದರೆ ಅದರಿಂದ 20 ಕೋಟಿ ಬರಬಹುದು. ಆದರೆ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಎಲ್ಲಾ ಕೂಡಿ ಭಾಗವಹಿಸಿದರೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಹರಾಜಾಗುವುದು ಸ್ವಾಭಾವಿಕ. ಬರುವ ಆದಾಯದಲ್ಲಿ ಇಲ್ಲೀಗಲ್ಲಾಗಿ ಲಾಭ ಪಡೆಯಬಾರದು. ದೇಶದ ಆದಾಯವನ್ನು ದುರುಪಯೋಗ ಪಡಿಸುವ ಕೆಲಸ ಮಾಡಬಾರದು. ಬೇಕಾದರೆ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ದಿಗಂಬರರಾಗಬಹುದು.

† ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ, ಮಾನ್ಯ ಆರ್ಥಿಕ ಸಚಿವರು ಸಭೆಯ ಮುಂದಿಟ್ಟಿರುವ 1969-70ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ಸ್ವಾಗತಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದ ಉತ್ಪತ್ತಿ ಈ ಸಾರಿ 213 ಕೋಟಿ 26 ಲಕ್ಷ, ವ್ಯಯ 226 ಕೋಟಿ 48 ಲಕ್ಷ ಇವೆ, 13 ಕೋಟಿ 22 ಲಕ್ಷ ರೂಪಾಯಿಗಳ ಕೊರತೆಯಿದೆ. ಆದರೂ ಕೂಡ 3 ವರ್ಷಗಳಿಂದ ನಮ್ಮ ಪ್ರಾಂತಗಳಿಗೆ ದೊಡ್ಡ ಉಪಕಾರ ಮಾಡಿದ್ದಾರೆ.

7–00 P.M.

ಯಾವದೇ ಹೊಸ ತೆರಿಗೆಗಳನ್ನು ಹೇರಿಲ್ಲ. ಈ ವರ್ಷ ಕೊರತೆಯಾಗಿದ್ದರೂ ಸಹ ಹೊಸ ತೆರಿಗೆ ಇಲ್ಲದೇ ಇರುವುದರಿಂದ ಜನರು ಬಹಳವಾಗಿ ಅವರನ್ನು ಹೊಗಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಅವರು ಕೊರತೆ ಇದ್ದಂತಹ ಹಣವನ್ನು ಯಾವುದೋ ರೀತಿಯಿಂದ ಮುಂದೆ ತುಂಬಿಕೊಳ್ಳಲಿಕ್ಕೂ ಸಹ ಸಮರ್ಥರು ಇದ್ದಾರೆ. ಇನ್ನು ಕೆಲವು ಮಾತುಗಳನ್ನು ಹೇಳುತ್ತೇನೆ. ಚಿಕ್ಕ ನೀರಾವರಿ ಬಗ್ಗೆ ಬಹಳ ಕಡಮೆ ಹಣ ಇಟ್ಟಿದ್ದಾರೆ ಎಂದು ಹೇಳಬಹುದು. ಮೂರು ಕೋಟಿ 80 ಲಕ್ಷ ರೂಪಾಯಿ ಇದೆ. ನಿಜವಾಗಿಯೂ ಈ ಚಿಕ್ಕನೀರಾವರಿ ಯೋಜನೆಗಳೇ ತಾತ್ಕಾಲಿಕವಾಗಿ ತೀವ್ರವಾಗಿ ಫಲ ಕೊಡತಕ್ಕವುಗಳು. ಸಣ್ಣ ಸಣ್ಣ ಕೆರೆಗಳು ಕಟ್ಟೆಗಳು ಇವುಗಳಿಂದ ಬಹಳ ಕೆಲಸವಾಗುತ್ತದೆ. ನೀರಾವರಿ ಹೆಚ್ಚಾಗುತ್ತದೆ ಅದಕ್ಕೆ ಸರ್ಕಾರದವರು ಹೆಚ್ಚು ಹಣವನ್ನು ಇಟ್ಟಿದ್ದರೆ ಹೆಚ್ಚು ಪ್ರಯೋಜನವಾಗುತ್ತಾ ಇತ್ತು. ಅದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಈ ಪ್ರಸಂಗದಲ್ಲಿ ಒಂದು ಮಾತು ಎಂದರೆ ಬೆಳಗಾಂ ಜಿಲ್ಲೆಯ ಕೃಷ್ಣಾ ವ್ಯಾಲಿಯಲ್ಲಿರುವಂತಹ ನದಿಗಳು ಆ ಪ್ರಾಂತ್ಯದಲ್ಲಿ ಹರಿದು ಹೋಗುತ್ತವೆ. ಅದೇ ಕಾರಣ ಮಹಾರಾಷ್ಟ್ರ ಸರ್ಕಾರದವರು ಕೃಷ್ಣಾ ಆಗಲಿ, ದೂಡಗಂಗಾ ಆಗಲಿ, ವೇದಗಂಗಾ ಆಗಲಿ, ಹಿರಣ್ಯಕೇಶಿ ಆಗಲಿ ಮೇಲೆ ಒಡ್ಡು ಹಾಕಿದ್ದೇ ಆದರೆ ಕೆಳಗೆ ನೀರು ಹರಿಯುವುದಿಲ್ಲ. ಕೊಯ್ನಾ ಭೂಕಂಪವಾಗಿ ಅಲ್ಲಿ ಹರಿಯತಕ್ಕ ನೀರನ್ನು ಸಮುದ್ರದ ಕಡೆಗೆ ಬಿಡುತ್ತಾರೆಯೇ ವಿನಾ ನಮ್ಮ ಕಡೆಗೆ ಹರಿಸುವುದಿಲ್ಲ. ನಮ್ಮ ಸರ್ಕಾರದವರು ಮಾತ್ರ ಮಹಾರಾಷ್ಟ್ರ ಸರ್ಕಾರದವರಮೇಲೆ ಹೆಚ್ಚು ಪ್ರೇಮದಿಂದಲೋ ಅಥವಾ ದಯೇ ತೋರಿಸಬೇಕೆಂತಲೋ ಅವರಿಗೆ ವಿದ್ಯುತ್ತನ್ನು ಪೂರೈಸುತ್ತೇವೆ ಎಂದು ಅನ್ನುತ್ತಾರೆ. ಅದಕ್ಕೆ ಅಡ್ಡಿಇಲ್ಲ. ಆದರೆ ಒಂದು ಮಾತು : ವಿದ್ಯುತ್ತನ್ನು ಪೂರೈಕೆ ಮಾಡುವ ಕಾಲಕ್ಕೆ ಕೊಯ್ನಾದಲ್ಲಿರುವಂತಹ ನೀರನ್ನು ನಮಗೆ ಕೊಡದೇ ಇದ್ದಮೇಲೆ ಅವರಿಗೆ ನೀವು ವಿದ್ಯುತ್ತನ್ನು ಏಕೆ ಕೊಡುತ್ತೀರಿ ! ಅಲ್ಲಿದ್ದಂತಹ ಹೆಚ್ಚು ನೀರನ್ನು ನಮ್ಮ ಪ್ರಾಂತ್ಯದಲ್ಲಿರುವಂತಹ ಬೆಳಗಾಂ ಜಿಲ್ಲೆಗಾಗಲಿ, ಬಿಜಾಪುರ ಜಿಲ್ಲೆಗಾಗಲಿ ಕೊಡಬೇಕು. ಆ ರೀತಿ ಕೊಡದೇ ಇರುವುದರಿಂದ ಬೆಳಗಾಂ ಜಿಲ್ಲೆಯಲ್ಲಿ ಸಾಂಗಲಿ ಹತ್ತಿರ ಇರುವಂತಹ ನದಿಯಲ್ಲಿ ನೀರು ಇಲ್ಲ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಅದರಿಂದಾಗಿ ಉಗಾರ್ ಶುಗರ್ ಫ್ಯಾಕ್ಟರಿ, ಹಿರಣ್ಯಕೇಶಿ ಶುಗರ್ ಫ್ಯಾಕ್ಟರಿಯಲ್ಲಿ ನೀರು ಸರಬರಾಯಿ ಇಲ್ಲದೇ ಕಬ್ಬನ್ನು ಕ್ರಷ್ ಮಾಡುವುದಕ್ಕೆ ಅವಕಾಶವಿಲ್ಲದಂತವಾಗಿದೆ. ಈ ಪ್ರಕಾರ ನೀರಿನ ಕೊರತೆಯಾಗಿದೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಯಾವುದು ಹೇಗಾದರೂ ಮಾಡಿ, ಮಹಾರಾಷ್ಟ್ರ ಸರ್ಕಾರಕ್ಕೆ ವಿದ್ಯುತ್ತನ್ನು ಕೊಡುವಾಗ ಒಂದು ಕಂಡೀಷನನ್ನು ಹಾಕಿ, ಕೊಯ್ನಾದಿಂದ ನದಿಯಲ್ಲಿ ನೀರನ್ನು ಬಿಡಲೇ ಬೇಕು ಎಂದು ತಿಳಿಸಿ, ಇಲ್ಲದೇ ಇದ್ದರೆ ವಿದ್ಯುತ್ ಅಗ್ರಿಮೆಂಟನ್ನು ಮಾಡಿಕೊಳ್ಳಬಾರದು ಎಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ದೊಡ್ಡ ನೀರಾವರಿ ಯೋಜನೆಗಳಾದಂತಹ ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗಳಿಗೆ ತಾವು ಹಣ ಒದಗಿಸಿದ್ದೀರಿ ಇದೂ ಕೂಡ ಬಹಳ ಕಡಿಮೆ ಎಂದು ಹೇಳಬಹುದು. ಏಕೆಂದರೆ ಘಟಪ್ರಭಾ ಯೋಜನೆಯಿಂದ 5 ಲಕ್ಷ ಎಕರೆಯಷ್ಟು ಭೂಮಿ ತೀವ್ರವಾಗಿ ನೀರಾವರಿ ಯಾಗುತ್ತದೆ. ಅದೇ ಪ್ರಕಾರ ಮಲಪ್ರಭಾ ಯೋಜನಯಿಂದ ಸಹಿತ ಐದುಲಕ್ಷ ಎಕರೆ ನೀರಾವರಿಯಾಗುತ್ತದೆ, ಆದರೆ ಇದಕ್ಕೆ ಒದಗಿಸಿದಂತಹ ಹಣ ನೋಡಿದರೆ ಬಹಳ ಕಡಿಮೆ. ಘಟಪ್ರಭಾ ಯೋಜನೆಗೆ ಎರಡುಕೋಟಿ 91 ಲಕ್ಷ ರೂಪಾಯಿ ಮತ್ತು ಮಲಪ್ರಭಾ ಯೋಜನೆಗೆ ಎರಡುಕೋಟಿ 45 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ನಿಜವಾಗಿಯೂ ಒಂದೆರಡು ವರ್ಷದಲ್ಲೇ ಸಾಕಾದಷ್ಟು ಫಲಕೊಡುವಂತಹ ಅವಕಾಶ ಇದರಿಂದ ಇದೆ, ಮಳೆಗಾಲದಲ್ಲಿ ಸಾಕಾದಷ್ಟು ನೀರು ಬರುತ್ತದೆ. ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗೆ ಇದರ ಉಪಯೋಗವಾಗುತ್ತದೆ. ಇಂತಹ ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳಲು ಸರ್ಕಾರದವರು ಹೆಚ್ಚಿನ ಹಣವನ್ನು ಒದಗಿಸುವುದು ಅವಶ್ಯಕ. ಕೃಷ್ಣಾ ಮೇಲ್ ದಂಡೆ ಯೋಜನೆ ಆಗುವುದು ಅವಶ್ಯಕ, ಅದಕ್ಕೆ ಹೆಚ್ಚಿನ ಹಣ ಬೇಕು, ಹಣ ಕೊಡುವ ಪರಿಸ್ಥಿತಿಯಲ್ಲಿ ಸರ್ಕಾರ ಇಲ್ಲ ಎಂದು ನಮಗೆ ಅನಿಸುತ್ತದೆ. ಈ ಘಟಪ್ರಭಾ

ಮತ್ತು ಮಲಪ್ರಭಾದಲ್ಲಿರುವಂತಹ ನೀರನ್ನು ಲಫ್ಟ್ ಇರಿಗೇಷನ್ನಿನಿಂದ ಮತ್ತು ಬೇರೆ ರೀತಿಯಿಂದ ಎಂದರೆ ಘಟಪ್ರಭಾಕ್ಕೆ ಬಲದಂಡೆ ಕಾಲುವೆ ಮತ್ತು ಮಲಪ್ರಭಾಕ್ಕೆ ಎಡದಂಡೆ ಕಾಲುವೆ ಹಾಕುವುದರಿಂದ ಸಾಧಾರಣ ಹತ್ತು ಲಕ್ಷ ಎಕರೆ ಭೂಮಿ 1976ನೇ ಇಸ್ವಿಯಲ್ಲಿ ನೀರಾವರಿಯಾಗುವ ಸಂಭವ ಇದೆ. ಆ ಪ್ರಕಾರ ಸರ್ಕಾರದವರು ಇದರ ಪೂರ್ಣ ಉಪಯೋಗ ಮಾಡಿಕೊಳ್ಳಬೇಕು. ಇಲ್ಲದೇ ಇದ್ದರೆ ನಾಗಾರ್ಜುನ ಸಾಗರ ಕಟ್ಟಿ ಪೂರೈಸಿದ ಮೇಲೆ ಇನ್ನೂ ಕೂಡ ಕೃಷ್ಣ ಮೇಲ್‌ದಂಡೆಯ ಯೋಜನೆಯನ್ನು ಲಾಗು ಮಾಡದಿದ್ದರೆ ಅದನ್ನು ಬಿಟ್ಟುಕೊಡಬೇಕಾಗುತ್ತದೆ. ಆದ್ದರಿಂದ ಘಟಪ್ರಭಾ ಮತ್ತು ಮಲಪ್ರಭಾ ನೀರನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇಷ್ಟು ವೇಳೆ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ, ಈ ರಾಜ್ಯದ ಮತ್ತು ರಾಷ್ಟ್ರದ ಅರ್ಥ ವ್ಯವಸ್ಥೆಯ ದುರ್ಗತಿಯ ಬಗ್ಗೆ ಒಂದೆರಡು ಮಾತನ್ನು ಹೇಳಿ ಮುಗಿಸೋಣ ಎಂದು ನಾನು ಇದ್ದೇನೆ. ನಮಗೆ ಅನಿಸುತ್ತದೆ, ಮಾನಸಿಕವಾಗಿ ಏನೇನೂ ಉತ್ಸಾಹ ಇಲ್ಲ, ಏಕೆಂದರೆ ಹೇಳಿದ್ದೇ ಹೇಳುವ ಕಿಸುಬಾಯಿದಾಸ ಅನ್ನುವ ಗಾದೆಯ ತರಹ ಆಗಿದೆ ನಾವು ಹೇಳುವ ಭಾಷಣಗಳ ಗತಿ. ಶ್ರೀಮಾನ್ ಮಂಚೇಗೌಡರು ಹೇಳಿದ ಹಾಗೆ ಬುನಾದಿ ಭದ್ರ ಇದ್ದರೆ ಮೇಲೆ ಕಟ್ಟುವ ಕಟ್ಟಡ ಭದ್ರವಾಗಿ ಇರುವುದಕ್ಕೆ ಸಾಧ್ಯ. ಗಾಂಧೀಜಿಯವರನ್ನು ರಾಷ್ಟ್ರಪಿತ ಅಂತ ಹೇಳಿ ಕರೆದದ್ದೂ ಆಯಿತು. ಗುಂಡಿಕ್ಕಿ ಅವರನ್ನು ಕೊಂದದ್ದೂ ಆಯಿತು. ಹೆಸರಿಗಾಗಿ ರಾಜಘಾಟನ್ನು ಕಟ್ಟಿದ್ದೂ ಆಯಿತು, ವರ್ಷಕ್ಕೊಮ್ಮೆ ನೆನಪಿಗಾಗಿ ಪ್ರಧಾನಿಯವರು ಹೋಗಿ ಅಲ್ಲಿ ನೂಲು ತೆಗೆದದ್ದೂ ಆಯಿತು. ಏಕೆಂದರೆ ತಾವು ಸ್ವಲ್ಪ ಪ್ರಸ್ತಾಪ ಮಾಡಿದ್ದೀರಿ, ಕೇವಲ ಅರ್ಥ ವ್ಯವಸ್ಥೆಯನ್ನು ಪ್ರಸ್ತಾಪ ಮಾಡಿಲ್ಲ, ಶ್ರೀಮಾನ್ ನಿಜಲಿಂಗಪ್ಪನವರನ್ನು ಪ್ರಸ್ತಾಪ ಮಾಡಿದ್ದೀರಿ, ವೀರೇಂದ್ರ ಪಾಟೀಲ್‌ರವರನ್ನು ಪ್ರಸ್ತಾಪ ಮಾಡಿದ್ದೀರಿ. ನಾನು ಸ್ವಲ್ಪ ಆಳಕ್ಕೆ ಹೋಗಿ ಪ್ರಸ್ತಾಪ ಮಾಡಿದರೆ ಅಧ್ಯಕ್ಷರು ಕ್ಷಮಿಸಬೇಕು. ಗಾಂಧೀಜಿಯವರನ್ನು ಕೊಂದದ್ದೂ ಆಯಿತು, ಅವರ ಬೂದಿಯನ್ನು ಗಂಗಾ, ಜಮುನಾದಲ್ಲಿ ತೇಲಿ ಬಿಟ್ಟದ್ದೂ ಆಯಿತು. 17-18ವರ್ಷಗಳ ಕಾಲ ಈ ರಾಷ್ಟ್ರದ ಚುಕ್ಕಾಣಿಯನ್ನು ಹಿಡಿದಿದ್ದಂಥ ಶ್ರೀಮಾನ್ ನೆಹರೂರವರು ನಿಧನರಾದರು. ಲಾಲ್‌ಬಹಾದ್ದೂರ್ ಶಾಸ್ತ್ರಿಯವರು ಬಂದರು, ಅವರು 18 ತಿಂಗಳನಲ್ಲಿ ಅತಿ ದೊಡ್ಡ ಚಮತ್ಕಾರವನ್ನು ತೋರಿಸಿ ನಿಧನರಾದರು. ನನಗೆ ಈ ಹಳತೆಲ್ಲಾ ಏಕೆ ನೆನಪು ಬಂತು ಎಂದರೆ ಮೈಸೂರು ರಾಜ್ಯದ ಪ್ರಥಮ ಮುಖ್ಯ ಮಂತ್ರಿಯಾಗಿದ್ದಂಥ ಶ್ರೀಮಾನ್ ಕೆ. ಸಿ. ರೆಡ್ಡಿಯವರು ನಮ್ಮ ರಾಜ್ಯಕ್ಕೆ ಬಂದಿದ್ದಾರೆ ಅವರನ್ನು ನಾನು ನೋಡಿದೆ, ಈಗಲೂ ಇಲ್ಲಿ ಕುಳಿತಿದ್ದಾರೆ. ನಮಗೆಲ್ಲಾ ಬಹಳ ಸಂತೋಷ—ಅದನ್ನು ಹೇಳಬಾರದು ಎಂದು ಗಂಟೆ ಬಾರಿಸುತ್ತೀರಿ ಅದೂ ಒಳ್ಳೆಯದೇ. ನನ್ನ ನೆನಪನ್ನು ತಮ್ಮ ಮೂಲಕ ಸಭೆಗೆ ತರುತ್ತಾ ಇದ್ದೇನೆ. ಶ್ರೀಮಾನ್ ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದುದನ್ನು ನಾವು ನೋಡಿದೆವು. ಇವತ್ತು ಸುಧಾರಣಾ ಆಯೋಗ ಅಂತ ಹೇಳಿ ಒಂದು ರಚನೆ ಮಾಡಿಕೊಂಡು ದೇಶಾದ್ಯಂತ ಓಡಾಡುತ್ತಾ ಇರತಕ್ಕ ಬೆಂಗಳೂರಿನ ಲೋಕ ಸಭಾ ಸದಸ್ಯರು ಮುಖ್ಯ ಮಂತ್ರಿ ಆಗಿದ್ದನ್ನು ನಾವು ನೋಡಿದೆವು (ಶ್ರೀಮಾನ್ ಕೆ. ಹನುಮಂತಯ್ಯನವರನ್ನು). ಕಡಿದು ಆಳುವ ಮಂಜಪ್ಪನವರು ಮುಖ್ಯ ಮಂತ್ರಿಗಳಾಗಿದ್ದರು. ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ಹೆಗಡೆಯವರು ಹೇಳಿರುವ ಪ್ರಕಾರ ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿ ಈ ರಾಜ್ಯಕ್ಕೆ ಬಹುಮುಖ ಸೇವೆ ಸಲ್ಲಿಸಿ ಇನ್ನೂ ಗುರುತರವಾದ ಹೊಣೆಯನ್ನು ವಹಿಸಿ ಬಹಳವಾಗಿ ನಿರ್ವಹಿಸುತ್ತಾ ಇದ್ದಾರೆ ಅಂತ, ಅವರ ರಾಜ್ಯವನ್ನು ನಾವು ನೋಡಿ ಆಯಿತು, ನಾನು ನಮ್ಮ ರಾಜ್ಯದ್ದನ್ನು ಮಾತ್ರ ಹೇಳುತ್ತಿದ್ದೇನೆ. ಶ್ರೀಮಾನ್ ಹೆಗಡೆಯವರು ಹೇಳೋ ಪ್ರಕಾರ ಶ್ರೀ ವೀರೇಂದ್ರ ಪಾಟೀಲರಿಗೆ ಸಂಬಂಧಪಟ್ಟ ಹಾಗೆ ಅವರಲ್ಲಿ ಕರ್ತವ್ಯ ಶಕ್ತಿ ಇದೆ, ಉತ್ಸಾಹವಿದೆ, ಅವರಲ್ಲಿ ಹುರುಪಿದೆ; ಆದುದರಿಂದ ನೀವುಗಳ್ಯಾರೂ ರಾಜ್ಯದ ಪ್ರಗತಿಯ ಬಗ್ಗೆ, ಶ್ರೇಯೋಭಿವೃದ್ಧಿಯ ಬಗ್ಗೆ ಗಾಬರಿಯಾಗಬೇಕಾಗಿಲ್ಲ. ಹೆದರಬೇಕಾಗಿಲ್ಲ ಎಂದು ಅವರು ನಮಗೆಲ್ಲರಿಗೂ ಭರವಸೆಯನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಕೇಳಿದ ಮೇಲೆ ನನಗೆ ಬೇಂದ್ರೆಯವರು ಹೇಳಿದ್ದ ಒಂದು ಪದ್ಯ ಜ್ಞಾಪಕಕ್ಕೆ ಬರುತ್ತೆ—ಅದೇನೆಂದರೆ : ಯಾರು ಯಾರೋ ಬಂದರು ಯುದ್ಧದೇವ ಬಂದ, ಬುದ್ಧದೇವ ಬಂದ; ಆದರೆ ನನ್ನ ದೇವರು ಮಾತ್ರ ಇನ್ನೂ ಬರಲಿಲ್ಲ ಎಂದು. ಆ ಪ್ರಾಣದೇವರು ಮಾತ್ರ ಇನ್ನೂ ಬರಲಿಲ್ಲ. ಅಂಥ ಒಬ್ಬ ದೇವರು ಬಾರದೆ ನಮಗಿಲ್ಲಿ ಪ್ರಾಣ ಹೋಗುತ್ತಿದೆ. ನಾನು ಹೀಗೆ ಇಲ್ಲಿಗೆ ಬಂದಂಥ ಅನೇಕಾನೇಕ ಮಹನೀಯರನ್ನು ನೋಡಿದ್ದೇನೆ. ಹಾಗೆ ನೋಡಿದವರಲ್ಲಿ ಶ್ರೀಮಾನ್ ಕೆ. ಸಿ. ರೆಡ್ಡಿಯವರೂ ಕೂಡ ಒಬ್ಬರು. ನಾನು ಇಲ್ಲದಿರತಕ್ಕದ್ದು ಕುರುಕ್ಷೇತ್ರದಲ್ಲಿ ಯುದ್ಧನಡೆಯುತ್ತಿದ್ದಾಗ ಬಬ್ರುವಾಹನನ ತಲೆ ಅಲ್ಲಿದ್ದಂತೆ ನಾನು ಇಲ್ಲಿದ್ದೇನೆ.

(ಶ್ರೀ ಎಸ್. ಗೋಪಾಲಗೌಡ)

ಅಂಥ ಅಂಥ ಮಹಾನುಭಾವರುಗಳನ್ನು ನೋಡಿದ್ದಾಗ ನಾನು ಈ ದಿವಸ ಇಲ್ಲಿ ಈ ಸಣ್ಣಪುಟ್ಟ ವಿಷಯಕ್ಕೆಲ್ಲಾ ಅಂಕಿಅಂಶಗಳನ್ನು ಕೂಡಿಸಿ ಅದರ ಬಗ್ಗೆ ತಲೆಕೆಡಿಸಿಕೊಳ್ಳುವಷ್ಟು ಆಸೆ ಆಶೋತ್ತರಗಳು ನನಗಿಲ್ಲ. ನನ್ನ ಮಾನಸಿಕ ವ್ಯವಹಾರವೂ ಅಷ್ಟು ತೃಪ್ತಿಕರವಾಗಿಲ್ಲ. ಆದರೆ ನಾನು ಹೇಳುತ್ತಿರುವುದು ಇಂಥಾ ಒಂದು ದೊಡ್ಡ ರಾಷ್ಟ್ರದಲ್ಲಿ ಇಲ್ಲಿಗೆ 20 ವರ್ಷಗಳ ಮೇಲ್ಪಟ್ಟು ಒಂದು ಪಕ್ಷವು ಆಡಳಿತವನ್ನು ನಡೆಸುತ್ತಿದ್ದಾಗ್ಗೂ ಇಂಥ ಒಂದು ಮಹಾರಾಷ್ಟ್ರಕ್ಕೆ ಅನ್ನವನ್ನು ಸಂಪಾದಿಸತಕ್ಕ ಮಾರ್ಗಕಾಣದೆ ಪರದೇಶದಲ್ಲಿ ಭಿಕ್ಷೆಬೇಡತಕ್ಕ ಸ್ಥಿತಿಯಲ್ಲಿ ನಾವಿನ್ನೂ ಇದ್ದೇವಲ್ಲ ಎಂದು ನನಗೆ ಬಹಳ ವ್ಯಥೆಯಾಗುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 20 ವರ್ಷಗಳ ಮೇಲಾಯಿತು. ದೇಶದಲ್ಲಿ ಕೋಟ್ಯಾನು ಕೋಟಿ ಹೊನ್ನಿನ ಹೊಳೆಯನ್ನೇ ಹರಿಸಿದ್ದಾಯಿತು. ಆದರೆ ಉಣ್ಣುವುದಕ್ಕೆ ಅನ್ನವಿಲ್ಲ—ತೊಡುವುದಕ್ಕೆ ಬಟ್ಟೆಯಿಲ್ಲ. ಆದರೆ ಇದಕ್ಕೆಲ್ಲಾ ಕಾರಣರು ಈ ರಾಮಕೃಷ್ಣಹೆಗಡೆ ಅವರು ಅಥವಾ ಕೆ. ಸಿ. ರೆಡ್ಡಿಯವರು ಎಂದು ಹೇಳುವುದಕ್ಕಾಗುತ್ತದೆಯೇ? ನಮ್ಮಲ್ಲಿ ಯೋಜನೆಗಳ ಮೇಲೆ ಯೋಜನೆಗಳಾದವು. . ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದವು. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಏನಿದೆ ಅದನ್ನು ನಡೆಸೇತೀರುತ್ತೇವೆಂದು ಆಡಳಿತದಲ್ಲಿರತಕ್ಕವರು ಹೇಳುತ್ತಿದ್ದಾರೆ ಇದು 1966ಕ್ಕೆ ಪ್ರಾರಂಭವಾಗಬೇಕಾಗಿತ್ತು. ಆದರೆ ಅದಿನ್ನೂ ಪ್ರಾರಂಭವಾಗಿಲ್ಲ. ನಾನು ಮೊನ್ನೆ ದೆಹಲಿಗೆ ಹೋಗಿದ್ದಾಗ ಶ್ರೀ ಹೆಗಡೆಯವರನ್ನು ಕೇಳಿದ್ದಕ್ಕೆ ಈ ವರ್ಷ ಕೂಡ ಅದನ್ನು ಪ್ರಾರಂಭಮಾಡುವಹಾಗಿಲ್ಲ ಎಂಬುದಾಗಿ ತಿಳಿಸಿದರು; ಅಂಥ ಸಂಭವ ಕಾಣುವುದಿಲ್ಲ ಎಂದು ಹೇಳಿದರು. 196 -69 ರಿಂದ ಕೇಂದ್ರದವರು ಒಂದೊಂದು ವರ್ಷಕ್ಕೇ ಒಂದೊಂದು ಪ್ಲಾನನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರಲು 1,903 ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ಸಿದ್ಧಮಾಡಿಕೊಂಡಿದ್ದೇವೆಂದು ಹೇಳುತ್ತಿದ್ದರು. ಇದನ್ನು ಪಂಚವಾರ್ಷಿಕ ಯೋಜನೆಯೆಂತ ಕರೆಯುವುದರ ಬದಲು ಅದನ್ನು ವಾರ್ಷಿಕ ಯೋಜನೆ ಅಂತ ಕರೆದರು. ಬೇರೆ ರಾಜ್ಯಗಳವರು ಈ ಯೋಜನೆಯ ಬಗ್ಗೆ ಹಣವನ್ನು ಅವರ ಬಡ್ಜೆಟ್ಟಿನಲ್ಲೇ ಸೇರಿಸಿ ಅದನ್ನು ಅವರು ಮುಂದುವರಿಸಿದ್ದರೆ ನಾವಿಲ್ಲಿ ಅದರ ಗಾತ್ರ 62 ಕೋಟಿ ಇರಬೇಕೇ ಅಥವಾ 63 ಕೋಟಿ ಇರಬೇಕೇ ಎನ್ನುವ ಚರ್ಚೆಯಲ್ಲೇ ಮುಂದುವರಿಯುತ್ತಿದ್ದೇವೆ. ನನಗೆ ಗುರುಗಳಾಗಿದ್ದ ಅಶೋಕಮೆಹತಾ ಅವರು ಸಮಾಜವಾದದ ಧೋರಣೆಯನ್ನು ತರಲು ಪಣ ತೊಟ್ಟಿದ್ದವರು ಈಗ ಕಾಂಗ್ರೆಸ್ಸಿಗೆ ಸೇರಿಕೊಂಡು ಕಣ್ಣು ಕಣ್ಣು ಬಿಡುತ್ತಿದ್ದಾರೆ. ಅವರಿಗೆ ಈ ದಿವಸ ಯಾವ ಒಂದು ಇಂಥ ಯೋಜನೆಯನ್ನೂ ಕೂಡ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲವಲ್ಲ ಎಂದು ಕಣ್ಣು ಕಣ್ಣು ಬಿಡುತ್ತಿದ್ದಾರೆ. ಈ ದಿವಸ ಇವರಿಗೆ ಯಾರು ಅಷ್ಟು ಹಣವನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ? ನಮ್ಮ ರಾಷ್ಟ್ರ ಈಗಾಗಲೇ ಮಾಡಿರತಕ್ಕ ಸಾಲದ ಬಡ್ಡಿಗಾಗಿ ದಿನ ಒಂದಕ್ಕೆ ಸುಮಾರು ಒಂದು ಒಂದೂವರೆ ಕೋಟಿ ರೂಪಾಯಿಗಳನ್ನು ತೆರಬೇಕಾಗಿದೆ. ನಮ್ಮ ರಾಜ್ಯದಲ್ಲಿ ನಾವು ಸಾಲದ ಬಡ್ಡಿಗಾಗೇ ಸುಮಾರು 52 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಹೀಗಾಗಿ ಈ ದಿವಸ ಈ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಬಡ್ಡಿಮಕ್ಕಳಾಗಿದ್ದಾರೆ; ಅಂದರೆ ಬಡ್ಡಿಯನ್ನು ತೆರತಕ್ಕ ಮಕ್ಕಳಾಗಿದ್ದಾರೆ. ಇಷ್ಟು ಬಡ್ಡಿಯನ್ನು ನಾವೀಗ ತೀರಿಸಬೇಕಾಗಿದೆ. ಇಷ್ಟಕ್ಕೆಲ್ಲಾ ನಾವೀಗ ಹಣವನ್ನು ಒದಗಿಸಬೇಕಾಗಿದೆ. ಆದರೆ ನಾವು ಈ ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರ ಮೇಲೆ ಹೊರಿಸಿದ್ದ ಆಪಾದನೆಗಳ ಬಗ್ಗೆ ಶ್ರೀಮಾನ್ ಹೆಗ್ಗಡೆಯವರು ಬಹಳ ದಕ್ಷತೆಯಿಂದ ಅಂಕಿಸಂಖ್ಯೆಗಳನ್ನು ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಗಳ ಮುಂದೆ ಒದಗಿಸಿ ಅವರನ್ನು ನಿರಪರಾಧಿಗಳನ್ನಾಗಿ ಮಾಡಿದರು. ಅದಕ್ಕಾಗಿ ಅವರು ಆ ದಿವಸ ನಿಜಲಿಂಗಪ್ಪನವರಿಂದ ಒಬ್ಬ ಪುಟ್ಟವೀರ ಎಂದು ಹೊಗಳಿಸಿಕೊಂಡರು. ಅದಕ್ಕೆ ಮೂಲ ಕಾರಣ ಅಂದರೆ ಶ್ರೀಮಾನ್ ಹೆಗಡೆಯವರೂ ಮತ್ತು ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಗಳೂ ಇಬ್ಬರೂ ಅಭ್ಯಾಸಮಾಡಿದ್ದು ಆ ಕಾಶೀಪೀಠದಲ್ಲೇ. ಆ ಒಂದು ಪರಿಚಯವನ್ನು ಹೆಗಡೆಯವರು ಬಳಸಿಕೊಂಡು ನಿಜಲಿಂಗಪ್ಪನವರನ್ನು ನಿರಪರಾಧಿಗಳನ್ನಾಗಿ ಮಾಡಲು ಶ್ರಮಿಸಿದರು. ನನಗೆ ಇದರ ಬಗ್ಗೆ ಬೇಸರವೇನೂ ಇಲ್ಲ. ಕಳೆದ ಫೆಬ್ರುವರಿ ತಿಂಗಳ 22ರ ಬ್ಲಿಟ್ಜ್ ಪತ್ರಿಕೆಯಲ್ಲಿ—ಆ ಪತ್ರಿಕೆಯಲ್ಲಿ ಬರತಕ್ಕದ್ದೆಲ್ಲಾ ಸತ್ಯವಾದುದೆಂದು ನಾನು ಹೇಳುತ್ತಿಲ್ಲ, ಆದರೆ ಅದರಲ್ಲಿ ಮಿ. ಹೆಗಡೆ ಟು ಕ್ವಿಟ್ ದಿ ಮೈಸೂರು ಕ್ಯಾಬಿನೆಟ್ ಎಂದು ಬರೆದಿದೆ. ಕ್ಯಾಬಿನೆಟ್ಟಿಗೇ ಇಂಥ ಒಂದು ಪ್ರಮುಖವಾದ ಸ್ಥಾನವನ್ನು ಪಡೆದಿರತಕ್ಕ ಹೆಗಡೆಯವರನ್ನೇ ಹೀಗೆ ಹೊರಗೆ ಹಾಕುವುದಕ್ಕೆ ಪ್ರಯತ್ನಗಳನ್ನು ನಡೆಸಿದ್ದರೆ ಅವರು ಏಕೆ ತಲೆಕೆಡಿಸಿಕೊಂಡು ಇಲ್ಲಿ ಸದಸ್ಯರು ಎತ್ತಿರುವ ಎಲ್ಲಾ ಆಕ್ಷೇಪಣೆಗಳಿಗೂ ಉತ್ತರ ಕೊಡುತ್ತಾರೆ? ಆದರೆ ಅವರು ಹೇಳಿರತಕ್ಕ ಆ ವರದಿಯಲ್ಲಿ ಜಾತಿ, ನೀತಿ ಇತ್ಯಾದಿ ನಾನಾ ಪ್ರಶ್ನೆಗಳಿರುತ್ತವೆ. ಎಲ್ಲವನ್ನೂ ಸ್ವಲ್ಪಮಾತ್ರ ಹೇಳಿದ್ದಾರೆ, ಆದರೆ ಆ

ಪತ್ರಿಕೆಯಲ್ಲಿ ಬಂದಿರತಕ್ಕದ್ದು ಬರೀ ಒಂದು ಊಹಾಪೋಹ ಆದರೆ ಪರವಾ ಇಲ್ಲ. ಹಾಗಲ್ಲದೆ ಅದೇನಾದರೂ ನಿಜವಾಗಿದ್ದರೆ ಅದೊಂದು ಬಹಳ ವ್ಯಸನಕರವಾದ ಸಂಗತಿ. ಅವರು ಎಲ್ಲಿದ್ದರೂ ಬದುಕಬಲ್ಲರು. ಅವರು ಮಂತ್ರಿಯಾಗೇ ಕೆಲಸಮಾಡಬೇಕೆಂಬ ಅಗತ್ಯ ಅವರಿಗಿಲ್ಲ. ನಾವು ಇಷ್ಟು ಕೆಟ್ಟಮೇಲೂ ನಮಗಿನ್ನೂ ಬುದ್ಧಿ ಬರಲಿಲ್ಲ ಎಂದರೆ ನನಗೆ ಬಹಳ ವ್ಯಸನವಾಗುತ್ತದೆ. ನಾವು ಇದರ ಬಗ್ಗೆ ಇದಕ್ಕಿಂತ ಹೆಚ್ಚಿಗೆ ಏನು ಮಾಡುವುದಕ್ಕೂ ಆಗುವುದಿಲ್ಲ. ನಾವೆಲ್ಲರೂ ಒಂದು ದಿನ ಸಾಯಲೇ ಬೇಕು. ಕೆಲವರು ಅಂಥ ಆಸೆ ಇಟ್ಟುಕೊಂಡಿರತಕ್ಕವರ ಫೋಟೋಗಳನ್ನು ತೆಗೆಸಿ ಇಟ್ಟುಕೊಳ್ಳಬಹುದು. ಇಲ್ಲಿ ಖಾಲಿ ಬಿದ್ದಿರುವ ಬಡವರ ತುತ್ತಿನ ಚೀಲವನ್ನು ಭರ್ತಿಮಾಡತಕ್ಕ ಒಬ್ಬ ದಾತ ಬರಲಿಲ್ಲ. ಇಲ್ಲಿ ಜನರು 8 ಆಣೆ, 10 ಆಣೆ, 12 ಆಣೆಗಳಿಗೆ ದುಡಿಯತಕ್ಕ ಜನ ಬಹಳ ಇದ್ದಾರೆ, ಇಷ್ಟು ಅಲ್ಪ ಕೂಲಿಗೆ ದುಡಿಯತಕ್ಕ ಜನ ಬೇರಾವ ದೇಶದಲ್ಲೂ ಇಲ್ಲ. ಬೇರೆ ರಾಷ್ಟ್ರಗಳಲ್ಲಿ, ಇಲ್ಲಿರತಕ್ಕ ಒಂದು ಪೆಟ್ಟಿಗೆಯನ್ನು ಇಲ್ಲಿಂದ ಎತ್ತಿ ಮತ್ತೊಂದು ಕಡೆ ಇಡಬೇಕು ಎಂದರೆ ಅದಕ್ಕೆ 2 ಡಾಲರನ್ನು ಕೂಲಿ ಕೇಳುತ್ತಾರೆ.

ಈ ದೇಶದಲ್ಲಿ 10 ಆಣೆ ಕೊಡಿ 8 ಆಣೆ ಕೊಡಿ ಅಥವಾ 50 ಪೈಸೆ ಕೊಡಿ. 8 ಘಂಟೆ ಕೆಲಸಮಾಡುತ್ತಾರೆ. ಲಕ್ಷಗಟ್ಟಲೆ, ಕೋಟಿಗಟ್ಟಲೆ ಜನ ಅನ್ನ, ಅನ್ನ ಎಂದು ರಸ್ತೆಗಳಲ್ಲಿ ಮತ್ತು ಹೊಲಗಳಲ್ಲಿ ಬಿದ್ದಿರುವಾಗ ನಿಮ್ಮ ತಲೆಗಳಲ್ಲಿ ಏನು ಯೋಚನೆ ಬರುತ್ತಾ ಇದೆಯೆಂದರೆ, ಎಲ್ಲಿ ಯಾವ ಕಟ್ಟಡಗಳನ್ನು ಕಟ್ಟಬೇಕೆಂಬುದೇ ಆಗಿದೆ. ಒಂದೊಂದು ಕಾಸನ್ನೂ ಕೂಡಿ ಕೂಡಿ ಹಾಕಿ ಕೋಟಿ ರೂಪಾಯಿಗಳಷ್ಟು ಮಾಡಿರುವಂಥಾದ್ದನ್ನು ಹೀಗೆ ನೀವು ಖರ್ಚುಮಾಡಿಕೊಂಡು ಬಂದಿದ್ದೀರಿ ಇದನ್ನೇನಾದರೂ ಕೂತು ವಿಚಾರ ಮಾಡುತ್ತೀರಾ ? ಇಲ್ಲ. ಸುಮ್ಮನೆ ಡೆಲ್ಲಿಗೆ ಹೋಗುತ್ತೀರಿ. ಅಲ್ಲಿ ಎಲ್ಲಾ ಮುಖ್ಯಮಂತ್ರಿಗಳೂ ಸೇರುತ್ತೀರಿ. ಮಾನ್ಯ ಶ್ರೀ ಡಿ. ಆರ್. ಗಾಡ್ಗಿಲ್ ಅವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ಮಾಡಿದಿರಿ. ಯಾವ ದೇವರಿಗೆ ತೃಪ್ತಿ ಮಾಡುವುದಕ್ಕೆ ನೀವು ಅದನ್ನೆಲ್ಲಾ ಮಾಡುತ್ತಿದ್ದೀರೋ ನನಗೆ ಗೊತ್ತಿಲ್ಲ. ಯಾರ ತಲೆ ತೆಗೆದರೂ, ಬಡವರ ತಲೆ ತೆಗೆಯಲಿಕ್ಕೆ ಹೋಗಬೇಡಿ. ಬಹಳ ಜನರು ಮತ್ತು ಡಾಕ್ಟರು ನನಗೆ ಹೇಳುತ್ತಾರೆ, ನೀವು ತಲೆ ಕೆಡಿಸಿಕೊಳ್ಳಬೇಡಿ, ರಕ್ತದ ಒತ್ತಡ ಜಾಸ್ತಿಯಾಗುತ್ತದೆಂದು ಹೇಳಿದ್ದಾರೆ. ಬಹುಶಃ ನಾನೂ ಸಾಯುತ್ತೇನೆ. ನೀವೂ ಸಾಯುತ್ತೀರಿ. ರಾಷ್ಟ್ರದಲ್ಲಿ ಎಲ್ಲರೂ ಸಾಯುವವರೇ. ಆದರೆ ರಾಷ್ಟ್ರ ಇರುತ್ತದೆ. ಸ್ವಾತಂತ್ರ್ಯ ನಂತರದಲ್ಲಿ ಇತಿಹಾಸವನ್ನು ಬರೆಯುವಾಗ ಮಹಾತ್ಮಗಾಂಧಿ, ನೆಹರೂ ಅವರನ್ನು ಹೊಗಳಿ ಇತಿಹಾಸ ಬರೆಯಬಹುದು, ಇನ್ನೊಬ್ಬ ಅವರ ವಿರೋಧವಾಗಿ ಬರೆಯಬಹುದು. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಸಂಪನ್ಮೂಲಗಳನ್ನು ಹುಡುಕುವುದಕ್ಕಾಗಿ ಒಂದು ತೆರಿಗೆ ಸಮಿತಿ ಎಂದು ಮಾಡಿದ್ದಾರೆ. ಮಾನ್ಯ ಶ್ರೀ ಮೊರಾರ್ಜಿಯವರು 150 ಕೋಟಿ ರೂಪಾಯಿಗಳ ಹೊಸ ತೆರಿಗೆ ಹಾಕಿಯೂ ಕೂಡ 250 ಕೋಟಿ ರೂಪಾಯಿಗಳ ಖೋತಾ ಬಡ್ಜೆಟ್ಟನ್ನು ಮಂಡಿಸಿದ್ದಾರೆ. ಆ ವಿಷಯ ನಿಮಗಿಂತ ಸಿಗರೇಟ್ ಸೇದುವವರಿಗೆ ಗೊತ್ತು. ಅದು ಒಂದು ತಿಂಗಳಿಂದ ಮಂಗಮಾಯವಾಗಿದೆ. ಹೀಗೆ ಪ್ರತಿವರ್ಷವೂ ಅವರದು ತೆರಿಗೆ ಹಾಕುವ ನೀತಿಯೇ ಆಗಿದೆ. ಆದರೆ ಎಲ್ಲಿ ತೆರಿಗೆ ಹಾಕಬೇಕೆಂಬುದನ್ನು ಯೋಚನೆಮಾಡಬೇಕು. ದೊಡ್ಡವರು ಸಿಕ್ಕಿಬೀಳುವಂಥ ರೀತಿಯಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇರುವವರಿಗೆ ತೆರಿಗೆಯನ್ನು ಹಾಕಬೇಕು. ಇಲ್ಲದಿದ್ದರೆ ಸಮುದ್ರದಲ್ಲಿ ಮೀನು ಹಿಡಿದಂತಾಗುತ್ತದೆ. ಮಾನ್ಯ ಶ್ರೀ ರಾಜಗೋಪಾಲಚಾರಿಯವರೇ ತಮಗೆ ಒಂದು ಸಂಪನ್ಮೂಲವನ್ನು ಒದಗಿಸಿಕೊಟ್ಟಿದ್ದಾರೆ. ಅದು ಸೇಲ್ಸ್ ಟ್ಯಾಕ್ಸ್. ಒಂದು ಕೆ. ಜಿ. ಅಕ್ಕಿ ತೆಗೆದುಕೊಂಡರೆ ಸೇಲ್ಸ್ ಟ್ಯಾಕ್ಸ್. ಇದರಿಂದ ಬರುವ ಆದಾಯ ಒಂದು ಕೋಟಿಯಿಂದ ಆರಂಭವಾಗಿ ಇವತ್ತು 25 ಕೋಟಿ ಮೀರಿ ಇದಿನ್ನೂ 30 ಕೋಟಿಗೂ ಹೋಗುತ್ತದೋ ಏನೋ ಗೊತ್ತಿಲ್ಲ. ಹೋಟಲಿನವರು ಮತ್ತು ಇತರ ಅಂಗಡಿಗಳವರು ನಾವು ಕೊಡತಕ್ಕ ಸೇಲ್ಸ್‌ಟ್ಯಾಕ್ಸನ್ನು ಸರ್ಕಾರಕ್ಕೆ ಕೊಡದೆ, ತಾವೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಹೊಟ್ಟೆಗೆ ಅನ್ನವಿಲ್ಲದಿದ್ದರೂ ಎಷ್ಟೋ ಜನ ಹಳ್ಳಿಗಳಲ್ಲಿ ಹೊಗೆಸೊಪ್ಪು ತಿನ್ನುತ್ತಿದ್ದಾರೆ. ಅಂಥವರಲ್ಲಿ ಈಗ ಅದನ್ನು ತಿನ್ನುವವರು ಸರ್ಕಾರಕ್ಕೆ ಒಂದಾಣೆಯಷ್ಟು ಮೂರು ಪೈಸೆ ತೆತ್ತಿರುತ್ತಾರೆ. ಅದು ನಿಮ್ಮ ಲೆಕ್ಕದಲ್ಲಿಲ್ಲ. ನಿಮ್ಮ ಓಟರುಗಳ ಲಿಸ್ಟಿನಲ್ಲಿ ಬಡ ಜನರೇ ಇಲ್ಲ. ಇಂತಹ ಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆಂದು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ನಿಮ್ಮ ಸರ್ಕಾರ ಶಾಶ್ವತವಲ್ಲ. ಯಾರೋ ಹೇಳುತ್ತಿದ್ದಾರೆ, ಪತ್ರಿಕೆಯಲ್ಲಿಯೂ ಓದಿದೆ. ಕಾಂಗ್ರೆಸ್‌ಗೆ ಹೊಸ ಕಳೆ ಬಂದಿದೆ ಎಂದು. ಕೆಟ್ಟಮಾತು ಹೇಳಬೇಕೆಂದಲ್ಲ, ಒಬ್ಬ ಸೂಳೆಯ ಮನೆಗೆ ಹೋಗಿ ಅವಳಲ್ಲಿದ್ದ ಪೌಡರನ್ನು ಮುಖಕ್ಕೆ ಬಳಿದುಕೊಂಡು ಬಂದರೆ ಹೇಗಿರುತ್ತದೋ ಆ ರೀತಿ ಈಗ ಆಗಿದೆ. ನಮ್ಮ ಕಸುಬು ಭಾಷಣ ಮಾಡುವುದಲ್ಲ. ಹಾದಿ ತಪ್ಪಿ ಇಲ್ಲಿ ಬಂದಿದ್ದೇವೆ. ಭಾಷಣ ಮಾಡಬೇಕು ಜನರನ್ನು ಮೆಚ್ಚಿಸಬೇಕು, ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು ಎಂಬುದು ನಮ್ಮ

(ಶ್ರೀ ಎಸ್. ಗೋಪಾಲಗೌಡ)

ಕಸುಬಲ್ಲ. ಗದ್ದೆ ಹೂಡುತ್ತೇವೆ, ಮಣ್ಣು ಹೊಡೆಯುತ್ತೇವೆ. ಇವೆಲ್ಲಾ ನಮ್ಮ ಅಜ್ಜ, ಅಪ್ಪನ ಕಸುಬು. ಇವತ್ತಿನ ದಿವಸ ಈ ದೇಶ ಬಹಳ ಅಭದ್ರತೆಯಿಂದ ಕೂಡಿರುವ ದೇಶವಾಗಿದೆ. ನಿಮ್ಮ ಇಂದಿರಾರವರ ಸರ್ಕಾರ ಎಷ್ಟು ಅಭದ್ರವಾಗಿದೆಯೆಂದರೆ ನಿಮ್ಮ ಕೇಂದ್ರ ಸರ್ಕಾರದ ಗಡಿಯಾರದ ಮುಳ್ಳು ಅಲ್ಲಾಡುವಂತಾಗಿದೆ.

ಅಧ್ಯಕ್ಷರು.—ವೇಳೆಯಾಯಿತು. ಭಾಷಣ ಜಾಗ್ರತೆ ಮುಗಿಸಿ.

ಶ್ರೀ ಎಸ್. ಗೋಪಾಲಗೌಡ.—ತಮಗೆ ಬೇಜಾರು ಆಗುತ್ತದೆಯೇ ? ಸಮಯವಾಗುತ್ತದೆಯೇ ?

ಅಧ್ಯಕ್ಷರು.—ಬೇಜಾರು ಇಲ್ಲ. ಕೇಂದ್ರಸರ್ಕಾರದ ವಿಷಯ ಬೇಡಿ. ಈ ಸರ್ಕಾರದ್ದು ಹೇಳಿ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ಈ ದಿವಸ ಅವರ ಸರ್ಕಾರ ಭದ್ರವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಶ್ರೀ ಬ್ರಹ್ಮಾನಂದರೆಡ್ಡಿಯವರು ಹೇಳುವುದು ಬೇಡ, ಮಾನ್ಯ ಶ್ರೀ ಚವಾಣ್ ಅವರು ಹೇಳುವುದು ಬೇಡ; ಗುಜರಾತಿನ ದೇಸಾಯಿಯವರು ಹೇಳುವುದು ಬೇಡ, ಮಧ್ಯಪ್ರದೇಶದ ಕಥೆ ನಮಗೆ ಗೊತ್ತು. ಇಲ್ಲಿಗೆ ದಯಮಾಡಿಸಿರುವ ರಾಜ್ಯಪಾಲರಿಗೂ ಗೊತ್ತು. ಸಮಾಜವಾದ ಸಮಾಜ ಸ್ಥಾಪಿಸುವುದಾಗಿ ಹೇಳಿದ ಕಾಂಗ್ರೆಸ್ಸಿನವರಿಗೆ ಯಾವರೀತಿ ಬೆಂಬಲ ಜನರು ಕೊಡುತ್ತಾರೆಂಬುದು ಗೊತ್ತು. ಜನರು ಬಹಳ ಕಷ್ಟಪಟ್ಟು ಸಂಪಾದಿಸಿದ್ದನ್ನು ನೀವು ತಿನ್ನುತ್ತಿದ್ದೀರಿ. ಸಮಾಜವಾದ ಪ್ರಭುತ್ವ ತಳಹದಿಯನ್ನು ಕಟ್ಟಬೇಕೆಂದು ಹೊರಟಿದ್ದೀರಿ. ಮೇಲೆ ಏರಿದವರು ಕೆಳಗೆ ಇಳಿಯುವಾಗ ಸೋಟವಾಗುತ್ತದೆ, ಆಗ ದುಃಖವಾಗುತ್ತದೆ. ಕಾಂಗ್ರೆಸ್ಸಿನ ಅವನತಿಯೂ ನಿಮ್ಮ ಅವನತಿಯೂ ಸಂತೋಷ ಕೊಡುವುದಿಲ್ಲ, ದುಃಖಕೊಡುತ್ತದೆ. ಹುಟ್ಟಿದ ಸಂಸ್ಥೆ ಯಾವತ್ತಾದರೂ ಸಾಯುತ್ತದೆ. ಕೋಟ್ಯಾಂತರ ಜನಗಳು ಈ ರಾಷ್ಟ್ರವನ್ನು ನಿರ್ಮಾಣಮಾಡಿದ್ದರೂ ಅಮೇರಿಕಾದ ಗೋಧಿ ತಿಂದು ಅವರ ಗುಲಾಮರಾಗಿ ಬಂದ ಸ್ವಾತಂತ್ರವನ್ನು ಕಳೆದುಕೊಳ್ಳುತ್ತೇವೋ ಏನೋ ಎನ್ನುವ ಭಯ ನಮ್ಮ ಎದೆ ಹೊಡೆಯುವ ಹಾಗೆ ಮಾಡುತ್ತದೆ. ದೇವರು ಸೃಷ್ಟಿಮಾಡಿದಂಥ ಈ ಜಗತ್ತನ್ನು ಇಷ್ಟು ಕಂಗಾಲು ಸ್ಥಿತಿಗೆ ತಂದಿರುವ ನೀವು ಅಧಿಕಾರಕ್ಕಾಗಿ ಕಚ್ಚಾಟ ಮಾಡುತ್ತಿದ್ದರೆ, ನಾವು ತಾನೆ ಏನು ಮಾಡಬಲ್ಲೆವು ? ನೀವು ಕಾಂಗ್ರೆಸ್ ಹೆಸರಿನಲ್ಲಿ ನಡೆಸುತ್ತಿರುವ ಕಪಟನಾಟಕವನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವಲ್ಲಾ ಎನ್ನುವ ದುಃಖ ನಮ್ಮನ್ನು ಕಾಡುತ್ತಿದೆ. 1969ನೇ ಇಸವಿಯಲ್ಲಿ ಗಾಂಧಿ ಶತಾಬ್ದಿ ಆಚರಿಸುತ್ತಿದ್ದೇವೆ, ತಾವೆಲ್ಲರೂ ಗಾಂಧಿ ಅನುಯಾಯಿಗಳೆಂದು ಹೇಳುತ್ತಿದ್ದೀರಿ. ಆಮೇಲೆ ಆದರೂ ಕಾಂಗ್ರೆಸ್ಸನ್ನು ವಿಸರ್ಜನೆಮಾಡಿ.

7-30 P.M.

ನೀವು ಅಂಡಮಾನಿಗೆ ಹೋಗಿ ಬಂದರೂ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿ ಎಲ್ಲಾ ಮೊನ್ನೆ ನೋಡಿಕೊಂಡು ಬಂದಿದ್ದೀರಿ. ಆದ್ದರಿಂದ ನಾನು ಹೇಳುವುದು, ಮೊರಾರ್ಜಿಯವರು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಮಾಡಬೇಕೆಂದು ಪಣತೊಟ್ಟು ಅದರಂತೆ ವರ್ಷ ವರ್ಷ ಉಡುಗೊರೆಯನ್ನು ಈ ದೇಶದ ಜನರಿಗೆ ಕೊಡುತ್ತಿದ್ದಾರೆ. ಇದ್ದ 101 ಕಂಪೆನಿಗಳಲ್ಲಿ, 10 ರಿಂದ 15 ಕೋಟಿ ರೂಪಾಯಿ ಬಂಡವಾಳ ಇರುವಂತದ್ದು 36, 15 ರಿಂದ 26 ಕೋಟಿಯವರೆಗೆ ಇರುವಂತದ್ದು 40, 25 ರಿಂದ 50 ಕೋಟಿ ಬಂಡವಾಳ ಇರುವಂತದ್ದು 16, 50 ಕೋಟಿಗಿಂತ ಮೇಲ್ಪಟ್ಟು ಬಂಡವಾಳ ಇರುವಂತದ್ದು 9. ಹೀಗೆ 101 ಕಂಪೆನಿಗಳು. ಅವಡಿ ನಿರ್ಣಯವನ್ನು ಮುಖರ್ಜಿಯಾಗಲಿ, ನಂಬೂದ್ರಿಪಾಡಾಗಲಿ, ಕಾರ್ಯಗತ ಮಾಡಿದರೆ, ನಾವೆಲ್ಲಾ ಅಧಿಕಾರ ಬಿಟ್ಟುಬಿಡುತ್ತೇವೆಂದು ಹೇಳುತ್ತಿದ್ದಾರೆ. ಮುಖರ್ಜಿಯವರನ್ನು ಸೋಲಿಸುವುದಕ್ಕೆ ಅತುಲ್ಯ ಘೋಷರು ರಾಜಿನಾಮೆ ಕೊಟ್ಟರು. ಆ ಒಂದು ಚುನಾವಣೆಯ ಕತೆಯೇ ಬೇರೆ ಇದೆ, ಇನ್ನು ಮುಂದಿನ ಚಿತ್ರ ಪರದೆಯ ಮೇಲೆ ನೋಡಬೇಕಾಗಿದೆ. ನಾವು ಏನೋ ಭಾಷಣ ಮಾಡಿಕೊಂಡು ಇದ್ದರೆ ಅದು ಒಂದು ದೊಡ್ಡ ವಿಷಯವಾಗುವುದಿಲ್ಲ. ನಂಬೂದ್ರಿಪಾಡರನ್ನು ತೆಗೆಯುವುದು ಕೇಂದ್ರಸರ್ಕಾರದಲ್ಲಿರತಕ್ಕಂತಹ ಗೋವಿಂದ ಮೆನನ್ ಸಾಹೇಬರಿಗೆ ಕಠಿಣ ಇದೆ. ಗಾಂಧೀಜಿಯವರನ್ನು ತೆಗೆದ ಮೇಲೆ, ಮಾರ್ಟಿನ್ ಲೂತರನ್ನು ತೆಗೆದ ಮೇಲೆ, ಕನೆಡಿಯವರನ್ನು ತೆಗೆದಮೇಲೆ, ಮಂತ್ರಿಗಳನ್ನು ತೆಗೆಯುವುದು ದೊಡ್ಡ ವಿಷಯವಲ್ಲ. ಅದು ನನಗೆ ದೊಡ್ಡದೆಂದು ಎನಿಸಲಿಲ್ಲ.

ಆದರೆ ಸಮಾಜವಾದವನ್ನು ತರುವುದು ಹೇಗೆ ? ನೀರು ಇಲ್ಲದಿರತಕ್ಕಂತಹ ಜನರಿಗೆ ಏನಾದರೂ ನಮ್ಮ ಕಾಲದಲ್ಲಿ ಒಂದು ಆಶ್ರಯವನ್ನು ದೊರಕಿಸಿಕೊಳ್ಳುವುದಕ್ಕಾಗುತ್ತದೆ ಎನ್ನುವ ಒಂದು ಹಂಬಲದಿಂದ ಇವತ್ತಿನ ದಿವಸ ನಿಮ್ಮ ಜೊತೆಗೆ ನಾವು ರಾಜಕಾರಣಿಗಳಾಗಿದ್ದೇವೆ. ಆದರೆ ನೀವು ಮಾತ್ರ ಹೇಗೆ ಜಾಲಿಮರನೆರಳಲ್ಲವೋ, ಹಾಗೆ ಕಾಂಗ್ರೆಸ್ ನೆರಳಾಗಿಲ್ಲ. ಘಟಪ್ರಭಾ ಮಲಪ್ರಭಾ ಯೋಜನೆಯ ಬಗ್ಗೆ ಕೃಷ್ಣಾ ಯೋಜನೆಯ ಬಗ್ಗೆ ಏನೂ ಹೇಳಿಲ್ಲ. ಬ್ರಿಟಿಷರು ಇರುವಾಗ ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಇತ್ತು. ಆಗ ಅವರನ್ನೆಲ್ಲಾ ಹೋಗಿಬಿಡಿರಿ, ಎಂದು ಹೇಳುತ್ತಿದ್ದೆವು ಅವರು ಬಂಗಾರ ಎಲ್ಲಾ ಇಲ್ಲಿಂದ ಸಾಗಿಸುತ್ತಿದ್ದಾರೆ, ಅದ್ದರಿಂದ ನಾವು ನಿರ್ಗತಿಕರಾಗಿದ್ದೇವೆ ಎನ್ನುವಂತಹ ಕಾಲವೂ ಇತ್ತು. ನಮ್ಮ ದೇಶ ಅಂದರೆ ಏನು, ನಮ್ಮ ಜನ ಅಂದರೆ ಏನು, ನಮ್ಮ ಇತಿಹಾಸ ಏನು ? ಹರಿಶ್ಚಂದ್ರ ರಾಮ ಪರಮಾತ್ಮರಂತಹ ಮಹಾ ವ್ಯಕ್ತಿಗಳು ಹುಟ್ಟಿದಂತಹ ನಾಡು, ವಿಶ್ವಕ್ಕೇ ಒಂದು ಸಂಸ್ಕೃತಿಯನ್ನು ತೋರಿಸುವಂತಹ ನಾಡು. ಇದನ್ನೆಲ್ಲಾ ಕೆಡಿಸಿ ಬ್ರಿಟಿಷರು ಹಾಳು ಮಾಡಿಬಿಟ್ಟಿದ್ದಾರೆ. ಆದ್ದರಿಂದ ಅವರನ್ನು ಓಡಿಸೋಣ ಎಂದು ಗಾಂಧೀಜಿಯವರು ಕರೆ ಕೊಟ್ಟರು ನಾವು ಅದರಂತೆ ನಡೆದೆವು. ಅವರು ಇದನ್ನು ನೋಡಿಬಿಟ್ಟು ಓಡಿಹೋದರು. ನಂತರ ಬಂತು ಕಾಂಗ್ರೆಸ್ ರಾಜ್ಯ. ರಾಷ್ಟ್ರ ಕಟ್ಟುವುದು ಹೀಗೆ ಅಲ್ಲವೆಂದು ಹೇಳಿದ್ದೇವೆ. ರಾಷ್ಟ್ರ ಕಟ್ಟುವಾಗ ದಿಣ್ಣೆ, ಹಳ್ಳ ಎರಡೂ ಇರುತ್ತದೆ; ಅವೆರಡನ್ನೂ ನೋಡಿಕೊಂಡು, ದಿಣ್ಣೆಯನ್ನು ಸ್ವಲ್ಪ ಕಡಿಮೆ ಮಾಡಬೇಕು, ಹಳ್ಳವನ್ನು ಸ್ವಲ್ಪ ತುಂಬಬೇಕು. ಶ್ರೀಮಂತರಿಗೆ ಕೊಡುವುದರಲ್ಲಿ ಸ್ವಲ್ಪ ಬಡವರಿಗೂ ಕೊಡಿ. 30-40 ಕೋಟಿ ಎಕರೆ ಜಮೀನು ಇದೆ, ಅದರಲ್ಲಿ ಸ್ವಲ್ಪ ಜಮೀನು ಇವರಿಗೂ ಕೊಡಿ, ನೀರಾವರಿ ಸೌಲಭ್ಯ ಕೊಡಿ. ಬೆಳೆ ಹೋದರೆ ಸ್ವಲ್ಪ ಕಂದಾಯವನ್ನು ಮಾಫಿ ಮಾಡುವುದನ್ನು ಮಾಡಬೇಕು. ಬ್ರಿಟಿಷರು ತುಳಿದ ರಾಜ್ಯವನ್ನು ಸ್ವಲ್ಪ ಸರಿಪಡಿಸಿಕೊಳ್ಳೋಣ. ಜನರು ಇದನ್ನು ಸ್ವಲ್ಪ ತಿಳಿದುಕೊಳ್ಳಲಿ. ರಾಷ್ಟ್ರದ ದುರ್ಗತಿಯನ್ನು ಅರ್ಥ ಮಾಡಿಕೊಳ್ಳಲಿ. ನಾನು 1948ರಲ್ಲಿ ಹೇಳಿದ ಮಾತನ್ನು ಇವತ್ತೂ ಕೂಡ ಹೇಳುತ್ತೇನೆ. ಆದರೆ ನಮ್ಮ ಕಾಂಗ್ರೆಸ್ಸಿನ ಮಿತ್ರರಿಗೆ ಮನಸ್ಸು ಯಾವಾಗಲೂ ಸುಖದ ಕಡೆಗೇ ಎಳೆಯುವುದು. ಸುಮಾರು 20 ವರ್ಷ ಅಧಿಕಾರದಲ್ಲಿದ್ದರೆ, ಯಾವಾಗಲೂ ನಂತರ ಅವನ ಮನಸ್ಸು ಅಧಿಕಾರಕ್ಕೇ ಎಳೆಯುತ್ತದೆ. ಗಾಂಧೀಜಿಯ ನಿಜವಾದ ಭಕ್ತರಿಗೆ ಕೂಡ, ಆ ಒಂದು ಸುಖ ಮೈಗೆ ಅಂಟಿಬಿಡುತ್ತದೆ. ಅದಕ್ಕೆ ಯಾವ ಸಾಬೂನೂ ಹಿಡಿಯುವುದಿಲ್ಲ. ಎಷ್ಟೋ ಜನರು, ಈಗಲೂ ಅವರ ಅಕ್ಕತಂಗಿಯರು, ಬಂಧುಬಳಗದವರು, ನಿರ್ಗತಿಕರಾಗಿದ್ದಾರೆ. ಅಂಥವರ ಮಕ್ಕಳಾಗಿ ಅಂಥವರ ಮನೆಯಲ್ಲಿ ಬೆಳೆದಿರುವಂತವರು, ಇಂದು ಎಂ.ಎಲ್.ಎ.ಗಳಾಗಿದ್ದಾರೆ ; ಮಂತ್ರಿಗಳಾಗಿದ್ದಾರೆ, ಆದರೆ ಅಂಥ ಜನರ ಕೂಗನ್ನು ಇವತ್ತು ಇವರು ಕೇಳುತ್ತಾ ಇಲ್ಲ. ಅವುಗಳನ್ನು ಕಣ್ಣೆತ್ತಿ ನೋಡುತ್ತಿಲ್ಲ, ಕಿವಿಕೊಟ್ಟು ಕೇಳುತ್ತಿಲ್ಲ. ಇಂಥ ಒಂದು ಮೌಢ್ಯ ಆವರಿಸಿ, ಈ ರಾಷ್ಟ್ರವನ್ನು ನೀವು ದುರ್ಗತಿಗೆ ತೆಗೆದುಕೊಂಡು ಹೋಗುವುದಾದರೆ, ಈ ಬಗ್ಗೆ ನಾನು ಬಹಳ ದುಃಖವನ್ನು ಮಾತ್ರ ವ್ಯಕ್ತಪಡಿಸಬೇಕಾಗಿದೆ. ಶ್ರೀಮಾನ್ ಹೆಗಡೆಯವರು ಹೇಗೆ ಸಂಪನ್ಮೂಲಗಳನ್ನು ಒದಗಿಸುತ್ತಾರೆಂದು ಗೊತ್ತಿಲ್ಲ. ಮೊರಾರ್ಜಿಯವರು ಹೇಗೆ ಈ 150 ಕೋಟಿ ರೂಪಾಯಿ ತೆರಿಗೆಯನ್ನು ರಾಷ್ಟ್ರದ ಜನತೆಯಿಂದ ವಸೂಲು ಮಾಡುತ್ತಾರೆಂದು ಗೊತ್ತಿಲ್ಲ, 250 ಕೋಟಿ ರೂಪಾಯಿಯನ್ನು ಹೇಗೆ ಸರಿದೂಗಿಸುತ್ತಾರೆಂದು ಗೊತ್ತಿಲ್ಲ. ಈ ಆಯವ್ಯಯಪಟ್ಟಿಯಲ್ಲಿ ತಾವು ಹಳ್ಳಿಗಳ ಜನರು ಏನು ಬಹಳ ಸೌಲಭ್ಯವನ್ನು ಪಡೆದಿದ್ದಾರೆಂದು ಹೇಳುತ್ತಿದ್ದೀರಿ, ಅದು ಸರಿಯಲ್ಲ. ಪಟ್ಟಣದಲ್ಲಿ ತೆರಿಗೆ ಹಾಕುವುದಕ್ಕೆ ಮನಸ್ಸಿಲ್ಲವೆಂದು ಹೇಳಿದ್ದೀರಿ. ಕೊನೆಗೆ ಮೊರಾರ್ಜಿಯವರು ತಮ್ಮ ಭಾಷಣದಲ್ಲಿ ತಿದ್ದುಪಡಿ ಮಾಡಿಕೊಂಡಿದ್ದಾರೆ. ಇವತ್ತು 5 ಲಕ್ಷ ಹಳ್ಳಿಗಳಿವೆ. ಅಲ್ಲಿ ಹೋದಂತವನಿಗೆ ಕರುಳು ಕಿತ್ತುಕೊಂಡು ಬರುತ್ತಿದೆ. ನಮಗೆ ಅಲ್ಲಿಗೆ ಬಿಳಿ ಬಟ್ಟೆ ಹಾಕಿಕೊಂಡು ಹೋದವರಿಗೆ ನಾಚಿಕೆಯಾಗುತ್ತದೆ.

ನಾವೆಲ್ಲರೂ ಹಳ್ಳಿಯಲ್ಲಿ ಹುಟ್ಟಿ ದನಕರುಗಳು ಮತ್ತು ಕುರಿಗಳ ಜೊತೆಯಲ್ಲಿ ಬೆಳೆದಿದ್ದೇವೆ. ಇವೊತ್ತೇನೋ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು ಈ ಜಾಗದಲ್ಲಿ ಬಂದು ಕುಳಿತುಕೊಂಡಿದ್ದೇವೆ. ಈಗಾಗಲೇ ನಮಗೆ ಸ್ವಾತಂತ್ರ ಬಂದು 20 ವರ್ಷಗಳು ಉರುಳಿ ಹೋಗಿವೆ. ಆದರೂ ಸಹ ನಮ್ಮ ಹಳ್ಳಿಯ ಜನಗಳ ಪರಿಸ್ಥಿತಿ ಸುಧಾರಿಸಿಲ್ಲ. ನಮ್ಮ ರಾಜ್ಯದಲ್ಲಿ 110 ಅಡಮಾನ ಬ್ಯಾಂಕುಗಳು ಡೀಫಾಲ್ಟ್ ಆಗಿವೆ. ಅರ್ಧಬಾವಿ ತೆಗೆದಿರತಕ್ಕವರ ಗತಿ ಏನು ? ಅವನು ಯಾವರೀತಿ ಎಲ್ಲಿಂದ ಹಣವನ್ನು ತಂದು ಆ ಕೆಲಸವನ್ನು ಪೂರ್ತಿಮಾಡಬೇಕು ! ಅವನು ಮತ್ತೊಂದು ಬಾವಿಯನ್ನು ಹಾರಿ ಸಾಯಬೇಕು ಎಂಬುದು ಸ್ಪಷ್ಟವಾಗಿದೆ. ಭೂಸುಧಾರಣಾ ಕಾನೂನನ್ನು ಯಾವಾಗ ಜಾರಿಗೆ ತರುತ್ತೀರಿ ಶ್ರೀಮಾನ್ ಕಳಜಲಗಿಯವರು ಹೇಳಿದರು ಭೂಸುಧಾರಣೆಯನ್ನು ಜಾರಿಗೆ ತರಬೇಕಾದರೆ 32 ಕೋಟಿ ರೂಪಾಯಿಗಳ ಪರಿಹಾರವನ್ನು ಈ ಸಂಬಂಧದಲ್ಲಿ ಭೂಮಾಲೀಕರಿಗೆ ಕೊಡಬೇಕಾಗುತ್ತದೆ. ಪರಿಹಾರವನ್ನು ತೆಗೆದುಕೊಳ್ಳತಕ್ಕವರು ಸರ್ಕಾರದವರು ಕೊಟ್ಟಂಥ ಪರಿಹಾರ ಸಾಲಲಿಲ್ಲ

(ಶ್ರೀ ಕೆ. ಗೋಪಾಲಗೌಡ)

ಎಂದು ಬಹುಶಃ ಯಾರಾದರೂ ಕೋರ್ಟಿಗೆ ಹೋದರೆ ಒಂದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುವಂಥಾದ್ದಕ್ಕೆ ನ್ಯಾಯಾಧೀಶರು 8 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಬರೆಯಬಹುದು. ಇಂಥಾದ್ದೆಲ್ಲಾ ಬರುತ್ತದೆ. ಇದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ದುಡಿಯುವ ಜನಗಳಿಗೆ ಪ್ರೋತ್ಸಾಹವನ್ನು ನೀಡಿ. ನಿಮ್ಮ ಈ ಮರುಳು ಬುದ್ಧಿವಂತಿಕೆಗೆ ನಿರಕ್ಷರ ಕುಕ್ಷಿಗಳಾದಂತಹ ಜನ ಮರುಳಾಗಿ ನಿಮಗೆ ವೋಟು ಕೊಟ್ಟಿದ್ದಾರೆ. ಕಾಂಗ್ರೆಸ್ಸಿಗೆ ಹೊಸ ಕಳೆ ಬರುವುದಿಲ್ಲ. ಬೇರೆ ಕಳೆ ಬರುತ್ತದೆ. ಅದನ್ನು ನೀವು ಅನುಭವಿಸಬೇಕಾಗುತ್ತದೆ. ನಿಮ್ಮ ದುಂದುವೆಚ್ಚ, ನೀವು ಹಾಳುಮಾಡಿರುವ ದುಡ್ಡು, ನೀವು ಜನಗಳಿಗೆ ಕೊಟ್ಟಿರುವ ದವಸ, ನೀವು ಜನಗಳಿಗೆ, ರೈತರಿಗೆ ಕೊಟ್ಟಿರುವ ಸಾಲಗಳು, ಕಂತು ಬಿಟ್ಟಿರುವ ಸಾಲಗಳು ಇವೆಲ್ಲವೂ ಇವೆ. ನೀವು 30 ಸಾವಿರ ಕೋಟಿ ರೂಪಾಯಿಗಳನ್ನು ಹಾಳು ಮಾಡಿರುವುದನ್ನು ನಾನು ಮಾಫಿ ಮಾಡುತ್ತೇನೆ. ಆದರೆ 23 ವರ್ಷಗಳನ್ನು ಹಾಳುಮಾಡಿರುವುದನ್ನು ಯಾರು ಮಾಫಿ ಮಾಡುತ್ತಾರೆ? ಸಾಧನೆ ಇಲ್ಲದೆ ಸಮಯ ಹೋಯಿತು ಎಂದು ದುಃಖ. ನಡೆಯುವ ಮನುಷ್ಯ ಎಡವುತ್ತಾನೆ ಎಲ್ಲಾ ಸರಕಾರಗಳೂ ತಪ್ಪುಮಾಡುತ್ತವೆ. ಆದರೆ ಜನಗಳಿಂದ ನೀವು ವೋಟು ಹಾಕಿಸಿಕೊಂಡು ಅವರಿಗೆ ಮೋಸ ಮಾಡಿದ್ದೀರಿ, ಜನ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಈಗ ನಾನು ಒಬ್ಬ ರಾಜಕಾರಣಿ, ರಾಜಕಾರಣಿಯಾಗಿರುವವನು ಏನೂ ತಪ್ಪು ಮಾಡದಿದ್ದರೂ, ಏನೂ ತಿನ್ನದೇ ಇದ್ದರೂ ವಿನಾಕಾರಣ ನಮ್ಮ ತಲೆಗೆ ಕಳಂಕವನ್ನು ಹೊರಿಸುತ್ತಾರೆ. ಇಡೀ ದೇಶದಲ್ಲಿರತಕ್ಕ ರಾಜಕಾರಣಿಗಳ ಕೊರಳಿಗೆ ಒಂದು ದೊಡ್ಡ ಕಳಂಕವನ್ನು ಸುತ್ತುತ್ತಾರೆ. ಈ ದೃಷ್ಟಿಯಿಂದ ಮಂತ್ರಿಗಳಾಗಲೀ ಯಾರೇ ಆಗಲೀ ಶ್ರಮಪಟ್ಟು ಕೆಲಸ ಮಾಡಬೇಕು. ಭ್ರಷ್ಟಾಚಾರದ ಬಲೆಗೆ ಬೀಳದ ಹಾಗೆ ಕೆಲಸ ಮಾಡಬೇಕು. ಪುಣ್ಯ ಮಾಡದೆ ಪುಣ್ಯದ ಫಲ ದೊರೆಯುವುದಿಲ್ಲ ದುಡಿಯಬೇಕು. ದುಡಿಯುವವರಿಗೆ ಪ್ರೋತ್ಸಾಹವನ್ನು ಕೊಡಬೇಕು. ವ್ಯವಸಾಯ ಮಾಡುವವರಿಗೆ ಭೂಮಿ ಕೊಡಬೇಕು, ನೀರಾವರಿ ಸೌಲಭ್ಯ ಒದಗಿಸಿ ಕೊಡಬೇಕು. ಅವರ ಮಕ್ಕಳಿಗೆ ವಿದ್ಯೆ ಕೊಡಬೇಕು, ಅವರಿಗೆ ಎಲ್ಲಾ ವಿಧವಾದ ಸೌಕರ್ಯವನ್ನು ಒದಗಿಸಿಕೊಡುವ ಕಡೆ ಸರ್ಕಾರ ಗಮನವನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಆಯವ್ಯಯ ಮುಂಗಡ ಪತ್ರ ಜಾದೂ ಪೆಟ್ಟಿಗೆ ಅಲ್ಲ. ಹಾಗೇನಾದರೂ ಆಗಿದ್ದರೆ ಈ ರಾಜ್ಯದ ಪ್ರತಿಯೊಬ್ಬ ನಾಗರೀಕನಿಗೂ ಅವನ ಆಶೆ ಆಕಾಂಕ್ಷೆ ಬಯಕೆ ಏನೇನು ಇದೆಯೋ ಅದನ್ನೆಲ್ಲಾ ತೀರಿಸತಕ್ಕಂಥ ಉಪಾಯವನ್ನು ಹೊರಗೆಡವಿಸಬಹುದಾಗಿತ್ತು. ಆಯವ್ಯಯ ಮುಂಗಡ ಪತ್ರ ಕೇವಲ ಅಂಕೆ ಸಂಖ್ಯೆಗಳ ಜಂಜಾಟವಲ್ಲ. ಮಾನ್ಯ ಸದಸರು ತಿಳಿದಿರುವ ಹಾಗೆ ನಾನು ಈ ಮಾನ್ಯ ಸಭೆಗೆ ಒಪ್ಪಿಸುತ್ತಾ ಇರತಕ್ಕದ್ದು ನಾಲ್ಕನೆಯ ಆಯವ್ಯಯ ಮುಂಗಡ ಪತ್ರ. ಈ ಆಯವ್ಯಯ ಮುಂಗಡ ಪತ್ರವನ್ನು ಕುರಿತು ತಯಾರು ಮಾಡಿದಂತಹ ಭಾಷಣದಲ್ಲಿ ಆದಷ್ಟು ಮಟ್ಟಿಗೆ ತಾಂತ್ರಿಕ ಜಂಜಾಟವನ್ನು ತಪ್ಪಿಸುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ಮತ್ತು ನಮ್ಮ ಹತ್ತಿರ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಮಾನ್ಯ ಸದಸ್ಯರಿಗೆ ಇಂದಿನ ಆರ್ಥಿಕ ಸ್ಥಿತಿಯನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುವಂತೆ, ಸಹಾಯಕವಾಗುವಂತೆ ಅನೇಕ ಮಾಹಿತಿಯನ್ನು ಮತ್ತು ಲಿಟರೇಚರ್ ಅನ್ನು ಇದರ ಜೊತೆಗೆ ಇಟ್ಟಿದ್ದೇನೆ. ಮಾನ್ಯ ಸದಸ್ಯರು ಯಾರಾದರೂ ಆಯವ್ಯಯ ಮುಂಗಡ ಪತ್ರ ರಾಜ್ಯಕ್ಕೆ ಬೇಕಾದಂತಹ ಎಲ್ಲಾ ಕೆಲಸಗಳನ್ನೂ ಮಾಡತಕ್ಕಂಥ ಒಂದು ಕಾರ್ಯಕ್ರಮ ಎಂದು ತಿಳಿದುಕೊಂಡಿದ್ದರೆ ಅದು ಸರಿಯಲ್ಲ ಎಂದು ನಾನು ನಮ್ರತೆಯಿಂದ ಹೇಳುವುದಕ್ಕೆ ಬಯಸುತ್ತೇನೆ. ಆರ್ಥಿಕ ಪರಿಸ್ಥಿತಿಯ ಚೌಕಟ್ಟಿನಲ್ಲಿ ಆದಷ್ಟು ಮಟ್ಟಿಗೆ ವಾಸ್ತವಿಕವಾದ ಅಂದಾಜು ಸಭೆಯ ಮುಂದೆ ಇಡುವುದು ಇದರ ಉದ್ದೇಶ. ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಯಾದರೆ ಅದರಿಂದ ನಮ್ಮ ಸಮಸ್ಯೆಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಕೆಲವು ಸ್ಥಾನಿಕ ಸಮಸ್ಯೆಗಳನ್ನಾಗಲೀ ಅಥವಾ ಇನ್ನಿತರ ಸಮಸ್ಯೆಗಳನ್ನು ಆಗಲೀ ಚರ್ಚೆ ಮಾಡಿದರೆ ಅದು ಅಪ್ರಾಸಂಗಿಕವಾಗುತ್ತದೆ. ಅಷ್ಟೇ ಅಲ್ಲ, ವಿನಾಕಾರಣ ನಮ್ಮ ಸಮಯದ ವ್ಯಯವಾದಂತಾಗುತ್ತದೆ. ಮೈಸೂರು ರಾಜ್ಯದ ಸುಂದರವಾದ ನೈಸರ್ಗಿಕ ಸಂಪತ್ತಿನ ದೃಷ್ಟಿಯಿಂದ ನೋಡುವುದಾದರೆ ಬೇರೆ ಯಾವುದೇ ರಾಜ್ಯಗಳಿಗೆ ಕಡಿಮೆಯಿಲ್ಲ. ನಮಗೆ ನೀರಿನ ಸಂಪತ್ತು ಇದೆ, ಅರಣ್ಯ ಸಂಪತ್ತು ಇದೆ, ಭೂಮಿ ಸಂಪತ್ತು ಇದೆ, ಭೂಗರ್ಭದ ಸಂಪತ್ತು ಇದೆ, ಸಮುದ್ರದ ಸಂಪತ್ತು ಇದೆ, ಸಮುದ್ರದ ಗರ್ಭದಲ್ಲಿರುವ ಸಂಪತ್ತು ಇದೆ. ಇದು ಎಲ್ಲರಿಗೂ ತಿಳಿದಿರುವ ಸಮಾಚಾರ. ಆದರೆ ಇದನ್ನು ಹೊರತೆಗೆದು ಜನತೆಯ ಕಲ್ಯಾಣದ ದೃಷ್ಟಿಯಿಂದ ಯಾವ ರೀತಿ ಮತ್ತು ಎಷ್ಟು ಬೇಗ

ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬುದೇ ಸರ್ಕಾರದ ಕಾರ್ಯಕ್ರಮ ಮತ್ತು ಆದರ್ಶ. ಆ ದೃಷ್ಟಿಯಿಂದ ನಾವು ಅಳತೆ ಮಾಡಿ ನೋಡುವುದಾದರೆ ನಮಗೆ ಇರತಕ್ಕಂಥ ವಿಶಿಷ್ಟವಾದ ಸೀಮೆ, ಮೇರೆಯನ್ನು ನೋಡಿದರೆ ನಮ್ಮ ಸಂಪತ್ತಿನ ಶಕ್ತಿಯನ್ನು ನೋಡಿದರೆ ನಾವು ಇಲ್ಲಿಯವರೆಗೂ ಮಾಡಿರುವ ಸಾಧನೆ ನೋಡಿದರೆ ನಾವು ಅಷ್ಟೊಂದು ಅವಹೇಳನಕ್ಕೆ ಕಾರಣರಾಗಿಲ್ಲವೆಂದು ಪ್ರಾರಂಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ದೇಶದಲ್ಲಿ ಬಡತನ ದೂರವಾಗಿಲ್ಲ. ಈ ದೇಶದಲ್ಲಿ ನಿರುದ್ಯೋಗಿತನ ಬಹಳ ಇದೆ. ಈ ದೇಶದಲ್ಲಿ ನಿರಕ್ಷರತನ ಇನ್ನೂ ಇದೆ. ಸಾಮಾನ್ಯವಾದಂಥ ಜನರಿಗೆ ಹೊಟ್ಟೆ ತುಂಬಾ ಅನ್ನ, ಮೈತುಂಬಾ ಬಟ್ಟೆ, ವಾಸಕ್ಕೆ ಮನೆಯನ್ನು ಇನ್ನೂವರೆಗೆ ಕೊಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಈ ವಿಚಾರವನ್ನು ಆ ಕಡೆ ಕುಳಿತಿರುವವರು ಹೇಳುವ ಅಗತ್ಯವಿಲ್ಲ. ಅದನ್ನು ನಾವೇ ತಿಳಿದುಕೊಂಡಿದ್ದೇವೆ. ಮತ್ತು ಅದನ್ನು ಒಪ್ಪಿಕೊಂಡಿದ್ದೇವೆ. ಆದರೆ ಒಂದೇ ಉಸಿರಿನಲ್ಲಿ ಎಲ್ಲಾ ಕೆಲಸಗಳು ಆಗಬೇಕು, ಹೊರದೇಶಗಳಿಂದ ಸಹಾಯ ತರಬಾರದು, ಎಲ್ಲಾ ಕೆಲಸಗಳಿಗೂ ಸಾಕಷ್ಟು ಹಣ ಒದಗಿಸಬೇಕು, ಎಂದರೆ ಇದೆಲ್ಲಾ ಜಾದೂಗಾರನಿಗೆ ಸಾಧ್ಯವಾಗುತ್ತದೆಯೇ ಹೊರತು, ಈ ರಾಜ್ಯದ ಆರ್ಥಿಕ ಮಂತ್ರಿಗಳಿಗಾಗಲೀ, ಕೇಂದ್ರದ ಆರ್ಥಿಕ ಮಂತ್ರಿಗಳಿಗಾಗಲೀ, ಕೇಂದ್ರದ ಪ್ರಧಾನ ಮಂತ್ರಿಗಳಿಗಾಗಲೀ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಇಲ್ಲಿ ಬಂದಂಥ ಟೀಕೆಗಳನ್ನು ಗಮನಿಸಿದರೆ, ಇದು ಕೊರತೆಯ ಮುಂಗಡ ಪತ್ರ ಎಂದು ಹೇಳುವುದು ಒಂದು ಟೀಕೆ, ಕೊರತೆಯ ಮುಂಗಡಪತ್ರವಾಗಬಾರದು ಉಳಿತಾಯದ ಮುಂಗಡಪತ್ರವಾಗಬೇಕು, ಹೊಸ ತೆರಿಗೆ ಹಾಕಬಾರದು, ಸಾಧ್ಯವಾದರೆ ಇರುವ ತೆರಿಗೆಯನ್ನು ಕಡಿಮೆ ಮಾಡಬೇಕು, ಅದು ಕಂದಾಯವಾಗಲೀ, ವಾಟರ್ ರೇಟ್ ಆಗಲಿ ಅಥವಾ ಮತ್ತೊಂದೇ ಆಗಲೀ ಎಂದು ಹೇಳುವುದು ಒಂದು ಟೀಕೆ. ಅದೇ ರೀತಿಯಲ್ಲಿ ಕೇಂದ್ರದಿಂದ ಹೆಚ್ಚು ಸಾಲ ತರಬಾರದು, ನಮ್ಮ ಮಕ್ಕಳನ್ನು ಬಡ್ಡಿಮಕ್ಕಳನ್ನಾಗಿ ಮಾಡಬಾರದು, 120 ಕೋಟಿ ರೂಪಾಯಿಗಳ ಯೋಜನೆಗೆ ಕೇವಲ 2 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಸಾಲದು. ಹೇಮಾವತಿ ಯೋಜನೆಗೆ 50 ಲಕ್ಷ ರೂಪಾಯಿಗಳನ್ನು, ಹಾರಂಗಿಗೆ 3 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಸಾಲದು, ಇನ್ನಿತರ ಮೀಡಿಯಂ ಮತ್ತು ಮೇಜರ್ ಪ್ರಾಜೆಕ್ಟ್‌ಗಳಿಗೆ ಸಾಕಷ್ಟು ಹಣ ಒದಗಿಸಿಲ್ಲವೆಂದು ಹೇಳಿರುವುದು, ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳಿಗೆ ಒದಗಿಸಿರುವ ಹಣ ಸಾಲದು, ಇನ್ನೂ ಹೆಚ್ಚು ಒದಗಿಸಬೇಕೆಂದು ಕೇಳಿರುವುದು, ಮೀನುಗಾರಿಕೆಯ ಬಗ್ಗೆ ಬೇಕಾದಷ್ಟು ಅವಕಾಶವಿರುವುದರಿಂದ ಈ ಬಗ್ಗೆ ಒದಗಿಸಿರುವ ಹಣ ಸಾಲದು ಎಂದು ಹೇಳುವುದನ್ನು ನೋಡಿದರೆ, ಒಬ್ಬ ಮನುಷ್ಯನನ್ನು ಹಿಮಾಲಯದ ಪರ್ವತದ ಬಳಿ ಕರೆದುಕೊಂಡು ಹೋಗಿ ಅವರ ಕೈಕಾಲು ಕಟ್ಟಿ, ಒಂದು ಮರಕ್ಕೆ ಕಟ್ಟಿ ಅವನನ್ನು ಶಿಖರದ ಮೇಲೆ ಹತ್ತು ಎಂದು ಹೇಳಿದಂತಾಗಿದೆ. ಅವನು ಯಾವ ರೀತಿ ಹತ್ತುವುದಕ್ಕಾಗುತ್ತದೆ!

ಶ್ರೀ ಎಸ್. ಶಿವಪ್ಪ. – ತಮಗೆ ಹಗ್ಗ ಕಟ್ಟಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಮಾತನ್ನು ಮಾನ್ಯಸದಸ್ಯರಲ್ಲಿ ಕಳಕಳಿಯಿಂದ ಪ್ರಾರಂಭದಲ್ಲಿಯೇ ಹೇಳುತ್ತೇನೆ. ಕೇವಲ ರಾಜಕೀಯ ಉದ್ದೇಶದಿಂದ ಆಳುವ ಪಕ್ಷದವರ ಟೀಕೆ ಮಾಡುವುದು ಅಗತ್ಯವೆಂದು ಕಂಡುಬಂದರೆ, ಆ ರೀತಿ ಟೀಕೆ ಮಾಡಲಿಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಇಂದು ಈ ದೇಶದಲ್ಲಿರುವ ಪರಿಸ್ಥಿತಿ, ನಾಲ್ಕು ವರ್ಷದ ಹಿಂದೆ ಇದ್ದ ಪರಿಸ್ಥಿತಿ ಮತ್ತು 10 ವರ್ಷದ ಹಿಂದೆ ಇದ್ದ ಪರಿಸ್ಥಿತಿಯಂತೆ ಇಲ್ಲ. ಈಗ ಮಾನ್ಯ ಗೋಪಾಲಗೌಡರು ಬಹಳ ಮನನೊಂದು ಮಾತನಾಡಿದರು. ಅವರ ಕಂಠ ಗದ್ಗಿತವಾಗಿತ್ತು. ಬಹಳ ಪ್ರಾಮಾಣಿಕತನದಿಂದ ಮಾತನಾಡಿದರು. ಆ ಬಗ್ಗೆ ಸಂದೇಹ ಇಲ್ಲ. ಅದೇ ತರಹದ ಒಂದು ವೇದನೆ ನಮ್ಮ ಹೃದಯದಲ್ಲಿಯೂ ಇದೆ. ಈ ದೇಶದ ಯೋಜನೆಯನ್ನು ನಾವು ತಯಾರುಮಾಡುವಾಗ, ಅದು ಕೇವಲ ಕಾಂಗ್ರೆಸ್ ಪಕ್ಷದವರು ತಯಾರುಮಾಡುವ ಯೋಜನೆ ಎಂದು ಮಾನ್ಯ ಸದಸ್ಯರುಗಳು ತಿಳಿದುಕೊಂಡಿದ್ದರೆ ಸರಿಯಲ್ಲ. ಯೋಜನೆ ತಯಾರು ಮಾಡಬೇಕಾದರೆ ಆಳುವ ಪಕ್ಷದವರು ಅಲ್ಲದೆ ಪರಿಣತರು ತಜ್ಞರು ಇರುತ್ತಾರೆ, ರಾಷ್ಟ್ರೀಯ ಆಯೋಗ ಇರುತ್ತದೆ, ಇವರುಗಳು ಸೇರಿಕೊಂಡು ಬೇರೆ ಬೇರೆ ಹಂತದಲ್ಲಿ ಬೇರೆ ಬೇರೆ ಮಟ್ಟದಲ್ಲಿ ನಮಗೆ ಲಭ್ಯವಿರತಕ್ಕಂಥ ಸಾಧನಸಂಪತ್ತು, ಸಂಪನ್ಮೂಲಗಳ ಒಂದು ಮಿತಿಯಲ್ಲಿ ಒಂದು ಚೌಕಟ್ಟಿನಲ್ಲಿ ಎಷ್ಟರಮಟ್ಟಿಗೆ ನಾವು ಮುಂದಕ್ಕೆ ಹೋಗುವದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಚರ್ಚೆ ನಡೆಸಿ ನಂತರ ಯೋಜನೆಯನ್ನು ತಯಾರು ಮಾಡುತ್ತಾರೆ. ನಂತರ ಅದು ಪಾರ್ಲಿಮೆಂಟ್‌ನಲ್ಲಿ ಅಪ್ರೂವ್ ಆಗುತ್ತದೆ. ಈ ವಿಚಾರವನ್ನು ನಾವು ಮರೆಯಬಾರದು. ಸ್ವಾತಂತ್ರ್ಯ ಬಂದು 22 ವರ್ಷಗಳಾದವು. ಈ 22 ವರ್ಷಗಳಲ್ಲಿ ನಾವು ಎಲ್ಲ ಜನರಿಗೆ ಸಾಕಷ್ಟು ಆಹಾರವನ್ನು ಬೆಳೆಯುವುದಕ್ಕೆ ಏತಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ಯೋಚನೆ ಮಾಡಬೇಕು. ಕೇವಲ ವ್ಯವಸಾಯ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚು ಆಗಲಿಲ್ಲ ಎಂಬುದು ಒಂದೇ ಕಾರಣ

(ಶ್ರೀ ರಾಮಕೃಷ್ಣ ಹೆಗಡೆ)

ವಲ್ಲ. ಅದಕ್ಕಿಂತ ಬಲವತ್ತರವಾದ ಕಾರಣವೆಂದರೆ ನಮಗೆ ಸ್ವಾತಂತ್ರ್ಯ ಬಂದಾಗ ಈ ದೇಶದಲ್ಲಿ 30 ಕೋಟಿ ಜನರು ಇದ್ದರೆ ಈಗ 52-53 ಕೋಟಿ ಜನರು ಇದ್ದಾರೆ. ಅದನ್ನು ನಾವು ಮರೆಯ ಬಾರದು. ಶ್ರೀಮಾನ್ ಗೋಪಾಲಗೌಡರಿಗೆ ಈ ವಿಚಾರವನ್ನು ಹೇಳಬಯಸುತ್ತೇನೆ. ಯಾವುದೇ ಒಂದು ದೇಶದ ಆರ್ಥಿಕಾಭಿವೃದ್ಧಿ ಆ ದೇಶ ಹೊರದೇಶಗಳಿಂದ ಆಹಾರ ಪದಾರ್ಥಗಳನ್ನು ತರಿಸು ತ್ತದೋ ಇಲ್ಲವೋ ಎನ್ನುವ ಒಂದೇ ಕಾರಣದಿಂದ ನಿರ್ಧಾರವಾಗುವುದಿಲ್ಲ.

8-00 P.M.

ಜಪಾನ್ ಪ್ರಪಂಚದಲ್ಲಿ ಅತಿ ಹೆಚ್ಚಿನ ಔದ್ಯೋಗಿಕ ಪ್ರಗತಿ ಸಾಧಿಸಿದಂತಹ ದೇಶ. ಈ ಹೊತ್ತು ಅವರಿಗೆ ಬೇಕಾಗಿರತಕ್ಕ ನೂರರಲ್ಲಿ ಅರವತ್ತರಷ್ಟು ಪದಾರ್ಥಗಳನ್ನು ಬೇರೆ ಕಡೆಗಳಿಂದ ತರಿಸು ತ್ತಿದ್ದಾರೆ. ಆದರೆ ನಮ್ಮ ದೇಶದ ಪರಿಸ್ಥಿತಿ ಎಂತಹುದು ಎಂದರೆ, ನಮ್ಮ ದೇಶದ ಒಟ್ಟು ರಾಷ್ಟ್ರೀಯ ಆದಾಯ ನೂರರಲ್ಲಿ 50 ರಷ್ಟು ಭಾಗ ವ್ಯವಸಾಯ ಕ್ಷೇತ್ರದಿಂದ ಬರಬೇಕು. ಆದರೆ ವ್ಯವಸಾಯ ಕ್ಷೇತ್ರದಲ್ಲಿ ಕ್ರಾಂತಿ ಎಲ್ಲಿಯವರೆಗೆ ಆಗುವುದಿಲ್ಲವೋ ಅಲ್ಲಿಯವರೆಗೆ ರಾಷ್ಟ್ರೀಯ ಆದಾಯ ಹೆಚ್ಚಾಗುವುದಿಲ್ಲ ಮತ್ತು ನಮ್ಮ ಜನರ ಕಲ್ಯಾಣವಾಗುವುದಿಲ್ಲ ಎನ್ನುವ ವಿಚಾರವನ್ನೂ ನಾವು ಮನಗಂಡಿದ್ದೇವೆ. ನಮ್ಮ ಮೈಸೂರಿನಲ್ಲಿ ಇರುವ ನೈಸರ್ಗಿಕ ಸಂಪತ್ತುಗಳಿಂದ ನಾವು ನಮ್ಮ ಜನರ ಕಲ್ಯಾಣದ ಅಭಿವೃದ್ಧಿ ಮಾಡುವುದಕ್ಕೆ ಸ್ವಯಂ ಬದ್ಧವಾದ ಒಂದು ಯೋಜನೆ ಇರಬೇಕು. ಅದನ್ನು ಒಪ್ಪುತ್ತೇನೆ. ಒಂದೇ ಒಂದು ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ಇದರಲ್ಲಿರುವ ತೊಂದರೆಗಳೇನು ಎನ್ನುವುದನ್ನು ಇಲ್ಲಿ ವಿಚಾರ ಮಾಡಬೇಕಾಗಿದೆ. ನಮಗೆ ನೀರಾವರಿ ಯೋಜನೆ ಇಲ್ಲದೆ ವ್ಯವಸಾಯ ಕಡಿಮೆಯಾಗಿದೆ. ನೀರು ಸರಿ ಇಲ್ಲದೆ, ಒಣ ನೆಲಕ್ಕೆ ಎಷ್ಟು ಗೊಬ್ಬರ, ಬೀಜಗಳು ಹಾಗೂ ಹೊಸ ಹೊಸ ಯಂತ್ರೋಪಕರಣಗಳನ್ನು ಕೊಟ್ಟರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ನಮಗೆ ಇರತಕ್ಕ ಒಟ್ಟು ನೀರಾವರಿ ಭೂಮಿ ಒಟ್ಟು ಬೇಸಾಯಕ್ಕೆ ಇರತಕ್ಕ ಕ್ಷೇತ್ರದಲ್ಲಿ ಎಷ್ಟಿದೆ ಎಂದರೆ ನೂರಕ್ಕೆ 9 ಅಥವಾ ಒಂಭತ್ತೂವರೆಯಷ್ಟು ಇವೆ. ರಾಜ್ಯದಲ್ಲಿ ಹರಿಯುವ ನದಿಗಳಿಂದ, ಹಳ್ಳಗಳಿಂದ ಮತ್ತು ಪ್ರವಾಹಗಳಿಂದ ಹಾನಿಯಾಗಿ, ಒಟ್ಟು ನೂರಕ್ಕೆ 20 ಅಥವಾ 25 ರಷ್ಟು ನೀರಾವರಿ ಭೂಮಿ ಸಿಗುತ್ತದೆ. ಇಷ್ಟು ನದಿಗಳು ಹಳ್ಳಗಳು ನಮ್ಮ ರಾಜ್ಯವೊಂದರಲ್ಲೇ ಹರಿಯುತ್ತಿಲ್ಲ. ಬೇರೆ ಬೇರೆ ರಾಜ್ಯಗಳಲ್ಲೂ ಹರಿಯುತ್ತಿವೆ. ಇದರಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ನೀರು ಇರಬೇಕು ಬೇರೆ ರಾಜ್ಯಗಳಿಗೆ ಎಷ್ಟು ನೀರು ಹೋಗಬೇಕು ಎನ್ನುವುದರ ಬಗ್ಗೆ ಈ ಹೊತ್ತಿನ ದಿವಸ ವಾದವಿವಾದಗಳು ಬಂದಿವೆ. ಸ್ವಲ್ಪಮಟ್ಟಿಗೆ ವಿವೇಕ ಇರುವ ಯಾವ ಇರಿಗೇಷನ್ ಮಂತ್ರಿಯೇ ಆಗಲೀ ರಾಜ್ಯದ ಬೊಕ್ಕಸದಲ್ಲಿ ಇರುವ ಹಣವನ್ನು ನೂರೆಂಟು ಯೋಜನೆಗಳ ಮೇಲೆ ಸರಿಯಾಗಿ ಹಂಚಿದರೆ ಯಾವ ಯೋಜನೆಯೂ ಮುಗಿಯುವುದಿಲ್ಲ. ಯಾವ ಹೊಸ ಯೋಜನೆಯನ್ನು ಮಾಡಬೇಕಾದರೂ ಅವಕ್ಕೆ ದುಡ್ಡು ಬೇಕು. ಇದು ನಮ್ಮಲ್ಲಿ ಮೊದಲಿಗೆ ಉದ್ಭವವಾಗುವ ವಿಚಾರ. ನಾವು ಹಾಕಿಕೊಂಡಿರುವ ಯೋಜನೆಗಳನ್ನು ಮುಗಿಸುವು ದಕ್ಕೆ ಆಗುತ್ತಿಲ್ಲ. ಎಲ್ಲಿಯವರೆಗೆ ಯೋಜನೆಗಳು ಸಂಪೂರ್ಣವಾಗಿ ಮುಗಿಯುವುದಿಲ್ಲವೋ ಅಲ್ಲಿಯ ವರೆಗೆ ಸರಕಾರಕ್ಕೆ ಹಾಗೂ ಜನರಿಗೆ ಅಭಿವೃದ್ಧಿ ಮಾಡಲಾಗುವುದಿಲ್ಲ. ಮಾನ್ಯ ಸದಸ್ಯರು ಒಂದು ವಿಚಾರ ಗಮನದಲ್ಲಿಡಬೇಕು. ನಮ್ಮ ರಾಜ್ಯವೊಂದೇ ನೀರಾವರಿ ಯೋಜನೆಗಳನ್ನು ಕೈಗೊಳ್ಳುತ್ತಿಲ್ಲ. ಸುಮಾರು 30-35 ರಾಜ್ಯದಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಹಾಗೂ ಪ್ರಾಜೆಕ್ಟುಗಳನ್ನು ಕೈಗೊಂಡಿದ್ದಾರೆ. ಇದಕ್ಕೆ ಬೇಕಾದ ಹಾಗೆ ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದಾರೆ. ಖರ್ಚೂ ಕೂಡ ಸುಮಾರು 250 ಕೋಟಿಯವರೆಗೆ ಆಗಬಹುದು. ನಾವು ಇಷ್ಟೆಲ್ಲಾ ಯೋಜನೆಗಳನ್ನು ಕೈಗೊಂಡರೂ ಸಾಕಷ್ಟು ಪ್ರತಿಫಲ ಇನ್ನೂ ದೊರೆತಿಲ್ಲ. ಇದಕ್ಕೆ ಕಾರಣವೇನು ಎನ್ನುವುದನ್ನು ಯೋಚನೆ ಮಾಡಬೇಕು. ಒಂದು ವಿಚಾರ ಇಲ್ಲಿ ಮರೆಯಬಾರದು ಈ ನದೀ ನೀರಿನ ಯೋಜನೆಗಳನ್ನು ಕೈಗೊಳ್ಳದೇ ಹೋದರೆ ಎಲ್ಲಿ ನಮ್ಮ ಹಕ್ಕು ಹೋಗುತ್ತದೋ ಎನ್ನುವ ಭಯವೂ ಇದೆ ಮತ್ತು ಎರಡನೇದು ಇದಕ್ಕೆ ರಾಜಕೀಯ ಒತ್ತಡವೂ ಇದೆ. ಇವೊತ್ತು ನೀರಾವರಿ ಮಾಡುತ್ತಿರುವ ಯೋಜನೆಗಳಲ್ಲಿ ನೂರಕ್ಕೆ 50 ರಷ್ಟು, ನೂರಕ್ಕೆ 70 ರಷ್ಟು ನೂರಕ್ಕೆ 80 ರಷ್ಟು ಎಂದು ಹಣ ಕೊಡುತ್ತಾ ಹೋದರೆ ಬಾಕಿ ಇತರ ಯೋಜನೆಗಳಿಗೆ ಹಣವನ್ನು ತರುವುದಾದರೂ ಎಲ್ಲಿಂದ ? ಇವನ್ನೆಲ್ಲಾ ಮುಗಿಸಿದಮೇಲೆ ಇತರ ನೀರಾವರಿಯೋಜನೆಗಳನ್ನು ತೆಗೆದುಕೊಂಡರೆ ಇದರ ಪ್ರತಿಫಲ ಸುಮಾರು 2-3-4 ವರ್ಷಗಳಲ್ಲಿ ಸಿಗುತ್ತದೆ. ಬಾಕಿ ಇರುವ ಇತರ ಯೋಜನೆಗಳನ್ನು ಇನ್ನು ಐದು ಹತ್ತು ವರ್ಷಗಳಲ್ಲಾದರೂ ಮುಗಿಸಬಹುದು. ಇವೊತ್ತು ನಮ್ಮ ಮೈಸೂರಿಗೆ ಬಂದಿರತಕ್ಕ

ಒಂದು ದೊಡ್ಡ ಸಮಸ್ಯೆ ಏನೆಂದರೆ ಒಂದು ಕಡೆಗೆ ಇರುವ ನೀರನ್ನು ಉಪಯೋಗಿಸಿಕೊಳ್ಳದೇ ಹೋದರೆ ನಮಗೆ ನೀರಿನ ಮೇಲಿರುವ ಹಕ್ಕು ಹೋಗುತ್ತದೆ. ಮತ್ತೊಂದು ಕಡೆ ಮಾನ್ಯ ಸದಸ್ಯರು ಹೇಳುತ್ತಾರೆ ನಾವು ಇಷ್ಟು ದುಡ್ಡು ಹಾಕಿದರೂ ಇವರಿಂದ ಯಾವ ಪ್ರಯೋಜನವೂ ಸಿಗುವುದಿಲ್ಲ ಮತ್ತು ರೈತರಿಗೆ ಏನಾದರೂ ಅನುಕೂಲವಾಗುತ್ತದೆ ಎಂದರೆ ಏನೂ ಇಲ್ಲ, ರೈತರ ಒಕ್ಕಲುತನಕ್ಕೆ ಹಾಗೂ ಹಕ್ಕುಬಾಧ್ಯತೆಗೆ ಚ್ಯುತಿಬರುತ್ತಿದೆ. ಯಾವ ಅನುಕೂಲಗಳೂ ಆಗುತ್ತಿಲ್ಲ ಎಂದು ಹೇಳುತ್ತಾರೆ ಮತ್ತು ಯಾವ ಯೋಜನೆಗಳಿಗೆ ಹಣ ಹಾಕಿದರೂ ಅದರಿಂದ ಬರಬೇಕಾದ ಪ್ರತಿಫಲ ಬರುತ್ತಿಲ್ಲ, ಇನ್ನೊಂದು ಕಡೆ ರೈತರು ಬಹಳ ದಿನಗಳಿಂದಲೂ ನೀರನ್ನು ಉಪಯೋಗಿಸುತ್ತಿದ್ದಾರೆ ಅದಕ್ಕೆ ತಕ್ಕಂತೆ ಬೆಟರ್‌ಮೆಂಟು ಫೀಗಳನ್ನು ಹಾಗೂ ಇತರ ಕಂದಾಯಗಳನ್ನು ಕೊಡುತ್ತಿದ್ದಾರೆ ಆದರೆ ಅವರಿಗೆ ಸರಿಯಾದ ಫಲ ಸಿಗುತ್ತಿಲ್ಲ ಎಂದು, ಇವೆಲ್ಲಾ ವಿಚಾರಗಳನ್ನು ಮಾನ್ಯ ಸದಸ್ಯರು ಗಮನದಲ್ಲಿ ಇಟ್ಟುಕೊಳ್ಳಲಿ ಎಂದು ನಾನು ಇಲ್ಲಿ ಹೇಳುತ್ತಿದ್ದೇನೆ.

Sri H. N. NANJE GOWDA.—I would suggest to you to cut down the other expenditure and earmark Rs. 25 Crores for Irrigation purposes, Sir.

ಶ್ರೀ ರಾಮಕೃಷ್ಣ ಹೆಗಡೆ.—ಆ ಕೆಲಸ ಮಾಡಿಲ್ಲ. ತಾವು ಇಲ್ಲಿ ಒಂದು ನಿರ್ಣಯ ಮಾಡಿ, ಇಷ್ಟು ಶಾಲೆಗಳನ್ನು ಶಿಕ್ಷಣಕ್ಕಾಗಿ ತೆಗೆಯಬೇಕಾಗಿಲ್ಲ ಮತ್ತು ಹೊಸ ಹೊಸ ಹೈಸ್ಕೂಲುಗಳನ್ನು ಹಾಗೂ ಪ್ರೈಮರಿ ಶಾಲೆಗಳನ್ನು ತೆರೆಯುವುದು ಅವಶ್ಯಕವಿಲ್ಲ ಮತ್ತು ಇಂತಹ ಕೆಲಸಗಳಿಗೆ ಈಗ ದುಡ್ಡು ಕೊಡುವ ಅಗತ್ಯವಿಲ್ಲ ಮತ್ತು ಹೊಸದಾಗಿ ಯಾವ ನೀರಾವರಿ ಯೋಜನೆಗಳನ್ನು ತೆಗೆಯುತ್ತೀರೋ ಅದಕ್ಕೆ ಹಣ ಕೊಡಿ ಎಂದು ನಿರ್ಧಾರ ಮಾಡಿ, ಅದಕ್ಕೆ ದುಡ್ಡು ಕೊಡಲು ನನ್ನ ಆಕ್ಷೇಪಣೆ ಇಲ್ಲ. ಎಲ್ಲ ದುಡ್ಡನ್ನೂ ಅಲ್ಲಿಗೆ ಹಾಕೋಣ ಮತ್ತು ಅಲ್ಲಿ ವಿನಿಯೋಗಿಸೋಣ.

ಶ್ರೀ ಕೆ. ಹೆಚ್. ರಂಗನಾಥ್.—ಯೋಜನೆಗಳನ್ನು ಮಾಡುವಾಗ ಆಗಿಂದಾಗ್ಗೆ ಪ್ಲಾನುಗಳು ಮತ್ತು ಅಂದಾಜುಗಳನ್ನು ಬದಲಾವಣೆ ಮಾಡುತ್ತಾರೆ ಮತ್ತು ಇದರಿಂದಾಗಿ ವರ್ಷ ವರ್ಷಕ್ಕೂ ಎಸ್ಟಿಮೇಟುಗಳ ಲೆಕ್ಕ ಹೆಚ್ಚಾಗುತ್ತಾ ಇರುತ್ತವೆ. ಇದಕ್ಕೆಲ್ಲಾ ಕಾರಣರು ಯಾರು?

ಶ್ರೀ ರಾಮಕೃಷ್ಣ ಹೆಗಡೆ.—ಯೋಜನೆಗಳನ್ನು ಏಕೆ ಮುಗಿಸಲಿಲ್ಲ ಎನ್ನುವುದಕ್ಕೆ ಬೇಕಾದಷ್ಟು ಕಾರಣಗಳನ್ನು ಕೊಡಬಹುದು. ಹಿಂದೆ 15–20 ವರ್ಷಗಳ ಹಿಂದೆ ಏಕೆ ಆಗಲಿಲ್ಲ ಎನ್ನುವುದನ್ನು ಕೇಳಬೇಕಾದರೆ ಹಿರಿಯರು ನಮ್ಮ ತಾತಂದಿರು ಹಾಗೂ ಅಪ್ಪಂದಿರನ್ನು ಕೇಳಬೇಕಾಗುತ್ತದೆ. ಆಗ ಅವರು ಇದಕ್ಕೆಲ್ಲಾ ಕಾರಣವೇನು ಎನ್ನುವುದಕ್ಕೆ ಉತ್ತರ ಕೊಡಲು ತಯಾರಾಗಿದ್ದರು. ಈ ತರಹ ವಾದಗಳನ್ನು ಹೇಳುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಅಂದು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿದೆ ಎಂದು ನಾನು ಹೇಳುತ್ತಿಲ್ಲ. ನಾನು ಮೊದಲೇ ಹೇಳಿದ ಹಾಗೆ ನಾನು ಈ ಮನೆಯಲ್ಲಿ ಮಂಡಿಸುತ್ತ ಇರುವ ಈ ಬಡ್ಜೆಟ್ಟು ನಾಲ್ಕನೆಯದು. ಇವಕ್ಕೆ ಮೊದಲು ಮೂರು ಬಡ್ಜೆಟ್ಟುಗಳು ಇಲ್ಲಿ ಬಂದಿದ್ದವು. ಹಿಂದೆ ನಮ್ಮ ರಾಜ್ಯದ ವರಮಾನ ಒಟ್ಟು ನೂರ ಇಪ್ಪತ್ತು ಕೋಟಿಗಿಂತಲೂ ಕಡಿಮೆ ಇತ್ತು. ಸುಮಾರು 110 ರಿಂದ 120 ಕೋಟಿ ರೂಪಾಯಿಯೊಳಗೆ ಇತ್ತು. ಈಗ ಇದು ಸುಮಾರು 213 ಕೋಟಿಯವರೆಗೆ ಏರಿದೆ. ಈ ರಾಜ್ಯದ ವರಮಾನ ಎಷ್ಟು ನಿರೀಕ್ಷಿಸಬಹುದೋ ಅಷ್ಟೂ ಏರಿದೆ ಮತ್ತು ಮಾನ್ಯ ಸದಸ್ಯರು ಒಪ್ಪಿಕೊಂಡಂತೆ ಟ್ಯಾಕ್ಸನ್ನು ಹೆಚ್ಚು ಮಾಡಿರುವುದರಿಂದ ಇಷ್ಟು ವರಮಾನ ಬರಲು ಕಾರಣವಾಯಿತು ಎಂದು ಹೇಳಬಹುದು.

ಶ್ರೀ ಕೆ. ಹೆಚ್. ರಂಗನಾಥ್.—ಟ್ಯಾಕ್ಸ್ ಪೇಯಿಂಗ್ ಕೆಪಾಸಿಟಿ ಜಾಸ್ತಿಯಾಯಿತು ಎನ್ನುವುದನ್ನು ತಾವು ಇಲ್ಲಿ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಟ್ಯಾಕ್ಸ್ ಪೇಯಿಂಗ್ ಕೆಪಾಸಿಟಿ ಜಾಸ್ತಿಯಾಯಿತು ಎನ್ನುವುದಲ್ಲ. ಇದರಲ್ಲಿ ಎರಡು ವಿಷಯಗಳು ಸ್ವಯಂಸಿದ್ಧವಾದುದು. ಮೊದಲನೆಯದು ಉತ್ಪಾದನೆ ಹೆಚ್ಚಿದೆಯೋ ಹೇಗೆ ಮತ್ತು ಟ್ಯಾಕ್ಸ್‌ಗಳಿಂದ ಬರುತ್ತಿರುವ ವರಮಾನ ಹೆಚ್ಚಾಗಿದೆಯೇ? ಇದರಲ್ಲಿ ಮೊದಲನೆಯದನ್ನು ತೆಗೆದುಕೊಂಡರೆ ಲ್ಯಾಂಡ್ ರೆವೆನ್ಯೂ ಹಿಂದೆ ಹೆಚ್ಚಾಗಿರಲಿಲ್ಲ ಮತ್ತು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಗೂ ಇತರ ಟ್ಯಾಕ್ಸ್‌ಗಳು ಹೆಚ್ಚಾಗಿರಲಿಲ್ಲ. ಇದರಲ್ಲಿ ಮತ್ತೊಂದು ಏನಾಗಿದೆ ಎಂದರೆ ಸರಕಾರದಲ್ಲಿ ಈಗ ಆಗಿರುವಂತೆ ನಿರ್ದಿಷ್ಟವಾದ ಸಾಧನೆಗಳು ಮೊದಲು ಆಗಿರಲಿಲ್ಲ. ಟ್ಯಾಕ್ಸ್ ಕಲೆಕ್ಷನ್ ಮೆಷಿನರಿಯಲ್ಲಿ ಸ್ವಲ್ಪಮಟ್ಟಿನ ಸುಧಾರಣೆಯಾಗಿದೆ. ಇದು ಇಲ್ಲದಿದ್ದರೆ ಕೇವಲ ನಾಲ್ಕೈದು ವರ್ಷಗಳ ಹಿಂದೆ ಸುಮಾರು 12–13 ಕೋಟಿಯಷ್ಟು ಬರುತ್ತಿದ್ದ ಉತ್ಪತ್ತಿ ಇಂದು ಸೇಲ್ಸ್ ಟ್ಯಾಕ್ಸ್ ಬಾಬುಗಳಿಂದ 30 ಕೋಟಿಯವರೆಗೆ ಬರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಶ್ರೀ ಎಸ್. ಶಿವಪ್ಪ.—ರೇಟುಗಳನ್ನು ಜಾಸ್ತಿ ಮಾಡಿದಿರಿ, ಅದಕ್ಕೆ ತಕ್ಕಂತೆ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ಜಾಸ್ತಿ ಮಾಡಿದೆ ಎನ್ನುವ ಲೆಕ್ಕಗಳೆಲ್ಲ ಇದೆ. ಅದನ್ನು ತಾವು ನೋಡಬಹುದು. ನಾನು ಇಲ್ಲಿ ಮಾನ್ಯ ಸದಸ್ಯರಿಗೆ ರಾಜ್ಯದ ಒಂದು ಚಿತ್ರವನ್ನು ಕೊಡಲಿಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ರೆವೆನ್ಯೂ ಸೈಡ್‌ನಲ್ಲಿ ಏನಿತ್ತು, ಯೋಜನೆಗಳು ಯಾವ ರೀತಿ ಇತ್ತು, ಇವನ್ನೆಲ್ಲಾ ಒಂದೇ ಸಾರಿಗೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಇದನ್ನು ವಿವೇಚನೆಗೆ ತೆಗೆದುಕೊಂಡರೆ ನಮ್ಮ ಕ್ಯಾಪಿಟಲ್ ಎಕ್ಸ್‌ಪೆಂಡಿಚರಿಗಾಗಿ ನಾವು ಎಷ್ಟು ಖರ್ಚು ಮಾಡಿದರೂ ಸಾಲದು. ಇನ್ನೂ ಇದರ ಅವಶ್ಯಕತೆ ಇದೆ ಮತ್ತು ಹೆಚ್ಚು ಉದ್ದಿಮೆಗಳನ್ನು ಮಾಡುವುದೂ ಇದೆ. ಇದಕ್ಕಾಗಿ ಪ್ರತಿ ವರ್ಷ ಎಷ್ಟು ಖರ್ಚು ಮಾಡಬೇಕು ಎಂದು ಹಾಕಿಕೊಂಡಿದ್ದೇವೋ ಅದಕ್ಕಿಂತ ಹೆಚ್ಚು ಖರ್ಚು ಮಾಡಬೇಕು ಎನ್ನುವ ಒಂದು ಅಂದಾಜೂ ಇತ್ತು.

ಈ ವರ್ಷ ಪ್ಲಾನಿಂಗ್ ಕಮೀಷನ್ನಿನವರು 50 ಕೋಟಿ ರೂಪಾಯಿ ಕೊಡುತ್ತೇವೆ ಎಂದು ಒಪ್ಪಿಕೊಂಡು ಅನಂತರ ಆಗುವುದಿಲ್ಲ ಎಂದು ಹೇಳಿದರು. ನಾವು ಹೇಳಿದೆವು ಹೋದಸಲ 36-37 ಕೋಟಿ ರೂಪಾಯಿ ಸೆಂಟ್ರಲ್ ಗೌರ್ನಮೆಂಟ್ ಅಸಿಸ್ಟೆನ್ಸ್ ಕೊಟ್ಟಿದ್ದರು ಈ ವರ್ಷ 50 ಕೋಟಿ ರೂಪಾಯಿಗಿಂತ ಒಂದು ಕಾಸು ಕಡಿಮೆ ಕೊಟ್ಟರೂ ತೆಗೆದುಕೊಳ್ಳುವುದಿಲ್ಲ ಎಂದು ಅವರ ಹತ್ತಿರ ಆರ್ಗ್ಯೂ ಮಾಡಿದ ಮೇಲೆ ಅವರು ಒಪ್ಪಿದರು. ಅದರಂತೆ ನಾವು ಸ್ಟೇಟ್ ಪ್ಲಾನ್ ಸೈಜ್‌ನ್ನು 56 ಕೋಟಿ ರೂಪಾಯಿ ಮಾಡಿದ್ದೆವು. ಆದರೆ ಇಲ್ಲಿ ಬಂದು ಯಾವ ಯಾವ ಬಾಬುಗಳಿಗೆ ಎಷ್ಟು ಹಣವನ್ನು ಒದಗಿಸಬೇಕು ಎಂದು ನೋಡಿದಾಗ ಸ್ಪಿಲ್ ಓವರ್ ಸ್ಕೀಂ ಒಂದನ್ನೇ ಪರಿಗಣನೆಗೆ ತೆಗೆದುಕೊಂಡರೆ 56 ಕೋಟಿ ರೂಪಾಯಿ ಆಯಿತು. ಬಾಕಿ ಇತರ ಬೇರೆ ಬೇರೆ ಬಾಬುಗಳಿಗೆ ಹಂಚಲು ಸಾಧ್ಯವಿಲ್ಲವಾಯಿತು. ಆದುದರಿಂದ ಇದನ್ನು 62 ಕೋಟಿ ರೂಪಾಯಿಗೆ ಏರಿಸಲು ಪ್ರಯತ್ನ ಮಾಡಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು ನಾನು ಕೊಟ್ಟಂಥ ಅಂಕಿಸಂಖ್ಯೆಗಳನ್ನು ದಯವಿಟ್ಟು ನೋಡಿದ್ದರೆ ನನ್ನ ಕೆಲಸ ಇನ್ನೂ ಸುಲಭವಾಗುತ್ತಿತ್ತು. ಕಳೆದ 3 ವರ್ಷದ ಅಂದಾಜು ತೆಗೆದುಕೊಂಡರೆ ಅಂದರೆ 1966-67, 67-68, 68-69ರಲ್ಲಿ ಅಗ್ರಿಕಲ್ಚರಲ್ ಪ್ರೋಗ್ರಾಂಗೆ ಒದಗಿಸಿದ ಹಣ 1966-67ರಲ್ಲಿ 15 ಕೋಟಿ 54 ಲಕ್ಷ ರೂಪಾಯಿಗಳು, 1967-68ರಲ್ಲಿ 17 ಕೋಟಿ 49 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ವರ್ಷ ಹೆಚ್ಚು ಕಡಿಮೆ ಅಷ್ಟೇ ಮೊಬಲಗನ್ನು ಒದಗಿಸಿದ್ದೇವೆ. ಮೊದಲನೇ ವಾರ್ಷಿಕ ಯೋಜನೆಯಲ್ಲಿ ಇರ್ರಿಗೇಷನ್ ಮತ್ತು ಪವರ್‌ಗೆ 16½ ಕೋಟಿ ರೂಪಾಯಿ, ಎರಡನೇ ಪ್ಲಾನ್‌ನಲ್ಲಿ 19 ಕೋಟಿ ರೂಪಾಯಿ 36 ಲಕ್ಷ ರೂಪಾಯಿ ಒದಗಿಸಿದ್ದೇವೆ.

ಶ್ರೀ ಎಸ್. ಶಿವಪ್ಪ.—ಈ ಪ್ಲಾನ್ ಸ್ಕೀಂನಿಂದ ರೆವಿನ್ಯೂ ಹೆಚ್ಚಾಗಿ ಬರುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ರೆವಿನ್ಯೂನಲ್ಲಿ ಎಷ್ಟು ಸರಪ್ಲಸ್ ಬರುತ್ತದೋ ಅದನ್ನು ಪ್ಲಾನಿಂಗ್‌ಗೆ ತೆಗೆದುಕೊಳ್ಳುತ್ತೇವೆ. ಕಡೆಯಲ್ಲಿ ರೆವಿನ್ಯೂ ಹೆಚ್ಚಾಗುತ್ತದೆ. ಯಾವರೀತಿ ರೆವಿನ್ಯೂ ಹೆಚ್ಚಾಗುತ್ತದೆಯೋ ಅದೇ ರೀತಿಯಲ್ಲಿ ಪ್ರಾಜೆಕ್ಟನ್ನು ಜಾಸ್ತಿ ಮಾಡುತ್ತಾ ಇದ್ದೇವೆ. ಮೇಂಟೆನೆನ್ಸ್ ಕೂಡ ಜಾಸ್ತಿ ಆಗುತ್ತಾ ಬರುತ್ತೆ. ಇದಕ್ಕೆ ಹೋದವರ್ಷ 31 ಕೋಟಿ ರೂಪಾಯಿ ಒದಗಿಸಿದ್ದರೆ, ಈ ವರ್ಷ 46½ ಕೋಟಿ ರೂಪಾಯಿ ಒದಗಿಸಬೇಕಾದ ಪ್ರಸಂಗ ಬಂತು. ಅದರಲ್ಲಿ ಯಾವ ಪ್ಲಾನಿಂಗ್ ಸ್ಕೀಮೂ ಇಲ್ಲ. ಹೋದವರ್ಷ ಹೆಲ್ತ್‌ಗೆ 7 ಕೋಟಿ ರೂಪಾಯಿ ಒದಗಿಸಿದ್ದರೆ ಈ ವರ್ಷ 10 ಕೋಟಿ ರೂಪಾಯಿ ಒದಗಿಸಿದ್ದೇವೆ. ಈ ಸ್ಕೀಮನ್ನು ರೆವಿನ್ಯೂ ಬಡ್ಜೆಟ್‌ನಲ್ಲಿ ಸೇರಿಸ ಕೂಡದು. ನಾನ್ ಪ್ಲಾನ್ ಸ್ಕೀಂಗೂ ಪ್ಲಾನ್ ಸ್ಕೀಂಗೂ ಸೇರಿಸಕೂಡದು. ಇದು ಅವರಿಗೆ ಗೊತ್ತಿದೆ. ಮಾನ್ಯ ಸದಸ್ಯರಿಗೆ ಹೇಳುವುದಾದರೆ ಈ ವರ್ಷವೂ ಕೂಡ ಅಗ್ರಿಕಲ್ಚರಲ್ ಮತ್ತು ಇರ್ರಿಗೇಷನ್ ಅಂಡ್ ಪವರ್ ಇವೆರಡಕ್ಕೂ ಅದೇ ಪ್ರಾಮುಖ್ಯತೆಯನ್ನು ಕೊಡುತ್ತಾ ಬಂದಿದ್ದೇವೆ. ಮತ್ತು ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಫೈನಾನ್ಸ್ ಕಮಿಷನ್‌ಗೆ ಏನೇನು ಶಿಫಾರಸ್ಸು ಮಾಡಿದ್ದೇವೆ ಎನ್ನುವುದು ಈಗಾಗಲೇ ಸ್ವಲ್ಪಮಟ್ಟಿಗೆ ಚರ್ಚೆಯಾಗಿದೆ. ಅದು ಮಾನ್ಯ ಸದಸ್ಯರಿಗೆ ನೆನಪು ಇದ್ದರೆ ಸಾಕು.

ಇನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 3ನೇ ಫೈನಾನ್ಸ್ ಕಮೀಷನ್ನಿನವರು ನಮ್ಮ ರಾಜ್ಯಕ್ಕೆ 6 ಕೋಟಿ ರೂಪಾಯಿ ಶಿಫಾರಸ್ಸು ಮಾಡಿದ್ದರು. ಕಳೆದ 4 ವರ್ಷದಿಂದಲೂ ನಮಗೆ ಪ್ರತಿವರ್ಷವೂ 20 ಕೋಟಿಗಿಂತ ಹೆಚ್ಚು ಗ್ರಾಂಟ್ ಅವರ ಶಿಫಾರಸು ಮುಖಾಂತರ ಸಿಕ್ಕುತ್ತಾ ಇದೆ. ಈಗ ವರ್ಷಕ್ಕೆ 20 ಕೋಟಿ ರೂಪಾಯಿ ಬಡ್ಡಿ ಕೊಡುವ ಪ್ರಶ್ನೆ ಬಂದಿದೆ ನಿಜ. ಅಲ್ಲದೆ ಸುಮಾರು 52 ಕೋಟಿ ರೂಪಾಯಿಯಷ್ಟು ಇನ್‌ಸ್ಟಾಲ್‌ಮೆಂಟ್ ಮುಖಾಂತರ ಕೊಡ ಬೇಕಾಗುತ್ತದೆ. ಆದರೆ ನಾವು ಏನು ಬಡ್ಡಿ ಕೊಡಬೇಕಾಗುತ್ತದೋ ಅದು ಗ್ರಾಂಟ್ ರೂಪವಾಗಿ

ಬರುತ್ತದೆ. ಅದು ರೆವಿನ್ಯೂ ಎಕ್ಸ್‌ಪೆಂಡಿಚರ್ ಎಂದು ತೆಗೆದುಕೊಳ್ಳುವುದು. ಫೈನಾನ್ಸ್ ಕಮೀಷನ್ನಿನವರ ಮುಂದೆ ನಮ್ಮ ವಾದ ಅದನ್ನು ರೆವಿನ್ಯೂ ಎಕ್ಸ್‌ಪೆಂಡಿಚರ್ ಎಂದು ತಿಳಿದುಕೊಂಡರೆ ಸಾಲದು, ಮೊದಲು ಕೊಟ್ಟಿದ್ದಂತೆ ಆ ಸಾಲವನ್ನು ರಿ-ಷೆಡ್ಯೂಲ್ ಮಾಡಬೇಕಾಗಿರುವುದರಿಂದ ಯಾವ ಯಾವ ಯೋಜನೆಗೆ ಎಷ್ಟೆಷ್ಟು ಅವಧಿ ಸಾಲ ಇರಬೇಕು ಅದನ್ನು ಗೊತ್ತು ಮಾಡಬೇಕೆಂದು ಹೇಳಿದ್ದೇವೆ. ಈಗ ನೀರಾವರಿ ಯೋಜನೆ ತೆಗೆದುಕೊಂಡರೆ ಅದು 10 ವರ್ಷವಲ್ಲ ಪ್ರತಿಫಲ ಕೊಡತಕ್ಕಂಥಾದ್ದು. ಅದಕ್ಕೆ 30 ವರ್ಷದ ಅವಧಿ ಕೊಡಬೇಕು, 10 ವರ್ಷದ ನಂತರ ಕಂತು ಪ್ರಾರಂಭವಾಗಬೇಕು. ಇನ್ನು ಎಲೆಕ್ಟ್ರಿಸಿಟಿ ಬೋರ್ಡ್‌ಗೆ, ಭೂ ಅಭಿವೃದ್ಧಿಯೋಜನೆಗೆ ಇಂತಿಷ್ಟು ವರ್ಷ ಇರಬೇಕು ಈ ರೀತಿ ಮಾಡಬೇಕು ಎಂದು ಅವರಿಗೆ ಮನವರಿಕೆಯಾಗುವಂತೆ ನಾವು ಹೇಳಿದ್ದೇವೆ. ಇನ್ನು ನಮ್ಮ ಆಶೋತ್ತರಗಳು ಏನು ಇದೆ ಎಂದರೆ ಹಿಂದೆ ಫೈನಾನ್ಸ್ ಕಮೀಷನ್ನವರು ಮೈಸೂರಿನ ಬಗ್ಗೆ ಯಾವರೀತಿ ಯೋಗ್ಯವಾದ ಶಿಫಾರಸ್ಸು ಮಾಡಿದ್ದರೋ ಅಂಥಾದ್ದೇ ಶಿಫಾರಸ್ಸು ಮಾಡುತ್ತಾರೆಂದು ಒಂದು ವಿಶೇಷವಾದ ನಂಬಿಕೆ ಅವರ ಮೇಲೆ ನಮಗೆ ಇದೆ. ಇದರ ಬಗ್ಗೆ ಇನ್ನು ಹೆಚ್ಚು ವಾದಮಾಡಲು ಬಯಸುವುದಿಲ್ಲ. ಅದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ.

ಇನ್ನು ಈ ವರ್ಷ ಮುಗಿಯುವದರೊಳಗಾಗಿ ಅಂದರೆ 1969-70ರ ಒಳಗಾಗಿ 425 ಕೋಟಿ ರೂಪಾಯಿ ಅಥವಾ 426 ಕೋಟಿ ರೂಪಾಯಿಯಷ್ಟು ಪಬ್ಲಿಕ್ ಡೆಟ್ ಬರುತ್ತೆ. ಅದಕ್ಕೆ ಪ್ರತಿಯಾಗಿ ನಮ್ಮ ಆಸ್ತಿ 485 ಕೋಟಿ ರೂಪಾಯಿಯಷ್ಟು ಒಟ್ಟು ಆಸ್ತಿ ಇದೆ. ಅದಲ್ಲದೆ ಸರ್ಕಾರದವರು ಸುಮಾರು $16\frac{1}{2}$—17 ಕೋಟಿ ರೂಪಾಯಿಯಷ್ಟು ಬೇರೆ ಬೇರೆ ಬಾಬುಗಳಿಗೆ ಕೊಟ್ಟಂಥ ಸಾಲ ಮತ್ತು ಇನ್ನೂ ಇತರ ಅಡ್ವಾನ್ಸ್‌ಗಳೂ ಕೂಡ ಇದರ ಜೊತೆಗೆ ಸೇರಿಸಿದರೆ ಸುಮಾರು 656 ಕೋಟಿ ಚಿಲ್ಲರೆ ರೂಪಾಯಿ ನಮ್ಮ ಸರ್ಕಾರದ ಆಸ್ತಿ ಆಗುತ್ತದೆ.

ಶ್ರೀ ಎಸ್. ಶಿವಪ್ಪ.—ಲಯಬಿಲಿಟೀಸ್ ಎಷ್ಟು ಇದೆ ?

ಶ್ರೀ ರಾಮಕೃಷ್ಣ ಹೆಗಡೆ.—353ನೇ ಪೇಜು ಬಡ್ಜೆಟ್ ಮೆಮೋರ್ಯಾಂಡಂನಲ್ಲಿ ಎಕ್ಸೆಸ್ ಆಫ್ ಅಸೆಟ್ಸ್ ಅಂಡ್ ಲಯಬಿಲಿಟೀಸ್ 1969-70ಕ್ಕೆ ಕೊಟ್ಟಿರುವುದು 93 ಕೋಟಿ ರೂಪಾಯಿ ಇದೆ ಎಂದು ಹೇಳುತ್ತೇನೆ. ಈಗ ಒಟ್ಟು ಅಸೆಟ್ಸ್ 656 ಕೋಟಿ ರೂಪಾಯಿಯಲ್ಲಿ 93 ಕೋಟಿ ರೂಪಾಯಿ ಕಳೆದರೆ 563 ಕೋಟಿ ರೂಪಾಯಿ ಆಗುತ್ತದೆ. ಅದಕ್ಕೆ $16\frac{1}{2}$—17 ಕೋಟಿ ರೂಪಾಯಿಯಷ್ಟು ಅಸೆಟ್ಸ್ ಲೋನ್ಸ್ ಅಂಡ್ ಅಡ್ವಾನ್ಸ್ ಕೊಟ್ಟಂಥಾದ್ದನ್ನು ಸೇರಿಸಿಕೊಳ್ಳಬೇಕಾಗುತ್ತದೆ.

ಇನ್ನು ಈಗ ಕಾಂಗ್ರೆಸ್ ಪಕ್ಷದ ಆಡಳಿತ ಏನು ಇದೆ ಅದು ಅವರ ದೃಷ್ಟಿಯಿಂದ ಅಪರಾಧ ಮಾಡಿರಬಹುದು. ಆದರೆ ನಾನು ಹೇಳುವುದು 3 ವರ್ಷ ಬೇರೊಬ್ಬರ ಆಡಳಿತ, ಇನ್ನು 3 ವರ್ಷ ಮತ್ತೊಬ್ಬರ ಆಡಳಿತ, ಈ ರೀತಿ ಒಬ್ಬೊಬ್ಬರ ಆಡಳಿತಗಳು ಬಂದ ಮೇಲಾದರೂ ಕೊನೆಗೆ ಇನ್ನು 50 ವರ್ಷದಮೇಲಾದರೂ ಪುನಃ ಕಾಂಗ್ರೆಸ್‌ನವರ ಆಡಳಿತ ಬಂದನಂತರ ಇಂತಹವರ ಆಡಳಿತ ಹೀಗಿತ್ತು ಎನ್ನುವುದನ್ನು ನಾನು ಇಲ್ಲದೇ ಇದ್ದರೂ ನಮ್ಮ ಪಕ್ಷದ ಪ್ರತಿನಿಧಿಗಳಾಗಿ ಬಂದವರು ಹೇಳುತ್ತಾರೆ. ವಿರೋಧಪಕ್ಷದವನಾಗಿ ಕೂತು ಕೇಳುವಂಥಾದ್ದು ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ. ಆಗ ಅವರು ದೇಶದ ಆಡಳಿತದ ಭಾರ ನಡೆಸಿದರೆ ಇದರಲ್ಲಿರುವ ಕಷ್ಟ ಏನು ಎನ್ನುವುದು ತಿಳಿಯುತ್ತದೆ.

ಮದ್ರಾಸಿನಲ್ಲಿ ಅಥವಾ ಬೇರೆ ರಾಜ್ಯಗಳಲ್ಲಿ ಬೇರೆ ಪಕ್ಷಗಳ ಸರ್ಕಾರ ಬಂದಿದೆ. ಆ ಪಕ್ಷದವರು ಎಲ್ಲಿಯವರೆಗೆ ಅಧಿಕಾರ ನಡೆಸುವುದಕ್ಕೆ ಸಾಧ್ಯವೋ ಅಲ್ಲಿಯವರೆಗೂ ನಡೆಸಬೇಕು. ಇತರರು ರಚನಾತ್ಮಕವಾಗಿ ವಿರೋಧ ಮಾಡಬಹುದು. ಯಾವುದೇ ರಾಜಕೀಯ ಪಕ್ಷ 40 ವರ್ಷ, 50 ವರ್ಷ, ಶತಮಾನದವರೆಗೆ ಯುಗದವರೆಗೆ, ಅಧಿಕಾರದಲ್ಲಿ ಇರಬೇಕು ಎನ್ನುವ ಪ್ರತಿಪಾದನೆಯನ್ನು ನಾನು ಮಾಡುತ್ತಿಲ್ಲ. ಎಲ್ಲರೂ ಮಾಡತಕ್ಕ ಕೆಲಸ ಒಂದೇ, ಎಲ್ಲರ ಗುರಿಯೂ ಒಂದೇ. ಎಲ್ಲರೂ ಈ ದೇಶದವರು. ಅದನ್ನು ಏಕೆ ಮರೆಯಬೇಕು. 20 ವರ್ಷಗಳಿಂದ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದರೆ ಏಕೆ ಆ ಪಕ್ಷದ ನಾಯಕರನ್ನು ಗಲ್ಲಿಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೋ ಗೊತ್ತಿಲ್ಲ. ಕಾಂಗ್ರೆಸ್ ಒಂದು ಪಕ್ಷ. ಸ್ವಾತಂತ್ರ್ಯ ಬಂದಂದಿನಿಂದ ಆಳುವ ಪಕ್ಷವಾಗಿದೆ. ಮೂರು ಸಲ ಚುನಾವಣೆಗಳು ನಡೆದಿವೆ ಈ ದೇಶದಲ್ಲಿ. 1967ರ ವರೆಗೆ ಮೂರು ಸಲ ಚುನಾವಣೆಗಳು ನಡೆದಿವೆ. ಚುನಾವಣೆಯಲ್ಲಿ ಕಂದಾಯ ಕೊಡುವವರು, ಕೇವಲ ತೀರ್ವೆ ಕೊಡುವವರು. ವರಮಾನ ತೆರಿಗೆ ಕೊಡುವವರು, ಇಂಥ ಜಾತಿಯವರು ಮಾತ್ರ ಮತ ಕೊಡುವುದೆಂದಿಲ್ಲ. ಎಲ್ಲರಿಗೂ ಸಮಾನವಾದ ಮತದಾನದ ಹಕ್ಕು ಇದೆ. ಅವರೆಲ್ಲಸೇರಿ ಕಾಂಗ್ರೆಸ್ ಪಕ್ಷದವರೇ ಆಳಬೇಕು ಎಂದು ಹೇಳಿದರೆ ನಿಜಲಿಂಗಪ್ಪನವರನ್ನಾಗಲೀ, ಲಾಲ್‌ಬಹದ್ದೂರ್ ಶಾಸ್ತ್ರಿಯವರನ್ನಾಗಲೀ, ಅಥವಾ

(ಶ್ರೀ ರಾಮಕೃಷ್ಣ ಹೆಗಡೆ)

ಬೇರೆ ಯಾರನ್ನೋ ಆಗಲೀ ಏಕೆ ಗಲ್ಲಿಗೆ ಹಾಕುತ್ತೀರಿ ! ಪ್ರಜಾಪ್ರಭುತ್ವವೆಂದರೆ ಆ ಒಂದು ತತ್ವವನ್ನು ನಾವೆಲ್ಲ ಒಪ್ಪಿಕೊಂಡಿದ್ದೇವೆ ಬೇರೆ ಒಂದು ಪಕ್ಷ ಅಧಿಕಾರಕ್ಕೆ ಬಂದರೆ ನಾನು ಆ ಪಕ್ಷವನ್ನು ದೂಷಿದರೆ ನಾನು ಪ್ರಜಾಪ್ರಭುತ್ವದಲ್ಲಿ ಶ್ರದ್ಧೆ ಇಟ್ಟು, ನಿಜವಾದ ಶ್ರದ್ಧೆ ಇಟ್ಟು ಇರತಕ್ಕ ತತ್ವವಾಗುವುದಿಲ್ಲ. ಈ ದೇಶದ ಕಲ್ಯಾಣ ಯಾವಾಗ ಆಗುತ್ತದೆಯೋ ಗೊತ್ತಿಲ್ಲ. ಇಂದು ಒಂದು ಪದ್ಧತಿಯನ್ನು ನಾವು ಅನುಸರಿಸಿದ್ದರಿಂದ ಆ ಪದ್ಧತಿಯಲ್ಲಿರತಕ್ಕ ಗುಣ ದೋಷ ಇವೆರಡನ್ನೂ ತಿಳಿದುಕೊಂಡು ಅದನ್ನೇ ಅನುಭವಿಸಲಿಕ್ಕೆ ನಾವು ತಯಾರಾಗಬೇಕು. ಪದ್ಧತಿ ಬೇಕು, ಗುಣ ಬೇಕು, ದೋಷ ಬೇಡ ಎಂದರೆ ಅದು ಸರಿಯಾಗಲಾರದು. ಇದನ್ನು ನಾವು ತಿಳಿದುಕೊಳ್ಳಬೇಕು. ಈ ಹೊತ್ತು ನಮಗೆ ಅಧಿಕಾರವಿದ್ದರೆ, ಈ ಹೊತ್ತು ನಾವು ಇಲ್ಲಿ ಕುಳಿತವರು ಅಯೂಬ್ ಖಾನ್ ಮಕ್ಕಳಲ್ಲ, ಚೀಣಾ ಅಥವಾ ಕಮ್ಯುನಿಸ್ಟ್ ದೇಶಗಳಲ್ಲಿರುವ ಹಾಗೆ ನಾಲ್ಕು ಜನರ ಅಥವಾ 10 ಜನರ ಒಂದು ಕೂಟವಲ್ಲ. ಬದಲಾವಣೆ ಆಗಿಯೇ ಆಗುತ್ತದೆ. ನಾವು ಬೇಡ ಎಂದರೂ ಆಗುತ್ತದೆ, ನೀವು ಬೇಡ ಎಂದರೂ ಆಗುತ್ತದೆ. ಬದಲಾವಣೆ ಆಗುವುದು ನೈಸರ್ಗಿಕ ಕ್ರಮ. ಐದು ವರ್ಷ ಹೆಚ್ಚಾಗಬಹುದು ಅಷ್ಟೆ. ಯಾವ ದಿವಸದಿಂದ ಈ ಪದ್ಧತಿ ಬೇಡ ಎಂದು ಹೇಳುತ್ತಾರೋ ನಾಳೆ ಅಂಥ ಒಂದು ಪ್ರಸಂಗ ಈ ದೇಶದಲ್ಲಿ ಬರಬಹುದು. ಈ ದೇಶದಲ್ಲಿ ಪ್ರಜಾಪ್ರಭುತ್ವ ಬೇಡ ಎಂದು ಹೇಳತಕ್ಕ ಪ್ರಸಂಗ ಬರಬಹುದು; ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾವು ಏಕೆ ಇಷ್ಟೊಂದು ತರ್ಕ ಮಾಡತಕ್ಕದ್ದು ? ನಮ್ಮ ಕೈಯಲ್ಲಿ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟನ್ನು ಪ್ರಾಮಾಣಿಕವಾಗಿ ಮಾಡೋಣ, ಮನ ಮುಟ್ಟಿ ಮಾಡೋಣ. ಒಬ್ಬನಿಗೆ ದೊಡ್ಡ ಶಕ್ತಿ ಇರಬಹುದು, ಒಬ್ಬನಿಗೆ ಸಣ್ಣ ಶಕ್ತಿ ಇರಬಹುದು. ಸಣ್ಣ ಶಕ್ತಿ ಇರುವವನು ಸಣ್ಣ ಸೇವೆ ಮಾಡುತ್ತಾನೆ ಎನ್ನುವುದು ತಪ್ಪು. ಆದಕಾರಣ ಮಾಡತಕ್ಕದನ್ನು ಪ್ರಾಮಾಣಿಕವಾಗಿ ಮಾಡಬೇಕು ಎನ್ನುವುದನ್ನು ನಾನು ಕೂಡ ಮಾನ್ಯ ಗೋಪಾಲಗೌಡರು ಹೇಳಿದ ಹಾಗೆ ಒಪ್ಪಿಕೊಳ್ಳುತ್ತೇನೆ.

ನಾಲ್ಕನೇ ಪಂಚವಾರ್ಷಿಕ ಯೋಜನೆ ವಿಚಾರದಲ್ಲಿ ಮಾನ್ಯ ಸದಸ್ಯರು ಕೆಲವೊಂದು ಭಯವನು ವ್ಯಕ್ತ ಮಾಡಿದ್ದಾರೆ. ಅದನ್ನು ನಾನೇ ಹೇಳಿದೆ. ನಾಲ್ಕನೇ ಯೋಜನೆ 1966 ನೇ ಇಸವಿಯಲ್ಲಿ ಪ್ರಾರಂಭವಾಗಬೇಕಾಗಿದ್ದುದು ಆಗಲಿಲ್ಲ. ಇದು ಸೂರ್ಯಪ್ರಕಾಶದಷ್ಟು ಸತ್ಯ. ಇದಕ್ಕೆ ಕಾರಣವೂ ಉಂಟು ಎರಡು ವರ್ಷ ಭಯಂಕರವಾಗಿ ಇಡೀ ದೇಶಕ್ಕೆ ವ್ಯಾಪಿಸಿದಂಥ ಬರಗಾಲ ಬಂತು. ಅದಕ್ಕೆ ಮೊದಲು ಒಂದು ಸಲ ಪಾಕಿಸ್ಥಾನ, ಒಂದು ಸಲ ಚೀಣಾ ಮತ್ತೊಂದು ಸಲ ಪಾಕಿಸ್ತಾನದ ಆಕ್ರಮಣವಾಯಿತು. ಅದರಿಂದ ನಮ್ಮ ಆರ್ಥಿಕಸ್ಥಿತಿ ಬುಡಮೇಲಾಯಿತು. ಈ ಎಲ್ಲ ಕಾರಣದಿಂದ ನಮಗೆ ಸಾಕಷ್ಟು ಸಂಪನ್ಮೂಲ ಸಿಕ್ಕಲಿಲ್ಲ. ಒಮ್ಮೆ ಮೂರು ವರ್ಷ ಮುಂದೆ ಹೋಗಿದೆ. ಯೋಜನಾ ಆಯೋಗದವರು ಬರುವ ವರ್ಷದಿಂದ ಎಂದರೆ 1969—70 ರಿಂದ ನಾಲ್ಕನೆ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದಿದ್ದಾರೆ. ನಮ್ಮ ಅಭಿಪ್ರಾಯವೇನೆಂದರೆ ಇಂದು ಯಾವ ಉದ್ದೇಶದಿಂದ, ಯಾವ ಕಾರಣಕ್ಕಾಗಿ ನಾಲ್ಕನೆ ಯೋಜನೆಯನ್ನು ಮುಂದೆ ಹಾಕಿದರೋ ಆ ಕಾರಣಗಳು ಈವೊತ್ತು ಇಲ್ಲವೇ ಹೇಗೆ ? ಆ ಕಾರಣಗಳು ಈವೊತ್ತು ಕಳೆದುಹೋಗಿದ್ದಾವೆಯೋ ಹೇಗೆ ? ಅದಕ್ಕಾಗಿ ಎಷ್ಟರಮಟ್ಟಿಗೆ ಬೆಲೆಗಳ ಸ್ಥಿರೀಕರಣ ಮಾಡತಕ್ಕದ್ದು ಸಾಧ್ಯವಾಗುತ್ತದೆ; ಎಷ್ಟರಮಟ್ಟಿಗೆ ನಮ್ಮ ದೇಶಕ್ಕೆ ಆರ್ಥಿಕ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗೆ ದೃಢತೆ ಬರುತ್ತದೆ ! ಮೂರನೆ ಯೋಜನೆಯ ಕೊನೆ ಭಾಗದಲ್ಲಿ ಮತ್ತು ಕಳೆದ ಮೂರು ವರ್ಷಗಳ ವಾರ್ಷಿಕ ಯೋಜನೆಯಲ್ಲಿ ಬೆಲೆ ಸ್ಥಿರೀಕರಣ ಮಾಡುವುದು ನಮಗೆ ಸಾಧ್ಯವಾಗಲಿಲ್ಲ. ಅದಕ್ಕಾಗಿ ನಾನು ಈ ಸಭೆ ಮುಂದೆ ಪ್ರಸ್ತಾಪ ಮಾಡಿದ್ದೇನೆ, 42 ಕೋಟಿ ರೂಪಾಯಿಗಳ ಸಂಪನ್ಮೂಲಗಳನ್ನು ತೆಗೆದುಕೊಳ್ಳುವಾಗ ಅದರಲ್ಲಿ 32 ಕೋಟಿ ರೂಪಾಯಿಗಳನ್ನು ತುಟ್ಟಿಭತ್ಯಕ್ಕಾಗಿ ಖರ್ಚು ಮಾಡಿದ್ದೇವೆ. ಇದಕ್ಕೆ ನಾನು ಸರ್ಕಾರಿ ನೌಕರರನ್ನು ದೂಷಣೆ ಮಾಡುವುದಿಲ್ಲ, ಬೇರೆ ಯಾರಿಗೂ ದೋಷ ಕೊಡುವುದಿಲ್ಲ. ಪೇಟೆಯಲ್ಲಿ ವಿಪರೀತವಾಗಿ ಧಾರಣೆವಾಸಿಗಳು ಏರುವಾಗ ತಿಂಗಳಿಗೆ 90 ರೂಪಾಯಿ, 100 ರೂಪಾಯಿ ಅಥವಾ 200 ರೂಪಾಯಿ ತೆಗೆದುಕೊಳ್ಳುವವರು ಮನೆಯಲ್ಲಿ 10—12 ಜನವಿದ್ದರೆ ಏನು ಮಾಡಬೇಕು ? ಅದು ನನಗೆ ಗೊತ್ತಾಗುತ್ತದೆ. ಅದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಪ್ಲಾನಿಂಗ್ ಕಮಿಷನ್ ಮುಂದೆ ನಾಲ್ಕು ವಿಚಾರಗಳನ್ನು ಇಟ್ಟಿದ್ದಾರೆ. ಮೊಟ್ಟಮೊದಲನೆಯದಾಗಿ ಒಂದು ತೀರ್ಮಾನ ಮಾಡಿ, ಇನ್ನು ಮುಂದಿನ ಐದು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಎಕನಾಮಿಕ್ ಪಾಲಿಸಿ ಅಡಾಪ್ಟ್ ಮಾಡುತ್ತೀರಾ ! ಯಾವ ಪಾಲಿಸಿಯಿಂದ ಬೆಲೆಗಳನ್ನು ಹತೋಟಿಯಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಮೊದಲು ತಿಳಿಸಬೇಕು. ಎರಡನೆಯದು ರಾಜ್ಯ ಸರ್ಕಾರಗಳು 1500 ಕೋಟಿ ರೂಪಾಯಿಗಳು, ಕೇಂದ್ರ ಸರ್ಕಾರದವರು 2500 ಕೋಟಿ ರೂಪಾಯಿಗಳ ಹೊಸ ಸಂಪನ್ಮೂಲಗಳನ್ನು ಎತ್ತಬೇಕೆಂದು ಹೇಳುತ್ತೀರಿ. ಕೇಂದ್ರ ಸರ್ಕಾರದವರು ಎಷ್ಟರಮಟ್ಟಿಗೆ ಅದನ್ನು

ಮಾಡುವುದಕ್ಕೆ ಸಾಧ್ಯವಾಗುತ್ತದೆ? ಹೊಸ ನೋಟ್ ಮುದ್ರಿಸಿ ಮಾಡುತ್ತೀರಾ ಅಥವಾ ನಿಜವಾಗಿ ಈ ಹಣ ಬರುತ್ತದೆಯೇ? ಇದು ಎರಡನೇ ವಿಚಾರ. ಮೂರನೆ ವಿಚಾರ ಇಂದು ನಾವು ರೀಜನಲ್ ಇಂಬ್ಯಾಲೆನ್ಸ್ ಎಂದು ಏನು ಕರೆಯುತ್ತೇವೆ ಆ ರೀಜನಲ್ ಇಂಬ್ಯಾಲೆನ್ಸ್‌ಗೆ ಯಾವ ತರಹ ಪರಿಹಾರ ಹುಡುಕುತ್ತೀರಿ? ರಾಷ್ಟ್ರದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳಲ್ಲಿ ಸೇಕಡ 75 ರಷ್ಟು ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿವೆ. ಅಲ್ಲಿ ಇಳುವರಿ ಬರತಕ್ಕದ್ದು 6 ಪರ್ಸೆಂಟ್. ಇದು ಎಷ್ಟು ಸಾಧುವೋ ಅದೇ ರೀತಿ ಆಗಬಹುದು. ನಾಲ್ಕನೆಯದು ನಮಗೆ ನಾಲ್ಕನೆ ಯೋಜನೆಗೆ ಬೇಕಾಗತಕ್ಕ ಸಂಪನ್ಮೂಲಗಳನ್ನು ಕಂಡು ಹಿಡಿಯುವುದು. ಸೆಂಟ್ರಲ್ ಡಿವಿಜಿಬಲ್ ಪೂಲ್‌ನಲ್ಲಿ ಏನು ರಿಸೋರ್ಸಸ್ ಇದೆ ಅದರಲ್ಲಿ ನಮ್ಮ ಅಂಶ ಎಷ್ಟು ಎನ್ನುವುದು ನಮಗೆ ಖಚಿತವಾಗಿ ಗೊತ್ತಾಗಬೇಕು.

8-30 P.M.

ಇದು ಅಲ್ಲಿ ಚರ್ಚೆಯಾಗಿ ಬಂದಮೇಲೆ ಖಚಿತವಾಗಿ ಮೈಸೂರಿನವರಿಗೆ ಇದರ ಬಗ್ಗೆ ನಿರ್ಧಾರ ಹೇಳುವವರೆಗೆ ಹೊಸ ಪ್ಲಾನ್ ಮಾಡುವುದು ಕಷ್ಟ ಮತ್ತು ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಒಂದು ವರ್ಷ ಮುಂದಕ್ಕೆ ಹಾಕಿದರೂ ಪರವಾಗಿಲ್ಲ ಎಂದು ಹೇಳಲಾಯಿತು. ಇಲ್ಲಿಯವರೆಗೆ ಖಚಿತವಾದ ಉತ್ತರ ಬಂದಿಲ್ಲ. ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಬಹುಶಃ ಈ ತಿಂಗಳು ಮಧ್ಯ ಭಾಗದಲ್ಲಿ ಅಥವ ಮೂರನೆಯ ವಾರದಲ್ಲಿ ಸೇರಬಹುದೆಂಬ ಸುದ್ದಿ ಇದೆ. ಈ ಬಜೆಟ್ಟಿನಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಅಡಕವಾಗಿಲ್ಲ, ಇದರಲ್ಲಿ ತೆಗೆದುಕೊಂಡಿರುವುದು ಮುಂದಿನ ವರ್ಷದ ಯೋಜನೆ ಮಾತ್ರ. ಇದಕ್ಕಿಂತ ಹೆಚ್ಚಿನ ಯಾವ ನಿರೀಕ್ಷೆಯೂ ಇಲ್ಲ. ಮೊನ್ನೆ ಚರ್ಚೆ ಮಾಡುವುದಕ್ಕೆ ಹೋದಾಗ ಇದನ್ನು ಪೂರ್ಣ ಮಾಡದೆ ಬಂದಿರುವ ಉದ್ದೇಶ ಇದೇ. ಈಗ ಕೈಕೊಂಡಿರುವ ಕೆಲವು ಕೆಲಸಗಳನ್ನು ಬೇಗ ಮುಗಿಸಬೇಕು, ನೀರಾವರಿ ಕುಡಿಯುವ ನೀರಿನ ಯೋಜನೆಗಳು ಮುಂತಾದವುಗಳನ್ನು ಮುಗಿಸಲು, ನಮ್ಮದೇ ಆದ ರೀತಿಯಲ್ಲಿ ಒಪ್ಪಿದರೆ 440 ಕೋಟಿ ರೂಪಾಯಿಗಳಾದರೂ ಬೇಕು. ಶ್ರೀ ಎಂ. ವೈ. ಘೋರ್ಪಡೆಯವರು ಒಂದು ಮಾತು ಹೇಳಿದರು, ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟಂತೆ ಅವರು ರಾಜ್ಯದ ಯೋಜನಾ ಮಂಡಲಿಯ ಸದಸ್ಯರು. ಅವರು 440 ಕೋಟಿ ರೂಪಾಯಿ ಯೋಜನೆಗೆ 115 ಕೋಟಿ ರಾಜ್ಯ ಸರಕಾರ ಹೊಸದಾಗಿ ಹಣ ಒದಗಿಸಬೇಕು, ಅದಕ್ಕೆ ಯಾವ ರೀತಿ ಅವಕಾಶವಿದೆ ಎಂದು ಕೇಳಿದರು. ಈಗ ಹೇಳುತ್ತೇನೆ. ನಮ್ಮ ಕೇಂದ್ರ ಸರಕಾರ ಮತ್ತು ಯೋಜನಾ ಆಯೋಗದ ಅಂದಾಜು ಒಟ್ಟು ಈ ದೇಶಕ್ಕೆ ಬರುವ 5 ವರ್ಷಗಳಲ್ಲಿ ನಾಲ್ಕನೆಯ ಯೋಜನೆಗೆ 1502 ಕೋಟಿ, ಇಷ್ಟಕ್ಕೆ ರಾಜ್ಯ ಸರಕಾರ ಒಪ್ಪಬೇಕು ಇದರಲ್ಲಿ ಮೈಸೂರು ಸರಕಾರ ಸುಮಾರು 115 ಕೋಟಿಗೆ ಒಪ್ಪಬಹುದು, ಅವರಿಗೆ ಅಷ್ಟು ಶಕ್ತಿ ಇದೆ ಎಂದು ಅಂದಾಜಿದೆ. ಇದರಲ್ಲಿ 5 ವರ್ಷಗಳಿಗೆ ವ್ಯವಸಾಯ ವರಮಾನ ತೆರಿಗೆಯಿಂದ 21 ಕೋಟಿ, ರೂರಲ್ ಡಿಬೆಂಚರ್‌ನಿಂದ 21 ಕೋಟಿ ಇರಿಗೇಷನ್‌ದರ ಸ್ವಲ್ಪ ಹೆಚ್ಚು ಮಾಡುವುದರಿಂದ 17 ಕೋಟಿ, ಸ್ಟೇಟ್ ಎಕ್ಸೈಜ್ ಡ್ಯೂಟಿಯಿಂದ 7 ಕೋಟಿ ಮಾರಾಟತೆರಿಗೆಯಿಂದ 11 ಕೋಟಿ, ಇದು ಹೆಚ್ಚಿನ ವರಮಾನ, ಒಟ್ಟು ವರಮಾನವಲ್ಲ. ವಿದ್ಯುಚ್ಛಕ್ತಿಯಿಂದ 17 ಕೋಟಿ, ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಿಂದ 3 ಕೋಟಿ, ಇತರ ಬಾಬುಗಳಿಂದ 17 ಕೋಟಿ ಬರುವುದು. ನಮ್ಮ ಅಂದಾಜಿನ ಪ್ರಕಾರ ಇಂದು ನಮ್ಮ ದೇಶದಲ್ಲಿ ಇರುವ ಪರಿಸ್ಥಿತಿ ನೋಡಿದರೆ ಹೆಚ್ಚು ಅಂದರೆ ಸುಮಾರು 43 ಕೋಟಿ ಸಂಪನ್ಮೂಲಗಳಿಂದ ಪಡೆಯಬಹುದು.. ವ್ಯವಸಾಯ ವರಮಾನ ತೆರಿಗೆಯಿಂದ 2 ಕೋಟಿ, ರೂರಲ್ ಡಿಬೆಂಚರಿನಿಂದ 6 ಕೋಟಿ, ಇರಿಗೇಷನ್ ದರದಿಂದ, ಅದನ್ನು ಹೆಚ್ಚಿಸುವುದರಿಂದ 3 ಕೋಟಿ, ಸ್ಟೇಟ್ ಎಕ್ಸೈಜ್ ಡ್ಯೂಟಿಯಿಂದ 7 ಕೋಟಿ, ಮಾರಾಟ ತೆರಿಗೆಯಿಂದ 5 ಕೋಟಿ, ವಿದ್ಯುಚ್ಛಕ್ತಿಯಿಂದ 3 ಕೋಟಿ, ರೋಡ್ ಟ್ರಾನ್ಸ್‌ಪೋರ್ಟ್ ಬಾಬಿನಿಂದ 2 ಕೋಟಿ, ಅರಿಯರ್ಸ್ ವಸೂಲಿಯಿಂದ 5 ಕೋಟಿ, ಇತರ ಬಾಬುಗಳಿಂದ 10 ಕೋಟಿ, ಹೀಗೆ 43 ಕೋಟಿ ಬರಬಹುದೆಂಬ ಅಂದಾಜಿದೆ. 440 ಕೋಟಿಯ ಯೋಜನೆ ನಮ್ಮದು, 43 ಕೋಟಿ ಸಂಪನ್ಮೂಲದಿಂದ ಮತ್ತು 200 ಕೋಟಿ ಕೇಂದ್ರ ಸರಕಾರದ ಕಡೆಯಿಂದ ಬರಬಹುದು ಎಂದು ಟೆಂಟೇಟಿವ್ ಆಗಿ ಕೊಟ್ಟಿರುವ ಅಂಕಿ. ಈ ಮೂರೂ ನಮ್ಮೆದುರಿಗಿಟ್ಟರೆ ಯಾವ ರೀತಿ ರಾಜ್ಯದ ಅಭಿವೃದ್ಧಿ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಇಷ್ಟನ್ನು ಹೇಳುವುದಕ್ಕೆ ಕಾರಣ ಇಷ್ಟೆ: ಪ್ರತಿಯೊಬ್ಬರಿಗೂ ನಮ್ಮ ರಾಜ್ಯವನ್ನು ಬೇಗ ಚಿನ್ನದ ನಾಡನ್ನಾಗಿ ಮಾಡಬೇಕೆಂಬ ಆಸೆಯಿದೆ. ಅದೇಕೆ ಚಿನ್ನದ ನಾಡು ಎಂಬ ಹೆಸರು ಬಂದಿದೆಯೋ ಏನೋ, ಅದು ಚಿನ್ನದ ಸರಪಣಿಯಾಗಿದೆ. 20 ವರ್ಷದ ಹಿಂದಿದ್ದ ಪರಿಸ್ಥಿತಿ ನೋಡಬೇಕು. 1947 ರಲ್ಲಿ ರಾಜ್ಯದ ಒಟ್ಟು ಆದಾಯವೆಷ್ಟಿತ್ತು ಎಂದು ನೋಡಿದರೆ 5–6 ಕೋಟಿ ಇತ್ತು. ಒಂದು ಗಾದೆಯಿದೆ, ಸತ್ತ ಎಮ್ಮೆಗೆ ಪಂಚೇರು ಹಾಲು ಎಂದು. ಅದು ಅಷ್ಟು ಹಾಲು ಕೊಡದಿದ್ದರೂ ಕೂಡ ಹಾಗೆ ಹೇಳುವುದುಂಟು. ಎಮ್ಮೆ ಸತ್ತು ಹೋಯಿತು, ಆಮೇಲೆ ಹೆಂಗಸರು ಅದು ಹಾಗಿತ್ತು,

(ಶ್ರೀ ರಾಮಕೃಷ್ಣ ಹೆಗಡೆ)

ಹೀಗಿತ್ತು, ಚೆನ್ನಾಗಿತ್ತು, 5 ಸೇರು ಹಾಲು ಕೊಡುತ್ತಿತ್ತು, ಒಂದು ಹೊತ್ತಿಗೆ ಅಷ್ಟು ಅದರಿಂದ ಸಿಕ್ಕುತ್ತಿತ್ತು ಎಂದು ಹೇಳುವುದುಂಟು. ಕಥೆ ಹೀಗಿದೆ. ಈ ದಿವಸ ನಮ್ಮ ಬೆಂಗಳೂರು ಕಾರ್ಪೊರೇಷನ್ ಆದಾಯ ಎಷ್ಟಿದೆ ಅಷ್ಟು ಆದಾಯ 1946 ರಲ್ಲಿತ್ತು.

ಶ್ರೀ ಎಸ್. ಚನ್ನಯ್ಯ.—ರಿಸರ್ವ್ ಫಂಡು ಎಷ್ಟಿತ್ತು ?

ಶ್ರೀ ರಾಮಕೃಷ್ಣ ಹೆಗಡೆ.—18 ಕೋಟಿ ಕಾಂಗ್ರೆಸ್ ರಾಜ್ಯ ಬಂದಮೇಲೆ ಇತ್ತು.

ಶ್ರೀ ಎಸ್. ಚೆನ್ನಯ್ಯ.—ಆಗ ರಿಸರ್ವ್ ಫಂಡು ಇಲ್ಲದಿದ್ದರೆ ಶರಾವತಿ ಯೋಜನೆಯನ್ನು ಮಾಡುವುದಕ್ಕೆ ಇವರ ಕೈಲಿ ಆಗುತ್ತಿರಲಿಲ್ಲ. 1946-47 ರಲ್ಲಿ ಕಾಂಗ್ರೆಸ್ ಸರಕಾರ ಬಂದಮೇಲೆ ಶರಾವತಿ ಯೋಜನೆ ಕೆಲಸವನ್ನು ಮಾಡಲು ಶುರು ಮಾಡಿದರು.

ಶ್ರೀ ರಾಮಕೃಷ್ಣ ಹೆಗಡೆ.—ಇಡೀ ದೇಶಕ್ಕೆ ಒಂದು ಹೊಸ ಮಾರ್ಗದರ್ಶನವನ್ನು ಮಾನ್ಯ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರು ಹಾಕಿಕೊಟ್ಟಿದ್ದರು. ಅದರ ಬಗ್ಗೆ ಯಾವ ವಿಧವಾದ ಅಭಿಪ್ರಾಯ ಬೇಧವೂ ಇಲ್ಲ. ಅಧಿಕಾರದಲ್ಲಿ ಅವರಿದ್ದಾಗ ಅಷ್ಟಾಗಿ ಇಲ್ಲದಿದ್ದ ಯಾವ ಒಂದು ಗೌರವ ಮತ್ತು ಅಭಿಮಾನವಿತ್ತೋ ಅದು ಇಂದು ಹೆಚ್ಚಿದೆ. ಈಗ ಕಾಂಗ್ರೆಸ್ ಸರಕಾರ ಸ್ಥಾಪನೆಯಾದ ಮೇಲೆ ಬಂಡವಾಳ ಐದೂವರೆ 6 ಕೋಟಿ ಇತ್ತು 1946-47 ರಲ್ಲಿ. ಅದರಿಂದ ಒಟ್ಟು ಬರುವ ಉತ್ಪತ್ತಿ ಸುಮಾರು 10 ಲಕ್ಷ ರೂಪಾಯಿ ಭದ್ರಾವತಿ ಕಾರ್ಖಾನೆ ವಗೈರೆ ಎಲ್ಲಾ ಸೇರಿದೆ. ಆಗಲೂ ಕೂಡ ಚಿನ್ನದ ನಾಡಾಗಿತ್ತು ಎಂದು ಹೇಳುವಾಗ ಔದ್ಯೋಗಿಕ ಅಭಿವೃದ್ಧಿ ಇಂದು ಪರಮೋಚ್ಚ ಮಟ್ಟ ಮುಟ್ಟಿದಾಗ ನಾವು ಹಾಕಿದ ಬಂಡವಾಳದಮೇಲೆ ಸೇಕಡ ಒಂದೂವರೆಯಷ್ಟು ಮಾತ್ರ ಅದರಿಂದ ಬರುತ್ತಿದೆ ಹತ್ತು ವರ್ಷದ ಹಿಂದಿನ ಸ್ಮರಣೆ ಇಂದು ನೆನಪಿಗೆ ಬರುತ್ತಿದೆ.

ಬೇಕಾದಷ್ಟು ಯತ್ನ ಆಗಿದೆ, ಅದೆಲ್ಲಾ ಈಗ ಸ್ಮೃತಿಯಾಗಿ ಉಳಿದಿದೆ. ಅದನ್ನು ಪುನಃ ನೆನಸಬೇಕಾಗಿಲ್ಲ. ಹಿಂದೆ ಆದದ್ದೆಲ್ಲಾ ಬಹಳ ಚೆನ್ನಾಗಿತ್ತು, ಹಾಗಿತ್ತು, ಹೀಗಿತ್ತು ಎಂದು ಈಹೊತ್ತು ಹೇಳುತ್ತೇವೆ. ಇನ್ನು ಹತ್ತು ವರ್ಷದ ನಂತರ ಬಹುಶಃ ಜನರು ಏನು ಹೇಳುತ್ತಾರೆ ಎಂದರೆ ಹತ್ತು ವರ್ಷದ ಹಿಂದೆ ಚೆನ್ನಾಗಿತ್ತು ಎಂದು ಹೇಳುತ್ತಾರೆಯೋ ಏನೋ; ಇರಲಿ. ನಾನು ನನ್ನ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದೇನೆ, ಅದೇನೆಂದರೆ ಇವತ್ತಿನ ಇಂದಿನ ಪರಿಸ್ಥಿತಿಯಲ್ಲಿ ನಾವು ಏನು ಹಣವನ್ನು ಸರ್ಕಾರಿ ಕ್ಷೇತ್ರದ ಉದ್ಯಮಗಳಲ್ಲಿ ತೊಡಗಿಸಿದ್ದೇವೆ ಅದಕ್ಕೆ ಸಾಕಾದಷ್ಟು ಪ್ರಾಪ್ತಿ ಇವತ್ತು ಬರುತ್ತಾ ಇಲ್ಲ. ಅದಕ್ಕೆ ನಮ್ಮ ಔದ್ಯೋಗಿಕ ನೀತಿ ಇನ್ನು ಮುಂದೆ ಪುನರ್ವಿಮರ್ಶೆಯಾಗುವುದು ಅಗತ್ಯ ಎಂಬ ಮಾತನ್ನು ಹೇಳಿದ್ದೇನೆ. ಇದನ್ನು ನಾನು ಹೇಳುವುದಕ್ಕೆ ಕಾರಣವೇನು ? ಕೇಂದ್ರ ಸರ್ಕಾರದವರು ಔದ್ಯೋಗಿಕ ಪಾಲಿಸಿಯನ್ನು ನಿರೂಪಣೆ ಮಾಡತಕ್ಕವರು, ಯಾವುದೇ ಒಂದು ರಾಜ್ಯದ ಸರ್ಕಾರ ಅದು ಕಾಂಗ್ರೆಸ್ ಸರ್ಕಾರ ಆಗಿರಲಿ, ಕಮ್ಯೂನಿಸ್ಟ್ ಸರ್ಕಾರ ಆಗಿರಲಿ ಈ ದೇಶದ ಆರ್ಥಿಕ ನೀತಿಯನ್ನು ನಿರೂಪಣೆ ಮಾಡತಕ್ಕ ಅಧಿಕಾರ ಇವತ್ತು ರಾಜ್ಯ ಸರ್ಕಾರಕ್ಕೆ ಇಲ್ಲ, ನಾವು ನಮ್ಮದೇ ಆದ ಒಂದು ಸಣ್ಣ ಕ್ಷೇತ್ರದಲ್ಲಿ ಇಷ್ಟು ಮಾಡಬಹುದೇ, ಕಡಿಮೆ ಮಾಡಬಹುದೇ ಅಂತ ಯೋಚನೆ ಮಾಡಬಹುದೇ ಹೊರತು ಬೆಲೆಗಳ ಹತೋಟಿಯಾಗಲಿ, ಯಾರ ಮೇಲೆ ಎಷ್ಟು ಟ್ಯಾಕ್ಸ್ ಹಾಕಬೇಕೆನ್ನುವ ವಿಚಾರವಾಗಲಿ ಅಥವಾ ನಮ್ಮ ಆರ್ಥಿಕ ಮೂಲಭೂತ ಸಿದ್ಧಾಂತಕ್ಕೆ ಸಂಬಂಧಪಟ್ಟ ಯಾವುದೇ ವಿಚಾರವನ್ನೇ ಆಗಲಿ ನಿರೂಪಣೆ ಮಾಡತಕ್ಕ ಅಧಿಕಾರ ರಾಜ್ಯಸರ್ಕಾರಕ್ಕೆ ಇವತ್ತು ಇಲ್ಲ. ಅದನ್ನು ಕೇಂದ್ರಸರ್ಕಾರದವರು ಮಾಡಬೇಕು. ಇಂದು ನಾವು ನಮ್ಮ ರಾಜ್ಯದಲ್ಲಿ ಸರ್ಕಾರಿ ಉದ್ಯಮಕ್ಕೆ ಮತ್ತು ಕೆಲವು ಕಡೆಗಳಲ್ಲಿ ಖಾಸಗಿ ಉದ್ಯಮಕ್ಕೆ ಸ್ವಲ್ಪಮಟ್ಟಿನ ಬಂಡವಾಳವನ್ನು ಹಾಕಿದ್ದೇವೆ. ಅವೆಲ್ಲವನ್ನೂ ಸೇರಿಸಿದರೆ ಒಟ್ಟು ಸುಮಾರು 90 ಕೋಟಿ ರೂಪಾಯಿಯಷ್ಟು ಬಂಡವಾಳ ಆಗುತ್ತದೆ. ಬಹಳ ಕಡಿಮೆ ಪ್ರಮಾಣದಲ್ಲಿ ಖಾಸಗಿ ಕ್ಷೇತ್ರದ ಉದ್ಯಮಗಳಲ್ಲಿ ಷೇರ್ ಕ್ಯಾಪಿಟಲ್ ಕೊಟ್ಟಿದ್ದೇವೆ. ಅದು ಸುಮಾರು ಎರಡು ಕೋಟಿ ರೂಪಾಯಿಗಳಾಗುತ್ತದೆ. ನಮ್ಮ ಉದ್ಯಮಗಳಲ್ಲಿ ಸುಮಾರು 82 ಕೋಟಿ ರೂಪಾಯಿಗಳಷ್ಟು ನಮ್ಮ ಬಂಡವಾಳ ಇವತ್ತು ಇದೆ. ಅದರಲ್ಲಿ ಸುಮಾರು 20 ಕೋಟಿ ರೂಪಾಯಿಯಷ್ಟು ಸಹಕಾರಿ ಕ್ಷೇತ್ರದಲ್ಲಿ ಇದೆ. ಈ ಇಂಡಸ್ಟ್ರಿಯಲ್ ಕನ್ಸರ್ನ್ಸ್‌ನಿಂದ ಒಟ್ಟುಬರತಕ್ಕ ಉತ್ಪಾದನೆ ಇಲ್ಲಿಯವರೆಗೂ ಮೈನಸ್. ಅದನ್ನು ನನ್ನ ಬಜೆಟ್ ಭಾಷಣದಲ್ಲಿ ಕೊಟ್ಟಿದ್ದೇನೆ. 14 ಲಕ್ಷ ರೂಪಾಯಿಗಳಷ್ಟು ಕಳೆದ ವರ್ಷ ಬಂದಿದೆ.

1963–64 ರಲ್ಲಿ	...	ಸುಮಾರು 65 ಲಕ್ಷ ರೂಪಾಯಿ,
1964–65 ರಲ್ಲಿ	...	ತುಸ ಹೆಚ್ಚು ಕಮ್ಮಿ ಅಷ್ಟೆ, 65 ಲಕ್ಷ ರೂಪಾಯಿ

1965–66 ರಲ್ಲಿ	...	ಸುಮಾರು 123 ಲಕ್ಷ ರೂಪಾಯಿ
1966–67 ರಲ್ಲಿ	...	ಸುಮಾರು 101 ಅಥವಾ 102 ಲಕ್ಷ ರೂಪಾಯಿ
1967–68 ರಲ್ಲಿ	...	ಸುಮಾರು 149–150 ಲಕ್ಷ ರೂಪಾಯಿ 1968–69 ರಲ್ಲಿ 46 ಲಕ್ಷ ರೂಪಾಯಿನಷ್ಟು ಲುಕ್ಸಾನಾಗಿದೆ.

1969–70 ರಲ್ಲಿ ಸುಮಾರು 14 ಲಕ್ಷ ರೂಪಾಯಿನಷ್ಟು ಉತ್ಪಾದನೆ ಬರಬಹುದು ಎಂದು ಅಂದಾಜು ಇದೆ. ಈಗ ಒಂದು ಕಡೆ ನದೀ ನೀರಿನ ಮೇಲೆ ನಮ್ಮ ಅಧಿಕಾರ ಹೊರಟು ಹೋಗುತ್ತದೆ, ಅದಕ್ಕೆ ಹೆಚ್ಚು ಖರ್ಚು ಮಾಡಬೇಕೆಂದು ನಾವು ಬಯಸುತ್ತೇವೆ. ಮತ್ತೊಂದು ಕಡೆ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಉತ್ಪಾದನೆ ಇನ್ನೂ ಆಗಿಲ್ಲ ಅದಕ್ಕೆ ಹೆಚ್ಚು ತೆರಿಗೆಯನ್ನು ಹಾಕ ಕೂಡದು ಎಂದು ವಾದ ಮಾಡುತ್ತೇವೆ. ಮತ್ತೊಂದು ಕಡೆ ಶಹರದಲ್ಲಿ ಸಾಕಾದಷ್ಟು ತೆರಿಗೆಯ ಮಟ್ಟ ಮುಟ್ಟಿದ್ದೇವೆ ಅಲ್ಲಿ ಹೆಚ್ಚು ಹಾಕಕೂಡದು ಎಂಬ ವಾದ ಕೂಡ ಇದೆ. ಇರಿಗೇಷನ್‌ಗೆ ಹಾಕುವುದು ಇಷ್ಟು ದೊಡ್ಡ ಬಂಡವಾಳ ನಿರುಪಯುಕ್ತವಾದ ಬಂಡವಾಳ ಎಂದು ಏನು ಹೇಳು ತ್ತೇವೆ, ಅದನ್ನು ಅದಕ್ಕೆ ಕೊಡಬೇಕು, ನಡೆಸಿಕೊಂಡು ಹೋಗಬೇಕು, ಇದೆಲ್ಲಾ ಹೇಗೆ ಸಾಧ್ಯ ? ಈ ಮಾತನ್ನೆಲ್ಲಾ ಕೆಲವರು ಅವರ ಭಾಷಣದಲ್ಲಿ ಹೇಳಿದ್ದಾರೆ, ಅವರ ಹೆಸರು ನನ್ನಲ್ಲಿ ಉಂಟು. ಅದನ್ನೆಲ್ಲಾ ಓದಿದ್ದೇನೆ. ಇದಕ್ಕೆ ಸೋಷಿಯಲಿಸಂ ಅಂತ ಕರೆದರೆ ನಾನು ಏನು ಹೇಳಿದೆ ? ಈಗ ಸರಿಯಾಗಿ ನಡೆಯದೇ ಇರತಕ್ಕ ಸರ್ಕಾರಿ ಕ್ಷೇತ್ರದಲ್ಲಿರತಕ್ಕ ಉದ್ಯಮಗಳು ಅವು ಸರಿಯಾಗಿ ನಡೆಯು ತ್ತವೆ ಎಂದು ಅನ್ನತಕ್ಕ ಒಂದು ವಿಶ್ವಾಸ ನಮಗೆ ಇದೆ. ಖಾಸಗಿ ವಲಯದ ಜನರ ಸಹಾಯವನ್ನು ತೆಗೆದುಕೊಂಡು ಅವನ್ನು ಒಂದು ವ್ಯವಸ್ಥೆಗೆ ತರಲಿಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ ಎಂಬ ಮಾತನ್ನು ಹೇಳಿದ್ದೇನೆ. ಆ ಮಾತನ್ನು ಹೇಳುವಾಗ ನನಗೆ ಸ್ವಲ್ಪಮಟ್ಟಿಗೆ ಸಮಾಜವಾದದಲ್ಲಿ ನಂಬಿಕೆ ಇರುವುದರಿಂದ ಇವತ್ತಿನ ಪರಿಸ್ಥಿತಿಯನ್ನು ನೋಡಿ ನಾವು ವಾಸ್ತವಿಕವಾದಂತಹ ಮತ್ತು ಪ್ರೂಡೆಂಟ್ ಆದಂತಹ, ಬುದ್ಧಿವಂತಿಕೆಯಾದಂತಹ ಕ್ರಮವನ್ನು ತೆಗೆದುಕೊಳ್ಳುವುದು ಒಳ್ಳೆಯದು. ನಮ್ಮ ಜನತೆಗೆ ಕಲ್ಯಾಣವಾಗ ಬೇಕಾದರೆ. ಎಲ್ಲಾ ಮನಾಪಲಿಯನ್ನೂ ರಾಜ್ಯಕ್ಕೆ ಕೊಡಬೇಕೆಂದು ಅಲ್ಲ. 1957ನೇ ಇಸವಿ ಇಂಡಸ್ಟ್ರಿಯಲ್ ರೆವಲ್ಯೂಷನ್ ಕೂಡ ಮಿಕ್ಸೆಡ್ ಎಕಾನಮಿ ಇರಬೇಕೆಂದು ಆಯಿತು. ಮದ್ರಾಸು ಒಂದನ್ನು ಬಿಟ್ಟು, ಪ್ರತಿಯೊಂದು ಸರ್ಕಾರಿ ವಲಯದಲ್ಲೇ ಆಗಬೇಕು, ಪ್ರತಿಯೊಂದು ಸರ್ಕಾರದವರೇ ಸ್ಥಾಪನೆ ಮಾಡಬೇಕು ಎಂದು ಹೇಳುವವರಿಗಿಂತ ಅಲ್ಲಿ ಹೆಚ್ಚು ಪಟ್ಟು ಅಭಿವೃದ್ಧಿಯಾಗಿದೆ, ಜನರಿಗೆ ಉದ್ಯೋಗ ಸಿಕ್ಕಿದೆ. ಅವರ ಆದಾಯ ಹೆಚ್ಚಾಗಿದೆ, ಅನೇಕ ರೀತಿಯಲ್ಲಿ ಲಾಭ ಸಮಾಜಕ್ಕೆ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಅವರು ರಾಷ್ಟ್ರೀಕರಣ ಬಿಟ್ಟರು, ಟಿ. ವಿ. ಎಸ್. ಸುಂದರಂ ಅವರಿಗೆ ಕೊಟ್ಟರು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳುತ್ತೇನೆ ಅದರ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ನನ್ನ ಖಚಿತವಾದ ಅಭಿಪ್ರಾಯವೇನೆಂದರೆ ಯಾವ ಒಂದು ಕ್ಷೇತ್ರಕ್ಕೆ ಖಾಸಗಿ ಬಂಡವಾಳ ಬರ ತಕ್ಕುದು ಸಾಧ್ಯವಿದೆಯೋ, ಉತ್ಪಾದನೆ ಅದರಲ್ಲಿ ನಿರಾತಂಕವಾಗಿ ನಡೆಯುವುದಕ್ಕೆ ಸಾಧ್ಯ ವಿದೆಯೋ ಅಲ್ಲಿ ಸರ್ಕಾರದವರು ಬಂಡವಾಳವನ್ನು ಹಾಕುವುದು ಯೋಗ್ಯವಲ್ಲ. ಇವತ್ತು ಬಸ್ಸಿನ ವಿಚಾರ ತಾವು ಗಮನಿಸಬೇಕು. ಎಂ. ಎಸ್. ಆರ್. ಟಿ. ಸಿ. ಯಲ್ಲಿ 20 ಕೋಟಿರೂಪಾಯಿಗಳನ್ನು ಹಾಕಿದ್ದೇವೆ. ಜನರಿಗೆ ಕಲ್ಯಾಣವಾಗತಕ್ಕ ಮಾರ್ಗ ಅದನ್ನು ಒಪ್ಪುತ್ತೇವೆ. ಆದರೆ ಕೆಲವು ಕಡೆ ಕುಡಿಯಲಿಕ್ಕೆ ನೀರು ಇಲ್ಲದಂತಹ ಹಳ್ಳಿಗಳು ಇವೆ, ಬರಗಾಲ ಪೀಡಿತವಾದ ಸ್ಥಳಗಳು ಇವೆ ಅವಕ್ಕೆ ಪ್ರಯಾರಿಟಿ ಕೊಡಬೇಕೇ ಅಥವಾ ಪ್ರಯಾಣಿಕರ ಸುಖವನ್ನು ಬಯಸಿ ಲುಕ್ಸಾನಾಗಲಿ, ಹಾನಿ ಯಾಗಲಿ ರಾಷ್ಟ್ರೀಕರಣ ಮಾಡಿದ್ದೇವೆ ಎಂದರೆ ಸಂತೋಷವಾಗುತ್ತದೆ ಎಂದು ಹೇಳಿ ಆ ದೃಷ್ಟಿಯಿಂದ ಮಾಡಬೇಕೇ ?

ಶ್ರೀ ಎಸ್. ಶಿವಪ್ಪ.—ನೀವು ಯೋಚನೆ ಮಾಡಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಹೇಳಿದೆ ಯಾರಾದರೂ ತಪ್ಪು ಮಾಡಿದ್ದರೆ ಪುನಃ ಅದೇ ತಪ್ಪನ್ನು ಮುಂದೆ ಮಾಡಕೂಡದು. ಈಗ 82 ಕೋಟಿ ರೂಪಾಯಿಗಳನ್ನು ಏನು ಹಾಕಿದ್ದೇವೆ ಕನಿಷ್ಠ ಪಕ್ಷ ಅದಕ್ಕೆ ಸರಿಯಾದ ಪ್ರಾಪ್ತಿ ಬರಬೇಕು. ಸರ್ಕಾರಿವಲಯದಲ್ಲಿರುವ ಕಾರ್ಖಾನೆಗಳು ಯೋಗ್ಯವಾಗಿ ನಡೆಯುವಂತಹದು ಎರಡು ಪರಿಸ್ಥಿತಿಯಲ್ಲಿ ಸಾಧ್ಯ. ಮೊದಲನೆಯ ಪರಿಸ್ಥಿತಿ ಈ ದೇಶದ ಪ್ರತಿಯೊಬ್ಬ ನಾಗರಿಕನೂ ಪ್ರಾಮಾಣಿಕನಾಗಿರಬೇಕು, ಕಷ್ಟಪಟ್ಟು ದುಡಿಯಬೇಕು, ರಾಷ್ಟ್ರೀಯ ಭಾವನೆಯಿಂದ ಪ್ರೇರಿತನಾಗಿರಬೇಕು.

ಶ್ರೀ ಎಸ್. ಚನ್ನಯ್ಯ.—ಅದನ್ನು ತಾವು ತಮ್ಮ ಆಡಳಿತದಲ್ಲಿ ತೋರಿಸಿಕೊಡಬೇಕು, ಮಾರ್ಗ ದರ್ಶನ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆಯದು ಎಂದರೆ ಪ್ರಜಾಪ್ರಭುತ್ವ ಅಲ್ಲದೇ ಸರ್ವಾಧಿಕಾರತ್ವ ಕೂಡ ಇರಬೇಕು. ಇವತ್ತು ರಷ್ಯಾದಲ್ಲಿ ನಡೆಯುತ್ತಾ ಇದೆ, ಯುಗೋಸ್ಲೋವಿಯಾದಲ್ಲಿ ನಡೆಯುತ್ತಾ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಹೊಸ ನೀತಿಯನ್ನು ಪ್ರತಿಪಾದನೆ ಮಾಡುತ್ತಾ ಇದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಹೊಸದೇನೂ ನಾನು ಪ್ರತಿಪಾದನೆ ಮಾಡುತ್ತಾ ಇಲ್ಲ. ಮೈಸೂರಿನ ಇಂಡಸ್ಟ್ರಿಯಲ್ ಪಾಲಿಸಿ ವಿಚಾರದಲ್ಲಿ ನಮ್ಮ ಸ್ನೇಹಿತರಾದಂತಹ ಶ್ರೀಮಾನ್ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಕೇರಳದಲ್ಲಿ ಯಾವ ಪಾಲಿಸಿಯನ್ನು ಅನುಸರಿಸುತ್ತಾ ಇದ್ದಾರೋ ಅದನ್ನೇ ಅನುಸರಿಸುತ್ತಾ ಇದ್ದೇವೆ. ಶ್ರೀ ಕೃಷ್ಣನ್‌ರವರು ನಾನು ನನ್ನ ಮಾತುಗಳನ್ನು ಮುಗಿಸಿದ ಮೇಲೆ ಅವರು ಎಷ್ಟು ಪ್ರಶ್ನೆಯನ್ನಾದರೂ ಕೇಳಲಿ, ಅದಕ್ಕೆ ಉತ್ತರ ಕೊಡಬಲ್ಲೆ. ಆದರೆ ಮಧ್ಯೆ ಬಾಯಿ ಹಾಕುವುದು ಬೇಡ ಎಂದು ಹೇಳುತ್ತೇನೆ. ನನ್ನ ಸ್ನೇಹಿತರೊಬ್ಬರು ಯುಗೋಸ್ಲೋವಿಯಾದ ವಿಚಾರ ಹೇಳಿದರು, ಅಲ್ಲಿರತಕ್ಕ ಪಬ್ಲಿಕ್ ಸೆಕ್ಟಾರಿನಲ್ಲಿ ಕೂಲಿಗಾರರಿಗೆ ಇಂತಿಷ್ಟು ಎಂದು ಒಂದು ಮಿನಿಮಂ ವೇಜಸ್ಸನ್ನು ನಿಗದಿ ಮಾಡಿದ್ದಾರೆ. ಅಲ್ಲಿ ಸರ್ಕಾರದ ಪರವಾಗಿ ಒಬ್ಬ ಪ್ರತಿನಿಧಿ ಇರುತ್ತಾನೆ. ಕೆಲಸಗಾರರ ಪರವಾಗಿ ಐದು ಜನ ಪ್ರತಿನಿಧಿಗಳಿರುತ್ತಾರೆ. ಅಲ್ಲಿ ಸರ್ಕಾರದವರು ಇಂತಿಷ್ಟು ಗುರಿಯನ್ನು ಸಾಧಿಸಲೇಬೇಕೆಂದು ಒಂದು ಟಾರ್ಗೆಟ್ಟನ್ನು ಫಿಕ್ಸ್ ಮಾಡುತ್ತಾರೆ ಅವರು ನಿಗದಿ ಮಾಡಿರತಕ್ಕ ಗುರಿಗಿಂತ ಜಾಸ್ತಿ ಉತ್ಪನ್ನ ಮಾಡಿದರೆ ಆ ಹೆಚ್ಚು ಉತ್ಪನ್ನದಲ್ಲಿ ಅವರಿಗೆ ಹೆಚ್ಚಿನ ರಿಬೇಟ್, ಡಿವಿಡೆಂಟ್ ಇತ್ಯಾದಿಗಳನ್ನು ಕೊಡಲಾಗುತ್ತದೆಂದು ಹೇಳಿದ್ದಾರೆ. ಆ ನಿರ್ಧರ ಮಾಡಿರತಕ್ಕ ಗುರಿಗಿಂತ ಕಡಮೆ ಉತ್ಪನ್ನವಾದರೆ ಅವರಿಗೆ ಯಾವ ಹೆಚ್ಚಿನ ಪ್ರತಿಫಲವೂ ಸಿಕ್ಕುವುದಿಲ್ಲ. ಪೂರ್ಣ ಕಮ್ಯುನಿಜಂನಲ್ಲಿ ಕೂಡ ಏನು ಹೇಳಿದ್ದಾರೆ :

> "From each according to his ability, to each according to his work."

But, this priniciple has never been implemented in any of the communist countries till today.

Sri M. S. KRISHNAN.—You are thoroughly wrong, Sir.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೀಗೆ ಫ್ರಾಂ ಈಚ್ ಮ್ಯಾನ್ಸ್ ಅಕಾರ್ಡಿಂಗ್ ಟು ಹೀಸ್ ಎಬಿಲಿಟಿ ಎಂದು ಹೇಳಿದ್ದಾರೆ. ನಮ್ಮಲ್ಲಿಯೂ ಅದನ್ನು ಜಾರಿಗೆ ತಂದರೆ ಇಲ್ಲಿಯೂ ಅನುಕೂಲವಾಗುತ್ತದೆ ಎಂಬುದನ್ನು ನಾನು ಹೇಳಿದೆ. ಆದರೆ ನಾವಿಲ್ಲಿ ಒಂದು ನೀಡ್‌ಬೇಸ್ ಇಟ್ಟುಕೊಂಡು ಅದರ ಪ್ರಕಾರ ಕೆಲಸಮಾಡುತ್ತಿದ್ದೇವೆ. ಇಲ್ಲಿರತಕ್ಕ ಪರಿಸ್ಥಿತಿಗಳೇನು ಎಂಬುದನ್ನು ನಾವು ಮೊದಲು ತಿಳಿದುಕೊಳ್ಳೋಣ. ಇರತಕ್ಕ ಕೈಗಾರಿಕೆಗಳನ್ನು ಉತ್ತಮಪಡಿಸುವುದಕ್ಕೆ ಏನೇನು ಸಾಧ್ಯವಾಗುತ್ತದೋ ಅದೆಲ್ಲವನ್ನೂ ಮಾಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ನಮ್ಮಲ್ಲಿರತಕ್ಕ ಇಷ್ಟು ಮಾನ್ಯ ಸದಸ್ಯರುಗಳ ಪೈಕಿ ಯಾರಾದರೂ ಮುಂದೆ ಬರಲಿ ಅವುಗಳನ್ನು ನಡೆಸಿ ಅವುಗಳಿಂದ ಉತ್ತಮ ಫಲವನ್ನು ತರುತ್ತೇವೆಂದು ಹೇಳತಕ್ಕವರಿಗೆ ನಾವು ಅವುಗಳ ಆಡಳಿತವನ್ನು ವಹಿಸಿ ಕೊಡುವುದಕ್ಕೆ ತಯಾರಾಗಿದ್ದೇವೆ. ಯಾರಿಂದಲಾದರೂ ಸರಿ ಅವು ಉತ್ತಮ ಸ್ಥಿತಿಗೆ ಬಂದರೆ ಸಾಕು. ನಮ್ಮಲ್ಲಿ ಹಣವೊಂದಿದ್ದರೆ ಬೇಕಾದಷ್ಟು ಯೋಜನೆಗಳನ್ನು ನಾವು ರೂಪಿಸಿಕೊಳ್ಳಬಹುದು. ಆದರೆ ನಾನು ಹೇಳುತ್ತಿರುವುದು ನಮ್ಮಲ್ಲಿರತಕ್ಕ ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್ಸ್‌ನಲ್ಲಿ ಅಂದರೆ ಸರ್ಕಾರಿ ಉದ್ದಿಮೆಗಳಲ್ಲಿ ಮರಕೆರಾದಲ್ಲಿರತಕ್ಕ ಕಾರ್ಖಾನೆಯಿಂದ ಸ್ವಲ್ಪ ನಷ್ಟವಾಗುತ್ತಿದೆ, ಅಂದರೆ ಸುಮಾರು 1½ ಲಕ್ಷದವರೆಗೂ ನಷ್ಟವಾಗುತ್ತಿದೆ. ಹಾಸನದಲ್ಲಿರತಕ್ಕ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಿಂದ 1965–66 ವರೆಗೂ ಲಾಭದಲ್ಲೇ ಕೆಲಸಮಾಡುತ್ತಿದ್ದುದು ಈ ಸಾಲಿನಲ್ಲಿ ಅಂದರೆ 1966–67 ಕ್ಕೆ 2 ಲಕ್ಷ ನಷ್ಟವಾಗಿದೆ. ಹಾಗೇ ಮೈಸೂರು ಗೌರ್ನಮೆಂಟ್ ಸಿಲ್ಕ್‌ಫಿಲೇಚರಿನಲ್ಲಿ ಮೂರುವರೆ ಲಕ್ಷ ನಷ್ಟವಾಗಿದೆ. ಇನ್ನು ಗೌರ್ನಮೆಂಟ್ ಫಿಲೇಚರ್ ಮೈಸೂರು ಕೊಳ್ಳೇಗಾಲ ಅಲ್ಲಿ 40 ಲಕ್ಷ ನಷ್ಟವಾಗಿದೆ. ಆದರೆ ಮೊನ್ನೆತಾನೆ ಕೇಂದ್ರ ಸರ್ಕಾರದೊಡನೆ ಈ ಫಿಲೇಚರ್ ಕೈಗಾರಿಕೆ ವಿಚಾರವಾಗಿ ಪ್ರಸ್ತಾಪಮಾಡಿದ್ದೇವೆ. ಇದನ್ನು ಕೇಂದ್ರದವರೂ ಮತ್ತು ರಾಜ್ಯ ಸರ್ಕಾರದವರಿಬ್ಬರೂ ಸೇರಿ ಒಂದು ಕಾರ್ಪೊರೇಷನ್ ಮಾಡಿ

ಕೊಂಡು ತನ್ಮೂಲಕ ಕೆಲಸ ನಡೆಸುವಂತೆ ಮಾತುಕತೆಗಳಾಗಿವೆ. ಇನ್ನು ಲಂಕೋದಲ್ಲಿ 1966-67 ಕ್ಕೆ 10.55 ಲಕ್ಷ 1967-68 ಕ್ಕೆ 29 ಲಕ್ಷ ನಷ್ಟವಾಗಿದೆ. ಅದಕ್ಕೆ ಕಾರಣಗಳೂ ಅನೇಕ ಇರುತ್ತವೆ. ಅಂದರೆ ಇದರ ತಾತ್ಪರ್ಯ ನಮ್ಮ ಅಭಿಪ್ರಾಯಗಳೇ ಸರ್ವೋತ್ತಮ ಎಂದು ಹೇಳುವುದಿಲ್ಲ. ನಾವು ಇನ್ನಾದರೂ ನಮ್ಮ ರಾಜ್ಯದಲ್ಲಿ ವ್ಯವಸಾಯ ಮತ್ತು ನೀರಾವರಿ ಕಾರ್ಯಗಳಿಗೆ ಒಂದು ಹೆಚ್ಚಿನ ಆದ್ಯತೆಯನ್ನು ಕೊಡದಿದ್ದರೆ ಮೈಸೂರು ರಾಜ್ಯ ಖಂಡಿತವಾಗಿ ಅಭಿವೃದ್ಧಿಗೆ ಬರಬೇಕಾದರೆ ಬಹಳ ಕಷ್ಟವಾಗುತ್ತದೆ. ಆದರೆ ಕೈಗಾರಿಕೆಗಳೂ ಬೇಕು. ಅವುಗಳನ್ನು ಬೇಡವೆಂದು ನಾನು ಹೇಳುತ್ತಿಲ್ಲ. ಆದರೆ ಕೈಗಾರಿಕೆಗಳಿಂದ ಮೈಸೂರು ರಾಜ್ಯದಲ್ಲಿ ಕೆಲವು ಭಾಗಗಳು ಅಭಿವೃದ್ಧಿಗೆ ಬರಬಹುದು. ದಾವಣಗೆರೆಯ ಸುತ್ತಮುತ್ತ ಇರತಕ್ಕ ನಾಲ್ಕಾರು ಹಳ್ಳಿಗಳಿಗೆ ಅಲ್ಲಿನ ಕೈಗಾರಿಕೆಗಳಿಂದ ಲಾಭವಾಗಬಹುದು. ಆದರೆ ಬೇಸಾಯದ ಅಭಿವೃದ್ಧಿಯಿಂದ ದೇಶಕ್ಕೆ ಅನುಕೂಲವಾದಂತೆ ಆ ಬಾಬಿನಿಂದ ಸಾಧ್ಯವಿಲ್ಲ ಎಂಬುದು ನನ್ನ ವಾದ. ಆದರೆ ಎಲ್ಲೆಲ್ಲಿ ಖಾಸಗೀ ಬಂಡವಾಳವನ್ನು ತೊಡಗಿಸಿ ಜನರು ಉದ್ದಿಮೆಯನ್ನೂ ಪ್ರಾರಂಭಿಸಬಲ್ಲರೋ ಅಂಥ ಕಡೆಗಳಲ್ಲಿ ಸರ್ಕಾರದವರು ಕೈ ಹಾಕಬಾರದು ಎಂಬುದು ನನ್ನ ಅಭಿಪ್ರಾಯ. ಈ ದಿವಸ ಯಾವುದಾದರೊಂದು ಖಾಸಗೀ ಸಂಸ್ಥೆಗೆ ಶ್ರೀಮಾನ್ ಕೆ. ಎಚ್. ಪಾಟೀಲರನ್ನು ಅಧ್ಯಕ್ಷರನ್ನಾಗಿಡೋಣ. ಆಗ ಅಲ್ಲಿ ಕೆಲಸ ಕಾರ್ಯಗಳು ಯಾವ ರೀತಿ ನಡೆಯುತ್ತವೆಂಬುದನ್ನು ಅವರನ್ನು ತಪ್ಪಿಸಿ ಅನಂತರ ಅಲ್ಲಿ ಬೇರೆ ಯಾರಾದರೂ ಎ. ಬಿ. ಸಿ. ಅನ್ನುವರನ್ನು ಇಟ್ಟರೆ ಆಗ ಅದರಲ್ಲಿ ಎಷ್ಟು ವ್ಯತ್ಯಾಸ ಕಾಣುತ್ತದೆಂಬುದನ್ನು ತಾವೆಲ್ಲರೂ ನೋಡಬಹುದು. ಖಾಸಗೀ ಉದ್ಯಮಗಳವರು ದಕ್ಷರಾದ ಅಧಿಕಾರಿಗಳಿಗೆ ತಿಂಗಳಿಗೆ 10 ಸಾವಿರ ರೂಪಾಯಿಗಳನ್ನಾದರೂ ಕೊಡುವುದಕ್ಕೆ ಸಿದ್ಧರಾಗಿರುತ್ತಾರೆ. ಅಲ್ಲಿ ಜಾತೀಯತೆ, ಸೀನಿಯಾರಿಟಿ ಪ್ರಶ್ನೆಗಳ ಉಪಟಳವಿಲ್ಲ. ನಮ್ಮ ಸರ್ಕಾರಿ ಉದ್ದಿಮೆಗಳಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ನೂರೊಂದು ತಕರಾರುಗಳು ಬರುತ್ತವೆ. ನಾಳೆ ಇದೇ ಸಭೆಯಲ್ಲಿ ಆ ಅಧಿಕಾರಿಗಳನ್ನು ಜಾತೀಯತೆ ಮೇಲೆ ತಂದಿದ್ದಾರೆ, ಅವರಿಗೆ ಸೀನಿಯಾರಿಟಿ ಇಲ್ಲ ಎಂಬ ಕೂಗು ಏಳುತ್ತದೆ. ನಮ್ಮಲ್ಲಿ ಸರ್ಕಾರದ ಪರವಾಗಿ 3500 ಕೋಟಿ ರೂಪಾಯಿಗಳ ಬಂಡವಾಳದ ಕಾರ್ಖಾನೆಗಳಿವೆ. ಕೇರಳದಲ್ಲಿ ಒಂದೆರಡಿರಬಹುದು. ಅಲ್ಲಿಯೂ ಕೂಡ ಈ ಬಾಬಿನಲ್ಲಿ 35ಕೋಟಿ ರೂಪಾಯಿ ಹಾನಿಯಾಗಿದೆ. ಆದ್ದರಿಂದ ನಾನು ಇಲ್ಲಿ ಈಗ ಅವುಗಳನ್ನು ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಆದರೆ ನಾನು ಸಭೆಗೆ ತಿಳಿಸಬೇಕಾದ ಇನ್ನೆರಡು ಮಹತ್ವದ ವಿಚಾರಗಳಿವೆ. ಅದರಲ್ಲಿ ಮೊದಲನೆಯದು ಗ್ರಾಮೀಣ ಪ್ರದೇಶದಲ್ಲಿರತಕ್ಕ ರೈತರ ಪರಿಸ್ಥಿತಿ ಸುಧಾರಿಸಿದೆ, ಅಲ್ಲಿ ಮೊದಲಿದ್ದ ಪರಿಸ್ಥಿತಿ ಇಲ್ಲ. ಆ ಭಾಗಗಳು ಅಭಿವೃದ್ಧಿಯಾಗಿವೆ. ಆದಾಗ್ಯೂ ಅವರಿನ್ನೂ ತೆರಿಗೆ ಕಕ್ಷೆಯಲ್ಲಿ ಬಂದಿರುವುದಿಲ್ಲ. ಅದನ್ನೇ ನಾನು ನನ್ನ ವರದಿಯಲ್ಲೂ ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ನಾನು ಹೇಳುವುದಿಷ್ಟೆ ಲೇಟೆಸ್ಟ್ ಫಿಗರ್ಸ್ ನನ್ನ ಹತ್ತಿರ ಇಲ್ಲ. ಒಟ್ಟು ವ್ಯವಸಾಯಬಾಬಿನಿಂದ ರೈತನಿಗೆ ಬರತಕ್ಕ ಆದಾಯ 1450 ಕೋಟಿ ರೂಪಾಯಿಗಳು ಅದರಲ್ಲಿ, ರಾಜ್ಯ ಸರ್ಕಾರಗಳಿಗೆ ಕಂದಾಯ ಮತ್ತು ನೀರು ತೆರಿಗೆ ಮತ್ತು ವ್ಯವಸಾಯ ವರಮಾನ ತೆರಿಗೆಯಿಂದ ಬರುವುದು 120 ಕೋಟಿ ಆದರೆ ನಾನ್ ಅಗ್ರಿಕಲ್ಚರಲ್ ಇನಕಂ 688 ಕೋಟಿ ರೂಪಾಯಿಗಳು.

9-00 P.M.

ಶ್ರೀ ಎಸ್. ಗೋಪಾಲ ಗೌಡ.—ಇದರಲ್ಲಿ ಏನಾಗಿದೆಯೆಂದರೆ, ಒಬ್ಬ ಹಳ್ಳಿಯ ರೈತ ಒಂದು ಕ್ಯಾಮರಾ ತೆಗೆದುಕೊಂಡರೆ, ಅವನು ಇನ್‌ಡೈರೆಕ್ಟ್ ಟ್ಯಾಕ್ಸ್ ಎಷ್ಟು ಕೊಡುತ್ತಾನೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡರೆ, ಅದರಿಂದ ಎಷ್ಟು ಆದಾಯ ಬರುತ್ತದೆಂಬುದನ್ನು ನೋಡಬಹುದು. ಹಳ್ಳಿಗಳ ಸಂತೆಯಲ್ಲಿ ಬಂದು ವ್ಯಾಪಾರಮಾಡುವವರ ಕಂಟ್ರಿಬ್ಯೂಷನ್ ಎಷ್ಟು ಎಂದು ಇಲ್ಲಿ ಹೇಳುತ್ತಾ ಇಲ್ಲ. 30 ಕೋಟಿ ರೂಪಾಯಿಗಳಷ್ಟು ವ್ಯಾಪಾರ ತೆರಿಗೆಯಿಂದ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಾತನಾಡುತ್ತಾ ಇರುವುದು ಎರಡು ಪಾಯಿಂಟ್ಸ್. ಇನ್‌ಡೈರೆಕ್ಟ್ ಟ್ಯಾಕ್ಸ್ ಹಳ್ಳಿಯವ ಮತ್ತು ಪಟ್ಟಣದವ ಎಷ್ಟು ಕೊಡುತ್ತಾನೆಂಬುದು. ಬೆಂಗಳೂರಿನಲ್ಲಿ ಕೆಲಸಮಾಡುವ ನೌಕರ ಮತ್ತು 50 ಮೈಲಿ ದೂರದಲ್ಲಿ ಗದ್ದೆಯಲ್ಲಿ ಕೆಲಸಮಾಡುವ ರೈತ ಒಂದೇ ರೀತಿಯಾಗಿ ಇನ್‌ಡೈರೆಕ್ಟ್ ಟ್ಯಾಕ್ಸ್ ಕೊಡುತ್ತಾನೆಯೇ?

ಶ್ರೀ ಎಸ್. ಗೋಪಾಲಗೌಡ.—ಮೈಸೂರು ರಾಜ್ಯದಲ್ಲಿ 50 ಲಕ್ಷ ಜನರು ಪಟ್ಟಣದಲ್ಲಿಯೇ ಇದ್ದಾರೆ.

SRI RAMAKRISHNA HEGDE.—The following table shows Indirect Tax per capita per month (In Rupees):

Year	*Rural*	*Urban*
1953–54	0·59	1·62

According to the recent study conducted, the per capita tax per month (in rupees) is as follows:

Rural	...	0·93
Urban	...	2·70

Tax percentage of consumer expenditure is as follows:

1958–59 2.9 (Rural) 5·9 (Urban)

According to study conducted by Finance Ministry during 1958–59 it was:

1958-59 4.4 (Rural) 9.3 (Urban)

According to study conducted by Dr. T. N. Raj with reference to National Income, the National Income rose from 4.2 per cent in 1952-53 to 5.4 per cent in 1957–58 in respect of Rural sector, whereas in Urban sector, the corresponding figure was 13 per cent in 1952-53 to 16.5 per cent in 1957–58, thus indicating a steep increase in the taxation of the Urban sector.

The following table indicates the details of approximate share in National Income tax payment:

National Income	1952–53	1957–58
from Rural	(in crores)	
Sector.	6,850	7,900
National Income from Urban Sector. ...	2,980	3,500

So the additional increment in the Rural sector was Rs. 1,050 crores; the additional increase during the same period in Urban Sector was Rs. 520 crores.

TAX PAYMENT

(in crores)

Year	*Rural*	*Urban*
1952-53	289	386
1957–58	430	576

The increase in taxes in Rural areas during the above period was from 4.2 to 5.4; whereas in case of Urban areas it was from 13.0 to 16.5.

According to the study made by the National Council of Applied Economic Research, the marginal rate of tax rose from 10 per cent in 1956–61 to 20 per cent rate of tax rose from 10 per cent in 1960–64 in the Rural Sector; and in Urban sector from 24 per cent in 1956–61 to 42 per cent in 1960–64, as could be seen from the table.

According to another study conducted by Mr. P. Gandhi the per capita tax rate was 3/5th of the per capita tax in non-agricultural sector in 1961–62.

The figures arrived at by the Planning Commission also show that the tax burden on the Rural sector is much less than on the Urban Sector, as summarised in the table. Of course, I am not going into details of it. If any hon. Members are interested they can look into the details.

The following table indicated the instances of taxes and expenditure on agricultural and non-agricultural sectors.

	Agricultural sector	*Non-Agricultural sector*
1950–51	185·52	391·28

It goes on increasing year by year.

ನಾನು ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಇದನ್ನು ನಾನು ಒಂದು ವಾದಮಾಡುವ ಉದ್ದೇಶಕ್ಕಾಗಲಿ, ಗ್ರಾಮಾಂತರ ಪ್ರದೇಶಗಳಲ್ಲಿ ತೆರಿಗೆ ಹಾಕುವ ಉದ್ದೇಶದಿಂದಾಗಲಿ ಹೇಳತಾ ಇಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ತಿಳಿದುಕೊಳ್ಳಬೇಕಾದುದು ಇವತ್ತು ಟ್ಯಾಕ್ಸ್ ಹಾಕಬೇಕೇ ಬೇಡವೇ ?. ಹಾಕುವುದಾದರೆ ಎಲ್ಲೆಲ್ಲಿ ಎಷ್ಟೆಷ್ಟು ಹಾಕಬೇಕು ?

Sri H. N. NANJE GOWDA.—Have they taken into account the loss incurred by the agriculturist class due to levy rate ?

Sri RAMAKRISHNA HEGDE.—I appeal to the hon. Members not to jump to the conclusion. I am not holding brief either for urban sector or rural sector. It is not my intention to argue either on behalf of former or the latter. My only point is to convince the hon. Members about the real situation today in the country in both the sectors.

Sri S. SIVAPPA.—My doubt is the whole statistics is unreal.

Sri RAMAKRISHNA HEGDE.—The hon. Leader of the Opposition questions the very authority of the figures I have. In argument, we have to rely on certain figures and these figures are published by a well-known organisation of National Council for Applied Economic Research and also Government source. This is very interesting statistics so that all of us can know if there is any area where we can have little potential for further taxation. I am not trying to convince the Members to take any decision just now.

Sri S. SIVAPPA.—Figures are arguing for themselves.

Sri RAMAKRISHNA HEGDE.—It is very unfair. So, in agricultural sector, the total incidence of taxes in 1950-51 was 185.52; in 1964-65 it rose to 618.76; and the corresponding figures for non-agricultural sector during the same period of 1950-51 was 391.28; in 1964-65 it was 1750.06

ಇವತ್ತು ನಾವು ನಮ್ಮ ರಾಜ್ಯದ ಒಂದು ಉದಾಹರಣೆ ತೆಗೆದುಕೊಳ್ಳೋಣ. ಒಟ್ಟು ಎಲ್ಲಾ ಸೆಕ್ಟರಿಂದ ಬರತಕ್ಕ ಉತ್ಪನ್ನ ಅಗ್ರಿಕಲ್ಚರಲ್ ಸೆಕ್ಟರಿಂದ ಬರತಕ್ಕ ಉತ್ಪನ್ನ ಅವುಗಳ ಪರ್ಸೆಂಟೇಜ್ ಎಷ್ಟು ಎಂದು ಹೇಳುತ್ತೇನೆ.

1960-61 ರಲ್ಲಿ ಅಗ್ರಿಕಲ್ಚರಲ್ ಸೆಕ್ಟರ್ ರಾಜ್ಯದ ಒಟ್ಟು ಉತ್ಪನ್ನ 396 ಕೋಟಿ 28 ಲಕ್ಷ ಇತ್ತು. 1964-65 ರಲ್ಲಿ 573 ಕೋಟಿ 39 ಲಕ್ಷ ರೂಪಾಯಿ ಇದ್ದು ಇತ್ತೀಚೆಗಿನ ಅಂಕಿ ಅಂಶ.

Sri H. N. NANJE GOWDA.—May I know whether the quantity of commodity had increased or was it because of devaluation? Have you taken them into consideration?

Sri RAMAKRISHNA HEGDE.—It may be due to greater production. Secondly it might also be due to rise in prices. There are several factors. The fact is, during the last several years, the total value of agricultural production has gone up considerably. What I have furnished is only an estimate. It is on the basis of available figures. The latest figure in respect of 1967-68 is about Rs. 700 crores. ಈಗ ಸರಕಾರಕ್ಕೆ ಪ್ರತಿಯಾಗಿ ಬರತಕ್ಕುದು ಸುಮಾರು 7 ಕೋಟಿ ರೂಪಾಯಿಯಷ್ಟು ಕಂದಾಯ. ಆಮೇಲೆ ಅಗ್ರಿಕಲ್ಚರಲ್ ಒಂದು ಕೋಟಿ ಚಿಲ್ಲರೆ ವಾಟರ್ ರೇಟ್ ಬೆಟರ್‌ಮೆಂಟ್ ಲೆವಿ ಎಲ್ಲಾ ಸೇರಿಸಿದರೆ ಸುಮಾರು ಮೂರು ಕೋಟಿ ರೂಪಾಯಿ ಬರುತ್ತದೆ.

Sri K. H. RANGANATH.—What is the total percentage of population that is residing in rural area?

Sri RAMAKRISHNA HEGDE.—That is applicable to everybody.

Sri D. DEVARAJ URS.—In addition to what he has been saying in regard to national income and incidence of taxation, it is better for our appreciation if he could give us the per capita income of urban sector people and the rural sector people.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಸ್ವಲ್ಪ ವಿವಾದವಾಗುತ್ತಿರುವುದರಿಂದ ನನ್ನ ಹತ್ತಿರ ಎಷ್ಟು ಮೆಟೀರಿಯಲ್ಸ್ ಇದೆಯೋ, ಅದನ್ನು ಸೈಕ್ಲೋಸ್ಟೈಲ್ ಮಾಡಿ ಎಲ್ಲಾ ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಅದನ್ನು ಅವರು ಸ್ಟಡಿ ಮಾಡಲಿ. ಅದನ್ನು ನೋಡಿದ ಮೇಲೆ ಇವರು ಕಲ್ಪಿತವಾಗಿ ಹೇಳತಕ್ಕ ವಿಚಾರ ಸರಿಯಲ್ಲವೆಂದು ತಿಳಿಯುವುದು. ಯಾವ ಕ್ಷೇತ್ರದಲ್ಲಿ ಸ್ವಲ್ಪ ಆದಾಯ ಬರತಕ್ಕದ್ದು ಸಾಧ್ಯವಿದೆ, ಅದರಲ್ಲಿ ಬಡವರಿಗೆ ಅನ್ಯಾಯಮಾಡಿಲ್ಲ, ಶ್ರೀಮಂತರಿಗೆ ಅನುಕೂಲ ಮಾಡಿಕೊಟ್ಟಿಲ್ಲ.

(Sri S. Sivappa rose)

This is not the way of asking for information. I will give all the material to him.

Sri S. SIVAPPA.—When he says there is increase of agricultural production, how fallacious his argument is?

Sri RAMAKRISHNA HEGDE.—That only shows he does not want. to proceed on the line of argument or logic.

ನನ್ನ ಸೂಚನೆ ಇಷ್ಟೆ. ನಾವು ರೂರಲ್ ಏರಿಯಾದಲ್ಲಿ ಸುಮಾರು 210 ಕೋಟಿಯಷ್ಟು ಹಾಕಿದ್ದೇವೆ. ಎಲ್ಲಾ ಕಡೆಗೂ ಏನೂ ಸುಧಾರಣೆಯಾಗಿಲ್ಲವೆಂದು ಏನೂ ಇಲ್ಲ. ನೀರಾವರಿ ಯೋಜನೆಯಾಗಿದೆ, ದೊಡ್ಡ ನೀರಾವರಿ ಯೋಜನೆಯಾಗಿದೆ, ಚಿಕ್ಕ ನೀರಾವರಿ ಯೋಜನೆಯಾಗಿದೆ, ಮಧ್ಯಮ ತರದ ಯೋಜನೆಯಾಗಿದೆ ಮತ್ತು ಬಾವಿ ತೋಡುವುದಕ್ಕೆ ಸಹಾಯ ಕೊಡುವುದಾಗಲಿ, ಮತ್ತು ಇನ್ನಿತರ ಸಹಾಯದ ಮುಖಾಂತರವಾಗಲಿ ಎಲ್ಲಾ ಉತ್ತಮ ಕೆಲಸಗಳು ಆಗಿವೆ.

ಎಲ್ಲಾ ಕಡೆ ಅಲ್ಲದಿದ್ದರೂ ಕೆಲವು ಕಡೆಗಳಲ್ಲಿ ಈಗ ಉತ್ಪನ್ನ ಹಿಂದಿಗಿಂತ ಮುಮ್ಮಡಿ, ನಾಲ್ಮಡಿ ಹೆಚ್ಚಾಗಿದೆ. ಕೋಲಾರದ ಎಲ್ಲಾ ಭಾಗಗಳಲ್ಲಿಯೂ ಹೆಚ್ಚಾಗಿದೆ ಎಂದು ನಾನು ಹೇಳುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಎಲ್ಲಾಕಡೆಗಳಲ್ಲಿ ಉತ್ಪತ್ತಿ ಹೆಚ್ಚಾಗಿದೆ ಎಂದು ನಾನು ಹೇಳುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಗಂಗಾವತಿ ಮುಂತಾದ ಭಾಗಗಳಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ, ಮಂಡ್ಯಾಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ, ಹಾಗೂ ರಾಜ್ಯದ ಇನ್ನೂ ಕೆಲವು ಭಾಗಗಳಲ್ಲಿ ಉತ್ಪತ್ತಿ ಹೆಚ್ಚಾಗಿಲ್ಲ ಎಂದು ಹೇಳಿದರೆ ಯಾರೂ ಒಪ್ಪತಕ್ಕ ಮಾತು ಅಲ್ಲ. ಎಲ್ಲಾ ಹಣವನ್ನೂ ತೆಗೆದುಕೊಂಡು ಹೋಗಿ ಕೆಲವು ಪ್ರದೇಶದ ಅಭಿವೃದ್ಧಿಗೆ ಪ್ರಗತಿಗೆ ಖರ್ಚು ಮಾಡಿದ್ದೇವೆಂದು ತಮಗೆ ಅಭಿಪ್ರಾಯವಾದಮೇಲೆ, ಬೇರೆ ಪ್ರದೇಶದ ಅಭಿವೃದ್ಧಿ ಮಾಡುವುದಕ್ಕೆ ದುಡ್ಡು ಕೊಡುವುದಿಲ್ಲ ಎಂಬ ಪ್ರವೃತ್ತಿ ಯಾವತರಹದಲ್ಲಿ ಯೋಗ್ಯವಾಗಿ ಕಾಣುತ್ತದೆ? ಹೆಚ್ಚು ನೀರಾವರಿ ಕೆಲಸಗಳನ್ನು ಕೈಗೊಳ್ಳಬೇಕಾದರೆ ಯಾರು ಹಿಂದೆ ಸರ್ಕಾರದಿಂದ ಸಹಾಯವನ್ನು ಪಡೆದು ಪ್ರಯೋಜನವನ್ನು ಪಡೆದುಕೊಂಡಿದ್ದಾರೆಯೋ ಅವರು ಸ್ವಲ್ಪಮಟ್ಟಿಗೆ ಈಗ ತ್ಯಾಗ ಮಾಡದಿದ್ದರೆ ನಮ್ಮದೇ ರಾಜ್ಯದ ಜನರು ಅಭಿವೃದ್ಧಿ ಹೊಂದತಕ್ಕ ಬಗೆ ಹೇಗೆ? ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು 15 ಸಾವಿರ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಹೋಗಿ ಬಾವಿ ತೆಗೆದು ಪಂಪುಸೆಟ್ಟು ಹಾಕಿಕೊಂಡು ವರ್ಷಕ್ಕೆ 3 ಬೆಳೆ ಬೆಳೆಯುತ್ತಿರುವ ರೈತರು ಎಕರೆಗೆ 15 ರೂಪಾಯಿಗಳನ್ನು ಸರ್ಕಾರಕ್ಕೆ ಕೊಡಿ ಎಂದು ಕೇಳಿದರೆ ಅದಕ್ಕೆ ಅವರು ಒಪ್ಪದಿದ್ದರೆ ರಾಜ್ಯಕ್ಕೆ ದ್ರೋಹಮಾಡಿದಂತಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆಯನ್ನು ತಮ್ಮ ಪಕ್ಷದವರ ಮೇಲೆಯೂ ಹಾಕಿಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಮಾತು ಎಲ್ಲರಿಗೂ ಅನ್ವಯಿಸುತ್ತದೆ. ಒಂದು ಉದ್ದೇಶದಿಂದ ನಾವು ಸ್ವಲ್ಪಮಟ್ಟಿಗೆ ನಿಸ್ವಾರ್ಥದೃಷ್ಟಿಯಿಂದ ನೋಡೋಣ. ನಮ್ಮ ರಾಜ್ಯದಲ್ಲಿ ಯಾವ ಯಾವ ಭಾಗದಲ್ಲಿ ನೀರಾವರಿ ಅನುಕೂಲತೆ ಆಗಿದೆಯೋ ಅಲ್ಲಿ ದೇವರ ದಯೆಯಿಂದಲಾಗಲೀ, ನಮ್ಮ ಅದೃಷ್ಟದಿಂದಲಾಗಲೀ, ಸರ್ಕಾರದಿಂದ ಏನು ಕೆಲಸ ಆಗಿದೆಯೋ ಅಂಥವರು ನಮ್ಮ ಕೆಲಸ ಮುಗಿಯಿತು, ನಮ್ಮ ಹತ್ತಿರ ದುಡ್ಡು ಕೇಳಬೇಡಿ ಎಂದರೆ ನಮ್ಮ ರಾಜ್ಯದ ಕೆಲಸ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಚನ್ನಯ್ಯ.—ಯಾವ ಏರಿಯಾದವರು ಆ ರೀತಿ ಹೇಳುತ್ತಾರೆ?

ಶ್ರೀ ರಾಮಕೃಷ್ಣ ಹೆಗಡೆ.—ಆ ಏರಿಯಾ ಈ ಏರಿಯಾ ಎಂದು ನಾನು ಹೇಳುವುದಿಲ್ಲ ಯಾವುದೇ ಏರಿಯಾ ಇರಲಿ. ಅವರು ಆ ರೀತಿ ಹೇಳಿದರೆ ತಪ್ಪು. ಅದಕ್ಕಾಗಿ ನಾವು ಸ್ವಲ್ಪಮಟ್ಟಿಗೆ ನಿಷ್ಠೂರವಾಗಿಯಾದರೂ ಕ್ರಮತೆಗೆದುಕೊಳ್ಳತಕ್ಕ ಅಗತ್ಯ ಬಂದಿದೆ. ಸಮಯ ಸನ್ನಿಹಿತವಾಗಿದೆ. ನಾನು ಬಹಳ ಸಮಯವನ್ನು ತೆಗೆದುಕೊಂಡಿದ್ದೇನೆ. ಇಷ್ಟೊಂದು ದೀರ್ಘವಾಗಿ ಮಾತನಾಡಬೇಕಾಗುತ್ತದೆ ಎಂದು ನಾನು ಭಾವಿಸಿರಲಿಲ್ಲ. ಆದರೆ ಮಧ್ಯೆ ಮಧ್ಯೆ ಮಾನ್ಯ ಸದಸ್ಯರು ಕೆಲವರು ಪ್ರಶ್ನೆಗಳನ್ನು ಕೇಳಿದ್ದರಿಂದ ಅದಕ್ಕೆಲ್ಲಾ ಉತ್ತರವನ್ನು ಹೇಳಬೇಕಾಗಿ ಬಂದದ್ದರಿಂದ ಹೆಚ್ಚಿನ ಸಮಯವನ್ನು ನಾನು ತೆಗೆದುಕೊಂಡಿದ್ದೇನೆ.

ಕೊನೆಯಲ್ಲಿ ಒಂದು ಮಾತು. ರಾಮಕೃಷ್ಣಹೆಗಡೆಯವರ ಭವಿಷ್ಯವೇನು ಎಂದು ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಎಷ್ಟೋ ಜನ ಸಮಾಜವಾದಿಗಳು ಎಂದು ಹೇಳಿಕೊಳ್ಳುವವರು ತಮ್ಮ ನಿಜವಾದ ಜೀವನದಲ್ಲಿ ಎಷ್ಟರಮಟ್ಟಿಗೆ ಸಮಾಜವಾದಿಗಳಾಗಿದ್ದಾರೆ ಎನ್ನುವುದು ನನಗೆ ಗೊತ್ತುಂಟು. ಕೆಲವು ಪತ್ರಿಕೆಗಳ ಉಲ್ಲೇಖವನ್ನು ಶ್ರೀಮಾನ್ ಗೋಪಾಲಗೌಡರು ಪ್ರಸ್ತಾಪ ಮಾಡಿದ್ದಾರೆ. ಪತ್ರಿಕೆಗಳಲ್ಲಿ ಬರತಕ್ಕ ವರದಿ ಸತ್ಯದ ಆಧಾರದ ಮೇಲೆ

(ಶ್ರೀ ರಾಮಕೃಷ್ಣ ಹೆಗಡೆ)

ಬರುತ್ತದೆ ಎಂದು ಹೇಳತಕ್ಕದ್ದು, ನಂಬತಕ್ಕದ್ದು ಅಲ್ಲ. ಅನೇಕಸಲ ಪತ್ರಿಕೆಗಳಲ್ಲಿ ಊಹಾಪೋಹೆಯಮೇಲೆ ವರದಿಗಳು ಬರುತ್ತವೆ. ಅನೇಕ ಸಲ ಪತ್ರಿಕೆಗಳವರು ತಮ್ಮ ಸ್ವಂತ ಕಲ್ಪನೆಯ ಮೇಲೆಯೂ ಬರೆಯುತ್ತಾರೆ. ಎಲ್ಲವೂ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಇದೇನೇ ಇರಲಿ. ನನ್ನ ಭವಿಷ್ಯದಲ್ಲಿ ಏನೂ ಬದಲಾವಣೆ ಇಲ್ಲ. ಈ ಬಗೆಗೆ ಹೆಚ್ಚಿನ ಚರ್ಚೆ ಬೇಡ.

ಶ್ರೀ ಪಾಟೀಲ್ ನಾಗರಾಜ್.—ಇಲ್ಲೇ ಇರಿ ಸ್ವಾಮಿ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಇರಿ ಎಂದರೆ ಇರುವುದಕ್ಕಾಗುವುದಿಲ್ಲ. ನೀವು ಹೋಗಿ ಎಂದರೆ ಹೋಗುವುದಕ್ಕಾಗುವುದಿಲ್ಲ. ಒಂದು ಮಾತು ಹೇಳುತ್ತೇನೆ. ಯಾವ ಒಂದು ಉದ್ದೇಶದಿಂದ ನನ್ನ ಭವಿಷ್ಯದ ಸಮಾಚಾರ ಪತ್ರಿಕೆಯಲ್ಲಿ ಬಂದಿದೆಯೋ ಅದು ನಿಜವಲ್ಲ. ಅದಕ್ಕೆ ಯಾವುದೇ ತರಹ ಆಧಾರವಿಲ್ಲ. ಅದರಲ್ಲಿ ಸತ್ಯವಿಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ಬಗ್ಗೆ ಹೆಚ್ಚಿನ ಚರ್ಚೆ ಅಗತ್ಯವಿಲ್ಲ. ಯಾವುದೇ ಒಂದು ಅವಕಾಶವನ್ನು ತೆಗೆದುಕೊಂಡು ಬೇರೆಯವರು ಯಾರಾದರೂ ಅದರ ಉಪಯೋಗ ಮಾಡಿಕೊಳ್ಳತಕ್ಕ ಅಗತ್ಯವಿಲ್ಲ. ಇಷ್ಟು ಮಾತುಗಳನ್ನು ಮಾತ್ರ ನಾನು ಹೇಳುತ್ತೇನೆ. ಮಾನ್ಯ ಸದಸ್ಯರನೇಕರು ಒಳ್ಳೆಯ ಸೂಚನೆಗಳನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಮತ್ತು ನನಗೆ ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ಕೊನೆಯದಾಗಿ ನಮ್ಮ ರಾಜ್ಯದ ನೌಕರರಿಗೆ ಡಿ. ಎ. ಅನ್ನು ಕೊಡುವಾಗ ರೇಟಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ಮೂರು ಮತ್ತು ನಾಲ್ಕನೆಯ ದರ್ಜೆಯ ನೌಕರರಿಗೆ ಮೊದಲಿಗಿಂತ ಕಡಿಮೆಯಾಗುತ್ತದೆ ಎನ್ನುವ ಸಮಾಚಾರ ಬಂದಿದೆ. ಹಾಗೆ ಆಗದ ಹಾಗೆ ಅವರಿಗೆ ಮೊದಲಗಿಂತಲೂ ಕಡಿಮೆ ಆಗದಂತೆ ಮತ್ತು ಅದಕ್ಕಿಂತಲೂ ಹೆಚ್ಚು ಆಗುವ ಹಾಗೆ ಅದನ್ನು ಸರಿಪಡಿಸಿ ನಾಳೆ ಅಥವಾ ನಾಡಿದ್ದು ಆಜ್ಞೆಯನ್ನು ಹೊರಡಿಸುತ್ತೇವೆ. ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now adjourn and meet again at 1 p. m. on Wednesday the 5th March 1969.

The House adjourned at Twenty-Five Minutes past Nine of the Clock to meet again at One of the Clock on Wednesday the 5th March 1969.

KSA LIBRARY, B'lore
B004860
328.32402 548 LAD,1969
JJ36

WD 12549—GPB—600—27-6-1969